ಕನ್ನಡದಲ್ಲಿ ಕೃಷಿಶಾಸ್ತ್ರ ಸಾಹಿತ್ಯ

(ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

[illegible]. ಎಸ್. ವಿರೂಪಾಕ್ಷಪ್ಪ

ಹಿ.ಶ್ರೇ. ಕನ್ನಡ ಉಪನ್ಯಾಸಕರು

ಸರಕಾರಿ ಪ್ರಥಮದರ್ಜೆ ಕಾಲೇಜು

ಮಸ್ಕಿ

ಮಾರ್ಗದರ್ಶಕರು

ಡಾ. ಕೆ. ರವೀಂದ್ರನಾಥ

ಪ್ರವಾಚಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

[illegible]

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ ೫೮೩ ೨೭೬

೨೦೦೯

ಕನ್ನಡದಲ್ಲಿ ಕೃಷಿಶಾಸ್ತ್ರ ಸಾಹಿತ್ಯ

(ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಹೆಚ್. ಎಸ್. ವಿರೂಪಾಕ್ಷಪ್ಪ
ಹಿ.ಶ್ರೇ.ಕನ್ನಡ ಉಪನ್ಯಾಸಕರು
ಸರಕಾರಿ ಪ್ರಥಮದರ್ಜೆ ಕಾಲೇಜು
ಮಸ್ಕಿ

ಮಾರ್ಗದರ್ಶಕರು
ಡಾ. ಕೆ. ರವೀಂದ್ರನಾಥ
ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾನಿಕಾಯ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ ೫೮೩ ೨೭೬

೨೦೦೯

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಡಾ.ಕೆ.ರವೀಂದ್ರನಾಥ
ಪ್ರವಾಚಕರು ಹಾಗೂ ಮಾರ್ಗದರ್ಶಕರು
ಹಸ್ತಪ್ರತಿಶಾಸ್ತ್ರ ವಿಭಾಗ

ಪ್ರಮಾಣ ಪತ್ರ

ಶ್ರೀ ಹೆಚ್.ಎಸ್.ವಿರೂಪಾಕ್ಷಪ್ಪ ಅವರು "ಕನ್ನಡದಲ್ಲಿ ಕೃಷಿಶಾಸ್ತ್ರ ಸಾಹಿತ್ಯ" ಎಂಬ ಸಂಶೋಧನ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನೆಡೆಸಿ ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಅಥವಾ ಡಿಪ್ಲೋಮಾಗಳಿಗೆ ಸಲ್ಲಿಸಿರುವುದಿಲ್ಲ. ಇದು ಇವರ ಸ್ವತಂತ್ರ ಸಂಶೋಧನಾಧ್ಯಯನವಾಗಿದೆ. ಇದನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಲಾಗಿದೆ.

ದಿನಾಂಕ: 21-7-2009
ಸ್ಥಳ : ವಿದ್ಯಾರಣ್ಯ

ಡಾ.ಕೆ.ರವೀಂದ್ರನಾಥ
ಮಾರ್ಗದರ್ಶಕರು

ಶ್ರೀ ಹೆಚ್.ಎಸ್.ವಿರೂಪಾಕ್ಷಪ್ಪ
ಹಿ.ಶ್ರೇ.ಕನ್ನಡ ಉಪನ್ಯಾಸಕರು
ಸರಕಾರಿ ಪ್ರಥಮದರ್ಜೆ ಕಾಲೇಜ್
ಮಸ್ಕಿ

ಘೋಷಣಾ ಪತ್ರ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ "ಕನ್ನಡದಲ್ಲಿ ಕೃಷಿಶಾಸ್ತ್ರ ಸಾಹಿತ್ಯ" ಎಂಬ ಮಹಾಪ್ರಬಂಧವು ಡಾ.ಕೆ.ರವೀಂದ್ರನಾಥ ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನವನ್ನಾಧರಿಸಿ ರಚನೆಗೊಂಡಿದ್ದಾಗಿದೆ.

ಈ ಮಹಾಪ್ರಬಂಧವನ್ನು ನಾನು ಈ ಮೊದಲು ಯಾವುದೇ ಪದವಿಗಾಗಿ, ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿಲ್ಲವೆಂದು ಹಾಗೂ ಇದು ಬಿಡಿ ಇಲ್ಲವೆ ಇಡಿಯಾಗಿ ಎಲ್ಲಿಯೂ ಪ್ರಕಟಣೆಗೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

H.S. Virupakshappa
ಹೆಚ್.ಎಸ್.ವಿರೂಪಾಕ್ಷಪ್ಪ

ದಿನಾಂಕ : 21-7-09
ಸ್ಥಳ : ವಿದ್ಯಾರಣ್ಯ

ಅರಿಕೆ

ಪ್ರಾಚೀನ ಸಾಹಿತ್ಯವನ್ನು ಕಲೆ ಮತ್ತು ಜೀವನ ಕಲೆಯನ್ನಾಗಿ ಪರಿಭಾವಿಸಿಕೊಂಡ ನಮ್ಮ ಕವಿಗಳು ಪುರಾಣ-ಕಾವ್ಯಗಳ ಜೊತೆಗೆ ಶಾಸ್ತ್ರ ಕೃತಿಗಳನ್ನು ಬರೆದು ಮೀಮಾಂಸಾ ಸಾಹಿತ್ಯಕ್ಕೆ ಕಾರಣರಾದರು. ಶಾಸ್ತ್ರ ಸಾಹಿತ್ಯದಲ್ಲಿ ಲೌಕಿಕ-ಅಲೌಕಿಕ ಎಂಬ ಎರಡು ರೀತಿಯಾಗಿವೆ. ಲೌಕಿಕ ಶಾಸ್ತ್ರ ಸಾಹಿತ್ಯದಲ್ಲಿ ವೈದ್ಯ, ಶಕುನ, ಜ್ಯೋತಿಷ್ಯ, ಸೂಪ ಮುಂತಾದವುಗಳು ಮಾನವನ ಬದುಕಿನ ಜೊತೆಗೆ ಬೆಸೆದುಕೊಂಡು ಬಂದಿರುವುದನ್ನು ಅವುಗಳ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಹಾಗೆಯೇ ಕೃಷಿ ಮನುಷ್ಯನ ಮೂಲ ಕಸುಬಾಗಿ ಬೆಳೆದು ಬಂದಿದ್ದರೂ ಸಹಿತ ಅಷ್ಟೊಂದು ವ್ಯಾಪಕವಾದ ಶಾಸ್ತ್ರಬದ್ಧವಾದ ಕೃತಿಗಳು ಬೆಳೆದು ಬಂದಿಲ್ಲವೆಂದೆ ಹೇಳಬೇಕು. ಶ್ರೀ ಘನಮಠದ ಶಿವಯೋಗಿಗಳಂತಹ ಬೆರಳೆಣಿಕೆಯ ಶಾಸ್ತ್ರಕಾರರನ್ನು ಬಿಟ್ಟರೆ ಮತ್ತೆಲ್ಲೂ ಇಂತಹ ಕೃತಿಗಳು ಸಿಗುವುದು ವಿರಳ. ಉಪೇಕ್ಷಿತ ಕ್ಷೇತ್ರವಾದ ಕೃಷಿ ಶಾಸ್ತ್ರಸಾಹಿತ್ಯ ಕುರಿತು ಸಮಗ್ರವಾಗಿ ಅಧ್ಯಯನ ಮಾಡುವ ಉದ್ದೇಶದಿಂದ ನಿರೂಪಿತವಾದ ಮಹಾಪ್ರಬಂಧ ''ಕನ್ನಡದಲ್ಲಿ ಕೃಷಿ ಶಾಸ್ತ್ರಸಾಹಿತ್ಯ''.

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಅಧ್ಯಯನ ಕೈಗೊಳ್ಳಲು ಅವಕಾಶ ಮಾಡಿಕೊಟ್ಟ ಅಂದಿನ ಮಾನ್ಯ ಕುಲಪತಿಗಳಾದ ಡಾ.ಬಿ.ಎ. ವಿವೇಕ ರೈ ಅವರಿಗೂ ಇಂದಿನ ಕುಲಪತಿಗಳಾದ ಡಾ. ಎ. ಮುರುಗೆಪ್ಪ ಅವರಿಗೂ ಕೃತಜ್ಞತೆಗಳು. ಮಾನ್ಯ ಕುಲಸಚಿವರಾದ ಶ್ರೀ ಎಸ್.ಎಸ್. ಪೂಜಾರ್ ಮತ್ತು ಅಧ್ಯಯನಾಂಗದ ನಿರ್ದೇಶಕರಾದ ಡಾ. ವೀರೇಶ ಬಡಿಗೇರ ಅವರಿಗೆ ಕೃತಜ್ಞತೆಗಳು.

ಈ ಮಹಾಪ್ರಬಂಧಕ್ಕೆ ಮಾರ್ಗದರ್ಶಕರಾಗಿ, ಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುವವರೆಗೂ ತಮ್ಮ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನವನ್ನು ವಿದ್ವತ್ ಪೂರ್ಣವಾಗಿ ನೀಡಿರುವ ಪೂಜ್ಯ ಗುರುಗಳಾದ ಡಾ.ಕೆ.ರವೀಂದ್ರನಾಥ ಅವರಿಗೆ ಕೃತಜ್ಞತೆಗಳು. ಅಧ್ಯಯನ ಸಮಯದಲ್ಲಿ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಆರ್.ಚನ್ನವೀರಪ್ಪ, ಪ್ರಾಧ್ಯಾಪಕರಾದ ಡಾ.ವೀರೇಶ ಬಡಿಗೇರ, ಡಾ.ಎಫ್.ಟಿ.ಹಳ್ಳಿಕೇರಿ ಹಾಗೂ ಡಾ.ಎಸ್.ಎಸ್.ಅಂಗಡಿ ಅವರುಗಳು ಶೈಕ್ಷಣಿಕ ಚರ್ಚೆಯನ್ನು ಮಾಡುವುದರ ಮೂಲಕ ಅಧ್ಯಯನಕ್ಕೆ ಪರಿಪೂರ್ಣತೆ ನೀಡಿದ್ದಾರೆ. ಅವರೆಲ್ಲರಿಗೂ ಹಾಗೂ ಬೋಧಕೇತರ ಸಿಬ್ಬಂದಿಗಳಿಗೂ ಕೃತಜ್ಞತೆಗಳು.

ವಿಷಯಕ್ಕೆ ಸಂಬಂಧಿಸಿದಂತೆ ಆಕರ ಸಾಮಗ್ರಿಯನ್ನು ಒದಗಿಸಿಕೊಡುವಲ್ಲಿ ಸಹಕರಿಸಿದ ಗ್ರಂಥಪಾಲಕರಾದ ಶ್ರೀ ಎಂ.ಪೀ. ದಾಸಪ್ಪನವರ ಕೂಡಲಸಂಗಮ ಮತ್ತು ಡಾ.ರಾಧಾಕೃಷ್ಣ, ಡಾ.ನಾಗವೇಣಿ, ಡಾ. ಅಮರೇಶ ಕುಂಬಾರ, ನರಸರಡ್ಡಿ ಅವರಿಗೆ ವಂದನೆಗಳು. ದೇವನಾಂಪ್ರಿಯ ಅಶೋಕ, ಸರಕಾರಿ ಪ್ರಥಮ ದರ್ಜೆ ಕಾಲೇಜು ಮುಸ್ಕಿಯ ಪ್ರಾಚಾರ್ಯರಾದ ಪ್ರೊ.ದಾವಲ್‌ಸಾಬ ನಧಾಫ್ ಮತ್ತು ಉಪನ್ಯಾಸಕರಾದ ಶ್ರೀ ಕೋತಲೆ, ಬಿ.ಎಚ್. ಅಕ್ಬರ್ ಬಾಷಾ, ಶ್ರೀ ಸಿದ್ದಪ್ಪ ಡಿಗ್ಗಿ ಮತ್ತು ಅಮರಪ್ಪ .ಪೈ ಹಾಗೂ ಸಿಬ್ಬಂದಿಯವರಿಗೆ ಹಾಗೂ ಸರಕಾರಿ ಪ್ರಥಮದರ್ಜೆ ಕಾಲೇಜು ಲಿಂಗಸೂರಿನ ಪ್ರಾಚಾರ್ಯರಾದ ಡಾ. ರಾಘವೇಂದ್ರ ಗುಂಡಗುಂಟಿ ಮತ್ತು ಸಿಬ್ಬಂದಿಯವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ನನ್ನ ವಿದ್ಯಾಭ್ಯಾಸ, ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ ಪೂಜ್ಯ ತಂದೆಯವರಾದ ಮರಿಯೊಳ್ಳರ ಶ್ರೀ ಹೆಚ್.ಎಂ.ಸಿದ್ದಪ್ಪ, ತಾಯಿಯವರಾದ ಶ್ರೀಮತಿ ಶಾಂತಮ್ಮನವರಿಗೆ ಗೌರವ ಪೂರ್ವಕ ನಮಸ್ಕಾರಗಳು. ಹಾಗೆಯೇ ಮಾವ-ಅತ್ತೆ, ಅಣ್ಣ-ಅತ್ತಿಗೆ, ತಮ್ಮಂದಿರು, ಸೊಸೆಯಂದಿರು ಅಕ್ಕ-ಮಾವ ಮತ್ತು ತಂಗಿ-ಭಾವ, ಹಾಗೂ ಎಲ್ಲಾ ಪುಟಾಣಿಗಳಿಗೂ, ಆತ್ಮೀಯರಾದ ಶ್ರೀಮತಿ ಮುತ್ತಮ್ಮ ಬಸಪ್ಪ ಗಡದಾರ್ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಬದುಕಿನ ಸಂಗಾತಿಯಾಗಿ, ಅಧ್ಯಯನ ಸಂದರ್ಭದಲ್ಲಿ ಸಹಕರಿಸಿದ ಶ್ರೀಮತಿ ಎಂ.ವಿ.ಮೀನಾಕ್ಷಿ ಮತ್ತು ಅಕ್ಕರೆಯ ಮಗನಾದ ಎಂ.ವಿ.ಮನೋಜ್‌ಕುಮಾರನನ್ನು ನೆನೆಯುತ್ತೇನೆ.

ಅಧ್ಯಯನ ಸಂದರ್ಭದಲ್ಲಿ ಸಹಕಾರ ಕೊಟ್ಟ ಶ್ರೀ ಕಲ್ಲಯ್ಯ ಹಿರೇಮಠ, ಶ್ರೀ ಶಿವಶರಣಯ್ಯ ಸೊಪ್ಪಿಮಠ, ಶಿವಕುಮಾರ ಕಂಪ್ಲಿ, ಡಾ.ಶಿವಾನಂದ ಕಳಕಣ್ಣನವರ, ಖಾಜಾವಲಿ ಈಚನಾಳ, ಜಿ.ವಿ.ಕೆಂಚನಗುಡ್ಡ, ಎಸ್. ಚಂದ್ರಮೌಳಿ, ಜೆ.ಕುಮಾರ, ಹುಲಿಗೆಮ್ಮ, ವಾಗೀಶ ಎನ್.ಎಂ., ಬಸವರಾಜ ಆರ್ಯಾರು, ಗಂಗಾಧರ, ದುರ್ಗಸಿಂಗ್ ಅವರನ್ನು ಸ್ಮರಿಸುತ್ತೇನೆ.

ಈ ಮಹಾಪ್ರಬಂಧವನ್ನು ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿಕೊಟ್ಟ ಇಸ್ಮಾಯಿಲ್ ಮತ್ತು ಶಿವು, ಲಿಂಗಸ್ಗೂರು ಅವರಿಗೆ ಹಾಗೂ ಅಕ್ಷರಗಳನ್ನು ಅಂದವಾಗಿ ಸಂಯೋಜಿಸಿಕೊಟ್ಟ ಶ್ರೀಗುರು ಮೌನೇಶ್ವರ ಗ್ರಾಫಿಕ್ಸ್‌ನ ಅನ್ನಪೂರ್ಣ ಮತ್ತು ನಾಗರಾಜ ಬಡಿಗೇರ ಅವರಿಗೆ ಕೃತಜ್ಞತೆಗಳು.

ಹೆಚ್.ಎಸ್.ವಿರೂಪಾಕ್ಷಪ್ಪ

* * *

ಪರಿವಿಡಿ

* * *

ಅಧ್ಯಾಯ–ಒಂದು

ಅಧ್ಯಯನದ ಉದ್ದೇಶ ಹಾಗೂ ಸ್ವರೂಪ

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ ಹಾಗೂ ಸ್ವರೂಪ

ಕನ್ನಡ ಸಾಹಿತ್ಯ ಕೇವಲ ಕಾವ್ಯ, ಪುರಾಣಗಳಿಗೆ ಸೀಮಿತವಾಗಿಲ್ಲ. ಇದರ ಜೊತೆಗೆ ಶಾಸ್ತ್ರ, ಇತಿಹಾಸ ವಿಷಯಗಳನ್ನು ಒಳಗೊಂಡಿದೆ. ಹೀಗಾಗಿ ಕವಿಸಾಹಿತ್ಯ. ಜನಪದಸಾಹಿತ್ಯ, ಶಾಸ್ತ್ರಸಾಹಿತ್ಯ ಮತ್ತು ಶಾಸನಸಾಹಿತ್ಯ ಇತ್ಯಾದಿ ಮಹಾಸಂಗಮವೆನಿಸಿದೆ. ಕನ್ನಡ ಸಾಹಿತ್ಯದ ವ್ಯಾಪ್ತಿ ತುಂಬಾ ವಿಸ್ತಾರವಾಗಿದೆ. ಈ ದೃಷ್ಟಿಯಿಂದ ಈಗಾಗಲೇ ಪರಿಚಯಾತ್ಮಕ ಕೆಲಸಗಳು ನೆಡದಿವೆ. ಅಂದರೆ ಕರ್ನಾಟಕ ಕವಿಚರಿತೆ, ಕನ್ನಡ ಸಾಹಿತ್ಯ ಚರಿತ್ರೆ, ಕರ್ನಾಟಕ ಶಾಸನ ಸಂಪುಟಗಳು, ಜಾನಪದ ಕುರಿತಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಖಲೀಕರಣಗೊಂಡಿದೆ. ಆದರೆ ಇವುಗಳ ವಸ್ತುನಿಷ್ಠ ವಿಶ್ಲೇಷಣೆ ಮಾತ್ರ ಇದುವರೆಗೂ ಅಪೂರ್ಣಗೊಂಡಿದೆ. ಉದಾಹರಣೆಗೆ ಕವಿಚರಿತೆಕಾರರು ಶಾಸನಕವಿಗಳನ್ನು ಅನುಲಕ್ಷಿಸದೆ ಇರುವದು, ಪೂರ್ಣಪ್ರಮಾಣದ ನಾಟಕ ಕವಿಚರಿತೆ ಸಿದ್ಧಗೊಳ್ಳದಿರುವುದು, ಹಾಗೆಯೇ ಶಾಸ್ತ್ರ ಸಮ್ಮತವಾದ ಕಾವ್ಯಗಳ ಆಮೂಲಾಗ್ರ ಅಧ್ಯಯನ ನಡೆಯದೆ ಇರುವುದು ವಿದ್ವಾಂಸರಿಗೆ ತಿಳಿದ ಸಂಗತಿಯೇ ಆಗಿದೆ. ಈ ಎಲ್ಲಾ ಕೊರತೆಗಳನ್ನು ಗಮನದಲ್ಲಿರಿಸಿಕೊಂಡು ಇತ್ತೀಚೆಗೆ ಶಾಸ್ತ್ರಸಾಹಿತ್ಯ, ಶಾಸನಸಾಹಿತ್ಯ ಮುಂತಾದ ಶಾಸ್ತ್ರಸಮ್ಮತವಾದ ಅಧ್ಯಯನಗಳನ್ನು ಕೈಗೆತ್ತಿಕೊಂಡಿರುವುದು ಸಮಾಧಾನದ ಸಂಗತಿ.[೧] ಅದರ ಮುಂದುವರಿಕೆಯಾಗಿ 'ಕನ್ನಡದಲ್ಲಿ ಕೃಷಿಶಾಸ್ತ್ರ ಸಾಹಿತ್ಯ' ಎಂಬ ಅಧ್ಯಯನವನ್ನು ಈ ಮಹಾ ಪ್ರಬಂಧದಲ್ಲಿ ಕೈಗೊಳ್ಳಲಾಗಿದೆ.

'ಕೃಷಿ' ನಾಡಿನ ಆರ್ಥಿಕ ಸುಭದ್ರತೆಯ ಬೆನ್ನೆಲುಬು. ಹಳ್ಳಿಗಳ ಸಮೂಹವಾದ ಕರ್ನಾಟಕ ಹಾಗೂ ಭಾರತೀಯ ಬದುಕಿನ ಪ್ರಮುಖ ಕಸಬು ಕೃಷಿಯನ್ನು ಅವಲಂಬಿಸಿದೆ. ಒಂದು ಅರ್ಥದಲ್ಲಿ ಕೃಷಿಯ ಪ್ರಗತಿಯೇ ದೇಶದ ಪ್ರಗತಿ ಎಂಬ ಭಾವನೆ ಇತ್ತು. ಈ ಭಾವನೆಯನ್ನು ಪುಷ್ಟೀಕರಿಸುವ ಅನೇಕ ಉಲ್ಲೇಖಗಳು ವೇದಾಗಮಗಳಲ್ಲಿ, ಸಾಹಿತ್ಯ, ಶಾಸನಗಳಲ್ಲಿ ಕಂಡು ಬರುತ್ತವೆ. ಬೇಟೆಯ ಸಂಸ್ಕೃತಿಯಿಂದ ಪರಿವರ್ತನೆಗೊಂಡ ಮಾನವ ಅವಲಂಬಿಸಿದ್ದು ಕೃಷಿಸಂಸ್ಕೃತಿಯನ್ನು. ಹೀಗಾಗಿ ಇದು ಅತ್ಯಂತ ಪ್ರಾಚೀನ ಉದ್ಯಮವಾಗಿ ಬೆಳೆದು ಬಂದಿದೆ. ಶಿವಯೋಗಿ ಸಿದ್ಧರಾಮ 'ಕೃಷಿಯ ಮಾಡಿ ಉಣ್ಣದೇ ಹಸಿವು ಹರಿಯು ಪರಿ ಇನ್ನೆಂತು' ಎಂದಿದ್ದಾರೆ. ಸೋಮೇಶ್ವರನೆಂಬ ಕವಿ 'ಬೆಳೆಯೇ ಸರ್ವರ ಜೀವನಂ' ಎಂದಿದ್ದಾನೆ. ಇದೇ ರೀತಿ ಅನೇಕ ಜನ ಕವಿಗಳು ಅಭಿಪ್ರಾಯ ಪಟ್ಟಿರುವುದನ್ನು ಗಮನಿಸಿದರೆ

ಅಂದಿನ ಸಮಾಜ ಕೃಷಿಯನ್ನು ಪ್ರದಾನ ಉದ್ಯೋಗವನ್ನಾಗಿ ಅವಲಂಬಿಸಿರುವುದು ತಿಳಿದುಬರುತ್ತದೆ. ಹೀಗೆ ಲೋಕೋಪಯೋಗಿ ಉದ್ಯಮವಾಗಿ ಬೆಳೆದ ಕೃಷಿಯನ್ನು ಕುರಿತು ಕೃಷಿಶಾಸ್ತ್ರ ಸಾಹಿತ್ಯ ನಮ್ಮಲ್ಲಿ ರಚನೆಗೊಂಡಿದೆ.

ಅರವತ್ನಾಲ್ಕು ಕಲೆಗಳಲ್ಲಿ ಶಿಲ್ಪಶಾಸ್ತ್ರ, ವಾಸ್ತುಶಾಸ್ತ್ರ, ದೇಗುಲಶಾಸ್ತ್ರ, ಗಜಶಾಸ್ತ್ರ, ಅಶ್ವಶಾಸ್ತ್ರ, ವೈದ್ಯಶಾಸ್ತ್ರ, ಛಂದಸ್ಸುಶಾಸ್ತ್ರ, ಸೂಪಶಾಸ್ತ್ರ ಮುಂತಾದ ಲೌಕಿಕಶಾಸ್ತ್ರ ಗ್ರಂಥಗಳು ಉತ್ಪಾದನೆಯಾಗಿರುವುದು ಅವುಗಳ ಮಹತ್ವವನ್ನು ಖಚಿತಪಡಿಸುವುದಾಗಿದೆ. ಜೀವನದ ಕಲೆಯಾಗಿ ಶಾಸ್ತ್ರ ಕೃತಿಗಳು ಮೊದಮೊದಲು ಮಾನ್ಯತೆ ಪಡೆದಂತೆ; ಬದುಕಿನ ಕ್ರಮವಾಗಿ ಸಮಾಜಶಾಸ್ತ್ರದ ಮಾನ್ಯತೆಯನ್ನು ಗಳಿಸಿಕೊಂಡವು. ಹೀಗಾಗಿ ಇವುಗಳ ಅಧ್ಯಯನವೆಂದರೆ ಪರ್ಯಾಯವಾಗಿ ಸಮಾಜಶಾಸ್ತ್ರ ಅಧ್ಯಯನವೇ ಆಗುತ್ತದೆ. ಒಂದು ಸಮಾಜದ ಆರ್ಥಿಕಾಭಿವೃದ್ಧಿ, ಸಮುದಾಯಗಳ ಒಕ್ಕೂಟ, ಧಾರ್ಮಿಕ ಆಚರಣೆಗಳ ಅನುಷ್ಠಾನ ಹೀಗೆ ಒಟ್ಟು ಒಂದು ಸಮಾಜದ ಸಾಂಸ್ಕೃತಿಕ ಚಿತ್ರಣದ ಭಿತ್ತಿಯನ್ನು ಅನಾವರಣಗೊಳಿಸಿಕೊಂಡಂತೆ ಆಗುತ್ತದೆ. ಪ್ರಸ್ತುತ ಅಧ್ಯಯನದ ಮೂಲಕ ಕೃಷಿಕ ಸಮಾಜದ ಸಂಸ್ಕೃತಿಯನ್ನು ಮನಗಾಣಿಸುವುದು ಮಹಾಪ್ರಬಂಧದ ಉದ್ದೇಶವಾಗಿದೆ.

ಲೌಕಿಕಶಾಸ್ತ್ರ ಸಮುದಾಯಕ್ಕೆ ಸೇರುವ ಕೃಷಿಶಾಸ್ತ್ರದ ಅರ್ಥ ಮತ್ತು ಸ್ವರೂಪ ಅಧ್ಯಯನದ ಪರಿಧಿಯಿಂದ ತುಂಬಾ ವ್ಯಾಪಕವಾದದ್ದು. ಕೇವಲ ಭೂಮಿಯಿಂದ ಬೆಳೆಯನ್ನು ತೆಗೆಯುವುದಕ್ಕೆ ಮಾತ್ರ ಈ ಅರ್ಥ ಸೀಮಿತಗೊಳ್ಳದೇ, ಬೆಳೆ ಉತ್ಪಾದನೆ, ಬೆಳೆಯ ಸಂಗೋಪನೆ, ಬೆಳೆಯ ಮಾರಾಟ–ವಹಿವಾಟು, ಬೆಳೆಯ ಮೇಲಿನ ತೆರಿಗೆ ಪದ್ಧತಿ, ಇವಲ್ಲದೇ ಕೃಷಿ ಸಂಬಂಧಿ ಸಲಕರಣೆಗಳು, ಭೂಮಿಯ ವೈಶಿಷ್ಟ್ಯಗಳು, ನೀರಾವರಿ ಪದ್ಧತಿಗಳು, ಹವಾಮಾನ ವೈಪರಿತ್ಯಗಳಲ್ಲದೇ ಕೃಷಿ ಹುಟ್ಟುವಳಿ ಮುಂತಾದ ಬಹುಶಿಸ್ತೀಯ ಅರ್ಥ ಸಾಂದ್ರತೆಯನ್ನು ಕೃಷಿಶಾಸ್ತ್ರ ಒಳಗೊಳ್ಳುತ್ತದೆ. ಕೃಷಿಶಾಸ್ತ್ರ ಪಡೆದುಕೊಳ್ಳಬಹುದಾದ ಸಮಗ್ರ ಅರ್ಥವ್ಯಾಪ್ತಿಯನ್ನು ಪರಿಭಾವಿಸಿ ಕೊಡುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕೃಷಿಶಾಸ್ತ್ರ ಸಾಹಿತ್ಯವನ್ನು ಪ್ರಾಚೀನಸಾಹಿತ್ಯ, ದಾಖಲುಸಾಹಿತ್ಯ, ಇತರೆಸಾಹಿತ್ಯ ಮೂಲದಿಂದ ಪರಿಚಯ ಮಾಡಿಸಿಕೊಡುವುದು ಇಲ್ಲಿನ ಪ್ರಮುಖ ಆಶಯವಾಗಿದೆ. ಪ್ರಾಚೀನ ಸಾಹಿತ್ಯದಲ್ಲಿ ಕೃಷಿಗೆ ಸಂಬಂಧಿಸಿದ ಶಾಸ್ತ್ರ ಕೃತಿಗಳು ರಚನೆಯಾಗಿದ್ದು, ಅವುಗಳಲ್ಲಿ ಕೃಷಿಜ್ಞಾನ ಪ್ರದೀಪಿಕೆ, ಲೋಕೋಪಾಕಾರ ಹಾಗೂ ರಟ್ಟಮತಗಳಂತಹ ಗ್ರಂಥಗಳು ಕೃಷಿ ಶಾಸ್ತ್ರವನ್ನು ಪೂರ್ಣ ಪ್ರಮಾಣದಲ್ಲಿ ತಿಳಿಸಿಕೊಡುವ ಕೃತಿಗಳಾಗಿವೆ. ಪ್ರಸ್ತುತ ಅಧ್ಯಯನದಲ್ಲಿ ಕೃಷಿಜ್ಞಾನಕ್ಕೆ ಬೇಕಾದ ಸಂಗತಿಗಳನ್ನು ಚರ್ಚಿಸಿರುವುದು ಗಮನಾರ್ಹ. ಎತ್ತುಗಳ ಆರೈಕೆ, ಕೊಟ್ಟಿಗೆ, ಒಕ್ಕಲುಸಾಮಗ್ರಿಗಳ ವೈವಿಧ್ಯತೆ, ಭೂಮಿಯ ಆರೈಕೆ, ಒಡ್ಡು ಹಾಕುವ ಪದ್ಧತಿ, ಗೊಬ್ಬರ ಸಂಗ್ರಹಣೆ, ಹರಗುವ ವಿಧಾನ, ದವಸ ಧಾನ್ಯಗಳ ಪ್ರಕಾರಗಳು, ಬಾವಿ ಕಡಿಸುವ ವಿಧಾನ, ಮಳೆ–ಬೆಳೆಗಳ ವಿಚಾರ, ಮಣ್ಣಿನ ಕುರುಹುಗಳು, ನೀರುಣಿಸುವ ಕ್ರಮ, ಅಧಿಕ ಇಳುವರಿಯ ಜ್ಞಾನ, ತೋಟಗಾರಿಕೆಯ ತಿಳುವಳಿಕೆ ಮುಂತಾದ ಕೃಷಿ ಜ್ಞಾನವನ್ನು ಶಾಸ್ತ್ರೀಯವಾಗಿ ನಿರೂಪಿಸುವ ಪ್ರಮುಖ ಕೃತಿಗಳಾಗಿವೆ. ಈ ಎಲ್ಲಾ ಕೃತಿಗಳನ್ನು ಸಮಗ್ರವಾಗಿ ಶಾಸ್ತ್ರಸಮ್ಮತವಾಗಿ ಅಧ್ಯಯನಕ್ಕೆ ಒಳಪಡಿಸುವುದು ಈ ಪ್ರಬಂಧದ ಮತ್ತೊಂದು ಉದ್ದೇಶವಾಗಿದೆ.

ಪ್ರಾಸಂಗಿಕವಾಗಿ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಕೃಷಿಯನ್ನು ಕುರಿತಾದ ಉಲ್ಲೇಖಗಳು ಸಿಗುತ್ತವೆ. ಇವುಗಳಲ್ಲಿ ಬರುವ ಉಲ್ಲೇಖಗಳು ಶಾಸ್ತ್ರವನ್ನು ಕುರಿತು ಹೇಳುವುದಿಲ್ಲವಾದರೂ ಅವುಗಳ ಹಿಂದಿರುವ

ಆಶಯ ಶಾಸ್ತ್ರೋಕ್ತ ವಿಧಿವಿಧಾನಗಳನ್ನೇ ಕೇಂದ್ರೀಕರಿಸಿದಂತೆ ತೋರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾಚೀನ ಮಾರ್ಗಸಾಹಿತ್ಯ, ದೇಶಿಸಾಹಿತ್ಯ ಮತ್ತು ಜನಪದಸಾಹಿತ್ಯವನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಚಂಪೂ ಕವಿಗಳಲ್ಲದೇ, ವಚನಕಾರರು, ತತ್ವಪದಕಾರರು, ಜನಪದರ ಗಾದೆ, ಒಗಟು, ಒಡಪು, ಆಚರಣೆ, ನಂಬಿಕೆ ಮುಂತಾದವುಗಳಲ್ಲಿ ಕೃಷಿಜ್ಞಾನ ಹೆಪ್ಪುಗಟ್ಟಿರುವುದನ್ನು ಗಮನಿಸಬಹುದು. ವಿಶೇಷವಾಗಿ ವಾಣಿಜ್ಯ ಉತ್ಪತ್ತಿ, ವಣಿಗೊತ್ಪತ್ತಿ ಮುಂತಾದ ಕೃತಿಗಳು ಕೃಷಿಗೆ ಸಂಬಂಧಿಸಿದ ವಿವರಗಳನ್ನು ಢಾಳವಾಗಿ ನಿರೂಪಿಸುತ್ತವೆ. ಇವೆಲ್ಲವುಗಳ ಸೈದ್ಧಾಂತಿಕ ಅಧ್ಯಯನವನ್ನು ಪ್ರಸ್ತುತ ಪ್ರಬಂಧದಲ್ಲಿ ಕೈಗೊಳ್ಳುವುದು ಮಗದೊಂದು ಉದ್ದೇಶವಾಗಿದೆ.

ಕಾವ್ಯಸಾಹಿತ್ಯವನ್ನು ಬಿಟ್ಟರೂ ಕೃಷಿಗೆ ಸಂಬಂಧಿಸಿದ ಕೆಲವು ಮಾಹಿತಿಗಳನ್ನು ಶಾಸನ, ಕೈಫಿಯತ್ತು, ಬಿನ್ನವತ್ತಳೆ ಮುಂತಾದ ದಾಖಲು ಸಾಹಿತ್ಯ ಪ್ರಕಾರಗಳಿಂದ ಹೆಕ್ಕಿ ತೆಗೆಯಬಹುದಾಗಿದೆ. ಭೂಮಿದಾನ ಉಲ್ಲೇಖವನ್ನು ಹೊತ್ತುನಿಂತ ಶಾಸನಗಳು ಮಣ್ಣಿನ ಬಣ್ಣ, ಅಲ್ಲಿ ಬೆಳೆಯುವ ಬೆಳೆಗಳನ್ನು ಪರೋಕ್ಷವಾಗಿ ದಾಖಲಿಸಿವೆ. ಹಾಗೆಯೇ ಅಡಿಕೆ ಬೆಳೆ ಕೈಫಿಯತ್ತು, ಮಾಗಣಿ ಕೈಫಿಯತ್ತು ಮುಂತಾದವುಗಳಲ್ಲಿ ಕೃಷಿ ಉತ್ಪನ್ನಗಳ ವಿವರಗಳು ಕಂಡು ಬರುತ್ತವೆ. ಹಾಗೆಯೇ ಮಣ್ಣಾಳು, ದಿನಗೂಲಿ ಮುಂತಾದ ಕೃಷಿ ಶ್ರಮಿಕರನ್ನು ದಾಖಲಿಸುವ ಬಿನ್ನವತ್ತಳೆಗಳು ಈ ಶಾಸ್ತ್ರದ ಅರ್ಥ ವ್ಯಾಪ್ತಿಗೆ ಪ್ರಮುಖ ಆಕರಗಳೆನಿಸಿವೆ. ಇವೆಲ್ಲವುಗಳನ್ನು ಅಧ್ಯಯನಕ್ಕೆ ಒಳಪಡಿಸುವುದರ ಮೂಲಕ ಕೃಷಿಶಾಸ್ತ್ರದ ಬೆಳವಣಿಗೆಯ ಪಾರಂಪರಿಕ ಮಜಲುಗಳನ್ನು ಗುರುತಿಸುವುದು ಈ ಅಧ್ಯಯನದ ಇನ್ನೊಂದು ಉದ್ದೇಶವಾಗಿದೆ.

ಈ ಮೇಲೆ ಚರ್ಚಿಸಿದ ಆಕರಗಳ ಸಹಾಯದಿಂದ ಪಾಚೀನ ಕರ್ನಾಟಕದ ಕೃಷಿ ಪದ್ಧತಿಯ ವೈಧಾನಿಕತೆಯನ್ನು ವಿಶ್ಲೇಷಣೆಗೆ ಒಳಪಡಿಸುವುದು ಈ ಪ್ರಬಂಧದ ವೈಧಾನಿಕತೆಯ ವಿಶ್ಲೇಷಣೆ ಭಾಗವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಚೀನರು ಅನುಸರಿಸುತ್ತ ಬಂದ ಕೃಷಿ ಉಪಕರಣಗಳು, ತಾಂತ್ರಿಕಜ್ಞಾನ ಮತ್ತು ಅವುಗಳ ಸಂರಕ್ಷಣೆ ಕುರಿತಂತೆ ಅಧ್ಯಯನ ಮಾಡುವುದಾಗಿದೆ.

ಕೃಷಿಕನ ಸಂಗಾತಿಗಳಾದ ಎತ್ತು, ಪ್ರಾಣಿ–ಪಕ್ಷಿಗಳು, ಕ್ರಿಮಿಕೀಟಗಳು, ಸಸ್ತನಿಗಳು ಮುಂತಾದವುಗಳ ಬಗ್ಗೆ ಅವರಿಗಿರುವ ತಿಳುವಳಿಕೆ, ಆ ನಿಮಿತ್ತ ಅವುಗಳನ್ನು ಸಂರಕ್ಷಿಸುವ ರೀತಿ–ನೀತಿಗಳನ್ನು ಸಾಧಾರ ಪೂರ್ವಕವಾಗಿ ಅಧ್ಯಯನಕ್ಕೆ ಒಳಪಡಿಸುವುದು, ಹಾಗೆಯೇ ಕೃಷಿ ಹುಟ್ಟುವಳಿಯ ಕಾಲಾವಧಿ ಮತ್ತು ಉತ್ತು, ಬಿತ್ತು, ಕುಯ್ಯಲು ಇತ್ಯಾದಿ ಸುಗ್ಗಿಯ ವೈಧಾನಿಕತೆಯನ್ನು ಕುರಿತಾದ ಅವರ ಅನುಭವಗಳು. ಮುಂದೆ ಮಾರಾಟದ ವ್ಯವಸ್ಥೆ, ಕೃಷಿ ಮೂಲವಾದ ತೆರಿಗೆ ಪದ್ಧತಿ, ಇವೆಲ್ಲವುಗಳನ್ನು ಅಧ್ಯಯನಕ್ಕೆ ಒಳಪಡಿಸುವುದರ ಜೊತೆಗೆ ಆ ಹಿನ್ನೆಲೆಯಲ್ಲಿ ಕೃಷಿ ಸಂದರ್ಭ ಸಾಹಿತ್ಯವಾಗಿ ರಚನೆಗೊಂಡ ಹಂತಿಯ ಹಾಡುಗಳು, ಸುಗ್ಗಿಹಾಡು, ಗಾದೆ, ಒಗಟು, ನುಡಿಗಟ್ಟುಗಳು ಮುಂತಾದ ಕೃಷಿಶಾಸ್ತ್ರ ಉಪ ಉತ್ಪಾದನೆಗಳ ಸಾಹಿತ್ಯ–ಸಂಸ್ಕೃತಿ ಮತ್ತು ಭಾಷಿಕ ಅಧ್ಯಯನವನ್ನು ಮಾಡುವುದು ಇಲ್ಲಿಯ ವೈಶಿಷ್ಟ್ಯಗಳಲ್ಲೊಂದಾಗಿದೆ. ಒಟ್ಟಿನಲ್ಲಿ ಕೃಷಿ ಕೇಂದ್ರವಾಗಿಟ್ಟುಕೊಂಡು ದುಡಿದ ಬಡಿಗ, ಕಮ್ಮಾರ, ಚಮ್ಮಾರ, ಕುಂಬಾರ ಮುಂತಾದ ಸಮುದಾಯಗಳ ಜೊತೆಗಿನ ರಾಚನಿಕ ಸಂಬಂಧವನ್ನು ನಿರೂಪಿಸುವುದು ಪ್ರಸ್ತುತ ಅಧ್ಯಯನದ ಮಹತ್ವದ ಉದ್ದೇಶವಾಗಿದೆ. ಅಸಿ, ಮಸಿ, ವಾಣಿಜ್ಯ, ಶಿಲ್ಪ ಮತ್ತು ಕೃಷಿ ಮುಂತಾದ ಪಂಚ ಆಚಾರಗಳಲ್ಲಿ ಕೃಷಿಯನ್ನು ಆಕ್ರಮಿಸಿದವರಲ್ಲಿ ವಾಣಿಜ್ಯ ಸಮೂಹದವರು ಇದ್ದಾರೆ. ಅಂದರೆ ಇದರ ಅರ್ಥ, ಕೃಷಿ ಮೂಲವಾದ ದವಸ–ಧಾನ್ಯಗಳನ್ನು ಕೊಳ್ಳುವ ಕೊಡುವ ಜನವರ್ಗಕ್ಕೆ ಅಡಿಗಲ್ಲಾಗಿ ರೂಪುಗೊಂಡ

ಕೃಷಿವೃತ್ತಿ ನಾಗರಿಕ ಸಮಾಜದ ಅಸ್ತಿತ್ವಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡಿದೆ ಎನ್ನಬಹುದು. ಈ ಅರ್ಥದಲ್ಲಿ ಶಾಸನಗಳಲ್ಲಿ ಉಲ್ಲೇಖಿತಗೊಂಡ ಅರುವತ್ತೊಕ್ಕಲು, ಗಳೆಯ ಮೂನೂರ್ವರು, ಮೇಳಿಸಾಸಿರ್ವರು ಎಂಬ ಕೃಷಿ ಉತ್ಪಾದಕ ಸಂಘಗಳು ಪ್ರಾಚೀನ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಬಗ್ಗೆ ತಿಳಿದು ಬರುತ್ತದೆ. ಕೃಷಿಯ ಭೌಗೋಳಿಕ ಭಿನ್ನತೆ, ಆಯಾ ಪ್ರಾದೇಶಿಕ, ಮಳೆ ಮತ್ತು ಹವಮಾನಗಳನ್ನು ಅನುಲಕ್ಷಿಸಿ ರೂಪುಗೊಂಡಿದ್ದಾಗಿದೆ. ಇದರಿಂದ ಪ್ರಾಕೃತಿಕ ವೈಶಿಷ್ಟ್ಯ ಮತ್ತು ಕೃಷಿಯಲ್ಲಿ ಅನುಸರಿಸಿಕೊಂಡು ಬಂದ ವಿಧಾನವನ್ನು ಭೌಗೋಳಿಕ ಸಂಬಂಧಿ ಕೃಷಿ ಪದ್ಧತಿಯ ವಿಶೇಷತೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಜರೂರತೆಯನ್ನು ಇಲ್ಲಿ ಪ್ರಸ್ತಾಪಿಸುವುದು ಮತ್ತೊಂದು ಉದ್ದೇಶವಾಗಿದೆ.

ಉದಾಹರಣೆಗೆ ಉತ್ತರ ಕರ್ನಾಟಕದಲ್ಲಿ ಮುಂಗಾರಿ ಕೃಷಿಪದ್ಧತಿ ಮತ್ತು ಹಿಂಗಾರಿ ಕೃಷಿ ಪದ್ಧತಿಯೆಂಬೆರಡು ಪದ್ಧತಿಗಳನ್ನು ಅಳವಡಿಸಿಕೊಂಡಿರುವುದು ತಿಳಿದು ಬಂದಿರುತ್ತದೆ. ಆದರೆ ಮಲೆನಾಡಿನಲ್ಲಿ ಮಳೆಯನ್ನಾಶ್ರಯಿಸಿದ ಕೃಷಿ ಪದ್ಧತಿಯಲ್ಲಿ ಈ ರೀತಿ ವರ್ಗೀಕರಣ ಕಂಡು ಬರುವುದಿಲ್ಲ. ಅಂದರೆ ಬಯಲು ಸೀಮೆಯ ಕೃಷಿ ಪದ್ಧತಿಗೂ ಮತ್ತು ಮಲೆಸೀಮೆಯ ಕೃಷಿ ಪದ್ಧತಿಗೂ, ಕರಾವಳಿ ಪ್ರದೇಶದ ಕೃಷಿ ಪದ್ಧತಿಗೂ ಅನೇಕ ಭಿನ್ನತೆಗಳು ಕಂಡು ಬರುತ್ತವೆ. ಅಧ್ಯಯನದ ದೃಷ್ಟಿಯಿಂದ ಇವುಗಳನ್ನು ಪ್ರಾದೇಶಿಕ ವೈಶಿಷ್ಟ್ಯಗಳೆಂದು ಗುರುತಿಸಬೇಕಾಗುತ್ತದೆ. ಇದರ ಜೊತೆಗೆ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಕೃಷಿಗೆ ಸಂಬಂಧಿಸಿದ ಪದಕೋಶದ ವಿಶೇಷತೆಯನ್ನು ಗಮನಿಸುವುದರ ಮೂಲಕ ಕನ್ನಡದ ಪದಕೋಶದ ಬಹುಮುಖ ವ್ಯಾಪ್ತಿಯನ್ನು ವಿದ್ವತ್ತ್ವಲಯಕ್ಕೆ ತಂದು ಕೊಡುವುದು ಈ ಪ್ರಬಂಧದ ಉದ್ದೇಶವಾಗಿದೆ. ಅಧ್ಯಯನದ ವ್ಯಾಪ್ತಿಯ ದೃಷ್ಟಿಯಿಂದ ಶಾಸ್ತ್ರಸಾಹಿತ್ಯ, ಕಾವ್ಯಸಾಹಿತ್ಯ, ದಾಖಲುಸಾಹಿತ್ಯ ಮತ್ತು ಜನಪದ ಸಾಹಿತ್ಯವನ್ನು ಗ್ರಂಥಸ್ಥ ಆಕರವಾಗಿ ಬಳಸಿಕೊಳ್ಳುವುದಲ್ಲದೆ ಪ್ರಾತಿನಿಧಿಕವಾಗಿ ಕ್ಷೇತ್ರಕಾರ್ಯದ ಮೂಲಕವೂ ಈ ಮಹಾಪ್ರಬಂಧ ಅಧ್ಯಯನದ ವ್ಯಾಪ್ತಿಯನ್ನು ರೂಪಿಸಿಕೊಂಡಿದೆ.

ಒಟ್ಟಿನಲ್ಲಿ 'ಕನ್ನಡದಲ್ಲಿ ಕೃಷಿ ಶಾಸ್ತ್ರಸಾಹಿತ್ಯ' ಹೆಸರಿನ ಈ ಮಹಾಪ್ರಬಂಧ ಸಾಹಿತ್ಯ ದೃಷ್ಟಿಯಿಂದ ಶಾಸ್ತ್ರವನ್ನು, ಸಮಾಜದ ದೃಷ್ಟಿಯಿಂದ ಕೃಷಿ ಸಮುದಾಯವನ್ನು ಅಧ್ಯಯನ ಮಾಡುವುದರ ಮೂಲಕ ಸಮಾಜೋ ಆರ್ಥಿಕ ಮತ್ತು ಸಮಾಜೋ ಸಾಂಸ್ಕೃತಿಕ ಅಧ್ಯಯನಕ್ಕೆ ಒತ್ತು ನೀಡಲಾಗಿದೆ.

ಅಡಿಟಿಪ್ಪಣಿಗಳು

೧. 'ಕನ್ನಡದಲ್ಲಿ ಸೂಪಶಾಸ್ತ್ರ ಸಾಹಿತ್ಯ' ಎಂಬ ಮಹಾಪ್ರಬಂಧವನ್ನು ಡಾ.ಕೆ. ರವೀಂದ್ರನಾಥ ಅವರ ಮಾರ್ಗದರ್ಶನದಲ್ಲಿ ಡಾ.ಬಿ.ಮಂಜುಳಾ ಅವರು ಪೂರೈಸಿದ್ದಾರೆ. ಹಾಗೆಯೇ'ಅಶ್ವಶಾಸ್ತ್ರ' ಕುರಿತು ಶ್ರೀಕಲ್ಲಯ್ಯ ಹಿರೇಮಠ ಅವರು ಡಾ.ಎಫ್.ಟಿ.ಹಳ್ಳಿಕೇರಿ ಅವರ ಮಾರ್ಗದರ್ಶನದಲ್ಲಿ ಮತ್ತು 'ವೈದ್ಯಶಾಸ್ತ್ರ' ಕುರಿತು ಶ್ರೀ ಈರಣ್ಣ ಹುರಳಿ ಅವರು ಡಾ.ವಿ.ಎಸ್, ಬಡಿಗೇರ ಅವರ ಮಾರ್ಗದರ್ಶನದಲ್ಲಿ ಅಧ್ಯಯನಗಳು ನಡೆದಿವೆ.

ಅಧ್ಯಾಯ–ಎರಡು

ಕೃಷಿಶಾಸ್ತ್ರ ಸಾಹಿತ್ಯ : ಅರ್ಥ–ಸ್ವರೂಪ

ಅಧ್ಯಾಯ–ಎರಡು

ಕೃಷಿಶಾಸ್ತ್ರಸಾಹಿತ್ಯ : ಅರ್ಥ–ಸ್ವರೂಪ

ಮನುಕುಲದ ಸಾಂಸ್ಕೃತಿಕ ಇತಿಹಾಸವು ಯಾವಾಗ ಪ್ರಾರಂಭವಾಯಿತು ಎಂದು ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಪ್ರಾಚೀನ ಶಿಲಾಯುಗದಿಂದ ಇಂದಿನತನಕ ಅನೇಕ ಬದಲಾವಣೆಯ ಸ್ವರೂಪವನ್ನು ಮಾನವನ ಬದುಕು ಪಡೆದುಕೊಂಡಿದೆ. ಆರಂಭದ ದಿನಗಳಲ್ಲಿ ಅಲೆಮಾರಿಯಾಗಿ, ಬೇಟೆಯನ್ನಾಡುವ ವೃತ್ತಿಯಿಂದ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದ. ಕಾಲಾಂತರದಲ್ಲಿ ಕೃಷಿ ಮಾನವ ಜನಾಂಗದ ಬೆನ್ನೆಲುಬಾಗಿ ಬೆಳವಣಿಗೆ ಹೊಂದಿತು. ಕೃಷಿ ಎಂದು? ಹೇಗೆ? ಆರಂಭವಾಯಿತು ಎಂದು ಹೇಳುವುದು ಸುಲಭದ ಮಾತಲ್ಲ. ಆದರೂ, ಸಹಿತ ದೊರೆತ ಪ್ರಾಚೀನ ಅವಶೇಷಗಳಿಂದ ತಿಳಿಯುವ ಪ್ರಯತ್ನಗಳು ನಡೆದಿವೆ.

ಪ್ರಾಚೀನಕಾಲದಲ್ಲಿ ಕೃಷಿಯ ಆರಂಭವಾದುದು ಸ್ತ್ರಿಯರಿಂದ ಎಂದು ತಿಳಿದುಬರುತ್ತದೆ. ಬೇಟೆಯ ಬದುಕು ಶ್ರಮದಾಯಕ, ಕಠಿಣ ಎಂದು ಕಂಡುಬಂದಾಗ ಬೇಸಾಯ ಮತ್ತು ಪಶುಪಾಲನೆಯಲ್ಲಿ ತೊಡಗಲು ಮುಂದಾಗಿರಬೇಕು. ಬೇಟೆ ಸಿಕ್ಕರೆ ಹಬ್ಬ ಇಲ್ಲವಾದರೆ ಉಪವಾಸ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾದ ನಂತರ ಪ್ರಾಣಿಗಳನ್ನು ಪಳಗಿಸಿಕೊಂಡು ಕೃಷಿಕಾರ್ಯಕ್ಕೆ ಮುಂದಾಗಿರಬೇಕು. ಅಂದರೆ ಸಂಪೂರ್ಣವಾಗಿ ಬೇಟೆ ನಿಲ್ಲಿಸಿದ ಎಂದು ಅರ್ಥವಲ್ಲ. ಪುರುಷರು ಬೇಟೆಯ ಕೆಲಸ ಮುಂದುವರೆಸಿದರೆ, ಸ್ತ್ರೀಯರು ಗೆಡ್ಡೆಗೆಣಸುಗಳನ್ನು ಸಂಗ್ರಹಿಸುತ್ತಾ ಕೃಷಿಕಾರ್ಯದಲ್ಲಿ ತೊಡಗಿಸಿಕೊಂಡಿರಬೇಕು. ಅಡುಗೆ ಮಾಡಲು, ಧಾನ್ಯ, ಗಡ್ಡೆ, ಗೆಣಸು ಶೇಖರಿಸಲು ಮಣ್ಣಿನ ಪಾತ್ರೆ ಮತ್ತು ಬಿದರಿನ ಬುಟ್ಟಿಯನ್ನು ಹೆಣೆಯುವ ಕೆಲಸ ಆರಂಭಿಸಿದವಳು ಮಹಿಳೆ. ನಂತರ ಕೃಷಿ ಹೆಚ್ಚು ಕಠಿಣ ಮತ್ತು ಸಂಕೀರ್ಣವಾದಾಗ ಮತ್ತು ಹೆಚ್ಚು ಲಾಭ ತರುವುದೆಂದು ತಿಳಿದ ಪುರುಷ ಸ್ವತಃ ಕೃಷಿಕಾರ್ಯದಲ್ಲಿ ಹೆಚ್ಚು ಆಸಕ್ತಿ ವಹಿಸಿ ದುಡಿಯಲು ಮುಂದಾಗಿರುವಂತಿದೆ. ನವಶಿಲಾಯುಗದ ಆರಂಭದಲ್ಲಿ ಆರ್ಥಿಕ ನಾಯಕತ್ವವು ಮಹಿಳೆಯ ಕೈಯಲ್ಲಿದ್ದು ಕಾಲಾನಂತರ ಪುರುಷನ ಕೈಸೇರಿತು. ಕಬ್ಬಿಣದ ಬಳಕೆಯಿಂದ ನೇಗಿಲದಂತಹ ಉಪಕರಣಗಳನ್ನು ಬಳಸಿ ಕೃಷಿಯನ್ನು ದೊಡ್ಡಪ್ರಮಾಣದಲ್ಲಿ ಮಾಡಲು ಮುಂದಾದಾಗ ಬಲಶಾಲಿಯಾದ ಪುರುಷನ ಅವಶ್ಯಕತೆ ಕೃಷಿಗೆ ಅನಿವಾರ್ಯವಾಗಿರಬೇಕು. ಸ್ತ್ರೀಯರು ಸಣ್ಣ ಉಪಕರಣಗಳಿಂದ ಭೂಮಿ

ಹಸನಮಾಡುವ, ನಾಟಿಮಾಡುವ, ಕಳೆಕೀಳುವ, ಬೆಳೆಕೊಯ್ಯುವ, ಧಾನ್ಯಸಂಗ್ರಹಿಸುವ ವೃತ್ತಿಯಲ್ಲಿ ತೊಡಗಿಸಿಕೊಂಡಂತೆ ತೋರುತ್ತದೆ.

ಅರ್ಥ

ಕೃಷಿಗೆ ಭೂಮಿಯೇ ಮುಖ್ಯ. ಮಣ್ಣಿನಲ್ಲಿ ಬಿತ್ತಿ ಬೆಳೆಯುವುದೇ ಕೃಷಿ, ಎಂದು ಸರಳವಾಗಿ ಹೇಳಬಹುದು. ಕೃಷಿ ಪದದ ಅರ್ಥವನ್ನು ಡಿ.ವಿ.ಗುಂಡಪ್ಪನವರು ತಮ್ಮ "ಸಂಸ್ಕೃತಿ" ಎಂಬ ಕೃತಿಯಲ್ಲಿ ಈ ರೀತಿಯಲ್ಲಿ ಅರ್ಥೈಸುತ್ತಾರೆ. "ಸಂಸ್ಕೃತಿ ಎಂಬ ಶಬ್ದವನ್ನು ಇಂಗ್ಲೀಷನ "culture" ಎಂಬುವುದಕ್ಕೆ ಸಂವಾದಿಯಾಗಿ ಉಪಯೋಗಿಸಲಾಗುತ್ತಿದೆ. ಈ ಮಾತು ನಮಗೆ ಹೊಸತು; ಆದರೆ ಇದರ ಹಿಂದಿರುವ ಅರ್ಥ ಹೊಸದಲ್ಲ. "culture" ಎಂಬುದರ ಮೂಲಪದ "cult" ಅಥವಾ "cults" ಎಂಬುದು, ಗೌರವಿಸು, ಸೇವೆಮಾಡು ಮೊದಲಾದ ಅರ್ಥಗಳನ್ನು ಇದು ಕೊಡುತ್ತದೆ. ದೈವಭಕ್ತಿ ಎಂಬ ಅರ್ಥವನ್ನು ಒಂದು ಕಡೆ ಪಡೆದರೆ, ಇನ್ನೊಂದು ಕಡೆ ಭೂದೇವಿಯ ಆರಾಧನೆ ಅಂದರೆ ಕೃಷಿ ಎಂಬ ಅರ್ಥವನ್ನು ಪಡೆಯಿತು. ಈ ಎರಡನೆಯ ಅರ್ಥದಿಂದಲೇ ಬಂದುದು "Agriculture"ಎಂಬ ಶಬ್ದ "culture" ಎಂಬುದು ಒಂದು ಬಗೆಯ ವ್ಯವಸಾಯವೇ ಭೂಮಿಯನ್ನು ಉತ್ತಿಬಿತ್ತಿ, ನೀರು, ಗೊಬ್ಬರ ಹಾಕಿ ಹಸನಮಾಡುವಂತೆ, ಮನುಷ್ಯನಲ್ಲಿರುವ ವಿಶೇಷವಾದ ಶಕ್ತಿಗಳು ಮೊಳಕೆಯೊಡೆದು ಬೆಳೆಯುವದಕ್ಕಾಗಿ ಮಾಡಬೇಕಾದ ಅಂತರಂಗದ ವ್ಯವಸಾಯ ಸಂಸ್ಕೃತಿ".[೧] ಇಲ್ಲಿ ಸಂಸ್ಕೃತಿಯ ಬಗ್ಗೆ ಚಿಂತಿಸುವ ವಿದ್ವಾಂಸರು ಮಾನವನ ನಡತೆ ಬಗ್ಗೆ ವ್ಯಾಖ್ಯಾನಿಸುವುದು ಮುಖ್ಯವಾಗಿದೆ. ಭೂಮಿಯ ಸಂಸ್ಕಾರಕ್ಕೆ ಕೃಷಿಕ ಮಾಡುವ ಸಂಗತಿಯನ್ನು ಹೋಲಿಕೆ ಮಾಡುವುದು ಲಕ್ಷಿಸಬೇಕಾದ ಅಂಶವಾಗಿದೆ.

ಕಿಟಲ್ ಕೋಶದಲ್ಲಿ "ಕೃಷಿ ಶಬ್ದಕ್ಕೆ Krishi, Agriculture husbandry"[೨] ಎಂದು ಅರ್ಥೈಸಲಾಗುತ್ತದೆ. REU.W. REEVE ಕೋಶದಲ್ಲಿ ಕೃಷಿ –Krishi Husbandry agriculture[೩] ಎಂಬ ಕಿಟಲ್ ಅರ್ಥವನ್ನೇ ತಿಳಿಸುತ್ತದೆ.

ಕನ್ನಡ ನಿಘಂಟುವಿನಲ್ಲಿ ಸಾಗುವಳಿ; ಬೇಸಾಯ; ಆರಂಭ; ಎಂದು ವಿವರಿಸುತ್ತಾ ಪ್ರಾಚೀನಕಾವ್ಯಗಳಲ್ಲಿ ಆ ಅರ್ಥಬರುವ ಉಲ್ಲೇಖಗಳನ್ನು ಹೀಗೆ ನೀಡಿದ್ದಾರೆ. ಬವಸಮೆನ್ನಲದು ಕೃಷಿಯೋಳ್ (ಕ.ಉ.ಹಂ. ೨೦೨) ಕೃಷಿವಲ ಕುಲೋಚಿತಮಪ್ಪ ಕೃಷಿಯಮಂ [ಆದಿ.ಪು.೮.೬೪.ವ][೪] ಎಂದು ಈ ರೀತಿ ಅರ್ಥೈಸಲಾಗಿದೆ.

ಈ ಮೇಲಿನ ನಿಘಂಟುಗಳಲ್ಲಿ ಹೇಳಿರುವ ಕೃಷಿ ಪದದ ಅರ್ಥಗಳನ್ನು ಗಮನಿಸಿದರೆ, ವ್ಯಾಪಕವಾದ ಅರ್ಥ ಕಂಡು ಬರುತ್ತದೆ. ಅಂದರೆ ಕಮತ, ಬೇಸಾಯ, ಸಾಗುವಳಿ, ವ್ಯವಸಾಯ, ಒಕ್ಕಲು ಮುಂತಾದ ಅರ್ಥಗಳಿರುವುದರಿಂದ ಈ ಕೆಳಗಿನಂತೆ ಅವಲೋಕಿಸಬಹುದು.

ಜಾನಪದ ಸಾಹಿತ್ಯ ಸಂಪುಟದರ್ಶನ–೨ರಲ್ಲಿ ಒಕ್ಕಲಿಗ ಪದವನ್ನು ಕುರಿತು ವಿ.ಶಿವಾನಂದ ಅವರು ಈ ರೀತಿಯಾಗಿ ಚರ್ಚಿಸಿರುವುದನ್ನು ಗಮನಿಸಬಹುದು. "ಒಕ್ ಧಾತುವಿಗೆ 'ಖಲಕರಣೇ ಶಕುನೇಚ' ಅರ್ಥಗಳು ಶ.ಮ.ದ. (ಶಬ್ದಮಣಿ ದರ್ಪಣ.ಪು–೪೭೮) ದಲ್ಲಿವೆ. ಇಲ್ಲಿ ಖಲಕರಣ ಎಂದರೆ ತೆನೆಗಳಲ್ಲಿನ ಕಾಳನ್ನು ಬೇರ್ಪಡಿಸುವುದು ಎಂಬರ್ಥ. ಒಕ್ಕಿಕೆ, 'ಒಕ್ಕಿಲ್' ಎಂಬ ರೂಪಗಳಲ್ಲಿ ಭೇದಿಸುವುದೆಂದರೆ ಕಾಳನ್ನು ಬೇರೆ ಮಾಡುವುದೆಂದೇ ಅರ್ಥ. ತಮಿಳಿನಲ್ಲಿ 'ಪಿವಕ್ಕು' ಪದಕ್ಕೆ to beat ಎಂಬರ್ಥವಿದ್ದರೂ ಅರ್ಥ ಕನ್ನಡದ 'ಒಕ್ಕು' ಎಂಬ ಕೃಷಿ ಪರವಾದ ಅರ್ಥವನ್ನು ಹೊಂದಿಲ್ಲ.

‘ಒಕ್’ ಧಾತುವಿನಿಂದ ಒಕ್ಕು ಕ್ರಿಯಾಪದ. ಈ ಪದಕ್ಕಿರುವ ಬೇರೆ ಬೇರೆ ಅರ್ಥಗಳನ್ನು ಟಿ.ಬರೋ, ಎಮಿನೋ ಅವರ ದ್ರಾವಿಡ ಜ್ಞಾತಿ ಪದಕೋಶದಿಂದ ಇಲ್ಲಿ ಉಲ್ಲೇಖಿಸಲಾಗಿದೆ ಎಂದು ಅಭಿಪ್ರಾಯಪಡುತ್ತಾರೆ”.[೫] ಮೇಲಿನ ವಿವರಣೆಯನ್ನು ಪರಿಶೀಲಿಸಿದಾಗ ಇತರೆ ದ್ರಾವಿಡ ಭಾಷೆಗಳಿಗಿಂತ ಕನ್ನಡ ಭಾಷೆಯಲ್ಲಿ ಒಕ್ಕಲು ಅಥವಾ ಒಕ್ಕಲಿಗ ಎಂಬ ಪದ ಕೃಷಿ ಸಂಬಂಧ ವೃತ್ತಿ ಹೆಚ್ಚು ಹತ್ತಿರ ಮತ್ತು ಸ್ಪಷ್ಟವಾಗಿರುವುದು ಕಂಡುಬರುತ್ತದೆ. ಕನ್ನಡ ಪ್ರಾದೇಶಿಕ ಉಪಭಾಷೆಗಳಲ್ಲಿ ‘ಒಕ್ಕಲು’ ಪದ ಕುಲ, ಜಾತಿ, ಮನೆತನ, ಗೇಣಿದಾರ ಎಂಬುದಾಗಿ ಬಳಕೆಗೊಂಡಿದೆ. “ಪ್ರಾಚೀನ ಶಾಸನಗಳಲ್ಲಿ ‘ಒರ್ಕ್ಕಲು’ ಪದ ಕುಟುಂಬಗಳು ಎಂಬಂರ್ಥದಲ್ಲಿ ಎರ್ಪ್ಪತ್ತೊಕ್ಕಲ ಮಿಱ್ಱ್ದು (ಕ.ಇ.೧೧.೮-೨೫-೧೯೪ಳ) ಉಲ್ಲೆಖನಗೊಂಡಿದೆ”[೬].

“ಕಮತ ಎಂಬ ಪದಕ್ಕೆ ಹೊಲ ಸಾಗುವಳಿ, ಒಕ್ಕಲುತನ, ಎತ್ತುಗಳನ್ನು ಇಟ್ಟುಕೊಂಡು ಕೂಲಿಯಿಂದ ಸಾಗುವಳಿ ಮಾಡಿಸುವಿಕೆ ಎಂದು ಅರ್ಥೈಸಲಾಗಿದೆ”.[೭] ಈರಯ್ಯ ಕಿಲ್ಲೇದಾರರ ‘ಸಾಂಪ್ರದಾಯಿಕ ಒಕ್ಕಲುತನ’ ಕೃತಿಯಲ್ಲಿ ‘ಕಮತ’ಎಂದರೆ ಹೀಗೆ ಅಥೈಸಲಾಗಿದೆ. “ಕೃಷಿಯಲ್ಲಿ ಒಮ್ಮೆಲೆ ಪಾಂಡಿತ್ಯ ಪಡೆಯುವುದು ಸಾಮಾನ್ಯ ಮಾತಲ್ಲ, ಇದು ಹೀಗೆ, ಇದೇ ಸತ್ಯ ಎಂದು ಹೇಳಲಾಗುದು. ಒಕ್ಕಲುತನ ಸುಧಾರಿಸಿದ ಶಬ್ದವಾಗಿದೆ. ‘ಕಮತ’ ಎಂದು ಹಿಂದಿನ ಜನರು ಕರೆಯುತ್ತಿದ್ದರು. ಹಸಿರು ಕ್ರಾಂತಿ ಮಾಡಲು ಒಕ್ಕಲು ತನದಲ್ಲಿ ಸುಧಾರಣೆ ತರಲು ಆಧುನಿಕ ಕೃಷಿ ಎಂದು ಕರೆದರು. ಕಮತ ಎಂದರೆ ‘ಕಮ್ಮಿ ಆಗಿದೆ’ ತಾ ಎಂದು ಅರ್ಥವುಳ್ಳದ್ದಾಗಿದೆ. ಬಂಡ್ಡವಾಳವಾಗಲಿ, ಶ್ರಮವಾಗಲಿ, ಕೂಲಿಕಾರರಾಗಲಿ ಹಾಗೂ ಬಳಸುವ ಒಕ್ಕಲುತನದ ಪರಿಕರಗಳಾಗಲಿ ಎಷ್ಟು ಬಳಸಿದರು ಕಡಿಮೆಯೇ ಆಗುತ್ತವೆ”.[೮] ಇನ್ನೂ ‘ವ್ಯವಸಾಯ’ ಎಂದರೆ-ಪರಿಶ್ರಮ, ಬೇಸಾಯ, ಕೃಷಿ, ಕಸುಬು ಮುಂತಾದ ಅರ್ಥಗಳಿವೆ.

ಸ್ವರೂಪ

ಮಾನವ ಜನಾಂಗದ ಬೆನ್ನೆಲುಬಾದ ಕೃಷಿಯ ಬೆಳವಣಿಗೆಯ ಸ್ವರೂಪವನ್ನು ಕೆಲವು ಅಂಶಗಳ ಆಧಾರದಿಂದ ಗುರುತಿಸಬಹುದಾಗಿದೆ. ಕೃಷಿ ಎಂದು ಹೇಗೆ ಆರಂಭವಾಯಿತು ಎಂದು ಹೇಳುವುದು ಕಠಿಣ ಮತ್ತು ಪ್ರಯಾಸದ ಕೆಲಸವಾಗಿದೆ. ನಾಗರೀಕತೆಯಾಗಲೀ ಒಂದೇ ಕಾಲಕ್ಕೆ ಎಲ್ಲೆಡೆ ಆರಂಭವಾಗಲಿಲ್ಲ. ಇಂದಿಗೆ ಹತ್ತುಸಾವಿರ ವರ್ಷಗಳಿಗೂ ಮೊದಲು ಆದಿಶಿಲಾಯುಗವಿತ್ತೆಂದೂ ಹೇಳುವಾಗಲೂ ಆ ಕಾಲದಲ್ಲಿ ಕೃಷಿ ಜೀವನ ಇತ್ತೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಆದಿಶಿಲಾಯುಗದಲ್ಲಿ ಅನೇಕ ಬುಡಕಟ್ಟು ಸಂಸ್ಕೃತಿಗಳು ಬೆಳವಣಿಗೆ ಹೊಂದಿವೆ. ನವಶಿಲಾಯುಗದ ಕಾಲದಲ್ಲಿ ಬಾಳುವ ಜನಾಂಗ, ಸಮುದಾಯಗಳು ಜಗತ್ತಿನ ಬೇರೆ ಬೇರೆ ಕಡೆ ಹರಡಿರುವುದು ಇತಿಹಾಸ. ಜಗತ್ತಿನ ಕೆಲವೆಡೆ ನವಶಿಲಾಯುಗ (ನಿಯೊಲಿಥಿಕ್ ಏಜ್) ಹತ್ತುಸಾವಿರ ವರ್ಷಗಳ ಹಿಂದೆ ಕಾಣಿಸಿಕೊಂಡರೂ ಭಾರತದಲ್ಲಿ ಅದು ಏಳು ಇಲ್ಲವೇ ಎಂಟುಸಾವಿರ ವರ್ಷಗಳ ಹಿಂದೆ ಕಾಣಿಸಿದೆಯೆಂದು ಹೇಳಲಾಗುತ್ತದೆ. ಆದರೆ ಅದು ದಕ್ಷಿಣ ಭಾರತಕ್ಕೆ ತಲುಪಿದ್ದು ಇನ್ನೂ ತಡವಾಗಿ. ದಕ್ಷಿಣ ಭಾರತದಲ್ಲಿ ವ್ಯವಸ್ಥಿತವಾಗಿ ಕೃಷಿ ಆರಂಭವಾದದು ಐದು-ಆರುಸಾವಿರ ವರ್ಷಗಳ ಹಿಂದೆ ಎಂದು ತಿಳಿದು ಬರುತ್ತದೆ. ಪ್ರಪಂಚದಲ್ಲಿ ಕೃಷಿ ಕಾರ್ಯ ಆರಂಭವಾದ ಅಂಶಗಳನ್ನು ಬ್ರಿಟಾನಿಕ (೧೯೯೩) ಎನ್‌ಸೈಕ್ಲೋಪೀಡಿಯಾ ಹೀಗೆ ತಿಳಿಸುತ್ತದೆ. “ಕೃಷಿ ಕಾರ್ಯ ಆರಂಭವಾದದ್ದು ಇಂದಿಗೆ ೧೧,೦೦೦ದಿಂದ ೯೦೦೦ಸಾವಿರ ವರ್ಷಗಳ ಹಿಂದೆ (ಕ್ರಿ.ಪೂ.೯೦೦೦ ದಿಂದ ೭೦೦೦)ಈ ಅವಧಿಯಲ್ಲಿ ಪ್ಯಾಲೆಸ್ಟೈನಿನ್ ‘ನಟುಫೀಯನ್’

ಎಂಬ ಜನಾಂಗದವರು ಹರಿತವಾದ ಕಲ್ಲಿನ ಧಾರೆಯುಳ್ಳ ಕುಡುಗೋಲನ್ನು ಹೊಂದಿದ್ದು ಕಾಣಿಸುತ್ತದೆ. ಅವರು ಕೊಯ್ಯುತ್ತಿದ್ದ ಧಾನ್ಯ ನೈಸರ್ಗಿಕವಾದುದ್ದೇ ಇಲ್ಲವೆ ತಾವೇ ಬೆಳೆದುದೇ ಎಂದು ತಿಳಿಯದು; ಕ್ರಿ.ಶ.ಪೂರ್ವದ ಸಂದರ್ಭದಲ್ಲಿ ಪ್ರಾಣಿಗಳನ್ನು ಬಳಸಿದ ಬಗ್ಗೆ ಉಲ್ಲೇಖಗಳು ಸಿಗುತ್ತವೆ. ಹಾಗೆ ಪಳಗಿಸಿದ್ದು ಕಾಡು ಎತ್ತು ಅದರ ಹೆಗಲ ಮೂಳೆಗಳು ನೆಲದಿಂದ ಆರೇಳು ಅಡಿ ಎತ್ತರ ಈ ಪ್ರಾಣಿಯನ್ನು ಇರಾನಿನ ತಾಸಿದಾರನಲ್ಲಿ ಕಾಡುಜಾತಿ ಕುರಿಗಳ ಮಂದೆಯಲ್ಲಿ ಸಾಕಿದ್ದು ಕಾಣುತ್ತದೆ.

ಇರಾನ್ ಮತ್ತು ಇರಾಕಿನ ಗಡಿಯ 'ಅಲಿಕೋಶ್' ಎಂಬಲ್ಲಿ 'ಎನ್‌ಕಾರ್ನ' ಎಂಬ ವರ್ಗದ ಗೋಧಿ 'ಎಮ್ಮಾರ ಗೋಧಿ' ಹಾಗೂ 'ಕಾಡುಜಾತಿಯ ಬಾರ್ಲಿ'ಯನ್ನು ಕ್ರಿ.ಪೂ.೭೦೦೦ದ ಸುಮಾರಿಗೆ ಬೆಳೆಯುತ್ತಿದ್ದರು. ಆದರೆ ಇವೇ ಕೃಷಿಯ ಮೊದಲ ಯತ್ನಗಳೆಂದು ಪರಿಗಣಿಸಬೇಕೆಂದಿಲ್ಲ. ಉತ್ತರ ಥೈಲ್ಯಾಂಡಿನ ಸ್ಪಿರೀಟ್ ಕೇವ್ ಎಂಬ ನಿವೇಶನದಲ್ಲಿ ಆಗಲೇ ಮನೆವಾರ್ತೆಗೆ ಸೇರಿದ್ದ 'ಫೆಸಿಯೋಲಸ್' ಜಾತಿಯ ಹುರುಳಿ ಕಾಳಿನ ಕೋಡು, ಬಟಾಣಿ, ಸೂರೆಕಾಯಿ, ಟ್ರಾಪಾದವುಗಳನ್ನು ಕ್ರಿ.ಪೂ.೯೦೦೦ದಲ್ಲಿ ಬೆಳೆದುದು ಕಂಡುಬರುತ್ತದೆ. ಅಮೇರಿಕ ಖಂಡದಲ್ಲಿ ಕುಂಬಳಕಾಯಿ ಹಾಗೂ ಹೀರೆಜಾತಿಯ ತರಕಾರಿಗಳು ಈಶಾನ್ಯ ಮೆಕ್ಸಿಕೋ ಪರಿಸರದಲ್ಲಿ ಆಗಲೇ ಮನೆಯ ವಾರ್ತೆಯ ಬೆಳೆಗಳಾಗಿ ಕ್ರಿ.ಪೂ.೭೦೦೦ದಲ್ಲಿ ಇದ್ದದ್ದು ಕಾಣಬಂದಿದೆ. ತೆಹುತಾಣ ಕಣಿವೆಯಲ್ಲಿ (ಅಮೇರಿಕಾ) ಇದೇ ಕಾಲದಲ್ಲಿ ಹುರುಳಿಕಾಯಿ ಜಾತಿಯ ಕೋಡು (ಬೀನ್ಸ್) ಬೆಳೆಯುತ್ತಿದ್ದರು. ಅದೇ ಖಂಡದ ಸಂಯುಕ್ತ ಸಂಸ್ಥಾನದ ಪಶ್ಚಿಮ ಭಾಗದಲ್ಲಿ ಸುಮಾರು ಕ್ರಿ.ಪೂ.೮೫೦೦ಕ್ಕೆ ಸರಿಹೊಂದುವ ಬೇಟೆಗೆ ಬಳಸುತ್ತಿದ್ದ ನಾಯಿಯ ಮೂಳೆಗಳು ದೊರೆತಿವೆ".[೯]

ನವಶಿಲಾಯುಗ ಆರಂಭವಾದಾಗ ಅಲೆಮಾರಿ ಜೀವನಕ್ಕೆ ಇತಿಶ್ರೀ ಹಾಡಿ, ಪ್ರಾಣಿಗಳನ್ನು ಪಳಗಿಸುತ್ತಾ ಒಂದು ಕಡೆ ನೆಲೆನಿಂತು ಕೃಷಿ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಮಾನವ ಮುಂದಾಗಿರುವಂತಿದೆ. ಚೂಪಾದ ಕೊಡಲಿಯಿಂದ ಗಿಡ, ಮರ ಕಡಿದು ಕೃಷಿ ಮಾಡಲು ಯೋಗ್ಯವಾದ ತುಂಡು ಭೂಮಿಯನ್ನು, ತಾನು ವಾಸ ಮಾಡುವ ಮನೆಯ ಪಕ್ಕದಲ್ಲಿ ಸಿದ್ದಮಾಡಿಕೊಂಡು ಕೃಷಿಕಾರ್ಯ ಮತ್ತು ಬೇಟೆಯಲ್ಲಿ ತೊಡಗಿಸಿಕೊಂಡು ಬಂದಿರುವಂತೆ ಕಂಡುಬರುತ್ತದೆ. ಹೀಗೆ ಒಂದೇ ಕಡೆ ಅನೇಕ ಕುಟುಂಬಗಳು ನೆಲೆಯೂರಿದಾಗ ಹಳ್ಳಿ, ಗ್ರಾಮ, ಊರುಗಳು ಸೃಷ್ಟಿಯಾಗಿ ನಾಗರೀಕತೆಯ ಬೆಳವಣಿಗೆಗೆ ನಾಂದಿ ಹಾಡಿರಬೇಕೆಂದು ತೋರುತ್ತದೆ. "ಬೇಟೆ ಸಂಸ್ಕೃತಿ, ಪಶುಪಾಲನಾ ಸಂಸ್ಕೃತಿ ಘಟ್ಟದಲ್ಲಿ ಮನುಷ್ಯನ ಬದುಕು ಸಂಚಾರನಿಷ್ಠವಾಗಿದ್ದಿತು. ಆಗ ವ್ಯಕ್ತಿಯು ಬಹಳವೆಂದರೆ ಹೊರಲು ಸಾಧ್ಯವಿರುವಷ್ಟು ಆಸ್ತಿಯನ್ನು ತೆಗೆದುಕೊಂಡು ಸ್ಥಳದಿಂದ ಸ್ಥಳಕ್ಕೆ ಸಾಗಿಸುತ್ತಿದ್ದನು. ಕೃಷಿ ಸಂಸ್ಕೃತಿ ಘಟ್ಟದಲ್ಲಿ ಸಂಚಾರಿ ಜೀವನಕ್ಕೆ ಬದಲು ಸ್ಥಿರ ಸಮಾಜ ಅಸ್ಥಿತ್ವಕ್ಕೆ ಬರುವಲ್ಲಿ ತಾನು ಹೋರಲು ಸಾಧ್ಯವಿರುವಷ್ಟರ ಬದಲು, ತಾನು ರಕ್ಷಿಸಲು ಸಾಧ್ಯವಿರುವಷ್ಟನ್ನು ಸಂಗ್ರಹಿಸತೊಡಗಿದ. ಇದರಿಂದ ಬದುಕಿನಲ್ಲಿ ಆಸ್ತಿ ಕಲ್ಪನೆ ಅಸ್ತಿತ್ವಕ್ಕೆ ಬರತೊಡಗಿತು".[೧೦] ಎಂದು 'ಮಾರ್ಗ'ಕೃತಿಯಲ್ಲಿ ಎಂ.ಎಂ.ಕಲಬುರ್ಗಿಯವರು ಅಭಿಪ್ರಾಯ ಪಡುತ್ತಾರೆ.

ಪ್ರಾಚೀನ ವೇದಗಳಲ್ಲಿ ಕೃಷಿಗೆ ಅತ್ಯಂತ ಮಹತ್ವ ಸ್ಥಾನವಿತ್ತು. ಅದರ ಬಗ್ಗೆ ಶ್ರದ್ಧೆ, ಪ್ರಾಮಾಣಿಕತೆ ಮತ್ತು ಕಾಯಕನಿಷ್ಠೆಯಂತಹ ಅಂಶಗಳು ಇರುವದು ತಿಳಿದುಬರುತ್ತದೆ. ವೇದಗಳಲ್ಲಿ ಕೃಷಿಯನ್ನು ಕುರಿತು ಅನೇಕ ಕಡೆ ಉಲ್ಲೇಖಗಳು ಕಂಡುಬರುತ್ತವೆ. "ವಿಶಾಲ ಭೂಮಿ ಮತ್ತು ಹುಲ್ಲುಗಾವಲುಗಳನ್ನು ಧನ ಭಂಡಾರದೋಪಾದಿಯಲ್ಲಿ ಇಂದ್ರ ತನ್ನ ಮಿತ್ರರಿಗೆ ಕೊಟ್ಟಿದ್ದಾನೆ".[೧೧] ಎಂಬ ಹೇಳಿಕೆಯಲ್ಲಿ ಬೆಳೆಯ

ಕೊಯ್ಲನ್ನು ಕುಡುಗೋಲಿನಿಂದ ಕೊಯ್ಯುವಾಗ ಪ್ರಾರ್ಥನೆ ಮಾಡುವಾಗ ಕೈಯ್ಯಲ್ಲಿ ಹಿಡಿದುಕೊಂಡಿರುತ್ತಿದ್ದರು. "………. ಬೀಜಗಳನ್ನು ಬಿತ್ತಿ ಬೆಳೆಯುವ ತೆನೆಗಳು ವಿಪುಲವು ಕತ್ತರಿಸಿ ರಾಶಿ ಹಾಕಲು ಕುಡುಗೋಲುಗಳಿಗೆ ಭಾರವಾದವುಗಳಾಗಿರಲಿ, ಈ ಪವಿತ್ರವಾದ ನೇಗಿಲುಗಳು ನಮಗೆ ಹಸುಗಳನ್ನೂ, ಕುರಿಗಳನ್ನು ಒಳ್ಳೆಯ ಆಹಾರದಿಂದ ದಷ್ಟಪುಷ್ಟರಾದ ಮಹಿಳೆಯರನ್ನು ಒದಗಿಸುವಂತಾಗಲಿ".[೨] ನೇಗಿಲು ಕುರಿತು ಇರುವ ಪವಿತ್ರ ಭಾವನೆ ಹಸು ಕುರಿಗಳು ಕೃಷಿಯ ಜೊತೆಗೆ ಬೆಳೆಯುತ್ತಿದ್ದ ಹೈನುಗಾರಿಕೆಯನ್ನು ಸೂಚಿಸುತ್ತವೆ. ಹಾಗೂ ದುಡಿಯಲು ಶಕ್ತರಾದ ಮಹಿಳೆಯರು ಸಿಗಲಿ ಎಂದು ಪ್ರಾರ್ಥಿಸುವಲ್ಲಿ, ಕೃಷಿಯಲ್ಲಿ ಹೆಣ್ಣಿನ ಸ್ಥಾನ ಪ್ರಮುಖವಾದದ್ದೆಂದು ತಿಳಿಯಬಹುದಾಗಿದೆ. ಇಂತಹ ಅಂಶಗಳು ಸ್ತ್ರೀ ವ್ಯವಸಾಯದ ಜನನಿ ಸ್ತ್ರೀಯೇ ಭೂಸಂಸ್ಕೃತಿಯನ್ನು ಪ್ರಪಂಚಕ್ಕೆ ಪರಿಚಯ ಮಾಡಿದಳು ಎಂಬ ಅಂಶಕ್ಕೆ ಪುಷ್ಟಿಯನ್ನು ಒದಗಿಸಿದಂತಾಗುತ್ತದೆ. "ಪುರುಷ ಬೇಟೆಯಾಡುವುದು ಮತ್ತು ಸ್ತ್ರೀಯು ಕಂದ ಮೂಲಗಳನ್ನು ಆಯುವುದು ಪ್ರಾಚೀನ ಸಮಾಜದ ಕಾರ್ಯ ವಿಭಾಗವನ್ನು ಸೂಚಿಸುತ್ತದೆ. ಶೌರ್ಯ ಬೇಟೆಯಲ್ಲಿ ಪಾಲ್ಗೊಳ್ಳುತ್ತಿದ್ದ ಗಂಡಸು ತಾನು ಗಂಡು ಎಂದು ತೋರಿಸಿಕೊಳ್ಳಲು, ಸೊಂಟವನ್ನು ಬಗ್ಗಿಸಿ ಮಾಡುವಂತಹ ಕೆಲಸಗಳನ್ನು ಮಾಡುತ್ತಿರಲಿಲ್ಲವೆಂದು, ಮರದ ಮೇಲಿರುವ ಹಣ್ಣು ಉದುರಿಸುವ ಕೆಲಸ ಮಾಡುತ್ತಿದ್ದನೇ ಹೊರತು ನೆಲದೊಳಗಿರುವ ಕಂದಮೂಲಗಳನ್ನು ಆಯುತ್ತಿರಲಿಲ್ಲವೆಂದು, ಅಂತಹ ಹೀನಾಯವೆಂದುಕೊಂಡ ಕೆಲಸವನ್ನು ಸ್ತ್ರೀಯರಿಗೆ ಬಿಡುತ್ತಿದ್ದನೆಂದು ಇತಿಹಾಸತಜ್ಞ ಡಿ.ಡಿ.ಕೊಸಾಂಬಿಯವರು ಹೇಳುತ್ತಾರೆ. ಉದಾಹರಣೆಯಾಗಿ ಮಹಾರಾಷ್ಟ್ರದ ಕೆಲವು ಆದಿವಾಸಿ ಸಮೂಹಗಳ ವರ್ತನೆಗಳನ್ನು ಅವರು ಉಲ್ಲೇಖಿಸುತ್ತಾರೆ. ಏನೇ ಆಗಲಿ ಪುರುಷ ಬೇಟೆಯಲ್ಲಿ ತೊಡಗಿದಾಗ ಸ್ತ್ರೀಯು ಭೂಮಿಯಲ್ಲಿ ಅಡಗಿರುವ ಸಂಪತ್ತಿನ ಔದಾರ್ಯದ ಬಾಗಿಲು ತೆಗೆದು ಆರ್ಥಿಕ ಶೋಧನೆ ಮಾಡಿದಳು".[೩]

ಗ್ರೀಕ್ ಪುರಾಣಗಳಲ್ಲಿ ಧಾನ್ಯವನ್ನು ಸ್ತ್ರೀ ದೇವತೆಯೆಂದು ಮೂರ್ತೀಕರಿಸಲಾಗಿದೆ. ಹಾಗೆಯೇ ಕರೆಯಲು ಕಾರಣ ವ್ಯವಸಾಯ ಸ್ತ್ರೀಯರಿಂದ ಪ್ರಾರಂಭವಾದುದ್ದೆಂದು ನಂಬಲಾಗಿದೆ. ಭಾರತೀಯ ಪುರಾಣಗಳಲ್ಲಿ ವರ್ಣಿಸುವ ಅಷ್ಟಲಕ್ಷ್ಮೀಯರಲ್ಲಿ ಧಾನ್ಯಲಕ್ಷ್ಮೀಯು ಒಬ್ಬಳಾಗಿದ್ದಾಳೆ. ಕರ್ನಾಟಕದ ಬಹುಪಾಲು ಪ್ರದೇಶಗಳಲ್ಲಿ ಸುಗ್ಗಿಯ ನಂತರ ಆಚರಿಸುವ ಕಾಳವ್ವನ ಹಬ್ಬ, ಧಾನ್ಯವನ್ನು ಸ್ತ್ರೀ ದೇವತೆಯೆಂದು ಪರಿಗಣಿಸುವುದಕ್ಕೆ ಸಂಕೇತವಾಗಿದೆ. ಒಟ್ಟಾರೆಯಾಗಿ ಜನಪದರಲ್ಲಿ ಪ್ರಚಲಿತವಾಗಿರುವಂತೆ 'ಹುಡುಗ ಹುಟ್ಟಿರುವುದೇ ಕೊಡಲಿ ಹಿಡಿಯಲು, ಹುಡುಗಿ ಹುಟ್ಟಿರುವುದೇ ಕಳೆ ಗುದ್ದಲಿ ಹಿಡಿಯಲು' ಎಂಬ ನುಡಿಗಟ್ಟು ಅರ್ಥವತ್ತಾಗಿದೆ.

ಪ್ರಾಚೀನ ಭಾರತದಲ್ಲಿ ಕೃಷಿಯ ಬೆಳವಣಿಗೆ ಅತ್ಯಂತ ಶಾಸ್ತ್ರೀಯ ಹಾಗೂ ವೈಧಾನಿಕತೆಯಿಂದ ಕೂಡಿರುವುದಾಗಿದೆ. ". . . . ಭಾರತದ ಪ್ರಾಚೀನ ಗ್ರಂಥಗಳಲ್ಲಿ ಉಕ್ತವಾಗಿರುವ ವ್ಯವಸಾಯ ಪದ್ಧತಿ ತೀರಾ ಶಾಸ್ತ್ರೀಯವಾದದ್ದು ಮಾತ್ರವಲ್ಲ, ಜನಜೀವನದ ಏಳಿಗೆ ಮತ್ತು ರಾಷ್ಟ್ರದ ಸರ್ವತೋಮುಖ ಅಭ್ಯುದಯಕ್ಕೆ ವ್ಯವಸಾಯ ಹೇಗೆ ಕಂಕಾಲ(ಅಸ್ತಿಪಂಜರ) ಎಂಬುದನ್ನೂ ಸಹ ಅಲ್ಲಿ ಅವಧರಿಸುವುದು ಕಾಣುತ್ತದೆ. ವೇದಕಾಲದಲ್ಲಿ ಭಾರತೀಯ ವ್ಯವಸಾಯ ಇಷ್ಟೊಂದು ಪ್ರಗತಿ ಸಾಧಿಸಿದ್ದನ್ನು ಗಮನಿಸುವಾಗ ಭಾರತದಲ್ಲಿ ಆದಿಮ ವ್ಯವಸಾಯ ಆರಂಭವಾದ ಕಾಲವನ್ನು ಅವೆಷ್ಟೋ ಸಹಸ್ರ ವರ್ಷಗಳ ಹಿಂದಕ್ಕೆ ತಳ್ಳಬೇಕಾಗುತ್ತದೆ. ಕೌಟಿಲ್ಯ, ಶುಕ್ರ ಇವರ ಗ್ರಂಥಗಳಲ್ಲಿಯೂ ಮನಸ್ಮೃತಿಯಲ್ಲಿಯೂ ವ್ಯವಸಾಯ ವಿಧಾನಗಳನ್ನು ವೈಜ್ಞಾನಿಕವಾಗಿ ನಿರೂಪಿಸಲಾಗಿದೆ. ವ್ಯವಸಾಯವೊಂದು ಜೀವಪೋಷಕ ಕಲೆಯೆಂದೇ

ಅಲ್ಲಿ ಅದಕ್ಕೆ ಮನ್ನಣೆ ನೀಡಲಾಗಿದೆ. ಮಳೆನೀರಿನ ನೆರವಿನಿಂದ ನಡೆಸುವ ವ್ಯವಸಾಯ, ನದಿ, ಕಾಲುವೆ, ಬಾವಿ, ಯಾಂತ್ರಿಕ ಸಾಧನೆ ಇವುಗಳ ಉಪಯೋಗ ವ್ಯವಸಾಯದಲ್ಲಿ ಅನುಸರಿಸಬೇಕಾದ ಚರಂಡಿ ವ್ಯವಸ್ಥೆ, ಗೊಬ್ಬರಗಳ ಉಪಯೋಗ, ಬೆಳೆ ಎತ್ತುವ ವಿಧಾನದಲ್ಲಿ ಅನುಸರಿಸಬೇಕಾದ ಆವರ್ತನೆ ಮಣ್ಣಿನ ಮತ್ತು ಹವೆಯ ಗುಣವನ್ನು ತಿಳಿದುಕೊಂಡು ಬಿತ್ತಬೇಕಾದ ಬೀಜಗಳ ಆಯ್ಕೆ, ತೀವ್ರ ಹಾಗೂ ವಿಸ್ತಾರ ಕೃಷಿಯ ಸಾಪೇಕ್ಷ ಅನುಕೂಲತೆಗಳು, ಬೆಳೆಗಳಿಗೆ ಬೀಳುವ ಪೀಡೆಗಳ ನಿವಾರಣೆ, ಹಿಡುವಳಿಯ ಗಾತ್ರ, ಜಮೀನ್ದಾರ–ಗೇಣಿದಾರ ಸಂಬಂಧ, ಸರಕಾರಕ್ಕೆ ಸಲ್ಲಬೇಕಾದ ಕಂದಾಯ–ಇವೇ ಮುಂತಾದ ಕೃಷಿ ಹಾಗೂ ತತ್ಸಂಬಂಧ ಸಮಸ್ತ ಶಾಖೆಗಳನ್ನು ಕೂಲಂಕುಷವಾಗಿ ಯಾವ ಆಧುನಿಕ ಮಾನಕದಿಂದಲೂ ಅತ್ಯಾಧುನಿಕವಾಗಿ ಕಾಣುವಂತೆ ನಿರೂಪಿಸಿರುವುದನ್ನು ನೋಡುವಾಗ ಪ್ರಾಚೀನ ಭಾರತದ ಕೃಷಿ ಪ್ರಗತಿಯ ಬಗ್ಗೆ ವಿಶೇಷಾಭಿಮಾನ ಮೂಡುವುದು ಸಹಜ. . . . . .".[೧೪] ಎಂದು ಕನ್ನಡ ವಿಶ್ವಕೋಶ ಸಂ–೫ರಲ್ಲಿ ಹೇಳಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಕೃಷಿಶಾಸ್ತ್ರಸಾಹಿತ್ಯ ಕೃತಿಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಶ್ರೀ ಘನಮಠ ಶಿವಯೋಗಿಗಳು ಬರೆದ ಕೃಷಿಜ್ಞಾನ ಪ್ರದೀಪಿಕೆಯನ್ನು ಹೊರತುಪಡಿಸಿದರೆ ಸಮಗ್ರವಾದ ಕೃಷಿ ಜ್ಞಾನವನ್ನು ತಿಳಿಸುವ ಕೃತಿಗಳು ರಚನೆಯಾಗಿರುವುದಿಲ್ಲವೆಂದೇ ಹೇಳಬೇಕು. ಆದರೂ ಲೋಕೋಪಕಾರ, ರಟ್ಟಮತ ಶಿವತತ್ತ್ವರತ್ನಾಕರದಂತಹ ಶಾಸ್ತ್ರಕೃತಿಗಳಲ್ಲಿ ಕೃಷಿಜ್ಞಾನದ ಕೆಲವು ಉಪಯುಕ್ತ ಮಾಹಿತಿಗಳು ದೊರೆಯುತ್ತವೆ. ಲೋಕೋಪಕಾರದ ಐದು ಮತ್ತು ಆರನೇ ಅಧಿಕರಣಗಳಲ್ಲಿ ನೀರಿನ ಸೆಲೆಯನ್ನು ಗುರುತಿಸುವ ವಿಧಾನ, ನೀರಿನ ಪ್ರಕಾರಗಳು, ನೀರುದೊರೆಯುವ ಅನೇಕ ಲಕ್ಷಣಗಳನ್ನು ಗುರುತಿಸುವ ವಿಧಾನವನ್ನು ನಿಖರವಾಗಿ ತಿಳಿಸಲಾಗಿದೆ. ಆರನೇ ಅಧಿಕರಣದಲ್ಲಿ ತೋಟಗಾರಿಕೆ ಬೆಳೆಗಳಾದ ತೆಂಗು, ಬಾಳೆ ಅನೇಕ ಬಗೆಯ ಹಣ್ಣಿನ ಪ್ರಕಾರಗಳನ್ನು ಶಾಸ್ತ್ರೋಕ್ತವಾಗಿ ತಿಳಿಸಲಾಗಿದೆ. ಮತ್ತು ಬೆಳೆಗೆ ತಗುಲುವ ರೋಗಗಳ ನಿವಾರಣೆಯ ಮಾರ್ಗೋಪಾಯಗಳನ್ನು ಈ ಕೃತಿಯಲ್ಲಿ ಕಾಣಬಹುದಾಗಿದೆ.

ರಟ್ಟಮತಶಾಸ್ತ್ರ ಕೃತಿಯ ೮ನೇಯ ಅಧ್ಯಾಯದಲ್ಲಿ ಮಳೆಗಳನ್ನು ಕುರಿತಾದ ಮಾಹಿತಿ ದೊರೆಯುತ್ತದೆ. ಹಾಗೆಯೇ ಅಧ್ಯಾಯ ೯ರಲ್ಲಿ ಬೀಜ ಬಿತ್ತುವಕ್ರಮ, ಬೀಜ ಬಿತ್ತುವ ಶುಭ ನಕ್ಷತ್ರಗಳು, ಬಿತ್ತುವ ಸಾಧನವಾದ ಕೂರಿಗೆಯನ್ನು ಪೂಜಿಸುವ ವಿಧಾನ, ಬಿತ್ತಲು ಹೊರಟಾಗ ಉಂಟಾಗುವ ಕೆಟ್ಟ ಮತ್ತು ಒಳ್ಳೆಯ ಶಕುನಗಳನ್ನು ಹೇಳಿಕೆಗಳಿಂದ ಈ ಅಧ್ಯಾಯವನ್ನು ಮುಗಿಸಲಾಗಿದೆ. ೧೧ನೇಯ ಅಧ್ಯಾಯದಲ್ಲಿ ಭೂಮಿಯಲ್ಲಿ ಬಾವಿ ತೋಡಿದರೆ ನೀರು ಬರುವುದು, ಬಾರದಿರುವುದು, ನೀರು ಬರುವ ಪ್ರಮಾಣ ಇವುಗಳನ್ನು ಹೇಳಲಾಗಿದೆ. ಹುತ್ತ, ಮರಗಳ ವಿಶೇಷ, ಹುಲ್ಲು, ಗಿಡಗಂಟೆಗಳು ಮೊದಲಾದವುಗಳನ್ನು ಅನುಸರಿಸಿ ನೀರಿನ ಧಾರೆ ಹುಟ್ಟುವ ಕ್ರಮವನ್ನು ಹೇಳಲಾಗಿದೆ. ಬಾವಿ ತೋಡುವಾಗ ಕಲ್ಲು ಬಂಡೆ ಅಡ್ಡ ಬಂದರೆ ಅದನ್ನು ಮಿದು ಮಾಡಿ ಒಡೆದು ತೆಗೆಯುವ ಕ್ರಮ, ಬಾವಿಯ ನೀರು ಕೆಡದಂತೆ ಇರಲು ಮಾಡಬೇಕಾದ ಕ್ರಮ, ಬಾವಿಯ ನೀರನ್ನು ಸಿಹಿ ಮಾಡುವ ಕ್ರಮ, ಬಾವಿಯನ್ನು ತೋಡುವ ದಿಕ್ಕಿನ ಫಲ, ನೀರಿನ ಧಾರೆ ತೋರಿದಾಗ ಮಾಡಬೇಕಾದ ಪೂಜಾ ಕ್ರಮ ಮುಂತಾದವುಗಳನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಶಿವತತ್ತ್ವರತ್ನಾಕರದಲ್ಲಿ ಯಾವ ಯಾವ ಮಳೆ ನಕ್ಷತ್ರಗಳಲ್ಲಿ ಬಿತ್ತನೆ ಮಾಡಿದರೆ ಉತ್ತಮ ಫಲ ದೊರೆಯುತ್ತದೆಂಬುದನ್ನು ತಿಳಿಸಲಾಗಿದೆ.

ಕನ್ನಡ ಕಾವ್ಯಕೃತಿಗಳಲ್ಲಿ ಕೃಷಿಶಾಸ್ತ್ರ ಸಾಹಿತ್ಯದ ಅಂಶಗಳು ಅಲ್ಲಲ್ಲಿ ಪ್ರಾಸಂಗಿಕವಾಗಿ ಕಂಡುಬರುತ್ತವೆ. ಉದಾಹರಣೆಗಾಗಿ ನಯಸೇನನ ಧರ್ಮಾಮೃತದಲ್ಲಿ ". . . . . ಕಮ್ಮಾರನಂತೆ ಕಾಸಿ ಬಡಿವರ್, ಮೇದನಂತೆ ಸೀಳ್ದರ್, ಬಡಗಿಯಂತೆ ಕೆತ್ತುವರು, ಅಗಸನಂತೆ ಬೀಸಿ ಪೈಯ್ವರ್, ಒಕ್ಕಲಿಗನಂತೆ ಮೆಚ್ಚಿ ಪರಗುವರ್, ಅಂಕದಂತೆ ಕುತ್ತುವರ್. . . . .".[೧೫] ಕಮ್ಮಾರ, ಮೇದಾರ, ಬಡಿಗ, ಅಗಸ, ಒಕ್ಕಲಿಗರು ಮಾಡುವ ವೃತ್ತಿಯ ಉಲ್ಲೇಖವನ್ನು ಕಾಣುತ್ತೇವೆ. ಕರ್ಮಯೋಗಿ ಸಿದ್ಧರಾಮನ ವಚನವೊಂದರಲ್ಲಿ "ಕೃಷಿ ಮಾಡಿ ಉಣ್ಣದೆ, ಹಸಿವು ಹರಿವ ಪರಿ ಇನ್ನೆಂತು" ಎಂಬ ಅಂಶ, ಸೋಮೇಶ್ವರ ಕವಿಯ 'ಬೆಳೆಯೇ ಸರ್ವರ ಜೀವನಂ' ಎಂಬ ಉಕ್ತಿ ಅಂದಿನ ಸಮಾಜದಲ್ಲಿ ಕೃಷಿಗಿದ್ದ ಮಹತ್ವವನ್ನು ತಿಳಿಯಪಡಿಸುತ್ತದೆ. ಭುಮಿಯನ್ನು ತಾಯಿಯೆಂದು, ರೈತರನ್ನು ಭೂಮಾತೆಯ ಮಕ್ಕಳೆಂದು ಭಾವಿಸಲಾಗಿತ್ತು. ಒಕ್ಕಲು ಮಕ್ಕಳನ್ನು ಸಮಾಜದಲ್ಲಿ ಆಧಾರಾಭಿಮಾನಗಳಿಂದ ನೋಡಲಾಗುತ್ತಿತ್ತು. ಬೆಳೆ ಬೆಳೆಯದೇ ಬೇರೆಯವರ ಬೆಳೆಯನ್ನು ನೋಡುತ್ತಾ ಕೂರುವ ರೈತರಿಗೆ ಬೆಲೆ ಇರಲಿಲ್ಲ. ಕವಿ ನಯಸೇನ ತಿಳಿಸುವಂತೆ 'ಸ್ವಂತ ಉತ್ತಿ ಬಿತ್ತಿ ಬೆಳೆಯದೇ; ಪರರ ಬೆಳೆಗಳನ್ನು ಎದುರು ನೋಡುತ್ತಾ ಕೂರುವ ರೈತನಿಗೆ ಸಮಾಜದಲ್ಲಿ ಆಧರಣೆ ಇರಲಿಲ್ಲ' ಎಂದು ಹೇಳುತ್ತಾನೆ.

ಅಭಿನವ ಪಂಪನೆಂದು ಪ್ರಸಿದ್ಧನಾದ ನಾಗಚಂದ್ರ ತನ್ನ ಕೃತಿಯಲ್ಲಿ ೧೪ ಜನಮನುಗಳಲ್ಲಿ

ಕಡೆಯವನಾದ ನಾಭಿರಾಜನನ್ನು ಕುರಿತು ಹೇಳುವಾಗ

"ಭುವನ ಜನಜೀವನೋಪಾ
ಯಾವೃತ್ತಿಯಂ ತೋಱಿಕೊಟ್ಟುಂ ಕೃತ ಕೃಷಿ ಕರ್ಮ
ವ್ಯವಹೃತಿಯಂ ಕೃತಯುಗವೆಂ
ಬವಿಕಲ್ಪ ಮನಾದಿ ಕಾಲದೊಳ್ ಪುಟ್ಟಿಸಿದಂ ......".[೧೬]

ನಾಭಿರಾಜನು ಪ್ರಪಂಚದ ಜನರ ಜೀವನಕ್ಕಾಗಿ ಕೃಷಿಯ ವಿಷಯವನ್ನು ಭೋದಿಸಿದನು. ಕಬ್ಬನ್ನು ಬೆಳೆದು ಉಪಯೋಗಿಸುವ ವಿಧಾನವನ್ನು ಜನರಿಗೆ ತಿಳಿಸಿದ್ದನೆಂದು ವರ್ಣಿಸಲಾಗಿದೆ. ಕುಮಾರವ್ಯಾಸ ಕೃಷಿ ಮಹತ್ವವನ್ನು ಕುರಿತು ಈ ರೀತಿ ಹೇಳುತ್ತಾನೆ

"ಕೃಷಿ ಮೊದಲು ಸರ್ವಕ್ಕೆ ಕೃತಿಯಿಂ/ ಪಸರಿಸುವುದಾ ಕೃಷಿಯನು ದ್ಯೋ
ಗಿಸುವ ಜನವನು ಪಾಲಿಸುವುದಾ ಜನಪದದ ಜನದಿ
ವಸು ತೆರಳುವುದು ವಸುವಿನಿಂಸಾ/ ಧಿಸುವಡಾವುದಸಾಧ್ಯ ವದರಿಂ
ಕೃಷಿವಿಹೀನರ ದೇಶವದು ದುರ್ದೇಶ ಕೇಳೆಂದ॥ ".[೧೭]

ಬೇಸಾಯಗಾರನ ಹಿತರಕ್ಷಣೆಯನ್ನು ಕಾಪಾಡದ ದೇಶ ದುರ್ಗತಿ ಹೊಂದುತ್ತದೆ. ಈ ಮಾತು ಎಲ್ಲಾ ಕಾಲಕ್ಕೂ ಸತ್ಯವಾದುದು. ಕೃಷಿಕರು ಇಲ್ಲದ ದೇಶವು ಅವನತಿ ಹೊಂದುತ್ತದೆ. ಕೃಷಿ ಮತ್ತು ಕೃಷಿಕನ ಮಹತ್ವವನ್ನು ಸಾರುವ ಪದ್ಯ ಇದಾಗಿದೆ.

ಲೋಕಾನುಭವ ಮೂರ್ತಿ ಸರ್ವಜ್ಞ ಕೃಷಿಮಹತ್ವವನ್ನು ಈ ಕೆಳಗಿನ ತ್ರಿಪದಿಯಲ್ಲಿ ಪಡಿಮೂಡಿಸಿದ್ದಾನೆ.

"ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು
ಮೇಟಿಯಿಂ ರಾಟೆ ನಡೆದುದಲ್ಲದೆ ದೇಶ
ದಾಟವೆ ಕೆಡುಗು ಸರ್ವಜ್ಞ॥".[೧೮]

ರಾಟೆಮೇಟಗಳಿದ್ದರೆ ರಾಜದಂಡ ನಡೆಯುತ್ತದೆ. ಕೃಷಿ ನಡೆದರೆ ಕೋಶ, ಇಲ್ಲದಿದ್ದರೆ ಎಲ್ಲವೂ ಮೋಸ. ಬೇಸಾಯವೇ ಎಲ್ಲ ತತ್ವಗಳ ಆಟ ನಡೆಯಲು ಬೆನ್ನೆಲುಬಾಗಿದೆ. ಕೃಷಿಯ ರಾಟೆ ನಡೆಯದೇ ಇದ್ದರೆ, ಯಾವ ಕಾರುಬಾರುಗಳು ನಡೆಯಲಾರದು ಎಂಬ ಸ್ಪಷ್ಟ ನುಡಿಯನ್ನು ಕಾಣಬಹುದು.

ಕೃಷಿ ಸಂಸ್ಕೃತಿಯ ಎಲ್ಲಾ ಆಚರಣೆ-ನಂಬಿಕೆ, ನಡವಳಿಗಳನ್ನು ಜಾನಪದ ಸಾಹಿತ್ಯ ಹೇರಳವಾಗಿ ಕಟ್ಟಿಕೊಟ್ಟಿದೆ. ಕೃಷಿ ಸ್ವರೂಪದ ವಿಸ್ತಾರವನ್ನು ಇಲ್ಲಿ ಕಾಣುತ್ತೇವೆ. ಈ ಮೇಲಿನ ಎಲ್ಲಾ ಕೃತಿಗಳಲ್ಲಿ ಕಂಡುಬರುವ ಕೃಷಿಗೆ ಸಂಬಂಧಿಸಿದ ವಿವರ, ಪೂರ್ಣವಾದ ಮಾಹಿತಿಯನ್ನು ಮುಂದಿನ ಅಧ್ಯಾಯದಲ್ಲಿ ಸಮರ್ಪಕವಾಗಿ ಚರ್ಚಿಸಲಾಗಿದೆ.

ನಾಡಿನ ಜನಜೀವನದ ಮುಖ್ಯ ವೃತ್ತಿಗಳಲ್ಲಿ ಕೃಷಿ ಮುಖ್ಯ ಕಸುಬಾಗಿದೆ. ಕೃಷಿಯ ಜೊತೆಗೆ ಬೇಟೆ, ಪಶುಪಾಲನೆ ಬೆಳೆದುಬಂದಿದೆ. ಕೃಷಿಯ ಕೆಲಸದಲ್ಲಿ ನೆಲೆನಿಂತ ಮಾನವ ಕಬ್ಬಿಣದ ಬಳಕೆ ಪ್ರಾರಂಭವಾದ ನಂತರ ವಿಶಾಲ ಭೂಮಿಯ ಉಳುವ, ಹೆಚ್ಚು ಹೆಚ್ಚಾಗಿ ಕೃಷಿ ಉತ್ಪನ್ನ ಬೆಳೆಯುವ ಅಂಶಗಳು ಕಂಡುಬರುತ್ತವೆ. ಕೃಷಿ ನಿರತರಾದ ಜನಗಳು ಹೆಚ್ಚಾದಂತೆ ಕೃಷಿ ಸಮಾಜ ವಿಸ್ತಾರವಾದ ಬೆಳವಣಿಗೆಯನ್ನು ಹೊಂದಿದೆ. ಸಹಸ್ರಾರು ವರ್ಷಗಳಿಂದ ಬೆಳೆದು ಬಂದ ಕೃಷಿ ಕಾಯಕದ ಸ್ವರೂಪ ಅನೇಕ ರೀತಿಯ ಬದಲಾವಣೆಗಳನ್ನು ಕಂಡುಕೊಂಡಿದೆ. ಆಧುನಿಕ ತಂತ್ರಜ್ಞಾನದ ಬಳಕೆಯಿಂದ ಸಾಂಪ್ರದಾಯಕ ಆಚರಣೆಗಳು ಮರೆಯಾಗಿ ಕೃಷಿ ಚಟುವಟಿಕೆಗಳು ಬದಲಾಗಿ ಕಾಲಕ್ಕೆ ತಕ್ಕಂತೆ ಹೊಸರೂಪ ವಿನ್ಯಾಸಗಳನ್ನು ಪಡೆದುಕೊಂಡಿದೆ. ಆ ಕಾರಣದಿಂದ ಕೃಷಿ ಕಾಯಕದ ಪಾವಿತ್ರತೆ, ನಿಷ್ಠೆ, ಶ್ರದ್ಧೆ, ಪ್ರಾಮಾಣಿಕತೆ ಹಾಗೂ ಆಸಕ್ತಿ ಚಟುವಟಿಕೆಗಳು ಕ್ರಮೇಣವಾಗಿ ಕ್ಷೀಣಿಸುತ್ತಿರುವುದು ವಿಷಾದನೀಯ.

ಮಳೆಯ ನಕ್ಷತ್ರ ಪ್ರಕೃತಿಯ ಹವಾಮಾನ ಗಮನಿಸಿ ಮಾಡುತ್ತಿದ್ದ ಕೃಷಿ ಇಂದು ಕಣ್ಮರೆಯಾಗಿದೆ. ರೈತರು ಇಂದು ಅತ್ಯಾಧುನಿಕ ಯಂತ್ರ, ಹೊಸತಳಿಯ ಬೀಜ, ರಾಸಾಯನಿಕಗೊಬ್ಬರ ಹಾಗೂ ಔಷಧಿಗಳ ಅಬ್ಬರಕ್ಕೆ ಒಳಗಾಗಿದ್ದಾರೆ. ಇಂತಹ ಪರಿಸ್ಥಿತಿ ಮುಂದುವರೆದರೆ ಕೃಷಿಕಾಯಕ ಯಾವ ಹಂತ ತಲುಪಬಹುದೆಂಬ ಕಳವಳಕಾರಿ ಸ್ಥಿತಿ ಉಂಟಾಗಬಹುದು. ಇಂತಹ ಸಂದರ್ಭದಲ್ಲಿ ಶ್ರೀ ಘನಮಠ ಶಿವಯೋಗಿಗಳ ಕೃಷಿಜ್ಞಾನ ಪ್ರದೀಪಿಕೆಯ ತಿಳುವಳಿಕೆ ಹಾಗೂ ಸುಭಾಸ ಪಾಳೇಕಾರರ ಸಹಜ ಕೃಷಿ ಜ್ಞಾನದ ಅಂಶಗಳನ್ನು ಅನುಸರಿಸಿ ಬೆಳೆ ಬೆಳೆಯುವ ರೈತರು ಎಷ್ಟು ಮಂದಿ ಸಿಗುತ್ತಾರೆ ಎಂಬುದು ಬಹುದೊಡ್ಡ ಪ್ರಶ್ನೆಯಾಗಿ ಉಳಿಯುತ್ತದೆ. ಆದರೂ ಸಹಿತ ಅನೇಕ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಈ ಕ್ಷೇತ್ರದಲ್ಲಿ ನಡೆದಿವೆ. ನಿರಂತರವಾಗಿ ಕೃಷಿಯಲ್ಲಿ ಸೋಲು ಅನುಭವಿಸಿದ ರೈತರು ಸಹಜ ಕೃಷಿಯತ್ತ ಒಲವು ತೋರುತ್ತಿರುವ ಅಂಶ ಗಮನಾರ್ಹವಾಗಿದೆ. ಘನಸರ್ಕಾರಗಳು ಕೃಷಿಯ ನೀತಿಯಲ್ಲಿ ಅಮೂಲಾಗ್ರ ಬದಲಾವಣೆ ತಂದು ಸಣ್ಣ ಸಣ್ಣ ಒಡ್ಡುಗಳ ನಿರ್ಮಾಣ, ಕೃಷಿಹೊಂಡಗಳ ಬಳಕೆ, ಮಾರುಕಟ್ಟೆಯ ನೀತಿಯ ಬದಲಾವಣೆ, ಆಕರ್ಷಕ ಬೆಲೆ, ಉತ್ತಮ ತಳಿ ಬೀಜಗಳ ತಯಾರಿಕೆ, ಸಂಸ್ಕರಣೆ, ಸಂಗ್ರಹ ಮುಂತಾದ ಕೃಷಿ ಸಂಬಂಧಿ ವಿಷಯಗಳನ್ನು ಕೃಷಿವಿಶ್ವವಿದ್ಯಾಲಯಗಳಲ್ಲಿ ಅಳವಡಿಸಿ ಆ ಮಟ್ಟದ ಸಂಶೋಧನ ಕಾರ್ಯದಲ್ಲಿ ತೊಡಗಿಸುವಂತಹದ್ದು ಅತ್ಯಂತ ಪ್ರಮುಖವಾದ ಕಾರ್ಯಗಳಲ್ಲೊಂದಾಗಿದೆ. ರೈತರ ಆತ್ಮಹತ್ಯೆಗೆ ಕಾರಣಗಳನ್ನು ತಿಳಿದು ಪರಿಹಾರ ಕಂಡುಕೊಂಡರೆ ಮಾತ್ರ ಕೃಷಿಯ ಪ್ರಗತಿ ಸಾಧ್ಯ. ಒಟ್ಟಾರೆಯಾಗಿ ಕೃಷಿಯ ಕಾರ್ಯಕ್ಷೇತ್ರ ವಿಸ್ತಾರವಾದ ಸ್ವರೂಪ ಪಡೆದುಕೊಂಡಿದೆ ಎಂದು ಹೇಳಬಹುದು.

ಅಡಿಟಿಪ್ಪಣಿಗಳು

೧) ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಡಾ.ಎಚ್.ತಿಪ್ಪೇರುದ್ರಸ್ವಾಮಿ, ಪುಟ–೦೬

೨) Dictionary –[A.Kannad-English] REV.F.Kittel, ಪುಟ–೪೬೪

೩) Dictionary Kannada and English –By the RE.V.REEVE, ಪುಟ–೩೧೫

೪) ಕನ್ನಡ ನಿಘಂಟು–ಕನ್ನಡ ಸಾಹಿತ್ಯ ಪರಿಷತ್ತು, ಸಂ–೨, ಪುಟ–೨೦೩೨

೫) ಜಾನಪದ ಸಾಹಿತ್ಯ ದರ್ಶನ, ಸಂ–೨ –ಸಂ–ಡಾ.ವೃಷಭೇಂದ್ರಸ್ವಾಮಿ, ಪುಟ–೮೨

೬) ಅದೇ, ಪುಟ–೮೮

೭) ಕನ್ನಡ–ಕನ್ನಡ ಶಬ್ದಕೋಶ, ಸಂ–ಗುರುನಾಥ ಜೋಶಿ, ಪುಟ–೧೧೫

೮) ಅದೇ, ಪು–೧೧೫

೯) ಕರ್ಮವೀರ ಮಾಸಿಕ ಲೇಖನ, ಒಕ್ಕಲುತನ ಮತ್ತು ಒಕ್ಕಲಿಗರು–ಡಾ.ಸೂರ್ಯನಾಥ ಕಾಮತ್,

೧೦ ಮಾರ್ಗ–೪, ಡಾ.ಎಂ.ಎಂ.ಕಲಬುರ್ಗಿ–೨೦೦೫, ಪುಟ–೭

೧೧) (ಋಗ್ವೇದ ೧೧೧,೩,೨,೧೫) ಕರ್ಮವೀರ ಮಾಸಿಕ, ಒಕ್ಕಲುತನ ಮತ್ತು ಒಕ್ಕಲಿಗರು –ಸೂರ್ಯನಾಥ ಕಾಮತ್–೨೦೦೫

೧೨) ಅದೇ

೧೩) ಕನ್ನಡ ವಿಷಯ ವಿಶ್ವಕೋಶ–(ಜಾನಪದ ಸಂಪುಟ)–ಮೈಸೂರು.ವಿ.ವಿ, ಪು–೨೨೧

೧೪) ಕನ್ನಡ ವಿಶ್ವಕೋಶ, ಸಂ–೫, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ೧೯೭೨, ಪುಟ–೪೯

೧೫) ಧರ್ಮಾಮೃತ, ಸಂ–ಬಿ.ಬಿ.ಮಹೇಶವಾಡಿ,ಎಸ್.ಪಿ.ಪಾಟೀಲ್, ಪುಟ–೧೦೯

೧೬) ಪಂಪ ರಾಮಾಯಣ– ನಾಗಚಂದ್ರ, ಪುಟ–೯೩

೧೭) ಕರ್ನಾಟಕ ಭಾರತ ಕಥಾಮಂಜರಿ, ಸಂ–ಕುವೆಂಪು, ಸಭಾ –ಸಂ–೧, ಪ–೬೪, ಪು–೭೭

೧೮) ಸರ್ವಜ್ಞನ ವಚನಗಳು, ಸಂ–ಚನ್ನಪ್ಪ ಉತ್ತಂಗಿ, ಪ–೧೩೫೭, ಪುಟ–೧೬೮

ಅಧ್ಯಾಯ–ಮೂರು

ಕನ್ನಡದಲ್ಲಿ ಕೃಷಿಶಾಸ್ತ್ರ ಸಾಹಿತ್ಯ ಪರಿಚಯ

೧. **ಪ್ರಾಚೀನ ಶಾಸ್ತ್ರ ಸಾಹಿತ್ಯ**
   - ೧. ಕೃಷಿಜ್ಞಾನ ಪ್ರದೀಪಿಕೆ
   - ೨. ರಟ್ಟಮತ
   - ೩. ಲೋಕೋಪಕಾರ
   - ೪. ಶಿವತತ್ತ್ವ ರತ್ನಾಕರ

೨. **ಪ್ರಾಚೀನ ಕಾವ್ಯ ಸಾಹಿತ್ಯ**
   - ೧. ಮಾರ್ಗಸಾಹಿತ್ಯ
   - ೨. ದೇಶೀ ಸಾಹಿತ್ಯ
   - ೩. ಜನಪದ ಸಾಹಿತ್ಯ

೩. **ದಾಖಲು ಸಾಹಿತ್ಯ**
   - ೧. ಶಾಸನಗಳು
   - ೨. ಕೈಫಿಯತ್ತುಗಳು
   - ೩. ಬಿನ್ನವತ್ತಳೆಗಳು

ಅಧ್ಯಾಯ – ಮೂರು

ಕನ್ನಡದಲ್ಲಿ ಕೃಷಿಶಾಸ್ತ್ರ ಸಾಹಿತ್ಯ ಪರಿಚಯ

೧. ಪ್ರಾಚೀನ ಶಾಸ್ತ್ರ ಸಾಹಿತ್ಯ

ಪ್ರಾಚೀನ ಕನ್ನಡ ಸಾಹಿತ್ಯ ಇತಿಹಾಸ, ಪುರಾಣ, ಧರ್ಮ, ತತ್ತ್ವ ಪ್ರಧಾನ ಕೃತಿಗಳ ಜೊತೆಗೆ ನಿಘಂಟು, ವ್ಯಾಕರಣ, ಛಂದಸ್ಸು ಶಾಸ್ತ್ರದ ಜೊತೆಗೆ ವೈದ್ಯ-ವಿಷವೈದ್ಯ ಕುರಿತಾಗಿ ಶಾಸ್ತ್ರ ಕೃತಿಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕೃಷಿಶಾಸ್ತ್ರ ಕುರಿತಾದ ಗ್ರಂಥಗಳು ಪ್ರಮುಖವೆನಿಸಿವೆ. ಕನ್ನಡದಲ್ಲಿ ಕೃಷಿಶಾಸ್ತ್ರವನ್ನು ಇಡಿಯಾಗಿ ನಿರೂಪಿಸುವ ಏಕೈಕ ಕೃತಿ 'ಕೃಷಿಜ್ಞಾನ ಪ್ರದೀಪಿಕೆ'. ಇದನ್ನು ಬಿಟ್ಟರೆ ಚಾವುಂಡರಾಯನ 'ಲೋಕೋಪಕಾರ' ಇತರ ಶಾಸ್ತ್ರಜ್ಞಾನವನ್ನು ಪರಿಚಯಿಸುವುದರ ಜೊತೆಗೆ ಎರಡು ಅಧಿಕಾರಗಳಲ್ಲಿ ಕೃಷಿಶಾಸ್ತ್ರವನ್ನು ನಿರೂಪಿಸುತ್ತದೆ.

ಕೆಳದಿಬಸವರಸನ ಶಿವತತ್ತ್ವರತ್ನಾಕರ ಅನೇಕ ವಿಷಯಗಳನ್ನು ಶಾಸ್ತ್ರೀಯವಾಗಿ ನಿರೂಪಿಸುವ ಗ್ರಂಥ. ೧೫-೧೬ನೇ ಶತಮಾನಗಳ ಸಮಗ್ರ ಚರಿತ್ರೆಯನ್ನು ತಿಳಿಸಲು ಸಹಾಯಕಾರಿಯಾಗುವ ಈ ಕೃತಿಯು ಕೃಷಿ ಸಂಬಂಧಿಸಿದಂತೆ ೨ನೇ ತರಂಗದಲ್ಲಿ ೧೦೦ ಶ್ಲೋಕಗಳಲ್ಲಿ ಚರ್ಚಿಸಲಾಗುತ್ತದೆ. ಕನ್ನಡದಲ್ಲಿ ರಟ್ಟಮತ, ಕುರುಬರಟ್ಟಮತ, ರಟ್ಟಮತಶಾಸ್ತ್ರ ಹೆಸರಿನಲ್ಲಿ ಸಿಗುವ ಕೃತಿಗಳು ಲಭ್ಯವಿವೆ. ೬೦ ಸಂವತ್ಸರಗಳ ಫಲವನ್ನು ನಿರೂಪಿಸುವ ಈ ಕೃತಿಯಲ್ಲಿ ಮಳೆ, ಬೆಳೆಯ ಬಗ್ಗೆ ಚರ್ಚಿಸಲಾಗಿದೆ. ಇದಿಷ್ಟು ಕೃಷಿಯನ್ನು ಕುರಿತು ಶಾಸ್ತ್ರೀಯವಾಗಿ ನಿರೂಪಿಸುವ ಶಾಸ್ತ್ರಗ್ರಂಥ ಪ್ರಮಾಣವಾಗಿದೆ.

ಈ ಗ್ರಂಥಗಳ ರಚನೆಯ ಹಿಂದೆ ಶಾಸ್ತ್ರಕಾರನ ಲೋಕೋಪಕಾರ ಹಾಗೂ ಲೋಕಾನುಭವಗಳ ಸಮಸ್ತ ಪ್ರಜ್ಞೆ ಇರುವುದನ್ನು ಗಮನಿಸಬಹುದು. ಈ ಕಾರಣವಾಗಿಯೇ "ಧರೆಯೊಳ್ ಸರ್ವಜನೋಪಕಾರಮೆನಲ್ ಈ ಮಂತ್ರೌಷಧಿ ವ್ರಾತಮಂ ನಿರುತಂ ಭಾವಿಸಿ ಪೇಳ್ವ ಮಾನವನೆ ತಾಂದೇವಂ ಧರಾಚಕ್ರದೊಳ್" ಎಂದು ಒಂದನೆ ಮಂಗರಾಜನು ತನ್ನ 'ಖಗೇಂದ್ರಮಣಿದರ್ಪಣ'ದಲ್ಲಿ ಹೇಳಿದ ಮಾತುಗಳಿಂದ ಜನತೆಗೆ ಉಪಕಾರವಾಗುವ ಶಾಸ್ತ್ರಗ್ರಂಥ ರಚನೆಗಳು ಮೇಲು ಎಂದು ಕವಿಗಳು ಭಾವಿಸಿದ್ದಾರೆ.

'ಶಾಸ್ತ್ರ' ಪದಕ್ಕೆ ಅಪ್ಪಣೆ, ಆಜ್ಞೆ, ಕಟ್ಟಳೆ, ತತ್ತ್ವ, ತಿಳಿಯದಿರುವ ವಿಷಯವನ್ನು ತಿಳಿಯಪಡಿಸುವುದು ಎಂದು ಅರ್ಥಗಳಿವೆ. 'ಯಾವುದಾದರೊಂದು ವಿಷಯವನ್ನು ಹಿಡಿದು ಸ್ಪಷ್ಟವಾಗಿ ಅದರ ಗುಣ,

ಉಪಯೋಗಾದಿಗಳನ್ನು ವಿವರಿಸುವುದಕ್ಕೆ 'ಶಾಸ್ತ್ರ'ವೆಂದು ಕರೆಯಲಾಗಿದೆ. ಈ ದೃಷ್ಟಿಯಿಂದ ಜನಪದ ಸಂಪ್ರದಾಯದಲ್ಲಿ ಮದುವೆಶಾಸ್ತ್ರ, ತೊಟ್ಟಿಲಶಾಸ್ತ್ರ ಎಂಬಿತ್ಯಾದಿ ಕಾರ್ಯಗಳನ್ನು ಶಾಸ್ತ್ರೋಕ್ತವಾಗಿ ನೆಡಸಿಕೊಂಡು ಬಂದಿರುವುದನ್ನು ಇಂದಿಗೂ ಕಾಣುತ್ತೇವೆ. ಇನ್ನೊಂದು ಅರ್ಥದಲ್ಲಿ ಇದನ್ನು 'ವಿಜ್ಞಾನ'ವೆಂದು ಹೇಳುವವರು ಇದ್ದಾರೆ. ಏಕೆಂದರೆ ಬುದ್ಧಿ ಹಾಗೂ ಜ್ಞಾನಕ್ಕೆ ಸಂಬಂಧಿಸಿದ ಕಾರಣವಾಗಿ ಈ ಅರ್ಥವನ್ನು ಕಲ್ಪಿಸುತ್ತಾರೆ ಎಂದು ಭಾವಿಸಬಹುದು. ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ವಿಜ್ಞಾನಕ್ಷೇತ್ರದ ವಿಷಯಗಳಾದ ರಸಾಯನಶಾಸ್ತ್ರ, ಭೌತಶಾಸ್ತ್ರ, ಜೀವಶಾಸ್ತ್ರ ಮುಂತಾದ ಶಾಸ್ತ್ರಗಳನ್ನು ವಿಜ್ಞಾನವೆಂದು ಕರೆಯುವ ವಾಡಿಕೆ ಇದೆ.

ಲೋಕವ್ಯವಹಾರಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳು ಶಾಸ್ತ್ರ ಸಾಹಿತ್ಯದಲ್ಲಿ ರಚನೆಗೊಂಡಿವೆ. ಬದುಕಿನಲ್ಲಿ ವ್ಯವಹಾರಜ್ಞಾನ ಮತ್ತು ಪ್ರಗತಿಯನ್ನು ಹೊಂದುವ ವಿಚಾರಗಳನ್ನು ಈ ಗ್ರಂಥಗಳು ಪ್ರತಿಪಾದಿಸುತ್ತವೆ. ಹೀಗಾಗಿ ಅವುಗಳ ಶೈಲಿ ಬೆಡಗು–ಬಣ್ಣವನ್ನು ಹೊಂದಿರಬೇಕಾಗಿಲ್ಲ. ಬದಲಾಗಿ ಸ್ಪಷ್ಟತೆ, ಖಚಿತತೆ ಇಲ್ಲಿ ಅವಶ್ಯ. ಈ ದೃಷ್ಟಿಯಿಂದ ಸಾಮಾನ್ಯವಾಗಿ ಕಂದ, ಷಟ್ಪದಿ, ರಗಳೆ, ಗದ್ಯ ಮುಂತಾದ ದೇಶೀ ಛಂದೋಬಂಧಗಳಲ್ಲಿ ರಚನೆಯಾಗಿರುವುದೇ ಹೆಚ್ಚು. ಮುಂದುವರೆದು ಇಂತಹ ಗ್ರಂಥಗಳಿಗೆ ಟೀಕು–ವ್ಯಾಖ್ಯಾನಗಳು ರಚನೆಗೊಂಡವು. ಒಟ್ಟಿನಲ್ಲಿ "ಆಕಾಂಕ್ಷಿ ಮುಕ್ತಿಯಕ್ಕು" ಎಂಬ ಆಶಯದಿಂದ ಕನ್ನಡದಲ್ಲಿ ಶಾಸ್ತ್ರ ಕೃತಿಗಳು ಸಮೃದ್ಧವಾಗಿ ರಚನೆಗೊಂಡಿವೆ.

೧. ಕೃಷಿಜ್ಞಾನ ಪ್ರದೀಪಿಕೆ

ರಾಯಚೂರ ಜಿಲ್ಲೆ ಲಿಂಗಸೂಗೂರ ತಾಲ್ಲೂಕ ಸಂತೆಕೆಲ್ಲೂರು ಘನಮಠದ ನಾಗಭೂಷಣ ಶ್ರೀಗಳವರು ಕ್ರಿ.ಶ. ೧೮೨೮ರಿಂದ ೧೮೮೪ರವರೆಗೆ ಜೀವಿಸಿದ್ದರು. ಬಾಲಲೀಲ ಮಹಾಂತ ಶಿವಯೋಗಿಗಳ ಸಮಕಾಲೀನರಾದ ಇವರು ಮೂಲತಃ ಆಂಧ್ರಪ್ರದೇಶದ ಪಟ್ಲೂರು ತಾಲ್ಲೂಕಿನ ದೇವವಾಡ ಗ್ರಾಮದವರು. ಅಲ್ಲಿಯ ಲಿಂಗವಂತ ದಂಪತಿಗಳಾದ ವೀರಯ್ಯ–ವೀರಾಂಬೆಯರ ಪುತ್ರರಾಗಿ ಜನಿಸಿದರು. ವೈರಾಗ್ಯ ಪ್ರವೃತ್ತಿಯ ಇವರು ಯತಿಗಳಾಗಿ ರೂಪುಗೊಂಡು, ಕರ್ನಾಟಕದ ವಿಜಾಪುರ ಜಿಲ್ಲೆಯ ಎಲಗೋಡ ಗ್ರಾಮದ ಶ್ರೀ ರೇವಣಸಿದ್ದಯ್ಯ ಅವರಲ್ಲಿ ಅಕ್ಷರ, ಸಂಗೀತ ಕಲಿತವರು. ಬಳಿಕ ಕಲಬುರ್ಗಿ, ರಾಯಚೂರು, ಕೊಪ್ಪಳ, ವಿಜಾಪುರ ಭಾಗಗಳಲ್ಲಿ ಸಂಚರಿಸಿದರು. ಕಲುಬುರ್ಗಿ ಜಿಲ್ಲೆಯ ಚಿಂಚೋಳಿ ಗ್ರಾಮದ ಬಸವ ಪುರಾಣದ ಮೆರವಣಿಗೆಯಲ್ಲಿ ಉಂಟಾಗಿದ್ದ ವಿಪತ್ತನ್ನು ನಿವಾರಿಸಿದರು. ಮಕ್ತಲ್ ತಾಲ್ಲೂಕಿನ ನೀರಡಗುಂಭ ಗ್ರಾಮದ ಶಾಂತವೀರಪ್ಪಗೌಡರ ತೋಟದಲ್ಲಿ, ಯಾದಗಿರಿ ತಾಲ್ಲೂಕಿನ ಬಾಡ ಗ್ರಾಮದಲ್ಲಿ, ರಾಯಚೂರು ತಾಲ್ಲೂಕಿನ ಗೂಗಲ್ಲ ಗ್ರಾಮದ ಪ್ರಭು ದೇವಾಲಯದಲ್ಲಿ ವಾಸವಾಗಿದ್ದರು. ಬಳಿಕ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ, ಲಿಂಗಸೂಗೂರು ತಾಲ್ಲೂಕಿನ ಸಂತೆಕೆಲ್ಲೂರು ಗ್ರಾಮಗಳಲ್ಲಿ ಕೆಲವು ದಿನ ನೆಲೆನಿಂತರು. ಸಿಂದಗಿ ತಾಲ್ಲೂಕಿನ ಬೆಕ್ಕಿನಹಾಳು, ಹುನಗುಂದ ತಾಲ್ಲೂಕಿನ ಇಲಕಲ್ಲ, ಹುನಗುಂದಗಳಲ್ಲಿ, ಮುದ್ದೇಬಿಹಾಳ ತಾಲ್ಲೂಕಿನ ಕುಂಟೋಜಿ ಗ್ರಾಮಗಳಲ್ಲಿಯೂ ವಾಸಮಾಡಿದರು. ಇವರು ಮೈಸೂರು ಸೀಮೆಯಲ್ಲಿ ಸಂಚರಿಸುವಾಗ ಕೃಷ್ಣರಾಜ ಒಡೆಯರು ಇವರನ್ನು ಕಾಣಲು ಬಯಸಿದರೆಂದು ತಿಳಿದು ಬರುತ್ತದೆ. ಈ ಸಂಗತಿಯನ್ನು ಸೂಚಿಸುವ ಕೆಲವು ಪದ್ಯಗಳನ್ನು ನಾಗಭೂಷಣ ಶಿವಯೋಗಿಗಳು ರಚಿಸಿದ್ದು, ಅವು ಹಳಕಟ್ಟಿ ಅವರ ಆವೃತ್ತಿಯ ಪ್ರಸ್ತಾವನೆಯಲ್ಲಿ ಶಿವಾನುಭವ ಪತ್ರಿಕೆಯಲ್ಲಿಯೂ ಪ್ರಕಟವಾಗಿವೆ. ಹೀಗೆ ಲೋಕ ಸಂಚಾರ ಮಾಡುತ್ತ ನಾಗಭೂಷಣ ಶಿವಯೋಗಿಗಳು ಸಂತೆಕೆಲ್ಲೂರಿಗೆ ಬಂದು ಅಲ್ಲಿಯೇ ಐಕ್ಯರಾದರು. ೧೮೮೪ ರಲ್ಲಿ ಘನಮಠೇಶ್ವರ ಮಠಾಶ್ರಮ ಸ್ಥಾಪಿಸಿದರು.[೧]

ಯತಿ ಜೀವನದೊಂದಿಗೆ ಕೃಷಿ ಜೀವನವನ್ನು ಬಾಳಿದ ನಾಗಭೂಷಣ ಶಿವಯೋಗಿಗಳು ಕೈಮುಟ್ಟಿ ಮಾಡಿದ, ಕಣ್ಣು ಬಿಟ್ಟು ನೋಡಿದ ಲೋಕಹಿತಾರ್ಥವಾದ ಕೃಷಿ ಅನುಭವವನ್ನು ಇಲ್ಲಿ ಎರಕ ಹೊಯ್ದಿದ್ದಾರೆ. ಶಿವಯೋಗಿಗಳ ಕೃಷಿಜ್ಞಾನವನ್ನು ಪ್ರದೀಪನಗೊಳಿಸಿದವರು. ಇವರ ಶಿಷ್ಯರಾದ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಬೆಕ್ಕಿನಹಾಳು ಗ್ರಾಮದ ಕುನ್ನಾಳ ಸಿದ್ದರಾಮಪ್ಪನವರು ಕೃಷಿ ಪ್ರದಾನ ಸಮಾಜದಲ್ಲಿ ಬದುಕಿದ ಶ್ರೀ ಸಿದ್ದರಾಮಪ್ಪನವರು ಗುರುಬೋಧೆ ಎಂಬಂತೆ ಇದನ್ನು ಗ್ರಂಥ ರೂಪಕ್ಕೆ ತಂದಿರುವುದಾಗಿ ಗ್ರಂಥದ ಕೊನೆಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ. "ಈ ಪ್ರಕಾರದಾಶೀರ್ವಾದವು ಬರೆಯಲ್ಪಟ್ಟುವುದಾಗಿ ಜಗದ್ದಿತಭೋಗ ಮೋಕ್ಷ ಪ್ರದವಾದ 'ಕೃಷಿಜ್ಞಾನ ಪ್ರದೀಪಿಕೆ' ಎಂಬ ಪುಣ್ಯ ಗ್ರಂಥವು ಗುರುವಾಜ್ಞೆಯ ಪ್ರಕಾರ ಸಿದ್ದರಾಮಪ್ಪ ಕುನ್ನಾಳ ಮುಕ್ಕಾಮ ಬೆಕ್ಕಿನಾಳ ಇವರಿಂದ ಶ್ರೀ ನೃಪಶಾಲಿವಾಹನ ಶಕೆ ೧೮೦೧ ಪ್ರಮಾಥಿನಾಮ ಸವಂತ್ಸರ ಮಾಘ ಶುದ್ಧ ೧೫ರಲ್ಲಿ ಸಂಪೂರ್ಣ ಮಾಡುದು ಶ್ರೀ ಶ್ರೀ".[೨] ಇಂತಹ ಲೌಕಿಕಶಾಸ್ತ್ರ ಕೃತಿಯ ರಚನೆಗೆ ಆಶ್ರಯ ನೀಡಿದವರು ಮುದ್ಗಲ್ ಸೀಮೆಯ ಸರನಾಡಗೌಡ ಸಂಗಪ್ಪದೊರೆಯವರು. ಶ್ರೀ ನಾಗಭೂಷಣ ಶಿವಯೋಗಿಗಳ ಆದೇಶದಂತೆ ಸರನಾಡಗೌಡ ದೊರೆಯಿಂದ ರೈತಾಪಿ ವರ್ಗದ ಶಾಸ್ತ್ರಕೃತಿಯೊಂದು ಬೆಳುಕು ಕಾಣುವಂತಾಯಿತು.

ಈ ಕೃತಿಯ ಶುದ್ಧ ಪ್ರತಿಯನ್ನು ಸಿದ್ಧಪಡಿಸಲು ಹುನಗುಂದ ನಾಗರಾಳ ದೊಡ್ಡಪ್ಪನವರ ಪುತ್ರ ಬಸಪ್ಪನವರು ಆಶ್ರಯ ನೀಡಿದರೆಂದು ತಿಳಿದು ಬರುತ್ತದೆ. ಈ ಸಂಗತಿಯನ್ನು ಕುನ್ನಾಳ ಸಿದ್ದರಾಮಪ್ಪ ಗ್ರಂಥದ ಕೊನೆಯ ಭಾಗದಲ್ಲಿ ಹೀಗೆ ಹೇಳಿಕೊಂಡಿದ್ದಾನೆ. "ಲೋಕಹಿತವಾದ ಈ ಕೃಷಿಜ್ಞಾನ ಪ್ರದೀಪಿಕೆ ಎಂಬ ಗ್ರಂಥವನ್ನು ನಿರ್ಮಿಸುವ ವಿಷಯವಾಗಿ ಲೌಕಿಕ ಪಾರಮಾರ್ಥ ಜ್ಞಾನದ ಸಕಲಯುಕ್ತಿಗಳಂ ಸುಭೇಧವಾಗಿ ತವ ಕುಮಾರನಾದನೆಗೆ ಮೊದಲಲ್ಲು ಪ್ರದೇಶವಿತ್ತು ಬಳಕೀ ಗ್ರಂಥಮಂ ಭೋಗಮೋಕ್ಷ ಪ್ರದಮಾಗಿ ಸುಲಭವಾದ ಸಕಲ ಯುಕ್ತಿಗಳಂ ಮೇಳೈಸಿ ಶೃತಿ ಸತ್ಪುರಾಣಗ ಮಂಗಳಸಾರಮಂ ಸಂಗ್ರಹಿಸಿ ಪರಮಾರಾಧ್ಯರ ವಚನಾನುಭವ ಸಾಕ್ಷಿಗಳಿಂದ ಸಕಲರಿಗೂ ತಿಳಿಯುವಂತೆ ಕನ್ನಡ ವಾಚ್ಯರೂಪದಿಂದ ರಚಿಸಬೇಕೆಂದು ಅಪ್ಪಣೆಯನಿತ್ತಿದ್ದರಿಂದ ಗುರುವಾಜ್ಞೆಯ ಪ್ರಕಾರ ಈ ಗ್ರಂಥಕ್ಕೆ ಬೇಕಾದ ಸಕಲ ಸಂಗ್ರಹಗಳನ್ನು ಕೂಡಿಸಿ ಈ ಗ್ರಂಥಮಂ ರಚಿಸುವುದಕ್ಕೆ ಪ್ರಾರಂಭಿಸಿದನು. ಬಳಿಕ ಗ್ರಂಥವು ಸ್ವಲ್ಪ ಸಾಗುವತ್ವದಲ್ಲಿ ನನ್ನ ಕುಟುಂಬವು ಬಹಳ ಭಾರವಾಗಿದ್ದು ಖರ್ಚಿನ ವಿಷಯಕ್ಕೆ ಮತ್ತಾರು ಮಾಡುವವರಿಲ್ಲದಾದುದರಿಂದ ಇಲ್ಲಿ ಪರಿಣಾಮ ಕಾಣಿಸದಾಗಿ ಅನಿರ್ವಾಹ ಪಕ್ಷಕ್ಕೆ ಕುಟುಂಬ ಸಹಿತ ಸೊನ್ನಲಾಪುರಕ್ಕೆ ಹೋಗಿ ನಿತ್ಯಕಾಯಕದಿಂದ ಕಾಲಕ್ಷೇಪಮಂ ಮಾಡುತ್ತಿರುವುದರಿಂದ ನಾಲ್ಕು ವರ್ಷ ಪರ್ಯಂತರವು ಈ ಗ್ರಂಥವು ಹಾಗೆಯೇ ಉಳಿಯಿತು. ಇತ್ತಲಾಗಿ ಶ್ರೀ ಮನ್ಮಹಾಗುರು ಪರಮ ಶಿವಯೋಗಿಗಳವರ ಹೃದಯದಲ್ಲಿ ಲೋಕೋಪಕಾರವಾದ ಈ ಗ್ರಂಥವು ಪೂರ್ಣವಾಗಬೇಕೆಂಬ ಆಪೇಕ್ಷೆವು ಅತ್ಯಾತುರವಾಗಿದ್ದು ದ್ರವ್ಯಾಧಿಕಾರಿಗಳಾದ ಅನಂತ ಭಕ್ತರೆಲ್ಲರಿಗೂ ಈ ಗ್ರಂಥತ್ಕಾಶ್ರಯ ಕೊಟ್ಟು ನನ್ನನ್ನು ಕರೆಸಿಕೊಂಡು ಸರ್ವ ವಿಷಯಕ್ಕೂ ದ್ರವ್ಯದ ಸಹಾಯ ಮಾಡಿ ಜಗದೋಪಕಾರವಾದ ಈ ಗ್ರಂಥವನ್ನು ಪೂರ್ಣ ಮಾಡಿಸಿ ಅದರ ಸತ್ಫಲವನ್ನು ಪಡೆದುಕೊಳ್ಳಬೇಕೆಂದು ಹೇಳಿದಾಗ್ಯಾದರು ಸಹಾಯ ಮಾಡಿ ಅವರ ಅಪೇಕ್ಷೆಯನ್ನು ತೀರಿಸಿ ಮನಸ್ಸಂತೋಷ ಮಾಡಿಸಲಿಲ್ಲ.

ಇತ್ತಲಾಗಿ ಶ್ರೀ ಮನ್ಮಹಾಶಿವಯೋಗಿಗಳವರು ಕುಂಟೋಜಿಯ ಸ್ಥಲದಲ್ಲಿರುವಾಗ್ಗೆ ಶ್ರೀ ಮನ್ಮಹಾರಾಜ ರಾಜ ರಾಜಶ್ರೀ ಪರಗಣ ಹುನಗುಂದ ಸೀಮೆಯ ದೇಸಾಯಿ, ಸರ್‌ದೇಸಾಯಿ ಮಾಮಲೇ ಮುದಗಲ್ಲ

ಸೀಮೆಯ ಸರನಾಡಗೌಡ ಸಂಗಪ್ಪ ದೊರೆಗಳವರು ಮಹಾಶಿವಯೋಗಿಗಳ ಪಾದದರ್ಶನಕ್ಕೆ ಬಂದ ಸಮಯದಲ್ಲಿ ಶ್ರೀಗಳವರ ಸ್ವಲ್ಪ ತಯಾರಾದ ಈ ಗ್ರಂಥವನ್ನು ತೋರಿಸಿ ಈ ಶಾಸ್ತ್ರಮಂ ಪೂರ್ಣ ಮಾಡಿಸಬೇಕೆಂಬ ತಮ್ಮ ಮನದ ಆಪೇಕ್ಷೆಯನ್ನು ತಿಳುಹಿಸಿದ ಕಾರಣ, ಲೋಕೋಪಕಾರ ವಿಷಯದಲ್ಲಿ ಅವರ ಮನೋವಾಂಛಿತಾರ್ಥವಿದ್ದಂತೆ ಗ್ರಂಥವನ್ನು ಸಂಪೂರ್ಣ ಮಾಡಿಸುವುದಕ್ಕೋಸ್ಕರ ಸಹಾಯ ಮಾಡತಕ್ಕ ರೀತಿಯನ್ನು ಅವರು ಹೇಳಿದ ಕೇಳಿ, ಅದಕ್ಕೆ ಸಮ್ಮತಿ ಪಟ್ಟು ಕರೆಸಿ, ಗ್ರಂಥ ಪೂರ್ಣ ಮಾಡಿಸುವನೆಂದು ದೊರೆಗಳವರು ವಚನಕೊಟ್ಟು ನನ್ನನ್ನು ಕರಿಸಬೇಕೆಂದು ಹೇಳಿ ತಾವೇ ಪತ್ರ ಬರೆದು ಶ್ರೀಗಳವರಿಗೆ ಸಮರ್ಪಿಸಿದ ಕಾರಣ. ಶ್ರೀಗುರುಗಳೆನಗಿದರಭಿಪ್ರಾಯವೆಲ್ಲವನು ಪತ್ರ ಮುಖದಿಂದ ತಿಳಿಸಲು, ಆ ಪತ್ರದ ಅಭಿಪ್ರಾಯಕ್ಕೆ ಸಂತೋಷಪಟ್ಟು ಕುಟುಂಬ ಸಹಿತ ಸೊನ್ನಲಾಪುರದಿಂದ ಬಂದು ಈ ಹೊತ್ತಿಗೆ ಹನ್ನೊಂದು ತಿಂಗಳಾಯಿತು.

ಅಲ್ಲಿಂದ ಬಂದಾಕ್ಷಣವೇ ಈ ಗ್ರಂಥಕ್ಕೆ ಬೇಕಾದ ಅನೇಕ ಸಂಗ್ರಹಗಳನ್ನು ಮೇಳೈಸಿಕೊಂಡು ಗ್ರಂಥ ರಚನೋದ್ಯೋಗಕ್ಕೆ ಪ್ರಾರಂಭಿಸಿ ಒಂದು ಪ್ರತಿಯನ್ನು ಪೂರ್ಣ ಮಾಡಿ. ಶ್ರೀಗಳವರು ಇಲಕಲ್ಲು ಮುಕ್ಕಾಮಿನಲ್ಲಿರುವಾಗ್ಗೆ ಅದನ್ನು ತಂದು ಒಪ್ಪಿಸಲಾಗಿ, ಬಳಕೀ ಗ್ರಂಥಮಂ ಪರಿಶೋಧಿಸಿ ಅದರಲ್ಲಿ ಪ್ರಸ್ತಾಪಕ್ಕೆ ಸೇರ್ಪಡೆ ಮಾಡುವುದಕ್ಕೋಸ್ಕರ ಕೆಲವು ಪತ್ರಗಳನ್ನು ಬರೆಯಿಸಿಕೊಟ್ಟು, ಆ ಪ್ರತಿಯನ್ನು ತಮ್ಮಲ್ಲಿರಬೇಕಾಗುವದೆಂದು ಮತ್ತೊಂದು ಪ್ರತಿಯನ್ನು ಬರೆಯಲಿಕ್ಕೆ ಅಪ್ಪಣೆಯನ್ನು ಮಾಡಿದುದರಿಂದಲೂ ಸಮಯದಲ್ಲಿ ಇದಕ್ಕೆ ಅನುಕೂಲವಾಗುವರಾರು, ಎಲ್ಲಿ ಕೂತು ಬರೆಯಬೇಕೆಂದು ಬಿನ್ನಹ ಮಾಡಲದಕ್ಕೆ ಶ್ರೀ ಗುರುದೇವರು ಹುನಗುಂದದಿಂದ ನಾಗರಾಳ ದೊಡ್ಡಪ್ಪನವರ ಪುತ್ರರಾದ ಬಸಪ್ಪನವರನ್ನು ಕರೆಸಿ, ತಮ್ಮ ಆಪೇಕ್ಷೆಯಂ ತಿಳಿಸಿ, ಲೋಕಹಿತವಾದ ಈ ಗ್ರಂಥಮಂ ಪರಿಶುದ್ಧ ಮಾಡಿ ಸಂಪೂರ್ಣ ಮಾಡುವವರೆಗೂ ಈತನ ಸರ್ವೋಪಚಾರಕ್ಕೆ ಸಹಾಯ ಮಾಡಬೇಕೆಂದು ಹೇಳಲದಕ್ಕನುಕೂಲನಾಗುವೆನೆಂದೊಡಂಬಟ್ಟು. ಸದ್ಭಕ್ತಿ ಪೂರ್ವಕವಾಗಿ ಶ್ರೀಗಳವರಿಗೆ ಬಿನ್ನಹವನ್ನು ಮಾಡಿಕೊಂಡು ಅವರನ್ನು ಸಹ ಹುನುಗುಂದಕ್ಕೆ ಕರಕೊಂಡು ಬಂದು ಶಿವಯೊಗಿಗಳ ಮನಹರ್ಷವಾಗುವಂತೆ ಸದ್ಭಕ್ತಿಯಿಂದ ಅನಂತ ಪ್ರಕಾರದ ಸೇವೆಗನುಕೂಲನಾಗಿ, ಸಕಲ ಸಾಹಿತ್ಯಾದಿಗಳನ್ನು ಅನುಕೂಲಿಸಿಕೊಟ್ಟು ಭಕ್ತಿಯಿಂದ ಅರ್ಪಿತಾವಧಾನಗಳಂ ಮಾಡಿಸುತ್ತ ಮೂರುತಿಂಗಳವರೆಗೂ ಅನಂತ ಪ್ರಕಾರದ ಸುಭೋಜನಗಳಿಂದ ಲಿಂಗಾರ್ಪಿತವ ಮಾಡಿಸಿ ಸತ್ಫಲಮಂ ಪಡೆದುಕೊಂಡರು. ಅಷ್ಟರಲ್ಲಿ ನಾನು ಹುನುಗುಂದ ಮಕ್ಕಾಮಿನಲ್ಲಿ ಕುಳಿತು ಮತ್ತೊಂದು ಪ್ರತಿಯನ್ನು ತಯಾರು ಮಾಡಿದೆನು. ಆ ಪ್ರತಿಯನ್ನು ನೋಡಿ ಸಂತೋಷಪಟ್ಟು ಹೇಳಿದ್ದೇನೆಂದರೆ ಇದರಂತೆ ಇನ್ನೊಂದು ಪ್ರತಿಯನ್ನು ಅತ್ಯಾಶ್ಚರ್ಯವಾಗಿ ಚಿತ್ರ–ಚಮತ್ಕಾರಗಳಿಂದ ಬರೆದು ದೊರೆಗಳಿಗೆ ಕೊಡಬೇಕೆಂದು ಹೇಳಿದ ಕಾರಣ ಈ ಗ್ರಂಥವನ್ನು ಅವರ ಮನೋಭಾವವಿದ್ದಂತೆ ನಿತ್ಯದಲ್ಲಿ ಸೂಚಿಸುತ್ತ ಬಂದ ಹೊಸ ಯುಕ್ತಿಗಳಿಂದ ಪರಮಾಶ್ಚರ್ಯವಾಗುವಂತೆ ಈ ಪ್ರತಿಯನ್ನು ತಯಾರು ಮಾಡಿ ತೋರಿಸಲಾಗಿದೆ. ಈ ಗ್ರಂಥದ ಆದಿಯಿಂದ ಬರೆದದ್ದನ್ನೆಲ್ಲ ಚೆನ್ನಾಗಿ ನೋಡಿ ಅತೀ ಹರುಷಿತರಾಗಿ ಆನಂದ ಉಕ್ಕೇರಿ ಹಾಲುಕ್ಕಿ ಮೇಲು ಏರಿದಂತಾಗಿ ಈ ಗ್ರಂಥಕ್ಕೆ ಸಂಪೂರ್ಣ ಮಾಡಿಸುವದಕ್ಕೆ ಅನುಕೂಲರಾದ ಪುಣ್ಯಶಾಲಿಗಳಿಗಾಶೀರ್ವಾದವಾದ ಈ ಗ್ರಂಥದ ಕಡೆಯಭಾಗದಲ್ಲಿ ಆಶೀರ್ವಚನಮಂ ಬರೆಯಬೇಕೆಂದು ಸೂಚಿಸಿ, ಮತ್ತೀ ಗ್ರಂಥಮಂ ನಾಗರಾಳ ಬಸಪ್ಪನವರಿಗೆ ಸಕಲೈಶ್ವರ್ಯ ಸಂಪದಕ್ಕೆ ಕಾರಣಮಾದ

ಆಶೀರ್ವಾದವಾಗಿ ಕೊಟ್ಟಿದ್ದಾರೆ".[೩] ಹೀಗೆ ಶ್ರೀ ನಾಗಭೂಷಣ ಶಿವಯೋಗಿಗಳ ಆದೇಶದಂತೆ ಕೃತಿ ರಚನೆಗೆ ಅನೇಕ ಜನ ಸಹಾಯ ಹಸ್ತ ನೀಡಿರುವುದು ಈ ಕೃತಿಯ ವಿಷಯದ ಮೇಲಿನ ಪ್ರೀತಿಯಿಂದ ಎಂದು ಭಾವಿಸಬೇಕಾಗುತ್ತದೆ.

ಕೃಷಿಜ್ಞಾನ ಪ್ರದೀಪಿಕೆ ಎರಡು ಭಾಗಗಳಲ್ಲಿ ವಿನ್ಯಾಸಗೊಂಡಿದೆ. ಒಂದರಲ್ಲಿ ಹದಿನೆಂಟು, ಎರಡರಲ್ಲಿ ಐದು ಒಟ್ಟು ೨೩ ಪ್ರಕರಣಗಳಿವೆ. ಪೂರ್ವಾರ್ಧದ ಹದಿನೆಂಟು ಪ್ರಕರಣ ಕೃಷಿಶಾಸ್ತ್ರಕ್ಕೆ ಸಂಬಂಧಿಸಿದ್ದರೆ ಉತ್ತರಾರ್ಧದ ಐದು ಪ್ರಕರಣಗಳು ಪಾರಮಾರ್ಥಿಕತೆಗೆ ಮೀಸಲಾಗಿವೆ. ಮಣ್ಣು ಮೊದಲು ಮಾಡಿಕೊಂಡು ದವಸಧಾನ್ಯಗಳ ಉತ್ಪಾದನೆಯ ಹಂತಗಳ ಜೊತೆಗೆ, ಉತ್ಪಾದಿತ ಬೆಳೆಯ ಜೀವನೋಪಯೋಗದ ರೀತಿಯನ್ನು ಈ ಗ್ರಂಥ ಪ್ರತಿಪಾದಿಸುತ್ತದೆ. "ಕೃಷಿ ಶಿಕ್ಷಣವಾಗಲಿ, ಕೃಷಿ ಶಿಕ್ಷಣ ಸಂಸ್ಥೆಗಳಾಗಲೀ, ಹುಟ್ಟಿರದ ಕಾಲದಲ್ಲಿ ನೂರ ಹದಿನೆಂಟು ವರ್ಷಗಳಷ್ಟು ಪೂರ್ವದಲ್ಲಿಯೇ ಕೃಷಿಯನ್ನು ವೈಜ್ಞಾನಿಕವಾಗಿ ಭೋದಿಸುವುದರ ಅವಶ್ಯಕತೆಯನ್ನು ಮನಗಂಡು ಬರೆದ ಇದು ಒಂದು ಅಪರೂಪದ ಕೃತಿ"[೪]

ಶ್ರೀ ನಾಗಭೂಷಣ ಶಿವಯೋಗಿಗಳು ಈ ಕೃತಿಯಲ್ಲಿ ಕೃಷಿಗೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ಶಾಸ್ತ್ರೋಕ್ತವಾಗಿ ಆಚರಣೆಗೆ ತರುವಂತೆ ವಿವರಿಸಿದ್ದಾರೆ. ಮಾನವ ಬೇಟೆಸಂಸ್ಕೃತಿಯಿಂದ ಕೃಷಿಸಂಸ್ಕೃತಿಗೆ ಪರಿವರ್ತನೆಗೊಂಡಾಗ ಉಪಯೋಗಕ್ಕಾಗಿ ಬೇಟೆಯಲ್ಲಿ ನಾಯಿಯನ್ನು ಸಾಕಿದರೆ, ಕೃಷಿಯಲ್ಲಿ ಎತ್ತನ್ನು ಆಶ್ರಯಿಸುತ್ತಾನೆ. ಹೀಗಾಗಿ ಎತ್ತು ಕೃಷಿಕನ ಸಂಗಾತಿಯಾಯಿತು. ಅದರಲ್ಲೂ ಶಿವನನ್ನು ಆರಾಧಿಸುವ ಈತ ಅವನ ವಾಹನ ನಂದಿಯನ್ನು ಭಕ್ತಿ ಪೂಜ್ಯತೆಯಿಂದ ಕಾಣುತ್ತಾ ಬಂದನು. ಅದೇನೆ ಇದ್ದರೂ ಎತ್ತುಗಳ ಆರೈಕೆ ಕೃಷಿಕನ ಮೊದಲ ಆದ್ಯತೆ ಆಗಬೇಕೆಂಬುದು ಕೃಷಿಜ್ಞಾನ ಪ್ರದೀಪಿಕೆಯ ಮೊದಲ ಸಿದ್ಧಾಂತವಾಗಿದೆ. ಕೃಷಿಕರು ಮಕ್ಕಳಂತೆ ಎತ್ತಿನ ಪಾಲನೆ ಮಾಡಬೇಕು. ಎತ್ತುಗಳು ತ್ರಾಣವುಳ್ಳವಾದರೆ ಒಕ್ಕಲಿಗನಿಗೆ ಎಂಟೆದೆ ಇದ್ದಂತೆ. ಬಲಹೀನವಾದ ಎತ್ತುಗಳಿಂದ ಮೈಗಳ್ಳರ ಮನುಷ್ಯರಿಂದ ಕೃಷಿಯ ಕೆಲಸ ಹಾಳು ಎಂದು ಹೇಳುವ ನಾಗಭೂಷಣ ಶಿವಯೋಗಿಗಳು ಹುಲ್ಲು, ನೀರು, ಹುರುಳಿ, ಹತ್ತಿಕಾಳು, ಹಿಂಡಿ, ಹೊಟ್ಟು, ಕಣಿಕೆ ಇವುಗಳನ್ನು ಹದವರಿತು ಮೇಯಿಸಬೇಕು ಎನ್ನುತ್ತಾರೆ. ಅದೇ ರೀತಿ ಎತ್ತುಗಳ ಕೊಟ್ಟಿಗೆ ನಿರ್ಮಲವಾಗಿರಬೇಕು. ಎತ್ತುಗಳು ಮಲಗುವ ಜಾಗದಲ್ಲಿ ಮೂತ್ರ ಸಗಣಿಗಳನ್ನು ಆಗಾಗ್ಗೆ ಗುಡಿಸಿ ಹಸನಾಗಿರುವಂತೆ ನೋಡಿಕೊಳ್ಳಬೇಕು. ಎತ್ತುಗಳಿಗೆ ಹೀರೆಕಾಯಿ ಸೋರೆಯಿಂದ ಇಲ್ಲವೆ ಭತ್ತದ ಹುಲ್ಲಿನಿಂದ ಪ್ರತಿದಿನ ಸಾಯಂಕಾಲ ಮೈತಿಕ್ಕಿದರೆ ಮೈನರಗಳು ಸಡಿಲಾಗಿ ಸಮಧಾತು ಬರುವುದು ಮತ್ತು ಅವುಗಳ ದಣಿವು ಪರಿಹಾರವಾಗುವುದು.

ಕೃಷಿ ಸಾಮಾನುಗಳ ವ್ಯವಸ್ಥೆ ಕುರಿತಂತೆ ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಹೀಗೆ ನಿರೂಪಿತವಾಗಿದೆ. "ಭೂಮಿಯ ವ್ಯವಸಾಯಕ್ಕೆ ಬೇಕಾಗಿರುವ ಯಾವತ್ತು ಕಟ್ಟಿಗೆ ಕಬ್ಬಿಣದಿಂದ ಮಾಡಲ್ಪಟ್ಟಿರುವ ಸಾಮಾನುಗಳು ನೇಗಲಿ, ಮಡಿಕೆ, ರೆಂಟೆ, ಕುಂಟಿ, ಕೂರಗಿ, ಮಡಿಯಕುಂಟಿ, ಈಸು ನೊಗಗಳು ಶಿಲ್ಪಶಾಸ್ತ್ರ ಕ್ರಮದಂತೆ ಅನುವಾಗಿಯೂ, ಬಲತ್ಕಾರವಾಗಿಯೂ ಇರಬೇಕು. ಕಬ್ಬಿಣದ ಸಾಮಾನುಗಳಲ್ಲಿ ಮುಂಜ, ಬಳಿ, ಕುಡ, ಮೊಳಿ, ಕೊಡ್ಲಿ, ಗುದ್ದಲಿ, ಬೆಡಗ, ಬಾಚಿ, ಉಳಿ, ಕುರುಪ, ಕುಡಗೋಲು ಮುಂತಾದ ಯಾವತ್ತೂ ಸಾಮಾನುಗಳು ಹದವಾಗಿಯೂ, ಮೊನೆಯಾಗಿಯೂ, ದಪ್ಪಾಗಿಯೂ, ಬಲತ್ಕಾರವಾಗಿಯೂ ಕೈಯಲ್ಲಿ ಅನುವಾಗಿಯೂ ಇರಬೇಕು. ಮುಖ್ಯವಾಗಿ ಇದರ ತಾತ್ಪಾರ್ಯವೇನೆಂದರೆ ತನ್ನ ಕೃಷಿ ಸಾಮಾನುಗಳು ಚೆನ್ನಾಗಿ ಇದ್ದು, ಮಿಣಿ, ಕಣ್ಣಿ, ಹಗ್ಗ ಮೊದಲಾವುಗಳು ಬಲತ್ಕಾರವಾಗಿ ಇರಬೇಕು".[೫]

ಹೀಗೆ ಒಕ್ಕಲುತನಕ್ಕೆ ಬೇಕಾದ ಪ್ರಾಥಮಿಕ ಹಂತದ ಸಿದ್ಧತೆಗಳ ಬಗ್ಗೆ ತುಂಬಾ ಕಾಳಜಿ ಮತ್ತು ಶಾಸ್ತ್ರೋಕ್ತವಾಗಿ ತಿಳಿಸಿದ ಮೇಲೆ ಹೊಲಗಳ ಆರೈಕೆ ಕುರಿತಂತೆ ಮುಂದಿನ ನಾಲ್ಕು ಪ್ರಕರಣಗಳಲ್ಲಿ ವಿವರಿಸುತ್ತಾನೆ. ನಟ್ಟ ಕಡಿಯುವ ಪದ್ಧತಿ, ಒಡ್ಡು ಹಾಕುವ ಪದ್ಧತಿ, ಗೊಬ್ಬರ ಹಾಕುವ ರೀತಿ, ಹೊಲ ಹರಗುವ ವಿಧಾನವನ್ನು ಪರಿಚಯಿಸಲಾಗಿದೆ. ಭೂಮಿಯಲ್ಲಿ ಉತ್ತಮ, ಮಧ್ಯಮ, ಕನಿಷ್ಠ ಪ್ರತಿಯಾದ ಬಹು ಪ್ರಕಾರದ ಜಮೀನುಗಳುಂಟು. ಯಾವುದೇ ಪ್ರಕಾರದ ಹೊಲಗಳಿದ್ದರೂ ನಟ್ಟು ಬೆಳೆಸಿದಲ್ಲಿ ಪೈರು ಬರುವುದಿಲ್ಲ. ಕರಿಕೆ, ಕಣಿಗೆ, ಕಲ್ಲುಕುಟ್ಟರಿ, ಬನ್ನಿಯಕಂಟಿ, ಬೇವಿನಕಂಟಿ, ಎಕ್ಕೆಯಗಿಡಗಳು ಮುಂತಾದವುಗಳನ್ನು ಬೇರು ಸಹಿತ ತೆಗೆಯಬೇಕು ಎಂದು ಹೇಳಿ ಎಂಟು, ಹತ್ತು, ಹನ್ನೆರಡು ಎತ್ತುಗಳ ದೊಡ್ಡನೇಗಿಲು ಕಟ್ಟಿ ಕಾರ್ತೀಕ ಮಾಸದಿಂದ ಆರಂಭಿಸಿ ಮೂರು ಸಲ ಹೊಡೆಯಬೇಕು. ನಂತರ ಹನ್ನೆರಡು ಎತ್ತಿನ ದೊಡ್ಡಕುಂಟೆಯನ್ನು ಕಟ್ಟಿ ಮೂರು ಸಲ ಹರಗಬೇಕು. ಅಲ್ಲಿಗೂ ಸ್ವಲ್ಪ ನಟ್ಟು ಉಳಿದಿದ್ದರೆ ಗುದ್ದಲಿಯಿಂದ ಅಗಿದು ತೆಗೆಯಬೇಕು. ಹಾಗೆಯೇ ಹೊಲದಲ್ಲಿ ಒಡ್ಡು ಹಾಕುವ ಮತ್ತು ಆಗಾಗ್ಗೆ ಅದನ್ನು ಬದಲಿಸುವ ವಿಧಾನವನ್ನು ಮೂರನೇ ಪ್ರಕರಣದಲ್ಲಿ ತಿಳಿಸಲಾಗಿದೆ. ಒಂದು ಹೊಲದ ಮಣ್ಣು ಮತ್ತೊಂದು ಹೊಲಕ್ಕೆ ಹೋಗಲಾರದೆಂಬ ಕಾರಣವಾಗಿ, ಒಂದು ಹೊಲದ ಗೊಬ್ಬರ ಮತ್ತೊಂದು ಹೊಲಕ್ಕೆ ಹೋಗಬಾರದೆಂಬ ಕಾರಣವಾಗಿ ನೀರನ್ನು ತಡೆಹಿಡಿದು ತೇವಾಂಶ ಹಿಡಿದಿಡುವ ಸಲುವಾಗಿ, ಭೂಮಿಯ ಸಮಪಾತವನ್ನು ಕಾಪಾಡುವ ಸಲುವಾಗಿ, ಅಲ್ಲದೆ ಮಣ್ಣು ಒಡ್ಡಿನಲ್ಲಿ ಮರ, ಗಿಡವನ್ನು ಬೆಳೆಸುವ ಸಲುವಾಗಿ, ಇದನ್ನು ಬೇರೆ ಬೇರೆ ಉಪಯೋಗಿಗಳು ಒಡ್ಡು ಹಾಕುವುದರಿಂದ ಆಗುತ್ತದೆ. ಎಂದು ವಿವರಿಸಲಾಗಿದೆ.

ಪ್ರಕರಣ ನಾಲ್ಕರಲ್ಲಿ ಗೊಬ್ಬರವನ್ನು ಹಾಕುವ ವಿಧಾನವನ್ನು ಕುರಿತು ಪ್ರಸ್ತಾಪಿಸಲಾಗಿದೆ. ಯಾವ ಗಿಡಗಳಿಗೆ ಯಾವ ಪ್ರಮಾಣದಲ್ಲಿ ಯಾವ ಗೊಬ್ಬರವನ್ನು ಹಾಕಬೇಕು ಮತ್ತು ಅದರಿಂದಾಗುವ ಪ್ರಯೋಜನಗಳನ್ನು ಕರಾರುವಕ್ಕಾಗಿ ಪ್ರತಿಪಾದಿಸಲಾಗಿದೆ. ಪ್ರಕರಣ ಐದರಲ್ಲಿ ಹೊಲಗಳನ್ನು ಹರಗುವ ರೀತಿಯನ್ನು ತಿಳಿಸಲಾಗಿದೆ. ಹಸಿಯಾದ ಕರಲು ಭೂಮಿಯಿದ್ದರೆ, ಹಿಂಗಾರಿ ಬೆಳೆಗಳನ್ನು ಬಿತ್ತುವ ಭೂಮಿಯಾದರೆ, ಮಡಿಕಟ್ಟು ಭೂಮಿಯಾದರೆ, ಕಲ್ಲು ಭೂಮಿಯಾದರೆ ಹೇಗೆ ಹರಗಬೇಕೆಂಬುದನ್ನು ಇಲ್ಲಿ ತಿಳಿಸಲಾಗಿದೆ. ಸಾಮಾನ್ಯವಾಗಿ ಬಿತ್ತುವ ಹೊಲವನ್ನು ಏಳು ಬಾರಿ ಹರಗುವುದು ಒಳ್ಳೆಯದೆಂಬ ಅಂಶವನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

ಪ್ರಕರಣ ಆರರಿಂದ ಎಂಟನೇ ಪ್ರಕರಣದವರೆಗೆ ಬಿತ್ತುವ ವಿಧಾನವನ್ನು ಚರ್ಚಿಸಲಾಗಿದೆ. ನೆಲ್ಲು, ಮುಂಗಾರಿ ಧಾನ್ಯಗಳಾದ ನವಣೆ, ಶೇಂಗಾ, ಮೆಣಸಿನಗಿಡ, ಬೆಳ್ಳೊಳ್ಳಿ, ಹಿಂಗಾರಿ ಧಾನ್ಯಗಳಾದ ಹತ್ತಿ, ಬಿಳಿಜೋಳ, ಗೋಧಿ, ಕಡಲೆ, ಸೆಣಬು, ಸಿರಂಜಿ, ನೀಲಿ ಮುಂತಾದವುಗಳನ್ನು ಬಿತ್ತುವ ವಿಧಾನ, ಆರೈಕೆ ಮತ್ತು ಕುಯ್ಯಲು ಕುರಿತು ಸುದೀರ್ಘವಾಗಿ ಚರ್ಚಿಸಲಾಗಿದೆ.

ಪ್ರಕರಣ ಒಂಭತ್ತರಲ್ಲಿ ತೋಟದ ಭೂಮಿ ಮತ್ತು ಬಾವಿ ಕಡಿಸುವ ನೀರಾವರಿ ವಿಧಾನವನ್ನು ಪ್ರಸ್ತುತಪಡಿಸುವುದಾಗಿದೆ. ಚಾರಿ ಕಟ್ಟುವ ವಿಧಾನ ಮತ್ತು ಅದರ ಬಳಕೆ ಕುರಿತು ಇಲ್ಲಿ ವಿವರಿಸಲಾಗಿದೆ. ಪ್ರಕರಣ ಹನ್ನೊಂದರಲ್ಲಿ ತೋಟದ ಪೈರನ್ನು ಸಂರಕ್ಷಿಸುವ ವಿಧಾನಕ್ಕೆ ಮೀಸಲಾಗಿದ್ದು ಬೇಲಿ ಹಾಕುವ ಪದ್ಧತಿಯನ್ನು ತಿಳಿಸುತ್ತದೆ. ತೋಟದ ಬೆಳೆಗಳಾದ ಮಾವು, ತೆಂಗು, ಅಡಿಕೆ, ಬಾಳೆ, ಎಲೆಯಬಳ್ಳಿ, ಸಂಬಯಗಿಡ ಮುಂತಾದ ಬೆಳೆಗಳ ಬಿತ್ತನೆ, ಇಳುವರಿ ಮತ್ತು ಕುಯ್ಯಲು ಕುರಿತು ವಿವರಿಸಲಾಗಿದೆ.

ಆರ್ಥಿಕ ಫಸಲುಗಳಿಂದ ಕಬ್ಬು, ಅರಿಶಿಣ, ಮೆಣಸು, ಗೋಡಂಬಿ, ಯಾಲಕ್ಕಿ, ಅಲ್ಲ, ಕಸಕಸಿ, ಜೀರಿಗಿ, ಚಹಾ ಕುರಿತು ಮೂರು ಪ್ರಕರಣಗಳಲ್ಲಿ ವಿವರಿಸಲಾಗಿದೆ. ಮುಂದಿನ ಹದಿನಾರನೇ ಪ್ರಕರಣ ಕೃಷಿ ಉದ್ಯೋಗದ ಮಹತ್ವ ಕುರಿತು, ಹದಿನೇಳನೇ ಪ್ರಕರಣ ನೀರಿನ ಅವಶ್ಯಕತೆ ಕುರಿತು, ಕೊನೆಯ ಹದಿನೆಂಟನೆ ಪ್ರಕರಣ ಕರ್ಮ ನಿವೃತ್ತಿ ಮತ್ತು ಧರ್ಮನೀತಿಗಳನ್ನು ಕೃಷಿಕರು ಹೇಗೆ ಪರಮಾರ್ಥ ಪ್ರಯೋಜನ ಎಂಬಂತೆ ಆಚರಿಸಿಕೊಂಡು ಬರಬೇಕೆಂಬ ಸಂಗತಿಯನ್ನು ವಿವರಿಸಲಾಗಿದೆ.

೨. ರಟ್ಟಮತ

ಕ್ರಿ.ಶ.೧೩೦೦ರಲ್ಲಿ ಜೀವಿಸಿದ್ದ ರಟ್ಟವಿಡಂಗ ಕವಿಯ 'ರಟ್ಟಮತ ಶಾಸ್ತ್ರ'ವು ಕೃಷಿಗೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ಬಿತ್ತಿರುತ್ತದೆ. ಕನ್ನಡದಲ್ಲಿ ಹೆಚ್.ಶೇಷಯ್ಯಂಗಾರ್‌ರವರು ಗೌರ್ನಮೆಂಟ್ ಓರಿಯಂಟಲ್ ಮ್ಯಾನ್‌ಸ್ಕ್ರಿಪ್ಟ್ ಲೈಬ್ರರಿ ಮದ್ರಾಸಿನಿಂದ ೧೯೫೦ರಲ್ಲಿ ಐದು ಹಸ್ತ ಪ್ರತಿಗಳ ಸಹಾಯದಿಂದ ಸಂಪಾದಿಸಿ ಕೊಟ್ಟಿದ್ದಾರೆ. ಪ್ರಸ್ತುತ ಕೃತಿಯ ಮುನ್ನುಡಿಯಲ್ಲಿ ಗ್ರಂಥವಿಚಾರ, ಗ್ರಂಥಕರ್ತೃವಿನ ವಿಚಾರವನ್ನು ಸಾದಾರ ಪೂರಕವಾಗಿ ಪರಿಚಯಿಸಲಾಗಿದೆ. ಈ ಕೃತಿಯನ್ನು ಬಿಟ್ಟರೆ ವೇದಮೂರ್ತಿ ಬಸವಯ್ಯಶಾಸ್ತ್ರಿಗಳು ಹಿರೇಮಠರವರ ೬೦ವರ್ಷಗಳ ಕುರುಬರ ರಟ್ಟಮತ ಶಾಸ್ತ್ರವನ್ನು ಗದುಗಿನ ಬಿ.ಸಿ.ಶಾಬಾದಿಮಠ ಬುಕ್ ಡಿಪೋದಿಂದ ಪ್ರಕಟಿಸಿದ್ದಾರೆ. ಹಾಗೆಯೇ ಎಸ್.ಎಫ್.ಜಕಬಾಳರವರು ಗದುಗಿನ ವಿದ್ಯಾನಿಧಿ ಪ್ರಕಾಶನದಿಂದ ಸಂಪಾದಿಸಿ ಕೊಟ್ಟಿದ್ದಾರೆ. ಮೇಲೆ ಹೇಳಿದ ಈ ಎರಡು ಕೃತಿಗಳು ೬೦ಸಂವತ್ಸರಗಳ ಫಲಗಳನ್ನು ಶ್ಲೋಕಗಳಲ್ಲಿ ಹಿಡಿದಿಟ್ಟು ಗದ್ಯದಲ್ಲಿ ನಿರೂಪಿಸಲಾಗಿದೆ. ಪ್ರಾಯಶಃ ಈ ಎರಡು ಜನಪ್ರಿಯ ಆವೃತ್ತಿಗಳನ್ನು ಬಿಟ್ಟರೂ ಕಂದ, ವಚನ, ತ್ರಿಪದಿ, ವೃತ್ತ, ಅಕ್ಕರ, ರಗಳೆ ಪ್ರಕಾರಗಳಿಂದ ಸಂರಚನೆಗೊಂಡಿರುವ ಹೆಚ್.ಶೇಷಯ್ಯಂಗಾರ್ ಸಂಪಾದಿತ ರಟ್ಟಮತಶಾಸ್ತ್ರ ಕೃತಿಯು ಶಾಸ್ತ್ರ ಗೌರವದಿಂದ ಅಧ್ಯಯನ ಯೋಗ್ಯವಾದ ಕೃತಿಯಾಗಿದೆ.

ಹನ್ನೆರಡು ಅಧ್ಯಾಯಗಳಲ್ಲಿ ರಚನೆಗೊಂಡಿರುವ ರಟ್ಟಮತಶಾಸ್ತ್ರವನ್ನು ಮಳೆಯ ಕುರುಹು ಅಥವಾ ಮೇಘಮಾಲೆ ಎಂಬ ಹೆಸರಿನಿಂದ ಸೂಚಿಸಲಾಗಿದೆ. ಅದೇನೆ ಇದ್ದರೂ ಅಧ್ಯಾಯ ನಾಲ್ಕು, ಐದು, ಆರು, ಒಂಭತ್ತು ಮತ್ತು ಹನ್ನೊಂದನೇ ಅಧ್ಯಾಯಗಳಲ್ಲಿ ಮಳೆಯ ಶಕುನ, ಮೋಡ ಗರ್ಭಕಟ್ಟುವ ಕ್ರಮ, ಬೀಜ ಬಿತ್ತುವ ಕ್ರಮ, ಭೂಮಿಯಿಂದ ನೀರು ಪಡೆಯುವ ಕ್ರಮವನ್ನು ತಿಳಿಸಲಾಗಿದೆ. ಹೀಗಾಗಿ ನೆಲ, ಜಲ, ಬಿತ್ತನೆ ಇವುಗಳು ಕೃಷಿಶಾಸ್ತ್ರ ಸಂಬಂಧಿ ಅಂಶಗಳಾದ್ದರಿಂದ ಅವುಗಳನ್ನಿಲ್ಲಿ ಚರ್ಚಿಸಲಾಗಿದೆ.

ಕೃಷಿಕ ಜನಾಂಗ ಮಳೆ ಬರುವ, ಬಾರದಿರುವುದನ್ನು ಅರಿಯುವ ಕ್ರಮವನ್ನು ವಾಯುಚಕ್ರ ನಿಮಿತ್ತ, ಗೋಪುರ ಪ್ರವೇಶ ನಿಮಿತ್ತ ಶಾಸ್ತ್ರಕಾರ ವಿವರಿಸುತ್ತಾನೆ.

"ಒಪ್ಪಲನೂಲ ನೊರ್ಮೊಟನ ಕಪ್ಪಡಮಂ ಜಿನಸಂಖ್ಯಹಸ್ತದಿಂ
ನೇರ್ಪಡಿಸಿರ್ದ ದಂಡಿಗೆಯಮೇಲೆ ಪತಾಕೆಯನೆಯ್ದೆ ಕಟ್ಟಿ ಪ ॥
ಟ್ಟಿರ್ಪುಗೆ ನೆಟ್ಟನಾಸಡಿಯ ಪುಣ್ಣಿಮೆಯಂದಿನ ಪೂರ್ವಯಾಮದೊಳ್ ।
ತೋರ್ಪನೆ ಗಾಳಿಯಾವ ದೆಸೆಯೊಳ್ ಸಲೆ ಬೀಸುಗುಮೆಂಬುದಂ ಬುಧರ್ ॥"[೨]

ಒಂದು ಫಲ ನೂಲು, ಒಂದು ಮೊಳ ಬಟ್ಟೆ ಇವುಗಳಿಂದ ಬಾವುಟಮಾಡಿ ನೆಟ್ಟು ಅದರ ಸಹಾಯದಿಂದ ಯಾವ ಯಾವ ತಿಂಗಳಲ್ಲಿ ಯಾವ ಯಾವ ದಿಕ್ಕಿನಿಂದ ಗಾಳಿ ಬೀಸಿದರೆ ಮಳೆ ಬರುವ ಮತ್ತು ಬಾರದಿರುವ ಕ್ರಮವನ್ನು ವಿವರಿಸಲಾಗಿದೆ.

"ಸುರಪ ಕುಬೇರ ಶಂಕರದಿಶಾಲಿಯ ಗಾಳಿಯೊಳೊಳ್ಳಿತಕ್ಕುಮಾ ।
ವರುಣನಿನಲ್ಪ ವೃಷ್ಟಿಯನಿಲಾಗ್ನಿಯ ಮಂಡಲದಿಂ (ಸು)ವೃಷ್ಟಿ ಕಾಲನಿಂ ॥
ನಿರುತಿಯೊಳಿಲ್ಲಮೆಂದು ಮಱೆ ಯಣ್ದೆಸೆಯಿಂ ಬಿಡೆ ಬೀಸೆ ಗಾಳಿ ನಿ ।
ತ್ತರಿಸದೆ ಬೀಸಿದಂದು ಮಱೆಯಿಲ್ಲ ನೆಲಂ ಪುಡಿವಿಟ್ಟು ಪಾಱುಗುಂ ॥"[೭]

ಉತ್ತರ, ಪೂರ್ವ,ಹಾಗೂ ಈಶಾನ್ಯ ದಿಕ್ಕಿಗೆ ಗಾಳಿ ಬೀಸಿದರೆ ನಾಡಿಗೆ ಒಳ್ಳೆಯದು. ಪಶ್ಚಿಮ ದಿಕ್ಕಿನ ಗಾಳಿ ಬೀಸಲು ಅಲ್ಪ ವೃಷ್ಟಿಯು, ವಾಯುವ್ಯ ಹಾಗೂ ಅಗ್ನಿ ದಿಕ್ಕಿನಿಂದ ಗಾಳಿ ಬೀಸಲು ಮಳೆಯಿಲ್ಲವೆಂದು ತಿಳಿಯುವುದು. ಭೂಮಿಯೆಲ್ಲ ಹುಡಿ ಎದ್ದು ಹಾರುವದು ಎಂದು ವಿವರಿಸಲಾಗಿದೆ.

"ಭಾವಿಸಿ ನೋೞ್ಪೊಡಾಸಡಿಯ ಪೂರ್ಣಿಮೆಯಂದಿನ ಪೂರ್ವಯಾಮದೊಳ್ ।
ಶ್ರಾವಣಮಾದಿ ಕಾರ್ತಿಕೆವರಂ ಬಲದಿಂ ಬರೆ ಗಾಳಿಯಾದೊಡಾ ॥
ಜಾವದ ತಿಂಗಳೊಳ್ ಮಱೆಯೆ ಕೊಳ್ಗುಮದಲ್ಲದೊಡಿಲ್ಲದಿರ್ಪುದುಂ ।
ಪಾವಕಮಿತ್ರನಿಂದೆಡದೆ ಬೀಸಿದೊಡಾಯದೆ ಕೊಳ್ಳದಿರ್ಪುದುಂ ॥"[೮]

ಆಷಾಢ ಶುದ್ಧ ಹುಣ್ಣಿಮೆ (ಕಡ್ಲಿಗಡಬ ಹುಣ್ಣಿಮೆ)ಯ ದಿವಸ ಮೊದಲನೇಯ ಜಾವದಲ್ಲಿ ಗಾಳಿ ಬೀಸಿದರೆ ಶ್ರಾವಣಮಾಸದಲ್ಲಿ ಮಳೆಯಾಗುವುದು. ಎರಡನೇ ಜಾವದಲ್ಲಿ ಗಾಳಿ ಬೀಸಿದರೆ ಭಾದ್ರಪದ ಮಾಸದಲ್ಲಿ ಮಳೆಯಾಗುವುದು. ಮೂರನೇ ಜಾವದಲ್ಲಿ ಗಾಳಿ ಬೀಸಿದರೆ ಅಶ್ವಿನಿ ಮಾಸದಲ್ಲಿ ಮಳೆಯಾಗುವುದು. ನಾಲ್ಕನೇ ಜಾವದಲ್ಲಿ ಗಾಳಿ ಬೀಸಿದರೆ ಕಾರ್ತಿಕ ಮಾಸದಲ್ಲಿ ಮಳೆಯಾಗುವುದು. ಒಂದು ವೇಳೆ ಆಯಾ ಜಾವದಲ್ಲಿ ಗಾಳಿ ಬೀಸದಿದ್ದರೆ ಮುಂದೆ ಆ ಮಾಸದಲ್ಲಿ ಮಳೆಯಾಗುವುದಿಲ್ಲವೆಂದು ತಿಳಿಯಬೇಕು ಎಂದು ವಿವರಿಸಲಾಗಿದೆ.

ಮಳೆಗಾಲವಾದ ಆಷಾಢ ಮಾಸದ ಪೂರ್ಣಿಮೆ ಕಳೆದು ಬರುವ ನವಮಿ ದಿವಸ ಊರ ಬಾಗಿಲಲ್ಲಿ ನಿಂತು ಊರೊಳಕ್ಕೆ ಬರುವ ಪಶುಗಳ ಲಕ್ಷಣಗಳಿಂದ ಮಳೆಯ ಸ್ವರೂಪವನ್ನು ಅಧ್ಯಾಯ ೪ರಲ್ಲಿ ಮೂರು ಪದ್ಯಗಳಲ್ಲಿ ವಿವರಿಸಲಾಗಿದೆ.

ಎಸೆವಾಷಾಢದ ಪೂರ್ಣಿಮಂ ಕಳೆದು ಬರ್ಪಾನೌಮಿಯಂದೆಯ್ದೆ ಪೂ ।
ಜಿಸಿ ಪೆರ್ಬಾಗಿಲ ಪಕ್ಕದೊಳಿ(ದಿ)ರ್ದು ಪಸುಗಳ್ ಮೇದೂರ್ಗೆ ಬರ್ಪಲ್ಲಿ ಬಾ ॥
ವಿಸೆ ಶುಭ್ರಾಭ್ರನಿಭಾಂಗ ತುಂಗ ವೃಷಭಂ ಮುಂ(ಮೇಣ್) ಪೊಕ್ಕುಡತ್ಯುತ್ತಮಂ ।
ವಸುಧಾಚಕ್ರದೊಳಿಂಬಿನಿಂ ಮಱೆಗಳುಂ ಧಾನ್ಯಂಗಳುಂ ಪೆರ್ಚುಗುಂ ॥ ೬ ॥

ಏಡಂಪೊಕ್ಕೊಡೆ ಚಿತ್ರವೃಷ್ಟಿ ಕುರುಡಂ ಮುಂಪೊಕ್ಕೊಡರ್ಘಕ್ಷಯಂ ।
ಸೇಡಂ ಪೊಕ್ಕೊಡೆ ಡಾವರಂ ಕಪಿಲನಿಂ ರೋಗೋದ್ಭವಂ ಮಾಣದೊ ॥
ಕೋರ್ಡಂ ಪೊಕ್ಕೊಡೆ ರಾಜ್ಯಹಾನಿ ಯಿಱೆಗೋಡಂ ಸಾರೆ ಸಾವಂತರಾ ।
ಕೇಡಕ್ಕುಂ ಕರಿಯೆಱ್ತಿನಿಂ ಕಡೆಫಲಂ ಕೆಂದಂ ಪುಗಲ್ ಸತ್ಫಲಂ ॥೭॥

ಪಡಿಯೊಳಲ್ಪವೃಷ್ಟಿ ಕರಿಯಾಪಿನೊಳೊಳ್ಪಱೆ ಕೆಂದೆಯಿಂದೆ ನಾ ।
ಡೋಡಿಗೆ ಬಂಜೆಯಿಂದೆ(ಸತತಂ) ಮಱೆಮಾತಸೆ ಪೇಱದಿರಣ್ಣ ಸಾಡೆ ಪೊ ॥

ಕೋರ್ಡನಿ ನಾಡೆಯಂಗೆ ಕಳಮಾಗಿಕು ಮುಗ್ಗುವಕಾಲಿನರ್ಘಮುಂ ।
ನೋಡುಗೆ ಕುಂದುಗುಂ ಜಗದೊಳಿಂತಿದು ತಪ್ಪದು ಅಟ್ಟನಿಷ್ಪದಿಂ ॥೮॥

ಎತ್ತರವಾದ ಬಿಳಿಯ ಬಣ್ಣದ ಸಧೃಡವಾದ ಆಕಳು ಮೊದಲು ಪ್ರವೇಶ ಮಾಡಿದರೆ ಅತ್ಯುತ್ತಮವು ಭೂಮಿಯೊಳು ಸಾಕಷ್ಟು ಮಳೆಯಾಗುವುದು. ಧನಧಾನ್ಯಗಳು ಸಮೃದ್ಧಿಯಾಗುವವು. ಆಶಕ್ತವಾದ ಆಕಳು ಪ್ರವೇಶಿಸಿದರೆ ವಿಚಿತ್ರ ತರ ಮಳೆಯು, ಕುರುಡಾದ ಆಕಳು ಪ್ರವೇಶ ಮಾಡಿದರೆ ಎಲ್ಲಾ ವಸ್ತುಗಳು ತೇಜಿಯು, ಹಳೆಯ ಹೊಲಸಾಗಿದ್ದುದು ಆಕಳು ಪ್ರವೇಶ ಮಾಡಿದರೆ ಬರಗಾಲ ಭಯವು, ಮುರಿದ ಕೊಂಬುಗಳುಳ್ಳ ಕಪಿಲೆ ಹೊಕ್ಕರೆ ರೋಗ ಪೀಡೆಯು. ಒಂದು ಕೋಡಿನ ಆಕಳು ಹೊಕ್ಕರೆ ರಾಜ್ಯಹಾನಿಯೂ, ಇಳಿಗೋಡಿನ ಆಕಳು ಪ್ರವೇಶಿಸಿದರೆ ಮಂತ್ರಿಗಳಿಗೆ ಕೇಡು. ಕರಿಯ ಬಣ್ಣದ ಎತ್ತು ಪ್ರವೇಶ ಮಾಡಿದರೆ ಕೆಟ್ಟ ಫಲವು, ಕೆಂಪು ಬಣ್ಣದ ಎತ್ತು ಪ್ರವೇಶಿಸಲು ಉತ್ತಮ ಫಲವು, ಕರಿಯ ಬಣ್ಣದ ಆಕಳು ಪ್ರವೇಶ ಮಾಡಿದರೆ ಅಲ್ಪವೃಷ್ಟಿಯು, ಕೆಂಪು ಬಣ್ಣದ ಆಕಳಾದರೆ ಉತ್ತಮ ಮಳೆಯು. ಬಂಜೆಯಾದ ಆಕಳು ಆದರೆ ಮಳೆ ಆಗಲಾರದು. ಒಕೋರ್ಡಿನ ಆಕಳಾದರೆ ನಾಡಿನಲ್ಲಿ ಕಾಳಗವು. ಮುಗ್ಗುವ ಕಾಲಿನ ಆಕಳು ಆದರೆ ಅಭಿವೃದ್ಧಿಯು. ಆಕಳ ರೂಪ, ವಯಸ್ಸು ಅದರ ಕಾಣಬರುವ ಎಲ್ಲಾ ಲಕ್ಷಣಗಳಿಂದ ಅಧಿಕಮಳೆ, ಅಲ್ಪಮಳೆ, ಸಾಧಾರಣಮಳೆ, ಬರಗಾಲ ಇತ್ಯಾದಿ ಭಾವಿಸಿ ಹೇಳಲಾಗಿದೆ.

ವಿವಿಧ ಬಗೆಯ ಭೂಜಾತ ಫಲಗಳು ಬೆಳೆಯುವ ಕ್ರಮವನ್ನು ಶಾಸ್ತ್ರಕಾರ ಸುಧೀರ್ಘವಾಗಿ ವಿವರಿಸುತ್ತಾನೆ.

ಅರುಣಾಶೋಕದ ಶೋಭೆಯುಂ ಕಟಿವೆಯಂ ನ್ಯಗ್ರೋಧಮುಂ ಸಜ್ಜೆಯಂ ।
ಸಿರಿಸಂ ಮುದ್ಗಮನಿಪ್ಪೆ ಗೋದುವೆಗಳಂ ನೇಜಿಲ್ ತಿಲಂ ಮಾಷಮಂ ॥
ವರ ಭಲ್ಲಾತಕದಿಂದೆ ತೋವರಿ ಕಱುಂಕೆಯ್ಯೋದವಿಂ ಕರ್ವು (ಬಿಳಲ್)? ಕ ।
ರ್ಮರನುಂ ವ್ರೀಹಿಯನಾದಮಂ ಬೆಳೆಯಿಕುಂ ಜೋಳಂ ಮಹೀಭಾಗದೊಳ್ ॥೧೦॥

ಭತ್ತ, ಸಜ್ಜೆ, ಗೋಧಿ, ನೇರಳೆ, ಎಳ್ಳು ಮುಂತಾದ ಧಾನ್ಯಗಳು ಬೆಳೆಯುವ ಪ್ರಮಾಣವನ್ನು ವಿವರಿಸಲಾಗಿದೆ. ಮುಂದಿನ ೧೧, ೧೨,೨೨,೨೩,೨೪ನೇ ಪದ್ಯಗಳಲ್ಲಿ ಅನೇಕ ಸಸ್ಯಜಾತಿ ಬೆಳೆಯ ಸ್ವರೂಪ, ಬರಬೀಳುವ ಸೂಚನೆಯನ್ನು ಶಾಸ್ತ್ರಕಾರ ಹೀಗೆ ವಿವರಿಸಿದ್ದಾನೆ.

"ಆಲ,ಸಿರಸ(ಲಾಗೆ), ಇಪ್ಪೆ, ನೇಜಿಲ್, ಗೇರು, ಕಱುಂಕು, ಕರ್ಮರ, ಆದಮ? ಅರಳಿ, ಇಂಗುದಿ,(ಇಂಗಳ), ಅದಿರ್ಮುತೆ,(ಹೂಬಳ್ಳಿ), ಎಟಿಲೆವಾಟಿ(ಹೂಗಿಡ), ಬಯ್ಸಿ, ಗೊರವಿ(ಪಂಜಿನ ಮರ), ಕೃಷ್ಣಾರುಣಾಶೋಕೆ, ಹಾಲೆ, ಮುತ್ತ, ಮೊಲ್ಲೆ, ನಂದ್ಯಾವರ್ತ, ಸಿಂಧುರ, ತಿಲಕ, ಎಕ್ಕೆ, ಗೋರ, ಇಟ್ಟ(ಇಂಗಳ), ಬಸರಿ, ಬಾಳೆ, ಹಸ್ತಿಕರ್ಣಿ(ಹಸ್ತಿಪರ್ಣಿ), ಪಾದರಿ, ಅರುಣೋತ್ಪಲ, ಬಿಸರುಹ(ಕಮಲ), ನೈದಿಲೆ, ಕುವಳಯ, ಅವರೆ, ಕುಸುಂಬೆ, ಚೂತವೃಕ್ಷ(ಮಾವು), ಕೊಡಸಿಗೆ(ಗಿರಿಮಲ್ಲಿಗೆ), ಕಡುವು(ಕದಂಬ),ಬನ್ನಿ,ತಜಿ,ಗೇರಮರ, ನಾದಕೇಸರ, ಬೀಡೆಮರ, ಬೆಟಿಲು(ಬೇಲದಗಿಡ), ಈ ಮರಗಳು ಹೆಚ್ಚಾಗಿ ಚಿಗುರಿ ಹೂಕಾಯಿಗಳು ಬಿಟ್ಟರೆ, ಕ್ರಮವಾಗಿ ಕಟಿವೆ(ಭತ್ತ), ಸಜ್ಜೆ, ಹೆಸರು, ಗೋದುವೆ, ಎಳ್ಳು, ಉದ್ದು, ತೋವರಿ(ಕರ್ವು), ವ್ರೀಹಿ(ಭತ್ತ), ಜೋಳ, ಸಕಲಧಾನ್ಯ, ಸಣಬು, ಪಟ್ಟೆ, ಗುರುಗುಂಜಿ, ಅಗಸೆ(ಸೀಲಿಗಿಡ), ಹೊಂಬೆಸರು(ಅಲಸಂದೆ?), ಗಂಧಶಾಲಿ(ಮುಸುಗು ರಾಜಿಭತ್ತ), ಜೋಳ,ನವಣೆ, ಸಾಸಿವೆ ಮೊದಲಾದ ಧಾನ್ಯಗಳು.... ರೋಗನಾಶ, ಮಟೆಬರದಿರುಪಿಕೆ, ಬರಬರುಪಿಕೆ, ಭೀತಿ ಇವೇ

ಮೊದಲಾದ ಸುಖ ದುಃಖಗಳೂ, ಜೇನು, ಸುಭಿಕ್ಷ, ಅಗ್ನಿಭಯ ಇವೆಲ್ಲವೂ ಉಂಟಾಗುವುವು.- ಎಂದು ಹೇಳಿ, ಮತ್ತೆ ಮುತ್ತುಗದ ಕಾಯಿಯನ್ನು ಸುಲಿದ ಲಕ್ಷಣದಿಂದ ಹಿಂಗಾರು-ಮುಂಗಾರು ಬೆಳೆಯಾಗುವುದನ್ನು ತಿಳಿಸಿ, ಕಾಡಿನಲ್ಲಿ ಮಾವು, ಬೇವು, ಹುಣಿಸೆ, ಎಕ್ಕೆ, ಇವುಗಳ ಅತಿಶಯ ಫಲದಿಂದ, ನವಣೆ, ಎಳ್ಳು, ನೆಲ್ಲು ಯಾವ ಬೆಳೆಯೂ ಆಗದಿರುವುದು-ಇವನ್ನು ಹೇಳಿ, ಈ ಬಗೆಯಲ್ಲಿ ಮರಗಳ, ಫಲಪುಷ್ಪಾದಿಗಳ ನ್ಯೂನತಾಧಿಕ್ಯಗಳಿಂದ ಮಳೆ ಬೆಳೆಗಳಾಗುವುದು ಆಗದಿರುವುದು ಇವನ್ನು ಸೂಚಿಸಿ ಮಳೆಯ ನಯವನ್ನು ಚಂದ್ರನ ಬೆಳಕಿನಲ್ಲಿ ಮೂಱು ಮೊಟಿ ನೂಲನ್ನಿಟ್ಟು, ಆ ನೆಟಿಲ ದಿಕ್ಕಿನಿಂದ ಹೆಚ್ಚು ಮಳೆ, ಮಧ್ಯಮ ಮಳೆ, ಮಳೆಯ ಅಭಾವವನ್ನು ಸೂಚಿಸಿ, ಕೊರಡಿನ ಉದಯ, ನೀರ್ಗದಿರುದಯ, ಬೀಸಿದ ಗಾಳಿ, ಸೂರ್ಯಕಾಂತಿಯ ಕುಂದು, ಕಾಗೆಯಂತೆ ಕಪ್ಪು, ಮೇಘಗಳ ಉದಯ, ನಿರುತಿಯ ಗಾಳಿ, ಸೂರ್ಯಬಿಂಬ ಹೆಚ್ಚು ಕಾಂತಿಯುಳ್ಳುದು, ವಾಯುವ್ಯದ ಗಾಳಿ, ಮೇಘಕಾಂತಿ ನಿರ್ಮಳವಾಗಿರುವುದು-ಇವುಗಳಿಂದ ಮಳೆಯಿಲ್ಲ ಬಱನುಂಟಾಗುವುದೆಂದು ಹೇಳಿ, ಅಧ್ಯಾಯವನ್ನುಪಸಂಹರಿಸಿರುವನು".[೯]

ರೈತಾಪಿ ವರ್ಗದಲ್ಲಿ ಬಿತ್ತುವ ಕ್ರಮ ಶಾಸ್ತ್ರೋಕ್ತವಾಗಿರುತ್ತದೆ. ಹದ ನೋಡಿ ಬಿತ್ತುವುದರಿಂದ ಅಧಿಕ ಫಲವನ್ನು ಪಡೆಯಬಹುದೆಂಬ ವೈಚಾರಿಕತೆ ಕಂಡುಬರುತ್ತದೆ. 'ಉಡಿಯ ಬೀಜಕ್ಕಿಂತ ಹಿಡಿಯ ಬೀಜ ಮುಂದು' ಎಂಬ ಗಾದೆ ಜನಜನಿತವಾಗಿದೆ. ಹೀಗಾಗಿ ಬೀಜಬಿತ್ತುವ ಕ್ರಮವನ್ನು ರಟ್ಟಮತಕಾರ ರಾಹುಚಕ್ರ, ನಕ್ಷತ್ರ, ಬಿತ್ತುವ ಉಪಕರಣವಾದ ಕೂರಿಗೆ, ಪೂಜಾವಿಧಾನ ಇತ್ಯಾದಿ ಸಂಗತಿಗಳನ್ನು ವಿವರಿಸುತ್ತಾನೆ. ರಾಹುಚಕ್ರಕ್ಕೆ ಸಂಬಂಧಿಸಿದಂತೆ ಹಾವಿನ ಆಕಾರದ ಮುಖತಲೆ, ಕತ್ತು, ಹೊಟ್ಟೆ, ಮತ್ತು ಬಾಲ ಈ ಅಂಗ ವಿಭಾಗಗಳಲ್ಲಿ ಮೂರುಮೂರು ನಕ್ಷತ್ರಗಳನ್ನು ಸುತ್ತಿನ ಭಾಗದ ಹಳ್ಳದ ಹೊರಗಡೆ ಆರು ನಕ್ಷತ್ರಗಳನ್ನು ವಿಭಾಗಿಸಿ, ಈ ಭಾಗಗಳಲ್ಲಿರುವ ನಕ್ಷತ್ರಗಳಲ್ಲಿ ಬೀಜ ಬಿತ್ತುವುದರ ಫಲವನ್ನು ಹೇಳಲಾಗುತ್ತದೆ.

"ಸಿರದುವು ಮೂಱು ಕಂಠದುವು ಮೂಱುದರಪ್ರತಿಬಂಧದಲ್ಲಿ ಪ ।
ನ್ನೆರಡದಱಗ್ರ ಪುಚ್ಚದುವು ಮೂಱು ಬಹಿರ್ಗತವಾಱು ಬಿತ್ತಿ ಸೈ ॥
ಸಿರದುವು ನಂಜು ಕಂಠದುವು ಕಾಡಿಗೆ ಬಸಿಱೊಳ್ ಬಹುಧಾನ್ಯವೃದ್ಧಿ(ಷ್ಟಿ) ಬಾ ।
ಓರದುವು ವಿಟ್ಟಿ ಪುಚ್ಚದುವು ಪುಲ್ಲಣಿಯೆ(ಮೆ)ಂದಱು ರಾಹುಚಕ್ರದೊಳ್ ॥"[೧೦]

"ಪಾವಿನ ನೆತ್ತಿಯಲ್ಲಿ ಸಸಿ ಪುಟ್ಟವು ಬಾಯೊಳೊಣಂಗಿ ಪೋಕುಮಾ ।
ಪಾವಿನ ಚಿನ್ನ ಬಾಲದುವು[ನಲ್ಲ]ದಿರಂ ಕಡುಸಣ್ಣಮಕ್ಕು ॥
ಪಾವಿನ ಕಂಠದಾ ತೆನೆ[ಯೆ] ಕಾಡಿಗೆ ಕೇಳುದರ(ರದಲ್ಲಿ) ಸಂಕ್ಷಯಂ ।
ಪಾವಕನಾಡಿ ಪೇಟ್ಟ್ ಫಲಮಧ್ಯಮ ಕಷ್ಟಫಲಂಗಳೆಂಬಿವಂ ॥"[೧೧]

ರಾಹು ಚಕ್ರದಲ್ಲಿ ರಾಹು ಜೇಷ್ಠ ನಕ್ಷತ್ರದಲ್ಲಿ ಇರುವನೆಂದು ತಿಳಿಯುವುದು. ಇವುಗಳ ಫಲಗಳನ್ನು ತಿಳಿದುಕೊಂಡು ಒಕ್ಕಲಿಗರು ಸರ್ವಬೀಜಗಳನ್ನು ಬಿತ್ತುವ ಬೀಜಾವಾಪ ಪದ್ಧತಿಯನ್ನು ಪ್ರತಿಪಾದಿಸಲಾಗಿದೆ. ಸರ್ಪದ ಶಿರಸಿನಲ್ಲಿ ಬಂದ ನಕ್ಷತ್ರಗಳಲ್ಲಿ ಬೀಜ ಬಿತ್ತಲು ನಂಜುರೋಗ ಅಂದರೆ ಸಸಿಗಳು ಒಣಗಿ ಹೋಗುವವು. ಸರ್ಪದ ಕುತ್ತಿಗೆ ಅಥವಾ ಕಂಠದಲ್ಲಿ ಬರುವ ನಕ್ಷತ್ರಗಳಲ್ಲಿ ಬೀಜ ಬಿತ್ತಲು ಕಾಡಿಗೆಯ

ರೋಗ ಬೀಳುವುದು. ಸರ್ಪದ ಹೊರಹುಬ್ಬಿನಲ್ಲಿ ಬರುವ ನಕ್ಷತ್ರಗಳಲ್ಲಿ ಬೀಜ ಬಿತ್ತಲು ಸಣ್ಣ ಬೆಳೆಯು ಬರುತ್ತದೆ ಮತ್ತು ಕಳ್ಳರ ಉಪದ್ರವವುಂಟಾಗುತ್ತದೆ. ಸರ್ಪದ ಕಂದರ ಭಾಗದಲ್ಲಿ ಬರುವ ನಕ್ಷತ್ರದಲ್ಲಿ ಬಿತ್ತಲು ಬಹುಧಾನ್ಯ ವೃದ್ಧಿ ಅಂದರೆ ಹುಲುಸಾದ ಬೆಳೆ ಬರುತ್ತದೆ. ಬಾಲದಲ್ಲಿ ಬಂದ ನಕ್ಷತ್ರದಲ್ಲಿ ಬಿತ್ತಲು ಮಿಡತೆ, ಕೋರಿಹುಳದ ಉಪಟಳದಿಂದ ಬೆಳೆ ನಷ್ಟವಾಗುದು. ಒಕ್ಕಲಿಗರು ತಪ್ಪದೇ ಇದನ್ನು ಪಾಲಿಸಿದರೆ ಉತ್ತಮ ಫಸಲು ಪಡೆಯಬಹುದು ಎಂದು ಶಾಸ್ತ್ರಕಾರ ತಿಳಿಸುತ್ತಾನೆ.

ಬೀಜವಾಪ ನಕ್ಷತ್ರಾಧಿಗಳ ಫಲವನ್ನು ತಿಳಿಸುವ ಶಾಸ್ತ್ರಕಾರ ಬೀಜವನ್ನು ಬಿತ್ತುವ ಶುಭನಕ್ಷತ್ರಗಳು ಯಾವ ಯಾವ ನಕ್ಷತ್ರಗಳಲ್ಲಿ ಯಾವ ಧಾನ್ಯ ಬಿತ್ತಿದರೆ ಉತ್ತಮ, ಯಾವ ಯಾವ ಗ್ರಹನಕ್ಷತ್ರಗಳಲ್ಲಿ ಯೋಗದಲ್ಲಿ ಬೀಜ ಬಿತ್ತಿದರೆ ಕೇಡು ಎಂಬುದನ್ನು ವಿವರಿಸುತ್ತಾನೆ.

"ಮೃಗಸಿರೆಯಾದಿಯಾಗೆಸೆವ ಪಂಚಕದೊಳ್ ಪುಗೆ ಬಿತ್ತು ನೆಲ್ಗಳಂ ।
ಮಿಗೆ ಮಘೆಪೂರ್ಣಿಯಂ ದಿನಕರಂ ನಿಲೆ ಕೊಳ್ ಪೆಸರೆಳ್ಗಳೆಂಬಿಮಂ ॥
ನೆಟ್ಟಿ ವರಾಹ ಗಾರ್ಗ್ಯನವ ಕೀರ್ತಿಯ ....।
ಸೊಗಯಿಪಕಂಮನಾಗಣಕ ಱಟ್ಟನ ಪೇೞ್ದನಯಾಗಮಂಗಳಿಂ ॥"[೧೨]

ಮೃಗಶಿರ, ಪುನರ್ವಸು, ಪುಷ್ಯ ಈ ಮೂರು ನಕ್ಷತ್ರಗಳಲ್ಲಿ ನೆಲ್ಲು(ಭತ್ತ) ಬಿತ್ತುವುದು. ಮಘ ಪೂರ್ಣಿಮೆಯೆಂದು ಸೂರ್ಯನು ಮೂಡಲು ಎಲ್ಲಾ ತರಹದ ಧಾನ್ಯಗಳನ್ನು ಬಿತ್ತುವುದೆಂದು ವರಾಹ ಗಾರ್ಗ್ಯನ ಶಾಸ್ತ್ರಕಾರರಂತೆ ರಟ್ಟನು ಅಭಿಪ್ರಾಯ ಪಡುತ್ತಾನೆ.

"ಮೂಱುತ್ತರೆ ಮಘೆಹಸ್ತಂ ।
ಜಾಱಿಲ್ ಧನಿಷ್ಠೆ ಮೃಗಶಿರಂ ರೇವತಿಯುಂ ॥
ಕಿಱುಫಲಮುಮಕ್ಕುಮವಱೊಳ್ ।
ಬೇಱೆನಿಸದೆ ಬಿತ್ತನೇಕಧಾನ್ಯ ವ್ರಜಮಂ ॥"[೧೩]

'ಮೂಱುತ್ತರೆ' ಎಂದರೆ ಉತ್ತರ, ಉಷಾ, ಉಭಾ, ನಕ್ಷತ್ರಗಳು ಮತ್ತು ಮಘೆ, ಹಸ್ತ, ಧನಿಷ್ಠ, ಮೃಗಶಿರ, ರೇವತಿ ಬಿತ್ತಲು ಅಲ್ಪ ಫಲಬರುವುದೆಂದು ಈ ನಕ್ಷತ್ರಗಳಲ್ಲಿ ಏಕದಳ ಧಾನ್ಯಗಳನ್ನು ಬಿತ್ತುವುದು ಉತ್ತಮೆಂಬುದು ಶಾಸ್ತ್ರಕಾರನ ಅಭಿಪ್ರಾಯವಾಗಿದೆ. ಮುಂದುವರೆದು

"ರೋಹಿಣಿ ಪುಷ್ಯದೊಳ್ ಕಳ(ಟ)ವೆ ಬಿತ್ತು ಪುನರ್ವಸು ನೆಲ್ಲಿಗೊಳ್ಳಿತ ।
ಪ್ಪಾಹಮೆ ಮೂಲಮೆಲ್ಲ ಫಲಕಂ ಶ್ರವಣಂ ಕಿಱುಕೇಱು ನೆಲ್ವೆ(ಳಸು) ನಿ॥
ರ್ವಾಹಿ ಫಲಕ್ಕೆ ಹತ್ತುವನುರಾಧೆ ಮಹೀಜಗತೋಯ ರಿಕ್ಷೆ ಧಾ ।
ತ್ರೀ ಹಿತಮಪ್ಪ ಗೋದುವೆಯ(ಗಮ)ನಶ್ವಿನಿಯೊಳ್ ಸಲೆ ಬಿತ್ತು ಪಟ್ಟಿಯಂ ॥"[೧೪]

ರೋಹಿಣಿ, ಪುಷ್ಯ, ಪುನರ್ವಸುಗಳಲ್ಲಿ ಭತ್ತ ಬಿಡುವುದು ಒಳಿತು. ಮೂಲನಕ್ಷತ್ರದಲ್ಲಿ ಎಲ್ಲಾ ಫಲಗಳನ್ನು, ಶ್ರವಣದಲ್ಲಿ ಗೇರು ಫಲ, ಅಶ್ವಿನಿಯಲ್ಲಿ ಗೋಧಿಯನ್ನೂ, ರೋಹಿಣಿ, ಮೃಗಶಿರ, ಹಸ್ತ, ಪುಷ್ಯ, ಮಘ, ರೇವತಿ, ಉತ್ತರ, ಉಷಾ, ಉಭಾ, ಮೂಲ, ಅನುರಾಧ ಈ ನಕ್ಷತ್ರಗಳಲ್ಲಿ ಬಿತ್ತಲು ಉತ್ತಮವಾಗಿರುತ್ತದೆ ಎಂದು ವಿವರಿಸುತ್ತಾರೆ.

ಮುಂದಿನ ಪದ್ಯಗಳಲ್ಲಿ ಹತ್ತಿ, ಕಡಲೆ ಬಿತ್ತುವುದನ್ನು ಹೇಳುತ್ತಾನೆ.

"ಅರ್ತಿಯ ಪೂರ್ವತ್ರಯದೊಳ್ ।
ಹತ್ತಿಯುಮಂ ಶತಾವಿಶಾಖೆಯೊಳ್ (ನೀನೆಂದುಂ) ॥

ಬಿತ್ತುಗೆ ಫಲವಂ ಬೆಳಸಂ ।

ಅರ್ತಿಯೊಳಂ ಬಿತ್ತುಯೆಲೆಯ(ನು) ಉತ್ತರೆಯೊಳಗಂ ॥"[೧೫]

ಹುಬ್ಬಾ, ಪುಷ್ಯ, ಪೂಭಾ, ಶತತಾರ, ವಿಶಾಖ ನಕ್ಷತ್ರಗಳಲ್ಲಿ ಹತ್ತಿಯನ್ನು ಬಿತ್ತುವುದು ಎಂಬುದು ಶಾಸ್ತ್ರಕಾರನ ಅಭಿಪ್ರಾಯವಾಗಿದೆ. ಒಟ್ಟಾರೆಯಾಗಿ ನಕ್ಷತ್ರಗಳಲ್ಲಿ ಬಿತ್ತುವ ಪರಿಯನ್ನು ತಿಳಿಸುತ್ತಾ ಉತ್ತಮ, ಮಧ್ಯಮ, ಕನಿಷ್ಠ ಎಂದು ಮೂರು ಬಗೆಯಲ್ಲಿ ನಕ್ಷತ್ರಗಳ ಪಟ್ಟಿಯನ್ನು ನಿಡುತ್ತಾರೆ. ಶ್ರಾವಣ, ಧನಿಷ್ಠ, ಶತತಾರ, ಅಶ್ವಿನಿ, ಪನರ್ವಸು ಈ ನಕ್ಷತ್ರಗಳು ಬಿತ್ತಲಿಕ್ಕೆ ಮಧ್ಯಮವೂ, ಚಿತ್ತ, ಭರಣಿ, ಕೃತ್ತಿಕ, ವಿಶಾಖ ಇವು ಕನಿಷ್ಠವೂ, ರೋಹಿಣಿ, ಮೃಗಶಿರ, ಹಸ್ತ, ಪುಷ್ಯ, ಮಘ, ರೇವತಿ, ಉತ್ತರ, ಉಷಾ, ಉಭಾ, ಮೂಲ, ಅನುರಾಧ ಈ ಹತ್ತು ನಕ್ಷತ್ರಗಳು ಬಿತ್ತಲಿಕ್ಕೆ ಉತ್ತಮವಾದವುಗಳೆಂದೂ ಮತ್ತು ಮಕರ, ಮೀನ, ಕರ್ಕ, ವೃಷಭ, ಸಿಂಹ, ಲಗ್ನಗಳಲ್ಲಿಯೂ, ಲಗ್ನದಲ್ಲಿ ಗುರು, ಶುಕ್ರ, ಬುಧರು ಇರುವಾಗ ಬಿತ್ತಬೇಕು ಎಂದು ಅಭಿಪ್ರಾಯ ಪಡುತ್ತಾನೆ. ಶನಿ, ಸೂರ್ಯ, ಚಂದ್ರಗ್ರಹಗಳ ದೃಷ್ಟಿಯಿಂದ ಉಂಟಾಗುವ ಒಳ್ಳೆಯ ಮತ್ತು ದುಷ್ಪರಿಣಾಮಗಳನ್ನು ಕುರಿತು ಹೇಳುತ್ತಾನೆ.

ಒಕ್ಕಲಿಗರಿಗೆ ಬಿತ್ತುವ ಕೂರಿಗೆ ಪೂಜನೀಯವಾದ ಉಪಕರಣವಾಗಿದೆ. ಕೂರಿಗೆಯ ಪೂಜೆಯ ಕ್ರಮವನ್ನು ಕುರಿತು ಶಾಸ್ತ್ರಕಾರನು ನಾಲ್ಕು ಪದ್ಯಗಳಲ್ಲಿ ವಿವರಿಸುತ್ತಾನೆ.

"ಮಿಂದು ದಳಿಂಬಮನುಟ್ಟುಂ ।
ಚಂದನಮಂ ಪೂಸಿ ನೆರೆಯ ಪಟ್ಟನ ಬೊಟ್ಟಿಂ ॥
ಟ್ಟಂದು ನವಕುಸುಮದಾಕೃತ ।
ದಿಂದಂ ಬಾಸಿಂಗಮನಿಮಿಂ ಕಟ್ಟಿದ ಬಟುಕಂ ॥೨೫॥

ಕಳಸಂ ಕನ್ನಡಿ ತೋರಣಂ ಗುಡಿ ಮೊಸರ್ ಪೂಮಾಲೆಯೊಳ್ವಾತು ಮಂ ।
ಗಳಗೇಯಂ ಪಜೆ ಶಂಖಕಾಹಳರವಂ ಭೇರೀರವಂ ಚಾಮರಂ ॥
ಕುಲನಾರೀಜನ ಮಿಷ್ಟರಾತ್ಮನಿವಹಂ ಪೆರ್ವಂಡಿರೊಳ್ತಂಡುಳಂ ।
ಜಳತಾಂಬೂಲ ಸಿತಾಕ್ಷತಾದರಸುಮಂ ಶ್ರೀಲೀಲೆಯಂ ಮಾಡುಗುಂ ॥೨೬॥

ಬೇಡಿದ ಜನಕ್ಕೆ ಕೆಲಸಲ ।
ನೋಡದೆ ತಣಿವನ್ನಮಿತ್ತು ದಾನಮನನಿತಂ॥
ಪಾಡುವ ಪೊಗಟ್ಟೆರ ಮನಮಂ ।
ನೋಡುತೆ ಸಂತೋಷದಿಂದೆ ಮೆಲ್ಲಡಿಯಿಡುತುಂ ॥೨೭॥

ಪೊಸಕೂರಿಗೆ ಮಡಕೆಗಳಂ ।
ಕಿಸುಸುಣ್ಣ ಮನೆ ಪೂಸಿ ಗಟ್ಟಿದೊಸರಿಂದರಂ ॥
ದೆಸೆಯಂಬರಕ್ಕೆ(ರಾಕ್ಷ) ತೆಗಳಿಂ ।
ದೊಸೆದರ್ಚಿಸಿ ಮತ್ತೆ ಮಂತ್ರದಾ ಕ್ರಮದಿಂದಂ ॥೨೮॥"[೧೬]

ಕೃಷಿಕನು ಸ್ನಾನ ಮಾಡಿ ಮಡಿ ವಸ್ತ್ರಗಳನ್ನು ಉಟ್ಟು ಮೈಗೆ ಭಸ್ಮ ಗಂಧ ಕುಂಕುಮಾಧಿಗಳನ್ನು ಧರಿಸಿಕೊಂಡು ಇಷ್ಟ ದೇವತಾ ಪೂಜೆಯನ್ನು ಮಾಡಿ ಹೂಮಾಲೆಗಳನ್ನು ಕೊರಳಲ್ಲಿ ಹಾಕಿಕೊಂಡು ಮಡಿ ನೀರಿನಿಂದ ತುಂಬಿದ ತಾಮ್ರದ ತಂಬಿಗೆ, ಭಸ್ಮ, ಗಂಧ, ಕುಂಕುಮ, ಅರಿಶಿಣ, ಅಕ್ಷತೆ, ಪತ್ರಿ, ಹೂ, ಹೂವಿನಸರ, ದಂಡಿ, ಧೂಪ, ದೀಪ, ಕಳಸ, ಕನ್ನಡಿ, ಬಾಳೆಹಣ್ಣು. ಎಲೆ, ಅಡಿಕೆ, ದಕ್ಷಿಣೆಗಳೊಂದಿಗೆ ಕೂರಿಗೆಯ ಹತ್ತಿರ ತನ್ನ ಪತ್ನಿ ಹಾಗೂ ಮಕ್ಕಳೊಡನೆ, ಬೇರೆ ಸುಮಂಗಳ ಸ್ತ್ರೀಯರೊಡನೆ ಬರಬೇಕು. ಅಲ್ಲಿ ಕೂರಿಗೆಯನ್ನು ಮಡಿ ಪೀತಾಂಬರ, ಬೆಳ್ಳಿ, ಬಂಗಾರದ ಆಭರಣಗಳಿಂದಲೂ, ಹೂ-ಮಾಲೆ ತಳಿರು, ತೋರಣಗಳಿಂದಲೂ ಅಲಂಕರಿಸಬೇಕು. ಬಳಿಕ ಯಜಮಾನನು ಪೂಜೆ ಪ್ರಾರಂಭಿಸಬೇಕು. ಶಂಖ, ಕಹಳೆ, ಭೇರಿನಾದ ಆಗುತ್ತಿರಬೇಕು. ಪೂಜೆಯನ್ನು ಮಾಡಿ ಕಳಸ ಕನ್ನಡಿ ಬೆಳಗಿ ಮಂಗಳಾರತಿ ಮಾಡುತ್ತಾ ಸ್ತೋತ್ರ ಮಾಡಬೇಕು. ಅಲ್ಲಿ ನೆರದವರೆಲ್ಲರೂ ಮಂಗಳಾಕ್ಷತೆಯನ್ನು ಕೂರಿಗೆಯ ಮೇಲೆ ಚೆಲ್ಲಿದ ಬಳಿಕ ಎಡೆ ತೋರಿಸಿ ಸಂತಸದಿಂದ ಪೂಜ್ಯರಿಗೆ ಧಾನ, ದಕ್ಷಿಣೆಗಳನ್ನು ಕೊಟ್ಟು ನೆರೆದವರಿಗೆ ಫಲ ತಾಂಬೂಲಗಳನ್ನು ಹಂಚಬೇಕು. ಮತ್ತು ಗಣಾರಾಧನೆ ಮಾಡಿಸಿ ಗುರು, ಲಿಂಗ, ಜಂಗಮಕ್ಕೆ ತೃಪ್ತಿಪಡಿಸಬೇಕು ಎಂದು ಹೇಳುತ್ತಾರೆ. ಕೂರಿಗೆಯ ಪೂಜಾಕ್ರಮ ಹೇಳಿ ನಂತರ ಅದರ ಬಳಕೆಯ ಕ್ರಮ ಕುರಿತು ಶಾಸ್ತ್ರಕಾರನು ವಿವರಿಸುತ್ತಾನೆ. ಕೂರಿಗೆಯನ್ನು ಒಳಗೆ ಇಟ್ಟು ಅದರಂತೆ ಮಡಿಕೆ ಕೂರಿಗೆಗಳನ್ನು ಪೂಜಿಸಬೇಕು ಎನ್ನುತ್ತಾನೆ.

"ಪೂಜಿಸಿ ಪೊಡವಟ್ಟೊಪ್ಪೆ ವಿ ।
ರಾಜಿಸಿ(ಬೆ)ದೆಯ ನಜಿದು ಪರಿಪುಮಂದಾಂಟದೆ ನೀ ॥
ನೋಜೆಯ ಬಲ್ಲೆಟಿಸ್ತಗಳಂ ।
ಯೋಜಿಸಿ ಸಲೆ ಪಿಡಿದು ಮೇಳೆ(ಣೆ)ಯುಂ ತತ್ಕ್ರಮದಿಂ ॥"[೧೭]

ಪೂಜಿಸಿ ಭಕ್ತಿಪೂರ್ವಕ ನಮಸ್ಕಾರ ಮಾಡಿ, ಹದಬೆದೆಯನ್ನು ಅರಿತು ಬಲತ್ಕಾರವಾದ ಎತ್ತುಗಳನ್ನು ಕ್ರಮಬದ್ದದಿಂದ ಹೂಡಿ, ಮೇಳೆಯನ್ನು ಹಿಡಿದು ಕ್ರಮವರಿತು ಕೂರಿಗೆಯನ್ನು ಹೊಡೆಯಬೇಕೆಂದು ಅಭಿಪ್ರಾಯ ಪಡುತ್ತಾರೆ.

ಕೃಷಿಗೆ ಮೂಲಧಾತು ನೀರು, ನೀರಿನಶೋಧ, ಕೃಷಿಕನ ಜೀವನದ ಪ್ರಥಮ ಹಂತ. ಪ್ರಾಚೀನ ಕರ್ನಾಟಕದಲ್ಲಿ ಕೆರೆ-ಕಾಲುವೆಗಳ ನಿರ್ಮಾಣದಲ್ಲಿ ತೋರಿದ ಆಸಕ್ತಿಯನ್ನು ಗಮನಿಸಿದರೆ ಕೃಷಿಗೂ ಹಾಗೂ ಜಲಾಶಯಗಳಿಗೂ ಇರುವ ಸಾವಯವ ಸಂಬಂಧ ಮನವರಿಕೆಯಾಗುತ್ತದೆ. ನದಿ ಕೊಳ್ಳಗಳಿರದ ಬಯಲು ಸೀಮೆಯಲ್ಲಿ ಅಂತರ್ಜಲವನ್ನು ಶೋಧಿಸುವ ಪ್ರಾಚೀನರ ಮನಸ್ಸು ಶಾಸ್ತ್ರ ಚೌಕಟ್ಟಿನಲ್ಲಿ ಕೆಲಸಮಾಡುವುದನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಬಾವಿ ತೋಡುವ ಸ್ಥಳ, ಪ್ರದೇಶ, ನೀರಿನ ಪ್ರಮಾಣ ಹಾಗೂ ಸಿಹಿನೀರು-ಉಪ್ಪುನೀರು, ಬಾವಿ ತೋಡುವ ವಿಧಾನ ಇತ್ಯಾದಿ ಸಂಗತಿಗಳನ್ನು ಪ್ರಾಚೀನ ಶಾಸ್ತ್ರಕೃತಿಗಳು ಉಲ್ಲೇಖಿಸುತ್ತವೆ. ಸ್ವಲ್ಪ ಹೆಚ್ಚು ಕಡಿಮೆ ಇತರೆ ಶಾಸ್ತ್ರಕೃತಿಗಳಂತೆ ರಟ್ಟಮತಸ್ಥನೂ ಕೂಡ ಅದೇ ಪದ್ಧತಿಯನ್ನು ತಿಳಿಸುತ್ತಾನೆ.

"ನರರ ಶರೀರದೊಳೊಂದಿದ ।
ಸೆರೆಯುಜಿವವರಿರ್ದು ನೋಡಿ(ಡೆ) ಬಿಟ್ಟೊಡೆ ರಕ್ತಂ ॥
ಪರಿವಂತೆ ಮಹೀವಳಯದ ।
ಸೆರೆಯುಜಿದಗುಟ್ಟಂತೆ ನೀರಧಾರೆಗಳಕ್ಕುಂ ॥"[೧೮]

ರಟ್ಟಮತಕಾರನು ನರರ ಶರೀರದಲ್ಲಿ ರಕ್ತವು ಹರಿದಾಡುವಂತೆ ಭೂಗರ್ಭದೊಳ್ ನೀರಧಾರೆಗಳು ಹರಿದಾಡುತ್ತಿರುವವೆಂದು ಅಭಿಪ್ರಾಯ ಪಡುತ್ತಾನೆ. ಭೂಮಿಯಲ್ಲಿ ಜಲದೊರೆಯುವ ಕುರುಹು, ದಿಕ್ಕು, ಆಳ, ಪ್ರಮಾಣ, ರುಚಿ ಮುಂತಾದ ಅಂಶಗಳನ್ನು ಕುರಿತು ಅನೇಕ ಪದ್ಯಗಳಲ್ಲಿ ವಿವರಿಸುತ್ತಾನೆ.

"ಅಡವಿಯ ನೆತ್ತನಾಂಘ್ರಿಪದ ಪಶ್ಚಿಮದೊಳ್ ತ್ರಿಕಹಸ್ತದಿಂದೆ ।
ನೋಡಗುಟುತುಮಂತೆ ಪುಂಸವರೆ ಮಂಡುಕಮಂ ಸಿತಪೀತವರ್ಣದಿಂ ॥
ದಡಸಿದ ಮಾಬಟಿಕ್ಕೆ ಸೆರೆ(ಲೆ)ಯಾದೊಡೆ ನೀರಧಾರೆಗಳ್(ತಾಂ) ।
ಪಡುವಣಿನಕ್ಕೆ ಮಿಕ್ಕರಮು(ರೆಯು) ಮಿಪ್ಪುರುಷಂ ಮುನಿಮುಖ್ಯವಾಕ್ಯದಿಂ ॥"[೧೯]

ಬಾವಿಯ ತಗ್ಗನ್ನು ತೋಡುತ್ತಿರುವಾಗ ಕಪ್ಪೆ ದೊರೆತ ಮೂರು ಹಸ್ತದ ಅಂತರದಲ್ಲಿ ಬಿಳಿ, ಹಳದಿ, ಬಣ್ಣದ ಮಣ್ಣಿನಲ್ಲಿ ನೀರಿನಧಾರೆಗಳು ಪಶ್ಚಿಮ ದಿಕ್ಕಿನಿಂದ ಬರುವವು ಎಂದು ಹೇಳಲಾಗಿದೆ.

"ಸೊಗಯಿಪ ನೇಱಲಿಂ ಬಡಗ ಮೂಱುಮೊಟಂ ತರದಿಂದಮಾಗಿ ನೀ ।
ನಗುಟುಸೆ(ಸು) ಕಪ್ಪೆಯೊಪ್ಪುರುಷದೊಳ್ ಸಲೆ ಲೋಹದ ಗಂಧದಿಂ ಕರಂ ॥
ಮಗಮಗಿಸಿರ್ಪ ಮೇಣ್ ಕುಱಿಮುಮಾಗಿರೆ ಯಿರ್ಪ್ಪುರುಷ ಪ್ರಮಾಣದಿಂ ।
ದೊಗೆವುದು ನೀರಧಾರೆ ಕರಮುತ್ತಮಮಪ್ಪಿನ ಮುತ್ತರಾಸೆಯೊಳ್ ॥"[೨೦]

ನೇರಲ ಗಿಡದ ಉತ್ತರದಲ್ಲಿ ಮೂರು ಮೊಳ ಅಂತರದಲ್ಲಿ ಎರಡು ಪುರುಷ ಪ್ರಮಾಣದಲ್ಲಿ ಕಪ್ಪೆಯು ಸಿಗುವುದು. ನಂತರ ಕಪ್ಪುಬಣ್ಣದ ಕಬ್ಬಿಣದ ವಾಸನೆಯುಳ್ಳ ಮಣ್ಣು ಕಾಣಿಸಿಕೊಳ್ಳುತ್ತ ಉತ್ತರ ದಿಕ್ಕಿನ ಕಡೆಯಿಂದ ನೀರಧಾರೆಗಳು ಗೋಚರವಾಗುವವೆಂದು ಹೇಳುತ್ತಾರೆ.

"ನೇಱಲು ಮೂಲ ಪುತ್ತು ನಿಲೆ ನೇಱಲು ತೆಂಕಲು ಮೂಱುಕೆಯ್ಯೊಳಂ ।
ನೀರ ಕಡಂಗಿ ನೀನಗುಟು(ಸಿ)ತಿರ್ಪ್ಪುರುಷಾರ್ಧದಿನಕ್ಕು ತೆಂಕಲುಂ ॥
ತೋಱುಗುಮಂತೆ ಬೆಳ್ಪೊಱಸಿನಾಕೃತಿ ಮೇಣ್ ಪಿರಿದಕ್ಕುಮಾಗಿ ನೀರ್ ।
ತೋಱುಗುಮಾನರದ್ವಯದ ಗುಣ್ಪಿನ ತೆಂಕಣಧಾರೆ ಱಟ್ಟುಗಾ ॥"[೨೧]

ನೇರಲ ಗಿಡದ ಬುಡದಲ್ಲಿ ಹುತ್ತು ಇರಲು ಆ ಗಿಡದ ದಕ್ಷಿಣದಲ್ಲಿ ಮೂರು ಮೊಳ ಅಂತರದಮೇಲೆ ಪುರುಷಾರ್ಧದ (೧॥ಆಳ) ಪ್ರಮಾಣ ಭೂಮಿಯನ್ನು ಅಗೆಯಲು ದಕ್ಷಿಣ ದಿಕ್ಕಿನಲ್ಲಿ ಬಿಳಿಯ ಗರಸು ಕಾಣಿಸುವುದು. ಮತ್ತು ಮುಂದೆ ಎರಡು ಪುರುಷ ಪ್ರಮಾಣದಲ್ಲಿ ದಕ್ಷಿಣ ದಿಕ್ಕಿನಿಂದ ಜಲಧಾರೆ ಕಂಡುಬರುವುದು ಎನ್ನುತ್ತಾರೆ.

"ಪುತ್ತಿನಸಾರೆ ಲೊಕ್ಕಿ ನಿಲೆ ಲೊಕ್ಕಿಯ ತೆಂಕಣ ಮೂಱು ಕೆಯ್ಗಳಂ ।
ತೊತ್ತಿಯಗುಟ್ ನರಾರ್ಧದೊಳೆ ಲೋಹಿತಮತ್ಸ್ಯದಂತೆ ಪಿಂಗಲಾ ॥
ಯತ್ತಸುಪಾಂಡುರ ಕೃಷೆಯ ಬಣ್ಣದ ಗುತ್ತಲು(ಮ) ಪಣ್ಯಳ(ಣ)ಲ್ಗಳೆಂ? ।
ಬುತ್ತಮ ಚಿಹ್ನದಿಂ ನರಯುಗಾರ್ಧದೆ ತೆಂಕಣಧಾರೆ ಱಟ್ಟುಗಾ ॥"[೨೨]

ಹುತ್ತದ ಸಾಲಿನಲ್ಲಿ ಎಕ್ಕೆಗಿಡವಿರಲು ಆ ಗಿಡದ ದಕ್ಷಿಣದಲ್ಲಿ ಮೂರು ಮೊಳ ಅಂತರದಲ್ಲಿ ೧॥ ಆಳ ತೋಡಲು ಮೀನದ ವಾಸನೆಯ ಕೆಂಪು, ಕಪ್ಪು ಮಿಶ್ರಣದ ಮಣ್ಣು ಕಾಣುವುದು. ಅಲ್ಲಿಂದ ೧॥ ಆಳ ಪ್ರಮಾಣದಲ್ಲಿ ಬಿಳಿಯ ಬಣ್ಣದ ಮಣ್ಣು ಉಸುಕು ಕಾಣುತ್ತಿರಲು ದಕ್ಷಿಣ ದಿಕ್ಕಿನಿಂದ ಜಲಧಾರೆಗಳು ಕಾಣಿಸುವವು ಎಂದು ಶಾಸ್ತ್ರಕಾರ ಹೇಳುತ್ತಾನೆ.

"ಅತ್ತಿಯದೊಂದು ಬೆಲ್ಲವತಮಿರ್ದೊಡೆ ತೆಂಕಣ ಹಸ್ತದಿಂದ ವಂ ।
ತೊ(ದೊ)ತ್ತಿ ಯಗುಟ್ ನರಾರ್ಧದೆಡೆಯೊಳ್ ಕಡುಗರ್ಪ್ಪಿನ ಕಪ್ಪೆಯಿರ್ಕುಮಿ ॥
ನ್ನತ್ತಣ ನೀರಧಾರೆ ಪುರುಷತ್ರಯಮಾದೊ(ಗ)ಡೆ ತೆಂಕಣಿಂದಮೊಂ ।
ದುತ್ತರಮಾಗೆ ಬರ್ಕುಮಿವು ಉಟ್ಟ ಬೆಡಂಗನ ಮಾಡಿದೋಜೆಯಿಂ ॥"[೨೩]

ಅತ್ತಿಯ ಗಿಡದ ದಕ್ಷಿಣದಲ್ಲಿ ಒಂದು ಮೊಳ ಅಂತರದಲ್ಲಿ ೧॥ ಆಳ ತಗ್ಗು ತೋಡಲು ಅಲ್ಲಿ ಕಡುಗಪ್ಪೆಯ ಕಪ್ಪೆ ಇರುವದು. ಅಲ್ಲಿಂದ ಮೂರು ಪುರುಷ ಪ್ರಮಾಣದಲ್ಲಿ ದಕ್ಷಿಣ ಕಡೆಯಿಂದಲೂ, ಉತ್ತರದ ಕಡೆಯಿಂದಲೂ ಆಶ್ಚರ್ಯವಾಗುವಂತೆ ಜಲಧಾರೆಗಳು ಬರುವವು ಎಂದು ರಟ್ಟಮತಕಾರನ ಅಭಿಪ್ರಾಯವಾಗಿದೆ.

"ಅತ್ತಿಯ ಪಡುವಲ್ ಮೂಗ ।
ಯ್ಯತ್ತಲ್ ನೀನಗುಟಿಸಿರದೆ ಪುರುಷದೆ ನೀರುಂ ॥
ಮತ್ತೊಂದು ಪುರುಷದೊಳ್ ಭುಜ ।
ಗೋತ್ತಮನಂತಪ್ಪ ಕರಿಯ ಕಲ್ ಪಡುವ ಜಲ ॥"[೨೪]

ಅತ್ತಿಯ ಗಿಡದ ಪಶ್ಚಿಮ ದಿಕ್ಕಿನಲ್ಲಿ ಮೂರು ಮೊಳ ಅಂತರದಲ್ಲಿ ಒಂದು ಆಳ ಪ್ರಮಾಣ ಭೂಮಿಯನ್ನು ಅಗಿಸಿದರೆ ನೀರು ಬರುವುದು. ಅಲ್ಲಿಂದ ಮತ್ತೊಂದು ಆಳ ಪ್ರಮಾಣ ಅಗಿಸಿದರೆ ಕರಿಕಲ್ಲಿನಲ್ಲಿ ಜಲಧಾರೆ ಬರುವುದು ಎಂದು ಹೇಳುತ್ತಾರೆ.

"ಎಸೆವ ಮತ್ತಿಯ ಬಡಗ ಪುತ್ತಿರ್ದೊಡಂ ಪುತ್ತಿನಿಂಪಡುವ ಮೂಗಯ್ಯ ನೆಲನಂ ।
ಬಿಸುಟು ನೀನಗುಟೆಯರೆಪುರುಷದೆ ನೀರುಂಕಪ್ಪೆಯುಂಕ(ಲ್ಲುಂ)ಲ್‌ಮೊರ(ಡಿ)ಬು ಬರ್ಕುಂ ॥
ಮಸಿಯ ಕನಕದ ರಜತದ ಮಟಿಲಕ್ಕುಮಿಂತಪ್ಪ ಕುಱುಪಿನ ನೀರಧಾರೆ ।
ಮಸಗಿ ಪಡುವಣಿನೊಗೆತರ್ಕುಮಿಪ್ಪುರುಷಮ ನೆಟ್ಟನಿಂತೆಂದಱಟ್ಟುಗಾಂಕಂ ॥"[೨೫]

ಮತ್ತಿಯ ಗಿಡದ ಉತ್ತರದಲ್ಲಿ ಹುತ್ತು ಇದ್ದರೆ, ಆ ಹುತ್ತಿನಿಂದ ಪಶ್ಚಿಮಕ್ಕೆ ಮೂರು ಮೊಳ ಅಂತರದಲ್ಲಿ ಭೂಮಿಯನ್ನು ಅಗೆದರೆ ಒಂದು ಆಳ ಪ್ರಮಾಣದಲ್ಲಿ ಕಪ್ಪೆ, ನೀರಕಲ್ಲು ಕಾಣುವವು, ಅಲ್ಲಿಂದ ಎರಡು ಪುರುಷ ಪ್ರಮಾಣದಲ್ಲಿ ಕಪ್ಪುಹಳದಿ, ಬಿಳಿಯ ಬಣ್ಣಗಳಲುಸುಕ್ಕು ಕಾಣುವುದರ ಜೊತೆಗೆ ನೀರು ಧಾರೆಗಳು ಹೊರಬರುವವು ಎನ್ನುತ್ತಾನೆ.

"ಎಸೆವ ನಾಯತ್ತಿಯಿಂ ಮೂಡ (ಲ್) ಲು ಪುತ್ತಿರೆ ಪುತ್ತಿನಿಂಪಡುವ ಮೂಗಯ್ಯ ನೆಲನಂ ।
ಬಿಸುಟು ನೀನಗುಟೆಪುದು ಪುರುಷದೊಳಕ್ಕುಂ ಬೆಳರ್ತ ಮಣ್ ಮುಂ ಹವಳವರಿಯ ಕ ॥
ಲ್ಲೆಸೆಗುಮತ್ತಂ ಮನುಷ್ಯನೊಂದರ್ಧದೊಳೆ ಕುಮುದ ಬಣ್ಣದೊಂದಿಲಿ(ರಿ)ಯುಮಿರ್ಕು ।
ಮಿಸುವ ಕುಜಿಪನೆ ಮೂಱಾಳಮಟ್ಟದಿಂ ಪಡುವಧಾರೆ ಭೋರ್ಗರೆದುದಿಸಿ ಬರ್ಕುಂ ॥"[೨೬]

ನಾಯತ್ತಿಗಿಡದ ಪೂರ್ವಕ್ಕೆ ಹುತ್ತು ಇರಲು ಆ ಹುತ್ತಿನಿಂದ ಪಶ್ಚಿಮಕ್ಕೆ ಮೂರು ಮೊಳ ಅಂತರದಲ್ಲಿ ಒಂದು ಆಳ ಭೂಮಿಯನ್ನು ಅಗೆಯಲು ಬಿಳಿಯ ಮಣ್ಣು ಸಾಧಾರಣ (ಹವಣೆ) ಅಳತೆಯ ಕಲ್ಲುಗಳು ಕಾಣುವವು. ಅಲ್ಲಿಂದ ೧॥ ಆಳ ಪ್ರಮಾಣದ ತಗ್ಗಿನಲ್ಲಿ ಕರೇ ಕಮಲದ ಬಣ್ಣದ ಮಣ್ಣಿರುವುದು. ಅಲ್ಲಿಂದ ಮುರಾಳು ಮಟ್ಟದಲ್ಲಿ ಪಶ್ಚಿಮ ದಿಕ್ಕಿನಿಂದ ಜಲಧಾರೆಗಳು ಭೋರ್ಗರೆಯಲುದಯಿಸಿ ಬರುವವು ಎಂದು ವಿವರಿಸುತ್ತಾನೆ.

"ಬಳಸಿದೆಳವಾಟೆಯ ನಡುವಿರ್ದ ಪುತ್ತಿನಿಂ ಬಡಗಲ್ ಮೂಗಯ್ಯಿನತ್ತಲ್ ।
ತಳರ್ದಗುಟೊಡ್ಡರೆ ಪುರುಷದೊಳಕ್ಕು ಮಸಿಯಬಣ್ಣದ ಕರ್ಪಿರಲ್ ನಿಂದ ॥
ತ್ತಲೆ ತೋಡಲರಿದಾಳದಂತಪ್ಪ ಮಣ್ಣಿಂ ಭೃಂಗದಾಕಾರಮಕ್ಕುಮ ।
ಗುಟ್ ನಿಧಿ(ನೆಡ್ಡೆ) ಪುರುಷದಿಂದೊಗೆಮುಪ್ಪಕ್ಕುಂ ಬಡಗದೆಸೆಯೊಳ್ ನೀರಧಾರೆಯಕ್ಕುಂ ॥"[೨೭]

ಎಳೆಯ ಬಾಳೆ ಗಿಡ, ಹುತ್ತು ಇವುಗಳ ನಡುವೆ ಉತ್ತರದ ಕಡೆಗೆ ಮೂರು ಮೊಳ ಅಂತರದಲ್ಲಿ ಒಂದು ಆಳ ತೆಗ್ಗು ತೆಗೆಯಲು ಮಸಿಯ ಬಣ್ಣವುಳ್ಳ ಅರೆದಾಳದಂತಿರುವ ಮಣ್ಣು ಬರುವುದು. ನಂತರ ಪುರುಷ ಪ್ರಮಾಣದಷ್ಟು ಅಗಿಯಲು ಉತ್ತರ ದಿಕ್ಕಿನಿಂದ ನೀರಧಾರೆ ಬರುವುದು ಎಂದು ಹೇಳುತ್ತಾನೆ.

"ಆವುದಾದೊಡಮಕ್ಕೆ ಭೂಜಾತಮಡಿಯೊಳೆ ಕಪ್ಪೆಯಿರ್ದೊಡೆ ಕೆಳಗೆ ।
ಜೀವನಂ ನಾಲ್ಕು ಪುರುಷವರೆಯೊಳಿರ್ಕ್ಕುಮಿಪ್ಪುರುಷದಲ್ಲಿ ಕಾಣ್ಬರ್ ಮುಂಗುರಿಯಂ ॥
ಭಾವಿಸಲ್ ನಿಶಿತಚ್ಛವಿ(ತ್ವದಿ)ಯಪ್ಪ ಮಣ್ಣುಂ ಕಪ್ಪೆಯುಂ ಕಪ್ಪದಲ್ಲಿರ್ಕು ಕಲ್ಲಿಂ ಕೆಳಗಿರ್ದುದು ।
ವಾರಿ(ವಿ)ಯೆಂದಱಿಸಿದಂ ಗಿರಿನಗರಾಧೀಶ್ವರಂ ಱಟ್ಟಾಂಕಂ ॥"[೨೮]

ಯಾವುದೇ ಜಾತಿಯ ಗಿಡವಾಗಲಿ ಅದರ ತಳದಲ್ಲಿ ಕಪ್ಪೆ ಇದ್ದರೆ ಕೆಳಗೆ ನಾಲ್ಕು ಆಳ ಉದ್ದ ಭೂಮಿಯನ್ನು ಅಗೆಯಲು ಕಪ್ಪಾದ ಮಣ್ಣನ್ನು ಕಪ್ಪೆಯನ್ನು ಕಾಣುವಿರಿ. ಅದರ ಕೆಳಗೆ ಕಲ್ಲು ಇರುವುದು. ಆ ಕಲ್ಲಿನ ಕೆಳಭಾಗದಲ್ಲಿ ಜಲ ಇರುವುದು ಎಂದು ರಟ್ಟಮತಕಾರನು ಹೇಳುತ್ತಾನೆ.

"ಬಡಗ ಪುತ್ತಿರ್ದು ಹುಲಿಗಿಲಿಂ ತೆಂಕ ಕಯ್ಕೆಯಿಂದಗುಟ್ದಲ್ಲಿ ಪುರುಷಾರ್ಧದೊಳ್ ।
ತೊಡಗು ಕಚ್ಚಪಂ ಬಟಿಕಂ ಮೂಡಲ್ ಧಾರೆಯತ್ತಲ್ ಬರ್ಪ ಪಚ್ಚನೆ ಸೆಲೆಯಾ ಸೆಲೆಯಿಂ ॥
ಬಡಗಲ್ ಭೋರನೆ ಧಾರೆ ಬರುತಿರ್ಕು ಮೂಱಾಳ ಮಟ್ಟದೊಳ್ ಪುರುಷಮಾತ್ರಂ
ಬಡೆಯದಗುಟಿಪುದು ವಸುಧೆಯೊಳೆ ಸುಕವಿನಿಧಾನನೆಂದೋಜೆಯಿಂದಂ ॥"[೨೯]

ಉತ್ತರ ದಿಕ್ಕಿನ ಕಡೆಗೆ ಹುತ್ತು, ದಕ್ಷಿಣದಲ್ಲಿ ಹುಲಿಗಿಲಿಗಿಡ ಇರಲು ಇವುಗಳ ಮಧ್ಯದಲ್ಲಿ ೧॥ ಆಳದಷ್ಟು ಅಗಿಯಲು ಪೂರ್ವದಿಕ್ಕಿನಿಂದ ಚಿಕ್ಕ ಜಲಧಾರೆ ಬರುವುದು. ಅಲ್ಲಿಂದ ಮೂರು ಆಳದಷ್ಟು ತೆಗೆಯಲು ಉತ್ತರ ದಿಕ್ಕಿನ ಸೆಲೆ ಬರುವುದು ಎಂದು ಹೇಳುತ್ತಾನೆ.

"ತಾಱೆಯ ಮರದಿಂ ತೆಂಕಲ್ ।
ತೋರುವ ಫಣಿಗೃಹದ ಮರದ ಮೂಡಣ ದೆಸೆಯೊಳ್ ॥
ಕೀಱೆಯಗುಟ್ದೊಂದು ಮೂಡಲ್ ।
ತೋಱುಗು ಪುರುಷವರೆಯೊಳೊಪ್ಪುವ ಜಲಮುಂ ॥"[೩೦]

ತಾಳೆಯ ಗಿಡದ ದಕ್ಷಿಣದಲ್ಲಿ ಹುತ್ತು ಇರಲು ಆ ಗಿಡದ ಪೂರ್ವ ದಿಕ್ಕಿನಲ್ಲಿ ೧॥ ಆಳದಷ್ಟು ಅಗಿಯಲು ಪೂರ್ವ ದಿಕ್ಕಿನಲ್ಲಿ ಜಲದ ಸೆಲೆಯು ಕಂಡುಬರುವುದು ಎನ್ನುತ್ತಾರೆ.

"ತೆಂಗುಂ ತಾಱುಂ ಫಣಿನಿಲ ।
ಯಂಗಳ್ ನೆಲೆಸಿದೊಡೆ ಪಡುವಲಱುಗೆಯ್ಯಿರಲಂದಂ ॥
ದಗುಟಲ್ಕೆ ನಾಲ್ಕು ಪುರುಷದೆ ।
ಗಂಗೋಪಮಮೆನಿಪ ಧಾರೆ ತೆಂಕಣಿನೊಸರ್ಗುಂ ॥"[೩೧]

ತೆಂಗಿನಗಿಡ, ತಾಳೆಯಗಿಡ, ಹುತ್ತು ಇವು ಮೂರು ಇರುವಲ್ಲಿ ಪಶ್ಚಿಮ ದಿಕ್ಕಿನಲ್ಲಿ ೬ ಮೊಳ ಅಂತರದಲ್ಲಿ ನಾಲ್ಕು ಪುರುಷ ಪ್ರಮಾಣ ಭೂಮಿಯನ್ನು ಅಗಿಯಲು ದಕ್ಷಿಣ ದಿಕ್ಕಿನಿಂದ ಗಂಗಾನದಿಯು ಹರಿಯುವಂತೆ ಜಲ ಬರುವುದು ಎಂದು ಹೇಳುತ್ತಾನೆ.

"ಪಡುವ ಪುತ್ತುಶ್ವ ಕಡವಿಂ? ಮೂಡಲ್ ಮೂಗಯ್ಮಾಣ್ಡ ಗುಟಿ ಪುರುಷಾಂತರದೊಳ್ ।
ಪೊನ್ನ ಬಣ್ಣದ ಕಪ್ಪೆ ಪೀತವರ್ಣದ ಮಣ್ ಆಮಣ್ಣಿನಿಂದತ್ತ ॥
ಪಡುವಮೊಗೆವಂತಪ್ಪ ಧಾರೆಲೋಹಗಂಧಂ ನಾಱುಗುಮುಪ್ಪಕ್ಕುಂ ಸುತ್ತವೆತ್ತಿ ।
ಬಡಗಣಾ ಧಾರೆ ಯಿನಿದಪ್ಪ ನೀರೆತ್ತ(ಕ್ಕ)ಲು ಪುರುಷರವಾಂತರದೊಳ್ ಱಟ್ಟುಗಾಂಕ ॥"[೩೨]

ಹುತ್ತದ ಪೂರ್ವ ದಿಕ್ಕಿನಲ್ಲಿ ಮೂರು ಮೊಳ ಅಂತರದಲ್ಲಿ ಒಂದು ಆಳ ಅಗಿಯಲು ಬಂಗಾರ ಬಣ್ಣದ ಕಪ್ಪೆ, ಹಳದಿ ಬಣ್ಣದ ಮಣ್ಣು, ಆ ಮಣ್ಣಿನ ಪಶ್ಚಿಮ ದಿಕ್ಕಿನಲ್ಲಿ ಕಬ್ಬಿಣದ ವಾಸನೆಯು ಬರುತ್ತಿರಲು ಒಂದು ಆಳ; ಒಳ ಭಾಗದಲ್ಲಿ ಉತ್ತರ ದಿಕ್ಕಿನಲ್ಲಿ ಜಲಧಾರೆ ಬರುವುದು.

"ಬಡಗಲು ಪುತ್ತನುಳ್ಳ ಮುತ್ತದ ಬದರಿಯ ಕಕ್ಕೆಯವಱಿಂ ಮೂಗೆಯ್ಯಿರಿಸಿ ।
ತಡೆಯದೆ ಯಗುಟಲೊಪ್ಪುರುಷದೊಳೆ ಕೂರ್ಮಂ ಪೊರೆಯಬಣ್ಣದ ಮಣಲಮಣ್ಣುಂ
ತೊಡರ್ಗುಮಾ ಮಣ್ಣಡಿಯೊಳ್ ಧಾರೆ ದಕ್ಷಿಣಾಂತರದೊಳ್ ಬಟಿಕಿನಿಧಾರೆ ಈಶಾನ್ಯದತ್ತಲ್ ।
ಕೆಡೆದು ಸವಿಯಕ್ಕು ಭಾವಿಯಗುಣ್ಬುಂ ಮೂಱಾಳಮಟ್ಟದಿಂ ಪರಿಸಮಾಪ್ತಂ ॥"[೩೩]

ಉತ್ತರ ದಿಕ್ಕಿನಲ್ಲಿ ಹುತ್ತು, ಮುತ್ತಲ, ಬದರಿ, ಕಕ್ಕೆಯ ಗಿಡಗಳ ಮೂರು ಮೊಳ ಅಂತರದಲ್ಲಿ ಒಂದು ಆಳ ಅಗಿಯಲು ಆಮೆಯ ಪರಿಯಂತಿರುವ ಬಣ್ಣದ ಮಣ್ಣು, ಆ ಮಣ್ಣಿನ ಕೆಳಭಾಗದಲ್ಲಿ ದಕ್ಷಿಣದ ಕಡೆಗಳಿಂದ ಸೆಲೆಗಳುಂಟು. ಅಲ್ಲಿಂದ ಮೂರು ಆಳ ಪ್ರಮಾಣ ಅಗಿಯಲು ಈಶಾನ್ಯ ದಿಕ್ಕಿನ ಕಡೆಯಿಂದ ಜಲಧಾರೆ ಬರುವುದೆಂದು ವಿವರಿಸುತ್ತಾರೆ.

"ಆಲಂ ಗೋಣಿಯೆ (ಪಾರ್ದಂ) ಪುಲಿಗಿಲ್ ।
ಲೋಲದೆ ತಾಂ ಪೂ(ಪಲ)ಸು ಫಲಸಮೇತಂ ಬೆಳೆದಿಂ ॥
ಸೋಲದಿ ನೊಱಗಿರೆ(ದ) ದೆಸೆಗಳ ।
ನಾಲೋಕಿಸಿ ಮೂಱು ಕೆಯ್ಯ ನೀನಗುಟಿ ಜಲಂ ॥"[೩೪]

ಆಲದಗಿಡ, ಹುಲುಗಲಗಿಡ, ಹಲಸಿನಗಿಡ ಇವು ಫಲಸಮೇತವಾಗಿ ಬೆಳೆದಿರಲು ಇವುಗಳಿಂದ ಮೂರು ಮೊಳದ ಅಂತರದಲ್ಲಿರುವ ಮೂರು ಆಳ ಅಗಿಯಲು ಜಲ ಕಂಡುಬರುವುದು ಎಂದು ರಟ್ಟಮತಕಾರ ವಿವರಿಸುತ್ತಾನೆ.

೩. ಲೋಕೋಪಕಾರ

ಚಾವುಂಡರಾಯನ ಲೋಕೋಪಕಾರ ಮಾನವನ ಅವಶ್ಯಕವಾಗಿರುವ ಲೌಕಿಕ ಜ್ಞಾನವನ್ನು ಒಳಗೊಂಡ ಶಾಸ್ತ್ರ ಕೃತಿ. ಪೀಠಿಕಾ ಪ್ರಕರಣದ ೨೩ನೇಯ ಕಂದ ಪದ್ಯದಲ್ಲಿ ಕವಿಯು

"ಮೇದಿನಿಯುಪಕಾರಂ ಕಲಿ।
ಪೋದುಗಳೆನಿತೊಳವವಿಲ್ಲಿ ನೆಲಸಿರ್ದು ಬುಧೋ ॥
ಪಾದೇಯಮಾದ ದೂಸಱಿ ।
ನಾದುದೊ ಲೋಕೋಪಕಾರಮೇನನ್ವರ್ಥಂ"(೧–೨೩)

ಎಂದಿರುವುದರಿಂದ ಇದು ಲೋಕೋಪಕಾರ ಹೆಸರಿಗೆ ಅನ್ವರ್ಥಕ ಗ್ರಂಥವಾಗಿದೆ. ಈ ಕೃತಿಯನ್ನು ಪ್ರತಿ ಮಾಡಿದ ಅಪ್ಪಯ್ಯನೆಂಬ ಲಿಪಿಕಾರ ಇದನ್ನು ಜನೋಪಕಾರದ 'ಪುಸ್ತಕ' ಎಂದು ಕರೆದಿದ್ದಾನೆ.

"————ಶಾಲಿವಾಹನ ಶಕ ವರ್ಷ ೧೫೫೪ನೆಯ ಅಂಗೀರಸ ಸಂವತ್ಸರದ ವೃಶ್ಚಿಕಮಾಸ

೧೬ನೆ ಪುರ್ಣಿಮಿಯ ಶುಕ್ರವಾರದಲ್ಲಿ ಜ್ಯೋತಿಸರ ಮಗ ಅಪ್ಪಯ್ಯನು ಅಭ್ಯಾಸ ನಿಮಿತ್ತವಾಗಿ ಬಱದ ಜನೋಪಕಾಱದ ಪುಸ್ತಕಕ್ಕೆ ಮ(ಂಗ)ಲ ಮಸ್ತು ಭದ್ರ ಭೂಯತ್ ಶ್ರೀ ಶ್ರೀ ಶ್ರೀ ಶ್ರೀ"[೩೫]

(ಕನ್ನಡದ ಪ್ರಥಮ ವಿಶ್ವಕೋಶ ಎಂಬ ಗೌರವಕ್ಕೆ ಅರ್ಹವಾಗಿದೆ. ಅಲ್ಲದೆ "ಫಲವುಂ ಲೌಕಿಕ ಶಾಸ್ತ್ರಮುಳ್ಳುದರಿಂದ ಈ ಲೋಕೋಪಕಾರಂ ಜಗತಿಲಕಂ" ಎಂದೂ ಮೇದಿನಿಯುಪಕಾರ ಎಂದೂ ಶಾಸ್ತ್ರಕಾರನೇ ಇದರ ಮಹತ್ವವನ್ನು ಹೇಳಿಕೊಂಡಿದ್ದಾನೆ. ಹನ್ನೆರಡು ಅಧಿಕಾರಗಳಿಂದ ರಚನೆಗೊಂಡ ಈ ಕೃತಿ ಕಂದ ಪದ್ಯಗಳ ಜೊತೆಗೆ ೯೪೦ ವೃತ್ತಗಳನ್ನು ಒಳಗೊಂಡಿದೆ. ಪಂಚಾಂಗ, ವಾಸ್ತು, ಸಂಘಜೀವನ, ಆಯುರ್ವೇದ, ಶಕುನ, ನರವೈದ್ಯ, ಸೂಪಶಾಸ್ತ್ರ, ವಿಷವೈದ್ಯ, ಶಕುನಶಾಸ್ತ್ರ, ಅಶ್ವಶಾಸ್ತ್ರ, ಗಜಶಾಸ್ತ್ರ, ಶಿಲ್ಪಶಾಸ್ತ್ರ, ಜಲಶಾಸ್ತ್ರ ಎಂಬಿತ್ಯಾದಿ ಹಲವುಶಾಸ್ತ್ರ ವಿಷಯಗಳನ್ನು ಇದು ಒಳಗೊಂಡಿದೆ. ಇವುಗಳ ಜೊತೆಗೆ ಕೃಷಿಶಾಸ್ತ್ರ ಸಂಬಂಧಿಸಿದ ವಿಷಯ ವ್ಯಾಪ್ತಿ ಎರಡು ಅಧಿಕಾರಗಳಿಗೆ ಮೀಸಲಾಗಿದೆ)

ಚಾವುಂಡರಾಯ ಪಂಚಮಾಧಿಕಾರಧಲ್ಲಿ 'ಉದಕಾರ್ಗಳಂ' ಎಂದೂ ಹೇಳಿ (೪೦)ನಲವತ್ತು ಪದ್ಯಗಳಲ್ಲಿ ಜಲಸಂಬಂಧಿ ವಿಷಯವನ್ನು ಪ್ರಸ್ತಾಪಿಸಿದ್ದಾನೆ. ನೀರು ಜೀವಕ್ಕೆ ಅತ್ಯವಶ್ಯ. ಕೃಷಿ ಪ್ರಧಾನವಾದ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಕೆರೆ ನೀರಾವರಿ ಪದ್ಧತಿ, ಬಾವಿ ನೀರಾವರಿ ಪದ್ಧತಿ ಮೊದಲಿನಿಂಲೂ ಅವ್ಯಹತವಾಗಿ ಬೆಳೆದು ಕೊಂಡುಬಂದಿದೆ. ಇದಕ್ಕೆ ನಿದರ್ಶನವೆಂಬಂತೆ ನಾಡಿನಲ್ಲಿ ಸಿಗುವ ಅನೇಕ ಕೆರೆ, ಕುಂಟೆಗಳು, ಬಾವಿಗಳು, ಪುಷ್ಕರಣಿಗಳು ಐತಿಹಾಸಿಕ ಆಕರಗಳಾಗಿ ಗೋಚರಿಸುತ್ತವೆ. ಹಾಗೇ ನೋಡಿದರೆ ಶಾಸನಗಳಂತೆ, ದೇವಾಲಯಗಳಂತೆ, ಮೂರ್ತಿ ಶಿಲ್ಪಿಗಳಂತೆ ಕರ್ನಾಟಕದ ಕೆರೆ ಬಾವಿಗಳ ಕೋಶ ಎಂಬ ಹೆಸರಿನ ಸಂಪುಟಗಳನ್ನು ಸಿದ್ದಪಡಿಸುವುದು ಚಾರಿತ್ರಿಕ ದೃಷ್ಟಿಯಿಂದ ಜರೂರಿನ ಕೆಲಸವಾಗಿದೆ. ಅಂದರೆ ವೈವಿಧ್ಯಮಯವಾದ ಕೆರೆ, ಬಾವಿಗಳ ಕಟ್ಟಡ ಅವುಗಳ ಸಂರಕ್ಷಣೆ, ದುರಸ್ತಿ ಹಾಗೂ ಉಪಯೋಗಕ್ಕಾಗಿ ಬಿಟ್ಟ ದಾನ ದತ್ತಿಗಳು ಅಧ್ಯಯನ ಯೋಗ್ಯವಾಗಿವೆ.

ಲೋಕೋಪಕಾರದಲ್ಲಿ ಜಲಶೋಧದ ಕುರುಹುಗಳನ್ನು ಕುರಿತು ಉಲ್ಲೇಖಗಳಿವೆ. ಶಾಸ್ತ್ರಕಾರ ಜಲಾಧಿಪತಿಯಾದ ವರುಣನನ್ನು ಅನುರಾಧ, ಹಸ್ತ, ಪುಷ್ಯ, ಧನಿಷ್ಠಾ, ಉತ್ತರಾಷಾಡ, ಭಾದ್ರಪದ ಹಾಗೂ ವಿಶಾಖ ನಕ್ಷತ್ರಗಳಲ್ಲಿ ಪೂಜಿಸಿ ಬಾವಿಯನ್ನು ತೋಡಿಸಲು ಜಲಸಿದ್ಧಿಸುವುದೆಂದು ಹೇಳುತ್ತಾನೆ. ಗ್ರಾಮಗಳಲ್ಲಿ ವಾಯುವ್ಯ ದಿಕ್ಕನ್ನು ಬಿಟ್ಟು ಬಡಗಣ ದಿಕ್ಕಿನಲ್ಲಿ ಬಾವಿ, ಒಕ್ಕರಣಿ, ತಟಾಕಗಳನ್ನು ಚಂದವಾಗಿ ತೋಡಿಸಬಹುದೆಂದು ತಿಳಿಸುತ್ತಾನೆ.

"ತುಱುಗಿ ತಳಿರ್ತು ಪೂತು ಫಲಮಾದೆಲೆಯಿಕ್ಕಿ(ಕ್ಕ)ದ ಕೊಂಬುಗಳ್ ನೆಲ ।
ಕ್ಕೊಱಗಿದ ನುಣ್ಪುವೆತ್ತ ಮರನುಳ್ಳೆಡೆಯೊಳ್ ಜಳಮಕ್ಕುಮಲ್ಲಿಯೆಂ ॥
ದಱ್ಪುದು ತಾಱ್ದಂಕಿದ ನಱುಂಕಿದ ಕೊಂಬೊಣಗಿರ್ದ ಪೊಟ್ಟೆವೋ ।
ದೊಱಗಿದ ವೃಕ್ಷದಿಂದಱ್ಪುದಾಯೆಡೆಯೊಳ್ ಜಳಮಾಗದೆಂಬುದಂ ॥"[೩೬]

ಈ ಮೇಲಿನ ವೃತ್ತದಲ್ಲಿ ಭೂಮಿಯ ಯಾವ ಸ್ಥಳದಲ್ಲಿ ನೀರು ಸಿಗುತ್ತದೆಂಬುವದನ್ನು ತಿಳಿಸುತ್ತಾನೆ. ಸಂಪೂರ್ಣವಾಗಿ ತಳಿರುಗಳಿಂದ, ಹಣ್ಣುಗಳಿಂದ, ಹಸಿರಿನಿಂದ, ನಳನಳಿಸುವ ನೆಲಕ್ಕೆ ಒರಗಿದ ಮರಗಳ ಗುಂಪು ಇದ್ದಲ್ಲಿ ಜಲ ಹುಟ್ಟುವುದೆಂದು ತಿಳಿಸುತ್ತಾನೆ. ಜಲನಿಕ್ಷೇಪ ಹಸಿರು ಹುಲ್ಲು ಹುಟ್ಟಿದ ಠಾವಿನಲ್ಲಿ ಇರುತ್ತದೆ. ಎಂದು ಹೇಳುವ ಚಾವುಂಡಾರಾಯ ಕೆಂಪು ಚಿಗುರುಗಳಿಂದ ಕೂಡಿದ ಹುಲಿಗಿಲ ಮರಗಳು ಹುಟ್ಟಿದಂತಹ ಠಾವಿನಲ್ಲಿ ಮಣ್ಣುಕೆಂಪಾಗಿದ್ದರೆ, ಜಲನಿಕ್ಷೇಪ ಇರುವುದೆಂದು ತಿಳಿಸುತ್ತಾನೆ. ಹಾಗೆಯೇ

ಬಾವಿಯನ್ನು ತೋಡುವಾಗ ಕಲ್ಲುಗಳು, ವೈಢೂರ್ಯ, ಛಾಯೆ, ಅತ್ತಿಹಣ್ಣಿನ ಛಾಯೆ, ಜೇನುತುಪ್ಪದ ಛಾಯೆ ಇರುವ ಮುಂತಾದ ಸ್ಥಳಗಳಲ್ಲಿ ನೀರಿನ ಪ್ರಮಾಣ ಹೆಚ್ಚುಸಿಗುವದೆಂದು ಉಲ್ಲೇಖಿಸುತ್ತಾನೆ. ಹಾಗೆಯೇ ಮೂಡಲಾದಿಯಾಗಿ ಎಂಟು ದಿಕ್ಕುಗಳೋಳ್ ಕಲ್ಲು ಹುಟ್ಟಲು ಅಲ್ಲಿ ನೀರಿನ ನಿಕ್ಷೇಪ ಬಹಳಷ್ಟಿರುವುದು. ಹೆಚ್ಚು ಮಳೆ ಬೀಳುವ ಸ್ಥಳದಲ್ಲಿ ಆ ಸ್ಥಳದಿಂದ ಪಶ್ಚಿಮ ದಿಕ್ಕಿನಲ್ಲಿ ಮೂರು ಹಸ್ತ ಪ್ರಮಾಣದ ಭೂಮಿಯ ಬಿಟ್ಟು ತೋಡಿಸಲ್ ಅಲ್ಲಿ ಒಂದು ಆಳ ಪ್ರಮಾಣದಲ್ಲಿಯೇ ನೀರು ಸಿಗುವುದು.

"ಮುಳ್ಳಿಲ್ಲದ ಬನ್ನಿಯಮರ ।
ನುಳ್ಳೆಡೆಯೊಳಮಲ್ಲದಂದು ಮೇಣ್ ಪತ್ತುಗಳೊಂ ॥
ದುಳ್ಳೆಡೆಯೊಳ್ ಬೆಳ್ವುತ್ತುಗ ।
ಉಳ್ಳೆಡೆಯೊಳ್ ವೊಂದು ಪುರುಷದೊಳ್ ನೀರಕ್ಕುಂ ॥"[೩೭]

ಪದ್ಯದಲ್ಲಿ ತಿಳಿಸಿರುವಂತೆ ಮುಳ್ಳಿಲ್ಲದ ಬನ್ನಿಯ ಮರವಿದ್ದು, ಅಲ್ಲಿ ಹುತ್ತುವುಳ್ಳ ಸ್ಥಳವಿದ್ದರೆ ಪುರುಷ ಪ್ರಮಾಣದಲ್ಲಿ ನೀರು ಹುಟ್ಟುವುದೆಂದು ತಿಳಿಸುತ್ತಾನೆ. ಭೂಮಿ ಹೊಗೆಯಾಡುತ್ತಿರಲು ಹುಲ್ಲು ಹಸಿರಾಗಿ ಬೆಳೆದು ನಳನಳಿಸುತ್ತಿರುವ ಜಾಗದಲ್ಲಿ ಎರಡು ಪುರುಷ ಪ್ರಮಾಣ ನೀರು, ಭೂಮಿಯನ್ನು ಬಾರಿಸಲು ಧ್ವನಿಯಾದೊಡೆ, ಆ ಜಾಗದಲ್ಲಿ ಬೆಳ್ಳನೆಯ ಕಲ್ಲುಗಳು ಇದ್ದರೆ, ಮರದ ಕೊಂಬೆ ನೆಲವನ್ನು ಮುಟ್ಟಿದ್ದರೆ ಈ ಕುರುಹು ಇರುವ ಜಾಗದಲ್ಲಿ ಎರಡು ಪುರುಷ ಪ್ರಮಾಣದ ನೀರು ಹುಟ್ಟುವುದಾಗಿ ಉಲ್ಲೇಖಿಸುತ್ತಾನೆ. ನೇರಲ ಮರದಿಂದ ಮೂಡಲಕಡೆಗೆ ಹುತ್ತ, ಆ ಹುತ್ತದಿಂದ ತೆಂಕಣದ ಎರಡು ಹಸ್ತ ಪ್ರಮಾಣದಲ್ಲಿ ಭೂಮಿಯನ್ನು ತೋಡಿಸಲು ಎರಡು ಪುರುಷ ಪ್ರಮಾಣದಲ್ಲಿ ನೀರು ಹುಟ್ಟುವುದು. ಹಾಗೆಯೇ ಲೊಕ್ಕಿಮರ ಬೆಳೆದ ಸಮೀಪದಲ್ಲಿಯೇ ಹುತ್ತವಿದ್ದು ಅದರಿಂದ ಮೂರು ಹಸ್ತ ಭೂಮಿಯನ್ನು ದಕ್ಷಿಣ ಭಾಗಕ್ಕೆ ಬಿಟ್ಟು ಬಾವಿ ತೋಡಿಸಲು ಎರಡು ಪುರುಷ ಪ್ರಮಾಣದಲ್ಲಿ, ಕಂಚಿ ಬದನಗಿಡ, ಕಿರು ತೆಂಗಿನಗಿಡ, ನೆಲ್ಲಿಗಿಡ ಇವು ಚೆನ್ನಾಗಿ ಬೆಳೆದ ಭಾಗದಿಂದ, ಎರಡು ಹಸ್ತ ಪ್ರಮಾಣ ಬಿಟ್ಟು ತೆಂಕಿನ ದಿಕ್ಕಿನಲ್ಲಿ ಬಾವಿ ತೋಡಿಸಲು, ಮೂರು ಪ್ರಮಾಣದಲ್ಲಿ ಮುಳ್ಳುಗಳುಳ್ಳಂತಹ ಮರಗಳ ಗುಂಪುಗಳ ನಡುವೆ ಮತ್ತು ಮಳ್ಳುಗಳ್ಳಿಲ್ಲದ ಮರಗಳ ಗುಂಪಿನಲ್ಲಿ, ಮುಳ್ಳುಳ್ಳ ಮರ ಹುಟ್ಟಿದೆಡೆಯಿಂದ ಪಡುವಲ ದಿಕ್ಕಿಗೆ ಭೂಮಿ ಅಗೆಯಲು ಐದು ಪುರುಷ ಪ್ರಮಾಣ, ಹಾಗೆಯೇ ಎರನಮರ, ಮುತ್ತದಮರ, ಬೆಲ್ಲಉತ್ತದಮರ, ಮತ್ತಿಯಮರ ಕೂಡಿ ಒಂದಾಗಿ ಬೆಳೆದ ಠಾವಿನಿಂದ ಬಡಗ ದಿಕ್ಕಿಗೆ ಮೂರು ಪುರುಷ ಪ್ರಮಾಣದ ನೀರು, ಅತ್ತಿಯಮರ ಹುಟ್ಟಿದ ಜಾಗದಿಂದ ಪಡುವಲುದಿಂದ ಮೂರು ಹಸ್ತ ಪ್ರಮಾಣದ ಭೂಮಿಯನ್ನು ಬಿಟ್ಟು ತೋಡಿಸಲು ಮೂರು ಪುರುಷ ಪ್ರಮಾಣದ ನೀರು ಇರುವುದಾಗಿ ತಿಳಿಸುತ್ತಾನೆ.

ಹೀಗೆ ಮರಗಿಡಗಳಿದ್ದಲ್ಲಿ, ಹುತ್ತುಗಳಿದ್ದಲ್ಲಿ, ಕಲ್ಲುಮಣ್ಣುಗಳ ಪ್ರಭೇದಗಳಿದ್ದಲ್ಲಿ ಜಲ ನಿಕ್ಷೇಪ ಇರುವುದನ್ನು ಉಲ್ಲೇಖಿಸುವ ಶಾಸ್ತ್ರಕಾರ ಮುಂದುವರೆದು ಮಣ್ಣು ಕಪ್ಪಾಗಿದ್ದ ಜಾಗದಲ್ಲಿ ಹುಟ್ಟಿದ ನೀರು ಬಗರಾಗಿಯೂ, ನೀಲಿ ಮತ್ತು ಬಿಳಿ ಬಣ್ಣದ ಮಣ್ಣು ಇದ್ದಲ್ಲಿ ನೀರು ಸ್ವಾದವಾಗಿ, ಬೂದುಬಣ್ಣ ಮತ್ತು ಬಂಗಾರ ಬಣ್ಣದಿಂದ ಬೆರೆಕೆಗೊಂಡ ಕೆಂಪು ಮಣ್ಣಿನಲ್ಲಿ ಹುಟ್ಟಿದ ನೀರು ಕಹಿಯಾಗಿಯೂ, ಬಿಳಿ, ಕೆಂಪು ಮಿಶ್ರಣದಿಂದ ಕೂಡಿದ ಮಣ್ಣಿನಲ್ಲಿ ಉಪ್ಪು ನೀರು ಬರುವುದಾಗಿ ಈ ಕೆಳಗಿನ ಪದ್ಯದಲ್ಲಿ ಉಲ್ಲೇಖಿಸುತ್ತಾನೆ.

"ಉದಕಂ ಕರ್ಪೆಸದಿರ್ಪ ಮಣ್ಣೊಳೊಗಱಕ್ಕುಂ ನೀಲಿಯಂ ಪೋಲ್ವ ಬ ।
ಣ್ಣದ ಮಣ್ಣೊಳ್ ಬಿಳಿದಪ್ಪ ಮಣ್ಣೊಳಿನಿದಕ್ಕುಂ ಧೂಸರಂಪೊನ್ನ ಬ ॥
ಣ್ಣದ ಮಣ್ಣೊಳ್ ಪರಲಾಗಿ ಕೆಂಪೆಸವ ಮಣ್ಣೊಳ್ ಕೃಪೆಯಾಗಿರ್ಕುಮೊಂ ।
ದಿದ ಬೆಳ್ಗಂಪೆಸೆದಿರ್ಪ ಮಣ್ಣೊದವಿಂದದುಪ್ಪಕ್ಕು (ಮವ್ಯಾ) ನಿರ್ವ್ಯಾಜದಿಂ ॥"[೩೮]

ಹೀಗೆ ನೀರಿನ ನೆಲೆಯನ್ನು ತಿಳಿಸುವ ಶಾಸ್ತ್ರಕಾರ ಬಾವಿ ತೋಡಿಸುವಾಗ ಕಲ್ಲು ಅಡ್ಡ ಬಂದರೆ ಅದನ್ನು ತೆಗೆಯುವ ಕ್ರಮವನ್ನು ನಾಲ್ಕು ಪದ್ಯಗಳಲ್ಲಿ ವಿವರಿಸುತ್ತಾನೆ.

"ಸಿಲೆಯೊಡೆಯದಂದು ತುಂಬರ ।
ಪಲಾಶದಿಂಧನಮನೊಟ್ಟಿ ಸುಟ್ಟಂ ತದಱೊಳ್ ॥
ಜಲಮಂ ದುಗ್ಧಮುಮಂ ಸಲೆ ।
ತಳಿಯಲೊಡಂ ಸಿಡಿದೊ(ಲೆಯೊ)ಡೆದು ಪಾಱುಗಂ ತತ್ಕ್ಷಣದೊಳ್ ॥೩೭॥

ಕುದಿಯಿಸುಗೆ ತೋಯದೊಳ್ ಮು ।
ತ್ತದ ಬೂದಿಯನಕ್ಕೆ ಶಿವೆಯ ಬೂದಿಯನಕ್ಕಂ ॥
ತದನುೞ ಸುಟ್ಟಱಿಯೊಳ್ ಮೂ ।
ಱುದಿವಸಮುಂ ತಳಿಯೆ ಶಿಲೆ ಕರಂ ಮೃದುವಕ್ಕುಂ ॥೩೮॥

ಅಳೆಯಂ ಕಳ್ಳಂ ಬದರಿಯ ।
ಫಳಮಂ ಗಂಜೀಯುಮನೇೞುದಿನಮಿರಿಸಿ ಶಿಲಾ ॥
ತಳಮಂ ಸುಟ್ಟಂಬಾಗಿರೆ ।
ತಳಿದೊಡೆ ಭೇದಿಸುಗುಮಱಿಯ ಮೊದಲಱುವಿನೆಗಂ ॥ ॥೩೯॥

ರವಿದುಗ್ಧಂ ಪಾರಿವದೆ ।
ಚ್ಚವುಂದುರದ ವಿಷ್ಟಿ ತಗಱ ಕೋಡಿನ ಮಷಿಯೆಂ ॥
ಬಿವನೊರಸಿ ಕಾಸಿ ನೀರೂ ।
ಡುವುದಟಿಯಂ ತೈಲತಕ್ರದೊಳ್ ಪವಿಯಕ್ಕುಂ॥"[೩೯]

ಕಲ್ಲು ಅಡ್ಡ ಬಂದರೆ ತುಂಬಿದ ಮರ ಮತ್ತು ಮುತ್ತದ ಮರದ ಕಟ್ಟಿಗೆಯನ್ನು ಕಲ್ಲಿನ ಮೇಲೆ ಬಿಟ್ಟು ಸುಡಬೇಕು. ಬಿಸಿಯಾಗಿದ್ದ ಕಲ್ಲಮೇಲೆ ನೀರು ಹಾಲನ್ನು ಹೊಯ್ದಾಕ್ಷಣ ಕಲ್ಲು ಸಿಡಿದು ಹೋಳಾಗುವುದು. ಮುತ್ತುಗದ ಮರದ ಬೂದಿ, ಅಣಿಲೆಯ ಮರದ ಬೂದಿ ಇವುಗಳನ್ನು ನೀರಿನಲ್ಲಿ ಬೇರೆಸಿ ಬೇಯಿಸಿದ ನಂತರ ಹುಟ್ಟು ಕಲ್ಲಿಗೆ ಮೂರು ದಿನ ಹಚ್ಚಲು ಕಲ್ಲು ಮೃದುವಾಗುತ್ತದೆ. ಮಜ್ಜಿಗೆ, ಮದ್ಯ, ಎರನಕಾಯಿಗಂಜಿ ಇವುಗಳನ್ನು ಏಳುದಿನ ಕೂಡಿಸಿಟ್ಟು, ಅಡ್ಡ ಬಂದ ಕಲ್ಲನ್ನು ಚೆನ್ನಾಗಿ ಸುಟ್ಟ ಮೇಲೆ ಅದಕ್ಕೆ ಈ ದ್ರವಣವನ್ನು ಲೇಪಿಸಲು ಆ ಕಲ್ಲು ಸೀಳಿ ಒಡೆದು ಹೋಗುತ್ತದೆ. ಎಕ್ಕೆಯಹಾಲು,

ಪಾರಿವಾಳ ಪಕ್ಷಿಹಿಕ್ಕಿ, ಇಲಿಯಹಿಕ್ಕಿ, ತಗರಕೋಡಿನಮಸಿ ಇವೆಲ್ಲವನ್ನು ಕೂಡಿಸಿ ಉಳಿಯ ಬಾಯಿಗೆ ಒರಸಿ ಕಾಸಿದ ಮೇಲೆ ಉಳಿಗೆ ನೀರುಣಿಸಬೇಕು. ಅನಂತರ ಎಣ್ಣೆಯಲ್ಲಾದರೂ, ಮಜ್ಜಿಗೆಯಲ್ಲಾದರೂ ಅದ್ದಿದಾಗ ಆ ಉಳಿ ವಜ್ರದಂತೆ ಕಲ್ಲನ್ನು ಸೀಳುವುದು.

ಹೀಗೆ ಐದನೇ ಅಧಿಕಾರದಲ್ಲಿ ಬಾವಿ ತೋಡುವ ಸ್ಥಳ, ದಿಕ್ಕು, ನೀರಿನ ಗುರುತುಗಳು, ನೀರು ಇರುವ ಜಾಗದಲ್ಲಿ ಮರಗಿಡಗಳ ಸ್ವರೂಪ, ಕಲ್ಲು ಮಣ್ಣಿನ ಕುರುಹು ಇತ್ಯಾದಿ ಸಂಗತಿಗಳನ್ನು ವಿವರಿಸುತ್ತಾನೆ. ಈಗಲೂ ಸಹ ರೈತಾಪಿ ವರ್ಗದವರು ತಮ್ಮ ಕೃಷಿ ಜಮೀನಿನಲ್ಲಿ ಈ ಮೇಲಿನ ಎಲ್ಲಾ ಲಕ್ಷಣಗಳನ್ನು ಅನುಸರಿಸಿ ಬಾವಿ ತೋಡಿಸಲು ಮುಂದಾಗುವುದನ್ನು ಕಾಣುತ್ತೇವೆ. ಒಂದು ಕಾಲಕ್ಕೆ ನೀರು ಸರಬರಾಜು ಮಾಡುವ ಕೆರೆ– ಕಾಲುವೆಗಳ ನಿರ್ಮಾಣದ ಜೊತೆಗೆ ಭೂಮಿಯ ಒಳಗೆ ಇರುವ ನೀರನ್ನು ಕೃಷಿಗೆ ಬಳಸಿಕೊಳ್ಳುವ ಈ ವಿಧಾನ ಕೃಷಿಶಾಸ್ತ್ರದಲ್ಲಿ ಶಾಸ್ತ್ರೋಕ್ತವಾಗಿ ನಡೆದು ಬಂದಿರುವುದು ಇಂತಹ ಗ್ರಂಥಗಳಿಂದ ವೇದ್ಯವಾಗುತ್ತದೆ.

ಲೋಕೋಪಕಾರಕನು ಆರನೇಯ ಅಧಿಕಾರದಲ್ಲಿ 'ವೃಕ್ಷಾಯುರ್ವೇದ' ಎಂಬ ಭಾಗ ಮಾಡಿಕೊಂಡು ತೋಟದಬೆಳೆಗಳನ್ನು ಬೆಳೆಯುವ ವಿಧಾನವನ್ನು ಕುರಿತು ಪ್ರಸ್ತಾಪಿಸುತ್ತಾನೆ. ಆ ಮೂಲಕ ಬೀಜ ಸಂರಕ್ಷಣೆ, ಭೂಮಿಯ ಸಿದ್ದತೆ, ನೀರಿನ ಆರೈಕೆ, ಕ್ರಿಮಿಕೀಟಗಳಿಂದ ಬೆಳೆ ಸಂರಕ್ಷಣೆ, ನಾಟಿ ಮಾಡುವ ಪದ್ಧತಿ, ಕಸಿ ಮಾಡುವ ವಿಧಾನ, ಹೆಚ್ಚು ಇಳುವರಿ ಪಡೆಯುವ ರೀತಿಗಳನ್ನು ತಿಳಿಸುವುದಲ್ಲದೇ ಹೂವಿನ ಗಿಡಗಳು, ಹೂವಿನ ಗಿಡಗಳ ಆರೈಕೆ, ಬೀಜರಹಿತ ಫಲ ಪಡೆಯುವ ಬಗ್ಗೆ, ಸರ್ವಋತುಗಳಲ್ಲಿಯೂ ಫಲ ಪಡೆಯುವ ವಿಧಾನವನ್ನು ಇಲ್ಲಿ ತಿಳಿಸುತ್ತಾನೆ.

ಶ್ರಾವಣ, ಮಾಘ, ಮೂಲಾ, ಚಿತ್ತ, ವಿಶಾಖ, ಮೃಗಾಶಿರ, ರೋಹಿಣಿ, ಹಸ್ತ, ಈ ನಕ್ಷತ್ರಗಳಲ್ಲಿ ಶಾಸ್ತ್ರೋಕ್ತವಾಗಿ ಬೀಜ ಬಿತ್ತುವುದರಿಂದ ಉತ್ತಮ ತೋಟವನ್ನು ಮಾಡಬಹುದಾಗಿದೆ. ಹಾಗೆಯೇ

"ಉದಕಸಮೃದ್ಧಿಯಪ್ಪ ನೆಲನಂ ನೆಱಶೋಧಿಸಿ ಕೊಳ್ಳನೇಟಿನಂ ।
ತದಱೊಳೆ ಬಿತ್ತಿ ಘಾತಪದದೊಳ್ ಕೆಡೆಯುತ್ತೆ ಬಟಿಕ್ಕವಿರ್ಮೊಟಿಂ ॥
ಚದುರಸಮಾಗಿ ನಾಲ್ಕುಮೊಟೆನಾಗಿರೆ ಗುಣ್ಪು ವಿಘಾತದಿಂ ಪೊದ ।
ಟ್ಪೊದವಿರೆ ತೋಡಿ ಕೂಡೆ ಸುರಿಗಾಗುಟಿ ತೀವಿದ ಗೊಬ್ಬರಂಗಳೊಳ್॥"[೪೦]

ನೀರಿನಿಂದ ಸಂವೃದ್ಧಿಯಾದ ಭೂಮಿಯ ತೆಗ್ಗು ದಿನ್ನೆಗಳನ್ನು ಸಮಮಾಡಿ, ಬೀಜವನ್ನು ಬಿತ್ತುವುದು. ಇಲ್ಲವೇ ಸಸಿಗಳನ್ನು ಎರಡು ಮೊಳ ಅಗಲ ನಾಲ್ಕು ಮೊಳ ಆಳ ತಗ್ಗುಗಳನ್ನು ನಯವಾಗಿ ತೋಡಿಸಿ ಅವುಗಳಿಗೆ ಗೊಬ್ಬರ ತುಂಬಿಸುವುದು. ಆ ನಂತರದಲ್ಲಿ ತಗ್ಗುಗಳ ಮಧ್ಯೆ ಮಧ್ಯೆದಲ್ಲಿ ಮರಗಳು ಒಂದಕ್ಕೊಂದು ತಾಗದಂತೆ ೧೬,೧೪ ಹಾಗೂ ೧೦ ಪ್ರಮಾಣದಲ್ಲಿ ಜಾಗವನ್ನು ಬಿಟ್ಟು ಉತ್ತಮ, ಮಧ್ಯಮ ಮತ್ತು ಕನಿಷ್ಠ ಪ್ರಕಾರದ ಮರಗಳನ್ನು ನೆಡುವುದು. ಆ ನಂತರ ಪ್ರಮಾಣವರಿತು ಮಣ್ಣು ಗೊಬ್ಬರವನ್ನು ಸಮನಾಗಿ ಬೆರಸಿ ಆ ತಗ್ಗುಗಳಿಗೆ ತುಂಬಬೇಕು. ಇದು ಭೂಮಿ ಸಂಸ್ಕಾರವೆನಿಸಿಕೊಳ್ಳುತ್ತದೆ.

ಇನ್ನು ಬೀಜ ಸಂಸ್ಕರಣೆ ಕುರಿತಂತೆ

"ಸ್ವಯಂಪತಿತ ಸಾರಪಕ್ವಫಳಬೀಜಮಂ ಕೊಂಡು ಗೋ ।
ಮಯಂಬೊರೆದು ಪಂಚರಾತ್ರಿಯೊಳೊಣಂಗೆ ಸಪ್ತಾಹಮಂ ॥
ಪಯಃಪ್ರಯುತಮಾಗೆ ಮಾಡಿ ಬೃಹತೀತ(ಫ)ಳ ಕ್ಷಾರ ವಾ ।
ರಿಯೊಳ್ ಪುದಿದುಕೊಂಡು ಧೂಪಿಸಿ ವಿಳಂಗದಿಂ ತುಪ್ಪದಿಂ ॥"[೪೧]

ಪರಿಪುಷ್ಟವಾಗಿ ಬೆಳೆದು ತಮ್ಮಿಂದತಾವೆ ಉದುರಿಬಿದ್ದ ಹಣ್ಣುಗಳ ಬೀಜವನ್ನು ಸೆಗಣಿಯಲ್ಲಿ ಕಲಸಿ, ಐದು ದಿನ ಒಣಗಿಸಿ, ಐದು ದಿನ ಪರಿಯಂತರ ನೀರಿನಲ್ಲಿ ನೆನೆಯಿಕ್ಕಿ ಗುಳದ ಪಣ್ಣರಸ, ಎಳನೀರಿನಲ್ಲಿ ಕಲಸಿ ಆ ಬೀಜಗಳಿಗೆ ವಾಯು ವಿಳಂಗ, ತುಪ್ಪಗಳ ಧೂಪವನ್ನು ಕೊಟ್ಟು ಬಿತ್ತಿದರೆ ಸಸಿಗಳು ಕುಡಿವರಿದು ಚೆನ್ನಾಗಿ ಬೆಳೆಯುವವು. ವಿಶೇಷವಾಗಿ ದಾಳಿಂಬೆ, ಹಲಸು, ನೇರಲ, ಅಶೋಕ, ಬಾಳೆ, ಮಲ್ಲಿಗೆ, ಮಾದಲ ಮೊದಲಾದ ಬಳ್ಳಿಗಳಿಗೆ ಕೊಂಬೆಗಳನ್ನು ಕಡಿದು ನಾಟುವುದು. ಬೀಜಗಳಾದರೆ ಸಗಣಿಯಂ ಪೊಸಿ ಬಿತ್ತುವುದರಿಂದ ನಾಟಿ ಚೆನ್ನಾಗಿ ಬರುವುದು. ನಾಟಿದ ಸಸಿಗಳ ಸುತ್ತ ಹುಟ್ಟಿದ ಕಸಗಳನ್ನು ಕಿತ್ತು, ಆಲಿಕಲ್ಲುಮಳೆ, ಬಿಸಿಲು, ಬೆಂಕಿ, ಗಾಳಿ, ಕ್ರಿಮಿಗಳಿಂದ ವರ್ಷಕಾಲ ಸಸಿಗಳು ಹಾಳಾಗದಂತೆ ರಕ್ಷಿಸುವುದು. ಸಸಿಗಳಿಗೆ (ಹಾಕುವುದರಿಂದ ಪುಷ್ಕಳವಾಗಿ ಬೆಳೆಯುವವು. ವಿಶೇಷವಾಗಿ ಇಂಗು, ಬಜೆ,) ಮೊಸರೋಗರವನ್ನು ತಳಿಯಲು ವರ್ಷಪರ್ಯಂತರ ಆಲಿಕಲ್ಲು ಬಾಧೆಯಿಂದ ತಪ್ಪಿಸಬಹುದು. ಸಿಡಿಲು ಬಡಿದ ಹಳೆಯ ಮರದ ಬೂದಿಯನ್ನು ತಂದು ಅಂಟು ಬೆರಸಿಕೊಂಡು ಹೊಗೆಯಿಕ್ಕಿದರೆ ಮಂಜಿನ ಬಾಧೆಯನ್ನು ಕಳೆಯಬಹುದು.

ಮೀನು, ಮಾಂಸ, ಸಾಸಿವೆ, ತುಪ್ಪ, ಬಾಳೆ, ಎಲೆ, ಹೊಗೆಯನ್ನು ಸಸಿಗಳಿಗೆ ಹಾಕುವುದರಿಂದ ಪುಷ್ಕಳವಾಗಿ ಬೆಳೆಯುವವು. ವಿಶೇಷವಾಗಿ ಇಂಗು, ಬಜೆ, ಅತಿಬಜೆ, ಮೆಣಸು, ವಿಳಂಗ, ತೇರಬೀಜ, ಗುಬ್ಬಿಬಳ್ಳಿ, ಸಾಸಿವೆ ಮುಂತಾದವುಗಳನ್ನು ಗೋಮೂತ್ರದಲ್ಲಿ ಕೊಳಸಿ ಬಿತ್ತುವುದರಿಂದ ಹುಳುಗಳ ಕಾಟ ಬಾಧಿಸುವುದಿಲ್ಲ. ಮುಂದುವರಿದು ಮರಗಳಿಗೆ ಬರುವ ರೋಗ ಅದರಿಂದ ಉಪಶಮನಗೊಳಿಸುವ ಬಗೆಯನ್ನು ಹೀಗೆ ಹೇಳುತ್ತಾನೆ.

"ಕುಡಿ ಮುಱಿದರ್ದೊಡಂ ಕೊನೆ ಮುಱುಂಟಿದೊಡಂ ನಱುಕಿರ್ದೊಡಂಬೆಳ ।
ತ್ರೊಡಮೊಣಗಿರ್ದೊಡಂ ಸರುಜ ಮೀದ್ರುಮಮೆಂದಱಿದಲ್ಲಿ ಕುತ್ತಮು ॥
ಳ್ಳಡೆಯನೆ ನೋಡಿ ತೋಡಿ ಕಳೆದಾಯೆಡೆಯೊಳ್ ಬಿಸಿಯಪ್ಪ ತುಪ್ಪಮಂ ।
ತೊಡೆದು ವಿಳಂಗಮಂ ಕರಿಯಮಣ್ಣುಮನೊಟ್ಟುಗೆ ಬಾಟಿಸ್ಗೂಮಾ ಮರಂ ॥"[೪೨]

ಮರದ ತುದಿಗಳು ಮುರಿದರೆ, ತೊನೆಗಳು ಮುರುಟಿದರೆ, ಬಿಳಚಿಕೊಂಡರೆ, ಒಣಗಿದರೆ ಈ ಲಕ್ಷಣಗಳು ಆ ವೃಕ್ಷಕ್ಕೆ ಅಂಟಿರುವ ರೋಗವೆಂದು ಅರಿಯುವುದು. ಇಂತಹ ರೋಗ ಹುಟ್ಟಿದ ಭಾಗವನ್ನು ಬಗೆದು ಬಿಸಿತುಪ್ಪಮಂ ಪೊಡೆದು ವಿಳಂಗ ಕರಿಯ ಮಣ್ಣನ್ನು ತುಂಬಲು ಆ ಮರಗಳು ಹುಲುಸಾಗಿ ಬೆಳೆಯುವವು. ಸಬ್ಬಸಗಿಯನ್ನು ಅರೆದು ಕಷಾಯ ಮಾಡಿ ಆ ರಸವನ್ನು ಮರದ ಬೇರಿಗೆ ಬಿಡಲು ವೃಕ್ಷಗಳು ನಯವಾಗಿ ಬೆಳೆಯುವವು. ಜವೆ, ಹೆಸರು, ಉದ್ದು ಇವುಗಳನ್ನು ಆಡಿನ ಹಾಲಿನಲ್ಲಿ ಕುದಿಸಿ ಮರದ ಬುಡದಲ್ಲಿಟ್ಟರೆ ಆ ಮರಗಳು ಫಲಪುಷ್ಪಗಳಿಂದ ನಳನಳಿಸುತ್ತವೆ. ದೊಡ್ಡ ಮರಗಳನ್ನು ಕಿತ್ತು ಬೇರೆ ಕಡೆ ನೆಡಲು ಮಾರ್ಗಶಿರ, ಪುಷ್ಪ ಫಲಿತ ಮರಗಳನ್ನು ಕಿತ್ತು ಬೇರೆ ಕಡೆ ನೆಡಲು ಶ್ರಾವಣ, ಭಾದ್ರಪದ ಮಾಸ, ಎಳೆಮರಗಳು ಕಿತ್ತು ಬೇರೆ ಕಡೆ ನೆಡಲು ಮಾಘ, ಫಾಲ್ಗುಣ ಮಾಸಗಳು ಉತ್ತಮ. ಈ ಕ್ರಮದಲ್ಲಿ ವೃಕ್ಷ ನೆಡುವುದರಿಂದ ಮೊದಲಿಗಿಂತ ಹೆಚ್ಚು ಚೆನ್ನಾಗಿ ಬೆಳೆಯುತ್ತವೆ. ಹೀಗೆ ಬೆಳೆಗಳ ವೃದ್ಧಿಯನ್ನು ಕರಾರುವಕ್ಕಾಗಿ ಚಾವುಂಡರಾಯ ಪ್ರತಿಪಾದಿಸುತ್ತಾನೆ.

ಚಾವುಂಡರಾಯ ಈ ಅಧಿಕಾರದಲ್ಲಿ ೨೧, ೨೨, ೨೩, ಪದ್ಯಗಳಲ್ಲಿ ಬೇರೆ ಬೇರೆ ವೃಕ್ಷಗಳನ್ನು ಇಪ್ಪಿಸಿ, ಬೀಜಗಳನ್ನು ಕೂಡಿಸಿ ಬಿತ್ತುವುದನ್ನು ತಿಳಿಸುತ್ತಾನೆ. ಇದು ಬಹುಶಃ ಈ ಹೊತ್ತಿನ ಕಸಿಮಾಡುವ ಪದ್ಧತಿಯನ್ನು ನೆನಪಿಸುತ್ತದೆ.

ಸೊಗಯಿಪ ದಾಡಿಮಂ ಪಲಸು ಪಾದರಿ ನೇಜಿಶೋಕೆ ಬಾಟಿ ಮ ।
ಲ್ಲಿಗೆಯಯದಿರ್ಮುತ್ತೆ ಮಾದುವ ಫಲಂಗಳುಮಾಗಿರೆ ಕೊಂಬು ಬೀಜಮಂ ॥
ಸೆಗಣದೊಳಟ್ಟಿ ಬಿತ್ತುಗೆ ತದಂಘ್ರೀಪಮಂ ಕುಟಿದೋಡಿ ಬೀಜರಾ ।
ಜಿಗಳನೆ ಬಿತ್ತುವಲ್ಲಿ ಕಡಿಗೊಂಬನದಂ ನಡುಗಲ್ಲಿ ನಾಂಟುಗುಂ ॥ ೨೧॥

ಸಮನಾಗಿರೆ ಶಾಖಾಬೀ ।
ಜಮನೆರಡಂ ಕೊಂಡು ಸೀಟಿಬ್ದಿ ಸಂಧಿಸಿ ಮಧುವಾ ॥
ಜ್ಯಮನಲ್ಲಿ ತೊಡೆದು ನಡುಗೊಂ ।
ದೆ ಮೊದಲ್ ಪಿರಿದಾಗಿ ತತ್ಫಳಂ ಬೇಱಕ್ಕುಂ ॥ ೨೨॥

ಜಲಜಾತ ಕಮುದ ನೀಲೋ
ತ್ಪಲ ಕಂದಮನಾಜ್ಯಮಧುಗಳಿಂ ಸಂಧಿಸಿ ಬಿ ॥
ತ್ತಲೊಡಂ ತಳಿ ಹರಿಣಾಮಿಷ ।
ಜಲಮಂ ಮೊದಲೊಂದೆ ಪೂಗಳವು ಬೇಱಕ್ಕುಂ ॥ ೨೩॥

ದಾಳಿಂಬೆ, ಹಲಸು, ಪಾದರಿ, ನೇರಲ, ಅಶೋಕ, ಬಾಳೆ, ಮಲ್ಲಿಗೆ ಅಧಿರ್ಗಂಧಿ ಹಾಗೂ ಮಾದಲ ಮೊದಲಾದ ವೃಕ್ಷ ಔಷದಿ ಬಳ್ಳಿಗಳಿಗೆ ಅವುಗಳ ಶಾಖೆಗಳನ್ನು ಇಲ್ಲವೇ ಕೊಂಬೆಗಳನ್ನು ಕಡಿದು ನೆಡುವುದು. ಮುಂದುವರೆದು ಒಂದೇ ವೃಕ್ಷದ ಎರಡು ಪ್ರಕಾರದ ಶಾಖೆಗಳನ್ನು ಇಲ್ಲವೇ ಬೀಜಗಳನ್ನು ತೆಗೆದು ಕೊಂಡು ಸಮನಾಗಿ ಕೂಡಿಸಿ ಅವುಗಳಿಗೆ ಜೇನುತುಪ್ಪ, ತುಪ್ಪ ತೊಡೆದು ಒಂದೇ ಜಾಗದಲ್ಲಿ ಸಂಧಿಸಿ ಬಿತ್ತಲು ಒಂದೇ ವೃಕ್ಷದಲ್ಲಿ ಎರಡು ಬೇರೆ ಬೇರೆ ಫಲಗಳನ್ನು ಪಡೆಯಬಹುದು. ತಾವರೆಗಡ್ಡೆ, ನೈದಿಲೆಗಡ್ಡೆಗಳನ್ನು ಕೂಡಿಸಿ ಜೇನುತುಪ್ಪದಲ್ಲಿ ಮೂಸಿಸಿ ಒಂದರೊಳಗೊಂದು ಸೇರಿಸಿ ಬಿತ್ತಿದರೆ ಗಡ್ಡೆ ಒಂದೇ ಆಗಿ ಹೂಗಳು ಬೇರೆ ಬೇರೆಯಾಗಿ ಬೆಳೆಯುತ್ತವೆ.

ಅಧಿಕ ಇಳುವರಿಗೆ ಸಂಬಂಧಿಸಿದಂತೆ ಲೋಕೋಪಕಾರದ ೨೫,೨೬,೨೭ನೇ ಪದ್ಯದಲ್ಲಿ ವಿವರಿಸಲಾಗಿದೆ.

ಪಂದಿಯ ನೆಣನಂಕೊಲಜ ।
ಲಂ ದುಗ್ಧಂ ಮಧು ಘೃತಂಗಳೆಂಬಿವನೆಱೆ ಮಾ॥
ಕಂದದ ಮೂಲದೊಳೆಂದುಂ ।
ಕುಂದದೆ ಫಳದಿಂದಮೊಂದಿ ಗೊಂದಳಿಸಿರ್ಕುಂ ॥೨೫॥

ವೃಕ ಸೂಕರ ಮೃಗ ವೃಷ ಜಂ ।
ಬುಕ ವಸೆಯಂ ಪಂಚಪಲ್ಲವಪ್ರಯುತಂ ಕಾ ॥
ಸಿ ಕಷಾಯತೋಯಮಂ ತಳಿ ।
ಯೆ ಕರಂಪುಳಿಯಪ್ಪ ಮಾವುಮಿಮ್ಮಾವಕ್ಕುಂ ॥೨೬॥

ಜಳಜಂ ಬಾಳಂ ಜಂಬೂ ।
ಫಳಮೆಂಬಿನಿತಱ ಕಷಾಯತೋಯಮನೆಱೆ ಬಂ ॥
ದೆಳ ಮಾವಿನ ಮೊದಲೊಳ್ ತ ।
ತ್ವಳಚಯಮಾಮೋದಸುರಭಿಗಂಧಮನಾಳ್ಗುಂ ॥೨೭॥

ಹಂದಿಯ ಮಾಂಸ, ಅಂಕೋಲಿಯ ಬೀಜದ ರಸ, ಹಾಲು ಮತ್ತು ಜೇನುತುಪ್ಪ ಇವುಗಳಿಂದ ಕೂಡಿದ ಮಿಶ್ರಣವನ್ನು ಬಳ್ಳಿ ಮಾವಿನ ಬೇರಿಗೆ ತಪ್ಪದೇ ಎರೆದರೆ ವರ್ಷದ ಎಲ್ಲಾ ಋತುಮಾನಗಳಲ್ಲಿಯೂ ಫಲ ಬಿಡುವುದು.

ತೋಳ, ಹಂದಿ, ಸಾರಂಗ, ಎತ್ತು ಮತ್ತು ನರಿಯ ಮಾಂಸವನ್ನು ಅತ್ತಿ, ಆಲ, ಹಲಸು, ಬಸರಿ ಮತ್ತು ಅರಳಿ ಇವು ಐದು ಮರಗಳ ಚಿಗುರುಗಳನ್ನು ಕೂಡಿಸಿ ನೀರಿನಲ್ಲಿ ಕಷಾಯ ಮಾಡಿ ಹುಳಿ ಮಾವಿನ ಮರದ ಬೇರಿಗೆ ಎರೆಯಲು ಅದು ಸಿಹಿ ಮಾವನ್ನು ಕೊಡುತ್ತದೆ. ಭದ್ರಮಸ್ತೆ, ಲಾಮಂಚ, ನೇರಿಲ ಹಣ್ಣುಗಳನ್ನು ನೀರಿನೊಂದಿಗೆ ಕಷಾಯ ಮಾಡಿ ಕಾಸಿ ಎಳೆಮಾವಿನ ಸಸಿಯ ಬೇರಿಗೆ ಹಾಕಲು ಒಳ್ಳೆಯ ಸುಗಂಧ ಪರಿಮಳದಿಂದ ಕೂಡಿದ ಫಲ ಬಿಡುತ್ತದೆ.

ಇನ್ನು ಬಾಳೆಯ ಹಣ್ಣಿನಲ್ಲಿ ಅಧಿಕ ಗಾತ್ರದ ಇಳುವರಿ ಪಡೆಯಲು ಕೆಲವು ವೈಧಾನಿಕತೆಯನ್ನು ಪದ್ಯ ೨೮,೨೯, ಹಾಗೂ ೩೦ನೇಯ ಪದ್ಯದಲ್ಲಿ ತಿಳಿಸಲಾಗಿದೆ.

ಕುದುರೆಯ ಪಂದಿಯ ವಿಷ್ಠೆಯೊ ।
ಳೊದವಿದ ಕಿರ್ಚಿಂದೆ ಸೂಜಿಯಂ ಕಾಸಿಬಟೆ ॥
ಕ್ಕದಱೊಳ್ ಬಾಟೆಯ ಗೊನೆ ಪು ।
ಟ್ಟಿದೆಡೆಯನಱೆದೂಱೆ ಪಿರಿಯಬಿಣ್ಗೊನೆಯಕ್ಕುಂ ॥೨೮॥

ಕದಳಿಯ ಮೂಲದೊಳಿಡು ಗಜ ।
ಮದಮಂ ಕಪಿಶಿರದೊಳಕ್ಕೆ ಮೇಣ್ ಸೂಕರದಂ ॥
ತದೊಳಕ್ಕೆ ತೀವಿ ತಾನಂ ।
ತದಱ ಫಲಂ ರದನಿ ರದನದಾಕೃತಿಯಕ್ಕುಂ ॥೨೯॥

ಮೊದಲಲ್ಲಿ ಬಾಟೆಗಂಕೋ ।
ಲದ ಜಲಮಂ ಕ್ರೋಡವಸೆಯುಮಂ ರುಧಿರಮುಮಂ ॥
ಕುದಿಯಿಸಿ ಪೊಯ್ದೊಡೆ ದಾಳಿಂ ।
ಬದ ಫಲದಾಕೃತಿಯ ಫಲಮನದು ತಳೆದಿರ್ಕುಂ ॥೩೦॥

ಕುದುರೆಯ ಲದ್ದಿ, ಕಾಡುಹಂದಿಯ ಲದ್ದಿ ಇವೆರಡನ್ನು ಕೂಡಿಸಿ ಬೆಂಕಿ ಹಚ್ಚಿ ಅದರಲ್ಲಿ ಸೂಜಿಯನ್ನು ಕಾಯಿಸಿ, ಕಾದ ಸೂಜಿಯನ್ನು ಬಾಳೆಗೊನೆಯ ಹುಟ್ಟುವ ಜಾಗದಲ್ಲಿ ನೆಟ್ಟರೆ ಆ ಗೊನೆ ದೊಡ್ಡದಾಗಿ ಗೊನೆಯಾಗುತ್ತದೆ. ಆನೆಯ ಮದವನ್ನು ತೆಗೆದು ಕಪಿಯ ತಲೆ ಬುರುಡೆಯಲ್ಲಾಗಲಿ, ಹಂದಿ ಹಲ್ಲುಗಳಲ್ಲಾಗಲಿ

ತುಂಬಿ, ಬಾಳೆಯ ಸಸಿಯ ಬುಡದಲ್ಲಿ ಇರಿಸಲು ಆ ಬಾಳೆಯ ಮರದಲ್ಲಿ ಆನೆಯ ದಂತದೋಪಾದಿಯ ನೀಳವಾದ ಫಲಗಳು ಬಿಡುವವು. ಅಂಕೋಲಿ ಬೀಜದ ರಸ, ಹಂದಿಯ ಮಾಂಸ ಮತ್ತು ರಕ್ತ ಇವುಗಳನ್ನು ಕುದಿಸಿ ಬಾಳೆಯ ಬುಡಕ್ಕೆ ಹೊಯ್ಯಲು ಕಾಯಿಗಳು ದಾಳಿಂಬೆ ಕಾಯಿಯಂತೆ ಫಲಬಿಡುವವು.

ಅದೇ ರೀತಿ ಹಲಸು, ತೆಂಗು, ಕಿತ್ತಳೆ, ಮಾದಾಲ, ದಾಳಿಂಬೆ, ಹುಣಸೆ, ಎರನ, ಬೇವು, ನೆಲ್ಲ ಮುಂತಾದ ಮರಗಳ ಅಧಿಕ ಇಳುವರಿ ಪಡೆಯುವ ತಂತ್ರಗಾರಿಕೆಯನ್ನು ವಿವರಿಸಲಾಗಿದೆ. ಹಾಗೆಯೇ ಹೂವಿನ ಗಿಡಗಳ ಆರೈಕೆಯ ವಿಧಾನವನ್ನು ತಿಳಿಸಲಾಗಿದೆ.

ಬದನೆಯ ಬೀಜವನ್ನು ತೆಗೆದುಕೊಂಡು ಕುಂಬಳಕಾಯಿಯನ್ನು ತೋಡಿ ಆ ಬದನೆಯ ಬೀಜವನ್ನು ಅದರಲ್ಲಿ ಹಾಕಿ ಪಕ್ವಮಾಡಬೇಕು. ನಂತರ ಬದನೆ ಬೀಜವನ್ನು ಹೊರತೆಗೆದು ಬಿಸಾಕಿ ಅದರಲ್ಲಿ ಕುಂಬಳ ಬೀಜ ಬಿತ್ತಲು ಬದನೆಕಾಯಿ ಬೀಡುವುದನ್ನು ಈ ಕೆಳಗಿನ ಪದ್ಯ ವಿವರಿಸುತ್ತದೆ.

"ಬದನೆಯ ಪೊಸಬಿತ್ತಂ ತೋಡಿ ಬಯ್ತಿಟ್ಟು ಕೂಷ್ಮಾಂ ।
ಡದ ಫಲದೊಳದಂ ಮಧ್ವಾಜ್ಯದಿಂ ಮುಚ್ಚಿಸಲ್ ಪ ॥
ಣ್ತೊದವಿದಱೊಳೆ ಬಿತ್ತಂಕೊಂಡು ಬಿತ್ತಲ್ ವಿಚಿತ್ರಂ ।
ಬದನೆಯ ಫಲಮಕ್ಕುಂ ಬಳ್ಳಿಕೂಷ್ಮಾಂಡಮಕ್ಕುಂ ॥"[೪೩]

ಬೀಜರಹಿತ ಫಲಗಳನ್ನು ಪಡೆಯುವ ವಿಧಾನವನ್ನು ಕುರಿತಂತೆ ಶಾಸ್ತ್ರಕಾರ ಹೀಗೆ ಹೇಳುತ್ತಾನೆ.

"ಒದವಿ ಪೊದಟ್ದ ಬಳ್ಳಿಗಳ ಗಂಟುಗಳಂ ನೆಱೆ ಪೂಟ್ದ ಬೇರ್ಗಳೂ ।
ಱೆದೊಡರಿದಲ್ಲಿ ಕೊಯ್ದು ಪೆಱಗಂ ಬಳಿಕಾ ತೆರದಿಂದಮೇೞ ಮಾ ॥
ಟ್ಪುದು ತುದಿಯೊಳ್ ನಯಂಬೆರಸು ಪರ್ವಿದ ಬಳ್ಳಿಯ ಬೀಜವೊಂದುಮಿ
ಲ್ಲದೆ ಫಳಸಂಕುಳಂ ಸಮನಿಕುಂ ಕರಮಚ್ಚರಿ ತಾನಿದೆಂಬಿನಂ ॥"[೪೪]

ಯಾವುದೇ ಬೇರು ಬಿಡುವಂತಹ ಬಳ್ಳಿಗಳ ಗಂಟುಗಳನ್ನು ಚೆನ್ನಾಗಿ ಬೇರು ಬಿಟ್ಟ ಬಳ್ಳಿಯಿಂದ ಕೊಯ್ಯುತ್ತಾ ಬರಬೇಕು, ಈ ಕೊಯ್ಯಲು ಏಳುಗಂಟುಗಳ ಪರಿಯಂತರ ಮುಂದುವರಿಯಬೇಕು. ಆಗ ಕೊನೆಯ ಗಂಟು ಬೀಜಗಳಿಲ್ಲದ ಫಲವನ್ನು ನೀಡುತ್ತದೆ.

ಹೀಗೆ ಚಾವುಂಡರಾಯ ತನ್ನ ಲೋಕೋಪಕಾರದ ಐದು ಮತ್ತು ಆರನೇಯ ಅಧಿಕಾರಗಳಲ್ಲಿ ಕೃಷಿಗೆ ಸಂಬಂಧಿಸಿದಂತೆ ಭೂಮಿಯ ಮೇಲ್ಮೈ, ಲಕ್ಷಣ ಅದಕ್ಕನುಸರಿಸಿ ಜಲನಿಕ್ಷೇಪ, ಬಾವಿತೋಡುವ ವಿಧಾನ, ದಿಕ್ಕು, ಮರ,ಕಲ್ಲು, ಮಣ್ಣು ಇವುಗಳ ಸಹಾಯದಿಂದ ನೀರಿನ ಕುರುಹು ಅರಿಯುವ ರೀತಿ, ಕಲ್ಲು ಸೀಳುವ ಕ್ರಮ, ತೋಟದ ಬೆಳೆಗಳ ಬೀಜಸಂರಕ್ಷಣೆ, ನೀರಿನ ಆರೈಕೆ, ಬೆಳೆಸಂರಕ್ಷಣೆ, ನಾಟಿವಿಧಾನ, ಕಸಿ ಮಾಡುವ ಪದ್ಧತಿ, ಅಧಿಕ ಇಳುವರಿ, ಬೀಜರಹಿತ ಫಲ ಉತ್ಪಾದನೆ, ಸರ್ವಋತುಗಳಲ್ಲಿಯೂ ಫಲ ಪಡೆಯುವ ವಿಧಾನವನ್ನು ೯೯ ಪದ್ಯಗಳಲ್ಲಿ ವಿವರಿಸಿದ್ದಾನೆ.

೪. ಶಿವತತ್ತ್ವರತ್ನಾಕರ

ಕೆಳದಿ ಬಸವರಸನ ಶಿವತತ್ತ್ವರತ್ನಾಕರ ಅನೇಕ ವಿಷಯಗಳನ್ನು ಶಾಸ್ತ್ರೀಯವಾಗಿ ನಿರೂಪಿಸುವ ಗ್ರಂಥ. ೧೭-೧೮ನೆಯ ಶತಮಾನಗಳ ಸಮಗ್ರ ಚರಿತ್ರೆಯನ್ನು ತಿಳಿಯಲು ಸಹಕಾರಿಯಾಗುವ ಈ ಕೃತಿಯು ಕೃಷಿ ಸಂಬಂಧಿಸಿದಂತೆ ೭ನೆಯ ತರಂಗದಲ್ಲಿ ೧೦೦ ಶ್ಲೋಕಗಳಲ್ಲಿ ಚರ್ಚಿಸುತ್ತಾನೆ. ಇಲ್ಲಿ

ಅಗತ್ಯವಾಗಿ ಒಂದು ಸಂಗತಿಯನ್ನು ವಿದ್ವಾಂಸರ ಗಮನಕ್ಕೆ ತರಲೇಬೇಕಾಗಿದೆ. ಅದೇನೆಂದರೇ 'ಕೃಷಿಜ್ಞಾನ ಪ್ರದೀಪಿಕೆ' ಯಂತೆ ಲೋಕೋಪಕಾರದಂತೆ ಕೃಷಿಕರ ಜೀವನಾಡಿಯಾದ ಮಳೆ, ಬೆಳೆ ಎರಡನ್ನು ಕುರಿತು ಚರ್ಚಿಸದೆ ಮಳೆಯನ್ನು ಕುರಿತು ಸಂಪೂರ್ಣವಾಗಿ ಚರ್ಚಿಸಲಾಗಿದೆ. ಆದರೂ ಯಾವ ಮಳೆಯಲ್ಲಿ ಧವಸ ಧಾನ್ಯಗಳು ರೋಗಕ್ಕೆ ತುತ್ತಾಗುತ್ತವೆ, ಹುಲುಸಾಗಿ ಬೆಳೆಯುತ್ತವೆ ಎಂಬ ತೇಜಿ ಮಂದಿಶಾಸ್ತ್ರವನ್ನು ನಿರೂಪಿಸುತ್ತದೆ. ಬಹುಶಃ ಇಂದಿಗೂ ರೈತಾಪಿ ವರ್ಗದಲ್ಲಿ ಹಿಂಗಂಡು ಮಾಡಿಬಿತ್ತುವುದು, ಇಲ್ಲವೇ ಮುಂಗಂಡ ಮಾಡಿ ಬಿತ್ತುವುದು ಎಂಬ ವಾಡಿಕೆ ಮಾತುಗಳು ಕೇಳುತ್ತವೆ. ಈ ದೃಷ್ಟಿಯಿಂದ ಶಿವತತ್ತ್ವರತ್ನಾಕರದಲ್ಲಿ ಚರ್ಚಿಸಿದ ಮಳೆಸಂಬಂಧಿ ವಿಷಯಗಳು ಪರ್ಯಾಯವಾಗಿ ಕೃಷಿ ಸಂಬಂಧಿ ವಿಷಯಗಳೇ ಆಗಿರುವುದರಿಂದ ಅದನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ.

ಕಾರ್ತಿಕ, ಮಾರ್ಗಶಿರ ಮಾಸಗಳಲ್ಲಿ ಅಥವಾ ಸಂಕ್ರಮಣ ಕಾಲದಲ್ಲಿ ಮಳೆಬಿದ್ದರೆ ಮಧ್ಯಮ ಫಲದ ಸಸ್ಯಗಳು ಹುಟ್ಟುತ್ತವೆ. ಪುಷ್ಯಮಾಸಧಲ್ಲಿ ಬಿದ್ದ ಮಳೆಯು ಸುಭಿಕ್ಷೆ ಕೊಡುವ ಫಸಲನ್ನು ನೀಡುತ್ತವೆ. ದೀಪಾವಳಿಯ ದಿನ ಮಂಗಳವಾರ, ಭಾನುವಾರಗಳಲ್ಲಿ ಮಳೆ ಬಿದ್ದರೆ ಅದು ಶುಭತರುವುದಿಲ್ಲ. ಕಾರ್ತಿಕ ಮಾಸ ಪ್ರಾರಂಭದಿಂದ ನಾಲ್ಕು ತಿಂಗಳು ಮೋಡಗಳು ಗರ್ಜಿಸುತ ಮಳೆ ಸುರಿದರೆ ಅಲ್ಲಿ ಸುಭಿಕ್ಷೆ ಉಂಟಾಗುತ್ತದೆ. ಸಸ್ಯ ಸಂಪತ್ತು ಉತ್ತಮವಾಗುತ್ತದೆ.

ಜೇಷ್ಠ ಹಾಗೂ ಆಷಾಡ ಮಾಸದಲ್ಲಿ ಉಂಟಾಗುವ ರೋಹಿಣಿ ಮಳೆಯು ಆಕಾಶದಲ್ಲಿ ಮೋಡಗಳಿಲ್ಲದಿದ್ದಾಗ ಮಳೆ ಆಗುವುದಿಲ್ಲ. ಆದರೆ ಅದೇ ಆಕಾಶ ಮೋಡಗಳಿಂದ ತುಂಬಿದ್ದೇ ಆದರೆ ಮಳೆ ಆಗುವುದು. ಐದನೆಯ ಜಾವದಲ್ಲಿ ಆಗುವ ಈ ಮಳೆಯಿಂದ ಎಲ್ಲಾ ಸಸ್ಯಗಳು ಬೆಳೆಯುತ್ತವೆ. ಆರನೇ ಜಾವದಲ್ಲಿ ರೋಹಿಣಿ ಮಳೆ ಬಿದ್ದರೆ ಹೆಸರು, ಉದ್ದು, ಮೊದಲಾದ ಧಾನ್ಯಗಳಿಗೆ ಒಳಿತು. ಏಳನೇ ಜಾವದಲ್ಲಿ ಉತ್ತಮ ಧಾನ್ಯಗಳಿಗೆ ಅನುಕೂಲಕರ ಮಳೆ ಬೀಳುತ್ತದೆ. ಎಂಟನೇ ಜಾವದಲ್ಲಿ ಭೂಮಿಯು ವಿಶೇಷವಾಗಿ ಚಿದ್ರ ವಾಗುವಂತಹ ಮಳೆಯಾಗುತ್ತದೆ. ಆದ್ದರಿಂದ ಬಲ್ಲವರು ಈ ಮಳೆಯನ್ನು ಗಮನಿಸಿಕೊಂಡು ವ್ಯವಸಾಯ ಕಾರ್ಯಗಳನ್ನು ನೆಡೆಸಲು ಸೂಚಿಸಬೇಕು.

ಆಷಾಡ ಮಾಸದ ನವಮಿ ತಿಥಿಯಲ್ಲಿ ಸ್ವಾತಿ ನಕ್ಷತ್ರವಿದ್ದಾಗ ಮಳೆಯಾಗುವ ಸಂಭವವುಂಟು. ಆ ಕಾಲದಲ್ಲಿ ಮಿಂಚಿನಿಂದ ಕೂಡಿದ ಮೋಡಗಳು ಮಳೆಸುರಿಸುವುದರಿಂದ ಧಾನ್ಯಗಳು ಹುಟ್ಟುವುದಕ್ಕೆ ಕಾರಣವಾಗುತ್ತದೆ. ವಿಶೇಷವಾಗಿ ಧಾನ್ಯಗಳ ಹುಟ್ಟುವಿಕೆಗೆ ಮಿಂಚು ನೀರಿನಿಂದ ಕೂಡಿದ ಮೋಡಗಳು ಕಾರಣವಾಗಿವೆ. ಪೂರ್ವದಿಕ್ಕಿನಲ್ಲಿ ಗಾಳಿ ಬಿಸುವುದು ಸುಭೀಕ್ಷೆಗೆ ಕಾರಣ, ಆಗ್ನೇಯದಿಕ್ಕಿನಲ್ಲಿ ಗಾಳಿ ಬೀಸಿದರೆ ಮಳೆ ಹಾಳಾಗುವುದು. ದಕ್ಷಿಣ ದಿಕ್ಕಿನಲ್ಲಿ ಬೀಸುವ ಗಾಳಿ ದುರ್ಭಿಕ್ಷೆಯನ್ನು ಸೂಚಿಸುತ್ತದೆ. ನೈರುತ್ಯ ದಿಕ್ಕಿನಲ್ಲಿ ಗಾಳಿ ಬೀಸಿದರೆ ನೀರಿಲ್ಲದಾಗುತ್ತದೆ. ಪಶ್ಚಿಮ ದಿಕ್ಕಿನಲ್ಲಿ ಗಾಳಿ ಬೀಸಿದರೆ ಮಧ್ಯಮ ಫಲದ ಮಳೆಯಾಗುತ್ತದೆ. ವಾಯುವ್ಯ ದಿಕ್ಕಿನಲ್ಲಿ ಗಾಳಿ ಬೀಸಿದರೆ ಅತಿಬಾಧೆ ಉಂಟಾಗುತ್ತದೆ. ಉತ್ತರ ಮತ್ತು ಈಶಾನ್ಯ ದಿಕ್ಕಿನಲ್ಲಿ ಬೀಸುವ ಗಾಳಿ ಶುಭಕರವಾಗಿರುತ್ತದೆ. ಇಲ್ಲಿ ಬಾಧೆ ಎಂದರೆ ಶಾಸ್ತ್ರಕಾರ "ಅತಿವೃಷ್ಟಿರನಾವೃಷ್ಟಿ: ಮೂಷಿಕಾಂ ಶುಲಭಾಃ ಖಗಾಃ ।ಅತ್ಯಾಸನ್ನಾಶ್ಚರಾಜಾನಃ ಷಡೇತೇ ಈತಿ ಭಾಧಾಯಂ ॥"

ಅತಿಯಾದ ಮಳೆ, ಮಳೆಯೇ ಬೀಳದಿರುವಿಕೆ, ಇಲಿಗಳ ಕಾಟ, ಮಿಡತೆಗಳ ಹಾವಳಿ ಹಕ್ಕಿಗಳ ಆಕ್ರಮಣ, ಅತೀ ದುಷ್ಟರಾದ ರಾಜರು, ಆರು ಅತಿಭಾದೆಗಳು. ಈ ಆರರಲ್ಲಿ ರಾಜರನ್ನು ಬಿಟ್ಟರೆ

ಮೊದಲಿನ ಐದು ಭಾದೆಗಳು ಕೃಷಿಕನಿಗೆ ಸಂಬಂಧಿಸಿದವೇ ಆಗಿವೆ. ಹೀಗೆ ವರ್ಷವಿಡೀಬರುವ ಮಳೆಯ ನಕ್ಷತ್ರ ಕುರಿತು ಹೇಳಿ ಕೆಳದಿ ಬಸವರಾಜೇಂದ್ರ ಮಳೆಯಿಂದ ಕೃಷಿ ಬದುಕಿನ ಮೇಲೆ ಆಗುವ ಪರಿಣಾಮವನ್ನು ವಿವರಿಸುತ್ತಾನೆ. ಇವನು ವಿವರಿಸುವ ಪರಿಣಾಮಗಳು ಪ್ರಾಯಶಃ ಆ ಕಾಲದ ಕೃಷಿಕರ ಅನುಭವಗಳೇ ಆಗಿರಬೇಕು. ಆ ಅನುಭವಗಳ ದಾಖಲೀಕರಣವೇ ಗ್ರಂಥರೂಪದಲ್ಲಿದೆ.

೨. ಪ್ರಾಚೀನ ಕಾವ್ಯಸಾಹಿತ್ಯ

೧) ಮಾರ್ಗ ಸಾಹಿತ್ಯ:

ಪ್ರಾಚೀನ ಕನ್ನಡ ಸಾಹಿತ್ಯ ಕವಿಗಳಿಂದ ವ್ಯಕ್ತಿಗತ ರೂಪ ಪಡೆದರೂ, ಸಮಷ್ಠಿ ಪ್ರಜ್ಞೆಯ ಅಂಶಗಳನ್ನು ಮೈವೆತ್ತಿಕೊಂಡು ರಚನೆಯಾಗಿವೆ. ಅಂದರೆ ಒಂದು ಕಾವ್ಯದ ಹೆಸರು ಕವಿಯದಾದರೂ ಅದರಲ್ಲಿನ ಉಸಿರು ಆ ಕಾಲದ ಸಮಾಜದ್ದಾಗಿರುತ್ತದೆ. ಹೀಗಾಗಿ ಸಾಮಾಜಿಕವಾಗಿ ಬದುಕಿದ ಬಹುಸಂಖ್ಯಾತ ಜನರ ಜೀವನ ಪದ್ಧತಿ ಅಲ್ಲಿ ಅನಾವರಣಗೊಂಡಿರುತ್ತದೆ. ವಿಶೇಷವಾಗಿ ಶ್ರಮಿಕ ವರ್ಗದ ಆಶಯಗಳು, ಅವರು ಆಶ್ರಯಿಸಿದ ವೃತ್ತಿಗಳು ದಾಖಲಾಗಿರುತ್ತವೆ. ಈ ದೃಷ್ಠಿಯಿಂದ ಕೃಷಿಕನಿಗೆ ಬೆನ್ನೆಲುಬಾಗಿ ನಿಂತ ಬಡಿಗ, ಕುಂಬಾರ, ಕಂಚುಗಾರ, ಅಕ್ಕಸಾಲಿಗ, ವರ್ತಕ ಇತ್ಯಾದಿ ಜನಸಮೂದಾಯವಲ್ಲದೇ, ರೈತಾಪಿ ವರ್ಗಕೂಡ, ಕುಂಟೆ, ರಂಟೆ, ಮೇಳ, ಗಳೆ, ಹಗ್ಗ, ಕಣ್ಣಿ ಇತ್ಯಾದಿ ಪರಿಕರಗಳ ಉಲ್ಲೇಖಗಳು ಢಾಳವಾಗಿ ಚಿತ್ರಣಗೊಂಡಿವೆ. ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಮಾರ್ಗ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಿತಗೊಂಡ ಕೃಷಿ ಸಂಬಂಧಿ ಆಶಯಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ.

ಯಾವುದೇ ಸಾಹಿತ್ಯ ಸಾಂಸ್ಕೃತಿಕ ಬದುಕಿನ ಕನ್ನಡಿಯಾಗಿರುತ್ತದೆ. ಲೋಕಾನುಭವದ ಅನೇಕ ಅಂಶಗಳು ಕವಿ ಕೃತಿಗಳಲ್ಲಿ ದಾಖಲಿಸಲಾಗಿರುತ್ತದೆ. ಕವಿಯಸೃಷ್ಠಿ; ಬ್ರಹ್ಮಸೃಷ್ಠಿಗೂ ಮಿಗಿಲಾದುದ್ದೆಂದು ಭಾರತೀಯ ಕಾವ್ಯ ಮೀಮಾಂಸಕರು ಅಭಿಪ್ರಾಯಪಡುತ್ತಾರೆ. ಕೃಷಿಯೇ ಮೂಲಾಧಾರವಾಗಿರುವ ನಮ್ಮ ದೇಶದಲ್ಲಿ ಗ್ರಾಮೀಣ ಪ್ರದೇಶದ ಬದುಕು ಅನೇಕ ವೈವಿಧ್ಯತೆಯಿಂದ ಕೂಡಿರುತ್ತದೆ. ಇಂತಹ ಸಂಸ್ಕೃತಿಯನ್ನು ಕಟ್ಟಿ ಕೊಡುವಾಗ ಕೃಷಿಗೆ ಸಂಬಧಿಸಿದ ಅಂಶಗಳನ್ನು ಪೂರಕವಾಗಿ ಕವಿಗಳು ತಮ್ಮ ಕಾವ್ಯದಲ್ಲಿ ಚಿತ್ರಿಸಿದ್ದಾರೆ.

ವ್ಯವಸಾಯ ನಮ್ಮ ದೇಶದ ಬಹುಸಂಖ್ಯಾತ ಜನರ ಮುಖ್ಯ ವೃತ್ತಿ. ಕೃಷಿ ಭಾರತದ ಆರ್ಥಿಕತೆಯ ಬೆನ್ನೆಲುಬಾಗಿ, ಅನೇಕ ಕ್ಷೇತ್ರಗಳಿಗೆ ಉಪಕಸುಬುಗಳನ್ನು ಒದಗಿಸುವಂತಾಗಿದೆ. ಒಕ್ಕಲಿಗ, ಒಕ್ಕಲುತನದ ಮಹತ್ವ ಕುರಿತು ಸರ್ವಜ್ಞನು 'ಮೇಟಿಯಿಂದಲೇ ರಾಟಿ ನಡೆಯುವುದು', 'ಒಕ್ಕಲಿಗ ನೊಕ್ಕದಿರೆ ಬಿಕ್ಕುವುದು ಜಗವೆಲ್ಲ' ಎನ್ನುತ್ತಾನೆ. ಜಗತ್ತಿಗೆ ಅನ್ನ ನೀಡುವ ರೈತನನ್ನು ಅನ್ನದಾತನೆಂದು ಕರೆಯುವುದು ಸಮಂಜಸವಾಗಿದೆ. "ಒಕ್ಕಲುತನವು ಜೀವನ ವಿಧಾನವಾಗಿದೆ. ಒಕ್ಕಲುತನ ಮಾಡುವುದೆಂದರೆ ಅದು ಉದ್ಯೋಗ ಅಲ್ಲ, ಅದೊಂದು ವೃತ್ತಿ ಅಲ್ಲ, ಅದೊಂದು ಪವಿತ್ರ ಕಾಯಕ ಆಗಿದೆ. ಒಕ್ಕಲುತನ ಒಂದು ಸಂಸ್ಕೃತಿ ಆಗಿದೆ. ಒಬ್ಬ ಸೃಜನಶೀಲ ವ್ಯಕ್ತಿಗಿಂತ ಹೊಲದಲ್ಲಿ ಗಳೆ ಹೊಡೆಯುವ ರೈತ ಶ್ರೇಷ್ಠ ಎನಿಸಿದ್ದಾನೆ. ಗುಡ್ಡ ಗವಿಗಳಲ್ಲಿ, ಗಡ್ಡ ಬಿಟ್ಟು ಜಪ, ತಪ ಮತ್ತು ಅನುಷ್ಠಾನ ಮಾಡುವ ಯೋಗಿಗಿಂತ ಶ್ರೇಷ್ಠ ಯೋಗಿ ರೈತನಾಗಿದ್ದಾನೆ. ರಾಷ್ಟ್ರಕವಿ ಕುವೆಂಪುರವರು ರೈತನನ್ನು ನೇಗಿಲಯೋಗಿ ಎಂದು ಗೌರವದಿಂದ ಕರೆದಿದ್ದಾರೆ. 'ನೇಗಿಲ ಕುಲದೊಳಗಡಗಿದೆ ಕರ್ಮ ನೇಗಿಲ ಮೇಲೆ ನಿಂತಿದೆ ಧರ್ಮ'. ಎಂದು ಕುವೆಂಪು ಅವರು ರೈತನ ನೇಗಿಲು, ಕರ್ಮ ಧರ್ಮಗಳ ಸಂಕೇತ ಎಂದು ಸಾರಿದ್ದಾರೆ. ರೈತರು ಚಳಿ, ಮಳೆ, ಬಿಸಿಲು,

ಗಾಳಿ ಎಲ್ಲವನ್ನು ಸಹಿಸಿ ಕಷ್ಟ ಪಟ್ಟು ದುಡಿಯುತ್ತಾರೆ. ಅಂತೆಯೇ ಆರೋಗ್ಯವಂತರು, ದೃಢಕಾಯರು ಆಗಿರುತ್ತಾರೆ. ಉದ್ಯೋಗ ಮಾಡುವಾಗ ಅವನ ಮೈಯಿಂದ ಬೀಳುವ ಬೆವರ ಹನಿ ಮುತ್ತಾಗುತ್ತದೆ. ಅದು ಬೆವರಿನ ಬೆಲೆ ವ್ಯಕ್ತಿಯ ಆರೋಗ್ಯಕ್ಕೆ ಮತ್ತು ವ್ಯಕ್ತಿಯ ವಿಕಾಸಕ್ಕೆ ಕಾರಣವಾದ, ಒಕ್ಕಲುತನವು ಸಮಾಜದ ಆರೋಗ್ಯಕ್ಕೆ ಹಾಗೂ ವಿಕಾಸಕ್ಕೆ ಕಾರಣವಾಗಿದೆ".[೪೬] ಒಕ್ಕಲುತನ ಕುರಿತಾದ ಈ ಅಭಿಪ್ರಾಯ ಅರ್ಥಪೂರ್ಣವಾಗಿದೆ.

ಭೂಮಿ: ರೈತನಿಗೆ ದೇವರು ನೀಡಿದ ದೇಣಿಗೆ ಎಂದು ನಂಬಿ ಭೂಮಿಯಲ್ಲಿ ಬೆಳೆದ ಬೆಳೆ ಒಬ್ಬನದಲ್ಲ ಅದು ಸರ್ವರಿಗೆ ಸೇರಿದುದೆಂದು ಹಿಂದೆ ನಂಬಲಾಗಿತ್ತು. ಕೃಷಿಗೆ ಭೂಮಿಯೇ ಮುಖ್ಯ; ಮಣ್ಣಿನಲ್ಲಿ ಉತ್ತಿ ಬಿತ್ತಿ ಬೆಳೆಯುವುದೇ ಕೃಷಿಯೆಂದು ಸರಳವಾಗಿ ಹೇಳಬಹುದು. "ವ್ಯವಸಾಯಕ್ಕೆ ಉಪಯೋಗ ಭೂಮಿಯನ್ನು ಸ್ಥೂಲವಾಗಿ ದೇವಮಾತೃಕ ಮತ್ತು 'ನದಿಮಾತೃಕ' ಎಂದು ವಿಂಗಡಿಸಲಾಗುತ್ತದೆ; ಮಳೆಯಿಂದಲೇ ಸಾಗುವಳಿ ಮಾಡಬೇಕಾದುದು ದೇವ ಮಾತೃಕವಾದರೆ, ನದಿ, ಕೆರೆ, ಕಾಲುವೆ ಮುಂತಾದವುಗಳ ಸಹಾಯದಿಂದ ಸಾಗುವಳಿ ಮಾಡುವುದು 'ನದಿಮಾತೃಕ' ಎನಿಸಿಕೊಳ್ಳುತ್ತದೆ".[೪೭] ಎಂದು ಪಿ.ವಿ.ನಾರಾಯಣರವರು ವಿವರಿಸುತ್ತಾರೆ. ಭೂಮಿ, ಭೂಮಿಯ ಪ್ರಭೇದಗಳ ಬಗ್ಗೆ ಪ್ರಾಚೀನ ಕಾವ್ಯ ಕೃತಿಗಳಲ್ಲಿ ಮಾಹಿತಿ ದೊರೆಯುತ್ತದೆ. ಪಂಚತಂತ್ರದ ಭೇದ ಪ್ರಕರಣದಲ್ಲಿ "............ ಸೌವಳು ಮಣ್ಣಿನಲ್ಲಿ ಮಟಿ ಬರುಹವುಂ ....ಎಂದು ಹೇಳಲಾಗಿದೆ. ಸವಳು ಮಣ್ಣಿನ ಭೂಮಿ ಕೃಷಿಗೆ ಯೋಗ್ಯವಾಗಿರದೇ ಎಷ್ಟೇ ಮಳೆ ಸುರಿದರೂ ಬೆಳೆ ಬೆಳೆಯುವುದು ಅಸಾಧ್ಯವಾಗುತ್ತದೆ. ನಯಸೇನನ ಧರ್ಮಾಮೃತದಲ್ಲಿ ಸೌವಳು ಮಣ್ಣಿನ ಭೂಮಿಯನ್ನು ಕುರಿತು ಹೀಗೆ ಹೇಳಲಾಗಿದೆ. "ಸೌಳಪ್ಪ ಭೂಮಿಯನುತ್ತುದಕಮನೆಱೆದು ಕಸಮಂ ಕಳೆದು ಭಿತ್ತಿ ಬೇಲಿಯನಿಕ್ಕಿ ಪಿರಿದುಂ ಪ್ರಯತ್ನಮಂ ಮಾಡಿದೊಡಂ ಕರಿಯ ಭೂಮಿಯ ಬೆಳಸಿನಂತಕ್ಕುಮೆ ....".[೪೮] ಸೌಳು ಭೂಮಿಯಲ್ಲದೇ ಕರಿಯ ಭೂಮಿ ಮತ್ತೊಂದು ಪ್ರಭೇದವೆಂದು ತಿಳಿದು ಬರುತ್ತದೆ. ಸೌಳು ಮಣ್ಣಿನ ಭೂಮಿಯನ್ನು ಉತ್ತು, ನೀರನ್ನು ಎರೆದು, ಕಸವನ್ನು ತೆಗೆದು, ಆರೈಕೆ ಮಾಡಿ, ಬೇಲಿಯ ಕಟ್ಟಿ, ಅತ್ಯಂತ ಶ್ರಮವಹಿಸಿ ಕೆಲಸ ಮಾಡಿದರೂ ಇಳುವರಿ ದೊರೆಯಲಾರದು. ಆದರೆ ಕರಿಯ ಭೂಮಿಯಲ್ಲಿ ಶ್ರಮವಹಿಸಿ ಬೇಸಾಯ ಮಾಡಿದರೆ ಉತ್ತಮ ಬೆಳೆಯನ್ನು ಬೆಳೆಯಬಹುದೆಂದು, ಕರಿಯ ಭೂಮಿ ವ್ಯವಸಾಯಕ್ಕೆ ಯೋಗ್ಯವಾದುದೆಂದು ನಯಸೇನ ಹೇಳುತ್ತಾನೆ. ಅವನ ಈ ಅಭಿಪ್ರಾಯದಲ್ಲಿ ವ್ಯವಸಾಯದ ಕ್ರಮಬದ್ಧತೆಯನ್ನು ಗುರುತಿಸಬಹುದಾಗಿದೆ.

ಬೇಸಾಯ ಕ್ರಮ : ಪ್ರಾಚೀನ ಕಾವ್ಯಗಳಲ್ಲಿ ಕೃಷಿ ಸಂಸ್ಕೃತಿಯ ವಿವರಗಳು ನೇರವಾಗಿ ಅಲ್ಲದಿದ್ದರೂ, ಅನುಷಂಗಿಕವಾಗಿ ಕಂಡು ಬರುತ್ತವೆ. ವರ್ಣನೆ, ಹೋಲಿಕೆ, ಪ್ರಾದೇಶಿಕ ವಿವರಣೆ, ಭೌಗೋಳಿಕ ಅಂಶಗಳನ್ನು ಹೇಳುವಾಗ ಕವಿಗಳು ಬೇಸಾಯ ಕ್ರಮದ ಉಲ್ಲೇಖ ಮಾಡಿರುವುದು ತಿಳಿದುಬರುತ್ತದೆ.

ವಡ್ಡಾರಾಧನೆಯ ಸುಕುಮಾರಸ್ವಾಮಿ ಕಥೆಯಲ್ಲಿ "............ ಕರಿಣಭೂಮಿಯೊಳ್ ನಡೆದೊಡೆ ಕಿಱುಗಲ್ಗಳುಂ ಪೆಟ್ಟೆಗಳು ಮುಗುಟಿಸ್ದು ಪುಗುಳೊಡೆದು ....".[೪೯] ಇಲ್ಲಿ ಉಲ್ಲೇಖಿತವಾಗಿರುವ ಪೆಟ್ಟೆ ಎಂದರೆ ಎಂಟೆ ಎಂದು ಅರ್ಥ ಮಣ್ಣಿನ ಮುದ್ದೆ ಎಂದೂ, ಹೆಂಡೆ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಮುಂಗಾರು ದಿನಗಳಲ್ಲಿ ರೈತರು ಒಣ ಭೂಮಿಯನ್ನು ಕಬ್ಬಿಣದ ನೇಗಿಲಿಗೆ ಆರು, ಎಂಟು ಮತ್ತು ಹತ್ತು ಎತ್ತುಗಳನ್ನು ಕಟ್ಟಿ ಉಳುಮೆ ಮಾಡುತ್ತಾರೆ. ಆ ಸಂದರ್ಭದಲ್ಲಿ ಭೂಮಿ

ಗಡುಸಾಗಿರುವುದರಿಂದ ದೊಡ್ಡ ಗಾತ್ರದ ಮಣ್ಣಿನ ಹೆಂಟೆಗಳು ಕೀಳುತ್ತವೆ. ಇವುಗಳನ್ನು ಗುದ್ದಲಿಯಿಂದ ಒಡೆಯುತ್ತಾರೆ. ದೊಡ್ಡಮಳೆಯ ನೀರು ಭೂಮಿಯಲ್ಲಿ ಇಂಗಿ ನೆಲದಲ್ಲಿ ತೇವಾಂಶ ಹೆಚ್ಚಾಗಿ ಉಳಿಯಲು ಈ ಕ್ರಮದಲ್ಲಿ ಭೂಮಿಯನ್ನು ಉಳುಮೆ ಮಾಡುವ ಅಂಶವನ್ನು ಕಾಣಬಹುದು.

ಇಡೀ ಕೃಷಿ ಚಟುವಟಿಕೆಯ ವರ್ಣನೆ ನಯಸೇನನ ಧರ್ಮಾಮೃತದಲ್ಲಿ ಕಂಡುಬರುತ್ತದೆ. "ಕೆಯ್ಯಂತೆ ಕೆಯ್ಯಟುಮೆ...............ಪಾಲ್ದೆನೆಯಂತೆ ಕೊಯ್ಲಾದಂತೆ, ಸೂಡಿನಂತೆ ಕಳಕ್ಕೆ ವರ್ಷಂತೆ ಒಕ್ಕಣ ರಾಶಿಯಂತೆ .... ಮೆದೆಯನೊಟ್ಟುವ ಬಿತ್ತುವ............".[೫೦] ಭೂಮಿಯ ಉತ್ತುವ, ಬಿತ್ತುವ, ಕೊಯ್ಯುವ, ಸೂಡು ಕಟ್ಟುವ, ಮೆದೆ ಒಟ್ಟುವ ಮತ್ತು ಕಣಕ್ಕೆ ತಂದು ಒಕ್ಕಲು ಮಾಡುವ ಬಗೆಯನ್ನು ವರ್ಣಿಸುತ್ತಾನೆ. ನಯಸೇನ ಒಬ್ಬ ಜೈನಮುನಿಯಾಗಿದ್ದರೂ, ಲೌಕಿಕ ಬದುಕಿನ ಗಾಢ ಅನುಭವ, ಹಿರಿಯ ಪರಂಪರೆಯ ವ್ಯವಸಾಯದ ಜ್ಞಾನಸುಧೆಯನ್ನು ತನ್ನ ಪ್ರವಚನದ ಮೂಲಕ ಜನತೆಗೆ ಮನಮುಟ್ಟುವಂತೆ ಹೇಳುವಾಗ ಕೃಷಿ ಸಂಬಂಧಿ ಅನೇಕ ಅಂಶಗಳು ಅವನ ಕೃತಿಯಲ್ಲಿ ಹರಳುಗಟ್ಟಿವೆ. ಒಕ್ಕಲುತನ ಕೆಟ್ಟರೆ ರೈತನ ಬದುಕು ಇರಲು ಸಾಧ್ಯವಿಲ್ಲ, ರೈತನಿಗೆ ಮಣ್ಣು ಅವನ ಕಣ್ಣಿನಷ್ಟೇ ಶ್ರೇಷ್ಠವಾದುದು, ಮುಂಗಾರು ಮಳೆ ಸಮೃದ್ಧವಾಗಿ ಸುರಿದರೆ ಹಿಂಗಾರಿ ಪೈರುಗಳಾದ ಕಡಲೆ, ಗೋಧಿ, ಬಿಳಿಜೋಳ ಇತ್ಯಾದಿ ಬೆಳೆಗಳನ್ನು ಮಂಜಿನ ನೀರಿನಿಂದ ಬೆಳೆಯಬಹುದು ಎನ್ನುತ್ತಾನೆ. ಬೆಳೆಯನ್ನು ಕೊಯ್ಲುಮಾಡಿದ ನಂತರ ಕೆಲದಿನಗಳ ಕಾಲ ಭೂಮಿಯನ್ನು ಖಾಲಿ ಬಿಡಬೇಕು. ದನಕರುಗಳು ನಡೆದಾಡಿದರೆ ಉತ್ತಮ ಎಂಬ ಕೃಷಿಜ್ಞಾನವನ್ನು ತಿಳಿಸುತ್ತಾನೆ. ವೈಜ್ಞಾನಿಕವಾಗಿ ಹೇಳುವುದಾದರೂ ಮೇಲಿಂದ ಮೇಲೆ ಬೆಳೆ ಬೆಳೆಯುವ ಪದ್ಧತಿ ಸರಿಯಲ್ಲ, ಭೂಮಿ ತನ್ನ ಸತ್ವವನ್ನು ಕಳೆದುಕೊಂಡು ಬರಡಾಗುತ್ತದೆ. ಅಲ್ಲದೆ ಹದ–ಬೆದೆ ಅರಿತು ಬಿತ್ತನೆ ಕಾರ್ಯ ಮಾಡಬೇಕು, ತೋಟಮಾಡಲು ಯೋಗ್ಯವಾದ ಭೂಮಿಯ ಆಯ್ಕೆಯನ್ನು ಮಾಡಿಕೊಳ್ಳುವುದು ರೈತನ ಜಾಣತನವಾಗಿರಬೇಕು ಎಂದು ನಯಸೇನನು ತಿಳಿಸುತ್ತಾನೆ.

".......... ವಸಂತರಾಜಂ ಕತ್ತುರಿಯ ಮಡಿಯೊಳ್ ಕಪ್ಪುರದ ಗಿಡವಂ ನಟ್ಟುಟಿಾಟಾಳಮನೆತ್ತಿ ಬೆಳೆಸಿದ ನೆಂಬಂ ...." ನೇಮಿನಾಥ ಪುರಾಣದಲ್ಲಿಯೂ "ಕುಟೀಯೊಳ್ ನಾಟಿಸಿ ನೀರಂಗಟಿಗಟಿನೆಜೆವಂತೆ ....".[೫೧] ತೋಟಗಳಲ್ಲಿ ಪಾತಿ ಮಾಡಿ, ಬಳ್ಳಿಯನ್ನು ನಾಟಿಸಿ, ನೀರನ್ನು ತುಂಬಿಸುವ ಕೃಷಿಕಾರ್ಯದ ವಿಧಾನ ತಿಳಿದುಬರುತ್ತದೆ. ತೋಟದ ಬೆಳೆಗಳಾದ ಅಡಿಕೆ, ತೆಂಗು, ಬಾಳೆ, ಎಲೆಬಳ್ಳಿಗಳಂತಹ ಬೆಳೆಗಳನ್ನು ಬೆಳೆಯಲು ಮೊದಲು ಪಾತಿ ಮಾಡಿ, ನಂತರ ಮಣ್ಣು ಗೊಬ್ಬರ ತುಂಬಿ, ಸಸಿಗಳನ್ನು ನಾಟಿ ನೀರು ತುಂಬಲಾಗುತ್ತದೆ.

ಆದರೆ ಇಂದು ಬೇಸಾಯ ಕುರಿತು ವಿದ್ಯಾವಂತರಲ್ಲಿ ಕೀಳರಿಮೆ ಇದೆ. ಕೆಲವು ವಿದ್ಯಾವಂತರು ಕೃಷಿಯನ್ನು ಉಪೇಕ್ಷಿಸದೇ ಆಸಕ್ತಿಯಿಂದ ಮಾಡುವುದುಂಟು. ಆದರೆ ಕೆಲವರು ಕೃಷಿ ಶ್ರಮದಾಯಕ ಕೆಲಸ ಅದು ಲಾಭ ತರುವಂತಹ ವೃತ್ತಿಯಲ್ಲ, 'ಬೇಸಾಯ ನೀಸಾಯ ನಾಸಾಯ ಮನೆಮಂದಿಯೆಲ್ಲ ಸಾಯ' ಎಂದು ಗೇಲಿ ಮಾಡುವುದು ಕಂಡುಬರುತ್ತದೆ. ದುಡಿಯುವ ಕೈಗಳು ಅನ್ನ ಹಾಕದೆ ಇದ್ದರೆ ಇಡೀ ಸಾಮಾಜಿಕ ವ್ಯವಸ್ಥೆ ಹಳಿ ತಪ್ಪಿದ ರೈಲಿನಂತಾಗುತ್ತದೆ. ಒಕ್ಕಲುತನದ ಮಹತ್ವವನ್ನು ಅರಿತು ಅನೇಕ ಸಂಶೋಧನೆ. ಆವಿಷ್ಕಾರಗಳಿಂದ ಕೃಷಿಯನ್ನು ಪ್ರಗತಿಯತ್ತ ಕೊಂಡೊಯ್ಯಬೇಕಾದರೆ ರೈತನಿಗೆ ಸಹಾಯ, ಸಹಕಾರಮಾಡಿ, ಅವನಿಗೆ ಗೌರವಾದಾರಗಳನ್ನು ನೀಡಿ ಸಲಹೆ ಸಹಕಾರವನ್ನು ಕೊಟ್ಟು ಧೈರ್ಯ ತುಂಬುವಂತಹ ಕಾರ್ಯವನ್ನು ಘನ ಸರ್ಕಾರಗಳು ಮಾಡಬೇಕು. ಆಗ ಮಾತ್ರ ಒಕ್ಕಲುತನವನ್ನು ಹಸನಾಗಿಸಿ, ಭೂಮಿಯನ್ನು ಹಸಿರಾಗಿಸಿ, ದೇಶದ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ.

ಬೀಜ ಮತ್ತು ಸಂಸ್ಕರಣೆ : ರೈತರು ಉತ್ತಮ ತಳಿಯ ಬೀಜಗಳನ್ನು ಸಂಗ್ರಹಿಸಿ ಬಿತ್ತಬೇಕಾಗುತ್ತದೆ. ಬೀಜದ ಆಯ್ಕೆ, ಬಿತ್ತುವ ಬಗೆ, ಎಂತಹ ಬೀಜವನ್ನು ಹದವರಿತು ಬಿತ್ತಬೇಕು ಎಂಬ ಅಂಶಗಳನ್ನು ಪ್ರಾಸಂಗಿಕವಾಗಿ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಕಾಣಬಹುದಾಗಿದೆ. ರನ್ನನ ಗದಾಯುದ್ಧದ ಐದನೇ ಆಶ್ವಾಸದಲ್ಲಿ "ಜತುಗೇ ಹಾನಲ ಬೀಜಮುಗ್ರ ವಿಷಸಂಜಾತಾಂಕುರಂ".[೫೨] ಅಂದರೆ ಯಾವುದೇ ಸೃಷ್ಟಿಗೆ ಬೀಜವೆ ಮೂಲ ಬೀಜವಿಲ್ಲದೆ ಸೃಷ್ಟಿಸಾಧ್ಯವಿಲ್ಲ. ಪಾಂಡವರು ಕೌರವರಿಗೆ ದ್ವೇಷ ಹುಟ್ಟಲು ಕಾರಣವಾದ ಸಂದರ್ಭವನ್ನು ಬೀಜ ಹುಟ್ಟುವ ಕ್ರಿಯೆಗೆ ಹೋಲಿಸಿ ಕವಿ ವರ್ಣಿಸುತ್ತಾನೆ. ಅಂದರೆ ಭೀಮನಿಗೆ ಅರಗಿನ ಮನೆಗೆ ಬೆಂಕಿ ಇಟ್ಟಿದ್ದು ಬೀಜವಾಯಿತು, ಉಣಿಸಿದ ವಿಷ ಅಂಕುರವಾಯಿತು. ಜೂಜಿನ ಆಟ ಚಿಗುರಾಯಿತು, ದ್ರೌಪದಿಯ ಕೇಶಹರಣ ಮತ್ತು ಅವಮಾನ ಹೆಮ್ಮರವಾಯಿತು ಎನ್ನುತ್ತಾನೆ.

ಕರ್ನಾಟಕದ ಪಂಚತಂತ್ರದಲ್ಲಿ "............. ಬೆಂದ ಬೀಜ ಪುಟ್ಟದಂತೆ ಭಸ್ಮಾಂತರಿತ ದೇಹಂ ....".[೫೩] ಬೀಜದ ಮೊಳಕೆಯ ಸತ್ವ ಬೆಂದರೆ ಅದು ಹುಟ್ಟಲಾರದು. ಬೀಜವನ್ನು ಉತ್ತಮ ರೀತಿಯಲ್ಲಿ ಸಂಸ್ಕರಿಸಿಕೊಳ್ಳುವುದು ಜಾಣತನವಾಗಿದೆ. ಪಂಪರಾಮಯಣದಲ್ಲಿ "ನೀರಸವಾಗೆ ಬಳ್ಳಿಗಿಡ ಪೆರ್ಮರಗಳ್ ಕರಯಂತ್ರನಾಳದಿಂ ಭೂರಸಮೆಲ್ಲಮಂ ....".[೫೪] ಭೂಮಿಯಿಂದ ಸಸ್ಯಗಳು ಪೋಷಕಾಂಶಗಳನ್ನು ನೀರಿನ ನಾಳದ ಮೂಲಕ ಹೀರಿಕೊಂಡು ಗಿಡಮರಗಳಿಗೆ ಒದಗಿಸುತ್ತವೆ ಎಂಬ ಅಂಶ ಇಲ್ಲಿ ತಿಳಿದುಬರುತ್ತದೆ. ಹರಿಹರನ ಗಿರಿಜಾಕಲ್ಯಾಣದಲ್ಲಿ "........... ಬಿತ್ತಿದ ಬೆಳಗಿನ ಬೀಜಾಂಕುರಮೆನಿಸಿದವು ತಾರೆಗಳ್ ....".[೫೫] ಭೂಮಿಯಲ್ಲಿ ಬಿತ್ತಿದ ಬೀಜ ಮೊಳಕೆ ಬಂದಾಗ ಆಕಾಶದ ತಾರೆಗಳ ರೀತಿಯಲ್ಲಿ ಕಂಗೊಳಿಸುತ್ತದೆ ಎಂದು ವರ್ಣಿಸುತ್ತಾನೆ. ಹೊಲದ ತುಂಬೆಲ್ಲಾ ಮೊಳಕೆಯಾಗಿರುವ ಬೀಜದ ಕಲ್ಪನೆ ಅರಿವಿಗೆ ಬರುತ್ತದೆ.

ಒಕ್ಕಲಿಗ ಮತ್ತು ಒಕ್ಕಲುತನ : ಭಾರತದಂತಹ ದೇಶದಲ್ಲಿ ಕೃಷಿಯ ಮೇಲೆ ಹೆಚ್ಚು ಜನ ಅವಲಂಬಿತರಾಗಿದ್ದಾರೆ. ಕೃಷಿಯನ್ನು ಕಡೆಗಾಣಿಸಿದರೆ ದೇಶದ ಆರ್ಥಿಕ ಅಭಿವೃದ್ದಿ ಸಾಧ್ಯವಿಲ್ಲ. ಒಕ್ಕಲಿಗನು ಯಾರ ಮೇಲು ಅವಲಂಬಿತನಲ್ಲ. ತನ್ನ ಕಾಯಕವನ್ನು ನಿಷ್ಠೆಯಿಂದ ಮಾಡಿ ಬೆವರು ಸುರಿಸಿದರೆ ಅವನ ಬದುಕು ಹಸನಾಗಲೂ ಸಾಧ್ಯ. ಒಕ್ಕಲುತನದ ವೃತ್ತಿಯನ್ನು ಮಾಡಲು ಬೇಸರಪಟ್ಟುಕೊಳ್ಳದೇ ವ್ಯಾಪಾರ ಮನೋವೃತ್ತಿಯಿಂದ ಕೃಷಿಯನ್ನು ಮಾಡದೆ, ತಾನು ಬದುಕಿ ತನ್ನ ಅವಲಂಬಿತರನ್ನು ಸಾಕುವಂತಹ ಪವಿತ್ರವಾದ ಆಲೋಚನೆ ಕೃಷಿಕರಲ್ಲಿ ಇರಬೇಕು. ಒಕ್ಕಲಿಗನ ಮತ್ತು ಒಕ್ಕಲುತನ ಕುರಿತಾದ ಮಾಹಿತಿಯನ್ನು ಈ ಭಾಗದಲ್ಲಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಪಂಪಭಾರತದ ಹದಿಮೂರನೆ ಆಶ್ವಾಸದಲ್ಲಿ ಶಲ್ಯನ ಸಾವಿನ ನಂತರ ಏಕಾಂಗಿಯಾದ ದುರ್ಯೋಧನ ಸಂಜಯನ ಜೊತೆಗೆ ಮಾತನಾಡುವಾಗ 'ಬೆವಸಾಯಂ ಗೆಯಲಿನ್ನುಮುಂಟೆಡೆ.........' ಎನ್ನುತ್ತಾನೆ. ಇಲ್ಲಿ ಯುದ್ದದ ವರ್ಣನೆಯನ್ನು ಕೃಷಿಗೆ ಹೋಲಿಸುವ ಕವಿ ಬೇಸಾಯಕ್ಕೆ ಕೊನೆಯೆಂಬುದಿಲ್ಲ. ಹೋರಾಡುವ ವೀರನಿಗೂ ಕೂಡ ಸಾವಿನ ತನಕ ಯುದ್ದ ಕೊನೆಯಲ್ಲ. ಯುದ್ದದ ಬೇಸಾಯ ಮುಂದುವರೆಸಲು ಇನ್ನು ಅವಕಾಶವುಂಟು. ಆದರೆ ಒಬ್ಬಂಟಿಯಾಗಿ, ಸಮರ್ಥರೂ ಇಲ್ಲದಿರುವಾಗ ಈ ಕಾರ್ಯ ಮಾಡಲು ಸಾಧ್ಯವಿಲ್ಲ. ಅದೇ ರೀತಿ ಏಕಾಂಗಿಯಾಗಿ ಕೃಷಿಕಾರ್ಯ ನಿರ್ವಹಿಸುವುದು ತುಂಬಾ ಕಷ್ಟದ ಕೆಲಸವಾಗಿರುತ್ತದೆ. ವಡ್ಡಾರಾಧನೆಯ ಗುರುದತ್ತ ಭಟಾರರ ಕಥೆಯಲ್ಲಿ "............ಹಳಮುಖಿನೆಂಬ ಪಾರ್ವಂ ತನ್ನ ಮೂಡಣ ಕೆಯ್ಯನುಬಲೆಂದು ಪೋಗಿ ಕೆಸರಾದುದಂ

ಕಂಡು .... ಪಡುವಣ ಕೆಯ್ಯನೊಟಲ್ ....".[೫೬] ವರ್ಣಾಶ್ರಮ ಪದ್ಧತಿಯಲ್ಲಿ ವೈಶ್ಯ ಶೂದ್ರ ವರ್ಗಗಳು ಮಾತ್ರ ಶ್ರಮದಾಯಕ ಕೆಲಸ ನಿರ್ವಹಿಸುತ್ತಿದ್ದರು. ಆದರೆ ಈ ಕಥೆಯಲ್ಲಿ ಬರುವ ಹಳಮುಖನೆಂಬ ವ್ಯಕ್ತಿ ಬ್ರಾಹ್ಮಣನಾಗಿದ್ದು, ಕೃಷಿಕಾರ್ಯಮಾಡುವ ಬಗೆಯನ್ನು ಇಲ್ಲಿ ಕಾಣುತ್ತೇವೆ. ಪೂರ್ವದ ಹೊಲ ಕೆಸರಾಗಿರುವುದನ್ನು ಕಂಡು ಪಶ್ಚಿಮದ ಹೊಲವನ್ನು ಉಳುಮೆಮಾಡಲು ಹೋದನು ಎಂದು ಹೇಳಲಾಗಿದೆ. ಚಾಣುಕ್ಯ ಋಷಿಯ ಕಥೆಯಲ್ಲಿ "........... ಕೇಳ್ದೊರ್ವನೊಕ್ಕಲಿಗನೊಂದು ಪೇಱುಮಣ್ಣಂ ತಂದು ಶ್ರೀ ಪರ್ವತದ ಮೇಗೊಟ್ಟಿದೊಡಾತಂಗೊಂದು ಪೇಱು ಪೊನ್ನಂ ....ರಾಶಿಯಾಗೊಟ್ಟ ....".[೫೭] ಅಂದರೆ ಹೊನ್ನಿನ ಆಸೆಯನ್ನು ತೋರಿಸಿ ಒಕ್ಕಲಿಗರನ್ನು ವಂಚಿಸುವ ವರ್ಣನೆ ಕಂಡುಬರುತ್ತದೆ. ಬೆಟ್ಟದ ಮೇಲೆ ಒಂದು ಗಾಡಿ ಮಣ್ಣು ಹಾಕಿದರೆ ಒಂದು ಗಾಡಿ ಹೊನ್ನು ನೀಡುವುದಾಗಿ ಹೇಳಿ ಅದರಂತೆಕೊಟ್ಟು, ನಂತರ ಹೊನ್ನಿನ ಆಸೆಯಿಂದ ಒಕ್ಕಲಿಗರು ಮಣ್ಣು ಹೇರಿದ ಬಂಡೆಗಳನ್ನು, ಬೆಟ್ಟದ ತುದಿಗೆ ತೆಗೆದುಕೊಂಡು ಹೋಗಿ ಹಾಕಿ, ಹೊನ್ನು ಕೇಳಿದರೆ ಕೊಡದೆ ವಂಚಿಸಲಾಗುತ್ತಿತ್ತು. ಇಂತಹ ಸಾಮೂಹಿಕ ವಂಚನೆಗೆ ಮುಗ್ಧ ರೈತರು ನಿರಂತರವಾಗಿ ಬಲಿಯಾಗುತ್ತಾರೆ.

ಕರ್ನಾಟಕ ಪಂಚತಂತ್ರದ ಭೇದ ಪ್ರಕರಣದ ಒಂದು ಕಥೆಯಲ್ಲಿ ಉತ್ತಮ ಒಕ್ಕಲಿಗನ ಚಿತ್ರಣ ಕಂಡುಬರುತ್ತದೆ. ಎರಡು ನೇಗಿಲ ಬೇಸಾಯ, ಒಬ್ಬಳು ಹೆಂಡತಿ, ಮೂರು ಮಕ್ಕಳು ಹಾಗೂ ಹತ್ತು ಹಸುಗಳ ಹೈನುಗಾರಿಕೆ ಹೊಂದಿ ಸಾಲ ಮಾಡದೇ ಪರರ ಆಳಾಗದೇ ಸ್ವತಂತ್ರ ಜೀವನವನ್ನು ನಡೆಸುವ ಒಕ್ಕಲಿಗನ ಬದುಕು ಉತ್ತಮತರಹದ್ದು. "ಒಬ್ಬಳೆ ಹೆಂಡತಿ, ಮೂವರ್ ಪುತ್ರರ ಎರಡಾದ ಬೇಸಾಯಂ ಹತ್ತು ಹಸು ಕರುಹ ....".[೫೮] ಎನ್ನಲಾಗಿದೆ. ವ್ಯವಸಾಯದಲ್ಲಿ ಸಮರ್ಥನಾದ ಪುರುಷನು ಏನನ್ನಾದರೂ ಸಾಧಿಸುತ್ತಾನೆ. ಒಕ್ಕಲಿಗರು ಗಟ್ಟಿಗರು ಮತ್ತು ಸಮರ್ಥನಾಗಿರುತ್ತಾರೆಂದು ಇದೇ ಕೃತಿಯ ಮಿತ್ರಕಾರ್ಯ ಪ್ರಕರಣದಲ್ಲಿ ಹೇಳಲಾಗಿದೆ. ಆದರೆ ಇಂದಿನ ರೈತನ ಬದುಕು ಅನೇಕ ತಳಮಳಗಳಿಗೆ ಒಳಗಾಗಿ, ಬೇಸಾಯ ಬೇಡವಾಗಿ, ಮನೆಯ ಊಟ ರುಚಿ ಇಲ್ಲದಂತಾಗಿ, ಹೈನುಗಾರಿಕೆ ವ್ಯಾಪಾರೀಕರಣದ ದಾರಿಯನ್ನು ತುಳಿದು ತಿನ್ನಲು ಹಾಲು, ತುಪ್ಪ, ಮೊಸರಿಲ್ಲದ ಬರಡಾದ ಸ್ಥಿತಿ ರೈತನದಾಗಿದೆ. ನಯಸೇನನ ಧರ್ಮಾಮೃತದಲ್ಲಿ ಒಕ್ಕಲಿಗನ ಮಹತ್ವವನ್ನು ಕುರಿತು ಅನೇಕ ಕಡೆ ಹೇಳಿರುವ ಅಂಶ ಕಂಡುಬರುತ್ತದೆ. "ಒಂದು ವರುಷದಾರಂಭಕ್ಕಾರದೆ ಸಾವನ್ನೆವರ ಮೆಂಜಲಗೊವಿನಾಯ್ದುಬ್ಬೊಕ್ಕಲಮಗನು ....".[೫೯] ರೈತರು ಎಲ್ಲಾ ವರುಷಗಳಲ್ಲಿಯೂ ಉತ್ತಮ ಬೆಳೆ ಬೆಳೆಯುತ್ತಾರೆಂದು ಹೇಳಲಾಗದು. ಒಂದೊಂದು ವರ್ಷ ಬೆಳೆ ಬಾರದೆ ಇದ್ದಾಗ ಒಕ್ಕಲಿಗನು ತೃಪ್ತಿಯ ಜೀವನ ನಡೆಸಬೇಕೇ ಹೊರತು, ಕೊನೆ ತನಕ ಎಂಜಲ ಕೂಳಿಗೆ ಆಸೆ ಪಡಬಾರದು. ಅನ್ನದಾತನು ಎಂದೂ ಬೇಡುವಂತಹ ಪರಿಸ್ಥಿತಿಗೆ ಒಳಗಾಗಬಾರದು ಎನ್ನುತ್ತಾನೆ. ಇನ್ನೊಂದು ಕಡೆ "...........ಪೆಱರ ಬೆಳೆಸಂನಂಬಿ ಕೆಲಸಂ ಗೆಯ್ಯದೊಕ್ಕಲಿಗನುಮಂ .... ಮದುವೆಯ ಕೂಳಂ ನಂಬಿ ಮನೆಯ ಧಾನ್ಯಮಂ ಸೂಱೆಗೊಡುವ ಬೆಳ್ಳನುಮಂ........... ಕಳ್ಳಿಯಂ ನಂಬಿ ಕೌಂಗಿನ ತೋಟಮಂಕಡಿವ ತೋಟಿಗನುಮಂ ....".[೬೦] ಇಲ್ಲಿ ಒಕ್ಕಲಿಗನಿಗೆ ಇರಬೇಕಾದ ಸೂಕ್ಷ್ಮತೆಯನ್ನು ತಿಳಿಸುತ್ತಾನೆ. ಬೇರೆಯವರ ಬೆಳೆಯ ನಂಬಿ ತನ್ನ ಕೆಲಸ ಮಾಡದಿರುವುದು, ಮದುವೆಯ ಕೂಳನು ನಂಬಿ ಮನೆಯಲ್ಲಿಯ ದಾಸ್ತಾನುವನ್ನು ಸೂರೆ ಮಾಡುವವನು, ಕಳ್ಳಿಯ ನಂಬಿ ಅಡಕೆಯ ಮರ ಕಡಿಯುವ ತೋಟಿಗನು, ಒಕ್ಕಲುತನ ಮಾಡಲು ಯೋಗ್ಯರಲ್ಲದವರು. ವ್ಯವಹಾರಜ್ಞಾನ ರೈತರಿಗೆ ತುಂಬಾ ಅಗತ್ಯವಾದದ್ದು ಎಂಬ ಎಚ್ಚರಿಕೆಯನ್ನು ನೀಡುತ್ತಾನೆ. ಧರ್ಮಾಮೃತದಲ್ಲಿ ಅನೇಕ ಕಡೆ ಒಕ್ಕಲಿಗನನ್ನು ಕುರಿತಾದ ಮಾಹಿತಿಯನ್ನು ಕಾಣಬಹುದಾಗಿದೆ.

ಕೃಷಿ ಉಪಕರಣಗಳು : ಕಾಯಕ ಜೀವಿಗೆ ಕೈಗಳೇ ಆಧಾರ, ಕೈಗಳ ಮುಂದುವರಿಕೆಯೇ ಕೃಷಿ ಉಪಕರಣಗಳು. ಉಪಕರಣಗಳ ವಿನ್ಯಾಸದಲ್ಲಿ ತನ್ನ ಅನುಕೂಲದ ರೀತಿಯಲ್ಲಿ ತಯಾರಿಸಿ ಕೊಂಡಿದ್ದಾರೆ. ಕೊಯ್ಯುವ ಕುಡುಗೋಲಿನಿಂದ ಹಿಡಿದು ನೇಗಿಲು ಬಂಡಿಗಳಂತಹ ಸಂಕೀರ್ಣ ಅಂಶಗಳನ್ನು ಹೊಂದಿರುವ ಉಪಕರಣದವರೆಗೆ ಇದರ ವ್ಯಾಪ್ತಿ ಇದೆ. ಉಪಕರಣಗಳ ಸ್ವರೂಪದಲ್ಲಿ ಪ್ರಾದೇಶಿಕ ಭಿನ್ನತೆ, ಆಯಾ ಪ್ರದೇಶದ ಕೃಷಿ ವಿಧಾನ ಅವಶ್ಯಕತೆಗಳನ್ನು ಅವಲಂಬಿಸಿದೆ. ಪ್ರಾದೇಶಿಕವಾಗಿ ಭಿನ್ನವಾಗಿರುವ ಹೆಸರುಗಳು ಉಪಕರಣಗಳಿವೆ. ಕನ್ನಡ ಮಾರ್ಗಕಾವ್ಯಗಳಲ್ಲಿ ಕಂಡುಬರುವ ಉಪಕರಣಗಳನ್ನು ಕೃಷಿ ಸಲಕರಣೆಗಳು ಮತ್ತು ಕೃಷಿ ಉತ್ಪನ್ನ ಸಂಗ್ರಹಣೆಯ ಸಲಕರಣೆಗಳು ಎಂಬ ಎರಡು ಭಾಗದಲ್ಲಿ ಗುರುತಿಸಿ ಚರ್ಚಿಸಲಾಗಿದೆ.

ನೇಗಿಲು: ವ್ಯವಸಾಯದ ಕಸುಬಿನಲ್ಲಿ ತುಂಬಾ ಮಹತ್ವದ ಸಲಕರಣೆ ನೇಗಿಲು. ನೆಲವನ್ನು ಉಳುಮೆ ಮಾಡಲು ಬಳಸುವ ಸಾಧನ "ನೇಗಿಲು, ನೇಗಲ್, ನೇಗಲ, ನೇಗಲಿ, ನೇಗಲು, ನೇಗ್ಲ, ನೇಗ್ಲು, ನೇಗ್ಲಾ ಮುಂತಾದ ಉಚ್ಚರಣೆ ಹಾಗೂ ರೂಪ ವ್ಯತ್ಯಾಸಗಳನ್ನು ಗುರುತಿಸಲಾಗಿದೆ".[೬೧]

ಕರ್ನಾಟಕ ಕಾದಂಬರಿಯಲ್ಲಿ ಚಂದ್ರಾಪೀಡನ ಜನನದ ಸಂದರ್ಭದಲ್ಲಿ ಹೆರಿಗೆ ಮನೆಯಲ್ಲಿ ರೈತರು ಬಳಸುವ ನೇಗಿಲು ಮತ್ತು ಒನಕೆಯನ್ನು ಇಟ್ಟು ಪೂಜಿಸುವ ಅಂಶ ಕಂಡುಬರುತ್ತದೆ. "..........ಮುಸುಲ ಹಲಕಲಿತಮುಂಸಿತ ಕುಸುಮ ಮಿಶ್ರಿತ ....".[೬೨] ರಾಜನು ಚಿನ್ನದ ನೇಗಿಲು ಇಟ್ಟು ಪೂಜಿಸುವುದನ್ನು ಗಮನಸಿದರೆ ಕೃಷಿ ಬಗ್ಗೆ ರಾಜನಿಗಿರುವ ಕಾಳಜಿಯನ್ನು ಕಾಣಬಹದಾಗಿದೆ. ನಾಗಚಂದ್ರನ ಪಂಪರಾಮಾಯಣದಲ್ಲಿಯೂ ನೇಗಿಲಿನ ಉಲ್ಲೇಖ ಕಂಡುಬರುತ್ತದೆ. ನಯಸೇನನ ಧರ್ಮಾಮೃತದಲ್ಲಿ "ಮೂಗಿನೊಳುಳುವಾತಂಗೆ ನೇಗಿಲಂ ಕೊಟ್ಟರೆಂಬಂತೆ ....".[೬೩] ಇಲ್ಲಿಯೂ ನೇಗಿಲ ಪ್ರಸ್ತಾಪ ಕಾಣಸಿಗುತ್ತದೆ. ನೇಗಿಲ ತುದಿಯಲ್ಲಿ ಜೋಡಿಸುವ ಕಬ್ಬಿಣದ ಪಟ್ಟಿ, ಕುಂಟೆಗೆ ಜೋಡಿಸುವ ಕಬ್ಬಿಣದ ಪಟ್ಟಿ ಕುಡ. "ಪಲಗು, ಕುಡ್ಡ, ಕುಡ, ಕುಡಾ, ಕುಣ, ಕುಳ, ಗುಳ, ಮತ್ತು ಕುಳು ಎಂದು ಅನೇಕ ಬಗೆಯಲ್ಲಿ ಅರ್ಥಗಳುಂಟು".[೬೪] ಎಂದು ಉಲ್ಲೇಖಿಸಿರುವುದನ್ನು ಕಾಣಬಹುದು.

ಬಂಡಿ : ಪ್ರಾಚೀನ ಕಾವ್ಯಗಳಲ್ಲಿ ವರ್ಣಿಸುವಂತೆ ದವಸ ಧಾನ್ಯ ಸರಕು ಸರಂಜಾಮುಗಳನ್ನು ಸಾಗಿಸಲು, ವ್ಯಾಪಾರಿಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಮಾರಾಟದ ವಸ್ತುಗಳನ್ನು ಸಾಗಿಸಲು ಬಂಡಿ ಅಥವಾ ಗಾಡಿ ಬಳಸುತ್ತಿರುವ ಅಂಶ ಕಾಣಸಿಗುತ್ತದೆ. ಹಿಂದಿನ ಕಾಲದಲ್ಲಿ ರಾಜರು ಯುದ್ಧದ ಅನೇಕ ಸಾಮಾಗ್ರಿಗಳನ್ನು ಸಾಗಿಸಲು ಬಳಸುತ್ತಿದ್ದರು. ಬಂಡಿ ಬಹು ಉಪಯೋಗಿ ಉಪಕರಣವಾಗಿದ್ದು ಸಂಕೀರ್ಣ ಬಿಡಿಭಾಗಗಳಿಂದ ನಿರ್ಮಾಣವಾಗಿರುವಂಥದ್ದು. ಬಂಡಿಯನ್ನು ಅನೇಕ ವಿಧ ವಿಧದ ಹೆಸರುಗಳಿಂದ ಕರೆಯುವುದನ್ನು ಕಾಣುತ್ತೇವೆ. ಎತ್ತಿನಬಂಡಿ, ಎದ್ಲಬಂಡಿ, ಒಂಟೆತ್ತಿನಗಾಡಿ, ಪಾರೆಪಟ್ಟಿ ಗಾಡಿ, ಮಂಟಿಗಾಡಿ ಹಾಗೂ ಬೋರಿತ್ತಗಾಡಿ"[೬೫] ಎನ್ನಲಾಗಿದೆ. ಕೃಷಿಕರು ಹವಾಮಾನ ಮತ್ತು ಪ್ರಾದೇಶಿಕ ಹಿನ್ನಲೆಯಲ್ಲಿ ವೈವಿಧ್ಯಮಯ ಬಂಡಿಯನ್ನು ತಯಾರಿಸಿಕೊಳ್ಳುತ್ತಿದ್ದರು.

ವಡ್ಡಾರಾಧನೆಯ ಅನೇಕ ಕಥೆಗಳಲ್ಲಿಯೂ ಬಂಡಿ ಅಥವಾ ಪತ್ತಾನದ ಉಲ್ಲೇಖಗಳು ಕಂಡು ಬರುತ್ತವೆ. "ಗ್ರಾಮನಗರ ಖರ್ವಡ ಮಡಂಬ ಪತ್ತನ ದ್ರೋಣ ಮುಖಂಗಳಂ ವಿಹಾರಿಸುತ್ತುಂ ...."[೬೬] ಗ್ರಾಮ, ನಗರ, ಹಳ್ಳಿ ಪಟ್ಟಣಗಳನ್ನು ಸುತ್ತಲು ವ್ಯಾಪಾರಿಗಳು ಬಂಡಿಯನ್ನು ಬಳಸುತ್ತಿದ್ದರು. ಅಲ್ಲದೆ ನಯಸೇನನ ಧರ್ಮಾಮೃತದಲ್ಲಿ ಬಂಡಿಯ ಉಲ್ಲೇಖ ಅನೇಕ ಕಡೆಯಲ್ಲಿ ಕಾಣಸಿಗುತ್ತದೆ. "ಬಂಡಿಯಂತಿಪಿದ ಜೋಳಮಂ ತೆಗೆವ ಕೋಣಂ ಮೊರಂತಿಪಿದ ಧಾನ್ಯಮಂ ತೆಗೆಯಲಾಱದೆ?".[೬೭]

ಬಂಡಿಯಲ್ಲಿ ಧಾನ್ಯವನ್ನು ತುಂಬಿ ಕಣದಿಂದ ಮನೆಗೆ ಸಾಗಿಸಿ ಹಗೇವುಗಳಿಗೆ ಹಾಕುತ್ತಿದ್ದರು. ಬಂಡಿಯಲ್ಲಿ ತುಂಬಿದ ಜೋಳವನ್ನು ತಿನ್ನುವ ಕೋಣ, ಮರದಲ್ಲಿ ತುಂಬಿದ ಜೋಳವನ್ನು ತಿನ್ನದೆ ಇರುತ್ತದೆಯೆ? ಎನ್ನುತ್ತಾರೆ. ಪಂಚತಂತ್ರ, ಸಿದ್ದರಾಮ ಚರಿತ್ರೆಯಲ್ಲಿಯೂ ಬಂಡಿಯ ಉಲ್ಲೇಖ ಕಂಡುಬರುವುದನ್ನು ಕಾಣಬಹುದು. ಅದರಂತೆ ಜಗನ್ನಾಥವಿಜಯದಲ್ಲಿ "....... ಶಕಟ ಕುಠಾರನ ಕಾಲಬಳಿಯಿಂ ನುರ್ಚುನೂಱಾಗಿ ಪಾಱೆ ಕಡೆದ ಕಠಿಣ ಶಕಟದೀಶಾ ....".[೬೮] ಬಂಡಿಯ ಆಕಾರ ಅದರ ಈಸುಗಳ ವರ್ಣನೆಯನ್ನು ಇಲ್ಲಿ ಮಾಡಲಾಗಿದೆ.

ಮಿಣಿ : ಮಿಣಿ (ಮಿಳಿ) ಎಂದರೆ ಸಣ್ಣ ನೀರಾವರಿಯಲ್ಲಿ ಕಪ್ಲಿಗಾಗಿ ಬಳಸುವ ದೊಡ್ಡಹಗ್ಗ, ನೇಗಿಲನ್ನು ನೊಗಕ್ಕೆ ಕಟ್ಟಲು ಬಳಸುವ ಹಗ್ಗ, ನಾಲ್ಕೆತ್ತು ಕುಂಟೆ ಹೊಡೆಯುವಾಗ ಜೋಡಿ ಎತ್ತುಗಳ ನೊಗವನ್ನು ಬಳಸಿ ಕಟ್ಟಲು ಮಾಡಿರುವ ತೊಗಲಿನಹಗ್ಗ ಎಂದು ಹೇಳಲಾಗುತ್ತದೆ. ಹಗ್ಗದಲ್ಲಿ ಹಲವಾರು ಬಗೆಗಳನ್ನು ಕಾಣುತ್ತೇವೆ. "ಕೈಹಗ್ಗ, ಕೊನೆಹಗ್ಗ, ಒಡ್ಕಹಗ್ಗ, ಕಡಕಿಹಗ್ಗ, ಕೊಯ್‌ಹಗ್ಗ, ಕೊರಳಹಗ್ಗ, ಗೇಯಹಗ್ಗ, ಡವಣಿಹಗ್ಗ, ಡವಣಿನೇಣ್, ತೆಂಗಿನ ಗುಂಜಿನಹಗ್ಗ, ಡಾವಣಿಹಗ್ಗ, ನಸೆಹಗ್ಗ ಮುಂತಾದವುಗಳು".[೬೯] ಹಗ್ಗದ ವಿವಿಧ ಬಗೆಯ ವಿಚಾರಗಳನ್ನು ತಿಳಿಯಪಡಿಸುತ್ತವೆ.

ರಾಟಾಳ : ಪ್ರಾಚೀನ ಕಾಲದಲ್ಲಿ ಬಾವಿಯಿಂದ ನೀರು ತರಲು ಬಳಸುತ್ತಿದ್ದ ಯಂತ್ರ ಇದಾಗಿದ್ದು." ರಾಟೆ ಎಂದರೆ ಕಪ್ಲಿಗಾಗಿ ಬಳಸುವ ಹಗ್ಗ. ತೋಟದಲ್ಲಿ ಬಾವಿಯಿಂದ ನೀರನ್ನು ಎತ್ತುವಾಗ ಇದನ್ನು ಬಳಸಲಾಗುತ್ತದೆ. ಪಂಪನ ಆದಿಪುರಾಣದಲ್ಲಿ ".......... ರಾಟಾಣದೊಳಗಮ್ಮ ನೀಂ ಮೊಗೆಪೆಯಾಗದೆ ....".[೭೦] ಇಲ್ಲಿ ಇಡೀ ಸಂಸಾರವನ್ನು ಕವಿ ರಾಟಾಳಕ್ಕೆ ಹೋಲಿಸಿದ್ದಾನೆ. "ಘಟಿಯಂತ್ರವೆಂಬ ನೀರೆತ್ತುವ ಯಂತ್ರವೊಂದು ವಚನಕಾರರ ಕಾಲದಲ್ಲಿ ಬಳಕೆಯಲ್ಲಿತ್ತು. ಆದರೆ ವಚನಗಳಲ್ಲಿ ಇದರ ಪರ್ಯಾಯನಾಮವಾದ ಱಾಟಾಳ ಅಥವಾ ಱಾಟಾಳವು ಉಕ್ತವಾಗಿದೆ. ಕೆಲವು ಕಾವ್ಯಗಳಲ್ಲಿ 'ಱಾಟಾಣ' ಎಂಬ ರೂಪವು ದೊರೆಯುತ್ತದೆ. ಘಟೀಯಂತ್ರದಲ್ಲಿ ಮೇಲ್ಗಡೆ ಚಕ್ರ ತಿರುಗುತ್ತಿರುತ್ತದೆ. ಯಂತ್ರಕ್ಕೆ ಎತ್ತುಗಳನ್ನು ಹೂಡಿರುತ್ತಾರೆ. ನೀರನ್ನು ಹೊತ್ತು ಮೇಲಕ್ಕೆ ಒಂದು ಸಾಲು ಕುಂಭಗಳು ಬರುತ್ತಿದ್ದರೆ, ನೀರನ್ನು ಸುರಿದು ಬರಿದಾದ ಕುಂಭಗಳ ಒಂದು ಸಾಲು ಕೆಳಕ್ಕೆ ಇಳಿಯುತ್ತಿರುತ್ತದೆ".[೭೧] ಇದರ ಕಾರ್ಯವಿಧಾನವನ್ನು ಚಿದಾನಂದ ಮೂರ್ತಿಯವರು ಶಾಸನವೊಂದರ ಆಧಾರದಿಂದ ಉಲ್ಲೇಖಿಸುತ್ತಾರೆ.

ಕೊಡಲಿ ಸೌದೆ, ಕೃಷಿಗೆ ಬೇಕಾದ ವಸ್ತುಗಳನ್ನು ಕಡಿಯಲು ಬಳಸುವ ಸಾಧನ. "ಕೊಡ್ಲಿ, ಗೊಡ್ಲಿ, ಕೊಳ್ಳಿ, ಕೊಡ್ಲೆ, ಬಾಯಿಕೊಡ್ಲಿ, ಬಾಯಿಗೊಡ್ಲಿ, ಕೊಡಲಿ, ಕೈ ಕೊಡಲಿ".[೭೨] ಮುಂತಾದ ಭಿನ್ನ ಭಿನ್ನ ಅರ್ಥಗಳುಂಟು, ಆದಿಪುರಾಣದಲ್ಲಿ "ಪರಶು ಪಳಾಕ್ಷ ಸೂತ್ರ ವರದೋಚಿತ ಚಿಹ್ನೆ ....'[೭೩] ಪರಶು ಎಂದರೆ ಕೊಡಲಿ ಎಂಬ ಅರ್ಥವುಂಟು; ಜಗನ್ನಾಥ ವಿಜಯದಲ್ಲಿಯೂ ಕೊಡಲಿಯ ಉಲ್ಲೇಖ ಕಂಡು ಬರುತ್ತದೆ. ಗೊಟ್ಟ ದನಗಳಿಗೆ ಔಷಧಿ ಕುಡಿಸಲು ಬಳಸುವ ಬಿದಿರಿನ ಸಲಕರಣೆ. ಕೊಟ್ಟ ಎಂದು ಕೊಟ್ಟೆ ಎಂದು ಕರೆಯುತ್ತಾರೆ. ರನ್ನನ ಗದಾಯುದ್ಧದಲ್ಲಿ "......... ಮೆಯ್ಯಡಗುಂ ತಿಱಿತಿಱಿದು ತಿಂದುಂ ಗೊಟ್ಟಂಗುಡಿದುಂ ....".[೭೪] ಭೀಮನು ದುಶ್ಶ್ಯಾಸನನ ರಕ್ತಮಾಂಸವನ್ನು ಕುಡಿಯುವ ಬಗೆಯನ್ನು ವರ್ಣಿಸುವಾಗ ಕವಿ ಗೊಟ್ಟದ ಉಲ್ಲೇಖ ಮಾಡಿರುವನು. ದನಕರುಗಳಿಗೆ ಕಾಯಿಲೆ ಬಂದಾಗ ಔಷಧಿ ಕುಡಿಸಲು, ಸಣ್ಣ ಕರುಗಳಿಗೆ ರಾಗಿ ಅಂಬಲಿ, ಗಂಜಿ ಕುಡಿಸಲು ಇದನ್ನು ಬಳಸುತ್ತಾರೆ. ಇವುಗಳಲ್ಲಿ ದೊಡ್ಡದು, ಸಣ್ಣದು, ಮಧ್ಯಮ ಗಾತ್ರ ಹೊಂದಿರುವವು ಇವೆ. ಯಾವ ಯಾವ ಪ್ರಾಣಿಗಳಿಗೆ

ಯಾವುದನ್ನು ಬಳಸಬೇಕೆಂಬ ಜ್ಞಾನ ರೈತಾಪಿವರ್ಗದವರಿಗೆ ಇರುತ್ತದೆ. ಗೊಟ್ಟ ಎಂಬ ಪದಕ್ಕೆ ದನದ ಕೊಟ್ಟಿಗೆ, ಗೋಶಾಲೆ ಎಂಬ ಅರ್ಥಗಳು ಇರುವುದು ವಿಶೇಷವಾಗಿದೆ.

ಜಾನುವಾರುಗಳಿಗೆ ಬಳಸುವ ಇನ್ನೊಂದು ಉಪಕರಣ ಬಾಯಿಕುಕ್ಕೆ. 'ಬಾಯಿಜಾಳಿಗೆ' ಎಂದು ಕರೆಯಲಾಗುತ್ತದೆ. ಹೊಲಗದ್ದೆಗಳಲ್ಲಿ ಪೈರು ಬೆಳೆದಿರುವಾಗ ಉಳುಮೆಯ ಸಂರ್ಭದಲ್ಲಿ ಎತ್ತುಗಳು ಬೆಳೆ ತಿನ್ನದಂತೆ ಬಾಯಿಕುಕ್ಕೆ ಕಟ್ಟುತ್ತಾರೆ. ಬಾಯಿಗೆ ಕಟ್ಟುವ ಜಾಳಿಗೆ, ಬಾಜಾಳಗಿ, ಚಿಕ್ಕ ಮುಸುಕಿ, ಬಾಯಿಕುಕ್ಕೆ ಎಂದು ಕರೆಯಲಾಗುತ್ತದೆ. ವಡ್ಡಾರಾಧನೆಯ ಒಂದು ಕಥೆಯಲ್ಲಿ "......... ತನ್ನಾರಂಭದ ಕೆಯ್ಗಳ ನೊಕ್ಕುವೆಟ್ತಗಳ ಬಾಯಂ ಕಟ್ಟಿಯೊಕ್ಕಿಸುಗುಂ ...."[೨೫] ಈ ರೈತನು ತುಂಬಾ ಲೋಭಿಯಾಗಿದ್ದು; ಎತ್ತುಗಳಿಗೆ ಉಳುಮೆ ಮಾಡುವಾಗ ಮತ್ತು ಕಣಗಳಲ್ಲಿ ಒಕ್ಕಲು ಮಾಡುವಾಗ ಬಾಯಿಯನ್ನು ಬಿಗಿಯಾಗಿ ಕಟ್ಟುತ್ತಿದ್ದನು. ಇದೆ ಮುಂದೆ ಬಾಯಿಕುಕ್ಕೆಯ ಬಳಕೆಗೆ ಪ್ರೇರಣೆಯಾದಂತಿದೆ.

ಮಳೆ ಮತ್ತು ಹವಾಮಾನ : ವ್ಯವಸಾಯದ ಕಸುಬಿಗೆ ಮಳೆಯೇ ಮೂಲಾಧಾರ, ಮನುಷ್ಯನ ಜೀವನದ ಮೂಲ ನೆಲೆಯಾದ ಜಲ ಮತ್ತು ಹವಾಮಾನ ತುಂಬಾ ಪ್ರಮುಖವಾದದ್ದು. ಕಾಲ ಕಾಲಕ್ಕೆ ಮಳೆಯಾದರೆ ರೈತನ ಬಾಳು ಹಸನಾಗುತ್ತದೆ. ಇಲ್ಲವಾದರೆ ಬರೀ ಗೋಳಾಟದಲ್ಲಿ ರೈತರು ಒಳಗಾಗುತ್ತಾರೆ. ಕೃಷಿಕರ ಬದುಕಿನಲ್ಲಿ ಮಳೆಯ ಪಾತ್ರ ಹಿರಿದಾದುದು ಮತ್ತು ನಿರ್ಣಾಯಕವಾದುದು. ಭಾರತದ ಕೃಷಿ ಮುಂಗಾರು ಮಳೆಯ ಮೇಲೆ ಹೆಚ್ಚು ಅವಲಂಬಿತವಾಗಿದೆ. ಪ್ರಾಚೀನ ಕಾಲದಲ್ಲಿ ನಮ್ಮ ಹಿರಿಯರು ಮಳೆಯನ್ನು ದೇವರೆಂದೆ ನಂಬಿದ್ದರು. ಪ್ರಾಚೀನ ಮಾರ್ಗಕವಿಗಳ ಕೃತಿಗಳಲ್ಲಿ ಮಳೆಯ ಕುರಿತಾದ ಉಲ್ಲೇಖಗಳು ಅನೇಕ ಕಡೆಯಲ್ಲಿ ಕಂಡುಬರುತ್ತವೆ. ಅಂಥವುಗಳನ್ನು ಕ್ರೋಢಿಕರಿಸಿ ಇಲ್ಲಿ ಚರ್ಚಿಸಲಾಗಿದೆ. ಪಂಪಭಾರತದಲ್ಲಿ ಮಳೆಯ ರೌದ್ರತೆ, ಲಾಲಿತ್ಯ, ಮಾಧುರ್ಯತೆಯನ್ನು ಅನೇಕ ಕಡೆಗಳಲ್ಲಿ ಕವಿ ಅದ್ಭುತವಾಗಿ ವರ್ಣಿಸಿರುವುದು ಕಾಣಬಹುದು.

"ದೆಸೆಪಸುರೇಱ ಪಚ್ಚೆಯೊಳೆ ಮುಚ್ಚಿ ಮುಸುಂಕಿದ ಮಾೞ್ಕೆಯಾದುದಾ
ಗಸಮುಳಿ ನೀಳ ನೀಳ ಗಳಕಂಠತಮಾಳ ವಿನೀತ ನೀರದ
ಪ್ರಸರ ವಿಭಾಸಿಯಾದುದು ಸಮಿರನುದರ ಕದಂಬಕೇತಕಿ
ಪ್ರಸರ ರಜಸ್ವರ ಪ್ರಕಟ ಪಾಂಸುಳ ಮಾದುದು ಮೇಘಕಾಲದೊಳ್ ॥"[೨೬]

ಪಂಪನ ಮೇರು ಕೃತಿಗಳಲ್ಲಿ ಮಳೆಯನ್ನು ಕುರಿತಾಗಿ ಅನೇಕ ಕಡೆ ಅರ್ಥಪೂರ್ಣವಾದ ವರ್ಣನೆಯನ್ನು ಮಾಡಿದ್ದಾನೆ. ಕಪ್ಪನೆಯ ಮೋಡ ಆಕಾಶವನ್ನು ಆವರಿಸಿದರೆ ಹೆಚ್ಚು ಮಳೆ ಬರುವ ಸೂಚನೆಯನ್ನೂ, ಅಂತಹ ಮೋಡಗಳು ಕಂಡ ಮಂಡಲವಾಗಿ ಭಯಂಕರ ಮಳೆಯನ್ನು ಸುರಿಸಿ ನದಿ, ಬೆಟ್ಟ, ದಿಣ್ಣೆ ದಿಬ್ಬಗಳನ್ನೂ ಸಮತಟ್ಟಾಗಿ ಮಾಡಿಕೊಂಡು ಹರಿಯುವ ನೀರಿನ ವರ್ಣನೆ, ಇಡೀ ಭೂಮಿ ಜಲಾವೃತವಾಗಿ ಜನರಿಗೆ ಆಶ್ರಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವರ್ಣಿಸುತ್ತಾನೆ. ಜಿ.ಎಸ್. ಶಿವರುದ್ರಪ್ಪನವರು ಪಂಪನ ಪ್ರಕೃತಿಯ ವರ್ಣನೆಯನ್ನು ಕುರಿತು ಹೀಗೆ ವಿವರಿಸುತ್ತಾರೆ. "ಪಂಪನ ಕಣ್ಣು ಪ್ರತಿಯೊಂದು ಋತುವಿನ ಸೌಂದರ್ಯದ ಪದರ ಪದರಗಳನ್ನು ಬಲ್ಲದು. ಮಳೆ ಮೋಡಕಟ್ಟಿದಾಗ, ದಿಕ್ಕೆಲ್ಲವು ಹಸುರಾಗಿ ಪಚ್ಚೆಯಲ್ಲಿ ಮುಸುಕಿದಂತಾಯಿತು. ಆಕಾಶದಲ್ಲಿ ದುಂಬಿಗಪ್ಪಿನ ನವಿಲಿನ ಕಂಠದ ನೀಲಿಯ, ಹೊಂಗೆಯ ಶಾಮಲತೆಯ, ಬಣ್ಣದ ಮೋಡಗಳ ಪ್ರಸಾರ ಹೊಳೆಯ ತೊಡಗಿತು. ಕದಂಬ ಕೇತು ಕುಸುಮಗಳ ಪರಾಗ ಪಂಜ ಲಿಪ್ತವಾದ ಗಾಳಿ ಬೀಸತೊಡಗಿತು.

ಸ್ವಾನುಭವದಿಂದ ಬಂದ ಈ ಬಣ್ಣನೆಯಲ್ಲಿ ಸೊಗಸಿದೆ, ವಿಶಿಷ್ಟತೆಯಿದೆ."[೭೭] ಎನ್ನುತ್ತಾರೆ. ಆದಿಪುರಾಣದ ಒಂದು ಪದ್ಯದಲ್ಲಿ "ಅಂಬೋಭಾರ ವಿಜೃಂಬಿತ ಕುಂಭಾರಿ ಬೋದಂಗಳಂದದಿಂ ಸುರಿಯೇ ....".[೭೮] (ಪುಟ–೩೪೬) ನೀರಿನಿಂದ ತುಂಬಿ ಭಾರವಾದ ಮೋಡಗಳಂತೆ ಇರುವ ಕುಂಭಗಳು ನೀರನ್ನು ಸುರಿಸಲು ಭೂಮಿಯ ಮಜ್ಜನವಾಯಿತು ಎನ್ನಲಾಗಿದೆ. ಪಂಪನಿಗೆ ಸಂಸ್ಕೃತಿಯ ಗಾಢ ಅನುಭವ ಇರುವುದನ್ನು ಇದು ಸೂಚಿಸುತ್ತದೆ. ಏಕೆಂದರೆ ಕೆಲವು ಕಡೆ ಕುಂಭಗಳಲ್ಲಿ ನೀರು ತುಂಬಿ ಅದು ಯಾವ ದಿಕ್ಕಿಗೆ ಉರುಳುತ್ತಿದೆಯೋ ಆ ದಿಕ್ಕಿಗೆ ಮಳೆ ಹೆಚ್ಚು ಎಂದು ಹೇಳುವ ಜನಪದ ನಂಬಿಕೆ ನಮ್ಮಲ್ಲಿರುವುದನ್ನು ಕಾಣುತ್ತೇವೆ.

'ಕರ್ನಾಟಕ ಕಾದಂಬರಿ'ಯಲ್ಲಿ ವಿಳಾಸವತಿ ಗರ್ಭಧರಿಸುವ ಸಂದರ್ಭವನ್ನು ಮಳೆಯ ಮೋಡಕ್ಕೆ ಹೋಲಿಸಿ ಕವಿ ಅದ್ಭುತವಾಗಿ ವರ್ಣಿಸುತ್ತಾನೆ. "ಮಳೆಗಾಲದಂತೆ ಕಪ್ಪಂ ತಳೆದು ಪಯೋಧರ ಮುಖಂಗಳೆಸೆಯುತ್ತಿರ ಲಲನೆ ನವಗರ್ಭ ಪಾಂಡುರ.........."[೭೯] ತುಂಬಿರುವ ಮೋಡದಂತೆ ಮಂದಗಮನ ನಡೆಯಲ್ಲಿ ತೊಡಗಿದಳು. ಅವಳ ಸ್ತನಾಗ್ರವು ಮಳೆಗಾಲದ ಮೊಡಗಳಂತೆ ಕಪ್ಪು ಬಣ್ಣಕ್ಕೆ ತಿರುಗಿ ಶೋಭಿಸಿದವು ಎನ್ನುತ್ತಾನೆ.

ನಯಸೇನನ ಧರ್ಮಾಮೃತದಲ್ಲಿ ಮಳೆಯನ್ನು ಕುರಿತು ಈ ರೀತಿ ಪ್ರಸ್ತಾಪಿಸಲಾಗಿದೆ. "ಮಱೆಯಿಲ್ಲದೆ ಪೊಯ್ನೀರುಂ ಬೆಳಗುಮೆಧರೆ ....".[೮೦] ಮಳೆಯಿಲ್ಲದೆ ಬೆಳೆಯನ್ನು ಬೆಳೆಯಲು ಸಾಧ್ಯವಿಲ್ಲ. ಬೆಳೆಗೆ ಮಳೆಯೇ ಆಧಾರ. ಹೊಯ್ಯುವ ನೀರಿನಿಂದ ಬೆಳೆಗಳು ಸಮೃದ್ಧವಾಗಿ ಬೆಳೆಯಲು ಸಾಧ್ಯವಿಲ್ಲ. ಮಳೆ ನೀರು ಧರೆಯನ್ನು ಶೋಭಿಸಲು ಅವಶ್ಯಕವಾಗಿ ಬೇಕೆ ಬೇಕು ಎನ್ನುತ್ತಾರೆ. ಹರಿಹರನು ತನ್ನ ಕೃತಿಗಳಲ್ಲಿ ಮಳೆಯನ್ನು ಕುರಿತು ಅನೇಕ ಬಗೆ ಬಗೆಯಲ್ಲಿ ವರ್ಣಿಸಿದ್ದಾನೆ. ಅವನ ಗಿರಿಜಾಕಲ್ಯಾಣದಲ್ಲಿ ಮಳೆಯ ವಿಧಗಳನ್ನು ಕುರಿತು ಹೇಳಿರುವ ಅಂಶ ಕಂಡುಬರುತ್ತದೆ. "ಎಳನೆನೆಗಳ ಮೆಲ್ಸರಿನನೆಗಳ ಬಲ್ಸರಿ ಮುಗುಳ ತಂದಲ ಮೊಗ್ಗೆಯ ಪೆರ್ಮಳೆಯಲರ್ಗಳ ಬಱುಮಳೆ ....".[೮೧] ಮೃದುಮಳೆ, ದೊಡ್ಡಮಳೆ, ಓರಿಮಳೆ, ಬಿಡುಮಳೆ, ಸೋನೆಮಳೆ ಮುಂತಾದವುಗಳು. ಹರಿಹರನಷ್ಟು ಅದ್ಭತವಾಗಿ ಮಳೆಯ ವರ್ಣನೆಯನ್ನು ಬೇರಾವ ಕವಿಗಳು ಮಾಡಲಿಲ್ಲವೇನೋ ಎನ್ನುವಂತಿದೆ. "ಒತ್ತರಿಸುತ್ತಂ ಬರಮಂ ಮುತ್ತುತ್ತಂ ದಿಗ್ವಿತಾನಮಂ ಧರೆಯೊಳ್ ತೀವುತ್ತುಂ .... ಜಿನುಗಿದವು ಸೋನೆ ಇರುಳುಂ ಪಗಲುಂ".[೮೨] ಆಕಾಶವನ್ನೆಲ್ಲ ತುಂಬಿಕೊಂಡು ದಿಕ್ಕು ದಿಕ್ಕುಗಳಿಗೂ ವ್ಯಾಪಿಸಿದ ಮಳೆಯ ಮೋಡಗಳು ನಿರಂತರವಾಗಿ ಹಗಲು ರಾತ್ರಿ ಸೋನೆ ಮಳೆ ಸುರಿಸಿದವು ಎನ್ನುತ್ತಾನೆ. ಗಗನದಲ್ಲಿ ತುಂಬಿದ ಮೋಡಗಳು ಆನೆಯಂತೆ, ಗಿರಿಯಂತೆ ಕಂಗೊಳಿಸುತ್ತವೆ. ಗುಡುಗು ಮಿಂಚು ಸಿಡಿಲುಗಳ ಶಬ್ದ ಮೊಳಗುತ್ತದೆ. ಆಲಿ ಕಲ್ಲುಗಳು ಬೀಳುತ್ತವೆ. ಮಳೆಯ ನೀರಿಗಾಗಿ ಜಾತರ ಪಕ್ಷಿಗಳು ಕಾಯುತ್ತವೆ, ಎಂದು ವರ್ಣಿಸುತ್ತಾನೆ. ಸೂರ್ಯ, ಚಂದ್ರ ದರ್ಶನವೇ ಇಲ್ಲದಂತಾಗಿ ಹಕ್ಕಿಗಳ ಸಂಚಾರ ನಿಂತು ಹೋಗುವಂತೆ ಜಡಿಮಳೆ ಕಂಡ ಮಂಡಲವಾಗಿ ಸುರಿಯುತ್ತವೆ ಎನ್ನುತ್ತಾನೆ.

ನೇಮಿನಾಥ ಪುರಾಣದಲ್ಲಿ ಮೋಡಗಳು ಸಮುದ್ರದಿಂದ ನೀರು ಶೇಖರಣೆ ಮಾಡುತ್ತ ಮತ್ತೆ ಮತ್ತೆ ಸಿಡಿಲು ಮಿಂಚುಗಳಿಂದ ಆಲಿಕಲ್ಲಿನ ಮಳೆ ಸುರಿಸುತ್ತವೆ. ಎನ್ನುವಲ್ಲಿ ಮಳೆ ಸೃಷ್ಟಿಯಾಗುವ ವೈಜ್ಞಾನಿಕ ವಿಧಾನವನ್ನು ಸೂಚಿಸುವ ಕಲ್ಪನೆ ಇಲ್ಲಿ ಕಂಡುಬರುತ್ತದೆ. "ಸಿಡಿಲ ಸೆಱೆ ಮೊಱಗುಗಳ ಪೊಱೆ ಕುಡು ಮಿಂಚು ಸೋನೆ ....'.[೮೩] ಅಧ್ಯಾಯ ಎಂಟರಲ್ಲಿ ಅನೇಕ ಪದ್ಯಗಳಲ್ಲಿ ಮಳೆಯ

ವರ್ಣನೆಯನ್ನು ಕವಿ ಮಾಡಿದ್ದಾನೆ. ಜಗನ್ನಾಥ ವಿಜಯದಲ್ಲಿಯೂ "ಬಲ್ಸರಿ ಬಿಱುಸರಿ ಪೆರ್ಮಳೆ ಮೇಲ್ಸಂ ತುಂತುರ್ ತುಷಾರ ...."[೮೪] ದೊಡ್ಡಮಳೆ ಜೋರುಮಳೆ, ಸಣ್ಣಮಳೆ, ತುಂತುರುಮಳೆ, ಹಿಮಮಳೆಗಳೆಂದು ವರ್ಣಿಸುತ್ತಾನೆ.

ನೀರಾವರಿ ವ್ಯವಸ್ಥೆ : ವ್ಯವಸಾಯ ಯೋಗ್ಯ ಭೂಮಿಯನ್ನು ನೀರಾರಂಭ, ಖುಷ್ಕಿ ಭೂಮಿ ಎಂದು ಎರಡು ಭಾಗ ಮಾಡಿರುವುದನ್ನು ಕಾಣುತ್ತೇವೆ. ಖುಷ್ಕಿ ಭೂಮಿಯ ಸಾಗುವಳಿಗೆ ಮಳೆಯ ನೀರೆ ಆಧಾರ. ನೀರಾವರಿ ಬೇಸಾಯಕ್ಕೆ ಕೆರೆ, ಬಾವಿ, ನದಿ, ಕಾಲುವೆ ಹಳ್ಳಕೊಳ್ಳಗಳಿಂದ ನೀರನ್ನು ಬಳಸಿಕೊಳ್ಳಲಾಗುತ್ತದೆ. ಪ್ರಾಚೀನ ಶಾಸ್ತ್ರ ಕೃತಿಗಳು, ಶಾಸನಗಳಲ್ಲಿ ಕೆರೆಗಳ ನಿರ್ಮಾಣ, ದುರಸ್ತಿ, ಕೆರೆಯ ನೀರನ್ನು ಬಳಸಿಕೊಳ್ಳಲು ಇರುವ ತೂಬಿನ ವ್ಯವಸ್ಥೆ ಮುಂತಾದ ಮಾಹಿತಿಯನ್ನು ಕಾಣಬಹುದಾಗಿದೆ. ಕನ್ನಡ ಶಿಷ್ಟ ಕಾವ್ಯಗಳಲ್ಲಿಯೂ ನೀರಾವರಿಯ ವಿಧಾನದ ಅಂಶಗಳನ್ನು ಕಾಣುತ್ತೇವೆ. ಅಂಥವುಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ನಯಸೇನನ ಧರ್ಮಾಮೃತ ಕೃತಿ ಲೋಕಾನುಭವವನ್ನು ಸಾರವತ್ತಾಗಿ ಸಾರುವ ಗ್ರಂಥವಾಗಿದೆ. ಕೆರೆಯ ನಿರ್ಮಾಣ, ಕೆರೆಗೆ ತೂಬಿನ ವ್ಯವಸ್ಥೆ, ಕೋಡಿಯ ನಿರ್ಮಾಣ, ಕೆರೆಯ ನಿರ್ಮಾಣವನ್ನು ಎಂತಹ ಮಣ್ಣಿನಲ್ಲಿ ಮಾಡಬೇಕೆಂಬ ಪರಿಜ್ಞಾನ ಮುಂತಾದ ಅಂಶಗಳು ಈ ಕೃತಿಯಲ್ಲಿ ಹೇರಳವಾಗಿ ದೊರೆಯುತ್ತವೆ. "ತೂಬಿಲ್ಲದೆ ಕೆಱೆಯಂ ಕಟ್ಟುವೆನೆಂಬ ಕಾಲಿಲಲ್ಲದೆ ಪರಿವೆನೆಂಬ...........".[೮೫] ಕೆರೆಗೆ ತೂಬು ತುಂಬಾ ಮಹತ್ವದ್ದು; ಮನುಷ್ಯನಿಗೆ ನಡೆಯಲು ಕಾಲು ಎಷ್ಟು ಮುಖ್ಯವೋ ಅಷ್ಟೇ ಪ್ರಮುಖವಾದುದು. ಕೆರೆಗಳು ನೀರಿನ ಹೊಂಡಗಳಾಗಬಾರದು ಉತ್ತಮ ಮಳೆ ಬಂದಾಗ ಕೆರೆ ತೊರೆಗಳು ತುಂಬಿ ಹರಿಯುತ್ತವೆ. ಅಂತಹ ನೀರನ್ನು ಸಂಗ್ರಹಿಸಲು ಕೆರೆಗಳ ನಿರ್ಮಾಣ ಅನಿವಾರ್ಯ. ಕೆರೆಗಳಿಗೆ ತೂಬಿನಷ್ಟೇ ಪ್ರಮುಖವಾದುದು ಕೋಡಿಯಾಗಿದೆ'......... ಎಱಿಯ ಕೆರೆಯ ನಿರ್ಮಾಣ ನೀರಿಲ್ಲದೆ ಬತ್ತಿದ.........' ಎರೆಯಭೂಮಿ ಕೆರೆ ನಿರ್ಮಾಣಕ್ಕೆ ಯೋಗ್ಯವಲ್ಲ, ಅಂತಹ ಕಡೆಯಲ್ಲಿ ಕೆರೆ ನಿರ್ಮಿಸಿದರೆ ಆಳವಾದ ಬಿರುಕುಗಳುಂಟಾಗುತ್ತವೆ ಎನ್ನುತ್ತಾನೆ. 'ಕೆಱೆಯಂ ಕಂಡು ಕಳವೆಯಂ ಬಿತ್ತುವಂತೆ................' ಕೆರೆಯ ನೀರಿನಿಂದ ಭತ್ತ ಬೆಳೆಯುವ ಬಗೆಯನ್ನು ಸೂಚಿಸುತ್ತಾನೆ.

ಕೆಳದಿನೃಪ ವಿಜಯದಲ್ಲಿ ಕಾಲುವೆ ನೀರನ್ನು ಉಪಯೋಗಿಸಿಕೊಂಡು ಭೂಮಿಯಲ್ಲಿ ಬೆಳೆ ಬೆಳೆಯುವ ಅಂಶದ ಉಲ್ಲೇಖ ಕಂಡುಬರುತ್ತದೆ.

"ಪ್ರಜೆಗಳುಸಿರ್ವ ಭಿನ್ನಪವನಾಲಿಸಿಯೊಳ್ಗೆರೆ ಕಾಲ್ಪುರಂಗಳಂ
ಸೃಜಯಿಸಿ ಮೇಣವರ್ಗೆ ಕರಮೂಲಧನಂಗಳನಿತ್ತು ಬಿತ್ತುಮಂ
ನಿಜಮನಲಿತ್ತು ಗೋಪ್ಪಡದ ನಿತ್ತಿಳೆಯಂಮಿಗೆ ಬೀಳಲೀಯದಾ
ದ್ವಿಜ ಸುರಪಾದಪಂ ಶಿವನೃಪಂ ಮಿಗೆಗೈಮೆಗೆ ತಂದನಳ್ತಿಯಿಂ ॥"[೮೬]

ಪ್ರಜೆಗಳ ಲಾಲನೆ ಪಾಲನೆ, ರಾಜನ ಕರ್ತವ್ಯವಾಗಿದ್ದು, ಪ್ರಜೆಗಳ ಬಿನ್ನಹವನ್ನು ಆಲಿಸಿ ಅವರ ಕಷ್ಟ ನಷ್ಟಗಳಿಗೆ ಸ್ಪಂದಿಸಿ, ಅಗತ್ಯತೆಗಳಿಗೆ ಸಹಕಾರಿಯಾಗಿರುವ ರಾಜನು ರೈತರಿಗೆ ಒಳ್ಳೆಯ ಕೆರೆ ಕಾಲುವೆಗಳನ್ನು ನಿರ್ಮಿಸಿ, ಕಂದಾಯ ಸಂಗ್ರಹಿಸಿ ಆ ಹಣವನ್ನು ಬಹುಮಾನವಾಗಿ(ಭಕ್ಷಿಸ್) ನೀಡಿ, ಮೇಲ್ವಿಚಾರಕ್ಕೆ ಸರಕಾರದ ಖಜಾನೆಯಿಂದ ಹಣವನ್ನು ಕೊಡಿಸಿ, ಬಿತ್ತನೆ ಬೀಜ, ಗೋಮಾಳ, ಎತ್ತುಗಳನ್ನು ನೀಡಿ ಆ ಭೂಮಿ ಬಂಜರು ಬೀಳದಂತೆ ಬ್ರಾಹ್ಮಣ ವರ್ಗದ ರೈತರಿಗೆ ವ್ಯವಸಾಯಕ್ಕೆ

ಅನುಕೂಲಮಾಡಿಕೊಟ್ಟನು. ಎಂದು ಲಿಂಗಣ್ಣ ಕವಿ ವರ್ಣಿಸುತ್ತಾನೆ. ಇಲ್ಲಿ ಮೇಲ್ವರ್ಗದ ರೈತರಿಗೆ ಅನುಕೂಲಮಾಡಿಕೊಟ್ಟಿರುವ ಅಂಶವನ್ನು ಗಮನಿಸಬಹುದಾಗಿದೆ. ಆದರೆ ಇಂದು ಘನ ಸರ್ಕಾರಗಳು ಬಿತ್ತನೆ ಬೀಜ, ಬಗರ್ ಹುಕುಂ ಭೂಮಿ ಮತ್ತು ಕಡಿಮೆ ದರದಲ್ಲಿ ಎತ್ತುಗಳನ್ನು ಕೊಡಿಸಿ ದೀನ ದಲಿತರ ಉದ್ಧಾರಕ್ಕೆ ಮುಂದಾಗಿರುವುದನ್ನು ಕಾಣಬಹುದಾಗಿದೆ. ಇದೇ ಕೃತಿಯ ಹನ್ನೆರಡನೆ ಆಶ್ವಾಸದಲ್ಲಿ

"ಇನಿತಲ್ಲದೆ ಕೆರೆ ಕಾಳ್ಪುರ
ಮಿನಿಗರ್ಬು ಸುಪುಷ್ಪವಾಟ ಕೊಳಮುದುಶಾಲೀ
ವನವಾಪಿ ಕೂಪ ತೋಮುಗ
ಳನುದಿನ ಮಜ್ಜ್ವಲಿಸೆ ರಚನೆಗೆಯ್ಕಿ ಸದನುಮಿಂ ॥"[೮೭]

ರಾಜನು ಕೆರೆ, ಕಾಲುವೆ, ಕಬ್ಬಿನ ತೋಟ, ಹೂವಿನ ತೋಟ, ಕೊಳ, ಭತ್ತದ ಹೊಲ, ಬಾವಿಗಳು ಮತ್ತು ತೋಪುಗಳನ್ನು ಪ್ರತಿದಿನವು ಶೋಭಿಸುವಂತೆ ನಿರ್ಮಾಣ ಮಾಡಿರುವುದರ ವರ್ಣನೆ ಕಂಡುಬರುತ್ತದೆ. ಅಲ್ಲದೆ ಜಗನ್ನಾಥ ವಿಜಯದ ಅಧ್ಯಾಯ ಹದಿನೇಳರಲ್ಲಿ, ಕೆರೆಯಲ್ಲಿ ತುಂಬಿರುವ ಕೆಸರು, ಕೆರೆಯ ಬಿರುಕು ಮತ್ತು ಕೆರೆಯ ಒಳಗಡೆಯೇ ಬಾವಿ ತೋಡುವ ವಿಧಾನ ಕುರಿತಾದ ಮಾಹಿತಿ ಕಂಡುಬರುತ್ತದೆ.

"ಕೆಸರುರ್ಬರ್ಬೇಱಿ ನಿರ್ಬೊಬ್ಬುಳಿಸಿ ಬುಳುಬುಳುಂದೇಹಿಮೆಂಡೆಯ್ದಿ
ಮಸಗುತ್ತುಂ ಬತ್ತನೆರ್ಪಂಬಡೆದಗೆಱೆಯೊಳ್ ಬೀಡೆಮೋಗಿರ್ದ ತಣ್ಣೀ
ರೋಸದಾರ್ಣಂ ಬಾವಿಗಾದತ್ತಸಿದು ಪರಿವ ಪೆರ್ಬಳ್ಳದಿವರ್ಕದೊಳ್ ನೀ
ರ್ದೆಸೆಯೊಳ್ ಸರ್ದಾಲಿಸುತ್ತಿರ್ದುದು ಚಳಶಫರಿಕಾಲಕೂಟಂ ಬಕೊಟಂ ॥"[೮೮]

ಕೆರೆಗಳು ನೀರಿಲ್ಲದೆ ಬತ್ತಿ ಹೋದಾಗ, ಕೆಸರಲ್ಲಿ ನೀರಿನ ಗುಳ್ಳೆಗಳು ಮೇಲಕ್ಕೆ ಉಬ್ಬಿ ಕಾಣಿಸಿಕೊಂಡು ಒಣಗಿದ ಕೆರೆಯ ಮಧ್ಯಭಾಗದಲ್ಲಿ ಬಿರುಕುಗಳು ಉಂಟಾಗುತ್ತವೆ. ಅಂತಹ ಕಡೆಯಲ್ಲಿ ಕೆರೆಯ ಒಳಗಡೆ ನೀರಿಗಾಗಿ ಭಾವಿಯನ್ನು ನಿರ್ಮಿಸುವ ಕ್ರಮವನ್ನು ಹೇಳುತ್ತಾನೆ. ಪ್ರಾಯಶಃ ಬರಗಾಲ ಉಂಟಾದಾಗ ನೀರಿನ ಹಾಹಾಕಾರದ ಪರಿಸ್ಥಿತಿ ನಿರ್ಮಾಣವಾದಾಗ, ಕೆರೆಯ ಒಳಗಡೆ ಬಾವಿ ತೋಡಿರುವ ಪ್ರಸಂಗಗಳು ಕಂಡುಬರುತ್ತವೆ. ಇಂದಿನ ದಿನಗಳಲ್ಲಿ ಕೆರೆಗಳ ಜೀರ್ಣೋದ್ಧಾರ ಮಾಡಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅನೇಕ ಕೆರೆಗಳು ಮಣ್ಣುತುಂಬಿ ಕಸಕಡ್ಡಿ ಮರಗಿಡಗಳಿಂದ ಮುಚ್ಚಿ ಹೋಗುವಂತಹ ಪರಸ್ಥಿತಿ ನಿರ್ಮಾಣವಾಗಿದೆ. ಮನುಷ್ಯನಲ್ಲಿ ಪರಿಸರ ಪ್ರಜ್ಞೆ ಅಳಿದು ಹೋಗಿದೆ. ನೀರಿನ ಮಟ್ಟ ಕಾಯ್ದುಕೊಳ್ಳುವಲ್ಲಿ, ಹವಾಮಾನದಲ್ಲಿ ತೇವಾಂಶವನ್ನು ಕಾಪಾಡುವಲ್ಲಿ ಕೆರೆಗಳು ಮಹತ್ವದ ಪಾತ್ರ ವಹಿಸುತ್ತವೆ. ಪ್ರಾಚೀನ ಕಾಲದ ಹಿರಿಯರ ಪರಿಸರ ಪ್ರಜ್ಞೆಯ ಜ್ಞಾನ ಇಂದಿನ ಜನತೆಗೆ ಮಾರ್ಗಸೂಚಿಗಳಾಗಬೇಕಿದೆ.

ಮಲೆನಾಡಿನ ಕೆಲವು ಭಾಗಗಳಲ್ಲಿ ಅಪರೂಪಕ್ಕೆ ಇಂದು ಕೂಡ ಕಾಣಬಹುದಾದ ವ್ಯವಸ್ಥೆ ಇದಾಗಿದೆ. ನಯಸೇನನ ಧರ್ಮಾಮೃತದಲ್ಲಿ "ಮುಟ್ಟಿ ರಾಟಾಳದಂದದಿಂತಿರಿವ ಸಂಸ್ಕೃತಿ ದುಃಖದಿಂ ...."[೮೯] ಜೀವನವನ್ನು ರಾಟಾಳಕ್ಕೆ ಹೋಲಿಸುತ್ತಾನೆ. ರಾಟಾಳ ಮೇಲೆ ಕೆಳಗೆ ತಿರುಗಿದರೆ ಮಾತ್ರ ನೀರು ಮೇಲೆ ಬರುತ್ತದೆ. ರಾಟಾಳದಂತೆ ಲಾಳಿ ಹಾಕುವುದು ಮನುಷ್ಯನ ಬದುಕು ಆಗಬಾರದೆಂಬ ವಿವೇಚನೆಯ ಮಾತನ್ನು ಹೇಳುವಾಗ ಈ ಕೃಷಿಜ್ಞಾನವನ್ನು ತಿಳಿಸುತ್ತಾನೆ. ಬಾವಿ ತೋಡಲು ನೀರಿನ ಸೆಲೆಯನ್ನು ಗುರುತಿಸುವುದು, ನೀರಿನ ಪ್ರಮಾಣ ನೋಡಿ ಬಾವಿ ಅಗೆಸುವುದು, ಸಾರವಿಲ್ಲದ ಕಡೆ

ಬಾವಿ ತೋಡಿದರೆ ನೀರು ಬರಲು ಸಾಧ್ಯವಿಲ್ಲ, ಇಂತಹ ವ್ಯರ್ಥ ಸಾಹಸವನ್ನು ರೈತರು ಮಾಡುವುದು ಉಚಿತವಲ್ಲ ಎನ್ನುತ್ತಾನೆ. ಇದರಿಂದ ಕಾಲುವೆಯ ನೀರಾವರಿ ಪದ್ಧತಿಯು ಪ್ರಾಚೀನ ಕಾಲದಲ್ಲಿ ಅಸ್ತಿತ್ವದಲ್ಲಿ ಇತ್ತೆಂಬುದು ಕಂಡುಬರುತ್ತದೆ.

ಬೆಳೆಯ ಪ್ರಕಾರಗಳು : ರೈತರು ಅನೇಕ ಬಗೆಯ ಬೆಳೆಗಳನ್ನು ಬೆಳೆಯುತ್ತಾರೆ. ಅವುಗಳಲ್ಲಿ ಪ್ರಮುಖವಾದವು ಆಹಾರದ ಬೆಳೆಗಳು, ವಾಣಿಜ್ಯ ಬೆಳೆಗಳು ಈ ಭಾಗದಲ್ಲಿ ಆಹಾರದ ಬೆಳೆಗಳು, ಮಿಶ್ರಬೆಳೆಗಳು, ದ್ವಿದಳ ಬೆಳೆಗಳು, ತೋಟದ ಬೆಳೆಗಳೆಂದು ವಿಭಾಗಿಸಿಕೊಂಡು ಕನ್ನಡ ಮಾರ್ಗಕಾವ್ಯಗಳಲ್ಲಿ ಈ ಸಂಬಂಧಿ ಕುರಿತಾದ ಅಂಶಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಆಹಾರದ ಬೆಳೆಗಳು : ಮನುಷ್ಯ ಜೀವಿ ಬದುಕಲು ಆಹಾರದ ಅವಶ್ಯಕತೆ ಇದೆ. ಪ್ರಪಂಚದಲ್ಲಿ ಒಂದೇ ಬಗೆಯ ಆಹಾರ ಪದ್ಧತಿ ಬಳಕೆಯಲ್ಲಿಲ್ಲ. ಒಂದೊಂದು ಕಡೆ ಒಂದೊಂದು ಬಗೆಯ ಧಾನ್ಯಗಳನ್ನು ಹೆಚ್ಚಾಗಿ ಬಳಸುತ್ತಾರೆ. ಹವಮಾನ, ಬೆಳೆಯುವಭೂಮಿ, ನೀರಿನ ಪ್ರಮಾಣಕ್ಕನುಗುಣವಾಗಿ ಹಲವು ವಿಧದ ಬೆಳೆಗಳನ್ನು ಬೆಳೆಯುವ ಪದ್ಧತಿ ರೂಢಿಯಲ್ಲಿ ಇರುವಂತಿದೆ.

ಜೋಳ ಆಹಾರ ಧಾನ್ಯಗಳಲ್ಲಿ ಒಂದು ಪ್ರಮುಖವಾದ ಬೆಳೆಯಾಗಿದೆ. ವಿಶೇಷವಾಗಿ ಉತ್ತರಕರ್ನಾಟಕ ಭಾಗದಲ್ಲಿ ಹೆಚ್ಚಾಗಿ ಬಳಸುತ್ತಾರೆ. "ಜೋಳಗಳಲ್ಲಿ ಹೈಬ್ರಿಡ್ ಜೋಳ, ಜೋಗಿಚಡಿ ಜೋಳ, ಜೇಲಕಂ ಜೋಳ, ಜೆ.ಎಸ್. ಜೋಳ, ಜಿಂಗಂಜೋಳ, ಜವಾರಿಜೋಳ, ಜವಾರ್‌ಜೋಳ, ಬಿಳಿಜೋಳ, ಚಾಳಿಸಾ ನಂಬರ್‌ಜೋಳ, ಚವ್ರಿಜೋಳ, ಪೋಲಗರ್‌ಬಿಳಿ ಮೂರು ಮುಂತಾದ ವಿಧಗಳಿವೆ".[೯೦] ಎಂದು ಕೃಷಿಪದಕೋಶದಲ್ಲಿ ಹೇಳಲಾಗಿದೆ. ನಯಸೇನನ ಧರ್ಮಾಮೃತದಲ್ಲಿಯೂ ಜೋಳದ ಉಲ್ಲೇಖ ಅನೇಕ ಕಡೆಯಲ್ಲಿ ಕಂಡುಬರುತ್ತದೆ. ".............. ರಾಶಿಯಾದ ಧಾನ್ಯಮನಳೆವಂತೆ .... ಕೈಯ ಕಾದು ದುಃಖ ಒಟ್ಟೊಕ್ಕಲಂ ಧಾನ್ಯ ಬೆರಸುಗುಂ ಪುಗುವಂತೆ ....".[೯೧] ಕಣದಲ್ಲಿ ಒಕ್ಕಲು ಮಾಡಿದ ಧಾನ್ಯವನ್ನು ಅಳತೆ ಮಾಡಿ, ತನ್ನ ಶ್ರಮಕ್ಕೆ ತಕ್ಕಂತೆ ಫಲ ದೊರೆತಾಗ, ರೈತರು ಸಂತೋಷಪಡುತ್ತಿದ್ದರು ಎನ್ನುತ್ತಾನೆ. ಗಂಧದ ಕಟ್ಟಿಗೆಯಿಂದ ಜೋಳದ ಕೂಳನ್ನು ಬೇಯಿಸುತ್ತಿದ್ದು; ಅದನ್ನು ಆನಂದದಿಂದ ಊಟಮಾಡುತ್ತಿದ್ದರು ಎನ್ನಲಾಗಿದೆ. ಭತ್ತದ ಗದ್ದೆಯಲ್ಲಿ ಭತ್ತವಲ್ಲದೇ ಜೋಳ ಬೆಳೆಯಲಾಗದು. ಬಯಲಿನ ಹೊಲಗಳಲ್ಲಿ ಜೋಳವಲ್ಲದೆ ಬತ್ತ ಬೆಳೆಯಲಾಗದು ಎಂದು ನಯಸೇನ ಹೇಳುತ್ತಾನೆ.

ಭತ್ತ ಆಹಾರ ಧಾನ್ಯಗಳಲ್ಲಿ ಪ್ರಮುಖವಾದ ಬೆಳೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ಅನೇಕ ವಿಧ ವಿಧದ ಭತ್ತದ ತಳಿಗಳನ್ನು ಕಾಣುತ್ತೇವೆ. ಭತ್ತಕ್ಕೆ ಅನೇಕ ಹೆಸರುಗಳಿವೆ. "............ ಕವಳಿ, ಕಳವೆ, ಕಳವಿ, ಕವಳೆ, ಕಳೆವೆ, ನಲ್ಲು ಮುಂತಾದವು, ಭತ್ತದಲ್ಲಿ ವಿವಿಧ ತಳಿಗಳುಂಟು. ಗಂಧಸಾಲೆ, ಅಯ್ಯರ್ ಟೊಂಟಿ ಏಲಕ್ಕಿ ರಾಜ, ಕರಿಯನೆಲ್ಲು, ಕರಿಕಣವಿ, ಕುಂಕುಮನೆಲ್ಲು, ಗಂಡುಭತ್ತ, ಗುಂಡನಾಳ ಬತ್ತ, ಬಂಗಾರತೋಬಿ, ರಾಜಭತ್ತ, ರಾಮಸಾಲೆ ಮುಂತಾದವುಗಳು. ...."[೯೨] ಪಂಪನ ಆದಿಪುರಾಣದಲ್ಲಿ ಹೊಂಬಣ್ಣದಿಂದ ಕೂಡಿದ, ಕೆಂಪಾಗಿ ಕಣ್ಣಿಗೆ ಕಂಗೊಳಿಸುವ ಗಂಧಶಾಲಿ ಭತ್ತದ ಗದ್ದೆಗಳ ವರ್ಣನೆ ಹೀಗೆ ಮಾಡಲಾಗಿದೆ. "............ಪೊಂಬಣ್ಣದ ಕೆಂಪಿಡಿದಿರೆ ಸೊಗಯಿಪವು ಗಂಧಶಾಲಿ ವನಂಗಳ್ ....".[೯೩] ಅರವತ್ತು ದಿನಗಳಲ್ಲಿ ಬೆಳೆಯುವ ಭತ್ತದ ತಳಿ ಹಾಗೂ ಮುಂತಾದ ಬೆಳೆಗಳು ಸಹಜವಾಗಿ ಬೆಟ್ಟಗುಡ್ಡಗಳಲ್ಲಿ ಬೆಳೆಯುತ್ತಿರುವುದನ್ನು ವರ್ಣಿಸಿದ್ದಾನೆ. ಪಂಚತಂತ್ರದಲ್ಲಿಯೂ

ಹೀಗೆ ಹೇಳಲಾಗಿದೆ. ಪ್ರಾಚೀನ ಕಾಲದಲ್ಲಿ ಮಳೆಯ ಪ್ರಮಾಣ ಹೆಚ್ಚಾಗಿ ಬೀಳುತ್ತಿದ್ದರಿಂದ ಮಳೆಯ ನೀರಿನ ಆಶ್ರಯದಲ್ಲಿಯೇ ಭತ್ತದ ಬೆಳೆಯನ್ನು ಬೆಳೆಯುತ್ತಿದ್ದರು. ಅದು ದೊಡ್ಡ ಭತ್ತದ ತಳಿಯಾಗಿದ್ದು, ತುಂಬಾ ಎತ್ತರ ಬೆಳೆದು ಗೊನೆಗೊನೆಯಾಗಿ ನೆಲಕ್ಕೆ ಒರಗುತ್ತಿತ್ತು. ಇದನ್ನು ಧರ್ಮಾಮೃತ ಕೃತಿಯಲ್ಲಿ ಹೀಗೆ ಹೇಳಲಾಗಿದೆ. "ಬೆಳದೊಱಗಿದ ಕಟಿಮೆಯ ಕಯ್ಗಳಿನೊಪ್ಪುವ ....".[೯೪] ಭತ್ತ ಕುರಿತಾದ ಮಾಹಿತಿ ಅನೇಕ ಕಡೆಗಳಲ್ಲಿ ಈ ಕೃತಿಯಲ್ಲಿ ಕಂಡುಬರುತ್ತದೆ. "......... ನೊಂಪಿ ತೀರ್ವಾನ್ನಂ ಗ್ರಾಸದೊಳ್ ಕಳಮೆಯ ಕೂಟಿಂ ....".[೯೫] ಪ್ರಾಯಶಃ ನೊಂಪಿಯ ವ್ರತ ಮುಗಿದ ನಂತರ ಭತ್ತದಿಂದ ತಯಾರಾದ ಅನ್ನವನ್ನು ತಿನ್ನುವ ಸಂಪ್ರದಾಯ ಇರುವಂತಿದೆ. ಭತ್ತವನ್ನು ಕುಟ್ಟಿ ಅಕ್ಕಿ ಮಾಡುವುದನ್ನು, ಶ್ರೀಮಂತರು ಭತ್ತವನ್ನು ಹೆಚ್ಚಾಗಿ ಉಪಯೋಗಿಸುವದನ್ನು, ಅದು ಶ್ರೀಮಂತರ ಧಾನ್ಯವೆಂದೇ ಭಾವಿಸಲಾಗಿತ್ತು ಎನ್ನಲಾಗಿದೆ. ವಡ್ಡಾರಾಧನೆಯಲ್ಲಿಯೂ "ಉಪಾಧ್ಯಾಯನೆ ಕಟಿಮೆಯ ಕೂಟಿಂ ತುಪ್ಪಮಂ ತೋವಿಯಮನುಣಲ್ :...............".[೯೬] ಪಾಠ ಹೇಳುವ ಉಪಾಧ್ಯಾರಿಗೆ ಕಳವೆಯ ಅನ್ನ, ತುಪ್ಪ, ಬೇಳೆಯ ಪಲ್ಯ ಊಟಕ್ಕೆ ನೀಡುತ್ತಿದ್ದರು, ಇದನ್ನು ರಾಜಾನ್ನವೆಂದೇ ಭಾವಿಸಲಾಗಿತ್ತು ಎಂದು ವರ್ಣಿಸಲಾಗಿದೆ.

ಗಿರಿಜಾಕಲ್ಯಾಣದಲ್ಲಿ ಭತ್ತದ ಗದ್ದೆಗಳ ವರ್ಣನೆ ಈ ರೀತಿ ಕಂಡುಬರುತ್ತದೆ. "ಆ ವಿಷಯದೊಳೊಗಪ್ಪುವ ಕಳಮಾವಳಿ ನಳನಳಿಸಿ ಬೆಳೆದು ಪಸುರೇಱ ....ಪಸುರೇಱತ್ತ ಕವರಿಱದು ಪೊಡೆಯುತ್ತುಂ...............ನಳ ನಳಿಸಿ ಶಾಲಿವನ ಮೆಸೆದಿರ್ಕುಂ".[೯೭] ಭತ್ತದ ಗದ್ದೆಗಳು ಹಚ್ಚ ಹಸುರಾಗಿ, ಹುಲುಸಾಗಿ, ಸೊಂಪಾಗಿ, ಅಂಕುರಿಸಿ, ಕವಲೊಡೆದು ಹಾಲು ತುಂಬಿದ ಭತ್ತದ ಪೈರಿನ ಸೊಗಸನ್ನು ವರ್ಣಿಸಲಾಗಿದೆ. 'ಕಬ್ಬಿಗರಕಾವ್ಯ'ದಲ್ಲಿ "................ತೆನೆಯಂ ಕಾಲ್ಗೆಱಗುವ ಕವಿಮೆಗಳ ಮೆಲ್ಲಿಯುಂ ಸೊಗಸುಗುಂ"[೯೮] ತೆನೆ ಫಲಭರಿತವಾಗಿ ಭಾರದಿಂದ ಕಾಲಿಗೆರುಗುವಂತೆ ಕಾಣುತ್ತಿದ್ದವು. ತೆನೆಯ ಪ್ರಮಾಣವನ್ನು ನೋಡಿ ಬೆಳೆ ಎಷ್ಟು ಬರುತ್ತದೆಂದು ತಿಳಿಯಲಾಗುತ್ತಿತ್ತು. 'ರಾಜಶೇಖರವಿಳಾಸ'ದಲ್ಲಿ "ತೂಗುತೆ ತೊನೆಯುತೆ ಬಳ್ಕುತೆ ಬಾಗುತೆ ಕಂಪಿಡುತೆ ಕನಕ ರುಚಿದಾಳುತ್ತಂ.................ಪಾಲ್ದುಂಬಿದ ಸಾಲ್ದೆನೆಗಳ ನೆಜ್ಜ್ವಿಗಲ್ ನೊಲ್ದಸೀಳೆ................"[೯೯] ತೂಗಾಡುತ್ತಾ ಬಳಸಾಡುತ್ತ ಫಲಭರಿತವಾದ ಭತ್ತದ ಪೈರು ಹಾಲು ತುಂಬಿರುವ ತೆನೆಗಳು ಸಾಲು ಸಾಲಾಗಿ ಕಂಗೊಳಿಸುತ್ತವೆ. ಸಮೃದ್ಧ ಭತ್ತದ ಬೆಳೆಯ ವರ್ಣನೆಯನ್ನು ಕನ್ನಡ ಕವಿಗಳು ವಿಶೇಷವಾಗಿ ವರ್ಣಿಸಿದ್ದಾರೆ.

ಕನ್ನಡದ ಪ್ರಾಚೀನ ಕಾವ್ಯಗಳಲ್ಲಿಯೂ ಗೋಧಿಯ ಉಲ್ಲೇಖವನ್ನು ಕಾಣಬಹುದಾಗಿದೆ. ಕನಕದಾಸರ ರಾಮಧಾನ್ಯ ಚರಿತ್ರೆಯಲ್ಲಿ "ನೆಲ್ಲು ನಾನಿರೆ ಗೋಧಿ ಮೊದಲಾದೆಲ್ಲ ಧಾನ್ಯಗಳಿರಲು...........".[೧೦೦] ನೆಲ್ಲು, ರಾಗಿಯಲ್ಲಿ ಯಾವುದು ಶ್ರೇಷ್ಠವೆಂಬ ಚರ್ಚೆಯೇ ಈ ಕೃತಿಯ ವಿಷಯವಾಗಿದ್ದು, ಅಲ್ಲಿ ಗೋಧಿ ಕುರಿತಾದ ಮಾಹಿತಿಯೂ ದೊರೆಯುತ್ತದೆ.

ರಾಗಿ, ನವಣೆ, ಹಾರಕ ಮತ್ತು ಸಾವೆ ಆಹಾರಧಾನ್ಯಗಳಾಗಿವೆ. ಬಡವರ ಪಾಲಿನ ಭಾಗ್ಯದ ಬೆಳೆಗಳೆಂದೆ ಇವುಗಳನ್ನು ಕರೆಯಲಾಗಿದೆ. ಕಡಿಮೆ ಮಳೆ ಬೀಳುವ ಖುಷ್ಕಿ ಭೂಮಿಯಲ್ಲಿ ಬೆಳೆಯುತ್ತಾರೆ. ಆದಿಪುರಾಣದಲ್ಲಿ ಹದವಾದ ಮಳೆ ಬಂದಾಗ ಹೊಲಗದ್ದೆಗಳಲ್ಲಿ ಜನರ ಜೀವನ ನಿರ್ವಹಣೆಗೆ ಭತ್ತ, ಗೋಧಿ, ನವಣೆ, ಸಾವೆ, ಬರಗು ಮುಂತಾದ ಆಹಾರ ಧಾನ್ಯಗಳನ್ನು ಬೆಳೆಯುತ್ತಿರುವ ಅಂಶ ಕಂಡು ಬರುತ್ತದೆ. ಮಾನವನ ಆರೋಗ್ಯಕ್ಕೆ ತುಂಬಾ ಉತ್ಕೃಷ್ಟವಾದ ಬೆಳೆಗಳಿವು. ಧರ್ಮಾಮೃತದಲ್ಲಿ ಸಾವೆಬೆಳೆಯ

ಉಲ್ಲೇಖ ಕಂಡು ಬರುತ್ತದೆ. "..............ಸಾವೆಯನಲ್ಲಿ ಬಿತ್ತುವರಂತೆ............".[೧೦೧] ಸಾವೆ ಜೋಳದ ರೀತಿಯ ಆಹಾರ ಧಾನ್ಯ, ನವಣೆಯ ಬೆಳೆಯ ಹಾಗೆ ಕಾಣುತ್ತದೆ. ನವಣೆಯಂತೆ ಸಾವೆಯೂ ಕೂಡ ಬಡವರಿಗೆ ಪರಮಾನ್ನ. ಸಾವೆ, ನವಣೆಯ ಅನ್ನಕ್ಕೆ ಹಾಲು ಹಾಕಿಕೊಂಡು ರುಚಿಕರವಾದ ಅನುಭವವನ್ನು ಹಿಂದಿನ ಜನ ಅನುಭವಿಸುತ್ತಿದ್ದರು. ರಾಮಧಾನ್ಯ ಚರಿತೆ ಕೃತಿಯಲ್ಲಿ ಭತ್ತಕ್ಕಿಂತ ರಾಗಿಯೇ ಶ್ರೇಷ್ಠವೆಂದು ಹೇಳಲಾಗಿದೆ. ಬರಗಾಲದಲ್ಲಿ ಅನ್ನವಿಲ್ಲದಂತಹ ಕಾಲದಲ್ಲಿ ಮನುಷ್ಯರನ್ನು ಆಧರಿಸಿ ಸಲಹುವ ಧಾನ್ಯ ರಾಗಿಯೇ ಆಗಿದೆ.

"ಎಲ್ಲ ನವಧಾನ್ಯದಲ್ಲಿ ಈತನೆ
ಬಲ್ಲಿದನು ಹುಸಿಯಲ್ಲಾ ಬಡವರ
ಬಲ್ಲಿದನಾರೈದು ಸಲಹುವನಿವಗೆ ಸರಿಯುಂಟೆ
ನೆಲ್ಲಿನಲಿ ಗುಣವೇನು ಭಾಗ್ಯಾಧಿ
ಬಲ್ಲಿದರ ಪತಿಕರಿಸುವನು ಅವ
ನಲ್ಲಿ ಸಾರವ ಕಾಣೆನೆಂದನು ಕಪಿಲಮುನಿ ನಗುತ" [೧೦೨]

ಕಪಿಲ ಮುನಿಯು ನವಧಾನ್ಯಗಳಲ್ಲಿ ರಾಗಿಯೇ ಶ್ರೇಷ್ಠ. ಬಡವರ ಪಾಲಿನ ಭಾಗ್ಯ ಅವರನ್ನು ಆರೈಕೆ ಮಾಡಿ ಸಾಕುವಂತದ್ದು, ಬಡವರು ಶ್ರೀಮಂತರಿಗೂ ಅವಶ್ಯಕವಾದ ಧಾನ್ಯವಾಗಿದೆ. ನೆಲ್ಲಿನಲ್ಲಿ ವಿಶೇಷವಾದ ಗುಣಯಾವುದು, ನೆಲ್ಲು ಶ್ರೀಮಂತರ ಕಡೆಯಿರುವ ಧಾನ್ಯವಾಗಿದೆ. ಆದ್ದರಿಂದ ರಾಗಿಯೇ ಸರ್ವಜನ ಹಿತವಾದದ್ದು. ರಾಗಿಯೇ ಶ್ರೇಷ್ಠವಾದದ್ದಾಗಿದೆ ಎನ್ನುತ್ತಾರೆ. ರಾಮನು ತನ್ನ ಹೆಸರಾದ ರಾಘವ ಎಂಬುದನ್ನೇ ರಾಗಿಗೆ ನೀಡುತ್ತಾನೆ. ನೆರೆದಲೆಗ, ರಾಘವನಾಗಿ ಜನರ ಬಾಯಲ್ಲಿ ರಾಗಿಯಾಗಿ ಬಳಕೆಯಾಗಿರುವಂತಿದೆ.

ಮಿಶ್ರ ಬೆಳೆಗಳು : ಖುಷ್ಕಿ ಭೂಮಿಯಲ್ಲಿ ಏಕಕಾಲದಲ್ಲಿ ಒಂದೇ ಜಮೀನಿನಲ್ಲಿ ಹಲವಾರು ಬೆಳೆಗಳನ್ನು ಬೆಳೆಯಲಾಗುತ್ತದೆ. ಇಂತಹ ಬೆಳೆಗಳನ್ನು ಮಿಶ್ರ ಬೆಳೆಗಳೆಂದು ಕರೆಯಲಾಗುತ್ತದೆ. ಬೆಳೆಗಳ ಮಧ್ಯೆ ಆರು, ಎಂಟು ಸಾಲುಗಳಿಗೆ ಒಂದರಂತೆ ಅಕ್ಕಡಿ ಕಾಳು ಹಾಕುವುದು, ಶೇಂಗಾ ಬೆಳೆಯಲ್ಲಿ ಮಧ್ಯೆ ಮಧ್ಯೆ ಹತ್ತಿ ಬೆಳೆಯುವುದು, ಮೆಣಸಿನ ಗಿಡದಲ್ಲಿ ಈರುಳ್ಳಿ, ಬೆಳ್ಳೊಳ್ಳಿ, ಶುಂಠಿ ಬೆಳೆಯುವುದು ಹಾಗೂ ತೋಟಗಳಲ್ಲಿ ಅಡಕೆ ಜೊತೆಗೆ ಎಲೆ ಬಳ್ಳಿ, ತೆಂಗು, ಬಾಳೆ, ಹಣ್ಣಿನಗಿಡ ಇನ್ನು ಅನೇಕ ಸಾಂಬಾರು ಪದಾರ್ಥಗಳನ್ನು ಬೆಳೆಯಲಾಗುತ್ತದೆ. ಹೊಲಗದ್ದೆಗಳ ಮೆರೆಯಲ್ಲಿ ಹಾಕುವ ಎಣ್ಣೆಯ ಕಾಳುಗಳು ಇಂಥವುಗಳನ್ನೆಲ್ಲ ಮಿಶ್ರ ಬೆಳೆಗಳೆಂದು ಕರೆಯಬಹುದಾಗಿದೆ.

ನಾಗಚಂದ್ರನ ಪಂಪರಾಮಾಯಣದಲ್ಲಿ ಔಡ್ಲ(ಹರಳು)ದ ಉಲ್ಲೇಖ ಕಂಡುಬರುತ್ತದೆ. ".......... ಕೋದಂಡ ಮಸೇರಂಡ ಕಾಂಡಮಂ ಬಗೆಯಂತು ಬಗೆದು ....".[೧೦೩] ಶ್ರೀರಾಮನಿಗೆ ಆ ಕೋದಂಡ ಹರುಳ ಕಡ್ಡಿಯಂತೆ ಹಗುರವಾಯಿತು ಎಂದು ಹೇಳುವಾಗ ಇದು ಬಳಕೆಯಾಗಿದೆ. ಈ ಹರಳು ಎಣ್ಣೆಯ ಬೀಜವಾಗಿದ್ದು, ಇದನ್ನು ಮಿಶ್ರಬೆಳೆಯಾಗಿ ಬೆಳೆಯುತ್ತಾರೆ. ಅದೇ ಕೃತಿಯಲ್ಲಿ ಹತ್ತಿ ಬೆಳೆಯ ಉಲ್ಲೇಖ ಕಂಡುಬರುತ್ತದೆ. ಸಾಮಾನ್ಯವಾಗಿ ಹತ್ತಿಯನ್ನು ಶೇಂಗಾ ಬೆಳೆಯ ಜೊತೆಗೆ ಮಿಶ್ರಬೆಳೆಯಾಗಿ ಬೆಳೆಯುತ್ತಾರೆ. ಜಯಧರ ಎಂಬ ಹತ್ತಿಯ ತಳಿ ಉತ್ತಮ ಫಸಲನ್ನು ನೀಡುತ್ತದೆ ಎಂದು ನಂಬಲಾಗಿತ್ತು. ಧರ್ಮಾಮೃತದಲ್ಲಿ ಸಾಸುವೆಯ ಉಲ್ಲೇಖ ಕಂಡುಬರುತ್ತದೆ. "............. ಸಾಸಿವೆ ಗುಡಿದಂತಿರೆ ಕರಮೆ

ಮಱಿಗಿ ತಳವೆಳಗಾದಂ ....".[೧೦೪] ಎನ್ನಲಾಗಿದೆ. ರನ್ನನ ಗದಾಯುದ್ಧದಲ್ಲಿಯೂ "........... ಜೀರಿಗೆಯೊಕ್ಕಲ್ಗೆಣೆಯಾಗಿ ಬಿಟ್ಟ್ ಭಟರಂ ....".[೧೦೫] ಜೀರಿಗೆ, ಒಂದು ಬಗೆಯ ಸಾಂಬಾರು ಜಿನಸು, ಜೀರ್ಗಿ ಜೀರಕ್ಕಿ, ಎಂದು ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ. ಕರಿಜೀರಿಗೆ, ಕಹಿ ಜೀರಿಗೆ, ದೊಡ್ಡಜೀರಿಗೆ, ದೇಶಾವಾರದ ಜೀರಿಗೆ, ಬಿಳಿ ಜೀರಿಗೆ ಮತ್ತು ಶಾಜೀರಿಗೆ ಎಂಬ ಅನೇಕ ವಿಧಗಳಿವೆ. ಇದನ್ನು ಮಿಶ್ರಬೆಳೆಯಾಗಿ ಬೆಳೆಯಲಾಗುತ್ತದೆ. ಕಬ್ಬಿಗರಕಾವ್ಯದಲ್ಲಿ "............. ಪೊಂಬಾಳೆಗಳಿಂ ಬಿಳ್ಳುವಡಕೆಯ ಸಾಲ್ಗಳೊಳಂ ಬಯ್ಯನೊಯ್ಯನೆ............".[೧೦೬] ಎನ್ನಲಾಗಿದೆ. ಅಂದರೆ ಅಡಿಕೆಯ ತೋಟದಲ್ಲಿ ಬಾಳೆಯನ್ನು ಸಾಲು ಸಾಲಾಗಿ ನೆಟ್ಟು, ಅಡಿಕೆಯ ಜೊತೆಗೆ ಬಾಳೆಯನ್ನು ಮತ್ತು ಅಡಕೆ ಸಾಲುಗಳ ಮಧ್ಯೆ ಭತ್ತವನ್ನು ಮಡಿ ಮಾಡಿ ಮಿಶ್ರಬೆಳೆಯಾಗಿ ಬೆಳೆಯುವುದು ಕಂಡು ಬರುತ್ತದೆ.

ದ್ವಿದಳ ಬೆಳೆಗಳು : ಎರಡು ದಳಗಳಿರುವ ಕಾಳುಗಳು ದ್ವಿದಳ ಧಾನ್ಯಗಳು. ಕನ್ನಡ ಕಾವ್ಯಗಳಲ್ಲಿ ಅಲ್ಲಲ್ಲಿ ಅನೇಕ ಕಡೆ ಧಾನ್ಯಗಳ ಹೆಸರುಗಳು ಬಳಕೆಯಾಗಿವೆ. ಆದಿಪುರಾಣದ ಆಶ್ವಾಸ ಆರರಲ್ಲಿ ಆಹಾರ ಧಾನ್ಯಗಳು, ದ್ವಿದಳ ಧಾನ್ಯಗಳು, ವಾಣಿಜ್ಯ ಬೆಳೆಗಳನ್ನು ಕುರಿತು ಮಾಹಿತಿ ದೊರೆಯುತ್ತದೆ. ಅಲ್ಲಿ ಎಳ್ಳು, ತಲಮಸೂರಿಗೆ, ಹುರುಳಿ, ಉದ್ದು, ತುಡುಗುಣಿ, ತೊಗರಿ, ಅವರೆ, ಕಡಲೆ, ಕುಸುಬೆ, ಹತ್ತಿ, ಸಾಸುವೆ ಮುಂತಾದ ಧಾನ್ಯಗಳ ಉಲ್ಲೇಖ ಕಂಡುಬರುತ್ತದೆ. ಹಾಗೂ ವಡ್ಡಾರಾಧನೆಯಲ್ಲಿ ಅಲಸಂಧಿ ದ್ವಿದಳ ಧಾನ್ಯದ ಉಲ್ಲೇಖ ವಿಶೇಷವಾಗಿದೆ. "........... ಮಗನೆ ಈತನಂಗಡಿಯಲವಡಂ ಪರಸಿತಿಂದು...............".[೧೦೭] 'ಅವಡೆ' ಎಂದರೆ ಅಲಸಂಧಿ ಎಂದು ಅರ್ಥ. ಇದು ಒಂದು ದ್ವಿದಳ ಧಾನ್ಯ ಅನೇಕ ಕಡೆಗಳಲ್ಲಿ ಅಳಸಂದೆ, ಅಲ್ಸಂದೆ, ಅಲರಂಧಿ, ಅಲಸುಂಡೆ, ಅಳತ್ತಂಡೆ, ಹಲಸಂದಿ, ಹಲ್ಸಂಡೆ, ಹಲ್ಸಂಡಿ ಎಂದು ಕರೆಯಲಾಗುತ್ತದೆ. ಈ ಕಥೆಯಲ್ಲಿ ಬರುವ ಒಬ್ಬ ವ್ಯಕ್ತಿ ಅಂಗಡಿಯ ಮುಂಭಾಗದಲ್ಲಿ ಬಿಸಾಡಿದ ಅಲಸಂದೆ ಬೀಜವನ್ನು ಆರಿಸಿ ತಿಂದು ಬದುಕುತ್ತಿದ್ದನು, ಎಂದು ಹೇಳುವಲ್ಲಿ ಈ ಧಾನ್ಯದ ಹೆಸರು ಬಳಕೆಯಾಗಿದೆ.

ತೋಟದ ಬೆಳೆಗಳು : ತೋಟದ ಬೆಳೆಗಳನ್ನು ವಾಣಿಜ್ಯ ಬೆಳೆಗಳಾಗಿ ಪರಿಗಣಿಸುತ್ತೇವೆ. ತೋಟವನ್ನು ಹೊಂದಿರುವ ಕೃಷಿಕರು ಆರ್ಥಿಕವಾಗಿ ಸಬಲರಾಗಿರುತ್ತಾರೆ. ತೋಟದಲ್ಲಿ ಹಲವಾರು ತರಹದ ಬೆಳೆಯನ್ನು ಬೆಳೆಯಬಹುದಾಗಿದೆ. ಪ್ರಾಚೀನ ಕಾವ್ಯಗಳಲ್ಲಿ ತೋಟದ ಬೆಳೆಯನ್ನು ಕುರಿತು ಅನೇಕ ಕಡೆ ಮಾಹಿತಿ ದೊರೆಯುತ್ತದೆ. ಅದನ್ನು ಸಂಗ್ರಹಿಸಿ ಇಲ್ಲಿ ವಿಶ್ಲೇಷಿಸಲಾಗಿದೆ. ಪಂಪ ತನ್ನ ಆದಿಪುರಾಣದಲ್ಲಿ ಅನೇಕ ತೋಟದ ಬೆಳೆಗಳನ್ನು ಕುರಿತು ವರ್ಣಿಸಿರುವುದನ್ನು ಕಾಣಬಹುದಾಗಿದೆ. ಆಶ್ವಾಸ ನಾಲ್ಕರಲ್ಲಿ ಅಡಕೆಯ ಮರಗಳಿಗೆ ಎಲೆಬಳ್ಳಿಯನ್ನು ಹಬ್ಬಿಸಿರುವ ಕ್ರಮ, ಮಾವಿನಮರದಲ್ಲಿ ಕೊಂಬೆಗಳ ಚಿಗುರು, ಮೊಗ್ಗುಗಳಿಂದ ಮಿಡಿಗಾಯಿಗಳಿಂದ, ಗೊಂಚಲಿನಿಂದ ಹಣ್ಣುಗಳು ಸಮೃದ್ಧವಾಗಿ ತುಂಬಿರುವುದನ್ನು ವರ್ಣಿಸುತ್ತಾನೆ. ಸಹಜವಾಗಿ ಅನೇಕ ಕಡೆಯಲ್ಲಿ ಬೆಳೆದಿರುವ ಮಾವು, ಎಳೆಲೆಬಾಳೆ, ಏಲಕ್ಕಿಗಳಿಂದ ತುಂಬಿದ ಕಾಡಿನ ವರ್ಣನೆಯನ್ನು ಕಾಣುತ್ತೇವೆ ಹಾಗೂ ಸಂಪಿಗೆಯ ಹೂವುಗಳು ಎಳೆಯ, ಅಡಿಕೆ ಎಲೆಬಳ್ಳಿ, ಮೈದಾಳಿದ ಬಾಳೆಯ ಗೊನೆಗಳು, ಹಲಸಿನ ಮಾವಿನಹಣ್ಣುಗಳು, ತೆಂಗಿನ ಮರಗಳು ಮುಂತಾದವುಗಳ ವರ್ಣನೆಯನ್ನು ಕಾಣಲಾಗುತ್ತದೆ. ಅದೇ ಕೃತಿಯ ಆಶ್ವಾಸ ಹನ್ನೊಂದರಲ್ಲಿ ಮಾವಿನಮರ ಕ್ರಮಬದ್ಧವಾಗಿ ಬೆಳೆಯುತ್ತಿರುವ ಹಂತಗಳನ್ನು ಸೂಚಿಸುತ್ತಾನೆ. "ತಿಪಿರ್ದತ್ತು ಮೊದಲ್ಗೊದಲ್ಗೆ ಪೆಣೆಯಂ ಮೂಗಯ್ಯೆಂತಾರ್ವಯ್ದೆ ಕವಲ್ಕವಲ್ತು ಪಲವುಂ.......".[೧೦೮] ಮಾವಿನಮರ ಬುಡದಿಂದ ಕವಲೊಡೆದು ಮೂರುಮೂರು ಮೊಳಕ್ಕೆ

ಒಂದರಂತೆ ಗಿಣ್ಣುಗಳನ್ನು ಬಿಟ್ಟು ಅನೇಕ ಕೊಂಬೆಕೊಂಬೆಗಳಾಗಿ ಚಿಗುರೊಡೆದು ಸಮೃದ್ಧವಾಗಿ ಬೆಳೆದುನಿಂತಿತ್ತು ಎಂದು ವರ್ಣಿಸುತ್ತಾನೆ.

ವಡ್ಡಾರಾಧನೆಯ ಸನತ್ಕುಮಾರ ಚಕ್ರವರ್ತಿಯ ಕಥೆಯಲ್ಲಿ ಕಾಡಿನ ವನರಾಶಿಯಲ್ಲಿ ಸಹಜವಾಗಿಯೇ ಅನೇಕ ಬಗೆಬಗೆಯ ಬೆಳೆಗಳು ಬೆಳೆದಿದ್ದವು ಎಂದು ವರ್ಣಿಸಲಾಗಿದೆ. “............. ವನದೊಳ್ ಶೋಕ ಪನ್ನಾಗವಕುಲ ಚಂಪರ ಸಹಕಾರ ಲವಂಗ ಕ್ರಮುಖ ನಾಳಿಕೇರ ನಾಗವಲ್ಲಿ ಪಿನಾದ್ದ ದ್ರುಮಷಂಡ ಮಂಡಿತಮಾನ್ ....”.[೧೦೯] ಅಲ್ಲದೇ ಕರ್ನಾಟಕ ಕಾದಂಬರಿಯಲ್ಲಿ ಕೂಡ ಸಹಜವಾಗಿ ಬೆಳೆದಿರುವ ದಾಳಿಂಬೆ ಹಣ್ಣಿನ ಬೀಜಗಳು, ಲವಂಗ, ಕುರುವರ, ವಕ್ಕುಳಬಳ್ಳಿ, ಅಡಕೆಯಮರ, ಹೊಂಗೆಯ ಮರ, ವೀಳೆಯ ಬಳ್ಳಿ, ಮುಂತಾದವುಗಳ ಪ್ರಸ್ತಾಪವಿದೆ. “ತಿಲಾಕಾರಶೋಕ ತಾಮಾಳತಾಳವಕುಳಾಲಂಕಾರ ಮೇಲಾಲತಾಕುಲ ಪೋಗದ್ರುಮ ನಾರಿಕೇರ ಬಹುಳ್ ....”.[೧೧೦] ಅದೇ ರೀತಿ ಕರ್ನಾಟಕ ಪಂಚತಂತ್ರದಲ್ಲಿಯೂ ಕೂಡ ಬೆಟ್ಟಗುಡ್ಡಗಳಲ್ಲಿ ಬೆಳೆದ ಹಲಸು, ಮಾವು, ನೇರಳೆ, ಕಿತ್ತಳೆ, ತೆಂಗು, ಬಾಳೆ, ಬೇಲ ಮೊದಲಾದ ಅನೇಕ ಬಗೆಯ ಹಣ್ಣುಗಳನ್ನು ಕುರಿತು ಹಾಗೂ ಹಲಸಿನಮರ ಬೇರಿನಿಂದ ತುದಿಯವರೆಗೂ ಎಲೆಯನ್ನು ಬಿಟ್ಟು ಎಲೆಗೊಂದರಂತೆ ತುದಿಯವರೆಗೆ ಹಲಸಿನ ಹಣ್ಣು ಬಿಟ್ಟಮರ, ನೇರಳೆ, ಇಮ್ಮಾವು, ತೆಂಗು, ಕಿತ್ತಳೆ ಮರಗಳು ಹಣ್ಣಿನಿಂದ ಶೋಭಿಸುತ್ತಿರುವುದನ್ನು ಹೀಗೆ ವರ್ಣಿಸಲಾಗಿದೆ.

“ಪನಸಾಮ್ರ ಜಂಬು ಜಂಬೀ
ರನಾರಿ ಕೋಳೀ ಕಪಿತ್ಥ ಕದಳೀನಾರಂಗ
ನವೀನ ಪಲಾವಳಿಯಂ
ವಿನಾಯಾದಿನಾದ್ವಿಜವರಂಗೆ ಕಪಿವರನಿತ್ತು ॥”.[೧೧೧]

ನಾಗಚಂದ್ರನ ಪಂಪ ರಾಮಾಯಣದಲ್ಲಿ ಆಶ್ವಾಸ ಐದರಲ್ಲಿ ಈ ರೀತಿ ವರ್ಣನೆ ಕಂಡುಬರುತ್ತದೆ.

“ಎಳೆ ಅಡಕೆಯ ಗೊನಿಯಿಂ ಮು
ತಳುಂ ಗಟಿಂ ನಾರಿಕೇಳ ಫಲದಿಂ ದ್ರಾಕ್ಷ
ಫಲದಿಂದ ಕಾಂಚನ ಕದಳೀ
ಫಲದಿಂದ ದೊಪ್ಪಿದುದು ವೇದಿಕಾಂತರ್ಬಾಗಂ॥” [೧೧೨]

ಮದುವೆಯ ಮಂಟಪದ ಅಲಂಕಾರಕ್ಕೆ ಬಳಸಿರುವ ಎಲೆ, ಅಡಿಕೆಯ ಗೊನೆ ಮಾತುಳ ಎಂಬ ಒಂದು ಜಾತಿಯಮರ, ತೆಂಗಿನಫಲ, ದ್ರಾಕ್ಷಫಲ, ನಾಗಸಂಪಿಗೆ ಮರಗಳನ್ನು ಕುರಿತು ಹೇಳಲಾಗಿದೆ. ನಯಸೇನನ ಧರ್ಮಾಮೃತದಲ್ಲಿ ಬಾಳೆ, ಕರ್ಜೂರ, ಕಿತ್ತಳೆ, ಮಾವು, ಪೇರಿಳೆ, ತೆಂಗು, ಕಂಚೀಕಾಯಿ ಮುಂತಾದ ಸೊಗಸಾದ ತೋಟದ ಬೆಳೆಗಳ ಉಲ್ಲೇಖ ಕಂಡುಬರುತ್ತದೆ. “ಬಾಟೆಯ ಕರ್ಜೂರ; ಕಿತ್ತಳೆಯ ಕಂದುರದ ರಂಜಿ ಪಿಮ್ಮಾವಿನ ಪೇರಿಳೆಯ ನಾರಂಗದ ಕಂಚೀಳೆಯ ತನಿವಣ್ಣಸಿಕ್ಕೆ ಮೇಲ್ಪದರದಿಂ”.[೧೧೩] ಬಾಳೆ ತೆಂಗಿನ ತೋಟಗಳನ್ನು ಕುರಿತು ನಯಸೇನ ವರ್ಣಿಸುತ್ತಾನೆ. ತೆಂಗಿನ ಬೆಳೆಯು ಐದಾರು ವರ್ಷಗಳಿಗೆ ಬರುವ ಬೆಳೆಯಾದರೆ, ಬಾಳೆ ವರ್ಷಕ್ಕೆ ಒಂದು ಸಾರಿ ಫಲ ನೀಡುವಂತಹ ಬೆಳೆಯಾಗಿದೆ. ತೋಟದ ಬೆಳೆಗಳ ಜೊತೆಗೆ ತರಕಾರಿ ಬೆಳೆಯಾದ ಸೌತೆಯ ಕಾಯಿಗಳನ್ನು ತೋಟದಲ್ಲಿ ಮಿಶ್ರಬೆಳೆಯಾಗಿ ಬೆಳೆಯುತ್ತಿದ್ದರು ಎಂದು ಹೇಳಲಾಗಿದೆ. '.......... ಸುಗ್ಗಿಯ ಬನಕ್ಕೆ ಗುಬ್ಬಿ ಕೋಗಿಲೆ ಎಂಬಂತೆ _____' ಸುಗ್ಗಿಯ ಕಾಯಿಯನ್ನು ತೋಟದ ಬದು ಮತ್ತು ಮೇರೆಯಲ್ಲಿ ಬೆಳೆಯುತ್ತಿದ್ದರು.

ಇಂದು ಹೊಲಗದ್ದೆಗಳಲ್ಲಿ ಒಂದು ವಿಶೇಷ ವಾಣಿಜ್ಯ ಬೆಳೆಯಾಗಿ ನುಗ್ಗಿಯನ್ನು ಬೆಳೆಯುತ್ತಾರೆ. ಹರಿಹರನ ಗಿರಿಜಾಕಲ್ಯಾಣದಲ್ಲಿ ಉದ್ಯಾನವನಗಳ ವರ್ಣನೆಯನ್ನು ಮಾಡುವಾಗ ಅನೇಕ ತೋಟದ ಬೆಳೆಗಳ ಉಲ್ಲೇಖವನ್ನು ಈ ಕೆಳಗಿನಂತೆ ಕಾಣುತ್ತೇವೆ.

"ಕರಮೆಸೆವಿಳೆ ಬಾಳೆ ನವಪೂಗಚಯಂ ಪನಸಾಳಿ ಶಾಳಿ ಭಾ
ಸುರ ಸುರಹೊನ್ನೆ ಜಂಬು ಘನನಿಂಬಕುಳಂ ಬಕುಳಂ ಕವುಂಗು ತೆಂ ।
ಗುರುತರಮಾತುಳಂಗತತಿ ಚೂತಕುಜಾತಮಶೋಕೆ ಪೂಗೊಳಂ
ಕುರುವರನತ್ತಮೂಲ ಕೃತಮೂಲ, ಕಮೂಲದಿನೊಪ್ಪುಗುಂ ವನಂ ॥"[೧೧೪]

ಈಳೆ, ಬಾಳೆ, ಅಡಕೆ, ಹಲಸು, ಗಂಧಶಾಳಿ, ಸುರಹೊನ್ನೆ, ಜಂಬುನೀರಳೆ, ನಿಂಬೆ, ಬಕುಳ, ಶ್ರೇಷ್ಠ ಅಡಿಕೆ, ತೆಂಗು, ಮಾತುಳಂಗ, ಮಾವು, ಅಶೋಕ, ಹೂವರಳಿದ ಕೊಳ, ಕುರುವಕ, ಹೊಂಗೆ, ಕೃತಮೂಲ ಮೊದಲಾದವುಗಳನ್ನು ಕುರಿತು ಹೇಳಲಾಗಿದೆ. ಅಲ್ಲದೇ ಬಾಳೆಯ ಬೆಳೆಯನ್ನು ಕುರಿತು ಅಧ್ಯಾಯ ಎರಡರಲ್ಲಿ ಈ ರೀತಿ ಹೇಳುತ್ತಾನೆ.

ಬಾಗುತೆ ಬಲಿಯುತೆ ಪೊಳೆದಿನಿ
ದಾಗುತೆ ದಳವೇಱೆತಿದಿಡಿದು ಹಿಗ್ಗುತೆ ಪ।
ಣ್ಣುಗುತೆ ಕಾಯ್ಗಳ್ ಪೊಱಮಡೆ
ಚೀಗುತ್ತು ಬೆಳೆದುವಲ್ಲಲ್ಲಿ ಕದಳೀಷಂಡಂ ।"[೧೧೫]

ಬಾಳೆಯ ಗಿಡಗಳು ಫಲಭರಿತವಾದಾಗ ಬಾಗುವ, ಬಲಿಯುವ, ಹೊಳೆದು ಮಾಗಿ ಹೂವಿನ ಎಸಳೇರಿ ಕಿಕ್ಕಿರಿದು, ಹಿಗ್ಗಿ ಹಣ್ಣಾಗಿ ಕಾಯಿಗಳು ಹೊರಗೆ ಒತ್ತರಿಸಿ ಬೆಳೆದಿರುವ ಕ್ರಮವನ್ನು ಕುರಿತು ಹೇಳುತ್ತಾನೆ.

ಇನ್ನೊಂದು ಪದ್ಯದಲ್ಲಿ

"ತವೆಬೆಳೆದ ಪೊಸ ಪನಸು ಬ
ಕ್ಕೆವಲಸು ನಳನಳಿಸುವಿಷು ಪುಂಡ್ರೇಷು ಪಳಂ ।
ಚುವ ತೆಂಗವು ಚೆಂದೆಂಗೊ
ಪ್ಪುವ ದಾಳಿಂಬಂಗಳೆಲ್ಲ ರಸದಾಳಿಂಬಂ ॥"[೧೧೬]

ಇಲ್ಲಿ ಹಲಸಿನಲ್ಲಿ ಬಕ್ಕೆ ಹಲಸು, ಕಬ್ಬಿನಲ್ಲಿ ಪಡಾವಳಿಕಬ್ಬು, ತೆಂಗಿನಲ್ಲಿ ಚೆಂದೆಂಗು ಅಲ್ಲದೇ ದಾಳಿಂಬೆಯಲ್ಲಿ ರಸವತ್ತಾದ ದಾಳಿಂಬೆ ಎಂಬ ಶ್ರೇಷ್ಠ ಪ್ರಭೇದಗಳನ್ನು ಕುರಿತು ಹೇಳುತ್ತಾನೆ. ವಿಶೇಷವಾಗಿ ಆಶ್ವಾಸ ಐದರಲ್ಲಿ ತುಂಗಭದ್ರ ನದಿಯ ತಡಿಯಲ್ಲಿ ಬೆಳೆದಿರುವ ತೋಟದ ಬೆಳೆಗಳ ವರ್ಣನೆ ಹರಿಹರನ ಕಾವ್ಯದಲ್ಲಿ ವಿಶೇಷವಾಗಿ ಕಂಡುಬರುತ್ತದೆ.

"ತಡೆಪಿಡಿದೊಪ್ಪುಲಾಮ್ರ ವರನೇಱುಲ ಶೋಕೆ ಕವುಂಗು ತೆಂಗುಕ
ಪಿಂಡಿದ ತಮೂಲಮಿಳೆ ನವದಾಡಿಮವೀದಿ ಲವಂಗ ಲುಂಗ ಲಿಂ ।
ಪೊಡೆರಿಪ ಬಾಳೆ ಪಷಪನ ಸಾವಳಿ ನಿಂಬಕದಂಬ ಮಿಂಬು ಗೊಂ
ದಡಸಿದ ಮಾತುಳಂಗತತಿ ಮೊಗಕುಲಂ ಸಲೆ ತುಂಗಭದ್ರಯೊಳ್".[೧೧೭]

ಮಾವು, ಜಂಬು ನೇರಳೆ, ಅಡಿಕೆ, ತೆಂಗು, ಕಪ್ಪಗಿನ ಹೊಂಗೆ, ದಾಳಿಂಬೆ, ಲವಂಗ, ಸೊಂಪಾಗಿ ಬೆಳೆದಿರುವ ಬಾಳೆ, ಹಲಸು, ಬೇವು, ಈಚಲು, ಮಾತುಳಂಗ ಮುಂತಾದ ಫಲಗಳನ್ನು ಕುರಿತು ಹೇಳಲಾಗಿದೆ.

ನೇಮಿನಾಥ ಪುರಾಣದಲ್ಲಿ ದ್ವಿತೀಯ ಆಶ್ವಾಸದಲ್ಲಿ "ಪನಸಾಮ್ರನಕ ಮಾತುಳಂಗ ಕದಳೀ ಕರ್ಜೂರ ನಾರಂಗಪಿತನ ಜಂಬೂಸಹಕಾರ ದಾಡಿಮೆ ಫಲವ್ರಾತಂಗಳಿಂದಾಗುಳುಂ ....".[೧೧೮] ಹಲಸು, ಅಮಟೆ, ಮಾದಾಳ ಬಾಳೆ, ಕರ್ಜೂರ, ಕಿತ್ತಳೆ, ನೇರಳೆ, ಮಾವು, ದಾಳಿಂಬೆ ಹಣ್ಣುಗಳು ಸಮೃದ್ಧವಾಗಿ ಬೆಳೆದಿದ್ದವು ಎಂದು ವರ್ಣಿಸುತ್ತಾನೆ. ಇನ್ನೊಂದು ಪದ್ಯದಲ್ಲಿ "ಅದು ಜಂಬೂ ಜಂಭಾ ರಂಭ ಕುಳಕ ಬಳುಕ .... ತಿಳಕಭೂರ್ಜಾದಿ ಭೂಜಾವಕೀರ್ಣಂ".[೧೧೯] ನೇರಳೆ, ನಿಂಬೆ, ಬಾಳೆ, ತುಬರೆ, ಬಕುಲ, ಕಂಪಿಲ್ಲ, ಸತ್ರಾರ್ಣ, ಏಳೆಲೆಬಾಳೆ, ಹೇರೀಳೆ, ಮೊರಟಿ, ಪ್ರಿಯಂಗು ಕುರವರ, ಅಶೋಕ, ಬೇವು, ಮಾವು, ಕಿರಿಯಶಿವನಿ, ಎಲಚಿ(ಬೋರೆ) ಆಲ, ಕುಂದ್ರಕುಕ್ಕೆ, ನೀರು ಹಲಸು, ಸೀವನ್ನಿ, ಮೂಲೂರ, ಲೋದ್ರ, ಇಂಳ, ಬಸರಿನೆಲ್ಲಿ ತಿಲಕ, ಭೂರ್ಜಾ ಮೊದಲಾದ ವೈವಿಧ್ಯಮಯವಾದ ಪದಾರ್ಥಗಳ ಉಲ್ಲೇಖ ಕಂಡುಬರುತ್ತದೆ. ಇನ್ನೂ ಅನೇಕ ಕಡೆಗಳಲ್ಲಿ ಪಾತಿ ಮಾಡುವ, ಪಾತಿಯಲ್ಲಿ ನಾಟಿದ ಬಳ್ಳಿಗಳಿಗೆ ನೀರು ತುಂಬುವ ಅಂಶವನ್ನು ಕುರಿತು ಹೇಳಲಾಗಿದೆ. ಜಗನ್ನಾಥ ವಿಜಯದಲ್ಲಿಯೂ ಕೂಡ ರಸಬಾಳೆ, ಪಟಾಪಟಿ ಕಬ್ಬು, ಭತ್ತ, ಗದ್ದೆಗಳನ್ನು ವಿಶೇಷವಾಗಿ ವರ್ಣಿಸುವುದನ್ನು ಕಾಣುತ್ತೇವೆ. ಇನ್ನೊಂದು ಪದ್ಯದಲ್ಲಿ

"ಲತೆಯೊಳಲತೆ ಮಾವಿಮ್ಮಾ
ವು ತೆಂಗು ಚೆಂದೆಂಗು ಕೌಂಗು ಪೂಗೌಂಗೆಲೆವ
ಳ್ಳಿ ತೊವತ್ತಿತಿವಳ್ಳಿ ವಗಂ
ಕೃತಕನಗಂ ಪಲವುಬಕ್ಕೆ ವಲಸಾ ಬನದೊಳ್ ॥"[೧೨೦]

ಎಳೆಯ ಬಳ್ಳಿ, ಸಿಹಿಯಾದ ಮಾವು, ಕೆಂದೆಂಗು, ಹೂವಾದ ಅಡಕೆ ಚಿಗುರಿದ ವಿಳ್ಳೆಯದ ಎಲೆಬಳ್ಳಿ, ಬಕ್ಕೆ ಹಲಸು ಎಲ್ಲಾಕಡೆ ಚಿಗುರಿನಿಂದ ಕಂಗೊಳಿಸುತ್ತಿದ್ದವೆಂದು ವರ್ಣಿಸಲಾಗಿದೆ.

ಕಬ್ಬಿಗರಕಾವ್ಯದಲ್ಲಿ "ಮಲ್ಲಿಗೆಯಲ್ಲದೆ ಸಂಪಿಗೆಯಲ್ಲದೆ ದಾಳಿಂಬ ಮಲ್ಲದೊಪ್ಪುವ ಚೆಂದೆಂಗಲ್ಲದೆ ....".[೧೨೧] ಮಲ್ಲಿಗೆ, ಸಂಪಿಗೆ, ದಾಳಿಂಬೆ, ಕೆಂದೆಂಗು, ಮಾವು, ಅಡಕೆ, ಮುಂತಾದವುಗಳ ಉಲ್ಲೇಖ ಕಂಡುಬರುತ್ತದೆ. ಅಲ್ಲದೆ ಮಾಗಿದ ದಾಳಿಂಬೆಯ ಹಣ್ಣುಗಳ ಬೀಜಗಳು ಬಿರಿತು ಉದುರಿ ರತ್ನದ ಅಂಗಡಿಗಳಂತೆ ಶೋಭಿಸುತ್ತಿದ್ದವು. ಎಂದು ಅತಿಶಯತೆಯಿಂದ ವರ್ಣಿಸಲಾಗಿದೆ. "ರಾಜಶೇಖರವಿಳಾಸ, ಶಬರಶಂಕರವಿಳಾಸದಲ್ಲಿಯೂ ಕೂಡ ದಾಳಿಂಬೆಯ ಗಿಡ, ರಾಜಬಾಳೆಯಗಿಡ, ಹಲಸಿನ ಹಣ್ಣುಗಳು, ಕರ್ಪೂರ ಬಾಳೆ, ಕರ್ಜೂರದ ಗಿಡ, ನೇರಳೆಗಿಡ, ದ್ರಾಕ್ಷಿಯ ಬಳ್ಳಿಗಳಿಗೆ ತೋಟದಲ್ಲಿ ಮಾಡುವ ಪಾತಿ, ಸಸಿನೆಡುವ ಬಗೆ ಹಾಗೂ ಹೆಚ್ಚುವರಿ ಇಳುವರಿ ಪಡೆಯುವ ಕ್ರಮಗಳನ್ನು ಕುರಿತು ಹೇಳಲಾಗಿದೆ".[೧೨೨]

ಆರೈಕೆಯ ವಿಧಾನ : ಕೃಷಿಕರು ಒಕ್ಕಲುತನದ ಕೆಲಸವನ್ನು ನಿರ್ವಹಿಸುವಾಗ ಅನೇಕ ಬಗೆಯ ಆರೈಕೆಯನ್ನು ಮಾಡುತ್ತಾರೆ. ಅವುಗಳಲ್ಲಿ ಹೊಲಗಳ ಆರೈಕೆ, ಬೆಳೆಗಳ ಆರೈಕೆ, ಸಾಕುಪ್ರಾಣಿಗಳ ಆರೈಕೆ, ಕೃಷಿ ಉಪಕರಣಗಳ ಆರೈಕೆ ಮುಂತಾದವುಗಳು. ಹಾದಿಬದಿಯ ಹೊಲಗಳಾದರೆ ಪ್ರಾಣಿ ಪಕ್ಷಿಗಳಿಂದ, ಕಳ್ಳಕಾಕರಿಂದ, ಹೊಲಗಳ ರಕ್ಷಣೆಯನ್ನು ಬೇಲಿ ಕಟ್ಟುವುದರ ಮೂಲಕ ಮತ್ತು ಹೊಲಗಳಿಗೆ ಬದು-ಒಡ್ಡುಹಾಕುವುದರಿಂದ ಹಾಗೂ ಹೊಲದಲ್ಲಿ ಬೆಳೆದಿರುವ ಕಳೆ ಕಿತ್ತು ಹಸನ ಮಾಡುವುದನ್ನು, ಬೆಳೆಗಳ ಆರೈಕೆಯನ್ನು ಮಾಡುವಂತಹ ಅನೇಕ ಅಂಶಗಳು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಕಂಡುಬರುತ್ತದೆ. ಅದನ್ನು ಕ್ರೂಢೀಕರಿಸಿ ಈ ಭಾಗದಲ್ಲಿ ವಿವೇಚಿಸಲಾಗಿದೆ.

ದುರ್ಗಸಿಂಹನ ಪಂಚತಂತ್ರದಲ್ಲಿ ಕಬ್ಬಿನ ಬೆಳೆ ರಕ್ಷಣೆಗೆ ಬೇಲಿಯನ್ನು ನಿರ್ಮಾಣ ಮಾಡುವುದನ್ನು ಕುರಿತು ಹೀಗೆ ಹೇಳಲಾಗಿದೆ. "ಅಂತಾತಂಕರ್ವುವಿತ್ತಿ ಸುತ್ತ ಬೇಲಿಯಂ ಕಟ್ಟಿ ಪಾಲಿಸ್ತುಮಿರೆ ....".[೧೨೩] ಕಬ್ಬನ್ನು ಬಿತ್ತಿ, ಕಬ್ಬಿನ ಬೆಳೆಯ ರಕ್ಷಣೆಗೆ ಬೇಲಿಯನ್ನು ಕಟ್ಟಿ, ಒಂದು ವರ್ಷಗಳ ಕಾಲ ಸುದೀರ್ಘವಾಗಿ ಬೆಳೆಯ ಆರೈಕೆಯ ಅಂಶವನ್ನು ಕುರಿತು ಇಲ್ಲಿ ಹೇಳಲಾಗಿದೆ. ಧರ್ಮಾಮೃತದಲ್ಲಿಯೂ ಹತ್ತಿ ಮತ್ತು ಜೋಳದ ಆರೈಕೆಯ ವಿಧಾನವನ್ನು ತಿಳಿಸಲಾಗಿದೆ. "...................... ಪತ್ತಿಯಂಕಿಚ್ಚು ತಗುಳ್ದಂತೆ .... ಜೋಳದ ರಾಶಿಯಂ ಪೊನ ....".[೧೨೪] ಹತ್ತಿಯ ಬೆಳೆಯನ್ನು ಬೆಂಕಿಯಿಂದ ರಕ್ಷಿಸುವುದು, ಜೋಳ ರಾಶಿಯನ್ನು ನೀರಿನಿಂದ ರಕ್ಷಿಸುವುದು, ತುಂಬಾ ಮಹತ್ವದ ಕೆಲಸ. ಅಲ್ಲದೇ ಬೆಳೆ ಇದ್ದಾಗ ಮಾತ್ರ ಬೇಲಿ ಕಟ್ಟಿ ರಕ್ಷಿಸುವುದು ಮುಖ್ಯವೇ ಹೊರತು ಬೆಳೆಯಿಲ್ಲದೇ ಇದ್ದಾಗ ಬೇಲಿಯ ಅವಶ್ಯಕತೆ ಇಲ್ಲ ಎಂದು ತಿಳಿಸುತ್ತಾನೆ.

ಕೃಷಿಕರು ಅನೇಕ ಸಾಕುಪ್ರಾಣಿಗಳನ್ನು ತನ್ನ ಜೀವನೋಪಾಯಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಹಸು, ಕುರಿ, ಎಮ್ಮೆ, ಮೇಕೆ ಮುಂತಾದವುಗಳನ್ನು ಹೈನುಗಾರಿಕೆಗಾಗಿ, ಎತ್ತು, ಕೋಣ, ಕುದುರೆಗಳನ್ನು ವ್ಯವಸಾಯ ಮಾಡಲು ಬಳಸುತ್ತಿದ್ದರು. ಅಂತಹ ಪ್ರಾಣಿಗಳ ಆರೈಕೆಯ ಕ್ರಮದ ಕೆಲವು ಅಂಶಗಳು ಪ್ರಾಚೀನ ಕಾವ್ಯಗಳಲ್ಲಿ ಕಾಣಸಿಗುತ್ತವೆ. ರನ್ನನ ಗದಾಯುದ್ದದಲ್ಲಿ "............. ಮೆಯ್ಯಡಗುಂ ತಿಜಿತಿಜಿದು ತಿಂದುಂ ಗೊಟ್ಟಂ ಗುಡಿದುಂ ....".[೧೨೫] ಇಲ್ಲಿ ಉಲ್ಲೇಖಿತವಾಗಿರುವ ಗೊಟ್ಟ ಪದದ ಅರ್ಥ ಕೊಟ್ಟಿಗೆ, ಗೋಶಾಲೆ, ಮತ್ತು ದನಕರುಗಳಿಗೆ ಔಷಧಿ, ಅಂಬಲಿ ಮಜ್ಜಿಗೆಯಂತಹ ತಿಳಿಪದಾರ್ಥಗಳನ್ನು ಕುಡಿಸಲು ಬಳಸುವ ಬಿದಿರಿನ ಕೊಳವೆಯಾಗಿದೆ. ರೈತರು ಸಾಕುಪ್ರಾಣಿಗಳ ಆರೈಕೆ ಮಾಡುವಾಗ ಈ ಸಲಕರಣೆಯನ್ನು ಬಳಸುತ್ತಾರೆ. ರನ್ನನ ಗದಾಯುದ್ದದಲ್ಲಿ ದುಶ್ಯಾಸನನ, ರಕ್ತ ಮಾಂಸಗಳನ್ನು ಭೀಮನು ಕುಡಿದ ಬಗೆಯನ್ನು ವರ್ಣಿಸುವಾಗ ಹೀಗೆ ಹೇಳಲಾಗಿದೆ. ಕರ್ನಾಟಕ ಪಂಚತಂತ್ರದಲ್ಲಿ ಹೊಸ ಹೋರಿಯ ಕರುಗಳನ್ನು ವ್ಯವಸಾಯಕ್ಕೆ ಅಣಿಗೊಳಿಸಲು ತಯಾರು ಮಾಡುವ ಬಗೆಯನ್ನು ಕುರಿತು ಹೀಗೆ ಹೇಳಲಾಗಿದೆ. "ಅವರ್ಕೆ ಪುಟ್ಟಿದ ಪೋರಿಗಳಂ ತಿರ್ದಿಯಾರಂಭಂಗೆಯ್ದು ....".[೧೨೬] ಎನ್ನುತ್ತಾನೆ. ಧರ್ಮಾಮೃತದಲ್ಲಿಯೂ ಎತ್ತಿನ ಆರೈಕೆಯನ್ನು ಕುರಿತು ವಿಶೇಷವಾದ ಕ್ರಮವನ್ನು ತಿಳಿಸಿರುವುದು ಕಂಡುಬರುತ್ತದೆ. "ಪಗಲೆಲ್ಲ ತಿರಿತಂದು .... ಕಬ್ಬುಗಳಂ ಜೋಳವನಕ್ಕಿಯಂ ಕಡಲೆಯುಂ ತೌಡಂ ಮನಂಪರ್ಚೆ ಪಿಂಡಿಗಳಂ ಪುಲ್ಗಳನಿಕ್ಕಿ ಮೇರುತಣಿವಿಲ ....".[೧೨೭] ಎತ್ತುಗಳಿಗೆ ಶಕ್ತಿ ವೃಧ್ಧಿಸಲು ಮತ್ತು ಅವು ಬಲಿಷ್ಠವಾಗಿ ಕೊಬ್ಬಿ ಬೆಳೆಯಲು ಹೇಗೆ ಆರೈಕೆ ಮಾಡಬೇಕೆಂದರೆ, ಕಬ್ಬು, ಜೊಳ, ಅಕ್ಕಿ, ಕಡಲೆ, ಭತ್ತದಿಂದ ತಯಾರು ಮಾಡಿದ ತೌಡು ಮತ್ತು ಅನೇಕ ಬಗೆಯ ಹಿಂಡಿಗಳನ್ನು ಮಿಶ್ರಣಮಾಡಿ ತಿನ್ನಿಸಬೇಕು. ಅಲ್ಲದೇ ಹುಲ್ಲುಗಳನ್ನು ಹದಮಾಡಿ ಮೇಯಿಸುವ ಅಂಶ ಹಾಗೂ ಕೊಟ್ಟಿಗೆಯಲ್ಲಿ ಕಟ್ಟುವ ಪದ್ಧತಿ ಮುಂತಾದವುಗಳನ್ನು ಕುರಿತು ಹೇಳಲಾಗಿದೆ. ಮತ್ತು ಸಾಕುಪ್ರಾಣಿಗಳಾದ ಹಸು, ಎಮ್ಮೆ, ಆಡು, ಎತ್ತುಗಳು ಕಳಲೆಯಂತಹ ವಿಷಪೂರಿತ ಆಹಾರವನ್ನು ತಿಂದಾಗ ಆರೈಕೆ ಮಾಡುವ ಬಗೆಯನ್ನು ಕುರಿತು ತಿಳಿಸಲಾಗಿದೆ.

ನೇಮಿನಾಥ ಪುರಾಣದಲ್ಲಿ ಗೂಳಿಯ ವರ್ಣನೆಯನ್ನು ಅದ್ಭುತವಾಗಿ ಮಾಡಲಾಗಿದೆ. ಇವು ವ್ಯವಸಾಯದಲ್ಲಿ ಬಳಸದೇ ಕೊಬ್ಬಿನಿಂದ ಚೆನ್ನಾಗಿ ಮೇಯಿಸಿ ಸಾಕುತ್ತಾರೆ. ಅಂತಹ ಗೂಳಿಯ ವರ್ಣನೆ ಈ ಕೆಳಗಿನಂತಿದೆ.

"ತಳೆದತ್ತು ದ್ವೃತ್ತಿಯಂ ತದ್ವೃಷಭಯುಗಳ ಮೂಲಂಬ ಸಾಸ್ನಾಪಟಂ ಪಾ
ಟಳ ನೇತ್ರಂ ವೃದ್ಧವಂ ಶಾಂಕುರ ವಿಷಯ ವಿಷಾಣದ್ವಯಂ ಗೃದ್ರಪಘೋ
ಚ್ಚಳಿತಾದಭೃಶ್ರವಂ ದುಂದುಬಿನಿಭನಿ ನದತ್ಕಂಧರಂ ದೀರ್ಘನೀಲೋ
ತ್ಪಳನಾಳಾಲೋಲವಾಳಂ ವಿಪುಳ ಶಫ ಪರಿಸ್ಥೂಲಮಾಭೀಳಶೀಳಂ ॥"[೧೨೮]

ಈ ಗೂಳಿಗಳಿಗೆ ಇಳಿ ಬಿದ್ದ ಗಂಗೆದೊಗಲು, ಕೆಂಗಣ್ಣು, ಬಲಿತ ಬಿದಿರ ಮೂಳೆಯಂತೆ ವಿಷಮಯವಾದ ಕೋಡು, ಹದ್ದಿನ ರೆಕ್ಕೆಗಳಂತೆ ಬೀಸಾಡುವ ತೋರ ಕಿವಿಗಳು, ಘರ್ಜಿಸುವ ಕೊರಳು, ಬಾಲ, ಕೊಬ್ಬಿದ ಇಣಿಲು, ಭಯಂಕರವಾದ ಆಕಾರಹೊಂದಿರುವ ಗೂಳಿಗಳ ವರ್ಣನೆ ಕಂಡುಬರುತ್ತದೆ. ಜಗನ್ನಾಥವಿಜಯದಲ್ಲಿಯೂ ಗೂಳಿಯ ವರ್ಣನೆಯನ್ನು ಕಾಣುತ್ತೇವೆ. ಭಯಂಕರವಾದ ಗುಟುರುಮಾಡುವ, ಉನ್ನತವಾದ ದೇಹಹೊಂದಿರುವ, ದೊಡ್ಡದಾದ ಇಣಿಲು, ಕೆಂಗಣ್ಣು, ಹರಿತವಾದ ಕೊಂಬುಗಳನ್ನು ಹೊಂದಿರುವವು ಎನ್ನಲಾಗಿದೆ. "..............ಪದದೊಳ್‌ದೆಸೆಗಳ್ ಮಾರ್ದನಿವಿಡಲದ್ಭುತ ವೃಷನರ್ದನ ವುಣ್ಮಿದುದದೊಂದು ವಜ್ರಾಶನಿವೊಲ್ ....".[೧೨೯] ಸಾಮಾನ್ಯವಾಗಿ ಊರು ಗ್ರಾಮಗಳಲ್ಲಿ ದೇವರ ಹೆಸರಿನಲ್ಲಿ ಬಿಟ್ಟ ಗೂಳಿಗಳು ಈ ಆಕಾರದಲ್ಲಿರುತ್ತವೆ.

ಕಾಡುಪ್ರಾಣಿ, ಕ್ರಿಮಿ–ಕೀಟ, ಪಕ್ಷಿಗಳಿಂದ ಬೆಳೆಗಳ ಆರೈಕೆಯನ್ನು ರೈತರು ಮಾಡಿಕೊಳ್ಳುತ್ತಾರೆ. ರೈತರ ಬೆಳೆಗಳಿಗೆ ಅನೇಕ ರೀತಿಯ ಬಾಧೆಗಳುಂಟು. ಇವುಗಳ ನಿಯಂತ್ರಣಕ್ಕಾಗಿ ಅನೇಕ ಬಗೆಯ ಕ್ರಮಗಳನ್ನು ರೈತರು ಕೈಗೊಳ್ಳುತ್ತಾರೆ. ಪ್ರಕೃತಿಯ ಮಡಿಲಲ್ಲಿರುವ ಜೀವಸಂಕುಲಗಳಲ್ಲಿ ಕೆಲವು ರೈತನ ಮಿತ್ರರಾದರೆ, ಮತ್ತೆ ಕೆಲವು ರೈತನ ಬೆಳೆಗಳಿಗೆ ಅಪಾಯಕಾರಿಗಳಾಗಿವೆ. ಪ್ರಾಚೀನ ಕಾವ್ಯಗಳಲ್ಲಿ ಕೆಲವು ಕೃತಿಗಳಲ್ಲಿ ಈ ಪ್ರಾಣಿ, ಪಕ್ಷಿ ಕೀಟಗಳನ್ನು ಕುರಿತು ಕೆಲವು ಮಾಹಿತಿಗಳು ದೊರೆಯುತ್ತವೆ. ಕರ್ನಾಟಕ ಕಾದಂಬರಿಯಲ್ಲಿ ಅನೇಕ ಹಕ್ಕಿಗಳು ಭತ್ತ ತಿಂದು, ನುಚ್ಚು ಅಕ್ಕಿ ಮತ್ತು ಹಣ್ಣುಗಳನ್ನು ಆಯ್ದು ತಂದು ಮುದಿಹಕ್ಕಿ ಮತ್ತು ಮರಿಗಳಿಗೆ ಕೊಡುವ ಅಂಶ ಕಾಣಸಿಗುತ್ತದೆ. "ಪಕ್ಕಿಗಳಲ್ಲಿ ತಿಂದುಟಿದ ನೆಲ್ಗಳ ನುಚ್ಚುಗಳಂ, ಫಲಂಗಳಂ ಪಕ್ಕದೊಳಿರ್ದ ಗೂಡುಗಳನಾಯ್ದು ....".[೧೩೦] ಎನ್ನಲಾಗಿದೆ. ಯಶೋಧರ ಚರಿತ್ರೆಯಲ್ಲಿ ಬೆದರುಗೊಂಬೆಯ ಉಲ್ಲೇಖ ಕಾಣಸಿಗುತ್ತದೆ. 'ಬೆರ್ಚು' ಎಂದರೆ ಬೆದರುಗೊಂಬೆ. ರೈತರು ತಮ್ಮ ಹೊಲಗದ್ದೆಗಳಲ್ಲಿ ಭತ್ತ, ಜೋಳ ಇತರೆ ಬೆಳೆಗಳನ್ನು ತಿನ್ನಲು ಬರುವ ಪಕ್ಷಿಸಂಕುಲಗಳನ್ನು ಬೆದರಿಸಲು ಮನುಷ್ಯನ ಆಕಾರಹೊಂದಿರುವ ಬೆದರುಗೊಂಬೆಯನ್ನು ಮಾಡಿ ನಿಲ್ಲಿಸುತ್ತಾರೆ. ಈ ಕೃತಿಯಲ್ಲಿ "............. ವಾರಿಯ ಬೀರರ್‌ಪಾಳಿಯೊಳೆಸೆದರು ಪಾಪದ ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆಱದಿಂ ....".[೧೩೧] ಯುದ್ಧದಲ್ಲಿ ವೀರರನ್ನು, ಬೆದರುಗೊಂಬೆಗೆ ಹೋಲಿಸಲಾಗಿದೆ. ಜಗನ್ನಾಥವಿಜಯದ ದ್ವಿತೀಯ ಆಶ್ವಾಸದಲ್ಲಿ ಭತ್ತದ ಬೆಳೆ ತಿನ್ನಲು ಬರುವ ಹಕ್ಕಿಗಳ ಕುರಿತಾದ ವರ್ಣನೆ ಈ ಕೆಳಗಿನ ಪದ್ಯದಲ್ಲಿ ಕಾಣಬಹುದಾಗಿದೆ.

"ಬೋಂಕನೆ ಬಂದುವಂದುತೊನೆದಿಕ್ಕೆಯಸಿರ್ಕೆಲದೊಳ್ ಕಲಂಕುವ
ನ್ನಂ ಕುಡುಕಿಂಗೆ ಪಾಯ್ದುಲಿವ ತಮ್ಮುಲಿಪಿಂಗಿಳಿಸೋವ ಪಾಮರೀ
ಸಂಕುಳದೊಂದು ಮೆಲ್ಲುಲಿಪುಮಂ ನಸುಗೇಳದೆ ನಿಂದ ಕೀರವ್ರಂ
ದಂಕಳಕೂಜಿತಾನುಟುಕಮಾದುದು ಶಾಡ್ವಲ ಗಂಧಸಾಲಿಯೊಳ್ ॥".[೧೩೨]

ಸಮೃದ್ಧವಾಗಿ ಬೆಳೆದಿರುವ ಭತ್ತದ ಬೆಳೆಗೆ ಬೇಗಬೇಗನೆ ಬಂದು ತೆನೆಯನ್ನು ಎರಡು ಪಕ್ಕಕ್ಕೆ ಬಾಗಿಸಿ, ಕಲಕುವಂತೆ ಕುಟುಕಿಮುತ್ತಿರುವ ಹಕ್ಕಿಗಳು, ಗಟ್ಟಿಯಾದ ಧ್ವನಿಯಿಂದ ಕೂಗಿ ಅಟ್ಟುವ

ಕಾವಲುಗಾರನನ್ನು ವಂಚಿಸಿ ಗಿಳಿಗಳು ಪೈರಿನಲ್ಲಿ ಅವಿತುಕೊಂಡು ಕಾಳುಗಳನ್ನು ತಿನ್ನುತ್ತಿದ್ದವು ಎನ್ನಲಾಗಿದೆ. ರಾಜಶೇಖರ ವಿಳಾಸದಲ್ಲಿಯೂ ಹಾಲುದುಂಬಿದ ತೆನೆಗಳು ತೂಗಾಡಿ ಬೆಳೆದಿರಲು ಫಲಭರಿತವಾದ ಇಂತಹ ಭತ್ತದ ತೆನೆಗಳಿಗೆ ಹಿಂಡುಹಿಂಡಾಗಿ ಗಿಳಿಗಳು ಬಂದು ಮುತ್ತುವ, ಭತ್ತವನ್ನು ತಿನ್ನುವ ವರ್ಣನೆಯನ್ನು ಕಾಣುತ್ತೇವೆ. "ಪಾಲ್ದುಂಬಿದ ಸಾಲ್ದೆನೆಗಳ ನೆಲ್ದುಱುಗಲನೊಲ್ದ .... ' 'ಎಳೆಗಿಳಿಗಳ ಬಳಗಂ ಗಳಗಳ ನಿಳತಂದೆಳಸಿಬಳಸಿ ....".[೧೩೩] ಎನ್ನಲಾಗಿದೆ. ಮಲ್ಲಿಕಾರ್ಜುನ ಕವಿಯ 'ಸೂಕ್ತಿಸುಧಾರ್ಣವ' ಎಂಬ ಸಂಗ್ರಹ ಗ್ರಂಥದಲ್ಲಿ ಹಕ್ಕಿಓಡಿಸುವ ತಂತ್ರಗಳನ್ನು ಕುರಿತು ಹೇಳಿರುವ ಒಂದು ಪದ್ಯ ಇದೆ. ಇದನ್ನು 'ಜಾನಪದ ಭಿತ್ತಿ' ಎಂಬ ಗ್ರಂಥದಲ್ಲಿ ಡಾ.ವೈ.ಸಿ. ಭಾನುಮತಿ ಈ ರೀತಿ ಉಲ್ಲೇಖಿಸುತ್ತಾರೆ.

ಕವಣೆಯ ಬಿಟ್ಟು ಮಾಮಿಡಿಯ ಮಿಟ್ಟೆಗಳಿಂ ತೆಗೆದೆಚ್ಚು ಕಂಕಣಾ
ರವಮೊಗವಂತು ಚಪ್ಪರಿಸಿ ಛೀಱ್ಸೆ ತೆಂಗಿನ ಪತ್ರದಂದದಿಂದ
ಸವಡಿಸಿ ಚಚ್ಚಲಚ್ಚಲಲ ಚಚ್ಚಲಲೆಂದು ಬೈದು ಪಾ
ಟವದೊಳೆ ಪಕ್ಕಿ ಸೋದು ಬೆಳೆಗಾಯ್ದುದು ಪಾಮರಕಾಮಿನೀಜನಂ॥

–ಕವಣೆಕೋಲು ಬಿಡುವುದು, ಕೈಗೆ ಸಿಕ್ಕಿದ ಒಣಕಾಯಿ ಸಿಪ್ಪೆಗಳಿಂದ ಹೊಡೆಯುವುದು, ಎಲ್ಲಕ್ಕಿಂತ ಮಿಗಿಲಾಗಿ ಚೆಚ್ಚಲವೆಂಬ ಪಕ್ಷಿಭಾಷೆಯ ಬಳಕೆ ಜಾನಪದೀಯ ದೃಷ್ಟಿಯಿಂದ ಮೆಚ್ಚುವಂತಿದೆ. ಗಿಳಿ ಓಡಿಸಲು ಮಂಚಿಗೆ ಹೇರುವದು, ಗೋರಿ ಹಾಡು ಹೇಳುವ ಉಲ್ಲೇಖಗಳು ಸಂಕಲನ ಗ್ರಂಥದಲ್ಲಿ ದೊರೆಯುತ್ತವೆ. ರೈತರು ತಾವು ಬೆಳೆದ ಭತ್ತದ ಮತ್ತು ಇತರೆ ಧಾನ್ಯಗಳನ್ನು ತುಂಬಾ ಕಷ್ಟಪಟ್ಟು ರಕ್ಷಿಸಿಕೊಳ್ಳುವ ಮತ್ತು ಆರೈಕೆಮಾಡಿಕೊಳ್ಳುವ ಅಂಶಗಳು ಕೆಲವು ಕಾವ್ಯಕೃತಿಗಳಲ್ಲಿ ವಿಶೇಷವಾಗಿ ಕಾಣಸಿಗುತ್ತವೆ.

ಮಾರುಕಟ್ಟೆ ವ್ಯವಸ್ಥೆ : ಕೃಷಿಕರು ತಾವು ಬೆಳೆದ ಪೈರನ್ನು ಸಂಗ್ರಹಿಸಿಡುವುದು ಮತ್ತು ಒಳ್ಳೆಯ ಬೆಲೆ ಬಂದಾಗ ಮಾರುಕಟ್ಟೆಯಲ್ಲಿ ಮಾರುವುದು ಹಾಗೂ ತಮಗೆ ಅಗತ್ಯವಾದ ವಸ್ತುಗಳನ್ನು ಕೊಳ್ಳುವುದು ಪ್ರಾಚೀನ ಕಾಲದಿಂದ ಬೆಳೆದು ಬಂದು ಪದ್ಧತಿಯಾಗಿದೆ. ಕೃಷಿಕರು ತಮ್ಮ ಉತ್ಪನ್ನಗಳನ್ನು ಸಂತೆ, ಅಂಗಡಿ, ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ. ಮಾರಾಟದಲ್ಲಿ ಮಧ್ಯವರ್ತಿಗಳು ಹೆಚ್ಚಾಗಿ ಕಂಡುಬರುತ್ತಾರೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಮತ್ತು ಶಾಸನಗಳಲ್ಲಿ ಇಂತಹ ಅಂಶಗಳನ್ನು ಗುರುತಿಸಬಹುದು.

ವಡ್ಡಾರಾಧನೆಯ ಸುಕುಮಾರ ಸ್ವಾಮಿಯ ಕಥೆಯಲ್ಲಿ ಚಿತ್ರಪಟಗಳನ್ನು ತೋರಿಸಿ ಕನ್ಯೆ, ವೃದ್ಧಸ್ತ್ರೀ, ಭಂಟನ ಕಥೆಯ ಹೇಳುತ್ತಾ ಭತ್ತವನ್ನು ಮೋಸದಿಂದ ಕೊಳ್ಳುವ ಅಂಶ ಈ ರೀತಿ ಇದೆ. ".......... ಚಿತ್ರಕಥೆಗಳಂ ಪಟದೊಳ್ ತೋಱುಪೇೞ್ದು ಲೋಗರಂ ಡಂಬಿಸಿ ಮಾಱುಗೊಳ್ಳುವ ಬತ್ತಮಂ ಕಳ್ದೊನಾ ....".[೧೩೪] ಸುಳ್ಳು ಹೇಳದ, ಮೋಸ ಮಾಡದ, ವ್ಯಾಪಾರಿ ಜಗತ್ತಿನಲ್ಲಿಯೇ ಇಲ್ಲ. ವ್ಯವಹಾರದಲ್ಲಿ ಅನೇಕ ಬಗೆಯ ವಂಚನೆಗಳನ್ನು ಕಾಣುತ್ತೇವೆ. ಇಂತಹ ವಂಚನೆಗೆ ನಿರಂತರವಾಗಿ ಕೂಲಿಕಾರ್ಮಿಕರು, ರೈತಾಪಿ ವರ್ಗ ಒಳಗಾಗುತ್ತಾರೆ. ಅಳತೆಯಲ್ಲಿ ಮೋಸಮಾಡುವ ಅಂಶವನ್ನು ಇದೇ ಕೃತಿಯಲ್ಲಿ ಕಾಣಬಹುದು. "........... ಧಾನ್ಯಮನಱುವತ್ತು ಬಳ್ಳಮನಿರ್ಪತ್ತು ಬಳ್ಳಮೆಂದಳೆಗುಮೀತನೊರ್ವಂ ವೈಕನೆಂಬೊಂ ಕಳ್ಳಂ ಮತ್ತೊರ್ವಂ ವ್ಯೋಮಕನೆಂಬೊಂ ವೈನಕನ ಕಳ್ದ ಧಾನ್ಯಮನೆಲ್ಲಮನಲ್ಲಿಯೆ ನೆಲಮನೆಯೊಳಗಿರ್ದು ಕಿಱಿದಾನುಮೊಂದು ಛಿದ್ರದ್ವಾರದೊಳಗಗ್ಗೆ ಬತ್ತಮಂ ಬರೆಕೊಳ್ಗುಂ ಮೋಱಗಗೆಳೆದ

ಬತ್ತಮಂ ನೋಟಕ್ಕೆ ಕಿಱಿದಪ್ಪಂತಿರೆ ಇಂತು ಮೂವರುವೊಂದಾಗಿ ಬತ್ತಮಂ ಮೂಱುವರಾ ಬತ್ತಂಗಳಂ ಕಳ್ದುಕೊಳ್ಳುವ ....".[೧೩೫] 'ಬಳ್ಳ' ಎಂದರೆ ಎರಡು ಸೇರು ಅಳತೆ ಎಂದು ಅರ್ಥ. ಇಲ್ಲಿ ವ್ಯವಸ್ಥಿತವಾಗಿ ಅಳತೆಯಲ್ಲಿ ಮೋಸಮಾಡಿ, ವಂಚಿಸುವ ಇಡಿಯಾದ ಸಮಗ್ರ ಚಿತ್ರವನ್ನು ಕಾಣುತ್ತೇವೆ. ಒಬ್ಬನು ಚಿತ್ರಪಟ ತೋರಿ ಕಥೆಗಳನ್ನು ಹೇಳುತ್ತಾ ಜನತೆಯ ಗಮನವನ್ನು ಬೇರಡೆಗೆ ಸೆಳೆದರೆ, ಮತ್ತೊಬ್ಬನು ಅರವತ್ತು ಬಳ್ಳವನ್ನು ಇಪ್ಪತ್ತು ಎಂದು ಅಳೆಯುತ್ತಾ ಹೋಗುತ್ತಾನೆ. ಮೂರನೆಯವನು ನೆಲಮಾಳಿಗೆಯಲ್ಲಿ ಇದ್ದು, ರಂಧ್ರದ ಮೂಲಕ ಭತ್ತವನ್ನು ಒಳಗಡೆ ಎಳೆದುಕೊಳ್ಳುತ್ತಾನೆ ಎಂದು ಹೇಳಲಾಗಿದೆ.

ಕರ್ನಾಟಕ ಪಂಚತಂತ್ರದಲ್ಲಿ ಶ್ರೀಮಂತರಾದ ರೈತರು ತಾವು ಬೆಳೆದ ಧಾನ್ಯಗಳನ್ನೆಲ್ಲ ಮಾರಿ ಬಂದ ಹೊನ್ನಿನಿಂದ ಸುಂದರ ಮನೆಯನ್ನು ಕಟ್ಟಿಕೊಂಡು ಉಳಿದ ಹೊನ್ನನ್ನು ಸಂಪತ್ತು ಎಂದು ಸಂಗ್ರಹಿಸುತ್ತಿದ್ದರು. ಅಲ್ಲದೇ ರೈತರಿಂದ ಪಡೆದ ಧಾನ್ಯವನ್ನು ವ್ಯಾಪಾರಿಗಳು ಹೊನ್ನಿಗೆ ಮಾರುತ್ತಿದ್ದರು. "......... ಸಮಸ್ತ ಧಾನ್ಯಮಂ ಸಂಪೂರ್ಣವಾಗಿ ಬೆಳೆದು ಆಧಾನ್ಯಮಂ ಮಾಱಿ ಪೊನ್ನಂ ಪಡೆದು ....".[೧೩೬] ಎನ್ನಲಾಗಿದೆ. ಧಾನ್ಯಗಳ ಮಾರಾಟದಲ್ಲಿ ಹೊನ್ನಿನ ನಾಣ್ಯಗಳ ಚಲಾವಣೆ ಇದ್ದು, ಹೊನ್ನು ವ್ಯಾಪಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತಿತ್ತು. ಧರ್ಮಾಮೃತದಲ್ಲಿಯೂ ಹೀಗೆ ಹೇಳಿರುವುದನ್ನು ಕಾಣುತ್ತೇವೆ. 'ಶುದ್ಧವಾದ ಹೊನ್ನಿನಲ್ಲಿ ಕಿಸುಬೆಳ್ಳಿಯನ್ನು ಬೆರಸಿ ಪೆರರ ಕಣ್ಗಟ್ಟಿ ಮೇಲಾದ ಪೊನ್ನೆಂದು ತೋರಿಸಿ ಲಾಭದಾಸೆಗಾಗಿ ಮಾರುವ ಪರದರು'. ಶುದ್ದವಾದ ಬಂಗಾರದಲ್ಲಿ ಬೆಳ್ಳಿಯನ್ನು ಬೆರಸಿ ಜನತೆಯನ್ನು ವಂಚಿಸುವ ವ್ಯಾಪಾರಿಗಳ ಚಿತ್ರ ಕಂಡುಬರುತ್ತದೆ. ಇನ್ನೊಂದು ಕಡೆ ಕಣದಲ್ಲಿ ಒಕ್ಕಲುಮಾಡಿದ ರಾಶಿ ಧಾನ್ಯವನ್ನು ಮಾರಾಟಮಾಡಲು, ಮನೆಯಲ್ಲಿ ಸಂಗ್ರಹಿಸಿಡಲು ಅಳತೆ ಮಾಡುತ್ತಿದ್ದರು ಎಂದು ಹೇಳಲಾಗಿದೆ. ಅಲ್ಲದೇ "ನಮ್ಮ ಸೆಟ್ಟಿಯ ಮಾತೊಳ್ಳಿದವು ಬಳ್ಳಂ ಕಿಱಿದೆಂಬಂತೆ ....".[೧೩೭] ಶೆಟ್ಟಿಯ ವ್ಯಕ್ತಿತ್ವವನ್ನು ಕುರಿತು ಹೇಳುವ ಇಂತಹ ಮಾತುಗಳಿಂದ ವ್ಯವಹಾರದ ವಂಚನೆ ತಿಳಿಯಲಾಗುತ್ತದೆ. ಪಂಪಭಾರತದಲ್ಲಿಯೂ 'ಸೆಟ್ಟಿಯ ಬಳ್ಳಂ ಕಿರಿದು' ಎಂದು ಹೇಳಲಾಗಿದೆ.

ಸಮಯಪರೀಕ್ಷೆ ಕೃತಿಯಲ್ಲಿ ವ್ಯಾಪಾರದ ಮಾಹಿತಿ ಹೀಗೆ ಉಲ್ಲೇಖಿತವಾಗಿದೆ.

"ತುಪ್ಪದೊಳಗೆಣ್ಣೆಯಂ ಲೇ
ಸಪ್ಪಾ ಹೊನ್ನೊಳಗೆ ಬೆಳ್ಳಿಯಂ ಧನದಳುಪಿಂ
ದುಪ್ಪಿನೊಳು ಮಣ್ಣನೆಂತುಂ
ತಪ್ಪಿಲ್ಲದೆ ನಡೆವ ನೆಂಬಾಗಲ್ ಬೆರಸಲ್ ॥

ಪಿರಿದಪ್ಪ ಕೋಲ್ಗಳಿಂದಂ
ಪಿರಿದೆನಿಸಿದ ಕೊಳಗದಿಂ ಮುಂತಾಂ ಕೊಂಡಂ
ತಿರೆ ಪೆರರ್ಗೆ ಕುಡುಗೆ ಕುಂದಿಸಿ
ಪರದುಗೆಯಲ್ಸಲ್ಲದು ....॥".[೧೩೮]

ತುಪ್ಪದಲ್ಲಿ ಎಣ್ಣೆ, ಹೊನ್ನಿನಲ್ಲಿ ಬೆಳ್ಳಿ, ಉಪ್ಪಿನಲ್ಲಿ ಮಣ್ಣು ಬೆರಸುವ ಧನದಾಹಿ ವ್ಯಾಪಾರಿಗಳು ಮತ್ತು ಕೊಳ್ಳುವಾಗ ದೊಡ್ಡ ಅಳತೆ ಕೊಳಗದಿಂದ ಕೊಂಡುಕೊಳ್ಳುವುದು, ಮಾರುವಾಗ ಕಡಿಮೆ ಅಳತೆ

ಅಳೆದುಕೊಡುವುದು, ವ್ಯಾಪಾರಿಗಳು ವಂಚಿಸುವ ಬಗೆಗಳನ್ನು ಕುರಿತು ಹೇಳಲಾಗಿದೆ. ಅಂದು ಇಂದು ಯಾವ ಕಾಲದಲ್ಲಿಯೂ ಇಂತಹ ವಂಚನೆಯನ್ನು ತಡೆಯಲಾಗದು. ಆದ್ದರಿಂದಲೇ ಕದಿಯದ, ಸುಳ್ಳು ಹೇಳದ ವ್ಯಾಪಾರಿಗಳೇ ಇಲ್ಲವೆಂದು ಹೇಳಲಾಗುತ್ತದೆ.

ಕೃಷಿಕರು ತಾವು ಬೆಳೆದ ಬೆಳೆಗಳನ್ನು ಕಣದಿಂದ ಮನೆಗೆ, ಮಾರುಕಟ್ಟೆಗೆ ಸಾಗಿಸುತ್ತಾರೆ. ವ್ಯಾಪಾರಿಗಳು ಕೂಡ ಕೊಂಡ ವಸ್ತುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಸಾಗಾಣಿಕೆ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಇಂತಹ ವ್ಯವಸ್ಥೆಯನ್ನು ಕುರಿತಾದ ಮಾಹಿತಿ ಮಾರ್ಗ ಕಾವ್ಯಗಳಲ್ಲಿ ಕೆಲವು ಕಡೆ ದೊರೆಯುತ್ತದೆ. ವಡ್ಡಾರಾಧನೆಯ ಅನೇಕ ಕಥೆಗಳಲ್ಲಿ ಬಂಡಿಯಲ್ಲಿ ವಸ್ತುಗಳನ್ನು ತುಂಬಿಕೊಂಡು ವ್ಯಾಪಾರಕ್ಕೆ ಗುಂಪುಗುಂಪಾಗಿ ಹೋಗುತ್ತಿದ್ದ ಅಂಶ ಹೀಗೆ ಕಂಡುಬರುತ್ತದೆ. "ಪಲಂಬರ್ ಶಾಕಟಿಕ ಪರದರುಂ ಬೆರಸು ಬಂಡಿಗಳೊಳ್ ಪಟಳ್ತಿಯುಂ ಧಾನ್ಯಮುಂ ತೀವಿಕೊಂಡು ಪೊಟಿಲ್ಗೆ ಮಾರಲೆಂದು ಪೋಪನ್ನೆಗಮೆಡೆಯೊಳಡವಿಯೊಳ್ ಕಳ್ಳರ್ ಬಟ್ಟೆಗಟ್ಟಿ ಮೇಲ್ವಾಯ್ದಿಟಿದೊಡೆ ದೇವಿಲಂ ಮೊದಲಾಗೊಡೆಯ ....".[೧೩೯] ಎತ್ತಿನ ಬಂಡಿಯಲ್ಲಿ ಸರಕನ್ನು ತುಂಬಿಕೊಂಡು ಅನೇಕ ವ್ಯಾಪಾರಿಗಳು ಮಾರಲು ಹೋಗುತ್ತಿರುವಾಗ ದಾರಿಯಲ್ಲಿ ಕಳ್ಳರು ಅಡ್ಡಗಟ್ಟಿದಾಗ ಹೋರಾಡಿ ಸತ್ತ ನಿದರ್ಶನಗಳು ಉಂಟು. ಕರ್ನಾಟಕ ಪಂಚತಂತ್ರದಲ್ಲಿಯೂ ವಿವಿಧ ವಸ್ತುಗಳನ್ನು, ಬಂಡಿಯಲ್ಲಿ ತುಂಬಿ ಒಳ್ಳೆಯ ಬಲಿಷ್ಠ ಎತ್ತುಗಳನ್ನು ಹೂಡಿ ಮಿತ್ರರ ಜೊತೆಗೂಡಿ ವ್ಯಾಪಾರಕ್ಕೆ ಹೊರಡುವ ಅಂಶ ಕಾಣತ್ತೇವೆ. "ಆ ವಿವಿಧ ಪ್ರಭೂತ ಭುವನಸ್ತುತಸಾರ ಸಮಸ್ತ ವಸ್ತುವಂ ತೀವಿದ ಬಂಡಿಯೊಳ್ ವಿಪುಳ ಸತ್ತ್ವಜವಂಗಳಿನೊಳ್ಳುವೆತ್ತಿ ....".[೧೪೦] ಎನ್ನಲಾಗಿದೆ.

ಕರಪದ್ಧತಿ ರೈತರು ಪ್ರಭುತ್ವದ ವ್ಯವಸ್ಥೆಗೆ ಹಣದ ರೂಪದಲ್ಲಿ, ಇಲ್ಲವೇ ಧಾನ್ಯದ ರೂಪದಲ್ಲಿ ಕರ(ತೆರಿಗೆ) ನೀಡುವ ಪದ್ಧತಿ, ಪ್ರಾಚೀನ ಕಾಲದಿಂದಲೂ ಇರುವಂಥದ್ದಾಗಿದೆ. ಪಂಪನ ಆದಿಪುರಾಣದಲ್ಲಿ ಸಕಾಲದಲ್ಲಿ ಮಳೆಯು ಚೆನ್ನಾಗಿ ಬಿದ್ದು, ಭೂಮಿಯ ಯಾವ ಭಾಗವು ಬಂಜರಾಗದಂತೆ ಬೆಳೆಯುತ್ತಿದ್ದು, ಎಲ್ಲಾಕಡೆ ಸಮೃದ್ಧಕಾಲ ತುಂಬಿರುವಾಗ ರೈತರ ಉತ್ಪತ್ತಿಯಲ್ಲಿ, ಆರರಲ್ಲಿ ಒಂದು ಭಾಗವನ್ನು ಕರ ರೂಪದಲ್ಲಿ ಕೊಡುತ್ತಿದ್ದರು. ರಾಜರು ಪ್ರಜೆಗಳ ಪಾಲನೆ ಪೋಷಣೆಯ ಹೊಣೆಯನ್ನು ಹೊತ್ತಿರುತ್ತಿದ್ದರು. "ಪದನಂ ಕಾಣಿಸಿಕೊಳ್ಳುವಲ್ಲಿ ಮಟೆಗಳ್ ಷಡ್ಭಾಗಮಂ ಕೊಂಡು ತಪ್ಪದೇ ಭೂಪರ್ ಪ್ರತಿಪಾಳಿಪರ್ ಪ್ರಜೆಗಳಂ ....".[೧೪೧] ಎನ್ನಲಾಗಿದೆ. ಧರ್ಮಾಮೃತದಲ್ಲಿ ಬೆಳೆಯನ್ನು ಸಂತೆ, ಪಟ್ಟಣ, ಪೇಟೆ ಅಂಗಡಿಗಳಲ್ಲಿ ಮಾರಾಟಮಾಡುವಾಗ ಮತ್ತು ಕೊಳ್ಳುವಾಗ ಸುಂಕವನ್ನು ನೀಡುತ್ತಿದ್ದ ಅಂಶಗಳು ಕಾಣಗುತ್ತವೆ. "........... ಸುಂಕಿಗನಂ ಕಂಡ ಭಂಡ ಮುಳ್ಳಿನಂತೆ ಸಂಕಿಸುತ್ತುಂ ....".[೧೪೨] ಸುಂಕಿಗನ ಬಳಿಯಲ್ಲಿ ಸುಖದುಃಖ ಹೇಳಿಕೊಂಡರೆ ಪ್ರಯೋಜನವಿಲ್ಲ. ಸುಂಕವನ್ನು ಕೊಡಲೇಬೇಕಾದ ಅನಿವಾರ್ಯತೆಯನ್ನು ಸೂಚಿಸಲಾಗಿದೆ.

ಕೆಳದಿನೃಪವಿಜಯದಲ್ಲಿ ರಾಜರು ಭೂಕಂದಾಯವನ್ನು ಪಡೆದುಕೊಳ್ಳುವ ಮತ್ತು ರೈತರು ಕಂದಾಯವನ್ನು ರಾಜನಿಗೆ ನೀಡುವ ಮಾಹಿತಿ ಈ ಕೆಳಗಿನ ಪದ್ಯಗಳಿಂದ ತಿಳಿದುಬರುತ್ತದೆ.

"ಕಳೆದುಳಿದ ಲೆಕ್ಕಗುತ್ತಿಗೆ
ಗಳ ನಿಲಹದ ನಾಮಿಯಡ್ಡವಂತಿಕೆ ನಾನಾ
ಸುಲಿಗೆ ಲಾವಣಿಗೆಯೆಂಬೀ
ಗಳಬಳಮಂ ನಿಲಿಸಿ ಸುಂಕಮಂಬಾಳಿಸಿದಂ ॥೧೯॥

ಕರಣಿಕೆಯನಿತ್ತು ಸಿಸ್ತಿನ
ಬರಹಗಳಿಂದಾಯಬೀಯಮಂ ಬಣಿತೆಗೆತಂ
ದುರುದುರ್ವ್ರಯಂಗಂಳಂ ತಾಂ
ವಿರಚಿಸಿದಾರ್ಜಿಸಿದ ನೊಪ್ಪುವಗಣಿತಧನಮಂ ॥೨೨॥"[೧೪೩]

ಪದ್ಯ ೧೯ರಲ್ಲಿ ಕಳೆದು ಉಳಿಕೆಯ ಲೆಕ್ಕ, ದಾರಿ ನಿಲ್ಲುವ ತಾಣಗಳು, ಅಡ್ಡೆ, ನದಿಗಳಲ್ಲಿ ನಾನಾ ರೀತಿಯಿಂದ ಸುಂಕ ವಸೂಲಿ ಮಾಡಲಾಗುತ್ತಿದ್ದು. ಗುತ್ತಿಗೆ, ದೇಣಿಗೆಯಲ್ಲಿ ನಡೆಯುತ್ತಿದ್ದ ವಂಚನೆಯನ್ನು ನಿಲ್ಲಿಸಿ ಸರಿಯಾದ ರೀತಿಯಲ್ಲಿ ಸುಂಕ ವಸೂಲಿ ಮಾಡಿ ಜನತೆಯನ್ನು ಮೋಸದಿಂದ ಉಳಿಸುವ ಅಂಶ ಕಂಡುಬರುತ್ತದೆ. ಪದ್ಯ ೨೨ರಲ್ಲಿ ಲೆಕ್ಕಪತ್ರಗಳನ್ನು ಬರೆಯುವ ಪದ್ಧತಿ, ಕ್ರಮಬದ್ದ ಬರವಣಿಗೆಯ ಮೂಲಕ ಅಯ್ಯವ್ಯಯಗಳ ಪರಿಶೀಲನೆ, ಭ್ರಷ್ಟ ವ್ಯವಹಾರಗಳನ್ನು ಕಡಿಮೆ ಮಾಡಿ ರಾಜನ ಆದಾಯ(ರಾಜಸ್ವ)ವನ್ನು ಸಂಗ್ರಹಿಸುವುದನ್ನು ತಿಳಿಸಲಾಗಿದೆ. ಶಿಸ್ತುಬದ್ದ ಆಡಳಿತಕ್ಕೆ ಹೆಸರಾಗಿರುವ ಶಿವಪ್ಪನಾಯಕನು ಜನೋಪಯೋಗಿ ಕೆಲಸಗಳನ್ನು ಮಾಡಿರುವನು. ಅಯ್ಯವ್ಯಯ ಪರಿಶೀಲನೆ, ಕರಪದ್ಧತಿ, ಲೆಕ್ಕಪತ್ರ ಬರೆಯುವ ಪದ್ಧತಿ, ಕ್ರಮಬದ್ಧವಾದ ಬರವಣಿಗೆ ಹಾಗೂ ರಾಜ್ಯದ ರಾಜಸ್ವ ಹೆಚ್ಚು ಮಾಡಲು ತೆಗೆದುಕೊಂಡ ಕ್ರಮಗಳನ್ನು ಕುರಿತು ಈ ಕೃತಿಯಲ್ಲಿ ಹೇಳಲಾಗಿದೆ.

೨. ದೇಶೀ ಸಾಹಿತ್ಯ

ನಡುಗನ್ನಡ ಕನ್ನಡ ಸಾಹಿತ್ಯದಲ್ಲಿ ದೇಶೀಯತೆಯ ಅಂಶಗಳನ್ನೊಳಗೊಂಡ ಅನೇಕ ಕೃತಿಗಳು ರಚನೆಯಾಗಿವೆ. ಕೃಷಿಯೇ ಮೂಲಧಾರವಾಗಿರುವ ನಮ್ಮ ನಾಡಿನ ರೈತರ ಗ್ರಾಮೀಣ ಬದುಕಿನ ಜೀವನ ಅನುಭವ ನಮ್ಮ ಕವಿಗಳ ಕೃತಿಯಲ್ಲಿ ಹರಳುಗಟ್ಟಿವೆ. ಅಂತವುಗಳಲ್ಲಿ ಕೃಷಿ ಸಂಬಂಧಿ ಉಲ್ಲೇಖಗಳನ್ನು ಅನೇಕ ಕಡೆ ಕಾಣುತ್ತೇವೆ. ಅವುಗಳನ್ನು ಇಲ್ಲಿ ಸಂಗ್ರಹಿಸಿ ಚರ್ಚಿಸಲಾಗಿದೆ. ವ್ಯವಸಾಯ ಪ್ರಧಾನ ದೇಶವಾದ ಭಾರತದಲ್ಲಿ ಭೂಮಿಯನ್ನು ದೇವರು ನೀಡಿದ ಕೊಡುಗೆ ಎಂದು ನಂಬಲಾಗಿದ್ದು, ಭೂಮಿಯಲ್ಲಿ ಬೆಳೆದ ಬೆಳೆ ಸರ್ವರಿಗೆ ಸೇರಿದ್ದು ಎಂದು ತಿಳಿಯಲಾಗಿತ್ತು. ಕೃಷಿಗೆ ಭೂಮಿಯೇ ಮುಖ್ಯ. ಮಣ್ಣಿನಲ್ಲಿ ಬಿತ್ತಿ ಬೆಳೆ ಬೆಳೆಯುವುದೇ ಕೃಷಿಯೆಂದು ಸರಳವಾಗಿ ಹೇಳಬಹುದು. ಭೂಮಿಯ ಕುರಿತಾದ ಮಾಹಿತಿ ವಚನಕಾರರ ವಚನಗಳಲ್ಲಿ ಅನೇಕ ಕಡೆ ಕಂಡುಬರುತ್ತದೆ. ಬಸವಣ್ಣನವರ ವಚನವೊಂದರಲ್ಲಿ ಹೀಗೆ ಹೇಳಲಾಗಿದೆ.

"ಹತ್ತು ಮತ್ತರ ಭೂಮಿ ಬತ್ತದ ಹಯನು ನಂದಾದೀವಿಗೆಯ
ನೆಡಸಿಹೆವೆಂಬರ ಮುಖವ ನೋಡಲಾಗದು..............".[೧೪೪]

'ಮತ್ತರ' ಎಂದರೆ ಭೂಮಿ ಅಳೆಯುವ ಮಾಪನ. ಹತ್ತು ಮತ್ತರ ಭೂಮಿಯನ್ನು ಧಾನವಾಗಿ ನೀಡಿರುವ ಭೂಧಾನ ಪದ್ದತಿಯ ಅಂಶ ಕಂಡುಬರುತ್ತದೆ. ಬೆಡಗಿನ ವಚನಗಳಲ್ಲಿ "ಮೂರು ನೆಲದ ಭೂಮಿ..........." [೧೪೫] ಪ್ರಾಯಶಃ ಇದು ಮಳೆಯ ನೀರನ್ನು ಆಶ್ರಯಿಸಿರುವ ಕಾಡಾರಂಬ ಭೂಮಿ (ಖುಷ್ಕಿ). ನೀರಾರಂಬ (ಗದ್ದೆ) ಮತ್ತು ತೋಟದ ಭೂಮಿಯೆಂಬ ಮೂರು ಬಗೆಯ ವ್ಯವಸಾಯ ಯೋಗ್ಯ ಭೂಮಿಯನ್ನು ಕುರಿತು ಹೇಳಲಾಗಿದೆ. ಬಸವಣ್ಣನವರ ಇನ್ನೊಂದು ವಚನದಲ್ಲಿ "............... ಕರಲಾ ಭೂಮಿಯಲ್ಲಿ ಕರೆವ ವೃಷ್ಟಿಯ ತೆರನಂತೆ ಅವರೆತ್ತ ಬಲ್ಲರೆನ್ನ ಸುಖ ದುಃಖವನು? ....".[೧೪೬]

ಭೂಮಿಯ ಪ್ರಭೇದಗಳೊಲ್ಲೊಂದಾದ ಕರಲು ಭೂಮಿಯ ಉಲ್ಲೇಖವಿದೆ. ಇದು ವ್ಯವಸಾಯ ಯೋಗ್ಯ ಭೂಮಿಯೆಲ್ಲ. ಇಂತಲ್ಲಿ ಎಷ್ಟೇ ಮಳೆ ಬಿದ್ದರು ವ್ಯರ್ಥ. ಯಾವ ಬೆಳೆಯನ್ನು ಸಂಮೃದ್ಧವಾಗಿ ಬೆಳೆಯಲಾಗದು. ವ್ಯವಸಾಯ ಯೋಗ್ಯ ಭೂಮಿಯನ್ನು ದೇವಮಾತೃಕೆ ಮತ್ತು ನದಿಮಾತೃಕವೆಂದು ವಿಭಾಗ ಮಾಡಿಕೊಂಡು, ಮಳೆ ಆಶ್ರಯದ ಭೂಮಿ ದೇವಮಾತೃಕವಾದರೆ, ನದಿ, ಕೆರೆ, ಕಾಲುವೆಯ ನೀರಿನ ಸಹಾಯದಿಂದ ಬೆಳೆಯುವುದು ನದಿ ಮಾತೃಕ ಭೂಮಿಯೆಂದು ಕರೆಯಲಾಗಿದೆ.

ಒಕ್ಕಲಿಗ ಮುದ್ದಣ್ಣನ ವಚನವೊಂದರಲ್ಲಿ

"ನೀ ಕೊಟ್ಟ ಭೂಮಿಗೆಮುಂದೆ ಕರಲು, ಹಿಂದೆ ಇಗ್ಗರಲು
ಅಲ್ಲಿಲದ ಆಚೆ ಮಧ್ಯೆ ಭೂಮಿ
ಮೂರು ನೆಲದ ಭೂಮಿಯ ಆರೈದು ಬೆಳೆದೆಹೆನೆಂದಡೆ
ಇದಾರವಶವು ಅಲ್ಲ
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ".[೧೪೭]

ಕರಲು ಭೂಮಿ ಮತ್ತು ಇಗ್ಗರಲು ಭೂಮಿಯ ಪ್ರಭೇದಗಳನ್ನು ಹೇಳಲಾಗಿದೆ. ಕರಲು ಭೂಮಿಯಲ್ಲಿ ಎಷ್ಟೇ ಮಳೆಯಾದರು ಬೆಳೆ ಬೆಳೆಯಲು ಯೋಗ್ಯವಾದ ಭೂಮಿಯಲ್ಲ, ಮೂರು ನೆಲದ ಭೂಮಿಯ ಆರೈಕೆ ಮಾಡಿಹೆನೆಂದು ಎಂದು ಹೇಳುವಲ್ಲಿ ಮೂರು ಬಗೆಯ ಭೂಮಿಯ ಕಲ್ಪನೆ ಇರಬೇಕೆಂದೆನಿಸುತ್ತದೆ.

ಅನುಭವ ಮೂರ್ತಿಯಾದ ಸರ್ವಜ್ಞನ ವಚನವೊಂದರಲ್ಲಿ "ಎರೆಯನ್ನು ಉಳುವಂಗೆ, ದೊರೆಯನ್ನು ಪಿಡಿದಂಗೆ................".[೧೪೮] ಎನ್ನುವಲ್ಲಿ ಎರೆಯ ಹೊಲ ತುಂಬಾ ಮಹತ್ವದ್ದು. ಒಕ್ಕಲುತನದಲ್ಲಿ ಎರೆಯನ್ನು ಹೊಂದಿರುವ ರೈತನು ದೊರೆಗೆ ಸಮಾನ ಎಂದು ನಂಬಲಾಗಿದೆ. ಎರೆಯಿಲ್ಲದ ಆರಂಭ, ದೊರೆಯಿಲ್ಲದ ಊರು ಎರಡು ವ್ಯರ್ಥವೆಂಬ ಮಾಹಿತಿ ಜನಪದರಲ್ಲಿ ಇದೆ. ಸಿದ್ದರಾಮನ ವಚನವೊಂದರಲ್ಲಿ "ಭೂಮಿ ಒಂದೆಂದಡೆ ಬೆಳೆವ ವೃಕ್ಷ ಹಲವು ತೆರನುಂಟು ಉದಕ ಒಂದೆಂದಡೆ.............".[೧೪೯] ಒಂದೇ ಭೂಮಿಯಲ್ಲಿ ಹಲವು ಬಗೆಯ ಬೆಳೆಗಳನ್ನು ಬೆಳೆಯಲಾಗುತ್ತದೆ. ಬೆಳೆ ಬೆಳೆಯಲು ಉತ್ತಮ ಭೂಮಿಯ ಅವಶ್ಯಕತೆಯಿದ್ದು. ಕರಲು, ಇಗ್ಗರಲು ಮುಂತಾದ ಭೂಮಿಗಳು ವ್ಯವಸಾಯ ಯೋಗ್ಯ ಭೂಮಿಯಲ್ಲ, ಎರೆಯ ಹೊಲ ರೈತನ ಪಾಲಿಗೆ ಬಂಗಾರವಿದ್ದಂತೆ ಎಂಬ ನಂಬಿಕೆ ಇದೆ. ತೋಟ ಮಾಡಲು ಎರೆಯ ಭೂಮಿ ಹೆಚ್ಚು ಉಪಕಾರಿಯಲ್ಲ. ನೀರಾವರಿಗೆ ಮಸಾರಿ, ಕೆಂಪು ಮಣ್ಣಿನ ಭೂಮಿ ಹೆಚ್ಚು ಉಪಯುಕ್ತವಾದುದು. ಭೂಮಿಯ ಮಣ್ಣಿನ ಪ್ರಭೇದಗಳಿಗನುಗುಣವಾಗಿ ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ.

ಬೇಸಾಯ ಕ್ರಮ : ಒಕ್ಕಲುತನ ಒಂದು ಶ್ರೇಷ್ಠವಾದ ವೃತ್ತಿಯಾಗಿದೆ. ಬಹುಸಂಖ್ಯಾತ ಜನರು ಕೃಷಿಯನ್ನೇ ವೃತ್ತಿಯಾಗಿ ಅವಲಂಬಿಸಿದ್ದಾರೆ. ಒಕ್ಕಲುತನ ಕುರಿತಂತೆ ವಚನಕಾರರು ಲೌಕಿಕ, ಆಧ್ಯಾತ್ಮಿಕ ನೆಲೆಯಲ್ಲಿ ಕೃಷಿಯ ಶ್ರೇಷ್ಠತೆ, ಕಾಯಕದ ಮೂಲಕ ಅದನ್ನು ನಿರ್ವಹಿಸುವ ಬಗೆಯನ್ನು ಕುರಿತು ಹೇಳಿದ್ದಾರೆ. ಕಾಯಕದ ಪರಿಕಲ್ಪನೆ ಜಗತ್ತಿನ ಸಾಹಿತ್ಯ ಮತ್ತು ಇತಿಹಾಸದಲ್ಲಿಯೇ ಅಪೂರ್ವವಾದುದು, ಅನೇಕ ಪ್ರದೇಶಗಳಿಂದ ಬಂದ ವಚನಕಾರರು ತಮ್ಮ ತಮ್ಮ ವೃತ್ತಿಯ ಮೂಲಕ ಕಾಯಕದ ತೃಪ್ತಿಹೊಂದಿರುವರು. ಅಲ್ಲದೇ ತಮ್ಮ ಅನುಭವದ ಎತ್ತರ ಬಿತ್ತರಗಳನ್ನು ವಚನಗಳಲ್ಲಿ ಹೇಳಿರುವರು. ವಚನಕಾರರಲ್ಲಿ ಶ್ರೇಷ್ಠನಾದ ಅಲ್ಲಮ ಬಯಲಿನಲ್ಲಿಯೇ ಎಲ್ಲವನ್ನು ಕಂಡವನು. ಬೇಸಾಯದ ಮಹತ್ವ ಕುರಿತು ಹೀಗೆ ಹೇಳುತ್ತಾರೆ.

"ಬೇಸಾಯವ ಮಾಡಿ ಮನೆಯ ಬೀಯಕ್ಕೆ ಬತ್ತವಿಲ್ಲದಿರ್ದಡೆ
ಆ ಬೆವಸಾಯದ ಘೋರವೇತಕಯ್ಯ?
....".[೧೫೦] ಒಕ್ಕಲುತನ ಮಾಡಿದ ರೈತನ ಮನೆಯಲ್ಲಿ ಅನ್ನಾಹಾರಗಳಿಗೆ ಕೊರತೆ ಇರಬಾರದು. ಬೇಸಾಯ ಮಾಡಿ ಮನೆಯ ವೆಚ್ಚಕ್ಕೆ, ಊಟಕ್ಕೆ ಭತ್ತವಿಲ್ಲದೇ ಇದ್ದರೆ ಆ ರೈತನ ಜೀವನ ಅತ್ಯಂತ ಘೋರತನದಿಂದ ಕೂಡಿರುವಂತದ್ದು. ಇಂದು ಅನೇಕ ರೈತರ ಮನೆಯಲ್ಲಿ ಇಂತಹ ಪರಿಸ್ಥಿತಿ ಇದೆ. ಇದು ಆಧುನಿಕತೆಯ ಘೋರತನವಾಗಿದೆ. ಆಹಾರದ ಬೆಳೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಆದರೆ ಯಾವ ರೈತರ ಮನೆಯಲ್ಲಿಯೂ ಸಂಗ್ರಹಿಸಿಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಬಸವಣ್ಣನವರು ಒಂದು ವಚನದಲ್ಲಿ ಈ ರೀತಿ ಹೇಳುತ್ತಾರೆ.

"ಬಿತ್ತು ಬೆಳೆಯಿತ್ತು, ಕೆಯ್ಯ ಕೊಯ್ಯಿತ್ತು, ಗೂಡು ಮುರಿಯಿತ್ತು
ಕುತ್ತರಿಯೊಟ್ಟಿತು ವಕ್ಕಿತ್ತು ತೂರಿತ್ತು ಅಳೆಯತ್ತು ಸಲಗೆತುಂಬಿತ್ತು
ಕೂಡಲಸಂಗಮದೇವಯ್ಯ
ಮೇಟಿ ಕಿತ್ತಿತ್ತು ಕಣಹಾಳಾಯಿತ್ತಯ್ಯ ॥"[೧೫೧]

ಈ ವಚನದಲ್ಲಿ ಬೇಸಾಯದ ಸಮಗ್ರ ಕ್ರಿಯೆಯನ್ನು ಕುರಿತು ಹೇಳಲಾಗಿದೆ. ಭೂಮಿ ಉಳುಮೆಯ ನಂತರ ಬಿತ್ತುವ, ಬೆಳೆಯುವ, ಆ ಬೆಳೆಯನ್ನು ಕೊಯ್ಯಲುಮಾಡಿ ಹೊಲದಲ್ಲಿಯೇ ಗೂಡು ಕಟ್ಟುವ, ಅದನ್ನು ಕಣಕ್ಕೆ ತಂದು ಮೇಟಿ (ಕುತ್ತರಿ) ಸುತ್ತಲೂ ಪೈರು ಒಟ್ಟುವ, ಅನಂತರ ಒಕ್ಕಲು ಮಾಡಿ ಗಾಳಿಗೆ ತೂರುವ, ರಾಶಿ ಮಾಡುವ ಅದನ್ನು ಅಳತೆಯ ಮಾಡಿ ಮನೆಗೆ ಸಾಗಿಸಿ ಸಂಗ್ರಹಿಸುವ ಅನಂತರ ಮೇಟಿ ಕಿತ್ತು ಕಣಹಾಳಾಗುವ ಇಡೀ ರೈತನ ಕಾಯಕದ ಪರಿಪೂರ್ಣಚಿತ್ರ ಕಂಡುಬರುತ್ತದೆ.

ವಚನಕಾರರಲ್ಲಿ ಒಕ್ಕಲುತನ ಕಾಯಕದ ಶರಣನೆಂದರೆ ಒಕ್ಕಲಿಗ ಮುದ್ದಣ್ಣ. ಅವರ ಪ್ರಕಾರ ಒಕ್ಕಲುತನ ಒಂದು ಯೋಗ, ಕೃಷಿಯಲ್ಲಿ ತೊಡಗಿಸಿಕೊಳ್ಳುವುದೆಂದರೆ ತಪಸ್ಸು ಮಾಡಿದಂತೆ. ವಚನವೊಂದರಲ್ಲಿ ಇಡೀ ಒಕ್ಕಲುತನ ಕುರಿತಾದ ಸಮಗ್ರ ಚಿತ್ರವನ್ನು ಕಾಣಬಹುದಾಗಿದೆ.

"ಭಕ್ತಿಯೆಂಬ ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲಂ ಪಿಡಿದು
ಅಂತಃಕರಣ ಚತುಷ್ಟಯವೆಂಬ ಪಶುವಂಕಟ್ಟಿ
ಓಂಕಾರನಾದವೆಂಬ ಸೆಳೆಕೋಲಂಪಿಡಿದು
ಉತ್ತರ ಕ್ರೀಯೆಂಬ ಸಾಲನೆತ್ತಿ
ದುಃಕರ್ಮವೆಂಬ ಕಂಟಕದ ಗುಲ್ಮವಂ ಕಡಿದು
ಅರುಹೆಂಬ ರವಿಯ ಕಿರಣದಿಂದ ಒಣಗಿಸಿ
ಅವಂ ಕೂಡಲೊಟ್ಟಿ ಜ್ಞಾನಾಗ್ನಿಯೆಂಬ ಅಗ್ನಿಯಿಂದ ಸುಟ್ಟುರುಹಿ
ಆ ಹೊಲನಂ ಹಸಮಾಡಿ ಬಿತ್ತುವ ಪರಿ ಇನ್ನಾವುದೆಯ್ಯಾ ಎಂದೆಡೆ
ನಾದ, ಬಿಂದು, ಕಳೆ, ಮಳೆಗಾಲದ ಹದ ಬೆದೆಯನರಿದು
ಸ್ಥೂಲವೆಂಬ ದಿಂಡಿಗೆ ತ್ರಿದೇವರೆಂಬ ತಾಳನಟ್ಟು
ಇಡಾಪಿಂಗಳ ಸುಷುಮ್ನಾನಾಳವೆಂಬ ಕೋಪಿಗಳ ಜೋಡಿಸಿ

ಮೇಲೆ ತ್ರಿಕೂಟ ಸ್ಥಾನವೆಂಬ ಬಟ್ಟಲಂ ಒಲಿದು
ಕುಂಡಲೀ ಸರ್ಪನೆಂಬ ಹಗ್ಗವ ಸೇದಿಕಟ್ಟಿ
ಹಂಸನೆಂಬ ಎತ್ತು ಹೂಡಿ
ಪ್ರಣವನೆಂಬ ಬೀಜವ ಪಶ್ಚಿಮ ಮುಖಕ್ಕೆ ಬಿತ್ತಿ
ಸರ್ವಶಾಂತಿ ನಿರ್ಮಲವೆಂಬ ಮೇಘ ಸ್ಮರಿಯಲ್ಕೆ
ನೀಲಬ್ರಹ್ಮವೆಂಬ ಸಸಿ ಹುಟ್ಟಿತ್ತು
ಆ ಸಸಿಯ ಮುಟ್ಟುವ ಸಪ್ತವರ್ಣದ ಸೆದೆಯ ಕಳೆದು
ಅಷ್ಟವರ್ಣದ ಅಲಬಂಕಿತ್ತು ದಶವಾಯುವೆಂಬ ಕಸಮಂ ತೆಗೆದು
ಆ ಸಸಿ ಪಸರಿಸಿ ಪ್ರಜ್ವಲಿಸಿ ಫಲಕ್ಕೆ ಬರಲಾಗಿ
ಚತುರ್ವಿಧವೆಂಬ ಮಂಚಿಗೆಯಂ ಮೆಟ್ಟಿ
ಬಾಲಚಂದ್ರನೆಂಬ ಕವಣೆಯಂ ಪಿಡಿದು
ಪ್ರಪಂಚುವೆಂಬ ಹಕ್ಕಿಯಂ ಸೋವಿ
ಆ ಬತ್ತ ಬಲಿದು ನಿಂದಿರಲು
ಕೊಯ್ದುಂಬ ಪರಿಇನ್ನಾವುದಯ್ಯಾ ಎಂದಡೆ
ಇಷ್ಟವೆಂಬ ಕುಡುಗೋಲಿಗೆ ಪ್ರಣವವೆಂಬ ಹಿಡಿಯಂ ತೊಡಿಸಿ
ಭಾವವೆಂಬ ಹಸ್ತದಿಂ ಪಿಡಿದು ಜನನದ ನಿಲವಂ ಕೊಯ್ದು
ಮರಣದ ಸಿವುಡಕಟ್ಟಿ ಆಕಾಶವೆಂಬ ಬಣಬೆಯನೊಟ್ಟಿ
ಉನ್ಮನಿಯೆಂಬ ತೆನೆಯನ್ನರಿದು ಮನೋರಥವೆಂಬ ಬಂಡಿಯಲ್ಲಿ ಹೇರಿ
ಮುಕ್ತಿಯೆಂಬ ಕೋಟಾರಕ್ಕೆ ತಂದು
ಅಷ್ಟಾಂಗ ಯೋಗವೆಂಬ ಜೀವಧನದಿಂದೊಕ್ಕಿ
ತಾಪತ್ರಯದ ಮೆಟ್ಟ ನೇರಿ ಪಾಪದ ಹೊಟ್ಟ ತೂರಿ
ಪುಣ್ಯದ ಬೀಜಮಂ ತಳೆದು
ಸುಖಿಯಾಗಿಪ್ಪ ಒಕ್ಕಲುಮಗನತೋರಿಬದುಕಿಸಯ್ಯಾ ....".[೧೫೨]

ಹಂತ ಹಂತವಾಗಿ ಈ ಮೇಲಿನ ವಚನ ಮಾನವನ ದೈಹಿಕ ಹಾಗೂ ಮಾನಸಿಕ ಸ್ವಾಸ್ಥಕ್ಕೆ ಸಂಬಂಧಿಸಿದ್ದಾರೂ ಕೃಷಿಕ ಭೂಮಿಯ ಹಸನು ಮಾಡಲಿಕ್ಕೆ ಬಳಸುವ ಕೃಷಿ ಸಾಮಗ್ರಿಗಳ ಪಟ್ಟಿಯನ್ನೇ ನೀಡುತ್ತದೆ. ಹೀಗಾಗಿ ಆಧ್ಯಾತ್ಮ ಅರ್ಥವನ್ನು ಬದಿಗಿರಿಸಿ ಈ ವಚನದಲ್ಲಿಯ ಕೃಷಿ ಸಂಬಂಧಿ ಸಾಮಗ್ರಿಗಳನ್ನು ಕುರಿತು ಚರ್ಚಿಸಬಹುದು. ಹಾಗೆಯೇ ಇನ್ನೊಂದು ವಚನದಲ್ಲಿ "ಒಮ್ಮೆ ನೆಲದಲ್ಲಿ ಬಿತ್ತಿದ ಬಿತ್ತುವ ಕಿತ್ತಿಕಿತ್ತಿ ಮತ್ತೆ ಬಿತ್ತುತ್ತ ಹೋದಡೆ ಆ ಬಿತ್ತು ಮೊಳೆತು ಕಳೆಯೇರಿ ಬೆಳೆದು, ಬೆಳೆಸನೀವ ಪರಿಯಿನ್ನೆಂತೋ--".[೧೫೩] ಹದಬೆದೆಯನ್ನರಿತು ಬೀಜ ಬಿತ್ತಬೇಕು. ಬಿತ್ತಿದ ಬೀಜ ಸರಿಯಾಗಿ ನಾಟದೇ ಇದ್ದರೆ ಪುನಃಪುನಃ ಬಿತ್ತಿದ ಬೆಳೆ ಸರಿಯಾಗಿ ನಾಟಲಾರದು. ಅಲ್ಲದೇ ಇಳುವರಿಯು ಹೆಚ್ಚು ಬರಲಾರದು. ಆದ್ದರಿಂದ ಬಿತ್ತುವ ಕಾರ್ಯ ಸರಿಯಾದ ರೀತಿಯಲ್ಲಿ ನಡೆಯಬೇಕೆಂದು ಸೂಚಿಸಲಾಗಿದೆ.

ಕೋಲುಶಾಂತಯ್ಯನ ವಚನದಲ್ಲಿ ಐದು ಮೂಲೆ ಬರುವ ಹೊಲವನ್ನು ಕುರಿತಾದ ಮಾಹಿತಿ ದೊರೆಯುತ್ತದೆ. "ಜಲದ ಮಧ್ಯದಲ್ಲಿ ಅಯಿ ಮೂಲೆಯ ಕೆಲದಲ್ಲಿ ಒಂದು ಹೊಲ ಬೆಳೆಯಿತ್ತು

ಬೆಳೆಯ ಮೇಯ ಬಂದ ಎರಳೆ--"[೧೫೪] ಸಾಮಾನ್ಯವಾಗಿ ಮಳೆಗಾಲ ಮುಗಿದು ಚಳಿಗಾಲದಲ್ಲಿ ನೀರಿನ ಕೆರೆಗಳು ಬತ್ತುತ್ತವೆ. ಅಂತಹ ಕೆರೆಗಳಲ್ಲಿ ನೀರಿನ ಮಧ್ಯದಲ್ಲಿ ಇರುವ 'ಆಯಿಮೂಲೆ ಹೊಲ'ದಲ್ಲಿ ಕೆಲವು ಕಡಿಮೆ ಅವಧಿಯ ಬೆಳೆಯನ್ನು ಬೆಳೆಯುತ್ತಾರೆ. ಐದು ಮೂಲೆಯ ಹೊಲ ಒಳ್ಳೆಯದಲ್ಲ ಎಂಬ ನಂಬಿಕೆ ರೈತರಲ್ಲಿದೆ. ಅದಕ್ಕಾಗಿ ಒಂದು ಮೂಲೆಯಲ್ಲಿ ಕಳವಿಯ ರೂಪದಲ್ಲಿ ಹೊಲಬಿಟ್ಟು ಉಳುಮೆ ಮಾಡುತ್ತಾರೆ. ರೈತರು ಕಣಗಳನ್ನು ಮಾಡಿ ಭತ್ತ ಒಕ್ಕಲು ಮಾಡುವ ಅಂಶ ಈ ವಚನದಲ್ಲಿ ಕಂಡುಬರುತ್ತದೆ. "ಕಳದೊಳಗಣ ಕಳವೆಯನೊಕ್ಕುವರೊಳಗದೆ.........".[೧೫೫] ಎನ್ನಲಾಗಿದೆ. ಭತ್ತ ಹಾಗೂ ಅನೇಕ ವಿಧದ ಬೆಳೆಗಳನ್ನು ಒಕ್ಕಲು ಮಾಡುವುದಕ್ಕಿಂತ ಸಾಸಿವೆಯಂತಹ ಘಾಟುಳ್ಳ ಧಾನ್ಯವನ್ನು ಒಕ್ಕಲು ಮಾಡುವ ಅಂಶ ಕುರಿತು ಬೋಗಣ್ಣ ತನ್ನ ವಚನದಲ್ಲಿ ಈ ರೀತಿ ಹೇಳುತ್ತಾನೆ. "ಪಕ್ಕ ಮುರಿದ ಹಕ್ಕಿಯಂತೆ ಸಾಸಿವೆಯ ನೊಕ್ಕಿದ ಎತ್ತಿನಂತೆ............"[೧೫೬] ಸಾಸಿವೆ ಘಾಟುವುಳ್ಳ ಸಾಂಬಾರ ಪದಾರ್ಥವಾಗಿರುವುದರಿಂದ ಇದನ್ನು ಒಕ್ಕುವಾಗ ಎತ್ತಿಗೂ ಕೂಡ ಸಂಕಟಪಡುವಂತಹ ಬಾಧೆ ಉಂಟಾಗುತ್ತದೆ.

ಶಿವಲೆಂಕ ಮಂಚಣ್ಣನವರ ವಚನವೊಂದರಲ್ಲಿ " .... ಜಲವಿಲ್ಲದ ತಟಾಕದ ಕಳೆಯಲ್ಲಿ ಬೆಳೆಯ ಬಿತ್ತಿದಂತಿರಬೇಕು............"[೧೫೭] ನೀರು ಇಲ್ಲದ ಕೆರೆಯ ತಳದಲ್ಲಿ ಬೆಳೆಯನ್ನು ಬಿತ್ತಿ ಅಲ್ಪಾವಧಿಯ ಕೆಲವು ಬೆಳೆಗಳನ್ನು ಬೆಳೆಯುವಂತಹ ಮಾಹಿತಿ ದೊರೆಯುತ್ತವೆ. ಹಡಪದ ಅಪ್ಪಣ್ಣನ ವಚನದಲ್ಲಿ ಹೀಗೆ ಹೇಳಲಾಗಿದೆ. "ಹಸನ ಮಾಡಿ ಹರಿ ಹೊಲದಲ್ಲಿ ಕಸವ ಬಿತ್ತುವ ಮರುಳರಂತೆ..........."[೧೫೮] ಹರಗಿ ಹಸನಮಾಡಿ ಬಿತ್ತನೆ ಮಾಡುವುದು ಜಾಣತನ. ಹಸನಾದ ಹೊಲದಲ್ಲಿ ಉತ್ತಮವಾದ ಬೀಜ ಬಿತ್ತವರೇ ಹೊರತು, ಕಸವನ್ನು ಬಿತ್ತಲಾಗದು. ಕೃಷಿಜ್ಞಾನವಿಲ್ಲದ ಮರುಳರು ಈ ಮೇಲಿನಂತೆ ವರ್ತಿಸುತ್ತಾರೆ. ಅಜ್ಞಾನ ಶರಣರ ವಚನದಲ್ಲಿ ಬೀಳು ಭೂಮಿಯ ಹಸನುಮಾಡುವ ಬಗೆಯನ್ನು ಕುರಿತು ಹೀಗೆ ಹೇಳುತ್ತಾರೆ. '.............ಬೀಳ ಭೂಮಿ ಹಸನಾಗಲೊಲ್ಲದೆ, ಜಾಣ ಬಿತ್ತಿಗೆಯ ಬಿತ್ತಿದರೆ ಬೆಳೆಯುವುದೆಂತೆಯ್ಯಾ ....' ಉಳುಮೆ ಮಾಡದೆ ಬಿಟ್ಟಿರುವ ಭೂಮಿಯನ್ನು ಬೀಳುನೆಲ ಎಂದು ಕರೆಯಲಾಗುತ್ತದೆ. ಹದಬೆದೆ ಅರಿತು ಹರಗಿ ಹಸನುಮಾಡಿ ಬಿತ್ತನೆ ಮಾಡುವುದು ಜಾಣತನವೇ ಹೊರತು, ಬೀಳು ಭೂಮಿಯಲ್ಲಿ ಜಾಣತನದ ಬಿತ್ತಿಗೆ ಮಾಡಿ ಬೆಳೆ ಬೆಳೆಯಲು ಸಾಧ್ಯವಿಲ್ಲ. ಬಿತ್ತನೆ ಮಾಡುವುದು ಒಂದು ವಿಶೇಷ ಪ್ರತಿಭೆ, ಅದು ಒಂದು ಕಲೆಗಾರಿಕೆ ತುಂಬಾ ಸಣ್ಣ ಧಾನ್ಯಗಳನ್ನು ಬಿತ್ತುವಾಗ ವಿಶೇಷ ಪರಿಣತಿ ಅವಶ್ಯಕ. ಸೊಡ್ಡಳ ಬಾಚರಸನ ಒಂದು ವಚನದಲ್ಲಿ "ಹದನರಿದು ಹರಗುವ ಬೆದೆಯರಿದು ಬಿತ್ತುವ ಸಸಿಮಂದವಾದಡೆ ತೆಗೆವನಯ್ಯ...........ಒಕ್ಕುವ .... ಹಗೆಯನಿಕ್ಕುವನಯ್ಯ ...."[೧೫೯] ಮಂಗಾರು ಮಳೆ ಬೀಳುವುದಕ್ಕಿಂತ ಮುಂಚೆ ಕುಂಟೆಯಿಂದ ಹರಗುವುದು, ಕೃಷಿ ಚಟುವಟಿಕೆಯಲ್ಲಿ ತುಂಬಾ ಅಗತ್ಯವಾದುದು. ಹದವರಿತು ಬಿತ್ತನೆ ಮಾಡಿ, ಸಸಿಯ ಬೆಳವಣಿಗೆ ಮಂದವಾಗಿದ್ದರೆ ಕಿತ್ತು ನಾಟಿ ಮಾಡಿ, ಆರೈಕೆ ಮಾಡುವುದು. ಬೆಳೆ ಕೊಯ್ಲು ಮಾಡಿ, ಕಣಕ್ಕೆ ತಂದು ಒಕ್ಕಲು ಮಾಡಿ, ಗಾಳಿಗೆ ತೂರಿ ಹಸನುಮಾಡಿ ಹಗೇವುನಲ್ಲಿ ಸಂಗ್ರಹಿಸುವುದು ಎಂದು ಒಕ್ಕಲುತನದ ಪೂರ್ಣ ಕ್ರಿಯೆಯನ್ನು ತಿಳಿಸುತ್ತಾನೆ.

ಕಾಡುಸಿದ್ದೇಶ್ವರ ವಚನಗಳಲ್ಲಿ ಮಾಗಿಯ ಕಾಲದಲ್ಲಿ ಕಬ್ಬಿಣದ ನೇಗಿಲಿನಿಂದ ಭೂಮಿ ಉಳುಮೆಮಾಡುವ, ಹದವರಿತು ಅನೇಕ ಧಾನ್ಯಗಳನ್ನು ಬಿತ್ತುವ ಮಾಹಿತಿ ಕಂಡುಬರುತ್ತದೆ. "ಹಾದಿ ಹೊಲವ ಮಾಡಿ ಮೂರೆತ್ತು ಹೂಡಿ, ಆ ಮೂರೆತ್ತಿಗೆ ಒಂದು ನೊಗ ಕಟ್ಟಿ, ನೇಗಿಲ ಹೂಡಿ, ಕರಕಿಯ

ಬಿಟ್ಟು ಕಣಗಿಲ ತೆಗೆದು ....ಹದಿನೆಂಟು ಧಾನ್ಯ ಜೀನಸವಿಲ್ಲದೆ..........”[೧೬೦] ಹಾದಿಯ ಪಕ್ಕದ ಹೊಲದಲ್ಲಿ ಮೂರೆತ್ತು ಹೂಡಿ ಎಂದರೆ ಪ್ರಾಯಶಃ ಮೂರು ಜೊತೆ ಎತ್ತು ಎಂದು ಅರ್ಥವಿರಬೇಕು. ಕಬ್ಬಿಣದ ನೇಗಿಲಿನ ಉಳುಮೆಯನ್ನು ಮಾಘಿಯ ಕಾಲದಲ್ಲಿ ಮೂರು ಜೊತೆ ಇಲ್ಲವೆ, ನಾಲ್ಕು ಜೊತೆಯ ಎತ್ತುಗಳಿಂದ ಹೂಡಿ ಆಳವಾದ ಉಳುಮೆಯನ್ನು ಮಾಡಲಾಗುತ್ತದೆ. ಹೀಗೆ ಮಾಡುವುದರಿಂದ ಭೂಮಿಯಲ್ಲಿನ ಕರಕಿ, ಕಣಗಿಲ ಮುಂತಾದ ಕಸವನ್ನು ನಿವಾರಣೆ ಮಾಡಬಹುದು. ಈ ರೀತಿ ಹಸನಾದ ಹೊಲದಲ್ಲಿ ಆಹಾರಧಾನ್ಯ, ದ್ವಿದಳಧಾನ್ಯಗಳಾದ ಹದಿನೆಂಟು ಬಗೆಯ ಬೆಳೆಯ ಬೆಳೆಯುವ ಉಲ್ಲೇಖ ಕಂಡುಬರುತ್ತದೆ. ಇವರ ವಚನಗಳಲ್ಲಿಯೇ ಕಪ್ಪಿನಭೂಮಿ, ಹಾಳುಭೂಮಿ, ಕೆಂಪು, ಮಸಂಬು, ಬಿಳುಮ, ಸವಳಭೂಮಿ, ಕಲ್ಲುಭೂಮಿ ಮುಂತಾದ ತರತರದ ಮಣ್ಣಿನಲ್ಲಿ ಬೆಳೆಗಳನ್ನು ಬಿತ್ತಿ ಬೆಳೆಯುವ ಮಾಹಿತಿ ದೊರೆಯುತ್ತದೆ. ಅಲ್ಲದೇ ಉಳುಮೆ ಮಾಡಲು ಸಮರ್ಥರಲ್ಲದ ರೈತಾಪಿ ಜನ ಭೂಮಿಯನ್ನು ಹಣ ಗುತ್ತಿಗೆಗೆ ಬೇರೆಯವರಿಗೆ ನೀಡುವ, ಭೂಮಿಯನ್ನು ಮಾರುವ, ಕೊಳ್ಳುವ ಮುಂತಾದ ಭೂ ಸಂಬಂಧಿ ಅಂಶಗಳು ಕಂಡುಬರುತ್ತವೆ. “ಭೂಮಿಯ ಬಿಟ್ಟವರಿಗೆ ಭೂಮಿ ಕೊಟ್ಟ ಹಣವ ಕೊಂಬುವರು ಭೂಮಿ ಹಿಡಿದವರಿಗೆ.............”[೧೬೧] ಎನ್ನಲಾಗಿದೆ.

ಕುಮಾರವ್ಯಾಸನು ಕೃತಿಯಲ್ಲಿ ಕೃಷಿಯ ಮಹತ್ವ, ಕೃಷಿಯೇ ಸರ್ವ ಕಾರ್ಯಕ್ಕೂ ಆಧಾರವಾಗಿದೆ. ಕೃಷಿಯೇ ದೇಶದ ಆರ್ಥಿಕತೆಯ ಬೆನ್ನೆಲುಬು ಎಂಬ ಮಹತ್ವದ ಅಂಶಗಳನ್ನು ತನ್ನ ಕಾವ್ಯದಲ್ಲಿ ಕಂಡಿರಿಸಿದ್ದಾನೆ.

“ಕೃಷಿ ಮೊದಲು ಸರ್ವಕ್ಕೆ ಕೃಷಿಯಿಂ
ಪಸರಿಸುವುದಾ ಕೃಷಿಯನುದ್ಯೋ
ಗಿಸುವ ಜನವನು ಪಾಲಿಸುವುದಾ ಜನಪದದ ಜನದಿ ।
ವಸು ತೆರಳುವುದು ವಸುವಿನಿಂ ಸಾ
ಧಿಸುವಡಾವುದ ಸಾಧ್ಯವದರಿಂ
ಕೃಷಿವಿಹೀನನ ದೇಶವದು ದುರ್ದೇಶ ಕೇಳೆಂದ ॥”[೧೬೨]

ಸರ್ವಕಾರ್ಯಕ್ಕೆ ಕೃಷಿಯೇ ಮೊದಲು ಎಂಬುದು ಈತನ ಆಶಯ. ಇನ್ನೊಂದು ಪದ್ಯದಲ್ಲಿ ಈ ರೀತಿ ಹೇಳಲಾಗಿದೆ.

“ಮಸಗೆ ಮಾಡಿದ ಹೊಲನು ದುಷ್ಟ
ಪ್ರಸರದೇಳಿಗೆ ಪಾಪಿಯೋಲಗ
ಹುಸಿಯ ಬಾಳುವೆ ಹುದುವಿನಾರಂಭದ ಫಲೋದಯವು
ನಸಿದು ಹೋಗದೆ ಲೋಕದೊಳಗವು
ಹೆಸರುವಡೆವವೆ ಹಗೆಯ ಹೆಚ್ಚುಗೆ
ಹಸನ ಕೊಡುವುದೆ ರಾಯ ಚಿತ್ತೈಸೆಂದನಾಶಕುನಿ ॥”[೧೬೩]

ಮಸಗೆ ಎಂದರೆ ಮಂಕಾಗಿರುವ, ನರೆ ಬಣ್ಣಕ್ಕೆ ತಿರುಗಿರುವ ಬೆಳೆಯು ಎಂದು ಅರ್ಥ. ದುಷ್ಟರ ಏಳಿಗೆ, ಸುಳ್ಳು ಹೇಳುವವನ ಬಾಳು, ಹದವರಿತು ಬಿತ್ತದ ಬೆಳೆಯ ಫಲಗಳು ನಸಿಸಿ ಹೋಗುತ್ತವೆ. ಎಂಬ ಕೃಷಿಜ್ಞಾನವನ್ನು ಕುರಿತು ಹೇಳುತ್ತಾನೆ.

ಲಕ್ಷ್ಮೀಶನ ಜೈಮಿನಿಭಾರತದಲ್ಲಿ ಒಕ್ಕಲುಮಾಡಲು ಬೇಕಾಗುವ ಕಣದ ಸಿದ್ಧತೆಯ ಕ್ರಮವನ್ನು, ಯಾಗ ಭೂಮಿ ಸಿದ್ಧತೆ ಮಾಡುವ ಅಂಶದ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ. "............ ಗಿರಿಪುರ ದೇಶವನ ಪಳ್ಳಕೊಳ್ಳಂಗಳಂ ತುಳಿದು ಕಣದ ಘಟ್ಟಣೆಯಂತೆ ಸಮಮಾಗಲು".[೧೬೪] ಒಕ್ಕಲು ಮಾಡಲು ಕಣಮಾಡುವ ಕ್ರಮವನ್ನು ಇಲ್ಲಿ ಅರಿಯಬಹುದು. ಏರು, ತಗ್ಗು, ಹಳ್ಳ-ಕೊಳ್ಳ, ದಿಬ್ಬತೆವರು ಪ್ರದೇಶವನ್ನು ಮೊದಲು ಸಮಮಾಡಿ, ನೀರು ಹಾಕಿ ಎತ್ತುಗಳಿಂದ ತುಳಿಸಿ, ಘಟ್ಟಣೆಯಿಂದ ದಮಾಸುಮಾಡಿ ಸಮತಟ್ಟಾಗಿಸಿ ಸೆಗಣಿಯಿಂದ ಸಾರಿಸಿ, ಒಕ್ಕಲು ಮಾಡಲು ಸಜ್ಜುಗೊಳಿಸಲಾಗುತ್ತದೆ.

ಸರ್ವಜ್ಞಕವಿ ಹೇಳುವಂತೆ ಕೃಷಿಸಂಬಂಧಿ ಅಂಶಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದಾಗಿದೆ.

"ಉತ್ತೊಮ್ಮೆ ಹರಗದಲೆ । ಬಿತ್ತೊಮ್ಮೆ ನೋಡದಲೆ
ಹೊತ್ತೇರಿ ಹೊಲಕೆ ಹೋದರೆ ಅವತನ್ನ ॥
ನೆತ್ತರವ ಸುಡುವ ಸರ್ವಜ್ಞ ॥"[೧೬೫]

ಭೂಮಿಯ ಉಳುಮೆಯ ಮಾಡಿ ಹರಗದೆ ಇದ್ದರೆ, ಬಿತ್ತನೆಯ ಮಾಡಿದ ನಂತರ ಒಮ್ಮೆಯು ಹೊಲಕ್ಕೆ ಹೋಗಿ ನೋಡದೇ ಇದ್ದರೆ, ಸೂರ್ಯನೆತ್ತಿಯ ಮೇಲೆ ಬಂದಾಗ ಹೊಲಕ್ಕೆ ಹೋದರೆ ಅವನ ನೆತ್ತರ ಸುಡುತ್ತದೆ. ಅಲ್ಲದೇ ಅಂತಹ ಒಕ್ಕಲುತನ ಹಾಳಾಗುತ್ತದೆ ಎಂಬ ಸೂಚನೆ ಕಂಡುಬರುತ್ತದೆ.

"ನಲ್ಲೆತ್ತು ಬಂಡಿಬಲವಿಲ್ಲದ ಆರಂಭ ।
ಕಲ್ಲು ಕಸಗಳನ್ನು ಬಿಟ್ಟಾತ ಹೊಲದೊಳಗೆ ।
ಹುಲ್ಲನೇ ಬೆಳೆವ ಸರ್ವಜ್ಞ ॥"[೧೬೬]

ಒಕ್ಕಲುತನಕ್ಕೆ ಒಳ್ಳೆಯ ಎತ್ತು, ಬಂಡಿ ದುಡಿಯುವ ಮಕ್ಕಳು ಆಳು-ಕಾಳಗಳು ಅವಶ್ಯಕ. ಕಳ್ಳ ಎತ್ತು, ಬಂಡಿಯಿಲ್ಲದ ಬೇಸಾಯ, ಕಲ್ಲು, ಕಸ, ಕಳೆ, ಕೀಳದೆ ಹಾಗೆಯೇ ಬಿಟ್ಟ ಹೊಲದಲ್ಲಿ ಹುಲ್ಲು ಮಾತ್ರ ಬೆಳೆಯುತ್ತದೆ. ಬೆಳೆ ಬೆಳೆಯಲು ಸಾಧ್ಯವಿಲ್ಲ ಎನ್ನುತ್ತಾನೆ. ಅಲ್ಲದೆ

"ಹರಗದ ಎತ್ತಾಗಿ ಬರಡಾದ ಹಯನಾಗಿ
ಹರಟೆ ಹೊಡೆಯುವ ಮಗನಾಗೆ ಹೊಲದಲ್ಲಿ
ಕರಡವೇ ಬೆಳಗು ಸರ್ವಜ್ಞ ॥ ೧೩೬೧॥

ದಂಡು ಇಲ್ಲದ ಅರಸು ಕೊಂಡವಿಲ್ಲದ ಹೋಮ
ಬಂಡಿಯಿಲ್ಲದವನ ಬೇಸಾಯ ತಲೆಹೋದ ।
ಮುಂಡದಂತಿಕ್ಕು ಸರ್ವಜ್ಞ ॥೧೩೬೨॥

ಹದಬೆದೆಯಲಾರಂಬ ಕದನದಲಿ ಕೂರಂಬ ।
ನದಿಯ ಹಾಯುವಲಿ ಹರುಗೋಲ ಮರೆದಾತ ।
ವಿಧಿಯ ಬೈದೇನು? ಸರ್ವಜ್ಞ ॥೧೩೬೩॥

ಬೆಕ್ಕು ಮನೆಯೊಳು ಲೇಸು ಮುಕ್ಕು ಕಲ್ಲಿಗೆ ಲೇಸು ।
ನಕ್ಕು ನಗಿಸುವ ನುಡಿ ಲೇಸು ಊರಿಂಗೆ ।
ಒಕ್ಕಲಿಗ ಲೇಸು ಸರ್ವಜ್ಞ ॥೧೩೬೪॥"[೧೬೭]

ಈ ಮೇಲಿನ ತ್ರಿಪದಿಗಳಲ್ಲಿ ಕೃಷಿಗೆ ಯಾರು ಯಾರು ಸರಿಹೊಂದುವುದಿಲ್ಲ. ಎಂಬ ಮಾಹಿತಿಯನ್ನು ನೀಡುತ್ತಾನೆ. ಹರಗದ ಎತ್ತು, ಹರಟೆಯ ಮಗ, ಬಂಡಿಯಿಲ್ಲದ ಬೇಸಾಯ, ಹದಬೆದೆ ಅರಿಯದ ವ್ಯವಸಾಯಗಳು ವ್ಯರ್ಥ. ಆದರೆ ರಾಜನಿಗೆ ಸೈನ್ಯ, ರೈತನಿಗೆ ಬಂಡಿ, ಹೋಮ ಮಾಡುವನಿಗೆ ಕೊಂಡ, ನದಿ ದಾಟುವನಿಗೆ ಹರಿಗೋಲು ಅವಶ್ಯಕವಾದವು. ಒಕ್ಕಲಿಗನು ಊರಲ್ಲಿ ಇದ್ದರೆ ಆ ಊರಿಗೆ ಕಳೆಬರುತ್ತದೆ ಎಂದು ಹೇಳುತ್ತಾನೆ. ಸುಳ್ಳು ಹೇಳುವವನ ಬೇಸಾಯ, ಎರೆಯನ್ನು ಉಳುವವನು ದೊರೆಯಿದ್ದಂತೆ, ಹೊಲವನ್ನು ಬಿತ್ತದೆ ಬೀಳು ಬಿಟ್ಟರೆ ಅಂತಹ ಕಡೆ ಕರಿಕೆ. ಕಣಗಿಲೆ. ಗಿಡಗಂಟೆಗಳು ಬೆಳೆದು ಹೊಲ ಹಾಳಾಗುತ್ತವೆ. ಸ್ವಂತ ಹೊಲ, ಕಳ್ಳಮಗನನ್ನು, ಮೈನೆರೆದ ಮಗಳನ್ನು ಬೇರೆಯವರ ಆರೈಕೆಯಲ್ಲಿ ಬಿಡುವುದು ಸರಿಯಲ್ಲ ಎಂದು ತಿಳುವಳಿಕೆ ನೀಡುತ್ತಾನೆ. ಒಂದು ಉತ್ತಮ ಕೃಷಿ ಕುಟುಂಬ ಹೇಗಿರಬೇಕೆಂಬ ಚಿತ್ರ ಈ ಕೆಳಗಿನ ತ್ರಿಪದಿಯಲ್ಲಿ ಸೊಗಸಾಗಿ ಮೂಡಿ ಬಂದಿದೆ.

"ಎತ್ತುಗಳು ಎರಡಾಗಿ । ಬತ್ತದಿಹ ಹಯನಾಗಿ ।
ಪುತ್ರರಯ್ದಾಗಿ ಸತಿಯೊಬ್ಬಳಾದರೆ
ನಿತ್ಯದಿ ಸುಖವು ಸರ್ವಜ್ಞ ॥"[೧೬೮]

ಕೃಷಿಕನಿಗೆ ಹೆಚ್ಚು ಮಕ್ಕಳು ಬೇಕು. ಆದ್ದರಿಂದಲೇ 'ಮಗ ಹುಟ್ಟಿದರೆ ಕೇಡಲ್ಲ, ಮಳೆ ಬಂದರೆ ಕೇಡಿಲ್ಲ ಎಂಬ ಮಾತನ್ನು ಲೋಕದಲ್ಲಿ ಕೇಳುತ್ತೇವೆ. ಬಲಿಷ್ಠವಾದ ಎರಡು ಎತ್ತುಗಳು, ಮನೆಯಲ್ಲಿ ಹೈನುಗಾರಿಕೆ ಮತ್ತು ಐದು ಜನ ಪುತ್ರರು, ಸತಿಯೊಬ್ಬಳು ಇದ್ದರೆ ಕೃಷಿಕರ ಜೀವನ ಹಸನಾಗುತ್ತದೆ. ಕೆಂದು ಬಣ್ಣದ ಸಾದ ಎತ್ತು, ಮುಂದಾಲೋಚನೆ ಮಾಡುವ ಮಗ, ಹಳ್ಳದ ಗದ್ದೆ, ಗಿಡ್ಡ ಎತ್ತುಗಳು ಇದ್ದರೆ ಒಕ್ಕಲುತನವು ಉತ್ತಮವಾಗಿ ನಡೆಯುತ್ತದೆ ಎಂದು ಹೇಳುತ್ತಾನೆ. ಹದವರಿತು ಬಿತ್ತುವ, ಹರಗುವ, ಉಳುಮೆ ಮಾಡುವ, ಕಣ ಮಾಡುವ, ಒಕ್ಕಲುಮಾಡುವ, ರಾಶಿ ಮಾಡುವ ಮತ್ತು ಸಂಗ್ರಹಿಸುವ ಅನೇಕ ಕೃಷಿ ಸಂಬಂಧಿ ಉಲ್ಲೇಖಗಳು ಸರ್ವಜ್ಞನ ತ್ರಿಪದಿಗಳಲ್ಲಿ ಮೂಡಿ ಬಂದಿವೆ.

ಬೀಜ ಮತ್ತು ಸಂಸ್ಕರಣೆ : ಬಿತ್ತುವ ಬೀಜದ ಆಯ್ಕೆ, ಉತ್ತಮ ಬೀಜಗಳ ಸಂಗ್ರಹಣೆ ಮತ್ತು ಹೆಚ್ಚು ಇಳುವರಿ ಕೊಡುವ, ತಳಿಗಳ ಬೀಜದ ಆಯ್ಕೆಯಲ್ಲಿ ರೈತರು ಹೆಚ್ಚಾಗಿ ಜಾಣತನ ಉಪಯೋಗಿಸಬೇಕಾಗುತ್ತದೆ. ಯಾವ ಯಾವ ಬೀಜಗಳನ್ನು ಎಂತಹ ಹದದಲ್ಲಿ ಬಿತ್ತಿದರೆ ಉತ್ತಮ ಎಂಬ ಸಾಮಾನ್ಯಜ್ಞಾನ ರೈತರಿಗೆ ಅವಶ್ಯಕವಾದುದು. ಕನ್ನಡದ ದೇಶೀ ಕಾವ್ಯಗಳಲ್ಲಿ ಇಂತಹ ಬೀಜ ಕುರಿತಾದ ಮಾಹಿತಿಯನ್ನು ಕ್ರೋಢಿಕರಿಸಿ ಚರ್ಚಿಸಲಾಗಿದೆ.

ಬೆಳೆಯುವ ಪೈರನ್ನು ಮೊಳಕೆಯಲ್ಲಿ ನೋಡು ಎಂಬಂತೆ. ಭೂಮಿಯಲ್ಲಿ ಯಾವುದೇ ಸಸ್ಯ ಸೃಷ್ಟಿಯಾಗಲು ಬೀಜವೇ ಮುಖ್ಯ. ಅಂತಹ ಬೀಜ ನಷ್ಟವಾದರೆ ಸಸಿ ನಾಶವಾದಂತೆ. ಅಲ್ಲಮನ ವಚನಗಳಲ್ಲಿ ಬೀಜ ಕುರಿತಾದ ಮಾಹಿತಿಯನ್ನು ಈ ರೀತಿಯಾಗಿ ಕಾಣಬಹುದು.

"ಭವಬೀಜ ವೃಕ್ಷದ ಫಲದೊಳಗೆ, ಭಕ್ತಿ ಬೀಜವೃಕ್ಷಪಲ್ಲವಿಸಿತ್ತು ।
ಭಕ್ತಿ ಬೀಜವೃಕ್ಷದ ಫಲದೊಳಗೆ, ಶರಣ ಬೀಜವೃಕ್ಷ ಪಲ್ಲವಿಸಿತ್ತು ।
ಶರಣ ಬೀಜ ವೃಕ್ಷದ ಫಲದೊಳಗೆ ...."[೧೭೬]

ಶರಣರ ಭಕ್ತಿಯ ನೆಲೆಯನ್ನು ಇಡೀ ಒಕ್ಕಲುತನದಲ್ಲಿ ಬೀಜದಿಂದ ಬರುವ ಸಸಿಗೆ ಹೋಲಿಸಲಾಗಿದೆ ಲೋಕ ವೃಕ್ಷವಾದರೆ ಭಕ್ತಿಯೇ ಬೀಜ. ವೃಕ್ಷ ಸೃಷ್ಟಿಯಾಗಲು ಬೀಜದ ಅವಶ್ಯಕತೆ ಇದೆ. ಸಧೃಢವಾದ

ಬೀಜದಿಂದ ಉತ್ತಮ ಸಸಿ ಬೆಳೆಯಲು ಸಾಧ್ಯ ಎಂದು ಹೇಳುತ್ತಾರೆ. ಬಸವಪಥ ಮಾಸಿಕದಲ್ಲಿ ಶ್ರೀ ಈರಯ್ಯ ಕಿಲ್ಲೇದಾರ ಹೇಳುವಂತೆ "ಈ ಸೃಷ್ಟಿಯೆಲ್ಲವು ಬಯಲಿನ ಬೆಳೆಯಾಗಿದೆ, ಬಯಲೆಂಬ ಒಕ್ಕಲಿಗನು ಬಯಲೆಂಬ ಭೂಮಿಯಲ್ಲಿ, ಬಯಲೆಂಬ ಬೀಜ ಬಿತ್ತಿ ಬಯಲಿನ ಬೆಳೆಯಾದ, ಈ ಸಚರಾಚರವನ್ನೆಲ್ಲ ತಲೆದೋರಿ ಮತ್ತೆ ಅದು ಬಯಲಾಗಿ, ಬಯಲಿನಲ್ಲಿಯೇ ಸೇರಿಕೊಳ್ಳುವ ಪರಿಯನ್ನು ಅಲ್ಲಮಪ್ರಭು ತನ್ನ ವಚನದಲ್ಲಿ ಚೆನ್ನಾಗಿ ವಿವರಿಸಿದ್ದಾನೆ. ಬಯಲು ಸೃಷ್ಟಿಯ ರಚನೆಯ ಸ್ಥಿತಿ ಹಾಗೂ ಲಯಗಳಲ್ಲಿ ಹೇಗೆ ಮಹತ್ವದ ಪಾತ್ರವಾಗುವುದೋ, ಅದರಂತೆ ಒಕ್ಕಲಿಗನು ಭೂಮಿಯಲ್ಲಿ ಬೀಜ ಬಿತ್ತಿ ಬೆಳೆದು ಅದನ್ನು ಕೊಯ್ದು ಒಕ್ಕುವ ಪಕ್ರಿಯೆಯನ್ನು..............."[೧೮೦] ಕುರಿತು ವಿವರಿಸಲಾಗಿದೆ.

ಚೆನ್ನಬಸವಣ್ಣನವರ ವಚನದಲ್ಲಿ ಬೀಜವನ್ನು ಕುರಿತಾಗಿ ಅನೇಕ ಮಾಹಿತಿ ದೊರೆಯುತ್ತದೆ. "ಬಿತ್ತಿದ ಬೀಜದ ಫಲವು ವಿಪರೀತನೋಡಾ । ತನ್ನಲ್ಲಿ ತಾನೇ ಆಗಿ ಆಗಮವನೆರಿಯದು............."[೧೮೧] ಸೃಷ್ಟಿಗೆ ಮೂಲ ಬೀಜ. ಬೀಜ ಒಂದೇ ಆದರೂ ಫಲಮಾತ್ರ ವಿಪರೀತ ಆದ್ದರಿಂದ ಬೀಜವೇ ಶ್ರೇಷ್ಠವಾದುದು. ಅಷ್ಟೇ ಅಲ್ಲದೇ ಬಿತ್ತಿದ ಬೀಜ ಒಕ್ಕಲಿಗನಾದರು ಬೆಳೆಯೆಲ್ಲವು ಅವನದಲ್ಲ. ಭೂಮಿಯಲ್ಲಿ ಬಿದ್ದ ಬೀಜ ಎಂದಾದರೂ ಫಲ ನೀಡುತ್ತದೆ, ಅದು ಕೆಡುವುದಿಲ್ಲ ಎನ್ನುತ್ತಾನೆ. ಸಿದ್ದರಾಮೇಶ್ವರ ವಚನದಲ್ಲಿ ".......... ಬೆಳೆವಿಗೆಯ ಬೀಜದ ಬಿತ್ತಿ, ಆ ಫಲದ ರುಚಿಯನುಂಡುಕೊಳ್ಳ............"[೧೮೨] ಉತ್ತಮ ಬೀಜ ಬಿತ್ತಿ ಒಳ್ಳೆಯ ಫಲವನ್ನು ಪಡೆದು ಅದನ್ನು ಅನುಭವಿಸಬೇಕು ಎನ್ನುತ್ತಾನೆ. ಮೋಳಗೆಯ ಮಹಾದೇವಿಯ ವಚನದಲ್ಲಿ "ಆವಬೀಜವ ಬಿತ್ತಿದರೂ ಪೃಥ್ವಿಗೆ ಬೇರು, ಬಯಲಿಂಗೆ ಶಾಖೆ ದೋರಿ ಬೆಳೆಯುವಂತೆ ...."[೧೮೩] ಬಿತ್ತಿದ ಬೀಜದ ಬೇರು ನೆಲದಲ್ಲಿ ಹರಡಿದರೆ, ರೆಂಬೆ ಕೊಂಬೆಗಳು ಭೂಮಿಯ ಮೇಲ್ಭಾಗದಲ್ಲಿ ಹರಡುತ್ತವೆ. ಭೂಮಿಯಿಂದ ನೀರನ್ನು ಹೀರಿ ರೆಂಬೆಕೊಂಬೆಗಳಿಗೆ ನೀರುಣಿಸುತ್ತವೆಂದು ಹೇಳುತ್ತಾರೆ ಆದಯ್ಯನ ವಚನದಲ್ಲಿ ಬೀಜವನ್ನು ಕುರಿತು "ಬೀಜದೊಳಗಣ ವೃಕ್ಷ, ಅಂಕುರ, ಪಲ್ಲವಪತ್ರ, ಕುಸುಮಫಲ ಮೈದೋರಿದಂತೆ..........."[೧೮೪] ಅಲ್ಲದೆ ಪ್ರಸಾದಿ ಭೋಗಣ್ಣನ ವಚನದಲ್ಲಿ ".......... ತಿರುಳಿಲ್ಲದ ಬೀಜ ಬೆಳೆದುದುಂಟೆ?.........."[೧೮೫] ಬೀಜ ಮೊಳಕೆ ಬರಲು ಒಳಗಿನ ತಿರುಳು ಅವಶ್ಯಕ, ಬೀಜ ಮೊಳೆಯುತ್ತದೆಯೇ ಹೊರತು ಕಬ್ಬಿಣದ ಮೊಳೆ ಮೊಳಕೆ ಬರಲಾರದು. ಬೀಜದ ಒಳಗೆ ವೃಕ್ಷ ಅಡಗಿದೆ. ಅದು ಕ್ರಮವಾಗಿ ಅಂಕುರ, ಚಿಗುರು, ಎಲೆ, ಹೂವು, ಫಲವಾಗಿ ಬೆಳೆಯುತ್ತದೆ. ಹುರಿದ ಬೀಜ ಮೊಳಕೆ ಬರಲಾರದು. ರೈತರು ಬಿತ್ತಿದ ಕಾಳು ಮಳೆಯಿಲ್ಲದೆ ಭಂಡಾರ ಒಕ್ಕಿದವು ಎಂದು ಹೇಳುವುದನ್ನು ಕಾಣುತ್ತೇವೆ. ಬೀಜದ ರಕ್ಷಣೆಗೆ ತೊಗಟೆ ಇರುತ್ತದೆ. ವೃಕ್ಷದೊಳಗೆ ಬೀಜ, ಬೀಜದೊಳಗೆ ವೃಕ್ಷ ಅಡಗಿದೆ. ಬೀಜ ಕುರಿತಾದ ಮಾಹಿತಿ ಅನೇಕ ವಚನಕಾರರ ವಚನದಲ್ಲಿ ಕಾಣಸಿಗುತ್ತದೆ.

ಚಾಮರಸನ ಪ್ರಭುಲಿಂಗಲೀಲೆ ಕಾವ್ಯದಲ್ಲಿ ಬೀಜ ಕುರಿತು "..............ಒಂದು ಬೀಜವ ಬಿತ್ತಿ ಮೇಲ್ ಮತ್ತೊಂದು ಫಲವನು ಬಯಸಿ............"[೧೮೬] ಒಂದು ಬೀಜವ ಬಿತ್ತಿ ಮತ್ತೊಂದು ಫಲವನ್ನು ಪಡೆಯಲು ಸಾಧ್ಯವಿಲ್ಲ. ಯಾವ ಬೀಜ ಬಿತ್ತಲಾಗಿದೆಯೊ ಅದೇ ಫಲ ಪಡೆಯಲು ಸಾಧ್ಯ ಎಂದು ಹೇಳುತ್ತಾನೆ. ಜೈಮಿನಿ ಭಾರತದಲ್ಲಿಯೂ ಕೂಡ ಭೂಮಿಯಲ್ಲಿ ಮಳೆಯಿಂದ ಹದವಾದ ವೇಳೆಯಲ್ಲಿ ಬೀಜ ಬಿತ್ತಿದರೆ ಒಳ್ಳೆಯ ಪೈರು ಪಡೆಯಲು ಸಾಧ್ಯ ಎಂದೂ, ಭರತೇಶವೈಭವದಲ್ಲಿಯೂ ಬೀಜದ ಸತ್ವವನ್ನು ಕುರಿತು 'ಬೀಜಕೆ ಬಿಡುವುದ ಓೞಿಸೊಳರಿಯೆಂಬುದೀ ಜಗದೊಳಗುಳ್ಳಗಾದೆ...........'

ಎನ್ನಲಾಗಿದೆ. ಬಸವಪುರಾಣದಲ್ಲಿ ಮಾವು ಬಿತ್ತಿ ಬೇವು ಬೆಳೆಯಲು ಸಾಧ್ಯವಿಲ್ಲ. ಯಾವ ಬೀಜ ಬಿತ್ತುತ್ತಾರೋ ಅಂತಹ ಬೆಳೆ ಪಡೆಯಲಾಗುತ್ತದೆ ಎಂದು ಹೇಳುವ ಅಂಶ ಗಳನ್ನು ಕಾಣುತ್ತೇವೆ.

ಒಕ್ಕಲಿಗ ಮತ್ತು ಒಕ್ಕಲುತನ : ಒಕ್ಕಲಿಗ ಮತ್ತು ಒಕ್ಕಲುತನ ಕುರಿತಾದ ಮಾಹಿತಿಯನ್ನು ದೇಶಿಸಾಹಿತ್ಯ ಕೃತಿಗಳಲ್ಲಿ ಸಂಗ್ರಹಿಸಿ ಇಲ್ಲಿ ಹೇಳಲಾಗಿದೆ. ಸಕಲೇಶ ಮಾದರಸರ ವಚನವೊಂದರಲ್ಲಿ "ಊರಿಗೊಕ್ಕಲಹ,ಹೆಂಡತಿಗೆ ಗಂಡನಹ..............."[೧೭೭] ಒಕ್ಕಲಿಗನ ಮಹತ್ವ ಕುರಿತು ಹೇಳುವಾಗ ಊರಿಗೆ ಒಬ್ಬ ಒಕ್ಕಲಿಗ ಇದ್ದರೆ, ಹೆಂಡತಿಗೆ ಗಂಡ ಇದ್ದಂತೆ, ಮಕ್ಕಳಿಗೆ ತಂದೆಯಂತೆ, ಇಡೀ ಊರಿಗೆ ಒಕ್ಕಲಿಗನ ಆಶ್ರಯಿಸುವ ಕಸುಬುದಾರರಿಗೆ ಒಕ್ಕಲಿಗನ ಅವಶ್ಯಕತೆ ಇದೆ ಎನ್ನುತ್ತಾರೆ. ಅಲ್ಲದೆ ಮಾರಯ್ಯನ ವಚನವೊಂದರಲ್ಲಿ "ಹೊಲನಗೆಯ್ದು ಮನೆಗೆ ಬರಲಾಗಿ .... ಅಕ್ಕಿಯಿಲ್ಲ ಮಾಡುವುದಕ್ಕೆ ಮೊರವಿಲ್ಲ .... ಇಂತಿವಳ ಮನೆಯ ವಾರ್ತೆಯ ಕಂಡು ಒಗೆತನಗೆಟ್ಟು ...."[೧೭೮] ಒಕ್ಕಲುತನದಲ್ಲಿ ಹೆಚ್ಚಿನ ಜವಾಬ್ದಾರಿ ಹೆಣ್ಣಿನದು. ದುಡಿದು ಬಂದ ರೈತರಿಗೆ ಊಟದ ವ್ಯವಸ್ಥೆ, ರೈತಾಪಿ ಕೆಲಸಕ್ಕೆ ಸಹಕಾರಿಯಾಗಿ ಹೆಣ್ಣು, ದುಡಿದರೆ ಮಾತ್ರ ಒಕ್ಕಲುತನ ಸರಳವಾದಿತು. ಆದರೆ ಗಂಡ ಊಟಕ್ಕೆ ಬಂದಾಗ ಅಡುಗೆ ಮಾಡಲು ಮುಂದಾಗದ ಹೆಣ್ಣನ್ನು ಕುರಿತು ಹೇಳುವಾಗ ಈ ಮೇಲಿನಂತೆ ಹೇಳಲಾಗಿದೆ. ಬಹುರೂಪಿ ಚೌಡಯ್ಯನ ವಚನದಲ್ಲಿ ಯಾರು ಯಾವುದೇ ಕಾಯಕ ಮಾಡಿದರೂ ಪ್ರತಿಫಲದ ಅಪೇಕ್ಷೆ ಇದ್ದೇ ಇರುತ್ತದೆ. ಅದಕ್ಕೆ ಒಕ್ಕಲಿಗನು ಹೊರತಲ್ಲ ಎನ್ನುತ್ತಾನೆ. ಕಾಡಸಿದ್ದೇಶ್ವರರರ ವಚನದಲ್ಲಿ ಒಕ್ಕಲಿಗನ ಮಹತ್ವ ಕುರಿತು ಹೀಗೆ ಹೇಳಲಾಗಿದೆ. " ಒಕ್ಕಲಿಗನ ಸಂಗದಲ್ಲಿದ್ದವರಿಗೆ ಬಡತನವಿಲ್ಲ............ ಒಕ್ಕಲಿಗನ ಸಂಗದಲ್ಲಿದ್ದವರಿಗೆ ಸಾವಿಲ್ಲ..........."[೧೭೯] ಒಕ್ಕಲಿಗನ ಸಂಗ ಶ್ರೇಷ್ಠವಾದುದು. ಏಕೆಂದರೆ ಜೀವ ರಕ್ಷಣೆಗೆ ಬೇಕಾಗುವ ಆಹಾರಧಾನ್ಯಗಳನ್ನು ಮತ್ತು ಅನೇಕ ಬಗೆಯ ಧಾನ್ಯಗಳನ್ನು ಉದಾರವಾಗಿ ನೀಡಿ, ತಾನು ಬದುಕಿ ತನ್ನ ಆಶ್ರಯದಲ್ಲಿರುವವರನ್ನು ಕಾಪಾಡುತ್ತಾನೆ. ಹೀಗಾಗಿ ಅವನ ಸಂಗದಲ್ಲಿದ್ದವರಿಗೆ ಸಾವಿಲ್ಲವೆಂದು ಅರ್ಥಪೂರ್ಣವಾಗಿ ಹೇಳುತ್ತಾರೆ. ತೋಂಟದಸಿದ್ದಲಿಂಗ ಶಿವಯೋಗಿಗಳ ವಚನವೊಂದರಲ್ಲಿ "ಕಟ್ಟರಸಿಲ್ಲದ ರಾಜ್ಯ ಕಳ್ಳರ ಭಯ ಒಕ್ಕಲಿಲ್ಲದ ಊರು ಹಾಳು..........."[೧೮೦] ಅರಸನಿಲ್ಲದ ರಾಜ್ಯಕ್ಕೆ ಕಳ್ಳರ ಭಯ ತಪ್ಪಿದ್ದಲ್ಲ. ಒಕ್ಕಲಿಗನಿಲ್ಲದ ಊರು ಹಾಳೂರಿಗೆ ಸಮ ಎಂದು ಹೇಳುವಲ್ಲಿ ಒಕ್ಕಲಿಗನ ಮಹತ್ವವನ್ನು ತಿಳಿಸುತ್ತಾನೆ.

ಕೃಷಿಯ ಮಹತ್ವ ಕುರಿತು ಕುಮಾರವ್ಯಾಸನು ಈ ರೀತಿ ಹೇಳುತ್ತಾನೆ.

"...........ವರಸುತ ಕೆಡಗು ಲಾಲನೆಗಳಲಿ,ಕೃಷಿಕೆಡಗುಪೇಕ್ಷೆಯಲಿ............"[೧೮೧] ಅಲ್ಲದೆ ಕೃಷಿಯು ಉಪೇಕ್ಷೆಯಿಂದ ಕೆಡುತ್ತದೆ. ಕೃಷಿಯ ಕಾಯಕದಲ್ಲಿ ಉದಾಸೀನತೆ ಸಲ್ಲದು ಎಂಬ ಎಚ್ಚರಿಕೆಯ ಮಾತನ್ನು ಹೇಳುತ್ತಾನೆ. ಮತ್ತು ರೈತರು ಉಳುಮೆ ಮಾಡುವಾಗ ಒಂದು ಅಂಗುಲವಾದರೂ ಬೇರೆಯವರ ಹೊಲವನ್ನು ಒತ್ತಿ ಹೊಡೆಯದಿದ್ದರೆ ಅವರಿಗೆ ತೃಪ್ತಿಯಿಲ್ಲ, ಉಂಡ ಅನ್ನ ಮೈ ಅತ್ತುವುದಿಲ್ಲ ಈ ಚಾಳಿ ಅನಾದಿಕಾಲದಿಂದಲೂ ಇದೆ ಎಂದು ಹೇಳುತ್ತಾನೆ.

ಸರ್ವಜ್ಞನ ಅನೇಕ ತ್ರಿಪದಿಗಳಲ್ಲಿ ಒಕ್ಕಲಿಗ ಮತ್ತು ಒಕ್ಕಲುತನ ಕುರಿತು ಹೇಳುವ ಅಂಶಗಳು ಕಂಡುಬರುತ್ತವೆ. "ಬಂಡಾರ ತುಂಬಿಸೀ, ಬಂಡಿಯಲಿ ಹೇರುವಂತೆ ಮಂಡಲ ನಾಳೆ ನೆರೆಯುವರೆ ಒಕ್ಕಲುಮ ಕೊಂಡಾಡಬೇಕು..........."[೧೮೨] ಒಕ್ಕಲುತನದಿಂದ ದೇಶದ ಬಂಡಾರ ತುಂಬುತ್ತದೆ. ದೇಶ ಆಳುವ ರಾಜರು ಒಕ್ಕಲಿಗರನ್ನು ಹೊಗಳಬೇಕು ಎನ್ನುತ್ತಾನೆ.

ಕೃಷಿ ಉಪಕರಣಗಳು : ದೇಶೀ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖವಾದ ಕೆಲವು ಉಪಕರಣಗಳನ್ನು ಈ ಭಾಗದಲ್ಲಿ ಗುರುತಿಸಲಾಗಿದೆ. ನೇಗಿಲು ವ್ಯವಸಾಯದ ಕಸುಬಿನಲ್ಲಿ ಬಹಳ ಮಹತ್ವದ ಉಪಕರಣ. ಒಕ್ಕಲುತನದ ಕಾಯಕದ ಶರಣರಾದ ಒಕ್ಕಲಿಗ ಮುದ್ದಯ್ಯನ ವಚನದಲ್ಲಿ ನೇಗಿಲು ತಯಾರಿಕೆ ವಿಧಾನ ಮತ್ತು ರೈತರು ವಹಿಸಬೇಕಾದ ಜಾಗ್ರತೆ, ನಿಷ್ಠೆಯನ್ನು ಕುರಿತು ಹೇಳುತ್ತಾರೆ.

"ಕುಂಭದ ಮಳೆ ಹೊಯ್ಯಿತ್ತು
ಮೂರಂಗದ ನೇಗಿಲ ತರಿಯಬೇಕು
ಆರಂಗದ ಭೂಮಿಯಲ್ಲಿ ಅರಸಲಾಗಿ ಒಂದೇ ಮರ ಹುಟ್ಟಿತ್ತು
ಹುಟ್ಟವಾಗ ಮರ ಮೂರುಕವೆ. ಅಲ್ಲಿಂದತ್ತಾರು ಕವೆಯಾಯಿತ್ತು.............||"[೧೮೩]

ಮುಂಗಾರು ಮಳೆ ಎಡೆಬಿಡದೆ ಸುರಿದು, ರೈತರ ಮುಖದಲ್ಲಿ ಉಲ್ಲಾಸ ಮೂಡಿ ಭೂಮಿಯ ಉಳುಮೆ ಮಾಡಲು, ಬಿತ್ತನೆ ಕಾರ್ಯ ಕೈಗೊಳ್ಳಲು ನೇಗಿಲ ತಯಾರಿಕೆಗೆ ಮುಂದಾಗುತ್ತಾನೆ. ನೇಗಿಲ ತಯಾರಿಸಲು ಬೇಕಾದ ಮರವನ್ನು ಹುಡುಕಿ, ಅಂತಹ ಮರ ಹುಟ್ಟುವಾಗ ಮೂರುಕವೆಯಾಗಿ ಹುಟ್ಟಿ, ನಂತರ ಅನೇಕ ಕವೆಯಾಗಿ ಬೆಳೆದ ರಂಬೆಕೊಂಬೆಗಳನ್ನು ಕೊಡಲಿಯಿಂದ ಕತ್ತರಿಸಿ ಹೊರತೆಗೆದು. ಹಸಿಯಾಗಿರುವ ಆ ಮರವನ್ನು ಅಲ್ಲಿಯೇ ಬಿಟ್ಟು ಒಣಗಿಸಿ ನಂತರ ತಂದು, ಕಸುಬುದಾರನಾದ ಬಡಗಿಯ ಕೈಯಲ್ಲಿ ಶುದ್ಧದಿನ, ಮೂಹರ್ತಗಳಂದು ನೇಗಿಲು ತಯಾರಿಸಬೇಕು. ಹುಗಿಲು ತೆಗೆಯುವ, ನೇಗಿಲು ಸರಿಯಾಗಿ ನೆಲಕ್ಕೆ ನಾಟುವಂತೆ ಈಚನ್ನು ಹಾಕಿ ಸರಿಯಾದ ಮೇಳೆಯನ್ನು ಕಟ್ಟಿ, ಕಬ್ಬಿಣದ ಗುಳುವ ಹಾಕಿ, ಅದನ್ನು ಭದ್ರಗೊಳಿಸುವ ಜಿಗುಳಿಯನ್ನು ಕಟ್ಟಿ, ನಿಷ್ಠೆಯಿಂದ ಶುದ್ಧಮನಸ್ಸಿನಿಂದ ನೇಗಿಲನ್ನು ತಯಾರಿಸಬೇಕು ಎಂದು ವಿವರವಾಗಿ ಹೇಳಲಾಗಿದೆ.

ಬಸವಣ್ಣನವರ ವಚನದಲ್ಲಿ " ಹೊನ್ನ ನೇಗಿಲ ಉತ್ತು ಉಕ್ಕೆಯ ಬೀಜವ ಬಿತ್ತುವರೆ?............."[೧೮೪] ರೈತರಿಗೆ ಹೊನ್ನಿನಷ್ಟೇ ಶ್ರೇಷ್ಠ ನೇಗಿಲು, ಇಂತಹ ನೇಗಿಲಿನಿಂದ ನೆಲವನ್ನು ಉಳುಮೆಯ ಮಾಡಿ, ಬೆಳೆಯಲ್ಲದೇ, ಕಸದ ಬೀಜ ಎಕ್ಕೆಯನ್ನು ಯಾರಾದರೂ ಬಿತ್ತಲು ಸಾಧ್ಯವೇ ಎನ್ನುತ್ತಾನೆ. ರೈತನಿಗೆ ಯಾವ ಹೊಲಕ್ಕೆ ಎಂತಹ ಬೀಜ ಬಿತ್ತಬೇಕು ಎಂಬ ಕೃಷಿ ತಿಳುವಳಿಕೆ ಇರುತ್ತದೆ. ಕಾಡುಸಿದ್ದೇಶ್ವರರ ವಚನಗಳಲ್ಲಿ ನೇಗಿಲ ಕುರಿತಾದ ಉಲ್ಲೇಖವಿದೆ. "...........ಒಬ್ಬ ಬಡಗಿಯಿಂದ ಆವುದಾನೊಂದು ಗಳೆಯ ಹಾಕಿ ಕೊಂಡೊಯಿದು ಹೋಗಿ ಭೂಮಿಯಲ್ಲಿ ಹೂಡಿ ಹೊಡೆದರೆ ನೀಟವಾಗಿ ನಡೆದರೆ ಹೂಡುವರು........... ಹಾಗೇ ಹೊಡೆಯರು ...."[೧೮೫] ಕೃಷಿಕಾಯಕದಲ್ಲಿ ಬಡಗಿ, ಕಮ್ಮಾರ, ಚಮ್ಮಗಾರ ಎಲ್ಲರೂ ಸಹಕರಿಸುತ್ತಾರೆ. ಬಡಗಿಯ ಹತ್ತಿರ ಗಳೆ ಸಿದ್ದತೆ ಮಾಡಿಕೊಂಡು, ಭೂಮಿಯ ಉಳಲು ಹೋಗುವ ರೈತನು ಅದು ಭೂಮಿಯಲ್ಲಿ ನೀಟಾಗಿ ನಾಟದೆ ಇದ್ದರೆ, ಕಸುಬುದಾರನಾದ ಬಡಗಿಯ ಹತ್ತಿರ ಹೋಗಿ ಕಡಿದು, ಬಳಿದು ನೋಡಿ ಗಳೆ ಹಾಯಿಸಿ ಹೂಡುತ್ತಾನೆ. ದೇಶಿಕೇಂದ್ರ ಸಂಗನ ಬಸವಯ್ಯನ ವಚನದಲ್ಲಿ "ಹಲಾಯುಧನು ಕನ್ನಡಿಯೊಳಿರ್ದ ಯಮನಾಳದಿ ಸಕಲ ಬೀಜ ಭೂಮಿಯೊಳ್ ಬಿತ್ತಲು........."[೧೮೬] ಎಂಬಲ್ಲಿ ನೇಗಿಲ ಉಲ್ಲೇಖವಿದೆ. ಸಾಮಾನ್ಯವಾಗಿ ಭೂಮಿಯ ಹಸಿ ಪ್ರಮಾಣ ಕಡಿಮೆ ಇದ್ದರೆ, ಕೆಲವು ಬೀಜಗಳನ್ನು ಆಳವಾಗಿ ಬಿತ್ತಲು ಕೂರಿಗೆಗೆ ಬದಲಾಗಿ ನೇಗಿಲು ಬಳಸುತ್ತಾರೆ. ನೇಗಿಲಿನಲ್ಲಿ ಬಿತ್ತಿದ ಬೀಜ ಆಳವಾಗಿ ಭೂಮಿಯಲ್ಲಿ ನಾಟುತ್ತದೆ. ನೇಗಿಲನ್ನು ಉಳುಮೆಗೆ, ಬೀಜ ಬಿತ್ತಲು ಬಳಸಲಾಗುತ್ತದೆ.

ಕೂರಿಗೆ ಬಿತ್ತನೆ ಮಾಡಲು ಬಳಸುವ ಉಪಕರಣ, ಕೊಳವೆಯ ರೂಪದಲ್ಲಿರುತ್ತದೆ. ಮೇಲೆ ಬಟ್ಟಲು ಜೋಡಿಸಿದ್ದು, ಇಲ್ಲಿಂದ ಬೀಜ ಹಾಕಲು ಅವು ಕೊಳವೆಯ ಮೂಲಕ ಭೂಮಿಗೆ ನಾಟುತ್ತವೆ. ಕೂರಿಗೆಯನ್ನು ರೈತರು ಲಕ್ಷ್ಮೀ ಎಂದು ತಿಳಿದಿರುವರು. ಅಲ್ಲದೇ ಜೋಡು ಕೂರಿಗೆಗಳನ್ನು ನಿಲ್ಲಿಸಿ ಶಿವ ಪಾರ್ವತಿಯರೆಂದು ತಿಳಿದು ಸೀರೆ ಪಂಚೆಗಳನ್ನು ಸುತ್ತಿ ಪೂಜೆ ಮಾಡುವರು. ಬಿತ್ತುವಾಗ ಇದರ ತಾಳುಮುರಿದರೆ ಶುಭವೆಂದೂ, ದಿಂಡು ಮುರಿದರೆ ಅಶುಭವೆಂದೂ ತಿಳಿಯಲಾಗುತ್ತದೆ. ಇದು ಸಂಕೀರ್ಣವಾದ ಉಪಕರಣವಾಗಿದೆ.

ದೇಶಿಕೇಂದ್ರ ಸಂಗನಬಸವಯ್ಯನ ವಚನವೊಂದರಲ್ಲಿ ಕೂರಿಗೆ ಕುರಿತು "ಪೈರವಿಲ್ಲದ ಭೂಮಿ ಕಂಡು ಕೌಲವಿಡಿದನೊಬ್ಬ ಹಲಾಯುಧನು. ಮೂರುತಾಳಿನ ಕೂರಿಗೆಯ ಹೂಡಿ ಬಿತ್ತಲು ಫಲ ವಂದಂಕುರಿಸಿ ಫಲವಾಗಲು..........."[೧೮೭] ಮಳೆ ಬಂದ ನಂತರ ಬೆಳೆಯಿಲ್ಲದ ಭೂಮಿಯನ್ನು ನೇಗಿಲಿನಿಂದ ಉಳುಮೆ ಮಾಡಿ ಹಸನಾದ ಮೇಲೆ ಮೂರು ತಾಳಿನ ಕೂರಿಗೆಯಲ್ಲಿ ಬೀಜ ಬಿತ್ತಿ ಉತ್ತಮ ಫಲ ಪಡೆಯುತ್ತಾನೆ ಎಂದು ಹೇಳಲಾಗಿದೆ. ಸಡ್ಡೊಳ ಬಾಚರಸನ ವಚನದಲ್ಲಿ ಕುಂಟೆಯಿಂದ ಹರಗುವ ಅಂಶ ಕಂಡುಬರುತ್ತದೆ. "ಹದನರಿದು ಅರಗುವ ಬೆದೆಯರಿದು ಬಿತ್ತುವ ...."[೧೮೮] ವ್ಯವಸಾಯದಲ್ಲಿ ಭೂಮಿಯ ಹಸನು ಮಾಡಲು, ಕಳೆ ಕಸ ಕೀಳಲು ಕುಂಟೆ ಬಳಕೆಯಾಗುತ್ತದೆ. ಹದಬೆದೆ ಅರಿತು ಹರಗುವುದು ಜಾಣತನವಾಗಿದೆ. ಹಡಪದ ಅಣ್ಣಪ್ಪಗಳ ವಚನದಲ್ಲಿ "ಹಸನಮಾಡಿ ಹರಗಿ ಹೊಲದಲ್ಲಿ ಕಸವ ಬಿತ್ತುವ ಮರುಳರಂತೆ.........."[೧೮೯] ಹಸನಾದ ಹೊಲದಲ್ಲಿ ಯಾರು ಕಸವನ್ನು ಬಿತ್ತಲಾರರು ಎಂದು ಎಚ್ಚರಿಸುತ್ತಾರೆ.

ಕುಡ(ಕುಱು) ಕುಂಟೆಗೆ, ನೇಗಿಲಿಗೆ ಜೋಡಿಸುವ ಕಬ್ಬಿಣದ ಪಟ್ಟಿ, ವಕ್ಕಲು ಮುದ್ದಣ್ಣನವರ ವಚನದಲ್ಲಿ ನೇಗಿಲಿಗೆ ತೊಡಿಸುವ ಕುಳುವಿನ ಉಲ್ಲೇಖವನ್ನು ಹೀಗೆ ಕಾಣುತ್ತೇವೆ.

"ಪೂರ್ವಕ್ಕೆ ತಾಳಾಗಿ ಉತ್ತರಕ್ಕೆ ತಲವಾಗಿ ಬಿದ್ದ ಮರನ ತಂದು
ನಿಬದ್ಧಿಯ ಕಾರುಕನ ಕೈಯಲ್ಲಿ ಸುಬದ್ಧಿಸಿ, ಶುದ್ಧೈಸಿ
ಅನಾದಿಯೆಂಬ ಹುಗಿಲುದೆಗೆದು
ಆದಿಯೆಂಬ ಈಯವನಿಕ್ಕಿ
ಇಷ್ಟವೆಂಬ ವಿಶ್ವಾಸದ ಮೇಳಿಯಂಬೆಟ್ಟಿ
ಭಾವವೆಂಬ ಜಿಗುಳಿಯನಿಕ್ಕಿ
ಸದ್ಭಾವವೆಂಬ ಗುಳವ ತೊಡಿಸಿ..........."[೧೯೦]

ಕಡಿದು ಹಾಕಿ ಒಣಗಿದ ಮರ ತಂದು ಶುದ್ಧ ಬಡಗಿಯ ಕೈಯಲ್ಲಿ ತಯಾರಿಸಿ ನೇಗಿಲ ತುದಿಗೆ ಗುಳ(ಕುಱ) ಜೋಡಿಸಿ ಜಿಗುಳಿಯಿಂದ ಬಿಗಿಮಾಡಲಾಗುತ್ತದೆ.

ಬಂಡಿ (ಗಾಡಿ) ದವಸ ಧಾನ್ಯ ಮತ್ತಿತರ ವಸ್ತುಗಳನ್ನು ಸಾಗಿಸಲು ರೈತರು, ವ್ಯಾಪಾರಿಗಳು, ಬಳಸುವ ಒಂದು ಸಂಕೀರ್ಣ ಬಿಡಿಭಾಗಗಳಿಂದ ಕೂಡಿರುವ ಉಪಕರಣ. ಒಕ್ಕಲಿಗ ಮುದ್ದಣ್ಣನ ವಚನದಲ್ಲಿ ಬಂಡಿಯ ಉಲ್ಲೇಖ ಕಂಡುಬರುತ್ತದೆ. "........... ಮನೋರಥವೆಂಬ ಬಂಡಿಯಲ್ಲಿ ಹೇರಿ, ಮುಕ್ತಿಯೆಂಬ ಕೋಟಾರಕ್ಕೆ ತಂದು ...."[೧೯೧] ಹೊಲಗದ್ದೆಗಳಿಂದ ಬೆಳೆದ ಪೈರನ್ನು ಕಣಕ್ಕೆ ಸಾಗಿಸಲು, ಒಕ್ಕಲು ನಂತರ ಕಾಳು-ಕಡ್ಡಿ ದವಸ ಧಾನ್ಯ ಮನೆಗೆ ಸಾಗಿಸಲು ಬಂಡಿಯನ್ನು ಬಳಸುತ್ತಾರೆ. ಬಂಡಿ ರೈತನಿಗೆ ತುಂಬಾ ಮಹತ್ವದ್ದು; ಅವನ ಒಕ್ಕಲುತನಕ್ಕೆ ಮುಕ್ತಿ ಬಂಡಿಯಿಂದಲೇ. ಅಂಬಿಗರ ಚೌಡಯ್ಯನ

ವಚನವೊಂದರಲ್ಲಿ"..........ಹೂಡಲಕ್ಕೆ ಮಿಣಿಯಾಯಿತ್ತು. ಹೊಡೆಯಲಿಕ್ಕೆ ಬಾರುಕೋಲವಾಯಿತ್ತು. ಬಂಡಿಗೆ ಮಿಣಿಯಾಯಿತ್ತು ...."[೯೨] ಬಂಡಿಯ ನೊಗ ಕಟ್ಟಲು, ಹೇರುಗಳನ್ನು ಬಿಗಿಯಲು ಮಿಣಿಬೇಕು ಎನ್ನಲಾಗಿದೆ. ಅರಿವಿನ ಮಾರಿತಂದೆಗಳ ವಚನದಲ್ಲಿ "ಹರಿವ ಸಕಟಂಗೆ ಕಡಗೀಲು ಕಡೆಯಾದಲ್ಲಿ ಆಗಾಲಿ ಅಡಿಯಿರಬಲ್ಲುದೆ?............"[೯೩] ಎಂದು ವಿವರಿಸಲಾಗಿದೆ. ಜೇಡರದಾಸಿಮಯ್ಯನ ವಚನದಲ್ಲಿ ಕಡೆಗೀಲಿನ ಮಹತ್ವ ಕುರಿತು ಹೀಗೆ ಹೇಳಲಾಗಿದೆ. "ಕಡೆಗೀಲಿಲ್ಲದ ಬಂಡಿ ಹೊಡೆಗಡೆಯದೆ ಮಾಣ್ಬುದೆ?, ಕಡೆಗೀಲು ಬಂಡಿಗಾಧಾರ..........."[೯೪] ಬಂಡಿ ಚಲಿಸಲು ಕಡೆಗೀಲೆ ಆಧಾರ ಅದಿಲ್ಲದೇ ನಡೆಯಲು ಸಾಧ್ಯವಿಲ್ಲ. ವಚನಕಾರರಲ್ಲಿ ಅನೇಕರ ವಚನಗಳಲ್ಲಿ ಬಂಡಿಯ ಉಲ್ಲೇಖ ಹೇರಳವಾಗಿ ಕಂಡುಬರುತ್ತದೆ. ಬಹುರೂಪಿ ಚೌಡಯ್ಯನ ವಚನದಲ್ಲಿ " ಭವಭಾರಿ ಬಂಡಿ ಎತ್ತಿನ ಕಣ್ಣಿ ಹರಿದ ಕಾರಣ ...."[೯೫] ಮತ್ತು ಸುಂಕದ ಬಂಕಣ್ಣನ ವಚನದಲ್ಲಿ "ಎಲ್ಲರ ಸುಂಕ ಎತ್ತು ತೊತ್ತು ಬಂಡಿ ಬಲ್ಲೆತ್ತು, ಎನ್ನಸುಂಕ ಎಲ್ಲರ ಪರಿಯಲ್ಲ.........."[೯೬] ಹಾಗೂ ಕಾಡುಸಿದ್ದೇಶ್ವರರ ವಚನದಲ್ಲಿ "ಕೀಲಿಲ್ಲದ ಬಂಡಿಯ ಗಾಲಿಯನುಚ್ಚಿ ....ಬಂಡಿಯ ಮೇಲೆ ಹೇರಿ ಊರೆಲ್ಲ ಮಾರಿ ಹಾಗದ ...."[೯೭] ಈ ಮೇಲಿನ ಉಲ್ಲೇಖಗಳನ್ನು ಗಮನಿಸಿದಾಗ ಮನುಷ್ಯನ ಬದುಕನ್ನು ಬಂಡಿಗೆ ಹೋಲಿಸಲಾಗಿದೆ. ಹಾಗೂ ಬಂಡಿಯ ಮಹತ್ವ, ಒಕ್ಕಲುತನದಲ್ಲಿ ಬಂಡಿ ಇಲ್ಲದೇ ಹೋದರೆ ಅವನ ಮುಂಡವೆ ಹೋದಂತೆ, ಆ ಬಂಡಿಗೆ ಕೀಲು ಕೂಡ ಅಷ್ಟೇ ಮಹತ್ವದ್ದು ಎಂದು ಹೇಳಲಾಗಿದೆ.

ಕುಮಾರವ್ಯಾಸ ಭಾರತದಲ್ಲಿ ಯುದ್ಧದ ಸಾಮಾನುಗಳು, ಬಹುಧಾನ್ಯಗಳು, ಸಂಪತ್ತನ್ನು ಹೇರಿ ಸಾಗಿಸಲು ಬಂಡಿಯನ್ನು ಕುದುರೆ, ಒಂಟೆ, ಎತ್ತುಗಳನ್ನು ಹೂಡಿ ಎಳಸುತ್ತಿದ್ದರು. "............ಕೊಟ್ಟಿಗೆಯೆತ್ತು ಬಂಡಿ ಕೊಟಾರ ಕೊಪ್ಪರಿಗೆ ಸರಕು ಸರ್ವಸ್ವಗಳು ...."[೯೮] ಅಲ್ಲದೇ ಜೈಮಿನಿ ಭಾರತದಲ್ಲಿಯೂ ಕೂಡ ಯುದ್ಧದ ಸಂದರ್ಭದಲ್ಲಿ ಬಂಡಿಯನ್ನು ಬಳಸುತ್ತಿದ್ದರು ಎನ್ನಲಾಗಿದೆ. "..........ಕೊಟ್ಟಗೆಯ ಕೊಲ್ಲಾರ ಬಂಡಿಗಳ ಮೇಲೆ ಸರಕಿಟ್ಟಣಿಸಿ ಮಾದುದು ಗೋಮಹಿಷಿ..........."[೯೯] ಕೊಟ್ಟಿಗೆಯ ಗೊಬ್ಬರ ಹೇರುವ ಕೊಲ್ಲಾರ ಬಂಡಿಯನ್ನು ಸರಕು ಸರಂಜಾಮುಗಳನ್ನು ಸಾಗಿಸಲು ಬಳಸುತ್ತಿದ್ದರು. ಇಂತಹ ಬಂಡಿಗಳಲ್ಲಿ ಬಂಗಾರ, ಸುವರ್ಣ ನಾಣ್ಯಗಳನ್ನು ಗೋಣಿಯ ಚೀಲದಲ್ಲಿ ತುಂಬಿ ಸಾಗಿಸುತ್ತಿದ್ದರು.

ನೊಗ ಬಂಡಿಮತ್ತು ಉಳುಮೆಯ ಸಂದರ್ಭದಲ್ಲಿ ಬಳಕೆ ಮಾಡಲಾಗುತ್ತದೆ. ಕೃಷಿಪದ ಕೋಶದಲ್ಲಿ ಅನೇಕ ವಿಧಗಳ ಕುರಿತು ಹೇಳಲಾಗಿದೆ. "ಬಂಡಿ ಅಥವಾ ನೇಗಿಲನ್ನು ಎಳೆಯಲು ಎತ್ತಿನ ಹೆಗಲ ಮೇಲಿಡುವ ಉದ್ದನೆಯ ಮರದ ದಿಂಡು, ನೊಗಪಟ್ಟಿ, ನೊಗದಕೊಂಡಿ, ನೊಗಕೋಲ್, ನೊಗಮಣಿ, ನೊಗ್ಸ್‌ಹೆಡೆ ಮುಂತಾದವು ನೊಗದ ಇತರ ಭಾಗಗಳು. ಆರಿನೊಗ, ಕಳೆನೊಗ, ಖಂಡಕಿನೊಗ, ಖಿಡಕೀಲನೊಗ(ಆರುಗೇಣು), ಡಬ್ಬಿನಗಾ,ತಲಾರಿನೊಗ(ಹತ್ತು ಗೇಣಿನ ನೊಗ)ದಂಡೆನೊಗ, ದಂಡ್ರನೊಗ, ದೊಡ್ಡಕುಂಟೆನೊಗ, ಪೋಳ್‌ನೊಗ, ಬಂಡಿನೊಗ, ಬಾಗ್‌ನೊಗ, ಮುಂಡಿನೊಗ ಹಾಗೂ ರಂಟೆನೊಗ "[೧೦೦] ಒಕ್ಕಲಿಗ ಮುದ್ದಣ್ಣನ ವಚನದಲ್ಲಿ ನೊಗದ ಉಲ್ಲೇಖ ಕಂಡುಬರುತ್ತದೆ.

"......... ಸತ್ಕ್ರಿಯೆಯೆಂಬ ಕಣ್ಣೆಯಲ್ಲಿ ನೇಗಿಲ ತೊಡಚಿ
ಜ್ಞಾನಚಕ್ಷುವೆಂಬ ನೊಗದ ಉಭಯದ ಕೊನೆಯಲ್ಲಿ
ಎಡಗೋಲಿನಲ್ಲಿ ಕಾರಿಯ ಹೂಡಿ

ಬಲಗೋಲಿನಲ್ಲಿ ಬೆಳ್ಳಿಯ ಹೂಡಿ
ಅಡಿ ಕೆತ್ತುವಂತೆ ದಾಯೆಂದು ಹೊಡೆಯಲಾಗಿ
ಭೂಮಿಯೊಡಗೂಡಿ ಸವೆಯಿತ್ತು
ಬಿತ್ತವಟ್ಟಕ್ಕೆ ದಿಕ್ಕಿಲ್ಲ
ಕಾಮ ಭೀಮ ಜೀವಧನದೊಡೆಯ ನೀನೆ ಬಲ್ಲೆ ॥"[೨೦೧]

ಕಣ್ಣಿಯಿಂದ ನೊಗವನ್ನು ಕಟ್ಟಿ ಒಂದುಕಡೆಗೆ ಕಾರಿ ಎಂಬ ಎತ್ತು ಬಲಗಡೆಗೆ ಬೆಳ್ಳಿ ಎಂಬ ಎತ್ತು ಹೂಡಿ ಉಳುಮೆ ಮಾಡುವ ಕ್ರಿಯೆಯನ್ನು ಹೇಳಲಾಗಿದೆ. ಉರಿಲಿಂಗಿಪೆದ್ದಿ, ನಗೆಯಮಾರಿತಂದೆ, ಕಾಡುಸಿದ್ದೇಶ್ವರರ ವಚನದಲ್ಲಿಯೂ ನೊಗದ ಉಲ್ಲೇಖ ಕಂಡುಬರುತ್ತದೆ.

ಮಿಣಿ(ಹಗ್ಗ) ಎಂದರೆ ಹಗ್ಗ, ಕೃಷಿಕರು ಕೃಷಿಕಾರ್ಯದಲ್ಲಿ ಅಗತ್ಯವಾಗಿ ಬಳಸುತ್ತಾರೆ. ಮುದ್ದಣನ ವಚನದಲ್ಲಿ ಉಲ್ಲೇಖಿಸಲಾಗಿದೆ.

" .... ತ್ರೀದೇವರೆಂಬ ತಾಳನಟ್ಟು
ಇಡಾಪಿಂಗಳ ಸುಷುಮ್ನಾನಾಳವೆಂಬ ಕೋವಿಗಳ ಜೋಡಿಸಿ
ಮೇಲೆ ತ್ರಿಕೂಟ ಸ್ಥಾನವೆಂಬ ಬಟ್ಟಲಂ ಒಲಿದು
ಕುಂಡಲೀ ಸರ್ಪನೆಂಬ ಹಗ್ಗವ ಸೇದಿಕಟ್ಟಿ
ಹಂಸನೆಂಬ ಎತ್ತು ಹೂಡಿ..........."[೨೦೨]

ಕೂರಿಗೆಯ ದಿಂಡಿಗೆ ಕೋವಿಗಳ ಜೋಡಿಸಿ ಬಿಗಿದು ಕಟ್ಟಲು ಹಗ್ಗ ಬಳಸಿರುವುದನ್ನು ಮೇಲಿನ ವಚನದಲ್ಲಿ ತಿಳಿಸಲಾಗಿದೆ. ಉರಿಲಿಂಗಿಪೆದ್ದಿಗಳ ವಚನದಲ್ಲಿ '........... ಏಳು ಹುರಿಯ ಬಲುಮಿಣಿಯಂ ....' ಏಳು ಹುರಿಯ ಹಗ್ಗದ ಉಲ್ಲೇಖ ಕಂಡುಬರುತ್ತದೆ. ಅಲ್ಲದೆ ಗುಪ್ತಮಂಚಣ್ಣ, ನಗೆಯಮಾರಿತಂದೆ, ಬಹುರೂಪಿಚೌಡಯ್ಯನ ವಚನಗಳಲ್ಲಿ ಎತ್ತು, ಕಬ್ಬಿಣದ ನೇಗಿಲಿಗೆ, ಮೇಟಿಗೆ, ಬಂಡಿಯ ಹೇರಿಗೆ ಹಗ್ಗವನ್ನು ಬಳಸಲಾಗುತ್ತದೆ ಎಂಬ ಮಾಹಿತಿ ಕಂಡುಬರುತ್ತದೆ.

ಒಕ್ಕಲುತನದ ಸಲಕರಣೆಯಲ್ಲಿ ಸೆಳೆಗೋಲು ಅಥವಾ ಬಾರಿಕೋಲು ಒಂದು ಉಪಕರಣ. ಪ್ರಾದೇಶಿಕವಾಗಿ ಭಿನ್ನ ಭಿನ್ನ ಹೆಸರುಗಳಿಂದ ಕರೆಯುತ್ತಾರೆ. "ಬಾರಕೋಲು ಎಂದರೆ ಎತ್ತುಗಳನ್ನು ಬೆದರಿಸಲು ಬಳಸುವ ಸಾಧನ. ಬಾರಕೋಲ್, ಬಾರಕೋಲಿ, ಬಾರಿಕೋಲು, ಬಾರ್ತಲ್ಲು, ಬಾರ್ಕೋಲ್, ಬಾರ್ಕೋಲ, ಬಾರ್ಗೋಲು, ಬಾರ್ಕಲ್ ಮುಂತಾದ ಹೆಸರುಗಳಿಂದ ಕರೆಯುತ್ತಾರೆ"[೨೦೩] ಕೃಷಿಪದ ಕೋಶದಲ್ಲಿ ಹೀಗೆ ಹೇಳಲಾಗಿದೆ. ಒಕ್ಕಲು ಮುದ್ದಣ್ಣನವರ ವಚನದಲ್ಲಿ ಸೆಳೆಗೋಲಿನ ಉಲ್ಲೇಖ ಕಂಡುಬರುತ್ತದೆ.

"ಭಕ್ತಿಯೆಂಬ ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲಂ ಪಿಡಿದು
ಅಂತಃಕರಣ ಚತುಷ್ಟಯವೆಂಬ ಪಶುವಂಕಟ್ಟಿ
ಓಂಕಾರನಾದವೆಂಬ ಸೆಳೆಕೋಲಂಪಿಡಿದು
ಉತ್ತರ ಕ್ರೀಯೆಂಬ ಸಾಲನೆತ್ತಿ ...."[೨೦೪]

ಭೂಮಿಯ ಉಳುಮೆ ಮಾಡುವಾಗ ನೇಗಿಲಿಗೆ ನೊಗ ಕಟ್ಟಿ, ಎತ್ತುಗಳನ್ನು ಹೂಡಿ ಓಂಕಾರವೆಂಬ ಸೆಳೆಗೋಲನ್ನು ಹಿಡಿದು ಹೊಡೆಯುತ್ತಾನೆ ಎಂದು ಹೇಳಲಾಗಿದೆ

ವಚನಕಾರರಲ್ಲಿ ಅನೇಕರ ವಚನಗಳಲ್ಲಿ ಬಾರಗೋಲಿನ ಉಲ್ಲೇಖ ಕಂಡುಬರುತ್ತದೆ. ಅಮುಗೆ ರಾಯಮ್ಮನ ವಚನದಲ್ಲಿ 'ಉತ್ತಮ ತೇಜಿಗೆ ಚಬುಕಿನಲದಲಿ ತೆಗೆದವರುಂಟೆ..........'.(ಪು-೧೭೧) ಚಬುಕಿ ಎಂದರೆ ಬಾರಕೋಲು ಎಂದು ಅರ್ಥ. ಕುದುರೆಗಳನ್ನು ಬೆದೆರಿಸಲು ಬಳಸಲಾಗುತ್ತಿತ್ತು. ಅಂಬಿಗರ ಚೌಡಯ್ಯನ ವಚನವೊಂದರಲ್ಲಿ '.......... ಬೊಕ್ಕಣ ಸಿದಿಕೆ, ಬಾರಕೋಲು ಪಾದರಕ್ಷೆ..........'(ಸಂ-೧ಪು-೩೯) ಎನ್ನಲಾಗಿದೆ. ಕಂಬಮಾರಿತಂದೆ ವಚನದಲ್ಲಿ ' .... ಗೂಳಿಯ ಹಿಡಿತದ ಡಾವರಕ್ಕೆ ನಿಲ್ಲೆ ಸೆಳೆಗೋಲಿನ ಗಾಣದ ಕೀಟಕವ ನೊಲ್ಲೆ.........'.(ಸಂ-೨.ಪು-೦೨) ಅಲ್ಲದೆ ಬಸವಪುರಾಣದಲ್ಲಿಯೂ ಸೆಳೆಗೋಲಿನ ಉಲ್ಲೇಖ ಕಂಡುಬರುತ್ತದೆ. ' ನೀಲಿಗಪ್ಪದ ದುಡಿಗೆ ಘೌಳಿಯ ಸೀಲೆ ಕೊಂಕಿಯನಾರಸಂ ಸೆಳೆಗೋಲು ಬಂದಟ್ಟೆಯ ಕೆರಹು ....'.(ಪು-೪೪೫) ಎನ್ನಲಾಗಿದೆ.

ರಾಟಾಳ : ಬಾವಿಯಿಂದ ನೀರೆತ್ತಲು ಬಳಸುವ ಗಾಲಿಯ ಯಂತ್ರ. ವಚನಕಾರರಾದ ಕದಿರರೇವಮ್ಮೆಯ, ಸಿದ್ಧಲಿಂಗೇಶ್ವರರ ವಚನದಲ್ಲಿ ರಾಟಾಳದ ಉಲ್ಲೇಖ ಕಂಡುಬರುತ್ತದೆ. ಕುಮಾರವ್ಯಾಸನ ಕೃತಿಯ ಆದಿಪರ್ವದಲ್ಲಿ ಹೀಗೆ ಹೇಳಲಾಗಿದೆ. "...........ಕೌರವರ ರಕುತದ ರಾಟಾಳವನೆತ್ತುವೆನು ಕಟ್ಟು ಮುಡಿಯನೆಂಬೆನು..........."[೨೦೫] ಗ್ರಾಮೀಣ ಪ್ರದೇಶದ ಆಳ ಅನುಭವ ಹೊಂದಿರುವ ಕವಿ, ಬಾವಿಯಿಂದ ರಾಟಾಳದ ಸಹಾಯದಿಂದ ನೀರೆತ್ತುವುದನ್ನು ಭೀಮನು ಮಾಡುವ ರಕ್ತಹೀರುವ ಪ್ರತಿಜ್ಞೆಗೆ ಹೋಲಿಸಿರುವುದು ಅರ್ಥಪೂರ್ಣವಾಗಿದೆ. ಸಿದ್ದಲಿಂಗೇಶ್ವರರ ವಚನದಲ್ಲಿ "............ರಾಟಾಳದಂತೆ ತನುವ ತೊಡುತ್ತ ಬಿಡುತ್ತ ತಿರುಗುತ್ತಿಹರಲ್ಲ ...."[೨೦೬] ಎನ್ನುತ್ತಾನೆ.

ಸರ್ವಜ್ಞನ ವಚನದಲ್ಲಿ ಹೀಗೆ ಹೇಳಲಾಗಿದೆ.

"ಕೋಟಿ ವಿದ್ಯೆಗಳಲ್ಲಿ । ಮೇಟಿ ವಿದ್ಯೆಯೇ ಮೇಲು
ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ ।
ದಾಟವೆ ಕೆಡುಗು ಸರ್ವಜ್ಞ ॥"[೨೦೭]

ಕೃಷಿ ಮಹತ್ವ ಕುರಿತು ಹೇಳುವಾಗ ರಾಟಾಳದ ಬಳಕೆ ಮಾಡಿದ್ದಾನೆ. ಕೋಟಿ ವಿದ್ಯೆಗಿಂತ ಮಿಗಿಲಾದ ವಿದ್ಯೆ ಮೇಟಿಯ ತಿರುಗಿಸುವ ವಿದ್ಯೆ. ಇಡೀ ದೇಶದ ಆಟವು ನಡೆಯಲು ಮೇಟಿಯ ರಾಟಿ ತಿರುಗಲೇ ಬೇಕು. ಅದು ತಿರುಗಿದರೆ ಎಲ್ಲಾ ಸಂಪತ್ತು ಸಮೃದ್ಧತೆ ಸಿಗಲು ಸಾಧ್ಯ ಎನ್ನುತ್ತಾನೆ.

ಏತ : ಏತದ ಅರ್ಥ ಕೃಷಿಪದ ಕೋಶದಲ್ಲಿ ಹೀಗೆ ಹೇಳಲಾಗಿದೆ. "ಬಾವಿಯಿಂದ ನೀರನ್ನು ಮೇಲೆತ್ತುವ ಸಾಧನ. ಯಾತ, ಯೇತ, ದಮ್ಮೇತ, ಎಂದು ಕರೆಯುತ್ತಾರೆ. ಏತಕೋಲು-ಏತದಲ್ಲಿ ಬಾನಿಯನ್ನು ಸೇರಿಸಿ ಕಟ್ಟಿರುವ ಕೋಲು, ಯಾತಂಬಾನೆ-ಏತದಲ್ಲಿ ಉಪಯೋಗಿಸುವ ಬಾನಿಯಿಂದ ನೀರು ತುಂಬಿ ತರುವ ಸಾಧನ. ಯಾತದ್‌ಬಾಂಡ್ಲಿ-ಏತಕ್ಕಾಗಿ ಉಪಯೋಗಿಸುವ ನೀರಿನ ಬುಟ್ಟಿ. ಯಾತುಂಮ್ಮನು-ಏತದಲ್ಲಿ ಜೋಡಿಸುವ ದೊಡ್ಡಮರ."[೨೦೮] ಕನ್ನಡ-ಕನ್ನಡ ನಿಘಂಟುವಿನಲ್ಲಿ "ಬಾವಿಯಿಂದ ನೀರನ್ನು ಮೇಲೆತ್ತುವ ಸಾಧನ, ಚೂರು-ಚುಂಡಿ ಮಾನಂಗಿಯೂ ಕರ್ಷಿ ಯೇತವು". (ಮಂಗ ರಾ-೧೨೫-೧೯) ಸೆಗಟ್ಟಿಯ ಸೆಟ್ಟಿ ಲಕ್ಕಣಯ್ಯ ನೆನಯಿಪ್ಪುದಿನ್ನಿವಕೆ ಬಡ್ಡಿಯೊಳೇತಮನೆಸ್ಟು ಪತ್ತು ಗದ್ದಿನ ಪೊಸ ಪೊನ್ನ ನಿತ್ತಪೆ (ಸೌಇಇXX೫೫.೨೯,೧೦೮೨) ಇವಂಬು ನಿಧಿಕೂಪದಿಂದ ಮರ ನಂದನಕ್ಕೇತವು ಮೆತ್ತುವಲ್ಲಿ ಗಟಿಯಾಗಲುಂ...........(ಕಾವ್ಯ-ವ.೧೯೩)............ ಯಾತ ತಲೆತೂಗಿದರೆ ಪಾತಾಳದ ನೀರು ಬಂತು ತಾಪ ತಲೆತೂಗಿದರೆ ಪಗಡಿ ಬಿತ್ತು (ಗಾದೆ) ...."[೨೦೯] ಬಸವಣ್ಣನವರ ವಚನದಲ್ಲಿ

ಏತವನ್ನು ಕುರಿತು "ಏತ ತಲೆಬಾಗಿದಡೇನು ಗುರುಭಕ್ತನಾಗಬಲ್ಲುದೆ?.........."[೨೧೦] ಢಾಂಬಿಕ ಭಕ್ತನಿಗೆ ಏತವನ್ನು ಹೋಲಿಸಲಾಗಿದೆ. ಸರ್ವಜ್ಞನ ವಚನದಲ್ಲಿ

"ಮಾತು ಬಲ್ಲಾತಂಗೆ ಯೇತವದು ಸುರಿದಂತೆ,

ಮಾತಾಡಲರಿಯದಾತಂಗೆ ಬರಿಯೇತ

ನೇತಾಡಿದಂತೆ.........."[೨೧೧] ಏತ ಬರಿನೇತಾಡಿದರೆ ನೀರು ಸುರಿಯಲು ಸಾಧ್ಯವಿಲ್ಲ, ಮಾತು ಬಲ್ಲವನು ಏತ ನೀರು ಸುರಿಸಿದಂತೆ ತೂಕಬದ್ದವಾಗಿ ಮಾತಾಡುತ್ತಾನೆ. ಮಾತು ಅರಿಯದವ ಖಾಲಿ ಏತ ಬರಿ ನೇತಾಡುವಂತೆ ವಟವಟಿಸುತ್ತಾನೆ. ಮಾತಿನ ಪ್ರಾಮುಖ್ಯತೆ ಕುರಿತು ಹೇಳುವಾಗ ಏತಕ್ಕೆ ಹೋಲಿಸಲಾಗಿದೆ.

ಕುಡುಗೋಲು ಬಾಗಿದ ಒಳ ಅಂಚಿನಲ್ಲಿ ಹರಿತವುಳ್ಳ ಕತ್ತಿ. ಕುಡಗೀಲ, ಕುಡಗಿಲ, ಕುಡುಗುಲು, ಕಡಗೋಲು, ಕಟಗೋಲು, ಕಡಗೋಲು, ಕುಡುವಾಳ್, ಕುಡ್ಲು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. "ಕುಡಲ, ಕುಡುಗಲ್, ಕುಡುಗಲು, ಕುಡುಗೋಲು, 'ಕೊಂಕಿದ ಧಾರೆಯುಳ್ಳ ಒಂದು ಕೊಯ್ಯುವ ಸಾಧನ, 'ಲಲಿತ್ರಂ, ದಾತ್ರಂ ಈ ೨ ಕುಡುಗೋಲ್(ಹಲಾಯುಧ-೪೨೩) ಸೊಗಯಿಸುಗುಮೆ ಪಲ್ಲಿಲಿವಾಯಗಿಲಿಗಿಲಿಗಧಂ ಸಮಂತು ಕೂರಲಿ ಕುಡುಗೋಲ್(ಕಾವ್ಯ ವ-೨೫೭) ಸಂಸ್ಕೃತಿಯ ಭೇರ್ಗೆ ಕುಡುಗೋಲ್ಲೊಂಬ ಮಾಳ್ಕೆಯಿಂ [ಅದಿರ-೧೮೦,೩೭]; ಎನ್ನ ಬೆಮೊಳೇಕೆ ಕುಡುಗೋಲಿಡುವ್ವೆ [ಜೀವಸಂ-೧೮೦-೩೭] ಕುಡಲು; ಕೃಷಿಕನ ಕಳೆಕೊಯ್ಯುವ ಕುಡಲು ಬೀಳುವ ವೇಳೆಯಲ್ಲಿ .... [ನಿಬಂಧ-೧-೨೩೧] ಕುಡುಗಲ್; ಈ ಚಕ್ರಲೋಹ ಖಂಡಂಕ್ಕಂಕುಡುಗಲ್ಲ ಮೆಱಗಿ ಮೆಂಬೊಡೆ [ಶಾಂತಿಪು-೧೦,೧೨೧ವ] ಕುಡುಗಲು; ಒನಿಕೆ ಕಂಬಳಿ ಕುಡುಗಲು [ವೀರಶೈಪು-೮-೫-೫೬] ಕುಡುಗೋಲು; ಕೊಡಲಿ ಕತ್ತಿ ಕುಡುಗೋಲು ಸುತ್ತಿಗೆ..........[ಶಾವಕಾ೧-೩೦-೧೧], ಕುಡುಗೋಲ ಸುಳಿಯದೇ ಮಸೆಯಿಸುವ [ಸಮ್ಯಕೌ,೧-೨೪] ಪಿಡಿದೆ ಕರದ ಕುಡುಗೋಲು[ಕಂನವಿ-೧೧-೪೦], ಬೆಟ್ಟಕೆ ಹೋಗುವವನ ಸೊಂಟದಲ್ಲಿ ಕುಡುಗೋಲು ಸಿಕ್ಕಿದ ಹಾಗೆ (ಗಾದೆ) ...."[೨೧೨]

ಕೊಡಲಿ ಸೌದೆ ಒಡೆಯಲು, ಕೃಷಿಗೆ ಬೇಕಾದ ವಸ್ತುಗಳನ್ನು ಕಡಿದು ತಯಾರಿಸಿಕೊಳ್ಳಲು ಬಳಸಲಾಗುತ್ತದೆ. "ಕೊಡಲಿ, ಮರ ಮೊದಲಾದವುಗಳನ್ನು ಕಡಿಯುದಕ್ಕೆ ಬಳಸುವ ಒಂದು ಬಗೆಯ ಆಯುಧ; ಪರಶು ಕಾವಿಲ್ಲದೆ ಕೊಡಲಿಯೊಳ್ ಮರನಂ ಕಡಿವೆನೆಂಬ.........ಪೆರ್ಗಾವಿಲ್ಲನಾತೆ ಪೋಲ್ಕುಂ[ಧರ್ಮಾಮೃ-೫-೧೦೬]; ಕೊಡಲಿಯೊಳ್ ಕಡಿದಂ ....[ಭಾಷ ಭೂ-೮೮]; ಅಸಾಯ ಸೂರನಾಗಿ ಕೊಡಲಿಯಲ್ಲಿ ಕಳ್ಳರ ಹುಯ್ದು ಕೆಡಹಿ[ಸೌಇಇ ೯-೨,೪೨೦-೪-೧೩೮೬]; .... ಕುಲಕ್ಕೆ ಮೃತ್ಯು ಕೊಡಲಿ ಕಾವು (ಗಾದೆ); ಉಗುರಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡ ಹಾಗೆ(ಗಾದೆ); ...."[೨೧೩] ಕನ್ನಡ ನಿಘಂಟು-ಸಂ-೨ರಲ್ಲಿ ಹೇಳಲಾಗಿದೆ.

ಒಕ್ಕಲಿಗ ಮುದ್ದಣ್ಣನ ವಚನದಲ್ಲಿ ಕೊಡಲಿಯ ಉಲ್ಲೇಖ ಕಂಡುಬರುತ್ತದೆ.

"......ಆ ಮೂವತ್ತಾರರ ಮಧ್ಯದಲಿ ನೂರೊಂದು ಕೊಂಬೆ ಶಾಖೆ, ಗೂಡಿತ್ತು.

ಆ ಮರನನೇರಿ ಹಿಂದು ಮುಂದಣ ಕೊಂಬೆಕ

ಕೊಡಲಿಯಾಡೋದಕ್ಕೆ ತೆರಪ ಮಾಡಿ, ನಡುವಣ ಕೊಂಬೆ ಕೆಡವುತ್ತಿರಲಾಗಿ

ಒಂದು ಹೊಯಿಲಿಗೆ ಇದರಂಗದ ತೊಪ್ಪೆ ಹರಿದು

ಉಭಯಕ್ಕೆ ದಿಂಡು ಹರಿದು
ತ್ರಿ ವಿಧಕ್ಕೆ ಗರ್ಭಗೆಚ್ಚು ಖಂಡಿತವಾಯಿತ್ತು.
ಮರ ತಟ್ಟಾರಬೇಕೆಂದು ಇರಿಸಿ ಬಂದೆ
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ ॥"[೨೧೪]

ನೇಗಿಲು ತಯಾರಿಸಲು ಕೆಚ್ಚಾಗಿರುವ ಮರವನ್ನು ಆಯ್ಕೆ ಮಾಡಿ ಅದರ ರೆಂಬೆ ಕೊಂಬೆಗಳನ್ನು ತರಿದು ತುಂಡು ಮಾಡಲು ಕೊಡಲಿಯನ್ನು ಬಳಸಿರುವುದು ಕಂಡುಬರುತ್ತದೆ.

ಮೊರ, ಸಡ್ಡೆ, ಮೇಟ್ಟ, ಗುದ್ದಲಿ ಮುಂತಾದ ಕೆಲವು ಉಪಕರಣಗಳ ಉಲ್ಲೇಖ ವಚನಕಾರರಲ್ಲಿ ಕಾಣಸಿಗುತ್ತವೆ.ಮೊರ ಕಣದಲ್ಲಿ ಧಾನ್ಯ ತೂರಲು, ಮನೆಯಲ್ಲಿ ಕಾಳು ಧಾನ್ಯ ಹಸಮಾಡಲು, ಅನೇಕ ಧಾರ್ಮಿಕ ಕಾರ್ಯಗಳಲ್ಲಿ ಇದನ್ನು ಬಳಸಲಾಗುತ್ತದೆ. ಬಿದಿರು, ತಗಡಿನಿಂದ ತಯಾರಿಸುತ್ತಾರೆ. ನಯಸೇನನ ಧರ್ಮಾಮೃತದಲ್ಲಿಯೂ '............ ಮೊರಂ ತೀವಿದ ಧಾನ್ಯಮಂ ತೆಗೆಯಲಾರದೆ' ಎನ್ನಲಾಗಿದೆ. ಕೂರಿಗೆ ಅಥವಾ ನೇಗಿಲಿನಲ್ಲಿ ಧಾನ್ಯವನ್ನು ಬಿತ್ತುವಾಗ ದಿಂಡಿಗೆ ಕಟ್ಟಿ ಹಿಂದಿನಿಂದ ಬಿತ್ತನೆ ಮಾಡಲು ಬಳಸುವ ಉಪಕರಣ ಸಡ್ಡೆ. ಏಕಕೋವಿ, ದ್ವಿಕೋವಿ ಸಡ್ಡೆಗಳಿರುತ್ತವೆ. ಇದನ್ನು ಬುಕ್ಕ ಎಂದು ಕರೆಯಲಾಗುತ್ತದೆ. ಭಂಡಾರಿ ಶಾಂತರಸನ ವಚನದಲ್ಲಿ "ಕಾಲಲ್ಲಿ ಕಟ್ಟಿದ ಸಡ್ಡೆ ಕೀಳುವರಿಲ್ಲ............ ಸಡ್ಡೆಗೆ ಮೂರುಕವೆ.........."[೨೧೫] ಸಡ್ಡೆ ಮತ್ತು ಮೂರುಕವೆಯ ಸಡ್ಡೆಯ ಪ್ರಸ್ತಾಪ ಕಂಡುಬರುತ್ತದೆ. ಹೇಮಗಲ್ಲ ಹಂಪನ ವಚನವೊಂದರಲ್ಲಿ ".......... ಪಂಚವಿಷಯವೆಂಬ ಸಡ್ಡೆಯ ಕೋಲನಿಕ್ಕಿ, ಚಿತ್ತವೆಂಬ ಸಡ್ಡೆಯುಂ ಬಟ್ಟಲಿಗೆ........."[೨೧೬] ಎನ್ನಲಾಗಿದೆ. ಬಿತ್ತನೆ ಕಾರ್ಯದಲ್ಲಿ ಹಸಿ ಆರಿದಾಗ ಹಾಗೂ ಕೆಲವು ದ್ವಿದಳ ಧಾನ್ಯಗಳನ್ನು ಆಳವಾಗಿ ನಾಟಲು ಕೂರಿಗೆಯ ದಿಂಡಿಗೆ ಕಟ್ಟಿ ಬಳಸಲಾಗುತ್ತದೆ. ಮೆಟ್ಟ ಕಣದಲ್ಲಿ ಧಾನ್ಯ ತೂರಲು ಮಾಡಿದ ಕಟ್ಟಿಗೆಯ ಎತ್ತರವಾದ ಸಾಧನ. ಧಾನ್ಯ ತೂರಲು ಬಳಸುವ ಮೂರು ಕಾಲಿನ ಅಟ್ಟಣಿಗೆ. ಮೆಟ್ಟು, ಮೆಟ್ಟಿ, ಮೆಟ್ಟರ, ಮೆಟ್ಕಾಲು, ಮೆಟ್ನಾಲಿಗಿ, ಮೆಟ್ನಾಲಿ, ಮೆಟ್ಟಾನು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಒಕ್ಕಲಿಗ ಮುದ್ದಣ್ಣನ ವಚನದಲ್ಲಿ

"....ಅಷ್ಟಾಂಗಯೋಗವೆಂಬ ಜೀವಧನದಿಂದೊಕ್ಕಿ
ತಾಪತ್ರಯದ ಮೆಟ್ಟನೇರಿ, ಪಾಪದ ಹೊಟ್ಟ ತೂರಿ
ಪುಣ್ಯಬೀಜಮಂ ತಳೆದು ...."[೨೧೭]

ಕಣದಲ್ಲಿ ಮೇಟಿಯ ಸುತ್ತ ಹಾಕಿ ಒಕ್ಕಲು ಮಾಡಿದ ಧಾನ್ಯಗಳನ್ನು, ಗಾಳಿಗೆ ತೂರಲು ಮೂರು ಕಾಲಿನ ಅಟ್ಟಣಿಗೆಯನ್ನು ಮಾಡಿಕೊಳ್ಳುತ್ತಾರೆ. ಇದನ್ನೇ ಮೆಟ್ಟ ಎಂದು ಈ ವಚನದಲ್ಲಿ ಬಳಸಲಾಗಿದೆ.

ಗುದ್ದಲಿ ನೆಲ ಅಗೆಯಲು ಬಳಸುವ ಉಪಕರಣ. " ಗುದ್ದಲಿ, ಗುದ್ಲಿ, ಗುದ್ದಿಲ, ಗುದಳಿ,ಗುದ್ದುಳಿ, ಗುದ್ದೋಳಿ, ಕೈಗುದ್ದಲಿ, ಮಣ್ಣುಗುದ್ದಲಿ, ಕೋಲ್ಗುದ್ದಿ, ಗಿಡಗುದ್ಲಿ, ..."[೨೧೮] ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಅಲ್ಲಮನ ವಚನವೊಂದರಲ್ಲಿ ಗುದ್ದಲಿಯ ಉಲ್ಲೇಖ ಕಾಣಸಿಗುತ್ತದೆ. "ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ ಅಗೆದು ಕಳೆದೆನಯ್ಯ ಭ್ರಾಂತಿಯಬೇರ ...."[೨೧೯] ದೇಹವನ್ನು ತೋಟದ ಕೃಷಿಗೆ ಹೋಲಿಸುವಾಗ; ಕಳೆ ತೆಗೆಯಲು ಗುದ್ದಲಿಯ ಬಳಕೆಯಾಗಿರುವ ಅಂಶ ಕಂಡು ಬರುತ್ತದೆ. ಸಿದ್ಧರಾಮ ಚರಿತ್ರೆಯಲ್ಲಿಯೂ ಗುದ್ದಲಿ ಕುರಿತು "......... ಗುದ್ದಲಿಗೊಂಡ ನೋಡಸೆನಾಲ್ ಸಾಸಿರ ಸಮರ್ಥ ಗುಡ್ಡರು ಗುದ್ದಲಿಯ..........."[೨೨೦] ಇಲ್ಲಿ ನಾಲ್ಕು ಸಾವಿರ ಶಿಷ್ಯರು ನೆಲವ ಅಗೆಯಲು ಗುದ್ದಲಿಯ ಬಳಸಿದರು ಎಂದು ಹೇಳಲಾಗಿದೆ.

ಕೃಷಿಉತ್ಪನ್ನಗಳ ಸಂಗ್ರಹಣೆಯ ಉಪಕರಣಗಳು : ರೈತರು ಬೆಳೆದ ದವಸ–ಧಾನ್ಯಗಳನ್ನು ಸಂಗ್ರಹ ಮಾಡಲು ಅನೇಕ ವಿಧದ ಸಲಕರಣೆಗಳನ್ನು ಬಳಸುತ್ತಾರೆ. ಕನ್ನಡ ದೇಶೀ ಸಾಹಿತ್ಯದಲ್ಲಿ ಅಂತಹ ಉಪಕರಣಗಳ ಉಲ್ಲೇಖಗಳನ್ನು ಇಲ್ಲಿ ಗುರುತಿಸಲಾಗಿದೆ.

ಕಣಂಜ : ದವಸ–ಧಾನ್ಯಗಳನ್ನು ಸಂಗ್ರಹಿಸುವ ಬಿದುರಿನ ಗೂಡೆ. "ಕಣಜ ಧಾನ್ಯವನ್ನು ಸಂಗ್ರಹಿಸುವ ಸ್ಥಳ; ಬಿದಿರಿನ ಗೂಡೆ; ಅಕ್ಕಿ ಕಣಂಜದ ಮುೞಿ ವರುಷಕ್ಕೆ ೧ಕ್ಕೆ [ಬೊಂಕಶಾ–೧೯೪೦ ಕುಮಟ, ೧೧೩–೨೮–೧೪೭೫]; ವಿಲಯ ಘೋರಾಂಧಕಾರದ ಕಣಂಜದಂತೋ ಪ್ರಳಯ ಕಾಲ ಮೇಘಂಗಳ ಕಠೋರದಂತೋಭಾವಿಸೆ[ಚೆ,ಬ,ಪು–೪೬–೧೯], ಕಣಜ; "ಧಾನ್ಯಂಗಳಿಹ ಠಾವು ಕಣಜವೆನಿಕ್ಕುಂ"[ಮಂಗರಾ–೫೮–೮] ಕಣಂಜಂಗಳೊಳು ಪೊಕ್ಕು ನೆಲ್ಲುಗಳ ನುಜಿಕಟ್ಟಿ ಗಣಿಸದದ ಪೊತ್ತು [ಪೆರುರ–೧೩೫–೬] ...."[೨೨೧] ಅರಿವಿನ ಮಾರಿತಂದೆಗಳ ವಚನದಲ್ಲಿ "............ಕೊಯ್ದು ಒಕ್ಕಿ ತೂರಿ ....ಅಳತೆ ಸಂದಿತ್ತು ಸದ್ಯೋಜ್ಞಾತಲಿಂಗವೆಂಬ ಕಣಜ ಘಟ್ಟದಲ್ಲಿ ...."[೨೨೨] ಬೆಳೆಯನ್ನು ಒಕ್ಕಲು ಮಾಡಿ ಗಾಡಿಯಿಂದ ಹೇರಿ ಮನೆಗೆ ತಂದು ಕಣಜದಲ್ಲಿ ಸಂಗ್ರಹಿಸುವ ಅಂಶ ತಿಳಿದು ಬರುತ್ತದೆ.

ಹಗೇವು : ಹಗೇವುಗಳು ಒಂದರಿಂದ ಎರಡು ಆಳುದ್ದ, ಅಂದರೆ ಆರರಿಂದ ಹತ್ತು ಅಡಿ ಆಳವಾಗಿರುತ್ತವೆ. ಹಗೇವು ಕೊಡದ ಆಕಾರದಲ್ಲಿದ್ದು, ಕೆಳಗಡೆ ಹೋದಹಾಗೆ ಅಗಲವಾಗಿರುತ್ತವೆ. ಕೆಳಗಡೆ ಅಂದರೆ ಹಗೇವಿನ ತಳ ನಾಲ್ಕರಿಂದ ಎಂಟು ಅಡಿ ವ್ಯಾಸುಳ್ಳದ್ದಾಗಿದ್ದು ೨೦ ರಿಂದ ೫೦ ಕ್ವಿಂಟಾಲ್ ಜೋಳವನ್ನು ಸಂಗ್ರಹಿಸಿಡುವ ಸಾಮರ್ಥ್ಯ ಹೊಂದಿವೆ. ನೆಲಮಟ್ಟದಿಂದ ಕೆಳಗಡೆ ೨ರಿಂದ ೪ಅಡಿಗಳಷ್ಟು ಆಳ ಹಾಗು ಅಷ್ಟೇ ಅಗಲವಾದ ತಗ್ಗು ಇದ್ದು, ಅದರ ಕೆಳಗಡೆ ಕಣಕಟ್ಟು ಎಂದು ಕೆರೆಯಲ್ಪಡುವ ಸಣ್ಣ ತೆಳುವಾದ ಕಲ್ಲುಗಳಿಂದ ಕಟ್ಟಿದ ಅರ್ಧ ಅಡಿಯಷ್ಟು ಅಗಲವಾದ ಕಟ್ಟೆಯಿರುತ್ತದೆ. ಅದರ ಮೇಲೆ ಬಾಯಿಕಲ್ಲು ಮುಚ್ಚಿರುತ್ತಾರೆ. ಇದರಿಂದ ಕೆಳಗಡೆ ಹೊದಹಾಗೆ ಹಗೇವು ಅಗಲವಾಗಿದ್ದು ಅದರಲ್ಲಿ ಜೋಳ ತುಂಬಿಸಿರುತ್ತಾರೆ. ಜೋಳ ತುಂಬಿಸಿ ಬಾಯಿಕಲ್ಲು ಮುಚ್ಚಿ ಅದರ ಮೇಲೆ ಮಣ್ಣಿನ ರಾಡಿ, ಸಗಣಿಯಿಂದ ಮುಚ್ಚಿ ನೆಲಕ್ಕಿಂತ ನಾಲ್ಕೈದಿಂಚು ಎತ್ತರದವರೆಗೆ ಮಣ್ಣುಹಾಕಿ ಮುಚ್ಚುತ್ತಾರೆ. ಈ ರೀತಿಯ ವಿನ್ಯಾಸ ಹೊಂದಿರುವಂತದ್ದು ಹಗೇವು. ಹಗೇವಿನಲ್ಲಿ ಇಳಿಯುವಾಗ ಅನುಸರಿಸುವ ಕ್ರಮಗಳೆನೆಂದರೇ ಹಗೇವಿನಲ್ಲಿ ಒಂದು ರೀತಿಯ ಘಾಟುವಾಸನೆ ಇರುತ್ತದೆ. ಪ್ರಾಣವಾಯುವಿನ ಅಭಾವವಿರುತ್ತದೆ. ಹೀಗಾಗಿ ಹಗೇವಿನಲ್ಲಿ ದೀಪ ಅಥವಾ ಕಂದೀಲನ್ನು ಸೇಣಬಿನ ಹಗ್ಗಕ್ಕೆ ಕಟ್ಟಿ ಇಳಿಬಿಟ್ಟು ನೋಡುತ್ತಾರೆ. ಅದು ನಂದಿ ಹೋದರೆ ಹಗೇವು ಇನ್ನೂ ಆರಿಲ್ಲಾ ಎಂದೂ ಕಂಬಳಿಯನ್ನು ಬೀಸಿ ಗಾಳಿಯಾಡುವಂತೆ ಮಾಡುತ್ತಾರೆ. ನಂತರ ಈ ಕಣಕಟ್ಟಿನ ಮೇಲೆ ನಿಂತು ಜೋಳವನ್ನು ಬಕೀಟುಗಳ ಮೂಲಕ ಹಗ್ಗಕಟ್ಟಿ ಎತ್ತಿಕೊಂಡು ಬುಟ್ಟಿಯಲ್ಲಿ ತುಂಬಿಸುತ್ತಾರೆ. ಇದು ಹಳ್ಳಿಯ ಪಾಮರರೆನಿಸಿದ ರೈತರ ತಂತ್ರಜ್ಞಾನವಾಗಿದೆ. ನೈಸರ್ಗಿಕವಾಗಿ ಸಂಗ್ರಹಣೆಯ ಉಪಾಯವನ್ನು ಕಂಡುಕೊಂಡ ಬಗೆ ಇದಾಗಿದೆ.

ಅನೇಕ ವಚನಕಾರರಲ್ಲಿ ಹಗೇವಿನ ಉಲ್ಲೇಖ ಕಂಡುಬರುತ್ತದೆ. ಅಕ್ಕನ ವಚನದಲ್ಲಿ "ಬಲ್ಲಿದ ಹಗೇಹ ತೆಗೆವನ್ನ ಬರ ಬಡವನ ಹರಣ ಹೋದಂತಾಯಿತು..........."[೨೨೩] ಅಂದರೆ ಶ್ರೀಮಂತರು ಹಗೇವಿನಲ್ಲಿರುವ ಧಾನ್ಯವನ್ನು ತೆಗೆದು ಬಡವರಿಗೆ ಹಂಚುವಷ್ಟರಲ್ಲಿ ಬಡವರ ಜೀವ ಹರಣವಾಗುತ್ತದೆ;

ಎಂಬ ಗಾದೆ ಮಾತನ್ನು ಹೇಳುವಾಗ ಹಗೇವಿನ ಪ್ರಸ್ತಾಪವಿದೆ. ಅಲ್ಲಮನು ಕೂಡ ಇದೆ ಗಾದೆಯನ್ನು ಹೀಗೆ ಬಳಸಿದ್ದಾನೆ. " ಉಳ್ಳವರು ಹಗೇಯವ ತೆಗೆವನ್ನಕ್ಕರ ಇಲ್ಲದವರ ಹರಣ ಹೋಯಿತ್ತೆಂಬ ಗಾದೆ ಎನಗಾಯಿತ್ತೆಯ್ಯ.........."[೨೨೪] ಎನ್ನುತ್ತಾನೆ. ಮೋಳಿಗೆ ಮಾರಯ್ಯ,ಸೊಡ್ಡಳ ಬಾಚರಸ, ಬಂಕಣ್ಣ ಕಾಡುಸಿದ್ದೇಶ್ವರರ ವಚನಗಳಲ್ಲಿಯೂ ಹಗೇವಿನ ಉಲ್ಲೇಖ ಕಂಡುಬರುತ್ತದೆ. ಹಗೇವಿನಲ್ಲಿ ಸಂಗ್ರಹಿಸಿದ ಧಾನ್ಯಗಳು ಊಟಕ್ಕೆ ರುಚಿಕರವಾಗಿಯೂ, ಹುಳುಗಳು ಹತ್ತದಂತೆ ರಕ್ಷಿಸಲು ಮತ್ತು ಮಾರುಕಟ್ಟೆಯಲ್ಲಿ ಬೆಲೆ ಬಂದಾಗ ಆ ಧಾನ್ಯಗಳನ್ನು ತೆಗೆದು ಮಾರಾಟ ಮಾಡಲು ರೈತರಿಗೆ ಸಹಕಾರಿಯಾಗಿವೆ. ಸರ್ವಜ್ಞನ ತ್ರಿಪದಿಯೊಂದರಲ್ಲಿ ಹೀಗೆ ಹೇಳಲಾಗಿದೆ.

"ಮುಗಿಲ ಮಾಳಿಗೆ ಲೇಸು
ಜಗಲಿ ಸೂಳೆಗೆ ಲೇಸು
ಹಗೆಯದ ಭತ್ತವುಣ ಲೇಸು.........."[೨೨೫] ಹಗೆಯದಲ್ಲಿ ಹಾಕಿದ ಭತ್ತ ಊಟಕ್ಕೆ ರುಚಿಕರವಾಗಿರುತ್ತದೆ. ಅಲ್ಲದೇ ಯಾವುದೇ ಧಾನ್ಯವನ್ನು ಸ್ವಲ್ಪ ದಿನಗಳ ಕಾಲ ಸಂಗ್ರಹಿಸಿ ನಂತರ ಬಳಸಿದರೆ ಉತ್ತಮ ಎಂಬ ತಿಳುವಳಿಕೆ ಇಲ್ಲಿ ದೊರೆಯುತ್ತದೆ.

ಖಂಡುಗ : ಇದು ಒಂದು ಧಾನ್ಯಗಳ ಅಳೆಯುವ ಮಾಪನ." ಕಂಡಗೆ, ಕಂಡುಕ, ಕಂಡಗ, ಖಂಡುಕ ೧ಒಂದು ಬಗೆಯ ಅಳತೆ ; ಪನ್ನಿರ್ಖಣ್ಡುಗಂ ಭತ್ತಮಂ [ಏಕ-iv-ಹೆಗಡ, ೪-೨೩,೭೫೦];ಮೆಂಬ ಖಣ್ಡುಗ ದೇವರ್ಗ್ಗೆ[ಸಾ.ಇಇix-೨೨,೪೦,೮೯೭];............"[೨೨೬] ಕನ್ನಡ ನಿಘಂಟುವಿನಲ್ಲಿ ಹೀಗೆ ಅರ್ಥೈಸಲಾಗಿದೆ.

ಸೊಡ್ಡಳ ಬಾಚರಸನ ವಚನದಲ್ಲಿ ಖಂಡುಗದ ಉಲ್ಲೇಖವಿದೆ "........... ಆರವತ್ತು ಲಕ್ಷ ಖಂಡುಗ, ಶಾಲಿಧಾನ್ಯ ಮೂವತ್ತು ಖಂಡುಗ ಗೋಧಿ ಹನ್ನೆರಡು ಲಕ್ಷ ಖಂಡುಗ ...."[೨೨೭] ಬಾಚರಸನು ಬಿಜ್ಜಳನ ಅರಮನೆಯಲ್ಲಿ ಕಣಜಗಳಿಂದ ಧಾನ್ಯ ಅಳೆದುಕೊಡುವ ಮತ್ತು ತೆಗೆದುಕೊಳ್ಳುವ ಲೆಕ್ಕವನ್ನು ಬರೆಯುವ ವ್ಯಕ್ತಿಯಾಗಿದ್ದನು. ಅವನು ಖಂಡುಗ ಲೆಕ್ಕದಲ್ಲಿ ಧಾನ್ಯಗಳನ್ನು ಅಳತೆ ಮಾಡಿ ಬರೆದುಕೊಳ್ಳುತ್ತಿದ್ದನು. ಹೊಡೆಹುಲ್ಲು ಬಂಕಣ್ಣನ ವಚನದಲ್ಲಿಯೂ '.......... ಹಗಹದಲ್ಲಿ ತೆಗೆಲು, ಕಣ್ಣಿನ ಕೊಳಗದಲ್ಲಿ ಅಳೆವುತ್ತಿರಲಾಗಿ ಖಂಡುಗವೆಂಬುದಕ್ಕೆ ....[ಸಂ-೪,ಪು-೪೮೯] ಹಗೆವು, ಕೊಳಗ, ಖಂಡುಗದ ಪ್ರಸ್ತಾಪವಿದೆ. ಕಾಡುಸಿದ್ದೇಶ್ವರರ ವಚನವೊಂದರಲ್ಲಿ '.......... ಹತ್ತು ಹೊನ್ನಿಗೆ ಒಂದು ಹೊಲವ ಮಾಡಿ, ಹತ್ತು ಖಂಡುಗವ ಧಾನ್ಯವ ಬೆಳೆದು ....' ಹೊಲವನ್ನು ಗುತ್ತಿಗೆ ಮಾಡಿ ಅದರಿಂದ ಹತ್ತು ಖಂಡುಗ ಧಾನ್ಯ ಬೆಳೆದ ಪ್ರಸ್ತಾಪ ಕಂಡುಬರುತ್ತದೆ. ಸರ್ವಜ್ಞನ ವಚನದಲ್ಲಿ "ನೂರು ಖಂಡುಗ ಹೊಟ್ಟ ತೂರಿದರೆ ಫಲವೇನು ...."[೨೨೮] ಖಂಡುಗದ ಉಲ್ಲೇಖ ಕಂಡುಬರುತ್ತದೆ. ಹೀಗೆ ಕನ್ನಡ ದೇಶೀ ಸಾಹಿತ್ಯ ಕೃತಿಗಳಲ್ಲಿ ಅನೇಕ ಕಡೆ ಖಂಡುಗದ ಉಲ್ಲೇಖ ಕಂಡುಬರುತ್ತದೆ.

ಕೊಳಗ : ಒಂದು ಅಳತೆ ಮಾಪನ; ನಾಲ್ಕು ಬಳ್ಳಗಳ ಪರಿಮಾಣ. "ಬಳ್ಳವು ನಾಲ್ಕೆನಲು ಕೊಳಗಂ" [ಮಂಗರಾ ೧೦೪-೧೧]; ಸಲಗೆ ಎರಡು ಕೊಳಗ ಹತ್ತು [ಏಕ vi ಕಡೂರು-೨-೧೮.ಸ-೧೧೧೦] ...."[೨೨೯] ಕನ್ನಡ ನಿಘಂಟುವಿನಲ್ಲಿ ಹೀಗೆ ಅರ್ಥೈಸಲಾಗಿದೆ. ಅನೇಕ ಶಾಸನಗಳಲ್ಲಿ, ಸಾಹಿತ್ಯ ಕೃತಿಗಳಲ್ಲಿ ಹೇರಳವಾಗಿ ಉಲ್ಲೇಖಿಸಲಾಗಿದೆ. ಘಟ್ಟಿವಾಳಯ್ಯನ ವಚನದಲ್ಲಿ '.......... ವಾಯದ ರಾಶಿಗೆ ವಾಯದ ಕೊಳಗ ಅಳೆವುದು......[ಸಂ-೨.ಪು-೧೭೯] ಮನಸಂದ ಮಾರಿತಂದೆ ವಚನದಲ್ಲಿ

'ರಾಶಿಗೆ ಮೊದಲೇ ಅಳತೆ ಸಂದಿತ್ತು ಕೊಳಗದ ಕೊರಳು ಹಿಡಿಯದೆ ....'[ಸಂ-೩ಪು-೩೫] ಭಂಡಾರಿ ಶಾಂತರಸ, ಮಡಿವಾಳಪ್ಪನ ವಚನದಲ್ಲಿಯೂ ಕೊಳಗದ ಉಲ್ಲೇಖ ಕಂಡುಬರುತ್ತದೆ.

ಮಳೆ ಮತ್ತು ಹವಮಾನ : ಕೃಷಿಕರ ಬದುಕು ಮತ್ತು ಕೃಷಿ ಚಟುವಟಿಕೆಗಳು ಮಳೆಯನ್ನೇ ಅವಲಂಬಿಸಿವೆ. ಮಳೆ-ಬೆಳೆ ರೈತನ ಜೀವನದ ಪ್ರಮುಖ ಅಂಗಗಳು. ಕಾಲ ಕಾಲಕ್ಕೆ ಸರಿಯಾಗಿ ಮಳೆಯಾದರೆ ರೈತನ ಬಾಳು ಬಂಗಾರವಾಗುತ್ತದೆ. ಇಲ್ಲದೇ ಹೋದರೆ ಅವನ ಬಾಳು ಬರೀ ಗೋಳಿನ ಕಂತೆಯಾಗುತ್ತದೆ. ಕನ್ನಡದ ದೇಶಿ ಕಾವ್ಯಗಳಲ್ಲಿ ಮಳೆ ಮತ್ತು ಹವಮಾನವನ್ನು ಕುರಿತಾದ ವರ್ಣನೆಗಳು ಅನೇಕ ಕಡೆ ಕಂಡುಬರುತ್ತವೆ. ಅಂತವುಗಳಲ್ಲಿ ಪ್ರಮುಖವಾದ ಭಾಗಗಳನ್ನು ಸಂಗ್ರಹಿಸಿ ಚರ್ಚಿಸಲಾಗಿದೆ.

ಒಕ್ಕಲಿಗ ಮುದ್ದಣ್ಣನ ವಚನದಲ್ಲಿ ಮಳೆಯ ಕುರಿತಾಗಿ ಹೀಗೆ ಹೇಳಲಾಗಿದೆ. "ಕುಂಭದ ಮಳೆ ಹೊಯ್ಯಿತ್ತು ಮೂರಂಗದ ನೇಗಿಲ ತರಿಯಬೇಕು............"[೨೩೦] ಕುಂಭದ ಮಳೆಯೆಂದರೆ ಎಡೆಬಿಡದೆ ಸುರಿಯುವ ಮುಂಗಾರುಮಳೆ. ಈ ಮಳೆ ಬಿದ್ದಾಗ ರೈತರು ಒಕ್ಕಲುತನಕ್ಕೆ ಬೇಕಾದ ಉಪಕರಣಗಳ ಸಿದ್ದತೆ ಮಾಡಿಕೊಳ್ಳಲು ಮುಂದಾಗುತ್ತಾರೆ. ರೈತರ ಮುಖದಲ್ಲಿ ಹರ್ಷವನ್ನುಂಟು ಮಾಡುವಂತಹ ಮಳೆ ಇದಾಗಿದೆ. ಅಲ್ಲಮನ ವಚನವೊಂದರಲ್ಲಿ "ಕಾರ ಮೇಘವೆದ್ದುಧಾರಾವರ್ತ ಸುರಿವಾಗ, ಧಾರುಣಿಯೆಲ್ಲವು ಮುಳುಗಿತ್ತು ನೋ........."[೨೩೧] ಕಪ್ಪನೆಯ ಮೋಡ ಹೆಚ್ಚು ಮಳೆ ಬರುವುದರ ಸೂಚನೆ, ಕಪ್ಪನೆಯ ಮೋಡದಿಂದ ನಿರಂತರವಾಗಿ ಮಳೆ ಸುರಿದು ಇಡೀ ಭೂಮಂಡಲವೇ ಮುಳುಗಿ ಹೋಗುವಂತಾಗುತ್ತದೆ. ಅಲ್ಲದೇ ಭೂಮಿಯೆಲ್ಲ ನೀರಿನಿಂದ ಆವೃತ್ತವಾಗಿದೆ ಎಂದು ವರ್ಣಿಸಲಾಗಿದೆ. ವಚನಕಾರರಾದ ಮಧುವಯ್ಯನ ವಚನದಲ್ಲಿ 'ಆಕಾಶದ ಮಳೆಯನರಿತು, ಭೂಮಿಯ ಬೆಳೆಯನರಿತು, ಹುಟ್ಟುವ ಬೀಜವನರಿತು............'[ಸಂ-೩,ಪು-೩೦೪] ಮಳೆಯ ಹವಮಾನವನ್ನು ನೋಡಿ ಬೆಳೆ ಬೆಳೆಯುವುದು. ಮಳೆಯ ಪ್ರಮಾಣವನ್ನು ಅಳೆಯುವ ಶಕ್ತಿ ನಮ್ಮ ರೈತರಲ್ಲಿದೆ; ಎಂಬ ಅಂಶ ತಿಳಿದುಬರುತ್ತದೆ. ಅಲ್ಲದೇ ಕಾಡುಸಿದ್ದೇಶ್ವರರ ವಚನದಲ್ಲಿ '..........ಆಕಾಶದಲ್ಲಿ ಮೋಡ ಬಂದು ಸುಳಿಗಾಳಿ ಬೀಸಲು ....ಆಕಾಶದೊಳಗಣ ಕಾರಮುಗಿಲು ಹಾರಿಹೋಹಾಗ............'[ಸಂ-೫,ಪು-೨೩] ಆಕಾಶದ ಮೋಡಗಳು ಚಲಿಸಲು ಗಾಳಿಯೇ ಕಾರಣ. ಕಪ್ಪನೆಯ ಮೋಡಗಳು ಸುಳಿಗಾಳಿಯಿಂದ ಚದುರಿದಂತೆ ಮಳೆ ಸುರಿಸಬಹುದು, ಇಲ್ಲವೇ ಅದೆ ಗಾಳಿ ಮಳೆಯ ಮೋಡಗಳನ್ನು ಬೇರೆಕಡೆಗೆ ಚಲಿಸಬಹುದು; ಅಥವಾ ಕರಗಿಹೋಗುವಂತೆಯೂ ಮಾಡಬಹುದು ಎನ್ನಲಾಗಿದೆ.

ರಾಘವಾಂಕನ ಸಿದ್ದರಾಮಚರಿತ್ರೆಯಲ್ಲಿ ಮಳೆಯನ್ನು ಕುರಿತು ಹೀಗೆ ಹೇಳಲಾಗಿದೆ. "ಮಂದೈಸಿ ಮಸಗಿ ಮುಸಿಕಿದ ಮೋಡದಿಂದ ಮೊಳಗಿಂದ..........."[೨೩೨] ದಟ್ಟವಾದ ಮೋಡದಿಂದ ಗುಡುಗು, ಸಿಡಿಲು ಹೊರಬರುತ್ತದೆ. ಅಂತಹ ವಾತಾವರಣವಿದ್ದಾಗ ಮಳೆ ಹೆಚ್ಚಾಗಿ ಬರುತ್ತದೆ. ಕುಮಾರವ್ಯಾಸ ಭಾರತದಲ್ಲಿ "ಮಂಗಳದ ಬೆಳೆಗಿಂಗಳಿನ ಮಳೆ ಸುರಿದುದೆ ಮಹಾದೇವ ...."[೨೩೩] ಇಲ್ಲಿ ಕೆಂಡದ ಮಳೆಯ ಪ್ರಸ್ತಾಪವಿದೆ. ಮಂಗಳಕರವಾದ ಬೆಳೆಗಳಿಗೆ ಇಂತಹ ಮಳೆ ಸುರಿದರೆ ಆ ಬೆಳೆಗಳು ಬದುಕಲಾರವು ಎಂದು ಹೇಳಲಾಗಿದೆ. ಸರ್ವಜ್ಞ ಮೂರ್ತಿಯ ತ್ರಿಪದಿಗಳಲ್ಲಿ ಅನೇಕ ಕಡೆ ಬಿಡಿ ಬಿಡಿಯಾಗಿ ಮಳೆ ಕುರಿತಾದ ವರ್ಣನೆ ಕಂಡುಬರುತ್ತದೆ. ವಿಶೇಷವಾಗಿ ಚಿತ್ತೆ ಮಳೆ ಬಂದಾಗ ಮುತ್ತಿನಂತಹ ಬೆಳೆ ಬರಲು ಸಾಧ್ಯವಿಲ್ಲ ಎನ್ನುತ್ತಾನೆ. 'ಚಿತ್ತಿಯ ಮಳೆ ಹೊಯಿದು ಮುತ್ತಾಗಬಲ್ಲುದೆ.........'. ಸ್ವಾತಿಯ ಮಳೆ ಸುರಿದಾಗ ಮುತ್ತುಗಳಾಗುತ್ತವೆ ನಂಬಿಕೆ ನಮ್ಮ ಸಂಸ್ಕೃತಿಯಲ್ಲಿದೆ. ಪ್ರಾಯಶಃ ಸ್ವಾತಿ ಮಳೆ ತುಂಬಾ ಮಹತ್ವದ

ಕಾಲದಲ್ಲಿ ಬರುತ್ತದೆ. ಈ ಮಳೆಗೆ ಉತ್ತರಕರ್ನಾಕದ ಅನೇಕ ಭಾಗಗಳಲ್ಲಿ ಬಿಳಿಜೋಳ ಮತ್ತು ಕಡಲೆ ಬಿತ್ತುತ್ತಾರೆ. ಅಂದರೆ ಈ ಮಳೆಗೆ ಬಿತ್ತಿದ ಜೋಳ ಮತ್ತು ಕಡಲೆ ಸಂಮೃದ್ದವಾಗಿ ಬೆಳೆದು ಮುತ್ತಿನಂತಹ ಬೆಳೆ ಬರುತ್ತದೆ ಎಂಬ ನಂಬಿಕೆ ರೈತರದ್ದಾಗಿದೆ. 'ಸ್ವಾತಿಯ ಹನಿ ಬಿದ್ದು ಜಾತಿಯ ಮುತ್ತಾದಂತೆ..........' ಎಂದು ಸರ್ವಜ್ಞನು ಸ್ವಾತಿ ಮಳೆಯನ್ನು ಕುರಿತು ಹೇಳುತ್ತಾನೆ.

ಯಾವ ಯಾವ ರಾಶಿಗಳಲ್ಲಿ ಗುರು ಪ್ರವೇಶವಾದಾಗ ಮಳೆಯಾಗುತ್ತದೆ. ಎಂಬ ಭವಿಷ್ಯವನ್ನು ಸರ್ವಜ್ಞ ಅನೇಕ ತ್ರಿಪದಿಗಳಲ್ಲಿ ಹೇಳುತ್ತಾನೆ.

"ಕುರಿಯನೇರಲು ಗುರುವು ಧರೆಗೆ ಹೆಮ್ಮಳೆಯಕ್ಕು ಪರಿಪರಿಧಾನ್ಯ ಹುಲುಸಕ್ಕು ....'

'ವೃಷಭನೇರಲು ಗುರುವು ವಸುಧೆಯೊಳು ಮಳೆ ಯಕ್ಕು ....'

'ಮಿಥುನಕ್ಕೆ ಗುರುಬರಲು ಮತ್ತು ಏಡಿ ಏರಲು ಗುರುವು ನೋಡೆ ಮಳೆಯಕ್ಕು..........'

'ಕನ್ಯೆಕ್ಕೆ ಗುರು ಬರಲು ಚಿನ್ನದ ಮಳೆಯಕ್ಕು ....'

'ತುಲವನೇರಲು ಗುರುವು ನೆಲೆಯಾಗಿ ಮಳೆಯಕ್ಕು ...."[೨೩೪] ಗುರುವು ಕುರಿಯ ಮೇಲೆ ಸವಾರಿ ಮಾಡಲು ಭೂಮಿಗೆ ದೊಡ್ಡ ಮಳೆ ಬಂದು, ಅನೇಕ ಬಗೆಯ ಧಾನ್ಯಗಳು ಹುಲುಸಾಗಿ ಬೆಳೆಯುತ್ತವೆ. ಗುರುವು ಎತ್ತನ್ನು ಏರಲು ಭೂಮಿಯಲ್ಲಿ ಮಳೆಯಾಗಿ, ಮಕ್ಕಳು, ಸ್ತ್ರೀಯರು, ಆರೋಗ್ಯದಿಂದಿರುತ್ತಾರೆ. ಗುರುವು ಏಡಿ ಏರಿ ಬರಲು ಹಿಂಗಾರು ಮಳೆ ಬರುತ್ತದೆ. ಹಿಂಗಾರಿ ಬೆಳೆಗಳು ಉತ್ತಮವಾಗುತ್ತವೆ. ಗುರುವು ಕನ್ಯಾರಾಶಿಗೆ ಬರಲು ಚಿನ್ನದಂತ ಮಳೆ ಬಂದು ಹುಲುಸಾಗಿ ಬೆಳೆ ಬೆಳೆದು ಹೈನುಗಾರಿಕೆ ಹೆಚ್ಚಾಗುತ್ತದೆ. ಗುರುವು ತುಲಾರಾಶಿಗೆ ಬರಲು ಖಂಡಿತವಾಗಿಯೂ ಮಳೆ ಬಂದು ಫಲ, ಧಾನ್ಯ, ಬೆಳಸುಗಳು ಹುಲುಸಾಗಿ ಪ್ರಜೆಗಳಿಗೆ ಸಂಮೃದ್ಧಿಯಾಗುತ್ತದೆ ಎಂದು ನುಡಿಯುತ್ತಾನೆ. ಹೀಗೆ ಮಳೆ ಬರುವ ಸೂಚನೆಗಳು, ಮಳೆಯ ಪ್ರಮಾಣ, ನಕ್ಷತ್ರಾದಿಗಳ ಹಿನ್ನಲೆಯಲ್ಲಿ ಮಳೆಯನ್ನು ಕುರಿತು ಹೇಳುವುದು, ಗುರುಗ್ರಹದ ಪ್ರವೇಶದಿಂದ ಮಳೆ ಬೆಳೆಯನ್ನು ಕುರಿತಾಗಿ ಮಾಹಿತಿ ನೀಡಿರುವುದು ದೇಶಿ ಸಾಹಿತ್ಯ ಕೃತಿಗಳಲ್ಲಿ ದೊರೆಯುತ್ತದೆ. ಇಂದಿನ ಹವಮಾನ ತಜ್ಞರಿಗಿಂತ ನಮ್ಮ ಪ್ರಾಚೀನರು ಬದುಕಿನ ಅನುಭವಗಳ ಹಿನ್ನಲೆಯಲ್ಲಿ ಎಷ್ಟು ಪ್ರಾವಿಣ್ಯತೆಯನ್ನು ಪಡೆದಿದ್ದರು ಎಂಬುದನ್ನು ತಿಳಿಯ ಬಹುದಾಗಿದೆ. ಇದು ನಮ್ಮ ಮುಂದಿನ ಪೀಳಿಗೆಗೆ ದಾರಿದೀಪವಾಗಬಲ್ಲದು.

ನೀರಾವರಿ ವ್ಯವಸ್ಥೆ : ಖುಷ್ಕಿ ಬೇಸಾಯಕ್ಕೆ ಮಳೆಯ ನೀರೆ ಆಧಾರ. ನೀರಾವರಿಯ ಸಾಗುವಳಿಗೆ ಬಾವಿ, ಕೆರೆ, ನದಿ, ಕಾಲುವೆಯಿಂದ ನೀರನ್ನು ಬಳಸಲಾಗುತ್ತದೆ. ಕೆರೆ ಬಾವಿಯ ನೀರನ್ನು ತೋಟಗಳಿಗೆ ಏತದಿಂದ ನೀರೆತ್ತಿ ಹಾಯಿಸುತ್ತಿದ್ದ ಅಂಶಗಳು ಕಂಡುಬರುತ್ತವೆ. ಅಂದು ರಾಟಾಳದ ಬಳಕೆಯು ಇದ್ದಂತಿದೆ. ಕೆರೆಗಳ ನಿರ್ಮಾಣ, ತೂಬಿನ ವ್ಯವಸ್ಥೆ, ಕೆರೆಗಳ ದುರಸ್ತಿ ಕುರಿತಾದ ಮಾಹಿತಿ ಅನೇಕ ಕಡೆ ದೊರೆಯುತ್ತದೆ.

ಕೆರೆಯ ನೀರಾವರಿ ವ್ಯವಸ್ಥೆ ಕುರಿತು ಅಲ್ಲಮನ ವಚನವೊಂದರಲ್ಲಿ ಕೆರೆ, ಕೆರೆಯ ನಿರ್ಮಾಣ, ಏರಿ, ಕೋಡಿ, ತೂಬಿನ ವ್ಯವಸ್ಥೆಯ ಮಾಹಿತಿ ದೊರೆಯುತ್ತದೆ.

"ಗಗನದ ಮೇಘಂಗಳು ಸುರಿದಲ್ಲಿ ಒಂದು ಹಿರಿಯ ಕೆರೆ

ತುಂಬಿತ್ತು ಆ ಕೆರೆಗೆ ಏರಿ ಮೂರು.................... ಆ ಏರಿಯೊಳಗೆ ಒಂಭತ್ತು

ತೂಬನಬ್ಬಿದಡೆ............."[೨೩೫]

ಅಧ್ಯಾತ್ಮಿಕ ಹಿನ್ನಲೆಯಲ್ಲಿ ದೇಹವನ್ನು ಕೆರೆಗೆ ಹೋಲಿಸಿದರು ಲೌಕಿಕ ಬದುಕಿನಲ್ಲಿ ನಿರ್ಮಾಣ ಮಾಡುವ ಕೆರೆಯ ವರ್ಣನೆ ಇಲ್ಲಿ ಕಂಡುಬರುತ್ತದೆ. ಆಕಾಶದಲ್ಲಿ ಮೋಡಗಳು ಹೆಚ್ಚು ಮಳೆ ಸುರಿಸಿದಾಗ ನೀರಿನಿಂದ ಕೆರೆತುಂಬಿ, ಏರಿಯ ಮುಟ್ಟಿ ಆ ಕೆರೆಗೆ ತೂಬಿನ ವ್ಯವಸ್ಥೆಯಿದ್ದು, ಹೆಚ್ಚು ನೀರಿನ ಹರಿವು ಬಂದಾಗ ಹರಿಬಿಡುವುದು ಎಂದು ಹೇಳಲಾಗಿದೆ. ಇನ್ನೊಂದು ವಚನದಲ್ಲಿ "ಕೆರೆಯ ತೂಂಬಿನಾಪ್ಯಾಯನದಂತೆ............. ಕೆರೆ ತುಂಬಿ ಬಿಡಲೊಡನೆ ಹಲವು ಕದಳಿಗಳೆಲ್ಲಾ ತಣಿದವಯ್ಯಾ..........."[೨೩೬] ಎನ್ನಲಾಗಿದೆ. ಅಗಾಧವಾದ ಜ್ಞಾನದ ಗಣಿಯಾಗಿರುವ ಅಲ್ಲಮ ತನ್ನ ಅರಿವಿನ ಜ್ಞಾನವನ್ನು ಶರಣರ ಮೇಲೆ ಹರಿಸುತ್ತಾ ಆ ಭಕ್ತರೆಂಬ ಕದಳಿಗಳನ್ನು ಸಂತೃಪ್ತಿಗೊಳಿಸಿದನು; ಎಂದು ಹೇಳುವಲ್ಲಿ ಕೆರೆಯ ಪ್ರತಿಮೆಯನ್ನು ಬಳಸಲಾಗಿದೆ. ಕೃಷಿಕನು ಅಪಾರವಾದ ಕೆರೆಯ ನೀರನ್ನು ತೂಬಿನ ಮೂಲಕ ತನ್ನ ತೋಟಗಳಿಗೆ ಜಾಣತನದಿಂದ ಹಾಯಿಸಿಕೊಂಡು ಉತ್ತಮ ಬೆಳೆ ಬೆಳೆಯುತ್ತಾನೆ ಎಂಬ ಮಾಹಿತಿ ದೊರೆಯುತ್ತದೆ. ಕರ್ಮಯೋಗಿಯಾದ ಸಿದ್ಧರಾಮನು ಕೆರೆ ಕಟ್ಟೆಗಳ ನಿರ್ಮಾಣ ಮಾಡಿ ಲೌಕಿಕ ಜನತೆಗೆ ಉಪಕಾರಿಯಾಗಿದ್ದನು. ಅವನ ವಚನವೊಂದರಲ್ಲಿ ಕೆರೆಯನ್ನು ಕುರಿತು 'ನಾ ಮಾಡಿದ ಕೆರೆಯ ನಿರ್ಮಾಣ ರಾಜನು ಮಾಡುವ ಕೆರೆಗಿಂತ ಶ್ರೇಷ್ಠ'ವೆಂಬ ಮಾತು ಈ ವಚನದಲ್ಲಿ ಕಂಡುಬರುತ್ತದೆ. "ನಾ ಮಾಡಿದ ಕೆರೆಯತ್ತ ಕರಿಕಾಲಚೋಳ ಮಾಡಿದ ಕೆರೆಯತ್ತ.........."[೨೩೭] ಎನ್ನುತ್ತಾನೆ.

ಅಕ್ಕಮಹಾದೇವಿ ವಚನವೊಂದರಲ್ಲಿ ಕೆರೆಯನ್ನು ಕುರಿತು ಹೀಗೆ ಹೇಳುತ್ತಾಳೆ 'ಅರಲುಗೊಂಡ ಕೆರೆಗೆ ತೊರೆಬಂದು ಹಾಯ್ದಾಂತಾಯಿತ್ತು.............'. ಸಕಾಲದಲ್ಲಿ ಮಳೆ ಬಾರದೇ ಇದ್ದಾಗ ಕೆರೆಗಳು ಒಣಗುತ್ತವೆ. ಅಂತಹ ಕೆರೆಗಳಿಗೆ ಮಳೆಯ ಪ್ರವಾಹದ ನೀರು ಹರಿದುಬಂದಾಗ ಇಡಿ ಕೆರೆ ತುಂಬಿ ಹರಿಯುತ್ತದೆ ಎನ್ನುತ್ತಾಳೆ. ಇನ್ನೊಂದು ವಚನದಲ್ಲಿ "ಕಟ್ಟಿದ ಕೆರೆಗೆ ಕೋಡಿ ಮಾಡರು, ಹುಟ್ಟಿದ ಪ್ರಾಣಿಗೆ ಸಾವು ಖಚಿತ............."[೨೩೮] ನೀರಿನ ಪ್ರಮಾಣ ಹೆಚ್ಚಾದಾಗ ಕೋಡಿಯ ಮೂಲಕ ನೀರು ಹರಿದು ಹೋಗುತ್ತದೆ. ಕೋಡಿ ಇಲ್ಲದೇ ಹೋದರೆ ಕೆರೆಗೆ ಅಪಾಯ ತಪ್ಪಿದ್ದಲ್ಲ. ಎಂದು ಹೇಳುವಾಗ ಕೋಡಿಯ ಮಹತ್ವವನ್ನು ಕುರಿತು ತಿಳಿಸಲಾಗಿದೆ.

ಬಾವಿ ನೀರಾವರಿ ವ್ಯವಸ್ಥೆ : ತೋಟ, ಕೈತೋಟಗಳಿಗೆ ಮತ್ತು ತರಕಾರಿ ಬೆಳೆಗಳಿಗೆ ಸಣ್ಣಪ್ರಮಾಣದ ನೀರಾವರಿಯಾಗಿ ಬಾವಿ ನೀರನ್ನು ಬಳಸಲಾಗುತ್ತದೆ. ಬಸವಣ್ಣನವರ ವಚನದಲ್ಲಿ ಭಕ್ತರನ್ನು ಕುರಿತು ವಿಡಂಬನೆ ಮಾಡುವಾಗ ಏತದ ಕಲ್ಪನೆಯನ್ನು ಬಳಸಲಾಗಿದೆ. ಈ ಸಾಧನದಿಂದ ಬಾವಿಯ ನೀರನ್ನು ಮೇಲೆತ್ತಿ ಅನೇಕ ತೋಟದ ಬೆಳೆಗಳಿಗೆ ಹರಿಸುವಂತಹ ನೀರಾವರಿ ವ್ಯವಸ್ಥೆಯನ್ನು ಕಾಣಬಹುದಾಗಿದೆ. "ಏತ ತಲೆವಾಗಿದಡೇನು ಗುರುಭಕ್ತನಾಗಬಲ್ಲುದೆ............."[೨೩೯] ಅಲ್ಲಮನ ವಚನವೊಂದರಲ್ಲಿ ಬಾವಿಯ ಉಲ್ಲೇಖ ಕಂಡುಬರುತ್ತದೆ. "................ ಆ ಕೆರೆಗೆ ಏರಿ ಮೂರು ಅಲ್ಲಿ ಒಳಗೆ ಹತ್ತು ಬಾವಿ ಹೊರಗೆ ಐದುಬಾವಿ.............' ಕೆರೆಗಳು ಬೇಸಿಗೆ ಕಾಲದಲ್ಲಿ ಮಳೆಯಿಲ್ಲದೇ ಬತ್ತಿ ಬರಿದಾಗುತ್ತವೆ. ಅಂತಹ ವೇಳೆಯಲ್ಲಿ ನೀರನ್ನು ಪಡೆಯಲು ಕೆರೆಯ ಒಳಗಡೆಯೇ ಬಾವಿಯನ್ನು ತೋಡುತ್ತಿದ್ದರು ಎಂದು ತಿಳಿದುಬರುತ್ತದೆ. ಸ್ವತಂತ್ರ ಸಿದ್ಧಲಿಂಗೇಶ್ವರರ ವಚನದಲ್ಲಿ "ರಾಟಾಳದಂತೆ ತನುವತೋಡುತ್ತಾ ಬಿಡುತ್ತಾ ತಿರುಗುತ್ತಿಹರಲ್ಲ ...."[೨೪೦] ತೋಟದಲ್ಲಿ ರಾಟಾಳದಿಂದ ಬಾವಿಯ ನೀರನ್ನು ನೀರಾವರಿಗೆ ಬಳಸುತ್ತಿದ್ದ ಅಂಶ ತಿಳಿದುಬರುತ್ತದೆ. ಒಟ್ಟಾರೆಯಾಗಿ ಬಾವಿಯ ನೀರಾವರಿ ವ್ಯವಸ್ಥೆಯಲ್ಲಿ ಏತ, ರಾಟಾಳದಂತಹ ಉಪಕರಣ ಬಳಸಿ ತೋಟಗಳಿಗೆ ನೀರುಣಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ.

ಬೆಳೆಯ ಪ್ರಕಾರಗಳು : ಆಹಾರ ಬೆಳೆಗಳು, ಮಿಶ್ರಬೆಳೆಗಳು, ದ್ವಿದಳ ಬೆಳೆಗಳು ಮತ್ತು ತೋಟದ ಬೆಳೆಗಳೆಂದು ಕರೆಯಬಹುದು.

ಆಹಾರದ ಬೆಳೆಗಳು : ಎಲ್ಲಾ ಪ್ರಾಣಿಸಂಕುಲಗಳು ಬದುಕಿಬಾಳಲು ಆಹಾರದ ಅವಶ್ಯಕತೆ ಇದೆ. ಪ್ರಪಂಚದಾದ್ಯಂತ ಹವಾಮಾನಕ್ಕನುಗುಣವಾಗಿ ಹಲವಾರು ಬಗೆಯ ಆಹಾರಧಾನ್ಯಗಳನ್ನು ಬೆಳೆದು ಉಪಯೋಗಿಸಲಾಗುತ್ತದೆ. ಅಂತವುಗಳಲ್ಲಿ ಪ್ರಮುಖವಾದವುಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಲಾಗಿದೆ.

ಜೋಳ ಒಂದು ಪ್ರಮುಖವಾದ ಆಹಾರ ಬೆಳೆಯಾಗಿದೆ. ಉತ್ತರಕರ್ನಾಟಕದ ಭಾಗದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಕಾಡಸಿದ್ದೇಶ್ವರರ ವಚನದಲ್ಲಿ "......... ಹೊಲ ಹಸನಮಾಡಿ ಗೋಧಿ, ಕಡಲೆ, ಜೋಳ ಮೊದಲಾದ ಹದಿನೆಂಟು ಧಾನ್ಯ.........."[೨೪೧] ಹದಿನೆಂಟು ಬಗೆಯ ಧಾನ್ಯಗಳಲ್ಲಿ ಜೋಳ ಪ್ರಮುಖವಾದ ಬೆಳೆಯಾಗಿದೆ. ಹರಿಶ್ಚಂದ್ರ ಕಾವ್ಯದಲ್ಲಿ "............ತಳಿತ ರನ್ನದ ತೆನೆಯ ತೆಕ್ಕೆಮಿಕ್ಕೊಪ್ಪಿದವು.........."[೨೪೨] ಜೋಳದ ತೆನೆಯನ್ನು ರನ್ನಕ್ಕೆ ಹೋಲಿಸಲಾಗಿದೆ. ತುಂಬ ಎತ್ತರಕ್ಕೆ ಬೆಳೆಯುವ ದೊಡ್ಡ ಜೋಳದ ಕಾಳುಗಳು ರನ್ನದಂತೆ ಕಾಣುತ್ತವೆ. ಇದು ಒಂದು ಜೋಳದ ಜಾತಿಯ ತಳಿಯಾಗಿದೆ. ರಾಜಶೇಖರ ವಿಳಾಸದಲ್ಲಿಯೂ '................ ತೆನೆಯಿಲ್ಲದ ನವಪಲಾಲದಂತಿರೆ ಧರೆಯೊಳ್.........'. ಜೋಳದ ತೆನೆ ಭೂಮಿಯಲ್ಲಿದ್ದರೆ ಅದು ಸಮೃದ್ಧತೆಯ ಸಂಕೇತವಾಗಿದೆ. ತೆನೆಯಿಲ್ಲದೆ ಇದ್ದರೆ ಆ ಭೂಮಿ ತನ್ನ ಕಾಂತಿಯನ್ನು ಕಳೆದುಕೊಳ್ಳುತ್ತದೆ ಎಂದು ವರ್ಣಿಸಲಾಗಿದೆ.

ಭತ್ತ ಆಹಾರಧಾನ್ಯಗಳಲ್ಲಿ ಒಂದಾಗಿದೆ. ಪ್ರಾಚೀನಕಾಲದಿಂದಲೂ ಬಹುಮನ್ನಣೆ ಪಡೆದ ಧಾನ್ಯವಾಗಿದ್ದು, ಬಹುಜನಕ್ಕೆ ಪ್ರಿಯವಾದ ಆಹಾರವಾಗಿದೆ. ಹಲವಾರು ತಳಿಗಳನ್ನು ಹೊಂದಿದೆ. ಇಂದು ಅನೇಕ ಕಡೆಯಲ್ಲಿ ಬೆಳೆಯಲಾಗುತ್ತದೆ. ಹೊಡೆಹುಲ್ಲು ಬಂಕಣ್ಣನ ವಚನದಲ್ಲಿ "ನೆಲ್ಲು ನೆಲದಲ್ಲಿಯೇ ಅಳಿದು ಹುಲ್ಲಿನ ಒಡಲಲ್ಲಿಯೆ ಜನಿಸಿ.........."[೨೪೩] ಭತ್ತದ ಬೀಜದಿಂದ ಭತ್ತದ ಹುಲ್ಲು ಹುಟ್ಟುತ್ತದೆ, ಆ ಹುಲ್ಲಿನಲ್ಲಿ ಭತ್ತ ಅಡಗಿರುತ್ತದೆ ಎನ್ನುತ್ತಾನೆ. ಸಿದ್ದರಾಮಚರಿತೆಯಲ್ಲಿ '.........ಮನೆಯ ಭತ್ತಮಂ ಕೊಟ್ಟಣಕ್ಕಿಕ್ಕ ಬರುತಿದೆ...........' ಮನೆಯಲ್ಲಿಯ ಒರಳು ಕಲ್ಲಿನಿಂದ ಭತ್ತ ಕುಟ್ಟಿ ಅಕ್ಕಿ ತೆಗೆಯುವ ಅಂಶ ತಿಳಿಯುತ್ತದೆ. ಅಲ್ಲದೇ ಹಾಲುತುಂಬಿದ ಭತ್ತದ ಪೈರುಗಳಿಗೆ ಸಾಲು ಸಾಲಾಗಿ ಬರುವ ಹಕ್ಕಿಗಳ ವರ್ಣನೆಯನ್ನು ಹೀಗೆ ಮಾಡಲಾಗಿದೆ. "ತೂಗುತೆ ತೊನೆಯುತೆ ಬಳ್ಕುತೆ ಬಾಗುತೆ ಕಂಪಿಡುತೆ ಕನಕ ರುಚಿದಾಳುತ್ತಂ.......... ಪಾಲ್ತುಂಬಿದ ಸಾಲ್ದೆನೆಗಳ ನೆಲ್ದುಱುಗಲನೊಲ್ದುಸೀಳೆ.........."[೨೪೪] ಎನ್ನಲಾಗಿದೆ. ಅನೇಕ ಶರಣರು, ಸರ್ವಜ್ಞನ ವಚನಗಳಲ್ಲಿಯೂ ಭತ್ತವನ್ನು ಬಿತ್ತಿ ಬೆಳೆಯುವ ಅಂಶ ಅಲ್ಲಲ್ಲಿ ಕಂಡುಬರುತ್ತದೆ.

ಗೋಧಿ ಏಕದಳದ ಆಹಾರಧಾನ್ಯ. ಗೋಧಿಯಲ್ಲಿ ಅನೇಕ ಬಗೆಯ ಗೋಧಿ ತಳಿಗಳಿವೆ. ಅಲ್ಲಮಪ್ರಭುದೇವರ ವಚನದಲ್ಲಿ ಹದಿನೆಂಟು ಬಗೆಯ ಧಾನ್ಯಗಳೆಂದು ಹೇಳುವಾಗ ಗೋಧಿಯ ಉಲ್ಲೇಖ ಕಂಡುಬರುತ್ತದೆ. "ತಮಗೆಲ್ಲಿಯದೇ ಆಫಲವು ಹದಿನೆಂಟುಧಾನ್ಯಕ್ಕಲ್ಲದೇ?..............."[೨೪೫] ಅಲ್ಲದೆ ಕಾಡಸಿದ್ದೇಶ್ವರರ ವಚನದಲ್ಲಿ "............ಹೊಲ ಹಸನಮಾಡಿ ಗೋಧಿ, ಕಡಲೆ, ಜೋಳ ಮೊದಲಾದ ಹದಿನೆಂಟು ಧಾನ್ಯ ಜೀನಸಪಿಲ್ಲದೆ ಬಿತ್ತಿ ಬೆಳೆದು..............."[೨೪೬] ಹಸನಾದ ಹೊಲದಲ್ಲಿ ಗೋಧಿ ಕಡಲೆಯ ಬಿತ್ತಿ ಬೆಳೆಯುವ ಅಂಶ ಕಂಡು ಬರುತ್ತದೆ.

ಖುಷ್ಕಿ ಭೂಮಿಯಲ್ಲಿ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ನವಣೆ, ಹಾರಕ, ಬರಗು, ಸಾವೆಗಳಂತಹ ಬೆಳೆಗಳನ್ನು ಬೆಳೆಯಲಾಗುತ್ತದೆ. ಅನೇಕ ವಚನಕಾರರಲ್ಲಿ ಈ ಬೆಳೆಗಳ ಉಲ್ಲೇಖ ಕಂಡುಬರುತ್ತದೆ. ಇವು ಆಹಾರಧಾನ್ಯಗಳಾಗಿದ್ದು, ಬಡವರ ಪಾಲಿನ ಭಾಗ್ಯದ ಬೆಳೆಗಳಾಗಿವೆ.

ಸಿದ್ದರಾಮೇಶ್ವರರ ವಚನದಲ್ಲಿ "ನೀರಿಲ್ಲದ ಭೂಮಿಯಲ್ಲಿ ಮೂರು ಹೇರು ನವಣೆಯ ಬೆಳೆದುದ ಕಂಡೆ ಆ ನವಣೆ................"[೨೪೭] ನವಣೆ ಖುಷ್ಕಿ ಭೂಮಿಯಲಿ ಬೆಳೆಯುವ ಒಂದು ಆಹಾರ ಧಾನ್ಯ. ಉರುಟಾದ ಆಕಾರದ ಸಣ್ಣ ಕಾಳುಗಳು. ಕರ್ನಾಟಕದ ಬಳ್ಳಾರಿ, ಗುಲಬರ್ಗಾ, ರಾಯಚೂರು, ಬಿಜಾಪುರ ಮತ್ತು ಚಿತ್ತದುರ್ಗ ಜಿಲ್ಲೆಗಳಲ್ಲಿ ಬೆಳೆಯುತ್ತಾರೆ. ಸಾಧಾರಣವಾಗಿ ಮೂರು ತಿಂಗಳಲ್ಲಿ ಕಟಾವಿಗೆ ಬರುತ್ತದೆ. ಅನೇಕ ವಿಧಗಳು ಉಂಟು. ಸೊಡ್ಡಳ ಬಾಚರಸನ ವಚನದಲ್ಲಿ ".........ನವಣೆ ಹಾರಕ ಬರಗು ಸಾವೆ ದೂಸಿಗಳೆಂಬುಧಾನ್ಯ ಐವತ್ತು ಖಂಡುಗ ...."[೨೪೮] ನವಣೆ ಹಾರಕ, ಬರಗು, ಸಾವೆ ಮುಂತಾದ ಧಾನ್ಯಗಳನ್ನು ಅಳೆದು ತೆಗೆದುಕೊಳ್ಳುವ, ಕೊಡುವ ಅಂಶ ಕಂಡುಬರುತ್ತವೆ. ಒಟ್ಟಾರೆಯಾಗಿ ಈ ಮೇಲಿನ ಧಾನ್ಯಗಳು ಆಹಾರದ ಬೆಳೆಗಳ ಗುಂಪಿಗೆ ಸೇರುತ್ತವೆ.

ಮಿಶ್ರ ಬೆಳೆಗಳು : ಬೆಳೆ ಬೆಳೆಯುವ ಭೂಮಿಯಲ್ಲಿ ಒಂದೇ ಅವಧಿಯಲ್ಲಿ ಹಲವಾರು ಬೆಳೆಗಳನ್ನು ಬೆಳೆಯಲಾಗುತ್ತದೆ. ಇದನ್ನೇ ಮಿಶ್ರಬೆಳೆಗಳೆಂದು ಕರೆಯಲಾಗಿದೆ. ಜೋಳದ ಜೊತೆಗೆ ದ್ವಿದಳ ಧಾನ್ಯಗಳು, ಸಾಸಿವೆ, ಎಣ್ಣೆಯ ಬೀಜ ಬೆಳೆಯಲಾಗುತ್ತದೆ. ಜೋಳ, ರಾಗಿ, ಶೇಂಗಾ ಬೆಳೆಗಳ ಜೊತೆ ಅನೇಕ ಉಪಬೆಳೆಗಳನ್ನು ರೈತರು ಬೆಳೆಯುತ್ತಾರೆ. ಹತ್ತಿ, ಮೆಣಸಿನಗಿಡ, ಈರುಳ್ಳಿ, ಬಳ್ಳೊಳ್ಳಿ, ಶುಂಠಿ ಮುಂತಾದವು ಮಿಶ್ರಬೆಳೆಗಳಾಗಿವೆ. ಇವುಗಳ ಉಲ್ಲೇಖ ಕಾಡುಸಿದೇಶ್ವರರ ವಚನದಲ್ಲಿ ಹೀಗೆ ಬರುತ್ತದೆ. ".......... ಶೀಗರೀ ಗಜಗ ಹಜ್ಜಿ ಉಳ್ಳಿ ಮೂಲಂಗಿ, ಬೆಳ್ಳೊಳ್ಳಿ, ಸಬ್ಬಸಗಿ, ನಾರುಗಡ್ಡೆ......... ತೆಂಗು, ಹಲಸು, ಮಾವು.........."[೨೪೯] ಹುರುಳಿ, ಮೂಲಂಗಿ, ಬೆಳ್ಳೊಳ್ಳಿ, ಸಬ್ಬಸಗಿ ಮುಂತಾದವು ಖುಷ್ಕಿ ಭೂಮಿಯಲ್ಲಿ ಬೆಳೆಯುವ ಮಿಶ್ರಬೆಳೆಗಳಾದರೆ, ತೆಂಗು ಮಾವು ಹಲಸು ತೋಟ, ಹೊಲದ ಬದುಗಳಲ್ಲಿ ಬೆಳೆಯುವ ಬೆಳೆಗಳಾಗಿವೆ. ಸಿದ್ದರಾಮ ಚರಿತ್ರೆಯಲ್ಲಿ ಅನೇಕ ಸಾಂಬಾರು ಪದಾರ್ಥಗಳ ಉಲ್ಲೇಖ ಕಂಡುಬರುತ್ತದೆ. "ಕ್ಷೀರ ದಧಿ ಮುದುಷ್ಯತಂಸಿತನಾಗರಂ ಮರಿಚ ಜೀರಕ್ಕಂ ಲವಣವೆಲ್ಲಾ..........."[೨೫೦] ಶುಂಠಿ, ಮೆಣಸು, ಜೀರಿಗೆ ಮುಂತಾದವು ಮಿಶ್ರಬೆಳೆಯಾಗಿ ಬೆಳೆಯಲಾಗುತ್ತದೆ ಎನ್ನುತ್ತಾರೆ.

ದ್ವಿದಳ ಧಾನ್ಯಗಳು : ಎರಡು ದಳಗಳಾಗಿ ಹೋಳಾಗುವ ಧಾನ್ಯಗಳನ್ನು ದ್ವಿದಳ ಧಾನ್ಯಗಳು ಎನ್ನುತ್ತಾರೆ. ಅನೇಕ ಕಾವ್ಯ, ಶಾಸನಗಳಲ್ಲಿ ವಿದಳ ಎಂದು ಕರೆಯಲಾಗಿದೆ. ಅಲ್ಲಮನ ವಚನದಲ್ಲಿ "ತಮಗೆಲ್ಲಿಯದೇ ಆಫಲವು ಹದಿನೆಂಟುಧಾನ್ಯಕ್ಕಲ್ಲದೇ?..............."[೨೫೧] ಹದಿನೆಂಟು ಬಗೆಯ ಧಾನ್ಯಗಳಲ್ಲಿ ಕಡಲೆ, ತೊಗರಿ, ಹುರುಳಿ, ಉದ್ದು, ಹೆಸರು, ದ್ವಿದಳ ಧಾನ್ಯಗಳಾಗಿವೆ. ಅಕ್ಕಮ್ಮನ ವಚನವೊಂದರಲ್ಲಿ "ಲತೆ ಪರ್ಣ ಮೊದಲಾದ ಪಚ್ಚೆ ಪೈರು ಗೆಣಸು ವಿದಳ ಹುಡಕಂ ಮುಟ್ಟದೆ ...."[೨೫೨] ಇಲ್ಲಿ ಪೈರು ಎಂಬುದು ಭತ್ತ, ರಾಗಿ, ಜೋಳ ಮುಂತಾದ ಆಹಾರ ಧಾನ್ಯಗಳನ್ನು ಸೂಚಿಸಿದರೆ, ಪಚ್ಚೆ ಎಂದರೆ ಹಸಿರು ಬಣ್ಣದ ಕಾಯಿಪಲ್ಲೆಯನ್ನು ಸೂಚಿಸುತ್ತದೆ. ಗೆಣಸು ಗೆಡ್ಡೆಯ ಬಗೆಯಲ್ಲಿ ಒಂದಾದರೆ, ವಿದಳ ಎಂಬುದು ದ್ವಿದಳ ಧಾನ್ಯಗಳನ್ನು ಸೂಚಿಸುವಂತಿದ್ದು ಇದು ಬೆಳೆಗಳ ವರ್ಗೀಕರಣ ಮಾಡಿರುವಂತಿದೆ. ಕಾಡುಸಿದ್ಧೇಶ್ವರರ ವಚನವೊಂದರಲ್ಲಿ "ಹಾದಿ ಹೊಲವ ಮಾಡಿ ....ಗೋಧಿ, ಕಡಲೆ, ಜೋಳ, ಮೊದಲಾದ ಹದಿನೆಂಟು ಧಾನ್ಯ..........."[೨೫೩] ಎನ್ನಲಾಗಿದೆ, ದ್ವಿದಳ ಧಾನ್ಯದ ಗುಂಪಿಗೆ ಸೇರಿದ ಕಡಲೆಯ ಉಲ್ಲೇಖ ಕಂಡುಬರುತ್ತದೆ.

ತೋಟದ ಬೆಳೆಗಳು : ತೋಟದ ಬೆಳೆ ವಾಣಿಜ್ಯ ಬೆಳೆಯಾಗಿದೆ. ತೋಟ ಹೊಂದಿದ ಕೃಷಿಕರು ಆರ್ಥಿಕವಾಗಿ ಸಬಲರಾಗಿರುತ್ತಾರೆ. ತೋಟದಲ್ಲಿ ಅನೇಕ ಬಗೆಬಗೆಯ ಫಸಲುಗಳನ್ನು ಬೆಳೆಯಬಹುದಾಗಿದೆ.

ಅಡಿಕೆ, ತೆಂಗು, ಬಾಳೆ, ಕಾಫೀ, ಟೀ, ಎಲೆಬಳ್ಳಿಗಳನ್ನು ಪ್ರಮುಖ ಬೆಳೆಗಳಾಗಿ ಬೆಳೆಯುತ್ತಾರೆ. ದೇಶೀ ಸಾಹಿತ್ಯಕೃತಿಗಳಲ್ಲಿ ತೋಟದ ಬೆಳೆಯ ಉಲ್ಲೇಖ ಅನೇಕ ಕಡೆ ಕಂಡುಬರುತ್ತದೆ. ಅಂತಹ ಅಂಶಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಅಕ್ಕಮಹಾದೇವಿಯ ವಚನದಲ್ಲಿ ತೋಟದ ಬೆಳೆಗಳ ಉಲ್ಲೇಖ ಕಂಡುಬರುತ್ತದೆ. "ಈಳೆ ನಿಂಬೆ ಮಾವು .... ಕಳವೆ ರಾಜಾನ್ನ....... ಮಲ್ಲಿಗೆ ಪಚ್ಚೆ.........."[೨೫೪] ಈಳೆ, ಮಾವು, ನಿಂಬೆ ಮುಂತಾದವು ಹುಳಿ ಹಣ್ಣಿನ ವರ್ಗದವು, ಕಬ್ಬು, ಬಾಳೆ, ಹಲಸು, ತೆಂಗು ಸಿಹಿರುಚಿಯ ವರ್ಗದವು, ಭತ್ತ, ರಾಜಾನ್ನ ಆಹಾರದ ವರ್ಗಕ್ಕೆ ಸೇರಿದರೆ; ಮರುಗ, ಮಲ್ಲಿಗೆ,ಪಚ್ಚೆ ಹೂವಿನ ವರ್ಗದ ಬೆಳೆಗಳಾಗಿವೆ. ಅಂಬಿಗರ ಚೌಡಯ್ಯನ ವಚನದಲ್ಲಿ "ಹಿತ್ತಲ ಸೊಪ್ಪಿಂಗೆ ನೀರ ಹೊಯಿದು ಮತ್ತೆ ಪುನರತಿಯಾಗಿ ಕೊಯಿವವನಂತೆ ...."[೨೫೫] ಸೊಪ್ಪು ತೋಟದಲ್ಲಿ ಬೆಳೆಯುವ ಉಪಬೆಳೆಯಾಗಿದೆ. ಮನೆಯ ಹಿಂಭಾಗದ ಹಿತ್ತಲಿನಲ್ಲಿಯೂ ಬೆಳೆಯುತ್ತಾರೆ. ಕೆಲವು ತರಹದ ಸೊಪ್ಪುಗಳನ್ನು ಮೇಲ್ಭಾಗ ಮಾತ್ರ ಕೈಯಿಂದ ಕೊಯ್ಯುತ್ತಾರೆ. ನಂತರ ಅದು ಮತ್ತೆ ಚಿಗುರಿ ಸೊಪ್ಪು ನೀಡುತ್ತದೆ. ಎಂಬ ಅಂಶ ಕಂಡುಬರುತ್ತದೆ.

ಜೇಡರದಾಸಿಮಯ್ಯನ ವಚನದಲ್ಲಿ ತೋಟದ ಬೆಳೆಯಾದ ಅಡಿಕೆಯ ಉಲ್ಲೇಖ ಕಂಡುಬರುತ್ತದೆ. ಅಲ್ಲದೇ ಮಾದರಧೂಳಯ್ಯನ ವಚನವೊಂದರಲ್ಲಿ ತೆಂಗಿನಮರ ಕಾಯಿ ಬಿಡುವ ವಿಧಾನವನ್ನು ಹೀಗೆ ತಿಳಿಸುತ್ತಾನೆ. "ಏರಿ ಯೆಂಗಿನ ಮರ ...... ನೀರು ಬಲಿದು ಅದರೊಳಗೆ ಅರತು, ಆಸಾರವೆ ಕಾಯದಲ್ಲಿ, ಆ ಕಾಯ ತುಷಾರಹಿಂಗಿ, ನೆರೆಬಲಿತು ಹಣ್ಣು ಎಣ್ಣೆಯಾಗಿ ನೀರಲ್ಲಿ ಅಡಗಿತ್ತು ...."[೨೫೬] ತೆಂಗಿನ ಕಾಯಿಯಲ್ಲಿ ಭೂಮಿಯ ನೀರು ಸೇರಿ, ಆ ನೀರು ತಿರುಳಾಗಿ, ತಿರುಳು ಬಲಿತು ಕೊಬ್ಬರಿಯಾಗಿ ಕೊಬ್ಬರಿಯಿಂದ ಎಣ್ಣೆ ಬರುತ್ತದೆ ಎನ್ನುತ್ತಾನೆ.

ರಾಘವಾಂಕನ ಸೋಮನಾಥ ಚರಿತ್ರೆಯಲ್ಲಿ ಅನೇಕ ತೋಟದ ಬೆಳೆಗಳ ಮಾಹಿತಿ ದೊರೆಯುತ್ತವೆ. ವಸಂತ ಮಾಸದಲ್ಲಿ ಪ್ರಕೃತಿಯಲ್ಲಿ ಹಲವು ಬಗೆಯ ಹಣ್ಣುಗಳು ಕಂಗೊಳಿಸುತ್ತವೆ ಎಂದು ವರ್ಣಿಸುತ್ತಾನೆ. ಮಾವು, ನೇರಳೆ, ನಿಂಬೆ, ಬಾಳೆ, ಗೋರಂಟಿ, ಹಲಸು, ದಾಳಿಂಬೆ, ಕಿತ್ತಳೆ ಮುಂತಾದವು ಮತ್ತು ಕಬ್ಬಿನ ಬೆಳೆಯನ್ನು ಕುರಿತು ಈ ರೀತಿ ಹೇಳುತ್ತಾನೆ. "ಬಿಳಿಯ ಕಬ್ಬಿನ ಜಂತೆಯೊತ್ತಿನೊಳು ಕೇತಕೀ ದಳದ ತಗಡವಕೆ ಮುಡಿವಾಳದ.........."[೨೫೭] ಕಬ್ಬಿನ ಒಂದು ಪ್ರಭೇದವಾದ ಬಿಳಿಯ ಕಬ್ಬಿನ ಉಲ್ಲೇಖ ಕಂಡುಬರುತ್ತದೆ. ಹರಿಶ್ಚಂದ್ರ ಕಾವ್ಯದಲ್ಲಿಯೂ ಕಾಡಿನ ಭೂಮಿ ಮತ್ತು ಎರೆಯ ನೆಲದಲ್ಲಿ ಕರಿಬಣ್ಣದ ಕಬ್ಬನ್ನು ಫಲವತ್ತಾದ ಭೂಮಿಯಲ್ಲಿ ಬೆಳೆಯುತ್ತಿದ್ದರು ಎಂದು ವರ್ಣಿಸಲಾಗಿದೆ. ಪ್ರಭುಲಿಂಗಲೀಲೆಯಲ್ಲಿ ಎಲ್ಲಾ ಕಾಲದಲ್ಲಿಯೂ ಫಲನೀಡುವಂತೆ ನೇರಳೆ, ಮಾವು, ದಾಳಿಂಬೆ, ತೆಂಗು, ಕಿತ್ತಳೆ ಬೆಳೆಯುತ್ತಿದ್ದರೆಂದೂ ಹೀಗೆ ಹೇಳುತ್ತಾನೆ. 'ಆವಕಾಲದಲಾದೊಡೆಯು ಫಲಪೀವುತಿಹ ಫಲತೆರೆದ ನೇಜಿಲು ....'[ಅ-೨,ಪ-೩] ಜೈಮಿನಿಭಾರತದಲ್ಲಿ ಅರಳಿದ ಬಾಳೆ ಮತ್ತು ತೆಂಗಿನ ಗಿಡ ಅನೇಕ ಬಗೆಬಗೆಯ ಕುಸುಮಗಳ ವರ್ಣನೆ ಕಂಡುಬರುತ್ತದೆ. ಬಾಳೆಯ ಗಿಡದ ವರ್ಣನೆಯನ್ನು ಹೀಗೆ ಮಾಡುತ್ತಾನೆ. "ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುಂದಿಳೆಗೊರಗುವಂತೆ ...."[೨೫೮] ಬೋರೆಂದು ಬೀಸುವ ಗಾಳಿಗೆ ಫಲಭರಿತವಾದ ಬಾಳೆಯ ಗೊನೆ ನೆಲಕ್ಕೆ ಉರುಳಿತು ಎನ್ನುತ್ತಾನೆ. ಬಾಳೆಯ ಗಿಡಕ್ಕೆ ಕಂಬದ ಆಶ್ರಯ ಅವಶ್ಯಕವಾದುದು.

ಸರ್ವಜ್ಞಮೂರ್ತಿಯ ವಚನದಲ್ಲಿ ತೋಟದ ಬೆಳೆಗಳನ್ನು ಕುರಿತು ಅನೇಕ ತ್ರಿಪದಿಗಳಲ್ಲಿ ಮಾಹಿತಿ ದೊರೆಯುತ್ತವೆ. "ಗೋಟಡಿಕೆ ಮೆಲಹೊಲ್ಲ ಪಾಟಿಯೊಳು ಇರಹೊಲ್ಲ........"[೨೫೯]

ತೋಟ ಮತ್ತು ತೋಟದ ಬೆಳೆಗಳನ್ನು ಕುರಿತು ಹೇಳಲಾಗಿದೆ. ಮರಳುನೆಲ ತೆಂಗುಬೆಳೆಗೆ ಉತ್ತಮ, ತೋಟದಲ್ಲಿ ಕಳೆ ಬೆಳೆದರೆ ತೋಟ ನಾಶವಾಗುತ್ತದೆ. ತೋಟ ಮಾಡುವ ರೈತ ತುಂಬಾ ಜವಾಬ್ದಾರಿಯಿಂದ ಕೃಷಿಯನ್ನು ಮಾಡಬೇಕಾಗುತ್ತದೆ. ತೋಟದ ಬೆಳೆಗಳಲ್ಲಿಯೇ ಅಡಿಕೆಯ ಬೆಳೆ ತುಂಬಾ ಶ್ರೇಷ್ಠವಾದುದು ಎನ್ನುತ್ತಾನೆ.

ಆರೈಕೆಯ ವಿಧಾನ : ಕೃಷಿಕರು ಒಕ್ಕಲುತನದ ದೈನಂದಿನ ಕೆಲಸಕಾರ್ಯಗಳಲ್ಲಿ ಅನೇಕ ವಿಧದ ಕೆಲಸಗಳನ್ನು ನಿರ್ವಹಿಸುತ್ತಾರೆ. ಅವುಗಳಲ್ಲಿ ಹೊಲಗಳ ಆರೈಕೆ, ಬೆಳೆಗಳ ಆರೈಕೆ, ಸಾಕು ಪ್ರಾಣಿಗಳ ಆರೈಕೆ, ಉಪಕರಣಗಳ ಆರೈಕೆ ಮತ್ತು ಕಾಡುಪ್ರಾಣಿ–ಕ್ರಿಮಿಕೀಟಗಳಿಂದ ಬೆಳೆಗಳ ಸಂರಕ್ಷಣೆಯನ್ನು ಮಾಡಿಕೊಳ್ಳುತ್ತಾರೆ. ಅಂತಹ ಮಾಹಿತಿಯನ್ನು ಕನ್ನಡ ದೇಶೀ ಕಾವ್ಯಗಳಲ್ಲಿ ಸಂಗ್ರಹಿಸಿ ಇಲ್ಲಿ ಹೇಳಲಾಗಿದೆ.

ಹೊಲಗಳ ಆರೈಕೆ : ಕೃಷಿಯ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ರೈತರು ಪ್ರತಿ ವರ್ಷ ತಮ್ಮ ಹೊಲ, ಗದ್ದೆ ತೋಟಗಳನ್ನು ಆರೈಕೆ ಮಾಡುತ್ತಾರೆ. ಬದು, ಒಡ್ಡು ಹಾಕುವುದು, ಮಣ್ಣು, ಗೊಬ್ಬರಹಾಕಿ ಬೆಳೆಬೆಳೆಯಲು ತಯಾರಿ ನಡೆಸುವುದು, ಬೇಲಿ ಹಾಕುವುದು ಮುಂತಾದವು. ಒಕ್ಕಲಿಗ ಮದ್ದಣ್ಣನ ವಚನದಲ್ಲಿ ಭೂಮಿಯ ಆರೈಕೆಯನ್ನು ಕುರಿತು ಹೀಗೆ ಹೇಳಲಾಗಿದೆ.

ಸಿದ್ಧರಾಮೇಶ್ವರರ ವಚನದಲ್ಲಿ "ಹೊಲಮೇರೆಯಿಂ ಮೇರೆ ಹೊಲಬುದಪ್ಪಿದ ನಾದ ಕಳೆಗಳ.........."[೨೦] ಹೊಲಗಳಿಗೆ ಮೇರೆ, ಬದುಗಳು ಇರುತ್ತವೆ. ಅದನ್ನು ಮೀರಿ ಉಳುಮೆ ಮಾಡಿದರೆ ಜಗಳ ತಪ್ಪಿದ್ದಲ್ಲ. ಆ ಕಾರಣದಿಂದ ಹೊಲಗಳ ಬದು, ವಡ್ಡುಗಳನ್ನು ಪ್ರತಿವರ್ಷ ರೈತರು ಆರೈಕೆ ಮಾಡಬೇಕು ಎನ್ನುತ್ತಾನೆ. ಕಾಡುಸಿದ್ದೇಶ್ವರರ ವಚನದಲ್ಲಿ ಭೂಮಿಯನ್ನು ಕೊಳ್ಳುವ ಮತ್ತು ಆರೈಕೆ ಮಾಡಲು ಹಣವೆಚ್ಚ ಮಾಡುವ ಅಂಶ ಕಂಡುಬರುತ್ತದೆ. 'ಹೊನ್ನತೆತ್ತಲ್ಲದೆ ಹೊಲ ಮಾಡಬಾರದು ....' [ಸಂ–೫,ಪು–೩೦] ಎನ್ನುತ್ತಾರೆ. ಮತ್ತೊಂದು ಕಡೆ ಹಾದಿಯ ಹೊಲವನ್ನು ಮಾಡುವಾಗ ಅನೇಕ ತೊಂದರೆಗಳು ಬರುತ್ತವೆ. ಬೇಲಿಯ ಕಟ್ಟಿ, ಕಾವಲುಗಾರರನ್ನು ನೇಮಿಸಿ ಆರೈಕೆ ಮಾಡಬೇಕಾಗುತ್ತದೆ ಎನ್ನುತ್ತಾರೆ. ಹೊಲಗಳನ್ನು ಗುತ್ತಿಗೆ ಕೊಡುವ ಅಂಶವನ್ನು ಕೂಡ ವಚನದಲ್ಲಿ ಪ್ರಸ್ತಾಪಿಸುತ್ತಾರೆ. ಗುತ್ತಿಗೆ, ಕೋರು ನೀಡಿದ ಹೊಲಗಳ ಆರೈಕೆಯನ್ನು ಕೋರು ಪಡೆದ ರೈತರು ಸರಿಯಾಗಿ ಮಾಡಲಾರರು ಆದ್ದರಿಂದ ಮಾಲಿಕರು ಅಂತಹ ಹೊಲಗಳ ಬಗ್ಗೆ ಜಾಗೃತಿವಹಿಸಬೇಕು. ಸೋಮನಾಥಚರಿತ್ರೆಯಲ್ಲಿ ಹೊಲಗಳ ಅಳತೆ ಮಾಡಿ ಒಬ್ಬೊಬ್ಬ ರೈತರಿಗೆ ಸೇರುವುದೆಂದು ಹೇಳಿ ಬದು, ಬಾಂದು, ಮೇರೆಕಲ್ಲುಗಳನ್ನು ನಡೆಸುವ ಅಂಶ ಕಂಡುಬರುತ್ತದೆ. 'ದಿನರಾತ್ರಿಗಳೆದು ಹೊಲ ಮೇರೆಯೊಳು ನಡಲೆಂದು ....' [ಪ–೭೫,ಪು–೧೬] ಎನ್ನುತ್ತಾನೆ.

ಬೆಳೆಗಳ ಆರೈಕೆ : ರೈತರು ಅನೇಕ ಬಗೆಯಲ್ಲಿ ಬೆಳೆಗಳ ಆರೈಕೆಯನ್ನು ಮಾಡುತ್ತಾರೆ. ಬೇಲಿ ಕಟ್ಟುವುದು, ಕಳೆ ಕಸ ತೆಗೆಯುವುದು, ಹುಳುಗಳ ಕಾಟದಿಂದ ಬೆಳೆಯ ರಕ್ಷಿಸುವುದು, ಹಕ್ಕಿ ಪಕ್ಷಿಗಳಿಂದ ರಕ್ಷಿಸಿಕೊಳ್ಳುವುದು ಮುಂತಾದವುಗಳನ್ನು ಮಾಡುತ್ತಾರೆ. ಬೆಳೆಯ ರಕ್ಷಣೆಯನ್ನು ಕುರಿತು ಬಸವಣ್ಣನವರ ವಚನವೊಂದರಲ್ಲಿ ಹೀಗೆ ಹೇಳಲಾಗಿದೆ.

"ಬೆಳೆಯ ಭೂಮಿಯಲೊಂದು ಪ್ರಳಯದ ಕಸಹುಟ್ಟಿ
ತಿಳಿಯಲೀಯದು, ಎಚ್ಚರಲೀಯದು
ಎನ್ನವಗುಣವೆಂಬ ಕಸವಕಿತ್ತು ಸಲಹಯ್ಯ ಲಿಂಗತಂದೆ
ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವ "[೨೧]

ಭಕ್ತಿನೆಲೆಯ ವಚನವಾಗಿದ್ದರೂ ಕೂಡ ರೈತರು ಬೆಳೆಯ ಆರೈಕೆ ಮಾಡುವುದಕ್ಕೆ ಹೋಲಿಸಲಾಗಿದೆ. ಬೆಳೆಯನ್ನು ಹಾಳು ಮಾಡುವ ಕಸಕಿತ್ತು ಹದಬೆದೆಯನರಿತು ಹಸನುಮಾಡಿ, ಬೆಳೆಸುಳಿ ತೆಗೆದು ಬೆಳೆಯುವಂತೆ ಆರೈಕೆ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ಒಳ್ಳೆಯ ಫಲ ಪಡೆಯಲು ಸಾಧ್ಯವೆಂಬ ಅಂಶ ತಿಳಿದುಬರುತ್ತದೆ. ಕ್ರಿಮಿ-ಕೀಟಗಳಿಂದ ಕಾಪಾಡುವುದು ಮುಂತಾದ ಕ್ರಮಗಳನ್ನು ಮಾಡಬೇಕಾಗುತ್ತದೆ. ಹೀಗೆ ಜಾಗೃತಿಯಿಂದ ಮಾಡಬೇಕು. ಸಿದ್ದರಾಮೇಶ್ವರರ ವಚನದಲ್ಲಿ "ಧರೆಯಿಲ್ಲದೆ ಬೆಳೆಯಬಹುದೆ ಧಾನ್ಯವ? ಮಳೆಯಿಲ್ಲದೆ ನೋಡಬಹುದೆ ಬೆಳೆಗಳ ...."[೨೬೨] ಭೂಮಿಯಿಲ್ಲದೆ ಯಾವ ಬೆಳೆಯನ್ನು ಬೆಳೆಯಲು ಸಾಧ್ಯವಿಲ್ಲ. ಎಂತಹ ಫಲವತ್ತಾದ ಭೂಮಿಯಿದ್ದರೂ ನೀರಿನ ಆಸರೆ ಇಲ್ಲದೆ ಬೆಳೆಗಳನ್ನು ಆರೈಕೆ ಮಾಡಲು ಸಾಧ್ಯವಿಲ್ಲ. ಉತ್ತಮ ಭೂಮಿ ನೀರಿನ ಹರಿವು ಬೆಳೆ ಬೆಳೆಯಲು ಅವಶ್ಯಕವಾದುದು ಎನ್ನುತ್ತಾರೆ.

ಸರ್ವಜ್ಞನ ವಚನದಲ್ಲಿ ಕಬ್ಬಿನ ಗದ್ದೆಗಳಿಗೆ ಕುರಿ ಮೇಕೆಗಳು ನುಗ್ಗಿ ಹಾಳು ಮಾಡದಂತೆ ಬೇಲಿ ಹಾಕಿ ರಕ್ಷಿಸಿಕೊಳ್ಳಬೇಕೆಂದು ಹೇಳುತ್ತಾನೆ. ಅಲ್ಲದೇ ಒಂದು ತ್ರಿಪದಿಯಲ್ಲಿ " ತೋಟದಲ್ಲಿ ಕಳೆ ಹೊಲ್ಲ ಕೀಟ ಬೆಳೆಸಿಗೆ ಹೊಲ್ಲ ...."[೨೬೩] ತೋಟದ ಬೆಳೆಗೆ ಕಳೆಯಿಂದ ಅಪಾಯ ಹೆಚ್ಚು ಆದ್ದರಿಂದ ಅದನ್ನು ನಿವಾರಿಸಬೇಕು ಎನ್ನುತ್ತಾನೆ. ಇನ್ನೊಂದು ವಚನದಲ್ಲಿ "ಕುರಿ ಕಬ್ಬಿನೊಳಹೊಕ್ಕು, ಅರಿವುದೆ ತನಿರಸವ? ಹೊರಗಣ ಸೋಗೆಯಗಿವಂತೆ..........."[೨೬೪] ಬೇಲಿಯ ಕಟ್ಟಿ ಕಬ್ಬಿನ ಗದ್ದೆಗಳ ರಕ್ಷಣೆ ಮಾಡಿಕೊಳ್ಳಬೇಕು.

ಸಾಕು ಪ್ರಾಣಿಗಳ ಆರೈಕೆ : ಕೃಷಿಯ ಜೊತೆಯಲ್ಲಿ ಹೈನುಗಾರಿಕೆಯೂ ಬೆಳೆದು ಬಂದಿದೆ. ರೈತರು ಸಾಕುಪ್ರಾಣಿಗಳನ್ನು ತನ್ನ ಜೀವನೋಪಯೋಗಕ್ಕಾಗಿ ಸಾಕಿ ಕೊಂಡಿರುತ್ತಾರೆ. ಇಂತಹ ಸಾಕುಪ್ರಾಣಿಗಳ ಆರೈಕೆಯನ್ನು ಮಾಡುವುದು ಕೂಡ ಅತ್ಯವಶ್ಯಕವಾಗಿದೆ.

ಕಂಬದ ಮಾರಿತಂದೆಗಳ ವಚನದಲ್ಲಿ ಹೀಗೆ ಹೇಳಲಾಗಿದೆ. "........... ಗೂಳಿಯ ಇರಿತದ ಡಾವರಕ್ಕೆ ನಿಲ್ಲೆ, ಸೆಳೆಗೋಲಿನ ಗಾಣದ ...."[೨೬೫] ಬೇಸಾಯದ ಕೆಲಸಕ್ಕೆ ಬಳಸದೇ ಊರ ದೇವರ ಹೆಸರಿನಲ್ಲಿ ಬಿಟ್ಟ ಗೂಳಿಗಳು ಬೇರೆ ಹಸು, ಎತ್ತುಗಳಿಗೆ ತೊಂದರೆ ನೀಡಿದಾಗ ಅವುಗಳನ್ನು ರೈತರು ಆರೈಕೆ ಮಾಡಿಕೊಳ್ಳುತ್ತಾರೆ. ಕಿಲಾರದ ಭೀಮಣ್ಣದ ವಚನದಲ್ಲಿ ಎತ್ತು, ಹಾಲು ಕರೆಯುವ ಹಸುಗಳಿಗೆ ಹತ್ತಿಕಾಳು, ಹಿಂಡಿ, ಮೇವು ಹಾಕಿ ಮೇಯಿಸುತ್ತಿದ್ದರು. 'ಇಮ್ಮನ ಹತ್ತಿಯ ಕಾಳ ಸುರಿದು ಪಶುವೇವುತ್ತಿರಲಾಗಿ ಒಮ್ಮನವ ಮೇದು ....' [ಸಂ-೨,ಪು-೨೯] ಇನ್ನೊಂದು ವಚನದಲ್ಲಿ ಅನೇಕ ಬಣ್ಣಬಣ್ಣದ ಹಸುಗಳನ್ನು ಹೊಲಗದ್ದೆಯಲ್ಲಿ ಮೇಯಿಸಿಕೊಂಡು, ಕೆರೆಯನ್ನು ನೀರನ್ನು ಕುಡಿಸಿ, ದನದ ಕೊಟ್ಟಿಗೆಯಲ್ಲಿ ತಂದು ಕಟ್ಟುತ್ತಿದ್ದರು ಎನ್ನುತ್ತಾನೆ. "ನಾನಾ ವರ್ಣದ ಗೋವುಗಳೆಲ್ಲವು ಕೂಡಿ, ಒಂದೇ ಹೊಲದಲ್ಲಿ ಮೇಯ್ದು, ಆರು ಕೆರೆಯ ನೀರು ಕುಡಿದು ಒಂದೇ ದಾರಿಯಲ್ಲಿ ಒಂದು ಮಾರು ಕೊಟ್ಟಿಗೆಯ ...."[೨೬೬]

ಗುಪ್ತ ಮಂಚಣ್ಣನ ವಚನವೊಂದರಲ್ಲಿ ಹೀಗೆ ಹೇಳಲಾಗಿದೆ. "ಎತ್ತು ಹಸುವ ಹಾಯಲಾಗಿ ತೆಕ್ಕೆಯನ್ನಿಕ್ಕಿದ ಕಣ್ಣಿಯಲ್ಲಿ, ತೆಕ್ಕೆಗೆ ನಡೆಯದ ಹಸು ಕಟ್ಟುಗೊಳ್ಳದ ಹೋರಿ ...."[೨೬೭] ಹಸುಗಳು ಹೆಚ್ಚು ಇದ್ದಾಗ ಒಂದೊಂದೆ ಹಸುವನ್ನು ಕಣ್ಣಿಯಿಂದ ಕಟ್ಟದೆ ದಾವಣಿಯ ಹಗ್ಗದಲ್ಲಿ ಕಟ್ಟಿ ಹುಲ್ಲು ಹಾಕಿ, ನೀರು ಕುಡಿಸಿ, ಸಾಕುತ್ತಿರುವ ಅಂಶ ಕಂಡುಬರುತ್ತದೆ. ದನಕರಗಳ ಕೊಟ್ಟಿಗೆಯನ್ನು ತುಂಬಾ

ಜಾಗೃತೆಯಿಂದ, ಸುರಕ್ಷತೆಯಿಂದ ಆರೈಕೆ ಮಾಡಲಾಗುತ್ತದೆ. ಘನ್ನುವ ಹುಲ್ಲು, ಹಾಕುವ ಹಿಂಡಿ, ಕುಡಿಸುವ ನೀರಿನ ಬಗ್ಗೆ ಎಚ್ಚರಿಕೆಯನ್ನು ವಹಿಸಿ ಕಾಪಾಡಲಾಗುತ್ತದೆ. ಸಿದ್ಧರಾಮ ಚರಿತ್ರೆಯಲ್ಲಿ ಬಲಿಷ್ಠವಾದ ಎತ್ತುಗಳ ಆಕಾರವನ್ನು ಕುರಿತು ಈ ರೀತಿ ಹೇಳುತ್ತಾನೆ. "ಘನಮುಕ್ತಿ ಕಾಯ ದೇವಾಳಿ, ರೋಮಾಳಿ ತೀರ್ಥನಿಕಾಯ ಸುಳಿ ಪುಣ್ಯವವಯವ ಯುಗಂ ಚರಣ ...."[೨೮] ಬಲಿಷ್ಠವಾದ ಎತ್ತುಗಳಿಗೆ ಅಂಗಾಂಗ ತುಂಬೆಲ್ಲ ರೋಮ, ಸುಳಿಗಳು ಹಾಗೂ ಬಲಿಷ್ಠವಾದ ಕಾಲುಗಳನ್ನು ಹೊಂದಿದ್ದವು ಎಂದು ವರ್ಣಿಸುತ್ತಾನೆ.

ಕೃಷಿ ಉಪಕರಣಗಳ ಆರೈಕೆ : ಕೃಷಿ ಉಪಕರಣಗಳ ತಯಾರಿಕೆ ಮತ್ತು ಆರೈಕೆ ತುಂಬಾ ಮಹತ್ವದ್ದು. ಕೃಷಿಕರು ತಮ್ಮ ಉಪಕರಣಗಳನ್ನು ತಮ್ಮ ಮಕ್ಕಳಂತೆಯೇ ಕಾಪಾಡುತ್ತಾರೆ. ಅಲ್ಲದೆ ಪವಿತ್ರ ಭಾವನೆಯನ್ನು ಹೊಂದಿರುತ್ತಾರೆ. ಒಕ್ಕಲಿಗ ಮುದ್ದಣ್ಣನ ವಚನವೊಂದರಲ್ಲಿ ನೇಗಿಲ ತಯಾರಿಸಲು ಬೇಕಾಗುವ ಮರವನ್ನು ಹೇಗೆ ಉಪಚರಿಸುತ್ತಿದ್ದರು ಎಂಬುದು ತಿಳಿಯುತ್ತದೆ.

"...........ತ್ರಿವಿಧಕ್ಕೆ ಗರ್ಭಗೆಚ್ಚು ಖಂಡಿತವಾಯಿತ್ತು ಮರ
ತಟ್ಟಾರಬೇಕೆಂದು ಇರಿಸಿ ಬಂದೆ ...."[೨೯]

ಕೆಚ್ಚು ಹೆಚ್ಚಾಗಿರುವ ಬಲಿತಮರವನ್ನು ಕೊಡಲಿಯಿಂದ ಕಡಿದು ರೆಂಬೆಕೊಂಬೆಗಳ ಸವರಿ ದೀರ್ಘಕಾಲ ಬಾಳಿಕೆ ಬರುವಂತಹ ಮರದ ತುಂಡನ್ನು ಆಯ್ಕೆ ಮಾಡಿ ಕಡಿದು, ಆ ಮರದ ಹಸಿ ಆರಲೆಂದು ಅಲ್ಲಿಯೇ ಹಾಕಿ ಬಂದು ನಂತರ ಕರ್ಮಯೋಗಿ ಬಡಗಿಯ ಕೈಯಿಂದ ನೇಗಿಲು ತಯಾರಿಸಿ ಆರೈಕೆ ಮಾಡುತ್ತಾರೆ. ಜೇಡರ ದಾಸಿಮಯ್ಯನ ವಚನದಲ್ಲಿ ಕಣದ ಮಧ್ಯದಲ್ಲಿ ನಾಟುವ ಮೇಟಿಯನ್ನು ಕುರಿತು ಹೇಳಲಾಗಿದೆ. "ಕಳದೊಳಗಣ ಕಳವೆಯನೊಕ್ಕುವ ದೊಳಗದೆ ...."[೩೦] ಕಣವನ್ನು ಮಾಡಿ ಉತ್ತಮ ಮರದ ತುಂಡನ್ನು ಕಣದ ಮಧ್ಯದಲ್ಲಿ ನಾಟುತ್ತಾರೆ. ಇದನ್ನು ಕುರಿತು ತುಂಬಾ ಪೂಜ್ಯನೀಯ ಭಾವನೆ ರೈತರಿಗೆ ಇರುತ್ತದೆ.

ಕಾಡುಪ್ರಾಣಿ–ಕೀಟಗಳು, ಪಕ್ಷಿಗಳಿಂದ ಬೆಳೆಗಳ ಆರೈಕೆ : ಬೆಳೆದು ನಿಂತ ಪೈರನ್ನು ಕಾಡುಪ್ರಾಣಿಗಳು, ಹಕ್ಕಿಪಕ್ಷಿಗಳಿಂದ ಕಾಪಾಡಿಕೊಳ್ಳಲು ರೈತರು ಅನೇಕ ಬಗೆಯ ಉಪಾಯಗಳನ್ನು ಅನುಸರಿಸುತ್ತಾರೆ. ಅಕ್ಕಮ್ಮನ ವಚನವೊಂದರಲ್ಲಿ ಹೀಗೆ ಹೇಳಲಾಗಿದೆ. "ಕೆಯಿಗೆ ಬೆಚ್ಚು ಬೆದರ ಕಟ್ಟುವಲ್ಲಿ .... ಎನ್ನಕೆಯ ತಪ್ಪಲಲ್ಲಿ ಕಾಷ್ಠವನೆಟ್ಟು ....ವಿಹಂಗ ಕುಲ ಮೃಗಜಾತಿ ಮುಟ್ಟಲಿಲ್ಲ ...."[೩೧] ಬೆಳೆದು ನಿಂತ ಹೊಲದ ಪೈರನ್ನು ಕಳ್ಳಕಾಕರಿಂದ, ಪ್ರಾಣಿ–ಪಕ್ಷಿಗಳಿಂದ ರಕ್ಷಿಸಿಕೊಳಲ್ಲು ಬೆದರುಗೊಂಬೆಗಳನ್ನು ಮಾಡಿ ಸಿಕ್ಕಿಸುತ್ತಿದ್ದರು. ಇದನ್ನು ಬೆಚ್ಚಿನ ಬೆದರು ಎಂದು ಕರೆಯುತ್ತಾರೆ. ಮಡಕೆಯೊಂದಕ್ಕೆ ಬಣ್ಣ ಹಚ್ಚಿ ಮನುಷ್ಯನ ಮುಖ ಕಾಣುವಂತೆ ಮಾಡಿ ಒಂದು ಕೋಲನ್ನು ನಾಟಿ ಅದಕ್ಕೆ ಸಿಕ್ಕಿಸುತ್ತಾರೆ. ಅರಿವಿನ ಮಾರಿತಂದೆಗಳ ವಚನವೊಂದರಲ್ಲಿ ಅನೇಕ ಕ್ರೂರ ಮೃಗಗಳಿಂದ ಬೆಳೆಯನ್ನು ರಕ್ಷಿಸಲು ಬಾಯಿಕಟ್ಟು ಮಾಡಿ ಬೆಳೆ ತಿನ್ನದಂತೆ ಮಾಡುವ ತಂತ್ರಗಳನ್ನು ಕುರಿತು ಹೇಳಲಾಗಿದೆ. "ಅಹಿಕ್ರೂರ ಮೃಗಂಗಳೆಲ್ಲಕ್ಕು ಬಾಯಿಕಟ್ಟಿಂದ ಕಚ್ಚವು ಫಲಂಗಳ ...."[೩೨] ಅಲ್ಲದೆ ಕೋಲಶಾಂತಯ್ಯನ ವಚನದಲ್ಲಿ "..........ಒಂದು ಹೊಲ ಬೆಳೆಯಿತ್ತು, ಬೆಳೆಯ ಮೇಯ ಎರಳೆ ...."[೩೩] ಹೊಲದ ಬೆಳೆಗಳನ್ನು ತಿನ್ನಲು ಬರುವ ಕಾಡು ಪ್ರಾಣಿಗಳಲ್ಲಿ ಜಿಂಕೆಯು ಒಂದು. ಅದು ಬೆಳೆದ ಬೆಳೆಯನ್ನು ತಿನ್ನದಂತೆ ರಕ್ಷಿಸಿಕೊಳ್ಳಲು ರೈತರು ಪ್ರಯತ್ನಿಸುವ ಅಂಶ ತಿಳಿಯುತ್ತದೆ. ಮನಮುನಿ ಗುಮ್ಮಟ ದೇವನ ವಚನದಲ್ಲಿ ಕವಣೆಯಿಂದ ಹಕ್ಕಿ–

ಪಕ್ಷಿಗಳಿಂದ ಬೆಳೆಗೆ ಉಂಟಾಗುವ ತೊಂದರೆಯನ್ನು ನಿವಾರಿಸಿಕೊಳ್ಳುವುದನ್ನು ಈ ರೀತಿ ಹೇಳಲಾಗಿದೆ. "ಕಲ್ಲು ಕವಣೆಯ ನುಂಗಿ ಇಡುವಾತನ ಹಣೆ ತಾಗಿತ್ತು.........."[೧೭೪] ಹೊಲದ ಬೆಳೆಗಳು ಕಾಳು ಕಟ್ಟಿದಾಗ ಎಳೆಯಕಾಳಿಗೆ ಹಕ್ಕಿ ಪಕ್ಷಿಗಳಿಂದ ತುಂಬಾ ತೊಂದರೆಯಾಗುತ್ತದೆ. ರೈತರು ಹಗ್ಗದಿಂದ ತಯಾರಿಸಿರುವ ಕವಣೆಯಲ್ಲಿ ಕಲ್ಲು ಇಟ್ಟು ಒಡೆದು ಹಕ್ಕಿಗಳನ್ನು ಬೆದರಿಸುತ್ತಾರೆ. ಆ ಮೂಲಕ ಬೆಳೆಗಳ ಆರೈಕೆಯನ್ನು ಮಾಡಿಕೊಳ್ಳುತ್ತಾರೆ. ಕಾಡು ಸಿದ್ದೇಶ್ವರರ ವಚನವೊಂದರಲ್ಲಿ "......... ಬಿತ್ತಿ ಬೆಳೆದು ಹಕ್ಕಿ ಹೊಡೆಯದೆ ಹೊಲವ ಮಾಡಿ ...."[೧೭೫] ರೈತರು ತಾವು ಬೆಳೆದ ಬೆಳೆಗಳಲ್ಲಿ ಹಕ್ಕಿ-ಪಕ್ಷಿಗಳಿಗೂ ಒಂದು ಪಾಲು ಇದೆ ಎಂದು ನಂಬಿದ್ದರು. ಆದರೂ ಹಕ್ಕಿ ಹೊಡೆಯದೆ ಹೊಲದಲ್ಲಿ ಬೆಳೆ ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಹರಿಶ್ಚಂದ್ರ ಕಾವ್ಯ ಮತ್ತು ಜೈಮಿನಿ ಭಾರತ ಕೃತಿಗಳಲ್ಲಿ ರೈತರ ಬೆಳೆಯ ರಕ್ಷಣೆಯನ್ನು ರಾಜರು ಮಾಡುತ್ತಿದ್ದು, ನಿರಂತರವಾಗಿ ಬೇಟೆ ಕೈಗೊಂಡು ಕಾಡು ಮೃಗಗಳನ್ನು ಕೊಂದು ರಕ್ಷಣೆ ನೀಡುವ ಅಂಶ ಕಾಣಸಿಗುತ್ತದೆ.

ಮಾರುಕಟ್ಟೆ ವ್ಯವಸ್ಥೆ : ಕೃಷಿಕರು ತಾವು ಬೆಳೆದ ಧಾನ್ಯಗಳನ್ನು ಸಂಗ್ರಹಿಸಿ, ಮಾರುಕಟ್ಟೆಯಲ್ಲಿ ಬೆಲೆ ಬಂದಾಗ ಮಾರುವುದು ಮತ್ತು ತಮಗೆ ಬೇಕಾದ ಉತ್ಪನ್ನಗಳನ್ನು ಸಂತೆ, ಪೇಟೆ ಮತ್ತು ಅಂಗಡಿಗಳಲ್ಲಿ ಕೊಳ್ಳುವುದು ಮತ್ತು ಮಾರುವುದು ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವ ಪದ್ಧತಿಯಾಗಿದೆ. ಕನ್ನಡದ ದೇಶೀ ಕಾವ್ಯಗಳಲ್ಲಿ ಕಂಡುಬರುವ ಇಂತಹ ಅಂಶಗಳನ್ನು ಸಂಗ್ರಹಿಸಲಾಗಿದೆ. ಅನೇಕ ವಚನಕಾರರಲ್ಲಿ ಬಿಡಿಬಿಡಿಯಾಗಿ ಮಾರುಕಟ್ಟೆಗೆ ಸಂಬಂಧಿಸಿದ ಅಳತೆಯ ಮಾಪನಗಳು, ಧಾನ್ಯಗಳ ಉಲ್ಲೇಖ, ಸಾಗಾಣಿಕೆ ಕುರಿತಾದ ಮಾಹಿತಿ ದೊರೆಯುತ್ತದೆ. ಸಿದ್ದರಾಮೇಶ್ವರರ ವಚನವೊಂದರಲ್ಲಿ "ನೀರಿಲ್ಲದ ಭೂಮಿಯಲ್ಲಿ ಮೂರು ಹೇರು ನವಣೆಯ ಬೆಳೆದುದ ಕಂಡೆ ...."[೧೭೬] ಒಂದು ಎಕರೆ ಜಮೀನಿನಲ್ಲಿ ಮೂರು ಹೇರು ಅಂದರೆ ಆರು ಚೀಲ ನವಣೆಯನ್ನು ಬೆಳೆದೆ ಎಂದು ಹೇಳುವ ಅಂಶ ಕಂಡುಬರುತ್ತದೆ. ಬಸವಣ್ಣ, ಘಟ್ಟಿವಾಳಯ್ಯ, ಮನಸ್ಸಂದ ಮಾರಿತಂದೆ ವಚನಗಳಲ್ಲಿ ಖಂಡುಗ, ಕೊಳಗ, ಹೇರು ಮುಂತಾದ ಮಾಪನಗಳ ಉಲ್ಲೇಖ ಕಂಡುಬರುತ್ತದೆ. ಸೊಡ್ಡಳ ಬಾಚರಸನ ವಚನದಲ್ಲಿ "ಬನ್ನಿ ಕರುಣಿಕರು .... ಹೊಸ ಜೋಳ ಅರವತ್ತು ಲಕ್ಷ ಖಂಡುಗ ಶಾಲಿ ಧಾನ್ಯ ಮೂವತ್ತು ಖಂಡುಗ, ಗೋಧಿ ಹನ್ನೆರಡು ಲಕ್ಷ ಖಂಡುಗ, ಕಡಲೆ ಬತ್ತೀಸ ಖಂಡುಗ ಹೊಸ ಸುಗ್ಗಿಯ ವೇಳೆಗೆ ಬಹ ಭತ್ತ ಅಗಣಿತ ...."[೧೭೭] ರಾಜನ ಅರಮನೆಯಲ್ಲಿ ಕಣಜಗಳಿಂದ ಧಾನ್ಯ ಅಳೆದುಕೊಡುವ, ತೆಗೆದುಕೊಳ್ಳುವುದರ ಲೆಕ್ಕ ಬರೆಯುವ ಕಾಯಕದ ಈ ಶರಣನ ವಚನದಲ್ಲಿ ಈ ಮಾಹಿತಿ ಕಂಡುಬರುತ್ತದೆ.

ಜೈಮಿನಿ ಭಾರತದಲ್ಲಿ ಸಂತೆಯ ಉಲ್ಲೇಖ ಕಂಡುಬರುತ್ತದೆ. ಸಂತೆಯಲ್ಲಿ ಗಂಧಸಾಲೆ ಅಕ್ಕಿ, ಅತ್ಯುತ್ತಮವಾದ ಧಾನ್ಯ, ತರಕಾರಿ, ಹಣ್ಣು-ಹಂಪಲು ಕೊಳ್ಳುವ, ಮಾರುವ ಬಗೆಯನ್ನು ಕಾಣುತ್ತೇವೆ.

ರೈತರು ತಾವು ಬೆಳೆದ ಬೆಳೆ, ಧಾನ್ಯ, ಹುಲ್ಲು, ಸೊಪ್ಪೆ ಮುಂತಾದವುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಾಣಿಕೆ ಮಾಡುತ್ತಾರೆ. ಹಾಗೆಯೇ ವ್ಯಾಪಾರಿಗಳು ಊರೂರ ಸುತ್ತಿ ವ್ಯವಹಾರ ಮಾಡುವಾಗ ಕೊಂಡ ವಸ್ತಗಳನ್ನು ಸಾಗಿಸಲು, ಮಾರುವ ವಸ್ತುಗಳನ್ನು ಸಾಗಿಸಲು, ಸಾಗಾಣಿಕೆಯ ವ್ಯವಸ್ಥೆಯನ್ನೇ ಅವಲಂಬಿಸಿರುತ್ತಾರೆ. ಕನ್ನಡ ಭಾರತದಲ್ಲಿ ಸಾಗಾಣಿಕೆಗೆ ಒಂಟೆ, ಕುದುರೆ, ಆನೆ, ಎತ್ತು ಮತ್ತು ಕತ್ತೆಗಳನ್ನು ಬಳಸುತ್ತಿರುವ ಅಂಶ ಕಾಣಸಿಗುತ್ತದೆ. "ಹೇರಿದವು ಬಹುಧನವನೊಂಟೆಗಳಾರು ಸಾವಿರ ಮಿಕ್ಕ ವಸ್ತುವ ಹೇರಿದವು ಎತ್ತುಗಳ ಹೂಡಿದ ಬಂಡಿ ಸಾವಿರ ...."[೧೭೮] ಒಂಟೆಗಳ ಮೇಲೆ

ಧನಧಾನ್ಯಗಳನ್ನು ಸಾಗಿಸುವ, ಸಾಮಾನು ಸರಂಜಾಮುಗಳನ್ನು ಎತ್ತುಗಳ ಮೇಲೆ ಹೇರಿ ಸಾಗಿಸುವ ಅಂಶ ಕಂಡುಬರುತ್ತದೆ. ಇನ್ನೊಂದು ಕಡೆ ಯುದ್ಧದ ಸಾಮಾಗ್ರಿಗಳನ್ನು, ಅಗತ್ಯ ವಸ್ತುಗಳನ್ನು ಮತ್ತು ಕೊಳ್ಳೆ ಹೊಡೆದ ವಸ್ತುಗಳನ್ನು ಸಾಗಿಸಲು ಕೊಟಾರ ಬಂಡಿ ರಥ, ಕುದುರೆ, ಆನೆಗಳನ್ನು ಬಳಸುತ್ತಿದ್ದರು. ಜೈಮಿನಿಭಾರತದಲ್ಲಿಯೂ ಕೂಡ "......... ಕೊಟ್ಟರೆಯ ಕೊಲ್ಲಾರ ಬಂಡಿಗಳ ಮೇಲೆ ಸರಕಿಟ್ಟಣಿಸಿ ನೂದುದು ಗೋಮಹಿಷಿ ಕುಲ.........."[೨೭೯] ಸಾರಿಗೆ ವ್ಯವಸ್ಥೆಯಲ್ಲಿ ಕೊಲ್ಲಾರ ಬಂಡಿ, ಒಂಟೆ, ಹೇಸರಗತ್ತೆ ಅಲ್ಲದೆ ಎತ್ತುಗಳನ್ನು ಬಳಸುತ್ತಿದ್ದರು ಎಂಬ ಅಂಶ ಕಂಡುಬರುತ್ತದೆ. ಅಲ್ಲದೆ ಗೊಬ್ಬರ ಸಾಗಿಸುವ ಎತ್ತಿನ ಬಂಡಿಗಳಲ್ಲಿ ಬಂಗಾರ, ಸುವರ್ಣ ನಾಣ್ಯಗಳನ್ನು ಗೋಣಿ ಚೀಲದಲ್ಲಿ ತುಂಬಿ ಸಾಗಿಸುತ್ತಿದ್ದರು ಎಂಬ ಅಂಶ ತಿಳಿದುಬರುತ್ತದೆ.

ಕರಪದ್ಧತಿ ಎಂದರೆ ರೈತನು ತಾನು ಬೆಳೆದ ಬೆಳೆಯಲ್ಲಿ ಅನೇಕರಿಗೆ ಪಾಲು ನೀಡುವುದಾಗಿದೆ. ಒಂದು ಪಾಲು ಹಕ್ಕಿ–ಪಕ್ಷಿಗಳಿಗಾದರೆ, ಒಂದು ಪಾಲು ತನ್ನಾಶ್ರಯದ ಕಸುಬುದಾರರಿಗೆ ಮತ್ತೊಂದು ಪಾಲು ಪ್ರಭುತ್ವದದ ವ್ಯವಸ್ಥೆಗೆ ನೀಡುತ್ತಾನೆ. ಇದನ್ನು ಹಣದ ರೂಪದಲ್ಲಿ, ಧಾನ್ಯದ ರೂಪದಲ್ಲಿಯೂ ನೀಡುತ್ತಾನೆ. ಜೇಡರ ದಾಸಿಮಯ್ಯನ ವಚನವೊಂದರಲ್ಲಿ ಸುಂಕವನ್ನು ಕೊಡದೆ ವಂಚಿಸುವ ವ್ಯಕ್ತಿಯನ್ನು ಕುರಿತು ಹೀಗೆ ಹೇಳಲಾಗಿದೆ.

"ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲಾ ನಡೆದನಾ ಸುಂಕಕಂಜಿ ...."[೨೮೦]

ಮಾರುಕಟ್ಟೆಯಲ್ಲಿ ಸುಂಕ ಹಾಕುವ ಪದ್ಧತಿಯಿದ್ದು, ಸುಂಕವನ್ನು ಕೊಡದೇ ವಂಚಿಸಲು ಹರಿದ ಗೋಣಿಯಲ್ಲಿ ಭತ್ತವ ತುಂಬಿ ರಾತ್ರಿಯೆಲ್ಲ ಪ್ರಯಾಣ ಮಾಡಿದ ವ್ಯಕ್ತಿಯ ಚಿತ್ರ ಈ ವಚನದಲ್ಲಿ ಕಂಡುಬರುತ್ತದೆ. ಸುಂಕವನ್ನು ಕೊಡದೇ ವಂಚಿಸುವ ಅನೇಕ ವ್ಯಕ್ತಿಗಳನ್ನು ಇಂದು ಕೂಡ ಕಾಣಬಹುದಾಗಿದೆ. ಸುಂಕದ ಬಂಕಣ್ಣನ ವಚನವೊಂದರಲ್ಲಿ "ಎಲ್ಲರ ಸುಂಕ ಎತ್ತುತೊತ್ತು ಬಂಡಿ ಬಲ್ಲೆತ್ತು, ಎನ್ನ ಸುಂಕ ಎಲ್ಲರ ಪರಿಯಲ್ಲ ...."[೨೮೧] ಸುಂಕವಸೂಲಿಯ ಕಾಯಕ ಮಾಡುವ ಬಂಕಣ್ಣ ಎಲ್ಲರೂ ವಸೂಲಿ ಮಾಡುವ ಸುಂಕ ಎತ್ತು, ತೊತ್ತು, ಬಂಡಿಗೆ ಮಾತ್ರ, ಆದರೆ ನಾನು ವಸೂಲಿ ಮಾಡುವ ಸುಂಕ ಎಲ್ಲರ ಬಗೆಯಂತಲ್ಲ ನನ್ನ ಕಣ್ಣಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ ಎನ್ನುತ್ತಾನೆ. ಇನ್ನೊಂದಡೆ

"ವೇಷ ಲಾಂಛನವೆಂಬ ಪಾಠದ ಹೊರಯಹೊತ್ತು,
ಬೇವಹಾರ ಮಾಡುವ ಹರದಿಗರೆಲ್ಲರೂ,
ಹರದಿಗರಲ್ಲ ಹರವರಿಯಲ್ಲಿ....... ವೇಷತನದ ಕಳ್ಳಹಾದಿಯಲ್ಲಿ ಹೋಗಿ ಸಿಕ್ಕದಿರಿ ...."[೨೮೨]

ವ್ಯಾಪಾರದಲ್ಲಿ ಮೋಸ ಇದ್ದೇ ಇರುತ್ತದೆ. ವೇಷವನ್ನು ಹಾಕಿ ವ್ಯಾಪಾರವನ್ನು ಮಾಡುವವರೆಲ್ಲ ವ್ಯಾಪಾರಿಗಳಲ್ಲ ಅವರ ಮೋಸತನದ ವೇಷ, ಕಳ್ಳಹಾದಿಯ ವ್ಯವಹಾರವನ್ನು ತಡೆಯುವಂತವನೇ ಸುಂಕದ ಅಧಿಕಾರಿ. ನನ್ನ ಸುಂಕದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಬೇಡಿ ಎಂದು ವ್ಯಾಪಾರಿಗಳಿಗೆ ಎಚ್ಚರಿಕೆಯ ಮಾತುಗಳನ್ನು ಹೇಳುವ ಅಂಶ ಕಂಡುಬರುತ್ತದೆ. ಕಾಡುಸಿದ್ದೇಶ್ವರರ ವಚನವೊಂದರಲ್ಲಿ ಆವಟಿಗೆರ ಮಲ್ಲಣ್ಣನ ಕಾಯಕ ಕುರಿತು ಹೀಗೆ ಹೇಳಲಾಗಿದೆ. "ಪಂಚರಸದ ಪಡಿಗೆ, ಮೂರು ಮುದ್ರೆ, ಸುಂಕದ ಧಾನ್ಯವನಳೆಯದೆ, ಸುಂಕಿಲ್ಲದ ಧಾನ್ಯನಳಿದು ಕೊಟ್ಟ ಪಡಿಯನುಂಟು..........."[೨೮೩] ಸುಂಕವನ್ನು ಧಾನ್ಯ, ಹೊನ್ನು, ಹಣದ ರೂಪದಲ್ಲಿ ನೀಡುತ್ತಿದ್ದರು. ದಾನದ ರೂಪದ ಧಾನ್ಯ ಮತ್ತು ರಾಜನಿಗೆ ಸೇರಿದ ಭೂಮಿಯಿಂದ ಬಂದ ಧಾನ್ಯಕ್ಕೆ ಸುಂಕದಿಂದ ವಿನಾಯಿತಿ ಇರುವ ಅಂಶ ಕಂಡುಬರುತ್ತದೆ.

ಸಿದ್ದರಾಮ ಚರಿತ್ರೆಯಲ್ಲಿ "........... ಹತ್ತುಸಾಸಿರ ಗಡಿಗೆ ಗೋಟನಿತು ಹಾಗಂಗಳಂ ಕೊಟ್ಟು ....ಸಾಸಿರ ಗಡಿಗೆಯು ಹಾಗಮಂ ...."[೨೮೪] ಹತ್ತುಸಾವಿರ ಗಡಿಗೆ ಅಡಿಕೆ ಗೋಟನ್ನು ಶುಲ್ಕವಾಗಿ ಕೊಡುವ ಮತ್ತು ಒಂದು ಸಾವಿರ ಗಡಿಗೆ ಅಡಿಕೆ ಗೋಟನ್ನು ಶುಲ್ಕವಾಗಿ ನೀಡಿರುವ ಅಂಶಗಳು ಕಂಡುಬರುತ್ತವೆ.

ಒಟ್ಟಾರೆಯಾಗಿ ಕನ್ನಡ ದೇಶೀ ಸಾಹಿತ್ಯದಲ್ಲಿ ಕೃಷಿಸಂಬಂಧಿ ಉಲ್ಲೇಖಗಳನ್ನು ಭೂಮಿ, ಬೇಸಾಯಕ್ರಮ, ಒಕ್ಕಲಿಗ ಮತ್ತು ಒಕ್ಕಲುತನದ ಮಹತ್ವ, ಬೀಜ ಮತ್ತು ಸಂಸ್ಕರಣೆ ಕೃಷಿಉಪಕರಣಗಳು, ಕೃಷಿ ಉತ್ಪನ್ನಗಳ ಸಂಗ್ರಹಣೆಯ ಉಪಕರಣಗಳು, ಮಳೆ ಮತ್ತು ಹವಮಾನ, ನೀರಾವರಿ ವ್ಯವಸ್ಥೆ, ಬೆಳೆಗಳ ಪ್ರಕಾರಗಳು, ಆರೈಕೆಯ ವಿಧಾನ ಮತ್ತು ಮಾರುಕಟ್ಟೆಯ ವ್ಯವಸ್ಥೆ ಎಂಬ ವಿಭಾಗಗಳನ್ನು ಮಾಡಿಕೊಂಡು ಆ ಮೂಲಕ ಸಂಗ್ರಹಿಸಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೩. ಜಾನಪದ ಸಾಹಿತ್ಯ

ಹಳ್ಳಿಗಳ ನಾಡಾದ ನಮ್ಮ ದೇಶದ ಸಂಸ್ಕೃತಿಗೆ, ಹಳ್ಳಿಗಳಲ್ಲಿ ಬದುಕನ್ನು ಕಟ್ಟಿಕೊಂಡು ಬಾಳುವ ರೈತರೇ ಆಧಾರ ಸ್ತಂಭಗಳಂತೆ. ಅವನ ಮೂಲ ಉದ್ಯೋಗ ಒಕ್ಕಲುತನವಾಗಿದ್ದು ಒಕ್ಕುಲುತನದಲ್ಲಿಯೇ ರೈತನ ಸಂಸ್ಕೃತಿ ಒಡಮೂಡಿದೆ. ಇಂತಹ ನಮ್ಮಹಳ್ಳಿಗಳ ನಾಡಾದ ಹಳ್ಳಿಗರ ಸಂಸ್ಕೃತಿ ಸೃಷ್ಠಿಯಾಗಿರುವುದು ಪಂಡಿತರ ಕಾವ್ಯಗಳಲ್ಲಿ. ಶಿಲಾಶಾಸನ ಶಿಲ್ಪಕಲೆಗಳಲ್ಲಲ್ಲ, ಪಾಮರರೆಂದು ಕರೆಯಲ್ಪಡುವ ಹಳ್ಳಿಗರ ಹಾಡುಗಳಲ್ಲಿ. ಜಾನಪದ ಸಾಹಿತ್ಯದಲ್ಲಿ ಜೀವನದ ಅನೇಕ ನೈಜ ಚಿತ್ರಗಳನ್ನು ಸೃಷ್ಠಿಸಿಕೊಡುವ ಈ ಹಾಡುಗಳು ರೈತನಿಗೆ ಆನಂದ ಮತ್ತು ಶ್ರಮದ ಧಣಿವನ್ನಾರಿಸಿ ಕೊಳ್ಳುವಾಗ ಹುಟ್ಟಿಕೊಂಡಂತವುಗಳು. "ಅಂತೆಯೇ ಜಾನಪದ ಸಾಹಿತ್ಯ ಪಾಮರರ ಉಸಿರಾದರೆ ಅದನ್ನು ರಸಿಕರೆಲ್ಲರೂ ಹೊತ್ತು ಕುಣಿದಾಡುತ್ತಾರೆ. ಜಾನಪದ ಸಾಹಿತ್ಯವು ನಿರಾಭಾರಣ ಸುಂದರಿ, ಅದಕ್ಕೆ ಅಲಂಕಾರ ಭಾರವಿಲ್ಲ, ಪರಂಪರೆಯ ಗುಲಾಮತನವಿಲ್ಲ, ಸಮಯಾದಿಗಳ ಜೊಂಜಾಟವಿಲ್ಲ, ಅನುಕರಣ ಮೊದಲಾದವುಗಳ ಮುರುವತ್ತಿಲ್ಲ, ನಿತ್ಯ ನಿಸರ್ಗಕ್ಕೆ ಅದು ಸದಾ ಕಣ್ಣು ತೆರೆದಿದೆ. ಅಲ್ಲಿ ಬಂದುದು ಎಲ್ಲವು ಹೊಚ್ಚಹೊಸದೆ, ಅದರಲ್ಲಿ ಸುಳಿದಾಡುತ್ತಿರುವುದು ಜನವಾಣಿ, ಕುಣಿದಾಡುತ್ತಿರುವುದು ಜನ ಜೀವನ. ಉಸಿರಾಡುತ್ತಿರುವುದು ನಮ್ಮ ಸಂಸ್ಕೃತಿ"[೨೮೫] ಎಂದು ಕನ್ನಡ ಜಾನಪದ ಗೀತೆಗಳು ಕೃತಿಯಲ್ಲಿ ಡಾ॥ ಗದ್ದಗಿಮಠ ಅಭಿಪ್ರಾಯ ಪಡುತ್ತಾರೆ.

ಜಾನಪದ ಸಾಹಿತ್ಯವು ಕರ್ನಾಟಕದಲ್ಲಿ ಬಹುಮುಖಿಯಾಗಿ ಬೆಳೆದು ಬಂದಿದೆ. ನಾಡಿನ ತುಂಬೆಲ್ಲ ರಾಶಿ ರಾಶಿಯಾಗಿ ಬೆಳೆದು ಹುಲುಸಾದ ಸಾಹಿತ್ಯದ ಬೆಳೆಯನ್ನು ನೀಡಿದೆ. ಬಿಸುವ, ಒನಕೆಯ ಹಾಡು, ಕೋಲಿನ ಹಾಡು, ಸುಗ್ಗಿಯ ಹಾಡು, ಹಂತಿಯ ಹಾಡು, ಹೋಳಿಯ ಹಾಡು, ಲಾವಣಿಯ ಹಾಡು, ಗೊಂದಲಿಗರ ಹಾಡು, ದೋಣಿಯ ಹಾಡು, ಸೋಬಾನ ಹಾಡು, ಶಿವಶರಣರ ಹಾಡು, ಎಲ್ಲಮ್ಮನ ಹಾಡು, ಕಂಬಿಯ ಹಾಡು, ಶೀಗೆಯ ಹಾಡು ಮುಂತಾದ ಬಗೆ ಬಗೆಯಲ್ಲಿ ಜನಪದೀಯರು ತಮ್ಮ ಅನುಭವಗಳನ್ನು ಹರಳುಗಟ್ಟಿದ್ದಾರೆ. ಜಾನಪದ ಸಾಹಿತ್ಯ ವಿಸ್ತಾರವಾಗಿ ಹರಡಿಕೊಂಡಿದೆ. ಅದರಲ್ಲಿ ಕೃಷಿ ಸಂಬಂಧಿ ಅಂಶಗಳನ್ನು ಕ್ರೋಢೀಕರಿಸಿಕೊಂಡು ಈ ಭಾಗದಲ್ಲಿ ಚರ್ಚಿಸಲಾಗಿದೆ. ಒಕ್ಕಲಿಗರು ಬಳಸುವ ಸ್ತುತಿಪದಗಳು, ಸುಗ್ಗಿ ಹಾಡುಗಳು, ಸುಗ್ಗಿ ಸಂಪ್ರದಾಯದ ಹಾಡುಗಳು, ಮತ್ತು ಹಂತಿ ಹಾಡುಗಳನ್ನು ಕುರಿತು ಸ್ಥೂಲವಾದ ಚರ್ಚೆಯನ್ನು ಈ ಕೆಳಗಿನಂತೆ ಮಾಡಲಾಗಿದೆ.

ಸ್ತುತಿಪದಗಳು : ಒಕ್ಕಲಿಗರಿಗೆ ಧರ್ಮಕ್ಕಿಂತ ದೇವರ ಭಾವನೆ ಹೆಚ್ಚಿನದು; ಸಾಂಪ್ರದಾಯಿಕ ಭಾವನೆಯನ್ನು ಹೊಂದಿರುವ ರೈತನು ಅನೇಕ ದೇವರುಗಳ ಆರಾಧಕ. ರೈತನು ದೇವರು, ದೈವ

ಮತ್ತು ದೆವ್ವ ಈ ಮೂರರಲ್ಲಿಯೂ ನಂಬಿಕೆ ಭಕ್ತಿಯನ್ನು ಭಯದಿಂದಲೇ ಇಟ್ಟು ಕೊಂಡಿದ್ದಾನೆ. ಸಂತೊಷವಾದಾಗ ಆನಂದದಿಂದ ಹಾಡಿ, ಅಸಹಾಯಕ ಸ್ಥಿತಿಯಲ್ಲಿ ದೇವರ ಮೇಲೆ ಭಾರಹಾಕಿ ಬಾಳನ್ನು ಮಾಡಿದ್ದಾನೆ. ಅಲ್ಲದೇ ಅಂಜಿಕೆಯಿಂದ ಮೊರೆಹೊಕ್ಕಿದ್ದಾನೆ. ಒಕ್ಕಲುತನವೇ ಮೂಲ ಉದ್ಯೋಗವಾಗಿರುವ ಹಳ್ಳಿಗಳಲ್ಲಿ ಮಾಹದೇವ (ಶಿವಲಿಂಗ) ಮತ್ತು ಬಸವಣ್ಣ ದೇವರ ಗುಡಿಗಳು ಇದ್ದೆ ಇರುತ್ತದೆ.

"ಶಿವಶಿವ ಎಂದಾರ ಸಿಡಿಲೆಲ್ಲ ಬಯಲಾಗಿ
ಕಲ್ಲು ಬಂದೆರಗಿ ಕಡೆಗಾಗಿ । ಎಲೆಮನವೆ
ಶಿವನೆಂಬ ಸಬುದ ಬಿಡಬ್ಯಾಡ"[೨೮೬]

ಶಿವನ ಆರಾಧಕನಾದ ರೈತನು ದೇವರ ಮೊರೆ ಹೋದರೆ, ತನಗೆ ಬಂದ ಕಷ್ಟಗಳೆಲ್ಲ ಕೊನೆಯಾಗುತ್ತವೆ ಎಂದು ನಂಬಿದ್ದಾನೆ. ರೈತನಿಗೆ ಸುಗ್ಗಿಯ ದೇವರುಗಳೇ ಬೇರೆ, ಭೂ ತಾಯಿ, ಬನದಮ್ಮ, ಪತ್ರಿಯ ಗಿಡ, ಬನ್ನಿಯ ಗಿಡ ಮೊದಲಾದ ನಿಸರ್ಗ ದೇವತೆಗಳನ್ನು ಅಡವಿಯಲ್ಲಿ ಪೂಜಿಸುವನು.

"ಬೆಳದ ಬೆಳಸಿಗೆ ಬನ್ನಿ ಭೂತಾಯಿಗೆ ಬನ್ನಿ
ನಾಡ ಸಂಪತ್ತ ಬೆರಿ ಬನ್ನಿ ಕೋಲು ಕೋಲಿ॥
ಬಿತ್ತಿದ ಹೊಲದಾಗ ಒತ್ತಿಹಾಯಕಿ ಯಾರ
ಮುತ್ತಿನುಡಿಯಕ್ಕಿ ಬನದಮ್ಮ! ಹಾಯ್ದರ
ಬಿಚ್ಚಿಬಿದ್ದಾವ ಬಿಳಿಜೋಳ॥"[೨೮೭]

ಅಲ್ಲದೇ ಜೋಕುಮಾರನ ಆರಾಧನೆ, ಅವನು ಹುಟ್ಟಿ ಮಳೆಯನ್ನು ತರುತ್ತಾನೆ ಎಂದು ಒಕ್ಕಲಿಗರು ನಂಬಿದ್ದರು. ಮಳೆರಾಜನ ಕುರಿತು ಅನೇಕ ರೀತಿಯ ಆಚರಣೆ– ನಂಬಿಕೆಗಳು ಇರುವುದು ಕಂಡು ಬರುತ್ತದೆ. ಮಳೆರಾಜನ ಕುರಿತು ಕೆರೂರ ಕವಿ ಕುರುಡರಾಜ ಕಟ್ಟಿ ಹಾಡುವ ಹಾಡುಗಳನ್ನು 'ಕನ್ನಡ ಜಾನಪದ ಗೀತೆ' ಕೃತಿಯಲ್ಲಿ ಸಂಗ್ರಹಿಸಲಾಗಿದೆ.

"ರಾಗಿ ಬಣ್ಣದ ಕುದುರಿ, ರಾಜೇಕ ದೊಡ್ಡದು
ರಾಜರೊಳು ರಾಜ ಮಳೆರಾಜ । ಬರುವಾಗ
ರಾಜೇವ ಕೈಯ ಮುಗಿದಾವ ॥
ಮಳಿಯಪ್ಪ ಮಳೆರಾಜ, ಕರೆಯುತಾರೊ ನಿನ್ನ
ಮೊದಲು ಕೂರೀಗೆ ರೈತಾರು । ಹೊಲದಾಗ
ಫಲವೆದ್ದು ಕೈಯ ಮುಗಿದಾವ ॥"[೨೮೮]

ಅಲ್ಲದೇ ರೈತನ ಭೂಮಿ ತಾಯಿಯ ಸ್ತುತಿ ತುಂಬಾ ಗಮನಾರ್ಹ ಮತ್ತು ಸ್ಫೂರ್ತಿದಾಯಕ ಉದಯರಾಗದಲ್ಲಿಯೇ ಹೊರಹೊಮ್ಮುವಂತದ್ದು.

"ಏಳುತಾಲೇ ಎದ್ದು ಯಾರ್‍ಯಾರ ನೆನೆಯಲೆ
ಎಳ್ಳು ಜೀರಿಗೆ ಬೆಳೆಯೋಳ । ಭೂ ತಾಯಿ
ಎದ್ದೊಂದು ಗಳಿಗೆ ನೆನದೇನು॥"[೨೮೯]

ಇಷ್ಟೇ ಅಲ್ಲದೆ ಅನೇಕ ಗ್ರಾಮ ದೇವತೆಗಳ ಆರಾಧನೆಯನ್ನು ಕಾಣಬಹುದಾಗಿದೆ. ಒಕ್ಕಲಿಗರು ಆರಾಧಿಸುವ ದೇವರುಗಳಲ್ಲಿ ಬಸವಣ್ಣ ಮತ್ತು ಹನುಮಪ್ಪ ಮುಖ್ಯರಾದವರು. ಬಸವಣ್ಣನ ಜಾತ್ರೆಗಳು

ಕರ್ನಾಟಕದ ವೈಶಿಷ್ಟ್ಯಗಳು ಉತ್ತರ ಕರ್ನಾಟಕದ ಅನೇಕ ಕಡೆಯಲ್ಲಿ ಪ್ರಸಿದ್ಧಿ ಪಡೆದ ಬಸವಣ್ಣನ ಗುಡಿಗಳಿವೆ. ಬಸವಣ್ಣನ ಕುರಿತು ಈ ರೀತಿ ಹೇಳುತ್ತಾರೆ.

"ಕುಂಟೋಜಿ ಬಸವಣ್ಣ ಒಂಟಾಗಿ ಕಾದಾಡಿ
ಕುಂಟಾದ ಕಾಲ ಮುರಕೊಂಡು । ಪರಿಸ್ಯಾಗ
ಮಂಟಪದ ಮುಂದ ಮಲಗ್ಯಾನ ॥"[೨೯೦]

ಬಸವಣ್ಣಗಳು ಕಾದಾಡಿ, ಕಾಲುಮುರಿದುಕೊಂಡ ಅಂಶ ಕಂಡು ಬರುತ್ತದೆ. ಒಂದು ಜಾನಪದ ಕಥೆಯೂ ಉಂಟು. ಆ ಕಥೆಯಲ್ಲಿ ಬಸವಣ್ಣನನ್ನು ಪೂಜಿಸದ ಒಕ್ಕಲಿಗನೇ ಇಲ್ಲ, ಹಳ್ಳಿಗೆ ದೊಡ್ಡ ಬಸವನಿಲ್ಲದಿದ್ದರೂ, ಕಳಿ ಬಸವನಾದರು ಇದ್ದೇ ಇರುತ್ತಾನೆ. ದ್ರಾವಿಡ ಜನಾಂಗದಲ್ಲಿ ಬಂದ ಅನೇಕ ಸಂಪ್ರದಾಯಗಳು, ಒಕ್ಕಲಿಗನ ಉಪಕರಣಗಳೂ ಈ ಮಾತನ್ನು ಪುಷ್ಟೀಕರಿಸುವವು.

ಹನುಮಪ್ಪನು ಒಕ್ಕಲಿಗನಿಗೆ ಸುಗ್ಗಿಯ ದೇವರಲ್ಲ. ಕಾಟ ಪೀಡೆಗಳನ್ನು ಕಳೆದುಕೊಳ್ಳಲು ನೆಡೆದು ಕೊಳ್ಳುವ ದೇವರಾಗಿದ್ದಾನೆ.

"ಡೊಂಕ ಮಾರಿಯ ಹನುಮ, ಲಂಕಾಕ ಬಲು ಚಲುವ
ಟೊಂಕದ ಮ್ಯಾಲೆ ಎಡಗೈಯ । ಇಟ ಕೊಂಡು
ಲಂಕಾಕ ಲಾಗ ಹೊಡೆದಾನೊ॥"[೨೯೧] ಎನ್ನಲಾಗಿದೆ.

ರೈತರ ನಂಬಿಕೆ–ಆಚರಣೆಯಲ್ಲಿ ಅನೇಕ ದೆವ್ವ ಪಿಶಾಚಿಗಳ ಕುರಿತು ಅನೇಕ ದಂತ ಕಥೆಗಳಿವೆ. ಏಳು ಮಕ್ಕಳ ತಾಯಿ ದೆವ್ವ ಕುರಿತಂತೆ

"ಜೋಳದ ಹೊಲವನ್ನು ಏಳು ಮಕ್ಕಳ ತಾಯಿ
ಹಾಳ ಮಾಡಬ್ಯಾಡ ನಂ ಬೆಳಸು । ಸುಗ್ಗ್ಯಾಗ
ಬಲಿಕೊಟ್ಟು ಕೆಯ ಮುಗಿದೇವ ॥"[೨೯೨]

ಎಂದು ರೈತನು ಪ್ರಾರ್ಥಿಸುತ್ತಾನೆ. ಅಂಜಿಕೆ ಹಿನ್ನೆಲೆಯಲ್ಲಿ ಇಂತಹ ಹಾಡುಗಳು ಹುಟ್ಟಿ ಕೊಳ್ಳುತ್ತವೆ. ಒಕ್ಕಲಿಗರು ರಾಶಿ ಮಾಡುವ ಮುನ್ನ ಬಲಿಯನ್ನು ಕೊಟ್ಟು ಆ ದೆವ್ವವನ್ನು ತೃಪ್ತಿ ಪಡಿಸುತ್ತಾರೆ.

ಸುಗ್ಗಿಯ ಹಾಡುಗಳು : ಭಾರತ ದೇಶದ ಆರ್ಥಿಕ ಬೆನ್ನೆಲುಬು ಒಕ್ಕಲಿಗ. ವರ್ಷದ ಎಲ್ಲಾ ದಿನಗಳಲ್ಲಿಯೂ ಶ್ರಮದಾಯಕ ಕೆಲಸ ನಿರ್ವಹಿಸಿ ದುಡಿಯುತ್ತಾನೆ. ಒಕ್ಕಲಿಗನಿಗೆ ಸಂತೋಷ ನೀಡುವ ಕಾಲ ಸುಗ್ಗಿಯ ಕಾಲ, ಸುಗ್ಗಿಯಲ್ಲಿ ಕೇಳಿಬರುವ ಹಂತಿಯ ಹಾಡುಗಳ ಸೊಬಗು ಎಲ್ಲರನ್ನು ಆಕರ್ಷಿಸುವಂತದ್ದು. ಹಂತಿಯ ಹಾಡುಗಳು ತ್ರಿಪದಿ ರಚನೆಯ ವಿನ್ಯಾಸ ಹೊಂದಿವೆ. ಆದರೂ ಜನಪದೀಯರಲ್ಲಿ ಬರೆದರೆ ಮೂರು ಸಾಲು, ಹಾಡಿದರೆ ನಾಲ್ಕು ಸಾಲಿನ ಪದಗಳೆಂದೂ, ಹಾಡುಗಳೆಂದೂ ಕರೆಸಿಕೊಳ್ಳುತ್ತವೆ. ಹಂತಿಯ ಹಾಡುಗಳ ರೀತಿಯಲ್ಲಿಯೇ, ಬೀಸುವ ಹಾಡುಗಳು ಹುಟ್ಟಿಕೊಂಡಿವೆ. ಬೀಸುವ ಹಾಡುಗಳು ಹೆಣ್ಣು ಮಕ್ಕಳಿಗೆ ಸಂಬಂಧ ಪಟ್ಟರೆ, ಹಂತಿಯ ಹಾಡುಗಳು ಗಂಡು ಮಕ್ಕಳಿಗೆ ಸಂಬಂಧ ಪಟ್ಟವುಗಳಾಗಿವೆ.

ಹಂತಿ ಮುಖ್ಯವಾಗಿ ಒಂದು ಕೆಲಸದ ಪ್ರಕ್ರಿಯೆ. ಈ ಕೆಲಸದ ಪ್ರಕ್ರಿಯೆಗಳನ್ನು ದಾಖಲಿಸುವುದನ್ನೇ ಹಂತಿಯ ಹಾಡುಗಳು ಎನ್ನಬಹುದು. 'ಹಂತಿ' ಎಂದರೆ ಸಂಕ್ಷಿಪ್ತ ಕನ್ನಡ ನಿಘಂಟುವಿನಲ್ಲಿ "ಹಂತಿ: ಸಾಲು, ಕಣದಲ್ಲಿ ತೆನೆಯನ್ನು ತುಳಿಸಲು ಕಟ್ಟು ದನಗಳ ಸಾಲು".[೨೯೩] ಎಂದು ಅರ್ಥಗಳಿವೆ. ಹಂತಿ

ಸ್ವರೂಪವನ್ನೂ, ಬೀಸುವ ಸಂದರ್ಭವನ್ನು ರಚನೆ ಮತ್ತು ಅಂತಃಸತ್ವ (structure and content) ಗಳಲ್ಲಿ ಸಾಮ್ಯವಿರುವ ಹಿನ್ನೆಲೆಯನ್ನು ಇಟ್ಟುಕೊಂಡು ವೀರಣ್ಣ ದಂಡೆಯವರು 'ದೇಶಿದೃಷ್ಟಿ' ಎಂಬ ಕೃತಿಯಲ್ಲಿ ಈ ರೀತಿ ವಿವೇಚಿಸಿದ್ದಾರೆ.

೧ ವೃತ್ತಾಕಾರದ ರಚನೆ-ಬೀಸುವ ಕಲ್ಲು ಹಾಗೂ ಕಣದ್ದು, ಕೆಳಗಿನ ಕಲ್ಲಿಗೆ ಹತ್ತಿಕೊಂಡಿರುವ ಹೊಕ್ಕಳಗುಂಜಿ ಆಧಾರದ ಮೇಲೆ ಬೀಸುವ ಕಲ್ಲು, ನೆಟ್ಟ ಮೇಟಿಯ ಆಧಾರದ ಮೇಲೆಯೇ ಎತ್ತುಗಳು ಸುತ್ತಲು ತಿರುಗುವುದು.

೨. ಎರಡು ಕ್ರೀಯೆಗಳು ಜೋಳಕ್ಕೆ ಸಂಬಂಧಿಸಿದವುಗಳು, ಒಂದು ತೆನೆಯಿಂದ ಜೋಳ ಬೇರ್ಪಡಿಸುವ ಕ್ರಿಯೆಯಾದರೆ, ಇನ್ನೊಂದು ಜೋಳದ ಕಾಳನ್ನು ಅರೆಯುವ ಕೆಲಸ ಮಾಡುತ್ತದೆ.

೩. ಬೀಸು ಕಲ್ಲಿಗೆ ಮುತ್ತಿಗೆ ಹಾಕಿದಂತೆ ಹಂತಿಯಲ್ಲಿ ರಾಗೋಲಿನಿಂದ ಮೇಲಿಂದ ಮೇಲೆ ದನದ ಕಾಲಿಗೆ ತೆನೆಗಳನ್ನು ಎಳೆಯುವ ಕೆಲಸ ನಡೆದಿರುತ್ತದೆ.

೪. ಬೀಸುವ ಕ್ರಿಯೆ ನಸುಕಿನಲ್ಲಿ ನಿಶಬ್ದವಾದ ಆಹ್ಲಾದಕರವಾದ ವಾತಾವರಣದಲ್ಲಿ, ಹಂತಿಯು-ಬೀಸುವ ಈ ಸಮಯವನ್ನೊಳಗೊಂಡು ಇಡೀ ರಾತ್ರಿ ನಡೆಯುವಂತಹುದ್ದು.

೫. ಬೀಸುವ ಹಾಡಿನಲ್ಲಿ-ಕಲ್ಲು ಎಳೆಯುವ ಹೆಣ್ಣು ಮಕ್ಕಳು ತನ್ನ ಬದುಕನ್ನೇ ಹಾಡಿನ ಸಂಗತಿಯಾಗಿ ಬಳಸುತ್ತಾಳೆ. ಹಂತಿ ಹಾಡಿನಲ್ಲಿ ಒಕ್ಕಲಿಗ-ತನ್ನ ರೈತ ಬದುಕನ್ನು ತನ್ನ ಜೊಡಿಯಾಗಿ ದುಡಿಯುವ ಬಸವಣ್ಣನ ವರ್ಣನೆಯನ್ನು ಹಾಡಿಗೆ ವಿಷಯವಾಗಿ ಬಳಸುತ್ತಾನೆ..........."[೨೪] ಹಂತಿ ಹಾಡುಗಳಲ್ಲಿ ಪ್ರಾರಂಭದ ಸ್ತುತಿ, ಕಂಕಿ ತೆಗೆಯುವ ಕಾಲದ ಚಟುವಟಿಕೆಯ ಚುಟುಕುಗಳು, ಹಂತಿ ಬಿಡುವ ಕಾಲದ ಬೂದುಗ, ಕರಿಬಂಟ ಕುರಿತಾದ ಹಾಡುಗಳು ಮತ್ತು ಜೋಳ ತೂರುವ, ಹಂತಿಯ ಎತ್ತುಗಳನ್ನು ಶೃಂಗರಿಸಿ ಹಾಡುವ ಹಾಡುಗಳು ಅನೇಕ ವಿಶಿಷ್ಟತೆಗಳಿಂದ ಕೂಡಿರುತ್ತವೆ.

'ಕನ್ನಡ ಜಾನಪದ ಗೀತೆಗಳು' ಎಂಬ ಕೃತಿಯಲ್ಲಿ ಡಾ.ಎಸ್.ಎಸ್.ಗದ್ದಿಗಿಮಠ ಈ ರೀತಿ ಹೇಳುತ್ತಾರೆ. ಆರ್ಯರು ಭರತ ಖಂಡಕ್ಕೆ ಬರುವ ಮುನ್ನ ಮೂಲ ಜನಾಂಗ ದ್ರಾವಿಡರೂ ತಮ್ಮ ಸಂಸ್ಕೃತಿಯ ಹೆಗ್ಗುರುತಾದ ಕೃಷಿ ಕರ್ಮದಲ್ಲಿ ನಿಪುಣರಿದ್ದು, ಮುಂದುವರೆದಿದ್ದರು. ಅವರ ಮೇಲೆ ಆರ್ಯ ಸಂಸ್ಕ್ರತಿಯ ಗಣಪತಿ ಪೂಜೆಯು ಏನು ಪ್ರಭಾವ ಮಾಡಿದಂತೆ ಕಂಡುಬರುವುದಿಲ್ಲ. ಏಕೆಂದರೆ ಗಣಪತಿ ಪೂಜೆಗೆ ಸುಗ್ಗಿಯಲ್ಲಿ ಸ್ಥಾನವಿಲ್ಲ-- ಶಿವಶರಣರ ನೀತಿಯ ಕಟ್ಟುಗಳನ್ನು ಒಪ್ಪಿಕೊಂಡು ಅವರನ್ನು ತನ್ನ ಸುಗ್ಗಿಯ ಕಣದಲ್ಲಿ ಬರಮಾಡಿಕೊಂಡಿದ್ದಾರೆ.

"ಹಂತಿ ಪದ ಕೊಂದಿಲ್ಲ, ನಿಂತು ಬೆನಕನ ಪೂಜೆ
ಹಂತಿಯೊಳ ಪೂಜೆ ಶರಣರಿಗೆ । ಗಣಪತಿಗೆ
ಸ್ವಂತ ನೆನೆಯಂದ ಒಕ್ಕಲಿಗ॥"[೨೫]

ಒಕ್ಕಲಿಗನು ಸುಗ್ಗಿಯ ಕಣದಲ್ಲಿ ಗೌರವಾದರದಿಂದ ಶರಣರನ್ನು ಬರಮಾಡಿ ಕೊಂಡು, ಗಣಪತಿಯನ್ನು ನಿರಾಕರಿಸುತ್ತಾರೆ. ಆದರೆ ಇಂದು ಬೆನಕನ ಪೂಜೆಯನ್ನು ಮೊದಲು ಮಾಡುವುದನ್ನು ಕಾಣುತ್ತೇವೆ. ಹಂತಿಯ ಹಾಡುಗಳು ರೈತನ ಬದುಕಿನ ಸಮಗ್ರ ಚಿತ್ರಣ ನೀಡುತ್ತವೆ. ಅವನ ಆಚಾರ-ವಿಚಾರ, ಬದುಕಿನ ಕ್ರಮಗಳನ್ನು ಕಟ್ಟಿಕೊಡುತ್ತವೆ. ಸುಗ್ಗಿಯ ಕಣದಲ್ಲಿ ರೈತನಿಗೆ ಅನೇಕ ಜನ ಬಾಬುದಾರರು ಇರುತ್ತಾರೆ. (ಮಠದಯ್ಯ, ಹೂಗಾರ, ಚಲುವಾದಿ ಮೊದಲಾದವರು) ಆಯಗಾರರು (ಬಡಿಗ, ಕಂಬಾರ, ಮಡಿವಾಳ, ಹಡಪಿಗ, ಮೊದಲಾದವರು) ಹಕ್ಕುದಾರರು (ಸರಕಾರಿ ಚಾಕರಿಮಾಡುವ ಹಳಬ, (ತಳವಾರ)

ಹೊಲೆಯ ಮೊದಲಾದವರು) ಅಲ್ಲದೇ ವಾಸ, ಮುಲ್ಲಾ, ಚೋರ, ಗಸ್ತಿ, ಕೊರವಂಜಿ ಮೊದಲಾದ ಭಿಕ್ಷುಕರು ಕಂಡು ಬರುವರು. ಕೊಡಗೈದಾನಿಯಾದ ರೈತ ಈ ಎಲ್ಲಾ ಜನರಿಗೆ ತನ್ನ ಬೆಳೆಯ ಪಾಲನ್ನು ನೀಡುತ್ತಾನೆ.

"ಬೂದನಿಗೆ ಬಾಸಿಂಗ, ಭೂಮಿತಾಯಿಗೆ ದಂಡೆ
ಸಾಲ ಶರಣರಿಗೆ ಸರಮಾಲೆ। ಕಟಿಕೊಂಡು
ಮಾದಯ್ಯ ಗೆದ್ದ ಕೈಲಾಸ ॥"[೨೯೬]

ಹೂಗಾರನು ಸುಗ್ಗಿಯ ಕಣಕ್ಕೆ ಹೂ ಪತ್ರಿಗಳನ್ನಲ್ಲದೆ, ಬೂದನಿಗೆ ಬಾಸಿಂಗ ಭೂತಾಯಿಗೆ ದಂಡೆಯನ್ನು, ಪಾಲ ಶರಣರಿಗೆ ಅಂದರೆ ಸುಗ್ಗಿಯ ಉಪಕರಣಗಳಾದ ಸೆಳ್ಳು, ರಾಘೋಲು, ಜಂತೆ–ಗುಂಟೆ, ಹಂತಿಗಟ್ಟಿ, ಮೇಟ್ಟು ಮತ್ತು ಕರಿಬಂಟ–ಬಿಳಿಬಂಟ ಮೊದಲಾದವು. ಸರಮಾಲೆ ಕೊಡುವ ವಾಡಿಕೆ ಇರುವುದನ್ನು ಈ ಪದ್ಯ ಸೂಚಿಸುತ್ತದೆ. ಒಕ್ಕಲಿಗನು ತನ್ನ ಬೆಳಸಿನಲ್ಲಿ ಆಯಾ ಕೊಡುವುದಲ್ಲದೇ ಈ ಹಾಡುಗಳನ್ನು ಹಂತಿಯಲ್ಲಿ ಹಾಡಿ ಆಯಾಗಾರರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾನೆ.

ಮಳೆರಾಜನ ಬಗ್ಗೆ ಒಕ್ಕಲಿಗರಿಗೆ ತುಂಬಾ ನಂಬಿಕೆ ಆತನನ್ನು ಪ್ರಾರ್ಥಿಸುತ್ತಾರೆ, ಪೂಜಿಸುತ್ತಾರೆ, ಹಾಡಿ ಹೊಗಳುತ್ತಾರೆ. ಅಲ್ಲದೇ ಯಾವ ಯಾವ ಮಳೆ ಎಷ್ಟು ಶ್ರೇಷ್ಠ ಎಂದು ಹಂತಿಯ ಹಾಡಿನಲ್ಲಿ ಹೇಳುತ್ತಾರೆ. ಉತ್ತರಿ, ಸ್ವಾತಿಯ ಮಳೆಗಳು ರೈತನಿಗೆ ಭಾಷೆ ಕೊಟ್ಟ ಮಳೆಗಳು ಎಂದು ನಂಬಿರುತ್ತಾರೆ.

"ಆ ರಾಜ ಈ ರಾಜ, ಬೋರಾಜ ಮಾರಾಜ
ರಾಜರೊಳು ರಾಜ ಮಳೆರಾಜ । ಘನರಾಜ
ಬೀಜ ಸಕಲರಿಗೆ ತೆನಿರಾಜ ॥
ರೋಣಿಯ ಮಳೆಯಾಗಿ, ಓಣೆಲ್ಲ ಜೋಳಾಗಿ
ಕಾಣಾದ ಹುಲುಸು ಕುಡಿಯಾಗಿ । ಹೊಲದಾಗ
ಕಣ ತುಂಬ ರಾಶಿ ಹೊಳಿಯಾಗಿ ॥"[೨೯೭] ಇನ್ನೊ ಮುಂತಾದ ತ್ರಿಪದಿಗಳನ್ನು ಕನ್ನಡ ಜಾನಪದ ಗೀತೆಗಳು ಕೃತಿಯಲ್ಲಿ ಕಾಣಬಹುದು. ಅಲ್ಲದೇ ಯಾವ ಸಂದರ್ಭದಲ್ಲಿ ರೈತನಿಗೆ ಮಳೆಗಳು ಮೋಸಮಾಡುತ್ತವೆ ಎಂದು ಗುರುತಿಸುತ್ತಾನೆ.

"ಅಸಾಡಿ ಮುಂದಾಗಿ ಬೀಸ್ಯಾವ ಈ ಗಾಳಿ
ಮೋಸ ಮಾಡ್ಯಾವ ಮಗಿಮಳಿ । ಉತ್ರಿಸಾತಿ
ಬಾಸೆ ಕೊಟ್ಟಾವ ಬಡವರಿಗೆ ॥"[೨೯೮] ಎನ್ನಲಾಗಿದೆ.

ಹಂತಿಯ ಕಟ್ಟುವ, ತುಳಿಸುವ, ಎತ್ತಿನ ಸಿಂಗಾರ ಮತ್ತು ಅಂದಚಂದ ಹೆಸರುಗಳಿಂದ ಕರೆಯುವ. ಒಕ್ಕಲು ತಾಯಿ ಕಾಣುವ ಬಯಕೆಯ ಚಿತ್ರಗಳು ಕಂಡು ಬರುತ್ತವೆ. ಹಂತಿ ತಿರುಗುವ ಬಸವನನ್ನು ಮಗನೆಂದು ಹೆಮ್ಮೆಯಿಂದ ಮೈಮೇಲಿನ ಸುಂಕವರಸುತ್ತಾಳೆ.

"ಮೂಡಲ ಹೋರೀಗೆ, ಮುರಗಿಯ ಕೋಡಣಸು
ಸಣಗೆಜ್ಜೆ ಕೊರಳ ಸರಪಳಿಯ ಕಟಿಕೊಂಡು
ಸವನಾಗಿ ಹಂತಿ ತುಳಿದಾನೊ ॥
ಹಂಡ ಹವಳ್ಯನ ಕಟ್ಟು, ಗುಂಡು ಗುಳ್ಯಾನ ಕಟ್ಟು

ಮಾಲಿಂಗನ ಕಟ್ಟು ಮೇಟ್ಯಾಗ। ನಮ್ಮೆತ್ತ
ಕಾಡಿದರ ಕಟ್ಟೊ ಕಡಿಸುತ್ತೊ ॥
ಹಂತೀಯ ಕಟ್ಟವನ, ಹೌಸ ಹುರುಪನು ನೋಡೊ
ಹಂತಿಯ ಧೂಳ ಮೈಧೂಳೂ । ಹದಿನಾರು
ಹಂತಿ ಎತ್ತಿನಾ ಹಣಿ ಧೂಳೊ ॥
ಹಂತಿಯ ಹೊಡೆದೆತ್ತು ಹಂತ್ತೇಲಿ ಬಂದಾರ
ಸುಂಕ ಜಾಡಿಸದೆ ಸೆರಗೀಲೆ । ಕಂದನಿಗೆ
ಹಂತೀಯ ಎತ್ತು ಹದಿನೆಂಟು ॥"[೨೯೯] ಎನ್ನಲಾಗಿದೆ.

ಸುಗ್ಗಿಯ ಸಂಪ್ರದಾಯ : ಸಂಪ್ರದಾಯಗಳು ಎಲ್ಲಾ ಜನಾಂಗಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಇದ್ದೇ ಇರುತ್ತವೆ. ಸಂಪ್ರದಾಯಗಳಲ್ಲಿ ಆಯಾ ಜನಾಂಗದ ಸಂಸ್ಕೃತಿ ಬಿಂಬಿತವಾಗಿರುತ್ತವೆ. ಅವುಗಳೇ ಆಚರಣೆಗಳು ಸಂಪ್ರದಾಯದ ಬೇರುಗಳು, ಜನಾಂಗದ ರಕ್ತ ರಕ್ತಗಳಲ್ಲಿ ಆಳವಾಗಿ ಬೇರೂರುತ್ತವೆ. ಒಕ್ಕಲುತನದ ಸಂಪ್ರದಾಯಗಳು ಇದಕ್ಕೆ ಹೊರತಲ್ಲ. ಸುಗ್ಗಿಯ ಸಂಪ್ರದಾಯ ಒಕ್ಕಲಿಗರಲ್ಲಿ ವಿಶೇಷವಾದದ್ದು. ಒಕ್ಕಲುತನದಲ್ಲಿ ಮೂರು ಕ್ರಮಗಳನ್ನು ಕಾಣಬಹುದು ೧. ಉತ್ತುವುದು ೨. ಬಿತ್ತುವುದು ೩. ಒಕ್ಕುವುದು ಈ ಮೂರರಲ್ಲಿಯೂ ಒಕ್ಕಲಿಗನು ಕೆಲವು ವಿಶಿಷ್ಟ ಸಂಪ್ರದಾಯಗಳನ್ನು ನೇಮ ನಿತ್ಯದಿಂದ ಪಾಲಿಸುವುದು ಕಂಡುಬರುವುದು. ಶ್ರಮದ ನಂತರ ಪಡೆಯುವ ವಿಶ್ರಾಂತಿ, ಮನಸ್ಸಿನ ಆನಂದಕ್ಕಾಗಿ ಒಕ್ಕಲಿಗನು ಅನೇಕ ಹಾಡುಗಳನ್ನು ಹಾಡಿದ್ದಾನೆ. ಶ್ರಮದ ದಣಿವನ್ನು ಆರಿಸಲಿಕ್ಕಾಗಿಯೇ ಜನಪದ ಸಾಹಿತ್ಯ ಸೃಷ್ಟಿಯಾಗಿದೆ. ಬಸವಾದಿ ಶರಣರ ಜೀವನ ಕ್ರಮಕ್ಕೆ ಒಗ್ಗಿಕೊಂಡು ಒಕ್ಕಲಿಗ ಅವರ ಕುರಿತಾಗಿ ಅನೇಕ ಸ್ತುತಿ ಹಾಡುಗಳನ್ನು ಹಾಡಿದ್ದಾರೆ. ಅಲ್ಲದೇ ಪ್ರಥಮರಲ್ಲಿ ಅನೇಕರು ಒಕ್ಕಲಿಗರಿದ್ದಾರೆ. ಇಳಿಹಾಳ ಬೊಮ್ಮಯ್ಯ, ಏಲೇಶಕೇತಯ್ಯ, ಮಾರಗೌಡ ಮುಂತಾದವರು. ಶಿವಶರಣರು ಹೊಲಗೆಲಸವನ್ನು ತಮ್ಮ ಕಾಯಕವೆಂದು ನಂಬಿ ಅದರಲ್ಲಿಯೇ ಕೈಲಾಸ ಕಂಡವರು.

"ಇಳಿಹಾಳ ಬೊಮ್ಮಯ್ಯ, ಹೊಲಗೆಲಸ ಕಾಯಕವ
ನಲುಮೆಯಲಿ ಸುಗ್ಗಿದಾಸೋಹ । ಹರಸೇವೆ
ಸಲಿಸಿ ಲಿಂಗದೊಳು ಬಯಲಾದ ॥"[೩೦೦] ಎನ್ನಲಾಗಿದೆ.

ಕಣವನ್ನು ಒಕ್ಕಲಿಗ ಶುಭದಿನವನ್ನು ಗೊತ್ತುಮಾಡಿಕೊಂಡು, ಗಟ್ಟಿಯಾದ ಎತ್ತರದ ಸ್ಥಳದಲ್ಲಿ ಕಣಕೆತ್ತುವುದು ಸಾಮಾನ್ಯವಾಗಿ ಅದು ಮಸಾರಿ ಭೂಮಿಯಾಗಿರುತ್ತದೆ. ನೀರನ್ನು ಹಾಕಿ ಕರೆಗಣ ಮಾಡುತ್ತಾರೆ. (ಕಣವನ್ನು ಮಾಡುವಾಗ ನೀರುಗ್ಗಿ ಮೇಟಿಯಿಲ್ಲದೆ ನೆಲ ತುಳಿಸುವುದಕ್ಕೆ ಕರೆಗಣ–ಬರೆಗಣ ಎಂದು ಕರೆಯುತ್ತಾರೆ) ನಂತರ ಮಧ್ಯ ಕಣದಲ್ಲಿ ಮೇಟಿಯ ನಾಟಲು ಕುಣಿಯನ್ನು ತೆಗೆಯುತ್ತಾರೆ. ಆ ಕುಣಿಯ ಹಸಿಮಣ್ಣನ್ನೊಯ್ದು ಹೊಲದ ಸಮೀಪದ ಹಾದಿಯ ಮೇಲೆ ಹಾಕುವ ಸಂಪ್ರದಾಯ ಈಗಲೂ ಕಣ್ಣಿಗೆ ಬಿಳುವುದು. ಈ ಸಂಪ್ರದಾಯದ ಗೂಡಾರ್ಥದ ಬಗ್ಗೆ ಮಾಹಿತಿ ಸಿಗುವುದಿಲ್ಲ. ಆಳವಾದ ಅಭ್ಯಾಸದಿಂದ ಜಾನಪದ ತಜ್ಞರು ಈ ರೀತಿಯ ಅಭಿಪ್ರಾಯ ಪಡುತ್ತಾರೆ. 'ಕಣದ ಮೇಟಿಯ ಕುಣಿಯ ಐದು ಬೊಗಸಿ ಹಸಿಮಣ್ಣನ್ನು ಹಾದಿಗೆ ಹಾಕುವುದೆಂದರೆ ಹಾದಿಗೆ ಔತಣ ಕೊಟ್ಟಂತೆ. ಸುಗ್ಗಿಯು ನೆಡೆದಿದೆ; (ಕ.ಜಾ.ಗೀ.ಪು–೧೩೮) ಎಂಬುದರ ಸೂಚನೆಯಾಗಿದೆ.

ತೆನೆಮುರಿಸಿ ಹಂತಿಯ ಕಟ್ಟುವುದು, ಮೇದೆ ಕಂಕಿಗಳನ್ನು ವಿಂಗಡಿಸುವುದು, ತೂರಿರಾಶಿಯನ್ನು ಮಾಡುವುದು, ಮೇಟಿಯರಾಶಿ, ಕರಿಬಂಟ, ಬಿಳಿಬಂಟ, ಗೋಪಾಳ ಮುಂತಾದ ಸುಗ್ಗಿಯ ಸಂಪ್ರದಾಯಗಳನ್ನು ಪಾಲಿಸುತ್ತಾ ಬಂದಿದ್ದಾರೆ.

"ಮೂತಾಳ ಕೂರಿಗಿಗೆ, ಯಾತರದು ಹಂಗಿಲ್ಲ
ಭೂತಾಯಿ ಬೆಳೆಯೆ ಒಕ್ಕಲಿಗ । ಜಗದೊಳಗೆ
ಕೋತುಳ್ಳ ಮೇಳಿ ಬಲಗೊಂಡು ॥
ಕಡೆಯ ಬಲಕಿನತಾಳ, ಎಡೆಯಾಯ್ತು ಅರಸನಿಗೆ
ಎಡಗಡೆಯ ತಾಳ ಪಶುಪಕ್ಕಿ । ಜೀವನಕೆ
ನಡುವಿನಾ ತಾಳ ರೈತನಿಗೆ ॥"[೩೦೧]

ಒಟ್ಟು ಬೆಳೆಯನ್ನು ಮೂರು ಭಾಗಮಾಡಿ ಹಂಚುತ್ತಾನೆ. ಒಂದು ತಾಳಿನ ಬೆಳಸು ರಾಜನಿಗೆ, ಮತ್ತೊಂದು ತಾಳಿನದು ಹಕ್ಕಿಪಕ್ಕಿಗಳಿಗೆ, ನಡುವಿನ ತಾಳಿನದು ತನಗೆ ಎಂದು ನಂಬಿರುತ್ತಾನೆ. ಅಲ್ಲದೇ ಒಕ್ಕಲಿಗ ಕೊಡುಗೈದಾನಿಯಾಗಿ ಬೆಳೆದ ಬೆಳಸನ್ನು ಕಣದಲ್ಲಿ ಹಂಚುತ್ತಾನೆ.

ಕಣವನ್ನು ಮಂಟಪಕ್ಕೆ, ಮೇಟಿಯನ್ನು ಚೆನ್ನಬಸವಣ್ಣನಿಗೆ, ಆರಾಧನೆ ಮಾಡುವ ರೈತನೇ ಬಸವೇಶ, ಇದಕ್ಕೆ ಗುರು ಪ್ರಭುದೇವ, ಕಣದೊಳಗಿನ ಬುದ್ಧಿವಂತ ಲಿಂಗ (ಬೂದ)

"ಕಣವೆ ಮಂಟಪವಾತೊ, ಗುಣವಂತ ಬಸವೇಶ
ಹೊಣೆಗಾರ ರೈತ ದಂಡೇಶ । ಕಣಮೇಟಿ
ಗಣಿ ಗುರುವು ಕಣಕೆ ಪ್ರಭು ಲಿಂಗೊ ॥"[೩೦೨] ಎನ್ನಲಾಗಿದೆ.

ಮೂರು ಕಾಲಿನ ಮೆಟ್ಟು[ರಾಶಿಯನ್ನು ತೂರಲು ಉಪಯೋಗಿಸುವ ಎತ್ತರವಾದ ತಿವುಟಿಗೆ ಅದಕ್ಕೆ ಮೂರು ಕಾಲುಗಳಿದ್ದು ಮೇಲೆ ನಿಲ್ಲಲು ಒಂದು ಹಲಗೆಯನ್ನು ಜೋಡಿಸುವರು.] ಇದು ತ್ರಿವಿಧ ಲಿಂಗಗಳ ಸಂಕೇತವಾಗಿದೆ. ಡೋಹಾರ ಕಕ್ಕಯ್ಯನೇ ಈ ರಾಶಿಗೆ ಸೆಳ್ಳಾದ, ವಚನಗಳೇ ಚೊಕ್ಕ ಮುತ್ತಿನ ರಾಶಿ. ಎಂಟು ಕಟ್ಟಿನ ಇಕ್ಕಲಿಯೇ ಅಷ್ಟಾವರಣ ಬದ್ಧವಾದ ಲಿಂಗಾಯತ ಮತ. ಇದರಿಂದ ಹುಲುಸಾಗಿ ಉಕ್ಕಿಯೇ ವಚನಶಾಸ್ತ್ರವಾಗಿದೆ.

"ಕಕ್ಕಯ್ಯ ಸೆಳ್ಳಾಗಿ, ಚೊಕ್ಕ ಮುತ್ತಿನ ರಾಶಿ
ಇಕ್ಕಲಿಯ ಎಂಟು ಕಟ್ಟುಗಳು । ಹುಲುಸಾಗಿ
ಉಕ್ಕಿದವು ರಾಶಿ ವಚನಗಳು ॥"[೩೦೩] ಎನ್ನಲಾಗಿದೆ.

ತೂರುವ ಮೆದಕ್ಕೆ ಬಿಳಿಬಂಟ, ರಾಶಿಗೆ ಕರಿಬಂಟನನ್ನು ಕಟ್ಟುವ ಸಂಪ್ರದಾಯವು ಸುಗ್ಗಿಯ ಕಣದಲ್ಲಿ ಉಂಟು.

ನೂರೊಂದು ಶರಣಾರು, ನೂರೊಂದು ಬಂಟಾರು
ಸಾರಿ ಹೇಳ್ಯಾನೊ ಒಕ್ಕಲಿಗೊ । ಹೊಲಸುಗ್ಗಿ
ಧೀರ ಕಾಯದ ದಿನವೆಂದು ॥
ಶರಣಮಡಿವಾಳಾದ, ಕರಿಬಂಟ ಕಣದಾಗ
ಹರಳಾದ ಕಣಕ ಬಿಳಿಬಂಟ ಪ್ರಭುಲಿಂಗ

ಗುರು ಬುದ್ದಿವಂತ ಲಿಂಗಾದ ॥ (ಕ.ಜಾ.ಗೀ.ಪು-೧೪೦) ಅಂದರೆ "ಕಣದ ರಾಶಿಯನ್ನು ಕಾಯಲು ಉಗ್ರವೀರ ಬಂಟ ವೀರಘಂಟೆಯ ಮಡಿವಾಳನಿಗೆ ಒಕ್ಕಲಿಗನು ಕರಿಬಂಟನೆಂದೂ, ಮತ್ತು ಪಾವನ ಭಕ್ತಿಯುಳ್ಳ ಮಹಾಶರಣ ಹರಳಯ್ಯನಿಗೆ ಬಿಳಿಬಂಟನೆಂದೂ ಕರೆದಿರುವನು. ಕರಿಬಂಟನೆಂದರೇ ಈಗಿನ ಒಕ್ಕಲಿಗನಿಗೆ ಕಂಕಿಯ ಸುಟ್ಟ ಕರುಕಾಗಿದೆ, ಬಿಳಿಯ ಬಂಟನೆಂದರೆ ಕಣದ ದಂಡೆಯ ಮೇಲಿರುವ ಒಲೆಯಲ್ಲಿಯ ಬೂದಿಯಾಗಿದೆ. ಅವನು ಈಗ ಈ ಬಂಟರ ಮಹತ್ವವನ್ನರಿಯಲು. ಬಂಟರನ್ನು ರಾಶಿಗೆ ಕಟ್ಟುವದರಿಂದ ಸಂಕದೇವನ ಬಲವಾಗಿ ರಾಶಿಯು ಹುಲುಸಾಗುವದೆಂದು ಹೇಳುವನು.".[೩೦೪]

ಸುಗ್ಗಿಯ ಕಣದಲ್ಲಿ ಇನ್ನೊಂದು ಸಂಪ್ರದಾಯವು ಕಂಡು ಬರುತ್ತದೆ. ಅಲ್ಲಮಪ್ರಭುದೇವರೇ ಕಣದಲ್ಲಿ ಪೂಜೆಗೊಳ್ಳುವ 'ಬುದ್ಧಿವಂತ ಲಿಂಗ' ಈಗ ಅದು ಬೂದ ಎಂದು ಕಣದಲ್ಲಿ ಕರೆಯಲಾಗುತ್ತದೆ. ಬೆಳವಲದ ಎರೆಯಲ್ಲಿ ಸುಗ್ಗಿಯ ಲಿಂಗಯ್ಯನಾಗಿ, ಮಸಾರಿಯಲ್ಲಿ, ಬುದ್ದಯ್ಯನೆಂದು, ಬೂದಯ್ಯನೆಂದು, ಕಣದಲ್ಲಿ ಪೂಜಿಸುವರು.

"ಬೂದನಿಗೆ ಬಾಸಿಂಗ ಭೂಮಿತಾಯಿಗೆ ದಂಡೆ
ಸಾಲ ಶರಣರಿಗೆ ಸರಮಾಲೆ । ಕಟಿಕೊಂಡು
ಮಾದಯ್ಯ ಗೆದ್ದ ಕೈಲಾಸ ॥"[೩೦೫]

ಎಲೆಪತ್ರಿಯ ಮುಕುಟ ಬಾಸಿಂಗ ಇದನ್ನು ಒಕ್ಕಲಿಗರು ಬೂದನ ರಾಶಿಗೆ ಏರಿಸುವದು, ಹೂ ದಂಡೆಯನ್ನು ಮೇಟಿಗೆ ಕಟ್ಟುವರು. ಉಳಿದ ಉಪಕರಣಗಳಿಗೆ ಸಾಲುಶರಣರೆಂದು ಹೂಮಾಲೆ ಹಾಕಿ ಪೂಜೆಮಾಡುವರು. ಹೂಗಾರನಿಗೆ ಬಾಬು ಎಂದು ಕೊಡುವ ವಾಡಿಕೆ ಈಗಲೂ ಇರುವುದು ಕೆಲವುಕಡೆ ಕಂಡುಬರುತ್ತದೆ. ವಿರಕ್ತ ಜಂಗಮ ಮಠಗಳು ದಾಸೋಹದ ಕಾರ್ಯವನ್ನು ನೆಡೆಸಿಕೊಂಡು ಬಂದಿವೆ. ಒಕ್ಕಲಿಗರು ಇಂತಹ ಮಠಗಳಿಗೆ ತಾವು ಬೆಳೆದ ಬೆಳಸಿನ ಕೆಲವು ಭಾಗ ನೀಡುವ ಅಂಶ ತಿಳಿದುಬರುತ್ತದೆ.

"ರಾಶಿಗಾಳಿಯು ಬಿಸಿ, ಸೂಸಿ ಹರಿಯಿತು ಕಣವು
ಕೂಸ ಕೋಳೂರ ಕಡೆಗಾಳಿ । ಬಿಸಿಂದು
ಮೀಸಲೀ ರಾಶಿ ಜಂಗಮಕೆ ॥
ಕಣದೊಳಗೆ ಒಕ್ಕಲಿಗ, ದನಿಯೆತ್ತಿ ಬೆಳತನಕ
ದನಿಯೆಂದು ಹಾಡಿ ಬೆಳಕೊಂಡು । ಒಕ್ಕುವನು
ಕಣ ರಾಶಿ ಉಣಿಸಿ ಜಂಗಮಕೆ ॥"[೩೦೬]

ಇಂದೂ ಕೂಡ ಹಳ್ಳಿಗಳಲ್ಲಿ ಈ ಪರಿಪಾಠವಿದ್ದು, ಆದರೆ ಕೊಡುವ ಪ್ರಮಾಣದಲ್ಲಿ ಮಾತ್ರ ವ್ಯತ್ಯಾಸವಾಗಿದೆ. ಬೂದನ ರಾಶಿಯೆಂದು ಒಕ್ಕಲಿಗ ತನ್ನ ಗುರು ಮಠಕ್ಕೆ ಬೇರೆ ರಾಶಿಯೆನ್ನೆ ಮಾಡುತ್ತಿದ್ದನು. ಇಂದು ಕಾಲ ಬದಲಾದಂತೆ ಕಂಡು ಬರುತ್ತದೆ. ಸುಂಕದ ರಾಶಿಯು ಹುಲುಸಾಗಲೆಂದು ಶರಣರ ಹಾಡುಗಳನ್ನು ಹಾಡಿ, ಒಕ್ಕಲಿಗನು ಕಣದಲ್ಲಿ ಬಿದ್ದ ಸಗಣಿಯ ಹೊರಹಾಕದೇ, ಕಡೆಯೆತ್ತಿನ ಸಗಣಿಯಿಂದ ಲಿಂಗಾಕೃತಿಮಾಡಿ ಎತ್ತಿನ ಬಾಲದ ಕೂದಲು ಕಿತ್ತು ಲಿಂಗದ ನೆತ್ತಿಯೊಳು ಚುಚ್ಚುತ್ತಾನೆ. ಸೆಳ್ಳು, ಜಂತೆ ಗುಂಟೆ, ರಾಘೋಲು ಮೊದಲಾದ ಉಪಕರಣಗಳನ್ನು ಹೊತ್ತು ಎಲ್ಲಾ ಶರಣರಿಗೆ ಹುಲುಸನ್ನು ನೀಡಿರೆಂದು ಉಡಿಯೊಡ್ಡಿ ಬೇಡುವ ರೂಡಿಗಳು ಕಂಡು ಬರುತ್ತವೆ.

"ಗುಂಡ ತಿಗರಿಯ ತಿರುವಿ, ರುಂಡಧಾರಿಯು ಕುಣಿದು
ಥಂಡಿ ಚೀಳುತಲಿ ಬೆಳವಲಕೆ । ಕುಂಬಾರ
ಗಿಂಡಿ ರಸಗಾಳಿ ಬೀಸುತಲಿ ॥

ಜಂತೆ ಗುಂಟಲಿ ಎಳೆದ, ನಿಂತಕಣಕದರಾಶಿ
ಬಂತು ನಿನ್ನಾಡ ಹಾಡುತಲಿ । ಬೆಳತನಕ
ಚಿಂತಿಲ್ಲದೆಡೆಯು ಶಿವನಡಿಗೆ ॥

ಸುಂಕ ರಾಶಿಯ ಕಣಕೆ, ಸಂಕದೇವನ ಬಲವು
ಕಂಕಿಯಾ ಕಣಕೆ ನಿನಬಲವು । ಮಾದೇವಿ
ಸೊಂಕಿದರೆ ರಾಶಿ ಕಣ ತುಂಬಿ ॥"[೩೦೭]

ಬಿತ್ತುವ ಸಮಯದಲ್ಲಿ ಒಂದು ವಿಶಿಷ್ಟ ಸಂಪ್ರದಾಯ ಕಂಡು ಬರುತ್ತದೆ. ಅದು ಅಡವಿ ಪೂಜೆಯಾಗಿದ್ದು ಇದ್ದನ್ನು ಕುರುಬರು ಮಾಡುತ್ತಾರೆ.

"ಅಡವಿ ಪೂಜೆಯ ಮಾಡಿ, ಎಡೆಮಾಡಿ ಕೂರಿಗೆ
ಒಡೆಯ ಗೊಲ್ಲಾಳ ಬಿತ್ತಿದರೆ । ಮಳೆಯಾಗಿ
ಕಡೆರಾಶಿ ತುಂಬಿ ಕೈ ಸೋತು ॥

ಮಹಾಶಿವ ಶರಣ ಗುಂಡಯ್ಯನ ಶಿವಭಕ್ತಿ ಅಮರವಾಗಿ ಉಳಿಯಲ್ಲೆಂದು ಒಕ್ಕಲಿಗನು ಗುಂಡಯ್ಯನ ಮಡಿಕೆಯನ್ನು ಪೂಜೆಮಾಡಿ ಜೋಕುಮಾರ ಆಕಳ ಅಂಬಲಿ (ಹುಳಿನುಚ್ಚು) ಚರಗವನ್ನು ಹೊಲದ ತುಂಬೆಲ್ಲ ಚೆಲ್ಲುತ್ತಾರೆ.

ಬೆಚ್ಚು ಗಡಿಗೆಯು ಗುಂಡ, ನುಚ್ಚು ಜೋಕನು ಚರಗ
ಬೆಚ್ಚಾಗಿ ಹೊಲಕೆ ಒಕ್ಕಲಿಗ/ಚರಗೊಗೆದ
ಬಚ್ಚಿಡಲು ಹುಲುಸು ಹೊಲದೊಳಗೆ ॥
ಬೆಚ್ಚು ಹಾಕಿದ ಗಡಿಗಿ, ಮುಚ್ಚಿಟ್ಟ ಬನ ಹುಲುಸು
ಬಚ್ಚಾದ ಬೆಳೆಯ ಕಣವುಕ್ಕಿ ಗುಂಡಯ್ಯ
ಹೆಚ್ಚಾಯ್ತು ನಿನ್ನ ಶಿವ ಭಕ್ತಿ ॥

ಮೇಲಿನ ಎರಡು ತ್ರಿಪದಿಗಳನ್ನು ಗಮನಿಸಿದರೆ ಒಕ್ಕಲಿಗರು ಹೊಲಗಳಲ್ಲಿ ನಿಲ್ಲಿಸುವ ಬೆದರು ಗೊಂಬೆಯ ಕುರಿತು ಹೇಳಲಾಗಿರುವ ಅಂಶ ತಿಳಿದು ಬರುತ್ತದೆ. ಬೆಚ್ಚು ಅಂದರೆ ಬೈಚ್ಚು, ಮುಚ್ಚಿಡು ಎಂಬ ಅರ್ಥಗಳನ್ನು ಒಳಗೊಂಡು ಬಳಕೆಯಾಗಿರಬಹುದೆ?, "ಆದರೆ ಈ ಬೆಚ್ಚು ಈಗ ಹೊಲದಲ್ಲಿ ಕೇವಲ ಬೆದರು ಎಂಬರ್ಥದಲ್ಲಿ ಉಪಯೊಗಿಸಲ್ಪಡುವದು. ಬನದ ಹುಲಸನ್ನು ಕುಂಬಾರ ಗುಂಡಯ್ಯನ ಸಮರಸ ಶಿವ ಭಕ್ತಿಯ ಮಡಿಕೆಯಲ್ಲಿ ಮುಚ್ಚಿಟ್ಟರೆ ಅದು ಹೊಲ ಬಿಟ್ಟು ಹಾರಿ ಹೋಗಲಾರದೆಂಬ ಮುಗ್ಧ ಭಾವದಿಂದ ಹೊಲದಲ್ಲಿ ಶಿವಶರಣನ ಹೆಸರಿನಲ್ಲಿ ದಬ್ಬು ಹಾಕುವ ಮಡಕೆಗೆ ಒಕ್ಕಲಿಗನು ಬೆಚ್ಚು ಎಂದು ಕರೆದಿರಬಹುದು. ಈ ಬೆಚ್ಚ ಗಡಿಗೆಯೇ ಗುಂಡನೆಂದೂ, ನುಚ್ಚು(ಅಂಬಲಿ) ಜೋಕನು

ಹೊಲಕ್ಕೆ ಚೆಲ್ಲುವ ಚರಗವೆಂದೂ, ಒಕ್ಕಲಿಗರು ಕುಂಬಾರ ಗುಂಡಯ್ಯನ ಹಂತಿಯ ಹಾಡಿನಲ್ಲಿ ಹಾಡಿದ್ದಾರೆ"[೨೦೮] ಎಂದು ಕನ್ನಡ ಜಾನಪದ ಗೀತೆ ಕೃತಿಯಲ್ಲಿ ಹೇಳಲಾಗಿದೆ.

ಇಳಿಹಾಳ ಬೊಮ್ಮಯ್ಯನ ಹಂತಿಯ ಹಾಡುಗಳಲ್ಲಿ ಮೂರು ತಾಳಿನ ಕೂರಿಗೆಯ ಭೂಮಿ ಬೆಳೆಯ ನೀಡಿದರೆ. ಆ ಬೆಳೆಯಲ್ಲಿ

ಮೂತಾಳ ಕೂರಿಗಿಗೆ ಯಾತರದು ಹಂಗಿಲ್ಲ
ಭೂತಾಯಿ ಬೆಳೆಯೆ ಒಕ್ಕಲಿಗ । ಜಗದೊಳಗೆ
ಕೋತುಳ್ಳ ಮೇಳಿ ಬಲಗೊಂಡ"[೨೦೯]

ರೈತನು ಯಾರ ಹಂಗಿನಲ್ಲಿಯೂ ಬದುಕುವುದಿಲ್ಲ. ತಾನು ಬೆಳೆದ ಬೆಳೆಸನ್ನೇ ಹಂಚುತ್ತಾನೆ. ಸಮೂಹ ಬೇಸಾಯ ಪದ್ಧತಿ ಮತ್ತು ಸಮರ್ಥನಾದ ದೊಡ್ಡ ಒಕ್ಕಲಿಗನನ್ನು ಆಡಳಿತ ವ್ಯವಸ್ಥೆ ಗುರುತಿಸಿ, ಭೂಮಿಯನ್ನು ಕೋರುಕೊಟ್ಟು ಅಂತಹ ಭೂಮಿಯಲ್ಲಿ ಕೂಡು ಬೇಸಾಯ ನಡೆಸುತ್ತಿರುವ ಅಂಶಗಳು ಕಾಣಸಿಗುತ್ತವೆ. ಸಣ್ಣ ರೈತರಂತೆ ದೊಡ್ಡ ರೈತರು ಹೊಲಗೆಲಸ ನಿರ್ವಹಿಸುತ್ತಿರುವುದು ವಿಶೇಷವಾಗಿದೆ.

"ದೊಡ್ಡ ಒಕ್ಕಲಿಗಾಗಿ ಕಡ್ಡಾಯ ಹೊಲಗೆಲಸ
ಸೆಡ್ಡೊಡೆದ ರೈತ ಬೆಳೆಯುದಕೆ.........।
ಮೆಚ್ಚಿ ಪೆಮ್ಮಡಿರಾಯ ಕೆಚ್ಚೆದೆಯ ಬೊಮ್ಮನಿಗೆ
ಇಚ್ಚಿಸಿದ ಭೂಮಿ ವತನಾಗಿ ಒಪ್ಪಿಸಲು
ನೆಚ್ಚಿ ರೈತಾಗಿ ನಡಕೊಂಡ ॥"[೨೧೦]

ತೆರಿಗೆ ಅರಸನಿಗೆ, ಕೂಡು ಒಕ್ಕಲು ರೈತರಿಗೆ ಅವರವರ ಪಾಲುಕೊಡುವದು ಮತ್ತು ಅವರನ್ನು ಹುರುದುಂಬಿಸಿ ಹೊಲಗೆಲಸ ಮಾಡಿಸುವ ಸಾಮರ್ಥ್ಯ ದೊಡ್ಡ ಒಕ್ಕಲಿಗರಿಗೆ ಇರುತ್ತದೆ. ಹೀಗೆ ಕಂದಾಯ ಒಪ್ಪಿಸುವ ಮತ್ತು ಪಾಲು ಕೊಡುವ ಪದ್ಧತಿಯನ್ನು ಈ ಕೆಳಗಿನ ಪದ್ಯಗಳಲ್ಲಿ ಕಾಣಬಹುದು.

"ತೆರಿಗೆ ಅರಸಗೆತೆತ್ತು ಹರುಷದಲಿ...............॥
ಒಂದಕ್ಕೆ ಎರಡಾಗಿ ಚೆಂದಾಗಿ ಮಳೆಬೆಳೆಯು
.... ಕಂದಾಯ ಕೊಟ್ಟುಪಾಲ್ಕೊಟ್ಟು ॥
ಬಂದ ಸಿರಿ ಸಂಪತ್ತು ತಂದೆಂದು ಬಗೆಯದೆಲೆ
ನೊಂದಿಸದೆ ಕೊಡುವ ರೈತರಿಗೆ ....॥" [೨೧೧]

ಮಳೆಯನ್ನು ನಂಬಿರುವ ಭೂಭಾಗದ ರೈತರಿಗೆ ಅಪರೂಪಕ್ಕೆ ಮಳೆ ಬಂದಾಗ ಬಿರುಕುಗೊಂಡ ಭೂಮಿ ನೀರನ್ನು ಹೀರುತ್ತದೆ. ಅಂತಹ ಭೂಮಿಯಲ್ಲಿ ಹದ-ಬೆದೆ ಸರಿಯಾಗಿ ಸಿಗುವುದಿಲ್ಲ. ಅಂತಹ ವೇಳೆ ಬಿತ್ತನೆ ಕಾರ್ಯವನ್ನು ರೈತನು ಜಾಣ್ಮೆಯಿಂದ ಮಾಡುತ್ತಾನೆ. ಬೀಜಗಳನ್ನು ರಾತ್ರಿ ಇಡೀ ನೀರಿನಲ್ಲಿ ನೆನಸಿ, ನಂತರ ಆರಿಸಿ ಬಿತ್ತನೆ ಮಾಡುತ್ತಾನೆ.

"ಕಾದ ಕಬ್ಬಿಣ ಮೇಲೆ ಹೋದಂತೆ ಮಳೆಯಾತು
ಸೇರಿ ನೀರುಂಡು ಬಿರುಕಡಗಿ ....॥
'ಮಳೆಯಾಗಿ ಸಿಗಲಿಲ್ಲ ಒಳ ಹಸಿಯು ಬಿತ್ತುದಕೆ
ಜಳಕಾರಿ ಹಸಿಯು ತಳಕಾತು । ಯೋಚಿಸಿದ
ಒಳನೆನಸಿ ಬೀಜ ಬಿತ್ತೋಣ ॥

'ಬಿಳಿಜೋಳ ಕಡಲೆಗಳ ಬೆಳೆತನಕ ನೆನೆಬಿಟ್ಟು

ಬೆಳಕಾಗಿ ಬೀಜ ಬುಟ್ಟಿಯೊಳು ....॥"[೨೧೨]

ಕೋರು ರೈತರು ಕೆಲವೊಮ್ಮೆ ಪ್ರತಿಭಟಿಸುವುದು ಉಂಟು. ಅಲ್ಲದೇ ಬೀಜಗಳನ್ನು ನೀಡಿದ ವ್ಯಾಪಾರಿಗಳು ಕೂಡ, ಕೋರು ರೈತರು ತಮಗಾದ ಹಾನಿಯನ್ನು ತುಂಬಿಕೊಡುವಂತೆ ದೊಡ್ಡ ರೈತರಿಗೆ ಕೇಳುತ್ತಾರೆ.

"ಕೋರು ರೈತನು ಸೇರಿ ಕಾರಿದರು ಬಿರುನುಡಿಯ ....॥

ಬೀಜಗಳ ಕೊಡು ನಮಗೆ ಮೋಜಲ್ಲ ಬೊಮ್ಮಯ್ಯ

ಮಾಜಿ ಕಾಲದಲ್ಲಿ ಬರಗಾಲ ....॥

'ಹೋನಾರ ನಿನಗಿಲ್ಲ ಹಾನಿಯಾಯ್ತಿತುನಮಗೆ

ನಾನ ತಿರಿದುಂಡ ಗತಿಬಂತು ....॥"[೨೧೩] ಎನ್ನಲಾಗಿದೆ.

ಹೊಲ-ಗದ್ದೆಗಳಲ್ಲಿ ಮಂಚಿಗೆಯನ್ನು ಹಾಕಿ ಪ್ರಾಣಿ-ಪಕ್ಷಿಗಳಿಂದ ಬೆಳೆಗಳನ್ನು ರಕ್ಷಿಸುತ್ತಿದ್ದರು. ಸಮೃದ್ಧವಾದ ಬೆಳಸು ಬಂದಾಗ ಕಣ ತುಂಬಿ ರಾಶಿಯನ್ನು ಮಾಡಿ, ಅರಸನ ಪಾಲನ್ನು ಅಳೆದುಕೊಟ್ಟು, ರೈತರಿಗೆ ಹಂಚಿ, ಉಳಿದುದನು ತಾನು ತೆಗೆದುಕೊಳ್ಳುತ್ತಾನೆ.

" ಪಂಚ ಬೀಜಗಳೆಲ್ಲ ಸಂಚಿರಿಸಿ ಹೊಲದೊಳಗೆ

ಮಂಚಿಗೆಯ ನಿಲವು ಬೆಳೆ ಬಂದು ....॥

'ಹಿಂದೆ ಬೆಳೆಯದ ಬೆಳೆಯು ಮುಂದು ಬಾರದ ಬೆಳೆಯು

ಎಂದು ಘನರಾಶಿ ಕಣತುಂಬಿ ....।

'ಬೆಳೆಬಂದ ದವಸದೊಳು ಅಳೆದು ಅರಸಗೆಕೊಟ್ಟ

ಉಳಿದುದನು ಹಂಚಿ ರೈತರಿಗೆ ....॥"[೨೧೪] ಎನ್ನುತ್ತಾನೆ.

'ಮಲ್ಲಿಗೆದಂಡೆ' ಕೃತಿಯಲ್ಲಿ 'ಎತ್ತಿನಹಾಡು' ಎತ್ತಿನ ಜೀವನದ ಅದರ ಉಪಯುಕ್ತತೆಯ ವಿಚಾರವಿರುವ ಪದ್ಯವಾದರೆ, ಮಳೀಹಾಡು ಓದುಗರ ಹೃದಯವನ್ನು ಕರಗಿಸಿ ಬಿಡುವಂತಹದು. ಅನಾವೃಷ್ಟಿಯ ಭೀಕರತೆಯನ್ನು ಇಷ್ಟು ಪರಿಣಾಮಕಾರಿಯಾಗಿ ಚಿತ್ರಿಸುವ ಪದ್ಯ ನಮಗೆ ಬೇರೆಲ್ಲಿಯೂ ದೊರೆಯಲಾರದು.

"ಒಕ್ಕಲುಗೇರ್‍ಯಾಗ ಮಳಿರಾಜಾ । ಅವರು

ಮಕ್ಕಳ ಮಾರ್‍ಯಾರ ಮಳಿರಾಜಾ ॥

ಮಕ್ಕಳ ಮಾರಿ ರೊಕ್ಕ ಹಿಡಕೊಂಡು

ಭತ್ತಂತ ತಿರಗ್ಯಾರ ಮಳಿರಾಜಾ ॥

ಸೊಲಗಿ ಹಿಟ್ಟಿನಾಗ ಮಳಿರಾಜಾ । ಅವರು

ಸುಣ್ಣನು ಕೊಡಿಸ್ಯಾರ ಮಳಿರಾಜಾ ॥

ಹಸ್ತ ಬಂದಕೇರಿ ಗಪಗಪ ತಿಂದು

ಒದ್ದಾಡಿ ಸತ್ತಾರ ಮಳಿರಾಜಾ ॥"[೨೧೫]

ಬರಗಾಲಕ್ಕೆ ಪೀಡಿತರಾದವರ ಭೀಕರ ಸಾವು ಇಲ್ಲಿ ಚಿತ್ರಿತವಾಗಿದೆ.

'ರೈತ ಜಾನಪದ' ಕೃತಿಯಲ್ಲಿ ಶಾಂತಿನಾಥ ದಿಬ್ಬದ ಅವರು ರೈತ ಮತ್ತು ಭೂಮಿಯೆಂಬ ಲೇಖನದಲ್ಲಿ ಮಣ್ಣಿನ ಮಗನಾದ ರೈತನು ಮಣ್ಣನ್ನು ತಾಯಿಯೆಂದು ಭಾವಿಸಿದ್ದಾನೆ. ತಮ್ಮ ಹುಟ್ಟು-ಸಾವಿನ ನಿರ್ಣಯಕ ಶಕ್ತಿ ಭೂದೇವಿ ಎಂಬ ಕಲ್ಪನೆ ರೈತರದ್ದು. ಮಣ್ಣನ್ನು ಕುರಿತು,

ಮಣ್ಣನ್ನು ನಂಬಿ ಮಣ್ಣಿಂದ ಬದುಕೇನ
ಮಣ್ಣಿನಗೆ ಮುಂದೆ ಹೊನ್ನು! ಅಣ್ಣಯ್ಯ
ಮಣ್ಣೇ ಲೋಕದಲ್ಲಿ ಬೆಲೆಯದ್ದು ॥

ಎಂದು ಹೇಳುವ ರೈತ ಮಹಿಳೆಯ ಮಾತಿನಲ್ಲಿ ರೈತನು ಭೂಮಿಯನ್ನು ನಂಬಿದ ಪರಿ ವ್ಯಕ್ತವಾಗುತ್ತದೆ.

೩. ದಾಖಲು ಸಾಹಿತ್ಯ

೧. ಶಾಸನಗಳು

ಪ್ರಾಚೀನ ಜನತೆಯ ಜೀವನಾನುಭವಗಳನ್ನು ಶಾಸನಗಳು ದಾಖಲಿಸಿವೆ. ಈ ಕಾರಣದಿಂದ ಶಾಸನಗಳು ದಾಖಲು ಸಾಹಿತ್ಯದ ಗುಂಪಿಗೆ ಸೇರುತ್ತವೆ. ಶಾಸನಗಳಲ್ಲಿ ಕೃಷಿ ಕುರಿತಾದ ಮಾಹಿತಿ ಬಿಡಿ ಬಿಡಿಯಾಗಿಯೂ, ಹೇರಳವಾಗಿಯೂ ಸಿಗುತ್ತವೆ. ಧಾರ್ಮಿಕ ಕಾರ್ಯಗಳಿಗೆ ನೀಡಿದ ದತ್ತಿ-ದಾನ, ಭೂದಾನ, ಬೆಳೆ, ಭೂಮಿ, ಬೆಳೆಯ ಸುಂಕ ಮುಂತಾದವುಗಳನ್ನು ದಾನರೂಪದಲ್ಲಿ ನೀಡಿದ ಉಲ್ಲೇಖಗಳು ಕಂಡುಬರುತ್ತವೆ. "ಶಾಸನಗಳು ಎಲ್ಲಾ ವಿಷಯವನ್ನು ಒಂದೇ ಕಡೆಗೆ ಒದಗಿಸಿಕೊಡುವ ಗ್ರಂಥಗಳಲ್ಲ. ಒಂದು ವಿಷಯಕ್ಕೆ ಸಂಬಂಧಿಸಿದ ವಿಷಯ ತುಂಡು ತುಂಡಾಗಿ ನೂರಾರು ಶಾಸನಗಳಲ್ಲಿ ಚದುರಿ ಹೋಗಿರುತ್ತದೆ"[೩೧೬] ಎಂದು 'ಶಾಸನಗಳಲ್ಲಿ ಕರ್ನಾಟಕದ ವರ್ತಕರು'ಎಂಬ ಕೃತಿಯಲ್ಲಿ ಬಿ.ಆರ್ ಹಿರೇಮಠ ಅಭಿಪ್ರಾಯ ಪಡುತ್ತಾರೆ. ಹೀಗಾಗಿ ಲಭ್ಯಶಾಸನಗಳಾಧಾರದಿಂದ ಕೃಷಿ ಸಂಬಂಧಿ ಉಲ್ಲೇಖಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಒಕ್ಕಲು ಒಕ್ಕಲುತನ ಕುರಿತಾಗಿ ಮಾಹಿತಿ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. "ಇಲ್ಲಿಯ ಪುರದ ಒಕ್ಕಲವರು ಇಲ್ಲಿಯು ಬೆಸವುಕ್ಕಾಳಾರೆನ್ನೊಡೆ (ಎ,ಕ,III ನಂಜನ, ೧೩೯-೮,೯೧೫).........ತೋಟವನೂ ಒಕ್ಕಲುಗಳ ಕಯಿಯಿಂದ ನಾವೇ ಗುತ್ತಗೆಯಾಗಿ ಮಾಡಿಸಿ(ಎ,ಕ,VIII, ತೀರ್ಥಹ. ೩೨-೪೪,೧೪೧೮)..........೧ಅವರೂಕ್ಕಲೊಳ್ ವೀಸ ೧೦ (ಎ,ಕ,VII ೯೪-೩೨,೧೮೯೪).......... ಎಪ್ಪತ್ತೊರ್ಕಲು ಮಿಟ್ಟಿ (ಕ,ಇ II, ೮-೩೫,೧೦೭೨).......... ಅಂದು ಒಕ್ಕಲು ಮಕ್ಕಳು ಉಳಿಯ ಮುನೂರ್ವರುಂ(ಸೌ.ಇ.ಇ IX- I,೧೪೧-೪೮,೧೧೭೪)......... ಇದಾನ್ನೊಳೆ ಈರೆಟ್ಟಿತ್ತರುಳಂ ಒಕ್ಕಲ್ತನಂ ಕೆಯ್ವೆನಾ ವಿತ್ತಿದಲ್ಲಿ ವೆಳೆಯಾದ ಕೆಡುಗ(ಎ,ಕ, VII ಶಿಕಾರಿ-೧೫೪-೧೫,೬೮೫)..........."[೩೧೭]

ಭೂಮಿಗೆ ಸಂಬಂಧಿಸಿದ ಮಾಹಿತಿ : ಭೂಮಿಗೆ ಸಂಬಂಧಿಸಿದ ಅಂಶಗಳು ಶಾಸನಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕರಿಯ ನೆಲ, ಮಸಂಬು, ಕೆಮ್ಮರಡಿ, ಬೆಂಚೆ, ಬೆಣ್ಣೆದಂಡೆ, ಸಿಡಿಲಾಹರಿ, ಕಲ್ಲುಗುತ್ತಿ, ಅರಣಿ, ಕಲ್ಲಂದಿ, ಸೌಳ, ಕೆಂಗಣಿಗೆ, ದೊಡ್ಡಗುತ್ತಿ, ಎರೆಯಹೊಲ ಇನ್ನು ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಒಣ ಬೇಸಾಯ ಅಥವಾ ಖುಷ್ಕಿ ಭೂಮಿಯನ್ನು ಹೊಲ ಮತ್ತು ಕೆಯಿ ಎಂದು ಕರೆಯಲಾಗುತ್ತದೆ. ನೀರಾವರಿ ಆಶ್ರಿತ ಭೂಮಿಯನ್ನು ನೀರಾರಂಭವೆಂದು, ತೋಟ, ಗದ್ದೆ ಎಂದೂ,

ಕೃಷಿಗೆ ಮಳೆ ಆಶ್ರಿತ ಬಳಸಿದ ಭೂಮಿಯನ್ನು ಕಾಡಾರಂಭ ಎಂದು ಅನೇಕ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ನಾಗಾಯಿ ಶಾಸನ ೩, ನಾಗಾಯಿ ಶಾಸನ ೩ ಬಿ ಮತ್ತು ಇತರ ಶಾಸನಗಳಲ್ಲಿ ಬೆಣ್ಣೆಯ ದಂಡಿ, ದೇವರ ಪೂಜೆಗೆ ಹೂದೋಟ, ನಿವೇಶನ, ನೀರಿನ ನೆಲ, ಗದ್ದೆ, ಕಂಗಣಿಯ ಗುಡ್ಡೆ ಮುಂತಾದ ಭೂಮಿಯನ್ನು ಅಳತೆ ಮಾಡಿಬಿಟ್ಟಿರುವ ಅಂಶ ಮತ್ತು ಹೊಲಗಳನ್ನು ಮಲೆಗಳ ಹೊಲ, ಸೌಳ ಹಳ್ಳದ ಹೊಲ, ಹಂಡಿಗಲು ಹೊಲ, ಕಮ್ಮದಲ ಕಾಲ ಎಂದು ನಾಗಾಯಿ ಶಾಸನದಲ್ಲಿ ಕರೆಯಲಾಗಿದೆ. [ನಾಗಾಯಿ–೨೧,ಕ್ರಿ. ಶ ೧೧೯೩, ಪು–೪೬] ಕುಕ್ಕನೂರು ಶಾಸನವೊಂದಲ್ಲಿ "............... ನೀರಾರಂಭ ಬಿತ್ತಿದ ಗದ್ದೆ ವಕ್ಕಳಕ್ಕೆ ಸಲ್ಲುವರು ವಕ್ಕಳು ನೆಲ್ಲು ತೋಟ ವಂದಕ್ಕೆ ಕಂದಾಯಕ್ಕೆ ಹಣ........... ವಂದುವುಪ್ಪಾರಲ್ಲಿ ಅಡವುಪ್ಪು ಖಂಡುಗಕ್ಕೆ ಸಲ್ಲುವುದು........... ಗೌಡಕಿಯ ಮಾನ್ಯ ಹಳ್ಳಿಗಳಲ್ಲು ಸಹ ಯರೆ ಜೋಳದ ಬೀಜಾವರಿ ಮೂಂಘಂಡಗ ಮಸಬು ಖಂಡಗದ ಗದ್ದೆ............."[೩೧೮] ನೀರಾರಂಭ, ಎರೆ, ಮಸಾರಿ ಮುಂತಾದ ಹೆಸರುಗಳಿಂದ ಭೂಮಿಯನ್ನು ಕರೆಯುತ್ತಿದ್ದ ಅಂಶ ಕಂಡು ಬರುತ್ತದೆ. ಅಲ್ಲದೇ ಭೂಮಿಯನ್ನು ಗುತ್ತಿಗೆ ನೀಡುವ, ಧಾರ್ಮಿಕ ಕಾರ್ಯಗಳಿಗೆ, ಅತಿಥಿಪಾಲನೆಗೆ ಮತ್ತು ದೇವರ ಕಾರ್ಯಗಳಿಗೆ ನೀಡಿರುವ ಅಂಶಗಳು ಕಾಣಸಿಗುತ್ತವೆ.

ಕೆಳದಿ ಸಂಪುಟದಲ್ಲಿ ತ್ಯಾಗರ್ತಿ ಅಗ್ರಹಾರದ ಶಾಸನದ ಪುಟ–೯ ರಲ್ಲಿ ಭೂಮಿಯನ್ನು ಉಳುಮೆ ಮಾಡಿಕೊಡಲು, ಒಂದೊಂದು ಬಗೆಯ ಬೆಳೆಯನ್ನು ಹಾಕಿರುವ ಭೂಮಿಗೆ ವರ್ಷವೊಂದಕ್ಕೆ ಬೇರೆ ಬೇರೆ ಬೆಲೆಯ ಗುತ್ತಿಗೆ ಹಣವನ್ನು ನೀಡುವ ಮಾಹಿತಿ ದೊರೆಯುತ್ತದೆ. ಅಲ್ಲದೇ ಕೋರಗಲ್ಲು ಶಾಸನದಲ್ಲಿ "................ಹುವಿನ ತೋಟದ ಭ್ಯವಸಾಯಕೆ ವರಿಸ ಹುವ ನಡಿಸುವದಕೆ ಜೀವಿತಕು ಸಲವಾಗಿ ಕೊಟಗ ೧೮೨ ತೋಟದ ಬೆವಸಾಯಕೆ ಜೀವಿತ ೧ ೧೦೨................".(E,C,V,IX-ಪು ೫೨೩)ಇಲ್ಲಿ ಗಮನಿಸುವ ಅಂಶವೆಂದರೆ ಭೂಮಿಯ ಬೆಸಾಯವನ್ನು ಮಾಡಿಕೊಡಲು ಹಣ ಗುತ್ತಿಗೆ ಕೊಡುವುದು, ಹೂವಿನ ತೋಟಕ್ಕೆ ಬೇರೆ ತೋಟಗಳಿಗಿಂತ ಹೆಚ್ಚಿನ ಹಣವನ್ನು ನೀಡಿ ಬೇಸಾಯ ಮಾಡಿಸುತ್ತಿರುವ ಅಂಶ ಕಂಡುಬರುತ್ತದೆ. ಅಂದರೆ ತೋಟದ ಬೇಸಾಯಕ್ಕೆ ಗ–೧೦೨ ನೀಡಿದರೆ, ಹೂವಿನ ತೋಟದ ಬೇಸಾಯಕ್ಕೆ ಗ–೧೮೨ ನೀಡುತ್ತಿರುವ ಅಂಶ ತಿಳಿಯುತ್ತದೆ.

ಬೆಳೆಗಳು :–ಬೆಳೆಗಳಲ್ಲಿ ಜೀವನಾವಶ್ಯಕಬೆಳೆಗಳು ಎಂದರೆ ಆಹಾರ ಧಾನ್ಯಗಳು. ಇನ್ನು ಉಳಿದವುಗಳು ವಾಣಿಜ್ಯ ಬೆಳೆಗಳೆಂದು ಗುರುತಿಸಲಾಗುತ್ತದೆ. ಬೆಳೆ ಬೆಳೆಯುವ ವಿಧಾನವನ್ನು ಪೂರ್ಣವಾಗಿ ಶಾಸನಗಳಲ್ಲಿ ಕಾಣಲು ಸಾಧ್ಯವಿಲ್ಲವಾದರೂ ಬೆಳೆಗಳ ಹೆಸರು, ದೇವರಿಗೆ ಧಾನ ನೀಡಿರುವ ಬಗೆ ಮತ್ತು ಬೆಳೆಗೆ ವಿಧಿಸುವ ಸುಂಕಗಳನ್ನು ಸಾಂಧರ್ಬಿಕವಾಗಿ ಅಲ್ಲಲ್ಲಿ ಹೇಳಲಾಗಿದೆ. ನಿಂಬರ್ಗಿ ಶಾಸನವೊಂದರಲ್ಲಿ ಬೆಳೆಗಳನ್ನು ಕುರಿತಾದ ವರ್ಗೀಕರಣ ಕಂಡು ಬರುತ್ತದೆ. ಅದರಲ್ಲಿ ಎರಡು ವಿಧಗಳನ್ನು ಗುರುತಿಸಬಹುದು "............... ಆಲಂದ ಸಾಸಿರ ನಾಡಿನ ವಿವಿಧ ಬೆಳೆಗಳನ್ನು ನಿಂಬರಗಿ ಶಾಸನದಲ್ಲಿ ಬಣ್ಣಿಸಲಾಗಿದೆ. ಜೋಳ ಗೋದುಮೆಯಂತಹ ಅನ್ನಾಹಾರ (Food Crops) ಬೆಳೆಗಳು ಮಾತ್ರವಲ್ಲದೇ ಜೀರಿಗೆ, ಕರ್ಬುರ, ಎಲೆವಳ್ಳಿ, ಕೌಂಗು, ತೆಂಗು, ಅಲ್ಲ, ಅರಿಷಿಣ, ಬಾಳೆ, ಈಳೆ, ಖರ್ಜೂರ, ಪಂಕೇರುಹ, ಪಾದರಿ, ಮಲ್ಲಿಗೆಗಳಂತಹ ಹಣದ ಬೆಳೆಗಳನ್ನು (Cash Crops)ಸಹ ಅಂದು ಕೃಷಿಕರು ಬೆಳೆಯುತ್ತಿದ್ದುದ್ದಾಗಿ ಆ ಶಾಸನದಲ್ಲಿ ಹೇಳಿದೆ..........."[೩೧೯] ಹೈದ್ರಾಬಾದ ಕರ್ನಾಟಕದ ಕನ್ನಡ ಶಿಲಾ ಶಾಸನಗಳು ಕೃತಿಯ ಟೀಕೆಯಲ್ಲಿ ಡಾ. ಶಿವಾನಂದ ಈ ಮೇಲಿನಂತೆ ವಿವರಿಸುತ್ತಾರೆ.

"ಜೀರಗೆ ಖರ್ಜು ಸಂಪಿಗೆ ತಳಿರ್ತ್ತೆಳೆವಳ್ಳಿ ಕವುಂಗು ತೆಂಗು ಪಂ
ಕೇರುಹವುಳ್ಳರಲ್ದ ಪೊಸ ಮಲ್ಲಿಗೆ ಪಾದರಿ ಬಾಳೆಯೀಳೆ (ವುಳ್ಳಿ) ಖ
ರ್ಜೂರ ರಳಂಬುವಲ್ಲರಸಿನಂಗಳ ತೋಂಟದಿ ನೊಳ್ಪ ನಾಳ್ದು ವಿ
ಸ್ತಾರದಿ ನಿಂತು ನಿಂಬರಗೆ ದೇವ ಪುರಕ್ಕೆಣೆಯಾಗಿ ತೋಱುಗುಂ ॥"[೩೦] ಎಂದು ಹೇಳಲಾಗಿದೆ. ಅಲ್ಲದೇ ಇನ್ನೊಂದು ಶಾಸನದಲ್ಲಿ ಹೊಲ ಮತ್ತು ಹೂವಿನ ತೋಟದ ಬೆಳೆಗಳ ಜೊತೆಗೆ ಬತ್ತ, ಜೋಳ ಮುಂತಾದ ಆಹಾರ ಧಾನ್ಯಗಳ ಮಾಹಿತಿ ದೂರೆಯುತ್ತದೆ."............ಕಲ್ಲರಸನುಂ ಕಾಚರಸನುಂ ನಿಂಬರಿಗೆಯ ತಂಮಕೇರಿಯ ಹೊಲದೊಳಗೆ ಬಂಡೆಯಗೇಯಿ.......... ಹುಣಸೆಗೊಳ್ಳದಲಿ ಹೂವಿನ ತೋಂಟ ಮತ್ತೆರಡು............ಹೊಂಜಿರಂ ಹೊಂಗೊಕ್ಕುಳದ ಲೆಖ್ಖದಿಂ ಜೋಳಮುಮಂ ಧಾಂನ್ಯದಲಿಬ್ಬಳ ಭತ್ತಮುಮಂ ಬಿಟ್ಟರು............."[೩೧]

ಇನ್ನೊಂದು ಶಾಸನದಲ್ಲಿ "ಮರವಳಿಯ ಅಡಿಕೆಯ ಮರವೊಂದಕ್ಕೆ ಅಡಿಕೆ ಪಯೆರಡಜಿಲೆ ಕದಲು ವಿಜಯಾಪುರದಲಿ ಅಡಿಕೆಯೆಂಬತ್ತುಸಾವಿರ । ವೂತನೂರಿಲಿ ಅಡಿಕೆ ನಾಲುವತ್ತು ಸಾವಿರ ...."[೩೨] ಎನ್ನಲಾಗಿದೆ. ಅಡಿಕೆಯ ಬೆಲೆಯಲ್ಲಿ ಪ್ರಾದೇಶಿಕವಾಗಿ ವ್ಯತ್ಯಾಸವಿರುವುದನ್ನು ಕಾಣುತ್ತೇವೆ. ವಿಜಯಾಪುರದಲ್ಲಿ ಹಳೆಯ ಮರದ ಅಡಿಕೆಯ ಪೈರಿಗೆ ಎಂಬತ್ತು ಸಾವಿರವಿದ್ದರೆ ವೂತನೂರಿನಲಿ ಕೇವಲ ನಲವತ್ತು ಸಾವಿರ ಎಂದು ಹೇಳುವ ಅಂಶದ ಹಿನ್ನಲೆಯಲ್ಲಿ ಅಡಿಕೆ ಬೆಳೆಯಲ್ಲಿ ಉತ್ತಮ ಮತ್ತು ಕನಿಷ್ಠ ಎಂಬ ವಿಂಗಡಣೆ ಕಂಡು ಬರುತ್ತದೆ.

ಆಹಾರ ಧಾನ್ಯದಲ್ಲಿ ಬಡವರ ಬಂಗಾರದ ಧಾನ್ಯವಾದ ರಾಗಿಯ ಪೂಜೆಯನ್ನು ಮಾಡುವ ಪದ್ಧತಿ ರಾಗಿ ಮರೂರು ಶಾಸನದಲ್ಲಿ ಕಾಣಸಿಗುತ್ತದೆ. "..............ರಾಗಿಮರೂರ ಗ್ರಾಮದ ರಘುನಾಥರಾಯರಿಗೆ ರಾಗಿಯ ಪೂಜೆ ಗಂಧ ಪುಷ್ಪ.........."[೩೩] ಕೊಯ್ಲಿಗೆ ಬಂದ ರಾಗಿಯ ಬೆಳೆಯನ್ನು ಪೂಜಿಸುವ ಪದ್ಧತಿ ಕಂಡು ಬರುತ್ತದೆ. ಇಂದು ಕೊಡ ಕೊಯ್ಲಿನ ವೇಳೆಯಲ್ಲಿ ಮುಂಬೆಳಗು ಎಂದು ಹಬ್ಬದ ಊಟವ ಮಾಡಿ ಕೊಯುವ ಕ್ರಮಗಳು ಕೆಲವುಕಡೆ ಕಂಡು ಬರುತ್ತವೆ. ಬೇಲೂರು ಶಾಸನದಲ್ಲಿ ಅನೇಕ ಆಹಾರ, ತೋಟ ಮತ್ತು ಸಾಂಬರ ಪದಾರ್ಥದ ಬೆಳೆಗಳ ಮಾಹಿತಿ ಕಂಡು ಬರುತ್ತದೆ. "..................ಗೋಧವೆ ಬೆಲ್ಲ ತುಪ್ಪಕ್ಕೆ ಪ೧ ಎಣ್ಣೆಗೆ ಪ೨ ಪಾಯಸದ ಹಾಲಿಂಗೆ ಪ । ಹೆಸರು ಮಾದುರ ಕಾಇಪ । ಅಡಕೆ ಎಲೆಗೆ ಪ ॥ ಅಂತು ದಿನಂ ಪ್ರತಿಗ ೧ ಪ೬ ಲೆಕ್ಕ । ಮೆಣಸು ಪ ೧ ॥ ಇಂಗು ಸಂಭಾರ ಪ೧ ॥ ಏಲಕ್ಕಿ ಪ–೧ ತಿರುವೆ ಬೆಗೆ ಕಲಸು.............."[೩೪] ಇನ್ನೊಂದು ಶಾಸನದಲ್ಲಿ ಗೋಧಿ, ಆಹಾರ ಧಾನ್ಯವಾದರೆ, ಹೆಸರು, ಉದ್ದು, ಕಡಲೆ, ದ್ವಿದಳ ಧಾನ್ಯಗಳ ಮತ್ತು ತೆಂಗು, ಬಾಳೆ, ನಿಂಬೆ, ಅಡಿಕೆ, ಎಲೆಬಳ್ಳಿ ತೋಟದ ಬೆಳೆಗಳು ಹಾಗೂ ಮೆಣಸು, ಏಲಕ್ಕಿ, ಜೀರಗೆ, ಮೆಂತ್ತೆ, ಸಾಸಿವೆ ಮುಂತಾದ ಸಾಂಬರಪಧಾರ್ಥಗಳ ಉಲ್ಲೇಖ ಕಾಣಸಿಗುತ್ತದೆ.

ಬೇಲೂರಿನ ಇನ್ನೊಂದು ಶಾಸನದಲ್ಲಿ "............ಹಾಗ ಧಾನ್ಯ ನೆಲ್ಲು ಜೋಳ ರಾಗಿ ನವಣೆ ಬರಗು ಸಾವೆ ಅಂತು ಧಾನ್ಯವಾಟಿಕ್ಕಂ ಪ್ರತಿ ಹೇಱೊಂದಕ್ಕಂ ಬೇಳೆ ವಿದಲೆ ಪೈಕ ಗೋಧಿ ಕಡಲೆ ಎಳ್ಳು ಅಗಸೆ ಕುಸುಬೆ ಹೆಸರು ಉದ್ದು ತೊಗರಿ ಹುರುವಲ್ಲಿ ಮುಂತಾದ..............."[೩೫] ಆಹಾರ ಧಾನ್ಯಗಳು ಭತ್ತ, ಜೋಳ, ರಾಗಿ, ನವಣೆ, ಬರಗು, ಸಾವೆ, ಮತ್ತು ವಿದಲೆ (ದ್ವಿದಳ) ಗೋಧಿ, ಕಡಲೆ, ಎಳ್ಳು, ಅಗಸೆ, ಕುಸುಬೆ, ಹೆಸರು,ಉದ್ದು, ತೊಗರಿ ಮುಂತಾದವುಗಳ ಪಟ್ಟಿಯನ್ನು ಹೇಳಲಾಗಿದೆ. ಭೂಮಿಯ ಆರೈಕೆ ಮಾಡಿ ಅಡಕೆ, ತೆಂಗು,ಬಾಳೆ, ನಾಟಿ ಮಾಡುವ ವಿಧಾನವನ್ನು ಕುರಿತು ಕೌಲೇದುರ್ಗ, ರತ್ನಾಪುರ

ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. "................ನಷ್ಟಕೆ ಕಳದ ಭೂಮಿಯನು ರೂಪ ಮಾಡಿ ಸಸಿ, ಬಾಳೆ, ತೆಂಗ ಹಾಕಿ ...."[೩೬] ವ್ಯವಸಾಯಕ್ಕೆ ಯೊಗ್ಯವಲ್ಲದ, ನಷ್ಟಕ್ಕೆ ಕಳೆದ ಭೂಮಿಯನ್ನು ಹಸನು ಮಾಡಿ ತೋಟದ ಸಸಿಗಳು, ಬಾಳೆ, ತೆಂಗು ನಾಟುವ ಅಂಶ ತಿಳಿದು ಬರುತ್ತದೆ. ಮತ್ತೊಂದು ಶಾಸನದಲ್ಲಿ ಅಡಿಕೆಯ ತೋಟವನ್ನು ಗುತ್ತಿಗೆ ನೀಡಿರುವ ಅಂಶ ಕಂಡು ಬರುತ್ತದೆ. "...............ಅಗಾಮಿ ವತ್ತಿನೆಟ್ಟ ಅಡಕೆಯ ಮರ ೧೫೦೦ಸಾವಿರದೈನೂಱು ಅಡಕೆಯ ಮರಕ್ಕೆ ಸಲುವ ಗುತ್ತಿಗೆ ಲಕ್ಕ ೨ ಸಾ ೧೦ ಯಾರಡು ಲಕ್ಕುಲು ಹತ್ತು ಸಾವಿರಕ್ಕೆ ಸಲುವದು ೨೮, ೨೧ ಮೇಲುವಣ ಮೇಣಸು ಯೆಲೆ ಯೇಲಕ್ಕಿ ಮುಂತಾದವಕ್ಕೆ ಸಲುಉದುಗ ೧೫ ಉಭಯಂ ತೋಟದಿಂದ ಸಲುಉದು ಗ-೩ । ಅಗಾಮಿಯ ಭೂಮಿಯೊಳಗೆ ನೆಟ್ಟ ತೋಟ್ಟಕ್ಕೆ ಕೂಡಿದ ಭೂಮಿ........"[೩೭] ಅಡಕೆ ಮರ ನೆಟ್ಟ ತೋಟವನು ಸಾವಿರದ ಐದುನೂರು ಅಡಕೆಯ ಮರಕ್ಕೆ ಎರಡು ಲಕ್ಷ ಹತ್ತು ಸಾವಿರ ಗುತ್ತಿಗೆ ಹಣ ನೀಡುವ ಅಂಶ ಕಾಣಸಿಗುತ್ತದೆ.

ಅನೇಕ ಕಸುಬುದಾರರಿಗೆ ಜೀವನಾಂಶಕ್ಕೆ ಹಣ ನೀಡದೆ ತೋಟದ ಅಡಿಕೆಮರ, ಭತ್ತವನ್ನು ನೀಡುವ ಮಾಹಿತಿ ಶೃಂಗೇರಿಯ ಶಾಸನವೊಂದರಲ್ಲಿ ಕಂಡುಬರುತ್ತದೆ. "ಕೆಳನಾದೊಳಗಣ ಹೆಗ್ಗದ್ದೆಯ ಗ್ರಾಮದೊಳಗೆ ಕೆರೆಯವೊತ್ತು ವಿಡಿದು ಅಪ್ಪಣಶಂಕರಲಿಂಗನವರು ಮಾಡುವ ಐದೂವರೆ ಸಾವಿರ ಅಡಕೆಯ ಮರದಕ್ಷೇತ್ರ.......... ವೃತ್ತಿ ೩ ಆ ಮಹಾಜನಂಗಳಿಗೆ ವೃತ್ತಿ೧ಕ್ಕೆ ಭತ್ತ ಖಂ೨೪ ಅಡಕೆಮರ ೩೦೦ರ ೯ ಲೆಕ್ಕದಲಿ ವೃತ್ತಿ................"[೩೮] ವೃತ್ತಿ ಮಾಡುವ ಕಸುಬು ದಾರರನ್ನು ಮಹಾಜನಗಳೆಂದು ಕರೆದು ಒಂದು ವೃತ್ತಿಗೆ ಐದುವರೆ ಸಾವಿರ ಅಡಕೆಯ ಮರದ ಕ್ಷೇತ್ರದ ವಿಸ್ತೀರ್ಣಕ್ಕೆ ಕೆಲಸ ಮಾಡುವವರಿಗೆ ಭತ್ತ ೨೪ ಖಂಡುಗ ಮತ್ತು ಅಡಕೆಯ ಮರ ೩೦೦ ನೀಡಿರುವಂತೆ ಕಂಡು ಬರುತ್ತದೆ. ಇನ್ನೂ ಅನೇಕ ಶಾಸನಗಳಲ್ಲಿ ಆಹಾರದ ಬೆಳೆಗಳು, ತೋಟದ ಬೆಳೆಗಳು, ದ್ವಿದಳ ಬೆಳೆಗಳು ಮತ್ತು ಸಾಂಬಾರ ಪಧಾರ್ಥದ ಬೆಳೆಗಳ ಕುರಿತಾದ ಮಾಹಿತಿ ದೊರೆಯುತ್ತದೆ.

ಭೂಮಾಪನ ವಿಧಾನ : ಭೂಮಿ ಅಳೆಯುವ ಪದ್ಧತಿಯು ಶಾಸನಗಳಲ್ಲಿ ಅನೇಕ ಕಡೆ ಕಂಡುಬರುತ್ತದೆ. ಅದು ಪ್ರಾದೇಶಿಕವಾಗಿ ಅನೇಕ ಭಿನ್ನತೆಯನ್ನು ಹೊಂದಿರುವಂತಿದೆ. ಭೂ ಮಾಪನ ಮಾಡಲು ಸ್ಥಾನಿಕ ದೈವ, ಅರಸ, ಆಡಳಿತಗಾರರ ಹೆಸರಿನ ಕೋಲುಗಳಿಂದ ಅಳೆಯಲಾಗುತ್ತಿತ್ತು. ಇಂದಿನ ದಿನಗಳಲ್ಲಿ ಭೂಮಿಯ ಅಳತೆಯನ್ನು ಮೋಜಣಿದಾರರು, ಭೂಮಿಯ ಟಿಪ್ಪಣಿ ಕಾಫಿಯ ಮಾದರಿಯನ್ನು ತೆಗೆದುಕೊಂಡು ಚೈನು ಮತ್ತು ಶಂಕುಗಳನ್ನು ಉಪಯೋಗಿಸಿ ಅಳೆಯುತ್ತಾರೆ. ಒಂದು ಚೈನಿಗೆ ೩೩ಅಡಿ ೨೦ಲಿಂಕುಗಳಿರುತ್ತವೆ. ಆದರೆ ಶಾಸನಗಳಲ್ಲಿ ಅನೇಕ ಬಗೆಯ ಹೆಸರಿನ ಕೋಲುಗಳಿಂದ ಅಳೆಯುವ ಅಂಶಗಳು ಕಾಣಸಿಗುತ್ತವೆ. ಇಂದೂ ಕೆಲವು ಹಳ್ಳಿಗಳಲ್ಲಿ ಬಿದಿರಿನ ಕೋಲಿನಿಂದ ಭೂಮಿಯನ್ನು ಅಳತೆಮಾಡುವುದು ಕಂಡುಬರುತ್ತದೆ.

ಹುಣಸಿ ಹಡಗಲಿ ಶಾಸನವೊಂದರಲ್ಲಿ "............ಹಡಂಗಿಲೆಯವಾಯುವ್ಯದ ಹೊಲದಲಲುಂ ಬರಗೆಯಲ್ ನುಡಿದಂತೆ ಗಂಡನ ಗಡಿಂಬದಲು ಬಿಟ್ಟ ಕರಿಯ ನೆಲಂ ಮತ್ತರು ಹನ್ನೆರಡು...........". (ಹೈ.ಕ.ಕ.ಶಾಸನ.ಪು.೬೩) ನುಡಿದಂತೆ ಗಂಡನ ಗಡಿಂಬ ಕೋಲು ಅಳತೆಗೆ ಉಪಯೊಗಿಸುವ ಮಾಹಿತಿ ತಿಳಿಯುತ್ತದೆ. ದೈವ ಕಾರ್ಯಕ್ಕಾಗಿ ಕೋರಿಶೆಟ್ಟಿ, ಹಾಪಿಶೆಟ್ಟಿ, ಬೊಪ್ಪಿಶೆಟ್ಟಿ, ಕಸವಶೆಟ್ಟಿ, ಭೂಮಿಶೆಟ್ಟಿ, ಮಲ್ಲಿಶೆಟ್ಟಿ, ಆಲಮ್ಮೈಸೆಟ್ಟಿ ಎಂಬುವರು ಬೈರವ ದೇವರ ನೈವೇದ್ಯಕ್ಕೆ ನಿರ್ದಿಷ್ಟ ಅಳತೆಯ ಭೂಮಿಯನ್ನು

ಮಾಣಿಕೇಶ್ವರ ಗಡಿಂಬ ಬದಲು ಎಂಬ ಅಳತೆ ಕೋಲಿನಿಂದ ಕೊಟ್ಟ ಉಲ್ಲೇಖ ಹಗರಿಟಗಿ ಶಾಸನದಲ್ಲಿ ಕಾಣಸಿಗುತ್ತದೆ. "...........ಮಲ್ಲಿದೇವರಸರು ಅರವತ್ತಾರೊಕ್ಕಲುಂ ಅವರ ಕೈಯಲುಂ ಸ್ತಳವಂ ಕ್ರಮವಾಗಿ ಪಡೆದು...........ಯಲುಅಂಮತ್ತರು ಸ್ತಳದೊಳಗೆ ಪಟ್ಟದ ತ್ರಿಕೂಟೇಶ್ವರ ದೇವರ ಕೆಯಿಮತ್ತರೊಂದು । ಕೋರಿಶೆಟ್ಟಿ ಮತ್ತರೊಂದು । ಹಾವಿಶೆಟ್ಟಿ ಮತ್ತರೆರಡು । ಬೊಪ್ಪಿಶೆಟ್ಟಿ ಮತ್ತರೊಂದು । ನಾಡರಹಳ್ಳಿಯ ಕಸವಶೆಟ್ಟಿಗೆ ಮತ್ತರೊಂದು । ಭೂಮಿಶೆಟ್ಟಿಯ ಮಲ್ಲಿಶೆಟ್ಟಿಗೆ ಮತ್ತರೊಂದು...........ಆಲಮ್ಮೈಶೆಟ್ಟಿ ಬೈರದ ದೇವರ ನೈವೇದ್ಯಕ್ಕೆ...........ಧಾರಪೂರಕಂ ಮಾಡಿಕೊಟ್ಟ ಮಾಣಿಕೇಶ್ವರ ಗಡಿಂಬದಲು ಮತ್ತರ...........(ಹೈ.ಕ.ಕ.ಶಾಸನ.ಪು ೨೦೭) ಅಲ್ಲದೆ ಗೊಬ್ಬೂರು ಶಾಸನದಲ್ಲಿ ಪಿರಿಯ ಕೋಲು ಎಂಬ ಕೋಲಿನಿಂದ ಭೂಮಿ, ತೋಟದ ಭೂಮಿ ಅಳೆಯುವ ಅಂಶ ತಿಳಿದು ಬರುತ್ತದೆ. "...........ಆ ಮಹಾನುಭಾವನು ತಂಮ ವೃತ್ತಿಯ ಕೇಯೊಳಗೆ ಪಿರಿಯ ಕೋಲುಲೂರಿಂ ಪಡುವಲು ಬೆಳ್ವೊಣೆಯ ಬಟ್ಟೆಯಿಂಬಡಗಣ ಸ್ತಳದಲ್ಲಿ ದೇವರ ನೈವೇದ್ಯಕ್ಕೆ ಬಿಟ್ಟ ಕರಿಯ ನೆಲಂ ಮತ್ತರು.........ಪೂವಿನ ತೋಂಟ ಮತ್ತರೊಂದು........."[೩೯] ಎನ್ನಲಾಗಿದೆ.

'ಕಲಬುರ್ಗಿ ಜಿಲ್ಲೆಯ ಶಾಸನಗಳು' ಎಂಬ ಕೃತಿಯ ರುದ್ರವಾಡಿ ಶಾಸನದಲ್ಲಿ "..........ಖಜ್ಜರಿಗೆಯ ಸೀಮೆಯ ಮೂಡಲ್ ಜವಳಿಗೆರೆಯ ಸೀಮೆಯ ತೆಂಕಲ್ ಜವಳಿಗೆಯ ಬಟ್ಟೆಯಂ ಪಡುವಲ ಮಾಣಿಕೇಶ್ವರನ ಕೋಲು ಮೂನೊರು ಮತ್ತರು.........(ಪು.೭೨) ಇಜೇರಿ ಶಾಸನವೊಂದರಲ್ಲಿ "ಬಾವಿಯಿಂ ಬಡಗಣ ವ(ಏ) ಳಗೆಯ ಸೀಮೆಯಿಂ ಮೂಡ ಮಾಲಿಗದಣ್ಣ ನಾಯಕಯ್ಯನ ಪೊಲದಿಂ ತೆಂಕ ಮಾನಿಕೇಶ್ವರರ ಕೋಲು ಬಿಟ್ಟ ಮತ್ತರು ೩೦೦ ಹಳ್ಳದಿಂ ಪಡುವ ತೋಂಟ ಮತ್ತರು..........". (ಪು-೨೮೨) ಈ ಎರಡು ಶಾಸನಗಳಲ್ಲಿ ಮಾಣಿಕೇಶ್ವರ ಕೋಲು ಬಳಸಿ ಭೂಮಿಯನ್ನು ಅಳತೆ ಮಾಡುವ ಮಾಹಿತಿ ತಿಳಿದು ಬರುತ್ತದೆ. ರಾಮನಾಥಪುರ ಶಾಸನವೊಂದರಲ್ಲಿ ಪೂರ್ವದ ದಿಕ್ಕಿನ ಮೂವತ್ನಾಲ್ಕು ಗಳೆ, ಉತ್ತರದ ನಾಲ್ವತ್ತೈದು ಗಳೆ, ಪಶ್ಚಿಮಕ್ಕೆ ಮೂವತ್ನಾಲ್ಕು ಗಳೆ, ದಕ್ಷಿಣಕ್ಕೆ ನಾಲ್ವತ್ತೈದು ಗಳೆ, ಆಯುತಾಕಾರದ ನೂರಾ ಐವತ್ತೆಂಟ್ಟು ಮತ್ತು ಗಳೆಕಂಬ ತೊಂಬತ್ತೈದು ಎಂದು ವಿವರವಾದ ಅಳತೆಯೊಂದಿಗೆ ಭೂಮಿಯನ್ನು ಅಳತೆ ಮಾಡುವ ವಿಧಾನ ಕಾಣಸಿಗುತ್ತದೆ. ....ಅಗಲ ಮೂವತ್ತನಾಕು ಆ ಗೆಳೆಯಲು ಬಡಗ ಮುಂದಾಗಿ (ನೀಳೆ) ನಾಲ್ವತ್ತಯ್ದು, ಆಗಳೆಯಲು ಪಡುವ ಮುಂದಾಗಿ ಆಗಲು ಮೂತ್ತನಾಕು ಆ ಗಳೆಯ ತೆಂಕ ಮುಂದಾಗಿ............ಲ್ವತ್ತಯ್ದು ಅಂತು ಚದುರಸಗಳೆ ನೂಱಯ್ವತ್ತೆಂಟಕಂ ಸಂದ ಗಳೆಯ ಕಂಬ ತೋಬ್ಬತ್ತಯ್ದುಯೀ ಭೂಮಿಯ.........."[೩೦] ಒಟ್ಟಾರೆಯಾಗಿ ಅನೇಕ ಬಗೆ ಬಗೆಯ ಹೆಸರನ್ನು ಹೊಂದಿರುವ ಕೋಲುಗಳಿಂದ ಭೂಮಾಪನ ಮಾಡುವ ಅಂಶಗಳು ಶಾಸನದಲ್ಲಿ ಕಂಡು ಬರುತ್ತವೆ.

ಸೀಮೆಗಲ್ಲು, ಬಾಂದು ಮತ್ತು ಮೇರೆಗಳು : ಭೂಮಿ ಸಂಬಂಧವಾಗಿ ಅನೇಕ ವ್ಯಾಜ್ಯ ಜಗಳಗಳು ಉಂಟಾಗುವುದು ಸಹಜ. ಇಂತವುಗಳನ್ನು ತಡೆಯಲು ಪ್ರಾಚೀನ ಕಾಲದಿಂದಲೂ ಅನೇಕ ಕ್ರಮಗಳನ್ನು ಕೈಗೊಳ್ಳುವ ಪದ್ಧತಿ ಕಂಡು ಬರುತ್ತದೆ. ಹೊಲಗದ್ದೆಗಳನ್ನು ಅಳತೆ ಮಾಡಿಸಿ, ಸೀಮೆಗಲ್ಲು, ಬಾಂದು, ಅಳತೆ ಕಲ್ಲು ನೆಡುವ ಕ್ರಮಗಳು ಮತ್ತು ಹೊಲಗಳ ಮೇರೆ(ಗಡಿ)ಯನ್ನು ಗುರುತಿಸುವ ಅಂಶಗಳು ಶಾಸನಗಳಲ್ಲಿ ಕಂಡುಬರುತ್ತವೆ. ಅಲ್ಲದೇ ನಾನಾಬಗೆಯ ಹೆಸರುಗಳಿಂದ ಹೊಲಗಳನ್ನು ಕರೆಯುವ ರೂಢಿಯು ಇರುವಂತಿದೆ ಎಂದು ತಿಳಿದು ಬರುತ್ತದೆ. 'ಹೈದರಾಬಾದ ಕರ್ನಾಟಕದ ಕನ್ನಡ ಶಾಸನಗಳು'

ಎಂಬ ಕೃತಿಯಲ್ಲಿ ಹುಣಸೀ ಹಡಗಲಿ ಶಾಸನದಲ್ಲಿ ಮೇರೆ ಕುರಿತಾದ ಮಾಹಿತಿ ವಿವರವಾಗಿ ಹೀಗೆ ತಿಳಿದು ಬರುತ್ತದೆ. "............ಮೂಡಲ ಪಿರಿಯ ಮೇಲಕುಂದೆಯಿಂ ಆ ಊರಿಗೆ ಪೋದ ಬಟ್ಟೆ ತೆಂಕ ನೆಟ್ಟಕಲ್ । ಪಡುವ ನೀಲನೂರು ವೊಲ ಮೇರೆ । ಬಡಗ ಹತ್ತಿ ಕುಂದೆಯ ಹೊಲ ಮೇರೆ । ಯಿವು ಚತು ಸ್ಸೀಮೆಯಿಂತೀ............". (ಪು-೬೩) ಪೂರ್ವದಿಕ್ಕಿಗೆ ಮೇಳಕುಂದೆ ಎಂಬ ಊರಿನಿಂದ ಆ ಊರಿಗೆ ಹೋಗುವ ದಾರಿಯ ದಕ್ಷಿಣ ದಿಕ್ಕಿನಲ್ಲಿ ನೆಟ್ಟ ಕಲ್ಲು, ಪಶ್ಚಿಮ ದಿಕ್ಕಿನ ನೀಲನುರಿನ ಹೊಲದ ಮೇರೆಯಿಂದ ಉತ್ತರ ದಿಕ್ಕಿನ ಹತ್ತಿ ಕುಂದೆಯ ಹೊಲದ ಮೇರೆಯವರೆಗೆ ಇರುವ ನಾಲ್ಕುದಿಕ್ಕಿನ ಚಕ್ಕುಬಂದಿವಳಗಿರುವ ಭೂಮಿ ಎಂದು ಗುರುತಿಸಿ ಹೇಳಲಾಗಿದೆ. ನೆಟ್ಟ ಕಲ್ಲುಗಳನ್ನು ಅನೇಕ ಹೆಸರುಗಳಿಂದ ಕರೆಯಲಾಗುತ್ತಿತ್ತು. ಮುಗ್ಗಲ್ಲು, ಸಾಲುಗಲ್ಲು, ಮುದ್ರಿಗಲ್ಲು (ಇದು ಪೂಜೆಮಾಡುವ ಕಲ್ಲಾಗಿರಬೇಕು) ಒಳತಕಲ್ಲು, ಕಾಲುವಲ್ಲಿಗಲ್ಲುಗಳ ಮಾಹಿತಿ ದೊರೆಯುತ್ತದೆ. ಕುಕ್ಕನೂರು ಶಾಸನವೊಂದರಲ್ಲಿಯೂ ಈ ಮಾಹಿತಿ ದೊರೆಯುತ್ತದೆ. "...........ಇಂತಿ ಚತುಃಶೀಮೆಯೊಳಗುಳ್ಳ ನಟ್ಟಕಲ್ಲು, ಮುಗ್ಗಲ್ಲು, ಸಾಲುಗಲ್ಲು, ಮುದ್ರಿಗಲ್ಲು ಒಳತಕಲ್ಲು ಬೆಂಚಿ ಬಾವಿ ಸಹವಾದ ಈ ವಳೆಯ ದೊಳಗುಳ್ಳ ಕಾಲುವಲ್ಲಿಗಲ್ಲು................."[೩೩೧] ಅಲ್ಲದೇ ಇದೇ ಶಾಸನದಲ್ಲಿ ಹೊಲಗದ್ದೆಗಳನ್ನು ವಿಶಿಷ್ಟ ಹೆಸರುಗಳಿಂದ ಕರೆಯುತ್ತಿದ್ದರು ಎಂಬ ಮಾಹಿತಿ ತಿಳಿದು ಬರುತ್ತದೆ.

ಗೊಬ್ಬೂರು ಶಾಸನವೊಂದರಲ್ಲಿ ನಾಲ್ಕು ದಿಕ್ಕುಗಳಿಗೆ ಇರುವ ಮೇರೆ, ನಟ್ಟಕಲ್ಲುಗಳ ಕುರಿತಾದ ಮಾಹಿತಿ ದೊರೆಯುತ್ತದೆ. ಪೂರ್ವ ಉತ್ತರ ದಿಕ್ಕುಗಳ ಮೇಳಕುಂದೆಯವರೆಗೆ, ದಕ್ಷಿಣದ ಕಾಲಂಬರಿಗೆಯ ದಾರಿಯವರೆಗೂ ಮತ್ತು ಪೂರ್ವದ ಕರಿಯ ಹತ್ತು ಮತ್ತರು, ಪಶ್ಚಿಮದ ತಳಾಯು ಗೈಯುವ ಹೊಲದವರೆಗಿನ ಸೀಮೆಯ ಎಲ್ಲೇ ಕುರಿತು ಹೇಳಲಾಗಿದೆ. "...........ಅದಕ್ಕೆ ಸೀಮೆಯೆಂನ್ತೆಂದಡೆ ಮೂಡಲು ಮಣತಿಯ ಬಡಗಲು ಮೇಳಕುಂದೆಯ ....ಸೀಮೆಯ ತೆಂಕಲು ಕಲಂಬರಿಗೆಯ ಬಟ್ಟೆ ಸೀಮೆಯ, ಪಣಕೋಲು ಗೊಬ್ಬರದ ಭೂಮಿಯ ಮೂಡಣ ಕರಿಯ ಹತ್ತು ಮತ್ತರು ಮತ್ತೆ ಪಡುವಲು ತಳಾಯು ಗೈಯ್ವ ಮೂಡಲು ಬಿಟ್ಟ............ಆ ಸೀಮೆಯ ಬಡಗ ಪಂದಕೆರೆಯ ಬಡಗ.......ಮುಖಮೇಳಕುಂದೆಯ ದಾರಿಗಾ ತ್ರಿಪುರುಷ ನಟ್ಟಗಲ್ಲುಗಳು.............."[೩೩೨] ಅಲ್ಲದೆ ನಿಂಬರಗಿ ಶಾಸನದಲ್ಲಿ ಸೀಮಾ ಪದ್ಧತಿಯನ್ನು ಕುರಿತು ವಿವರಣೆ ದೊರೆಯುತ್ತದೆ. ".............ಸೀಮಾ ಪದ್ದತಿ ಕವಿಲಗೆಯ ಸೀಮೆಯ ಸಜೆಯ ಬಮ್ಮದೇವನಿಂದಿಳಿದ ಹಳ್ಳದಿಂ ಜಕ್ಕಿಯರ ಮಡುವಿಂ ಆಲದ ಮರಡಿವಾ..........ತೆಂಕಲು । ಮತಂ ಆ ಊರ ಬೇವಿನ ಹಾಡದ ಹಳ್ಳದಿಂ ಮರಂಜೆ ಸಂಗಮದಿಂ ಪಡುವಲು ಮತ್ತವಾ ಮರಂಜೆ..........ಹೋದದಾರಿಯಿಂ ಬಲದ ಕಲ್ಲೊಟ್ಟಿಲ ಕಾರೆಯ ಗುತ್ತಿಯಿಂ ಕಲುವೆಟ್ಟದಿಂದೆರದ ಕೆಱೆಯಂ............"[೩೩೩] ಸೀಮೆಯಂದರೆ ಎಲ್ಲೆ, ಗಡಿ ಎಂದು ಗುರುತಿಸಲಾಗಿದೆ.

ಇಂದು ಕೂಡ ಯಾವುದೇ ಹೊಲ ಗದ್ದೆಗಳಿಗೆ ಇರುವ ಮೇರೆಗಳನ್ನು ಚಕ್ಕುಬಂಧಿ ಎಂದು ಕರೆಯಲಾಗುತ್ತದೆ. ಭೂಮಿಯ ಕೊಡುವಾಗ ಮತ್ತು ಕೊಳ್ಳುವಾಗ ನೊಂದಣಿ ಮಾಡಿಸಿದಾಗ ಈ ಚಕ್ಕು ಬಂದಿಯ ಆಧಾರದ ಮೇಲೆ ದಸ್ತಾವೇಜೆ ಸಿದ್ದಪಡಿಸಲಾಗುತ್ತದೆ. ತೆಂಗಳಿ ಶಾಸನದಲ್ಲಿ ಮೇರೆ ಕುರಿತು ಹೀಗೆ ಹೇಳಲಾಗಿದೆ. ".............ಮತ್ತರಿಂಗಂ ಸೀಮೆ ಸಂಗವದ ಹೊಲ ಮೇರೆಯಿಂ ಬಡಗಲು ಕೆಚ್ಚನಾದಿತ್ಯ ಭಟ್ಟೋಪಾಧ್ಯಯರ ಕೇಶವ ದೇವರ ಕೆಯಿಂ ಮೂಡಲು ಏತದ ಕೆರೆಯ ದಶಕದಿಂ ತೆಂಕಲು ದೀಬೆಗೆರೆಯ..........."[೩೩೪]

ಗುಂಜಹಳ್ಳಿ ಶಾಸನವೊಂದರಲ್ಲಿ ಸ್ಪಷ್ಟವಾದ ಚಕ್ಕುಬಂಧಿಯ ವಿವರ ಕುರಿತು ಹೀಗೆ ಹೇಳಲಾಗಿದೆ. "............ಪುರ್ವಕೆ ಗುಂಜಣಪನ ಹೊಲಪ ॥ ಬಕಿರೆಡಿ ಹೊಲಾದ ॥ ದೆಂಡಕದ ಅವರ ಹೊಲ ।ವು । ಕೊಂಡಿಭಟರ ಮಾನ್ಯವುಯಿಯಪಂದೆ ಮೇರೆ ಬಡಿಗೇರ ಯಲ್ಲೋಜಗೆ ಹೊಲಂ ॥ ಯೆಂಟು ಮಾನ ಬಸವೇಪುರದ ಹಾದಿ ಮೊಳ ಹೊಲ ಕಡಗೊಡದ್ದಲೆಯ ಹೊಲದೊಳಗೆ ದಂಗುಡಿ ಬಸಪ್ಪನ ಹೊಲ। ಪೂ । ಹಳ । ಪ । ಯರಗೆರೆ ಹಟಿ । ವು । ಚಿಂಚರೆಡಿ ಹೊಲ ಮೇರೆಗಳ ಹಾಕಿ ಕೊಟುಯಿದೆ............."[೨೨೫] ಪೂರ್ವಕ್ಕೆ ಕುಂಜಣ್ಣಪ್ಪನ ಹೊಲ, ಪಶ್ಚಿಮಕ್ಕೆ ಬಕಿರಡ್ಡಿ ಹೊಲದ ದೆಂಡಕದ ಹೊಲ, ಉತ್ತರಕ್ಕೆ ಕೊಂಡಿ ಬಟ್ಟರ ಹೊಲದ ಮೇರೆ ಹೊಂದಿರುವ ಹೊಲ ಬಡಿಗೇರ ಎಲ್ಲೋಜಿಗೆ ಬಸವೇಪುರದ ಹಾದಿಯ ಹತ್ತಿರದ ಹೊಲದೊಳಗೆ ದಂಗುಡಿ ಬಸವಪ್ಪನಹೊಲ, ಪೂರ್ವ ಎರೆಗೆರೆ ಹಟ್ಟಿ ಉತ್ತರದ ಚಿಂಚರೆಡ್ಡಿ ಹೊಲದ ಮೇರೆಹಾಕಿ ಕೊಟ್ಟ ಚೆಕ್ಕಬಂಧಿ ವಿವರ ದೊರೆಯುತ್ತದೆ.

ಒಟ್ಟಾರೆಯಾಗಿ ಹೊಲದ ಮೇರೆಗಳು, ನೆಟ್ಟಕಲ್ಲುಗಳು, ಮೇರೆಗಲ್ಲುಗಳು, ಚಕ್ಕುಬಂದಿಯ ಪೂರ್ಣ ವಿವರ, ಸೀಮೆಗಲ್ಲುಗಳ ನೆಡುವ ಕ್ರಮ ಮುಂತಾದ ಮಾಹಿತಿಗಳು ಶಾಸಗಳಲ್ಲಿ ದೊರೆಯುತ್ತವೆ.

ಕಂದಾಯ ಕುರಿತಾದ ಮಾಹಿತಿ : ಕಂದಾಯದ ವ್ಯವಸ್ಥೆ ಎಲ್ಲಾ ಕಾಲದಲ್ಲಿಯೂ ಇರುವಂತದ್ದು. ರಾಜನ ಖಜಾನೆಗೆ ಕಂದಾಯ, ತೆರಿಗೆ ಆದಾಯದ ಪ್ರಮುಖ ಮೂಲಗಳು. ಕಂದಾಯವನ್ನು ಹಣದ ರೂಪದಲ್ಲಿ, ಧಾನ್ಯದ ರೂಪದಲ್ಲಿಯೂ ಪಡೆಯುತ್ತಿದ್ದ ಅಂಶ ಪ್ರಾಚೀನ ಕಾಲದಲ್ಲಿ ಕಂಡುಬರುತ್ತದೆ. ಕೆಲವೊಮ್ಮೆ ಮಾಪು ಮಾಡಿರುವ ನಿದರ್ಶನಗಳು ಉಂಟು. ಈ ಭಾಗದಲ್ಲಿ ಶಾಸನಗಳಲ್ಲಿ ಕಂದಾಯ ಕುರಿತಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಗೊಬ್ಬೂರು ಶಾಸನವೊಂದರಲ್ಲಿ ಹೊಲದ ಬೆಳೆಯಲ್ಲಿನ ಬೆಳೆಪಾಲನ್ನು ಮಾಪು ಮಾಡಿರುವ ಅಂಶ ತಿಳಿಯುತ್ತದೆ. ಈ ಶಾಸನವು ಕ್ರಿ.ಶ. ೧೭ನೇ ಶತಮಾನದ್ದಾಗಿರುವುದರಿಂದ ಕನ್ನಡ ಭಾಷೆಗಿಂತ ಹೆಚ್ಚು ಉರ್ದುಮಯವಾಗಿರುವ ಅಂಶವನ್ನು ಗಮನಿಸಬಹುದು. "........ಸಿಲೆದಾರು ಜಮಯಿತಯೆರಾ ಸಹಂನೆರಡುಮಂದಿ ಸಹೇಬ ಮೊಖಸಾಯಿ ಕಸಬೆ ಗೊಬುರುಗಳು ಜಮಕುರ ಬೇಗಾರಿಗಳಿಗೆ ಕೊಟಕವುಲು(ಸ)..........ರಸನ ಸಮಾನಿನ ವಾಕಿಸಮಿಯ(ಮೆ).........ನಿಂಮ ಹಕು ಹೊಲದೊಳಗೆ ಹಕಲು ಹಗೂದ ಮಾಡಿದ ಮಂಣಕಾಳು ದಿವಾಣಿಕೆಪಾಲು ಸಲಬಾದುಮಾಪುಯೆಂದು ಯೆಲಜಮಯತಿ............"[೨೨೬] ಗೊಬ್ಬೂರು ಹೊಲದ ಬೆಳೆಗಳಲ್ಲಿ ದಿವಾನರಿಗೆ ಕಂದಾಯ ರೂಪದಲ್ಲಿ ನೀಡಬೇಕಾಗಿರುವ ಮಣಕಾಳುಗಳನ್ನು ಮಾಪುಮಾಡಿರುವ ವಿವರ ದೊರೆಯುತ್ತದೆ.

ಬೇಲೂರು ಶಾಸನವೊಂದರಲ್ಲಿ ರಾಜರಿಗೆ ಸಲ್ಲುವ ಆದಾಯವನ್ನು ಬಲತ್ಕಾರವಾಗಿಯೂ ತೆಗೆದುಕೊಂಡು ಹೋಗುವ, ಮನೆಯ ಒಡೆಯ ಇಲ್ಲದೇ ಇದ್ದರೂ ಸರಿಯೇ ತೆರಿಗೆಯ ವಸೂಲಿ ಮಾತ್ರ ನಿಲ್ಲಿಸುತ್ತಿರಲಿಲ್ಲ ಎಂಬ ಅಂಶ ಕಾಣಸಿಗುತ್ತದೆ."...........ರಾಸಿಗೆ ಸೊಪ್ಪಕಟ್ಟಿ ರಾಜಾಯವದೆಲ್ಲವನು ಹೇರಾಸಿ ಮಾಡಿದರು ಗೋಳಿಯ ಬೀಡಿನ ಸಿವದೇವನ ಹೆಂಡತಿ ಗರಜಿಯಲಿ ಗಂಡು ಜನವಂವೊಡಗೊಂಡು ಬಂದು ತಂನ ಭತ್ತವನು ಕೊಂಡರೆಂದು ಬಂದು ಆರಾಸಿಯೊಳಗೆ ತಂನ ಭತ್ತವನು ಕೊಂಡುಹೋದರು ಮಿಕ್ಕಿದ ಭತ್ತವನು ನೂರಮೂವತ್ತೆರಡು ಸೊಲಗೆ ಭತ್ತವನು ...."[೨೨೭] ಶಿವದೇವನ ಹೆಂಡತಿಗೆ ಸೇರಿದ ಭತ್ತದ ರಾಶಿಯ ಕಣಕ್ಕೆ ಗಂಡಾಳುಗಳನ್ನು ಕರೆದು ತಂದು ತಮಗೆ ಸೇರಬೇಕಾದ ಆದಾಯದ ಭತ್ತವನು ಬಲತ್ಕಾರವಾಗಿ ತುಂಬಿಕೊಂಡು ಹೋಗಿರುವ ಅಂಶ ತಿಳಿಯುತ್ತದೆ.

[illegible]

ಅಲ್ಲದೇ ಉಳಿದ ನೂರ ಮೂವತ್ತೆರಡು ಸೊಲ್ಲಗೆ ಅಂದರೆ ನಾಲ್ಕು ಗಿದ್ದನ ಭತ್ತವನು ಶಿವದೇವನ ಹೆಂಡತಿ ಮಾರಿಕೊಂಡು ಹೋದ ಮಾಹಿತಿ ದೊರೆಯುತ್ತದೆ.

ನೀರಾವರಿ ಕುರಿತಾದ ಮಾಹಿತಿ : ಕೃಷಿಯಲ್ಲಿ ನೀರಾವರಿ ಮಹತ್ವದ ಪಾತ್ರ ವಹಿಸುತ್ತದೆ. ನೀರಾವರಿಯ ಮೂಲಗಳಾದ ಕೆರೆ, ಬಾವಿ, ಕಾಲುವೆಗಳಿಂದ ಹೊಲಗದ್ದೆಗಳಿಗೆ ನೀರನ್ನು ಹರಿಸಿಕೊಂಡು ಭತ್ತ, ಕಬ್ಬು ಮತ್ತು ತೋಟದ ಬೆಳೆಗಳನ್ನು, ಲಾಭ ತರುವಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ. ಪ್ರಾಚೀನ ಕಾಲದಲ್ಲಿ ಕೆರೆ, ಬಾವಿ, ಕಾಲುವೆಗಳನ್ನು ನಿರ್ಮಾಣ ಮಾಡುವುದು, ದುರಸ್ಥಿ ಮಾಡಿಸುವುದು, ಅಂತಹ ನೀರನ್ನು ಕೃಷಿಗೆ ಬಳಸಿಕೊಳ್ಳುವ ಅಂಶಗಳು ಶಾಸನಗಳಲ್ಲಿ ದೊರೆಯುತ್ತವೆ. ಅಂತಹ ಉಲ್ಲೇಖಗಳನ್ನು ಕ್ರೋಢೀಕರಿಸಿ ವಿಶ್ಲೇಷಿಸಲಾಗಿದೆ. ತೆಂಗಳಿ ಶಾಸನದಲ್ಲಿ ಮಹಾಜನಗಳಿಗೆ ಕ್ರಯ ರೂಪದಲ್ಲಿ ಕೊಟ್ಟ ಭೂಮಿಯ ಮೇರೆಯನ್ನು ಹೇಳುವಾಗ 'ಏತದಕೆರೆ' ಎಂದು ಬಳಕೆಯಾಗಿರುವ ಅಂಶ ಕಂಡುಬರುತ್ತದೆ. ಅಲ್ಲದೆ ಕೆರೆಗಳಿಗೂ ಏತಗಳನ್ನು ಹೂಡಿ, ನೀರು ಹಾಯಿಸುತ್ತಿರಬಹುದೆಂದು ಊಹಿಸಬಹುದು. ಏಕೆಂದರೆ ಬೆಳೆಗಳಿಗೆ ನೀರನ್ನು ಹರಿಸಿರುವ ಅಂಶ ಇಲ್ಲಿ ಕಂಡುಬರುವುದಿಲ್ಲ. "..........ಕೆಯಿಂ ಮೂಡಲ ಏತದ ಕೆರೆಯ ದಶಕದಿಂ ತೆಂಕಲು ದೀಚಿಗೆರೆಯಲಲಿ ...."[೩೩೮] 'ಕಲಬುರ್ಗಿ ಜಿಲ್ಲೆಯ ಶಾಸನಗಳು' ಎಂಬ ಕೃತಿಯ ಹಂದರಕಿ ಶಾಸನದಲ್ಲಿ ಅನೇಕ ಕೆರೆಗಳ ಹೆಸರುಗಳು ಕಂಡುಬರುತ್ತವೆ. ".......... ತಾವರೆಗೆಱೆಯಿಂ ತೆಂಕ ಕಾಳಿಯ ಕೆಱೆಯ ನೀರ್ನ್ನೆಲಂ ಕಾಲ ೧೦ಮತ್ತಂ ತಾವರೆಗೆಱೆಯಂ ಪತ್ತಿರೆ ಪಡುವಲು ಪೆರ್ಗ್ಗಡೆಗೆಱೆಯ ಕಾಲಲು ಬೆಳೆವ ನೀರ್ನ್ನೆಲಂ ಕಾಲಮತ್ತರು ....[ಪು-೨೩೮] ಈ ಕೆರೆಗಳಲ್ಲಿಯ ನೀರು ಉಪಯೋಗಿಸಿಕೊಂಡು ಬೆಳೆಯನ್ನು ಬೆಳೆಸುತ್ತಿರುವಂತೆ ತಿಳಿದುಬರುತ್ತದೆ. ಸಿಂಧನೂರು ತಾಲೂಕಿನ ಒಂದು ಶಾಸನದಲ್ಲಿ ಅನೇಕ ಕೆರೆಗಳನ್ನು ಲೋಕಲ್ಯಾಣಕ್ಕಾಗಿ ಕಟ್ಟಿಸಿರುವ ಮಾಹಿತಿ ದೊರೆಯುತ್ತದೆ. ".......... ಜೊಂಮ ರಾಹುತರು ಮುಕುಂದಿಯ ಗಲುಡ ಸೇನುಬೋವ ಮುಂತಾದ ಪ್ರಜೆಗಳಿಗೆ ಕೊಟ ಕೆಱೆಗೆ ದವಸಂದದ ಕಟುಮಾನ್ಯವ ಕೊಟವೋಲೆಯ ಕ್ರಮವೆಂತೆಂದರೆ ನೀಲು ಮುಕುಂದೆಲು ಕಟ್ಟಿಸಿದ ಕೆರೆಗಳು ಗವುಡ ಸೇನಬೋವರು ಕಟಿಸಿದ ಕೆಱೆ೧ ಆಯಿತಿರೆಡಿ ಕೆಱೆ೧ ಸೂಗರ ಸಾಗಪ್ಪನ ಕೆಱೆ೧ ಆಟುಲ ಪರುವತನ ಕೆಱೆ೧ ಕೋಟೆಗಾರತಿಪರಂ ಮುಕುಂದಿ ಉಪಾರಯಿನೊರಯ್ಯ ಕಾಲುವೆ೧ ಅಂತು ಕೆಱೆ೪ ಕುಂಟೆ೨ ಕಾಲುವೆ೧ ಯಿದ್ರ ಕೆಳಗೆ ನಿಮಗೆ ...."[೩೩೯] ಗೌಡ ಶ್ಯಾನುಬೋಗರು ಕಟ್ಟಿಸಿದ ಕೆರೆ, ಆಯಿತರೆಡ್ಡಿ ಕಟ್ಟಿಸಿದ ಕೆರೆ, ಸೂಗೂರ ಸಾಗಪ್ಪನ ಕೆರೆ, ಅಟುಲಪರ್ವತನಕೆರೆ, ಕೋಟೆಗಾರ ತಿಪ್ಪರಂಗ, ಮುಕುಂದಿ ಉಪ್ಪಾರಾಯಿ ಸೋರಯ್ಯನ ಕಾಲುವೆ೧. ನಾಲ್ಕು ಕುಂಟೆ ವಿಸ್ತೀರ್ಣದಲ್ಲಿ ನಾಲ್ಕು ಕೆರೆ ಒಂದು ಕಾಲುವೆಯನ್ನು ಮಾಡಿಸಿದ್ದು ಇದರ ಕೆಳಗೆ ಬರುವ ಆದಾಯದಲ್ಲಿ ಕುಳಪಾಲು ಎರಡು ಅಂದರೆ ಬೇಸಾಯದ ಪಾಲು ಮತ್ತು ರಾಜನ ಪಾಲು ಒಂದರ ಲೆಕ್ಕದಲ್ಲಿ ಹಂಚಿಕೊಳ್ಳಬೇಕೆಂದು ಹೇಳಲಾಗಿದೆ.

ಸೋಮವಾರಪೇಟೆ ತಾಲೂಕಿನ ಮೋರಿಕಲ್ಲು ಶಾಸನದಲ್ಲಿ ಕೆರೆಯ ದುರಸ್ಥಿಗೆ ದಾನ ನೀಡಿದ ಉಲ್ಲೇಖ ಕಂಡುಬರುತ್ತದೆ. "...........ಪಕಟ್ಟಿಸಿ ನೆಱುಉಗವಿನಿಗೆ ಕೆಱೆಯ ಕಟ್ಟೆ ....ಕಣ್ಡುಕ ಕವಿನಿ(ಬ)ಮ್ನುನೂಱು ಕಡ್ಡುಗ ಇಪ್ಪತ್ತಯಿಗಣ್ಡುಗ ಆಯಿ ಮಣ್ಡಿಗ ಮಣ್ಣು .... ಕವಿನಿಯ ಕೆಱುಗೆದಗೆ ....ಣ್ಡಿ ಸಿಂಗಪ್ಪನ ತಂಗೆ ಚೀಟಬೆ ಕೆಱೆಯ ...."[೩೪೧] ಕೆರೆಯ ಕಟ್ಟಿಸಿ ಕೆರೆಯ ದುರಸ್ಥಿಗಾಗಿಯೂ ಒಂದು ನೂರ ಇಪ್ಪತ್ತೈದು ಖಂಡುಗ ಮಣ್ಣನ್ನು ದಾನ ನೀಡಲಾಗಿದೆ. ಇ. ಶಿ. ಶಾಸನ ಸಂಪುಟ -

೧ರಲ್ಲಿ ಹೊಸಹಳ್ಳಿ, ಗೋಣಿಮರೂರು ಎಲ್ಲೂರು ಶಾಸನಗಳಲ್ಲಿ ಕೆರೆಯ ಕುರಿತಾದ ಮಾಹಿತಿ ಈ ಕೆಳಗಿನಂತೆ ಕಂಡುಬರುತ್ತದೆ. ಹೊಸಹಳ್ಳಿ ಶಾಸನದಲ್ಲಿ ಕೆರೆಯ ನಿರ್ಮಾಣಕ್ಕೆ ಐವತ್ತು ಖಂಡುಗ ಬೆಳೆಯನ್ನು ಬೆಳೆಯುವಷ್ಟು ಬೀಳುಭೂಮಿಯನ್ನು ದಾನವಾಗಿ ನೀಡಿರುವ ಅಂಶ ತಿಳಿಯುತ್ತದೆ.

ತೆಳನೂರು ಶಾಸನವೊಂದರಲ್ಲಿ ಕೆರೆಗೆ ತೂಬಿನ ವ್ಯವಸ್ಥೆ ಇರುವುದು ಕಂಡುಬರುತ್ತದೆ. ಅಲ್ಲದೆ ಚಾಮುಂಡಿಪುರದ ಕೆರೆಯ ತೂಬಿನಿಂದ ನೀರು ಉಪಯೋಗಿಸಿಕೊಂಡು ಬೆಳೆ ಬೆಳೆಯುವವರು ಒಂದು ತೂಬಿನ ಕಾಲುವೆಯಿಂದ ಹರಿದ ನೀರಿನಲ್ಲಿ ಬೆಳೆದ ಧಾನ್ಯವನ್ನು ದೇವರಿಗೆ ಆದಾಯ ನೀಡಿರುವ ಅಂಶ ಕಂಡುಬರುತ್ತದೆ. "..........ಗಳಾಗಿ ಒನ್ದು ಚಾಮುಣ್ಡಪುರದ ಕೆರೆಯ ಮೂಡಣ ತೂಂಬನು ದೇವರ್ಗ್ಗೆ ಬಿಟ್ಟನ್ ...."[೩೪೧] ಎನ್ನಲಾಗಿದೆ. ಇದೇ ಸಂಪುಟದಲ್ಲಿ ಹೇಳಿರುವ ಮಲ್ಲಿಗೇನಹಳ್ಳಿ ಶಾಸನದಲ್ಲಿ ಪುಟ–೨೪೬ರಲ್ಲಿ ಕೆರೆಗೆ ಹತ್ತು ತೂಬುಗಳನ್ನು ಬಿಟ್ಟಿರುವಂತಿದೆ. ಪ್ರಾಯಶಃ ಹತ್ತು ತೂಬಿಗೆ ಅವಶ್ಯಕವಿರುವ ಹಳ್ಳದ ಭೂಮಿಯನ್ನು ಬಿಟ್ಟಿರುವುದನ್ನು ನೋಡಿದರೆ ಇದು ತುಂಬಾ ದೊಡ್ಡ ಕೆರೆಯಾಗಿರಬೇಕೆನಿಸುತ್ತದೆ. '..............ಹಕ್ಕೆ ಬಿಟ್ಟ ಗದ್ದೆ ಖ೦ ॥ ಹತ್ತು ತೂಬಿಗೆ ಮೂಡಲು ಬಡಗವಾಗಿರುವ ಹಳ್ಳದ ಭೂಮಿಯನ್ನು ಬಿಟು ....' ಎನ್ನಲಾಗಿದೆ.

ಮೇಲುಕೋಟೆಯ ಶಾಸನವೊಂದರಲ್ಲಿ ಕೆರೆಯ ದುರಸ್ಥಿಯ ಅಂಶಗಳನ್ನು ಹೀಗೆ ಹೇಳಲಾಗಿದೆ. "...........ಆ ಕೆಱೆಯ ವೊಡವನು ನೀವು ಕಟ್ಟಿಸಿ ತೂಬಿನೂನಿಲಿಸಿ ಕೋಡಿಯ ಕಡುವನು ತೆಗಸಿ ಆ ಕೆರೆಯನು ಜೀರ್ಣೋದ್ಧಾರವ ಮಾಡಿದಿರಾಗಿ ಆ ಕೆರೆಯ ಕಟ್ಟುವರೆ ಮುಟ್ಟಿದ ದ್ರವ್ಯ ಘಟ್ಟ ವರಹ ...."[೪೦೬] ಕೆರೆಯ ಜೀರ್ಣೋದ್ಧಾರ ಒಂದು ಪುಣ್ಯದ ಕೆಲಸವಾಗಿದ್ದು. ಕೆರೆಯ ಒಡ್ಡನ್ನು ಹಾಕಿಸಿ, ತೂಬನ್ನು ನಿರ್ಮಿಸಿ, ಕೋಡಿಯ ಜಾಗವನ್ನು ಕಡಿದು ನಿರ್ಮಾಣ ಮಾಡಿಕೊಟ್ಟರೆ ಕೆರೆಯ ಕಟ್ಟಿಸಿದಷ್ಟೇ ಹಣವನ್ನು, ವರಹಗಳನ್ನು ನೀಡುವುದಾಗಿ ಹೇಳಿರುವುದನ್ನು ನೋಡಿದರೆ, ಕೆರೆಯ ದುರಸ್ಥಿಯು ಕೂಡ ಹೊಸ ಕೆರೆ ಕಟ್ಟುವಷ್ಟೇ ಖರ್ಚುದಾಯಕವಾಗಿದ್ದು, ಒಡ್ಡುದುರಸ್ಥಿ, ತೂಬುನಿಲ್ಲಿಸುವುದು, ಕೋಡಿ ಕಡಿಯುವುದು ತುಂಬಾ ಶ್ರಮದಾಯಕ ಕೆಲಸವಾಗಿದೆ ಎಂದು ತಿಳಿದುಬರುತ್ತದೆ.

ಜಕ್ಕನಹಳ್ಳಿ ಶಾಸನವೊಂದರಲ್ಲಿ ಕೆರೆಗೆ ಹದಿನೈದು ಕೊಳಗದ ಗದ್ದೆಗೆ ಆಗುವಷ್ಟು ನೀರನ್ನು ಕೋಡಿಯಿಂದ ಕೊಡಗಿಗೆರೆಗೆ ಹರಿಸಿ ಆ ನೀರನ್ನು ನೀರಾವರಿಗೆ ಬಳಸುವ ಅಂಶ ತಿಳಿದುಬರುತ್ತದೆ. ಒಂದು ಕೆರೆಯಿಂದ ಮತ್ತೊಂದು ಕೆರೆಗೆ ನೀರು ಹಾಯಿಸಿಕೊಳ್ಳುವ ವ್ಯವಸ್ಥೆಯನ್ನು ಇಲ್ಲಿ ಕಾಣುತ್ತೇವೆ. "............ ಹದಿನಯ್ದು ಕೊಳಗ ಗದ್ದೆ ಚಿಕ್ಕಗವುಡ್ಡಾನ ಕೊಡಗಿಗೆಱೆಯಲ್ಲಂ ಮೆಯ್ಸ ಕೋಡಿಯಿಂದೊಳಗಾದ ನೀರುವರಿಯಿಂ ...."[೩೪೩] ಎಂದು ತಿಳಿದುಬರುತ್ತದೆ. ಶಿವನಹಳ್ಳಿಯ ಒಂದು ಶಾಸನದಲ್ಲಿ ತಿಪ್ಪರಾಯನ ಮಗ ಕದರೆನಾಯಕ ಎಂಬುವನು ೧೪೫೩ರ ಶಕ ಸಂವತ್ಸರದಲ್ಲಿ ಕೆರೆಯ ಕಟ್ಟಿಸಿದನೆಂದು ನಿಕರವಾಗಿ ಹೇಳಲಾಗಿದೆ. "ಸಕ ವರುಷ ೧೪೫೩ರ ಕರ ಸವಂತ್ಸರದಲ್ಲಿ ಬೆಳಗುಂದಿಯ ತಿಪಯನ ಮಗ ಕದರೆನಾಯಕ ಕಟ್ಟಿಸಿದ ಕೆಱೆ ...."[೩೪೪]

ಕೃಷಿಗೆ ನೀರಾವರಿಯ ಅನುಕೂಲ ಮಾಡಿಕೊಡಲು ಶ್ರಮಿಸಿದ ವ್ಯಕ್ತಿಗಳು ಕೆಲವರು. ಅವರು ಬಂಡವಾಳ ಹಾಕಿ ಇಂತಹ ಧರ್ಮಕಾರ್ಯಗಳನ್ನು ಮನಸ್ಸಿನ ತೃಪ್ತಿಗಾಗಿ, ಲೋಕಕಲ್ಯಾಣಕ್ಕಾಗಿ ಮಾಡುತ್ತಿದ್ದರು. ದೊಡ್ಡಜಟಕನ ಶಾಸನದಲ್ಲಿ ನೀರು ತುಂಬಿ ಹರಿಯುವ ಹಳ್ಳಗಳಿಗೆ ಅಡ್ಡಲಾಗಿ ಕೆರೆಯ ಕಟ್ಟಿ, ಆ ನೀರನು ಕೃಷಿಯ ಉಪಯೋಗಕ್ಕೆ ಬಳಸಿಕೊಂಡು ಬೆಳೆ ಬೆಳೆಯುವ ಅಂಶವನ್ನು ಕಾಣುತ್ತೇವೆ,

“.......... ವೂರ ಮಾಡಿ ಹಳ್ಳವಾದುವಂ ಕೆಱೆಯಾಗಿ ಕಟ್ಟಿಸಿದನುದ್ಯೋಗಮಲ್ಲಂ ಸಾಮಂತ ಹುಳ್ಳಿಯ ನಾಯಕಂ ....[ಪು-೧೨೯] ಇಂದು ಹರಿಯುವ ಹಳ್ಳಗಳಿಗೆ ಒಡ್ಡು (ಪಿಕಪ್ ಡ್ಯಾಂ)ಹಾಕುವ ಯೋಜನೆಗಳು ಕಂಡುಬರುತ್ತವೆ.

ಬಿತ್ತುವ ಬೀಜದ ಮೇಲೆ ಮತ್ತು ಕೆರೆಯ ತೂಬಿನ ನೀರಿನಿಂದ ಎಷ್ಟು ಭೂಮಿಗೆ ನೀರು ಹರಿಯುತ್ತದೆ ಅದರ ಮೇಲೆ ಭೂಮಿಯ ವಿಸ್ತೀರ್ಣವನ್ನು ಅಂದಾಜು ಮಾಡುತ್ತಿದ್ದರು ಎಂಬ ಅಂಶ ಘಟ್ಟದಹಳ್ಳ ಶಾಸನದಲ್ಲಿ ದೊರೆಯುತ್ತದೆ. “.......... ಸಲೆ ಅಯ್ವತ್ತು ಕೊಳಗ ಬೀಜ ಬಿತ್ತುವ ಗದ್ದೆಯಂ ಸಿರಿಗನ ಕೆಱೆಯ ಕೆಳಗಣ ಸಾಲ.......... ಮೂವತ್ತು ಕೊಳಗ ಬೀಜ ಬಿತ್ತುವ ಗದ್ದೆಯಂ ತಾವರೆಗೆಱೆಯ ಮುಂದಣ ಕೋಡಿಯ ತೂಬಿನಿಂ ಬಡಗು...........”[೩೪೫] ಕೆರೆಯ ನೀರಾವರಿಗೆ ಒಳಪಟ್ಟಿರುವ ಐವತ್ತು ಕೊಳಗ ಬೀಜ ಬಿತ್ತುವ ಮತ್ತು ಮೂವತ್ತು ಕೊಳಗ ಬೀಜ ಬಿತ್ತುವ ಗದ್ದೆಯನ್ನು ದೇವರ ಆರಾಧನೆಗೆ ನೀಡಿರುವ ಅಂಶ ತಿಳಿಯುತ್ತದೆ. ಇನ್ನೊಂದು ಶಾಸನದಲ್ಲಿ ಮನುಷ್ಯರ ಜೀವನನಿರ್ವಹಣೆಗೆ ನೀಡಿರುವ ಗದ್ದೆ ಮತ್ತು ರಾಟಾಳವನ್ನು ಎತ್ತಿಗೆ ಹೂಡಿ ಬಾವಿಯಿಂದ ನೀರನ್ನು ಮೇಲೆತ್ತಿ ಕಾಲುವೆಗಳ ಮೂಲಕ ತೋಟಕ್ಕೆ ನೀರು ಹಾಯಿಸುವ ಅಂಶ ಕಂಡುಬರುತ್ತದೆ. “......... ಕಲ್ಲಣನು ಮಾಡಿದ ಹೂದೋಟದ ಱಾಟಾಣ ಹೂಡುವ ಎತ್ತಿನ {ಮೇಹಿ)ಗೆ ತಮ್ಮ ಜೀವಿತಕ್ಕೆ ....”[೩೪೬] ಎನ್ನಲಾಗಿದೆ. ಹೀಗೆ ಕೆರೆಯ ನಿರ್ಮಾಣ, ದುರಸ್ಥಿ, ದುರಸ್ಥಿಗಾಗಿ ನೀಡುವ ಹಣ, ಧಾನ್ಯ ಮತ್ತು ದೇವರ ಆರಾಧನೆ, ಲೋಕದ ಹಿತಕ್ಕಾಗಿ ಕೆರೆಯ ತೋಡಿಸಿ ಏರಿಯ ನಿರ್ಮಿಸಿ ಅದರ ನಿರ್ವಹಣೆಯನ್ನು ಮಾಡುವಂತಹ ಅನೇಕ ಅಂಶಗಳು ಶಾಸನಗಳಲ್ಲಿ ದೊರೆಯುತ್ತವೆ.

ಕಾಲುವೆ ನೀರಾವರಿ : ಕಾಲುವೆಯ ನೀರಾವರಿಯಲ್ಲಿ ದೊಡ್ಡ ಆಣೆಕಟ್ಟು ಕಟ್ಟಿ ಕಾಲುವೆಗಳ ನಿರ್ಮಿಸಿ ನೀರು ಹಾಯಿಸಿರುವ ಮಾಹಿತಿಗಳು ಶಾಸನಗಳಲ್ಲಿ ದೊರೆಯುವುದಿಲ್ಲ. ಆದರೂ ಕೆರೆಗಳಿಗೆ ದೊಡ್ಡಕಾಲುವೆ ನಿರ್ಮಿಸುವುದು, ಕಾಲುವೆಗಳ ದುರಸ್ಥಿ, ನೀರಿನ ನಿರ್ವಹಣೆ ಮಾಡುವ ಅಂಶಗಳು ಕಂಡುಬರುತ್ತವೆ. ನಂಜರಾಜಪುರ ಶಾಸನವೊಂದರಲ್ಲಿ “...........ಕೊಳಗೆ ಅರಮನೆ ನೀರುಯದರು ನಿಂಮ ಅಗ್ರಾರದಣ್ಣ ತೋಟಗಳಿಗೆ ತೂಬಿನ ನೀರು ಸವಡಿಯಾ ....ಯ ಕಲ್ಲುಕಟ್ಟೆಯ ಕಾಲುವೆಯ ನೀರು ನಿಂತು ತೋಟಗದ್ದೆಗಳಿಂಗೆ..........ಸಲುವ.......ರಾದ ಅಗ್ರಾರ ಅಕ್ಕಿಳೆಯಹಳ್ಳಿ ಅ .... ಟದ ಪ್ರಜೆಗಳಿಗೆ ಮಗ್ಗಾಮನೆವಣ ಸುಂಕವೊಳ ಏಱು ನಿಂಮ ಅ .... ಕೆ ಸಲುವುದು ನೀರಾವರಿ ಕಾಲುವೆ..........”[೩೪೭] ಅರಮನೆ ಮತ್ತು ಅಗ್ರಹಾರದ ತೋಟಗಳಿಗೆ ಕೆರೆಯ ನೀರನ್ನು ತೂಬಿನ ಮೂಲಕ ಹಾಯಿಸಲು ಕಲ್ಲುಕಟ್ಟೆಯ ಕಾಲುವೆಗಳನ್ನು ನಿರ್ಮಾಣ ಮಾಡಿರುವ ಸಂಗತಿ ತಿಳಿಯುತ್ತದೆ. ಅಲ್ಲದೆ ಕಲ್ಲುಕಟ್ಟೆಯ ನೀರು ನಿಂತು ತೋಟಗದ್ದೆಗಳಿಗೆ, ಅಕ್ಕಿಳೆಯ ಹಳ್ಳಿಯ ಪ್ರಜೆಗಳಿಗೆ, ಮಗ್ಗ, ಮನೆಯ ಸುಂಕ ನೀರ ಕಾಲುವೆಯ ಆದಾಯವನ್ನು ದಾನವಾಗಿ ನೀಡಿರುವ ಅಂಶ ತಿಳಿದುಬರುತ್ತದೆ. ಬಾನಗವಾಡಿ ಶಾಸನದಲ್ಲಿ ತೂಬಿನಿಂದ ನೀರನ್ನು ಹಾಯಿಸಿಕೊಳ್ಳಲು ಮತ್ತು ಭೂಮಿಗೆ ನೀರಾವರಿಯ ಹರವು ಇರುವ ನೆಲಕ್ಕೆ ಆಣೆ ಅಚ್ಚುಕಟ್ಟು ಎಂದು ಕರೆಯುವ ಸಂಗತಿ ತಿಳಿಯುತ್ತದೆ.

ಕಾಲುವೆಯ ದುರಸ್ಥಿಯನ್ನು ಕುರಿತು ಟಿ. ನರಸೀಪುರ ಶಾಸನವೊಂದರಲ್ಲಿ ಹೀಗೆ ಹೇಳಲಾಗಿದೆ. “ಸಾಧ್ಯದ ಭೂಮಿಲಿ ನಡದ ವಿವರ । ಪಡುವಲಿಂದ ಬರುವ ಕೆಂಬರೆಹಳ್ಳ ಗಣಗನೂರ ತಗಡಗೆರೆಯರೆ ಹೊಲ ಮೇಲೆ ನೀರು ಬಿದ್ದು ಪೈರು ಕೆಡುವದರಿಂದ । ನೀರು ಹೊಚ್ಚು ಮಾಡಿ ವಿಂಗಡವಾಗಿ ಕಾಲ್ವೆ

ತೆಗೆಯುವದಕ್ಕೆ ನಿರೂಪ ...."[೩೪೮] ಕಾಲುವೆಯ ನೀರು ಎರೆಹೊಲಗಳ ಮೇಲೆ ಹರಿದು ಹೊಲಗಳ ಪೈರು ನಾಶಹೊಂದುವಂತಹ ವೇಳೆಯಲ್ಲಿ ಬಸಿಕಾಲುವೆಯ ಮಾಡಿ ಅದನ್ನು ತಡೆಯುವಂತೆ ನೋಡಿಕೊಳ್ಳುವ ವ್ಯವಸ್ಥೆಯನ್ನು ಈ ಶಾಸನದಲ್ಲಿ ಕಾಣುತ್ತೇವೆ. ಹರಿಹರಪುರ ಶಾಸನದಲ್ಲಿ ಸುಂಕವನ್ನು ಸಂಗ್ರಹಿಸಿ ಕೆರೆ ಕಟ್ಟೆಯ ಕಾಲುವೆಯ ವ್ಯವಸ್ಥೆಗೆ ವ್ಯಯಮಾಡುವಂತಹ ಅಂಶವನ್ನು ಕಾಣುತ್ತೇವೆ. ".......... ಹಳ್ಳಿಗಳ ಹೆಜ್ಜುಂಕವನೂ ಆನಾಡ ಸುಂಕವನು .... ಗೆ ಇದಂ ಆರೋಗಣೆಯಂ ಮಾಡಿ ಕಟಿ ಕಾಲುವೆಯ ಚಿತ್ತೈಸಿ ಕಟ್ಟು ಕಾಲುವೆಯ .... ಕಾಲುವೆಯನಂ ವರುಷಂ ಪ್ರತಿ ಮಾಡಿಸುವದಕೆ ಆ ಹಳ್ಳಿಗಳ ಹೆಜ್ಜುಂಕ ನಾಡಸುಂಕವನು ...."[೩೪೯] ಅನೇಕ ಹಳ್ಳಿಗಳಿಂದ ಸಂಗ್ರಹವಾದ ಹಿರಿಯ ಸುಂಕವನು ಕಟ್ಟೆ, ಕಾಲುವೆ ಕಟ್ಟಲು ಮತ್ತು ಪ್ರತಿವರ್ಷ ಅವುಗಳ ದುರಸ್ಥಿಗೆ, ನೀರಿನ ನಿರ್ವಹಣೆಗೆ ವ್ಯಯಮಾಡುವ ವ್ಯವಸ್ಥೆಯನ್ನು ಇಲ್ಲಿ ಕಾಣುವುದು ಗಮನಾರ್ಹವಾಗಿದೆ. ಬನ್ನೂರು ಶಾಸನದಲ್ಲಿ ಕಾವೇರಿಯ ಕಾಲುವೆ ಇರುವ ಅಂಶ ಮತ್ತು ಆ ನೀರನ್ನು ಕೃಷಿಗೆ ಬಳಸುತ್ತಿರಬಹುದಾದ ಮಾಹಿತಿ ದೊರೆಯುತ್ತದೆ. "ಕಾವೇರಿಯ ಕಾಲುವೆ ಕೆಳಗೆ ಗದ್ದೆ ಖ ೭ ಅಕ್ಷಾರದಲು ಆಙಖಂಡುಗಗ ಗದ್ದೆ ಕಲ್ಲುಮಡವೆಯ ತೋಟ ಅಡಕೆಯ ಮರ -೯೦೦ ಅಕ್ಷರದಲು ...."[ಇ.ಸಿ.ಸಂ.-೫,ಪು-೪೫೨] ಎನ್ನಲಾಗಿದೆ. ಶೃಂಗೇರಿ ಶಾಸನದಲ್ಲಿ ಕೃಷಿ ಹುಟ್ಟುವಳಿ ಮಾಡಲು ಸಸಿಗಳಿಗೆ ನೀರು ಹಾಯಿಸಿಕೊಳ್ಳಲು ಕೆರೆ, ಕಾಲುವೆ ಕಟ್ಟಿಸಿ ಅನುಕೂಲ ಮಾಡಿಕೊಂಡ ಮಾಹಿತಿ ಕಾಣಸಿಗುತ್ತದೆ. "........ ಹೆಚ್ಚಿಗೆಯಿಂದ ಸಹಾಉತಾರ ಕೊಟ್ಟ ಬಗೆಲು ಕೆರೆಕಾಲುವೆ ಕಟ್ಟಿಸಿ ಸಸಿಬಾಳ ಹಾಕಿ ಆಗಾಮಿ ಮಾಡಿಕೊಂಡ ಹುಟ್ಟುವಳಿ..........."[೩೫೦] ಎನ್ನಲಾಗಿದೆ.

ರುದ್ರಪಟ್ಟಣದ ಶಾಸನವೊಂದರಲ್ಲಿ ಕಾಲುವೆಯ ಒಳಗೆ ಕಾಲುವೆಯನ್ನು ನಿರ್ಮಿಸಿದ ಮಾಹಿತಿ ದೊರೆಯುತ್ತದೆ. ಅದು "..........ಗಳೆಲ್ಲಂನು ಕರದು ಕೊಂಡು ಆ ಪೊಸನಾಡ ಭೂಮಿಯ ವೊಳಗಿಹ ಆ ಕಾಲುವೆಯ ವೊಳಗಣ ಕಾಲುವೆ ಬಂದು ಆ ಕೆಱೆಯ ಕೆಳಗೆ ವೊಳಗದ್ದೆಯನ್ನು ಆ ಭೂಮಿಯನು......."[೩೫೧] ಕೂಡು ಬೇಸಾಯದ ಎಲ್ಲರನ್ನು ಒಟ್ಟಿಗೆ ಸೇರಿಸಿಕೊಂಡು ಕೆರೆಯ ಕೆಳಗಿನ ಗದ್ದೆಗೆ ನೀರು ಹಾಯಿಸಿಕೊಳ್ಳಲು ಕಾಲುವೆಯ ಒಳಗೆ ಮತ್ತೊಂದು ಕಾಲುವೆಯನ್ನು ನಿರ್ಮಾಣ ಮಾಡಿಕೊಂಡ ಮತ್ತು ಅದಕ್ಕೆ ಭೂಮಿ ನೀಡಿದ ಅಂಶಗಳು ಕಾಣಸಿಗುತ್ತವೆ.

ಒಟ್ಟಾರೆಯಾಗಿ ಕಾಲುವೆಗಳ ನಿರ್ಮಾಣ, ದುರಸ್ಥಿ, ಕಾಲುವೆಯ ಒಳಗೆ ಕಾಲುವೆಗಳ ನಿರ್ಮಾಣ, ಕಾಲುವೆಗಳ ನೀರು ಹೊಲಗಳ ಮೇಲೆ ಹರಿದು ಪೈರು ನಾಶವಾದರೆ ಅವುಗಳ ದುರಸ್ಥಿಗೆ ಕೈಗೊಂಡ ಕ್ರಮಗಳು ಮುಂತಾದ ಅಂಶಗಳನ್ನು ಕಾಣಬಹುದಾಗಿದೆ.

ಮಾರುಕಟ್ಟೆ ವ್ಯವಸ್ಥೆ : ಶಾಸನಗಳಲ್ಲಿ ದೊರೆಯುವ ಮಾರುಕಟ್ಟೆಯ ಮಾಹಿತಿಯನ್ನು ಈ ಭಾಗದಲ್ಲಿ ಸಂಗ್ರಹಿಸಿ ಚರ್ಚಿಸಲಾಗಿದೆ. ಮಾರುಕಟ್ಟೆಯಲ್ಲಿ ಸಾಗಾಣಿಕೆ ವಿಧಾನ, ಸರಕು, ಅಳತೆ ಮತ್ತು ತೂಕದ ವಿಧಾನ ಮತ್ತು ಮಾಪನ, ಎಣಿಕೆ, ಭಾರಗಳ ಅಳತೆ, ಸುಂಕ ವಿಧಾನಗಳನ್ನು ಕುರಿತು ಮಾಹಿತಿ ಸಂಗ್ರಹಿಸಲಾಗಿದೆ.

ಸಾಗಾಣಿಕೆ : ರೈತರು ಬೆಳೆದ ಬೆಳೆಯನ್ನು ತನ್ನ ಜೀವನಾವಶ್ಯಕತೆಗೆ ಮತ್ತು ತನಗೆ ಬೇಕಾದ ಬೇರೆ ವಸ್ತುಗಳನ್ನು ಪಡೆಯಲು ಬಳಸುತ್ತಾರೆ. ತಾನು ಬೆಳೆದ ವಸ್ತುಗಳನ್ನು ವರ್ತಕರಿಗೆ ಮಾರಿ ತನಗೆ ಬೇಕಾದ, ತಾನು ಬೆಳೆದ ವಸ್ತುಗಳನ್ನು ಸಾಗಿಸಲು ಅನೇಕ ಕ್ರಮಗಳನ್ನು ಪ್ರಾಚೀನ ಕಾಲದಿಂದಲೂ

ಮಾಡಿಕೊಂಡಿರುವರು. ಈ ಕೊಡು ಕೊಳ್ಳುವಿಕೆಯ ವ್ಯವಹಾರ ನಿರಂತರವಾಗಿ ನಡೆಯುವಂತದ್ದು. ಇಂತಹ ವ್ಯವಹಾರ "ಗ್ರಾಮ ಪಟ್ಟಣಗಳಲ್ಲಿರುವ ವರ್ತಕರು ಪಾದಮಾರ್ಗ, ಜಲಮಾರ್ಗಗಳ ಮೂಲಕ ಒಂಟಿಯಾಗಿಯೂ ಗುಂಪಾಗಿಯೂ ಬೇರೆ ಬೇರೆ ಸ್ಥಳಗಳಿಗೆ ವ್ಯಾಪಾರಕ್ಕಾಗಿ ಹೋಗುತ್ತಿದ್ದರು. ಪ್ರಾಚೀನ ಮತ್ತು ಮಧ್ಯಕಾಲಿನ ಕರ್ನಾಟಕದ ವರ್ತಕರು ಆ ಸಮಯದಲ್ಲಿ ಹಸುಬೆ, ಮೂಟೆ, ಹೆಗಡಿ, ಬರಕ, ಕಲ್ಲಿ, ಕೊಡ, ಚರ್ಮದ ಚೀಲ, ಬಿದಿರಿನ ಕೊಳವೆ(ಎಳಗೆ), ಸಿಂಗಡಿಕಾಯಿ, ಕರಂಡಿಗೆ, ಜಲ್ಲೆಗಳಲ್ಲಿ ತುಂಬಿದ ವಿವಿಧ ಸರಕುಗಳನ್ನು ಎತ್ತು, ಕತ್ತೆ, ಕೋಣ, ಎಮ್ಮೆ, ಕುದುರೆ, ತೊತ್ತು, ಬಂಡಿಗಳ ಮೂಲಕ ಸಾಗಿಸುತ್ತಿದ್ದರು. ಬಂಡಿಯಲ್ಲಿ ಬಿದಿರಿನ ಬಂಡಿ ಮರದ ಬಂಡಿಗಳನ್ನು ಬಳಸುತ್ತಿದ್ದು ಜೊತೆಗೆ ಮೂಟೆ, ಹೆಗಡಿ, ಜಲ್ಲೆಗಳನ್ನು ತಲೆಯ ಮೇಲೆ ಹೊತ್ತುಕೊಂಡು ಕಂಕುಳಲ್ಲಿ ಇಟ್ಟುಕೊಂಡು ಹೆಗಲ ಮೇಲೆ ಹಸಬೆ ಹಾಕಿಕೊಂಡೂ ವ್ಯಾಪಾರಕ್ಕೆ ಹೋಗುತ್ತಿದ್ದರು......... ಪಾದ ಮಾರ್ಗದ ವ್ಯಾಪಾರ ಬಂಡಿಯ ದಾರಿ, ಬಂಡಿಯ ಹೆದ್ದಾರಿ, ರಾಜಬೀದಿ ಕೀಳ್ವಟ್ಟೆ ಮೇಲ್ವಟ್ಟೆ ಅಡ್ಡವಟ್ಟೆಗಳ ಮುಖಾಂತರ ಸಾಗುತ್ತಿದ್ದಿತು. ಮಧ್ಯದಲ್ಲಿ ನದಿ ಹಳ್ಳಗಳನ್ನು ತೆಪ್ಪ, ದೋಣಿಗಳ ಮೂಲಕ ದಾಟುತ್ತಿದ್ದರು. ನದಿಯ ಆಳ ಕಡಿಮೆ ಇದ್ದಾಗ ಇಳಿದು ನೆಡೆದುಬರುತ್ತಿದ್ದರು. ಹೀಗೆ ನದಿಯನ್ನು ನಡೆಯುತ್ತ ದಾಟುವುದಕ್ಕೆ ಅನುಕೂಲವಾದ ಜಲಮಾರ್ಗವೇ ಕಡಹು. ಇದಲ್ಲದೇ ಕೆಲವು ನದಿಗಳಿಗೆ ಸೇತುವೆ ಕಟ್ಟಿದರು, ತೇರದಾಳ ಶಾಸನ ಸಮುದ್ರಯಾನವನ್ನು ತಿಳಿಸುತ್ತದೆ"[೩೫೨]

ಸರಕು ಸಾಮಾನು ಮತ್ತು ಧಾನ್ಯಗಳನ್ನು ಸಾಗಿಸಲು ಅನೇಕ ಪ್ರಾಣಿಗಳನ್ನು, ವಸ್ತುಗಳನ್ನು ಬಳಸುವ ಮಾಹಿತಿ ಎಮ್ಮಡಿಗಿ ಶಾಸನದಲ್ಲಿ ಕಾಣಸಿಗುತ್ತದೆ. "......... ಮುಂಮುರಿದಂಡ ಮುಖ್ಯವಾಗಿ ಅಜುಂ ಸೂಸುಗದ ಮನೆಗಳು ಹೆಜ್ಜುಂಕ, ಬೆಳುಕೊಡೆ, ವಡ್ಡರಾವುಳ, ವಕ್ಕಲುದೆಜೆ ಬಿವಣ ಸಹಿತಂ ಗದ್ಯಮಾಂನ್ಯವಾಗಿ ಚತುಃಸಮುದ್ರ ಪರಿಯಂತಂ ಎತ್ತು, ಕತ್ತೆ, ಕೋಣ, ಬಂಡಿ, ಭೈತ್ರ ಸಹಿತಂ ಬಂದಾ ಕಲಸಾಸನಮಂ ಹೇಜಿಂಗೆ ನೂಜಿಲೆಯಂ ಕೊಟ್ಟರು........."[೩೫೩] ತೆರಿಗೆ ಹಾಕುವ ಮುಖಂಡರು ಓರಿಯಸುಂಕ, ಬೆಳೆಸುಂಕ, ವಕ್ಕಲುಸುಂಕ ಹಾಕುತ್ತಿದ್ದು ಸಾಗಾಣಿಕೆಯಲ್ಲಿ ಎತ್ತು, ಕತ್ತೆ, ಕೋಣ, ಬಂಡಿ ಮುಂತಾದವುಗಳನ್ನು ಬಳಸುತ್ತಿದ್ದರು.

'ಹೈದರಾಬಾದ ಕರ್ನಾಟಕದ ಕನ್ನಡ ಶಾಸನಗಳು' ಎಂಬ ಕೃತಿಯಲ್ಲಿ ಶೇಡಂ, ಬೆನಮಳಿ ಶಾಸನಗಳಲ್ಲಿ ಸಾಗಾಣಿಕೆ ಕುರಿತಾದ ಮಾಹಿತಿ ದೊರೆಯುತ್ತದೆ. ಶೇಡಂ ಶಾಸನದಲ್ಲಿ ಸಾಗಾಣಿಕೆಗೆ ಎತ್ತು, ಕತ್ತೆ, ಕೋಣ ಬಳಸುವ ಅಂಶ ಮತ್ತು ಹೇರುಗಳಿಗೆ ದಾರಿಯ ಸುಂಕವನ್ನು ವಿಧಿಸುವುದು ಕಂಡು ಬರುತ್ತದೆ. "............ಪೂಜೆಗೆ ಬಿಟ್ಟ ಆಯ ಸೀರೆಯ ಹಸುಬೆಗೆ ಬೆಳ್ಳಿಯ ಹಾಗ ೧ ಅಲ್ಲವರಿಷಿಣ ಹೇಜಿಂಗೆ ಬೆಳ್ಳಿಯ ಹಾಗ ೧ ಭತ್ತದ ಹೇಜಿಂಗೆ ಸೋಳಸ ೨೧ ಎತ್ತು ಕತ್ತೆ ಕೋಣನ ಹೇಜಿಂಗೆ ಮೆಣಸು ಸೋ ೧ ಅಡಕೆ ೧೦ ಎಲೆಯ ಹೇಜಿಂಗೆ ಎಲೆ...........(ಪು–೯೯೧) ಬೆನಮಳ್ಳಿ ಶಾಸನದಲ್ಲಿಯೂ ಇದೇ ರೀತಿಯ ಮಾಹಿತಿ ದೊರೆಯುತ್ತದೆ. "............ಚಿಲ್ಲ ಮಳೆಯ ಶ್ರೀ ಸ್ವಯಂ ಭೂ ಮಲ್ಲಿಕಾರ್ಜುನ ದೇವರ್ಗ್ಗೆ ಮೆಳಸಿನ ಹೇರಿಂಗೆ ೨ ಅಡಕೆಯ ಹೊರುವ ಎತ್ತು ಕತ್ತೆ ಕೋಣನ ಭತ್ತದ ಹೇರಿಂಗೆ ಮಾನಡಿ ಎಲೆಯ ಹೇರಿಂಗ ಹೊತ್ತಮಿರ್ಕ್ಕೆ ಅಡಕೆಯ ಹೇರಿಂಗೆ ೧೦ ಅಲ್ಲ, ಅರಿಸಿಣದ ಹೇರಿಂಗೆ ಗೊಪ್ಪವಂ..............(ಪು–೧೮) ಅಡಕೆ, ಭತ್ತ, ಎಲೆ, ಅರಿಸಿಣದ ವಸ್ತುಗಳನ್ನು ಸಾಗಾಣಿಕೆಗೆ ಎತ್ತು, ಕತ್ತೆ, ಕೋಣ ಬಳಸುತ್ತಿದ್ದು, ಒಂದೊಂದರ ಹೇರಿಗೆ ಪ್ರತ್ಯೇಕ ಮತ್ತು ಭಿನ್ನತೆಯೊಳ್ಳ ದಾರಿ ಸುಂಕವನ್ನು ನಿಗಧಿ ಮಾಡಿರುವ ಅಂಶ ತಿಳಿದುಬರುತ್ತದೆ.

ಸಿಂಗನಲ್ಲುರು ಶಾಸನದಲ್ಲಿ ೨ ಮಾರ್ಗಗಳ ಉಲ್ಲೇಖ ಕಾಣಸಿಗುತ್ತದೆ. "..............ಹಲರು ಉಪ್ಪು(ಹ) ಉಭಯ ಮಾರ್ಗಲು ಕೂಡಿಮಗಮೆಯ ಬರದು ಕೊಟ್ಟಂ ನಿವರ ಎತ್ತಿನ ಉಪ್ಪಿನ..............(ಹ) ತ್ತಿ ಎಲೆ ಅಡಕೆ ವಿಳಗುಇವಕೆ ವೀಸದ ಮೆಣಸು ಸೀರೆ ಉಪ್ಪಿನ ಕಾವಲ ನೂಲು ಇದಕೆ ಹೇಜುಗೆ ತಾ ೧ ಕುದುರೆ ಭಂಡಿ ತೊತ್ತುಯಿ ಹಾಗದ ವೀಸದ ಎತ್ತಿನ ಹೇಜು ಉಭಯರವ ಮಾರ್ಗ್ಗ ಮಾಜಾಟದ ಎತ್ತಿಗೆ ಹೊ ೧ ಸಾವರ.................."[೩೫೪] ಉಪ್ಪಿನ ಹೇರಿಗೆ ಮತ್ತು ಇತರೆ ಹೇರುಗಳಿಗೆ ಎರಡು ಮಾರ್ಗ ಅಂದರೆ ಭೂ ಮಾರ್ಗ, ಜಲ ಮಾರ್ಗದಲ್ಲಿ ಸಾಗಿಸಲು ಎತ್ತು ಕುದರೆ, ಬಂಡಿ ಮತ್ತು ಆಳುಗಳ ಮೇಲೆ ದಾರಿಸುಂಕವನ್ನು ವಿಧಿಸುವುದು. ಹಾಗೂ ಎತ್ತು ಹೇರು ಉಪ್ಪು, ಹತ್ತಿ, ಎಲೆ, ಅಡಿಕೆ, ದ್ವಿದಳಧಾನ್ಯ, ಹಾಗೂ ಮೆಣಸು ಸೀರೆ ಉಪ್ಪಿನಕಾಯಿ, ನೂಲು ಇದಕ್ಕೆ ಹೇರಿಗೆ ತಾ ೧ ಕುದುರೆ, ಬಂಡಿ, ತೊತ್ತು, ದಾರಿಸುಂಕ ಉಭಯ ಮಾರ್ಗದಲ್ಲಿ ಮಾರಾಟದ ಎತ್ತಿಗೆ ಸೇರಿ ಒಂದು ಸಾವಿರ ನೀಡಲಾಗುತ್ತಿತ್ತು ಎಂಬ ಅಂಶ ಕಂಡು ಬರುತ್ತದೆ.

ಸುಂಕದ ಠಾಣೆಗಳು, ಸುಂಕದ ಮಾರ್ಗಗಳಲ್ಲಿ ವಿನಾಯಿತಿ ಪಡೆದ ಪದಾರ್ಥಗಳು ಮತ್ತು ಸುಂಕ ರಿಯಾಯಿತಿಯನ್ನು ಪಡೆದ ಅಂಶಗಳು ಕೆಳದಿ ಅರಸರ ಶಾಸನ ಸಂಪುಟದಲ್ಲಿ ಕಂಡು ಬರುವುದನ್ನು ಇಲ್ಲಿ ಸಂಗ್ರಹಿಸಲಾಗಿದೆ. ಕೌಲೇದುರ್ಗದ ಶಾಸನದಲ್ಲಿ "............ಎತ್ತು ೨೦ ಯಿಪ್ಪತ್ತು ಎತ್ತಿನಲು ಕಾಲಂಪತ್ತಿಲು ಸುಂಕವಿಲ್ಲದೆ ಭತ್ತ ರಾಗಿ ಹೇಜು ಕೊಂಡು ಬಹಿರಿಯೆಂದು.............."[೩೫೫] ಎತ್ತಿನಕಾಲಿಗೆ ಸುಂಕವನ್ನು ಮತ್ತು ಭತ್ತ, ರಾಗಿಯ ಹೇರುಗಳಿಗೆ ಸಾಗಾಣಿಕೆಯಲ್ಲಿ ಸುಂಕ ರಿಯಾಯಿತಿಯನ್ನು ನೀಡಿರುವುದು ಕಂಡು ಬರುತ್ತದೆ.

ಶೃಂಗೇರಿ ಶಾಸನದಲ್ಲಿ ಸುಂಕದ ಠಾಣೆಗಳ ಮಾಹಿತಿ ಕಂಡು ಬರುತ್ತದೆ. "............ಅಕ್ಕಿ ಭತ್ತ ಉಪ್ಪು ರಾಗಿ ವಿದಳ ಬೂಸ ಸಹಾಯಿಷ್ಟ ಜಿನಸನು ಘಟ್ಟದ ಮೇಲಣ ಸುಂಕ ಘಟ್ಟದತ್ತೆಳಗಣ ಸುಂಕದ ಠಾಣೆಗಳೆಲ್ಲ ಹೇರ್ರಿತ್ತಂದು ಅವಾವ ಪೇರುಗಳಲ್ಲು ಮಾಜುಕೊಂಡು ಸರ್ವ್ವ ಮಾಂನ್ಯವಾಗಿಯೀಸ್ವಾಸ್ತೆನು ಎತ್ತಿನ............"[೩೫೬] ಘಟ್ಟದ ಮೇಲೆ ಮತ್ತು ಕೆಳಗೆ ಸುಂಕದ ಠಾಣೆಗಳು ಇರುವುದು ಕಂಡು ಬರುತ್ತದೆ. ಇವೆರಡು ಠಾಣೆಗಳಲ್ಲು ಅಕ್ಕಿ, ಭತ್ತ, ಉಪ್ಪು, ರಾಗಿ, ದ್ವಿದಳದಾನ್ಯ, ಬೂಸ ದಿನಸುಗಳಿಗೆ ಸುಂಕವಿಲ್ಲದೇ ಪೇಟೆಯಲ್ಲಿ ಮಾರಿಕೊಂಡು ಹೋಗಲು ಎತ್ತಿನ ಹೇರಿಗೆ ಅನುಮತಿಯನ್ನು ನೀಡಿರುವ ಅಂಶ ಕಂಡುಬರುತ್ತದೆ. ಕೌಲೆ ದುರ್ಗದ ಇನ್ನೊಂದು ಶಾಸನದಲ್ಲಿ ಅರಮನೆಗೆ ಬರುವ ಸುಂಕವನ್ನು ಕುರಿತು ಹೇಳಲಾಗಿದೆ. "..............ಸಹಯೆಂಟು ಪೇರಗಳಲ್ಲಿ ಅರಮನೆ ಸುಂಕಕ್ಕೆ ನಡೆವಂತ ಉಭಯ ಮಾರ್ಗಕ್ಕೆ ಹೇರು ೧ ಕೆ ವಿಸದ ಲೆಕ ಅರಗದ ಠಾಣೆ ವಂದರ ಸ್ಥಳದ ಸುಂಕದಲ ಅಡಕೆ ಲಕ್ಷ ೧ ಕೆ ಸಲುವದು । ಹಾಗದಲೆ ಕ । ಕೆಳದಿ ಹೋಬಳಿಯ ಕಲುಸೆ ಮಾರ್ಗದ ಸುಂಕ । ಜಂಬುರು ಮಾರ್ಗ ಸುಂಕ ಸೊರಬ ಗುತ್ತಿ ಮಾರ್ಗದ ಸುಂಕ ಸಹಾ..........."[೩೫೭] ಅರಮನೆಗೆ ಉಭಯ ಮಾರ್ಗದಿಂದ ಸುಂಕ ಸಂಗ್ರಹವಾಗುತ್ತಿದ್ದು. ಅರಗದ ಠಾಣೆಯಲ್ಲಿ ಹೇರುವೊಂದಕ್ಕೆ ವೀಸದ ಲೆಕ್ಕದಲ್ಲಿ ಅಡಿಕೆಗೆ ಒಂದು ಲಕ್ಷದಲ್ಲಿ ಹಾಗದ ಲೆಕ್ಕ ಹದಿನಾರನೆ ಒಂದು ಭಾಗ. ಕೆಳದಿಯ ಹೊಬಳಿಯಲ್ಲಿ ಕಲುಶೆ, ಜಂಬುರು, ಸೊರಬ ಗುತ್ತಿಗೆಯ ಸುಂಕದ ಮಾರ್ಗಗಳು ಇವೆ ಎಂದು ಹೇಳಲಾಗಿದೆ. ರಾಜ್ಯದ ಪೇಟೆಗೆ ಹೇರಿಕೊಂಡು ಬರುವ ಹೇರುಗಳಿಗೆ ಒಂದೊಂದು ಕಡೆಯ ಮಾರ್ಗದಲ್ಲಿ ದಾರಿ ಸುಂಕ ತೆಗೆದುಕೊಳ್ಳುವ ಅಂಶ ತಿಳಿದು ಬರುತ್ತದೆ.

ಸರಕು, ಅಳತೆ ಮತ್ತು ತೂಕ ವಿಧಾನ : ಪ್ರಾಚೀನ ಕರ್ನಾಟಕದ ಸಂತೆ-ಪೇಟೆ, ಓಣಿ ತೆಱಗಳಲ್ಲಿ ಮಾರಾಟವಾಗುತ್ತಿದ್ದು ಸರಕುಗಳು ಅನೇಕ ಬಗೆಯವು ಎಂಬ ಅಂಶ ಶಾಸನಗಳಿಂದ ತಿಳಿದು ಬರುತ್ತದೆ. "ಸರಕು: ಪ್ರಾಚೀನ ಕರ್ನಾಟಕದ ಸಂತೆ-ಪೇಟೆ- ಪಟ್ಟಣಗಳಲ್ಲಿರುತ್ತಿದ್ದ ಸರಕುಗಳ ವಿವರವನ್ನು ಹೀಗೆ ಕೊಡಬಹುದು. ಭತ್ತ ಜೋಳ ಅಕ್ಕಿ ಎಳ್ಳು ಹಾಲುವಳ್ಳಿ ಅವರೆ ಕಡಲೆ ತೊಗರಿ ಗೋಧಿ ಉದ್ದು; ಜೀರಿಗೆ ಸಾಸಿವೆ ಮೆಣಸು ಅಲ್ಲ ಶುಂಠಿ ಅರಿಶಿಣ ಯಾಲಕ್ಕಿ ಮೆಂತೆ ಸಬ್ಬಸಗಿ ಕೋತಂಬರಿ ಬಳ್ಳೊಳ್ಳಿ ಈರುಳ್ಳಿ ಬಜಿ ಬದ್ರ ಮಸ್ತೆ ಇಂಗ ಹತ್ತಿ ಹಂಜಿ ನೂಲು ಸೀರೆಪಟ್ಟ ಪಳಿವಟ್ಟ ಪಟ್ಟಸೂತ್ರಬಟ್ಟೆ ಪಂಚವಣ್ಣಿಗೆ ಸಗಬು ಕಂಬಳಿ ಹುಲಿದೊಗಲ; ವೀಳ್ಯೆದೆಲೆ ಅಡಿಕೆ ಸುಣ್ಣ;ಭದ್ರ ಹಸ್ತಿ ಜಾತ್ಯಶ್ವ ಇಂದ್ರನೀಲ ಚಂದ್ರಕಾಂತ ಮುತ್ತು ಮಣಿಮಾಣಿಕ್ಯ ವಜ್ರ ವೈಡೂರ್ಯ ಗೋಮೇಧಿಕ ಪುಷ್ಯರಾಗ ಪದ್ಮರಾಗ ಪವಳ ಮರಕತ ಕರ್ಕೆತನಪಟ್ಟೆ ಚಿನ್ನ ತವರು; ಬೆಲ್ಲಸಕ್ಕರೆ ಉಪ್ಪು ಎಣ್ಣೆ ತುಪ್ಪ ;ಲವಂಗ ಅಗರು ಚಂದನ ಕುಂಕುಮ ಮಲೆಗಜ ಕರ್ಪೂರ ಕಸ್ತೂರಿ; ದವಣ ಬಳೆ ಕಾಡಿಗೆ (ತಾಳೆ) ಓಲೆ ಕಾಯಿಪಲ್ಯೆ; ಬಾಳೆಯ ಹಣ್ಣು ತೆಂಗಿನ ಕಾಯಿ ಎಲಿವಾದ್ರಕಾಯಿ ನೆಲ್ಲಿ ಕಾಯಿ ಹೂವು ಹೂಮಾಲೆ ಕಬ್ಬು ಹಿಪ್ಪಲಿ ಶಂಕ ಕಾಷ್ಠ ಕುದುರೆ ಎತ್ತು ಆನೆ ಅರಗು ನಾರು ಬೇರು ಸದಹುಗೆ (?)ಚಮರಿ ಸೆಳಂಬಿ (?) ಸೈಂಧವ (?) ಕಾರಬೀಜ ಉಂಬಳ (?) ಸೀಲಿಯ ಗುಳಿ(?) ಮೊರ ಪಾದರಕ್ಷೆ ಮಿಣಿ ಗಡಿಗೆ ಹುಲ್ಲು ಇತ್ಯಾದಿ. ಇವು ಪ್ರಾಚೀನ ಮತ್ತು ಮಧ್ಯಕಾಲಿನ ಕರ್ನಾಟಕದ ಶಾಸನಗಳಲ್ಲಿ ಉಲ್ಲೇಖಿತವಾದ ಸರಕುಗಳಾಗಿರುತ್ತವೆ.

ಇವುಗಳಲ್ಲಿ ಸಂಬಾರ ವಸ್ತು, ದವಸ-ಧಾನ್ಯ, ಹತ್ತಿ, ಸೀರೆ, ವೀಳ್ಯೆದೆಲೆ ಅಡಿಕೆ, ಎಣ್ಣೆ, ಬೆಲ್ಲ, ಉಪ್ಪು, ಸಕ್ಕರೆ, ಕಾಯಿಪಲ್ಯಾಗಳ ಬಳಕೆ ಅಧಿಕ. ಈ ವಸ್ತುಗಳಲ್ಲಿ ಹೆಚ್ಚಿನವು ಕರ್ನಾಟಕದಲ್ಲೇ ಬೆಳೆಯುತ್ತಿದ್ದವು. ಆದರೆ ಕೆಲವು ಮಾತ್ರ ನೆರೆನಾಡಿನಿಂದ ಕರ್ನಾಟಕದ ವಿವಿಧ ಪೇಟೆ-ಪಟ್ಟಣ್ಣ-ಸಂತೆಗಳಿಗೆ ಬರುತ್ತಿದ್ದವು. ಅಳತೆ; ಜೀರಿಗೆ ಸಾಸವಿ ಮೆಣಸು ಶುಂಠಿ ಅರಿಶಿಣ ಮೊದಲಾದ ಸಂಬಾರ ವಸ್ತು ಭತ್ತ ಅಕ್ಕಿ ಕಡಲೆ ಗೋಧಿ ಉದ್ದು ತೊಗರಿ ಎಳ್ಳು ಹಾಲುವಳ್ಳಿ ಇತ್ಯಾದಿ ದವಸ ಧಾನ್ಯ, ನೆಲ್ಲಿಕಾಯಿ ಮುಂತಾದವುಗಳನ್ನು ಅಳೆಯಲು ಕೊಳಗ ಬಳ್ಳ ಮಾನ ಸೊಲ್ಲಗೆ ಸಟ್ಟುಗ ಸೊಂಟಿಗೆ ಸೊಳಸ ಪಡಿ ಅದ್ದಿನ ಗಿದ್ದನ ಪಳಿಗೆ ದಳ ಹಾನೆ ಸೆಡೆ ಉಪಯೋಗಿಸುತ್ತಿದ್ದರು. ದ್ರವರೂಪದ ಪದಾರ್ಥಗಳನ್ನು ಈ ಮೇಲಿನ ಅಳತೆಯ ಮಾಪುಗಳಿಂದಲೇ ಅಳೆಯುತ್ತಿದ್ದರು. ಮಾನದಲ್ಲಿ ದೇವಮಾನ ಅರವಾನ ಸೊಲ್ಲಗೆಯಲ್ಲಿ ಅರಸೊಲ್ಲಗೆ ಸೊಳಸದಲ್ಲಿ ಹಿರಿಯ ಸೊಳಸ ಕೊಳಗದಲ್ಲಿ ದೇವಕೊಳಗ, ದಮ್ಮಗೊಳಗ, ಜಕ್ಕಿಗೊಳಗಗಳಿದ್ದವು. ಇವುಗಳಲ್ಲಿ ಅತ್ಯಂತ ದೊಡ್ಡಮಾಪು ಕೊಳಗ; ಅತಿ ಸಣ್ಣದು ಹಾನೆ ಅಥವಾ ದಳ ಆಗಿರುತ್ತದೆ.

ಇವು ಶಾಸನಗಳಲ್ಲಿ ಉಕ್ತವಾದ ಪ್ರಾಚೀನ ಕರ್ನಾಟಕದ ಅಳತೆಗಳು ರಾಜಾದಿತ್ಯನು ವ್ಯವಹಾರ ಗಣಿತದಲ್ಲಿ ಕರ್ನಾಟಕದ ಅಳತೆಗಳನ್ನು ಹೀಗೆ ವಿವರಿಸಿದ್ದಾನೆ.

೪ ಗಿದ್ದ = ೧ ಸೊಲ್ಲಗೆ

೪ ಸೊಲ್ಲಗೆ = ೧ ಮಾನ

೪ ಮಾನ = ೧ ಬಳ್ಳ

೪ ಬಳ್ಳ = ೧ ಕೊಳಗ

೨೦ ಕೊಳಗ = ೧ ಖಂಡುಗ

ಎಣಿಕೆ ಹಣ್ಣು-ಹಂಪಲು, ತೆಂಗಿನ ಕಾಯಿ, ಕಬ್ಬು, ಅಡಿಕೆ, ಬೆಲ್ಲದ ಅಚ್ಚು ಎಣಿಸಿ ಕೊಡುವ ವಸ್ತುಗಳು ವೀಳ್ಯದೆಲೆ ಕಾಯಿಪಲ್ಯೆ, ಈರುಳ್ಳಿ ಹುಲ್ಲುಗಳನ್ನು ಹಿಡಿ ಇಲ್ಲವೇ ಸೂಡುಗಳಾಗಿ ಮಾರುತ್ತಿದ್ದರು.

ತೂಕ ಇಂಗು ಹಾಗೂ ಹತ್ತಿಗಳನ್ನು ತೂಗಿ ಮಾರುತ್ತಿದ್ದರು. ಭಾರ ಮಳವೆ ಪಲ ಬೆಸಿಗೆ ಕೊಡುಗೆ ಬೆಲ್ಲಳಿಗೆ ತೂಕ ವಿಶೇಷಗಳು ವ್ಯಾಪಾರ ಸಮಯದಲ್ಲಿ ವಸ್ತುಗಳನ್ನು ತೂಗಲು ಬಳಸುತ್ತಿದ್ದ 'ಬೆನಕ' (ತೂಕದ ಕಲ್ಲು) ವನ್ನು ಬಣಜಿಗರು ಪೂಜಿಸುತ್ತಿದ್ದುದರ ಉಲ್ಲೇಖ ಬಸವಣ್ಣನವರ ವಚನವೊಂದರಲ್ಲಿದೆ. ವ್ಯವಹಾರ ಗಣಿತದಲ್ಲಿ ತೂಕಗಳನ್ನು ಹೀಗೆ ವಿವರಿಸಲಾಗಿದೆ.

೪ ಸುವರ್ಣ = ೧ ಕರ್ಷ
೪ ಕರ್ಷ = ೧ ಪಲ
೨೦ ಪಲ = ೧ ಬಿಸಿಗೆ
೫ ಬಿಸಿಗೆ = ೧ ತೊಲಿ
೨೦ ತೊಲಿ = ೧ ಭಾರ

ನಾಣ್ಯ ವ್ಯಾಪರದಲ್ಲಿ ಚಲಾವಣೆಯಾಗುತ್ತಿದ್ದು; ನಾಣ್ಯಗಳಲ್ಲಿ ಹೊನ್ನ (ಗದಾಣ್ಯ) ಹಾಗ ಪಣ ವೀಸ ಬೇಳೆ, ಅಡ್ಡ, ಕಾಣಿ, ಕಾಗಿಣಿ, ತಾರ ದ್ರಮ್ಮ ಪ್ರಮುಖವಾದವು. ಹಾಗದಲ್ಲೇ ಬೆಳ್ಳಿಯ ಹಾಗ ಹೊನ್ನಹಾಗ ಹಿರಿಯ ಹಾಗಗಳಿದ್ದವು. ಹೊನ್ನ, ಹಾಗ, ಪಣ ಹೆಚ್ಚಿನ ಬೆಲೆಯ; ಮಿಕ್ಕವು (ದ್ರಮ್ಮಬಿಟ್ಟು) ಕಡಿಮೆ ಬೆಲೆಯ ನಾಣ್ಯಗಳು. ವ್ಯವಹಾರ ಗಣಿತದಲ್ಲಿ ಬರುವ ನಾಣ್ಯದ ಕೋಷ್ಟಕ ಇಂತಿದೆ.

೪ ಕಾಣಿ = ೧ ವೀಸ
೫ ವೀಸ = ೧ ಹಾಗ
೪ ಹಾಗ = ೧ ಪಣ
೧೦ ಪಣ = ೧ ಗದ್ಯಾಣ

ಈ ನಾಣ್ಯಗಳ ಪರಸ್ಪರ ಸಂಬಂಧವನ್ನು ವಿವರಿಸುವ ಇನ್ನೊಂದು ಕೋಷ್ಟಕ ಹೀಗೆ ಇರುತ್ತದೆ.

೧ ಗದ್ಯಾಣ = ೧೦ ಪಣ
೧ ಪಣ = ೨೦ ವೀಸ
೧ ಪಣ = ೪ ಹಾಗ
೧ ಹಾಗ = ೨ ಬೇಳೆ
೧ ಪಣ = ೬೪ ಕಾಣಿ
೧-೧/೨ ತಾರ = ೧ ಕಾಣಿ

ಬಂಗಾರ, ಬೆಳ್ಳಿ ಹಾಗೂ ಇತರ ಲೋಹಗಳಿಂದ ಇವುಗಳನ್ನು 'ಕಮ್ಮಟ'ಗಳಲ್ಲಿ ಟಂಕಿಸುತ್ತಿದ್ದರು. ಈ ನಾಣ್ಯಗಳ ತೂಕವು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗಿದ್ದಿತು."[೩೫೮]

ಮಾರುಕಟ್ಟೆಯ ಸರಕು, ಅಳತೆ, ಎಣಿಕೆ, ತೂಕ ಮತ್ತು ನಾಣ್ಯಗಳ ಕುರಿತಾದ ವಿಸ್ತಾರವಾದ ಮಾಹಿತಿಯನ್ನು ಶಾಸನದಲ್ಲಿ ಕರ್ನಾಟಕದ ವರ್ತಕರು ಎಂಬ ಗ್ರಂಥದಿಂದ ಉಲ್ಲೇಖಿಸಿದ ನಂತರ ಕೆಲವು ಶಾಸನದಲ್ಲಿ ಕಂಡು ಬರುವ ಸರಕು, ತೂಕ, ಅಳತೆ ಮತ್ತು ನಾಣ್ಯಗಳ ಅಂಶಗಳನ್ನು ಕ್ರೋಢೀಕರಿಸಿ ಸಂಗ್ರಹಿಸಿ ಚರ್ಚಿಸಲಾಗಿದೆ.

ಮಾಪನ, ಎಣಿಕೆ, ಭಾರಗಳ ಅಳತೆ : ದವಸ-ಧಾನ್ಯಗಳನ್ನು ಅಳತೆ ಮಾಡಲು ಅನೇಕ ಮಾನದಂಡಗಳನ್ನು ಉಪಯೊಗಿಸಲಾಗುತ್ತದೆ. ಅಂತವುಗಳಲ್ಲಿ ಕೊಳಗ ಒಂದು ಪ್ರಮುಖವಾದ ಅಳತೆಯ ಮಾಪನವಾಗಿದೆ. ಇವುಗಳಲ್ಲಿ ಅನೇಕ ಪ್ರಭೇದಗಳು ಇವೆ. 'ಹೈದರಾಬಾದ ಕರ್ನಾಟಕದ ಕನ್ನಡ

ಶಾಸನಗಳು' ಕೃತಿಯಲ್ಲಿ ವಿ ಶಿವಾನಂದ ಹೀಗೆ ಹೇಳುತ್ತಾರೆ. "ಧಾನ್ಯಗಳ ಅಳತೆಯ ಪ್ರಮಾಣ ಕೊಳಗದಿಂದ ಆರಂಭಿಸಿ ಮಾನ, ವಮ್ಮಾನ, ಇಮ್ಮನ, ಒಕ್ಕುಳು, ಖಂಡುಗ ಮುಂತಾಗಿ ಹೆಚ್ಚುವರೆಯತ್ತಿತ್ತು. ಕೊಳಗಗಳಲ್ಲಿ ದೇವರ ಕೊಳಗ ಅಕ್ಕಸಾಲೆಯಗೊಳಗ ಮುಂತಾದ ಪ್ರಭೇದಗಳಿದವು"[೩೫೯] ಇದೇ ಕೃತಿಯ ದಿಗ್ಗಾವಿ ಶಾಸನದಲ್ಲಿ ದವಸ ಧಾನ್ಯಗಳನ್ನು ಕೊಳಗ, ಮಾನ, ವಮ್ಮಾನ, ಇಮ್ಮನ, ಒಕ್ಕುಳು, ಖಂಡುಗ ಇನ್ನು ಮುಂತಾದ ಮಾಪನಗಳಿಂದ ಅಳೆಯುವ ಅಂಶ ತಿಳಿದು ಬರುತ್ತದೆ. ಅಲ್ಲದೆ ಅಕ್ಕಸಾಲೆಗೊಳಗ ಮತ್ತು ದೇವಮಾನದ ಮಾಹಿತಿ ದೊರೆಯುತ್ತದೆ. (ಪು-೯೨) ಸರಡಗಿ ಶಾಸನದಲ್ಲಿ ದೇವರ ಆರಾಧನೆಗಾಗಿ ಬಿಟ್ಟ ವಿವಿಧ ವಸ್ತುಗಳನ್ನು ಅಳತೆ ಮಾಡಿಕೊಡುವ ಅಂಶ ಕಂಡು ಬರುತ್ತದೆ. "............ಹೇಜಿಂಗೆ ಮಾನಭತ್ತ ಅಂಗಡಿಯಲು ನಖರ...........ಗದಿಂ ಹೇಡಿಗೆಯಲು ಉಪ್ಪು ಸೊಲ್ಲಗೆ ಎರಡು ಪೊಂಗೆ ಅಡಕೆ ಹಂನ್ನೆರಡು ॥ ಹೇಜಿಂಗೆ ಎಲೆ ಅಯಿವತ್ತು ಅಂಗಡಿಯಲು ಭತ್ತ ಧಾರೆಯೆಣ್ಣೆ ಅರ್ದ್ದಸೊಲ್ಲಗೆ ॥ ಮೆಳಸು ಜೀರಿಗೆಯ ಹೇಜಿಂಗೆ ಮಾನವೊಂದು ಹೂಮಾಜಿದೊಡೆ ಹಡಗಲಿಗೆರಡು ನಾರಂ ಕುಡುವರು ...."[೩೬೦] ಒಂದು ಹೇಡಗಿಯ ಉಪ್ಪಿಗೆ ಎರಡು ಸೊಲ್ಲಗೆ, ಅಡಕೆಗೆ ಹನ್ನೆರಡು, ಹೇರಿಂಗೆ ಐವತ್ತುಎಲೆ, ಭತ್ತ, ಎಣ್ಣೆ ಅರ್ದಸೊಲ್ಲಗೆ ಹಾಗೂ ಮೆಣಸು, ಜಿರಿಗೆ ಹೇರಿಂಗೆ ಒಂದು ಮಾನ, ಹೂವು ಮಾರಿದರೆ ಹಡಲಿಗೆ (ಬುಟ್ಟಿ) ಎರಡು ನಾರಂ ಕೊಡುವುದ್ದೆಂದು ಹೇಳಲಾಗಿದೆ. ಇಲ್ಲಿ ಸೊಲ್ಲಗೆ, ಮಾನ, ನಾರ ಅಳತೆಯ ಮಾಪನಗಳಾಗಿವೆ.

ಅಂಕಲಗಿ ಶಾಸನದಲ್ಲಿ ದೇವರ ಆರಾಧನೆಗೆ ಮತ್ತು ಪೂಜಾರಿಗಳಿಗೆ ನೀಡಿದ ವಿವಿಧ ವಸ್ತುಗಳ ಮಾಪನ ಈ ರೀತಿ ಕಂಡು ಬರುತ್ತದೆ. "..............ರೆರಡು ಗಾಣನಾಲ್ಕು ಊರೊಳಗೆ ಮಾಜಿದ ಭತ್ತಕಂ ಕೊಳಗದಾಯಂ ಪೊಂಗೆ ವೀಸದ ಎರಡುವರೆ ಲೆಕ್ಕದಿಂ ತಿಱುವರು ವೊರಗಣ ಭತ್ತ ಮಾಜಿದೆಡೆದ್ದುಧಾನದಿಂ ಪೊಂಗೆ ವೀಸವ ಒಂದು ಕೋಗಿಣಿ ಒಂದಱ ಲೆಕ್ಕದಿಂ ತಿಱುವರು ॥ ಮೂಲೆವತ್ತ ಕಱ್ತ್ರೆಯ ಹೇಜಿಂಗೆ ಬ ೧ ಎತ್ತಿನ ಹೇಜಿಂಗೆ ಬ ೨ ಕೋಣನ ಹೇಜಿಂಗೆ ಬ ೨ ಮಾನ ೨ ಲೆಕ್ಕದಿಂ ತಿಱುವರು ಅರಿಶಿಣ ಇಂಗು ಮೆಳಸು ಜೀರಿಗೆ ಶರ್ಕರ ಬೆಲ್ಲ ಮಾಜಿದಡೆ ಪೊಂಗೆ ವೀಸವ ಎರಡು ಕಾಗಿಣಿ ಎರಡಱ ಲೆಕ್ಕದಿಂ ತಿಱುವರು.............."[೩೬೧] ಊರೂಳಗೆ ಭತ್ತ ಮಾರಿದರೆ ಕೊಳಗದಾಯ ಎರಡುವರೆ ಲೆಕ್ಕ, ಊರಿನಹೊರಗೆ ಭತ್ತ ಮಾರಿದರೆ ಒಂದು ವೀಸ ಒಂದು ಕೊಗಿಣಿ ಹಣದ ಲೆಕ್ಕದಲ್ಲಿ, ಕತ್ತೆಯ ಹೇರಿಗೆ ಬ ೧, ಎತ್ತಿನ ಹೇರಿಗೆ ಬ೨, ಕೋಣನ ಹೇರಿಗೆ ಬ ೨ಕ್ಕೆ ಎರಡು ಮಾನ ಲೆಕ್ಕ ಅಳತೆಯಲ್ಲಿ ಮತ್ತು ಅರಿಶಿಣ, ಇಂಗು, ಮೆಣಸು, ಜೀರಿಗೆ, ಸಕ್ಕರೆ, ಬೆಲ್ಲ ಮಾರಿದರೆ ಒಂದು ವೀಸ ಎರಡು ಕಾಗಿಣಿ ಹಣವ ಲೆಕ್ಕದಿಂದ ಕೊಡಬೇಕು ಎಂಬ ವಿವರ ದೊರೆಯುತ್ತದೆ.

ಅಡಕಿ ಶಾಸನದಲ್ಲಿ ಭತ್ತ, ಅಡಿಕೆ, ಬೆಳ್ಳಿಯ ಹಾಗ, ಮೆಣಸಿಗೆ ಮತ್ತು ಕದಭಂಡಕ್ಕೆ ಬೆಳ್ಳಿಯ ಹಾಗ ಕೊಡುತ್ತಿದ್ದ ಅಂಶ ತಿಳಿದು ಬರುತ್ತದೆ. (ಪು-೪೭೪) ಶೇಡಂ ಶಾಸನದಲ್ಲಿ ಹಾಗ, ಸೊಳಸ ಹಸಬೆ ಮುಂತಾದ ಮಾಹಿತಿಗಳು ಹೀಗೆ ದೊರೆಯುತ್ತವೆ. "...............ಸೀರೆಯ ಹಸಬೆಗೆ ಬೆಳ್ಳಿಯ ಹಾಗ । ಅಲ್ಲವರಿಶಿಣ ಹೇಜಿಂಗೆ ಬೆಳ್ಳಿಯ ಹಾಗ । ಭತ್ತದ ಹೇಜಿಂಗೆ ಸೊಳಸ ೨ (೧) ಎತ್ತು, ಕತ್ತೆ, ಕೋಣನ ಹೇಜಿಂಗೆ ಮೆಣಸು ಸೋ- ಅಡಿಕೆ ೧೦ ಎಲೆಯ ಹೇಜಿಂಗೆ ಎಲೆ ೨೫ (।) ಅಂಗಡಿಯ..........."[೩೬೨] ಸೀರೆಯ ಹಸಬೇಗೆ ಬೆಳ್ಳಿಯ ಹಾಗ, ಅಲ್ಲ, ಅರಿಶಿಣದ ಹೇರಿಗೆ ಬೆಳ್ಳಿಯ ಹಾಗ, ಭತ್ತದ ಹೇರಿಗೆ ಸೊಳಸ, ಎತ್ತು, ಕತ್ತೆ ಕೋಣ ಹೇರಿಗೆ ಮೆಣಸು ಅಡಕೆ ಹತ್ತು ಎಲೆಯ ಹೇರಿಗೆ ೨೫ ಇನ್ನೂ ಮುಂತಾದ ಮಾಹಿತಿಗಳು ದೊರೆಯುತ್ತವೆ. ಇನ್ನೊಂದು ಶಾಸನದಲ್ಲಿ ಹೀಗೆ ಹೇಳಲಾಗಿದೆ

"..............ಸೊಲಗೆಯೆಣ್ಣೆ ಹೊರಿಗೆ ಮಾಜಿದಡಕೆಯಲ್ಲಿಯಯ್ದಡಕೆ ಹೇಜಿಂಗಿಪ್ಪತ್ತಯೆಲೆ ಭತ್ತದಲಿ ಕೊಟ್ಟವರಲೊಮ್ಮಾನಂ ಕೊಣ್ಡವರಲೊಮ್ಮಾನಂ ಮೆಣಸು ಜೀರಿಗೆಗೆ ಹೊಂಗೆ ಬೆಳ್ಳಿಯ ಹಾಗ ...."[೩೬೩] ಸೊಲಗೆ ಎಣ್ಣೆ, ಅಡಕೆ ಮಾರಿದರೆ ಐದು ಅಡಕೆ, ಒಂದು ಹೇರಿಗೆ ೨೦ ಎಲೆ, ಭತ್ತ ಕೊಟ್ಟವರು ಒಮ್ಮನ, ಕೊಂಡವರು ಒಮ್ಮನ, ಜೀರಿಗೆಗೆ ಬೆಳ್ಳಿನಾಣ್ಯ ಕೊಡುವರೆಂದು ಹೇಳಲಾಗಿದೆ. ಅಲ್ಲದೇ ಕೊಡುವವರು ಮತ್ತು ಕೊಳ್ಳುವವರು ಕೊಡ ಹಣನೀಡುವ ಅಂಶ ತಿಳಿದುಬರುತ್ತದೆ.

ಗೊಬ್ಬೂರು ಶಾಸನವೊಂದರಲ್ಲಿ ಆರುವತ್ತು ಒಕ್ಕಲಿನಂತೆ ಬೆಲ್ಲ ತಯಾರಿಸುವ 'ಬೆಲ್ಲ ಮೂನೂರ್ವರ ಸಂಘ' ಇರುವುದು ಗಮನಾರ್ಹವಾದ ಅಂಶವಾಗಿದೆ. "................ಪಂಚಮಿ ಶುಕ್ರವಾರದಂದು ಅಲ್ಲಿಯ ಮಾಲೆಗಾರ ಅರುತ್ತೊಕ್ಕಲು ಬ(ಬೆ)ಲ್ಲ ಮುಂನ್ನೂರ್ವ್ವರು ಬಾಡು ಕಾಯಿ ಮಾರಿದರೆ ಹ್ಯಡಿಗೆಯಲು ಅರವಸ ಭತ್ತ। ಹೊರಗಣಿಂ ಬಂದು ಮಾರುವ ಬೆಲ್ಲಕ್ಕಂ ಅಯ್ದು ಹ್ಯಡಿಗೆಗಂವುಪ್ಪಿನ ಹ್ಯಡಿಗೆಯರವನ ಭತ್ತ ಯಿಂತೀ ವೃತ್ತಿಯ ಪ್ರತಿಪಾಲಿಸುವರು.............."[೩೬೪] ಗೊಬ್ಬೂರಿನಲ್ಲಿ ಅರವತ್ತು ಒಕ್ಕಲು, ಬೆಲ್ಲಮೂನೂರ್ವರು ಹಾಗೂ ಮಾಲೆಗಾರರ ಸಂಘಗಳು ಇರುವುದು ಕಂಡು ಬರುತ್ತದೆ. ಭತ್ತ,ಬೆಲ್ಲ, ಕಾಯಿ ಪಲ್ಲೆ ಮಾರಿದರೆ ಧಾನ್ಯ ರೂಪದಲ್ಲಿ ಹೆಡಿಗೆಯಲ್ಲಿ ಅಳತೆ ಮಾಡಿ ಕೊಡಲಾಗುತ್ತಿತ್ತು. ದೇವದುರ್ಗದ ಶಾಸನಗಳಲ್ಲಿ ಹೆಡಿಗೆ, ಮಾನ, ಎಣಿಕೆ ಮುಂತಾದ ಮಾಪನಗಳಲ್ಲಿ ಧಾನ್ಯವನ್ನು ಅಳೆಲಾಗುತ್ತಿರುವ ಅಂಶ ಕಂಡು ಬರುತ್ತದೆ.

ಚಾಮರಾಜ ನಗರ ಶಾಸನವೊಂದರಲ್ಲಿ ಉಪ್ಪು ಹೇರಿನ ವರ್ತಕರು, ಹೊಗೆ ಸೊಪ್ಪಿನ ವರ್ತಕರು, ಬಾಣೆ, ನೂಲು, ಹತ್ತಿ, ಹೇರಿನ ವರ್ತಕರು, ಭತ್ತ ರಾಗಿ., ದ್ವಿದಳ ಧಾನ್ಯದ ಹೇರಿನ ವರ್ತಕರು ಶ್ರೀನಿವಾಸ ದೇವರಿಗೆ ವಾರ್ಗಸುಂಕವನ್ನು ನೀಡಿರುವ ಅಂಶಗಳು ತಿಳಿದು ಬರುತ್ತದೆ. ".............ಶ್ರೀನಿವಾಸಪುರದ ಮಾರ್ಗ್ಗದಲ್ಲಿ ಬರುವಂಥಾ ಹೇರುಗಳಿಗೆ ಕೊಟ್ಟ ಬರುವ ಮೊಗಮೆ। ಹೊಗೆ ಸೊಪ್ಪು ಹೇರು ೧ ಕ್ಕೆ ತಾರ ೧ ತುಪ್ಪದ ಹೇರು ೧ ಕ್ಕೆ ತಾರ ೧ ಯಂಣೆ ಹೇರು ೧ಕ್ಕೆ ತಾರ ೧ಜವಳಿ ಹೇರು ೧ ಕ್ಕೆ ತಾರ ೧ ಹಸುಬೆಯ ಹೇರು ೧ಕ್ಕೆ ತಾರ ೧ ಗೋಣಿ ಹೇರು ೧ಕ್ಕೆ ತಾರ ೧ ನೂಲು ಹೇರು ೧ಕ್ಕೆ ತಾರ ೧ ಅಕ್ಕಿ ಭತ್ತ ಮುಂತಾದ ವಿದಳದ ಹೇರುಗಳಿಗೆಲ್ಲ ಹೇರು ೧ ಕ್ಕೆ ತಾರ............"[೩೬೫] ಈ ರೀತಿ ವಿವರವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಸುಂಕ ನೀಡುವಾಗ ಮಾಪನ, ಅಳತೆ, ಎಣಿಕೆಯಲ್ಲಿ ನೀಡಿರುವುದು ಕಂಡು ಬರುತ್ತದೆ. ಇನ್ನೊಂದು ಶಾಸನದಲ್ಲಿ ನೂರು ಮೂಟೆ ಭತ್ತವಂದಕ್ಕೆ ೧ ಅವಸರ ಬೆಲೆಯನ್ನು ನೀಗದಿಕರಣದ ಅಂಶ ಕಂಡು ಬರುತ್ತದೆ. "...............ಭತ್ತದ ಮೂಡ ಮೂರು ಅಕ್ಷರದಲೂ ನೂಱು ಮೂಡೆ ಭತ್ತವನೂ ವೊಂದವಸರಕ್ಕೆ ಮಾಡಿದ ಧಮಯಿ.........."[೩೬೬] ಧಾನ್ಯಗಳಿಗೆ ಬೆಂಬಲ ಬೆಲೆ ನೀಡುವ ಅಂಶವನ್ನು ನೆನಪಿಸುತ್ತದೆ. ಬೇಲೂರು ಶಾಸನದಲ್ಲಿ ದೇವರಿಗೆ ಆಯಾ ಬಿಟ್ಟ ವಿಷಯ ಪ್ರಸ್ತಾಪಿಸಲಾಗಿದೆ. ".................ಪ ೮ ಮೆಣಸಿಂಗೆ ವರುಷಕ್ಕೆ ಪ ೬ ಏಲಕ್ಕಿಗೆ ೧ ಪ ೨ ಅಡಕೆ ನಿತ್ಯ ೧೦ ಲೆಕ್ಕ................."[೩೬೭] ಪಣ ಎಂದರೆ ನಾಣ್ಯವಾಗಿದೆ. ೧೦ ಪಣಕ್ಕೆ ಒಂದು ಗದ್ಯಾಣ ಸಮ. ಮೆಣಸಿಗೆ ೧ ವರ್ಷಕ್ಕೆ ಆರು ಪಣ, ಏಲಕ್ಕಿಗೆ ೧ ಪಣ, ಎರಡು ಅಡಕೆ ದಿನನಿತ್ಯದ ಲೆಕ್ಕದಲ್ಲಿ ನೀಡಿರು ಅಂಶ ತಿಳಿದು ಬರುತ್ತದೆ.

ಒಟ್ಟಾರೆಯಾಗಿ ಮಾಪನ, ಎಣಿಕೆ, ಬಾರ, ಅಳತೆಗಳನ್ನು ಬಳಸಿ ಮಾಪನಮಾಡುತ್ತಿದ್ದ ಅಂಶಗಳು ಅನೇಕ ಶಾಸನಗಳಲ್ಲಿ ವಿವರವಾಗಿ, ಪ್ರಾದೇಶಿಕವಾದ ಭಿನ್ನತೆಯಿಂದ ಕೂಡಿಯೂ ಬಳಕೆಯಾಗಿರುವುದು ಕಂಡು ಬರುತ್ತದೆ.

ಸುಂಕ ವಿಧಾನ : ಕೃಷಿಕರು ಬೆಳೆದ ವಸ್ತುಗಳನ್ನು ಮಾರಲು ತನಗೆ ಬೇಕಾದ ವಸ್ತುಕೊಳ್ಳಲು ಸಂತೆ, ಪೇಟೆ, ಪಟ್ಟಣ, ಬೀದಿಗಳಲ್ಲಿ ಮಾರುತ್ತಿದ್ದರು. ವಸ್ತುಗಳನ್ನು ಮಾರುವಾಗ, ಕೊಳ್ಳುವಾಗ, ಅನೇಕ ಬಗೆಯ ಸುಂಕ, ತೆರಿಗೆ, ಆಯಾ ಕೊಡಬೇಕಾಗಿತ್ತು. ಸುಂಕದ ಕಟ್ಟೆ, ಠಾಣೆ, ಸುಂಕದ ಅಧಿಕಾರಿಗಳ ನೇಮಿಸಿ ತೆರಿಗೆಯನ್ನು ವಸೂಲಿ ಮಾಡುವ ಪದ್ಧತಿ ಪ್ರಾಚೀನ ಮತ್ತು ಮಧ್ಯಕಾಲಿನ ಕರ್ನಾಟಕದಲ್ಲಿ ಕಂಡು ಬರುತ್ತದೆ. ಶಾಸನಗಳಲ್ಲಿ ಇಂತಹ ಅನೇಕ ಮಾಹಿತಿಗಳು ದೊರೆಯುತ್ತವೆ. ವ್ಯಾಪಾರಿಗಳು ಅಧಿಕೃತ ಚೀಟಿ ಪಡೆದು ಮಾರ್ಗದಲ್ಲಿ ಸಂಚರಿಸಬೇಕಾಗಿತ್ತು. ದಾರಿಯ ಮಧ್ಯೆ ಸುಂಕದ ಅಧಿಕಾರಿಗಳು ಪರೀಕ್ಷಿಸಿದರೆ ಅದನ್ನು ತೋರಿಸಬೇಕಾಗಿತ್ತು. ಕೆಲವು ವರ್ತಕರು ಸುಂಕದ ಕಟ್ಟೆಗೆ ಹೋಗದೆ ಸುಂಕ ಕೊಡದೆ ಕಳ್ಳಸರಕನ್ನು ಕಳ್ಳಹಾದಿಯ ಮೂಲಕ ಸಾಗಿಸುತ್ತಿದ್ದರು. ಸಂತೆ, ಪೇಟೆ, ಪಟ್ಟಣ ಪ್ರವೇಶಿಸುವ ವಸ್ತುಗಳಿಗೆ 'ಪ್ರವೇಶ ತೆರಿಗೆ' ವಿಧಿಸುತ್ತಿದ್ದರು. ಸ್ವಂತ ಸ್ಥಳ ಇಲ್ಲವೇ ಬೇರೆ ಸ್ಥಳದ ವರ್ತಕರು ಸಂತೆಯಲ್ಲಿ ಬಯಲು ಅಂಗಡಿ ನಿರ್ಮಾಣ ಮಾಡಿಕೊಂಡು; ದವಸ–ಧಾನ್ಯಗಳನ್ನು ರಾಶಿ ಹಾಕಿಕೊಂಡು ವಸ್ತುಗಳನ್ನು ತೂಗಿ, ಎಣಿಸಿ, ಅಳೆದು ಮಾರುತ್ತಿದ್ದರು. ತೊಗಲು ತಕ್ಕಡಿ, ಅಳತೆ ಕಲ್ಲುಗಳಿದ್ದವು. ಕೆಲವು ವಸ್ತುಗಳನ್ನು ಮಾನ, ಬಳ್ಳ, ಸೊಳಸ, ಸೊಲ್ಲಗೆ, ಅದ್ದಾನ, ಗಿದ್ದನ, ಕೊಳಗ, ಪ್ರಮಾಣಗಳಿಂದ ಅಳೆಯುತ್ತಿದ್ದರು.

"ಸಂತೆಗೆ ಬರುವ ಪ್ರತಿಯೊಂದು ವಸ್ತುವಿನ ಮೇಲೆ ಸುಂಕ ಆಕರಿಸುತ್ತಿದ್ದರು; ಇದಕ್ಕೆ ಸಂತೆಯ ಆಯ, ಸಂತೆಯ ಸುಂಕ, ಸಂತೆಯ ಆದಾಯವೆಂದು ಹೆಸರು. ಇದನ್ನೇ ಸ್ಥಳಸುಂಕ, ಸ್ಥಳ ಬಂಧ, ಸ್ಥಳ ಬಂಧಿ, ಒಳವಾರು, ಒಳಸುಂಕವೆಂದು ಕರೆದಿರಬಹುದು. ಪ್ರಾಚೀನ ಮತ್ತು ಮಧ್ಯಕಾಲಿನ ಕರ್ನಾಟಕದ ಬೇರೆ ಬೇರೆ ಪ್ರದೇಶ, ಕಾಲಗಳಲ್ಲಿ ವಸ್ತುಗಳಿಗೆ ಸಂತೆಯ ಸುಂಕ(ಆಯ)ವನ್ನು ಹಣ ಮತ್ತು ವಸ್ತುಗಳ ರೂಪದಲ್ಲಿ ಆಕರಿಸುತ್ತಿದ್ದು, ಸರಕು ತುಂಬಿದ ವಸ್ತುವಿಗನುಗುಣವಾಗಿ ಇದು ಹೆಚ್ಚು–ಕಡಿಮೆಯಾಗಿದ್ದು. ಒಂದೇ ಶತಮಾನದಲ್ಲಿ (ಸಂತೆಯ ಸುಂಕದಲ್ಲಿ) ಕೆಲವು ಕಡೆ ಏಕರೂಪತೆ, ಇನ್ನು ಕೆಲವು ಕಡೆ ಬಹುರೂಪತೆಯಿದ್ದ ಸಂಗತಿಯ ಆಯಾ ಸಂತೆ–ಪೇಟೆ, ಪಟ್ಟಣಗಳಿಗೆ ಬರುತ್ತಿದ್ದು, ಅಲ್ಲಿ ಬೆಳೆಯುತ್ತಿದ್ದ ಸರಕು(ವಸ್ತು)ಗಳು ಮತ್ತು ಇವುಗಳ ಪ್ರಮಾಣವು ಕರ್ನಾಟಕದ ಶಾಸನಗಳಿಂದ ಗೊತ್ತಾಗುತ್ತದೆ. ಸಂತೆಯ ಸುಂಕವನ್ನು ಸರಕುಗಳ ತೂಕ, ತುಂಬಿದ ವಸ್ತುವಿನ ಗಾತ್ರ, ಸಾಗಿಸುವ ವಾಹನ, ಸರಕಿನ ಬೆಲೆ, ಅಳತೆ ಪ್ರಮಾಣ ಹಾಗೂ ರಾಶಿ(ಬಟ್ಟಲ)ಗಳ ಮೇಲೆ ನಿಗದಿಪಡಿಸುತ್ತಿದ್ದರು. ಇದು ವಸ್ತುವಿನ ಮಾರಾಟದ ಪ್ರಮಾಣದ ಮೇಲೆ ನಿರ್ಣಯವಾಗುವಂಥದು. "ಕುದುರೆ ಮಾಱಿದಲ್ಲಿ ಬ್ಯವಹಾರಿಗಳಲ್ಲಿ ಪಣ ೧" "ಊರಲ್ಲಿ ಹರದರು ಮಾರುಗೊಂಡ ಭತ್ತಕ್ಕೆ ಮೊಂಗೆ ಹಾಗ ವೊನ್ದು" ಎಂಬ ಶಾಸನನೋಲ್ಲೇಖಗಳು ಕೊಟ್ಟಲ್ಲಿ, ಕೊಂಡಲ್ಲಿ, ಮಾರಿದಲ್ಲಿ ಎಂಬಂತಹ ಪದಪ್ರಯೋಗಗಳು ಮಾರಾಟಕರವನ್ನು ಸೂಚಿಸುವಂತಿವೆ.

ಮಾರಾಟಸುಂಕ ಆಯಾಕಾಲ–ಪ್ರದೇಶಗಳಲ್ಲಿ ವ್ಯತ್ಯಾಸವಾಗಿದ್ದು, ವಸ್ತು ಹಾಗೂ ಹಣಗಳ ರೂಪದಲ್ಲಿ ಅದನ್ನು ವಸೂಲು ಮಾಡುತ್ತಿದ್ದ ಅಂಶವು ಭತ್ತ, ಬೆಲ್ಲ, ಸಕ್ಕರೆ, ಎಲೆ, ಹತ್ತಿ, ಸೀರೆ, ಸಾಸಿವೆ, ಜೀರಿಗೆ, ಶುಂಠಿ, ಅರಿಶಿಣ, ಮೆಣಸು, ಗಂಧವಣ, ಇಂಗು ಮುಂತಾದ ಸರಕುಗಳ ಮೇಲೆ ಮಾರಾಟಕರ ಆಕರಿಸುತ್ತಿದ್ದ ಸಂಗತಿಯ ಶಾಸನಗಳಿಂದ ವ್ಯಕ್ತವಾಗುತ್ತದೆ. ಹೀಗೆ ಸರಕುಗಳಿಗೆ ಸಂತೆಯ ಆಯಾ ಮಾರಾಟ ಕರಗಳನ್ನು ಆಕರಿಸುತ್ತಿದ್ದರು. ಇದಲ್ಲದೇ ವರ್ತಕರ ಪ್ರತಿಯೊಂದು ಖಾಯಂ ಅಂಗಡಿಯ ಮೇಲೆ ತೆರಿಗೆ ವಿಧಿಸುತ್ತಿದ್ದರು. ಶಾಸನಗಳು ಇದನ್ನು ಅಂಗಡಿ ಅಥವಾ 'ಅಂಗಡಿದೇಱ' ಎಂದು ಕರೆದಿರುತ್ತವೆ.

ಇದಲ್ಲದೇ ವರ್ತಕರು ಅದೇ ಸಂತೆಯಲ್ಲಿ ತಮ್ಮ ವ್ಯಾಪಾರಕ್ಕೋಸುಗಬೇಕಾದ ಸರಕು ಖರೀದಿಸಿದರೂ ತೆರಿಗೆ ಸಲ್ಲಿಸುತ್ತಿದ್ದರು. ಖರೀದಿಸಿದ ಸಾಮಾನುಗಳನ್ನು ಅನ್ಯಸ್ಥಳಗಳಿಗೆ ಸಾಗಿಸುವಾಗ ಮತ್ತೆ ಸುಂಕ ಕೊಡುವ ಪ್ರಸಂಗ ಬರುತ್ತಿದ್ದುದ್ದನ್ನು ಸಂಸಿ ಶಾಸನ ತಿಳಿಸುತ್ತದೆ. ಹೀಗೆ ಸಂತೆಯಲ್ಲಿ ಆಯದಧಾಕಾರಿಯಿಂದ ಸಂಗ್ರಹಗೊಂಡ ಸಂತೆಯ ಆಯ, ಮಾರಾಟ ಕರ, ಅಂಗಡಿ ಆಯ ಹಾಗೂ ಸೆಟ್ಟಿದೆಟಿ ಸೆಟ್ಟಿವಣ, ವರ್ತಕರ ಸುಂಕ(ವರ್ತಕರ ಮೇಲಿನ ತೆರಿಗೆ) ನದಿಯ ಬೀಯ (ನೆಡೆಯುತ್ತ ಹೊಳೆಯ ದಾಟುವಾಗ ಕೊಡುವ ಸುಂಕ) ಎತ್ತಿನ ಸುಂಕ, ಮೆಯಿದೆರೆ ಗಾಡಿಯ ಸುಂಕ, ಬಂಡಿದೆರೆ(ವಾಹನಕರ) ಕೀಳ್ವಟ್ಟೆಸುಂಕ, ಮೇಲ್ವಟ್ಟೆಸುಂಕ(ಸಾರಿಗೆ ತೆರಿಗೆ) ನೆಲಮೆಟ್ಟು (ಕುದುರೆ ಅಥವಾ ಬೇರೆ ಪ್ರಾಣಿ ಕಟ್ಟವ ಸ್ಥಳದ ಮೇಲಿನ ಸುಂಕ)ಗಳು ರಾಜ ಭಂಡಾರಕ್ಕೆ ಸಂದಾಯವಾಗುತ್ತಿದ್ದವು. ಶಾಸನಗಳಲ್ಲಿ ಗಂಗಣನಾಯಕ, ಕೇಶವದೇವ, ಚಟ್ಟಿಮರಸ, ಇತ್ಯಾದಿ ಪ್ರಮುಖ ಆಯುದ ಅಧಿಕಾರಿಗಳ ಹೆಸರುಗಳ ಕಂಡುಬರುತ್ತವೆ. ಕೆಲವೊಮ್ಮೆ ಅಧಿಕಾರಿಗಳು ಸಂತೆಯ ಆಯಾವನ್ನು ಗುತ್ತಿಗೆಯಾಗಿ ಬೇರೆಯವರಿಗೆ ಉಪಯೋಗಿಸಲು ಕೊಡುತ್ತಿದ್ದುದ್ದುಂಟು. ಸಂತೆಯ ಸುಂಕ, ಮಾರಾಟ ಸುಂಕ, ಅಂಗಡಿಯ ಆಯಗಳು ಆಯಾ-ಕಾಲ ದೇಶ-ಪ್ರದೇಶಗಳಲ್ಲಿ ಬೇರೆ ಬೇರೆಯಾಗಿರುತ್ತಿದ್ದವು..........".[೩೬೮]

ಮಾರಾಟದ ವಸ್ತುಗಳ ಮೇಲೆ ಹಾಗೂ ಉದ್ಯೋಗಗಳ ಮೇಲೆ ಸುಂಕ ಹಾಕಿ ನಿಗದಿತ ಸುಂಕವನ್ನು ಶೇಖರಿಸಲಾಗುತ್ತಿತ್ತು. ನಾನಾ ವಿಧದ ತೆರಿಗೆಗಳಲ್ಲಿ ಕೆಲವೊಂದು ಸ್ಪಷ್ಟವಾಗುವುದಿಲ್ಲ. ಒಟ್ಟಾರೆ ಕಂದಾಯದಿಂದ ಬಂದ ಧನವು ದೇವಾಲಯ, ಕೆರೆ, ತಟಾಕ, ಅನ್ನಸತ್ರ, ವಿದ್ಯಾರ್ಜನೆಗೆ ಮತ್ತು ಮೊದಲಾದ ಪುಣ್ಯಕಾರ್ಯಗಳಿಗೆ ವಿನಿಯೋಗಿಸುಲಾಗುತ್ತಿರುವ ಅಂಶ ಶಾಸನಗಳಿಂದ ತಿಳಿದುಬರುತ್ತದೆ. ಇಂಗಳಗಿ ಶಾಸನದಲ್ಲಿ "..........ಸಮಸ್ತ ನಾಡ ಸುಂಕಾಧಿಕಾರಿ ಬಂಣಿಗೆಯಧಿಕಾರಿ ವಾಸುದೇವ ನಾಯಕರುಂ............[ಹೈ.ಕ.ಕನ್ನಡ ಶಾಸನಗಳು-ಸಂ. ವಿ. ಶಿವಾನಂದ, ಇಂಗಳಗಿ-ಮು-೨೩೮] ಸುಂಕಗಳ ಮೇಲಿನ ಅಧಿಕಾರಿಯನ್ನು 'ಸುಂಕವರ್ಗಡೆ' ಸಮಸ್ತನಾಡ ಸುಂಕಾಧಿಕಾರಿ ಎಂದು ಕರೆಯುತ್ತಿದ್ದರು. ಎಂಬ ಅಂಶ ತಿಳಿಯುತ್ತದೆ. ಕೃಷಿಕರು ತೆರುತ್ತಿದ್ದ ಸುಂಕಗಳೆಂದರೆ ಒಕ್ಕಲುದೆರೆ, ಬೆಳೆದೆರೆ, ಬಣಂಬೆದೆರೆ ಎತ್ತಿನೊಕ್ಕಗಳು ಎಂದು ಒಂದು ಶಾಸನದಲ್ಲಿ ಹೀಗೆ ಹೇಳಲಾಗಿದೆ. "ಹಿರಿಯ ಗೊಬ್ಬೂರ ಮೂಲಿಗೆ ಮಹಾಜನ ಪ್ರಮುಖ ಮೊದಲುಗೊಂಡು ಮೂಲಿಗರ್ಗ್ಗೆ ಮೂಲಿಗದೆರೆಯು .... ಬೆಳೆದೆರೆಯಂ ಧಾರಾಪೂರ್ವ್ವಕ್ಕಂ ಚಂದ್ರಾರ್ಕ್ಕತಾರಾಂಬಂಬಿಟ್ಟರು"[೩೬೯]

ಸಂತೆ ಸುಂಕ : ಸಂತೆ ಅಂದು ಇಂದು ಕೂಡ ಮುಖ್ಯ ವ್ಯಾಪಾರ ವೇದಿಕೆಯಾಗಿದೆ. ಸಂತೆಯಲ್ಲಿ ಕಟ್ಟಿದ ಅಂಗಡಿಗಳು, ಬಯಲು ಅಂಗಡಿಗಳಿದ್ದು. ನನ್ನಿಗಂಬಗಳು, ಹೊಸದಾಗಿ ಆರಂಭಿಸಿದ ಸಂತೆಗೆ ವರ್ತಕರನ್ನು ಆಕರ್ಷಿಸಲು ಸರಕುಗಳಿಗೆ ರಿಯಾಯಿತಿ ನೀಡಿದ ಅಂಶಗಳು ಕಾಣುತ್ತವೆ. ಧರ್ಮಸಂತೆಗಳು ಅಸ್ತಿತ್ವದಲ್ಲಿದ್ದ ಅಂಶವೂ ತಿಳಿಯುತ್ತವೆ.

"ಸಂತೆ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಮುಖ್ಯ ವ್ಯಾಪಾರವೇದಿಕೆ. ಸಂತೆ, ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಔದ್ಯೋಗಿಕ ಪ್ರಗತಿ ಸಾಧಿಸುವಲ್ಲಿ ಸಂತೆ ಅತ್ಯಂತ ಮಹತ್ವದ ಪಾತ್ರವನ್ನಾಡಿದೆ. ಇದು ಸಂಸ್ಥಾ>ಸಂಸ್ಥೆ >ಸಂತೆ ಹೀಗೆ ಸಂಸ್ಕೃತದಿಂದ ರೂಪಗೊಂಡಿದೆ. ...."[೩೭೦] ಸಂತೆಯಲ್ಲಿ ಅಂದು ಮಾರಾಟವಾಗುತ್ತಿದ್ದ ನಿತ್ಯ ವ್ಯವಹಾರದ ಹಣ್ಣು ಕಾಯಿಗಳ ಬೆಲೆಗಳನ್ನು ದಮ್ಮ, ದಮ್ಮಾಣಿ ರೂಪದಲ್ಲಿ ತಿಳಿಸಿರುತ್ತಿದ್ದರು. "ಅಲ್ಲಿಕೆ ೩ ದಮ್ಮ ಸಿಂಬೆಯ ಕಾಹಿಗೆ ೩

ದಮ್ಮ ಬಾಳೆಯ ಹಣ್ಣಿಗೆ ೩ ದಮ್ಮ ಮಾವಿನ ಹಣ್ಣಿಗೆ ೩ ದಮ್ಮ ನೆಲ್ಲಿಯ ಕಾಇಗೆ ೧ ದಮ್ಮ ಮಾವಿನ ಕಾಇಗೆ ೧ ದಮ್ಮ ಹುಣಸೆಯ ಹಣ್ಣಿಗೆ ೧ ದಮ್ಮ ಹಾಣಿ ಬಳಕೆ ಮಾಱುವರು"[೩೧] ಎನ್ನಲಾಗಿದೆ. ಸಂತೆಯಲ್ಲಿ ಮಾರಾಟವಾಗುವ ನಿಂಬೆಯ ಹಣ್ಣು, ಬಾಳೆಯ ಹಣ್ಣು, ಮಾವಿನ ಹಣ್ಣು, ನೆಲ್ಲಿಕಾಯಿ, ಮಾವಿನಕಾಯಿ, ಹುಣಸೆಹಣ್ಣು ಮತ್ತು ಮಸಾಲೆ ಜಿನಸುಗಳಾದ ಅಲ್ಲ ಮುಂತಾದವುಗಳು ಮಾರಾಟವಾಗುತ್ತಿದ್ದವು.

ಹರದನಹಳ್ಳಿ ಶಾಸನದಲ್ಲಿ ಸಂತೆಯ ಮಾಹಿತಿ ಹೀಗೆ ದೊರೆಯುತ್ತವೆ. "………. ಪೂರ್ವದಲಿ ಕೊಟ್ಟಲು ಹರದನಹಳ್ಳಿಯ ಸಂಥೆಯ ಸುಂಕ। ತಾವರೆ ಕಟ್ಟೆ ಯೆಂಣೆ ನಾಡಸ್ಥಳ ಹಿರಿಯಕೆಱೆಯ ಕೆಳಗೆ ಯೇರಿಯ ತಾಳಲು ಅಡಕೆಮರದ ತೆಟಿಪ್ಪ ಹು ಸಾ ೩ ……… ತೆಂಗಿನ ತೋಟ ಅಲ್ಲಿಯ ಅಡಕೆಯ ತೋಟ ………."[೩೨] ಹರದನಹಳ್ಳಿ ಸಂತೆ ನಡೆಯುವ ಸ್ಥಳವಾಗಿರಬೇಕು. ಅಲ್ಲಿ ನಡೆಯುವ ಸಂತೆಯಿಂದ ಬರುವ ಮಾರುವ, ಕೊಳ್ಳುವ ಸುಂಕವನ್ನು ಆಯಾವಾಗಿ ಕೊಟ್ಟಿರುವ ಅಂಶ ತಿಳಿದುಬರುತ್ತದೆ. ಸಂತೆ ಸೇರುವ ದಿನಗಳನ್ನು ಕುರಿತು ಮಾಹಿತಿ ದೊರೆಯುತ್ತದೆ. ಅಂದರೆ ನಿಗಧಿಯಾದ ದಿನಗಳೆಂದೆ ಸಂತೆ ನಡೆಯುತ್ತದೆ. "……….ಆ ವೂರ ಮಂಗಳವಾರ ಸಂಥೆಯಲು ಸುಂಕ ಸೋದಿಗೆ ಆಯಾದಾಯ ………."[೩೩] ಹೆಬ್ಬಾಲೆಯ ಈ ಶಾಸನದಲ್ಲಿ ಮಂಗಳವಾರ ಸಂತೆ ನಡೆಯುವ ದಿನವಾಗಿದ್ದು ಸಂತೆಯ ಸುಂಕ ಆ ಊರಿನ ಆದಾಯವಾಗಿತ್ತು ಎಂಬ ಅಂಶ ತಿಳಿದುಬರುತ್ತದೆ. "ಸಂತೆ ಕೂಡುವ ದಿನಗಳು ಕಾಲಗತಿಸಿದಂತೆ ಬದಲಾಗುತ್ತಲೂ ಹೋಗುತ್ತಿದ್ದವು. ಕ್ರಿ.ಶ. ೧೦೭೫ರಲ್ಲಿ ಸೂಡಿಯ ಸಂತೆದಿನ ರವಿವಾರ, ಈಗ ಶುಕ್ರವಾರ. ಕ್ರಿ.ಶ.೧೧೪೨ರಲ್ಲಿ ಸೇಡಬಾಳ ಸಂತೆದಿನ ಶುಕ್ರವಾರ, ಈಗ ಮಾತ್ರ ಮಂಗಳವಾರ. ………."[೩೪] ಎಂದು ಶಾಸನಗಳ ಆಧಾರದಿಂದ ವಿವರಿಸಲಾಗಿದೆ. ಒಟ್ಟಾರೆಯಾಗಿ ಸಂತೆ ನಡೆಯುವ ದಿನ, ಸಂತೆಯಲ್ಲಿ ಮಾರಾಟವಾಗುವ ಸರಕುಗಳು, ಸಾಗಾಣಿಕೆಯ ವಿವರ ಮತ್ತು ಸಂತೆ ಸುಂಕ ಹಾಗೂ ಆ ಸಂತೆಯ ಸುಂಕ ಆಯಾ ಊರಿಗೆ ಸೇರಿರುವಂಥದ್ದು ಎಂಬ ಮಾಹಿತಿ ಅನೇಕ ಶಾಸನಗಳಲ್ಲಿ ಕಾಣಸಿಗುತ್ತದೆ.

ಮಾರಾಟ ಕರ : ಮಾರಾಟ ಸುಂಕವನ್ನು ವಸ್ತು ಹಾಗೂ ಹಣದ ರೂಪದಲ್ಲಿ ವಸೂಲಿ ಮಾಡಲಾಗುತ್ತಿತ್ತು. ಅದು ಆಯಾ ಕಾಲ–ಪ್ರದೇಶಗಲ್ಲಿ ಭಿನ್ನಸ್ವರೂಪ ಹೊಂದಿತ್ತು. ಸರಡಗಿ ಶಾಸನವೊಂದರಲ್ಲಿ ಭತ್ತ, ಬೆಲ್ಲ, ಸಕ್ಕರೆ, ಎಲೆ, ಅಡಕೆ, ಹತ್ತಿ, ಸೀರೆ, ಸಾಸಿವೆ, ಜೀರಿಗೆ, ಶುಂಠಿ, ಅರಿಶಿಣ, ಮೆಣಸು ಹೀಗೆ ಆಹಾರ ಧಾನ್ಯಗಳು, ಜವಳಿ ಪದಾರ್ಥಗಳು ಮತ್ತು ಸಾಂಬಾರ ಜೀನಸುಗಳಿಗೆ ಮಾರಟ ಕರವನ್ನು ಹಾಕಿರುವ ಅಂಶ ತಿಳಿದು ಬರುತ್ತದೆ. "…………….ಹೇಱಿಂಗೆ ಮಾನಭತ್ತ ಅಂಗಡಿಯಲು ನಖರ ……………..ಗದಿಂ ಹೆಡಿಗೆಯಲು ಉಪ್ಪು ಸೊಲ್ಲಗೆ ಎರಡು ಪೊಂಗೆ ಅಡಕೆ

ಹನ್ನೆರಡು ॥ ಹೇಱಿಂಗೆ ಎಲೆ ಅಯಿವತ್ತು ಅಂಗಡಿಯಲು ಭತ್ತ ಧಾರೆಯೆಣ್ಣೆ ಅರ್ದ್ದಸೊಲ್ಲಗೆ ॥ ಮೆಳಸು ಜೀರಿಗೆಯ ಹೇಱಿಂಗೆ ಮಾನವೊಂದು ಹೂಮಾಱಿದೊಡೆ ಹಡಗಲಿಗೆರಡು ನಾರಂ ಕುಡುವರು ……………"[೩೫] ಭತ್ತ ಮತ್ತು ಹೆಡಿಗೆ ಉಪ್ಪಿಗೆ ೨ ಸೊಲ್ಲಗೆ, ಅಡಕೆಗೆ ೧೨, ಎಲೆಯ ಹೇರಿಗೆ ೫೦ ಎಲೆ, ಮೆಣಸು, ಜೀರಿಗೆ ಹೇರಿಗೆ ೧ ಮಾನ ಹಾಗೂ ಹೂವು ಮಾರಿದರೆ ೨ ನಾರು ಹೂವು ಕೊಡುವುದೆಂದು ವಸ್ತುಗಳಿಗೆ ಮಾರಾಟತೆರಿಗೆ ನಿಗದಿಗೊಳಿಸಿರುವ ಅಂಶ ತಿಳಿದು ಬರುತ್ತದೆ. ಇ.ಸಿ.ಸಂಪುಟ VIII ರ ದೊಡ್ಡ ಗದ್ದವಳ್ಳಿ ಶಾಸನದಲ್ಲಿ ಆನೆ, ಮಾಣಿಕ್ಯ ಕುದುರೆ ಹಾಗೂ ಅಡಕೆ, ಅರಿಶಿಣ, ಮೆಣಸು ಹೇರು,

ಎಲೆ, ಅಕ್ಕಿ, ಉಪ್ಪು ಅಲ್ಲದೇ ಯಾವ ಬಗೆಯ ಹೇರಾದರು ಸರಿಯೆ ಸುಂಕವನ್ನು ನೀಡಲೆಬೇಕಾಗಿತ್ತು. "............ಹುಟ್ಟುವಳಿಯಲು ಆನೆ ಮಾಣಿಕ್ಯ ಕುದುರೆ ಅಡಕೆ ಅರಿಶಿಣ ಮೆಣಸಿನ ಭಾರ ಎಲೆಯಕ್ಕಿ ಉಪ್ಪು ಆವ ಭಂಡವ ಹೇಱಾದಡಂ ಆ ಸುಂಕವನು............ (ಪು-೨೬೩) ಪ್ರಾಣಿಗಳಿಗೊ ವಸ್ತುಗಳಿಗೆ ನೀಡುವಂತೆ ಸುಂಕ ನೀಡುವ ಅಂಶ ತಿಳಿದು ಬರುತ್ತದೆ. 'ಕಲುಬುರ್ಗಿ ಜಿಲ್ಲೆಯ ಶಾಸನಗಳು' ಎಂಬ ಕೃತಿಯಲ್ಲಿ ಮಡಿವಾಳ ವರ್ತುರು, ಇಂಗಳಗಿ ಶಾಸನಗಳಲ್ಲಿ ಮಾರಾಟ ಸುಂಕವನ್ನು ವಿದಿಸಿರುವುದು ಕಂಡು ಬರುತ್ತದೆ. ಮಡಿವಾಳ ಶಾಸನದಲ್ಲಿ ತಿಪ್ಪೆ ಸುಂಕ ವಸೂಲಿಮಾಡುವ ಅಂಶ ಕಾಣಸಿಗುತ್ತದೆ.

ಹೊಡಲಶಾಸನದಲ್ಲಿ ಭೂಮಿ ಮತ್ತು ಸಮುದ್ರ ವ್ಯಾಪಾರ ಮಾಡುವ ಶೆಟ್ಟರು ನೀಡುವ ಮಾರಾಟ ಸುಂಕದ ಉಲ್ಲೇಖ ಕಂಡು ಬರುತ್ತದೆ. "............ಶ್ರೀಮತು ಅಯ್ಯಾವಳೆಯರಯ್ವನೂರ ಸ್ವಾಮಿಗಳು ೩೬ ಬೀಡು ಮುಮ್ಮರಿದಂಡ ಉಭಯ ನಾನಾದೇಶಿಯ ಕನ್ನಡ ನಾಲ್ಸಾಸಿರ ಸಮುದ್ರ ಮೊದಲಾಗಿ ನಾಡಸುಂಕ ವೆರ್ಗ್ಗಡ ಜನ್ನಮಯ್ಯನುಂ ಪ್ರಮುಖವಾಗಿ ಶ್ರೀರಾಮನಾಥದೇವರ್ಗ್ಗೆ ಲಖ್ಖಪಟ್ಟಿಯಾಗಿ ಬಿಟ್ಟ ಕೋನಂ ೧೦೦ ಎತ್ತು ೧೦೦ ಆಸ್ಥಳದಲ್ಲಿ ಹೊಂಗೆ ಕೊಟ್ಟಕೊಂಡಲ್ಲಿ ದೇವಮಾನ ೨ ಅಂಗಡಿಯಲ್ಲಿ ಸೆಟ್ಟಿಗಗುತ್ತ ೧ ಗಾಣದಲ್ಲಿ ಎಣ್ಣೆಸೌಟು ಗಂಧವಣದ ವಿಕ್ರಯದಿಂದ ಹೊಂಗೆ ಕೊಟ್ಟ ಕೊಂಡಲ್ಲಿ ವೀಸ ೨ ಹೊಂಗೆ ಅಡಕಿ ೨೫ ರ ಹೊಂಗೆ ೧೦೦ ತಾಜಿಮ ಬಡಗ ತಿಪ್ಪೆಸುಂಕ................"[೩೭೬] ಅಯ್ಯವಳೆಯರಯ್ವನೂರ ಸ್ವಾಮಿಗಳು ೩೬ ನಾಡಿಗೆ ಭೂಮಾರ್ಗ, ಸಮುದ್ರ ಮಾರ್ಗದ ನಾಲ್ಕು ಸಾವಿರ ಮಾರ್ಗದಲ್ಲಿ ನಾಡ ಸುಂಕವನ್ನು ವಸೂಲಿ ಮಾಡುವ ಸುಂಕಾಧಿಕಾರಿಯಾದ ಜನ್ನಮ್ಮಯ್ಯನು ದೇವರಿಗೆ ಕೊಟ್ಟ ಲೆಕ್ಕದ ಪಟ್ಟಿ ಹೀಗೆ ಇದೆ. ಒಂದು ನೂರು ಎತ್ತು, ಆಸ್ಥಳದಲ್ಲಿ ಕೊಟ್ಟಲ್ಲಿ ಕೊಂಡಲ್ಲಿ ಒಂದು ಗಾಣಕ್ಕೆ ಒಂದು ಸೌಟು ಎಣ್ಣೆ, ಗಂಧ ವಣಕ್ಕೆ ಎರಡು ವೀಸ, ಅಡಕೆಗೆ ೨೫ ಈ ರೀತಿ ಕೊಳ್ಳುವ ಮತ್ತು ಮಾರುವ ಸುಂಕವನ್ನು ವಿಧಿಸಿ ವಸೂಲಿ ಮಾಡಲಾಗುತ್ತಿತ್ತು. ಇನ್ನೊಂದು ಶಾಸನದಲ್ಲಿ ಖಾಲಿ ನಿವೇಶನಗಳಿಗೆ, ವ್ಯವಸಾಯ (ಮೆಂಟಿ)ದ ಮೇಲೆ ಸುಂಕವನ್ನು, ರಾಶಿ ಸುಂಕವನ್ನು ಹಾಕುತ್ತಿದ್ದ ಅಂಶ ಕಂಡು ಬರುತ್ತದೆ. ಅಲ್ಲದೆ "............ಹೊಂಗೆ ೧೦ ಅಡಕೆ ಕೊಟ್ಟಲ್ಲಿ ಕೊಂಡಲ್ಲಿ ಹೇರಿಂಗೆ ನೂರೆಲೆಯಲ್ಲಿ ವರಿಸಿನ ತೂಗಿಮೆ............"[೩೭೭] ಅಡಕೆಯ ಕೊಟ್ಟಲ್ಲಿ ಕೊಂಡಲ್ಲಿ ೧೦ ಅಡಕೆ, ಎಲೆಯ ಹೇರಿಗೆ ೧೦೦ ಎಲೆ, ಅರಿಶಿಣ ತೂಗಿ ಕೊಟ್ಟರೆ ಸುಂಕ ಕೊಡಬೇಕೆಂದು ಈ ಶಾಸನದಲ್ಲಿ ಹೇಳಲಾಗಿದೆ.

ಗುಂಡ್ಲಪೇಟೆ ಶಾಸನದಲ್ಲಿ ಹಲವು ಸರಕುಗಳ ಮೇಲೆ ಹಾಕಿದ ಸುಂಕದ ವಿವರ ಈ ರೀತಿ ಕಂಡು ಬರುತ್ತದೆ. "................ಗುಂಡ್ಲಪೇಠೆಯೀ ಉಭಯ ಮಾರ್ಗಗಳಲ್ಲಿ ನಾಲು ವ್ಯಾಪಾರವ ನಡಸುವೇ ಜಲುಳ। ನೂಲು। ಅಡಕೆ ಹೊಗೆ ಸೊಪ್ಪು । ಗಂಧದ ಕೊರಡು । ಅರಗು । ಜೀರಿಗೆ ತುಪ್ಪ । ಕುಸಬೆ । ಅರಿಶಿನ । ಮೆಣಸು । ಶುಂಠಿ ಪಲಸರಕು । ಮೊದಲಾದ ಹೋಗಿಬರುವ ನಿಜ ಹೇರು ೧ ಕ್ಕೆ ಕಂಠಿರ್‍ರಾಯಗಳಿಗೆ ಬೇಳೆ ಹಣಉ । ಯಿಲ್ಲದದೇ ವಿಳ್ಳದಲೆ । ಬೆಲ್ಲ । ಉಪ್ಪು । ಉದ್ದು ಮೊದಲಾದ ಮೂಲೆ ನಿಜಹೇರು ೧ಕ್ಕೆ ಕಂಠಿರ್‍ರಾಯ ವಿಳಾಸದ ಹಣಉ । ಯೀ ಪ್ರಕಾರಕ್ಕೆ । ಯೀ ಮಗಮೆಯಂ ನೂ ತೆಗೆದುಕೊಂಡು................"[೩೭೮] ಗುಂಡ್ಲಪೇಟೆಯ ೨ ಮಾರ್ಗದಲ್ಲಿ ವ್ಯಾಪಾರಿಗಳು ಕೊಟ್ಟ ಹಣರೂಪದ ಸುಂಕದ ವಿವರ ಜವಳಿ, ನೂಲು, ಅಡಕೆ, ಹೊಗೆಸೊಪ್ಪು, ಗಂಧದ ಕೊರಡು, ಅರಗು, ಜೀರಿಗೆ, ತುಪ್ಪ, ಕುಸುಬೆ, ಅರಿಶಿಣ, ಶುಂಠಿ, ಬೆಳೆ, ವಿಳ್ಳೆದೆಲೆ, ಉಪ್ಪು, ಉದ್ದು ಮೊದಲಾದ ನಿಜಹೇರುಗಳಿಗೆ ಸುಂಕ ನೀಡಿರು ಮಾಹಿತಿ ದೊರೆಯುತ್ತದೆ. ಸುತ್ತೂರು ಶಾಸನವೊಂದರಲ್ಲಿ ಎಡದೊರೆ ಕೋಟೆಯ ಮಾರ್ಗದಲ್ಲಿ

ಸಂಚರಿಸುವ ಜವಳಿ ಹೇರಿಗೆ ೨ ಕಾಸು, ಹೊಗೆ ಸೊಪ್ಪಿನ ಹೇರಿಗೆ ೨ ಕಾಸು, ಎಲೆಯ ನಡಗೆಗೆ ಒಂದು ಕಂತು, ತಲೆಯ ಹೊರಗೆ ಅರಿಶಿಣ ಮೆಣಸು ಕವಾಡದ ಸರಕಿನ ಹೇರಿಗೆಲ್ಲ ೨ ಕಾಸು ಮಾರಾಟತೆರಿಗೆಯನ್ನು ನೀಡಿರುವ ವಿವರ ಕಾಣಸಿಗುತ್ತದೆ. "ಯಡದೊರೆ ಕೋಟೆಮಾರ್ಗದಲ್ಲಿ ೧ ಮೂಲೆ ಹೇರ್‍ರಿಗೆ ಕಾಸು ಒಂದು ಜವಳಿ ನಡೆಗೆ ಕಾಸು ೨ ಹೊಗೆ ಸೊಂಪ್ಪಿನ ನೆಡೆಗೆ ಕಾಸು ೨ ಯೆಲೆ ನಡಗೆ ಯೆಲೆ ಕಂತು ೧, ತಲೆಯ ಹೊರಗೆ ಚಲುಕ । ಅರ್‍ರಿಸಿಣ ಮೆಣ್ಸು ಮುಂತಾದ ಕವಾಡ ಸರಕಿನ ಹೇರಿಗೆಲ್ಲಾ ಕಾಸು ೨.............."[೩೭೯] ಎನ್ನಲಾಗಿದೆ. ಅಲ್ಲದೇ ಶಿವಮೊಗ್ಗದ ಶಾಸನದಲ್ಲಿಯೂ ಅನೇಕ ಪದಾರ್ಥಗಳ ಮೇಲೆ ಮಾರಾಟ ಸುಂಕವನ್ನು ಹಾಕಿ ವಸೂಲಿ ಮಾಡುವ ಅಂಶಗಳು ಕಂಡುಬರುತ್ತವೆ.

ಕೌಲೆದುರ್ಗ ಶಾಸನವೊಂದರಲ್ಲಿ ಆಹಾರಧಾನ್ಯಗಳು, ತೋಟದ ಬೆಳೆಗಳು ಹಾಗೂ ಸಾಂಬಾರು ಪದಾರ್ಥಗಳು ಎಲ್ಲಾ ಸಮಸ್ತ ವಸ್ತುಗಳಿಗೂ ಸುಂಕ ವಿಧಿಸುವ ಅಂಶಕಂಡು ಬರುತ್ತದೆ. "...............ಯೆತ್ತಿನ ಮೇಲೆ ಅಡಕೆ ಮೆಣಸು ಝುಲ್ಲ ಪಟ್ಟೆ ಕವಾಡ ಮುಂತಾದ ಫಡಿಸಿವ ಸರಕು ಹೊರ್ತ್ತಾಗಿ ಹೇರಿಕೊಂಬ ಜಿನಿಸು ಅಕ್ಕಿ ಭತ್ತ ರಾಗಿ ಉಪ್ಪು ಹುಳಿವಿದಳ ಬೊಸ ಯಂಣಿ ತುಪ್ಪ ಬೇಳೆ ಬೆಲ್ಲ ಕಾಯಿ ಕತ್ತ ಕಾಚು ಖೊಬರಿ ಜವಳಿ ಕಬ್ಬುನ ಉತ್ತುತ್ತಿ ಖರ್ಜರ ಹೊಗೆ ಸೊಪ್ಪು ಯಿಂಗು ಜೀರಿಗೆ ಸಾಸಿವೆ ಮೆಂತ್ತೆಯ ನೀರುಳ್ಳಿ ಬೆಳ್ಳುಳ್ಳಿ ಅರಿಸಿಣ ಶುಂಠಿ ಮುಂತಾದವು ...."[೩೮೦] ಆಹಾರ ಧಾನ್ಯಗಳಾದ ಭತ್ತ, ಅಕ್ಕಿ, ರಾಗಿ, ತೋಟದ ಬೆಳೆಗಳಾದ ಅಡಿಕೆ ಕೊಬ್ಬರಿ, ಎಲೆ ಕಬ್ಬು ಮತ್ತು ಸಾಂಬಾರ ಪದಾರ್ಥಗಳಾದ ಇಂಗು, ಜೀರಿಗೆ, ಸಾಸಿವೆ, ಮೆಂತ್ತೆ, ಈರುಳ್ಳಿ, ಬೆಳ್ಳುಳ್ಳಿ, ಅರಿಸಿಣ, ಶುಂಠಿ ಅಲ್ಲದೇ ಬೆಲ್ಲ, ಬೇಳೆ, ತುಪ್ಪ, ಉತ್ತುತ್ತಿ, ಖರ್ಜುರ, ಹೊಗೆಸೊಪ್ಪು ಮುಂತಾದವುಗಳಿಗೆ ಮಾರಾಟ ಸುಂಕವನ್ನು ವಿಧಿಸಲಾಗುತ್ತಿತ್ತು.

ಬೆಳೆಯ ಸುಂಕ : ಕೆಲವು ಪ್ರಮುಖ ಬೆಳೆಗಳ ಮೇಲೆ ಧಾನ್ಯರೂಪದ ಬೆಳೆಸುಂಕ ಹಾಕಲಾಗುತ್ತಿದ್ದು, ಅಂತಹ ಅಂಶಗಳನ್ನು ಕೆಲವು ಶಾಸನಗಳಲ್ಲಿ ಕಾಣಬಹುದಾಗಿದೆ. ಮೇಲುಕೋಟೆ ಶಾಸನವೊಂದರಲ್ಲಿ ಪೈರುಸುಂಕ ಹಾಕುವ ಅಂಶ ಕಾಣಸಿಗುತ್ತದೆ. "...............ಆಸಕಲ ಪೈರು ಪೊಂಮಿಗೆ ಸಲುವ ಜವಳಿ ಲಾಭಾದಾಯದ ಪೊಂಮುಂ ಕಬ್ಬಿನದ ಪೊಂಮು ಹೊಗೆ ಸೊಪ್ಪಿನ ಪೊಂಮು................ಪೈರು ಸುಂಕ"[೩೮೧] ಸಕಲ ಪೈರುಗಳಿಗೂ ವಿಶೇಷವಾಗಿ ಕಬ್ಬು ಮತ್ತು ಹೊಗೆ ಸೊಪ್ಪಿನ ಹೊಲ-ಗದ್ದೆ ಮೇಲೆ ಪೈರು ಸುಂಕ ಹಾಕಲಾಗುತ್ತಿತ್ತು. ಮದ್ದೂರು ಶಾಸನ, ಬನ್ನೂರು ಶಾಸನಗಳಲ್ಲಿಯೂ ಅಡಕೆ ಸುಂಕವನ್ನು ವಸೂಲಿ ಮಾಡಿರುವ ಉಲ್ಲೇಖಗಳು ಕಂಡು ಬರುತ್ತವೆ. ಶೃಂಗೇರಿ ಶಾಸನದಲ್ಲಿ ಭತ್ತ ಸುಂಕದ ಮಾಹಿತಿ ದೊರೆಯುತ್ತದೆ. "................. ಬಿಡಾರದಿಂದಲೂ ಭತ್ತ ಸುಂಕ ದುರ್ಗದ ಭತ್ತ ವೆಚ್ಚ ಬಿಡಾರದಿಂದಲು..........."[೩೮೨] ದುರ್ಗದ ಭತ್ತ ಸುಂಕ ನೀಡಲಾಗಿದೆ. ಕುದುರೆ ಗುಂಡಿ ಶಾಸನದಲ್ಲಿ ದವಸ ಸುಂಕದ ಉಲ್ಲೇಖ ಕಾಣಸಿಗುತ್ತದೆ. "..................ದವಸದಸುಂಕವನೆಜಿದು......ಯಿದ ನಾತಂತಾನತಂ ತಮ್ಮ ಅಡಕೀ ದವಸಕೆ ನಡವವರು ಕೊಡುತಬಹುರ................"[೩೮೩] ದವಸದ ಸುಂಕ ಮತ್ತು ಅಡಕೆಯ ಸುಂಕವನ್ನು ನಿರಂತರವಾಗಿ ತಮ್ಮ ಯೋಗ್ಯತೆಯನುಸಾರ ಕೊಡುತ್ತಿರುವ ಅಂಶ ಕಂಡು ಬರುತ್ತದೆ.

ಸ್ಥಳ ಸುಂಕ : ಅನೇಕ ಕಡೆ ಸುಂಕ ಠಾಣೆಗಳು, ಸುಂಕ ವಸೂಲಿ ಕೇಂದ್ರಗಳು, ಗೇಟು, ಮಾರ್ಗಗಳು ಇರುವ ಅಂಶ ಮತ್ತು ಆಯಾ ಸ್ಥಳಗಳಲ್ಲಿ ವಿಶೇಷವಾಗಿಯೂ, ಭಿನ್ನ ಭಿನ್ನರೀತಿಯ ತೆರಿಗೆ ವ್ಯವಸ್ಥೆ ಕಂಡು ಬರುತ್ತದೆ. ಅದು ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆಯಾಗಿರುವಂತೆ ಕಾಣಸಿಗುತ್ತದೆ. ಚೋರಡಿ ಶಾಸನವೊಂದರಲ್ಲಿ "...............ಸುಂಕದ ಒಳಗಣ ಚೋರಡಿ ಮೊಸರೂರು ಸುಂಕದಿಂದ ಋೀ

ತೋಟದ ಸ್ಥಳದಲ್ಲು ಹಾಕಿದ ಅಡಿಕೆ ಮರ ನಾಲು ಅಹ ಅಡಿಕೆ ಲಕ್ಷ ಅರುಲಕ್ಷಕೆ ಲಕ್ಷ ೧ಕೆ ಸ್ತಲ ಸುಂಕದಿಂದ......................"[೩೮೪] ಚೋರಡಿಯ ಒಳಗೆ, ಮೊಸರೂರ ತೋಟದ ಸ್ಥಳಗಳಲ್ಲಿ ಅಡಕೆ ಮರಕ್ಕೆ ಹಾಕಿದ ಸ್ಥಳ ಸುಂಕದ ವಿವರಣೆ ಕಂಡು ಬರುತ್ತದೆ.

ಒಕ್ಕಲು ಸುಂಕ : ಎಲ್ಲಾ ಬಗೆಯ ಒಕ್ಕಲುಗಳಿಗೂ ಸುಂಕವನ್ನು ಹಾಕಲಾಗುತ್ತಿತ್ತು. ಅಲ್ಲದೇ ಒಕ್ಕಲಿಗರ ತೋಟ ಗದ್ದೆಗಳಿಗೂ ಸುಂಕ ಹಾಕುತ್ತಿದ್ದರು. ಗುಂಡ್ಲುಪೇಟೆಯ ರಾಘವಪೂರ ಶಾಸನದಲ್ಲಿ ಹೀಗೆ ಹೇಳಲಾಗಿದೆ. "..............ರಾಘಪೂರ ಹೊಂಪೂರಯಿವಱೊಳಗಾದ ಚತುಸ್ಸೀಮೆವೊಳಗುಳ್ಳ ಗದ್ದೆ ಬೆದ್ದಲು, ತೋಟ ತುಡಿಕೆ ಸುಂಕ ವೊಳವಾಱು, ಹೊರವಾಱು, ಕಂಮಾಱದೆಱಿ ಕುಂಬಾರದೆಱಿ, ಗಣವಾಱಿಕೆ ಕವಲಿ ಬೋಗಾಱಿಕೆ ಮಾದಾಱಿಕೆ ಮುಂತಾದ............."[೩೮೫] ರಾಘವಪೂರ, ಹೊಂಪೂರಗಳ ಗದ್ದೆ, ಬೆದ್ದಲು ತೋಟಗಳಿಗೆ ಹೊರಗಿನ ಸುಂಕ ಅಂದರೆ ಹೊಲಗದ್ದೆ ಅಷ್ಟೆ ಅಲ್ಲದೇ ಕಮ್ಮಾರದೆರೆ, ಕುಂಬಾರದೆರೆ ಮುಂತಾದವುಗಳನ್ನು ಕುರಿತು ಹೇಳಲಾಗಿದೆ. ಮೇಲು ಕೋಟೆ ಶಾಸನವೊಂದರಲ್ಲಿ ಒಕ್ಕಲು ಮಕ್ಕಳ ಸುಂಕದ ಉಲ್ಲೇಖ ಕಾಣಸಿಗುತ್ತದೆ. "............ಬೆದ್ದಲು ತೋಟ ತುಡಿಕೆ ಕೆಳಮನೆ 'ಒಕಲು ಮಕಳು ಸುಂಕ' ಸುವರ್ಣದಾಯ ಕಾಡಾರಂಭ ನೀರಾರಂಭ............."[೩೮೬] ಗದ್ದೆ-ಬೆದ್ದಲು ತೋಟ, ತುಡಿಕೆ ಕೆಳಮನೆ ಒಕ್ಕಲು ಮಕ್ಕಳ ಸುಂಕ ಮತ್ತು ಬಂಗಾರ, ಕಾಡಾರಂಭ ಮತ್ತು ನೀರಾವರಿ ಭೂಮಿಗೆ ಸುಂಕ ಹಾಕುವ ಅಂಶ ತಿಳಿದು ಬರುತ್ತದೆ.

ಎತ್ತಿನ ಸುಂಕ(ಬಾಲವಣ) : ಎತ್ತುಗಳನ್ನು ಮಾರಾಟ ಮಾಡುವಾಗ ಮತ್ತು ಕೊಳ್ಳುವಾಗ ಸುಂಕ ನೀಡುವುದೇ ಬಾಲವಣ (ವಡ್ಡರಾವುಳ)ವಾಗಿದೆ. ಕೆಲವು ಶಾಸನಗಳಲ್ಲಿ ಈ ಅಂಶ ಕಾಣಸಿಗುತ್ತದೆ. ಬಂದರವಾಡ ಶಾಸನದಲ್ಲಿ ಸುಂಕಾಧಿಕಾರಿಗಳು ಎತ್ತಿನ ಸುಂಕವನ್ನು ಅಂದರೆ ಇಪ್ಪತ್ತು ಎತ್ತುಗಳ ಹತ್ತು ಜೋಡಿಗೆ ಸುಂಕ ವಸೂಲಿ ಮಾಡಿ ದೇವರಿಗೆ ಬಿಟ್ಟ ಅಂಶ ಹೀಗೆ ಕಂಡು ಬರುತ್ತದೆ. "............ಶ್ರೀ ಮನ್ಮಹಾಪ್ರಧಾನಂ ದಂಡನಾಯಕಮ ವಡ್ಡರಾವುಳ ಸುಂಕ ವೆರ್ಗಡೆ ತ್ರಿಪುರಾಂತ ಕೈಯಗಳ ಬೆಸದಿಂ ಅಲಂದೆ ಸಾಸಿರದ ಸುಂಕವೆರ್ಗಡೆ ಅಳಿಯ ವೈಜರಸಂ ಶ್ರೀಸೊಮೇಶ್ವರ ದೇವರಿಗೇ ಇರ್ಪತ್ತುಯೆತ್ತಿನ ವಡಟ್ಟರಾವುಳದ ಸುಂಕವ ಬಿಟ್ಟ ...."[೩೮೭] ಎನ್ನಲಾಗಿದೆ. ಆಳಂದ ಶಾಸನದಲ್ಲಿ ಎತ್ತಿನ ಸುಂಕ ಕುರಿತು ಹೀಗೆ ಹೇಳಲಾಗಿದೆ. "............ಸಾಸಿರದೊಳಂ ಸಾಸಿರಪೇಱುವೆತ್ತಿಂಗೆ ಪೆರ್ಜ್ಜುಂಕ ಬಿಲ್ಕೊಡೆ ವಡ್ಡರಾವುಲ ವೊಳಗಾಗಿ ಸುಂಕವೆಲ್ಲಂ..................."[೩೮೮] ಸಾವಿರ ಜೊತೆ ಎತ್ತಿಗೆ ಸುಂಕಹಾಕಿ, ಎತ್ತಿನ ಸುಂಕವನ್ನು ದೇವರಿಗೆ ಆಯಾವಾಗಿ ಬಿಟ್ಟ ಅಂಶ ತಿಳಿದು ಬರುತ್ತದೆ.

ಇತರೆ :- ಕೆಲವು ಇತರೆ ಅಂಶಗಳನ್ನು ಶಾಸನಗಳಲ್ಲಿ ಕಾಣಬಹುದಾಗಿದೆ. ಕಾರಹುಣ್ಣಿಮೆಯ ದಿನ ಎತ್ತುಗಳನ್ನು ಓಡಿಸಿ ಕಟಾಬಾಯಲ್ಲಿ ಉಣಿಸುವ, ಎತ್ತು ಸತ್ತರೆ ಬಂಡಿಯ ಮೇಲೆ ಸಾಗಿಸು ಅಂಶಗಳು ಕಂಡು ಬರುತ್ತವೆ. ಕಲ್ಲೂರು ಗ್ರಾಮದ ಶಾಸನದಲ್ಲಿ ಕಟ್ಟಳೆಯಾಗಿ ಈ ರೀತಿ ಹೇಳಲಾಗಿದೆ. ".............ಕಾರಹುಂಣವೆ ದಿನದಲು ಯೇತ್ತುಗಳನು ವೊಡಿಸಿ ಅ (ಗಿ) ಖರಿಯ (ರಿ/ಯ) ಲು ಯೆತ್ತುಗಳು ಕಟುಬಾಯಲಿ ಉಣುಸುವುದು ಯೆತುಗಳು ಅಮವಾಸ ದಿನ ಹೋದಲಿಲಲು (ಆರಡಯ?) ುಸು ದಿನದಲು ಮುಂತಾಯರ ಮಾಡಲಾಗದು ದೀಪಾವಳಿ ಪಾಡ್ಯದ ದಿವಸ.......ಯ ವೊಂತಪಿಲ್ಲಹೊಲದೊಳಗೆ ಸುಮಗವಯಾಳುಮಗ ಬಸವಂಣನ ಊಣುಸೋದು ಯೇತ್ತು ಸತರೆ ಭಂಡಿ ಮೇಲೆಸಾಕಿವೊಂಯು ಬೇಕು. ಏಧಿಯದಿಯಲು ಸಂದಿ ಮುಳಿವಾಗಿ ಮತು ಆಲು ಯಂಮೆಗಳಿಗೆ

ಉಣುಸೋದು ಯೆತ್ತು ಸತ್ತರೆ ಆಸ್ತಿಯ..............”[೩೯] ಎತ್ತುಗಳನ್ನು ಶೃಂಗಾರ ಮಾಡಿ ಕಾರಹುಣ್ಣಿಮೆ, ದೀಪಾವಳಿಯಲ್ಲಿ ಓಡಿಸಲಾಗುತ್ತದೆ. ಎತ್ತು ಸತ್ತರೆ ಬಂಡಿಯ ಮೇಲೆ ತೆಗೆದು ಕೊಂಡು ಹೊಗಿ ಹೂಳುವ ಅಂಶವು ಕಾಣಸಿಗುತ್ತವೆ.

ಮೇಲುಕೋಟೆಯ ಶಾಸನವೊಂದರಲ್ಲಿ ಎತ್ತು ಕಟ್ಟುವ ಮೊರಡಿಯ(ಹುಲ್ಲು ಗಾವಲು) ಉಲ್ಲೇಖ ಕಂಡು ಬರುತ್ತವೆ. “............ಪರಾಂಕುಶ ಸಮುದ್ರದ ಕೆಱೆಯ ಕೋಡೀ ನೀರು ಹಾಯಿದಾಗಡ್ಡೆತೆಂಕ ಸೀಮೆ ಮೇರಿಯಾಗಿ.............ಕೊರ್ಂಡುಯಿಹ ಸೀಮೆಯಿಂ ಬಡಗಲು ಎತ್ತುಗಟ್ಟುವ ಮೊರಡಿಯ ಚೆಲುಂಮ............”[೪೦] ಕೆರೆಯ ಕೋಡಿಯ ನೀರು ಹಾಯುವ ಜಾಗದಿಂದ ಉತ್ತರದ ಸೀಮೆಯವರೆಗೆ ಎತ್ತು ಕಟ್ಟು ಮೊರಡಿಯೆಂದು ಗುರುತಿಸಲಾಗಿದೆ. ಇದು ಎತ್ತುಗಳ ಮೇಯಿಸುವ ಹುಲ್ಲುಗಾವಲು ಆಗಿರಬೇಕು.

ಒಟ್ಟಾರೆಯಾಗಿ ಸುಂಕ ವಿಧಾನದಲ್ಲಿ ಸಂತೆಸುಂಕ, ಮಾರಾಟಸುಂಕ, ಬೆಳೆಸುಂಕ, ಸ್ಥಳಸುಂಕ, ಒಕ್ಕಲು ಸುಂಕ ಮತ್ತು ಎತ್ತಿನ ಸುಂಕ ಕುರಿತಾದ ಮಾಹಿತಿ ಅನೇಕ ಶಾಸನಗಳಲ್ಲಿ ಕಾಣಸಿಗುವುದನ್ನು ಸಂಗ್ರಹಿಸಿ ಹೇಳಲಾಗಿದೆ.

೨. ಕೈಫಿಯತ್ತುಗಳು

ಪ್ರಾಚೀನ ಕಾಲದ ಇತಿಹಾಸದ ಘಟನೆಗಳನ್ನು ಕಟ್ಟಿಕೊಡುವ ಆಕರಗಳಲ್ಲಿ ದಾಖಲು ಸಾಹಿತ್ಯವು ಒಂದು. ಅದರಲ್ಲಿ ಪ್ರಮುಖವಾಗಿ ಶಾಸನ, ಕಡತ, ನಿರೂಪ, ಭಿನ್ನವತ್ತಳೆ, ಬಖೈರು, ನಾಮೆ, ಸ್ಥಳಪುರಾಣ, ಕೈಫಿಯತ್ತುಗಳು ಮುಖ್ಯವಾದವುಗಳು. ಭೂತಕಾಲವು ವರ್ತಮಾನವನ್ನು ನಿಯಂತ್ರಿಸುತ್ತದೆ ಹಾಗೆಯೇ ವರ್ತಮಾನದ ಬೇರುಗಳನ್ನು ಗತಕಾಲದಲ್ಲಿ ಮಾನವ ಜನಾಂಗ ಶೋಧಿಸುತ್ತಲೇ ಇರುತ್ತದೆ. ಆ ಕಾರಣದಿಂದ ಆಕರಗಳನ್ನು ಶೋಧಿಸುವ ಕಾರ್ಯದಲ್ಲಿ ಅನೇಕರು ತೊಡಗಿಸಿಕೊಂಡಿದ್ದಾರೆ.

ಕರ್ನಾಟಕದ ಕೈಫಿಯತ್ತುಗಳು ಕುರಿತು ಎಂ.ಎಂ.ಕಲಬುರ್ಗಿಯವರು ಹೇಳುತ್ತಾ “ಪ್ರಾಚೀನ ಕರ್ನಾಟಕದ ಆಕರ ಸಾಮಾಗ್ರಿಗೆ ಸಂಬಂಧಪಟ್ಟ ಒಂದು ಹೊಸ ಚಿನ್ನದ ಗಣಿ. ಗಣಿಯ ಅದಿರಿನಂತೆ ಸತ್ಯ, ಅಸತ್ಯಗಳ ಮಿಶ್ರಣವಾಗಿದ್ದರೂ ಒಡೆದು ಕಾಣುವ ಅಸತ್ಯಗಳಿಂದ ಸತ್ಯಗಳನ್ನು ಸಹಜವಾಗಿ ಬೇರ್ಪಡಿಸಿಕೊಳ್ಳಬಹುದಾಗಿದೆ”[೪೧] ಎಂದು ಅಭಿಪ್ರಾಯ ಪಡುತ್ತಾರೆ. ಕೈಫಿಯತ್ತುಗಳ ಅರ್ಥ ಮತ್ತು ಸ್ವರೂಪ ಕುರಿತು ಕೆ. ರವೀಂದ್ರನಾಥರವರು ದಾಖಲು ಸಾಹಿತ್ಯ ಎಂಬ ಕೃತಿಯಲ್ಲಿ ವಿವರಣೆ ಕೊಡುತ್ತಾ “ಅರೇಬಿಕ್ ಭಾಷೆಯಲ್ಲಿ ಕೈಫಿಯತ್ತು ಪದಕ್ಕೆ ‘statemaent; ‘Event’ ಎಂಬ ಅರ್ಥಗಳಿವೆ. ಕನ್ನಡದಲ್ಲಿ ಸಾಮಾನ್ಯವಾಗಿ ‘ಸಮಾಚಾರ’ ಎಂಬರ್ಥದಲ್ಲಿ ಬಳಕೆಯಾಗಿದ್ದು ಈ ಮಾತು ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ಕನ್ನಡಭಾಷೆಗೆ ಬಂದು ಸೇರಿ, ಹೈದ್ರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಕನ್ನಡ ನಾಡಿನಲ್ಲೆಲ್ಲಾ ವಿಶೇಷವಾಗಿ ಪ್ರಚಾರಗೊಂಡಿತು. ಅಂದಿಗಾಗಲೇ ಈ ಮಾತಿನ ಅರ್ಥ ವಿಶಾಲಗೊಂಡು ಚಾರಿತ್ರಿಕ ನಿರೂಪಣೆಯೆಂಬ ಬಣ್ಣವೂ ಬಂದಿತು. ಕಿಟಲ್ ಕೋಶದಲ್ಲಿ statement, an affair, a case ಎಂಬ ಮೂರು ಅರ್ಥಗಳನ್ನು ಉಲ್ಲೇಖಿಸಲಾಗಿದೆ. ಅದೇ ರೀತಿ ಸಾಹಿತ್ಯ ಪರಿಷತ್ತು ನಿಘಂಟವಿನಲ್ಲಿ ಸ್ಪಷ್ಟವಾದ ಹೇಳಿಕೆ, ವಿವರಣೆ, ಆಜ್ಞಾಪತ್ರ, ತಿಳುವಳಿಕೆ ಪತ್ರ, ವ್ಯಾಜ್ಯದಲ್ಲಿ ಪ್ರತ್ಯಾರೋಗಳಿಗೆ ಮೊದಲಬಾರಿಗೆ ಕೊಡುವ ಲಿಖಿತ ಉತ್ತರ, ವಿವರಗಳನ್ನೊಳಗೊಂಡ ದಾಖಲೆ ಎಂಬ ಅರ್ಥಗಳಿವೆ. ಮಲೆಯಾಳಂ ಮತ್ತು ತೆಲುಗು ಭಾಷೆಗಳಲ್ಲಿ ಕೈಫಿಯತ್ತು ಪದಕ್ಕೆ ಸಂಗತಿ –ವಿವರಣೆ ಎಂಬ ಅರ್ಥವಿದೆ. ಮರಾಠಿ

ಮತ್ತು ಹಿಂದೂಸ್ಥಾನಿ ಭಾಷೆಗಳಲ್ಲಿ ಸ್ಪಷ್ಟವಾದ ಹೇಳಿಕೆ ಅಥವಾ ವಿವರಗಳ ದಾಖಲೆ ಎಂಬ ಅರ್ಥಗಳು ಪ್ರಚಲಿತವಾಗಿವೆ. ಕನ್ನಡದಲ್ಲಿ ಬಳಕೆಯಾಗುತ್ತಿದ್ದ 'ದೂರು' ಮತ್ತು 'ಭಿನ್ನಪ' ಎಂಬ ಪದಗಳ ಪರ್ಯಾಯ ಪದ ಕೈಫಿಯತ್ತು ಎಂಬುದಾಗಿ ಕೆದಿಲಾಯರು ಅಭಿಪ್ರಾಯ ಪಡುತ್ತಾರೆ.

ಇಲ್ಲಿ ದೂರು ಎಂಬ ಪದವೇ ಸೂಕ್ತವಾದುದೆಂದು ಬಿಳಿಮಲೆಯವರು ತಿಳಿಸುತ್ತಾ ಇಂದಿಗೂ ಹಳ್ಳಿಗಳಲ್ಲಿ ದೂರು ಕೊಟ್ಟ ಎಂಬುದಕ್ಕೆ ಕೈಫಿಯತ್ತು ಹಾಕಿದ ಎನ್ನುವುದುಂಟು. ಹಳೆಗನ್ನಡ ಕಾವ್ಯಗಳಲ್ಲಿಯೂ ಭಿನ್ನಪವೆಂಬ ಪದವು ಇದೆ; ಇದೇ ಅರ್ಥದಲ್ಲಿ ಬಳಕೆಗೊಂಡಿದೆ. ಎಂದು ತಿಳಿಸಿ ಚಿಕ್ಕದೇವರಾಜ ಭಿನ್ನಪ "ಯಾದವಗಿರಿ ನಾರಾಯಣನಡಿದಾವರೆಗಳ್ಗೆ ಬಿಂನಪಂಗೆಯ್ವ ನೆವದೊಳ್ ಮೂವತ್ತು ಬಿನ್ನಪಂಗಳಂ ಪವಣ್ಗೆಯ್ದಂ" ಎಂಬ ನಿದರ್ಶನದ ಮೂಲಕ ಬಿನ್ನಪ ಎಂಬುದಕ್ಕೆ ಅರಿಕೆ ಮಾಡಿಕೊಂಡನೆಂಬ ಅರ್ಥವಿದೆ"[೩೭]

ಒಟ್ಟಿನಲ್ಲಿ ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕೈಫಿಯತ್ತುಗಳು ಒಂದು ನಾಡಿನ, ಪ್ರದೇಶದ, ಜನಾಂಗದ, ಸಮುದಾಯದ ಎಲ್ಲಾ ಕ್ಷೇತ್ರಗಳ ಅಧ್ಯಯನದ ಜೊತೆಗೆ ಮಾಹಿತಿಯನ್ನು ತಿಳಿಸಿಕೊಡುವ ಮಹತ್ವದ ದಾಖಲೆಗಳಾಗಿ ಕಂಡುಬರುತ್ತವೆ.

ಕೈಫಿಯತ್ತುಗಳನ್ನು ಒಂದು ಬಗೆಯ ವಿಶಿಷ್ಟ ದಾಖಲೆಗಳಂದೇ ಹೇಳಬಹುದಾಗಿದೆ. ಏಕೆಂದರೆ ಕೃಷಿ, ವಾಣಿಜ್ಯ, ಇತ್ಯಾದಿ ಅಂಶಗಳನ್ನು ಒಳಗೊಂಡ ಕೆಲವು ಕೈಫಿಯತ್ತುಗಳನ್ನು ಗುರುತಿಸಿ ಈ ಕೆಳಗಿನಂತೆ ಚರ್ಚಿಸಲಾಗಿದೆ. ಕೃಷಿ ಮತ್ತು ವಾಣಿಜ್ಯ ವಿಷಯಗಳ ವಿವರಣೆಯನ್ನು ಒಳಗೊಂಡ ಕೈಫಿಯತ್ತುಗಳಲ್ಲಿ ಆಹಾರ ಧಾನ್ಯಗಳು, ವಾಣಿಜ್ಯ ಬೆಳೆಗಳು ಮತ್ತು ನೀರಾವರಿ, ತೋಟದ ಬೆಳೆಗಳ ವಿವರ ಹಾಗೂ ಭೂಮಿಯ ಉಳುಮೆ ಮತ್ತು ಮಾರಾಟದ ವ್ಯವಸ್ಥೆಯಲ್ಲಿ ಸಾಗಾಣಿಕೆ ಅಳತೆ ಮಾಪನಗಳನ್ನು ಕುರಿತು ವಿವರಗಳು ದೊರೆಯುತ್ತವೆ. ನಗರ ಸೀಮೆ ಕೈಫಿಯತ್ತಿನಲ್ಲಿ ದವಸ ಧಾನ್ಯಗಳ ವಿವರ ತೋಟಗಳ ಮತ್ತು ಮೃಗಜಾತಿಗಳ ವಿವರ ಕುರಿತು ಮಾಹಿತಿ ದೊರೆಯುತ್ತದೆ. "............ ೧ ಮೂಲೆಸ್ಥಾನೇಶ್ವರನ ಗುಡಿ ಗ್ರಾಮದಲ್ಲಿ ಯಿರುವ .... ಬಸ್ತಿ ಗುಡಿ ತೋಟಗಳು ಯಿರ್‍ರು ವಿವರಾ ೪ ತೆಂಗಿನ ತೋಟ, ೧ ಅಡಕೆ ತೋಟ, ೩ ಯಲೆ ತೋಟ, ಪಾಳುಯಲೆ ತೋಟ೨, ೧ ಹುಣಸೇಮರ ಮಾವಿನಮರ ತೋಪು ಮೃಗಗಳ ಜಾತಿ ವಿವರ; ಕರಡಿ ತೋಳ ಕುನ್ನಿಯಿಲ್ಲಿ ಗತಿ ಬಂದುತಿರುಗಾಡುತ್ತವೆ. ದವಸ ಧಾನ್ಯದ ವಿವರ ಜೋಳಾ, ರಾಗಿ, ಹುರುಳಿ, ಹಾರಕ, ಅವರೆ, ಹೆಸರು, ಹತ್ತಿ, ಭತ್ತ, ಅಕ್ಕಿ ಸ್ವಲ್ಪ ಅಡಕೆ ವರುಷ ಆಗುತ್ತಯಿದೆ. ಯಿಲ್ಲಿ ಯಿದ್ವಾ ವರುಷಯಿಲ್ಲಾ "[೩೮]

ಮೂಲಸ್ಥಾನೇಶ್ವರ ಗುಡಿ ಗ್ರಾಮದಲ್ಲಿರುವ ಬಸ್ತಿ ಗುಡಿಯ ಹತ್ತಿರವಿರುವ ಕೈಫಿಯತ್ತಿನಲ್ಲಿ ತೆಂಗಿನ ತೋಟ, ಅಡಕೆತೋಟ, ಎಲೆತೋಟ, ಪಾಳು ಎಲೆತೋಟ ಹಾಗೂ ಹುಣಸೆ, ಮಾವಿನಮರಗಳ ತೋಪುಗಳ ವಿವರ ದೊರೆಯುತ್ತದೆ. ಅಲ್ಲದೇ ಆಹಾರಧಾನ್ಯಗಳಾದ ಜೋಳ, ರಾಗಿ, ಹಾರಕ, ಭತ್ತ ಮತ್ತು ದ್ವಿದಳ ಧಾನ್ಯಗಳಾದ ಅವರೆ, ಹುರುಳಿ, ಹೆಸರು ಹಾಗೂ ಹತ್ತಿ ವಾಣಿಜ್ಯ ಬೆಳೆಗಳಾದ ಅಡಕೆಯ ಮಾಹಿತಿ ದೊರೆಯುತ್ತದೆ. ಇದೇ ರೀತಿ ಮಾಹಿತಿಯನ್ನು ಕುರುಗೋಡು ಕೈಫಿಯತ್ತಿನಲ್ಲಿ ಆ ಸೀಮೆಯ ಪ್ರದೇಶದಲ್ಲಿ ಬೆಳೆಯುವ ಜಿನಸುಗಳ ವಿವರವನ್ನು ಕಾಣಬಹುದಾಗಿದೆ. ದರೋಜಿ ಗ್ರಾಮದ ಕೈಫಿಯತ್ತಿನಲ್ಲಿ ಈ ಸೀಮೆಯಲ್ಲಿ ಬೆಳೆದ ಧಾನ್ಯಗಳ ವಿವರ ದೊರೆಯುತ್ತದೆ. ವಿಶೇಷವಾಗಿ ಕಾರ್ತಿಕ ಮಾಸದಲ್ಲಿ ಬಿತ್ತನೆ ಮಾಡುವ ಭತ್ತದ ತಳಿಗಳ ವಿವರ ಮತ್ತು ವೈಶಾಖ ಮಾಸದಲ್ಲಿ ಬಿತ್ತನೆ ಮಾಡುವ ರಾಗಿ, ಭತ್ತದ ವಿವರ ದೊರೆಯುತ್ತದೆ.

"ದರೋಜಿ ಸೀಮೆವಳಗೆ ಬೆಳೆದ ಧಾನ್ಯ

ಜೋಳಾ, ಸಜ್ಜೆ, ನವಣೆ, ಯಳ್ಳು, ತೊಗರಿ, ಹ್ಯಸರು, ಅವರೆ, ಅಲಸಂದಿ, ಹತ್ತಿ, ಹುರುಳಿ, ಪುಂಡಿ, ನೀರುಜೋಳ, ನವಣಿ, ರಾಗಿ, ಜವೆ, ಕಡ್ಲೆ, ಸಾಸ್ವಿ, ೫ ಕಾರ್ತಿಕ ಫಲಕ್ಕೆ ಗರಗನೆಲ್ಲು, ಶಿಪಾಯಿನೆಲ್ಲು, ಕರೆಸಣ್ಣನೆಲ್ಲು, ಜನ್ನದಾರಿ, ಆನೆಗುಂದಿ, ಮರಸಣ್ಣನೆಲ್ಲು ೪ವೈಶಾಖ ಫಲ ೧ಕ್ಕೆ, ಶಿರಂಗಾ, ಅವಸರರಾಗಿ, ಡುಗ್ಗನೆಲ್ಲು, ಮಾರಟಿಗ"[೩೪] ಎಂದಿದೆ. ಹತ್ತಿ ಬೆಳಗಲು ಕೈಫಿಯತ್ತಿನಲ್ಲಿ ಧಾನ್ಯಗಳ ವಿವರ ಕುರಿತು ಮಾಹಿತಿಯನ್ನು ಕಾಣಬಹುದು. ಹಿರೇಹಾಳು ಕೈಫಿಯತ್ತು ಆಹಾರ ಧಾನ್ಯಗಳ ಜೊತೆಗೆ ಕಾಯಿಪಲ್ಲೆ ದಿನಸುಗಳ ಮತ್ತು ಸೊಪ್ಪುಪಲ್ಲೆ ಕುರಿತಾದ ವಿವರಣೆ ದೊರೆಯುತ್ತದೆ. "...........ಗ್ರಾಮದ ಉತ್ತರಭಾಗದಲ್ಲಿ ಸುಗ್ಲಮ್ಮನ ಗುಡ್ಡದಲ್ಲಿ ಇರುವ ದೇವತಾಗವಿ – ಬದನೆಕಾಯಿ, ಬೆಂಡೆಕಾಯಿ, ಚೆಳ್ಲವರೆಕಾಯಿ, ಹೀರೇಕಾಯಿ, ಕುಂಬಳಕಾಯಿ, ಮೆಣಸಿನಕಾಯಿ, ಹಾಲಗುಂಬಳಕಾಯಿ, ತುಪ್ಪಹೀರೇಕಾಯಿ, ಹರ್‍ವಿಪಲ್ಲೆ, ರಾಜಗಿರಿ, ಮಂತೆ, ಸಬ್ಬಸ್ಕಿ, ಕೊತು...... ಬಸಲಿ"[೩೫] ಎಂದು ಹೇಳಲಾಗಿದೆ.

ಕಮಲಾಪುರದ ಕೈಫಿಯತ್ತಿನಲ್ಲಿ "ಉತ್ತರ ದಿಕ್ಕಿಗೆ ಆನೆಗೂಂದಿ ಮುಂಟೊ ಹೊಳೆರಾಯನ ಸೀಮೆ ಮೇಲೆ ಹಾದು ಮೊಗಲಾಯಿ .... ಮೂರು ಕಲ್ಲು ಕನಕಗಿರಿ ಸೀಮೆಗೆ ಭಾರಿ ಮಾರ್ಗ ಈ ಗ್ರಾಮದಲ್ಲಿ ಹುಟ್ಟುವಂತಹ ಧಾನ್ಯ ದಿನಸುಗಳು ೧ ಜೋಳ, ಸಜ್ಜೆ, ಹೆಸರು, ಹುರುಳಿ, ಅವರೆ, ತೊಗರಿ, ಯೆಳ್ಳು, ಗುರ್‍ಎಳ್ಳು, ಪುಂಡಿ, ಕಡ್ಲಿ, ನವಣೆ=೧೧ ಧಾನ್ಯಗಳ ಪೈಕಿ ಯಿಕ್ಕೇರಿಯಿಂದ ಯಿಲ್ಲಿಗೆ ಬರುವಂಥ ಧಾನ್ಯಗಳ ಜಿನಸು; ೧ ಸಣ್ಣನೆಲ್ಲು, ೧ ಶಿರಂಗನನೆಲ್ಲು, ೧ ಕಾಮದಾರಿ, ೧ಮರಸಣ್ಣನೆಲ್ಲು, ೧ಕಬ್ಬು, ೧ತೆಂಗು –ಯೀ ಪ್ರಕಾರಕ್ಕೆ ಬೆಳೆವುತ್ತ ಯಿದ್ದಾವೆ ಕಲಮು"[೩೬] ಈ ಕೈಫಿಯತ್ತಿನಲ್ಲಿ ಬಯಲು ಸೀಮೆಯ ಧಾನ್ಯಗಳ ವಿವರ ಮತ್ತು ಮಲೆನಾಡು ಪ್ರಾಂತ್ಯದ ಧಾನ್ಯಗಳ ವಿವರವನ್ನು ಕಾಣುತ್ತೇವೆ. ಬನವಳ್ಳಿ ಬಣಜಿಗರು ಕೈಫಿಯತ್ತಿನಲ್ಲಿ ವ್ಯಾಪಾರ ವಹಿವಾಟು ವಿವರಗಳನ್ನು ಕಾಣಬಹುದಾಗಿದೆ. "......... ಯಿ ಸ್ಥಳದ ಶೀಮೆಯಲ್ಲು ಹುಟೊ ಜಿನಸು, ಅಡಿಕೆ೧, ಮೆಣಸು೧, ಯಾಲಕ್ಕಿ೧, ಭತ್ತ೧, ರಾಗಿ೧, ಬೆಲ್ಲ೧, ಹುಣಸೆಹಣ್ಣು೧, ಮೆಣಸಿನಕಾಯಿ೧, ತೆಂಗಿನಕಾಯಿ೧, ಬಾಳೆ೧, ಯೆಳ್ಳು ಖೂರಾಗಾನಿ೧, ಅವಂಲ್ಲಧಾ೧, ಹುರುಳಿ೧, ವುದ್ದ೧, ಹೆಸರು೧, ಅರಿಶಿನಶೊಂಠಿ, ಯೀ ಶೀಮೆಯಿಂದ ಹೊರಗಿನ ಶೀಮೆಗೆ ಹೋಗುವ ಜಿನಸು: ಅಡಕೆ ಯಾಲಕ್ಕಿ ಮೇಣಸು ವುತ್ತರ ಪೂರ್ವ ಯರಡು ಕಡೆ ಸಾಗುತದ.

ವುತ್ತರ ದೇಶದಿಂಧ ಬಾಹೊದು: ಬೈಲ ಶೀಮೆಯಿಂದಾ ಬರೊ ಜಿನಸು; ಜವಳಿ ತಂಬಾಕು ಗೋಧಿ ಕಡಲೆ, ಅವರೆ ಸಾಸಿವೆ ಮೆಂತ್ಯ ಯೆಳ್ಳು ಕೊತ್ತುಂಮರಿ ಶುಂಠಿ ಸಕ್ರೆ ಜೀರಿಗೆ ವುಳ್ಳಿಗಡ್ಡೆ ಬೆಳ್ಳೊಳಿ ತೆಂಗ, ಸಾಮೆ ನವಣೆ ಜೋಳ, ಪೂರ್ವದಿಂದಾ ಲವಂಗ ಜಾಜಿಕಾಯಿ ಪತ್ರೆ ಜವಳಿ ರೇಶಿಮೆ ಖಿನಾತು ಅಫಿಮು ಕಾಚು ಮುಂತಾದ್ದು ಬರುತ್ತಾಯಿಧೆ. ಪಶ್ಚಿಮ ಹದಿನ ಬಾಹೊ ಜಾಜಿಕಾಯಿ, ಖರ್ಜೊರ, ಸೆಂಗಾ, ಗಂಧಕಾ, ಹರಿದಾಳ, ಯಿಂಗು ಮತ್ತು ದೀಪದ್ರಾಕ್ಷಿ ಬರುತ್ತಾಯಿದೆ"[೩೭] ಈ ಕೈಫಿಯತ್ತಿನಲ್ಲಿ ಆಹಾರ ಧಾನ್ಯಗಳು ಜೊತೆಗೆ ತೋಟದ ಬೆಳೆಗಳು ಹೊರಗಿನ ಪ್ರದೇಶಕ್ಕೆ ಹೋಗುವ ಅಡಿಕೆ, ಯಾಲಕ್ಕಿ, ಮೆಣಸು, ಉತ್ತರ ಮತ್ತು ಪೂರ್ವ ಎರಡು ದಿಕ್ಕಿಗೂ ಸಾಗಿಸುತ್ತಿದ್ದ ವಿವರ, ಉತ್ತರ ದೇಶದಿಂದ ಬರುವ ಜವಳಿ ತಂಬಾಕು, ಗೋಧಿ, ಕಡಲೆ, ಅವರೆ, ಸಾಸಿವೆ ಇತ್ಯಾದಿ ಜಿನಸುಗಳ ವಿವರ ದೊರೆಯುತ್ತದೆ. ಅಲ್ಲದೇ ಪಶ್ಚಿಮ ದಿಕ್ಕಿನಿಂದ ಜಾಜಿಕಾಯಿ, ಖರ್ಜೂರ, ಶೇಂಗಾ, ಗಂಧಕ, ಹರಿದಾಳ, ಯಿಂಗು ಮುಂತಾದ ದಿನಸುಗಳು ಬರುವ ವಿವರ ದೊರೆಯುತ್ತದೆ.

ಬಂಜಾರಿ ಕೈಫಿಯತ್ತಿನಲ್ಲಿಯೂ ವ್ಯಾಪಾರ ಮಾಡುವ ಜಿನಸಿನ ವಿವರ ದೊರೆಯುತ್ತದೆ. ಕುಂದಾಪುರ ಕೈಫಿಯತ್ತಿನಲ್ಲಿ ರೈತರ ಕಡೆಯಿಂದ ತೆಗೆದುಕೊಂಡು ದಿನಸಿಗಳನ್ನು ಮಾರಾಟಮಾಡುವ ಅಕ್ಕಿ, ಅಲಸಂದಿ, ಹುರುಳಿ, ಹೆಸರು, ತೊಗರಿ, ರಾಗಿ ಇವುಗಳಿಗೆ ಸುಂಕವಿಲ್ಲ. ತೆಂಗಿನಕಾಯಿ, ಬೆಲ್ಲ, ಅಡಕೆಫೋಟು, ಚಿಕಣಿ ಅಡಕೆಗೆ ಸುಂಕವನ್ನು ಪಡೆದುಕೊಳ್ಳುವ ಮಾಹಿತಿ, ಕೆಲವು ವಸ್ತುಗಳಿಗೆ ಸುಂಕ ಮಾಪು ಮಾಡಿದ ವಿವರ ದೊರೆಯುತ್ತದೆ.

"ಕುಂದಾಪುರ ಗಂಗೊಳ್ಳಯಿಂದ ದಿನಸು ವಗ್ಯೆರಾ ದೇಶಾಂತ್ರಕ್ಕೆ ಹೋಗುವುದು ೧-ಅಕ್ಕಿ ದಿನಸು ೧ಕ್ಕೆ ಮುಡೆ ೧ಕ್ಕೆ ಪಕ್ಕಸೇರು ಮೂವತ್ತೈದು ಮೇರೆಗೆ. ಮುಡೆ ೪೨ಕ್ಕೆ ಕೊರಜಿ ೧ಕ್ಕೆ ಖರೀದಿಯಲ್ಲಿ ಯಿದ್ದು, ಸಾವುಕಾರು ಕ್ರೋಧನ ಸಂವತ್ಸರ ಪುಷ್ಯಮಾಸದಲ್ಲಿ ರೈತರ ಕಡೆಯಿಂದಾ ತೆಗೆದುಕೊಂಡಿದ್ದು ಅಲಸಂದಿ ಯಿದು ತೆಗೆದುಕ್ಕೊಂಬುವರು ಕೊರಜಿ ೧ಕ್ಕೆ ಬಹದರಿ ೧೩ ವರಹಾ ಮೇರೆಗೆ ಸಾವಕಾರಗೆ ಕೊಡುವದು ಬಹದರಿ ವರಹಾ ೧೩॥೦ ಮೇರೆಗೆ ಕೊಡುತ್ತಾ ಯಿದ್ದಾರೆ. ಯಿದಕ್ಕೆ ಸುಂಕ ಪೂರ್ವಕ್ಕೆ ಅಕ್ಕಿ ಸುಂಕ್ಕೆ ಅರವಾಸಿ ಮೇರೆಗೆ ತೆಗೆದುಕೊಳ್ಳುತ್ತಾ ಯಿದ್ದಾರೆ. ಯೀಗ ಕುಂಪಣ ಅಮಲು ಆದ ಮೇಲೆ ಸುಂಕಾ ಮಾಫ ಮಾಡಿ ಯಿದ್ದಾರೆ"[೩೮] ಹೀಗೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೊರಗೆ ಹೋಗುವ ಹಾಗೂ ಅಲ್ಲಿಂದ ತರಿಸಿಕೊಳ್ಳುವ ಆಹಾರ ಜಿನಸುಗಳ ಹೆಸರುಗಳನ್ನು ಪಟ್ಟಿ ಮಾಡಿ ಕೊಡಲಾಗಿದೆ. ತುಳುವ ದೇಶದ ಕಡಬಾಸಂಸ್ಥಾನದ ಕೈಫಿಯತ್ತು ಹೀಗೆ ವಿವರಿಸುತ್ತದೆ. "......... ಯೀ ಕಡಬದ ಸಂಸ್ಥಾನದಲ್ಲು ಕಸಬಾ ಕಡಬದ ಮಾಗಣೀಗೆ ಯಿರುವ ಗ್ರಾಮದ ವಿವರ; ಐನ ಕಡಬ ಗ್ರಾಮವೊಂದು, ಯೆಳೆಯೂರ ಗ್ರಾಮವೊಂದು, ಕೊಡೆಂಬಳಗ್ರಾಮ೧- ಅಂತು ಗ್ರಾಮ ೩ ಯೀ ದೇಶದಲ್ಲಿ ಪರಶುರಾಮರ ಶಾಪದಿಂದಾ ಭೂಮಿ ಬೆಳೆಯುವದಿಲ್ಲದ ಕಾರಣ ಭೂಮಿಗಳ ಸುಟ್ಟಫಲಗಳು ಹಾಕಿದರೆ ಪಯಿರು ಕೊಡುತ್ತದೆ. ಯಿಲ್ಲಿ ಪೈರು ಆಗುವ ಧಾನ್ಯದ ವಿವರಾ; ೧ ಬತ್ತಾ;೧ ಸಣ್ಣ ಮೆಣಸು,೧ಅಡಕೆ"[೩೯]

ಭೂಮಿಯನ್ನು ಸುಟ್ಟು ಬೆಳೆ ಬೆಳೆಸುವ ವಿಷಯ ತಿಳಿದು ಬರುತ್ತದೆ. ಇಂದು ಕೂಡ ಮುಂಗಾರು ಮಳೆ ಬೀಳುವುದಕ್ಕಿಂತ ಮೊದಲು ಭೂಮಿಯಲ್ಲಿರುವ ಕಸ ಕಡ್ಡಿಯನ್ನು ಆರಿಸಿ ಸುಟ್ಟು ಹಾಕುವ ಪದ್ಧತಿ ಕಂಡುಬರುತ್ತದೆ. ರೈತರು ಭೂಮಿಯನ್ನು ಹೆಂಟೆ ಬರುವಂತೆ ಮಡಿಕೆ ಹೊಡೆದು ಭೂಮಿ ಬಿಸಲು ತಿನ್ನಲು ಬಿಡುತ್ತಿದ್ದರು. ಹೀಗೆ ಮಾಡುವುದರಿಂದ ಫಸಲು ಚೆನ್ನಾಗಿ ಬರುತ್ತದೆಂಬ ಅನುಭವ ಕೃಷಿಕರದು. ಇಲ್ಲಿ ಬೆಳೆಯುವ ಪೈರುಗಳು ಭತ್ತ, ಸಣ್ಣಮೆಣಸು, ಅಡಕೆ ಇತ್ಯಾದಿಯಾಗಿರುತ್ತದೆ. ಅಷ್ಟಗ್ರಾಮಗಳ ಕೈಫಿಯತ್ತಿನಲ್ಲಿ ಕೆರೆ, ಕಾಲುವೆ ನೀರನ್ನು ಬಳಸುವ ಅಚ್ಚುಕಟ್ಟು ಗದ್ದೆಯ ಪ್ರದೇಶದಲ್ಲಿ ಬೆಳೆಯುವ ಭತ್ತ, ಹುರುಳಿ, ತೊಗರಿ, ಹರಳು, ಯೆಳ್ಳು ಬೆಳೆಯುವ ಖಂಡುಗದ ಲೆಕ್ಕ ಮತ್ತು ನೀರು, ಮಣ್ಣಿನ ಕಂದಾಯದ ವಿವರಗಳು ತಿಳಿದುಬರುತ್ತದೆ. ಅಡಿಕೆ ಪೈರುಮಾಡುವ ವಿಧಾನವನ್ನು ಒಂದು ಕೈಫಿಯತ್ತು ಹೀಗೆ ತಿಳಿಸಿಕೊಡುತ್ತದೆ. "ಅಡಿಕೆಯನ್ನು ಮೊಳಕೆ ಬರಿಸಿ, ಅದು ೨ ಮೊಳದಷ್ಟು ಉದ್ದ ಬೆಳೆದಾಗ ೧೦ಹೆಜ್ಜೆಗೊಂದರಂತೆ ನೆಡಬೇಕು. ವರ್ಷಕ್ಕೊಮ್ಮೆ ಗಿಡಗಳಿಗೆ ಸೊಪ್ಪು ಗೊಬ್ಬರ ಹಾಕಿಕೊಂಡು ಬರಬೇಕು. ಈ ರೀತಿ ೧೨ ವರ್ಷಗಳ ಕಾಲ ಜೋಪಾನ ಮಾಡಿದರೆ ಹದಿಮೂರು, ಹದಿನಾಲ್ಕು ವರ್ಷಕ್ಕೆ ಹಿಂಗಾರ ಬಿಡುತ್ತದೆ. ಹದಿನೈದು ವರ್ಷಕ್ಕೆ ಪೂರಾ ಫಲ ಬಿಡುತ್ತದೆ. ಮರಕ್ಕೆ ತಿಂಗಳಿಗೊಂದು ಸಲ ನೀರು ಹಾಕಬೇಕು. ಐದು ಗಿದ್ದನದ ಭೂಮಿಗೆ ಸುಮಾರು ನೂರು ಮರ ನಿಲ್ಲುತ್ತದೆ. ನೂರು ಮರಕ್ಕೆ ೪೮ ಸೇರಿನ ಮುಡಿದಲ್ಲಿ ೪ ಮುಡಿ ೮ಸೇರು ಅಡಿಕೆಯಾಗುತ್ತದೆ"[೪೦] ಅಡಿಕೆ ನೆಡುವ ವಿಧಾನ, ಆರೈಕೆ

ಮಾಡುವ ಕ್ರಮ ಮತ್ತು ಎಷ್ಟು ವರ್ಷಕ್ಕೆ ಫಸಲು ಬರುತ್ತದೆ, ಮತ್ತು ಎಷ್ಟು ಪ್ರಮಾಣದ ಮರಗಳು ನಿಲ್ಲುತ್ತವೆ ಹಾಗೂ ನೂರು ಮರಕ್ಕೆ ಎಷ್ಟು ಪ್ರಮಾಣದ ಅಡಕೆ ಪೈರು ದೊರೆಯುತ್ತದೆ ಎಂಬ ಪರಿಪೂರ್ಣ ಮಾಹಿತಿ ದೊರೆಯುತ್ತದೆ.

ಒಟ್ಟಾರೆಯಾಗಿ ಆಹಾರಧಾನ್ಯ, ವಾಣಿಜ್ಯ ಬೆಳೆಗಳು ಮತ್ತು ತೋಟದ ಬೆಳೆಗಳ, ಸಾಂಬಾರ ಜಿನಸುಗಳ ವಿವರ ಹಾಗೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಾಣಿಕೆಯ ಮಾಹಿತಿ ಅಲ್ಲದೆ ಸುಂಕದ ವಿಧಾನ, ಸುಂಕ ನೀಡದೇ ಇರುವ ವಸ್ತುಗಳು, ಸುಂಕ ನೀಡಲೇ ಬೇಕಾದ ಪದಾರ್ಥಗಳನ್ನು ಕುರಿತು ವಿವರ ತಿಳಿದುಬರುತ್ತದೆ. ಭೂಮಿಯ ಬಿತ್ತನೆ ಕ್ರಮ ಹಾಗೂ ತೋಟಗಳಲ್ಲಿ ಅಡಕೆಪೈರು ಮಾಡುವ ವಿಧಾನವನ್ನು ಶಾಸ್ತ್ರೋಕ್ತವಾಗಿ ಹೇಳಿರುವ ಮಾಹಿತಿ ದೊರೆಯುತ್ತದೆ.

೩. ಬಿನ್ನವತ್ತಳೆ

ಚರಿತ್ರೆಯ ದೃಷ್ಟಿಯಿಂದ ಶಾಸನ, ಕೈಫಿಯತ್ತು, ನಿರೂಪ, ಕಡತಗಳಂತೆ ಭಿನ್ನವತ್ತಳೆ ಪ್ರಾಚೀನ ಕಾಲದ ಎಲ್ಲಾ ಬಗೆಯ ಇತಿಹಾಸವನ್ನು ಅರಿಯುವಲ್ಲಿ, ರಾಜರು ಕೊಡುವ ದಾನ, ಧರ್ಮ ಮುಂತಾದವುಗಳನ್ನು ಆಜ್ಞಾಪತ್ರದಂತೆ ಬರೆಸಿದ ದಾಖಲೆ ಭಿನ್ನವತ್ತಳೆ. "ಭಿನ್ನವತ್ತಳೆ ಅಂದರೆ ರಾಜ, ಸ್ವಾಮಿ, ಅಧಿಕಾರಿಗಳಿಗೆ ಒಪ್ಪಿಸುವ ಅರಿಕೆಯ ಓಲೆ, ಮನವಿಪತ್ರ ಅಥವಾ ವಿಜ್ಞಾಪನಪತ್ರ, ಪ್ರಾಚೀನ ಕಾವ್ಯ ಶಾಸನಗಳಲ್ಲಿ ಮಾನಪತ್ರ, ವಿಜ್ಞಾಪನೆ, ಮನವಿ ಎಂಬರ್ಥ ಬರುವ ಭಿನ್ನವತ್ತಳೆ ಎಂಬ ಉಲ್ಲೇಖ ಸಿಗುತ್ತವೆ; ಎಂದು ಡಾ.ಕೆ. ರವೀಂದ್ರನಾಥರವರು ಕನ್ನಡ ದಾಖಲು ಸಾಹಿತ್ಯ ಎಂಬ ಕೃತಿಯಲ್ಲಿ ವಿವರಿಸುತ್ತಾ ಮುಂದುವರೆದು ಇಂತಹ ಮನವಿ ರೂಪದ ವಿಜ್ಞಾಪನ ಪತ್ರಗಳಿಗೆ ಸಂಬಂಧಿಸಿದ ಕಡತಗಳಲ್ಲಿ ಭೂಮಿಸಾಗಿನ ಭಿನ್ನವತ್ತಳೆ, ಗ್ರಾಮಗುತ್ತಿಗೆ ಭಿನ್ನವತ್ತಳೆ, ಗೌಡಿಕೆ ಭಿನ್ನವತ್ತಳೆಗಳನ್ನು ಮನವಿ ರೂಪದಲ್ಲಿ ಉಲ್ಲೇಖಿಸುವುದನ್ನು ಕಡತಗಳಲ್ಲಿ ಕಾಣಬಹುದು ಎಂದಿದ್ದಾರೆ"೪೦೧

"........ ಗಿರಿಪುರವರಾಧೀಶ್ವರರಾದಂಥಾ। ಹರತ್ತಿ ನಿಡಗಲ್ಲು ಮುಮ್ಮಡಿ ಹೊಟ್ಟಣ್ಣನಾಯಿಕರವರು ಬರೆಸಿಕೊಟ್ಟ ದಾನ ಪಟ್ಟ ಕ್ರಮ । ವೆಂತೆಂದರೆ ವದಗಿದ ಕಲ್ಲು ಹೋಬಳ್ಳಿಯೊಳಗಣ । ಜಡೆಗೊಂಡ ಹಳ್ಳಿಗ್ರಾಮ ೧. ಈ ಗ್ರಾಮಕ್ಕೆ ಸಲ್ಲುವ ಕಾಡಾರಂಭ । ನೀರಾರಂಭ । ಯೋತ ಗೊಡೆ ಗುಯಿಲು ಕಾಲುವೆ ಕಪಿಲೆ ಹುಣಸಿ ಹುಲಿನಿಲು । ಮಾವುನೇಲ್ಲುರ್ಲ ಸ್ಥಳಸುಂಕ । ಯೆಳ್ಳುಸುಂಕ । ಜೀರಿಗೆ ಸುಂಕ । ಮದುವೆ ಹಣ । ಕಾವಲು ತೆರಿಗೆ । ರೋಖ ಪಾದಗಾಣಿಕೆ । ಯೆಣ್ಣೆತುಪ್ಪದ ಬಿರಾಡಸಹ । ಈ ಸಕಲ ಸುವರ್ಣಾದಾಯ ದವಸದಾಯ ಸಹಾ । ದುಡಿಸಿ ಅನುಭವಿಸಿಕೊಂಡು ನಮಗೆ ಅಶಿರ್ವಾದ ಮಾಡಿಕೊಂಡು ಇಹುದೆಂದು ಬರೆಸಿಕೊಟ್ಟ ದಾನ ಪಟ್ಟೆ"೪೦೨

ಈ ದಾನಪತ್ರದಲ್ಲಿ ಖುಷ್ಕಿ ನೀರಾವರಿ ಹೊಂದಿರುವ ಭೂಮಿಯ ಬಗ್ಗೆ ಉಲ್ಲೇಖಿಸಲಾಗಿದ್ದು. ನೀರಾವರಿಯಲ್ಲಿ ಬಳಕೆಯಾಗುವ ಯಾತ, ಗೋಡೆ, ಕಾಲುವೆ, ಕಪಿಲೆ ಮುಂತಾದ ವ್ಯವಸಾಯಕ್ಕೆ ಸಂಬಂಧಿಸಿದ ಮಾಹಿತಿ ದೊರೆಯುತ್ತದೆ. ಅಲ್ಲದೇ ಧಾನ್ಯಗಳ ಹೆಸರಿನ ಮೇಲೆ ಸುಂಕ ವಿಧಿಸುವ ಅಂಶ ತಿಳಿಯುತ್ತದೆ. "............ಶೃಂಗೇರಿ ಮಠಕ್ಕೆ ಹೊಲವನಹಳ್ಳಿ ಸೀಮೆ ಕಾಸೀಂಪುರದ ಹೋಬಳಿ ಹುಸೇನಪುರಕ್ಕೆ ಸೇರಿದ ವೆಂಕಟಾಪುರ ಗ್ರಾಮವನ್ನು ಸಮರ್ಪಿಸುವ ಈ ದಾನ ಪತ್ರದಲ್ಲಿ ಆ ಗ್ರಾಮಕ್ಕೆ ಸಲ್ಲುವ ಗದ್ದೆ, ಬೆದ್ದಲು ಅಣೆಅಚ್ಚುಕಟ್ಟು ಯಾತಕಪಿಲೆ ಗೋಡೆ ಗುಯಿಲು ಫಲವೃಕ್ಷ ಸಕಲ ಸುವರ್ಣಾದಾಯ ಧಾನ್ಯಾದಾಯವನ್ನು ...."೪೧೩

ನೀರಾವರಿ ಮತ್ತು ಖುಷ್ಕಿ ಭೂಮಿಯ ವಿವರ ಹಾಗೂ ಆಣೆಕಟ್ಟು ಕಟ್ಟಿ, ಅಚ್ಚುಕಟ್ಟಿನ ಪ್ರದೇಶಕ್ಕೆ ನೀರಿನ ಬಳಕೆ ಮಾಡುವ ವಿವರ ಕಪ್ಲಿ ಯಾತ, ಗೋಡೆ, ಕೊಯ್ಲುಗಳ ಮಾಹಿತಿ ದೊರೆಯುತ್ತದೆ. ಕೃಷ್ಣರಾಜರ ಪುತ್ರರಾದ ರಾಯಪ್ಪ ರಾಜರು ಬರೆಯಿಸಿಕೊಟ್ಟ ಕೂಡಲೀಕ್ಷೇತ್ರದ ಶೃಂಗೇರಿ ಶ್ರೀ ವಿದ್ಯಾಶಂಕರ ದೇವರ ದೀಪಾರಾಧನೆ ಬರೆಯಿಸಿಕೊಟ್ಟ "ಭೂದಾನ ಧರ್ಮಶಾಸನದಲ್ಲಿ ಎರೆನೆಲ, ಕೆನ್ನೆಲ, ಕಾಡಾರಂಭ, ನೀರಾವರಿ ಭೂಮಿ, ಕಾಲುವೆ ಅಚ್ಚುಕಟ್ಟು ಪ್ರದೇಶ, ಯಾತ ಮುಂತಾದ ವ್ಯವಸಾಯಕ್ಕೆ ಸಂಬಂಧಿಸಿದ ಅಂಶಗಳು ಕಂಡುಬರುತ್ತವೆ. ಅಲ್ಲದೇ ಹುಣಸೆ, ಮಾವು, ಭತ್ತಗಳಿಗೆ ಸ್ಥಳಸುಂಕ, ಮಾರ್ಗಸುಂಕ, ಜೀರಿಗೆಸುಂಕ, ಕಾವಲುತೆರಿಗೆ ಮುಂತಾದವುಗಳಿಗೆ ಹಾಕುವ ಸುಂಕದ ವಿವರ ಸಿಗುತ್ತದೆ"[೪೦೪]

"ಬಾಗಳಿ ಮುಮ್ಮಡಿ ಬಸಪ್ಪನಾಯಕ ಅಯ್ಯನವರು ಶ್ರೀ॥ .... ಪುಷ್ಪಕ್ಕೆ ಕೊಟ್ಟ ಭೂದಾನವೇನೆಂದರೇ ಯೀ ಶ್ರೀಸ್ವಾಮಿ ಪುಷ್ಪಕ್ಕೆ ಕೇಸರಹಳ್ಳಿ ಗ್ರಾಮದಲ್ಲಿ ಯರೇಹೋಲದ ಬೀಜವರೀಲ॥ ಹತ್ತು ಗಿದ್ದಿನದ ಹೊಲವನ್ನು ಧಾರಾದತ್ತವಾಗಿ ಕೊಟ್ಟುಯಿದ್ದೀತ ...."[೪೦೫] ಫಲವತ್ತಾದ ಯರೇಭೂಮಿಯನ್ನು ಹತ್ತು ಗಿದ್ದನ ಬೀಜ ಬಿತ್ತುವಷ್ಟು ಹೊಲವನ್ನು ಉದಾರವಾಗಿ ದಾನ ನೀಡಿದ ಉಲ್ಲೇಖ ಕಂಡುಬರುತ್ತದೆ.

"ಉಂಮ್ಮಳಿ ಗ್ರಾಮ ಹಿರೇಬಿದರೆ ಹ॥ ದಾರಗೌಡ.......... ಈ ಗ್ರಾಮದಲ್ಲಿ ಶೃಂಗೇರಿ ಶ್ರೀ .... ಯರೇಭೂಮಿಯೊಳಗೆ ಮ೨ಯರಡು ಮೂರು ಹೊಲವನ್ನು ದಾನ ಪಟ್ಟಿವ ಹಾಕಿಸಿಕೊಟ್ಟಿದ್ದಲ್ಲಿ ಯೀಗ ಯಿದರ ಬದಲು ಕರಿಕೆಪಟ್ಟೆವಳಗೆ ಮ೨ ಯರಡು ಮಾರುಭೂಮಿಯನ್ನು ದಾರದತ್ತವಮಾಡಿ ಕೊಟ್ಟಿದ್ದೇವೆ"[೪೦೬] ಗೊತ್ತಲ ಬೊಮ್ಮಪ್ಪ ಗೌಡರು ಶ್ರೀ ಶೃಂಗೇರಿ ಶ್ರೀಗಳಿಗೆ ಮೊದಲು ಯೆರೇಭೂಮಿ ೨ಮಾರು ಹೊಲವನ್ನು ದಾನವಾಗಿ ನೀಡಿದ್ದು, ಯೀಗ ಅದರ ಬದಲು ಕರಿಕಟ್ಟೆ ಒಳಗೆ ೨ಮಾರು ಭೂಮಿಯನ್ನು ದಾನಕೊಟ್ಟಿರುವ ವಿವರ ತಿಳಿದುಬರುತ್ತದೆ. ಇಲ್ಲಿ ಯರೇಭೂಮಿಯನ್ನು ಹಿಂದಕ್ಕೆ ಪಡೆಯುವ ಈ ಗೌಡರು ಕರಿಕೆಪಟ್ಟೆ ಹೊಲ ನೀಡುವುದನ್ನು ಗಮನಿಸಬಹುದಾಗಿದೆ. ಇದೆ ರೀತಿಯ ಭಿನ್ನವತ್ತಳೆಗಳು ಮಠ ಮಾನ್ಯಗಳಿಗೆ ದೇವಸ್ಥಾನದ ದೀಪರಾಧನೆ, ಪೂಜಾಕಾರ್ಯವನ್ನು ನೆರವೇರಿಸುವ ಪುರೋಹಿತರಿಗೆ, ಭೂದಾನವಾಗಿ ಕೊಟ್ಟ ಭಕ್ತಸಮೂಹ, ರಾಜಮಹಾಜರಾದ ಪಾಳೆಗಾರರು, ನವಾಬರು, ವಿಜಯನಗರ ಅರಸರು, ದೇಸಾಯಿಗಳು, ಮೈಸೂರು ಒಡೆಯರು, ಆಡಳಿತಾಧಿಕಾರಿ ಮುಂತಾದವರು ದಾನ ಕೊಟ್ಟ ವಿವರ ವಿಸ್ತಾರವಾಗಿ ದೊರೆಯುತ್ತದೆ. ಈ ಭಿನ್ನವತ್ತಳೆಗಳಲ್ಲಿ ಭೂಮಿಯ ಪ್ರಕಾರ ನೀರಾವರಿ ಪದ್ಧತಿ ವಿಧಾನ, ಹೊಲಗಳಿಗೆ ಬೀಜ ಬಿತ್ತುವ ಪ್ರಮಾಣ, ಸುಂಕದ ವಿವರ, ಸುಂಕವನ್ನು ಪಡೆಯದೇ ಸಂಚರಿಸುವ ಮಾರ್ಗದಲ್ಲಿ ಮುಂದಕ್ಕೆ ಕಳಿಸುವಂತೆ ಮಾಡಿಕೊಂಡ ಭಿನ್ನಹಗಳು ಹೀಗೆ ಅನೇಕ ವಿವರಗಳು ಭಿನ್ನವತ್ತಳೆಯಿಂದ ತಿಳಿದುಬರುತ್ತದೆ.

ಅಡಿಟಿಪ್ಪಣಿಗಳು

೧. ಕೃಷಿಜ್ಞಾನ ಪ್ರದೀಪಿಕೆ- ಶ್ರೀ.ಘನಮಠ ಶಿವಯೋಗಿಗಳು. ಪು-V- VII
೨. ಅದೇ - ಪು-೩೩೬
೩. ಅದೇ - ಪು- ೩೩೨-೩೩೪
೪. ಅದೇ - ಪು-VI
೫. ಅದೇ - ಪು-೩೦
೬. ರಟ್ಟಮತಂ-ಸಂ-ಹೆಚ್ ಶೇಷಯ್ಯಂಗಾರ್, ಅ-೪-ಪ-೧, ಪು-೧೩
೭. ಅದೇ - ಪ-೭, ಪು-೧೪
೮. ಅದೇ - ಪ-೮
೯. ಅದೇ -ಮುನ್ನುಡಿ, ಪು- VI
೧೦. ಅದೇ -ಅ-೯, ಪ-೩, ಪು-೮೭
೧೧. ಅದೇ -ಅ-೯, ಪ-೪
೧೨. ಅದೇ -ಅ-೯, ಪು-೭, ಪು-೮೮
೧೩. ಅದೇ -ಅ-೯, ಪ-೮
೧೪. ಅದೇ -ಅ-೯, ಪ-೯
೧೫. ಅದೇ -ಅ-೯, ಪ-೧೦
೧೬. ಅದೇ -ಅ-೯, ಪ-೨೫,೨೬,೨೭,೨೮, ಪು-೯೦-೯೧
೧೭. ಅದೇ -ಅ-೯, ಪ-೨೯
೧೮. ಅದೇ -ಅ-೧೧, ಪ-೨,ಪು-೯೬
೧೯. ಅದೇ -ಅ-೧೧, ಪ-೩
೨೦. ಅದೇ -ಅ-೧೧, ಪ-೪
೨೧. ಅದೇ -ಅ-೧೧, ಪ-೫
೨೨. ಅದೇ -ಅ-೧೧, ಪ-೬
೨೩. ಅದೇ -ಅ-೧೧, ಪ-೮, ಪು-೯೭
೨೪. ಅದೇ -ಅ-೧೧, ಪ-೯
೨೫. ಅದೇ -ಅ-೧೧, ಪ-೧೦
೨೬. ಅದೇ -ಅ-೧೧, ಪ-೧೧
೨೭. ಅದೇ -ಅ-೧೧,ಪ-೧೪,ಪು-೯೮
೨೮. ಅದೇ -ಅ-೧೧, ಪ-೧೫
೨೯. ಅದೇ -ಅ-೧೧, ಪ-೧೬
೩೦. ಅದೇ -ಅ-೧೧, ಪ-೧೮
೩೧. ಅದೇ -ಅ-೧೧, ಪ-೨೦
೩೨. ಅದೇ -ಅ-೧೧, ಪ-೨೯, ಪು-೧೦೦
೩೩. ಅದೇ -ಅ-೧೧, ಪ-೩೦
೩೪. ಅದೇ -ಅ-೧೧, ಪ-೩೨
೩೫. ಲೋಕೋಪಕಾರಂ-ಸಂ-.ಎಚ್ ಶೇಷಯ್ಯಂಗಾರ್.ಪು- VI
೩೬. ಅದೇ -ಅ-೫, ಪ-೪,ಪು-೧೮
೩೭. ಅದೇ -ಅ-೫, ಪ-೫
೩೮. ಅದೇ -ಅ-೫, ಪು-೮, ಪು-೧೯
೩೯. ಅದೇ -ಅ-೬, ಪ-೩
೪೦. ಅದೇ -ಅ-೫, ಪು-೩೭,೩೮,೩೯,೪೦
೪೧. ಅದೇ -ಅ-೬, ಪ-೬
೪೨. ಅದೇ -ಅ-೬, ಪ-೧೩
೪೩. ಅದೇ -ಅ-೬, ಪ-೫೪
೪೪. ಅದೇ -ಅ-೬, ಪ-೫೫
೪೫. ಶಿವತತ್ತ್ವರತ್ನಾಕರ. ಸಂ-ಮಲ್ಲೇಪುರಂ.ಜಿ.ವೆಂಕಟೇಶ. ಸಂ-೧ ತರಂಗ -೨. ಪು-೧೦೬
೪೬. ಬಸವಪಥ ಮಾಸಿಕ-ಡಿಸೆಂಬರ್-೨೦೦೫.ಲೇ-ಪು-೧೧

೪೭. ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ-ಪಿ.ವಿ. ನಾರಾಯಣ, ಪು-೧೪೫
೪೮. ಧರ್ಮಾಮೃತಂ-ಸಂ- ಬಿ.ಬಿ.ಮಹೇಶವಾಡಿ, ಎಸ್.ಪಿ.ಪಾಟೀಲ, ಪು-೨೯೭
೪೯. ವಡ್ಡಾರಾಧನೆ-ಗದ್ಯಾನುವಾದ. ಟಿ.ಕೇಶವಭಟ್ಟ, ಪು-೫೫
೫೦. ಧರ್ಮಾಮೃತಂ-ಸಂ- ಬಿ.ಬಿ. ಮಹೇಶವಾಡಿ, ಎಸ್.ಪಿ.ಪಾಟೀಲ, ಪು-೫೪೪
೫೧. ನೇಮಿನಾಥ ಪುರಾಣಂ -ಗದ್ಯಾನುವಾದ. ಆರ್.ವಿ.ಕುಲಕರ್ಣಿ. ಪು-೨೭೫
೫೨. ಸಾಹಸಭೀಮವಿಜಯಂ -ಗದ್ಯಾನುವಾದ. ಆರ್.ವಿ ಕುಲಕರ್ಣಿ.ಪು-೧೦೫
೫೩. ಕರ್ನಾಟಕ ಪಂಚತಂತ್ರ-ಗದ್ಯಾನುವಾದ. ಗುಂಡ್ಮಿ ಚಂದ್ರಶೇಖರ ಐತಾಳ. ಪು-೮೫
೫೪. ಪಂಪ ರಾಮಾಯಣ- ನಾಗಚಂದ್ರ, ಪು-೧೮೨
೫೫. ಗಿರಿಜಾಕಲ್ಯಾಣಂ-ಗದ್ಯಾನುವಾದ, ಎಮ್.ಜಿ.ನಂಜುಂಡಾರಾಧ್ಯ.ಪು-೧೪೪
೫೬. ವಡ್ಡಾರಾಧನೆ-ಗದ್ಯಾನುವಾದ. ಟಿ.ಕೇಶವಭಟ್ಟ, ಪು-೨೫೮
೫೭. ಅದೇ. ಪು-೩೦೯
೫೮. ಕರ್ನಾಟಕ ಪಂಚತಂತ್ರ-ಗದ್ಯಾನುವಾದ. ಗುಂಡ್ಮಿ ಚಂದ್ರಶೇಖರ ಐತಾಳ. ಪು-೮೭
೫೯. ಧರ್ಮಾಮೃತಂ-ಸಂ- ಬಿ.ಬಿ.ಮಹೀಶವಾಡಿ, ಎಸ್.ಪಿ.ಪಾಟೀಲ, ಪು-೩೧೫
೬೦. ಅದೇ. ಪು-೩೪೩
೬೧. ಕೃಷಿ ಪದಕೋಶ- ಸಂ.ಕೆ.ವಿ.ನಾರಾಯಣ. ಪು-೩೭
೬೨. ಕರ್ಣಾಟಕ ಕಾದಂಬರಿ-ಅನು-ಹ.ವೆ.ನಾರಾಯಣಶಾಸ್ತ್ರಿ. ಪು-೧೩೦
೬೩. ಧರ್ಮಾಮೃತಂ-ಸಂ-ಬಿ.ಬಿ. ಮಹೀಶವಾಡಿ, ಎಸ್.ಪಿ.ಪಾಟೀಲ, ಪು-೭೫
೬೪. ಕೃಷಿ ಪದಕೋಶ- ಸಂ.ಪ್ರ.ಕೆ.ವಿ. ನಾರಾಯಣ. ಪು-೧೪
೬೫. ಅದೇ. ಪು-೪೪
೬೬. ವಡ್ಡಾರಾಧನೆ-ಗದ್ಯಾನುವಾದ. ಟಿ.ಕೇಶವಭಟ್ಟ, ಪು-೧೭೭
೬೭. ಧರ್ಮಾಮೃತಂ-ಸಂ- ಬಿ.ಬಿ.ಮಹೀಶವಾಡಿ, ಎಸ್.ಪಿ.ಪಾಟೀಲ, ಪು-೩೫೦
೬೮. ಜಗನ್ನಾಥ ವಿಜಯಂ- ಗದ್ಯಾನುವಾದ -ಯು.ಆರ್.ವರದಾಚಾರ್ಯ ಪು-೩೦೧
೬೯. ಕೃಷಿ ಪದಕೋಶ- ಸಂ.ಕೆ.ವಿ. ನಾರಾಯಣ. ಪು-೬೬
೭೦. ಆದಿಪುರಾಣ- ಗದ್ಯಾನುವಾದ. ಕೆ.ಎಲ್. ನರಸಿಂಹಶಾಸ್ತ್ರಿ ಪು-೧೩೩
೭೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ- ಎಂ.ಚಿದಾನಂದಮೂರ್ತಿ. ಪು-೩೬೭
೭೨. ಕೃಷಿ ಪದಕೋಶ- ಸಂ,ಕೆ.ವಿ. ನಾರಾಯಣ. ಪು-೧೮
೭೩. ಆದಿಪುರಾಣ- ಗದ್ಯಾನುವಾದ. ಕೆ.ಎಲ್. ನರಸಿಂಹಶಾಸ್ತ್ರಿ ಪು-೪೩
೭೪. ಸಾಹಸಭೀಮವಿಜಯಂ- ಗದ್ಯಾನುವಾದ. ಆರ್.ವಿ ಕುಲಕರ್ಣಿ.ಪು-೮೭
೭೫. ವಡ್ಡಾರಾಧನೆ- ಗದ್ಯಾನುವಾದ. ಟಿ.ಕೇಶವಭಟ್ಟ, ಪು-೨೮೫
೭೬. ಅದೇ. ಪು-೨೨
೭೭. ಸೌಂದರ್ಯ ಸಮೀಕ್ಷೆ-ಜಿ.ಎಸ್. ಶಿವರುದ್ರಪ್ಪ. ಪು-೨೦೦
೭೮. ಪಂಪ ಭಾರತ-ಸಂ-ಡಾ.ಕೆ.ವಿ.ಪುಟ್ಟಪ್ಪ, ಪು-೩೪೬
೭೯. ಕರ್ಣಾಟಕ ಕಾದಂಬರಿ-ಅನು-ಹ.ವೆ.ನಾರಾಯಣಶಾಸ್ತ್ರಿ. ಪು-೧೨೨
೮೦. ಧರ್ಮಾಮೃತಂ-ಸಂ- ಬಿ.ಬಿ.ಮಹೀಶವಾಡಿ, ಎಸ್.ಪಿ.ಪಾಟೀಲ, ಪು-೧೧
೮೧. ಗಿರಿಜಾಕಲ್ಯಾಣಂ- ಗದ್ಯಾನುವಾದ. ಎಮ್.ಜಿ.ನಂಜುಂಡಾರಾಧ್ಯ.ಪು-೧೦೪
೮೨. ಅದೇ. ಪು-೨೭೯
೮೩. ನೇಮಿನಾಥ ಪುರಾಣಂ- ಗದ್ಯಾನುವಾದ. ಆರ್.ವಿ.ಕುಲಕರ್ಣಿ. ಪು-೩೫
೮೪. ಜಗನ್ನಾಥ ವಿಜಯಂ- ಗದ್ಯಾನುವಾದ -ಯು.ಆರ್.ವರದಾಚಾರ್ಯ ಪು-೧೧೦
೮೫. ಧರ್ಮಾಮೃತಂ-ಸಂ- ಬಿ.ಬಿ. ಮಹೀಶವಾಡಿ. ಎಸ್.ಪಿ.ಪಾಟೀಲ. ಪು-೧೪
೮೬. ಕೆಳದಿನೃಪವಿಜಯಂ. ಗದ್ಯಾನುವಾದ ಕೆಳದಿ ಗುಂಡಾಜೋಯಿಸ. ಪು-೧೪೯
೮೭. ಅದೇ. ಪು-೨೩೩
೮೮. ಜಗನ್ನಾಥವಿಜಯಂ- ಗದ್ಯಾನುವಾದ-ಯು.ಆರ್.ವರದಾಚಾರ್ಯ ಪು-೫೮೧
೮೯. ಧರ್ಮಾಮೃತಂ-ಸಂ- ಬಿ.ಬಿ. ಮಹೀಶವಾಡಿ, ಎಸ್.ಪಿ.ಪಾಟೀಲ, ಪು-೧೪
೯೦. ಕೃಷಿ ಪದಕೋಶ- ಸಂ.ಪ್ರ ಕೆ.ವಿ.ನಾರಾಯಣ. ಪು-೧೩೦
೯೧. ಧರ್ಮಾಮೃತಂ-ಸಂ- ಬಿ.ಬಿ.ಮಹೀಶವಾಡಿ, ಎಸ್.ಪಿ.ಪಾಟೀಲ.ಆ-೧೪ ಪು-೬೩೨
೯೨. ಕೃಷಿ ಪದಕೋಶ- ಸಂ.ಪ್ರ ಕೆ.ವಿ.ನಾರಾಯಣ. ಪು-೧೩೫
೯೩. ಆದಿಪುರಾಣ- ಗದ್ಯಾನುವಾದ ಕೆ.ಎಲ್. ನರಸಿಂಹಶಾಸ್ತ್ರಿ.ಪ-೫೯ ಪು-೬೦

೯೪. ಕರ್ನಾಟಕ ಪಂಚತಂತ್ರ- ಗದ್ಯಾನುವಾದ. ಗುಂಡ್ಮಿ ಚಂದ್ರಶೇಖರ ಐತಾಳ. ಪು-೩೧೬
೯೫. ಧರ್ಮಾಮೃತಂ-ಸಂ- ಬಿ.ಬಿ. ಮಹೀಶವಾಡಿ, ಎಸ್,ಪಿ.ಪಾಟೀಲ,ಅ-೧,ಪ-೧೦೫ ಪು-೨೫
೯೬. ವಡ್ಡಾರಾಧನೆ- ಗದ್ಯಾನುವಾದ. ಟಿ.ಕೇಶವಭಟ್ಟ. ಪು-೧೩೩
೯೭. ಗಿರಿಜಾಕಲ್ಯಾಣಂ- ಗದ್ಯಾನುವಾದ. ಎಮ್.ಜಿ.ನಂಜುಂಡಾರಾಧ್ಯ.ಅ-೨,ಪ-೧೨,ಪು-೫೭
೯೮. ಕಬ್ಬಿಗರ ಕಾವ್ಯ-ಆಂಡಯ್ಯ-ಪ-೨೨,ಪು-೧೨
೯೯. ರಾಜಶೇಖರ ವಿಳಾಸ. ಸಂ-ಆರ್.ಸಿ.ಹೀರೆಮಠ, ಸುಂಕಾಪುರ, ಪ-೧೧,೧೨,ಪು-೩೩
೧೦೦. ರಾಮಧಾನ್ಯ ಚರಿತ್ರೆ-ಸಂ.ಕೆ.ಬಿ. ತಳಗೇರಿ. ಪ-೩೫, ಪು-೬೦
೧೦೧. ಧರ್ಮಾಮೃತಂ-ಸಂ- ಬಿ.ಬಿ. ಮಹೀಶವಾಡಿ, ಎಸ್,ಪಿ.ಪಾಟೀಲ,ಅ-೩,ಪ-೯೦,ಪು-೧೨೫
೧೦೨. ರಾಮಧಾನ್ಯ ಚರಿತ್ರೆ-ಸಂ.ಕೆ.ಬಿ. ತಳಗೇರಿ.ಪ-೧೩೫. ಪು-೯೭
೧೦೩. ಪಂಪರಾಮಾಯಣ- ನಾಗಚಂದ್ರ,ಆ-೫ ಪು-೧೧೭
೧೦೪. ಧರ್ಮಾಮೃತಂ-ಸಂ- ಬಿ.ಬಿ. ಮಹೀಶವಾಡಿ, ಎಸ್,ಪಿ.ಪಾಟೀಲ.ಆ-೧, ಪ-೧೧೬,ಪು-೨೭
೧೦೫. ಸಾಹಸಭೀಮವಿಜಯಂ- ಗದ್ಯಾನುವಾದ'. ಆರ್.ವಿ ಕುಲಕರ್ಣಿ.ಪ-೧೧ ಪು-
೧೦೬. ಕಬ್ಬಿಗರ ಕಾವ್ಯ-ಆಂಡಯ್ಯ-ವ-ಪು-೧೫
೧೦೭. ವಡ್ಡಾರಾಧನೆ- ಗದ್ಯಾನುವಾದ. ಟಿ.ಕೇಶವಭಟ್ಟ. ಪು-೧೫
೧೦೮. ಆಧಿಪುರಾಣ- ಗದ್ಯಾನುವಾದ. ಕೆ.ಎಲ್.ನರಸಿಂಹಶಾಸ್ತ್ರಿ,ಪ-೯೭, ಪು-೪೫
೧೦೯. ವಡ್ಡಾರಾಧನೆ- ಗದ್ಯಾನುವಾದ. ಟಿ.ಕೇಶವಭಟ್ಟ. ಪು-೯೮
೧೧೦. ಕರ್ಣಾಟಕ ಕಾದಂಬರಿ-ಅನು-ಹ.ವೆ.ನಾರಾಯಣಶಾಸ್ತ್ರಿ. ಪು-೪೩
೧೧೧. ಕರ್ನಾಟಕ ಪಂಚತಂತ್ರ-ಗಧ್ಯಾನುವಾದ. ಗುಂಡ್ಮಿ ಚಂದ್ರಶೇಖರ ಐತಾಳ.ಪ-೧೭೯ ಪು-೧೩೭
೧೧೨. ಪಂಪರಾಮಾಯಣ- ನಾಗಚಂದ್ರ.ಪ-೧೨೩, ಪು-೧೩೨
೧೧೩. ಧರ್ಮಾಮೃತಂ-ಸಂ- ಬಿ.ಬಿ.ಮಹೀಶವಾಡಿ, ಎಸ್,ಪಿ.ಪಾಟೀಲ.ಪ-೧೨೦,ಪು-೨೯
೧೧೪. ಗಿರಿಜಾಕಲ್ಯಾಣಂ- ಗದ್ಯಾನುವಾದ. ಎಮ್.ಜಿ.ನಂಜುಂಡಾರಾಧ್ಯ. ಪ-೩೦ ಪು-೬೨
೧೧೫. ಅದೇ- ಪ-೫೦, ಪು-೬೬
೧೧೬. ಅದೇ- ಪ-೬೯, ಪು-೭೧
೧೧೭. ಅದೇ- ಪ-೧೭, ಪು-೧೭೧
೧೧೮. ನೇಮಿನಾಥ ಪುರಾಣಂ- ಗದ್ಯಾನುವಾದ, ಆರ್.ವಿ.ಕುಲಕರ್ಣಿ.ಪ-೭೨, ಪು-೬೦
೧೧೯. ಅದೇ- ಪ-೩೫, ಪು-೮೨
೧೨೦. ಜಗನ್ನಾಥವಿಜಯಂ- ಗದ್ಯಾನುವಾದ -ಯು.ಆರ್.ವರದಾಚಾರ್ಯ,ಪ-೧೪, ಪು-೪೦
೧೨೧. ಕಬ್ಬಿಗರ ಕಾವ್ಯ-ಆಂಡಯ್ಯ-ಪ-೨೦, ಪು-೧೨
೧೨೨. ರಾಜಶೇಖರವಿಳಾಸ. ಸಂ-ಆರ್.ಸಿ.ಹೀರೆಮಠ, ಸುಂಕಾಪುರ, ಪ-೨೮, ಪು-೩೬
೧೨೩. ಕರ್ನಾಟಕ ಪಂಚತಂತ್ರ- ಗದ್ಯಾನುವಾದ, ಗುಂಡ್ಮಿ ಚಂದ್ರಶೇಖರ ಐತಾಳ. ಪು-೪೩
೧೨೪. ಧರ್ಮಾಮೃತಂ-ಸಂ- ಬಿ.ಬಿ. ಮಹೀಶವಾಡಿ, ಎಸ್,ಪಿ.ಪಾಟೀಲ. ವ- ಪು-೫೯
೧೨೫. ಸಾಹಸಭೀಮವಿಜಯಂ- ಗದ್ಯಾನುವಾದ, ಆರ್.ವಿ ಕುಲಕರ್ಣಿ. ಪ-೩ ಪು-೮೭
೧೨೬. ಕರ್ನಾಟಕ ಪಂಚತಂತ್ರ- ಗದ್ಯಾನುವಾದ, ಗುಂಡ್ಮಿ ಚಂದ್ರಶೇಖರ ಐತಾಳ.ಪ-೨೪೮ ಪು-೨೦೩
೧೨೭. ಧರ್ಮಾಮೃತಂ-ಸಂ- ಬಿ.ಬಿ. ಮಹೀಶವಾಡಿ, ಎಸ್,ಪಿ.ಪಾಟೀಲ. ಪ-೭೬ ಪು-೫೬೨
೧೨೮. ನೇಮಿನಾಥ ಪುರಾಣಂ- ಗದ್ಯಾನುವಾದ, ಆರ್.ವಿ.ಕುಲಕರ್ಣಿ. ಪ-೧೨೧ ಪು-೧೫೧
೧೨೯. ಜಗನ್ನಾಥವಿಜಯಂ- ಗದ್ಯಾನುವಾದ -ಯು.ಆರ್.ವರದಾಚಾರ್ಯ, ಪ-೩೪, ಪು-೧೫೨
೧೩೦. ಕರ್ಣಾಟಕ ಕಾದಂಬರಿ-ಅನು-ಹ.ವೆ.ನಾರಾಯಣಶಾಸ್ತ್ರಿ.ಪ-೧೧೩ ಪು-೫೬
೧೩೧. ಯಶೋಧರ ಚರಿತ್ರೆ- ಜನ್ನ. ಪ-೫೫, ಪು-೨೪
೧೩೨. ಜಗನ್ನಾಥವಿಜಯಂ- ಗದ್ಯಾನುವಾದ -ಯು.ಆರ್.ವರದಾಚಾರ್ಯ.ಪ-೭ ಪು-೩೮
೧೩೩. ರಾಜಶೇಖರವಿಳಾಸ. ಸಂ-ಆರ್.ಸಿ.ಹೀರೆಮಠ, ಸುಂಕಾಪುರ. ಪ-೧೫ ಪು-೩೩
೧೩೪. ವಡ್ಡಾರಾಧನೆ- ಗದ್ಯಾನುವಾದ, ಟಿ.ಕೇಶವಭಟ್ಟ. ಪು-೩೦
೧೩೫. ಅದೇ- ಪು-೪೦
೧೩೬. ಕರ್ನಾಟಕ ಪಂಚತಂತ್ರ- ಗದ್ಯಾನುವಾದ. ಗುಂಡ್ಮಿ ಚಂದ್ರಶೇಖರ ಐತಾಳ. ಪು-೨೦೫
೧೩೭. ಧರ್ಮಾಮೃತಂ-ಸಂ- ಬಿ.ಬಿ.ಮಹೀಶವಾಡಿ. ಎಸ್.ಪಿ.ಪಾಟೀಲ. ಪು-೨೭೯
೧೩೮. ಶಾಸನಗಳಲ್ಲಿಕರ್ನಾಟಕದವರ್ತಕರು- ಡಾ.ಬಿ.ಆರ್.ಹಿರೇಮಠ. ಪು-೧೨೫
೧೩೯. ಕೆಳದಿನೃಪವಿಜಯಂ- ಗದ್ಯಾನುವಾದ, ಕೆಳದಿ ಗುಂಡಾಜೋಯಿಸ.ವ- ಪು-೬೬
೧೪೦. ವಡ್ಡಾರಾಧನೆ-ಗಧ್ಯಾನುವಾದ. ಟಿ.ಕೇಶವಭಟ್ಟ. ಪು-೧೩೫

೧೪೧. ಕರ್ನಾಟಕ ಪಂಚತಂತ್ರ- ಗದ್ಯಾನುವಾದ'. ಗುಂಡ್ಮಿ ಚಂದ್ರಶೇಖರ ಐತಾಳ. ಪ-೭೪ ಪು-೪೭
೧೪೨. ಆದಿಪುರಾಣ- ಗದ್ಯಾನುವಾದ, ಕೆ.ಎಲ್. ನರಸಿಂಹಶಾಸ್ತ್ರಿ,ಪ-೫೧ ಪು-೫೬
೧೪೩. ಧರ್ಮಾಮೃತಂ-ಸಂ- ಬಿ.ಬಿ.ಮಹೀಶವಾಡಿ, ಎಸ್.ಪಿ.ಪಾಟೀಲ.ಅ-೨, ಪು-೧೦೪
೧೪೪. ಕೆಳದಿನೃಪವಿಜಯಂ- ಗದ್ಯಾನುವಾದ, ಕೆಳದಿ ಗುಂಡಾಜೋಯಿಸ. ಪು-೧೪೦
೧೪೫. ಬ.ವ.ಸಂ- ಸಂ-೧, ಸಂ- ಡಾ.ಎಂ.ಎಂ. ಕಲಬುರ್ಗಿ, ವ-೨೨೫, ಪು-೫೬
೧೪೬. ಬೆಡಗಿನ ವಚನಗಳು- ಪು-೨೭೮
೧೪೭. ಬ.ವ.ಸಂ- ಸಂ-೧, ಸಂ- ಡಾ.ಎಂ.ಎಂ.ಕಲಬುರ್ಗಿ, ವ-೪೫೬, ಪು-೧೧೦
೧೪೮. ಸಂಕೀರ್ಣ.ವ.ಸಂ-ಸಂ-೨ ಡಾ.ಎಂ.ಎಂ.ಕಲಬುರ್ಗಿ, ವ-೧೭೪೨, ಪು-೬೭೨
೧೪೯. ಸರ್ವಜ್ಞನ ವಚನಗಳು- ಸಂ-ಚನ್ನಪ್ಪ ಉತ್ತಂಗಿ, ವ-೨೯೦, ಪು-೩೩
೧೫೦. ಸಿದ್ಧ.ವ.ಸಂ-ಸಂ- ಡಾ.ಎಸ್.ವಿದ್ಯಾಶಂಕರ, ವ-೬೩೦. ಪು-೧೭೪
೧೫೧. ಅಲ್ಲ.ವ.ಸಂ-ಸಂ- ಡಾ.ಬಿ.ವ್ಹಿ.ಮಲ್ಲಾಪುರ, ವ-೬೫, ಪು-೨೩
೧೫೨. ಬ.ವ.ಸಂ- ಸಂ-೧, ಸಂ- ಡಾ.ಎಂ.ಎಂ.ಕಲಬುರ್ಗಿ, ವ-೧೨೮೭, ಪು-೩೫೬
೧೫೩. ಸಂಕೀರ್ಣ.ವ.ಸಂ-ಸಂ-೨ ಡಾ.ಎಂ.ಎಂ.ಕಲಬುರ್ಗಿ, ವ-೧೭೪೫, ಪು-೬೭೩
೧೫೪. ಅದೇ. ವ-೧೧೦೪, ಪು-೩೭೮
೧೫೫. ಸಂಕೀರ್ಣ.ವ.ಸಂ-ಸಂ-೨ ಡಾ.ಎಂ.ಎಂ.ಕಲಬುರ್ಗಿ, ವ-೧೧೬, ಪು-೫೦
೧೫೬. ಸಂಕೀರ್ಣ.ವ.ಸಂ-ಸಂ-೨, ಸಂ- ಡಾ.ವಿದ್ಯಾಶಂಕರ, ವ-೭೮೩, ಪು-೨೫೫
೧೫೭. ಸಂಕೀರ್ಣ.ವ.ಸಂ-ಸಂ-೩, ಸಂ- ಡಾ.ಹಿರೇಮಠ, ವ-೭೮೩, ಪು-೧೬೩
೧೫೮. ಸಂಕೀರ್ಣ.ವ.ಸಂ-ಸಂ-೪, ಸಂ- ಡಾ.ಹಿರೇಮಠ, ವ-೧೯೭, ಪು-೭೧
೧೫೯. ಅದೇ. ವ-೧೦೫೩, ಪು-೩೫೫
೧೬೦. ಅದೇ. ವ-೮೨೬, ಪು-೨೭೩
೧೬೧. ಸಂಕೀರ್ಣ.ವ. ಸಂ-ಸಂ-೫, ಸಂ- ಡಾ.ವೀರಣ್ಣರಾಜೂರ, ವ-೮೭, ಪು-೬೫
೧೬೨. ಕರ್ಣಾಟಕ ಭಾರತ ಕಥಾಮಂಜರಿ-ಸಂ- ಡಾ.ಕುವೆಂಪು, ಸಭಾ-ಸಂಧಿ-೧, ಪ-೬೪
೧೬೩. ಅದೇ. ಆಧಿ-ಸಂ-೮, ಪ-೪೮
೧೬೪. ಜೈಮಿನಿ ಭಾರತ-ಸಂ- ಬಿ.ಎಸ್.ಸಣ್ಣಯ್ಯ, ಡಾ.ರಾಮೇಗೌಡ. ಸಂ-೧೫. ಪ-೬. ಪು-೧೪೨
೧೬೫. ಅದೇ. ವ-೧೩೫೯, ಪು-೧೬೮
೧೬೬. ಅದೇ. ವ-೧೩೬೦, ಪು-೧೬೮
೧೬೭. ಅದೇ. ವ-೧೩೬೧, ೧೩೬೪, ಪು-೧೬೯
೧೬೮. ಅದೇ.ವ-೧೭೧೪, ಪು-೨೧೧
೧೬೯. ಅಲ್ಲ.ವ.ಸಂ-ಸಂ-೨,ಸಂ- ಡಾ.ಬಿ.ವ್ಹಿ.ಮಲ್ಲಾಪುರ, ವ-೩೮೨, ಪು-೧೧೦
೧೭೦. ಬಸವಪಥ ಮಾಸಿಕ. ಡಿಸೆಂಬರ ೨೦೦೫,ಲೇಖನ-ಈರಯ್ಯಕಿಲ್ಲೆದಾರ, ಪು-೮
೧೭೧. ಚನ್ನ.ವ.ಸಂ-ಸಂ-೩, ಡಾ.ಬಿ.ವ್ಹಿ.ಮಲ್ಲಾಪುರ, ವ-೧೬, ಪು-೮
೧೭೨. ಸಿದ್ಧ.ವ.ಸಂ-ಸಂ- ಡಾ.ಎಸ್.ವಿದ್ಯಾಶಂಕರ, ವ-೨೯೪. ಪು-೮೨
೧೭೩. ಶಿವ.ವ.ಸಂ. ಸಂ-೧ ಡಾ.ವೀರಣ್ಣರಾಜೂರ, ವ-೮೯೫,ಪು-೨೮೪
೧೭೪. ಅದೇ. ವ-೧೦೩೮, ಪು-೩೨೮
೧೭೫. ಸಂಕೀರ್ಣ.ವ.ಸಂ-ಸಂ-೩, ಸಂ- ಡಾ.ಹಿರೇಮಠ, ವ-೧೧, ಪು-೬
೧೭೬. ಪ್ರಭುಲಿಂಗಲೀಲೆ-ಗದ್ಯಾನುವಾದ ಡಾ.ಎಸ್.ವಿದ್ಯಾಶಂಕರ, ಆ-೭ ಪ-೭೭
೧೭೭. ಸಂಕೀರ್ಣ.ವ.ಸಂ-ಸಂ-೪, ಸಂ- ಡಾ.ಬಿ.ಆರ್.ಹಿರೇಮಠ, ವ-೩೯೫, ಪು-೧೫೦
೧೭೮. ಸಂಕೀರ್ಣ.ವ.ಸಂ-ಸಂ-೩, ಸಂ- ಡಾ.ಹಿರೇಮಠ, ವ-೧೭೪, ಪು-೬೮
೧೭೯. ಸಂಕೀರ್ಣ.ವ. ಸಂ-ಸಂ-೫, ಸಂ- ಡಾ.ವೀರಣ್ಣರಾಜೂರ, ವ-೪೯೩, ಪು-೨೬೧
೧೮೦. ಸಂಕೀರ್ಣ.ವ. ಸಂ-ಸಂ-೬, ಸಂ-ಎಸ್.ಶಿವಣ್ಣ ವ-೪೮೩, ಪು-೨೨೬
೧೮೧. ಕರ್ಣಾಟಕ ಭಾರತ ಕಥಾಮಂಜರಿ-ಸಂ- ಡಾ.ಕುವೆಂಪು, ಸಭಾ-ಸಂಧಿ-೧. ಪ-೪೮
೧೮೨. ಸರ್ವಜ್ಞನ ವಚನಗಳು- ಸಂ-ಚನ್ನಪ್ಪ ಉತ್ತಂಗಿ. ವ-೭೨೮. ಪು-೯೧
೧೮೩. ಸಂಕೀರ್ಣ.ವ.ಸಂ-ಸಂ-೧, ಡಾ.ಎಂ.ಎಂ.ಕಲಬುರ್ಗಿ. ವ-೫೯೪, ಪು-೧೪೯
೧೮೪. ಬ.ವ.ಸಂ- ಸಂ-೧, ಸಂ- ಡಾ.ಎಂ.ಎಂ.ಕಲಬುರ್ಗಿ. ವ-೫೯೪, ಪು-೧೪೯
೧೮೫. ಸಂಕೀರ್ಣ.ವ. ಸಂ-ಸಂ-೫, ಸಂ- ಡಾ.ವೀರಣ್ಣರಾಜೂರ, ವ-೧೧೧, ಪು-೮೧
೧೮೬. ಸಂಕೀರ್ಣ.ವ. ಸಂ-ಸಂ-೭, ಸಂ- ಡಾ.ವೀರಣ್ಣರಾಜೂರ, ವ-೩೭೭, ಪು-೧೧೯
೧೮೭. ಸಂಕೀರ್ಣ.ವ. ಸಂ-ಸಂ-೭, ಸಂ- ಡಾ.ವೀರಣ್ಣರಾಜೂರ, ವ-೧೦೩೫. ಪು-೩೧೮

೧೮೮. ಸಂಕೀರ್ಣ.ವ.ಸಂ–ಸಂ–೪, ಸಂ– ಡಾ.ಬಿ.ಆರ್.ಹಿರೇಮಠ, ವ–೮೨೬, ಪು–೨೭೩
೧೮೯. ಅದೇ. ವ–೧೦೫೩, ಪು–೩೫೫
೧೯೦. ಸಂಕೀರ್ಣ.ವ.ಸಂ–ಸಂ–೧ ಡಾ.ಎಂ.ಎಂ.ಕಲಬುರ್ಗಿ, ವ–೧೭೪೩, ಪು–೬೭೨
೧೯೧. ಅದೇ. ವ–೧೭೪೫, ಪು–೬೭೪
೧೯೨. ಅದೇ. ವ–೨೯೦, ಪು–೯೫
೧೯೩. ಅದೇ. ವ–೩೬೫, ಪು–೧೨೨
೧೯೪. ಸಂಕೀರ್ಣ.ವ.ಸಂ–ಸಂ–೨, ಸಂ– ಡಾ.ವಿದ್ಯಾಶಂಕರ, ವ–೨೭೫, ಪು–೨೫೨
೧೯೫. ಸಂಕೀರ್ಣ.ವ.ಸಂ–ಸಂ–೩, ಸಂ– ಡಾ.ಬಿ.ಆರ್.ಹಿರೇಮಠ, ವ–೧೭೨, ಪು–೬೮
೧೯೬. ಸಂಕೀರ್ಣ.ವ.ಸಂ–ಸಂ–೪, ಸಂ– ಡಾ.ಬಿ.ಆರ್.ಹಿರೇಮಠ, ವ–೬೧೪, ಪು–೨೦೯
೧೯೭. ಸಂಕೀರ್ಣ.ವ. ಸಂ–ಸಂ–೫, ಸಂ– ಡಾ.ವೀರಣ್ಣರಾಜೂರ, ವ–೨೯೯, ಪು–೧೯೧
೧೯೮. ಕನ್ನಡ ಭಾರತ–ಸಂ–ಎಂ.ವಿ. ಪ್ರಸನ್ನ,ಸಂ–೬, ಪ–೮
೧೯೯. ಜೈಮಿನಿ ಭಾರತ–ಸಂ– ಬಿ.ಎಸ್.ಸಣ್ಣಯ್ಯ ಡಾ.ರಾಮೇಗೌಡ. ಸಂ–೨, ಪ–೧೮, ಪು–೭
೨೦೦. ಕೃಷಿ ಪದಕೋಶ– ಸಂ.ಪ್ರ. ಕೆ.ವಿ.ನಾರಾಯಣ. ಪು–೩೯
೨೦೧. ಸಂಕೀರ್ಣ.ವ.ಸಂ–ಸಂ–೧ ಡಾ.ಎಂ.ಎಂ.ಕಲಬುರ್ಗಿ, ವ–೧೭೪೩, ಪು–೬೭೨
೨೦೨. ಅದೇ. ವ–೧೭೪೩, ಪು–೬೭೩
೨೦೩. ಕೃಷಿ ಪದಕೋಶ– ಸಂ.ಪ್ರ. ಕೆ.ವಿ.ನಾರಾಯಣ. ಪು–
೨೦೪. ಸಂಕೀರ್ಣ.ವ.ಸಂ–ಸಂ–೧ ಡಾ.ಎಂ.ಎಂ.ಕಲಬುರ್ಗಿ, ವ–೧೭೪೫, ಪು–೬೭೩
೨೦೫. ಕನ್ನಡ ಭಾರತ–ಸಂ–ಎಂ.ವಿ. ಪ್ರಸನ್ನ,ಆಧಿ–ಸಂ–೮, ಪ–೪೮
೨೦೬. ಸಂಕೀರ್ಣ.ವ.ಸಂ–ಸಂ–೬ ಸಂ–ಎಸ್.ಶಿವಣ್ಣ, ವ–೮೩೪, ಪು–೪೨೮
೨೦೭. ಸರ್ವಜ್ಞನ ವಚನಗಳು– ಸಂ–ಚನ್ನಪ್ಪಉತ್ತಂಗಿ, ವ–೧೩೫೭ ಪು–೧೬೮
೨೦೮. ಕೃಷಿ ಪದಕೋಶ– ಸಂ.ಪ್ರ. ಕೆ.ವಿ.ನಾರಾಯಣ. ಪು–೧೦
೨೦೯. ಕನ್ನಡ–ಕನ್ನಡನಿಘಂಟು–ಸಂ–೧, ಸಂ–ವೆಂಕಟಸುಬ್ಬಯ್ಯ– ಪು–೧೧೫೫
೨೧೦. ಬ.ವ.ಸಂ– ಸಂ– ಸಂ– ಡಾ.ಎಂ.ಎಂ.ಕಲಬುರ್ಗಿ, ವ–೧೨೫, ಪು–೩೪
೨೧೧. ಸರ್ವಜ್ಞನ ವಚನಗಳು– ಸಂ–ಚನ್ನಪ್ಪಉತ್ತಂಗಿ, ವ–೧೩೪೪ ಪು–೧೬೭
೨೧೨. ಕನ್ನಡ ನಿಘಂಟು–ಸಂ–೨, ಪು–೧೯೧೪
೨೧೩. ಕನ್ನಡನಿಘಂಟು–ಸಂ–೨, ಪು–೨೧೭೨
೨೧೪. ಸಂಕೀರ್ಣ.ವ.ಸಂ–ಸಂ–೧ ಡಾ.ಎಂ.ಎಂ.ಕಲಬುರ್ಗಿ, ವ–೧೭೩೯, ಪು–೬೭೦
೨೧೫. ಅದೇ. ವ–೪೨, ಪು–೧೫
೨೧೬. ಸಂಕೀರ್ಣ.ವ. ಸಂ–ಸಂ–೯, ಸಂ– ಡಾ.ವೀರಣ್ಣರಾಜೂರ, ವ–೩೪೦೨, ಪು–೫೦೬
೨೧೭. ಸಂಕೀರ್ಣ.ವ.ಸಂ–ಸಂ–೧ ಡಾ.ಎಂ.ಎಂ.ಕಲಬುರ್ಗಿ, ವ–೧೭೩೯, ಪು–೬೭೪
೨೧೮. ಕೃಷಿ ಪದಕೋಶ– ಸಂ.ಪ್ರ. ಕೆ.ವಿ.ನಾರಾಯಣ. ಪು–೨೨
೨೧೯. ಅಲ್ಲ.ವ.ಸಂ–ಸಂ–೨,ಸಂ– ಡಾ.ಬಿ.ವ್ಹಿ.ಮಲ್ಲಾಪುರ,ವ–೧೨೩೧, ಪು–೩೯೪
೨೨೦. ಸಿದ್ಧರಾಮಚರಿತ್ರೆ–ಗದ್ಯಾನುವಾದ, ಆರ್.ಎಸ್.ರಾಮರಾವ್, ಅ–೪, ಪ–೧೯, ಪು–೧೦೩
೨೨೧. ಕನ್ನಡನಿಘಂಟು–ಸಂ–೨, – ಪು–೧೪೪೩
೨೨೨. ಸಂಕೀರ್ಣ.ವ.ಸಂ–ಸಂ–೧ ಡಾ.ಎಂ.ಎಂ.ಕಲಬುರ್ಗಿ, ವ–೭೩೨, ಪು–೨೨೫
೨೨೩. ಶಿವಶರಣೆಯರ. ವ.ಸಂ. ಸಂ–೧ ಡಾ.ವೀರಣ್ಣರಾಜೂರ, ವ–೨೪೨,ಪು–೭೫
೨೨೪. ಅಲ್ಲ.ವ.ಸಂ–ಸಂ–೨,ಸಂ– ಡಾ.ಬಿ.ವ್ಹಿ.ಮಲ್ಲಾಪುರ,ವ–೧೨೩೧, ಪು–
೨೨೫. ಸರ್ವಜ್ಞನ ವಚನಗಳು– ಸಂ–ಚನ್ನಪ್ಪಉತ್ತಂಗಿ, ವ–೧೬೮, ಪು–೨೦೯
೨೨೬. ಕನ್ನಡನಿಘಂಟು–ಸಂ–೨, – ಪು–೨೩೧೩
೨೨೭. ಸಂಕೀರ್ಣ.ವ.ಸಂ–ಸಂ–೪, ಸಂ– ಡಾ.ಆರ್.ಹಿರೇಮಠ, ವ–೭೮೭, ಪು–೨೫೮
೨೨೮. ಸರ್ವಜ್ಞನ ವಚನಗಳು– ಸಂ–ಚನ್ನಪ್ಪಉತ್ತಂಗಿ, ವ–೩೪೧, ಪು–೪೩
೨೨೯. ಕನ್ನಡ ನಿಘಂಟು–ಸಂ–೨, – ಪು–೨೨೦೪
೨೩೦. ಸಂಕೀರ್ಣ.ವ.ಸಂ–ಸಂ–೧, ಡಾ.ಎಂ.ಎಂ.ಕಲಬುರ್ಗಿ, ವ–೧೭೩೯, ಪು–೬೭೦
೨೩೧. ಅಲ್ಲ.ವ.ಸಂ–ಸಂ–೨ಸಂ–ಡಾ.ವ್ಹಿ.ಮಲ್ಲಾಪುರ,ವ–೩೪೦, ಪು–೯೯
೨೩೨. ಸಿದ್ಧರಾಮ ಚರಿತ್ರೆ–ಗದ್ಯಾನುವಾದ, ಆರ್.ಎಸ್.ರಾಮರಾವ್, ಅ–೨, ಪ–೨೦, ಪು–೮೨
೨೩೩. ಕನ್ನಡ ಭಾರತ–ಸಂ–ಎಂ.ವಿ. ಪ್ರಸನ್ನ, ಪ–
೨೩೪. ಅದೇ.ವ–೧೫೮೦–೧೫೮೬, ಪು–೧೯೪–೧೯೫

೨೩೫. ಅಲ್ಲ.ವ.ಸಂ–ಸಂ–೨,ಸಂ– ಡಾ.ವ್ಹಿ.ಮಲ್ಲಾಪುರ,ವ–೪೯೪, ಪು–೧೩೫
೨೩೬. ಬ.ವ.ಸಂ– ಸಂ–೧, ಸಂ– ಡಾ.ಎಂ.ಎಂ.ಕಲಬುರ್ಗಿ, ವ–೧೧೬೨, ಪು–೩೧೯
೨೩೭. ಸಿದ್ಧ.ವ.ಸಂ–ಸಂ– ಡಾ.ಎಸ್.ವಿದ್ಯಾಶಂಕರ,
೨೩೮. ಶಿವ.ವ.ಸಂ. ಸಂ–೧ ಡಾ.ವೀರಣ್ಣರಾಜೂರ, ವ–೧೧೨,ಪು–೩೭
೨೩೯. ಬ.ವ.ಸಂ– ಸಂ–೧, ಸಂ– ಡಾ.ಎಂ.ಎಂ. ಕಲಬುರ್ಗಿ, ವ–೧೨೫, ಪು–೩೪
೨೪೦. ಸಂಕೀರ್ಣ.ವ.ಸಂ–ಸಂ–೬ ಸಂ–ಎಸ್.ಶಿವಣ್ಣ, ವ–೮೩೫, ಪು–೪೨೮
೨೪೧. ಸಂಕೀರ್ಣ.ವ. ಸಂ–ಸಂ–೫, ಸಂ– ಡಾ.ವೀರಣ್ಣರಾಜೂರ, ವ–೮೭, ಪು–೬೫
೨೪೨. ಹರಿಶ್ಚಂದ್ರಕಾವ್ಯ–ಸಂ– ಡಾ.ಎಸ್.ವಿದ್ಯಾಶಂಕರ, ಅ–೧, ಪ–೩೮, ಪು–೧೨೨
೨೪೩. ಸಂಕೀರ್ಣ.ವ. ಸಂ–ಸಂ–೪, ಸಂ– ಡಾ.ವೀರಣ್ಣರಾಜೂರ, ವ–೧೨೦೬, ಪು–೪೦೯
೨೪೪. ರಾಜಶೇಖರವಿಳಾಸ. ಸಂ– ಆರ್.ಸಿ.ಹೀರೆಮಠ, ಸುಂಕಾಪುರ, ಪ–೧೧, ಪು–೩೩
೨೪೫. ಅಲ್ಲ.ವ.ಸಂ–ಸಂ–೨,ಸಂ– ಡಾ.ಬಿ.ವ್ಹಿ.ಮಲ್ಲಾಪುರ,ವ–೧೧೯, ಪು–೩೮
೨೪೬. ಸಂಕೀರ್ಣ.ವ. ಸಂ–ಸಂ–೫, ಸಂ– ಡಾ.ವೀರಣ್ಣರಾಜೂರ, ವ–೮೭, ಪು–೬೫
೨೪೭. ಸಿದ್ಧ.ವ.ಸಂ–ಸಂ– ಡಾ.ಎಸ್.ವಿದ್ಯಾಶಂಕರ,ವ–೧೩೦೩, ಪು–೩೬೩
೨೪೮. ಸಂಕೀರ್ಣ.ವ.ಸಂ–ಸಂ–೪, ಸಂ–ಡಾ.ಬಿ.ಆರ್.ಹಿರೇಮಠ, ವ–೭೮೭, ಪು–೨೫೮
೨೪೯. ಅದೇ. ವ–೪೩೬, ಪು–೨೪೩
೨೫೦. ಸಿದ್ಧರಾಮಚರಿತ್ರೆ–ಗದ್ಯಾನುವಾದ, ಆರ್.ಎಸ್.ರಾಮರಾವ್, ಅ–೫, ಪ–೭, ಪು–೧೩೨
೨೫೧. ಅಲ್ಲ.ವ.ಸಂ–ಸಂ–೨,ಸಂ– ಡಾ.ಬಿ.ವ್ಹಿ.ಮಲ್ಲಾಪುರ,ವ–೧೧೯, ಪು–೩೮
೨೫೨. ಶಿವ.ವ.ಸಂ. ಸಂ–೧ ಡಾ.ವೀರಣ್ಣರಾಜೂರ, ವ–೪೩೫,ಪು–೧೪೦
೨೫೩. ಸಂಕೀರ್ಣ.ವ. ಸಂ–ಸಂ–೫, ಸಂ– ಡಾ.ವೀರಣ್ಣರಾಜೂರ, ವ–೮೭, ಪು–೬೫
೨೫೪. ಶಿವ.ವ.ಸಂ. ಸಂ–೧ ಡಾ.ವೀರಣ್ಣರಾಜೂರ, ವ–೬೬,ಪು–೨೫
೨೫೫. ಸಂಕೀರ್ಣ.ವ.ಸಂ–ಸಂ–೧ ಡಾ.ಎಂ.ಎಂ.ಕಲಬುರ್ಗಿ, ವ–೨೮೫, ಪು–೯೩
೨೫೬. ಸಂಕೀರ್ಣ.ವ.ಸಂ–ಸಂ–೩, ಸಂ– ಡಾ.ಬಿ.ಆರ್.ಹಿರೇಮಠ, ವ–೧೨೫೭, ಪು–೪೪೯
೨೫೭. ಸೋಮನಾಥ ಚರಿತ್ರೆ, ಗದ್ಯಾನುವಾದ, ಆರ್.ಎಸ್.ರಾಮರಾವ್, ಅ–೧, ಪ–೧೧೧, ಪು–೨೩
೨೫೮. ಜೈಮಿನಿ ಭಾರತ–ಸಂ– ಬಿ.ಎಸ್.ಸಣ್ಣಯ್ಯ, ಡಾ.ರಾಮೇಗೌಡ. ಸಂ–೧೯, ಪ–೧೬, ಪು–೧೮೭
೨೫೯. ಸರ್ವಜ್ಞನ ವಚನಗಳು– ಸಂ–ಚನ್ನಪ್ಪಉತ್ತಂಗಿ,ವ–೧೭೪೭, ಪು–೨೧೪
೨೬೦. ಸಿದ್ಧ.ವ.ಸಂ–ಸಂ– ಡಾ.ಎಸ್.ವಿದ್ಯಾಶಂಕರ,ವ–೮೪೭, ಪು–೨೪೦
೨೬೧. ಬ.ವ.ಸಂ– ಸಂ–೧, ಸಂ– ಡಾ.ಎಂ.ಎಂ.ಕಲಬುರ್ಗಿ, ವ–೫೦, ಪು–೧೫
೨೬೨. ಸಿದ್ಧ.ವ.ಸಂ–ಸಂ– ಡಾ.ಎಸ್.ವಿದ್ಯಾಶಂಕರ,ವ–೯೧೭, ಪು–೨೫೯
೨೬೩. ಸರ್ವಜ್ಞನ ವಚನಗಳು– ಸಂ–ಚನ್ನಪ್ಪಉತ್ತಂಗಿ,ವ–೮೩೦, ಪು–೧೦೫
೨೬೪. ಅದೇ, ವ–೪೨೧, ಪು–೫೩
೨೬೫. ಸಂಕೀರ್ಣ.ವ.ಸಂ–ಸಂ–೨, ಸಂ– ಡಾ. ವಿದ್ಯಾಶಂಕರ, ವ–೩, ಪು–೨
೨೬೬. ಅದೇ. ವ–೭೩, ಪು–೩೨
೨೬೭. ಅದೇ. ವ–೧೯೮, ಪು–೧೦೫
೨೬೮. ಸಿದ್ಧರಾಮ ಚರಿತ್ರೆ–ಗದ್ಯಾನುವಾದ, ಆರ್.ಎಸ್.ರಾಮರಾವ್, ಅ–೩, ಪ–೪೬, ಪು–೯೩
೨೬೯. ಸಂಕೀರ್ಣ.ವ.ಸಂ–ಸಂ–೧ ಡಾ.ಎಂ.ಎಂ.ಕಲಬುರ್ಗಿ, ವ–೧೭೩೯, ಪು–೬೭೧
೨೭೦. ಸಂಕೀರ್ಣ.ವ.ಸಂ–ಸಂ–೨, ಸಂ– ಡಾ.ವಿದ್ಯಾಶಂಕರ, ವ–೭೮೩, ಪು–೨೫೫
೨೭೧. ಶಿವ.ವ.ಸಂ. ಸಂ–೧ ಡಾ.ವೀರಣ್ಣರಾಜೂರ, ವ–೩೯೩,ಪು–೧೨೫
೨೭೨. ಸಂಕೀರ್ಣ.ವ.ಸಂ–ಸಂ–೧ ಡಾ.ಎಂ.ಎಂ.ಕಲಬುರ್ಗಿ, ವ–೭೩೧, ಪು–೨೨೪
೨೭೩. ಸಂಕೀರ್ಣ.ವ.ಸಂ–ಸಂ–೨, ಸಂ– ಡಾ.ವಿದ್ಯಾಶಂಕರ, ವ–೧೧೬, ಪು–೫೦
೨೭೪. ಸಂಕೀರ್ಣ.ವ.ಸಂ–ಸಂ–೩, ಸಂ– ಡಾ.ಬಿ.ಆರ್.ಹಿರೇಮಠ, ವ–೧೦೦೭, ಪು–೩೫೪
೨೭೫. ಸಂಕೀರ್ಣ.ವ. ಸಂ–ಸಂ–೫, ಸಂ– ಡಾ.ವೀರಣ್ಣರಾಜೂರ, ವ–೮೭, ಪು–೬೫
೨೭೬. ಸಿದ್ಧ.ವ.ಸಂ–ಸಂ– ಡಾ.ಎಸ್.ವಿದ್ಯಾಶಂಕರ,ವ–೧೩೦೩, ಪು–೩೬೩
೨೭೭. ಸಂಕೀರ್ಣ.ವ.ಸಂ–ಸಂ–೪, ಸಂ– ಡಾ.ಬಿ.ಆರ್.ಹಿರೇಮಠ, ವ–೭೮೮೭, ಪು–೨೫೮
೨೭೮. ಕನ್ನಡ ಭಾರತ–ಸಂ–ಎಂ.ವಿ.ಪ್ರಸನ್ನ, ಸಭಾ–ಸಂ–೬ ಪ–೮
೨೭೯. ಜೈಮಿನಿಭಾರತ–ಸಂ– ಬಿ.ಎಸ್.ಸಣ್ಣಯ್ಯ, ಡಾ.ರಾಮೇಗೌಡ. ಸಂ–೭, ಪ–೫, ಪು–೯೩
೨೮೦. ಸಂಕೀರ್ಣ.ವ.ಸಂ–ಸಂ–೨, ಸಂ– ಡಾ.ವಿದ್ಯಾಶಂಕರ, ವ–೮೮೦, ಪು–೨೭೭
೨೮೧. ಸಂಕೀರ್ಣ.ವ.ಸಂ–ಸಂ–೪, ಸಂ– ಡಾ.ಬಿ.ಆರ್.ಹಿರೇಮಠ, ವ–೬೧೪, ಪು–೨೦೯

೨೮೨. ಅದೇ. ವ-೬೩೨, ಪು-೨೧೩
೨೮೩. ಸಂಕೀರ್ಣ.ವ. ಸಂ-ಸಂ-೫, ಸಂ- ಡಾ.ವೀರಣ್ಣರಾಜೂರ, ವ-೪೪೮, ಪು-೨೪೭
೨೮೪. ಸಿದ್ದರಾಮ ಚರಿತ್ರೆ-ಗದ್ಯಾನುವಾದ.ಆರ್.ಎಸ್.ರಾಮರಾವ್, ಅ-೭, ಪ-೧೦, ಪು-೧೬೬
೨೮೫. ಕನ್ನಡ ಜಾನಪದ ಗೀತೆಗಳು- ಡಾ.ಬಿ.ಎಸ್ ಗದ್ದಗಿಮಠ, ಪು-೧೮೭
೨೮೬. ಅದೇ. ಪು-೧೦
೨೮೭. ಅದೇ. ಪು-೧೧
೨೮೮. ಅದೇ. ಪು-೧೧
೨೮೯. ಅದೇ. ಪು-೧೨
೨೯೦. ಅದೇ. ಪು-೧೫
೨೯೧. ಅದೇ. ಪು-೧೮
೨೯೨. ಅದೇ. ಪು-೨೮
೨೯೩. ಸಂಕ್ಷೀಪ್ತ ಕನ್ನಡ ನಿಘಂಟು,ಸಂ-ವೆಂಕಟಸುಬ್ಬಯ್ಯ, ಪು-೯೧೧
೨೯೪. ದೇಶಿದೃಷ್ಠಿ- ವೀರಣ್ಣದಂಡೆ, ಪು-೬೯
೨೯೫. ಕನ್ನಡ ಜಾನಪದ ಗೀತೆಗಳು- ಡಾ.ಬಿ.ಎಸ್ ಗದ್ದಗಿಮಠ, ಪು-೩೧
೨೯೬ ಅದೇ. ಪು-೩೨
೨೯೭. ಅದೇ. ಪು-೩೩
೨೯೮. ಅದೇ. ಪು-೩೩
೩೯೯. ಅದೇ. ಪು-೩೪
೩೦೦. ಅದೇ. ಪು-೧೩೮
೩೦೧. ಅದೇ. ಪು-೧೩೯
೩೦೨. ಅದೇ. ಪು-೧೩೯
೩೦೩. ಅದೇ. ಪು-೧೩೯
೩೦೪. ಅದೇ. ಪು-೧೪೦
೩೦೫. ಅದೇ. ಪು-೧೪೧
೩೦೬. ಅದೇ. ಪು-೧೪೧
೩೦೭. ಅದೇ. ಪು-೧೪೨
೩೦೮. ಅದೇ. ಪು-೧೪೪
೩೦೯. ಅದೇ. ಪು-೨೭೯
೩೧೦. ಅದೇ. ಪು-೨೮೦
೩೧೧. ಅದೇ. ಪು-೨೮೦
೩೧೨. ಅದೇ. ಪು-೨೮೨
೩೧೩. ಅದೇ. ಪು-೨೮೩
೩೧೪. ಅದೇ. ಪು-೨೮೫
೩೧೫. ಜಾನಪದ ಸಂಪದ-ಸಂ- ಡಾ.ಮಲ್ಲಿಕಾರ್ಜುನಲಠ್ಠೆ, ಪು-೨೭೫
೩೧೬. ಶಾಸನಗಳಲ್ಲಿ ಕರ್ಣಾಟಕದ ವರ್ತಕರು. ಡಾ.ಬಿ.ಆರ್.ಹಿರೇಮಠ. ಮುನ್ನುಡಿ. ಪು-VI
೩೧೭. ಕನ್ನಡ-ಕನ್ನಡ ನಿಘಂಟು, ಸಂ-೧, ಪು-೧೧೮೭-೮೮
೩೧೮. ಅದೇ. ಕುಕ್ಕನೂರು ಶಾಸನ-೧೦೮, ಪು-೨೫೭
೩೧೯. ಹೈದರಾಬಾದ ಕರ್ನಾಟಕ ಕನ್ನಡ ಶಿಲಾಶಾಸನಗಳು. ಸಂ- ಡಾ.ವಿ.ಶಿವಾನಂದ. ಪು-XXXV
೩೨೦. ಅದೇ. ನಿಂಬರಿಗೆ-೬೧, ಕ್ರಿಶ-೧೧೩೪, ಪು-೧೪೯
೩೨೧. ಅದೇ. ನಿಂಬರಿಗೆ- ಪು-೧೫೪,೧೫೫
೩೨೨. E.C.V – II ಗುಂಡ್ಲಪೇಟೆ-ಕ್ರಿ.ಶ.೧೪೧೭, ಪು-೧೧೬
೩೨೩. E.C.V – VIII ರಾಗಿಮರೂರು-೧೦೩. ಕ್ರಿ.ಶ.೧೭-೧೮ನೇಶತ, ಪು-೧೭೨
೩೨೪. E.C.V – IX ಬೇಲೂರು-೫೧, ಕ್ರಿ.ಶ.೧೨೯೭, ಪು-೩೩
೩೨೫. E.C.V – IX ಬೇಲೂರು-೧೭೧, ಕ್ರಿ.ಶ.೧೩೮೨, ಪು-೧೪೧
೩೨೬. ಕೆಳದಿ ಅರಸರ ಶಾಸನ ಸಂ-ಕೆಳದಿ ವೆಂಕಟೇಶ ಜೋಯಿಸ. ಕೌಲೆದುರ್ಗ-೪೨. ಕ್ರಿ.ಶ-೧೫೫೩- ಪು-೭೦
೩೨೭. ಅದೇ. ಮೇಳಗೆ-೪೫, ಕ್ರಿಶ-೧೫೩೦, ಪು-೩೭
೩೨೮. EC.V - IX, ಶೃಂಗೇರಿ-೭, ಕ್ರಿಶ-೧೬೦೩, ಪು-೨೪೩

೩೨೯. ಅದೇ. ಗೊಬ್ಬೂರು–೧೩, ಕ್ರಿಶ–೧೦೮೫, ಪು–೩೪
೩೩೦. E.C.V–VIII, ರಾಮನಾಥಪೂರ–೪೬, ಕ್ರಿಶ–೧೨೫೧, ಪು–೧೪೪
೩೩೧. ಹೈದರಾಬಾದ ಕರ್ನಾಟಕ ಕನ್ನಡ ಶಿಲಾಶಾಸನಗಳು, ಸಂ–ಡಾ.ವಿ.ಶಿವಾನಂದ,ಹುಣಸೀಹಡಗಲಿ–೨೬, ಕ್ರಿಶ–೧೦೯೯, ಪು–೬೩
೩೩೨. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಸಂ–ಡಾ.ಹನುಮಾಕ್ಷಿಗೋಗಿ, ಗೊಬ್ಬೂರು–೫, ಕ್ರಿಶ–೧೧೭೦, ಪು–೧೪
೩೩೩. ಅದೇ. ನಿಂಬರಗಿ–೧೩, ಕ್ರಿಶ–೧೦೯೮, ಪು–೫೪
೩೩೪. ಅದೇ. ತೇಂಗಳಿ–೨೦, ಕ್ರಿಶ–೧೧೬೨, ಪು–೧೬೪
೩೩೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–೦೭ಗುಂಜಹಳ್ಳಿ–೭, ಕ್ರಿಶ–೧೯೮೭, ಪು–೯
೩೩೬. ಅದೇ. ಗೊಬ್ಬೂರು–೧೪,೧೭ನೇಶತ, ಪು–೭೪
೩೩೭. E.C.V – IX ಬೇಲೂರು–೧೭೧, ಕ್ರಿ.ಶ.೧೩೮೨, ಪು–೧೪೧
೩೩೮. ಕಲ್ಬುರ್ಗಿಜಿಲ್ಲೆಯ ಶಾಸನಗಳು, ಸಂ–ಡಾ.ಹನುಮಾಕ್ಷಿಗೋಗಿ, ತೇಂಗಳಿ–೨೦,ಕ್ರಿಶ–೧೧೬೨, ಪು–೧೬೪
೩೩೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–೦೭, ಸಿಂಧನೂರು–೧೯, ಕ್ರಿಶ–೧೬೪೬, ಪು–೩೭೫
೩೪೦. E.C.V - I ಮೋರಿಕಲ್ಲು–೧೧ನೇಶತ, ಪು–೩೩
೩೪೧. E.C.V – IV ತೆಳನೂರು–೧೨೩, ೧೦–೧೧ನೇಶತ, ಪು–೭೦
೩೪೨. E.C.V – VI ಮೇಲುಕೋಟೆ–೧೩೫, ಕ್ರಿಶ–೧೫೧೯, ಪು–೨೨೮
೩೪೩. ಅದೇ ಜಕ್ಕೆನಹಳ್ಳಿ – ೧೧೬, ಕ್ರಿ.ಶ. – ೧೧೭೦, ಪು–೩೩೧–೩೩೫
೩೪೪. E.C.V – VII ಶಿವನಹಳ್ಳಿ–೨೧, ಕ್ರಿಶ–೧೫೩೧, ಪು–೧೬
೩೪೫. E.C.V – IX.ಘಟ್ಟದಹಳ್ಳಿ–೨೬೧, ಕ್ರಿಶ–೧೧೨೦, ಪು–೨೪೮
೩೪೬. E.C.V – VIII.ರಾಮನಾಥಪುರ–೪೬, ಕ್ರಿಶ–೧೨೫೧, ಪು–೧೪೪
೩೪೭. E.C.V – IV.ನಂಜರಾಜಪುರ–೧೭೫, ಕ್ರಿಶ–೧೬ನೇಶತ, ಪು–೧೦೬
೩೪೮. E.C.V – V.ಟೀ,ನರಸಿಪುರ, ಕ್ರಿಶ–೧೯೭೯, ಪು–೩೯೪
೩೪೯. E.C.V – VI.ಹರಿಹರಪುರ–೧೧,ಕ್ರಿಶ–೧೩೨೨, ಪು–೧೦
೩೫೦. E.C.V – VI.ಶೃಂಗೇರಿ–೩೮, ಕ್ರಿಶ–೧೭೨೯, ಪು–೨೯೭
೩೫೧. E.C.V – VII.ರುದ್ರಪಟ್ಟಣ್ಣ–೧೦೭, ಕ್ರಿಶ–೧೩೫೭, ಪು–೧೭೫
೩೫೨. ಶಾಸನಗಳಲ್ಲಿ ಕರ್ನಾಟಕದ ವರ್ತಕರು– ಡಾ.ಬಿ.ಆರ್.ಹಿರೇಮಠ, ಪು–೧೧೯
೩೫೩. ಹೈದರಾಬಾದ ಕರ್ನಾಟಕ ಕನ್ನಡ ಶಿಲಾಶಾಸನಗಳು, ಸಂ–ಡಾ.ವಿ.ಶಿವಾನಂದ,ಎಮ್ಮಡಿಗಿ–೯೧,ಕ್ರಿಶ–೧೧೮೫, ಪು–೨೨೨
೩೫೪. E.C.V – VI.ಸಿಂಗನಲ್ಲೂರು–೫೫, ಕ್ರಿಶ–೧೩೯೮, ಪು–೪೩೩
೩೫೫. ಕೆಳದಿ ಅರಸರ ಶಾಸನ ಸಂ– ಕೆಳದಿ ವೆಂಕಟೇಶಜೋಯಿಸ, ಕೌಲೇದುರ್ಗ–೪೮, ಕ್ರಿಶ–೧೬೧೬, ಪು–೮೩
೩೫೬. ಅದೇ. ಶೃಂಗೇರಿ–೬೭, ಕ್ರಿಶ–೧೭೨೦, ಪು–೧೦೪
೩೫೭. ಅದೇ. ಕೌಲೇದುರ್ಗ–೧೮೫, ಕ್ರಿಶ–೧೬೭೪, ಪು–೨೬೬
೩೫೮. ಶಾಸನಗಳಲ್ಲಿ ಕರ್ನಾಟಕದ ವರ್ತಕರು–ಡಾ.ಬಿ.ಆರ್.ಹಿರೇಮಠ, ಪು–೧೨೮–೧೩೧
೩೫೯. ಹೈದರಾಬಾದ ಕರ್ನಾಟಕ ಕನ್ನಡ ಶಿಲಾಶಾಸನಗಳು, ಸಂ–ಡಾ.ವಿ.ಶಿವಾನಂದ, ಪು– XXXVII
೩೬೦. ಕಲ್ಬುರ್ಗಿಜಿಲ್ಲೆಯ ಶಾಸನಗಳು, ಸಂ–ಡಾ.ಹನುಮಾಕ್ಷಿಗೋಗಿ, ಸರಡಗಿ–೬, ಕ್ರಿಶ–೧೧೧೦, ಪು–೧೦೧
೩೬೧. ಅದೇ. ಅಂಕಲಗಿ–೩, ಕ್ರಿಶ–೧೦೭೭, ಪು–೨೭೩
೩೬೨. ಅದೇ. ಸೇಡಂ–೧೭, ಕ್ರಿಶ–೧೧೩೭, ಪು–೫೦೧
೩೬೩. ಅದೇ. ಹರಸೂರು–೪, ಕ್ರಿಶ–೧೧೭೨, ಪು–೫೪೦
೩೬೪. ಅದೇ. ಗೊಬ್ಬೂರು–೬೮, ಕ್ರಿಶ–೧೧೪೫, ಪು–೧೭೩
೩೬೫. E.C.V – IV ವೆಂಕಟಯ್ಯನಛತ್ರ–೧೫೦, ಪು–೧೫೪
೩೬೬. E.C.V – IX ಬೇಲೂರು–೯, ಕ್ರಿಶ–೧೪೨೭, ಪು–೬
೩೬೭. ಆದೇ. ಬೇಲೂರು–೫೫, ಕ್ರಿಶ–೧೨೯೭, ಪು–೩೭
೩೬೮. ಶಾಸನಗಳಲ್ಲಿ ಕರ್ನಾಟಕದ ವರ್ತಕರು–ಡಾ. ಬಿ.ಆರ್.ಹಿರೇಮಠ, ಪು–೧೨೩–೧೨೫
೩೬೯. ಹೈದರಾಬಾದ ಕರ್ನಾಟಕ ಕನ್ನಡ ಶಿಲಾಶಾಸನಗಳು, ಸಂ–ಡಾ.ವಿ.ಶಿವಾನಂದ, ಗೊಬ್ಬೂರು–೧೪,ಕ್ರಿಶ–೧೦೫೮, ಪು–೩೨
೩೭೦. ಶಾಸನಗಳಲ್ಲಿ ಕರ್ನಾಟಕದ ವರ್ತಕರು–ಡಾ.ಬಿ.ಆರ್.ಹಿರೇಮಠ, ಪು–೧೧೪
೩೭೧. ಹೈದರಾಬಾದ ಕರ್ನಾಟಕ ಕನ್ನಡ ಶಿಲಾಶಾಸನಗಳು, ಸಂ–ಡಾ.ವಿ.ಶಿವಾನಂದ, ಕಲಬುರ್ಗಿ– ೧೧೩, ಕ್ರಿಶ–೧೬೦೦, ಪು–೨೬೨

೩೭೨. ಅದೇ. ಹರದನಹಳ್ಳಿ–೨೭೪, ಕ್ರಿ.ಶ–೧೪೮೫, ಪು–೧೭೦
೩೭೩. E.C.V – VIII ಹೆಬ್ಬಾಲೆ–೧೫, ಕ್ರಿ.ಶ–೧೧೪೯, ಪು–೧೧೦
೩೭೪. ಶಾಸನಗಳಲ್ಲಿ ಕರ್ನಾಟಕದ ವರ್ತಕರು–ಡಾ.ಬಿ.ಆರ್.ಹಿರೇಮಠ, ಪು–೧೧೫
೩೭೫. ಕಲ್ಬುರ್ಗಿಜಿಲ್ಲೆಯ ಶಾಸನಗಳು, ಸಂ–ಡಾ.ಹನುಮಾಕ್ಷಿಗೋಗಿ, ಸರಡಗಿ–೬, ಕ್ರಿ.ಶ–೧೧೧೦, ಪು–೧೦೧
೩೭೬. ಅದೇ. ಹೊಡಲಿ–೨೬, ಕ್ರಿ.ಶ–೧೧೮೦, ಪು–೮೧
೩೭೭. ಅದೇ. ಇಂಗಳಗಿ–೫, ಕ್ರಿ.೧೨೦೯, ಪು–೧೨೪
೩೭೮. E.C.V – II.ಮಾದಾಪಟ್ಟಣ್ಣ–ಕ್ರಿ.ಶ–೧೭೫೧, ಪು–೬೩
೩೭೯. ಅದೇ. ಸುತ್ತೂರು–ಕ್ರಿ.ಶ–೧೭೭೧, ಪು–೩೨೫
೩೮೦. ಕೆಳದಿಅರಸರ ಶಾಸನ ಸಂ–ಕೆಳದಿ ವೆಂಕಟೇಶ ಜೋಯಿಸ, ಕೌಲೇದುರ್ಗ–೨೨೯, ಕ್ರಿ.ಶ– ೧೭೧೨,ಪು–೪೦೪
೩೮೧. E.C.V – VI.ಮೇಲುಕೋಟೆ–೨೧೫, ಕ್ರಿ.ಶ–೧೭೨೪, ಪು–೨೮೪
೩೮೨. E.C.V – IX ಶೃಂಗೇರಿ–೩೬, ಕ್ರಿ.ಶ–೧೬೩೦, ಪು–೨೮೪
೩೮೩. E.C.V – VIII ಕುದುರೆಗುಂಡಿ–೭೮, ಕ್ರಿ.ಶ–೧೨೮೩, ಪು–೨೮೯
೩೮೪. ಅದೇ. ಚೋರಡಿ–೨೨೩, ಕ್ರಿ.ಶ–೧೭೦೮, ಪು–೨೯೦
೩೮೫. E.C.V – II ರಾಘವಪುರ–ಕ್ರಿ.ಶ–೧೫೦೭, ಪು–೩೨
೩೮೬. E.C.V – VI ಮೇಲುಕೋಟೆ–೧೨೯, ಕ್ರಿ.ಶ–೧೫೪೫, ಪು–೨೨೨
೩೮೭. ಕಲ್ಬುರ್ಗಿಜಿಲ್ಲೆಯ ಶಾಸನಗಳು, ಸಂ–ಡಾ.ಹನುಮಾಕ್ಷಿಗೋಗಿ, ಬಂದರವಾಡ–೭, ಕ್ರಿ.ಶ–೧೧೧೮, ಪು–೨೨
೩೮೮. ಅದೇ. ಆಳಂದ–೧,ಕ್ರಿ.ಶ–೧೦೮೨, ಪು–೩೮
೩೮೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–೦೭ಕಲ್ಲೂರು–೬೨, ಕ್ರಿ.ಶ–೧೫೪೪, ಪು–೨೮೨
೩೯೦. E.C.V – VI ಮೇಲುಕೋಟೆ ಶಾಸನ,
೩೯೧. ಕರ್ನಾಟಕದ ಕೈಫಿಯತ್ತುಗಳು ಸಂ–ಡಾ.ಎಂ.ಎಂ.ಕಲಬುರ್ಗಿ, ಪು– VII
೩೯೨. ಕನ್ನಡ ದಾಖಲು ಸಾಹಿತ್ಯ–ಡಾ.ಕೆ.ರವೀಂದ್ರನಾಥ, ಪು–೧೦೭–೦೮
೩೯೩. ಕರ್ನಾಟಕದ ಕೈಫಿಯತ್ತುಗಳು ಸಂ–ಡಾ.ಎಂ.ಎಂ.ಕಲಬುರ್ಗಿ, ಪು–೮೨
೩೯೪. ಅದೇ. ಪು–೫೧೮
೩೯೫. ಅದೇ. ಪು–೫೬೩
೩೯೬. ಅದೇ. ಪು–೪೩೮
೩೯೭. ಅದೇ. ಪು–೫೮೮–೮೯
೩೯೮. ಅದೇ. ಪು–೨೬೩–೬೪
೩೯೯. ಅದೇ. ಪು–೩೦೪
೪೦೦. ಕನ್ನಡ ದಾಖಲು ಸಾಹಿತ್ಯ–ಡಾ.ಕೆ.ರವೀಂದ್ರನಾಥ, ಪು–೧೧೭
೪೦೧. ಅದೇ. ಪು–೬೮
೪೦೨. ಪ್ರಾಚೀನ ಶಾಸನ ಲೇಖನ ಸಂಗ್ರಹ–ಮೈಸೂರು ಸರಕಾರದ ಪತ್ಯಪುಸ್ತಕ ಮುದ್ರಣಾಲಯ, ಪು–೪೯
೪೦೩. ಅದೇ. ಪು–೩೬
೪೦೪. ಅದೇ. ಪು–೫೪
೪೦೫. ಅದೇ. ಪು–೮೭
೪೦೬. ಅದೇ. ಪು–೧೮೦

ಅಧ್ಯಾಯ–ನಾಲ್ಕು

ಕೃಷಿ ಉಪಕರಣಗಳು: ತಯಾರಿಕೆ–ಸಂರಕ್ಷಣೆ

೧. ಕಟ್ಟಿಗೆ
೨. ಕಬ್ಬಿಣ
೩. ಚರ್ಮ
೪. ಇತರೆ

ಅಧ್ಯಾಯ-ನಾಲ್ಕು

ಕೃಷಿ ಉಪಕರಣಗಳು: ತಯಾರಿಕೆ-ಸಂರಕ್ಷಣೆ

ಕೃಷಿ ಕಾರ್ಯದ ನಿರ್ವಹಣೆಗೆ ಅನೇಕ ಬಗೆಯ ಸಾಧನ ಸಲಕರಣೆಗಳ ಅವಶ್ಯಕತೆ ಇದೆ. ಕಾಯಕ ಜೀವಿಗಳಿಗೆ ಕೈಗಳೇ ಆಧಾರ, ಕೈಗಳ ಮುಂದುವರಿಕೆಯೇ ಕೃಷಿ ಉಪಕರಣಗಳು. ಉಪಕರಣಗಳ ವಿನ್ಯಾಸವನ್ನು ತನ್ನ ಅನುಕೂಲದ ರೀತಿಯಲ್ಲಿಯೇ ತಯಾರಿಸಿಕೊಂಡಿದ್ದಾರೆ. ಕೊಯ್ಯುವ ಕುಡುಗೋಲಿನಿಂದ ಹಿಡಿದು ನೇಗಿಲ, ಬಂಡಿಗಳಂತಹ ಸಂಕೀರ್ಣ ಅಂಶಗಳನ್ನು ಹೊಂದಿರುವ ಉಪಕರಣದವರೆಗೆ ಇದರ ವ್ಯಾಪ್ತಿ ಇದೆ. ಉಳಲು ನೇಗಿಲು, ಹರಗಲು ಕುಂಟೆ, ಬಿತ್ತಲು ಕೂರಿಗೆ, ಸಾಲು ಮುಚ್ಚಲು ಕೊರಡು, ಎತ್ತುಗಳಿಗೆ ಹೂಡಿ ಎಳೆಸಲು ನೊಗ, ಕೇರಲು ಮೊರ, ಹೊತ್ತೊಯ್ಯಲು ಬುಟ್ಟಿ, ಕೊಯ್ಯಲು ಕುಡುಗೋಲು, ಕತ್ತರಿಸಲು ಕೊಡಲಿ, ಧಾನ್ಯಗಳ ಸಂಗ್ರಹಣೆಗೆ ಕಣಜ, ಸಾಗಾಣಿಕೆಗೆ ಬಂಡಿ ಹೀಗೆ ಅವನ ಸಾಧನ ಸಲಕರಣೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇವುಗಳ ಅಗತ್ಯತೆ ಅರ್ಥಮಾಡಿಕೊಳ್ಳಲು 'ಹತಾರ ಇಲ್ಲದವನು ಹೊತ್ತಾರೆ ಬಾ' 'ಮುಟ್ಟು ಇಲ್ಲಾಂತ ಮೂರು ಮನೆಗೆ ಹೋದರೆ ಕೆಟ್ಟಿತವನ ಒಕ್ಕಲುತನ', ಮುಂತಾದ ಗಾದೆ ಮಾತುಗಳನ್ನು ಕಾಣಬಹುದಾಗಿದೆ.

ಕನ್ನಡ ವಿಷಯ ವಿಶ್ವಕೋಶದಲ್ಲಿ ಕೃಷಿ ಸಾಧನೋಪಕರಣಗಳನ್ನು ಕುರಿತು ಈ ರೀತಿ ಹೇಳಲಾಗಿದೆ. ವ್ಯವಸಾಯ ಎಂದ ಕೂಡಲೇ ನಮ್ಮ ಕಣ್ಣೆದುರು ನಿಲ್ಲುವ ಉಪಕರಣ ನೇಗಿಲು, ವ್ಯವಸಾಯದಲ್ಲಿ ಉಪಕರಣಗಳ ಇತಿಹಾಸ ನೋಡಿದರೆ ನೇಗಿಲು ಇತ್ತೀಚಿನದು. ವ್ಯವಸಾಯದ ಮೊದಲ ಹಂತದಲ್ಲಿ ಶಿಲಾಯುಗದ ಮಾನವ ಮೊದಲು ಬಳಸಿರಬಹುದಾದ ಉಪಕರಣ ಗುಳಿದಸಿ [dibble] ಅಥವಾ ಚೂಪಾದ ಕೋಲು. ಇದು ಒಂದು ಕಟ್ಟಿಗೆಯ ತುಂಡು ಒಂದು ಕಡೆ ಚೂಪಾಗಿರುತ್ತಿತ್ತು. ಕಂದ ಮೂಲಗಳನ್ನು ಅಗೆಯಲು, ಹಣ್ಣು ಹಂಪಲು ಬೀಳಿಸಲು, ರಕ್ಷಣೆಗೆ ಸ್ತ್ರೀಯರು ಬಳಸುತ್ತಿದ್ದರು. "............ಬೋರ್ನಿಯಾದ ಮೂಲನಿವಾಸಗಳು ಚೂಪಾದ ಕೋಲು [pointed stick] ಗಳಿಂದ ಓಡಾಡುವಾಗಲೇ ಭೂಮಿಯ ಮೇಲೆ ಗುಳಿ ಮಾಡಿ ಬೀಜವನ್ನು ಬಿತ್ತುತ್ತಾರೆ. ಮಡಗಾಸ್ಕರ್ ಮೂಲನಿವಾಸಿಗಳ ಹೆಂಗಸರು ಸೈನಿಕರ ಶಿಸ್ತಿನಂತೆ ವ್ಯವಸಾಯ ಪ್ರದೇಶದಲ್ಲಿ ನಿಂತು ತಮ್ಮ ಚೂಪಾದ ಕೋಲುಗಳಿಂದ ಗುಳಿ ಮಾಡಿ ಬೀಜ ಬಿತ್ತುವುದನ್ನು ಈಗಲೂ ನೋಡಬಹುದು. ದಕ್ಷಿಣ ಭಾರತದ

ಕುರುಬರು ತಾವು ವಾಸಿಸುವ ಅರಣ್ಯದ ಅಂಚಿನಲ್ಲಿ ಚೂಪಾದ ಕೋಲಿನಿಂದ ಅಗೆದು ರಾಗಿ ಬಿತ್ತುತ್ತಾರೆಂದು ವಿವರಿಸಲಾಗಿದೆ. ಈ ಚೂಪಾದ ಕೋಲು ಬೆಂಕಿಯಿಂದ ಸುಟ್ಟು ಹರಿತ ಮಾಡಿದ ಮರದ ತುಂಡು ಎಂದು ಅಬೆದುಬೋಯ್ ಬರೆಯುತ್ತಾನೆ. ಇದೇ ಕೋಲು ಕಾಲಕ್ರಮೇಣ ಚೂಪಾದ ಭಾಗದಲ್ಲಿ ಅಗಲವಾಗಿರುವಂತೆ ಕಾಣುತ್ತದೆ. ...."[೧] ಎಂದು ಹೇಳುತ್ತಾ ಉಪಕರಣದ ಬೆಳವಣಿಗೆಯ ಎರಡನೆಯ ಹಂತದಲ್ಲಿ ಗುದ್ದಲಿ ಬಳಕೆ ಕಂಡುಬರುತ್ತದೆ. ಮುಂಭಾಗದಲ್ಲಿ ಬಾಗಿದ ಮರದ ತುಂಡು, ಚೂಪಾದ ಕೋಲು ಅಗೆಯುವ ಸಾಧನವಾದರೆ, ಇದು ಕಡಿಯುವಂತದ್ದು ಮತ್ತು ಅದಕ್ಕಿಂತ ಪರಿಣಾಮಕಾರಿಯಾದುದು. ಈ ಆಯುಧವೇ ಮುಂದೆ ಅಗಲವಾದ ಗುದ್ದಲಿಯಾಗಿ, ಕೊಡಲಿಯಾಗಿ ಬೆಳೆವಣಿಗೆ ಹೊಂದಿರಬಹುದು. ಚೂಪು ಕೋಲಾಗಲಿ, ಗುದ್ದಲಿಯಾಗಲಿ ಉಳುಮೆಯ ಉಪಕರಣಗಳಾಗಿದ್ದವು. ಈ ವಕ್ರಾಕಾರದ ಮರದ ತುಂಡೇ ಮುಂದೆ ನೇಗಿಲಾಗಿ ಪರಿವರ್ತನೆಯಾಗಿರಬೇಕು. ನವಶಿಲಾಯುಗದವರೆಗೆ ಮರದ ನೇಗಿಲೇ ಬಳಕೆಯಲ್ಲಿದ್ದು, ಮನುಷ್ಯರೆ ಎಳೆದು ಉಳುಮೆ ಮಾಡುತ್ತಿದ್ದರು. ಕಾಲಕ್ರಮೇಣ ಮನುಷ್ಯ ಪಳಗಿಸಿದ ಕುದುರೆ, ಎತ್ತು, ಕೋಣ, ಮುಂತಾದ ಪ್ರಾಣಿಗಳನ್ನು ಬಳಸಿ ಉಳುಮೆ ಮಾಡಲು ಮುಂದಾಗಿರಬೇಕು. ಮನುಷ್ಯ ಲೋಹವನ್ನು ಕಂಡುಕೊಂಡ ಮೇಲೆ ನೇಗಿಲ ಬಳಕೆ ಉಳುಮೆಯಲ್ಲಿ ಹೆಚ್ಚಾಗಿ ಬಳಸಿರುವ ಉಪಕರಣವಾಗಿದೆ.

ಸಾಮಾನ್ಯವಾಗಿ ಎಲ್ಲಾ ಪ್ರಮುಖ ಪುರಾಣಗಳೂ ನೇಗಿಲನ್ನು ವೈಭವೀಕರಿಸಿ ವರ್ಣಿಸಿವೆ. ಭಾರತೀಯ ಪುರಾಣಗಳ ಪ್ರಕಾರ "ದೇವತೆಗಳು ಭೂಲೋಕದ ಹರಿಕಾರನಾದ ಮನುವಿಗೆ ನೇಗಿಲು ಬಳಕೆಯನ್ನು ಹೇಳಿಕೊಟ್ಟರಂತೆ, ರಾಮಾಯಣದ ನಾಯಕಿಯಾದ ಸೀತೆಗೆ 'ಸೀತೆ' ಎಂದು ಹೆಸರು ಬರುವುದು ಈ ನೇಗಿಲಿನಿಂದ. 'ಜನಕ ಮಹಾರಾಜನು' ಸಂತಾನಾರ್ಥವಾಗಿ ಯಜ್ಞಮಾಡಲು ಭೂಮಿಯನ್ನು ಶುದ್ಧಮಾಡುತ್ತಿದ್ದಾಗ ಸೀತೆ (ನೇಗಿಲಿನಿಂದ ಉತ್ತ ಭೂಮಿ ಅಥವಾ ಸಾಲು)ಯಿಂದ ಹೊರಬಿದ್ದ ಕಾರಣ ಸೀತೆಯೆಂದು ಹೆಸರು. ಮಹಾಭಾರತದ ಪ್ರಕಾರ ಬಲರಾಮ ನೇಗಿಲನ್ನೂ, ಶ್ರೀ ಕೃಷ್ಣ ಕೊಳಲನ್ನೂ ಹಿಡಿದಿದ್ದಾರೆ. ಕೃಷ್ಣನಿಗೆ ಇನ್ನೊಂದು ಹೆಸರು ಗೋಪಾಲನೆಂದು, ಅಂದರೆ ಒಂದು ವ್ಯವಸಾಯವನ್ನು ಇನ್ನೊಂದು ಪಶುಪಾಲನೆಯನ್ನೂ ಸೂಚಿಸುವಂತೆ ಕಾಣುತ್ತದೆ. ನೇಗಿಲು ಮತ್ತು ಕೊಳಲು ಇವೆರಡು ಮಾನವ ನಾಗರೀಕತೆಯ ವಿಕಾಸದಲ್ಲಿ ಭೌತಿಕ ಹಾಗೂ ಸೌಂದರ್ಯೋಪಾಸನೆಯ ಸಂಕೇತಗಳಾಗಿರುವಂತೆ ತೋರುತ್ತದೆ ಎಂಬ ಅಭಿಪ್ರಾಯ ಇದ್ದರೂ ವೇದಗಳು, ಉಪನಿಷತ್ತುಗಳು, ಸ್ಮೃತಿಗಳು ನೇಗಿಲ ಕುರಿತು ಹಾಡಿ ಹೊಗಳಿರುವುದಲ್ಲದೆ, ಅದು ದೇವತೆಯೆಂಬಷ್ಟರ ಮಟ್ಟಿಗೆ ಕಂಡಿರಿಸಿವೆ".[೨]

ಕೃಷಿಯಲ್ಲಿ ಒಂದೊಂದು ಸಾಗುವಳಿ ಕೆಲಸಕ್ಕೂ ವಿಧವಿಧವಾದ ಉಪಕರಣಗಳು ಬೇಕು. ಭೂಮಿಯನ್ನು ಉಳಲು ಗುದ್ದಲಿ, ಪಿಕಾಸೆ, ಸಲಿಕೆ(ಸಲಾಕೆ), ನೇಗಿಲು, ರಂಟೆ, ಕುಂಟೆ, ಕೊರಡು ಬೇಕು. ಬಿತ್ತನೆ ಕೆಲಸಕ್ಕೆ ನೇಗಿಲು, ಕೂರಿಗೆ, ಸೆಡ್ಡೆ, ಕೊಲ್ಡು, ಕುಂಟೆ ಬೇಕಾಗುತ್ತದೆ. ಸಾಗುವಳಿ ಮಾಡಲು ಕೈಗುದ್ದಲಿ, ಕುರ್ಜಿಗಿ, ಎಡೆಕುಂಟೆಗಳು ಬೇಕು. ನೀರೆತ್ತಲು ಏತ, ಕಪ್ಲಿ, ಸಲಿಕೆಗಳು ಮತ್ತು ಕೊಯ್ಲು ಮಾಡಲು ಕುಡುಗೋಲು, ಮಚ್ಚು, ಬಡಿಗಿ, ಬಡಿಮಣಿ, ಕಲ್ಲಿನ ರೋಲು(ರೋಣಗಲ್ಲು), ಜಂತಗುಂಟೆ, ಗ್ನಾರಿ, ಮ್ಯಾಟ, ಬುಟ್ಟಗಳು(ಮಂಕರಿ)ಬೇಕು. ಸಾಗಾಟಕ್ಕೆ ಚಕ್ಕಡಿ, ಬಂಡಿಬೇಕಾಗುತ್ತದೆ.

ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಒಕ್ಕಲುತನ ಸಾಮಾನುಗಳ ವ್ಯವಸ್ಥೆ ಮಾಡಿಕೊಳ್ಳುವುದನ್ನು ಕುರಿತು ಈ ರೀತಿ ಹೇಳಲಾಗಿದೆ. "ಭೂಮಿಯ ವ್ಯವಸಾಯಕ್ಕೆ ಬೇಕಾಗಿರುವ ಯಾವತ್ತು ಕಟ್ಟಿಗೆ, ಕಬ್ಬಿಣದಿಂದ

ಮಾಡಲ್ಪಟ್ಟಿರುವ ಸಾಮಾನುಗಳು ನೇಗಿಲ, ಮಡಿಕೆ, ರೆಂಟೆ, ಕುಂಟೆ, ಕೂರಿಗಿ, ಯಡಿಯಕುಂಟೆ, ಈಸು ನೊಗಗಳು ಶಿಲ್ಪಶಾಸ್ತ್ರ ಕ್ರಮದಂತೆ ಅನುವಾಗಿಯೂ ಬಲತ್ಕಾರವಾಗಿಯೂ ಇರಬೇಕು. ಕಬ್ಬಿಣದ ಸಾಮಾನುಗಳಲ್ಲಿ ಮುಂಜ, ಬಳಿ, ಕುಡ, ಮೊಳಿ, ಕೊಡ್ಲಿ, ಗುದ್ದಲಿ, ಬೆಡಗ, ಬಾಚಿ, ಉಳಿ, ಕುರುಪೆ, ಕುಡುಗೋಲು ಮುಂತಾದ ಯಾವತ್ತು ಸಾಮಾನುಗಳು ಹದನಾಗಿಯೂ, ಮೊನೆಯಾಗಿಯೂ, ದಪ್ಪವಾಗಿಯೂ, ಬಲತ್ಕಾರವಾಗಿಯೂ ಕೈಯಲ್ಲಿ ಅನುವಾಗಿಯೂ ಇರಬೇಕು. ಮುಖ್ಯವಾಗಿ ಇದರ ತಾತ್ಪರ್ಯವೇನೆಂದರೆ, ತನ್ನ ಯಾವತ್ತೂ, ಸಾಮಾನುಗಳು ಚೆನ್ನಾಗಿ ಇದ್ದು ಮಿಣಿ, ಕಣ್ಣಿ, ಹಗ್ಗ ಮೊದಲಾದವುಗಳು ಬಲತ್ಕಾರವಾಗಿ ಇರಬೇಕು"[೩] ಎನ್ನಲಾಗಿದೆ.

ಉಪಕರಣಗಳ ಸ್ವರೂಪ ಆಯಾ ಪ್ರದೇಶದ ಕೃಷಿ ವಿಧಾನಗಳನ್ನು ಅವಲಂಬಿಸಿದ್ದು, ಉಪಕರಣಗಳ ಹೆಸರನ್ನು ಕರೆಯುವಲ್ಲಿಯೂ ಪ್ರಾದೇಶಿಕ ಭಿನ್ನತೆ ಕಂಡುಬರುತ್ತದೆ. ಮಲೆನಾಡಿನ ಕೃಷಿಕರು 'ಮುಟ್ಟು'ಗಳೆಂದೂ, ಬಯಲುಸೀಮೆಯವರು 'ಗಳೇವು'ಗಳೆಂದು ಕರೆಯುವುದು ರೂಢಿಗತವಾಗಿ ಬಂದಿದೆ. ಉಪಕರಣಗಳ ಪ್ರಕಾರಗಳು ಹಾಗೂ ತಯಾರಿಕೆಯ ವಿಧಾನವನ್ನು ಶಾಸ್ತ್ರೀಯವಾಗಿ ಅಧ್ಯಯನಕ್ಕೆ ಒಳಪಡಿಸಿಕೊಂಡು ಚರ್ಚಿಸುವ ಅಗತ್ಯವಿದ್ದು. ಶಾಸ್ತ್ರಕಾರರಿಂದ ಆದಿಯಾಗಿ ಕನ್ನಡ ಕಾವ್ಯಗಳಲ್ಲಿ ಉಲ್ಲೇಖಿತವಾದ ಉಪಕರಣದ ಪ್ರಕಾರಗಳನ್ನು ಮತ್ತು ಅವುಗಳ ತಯಾರಿಕೆಯ ವಿಧಾನವನ್ನು ಕುರಿತು ಸ್ಥೂಲವಾಗಿ ಈ ಕೆಳಗಿನಂತೆ ವರ್ಗೀಕರಿಸಿಕೊಳ್ಳಲಾಗಿದೆ.

೧. ಕಟ್ಟಿಗೆ (ಮರ) ಉಪಕರಣಗಳು

ಗಿಡಮರಗಳ ತುಂಡುಗಳಿಂದ ಮರದ ಉಪಕರಣಗಳನ್ನು ತಯಾರಿಸಲಾಗುತ್ತದೆ. ವ್ಯವಸಾಯದ ಉಪಕಸುಬುದಾರರಾದ ಬಡಗಿ ಮತ್ತು ಕಮ್ಮಾರರು ಈ ಉಪಕರಣಗಳ ನಿರ್ಮಾಣ ಮತ್ತು ದುರಸ್ಥಿಯನ್ನು ನೆರವೇರಿಸುತ್ತಾರೆ. ಭೂಮಿ ಉಳುಮೆಗೆ ಬೇಕಾದ ಶಕ್ತಿ, ಗುಣ, ತೇವಾಂಶ, ಉಳುಮೆಯ ಆಳ, ಅಗಲಳತೆಗೆ ಅನುಗುಣವಾಗಿ ಕೃಷಿ ಉಪಕರಣಗಳ ನಿರ್ಮಾಣ ಮಾಡಲಾಗುತ್ತದೆ. ಕಬ್ಬಿಣದ ಬಳಕೆಯ ನಂತರ ಪೂರ್ಣ ಪ್ರಮಾಣದ ಮರದಿಂದಲೇ ತಯಾರಾದ ಉಪಕರಣಗಳು ಇಲ್ಲವೇ ಇಲ್ಲ ಎಂದು ಹೇಳಬಹುದು. ಪ್ರಾರಂಭದ ಕೈ ಉಪಕರಣಗಳ ನಂತರ ಮಾನವ ಶಕ್ತಿಯ ಜೊತೆಗೆ ಪ್ರಾಣಿಶಕ್ತಿಯನ್ನು ಉಳುಮೆಯಲ್ಲಿ ಬಳಸಲು ಮುಂದಾದಾಗ ಅನೇಕ ವಿನ್ಯಾಸದ ಉಪಕರಣಗಳ ಸೃಷ್ಟಿಯಾದವು. ಇಂತಹ ಉತ್ತಮವಾದ ಕೃಷಿ ಉಪಕರಣಗಳನ್ನು ಈ ಕೆಳಗಿನಂತೆ ಚರ್ಚಿಸಬಹುದು.

ನೇಗಿಲು : ಅನಾದಿ ಕಾಲದಿಂದಲೂ ಬಳಸಿಕೊಂಡು ಬಂದ ಒಂದು ಕೃಷಿ ಉಪಕರಣ. ವ್ಯವಸಾಯವು ಸ್ತ್ರೀಯರಿಂದ ಪುರುಷರಿಗೆ ಹಸ್ತಾಂತರವಾಗಲು ಕಾರಣವಾದ ಉಪಕರಣ ನೇಗಿಲು. 'ಗಟ್ಟಿಯಾದ ಭೂಮಿಯನ್ನು ಸಡಿಲ ಮಾಡಲು ನೇಗಿಲಿನಿಂದ ಉಳುಮೆ ಮಾಡುವುದುಂಟು'. ಸುಮಾರು ಐದು ಸಾವಿರ ವರ್ಷಗಳಿಂದ ನೇಗಿಲಿನಿಂದ ಉಳುಮೆಯ ಕಾರ್ಯ ನಡೆಯುತ್ತಿದ್ದು, ಅದರಲ್ಲಿ ಗಣನೀಯವಾದ ಸುಧಾರಣೆಯಾಗಿರುವುದು ಕಂಡುಬರುವುದಿಲ್ಲ. ನೇಗಿಲು ಉಳುಮೆಗೆ, ಬಿತ್ತಲು, ಮಧ್ಯಾಂತರ ಬೇಸಾಯ ಮಾಡಲು,ಕೆಲವು ಬೆಳೆಗಳನ್ನು ಅಗೆಯಲು ಬಳಸುವ ಏಕೈಕ ಬಹುಪಯೋಗಿ ಉಪಕರಣವಾಗಿದೆ. "ಮರದ ನೇಗಿಲಿನಲ್ಲಿ ಅನೇಕ ನಮೂನೆಗಳಿದ್ದು ಅವುಗಳ ಗಾತ್ರ ಮತ್ತು ಆಕಾರ ಆಯಾ ಪ್ರದೇಶದ ಹವಮಾನ, ಭೂಗುಣ, ಬೆಳೆಗಳಿಗೆ ಅನುಸಾರವಾಗಿ ಮಾರ್ಪಾಡಾಗಿವೆ. ಕಪ್ಪು ಎರೆ ಜಮೀನಿನಲ್ಲಿ ಮರದ ನೇಗಿಲಿನ ಗಾತ್ರ ದೊಡ್ಡದಾಗಿದ್ದರೆ ಕರಾವಳಿ ಪ್ರದೇಶದಲ್ಲಿ ಅತೀ ಚಿಕ್ಕದಾಗಿದೆ.

ಓರಿಸ್ಸಾದಲ್ಲಿ ಬಳಸುವ ಮರದ ನೇಗಿಲು ಬಾತುಕೋಳಿ ಕಾಲಿನ ಆಕಾರ ಹೊಂದಿದೆ”[೪] ಎಂದು ಎಂ.ಎಂ.ಹೊಸಮನಿಯವರು ಕೃಷಿ ಉಪಕರಣಗಳು ಕೃತಿಯಲ್ಲಿ ಅಭಿಪ್ರಾಯ ಪಡುತ್ತಾರೆ. ಬಯಲು ಸೀಮೆಯಲ್ಲಿ ನೇಗಿಲು ಎಂದು ಕರೆದರೆ, ಉತ್ತರ ಕರ್ನಾಟಕದಲ್ಲಿ ಮಡಿಕೆ ಎನ್ನುತ್ತಾರೆ. ಮರದ ನೇಗಿಲಿನ ಭಾಗಗಳು ಒಟ್ಟು ಎಂಟು “ಇಸ, ಯುಗ, ನಿರ್ಯೋಲ, ನಿರ್ಯೋಲಪಸಿಕ, ಹಲಸ್ತೋನ, ಅಡ್ಡಚಲ್ಲ, ಸೌಲ ಮತ್ತು ಪಚ್ಚನಿ. ವರ್ತಮಾನ ಕಾಲದಲ್ಲಿಯೂ ಸಹ ನೇಗಿಲು ಎಂಟು ಭಾಗಗಳನ್ನೇ ಹೊಂದಿದೆ; ಮೇಣಿ, ಹಿಡಿಕ್ಕಿ, ಬಾಳು, ಈಚು, ಕುಳ, ಜಿಗಣಿ, ಕಿಚಡಿಬೆಣೆ ಮತ್ತು ಚಕ್ಕೆ”[೫] ಎಂಬ ವಿಚಾರವನ್ನು ರೈತ ಜಾನಪದ ಕೃತಿಯಲ್ಲಿ ಡಾ.ಮೃತ್ಯುಂಜಯ ಹೊರಕೇರಿಯವರು ಅಭಿಪ್ರಾಯ ಪಡುತ್ತಾರೆ.

ಕೃಷಿ ಉಪಕರಣಗಳ ತಯಾರಿಕೆ ವಿಧಾನ ಕುರಿತಾದ ಮಾಹಿತಿ ಪ್ರಾಚೀನ ಶಾಸ್ತ್ರ, ಕಾವ್ಯ, ಮತ್ತು ದಾಖಲು ಸಾಹಿತ್ಯಗಳಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಉಪಕರಣಗಳ ಕುರಿತಾದ ಉಲ್ಲೇಖಗಳು ಮಾತ್ರ ಕಾಣಸಿಗುತ್ತವೆ. ನೇಗಿಲ ಕುರಿತಾದ ಮಾಹಿತಿ ಪ್ರಾಚೀನ ಕಾವ್ಯಕೃತಿಗಳಲ್ಲಿ ಹೀಗೆ ಉಲ್ಲೇಖಗೊಂಡಿದೆ. ನಯಸೇನನ ಧರ್ಮಾಮೃತದಲ್ಲಿ ‘ಮೂಗಿನೊಳುವಾತಂಗೆ ನೇಗಿಲಂ ಕೊಟ್ಟರೆಂಬಂತೆ ....’[ಅ-೨,ಪು-೭೫]. ಬಸವಣ್ಣನವರ ವಚನವೊಂದರಲ್ಲಿ ‘ಹೊನ್ನನೇಗಿಲ ಉತ್ತು ಎಕ್ಕೆಯ ಬೀಜವ ಬಿತ್ತುವರೆ?..............’[ವ-೫೯೪,ಪು-೧೪೯]. ಕೆಳದಿನೃಪವಿಜಯದಲ್ಲಿ ‘ನೇಗಿಲ ಮೊನೆಗೆ ನಿಕ್ಷೇಪಕಲಾಹದ ಬಳೆಗಳ್...........’[ಪು-೨೪]. ಲೋಕೋಪಕಾರದಂತ ಶಾಸ್ತ್ರಕೃತಿಯಲ್ಲಿಯೂ ನೇಗಿಲು ಕುರಿತು ‘ನೇಗಿಲು ಮೆಟ್ಟಿಂಸಂಧಿಸಿ ಪೋಗದೆ ನಿಲೆನೆಟ್ಟ ....’[ಅ-೪,ಪು-೬೦] ಅಲ್ಲದೆ ನೇಗಿಲ ಕುರಿತಾಗಿ ಪವಿತ್ರ ಭಾವನೆ ಮತ್ತು ನೇಗಿಲು ಹೊನ್ನಿನಷ್ಟೇ ಶ್ರೇಷ್ಠವಾದುದು ಎಂದು ನಂಬಲಾಗಿತ್ತು.

ತಯಾರಿಕೆಯ ವಿಧಾನ : ನೇಗಿಲಿಗೆ ಬಳಸುವ ಮರಗಳು ಹಲವು. ‘ಮಸೂಳ’ದ ಮರದಿಂದ ನೇಗಿಲು ತಯಾರಿಸಿದರೆ, ಭೂಮಿಯ ಉಳುವಾಗ ನೇಗಿಲು ಪಕ್ಕೆಗಳಿಗೆ ಮಣ್ಣು ಹಿಡಿಯದೆ ಸರಾಗವಾಗಿ ಉಳುಮೆ ಮಾಡಲು ಬರುತ್ತದೆ. ಅಲ್ಲದೆ ಜಾಲಿ, ಬೇವು, ಚಿರಚಿಲ್ಲ, ತುಗ್ಗಲಿ, ಬಾರೆ, ಹೊನ್ನೆ ಮರಗಳಿಂದಲೂ ನೇಗಿಲು ತಯಾರಿಸಲಾಗುತ್ತದೆ. ರೈತರು ತಮ್ಮ ಹೊಲಗಳ ಮೇರೆ, ಬದುಗಳಲ್ಲಿ ಮತ್ತು ಕಾಡಿನಲ್ಲಿ ದೊರೆಯುವ ಮರಗಳಿಂದ ಕೃಷಿ ಉಪಕರಣಗಳನ್ನು ತಯಾರಿಸಿಕೊಳ್ಳುತ್ತಾರೆ. ಕೃಷಿಯ ಉಪಕಸಬುದಾರನಾದ ಬಡಗಿಯಿಂದ ಉಪಕರಣಗಳ ತಯಾರಿಕೆ ಮಾಡಿಕೊಳ್ಳುತ್ತಾರೆ. “ಒಂದು ಹಳ್ಳಿಯಲ್ಲಿ ತಮ್ಮ ತಮ್ಮ ಆಯದ ಬಡಿಗೇರನ್ನು ಒಕ್ಕಲಿಗರು ನೇಮಿಸಿಕೊಳ್ಳುವರು. ಇವರನ್ನು ‘ಮನೆ ಬಡಿಗ’ ರೆಂದೇ ಕರೆಯುತ್ತಾರೆ. ಒಂದೊಂದು ಕಟ್ಟಿಗೆಯಲ್ಲಿ ಒಂದೊಂದು ವಿಧವಾದ ಉಪಕರಣಗಳನ್ನು ತಯ್ಯಾರಿಸುವ ಕಲೆ ಇವರಿಗೆ ಗೊತ್ತು. ಒಕ್ಕಲಿಗರಲ್ಲಿ ಪ್ರಚಲಿತವಿರುವ ‘ಬನ್ನಿನಗ, ಮನಿಮಗ, ಆರಾಗ್ಯಾನದಿಂಡ, ವದ್ದಿವತ ಕಟಗಿ, ಆಳ್ಯಾ ಮಾವನಂಥ ಹೋರಿ’ಗಳಿರಬೇಕೆಂಬ ನಾಣ್ಣುಡಿಗಳಿಗೆ ಬಹುಶಃ ಬಡಿಗೇರರು ಆಯಾ ಕಟ್ಟಿಗೆಯಲ್ಲಿ ಮಾಡುವ ಉಪಕರಣಗಳಿಂದಲೇ ಪ್ರಚೋದನೆ ದೊರೆಕಿರಬೇಕೆನಿಸುತ್ತದೆ.”[೬] ಎಂದು ಜಾನಪದ ಸಾಹಿತ್ಯ ದರ್ಶನ ಕೃತಿಯಲ್ಲಿ ಹೇಳಲಾಗಿದೆ.

ಒಕ್ಕಲು ಕಾಯಕದ ಶರಣ ಒಕ್ಕಲಿಗ ಮುದ್ದಣ್ಣನವರ ವಚನದಲ್ಲಿ ನೇಗಿಲು ತಯಾರಿಸಿಕೊಳ್ಳುವ ವಿಧಾನವನ್ನು ಈ ರೀತಿ ಪ್ರಸ್ತಾಪಿಸಲಾಗಿದೆ.

“ಪೂರ್ವಕ್ಕೆ ತಾಳಾಗಿ ಉತ್ತರಕ್ಕೆ ತಲಹಾಗಿ ಬಿದ್ದ ಮರನತಂದು
ನಿಬದ್ಧಿಯ ಕಾರುಕನ ಕೈಯಲ್ಲಿ ಸುಬದ್ಧಿಸಿ, ಶುದ್ಧೈಸಿ

ಅನಾದಿಯೆಂಬ ಈಯವನಿಕ್ಕಿ

ಇಷ್ಟವೆಂಬ ವಿಶ್ವಾಸದ ಮೇಳಿಯಂ ಬೆಟ್ಟಿ

ಭಾವವೆಂಬ ಜಿಗುಳಿಯನಿಕ್ಕಿ

ಸದ್ಭಾವವೆಂಬ ಗುಳುವತೊಡಿಸಿ

ಸತ್ಕ್ರೀಯೆಯೆಂಬ ಕಣ್ಣಿಯಲ್ಲಿ ನೇಗಿಲ ತೊಡಚಿ..........".೭

ಪೂರ್ವಕ್ಕೆ ತಾಳಾಗಿ ಎಂದರೆ ಭೂಮಿಯಲ್ಲಿ ನಾಟುವ ಭಾಗ (ಮರದಕಾಂಡ) ಉತ್ತರಕ್ಕೆ ತಲ(ತುದಿಭಾಗ) ವಾಗಿ ಬಿದ್ದಿರುವ ಮರದ ಆಯ್ಕೆ ಮಾಡಿಕೊಂಡು, ನೇಗಿಲು ತಯಾರಿಕೆಯಲ್ಲಿ ಸಿದ್ದಹಸ್ತನಾದ ಬಡಗಿಯ ಕೈಯಿಂದ ಶುದ್ಧಗೊಳಿಸಿ, ಈಚು ಹಾಕಲು ಹುಗಿಲು ತೆಗೆದು ಈಸು ಹಾಕಿ, ಮೇಳಿಯನ್ನು ಭದ್ರಗೊಳಿಸಿ ನೆಲದಲ್ಲಿ ಹೂಳುವ ಭಾಗಕ್ಕೆ ಕಬ್ಬಿಣದ ಕುಳುವನ್ನು ಜಿಗಳಿಯಿಂದ ಕಟ್ಟಿ ನೇಗಿಲು ತಯಾರಿಸುವ ಕ್ರಮಬದ್ಧತೆಯನ್ನು ತಿಳಿಸಲಾಗಿದೆ.

ನೇಗಿಲಿಗೆ ಬೇಕಾದ ಮರದ ಅಳತೆಯ ವಿವರ

ಮರದ ಕಾಂಡ-(ಉಳುವ ಭಾಗ)-೩ಗೇಣು, ತುದಿಭಾಗ(ತಲ)-೧-೧/೨ ಗೇಣು

ಅಡಸಲು-೩ಗೇಣು ಮೇಲಕ್ಕೆ , ೨-ಗೇಣು ಕೆಳಗೆ, ಹಿಡಿಕೆ-೧ಗೇಣು ಉದ್ದ ಇರಬೇಕು

ಈಸು-೧೪ಗೇಣು [೭ಮೊಳ ಉದ್ದ], ಹಿಂಬದಿಯ ಬೆಣೆ- ೧-೧/೨ಗೇಣು ಈ ರೀತಿ ಇರಬೇಕಾಗುತ್ತದೆ.

'ಕೃಷಿಉಪಕರಣಗಳು' ಎಂಬ ಕೃತಿಯಲ್ಲಿ ಎಂ.ಎಂ. ಹೊಸಮನಿ, ಎಸ್.ಸಿ.ಚಂದ್ರಯ್ಯರವರು ಮರದ ನೇಗಿಲಿನ ಭಾಗಗಳನ್ನು ಈ ರೀತಿ ವಿವರಿಸುತ್ತಾರೆ. "........... ಈಸು ನೊಗದಿಂದ ನೇಗಿಲನ್ನು ಎಳೆಯುವ ಸಾಧನ. ಬಾಳು; ಇದು ಬಾಗಿದ ಜಾಲಿಮರದ ತುಂಡು. ಮೇಲ್ಭಾಗ ಚೌಕಾಕಾರ; ಕೆಳಭಾಗ ತ್ರಿಭುಜಾಕಾರವಾಗಿದ್ದು; ಇದು ಭೂಮಿಯಲ್ಲಿ ಚಲಿಸುವ ಭಾಗವಾಗಿದೆ. ಮೇಲ್ಭಾಗದಲ್ಲಿ ಈಸು, ಹಿಡಿಕೆಯನ್ನು ಬಿಗಿಯಾಗಿ ಜೋಡಿಸಲಾಗಿದೆ. ಬಾಳಿನ ಮೇಲ್ಭಾಗದ ಹಿಂಬದಿಗೆ ಹಿಡಿಕೆ ಜೋಡಿಸಲಾಗಿದೆ. ಹಿಡಿಕೆಯಿಂದ ನೇಗಿಲನ್ನು ನಿಯಂತ್ರಿಸುವುದುಂಟು. ಹಿಡಿಕೆಯ ಕೆಳಭಾಗ ಅಗಲವಾಗಿ ಮೇಲ್ಭಾಗ ಕಿರಿದಾಗಿರುವುದು. ಈಸು ೩ರಿಂದ ೪ಮೀಟರ್, ಉದ್ದವಾದ, ದುಂಡನೆಯ, ೫ರಿಂದ ೧೦ಸೆಂಟಿಮೀಟರ್ ದಪ್ಪದ ಮರದ ತುಂಡು. ಬಾಳಿಗೆ ಜೋಡಿಸುವ ಕೆಳಭಾಗದಲ್ಲಿ ಕೆಲವೊಂದು ಸಲ ಬಾಗಿರುವುದುಂಟು. ಸಾಮಾನ್ಯವಾಗಿ ಕಬ್ಬಿಣದ ಪಟ್ಟಿಯ ಉದ್ದ ೬೦ರಿಂದ ೭೦ಸೆಂ.ಮೀ. ೨ಸೆಂ.ಮೀ. ದಪ್ಪ, ೫ರಿಂದ ೭ಸೆಂ.ಮೀ. ಅಗಲ ತುದಿಯು ಹರಿತವಾಗಿರುವುದು. ಭೂಮಿಯಲ್ಲಿ ಚಲಿಸುವ ಬಾಳಿನ ಭಾಗಕ್ಕೆ ಜೋಡಣೆ ಮಾಡಿರುವುದುಂಟು. ಗುಳ ಭೂಮಿಯಲ್ಲಿ ಚಲಿಸುವ ಭಾಗ, ಗುಳವನ್ನು ಬಾಳಿಗೆ ಬಿಗಿಯಾಗಿ ಹಿಡಿಯಲು ಜಿಗಳಿ ಮತ್ತು ಮೊಳೆ ಬಳಸುವುದುಂಟು. ಬೆಣೆಯು ಉಳುಮೆಯ ಆಳವನ್ನು ಹೆಚ್ಚು ಕಡಿಮೆ ಮಾಡುವುದಲ್ಲದೆ ನೇಗಿಲಿನ ಭಾಗಗಳನ್ನು ಬಿಗಿಯಾಗಿ ಹಿಡಿದಿರುವುದು. ಬೆಣೆಯು ಒಂದು ಕಡೆ ದಪ್ಪವಾದ ಇನ್ನೊಂದು ಕಡೆ ತೆಳುವಾದ ಮರದ ತುಂಡು"[೮] ಎನ್ನುತ್ತಾರೆ.

ನೇಗಿಲಿಗೆ ನೊಗ ಜೋಡಿಸಿಕೊಂಡು, ಎರಡು ಎತ್ತುಗಳನ್ನು ಕಟ್ಟಿ ಉಳುಮೆ ಮಾಡುತ್ತಾರೆ. ಒ[V] ಆಕಾರದಲ್ಲಿ ಭೂಮಿಯನ್ನು ಸೀಳುತ್ತದೆ. ಆಳವಾಗಿ ಉಳುಮೆ ಮಾಡಲು ನೊಗವನ್ನು ಈಸಿನ ಕೆಳಭಾಗಕ್ಕೆ ಕಟ್ಟುತ್ತಾರೆ. ನೇಗಿಲ ಆಳ ಹೆಚ್ಚು ಮಾಡಿಕೊಳ್ಳುವುದು ಕಡಿಮೆ ಮಾಡಿಕೊಳ್ಳುವುದು ರೈತರಿಗೆ

ಕಣ್ಣಳತೆಯಲ್ಲಿಯೇ ತಿಳಿಯುತ್ತದೆ. ಉತ್ತರಕರ್ನಾಟಕದಲ್ಲಿ ನೇಗಿಲಿಗೆ ಮಡಿಕೆ ಎನ್ನುತ್ತಾರೆ. ಬಯಲು ಸೀಮೆಯಲ್ಲಿ ನೇಗಿಲನ್ನು ಮುಖ್ಯವಾಗಿ ಉಳುಮೆಗೆ ಬಳಸಿದರೆ, ಉತ್ತರಭಾಗದಲ್ಲಿ ಜಮೀನು ಹದಮಾಡಲು ಮಡಿಕೆಗಳನ್ನು ಬಳಸುತ್ತಾರೆ. ಹಿಂದೆ ತುಂಬಾ ಭಾರತೂಗುವ ಮಡಿಕೆಗಳಿಂದ ಹಿಡಿದು, ಒಂದೇ ಕೈನಲ್ಲಿ ಹಿಡಿದೆತ್ತುವಷ್ಟು ಹಗುರವಾದ ಮಡಿಕೆಗಳು ಬಳಕೆಯಲ್ಲಿದ್ದವು. ಆದರೆ ಕಬ್ಬಿಣದ ನೇಗಿಲು, ಯಂತ್ರಗಳ ಅಬ್ಬರದಲ್ಲಿ ಅವೆಲ್ಲವೂ ಮಾಯವಾಗಿವೆ.

ಕುಂಟೆ [harrow] **:** ಜಮೀನಿನ ಮಣ್ಣನ್ನು ತಳಮೇಲು ಮಾಡಲು ಬಳಸುವ ಸಾಧನವೇ ಕುಂಟೆ. ಕೃಷಿ ಚಟುವಟಿಕೆಗಳಲ್ಲಿ ಪ್ರದಾನ ಸ್ಥಾನ ಕುಂಟೆಗೆ ಇದೆ. ಕನ್ನಡ ನಿಘಂಟು, ಸಂಪುಟ-೨ರಲ್ಲಿ ಕುಂಟೆ; ವ್ಯವಸಾಯದ ಒಂದು ಉಪಕರಣ; ಭೂಮಿಯ ಬೆದೆಯನಜೆದು ಎತ್ತು ಕುಂಟೆ ಕೂರಿಗೆ ನೊಗ....... ಹೂಡಿ ಹೊಡೆದು ಹರಗಿ [ವಚನಶಾಸ್ತ್ರ-೨,ಪು-೭೬] ಎಂದು ಹೇಳಲಾಗಿದೆ. ಕುಂಟೆಗಳಲ್ಲಿ ಅನೇಕ ಪ್ರಕಾರಗಳಿವೆ. ಅವು “ಧಾರವಾಡ ಮರದ ಕುಂಟೆ, ಅದರಲ್ಲಿ ನಾಲ್ಕರ ಕುಂಟೆ, ಹೆಗ್ಗುಂಟೆ, ಒಳಸಾಲಕುಂಟೆ, ಹಲ್ಲುಕುಂಟೆ(ಹಲುಬೆ), ಗುರುದಾಳು, ತವೆಕುಂಟೆ, ತ್ರಿಪಾಲಿ, ಸ್ಪ್ರಿಂಗ್ ಕುಂಟೆ ಇನ್ನೂ ಅನೇಕ ಇವೆ”.[೯] ಪ್ರಾದೇಶಿಕವಾಗಿ ನಾಲ್ಕೆತ್ತಿನ ಕುಂಟೆ, ಆರೆತ್ತಿನ ಕುಂಟೆ, ಎಂಟೆತ್ತಿನ ಕುಂಟೆ, ಮೂರೇಣು ಕುಂಟೆ, ಜಾಗೇಣು ಕುಂಟೆ, ಅತ್ತಿಗುಂಟೆ, ಅರಗೋಗುಂಟೆ, ಅರ್ತೆಗುಂಟೆ ಎಂದು ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ. ಆಯಾ ಕುಂಟೆಯನ್ನನುಸರಿಸಿ ತಾಳುಗಳು(ಹಲ್ಲು), ತಲುವು(ನೆಲಕ್ಕೆ ಊರುವ ಕಬ್ಬಿಣದ ಮೊನಚು) ಹೊಂದಿದ್ದರೆ. ಎಲ್ಲಾ ಕುಂಟೆಗಳು ಎರಡು ಈಸು, ಒಂದು ಮರದ ದಿಮ್ಮಿಯನ್ನು ಹೊಂದಿರುತ್ತವೆ. ಬಯಲು ಸೀಮೆಯ ಒಣಬೇಸಾಯದಲ್ಲಿ ನೆಲ ಹರಗಲು, ಹದಮಾಡಲು, ಮಣ್ಣು ತಳಮೇಲಾಗಿಸಲು ಬಳಸುತ್ತಾರೆ. ಉತ್ತರ ಕರ್ನಾಟಕಕ್ಕೆ ಹೋಲಿಸಿದರೆ, ಬಯಲುಸೀಮೆ ಮತ್ತು ಮಲೆನಾಡು ಕರಾವಳಿ ಪ್ರದೇಶಗಳಲ್ಲಿ ಕುಂಟೆಗಳ ಬಳಕೆ ಕಡಿಮೆ. ಬಯಲು ಸೀಮೆಯಲ್ಲಿ ಭೂಮಿ ಸಡಿಲಿಸಿ ಪುಡಿಪುಡಿ ಮಾಡಿ ಹದಗೊಳಿಸಲು, ಭೂಮಿಯಲ್ಲಿ ಗೊಬ್ಬರ ಬೆರೆಸಲು, ಬಿತ್ತನೆಯ ನಂತರ ಬೀಜ ಮುಚ್ಚಲು, ಕಳೆಕಸ ನಿಯಂತ್ರಿಸಲು, ಕೆಲವು ಬೆಳೆಗಳನ್ನು(ಶೇಂಗಾ) ಅಗೆಯಲು, ಮಧ್ಯಾಂತರ ಬೇಸಾಯ ಮಾಡಲು, ಎರೆ ಜಮೀನಿನ ಬಿರುಕು ಮುಚ್ಚಲು ಬಳಸಲಾಗುತ್ತದೆ. ಪದೇಪದೇ ಬೇಸಿಗೆಯಲ್ಲಿ ಹರಗುವುದಕ್ಕೆ ‘ಬರವು’ ಎನ್ನುತ್ತಾರೆ. ‘ಬರವು ಬಂಗಾರವೆಂದು ನಾಣ್ನುಡಿ ಇದೆ’. ಹರಗುವುದರಿಂದ ಕಳೆಕಸ ನಿಯಂತ್ರಣ ಹಾಗೂ ತೇವಾಂಶ ಸಂಗ್ರಹಿಸುವಲ್ಲಿ ಅನುಕೂಲವಾಗುತ್ತದೆ.

ಕುಂಟೆಗೆ ಜಾಲಿ, ಕಬ್ಬಾನಿ ಮರ ಉತ್ತಮ. ಕುಂಟೆಯ ತಾಳುಗಳನ್ನು ಮಸೂಳದ ಮರದಿಂದ ತಯಾರಿಸಿದರೆ ಹೆಚ್ಚು ಬಾಳಿಕೆ ಬರುತ್ತವೆ. ಸಾಮಾನ್ಯವಾಗಿ ಕುಂಟೆಗೆ ಈ ಕೆಳಗೆ ಸೂಚಿಸಿರುವಂತೆ ಮರ ಬೇಕಾಗುತ್ತದೆ. ಕುಂಟೆಯ ದಿಂಡು -೪ಗೇಣು, ಒಂದು ತಾಳಿಗೆ-೨ಗೇಣು, ಕುಂಟೆಮೇಳಿ-೩ಗೇಣು(ದೊಡ್ಡಗಾತ್ರ), ಈಚು-೧೪ಗೇಣು(೭ಮೊಳ), ಮೂರು ದಿಂಡಿನ ಕುಂಟೆಗೆ, ದಿಂಡು-೫-೧/೨ಗೇಣು, ಒಂದು ತಾಳಿಗೆ -೨ಗೇಣು, ಮೇಳಿ-೩ಗೇಣು(ಗಾತ್ರ ಚಿಕ್ಕದು) (ಕೂರಿಗೆಯಿಂದ ಬಿತ್ತಿದ ಮೂರುಸಾಲುಗಳನ್ನು ಮುಚ್ಚುತ್ತದೆ.)

ಧಾರವಾಡ ಕುಂಟೆಯ ಮುಖ್ಯಭಾಗಗಳನ್ನು ಕುರಿತು ವಿವರವಾದ ಮಾಹಿತಿಯನ್ನು ಎಂ.ಎಂ.ಹೊಸಮನಿ, ಎಸ್.ಸಿ.ಚಂದ್ರಯ್ಯನವರ ‘ಕೃಷಿಉಪಕರಣಗಳು’ ಎಂಬ ಕೃತಿಯಿಂದ ಸಂಗ್ರಹಿಸಿ ಈ ಕೆಳಗಿನಂತೆ ಚರ್ಚಿಸಲಾಗಿದೆ. ಉತ್ತರ ಕರ್ನಾಟಕದಲ್ಲಿ ತುಂಬಾ ಜನಪ್ರಿಯವಾದ ಈ ಉಪಕರಣ,

ದಿಂಡು, ತಾಳು, ಕುಡ, ಈಸು, ಹಿಡಿಕೆಯಂತ ಭಾಗಗಳನ್ನು ಹೊಂದಿದೆ. ಇವುಗಳ ತಯಾರಿಕೆಗೆ ಬೇಕಾಗುವ ಮರ, ತಯಾರಿಕೆಯ ವಿಧಾನ ಕುರಿತು ಹೀಗೆ ಹೇಳಲಾಗಿದೆ.

ದಿಂಡು : ಇದು ದಪ್ಪವಾದ ಜಾಲಿಮರದ ತುಂಡು, ಉದ್ದ ೧ರಿಂದ ೧-೧/೨ಮೀ, ದಪ್ಪ ೧೦ರಿಂದ ೧೫ಸೆಂ.ಮೀ, ಅಗಲ ೨೦ರಿಂದ ೨೫ಸೆಂ.ಮೀ, ನಾಲ್ಕರ ಕುಂಟೆಯಲ್ಲಿ ಭಾರವಾದ, ದಪ್ಪನಾದ ದಿಂಡು, ಒಳಸಾಲು ಕುಂಟೆಯಲ್ಲಿ ತೆಳುವಾಗಿ ಉದ್ದವಾಗಿರುವುದು. ದಿಂಡಿಗೆ, ತಾಳು, ಈಸು, ಹಿಡಿಕೆ ಜೋಡಿಸಲಾಗಿದೆ. ತಾಳುಗಳ ಜೋಡಣೆಯ ಕೋನದ ಮೇಲೆ ಹರಗುವ ಆಳ ನಿಯಂತ್ರಿಸುವುದುಂಟು.

ತಾಳು : ತಾಳು ಜಾಲಿಮರ ಅಥವಾ ಕಬ್ಬಿಣದಿಂದ ಮಾಡಲ್ಪಟ್ಟಿರುತ್ತದೆ. ತಾಳುಗಳು ೪೦ರಿಂದ ೬೦ಸೆಂ.ಮೀ. ಉದ್ದವಾಗಿವೆ. ಮರದ ತಾಳು ಗೋಲಾಕಾರ, ಭೂಮಿಯಲ್ಲಿ ಚಲಿಸುವ ಭಾಗದಲ್ಲಿ ಬಳೆಗಳು ಇರುವುವು. ಈ ಬಳೆಗಳು ಕುಡವನ್ನು ಅಲುಗಾಡದಂತೆ ಬಿಗಿಯಾಗಿ ಹಿಡಿದಿರುವವು. ಮತ್ತು ತಾಳಿನ ಸವಕಳಿ ಕಡಿಮೆಮಾಡುವುವು.

ಕುಡ : ಕುಡ ೧ರಿಂದ ೧-೧/೨ಮೀ. ಉದ್ದ. ೧ರಿಂದ ೨ಸೆಂ.ಮೀ. ದಪ್ಪ ಮತ್ತು ೧೦ಸೆಂ.ಮೀ ಅಗಲದ ಕಬ್ಬಿಣದ ಪಟ್ಟಿ, ಭೂಮಿಯಲ್ಲಿ ಚಲಿಸುವ ಭಾಗವು ಹರಿತವಾಗಿರುವುದು. ಎರಡು ಬದಿಗಳ ಕೊನೆಯಲ್ಲಿ ಕಿವಿಗಳ ಮೂಲಕ ತಾಳಿನಲ್ಲಿ ಜೋಡಣೆಯನ್ನು ಮಾಡುವುದುಂಟು.

ಈಸು : ಈಸುಗಳು ಎರಡು, ದಿಂಡಿನಲ್ಲಿ ಬೇರೆಬೇರೆಯಾಗಿ ಸೇರಿದ್ದರೂ ಹೂಡುವಲ್ಲಿ ಒಂದಾಗಿ ಕಾಣುವಂತೆ ಜೋಡಣೆಯಾಗಿವೆ. ಸಾಗವಾನಿ ಅಥವಾ ಇನ್ನಿತರ ಮರದ ಉದ್ದವಾದ (೩ರಿಂದ ೪ಮೀ.) ೧೦ರಿಂದ ೧೫ಸೆಂ.ಮೀ. ದುಂಡನೆಯ ತುಂಡು.

ಹಿಡಿಕೆ : ದಿಂಡಿನಲ್ಲಿ ಸೇರಿಸಿದ ಮರದ ಚಿಕ್ಕತುಂಡು. ಉದ್ದ ೬೦ರಿಂದ ೭೫ಸೆಂ.ಮೀ, ೫ರಿಂದ ೧೦ಸೆಂಮೀ, ವ್ಯಾಸದ ದುಂಡನೆಯ ತುಂಡು. ಹಿಡಿಕೆಯಿಂದ ಕುಂಟೆಯ ಹರಗುವಾಗ ಆಗಾಗ ಎತ್ತಿ ಕುಡ ಕೆತ್ತಲು ಅನುಕೂಲವಾಗುವುದು.

ಹೆಗ್ಗುಂಟೆ : ಹತ್ತು ಎತ್ತಿನ ಕುಂಟೆ ತುಂಬಾ ಬಲತ್ಕಾರವಾದಂತವು. ಆಗಿನ ಜನರು ಹೆಚ್ಚು ತಾಕತ್ತು ಹೊಂದಿದ್ದು, ಸಾಮೂಹಿಕ ಸಹಕಾರದ ಬೇಸಾಯ ಮಾಡುವಾಗ ಬಳಸುತ್ತಿದ್ದರು. ಇಂದು ಟ್ರ್ಯಾಕ್ಟರ್ ಬಳಕೆ, ಸಹಕಾರದ ಮನೋಭಾವ ಜನರಲ್ಲಿ ಕಡಿಮೆಯಾಗಿರುವುದರಿಂದ ಇಂತಹ ಕುಂಟೆಗಳು ಮಾಯಾವಾಗಿವೆ. ಹತ್ತು ಎತ್ತಿನ ಕುಂಟೆಯ ಉದ್ದವೆ ೧೫ಅಡಿಗಳು. ಒಣ ಜಮೀನಿನಲ್ಲಿ, ಬೇಸಿಗೆಯಲ್ಲಿ ಈ ಕುಂಟೆಯಿಂದ ಉಳುಮೆ ಮಾಡಿದರೆ ಸುಮಾರು ಎರಡು ಅಡಿ ಆಳಕ್ಕೆ ಇಳಿದು, ಕರಕಿ, ಜೇಕು, ಕಣಗಿಲೆಯಂತಹ ಕಳೆಕಸವನ್ನು ಬುಡಮೇಲು ಮಾಡುತ್ತದೆ. ಹೆಗ್ಗುಂಟೆಯನ್ನು ನಾಡಕುಂಟೆಯಂತಲೂ ಕರೆಯುತ್ತಾರೆ. ಮುಂಗಾರು ಮಳೆಯಾದಾಗ ಭೂಮಿಯಲ್ಲಿ ತೇವಾಂಶ ಹಾಳಾಗದಂತೆ ಭೂ ಮುಚ್ಚಿಗೆ ಮಾಡಲು ಬಳಸುತ್ತಾರೆ. ರಂಟೆ-ಕುಂಟೆ, ಮಳೆಯಾದ ನಂತರ ಹಾಗೂ ಬಿತ್ತನೆ ಮಾಡುವ ಪೂರ್ವದಲ್ಲಿ ಬಳಸುತ್ತಾರೆ. ಭೂಮಿಯಲ್ಲಿರುವ ಕೀಟಗಳ ಮೊಟ್ಟೆ ಮೇಲಭಾಗಕ್ಕೆ ಬಂದು ಬಿಸಿಲಿಗೆ ಬೆಂದು ನಾಶವಾಗಲಿ ಎಂಬ ಉದ್ದೇಶದಿಂದ ಈ ಕುಂಟೆ ಹೊಡೆಯುತ್ತಾರೆ. ಕನ್ನಡ ಸಾಹಿತ್ಯ ಕೃತಿಗಳಲ್ಲಿ ಮತ್ತು ಶಾಸನಗಳಲ್ಲಿ ಕುಂಟೆಯ ಉಲ್ಲೇಖಗಳು ಕಂಡು ಬರುವುದು ತೀರ ವಿರಳವಾಗಿದೆ.

ಕೂರಿಗೆ : ಹೊಲಗಳಲ್ಲಿ ಬೀಜ ಬಿತ್ತುವ ಉಪಕರಣ. ಕನ್ನಡ ನಿಘಂಟುವಿನ ಪುಟ-೨೦೩೬ರಲ್ಲಿ ಈ ರೀತಿ ಅರ್ಥ ಹೇಳಲಾಗಿದೆ. "ಬಾವಿ ಕೂರಿಗೆ ಸಡ್ಡೆಯಡ್ಡೆಯಕ್ಕುಂ'(ಮಂಗರಾ.೧೭೯-೧) ಕುಡುಗೋಲು

ಕೊಜಿಗೆಯಂ .... ಕೊಡಲಿಯನಾಯುಧ ಚಮಮಂ ಕುರೆಂತು ....(ಸಮಪ–೫,೧೭), ಮೊಸಕೂಜಿಗೆ ಮಡಕೆಗಳಂ ಕೆಸುಮಣ್ಣನೆ ಪೂಸಿ[ರಟ್ಟಮ.–೯,೨೮] ಎಂದು ಅನೇಕ ಕನ್ನಡ ಕಾವ್ಯಗಳಲ್ಲಿಯ ಉಲ್ಲೇಖಗಳನ್ನು ಸಂಗ್ರಹಿಸಿ ಹೇಳಲಾಗಿದೆ.

ಸಾಲಾಗಿ ಬೀಜ ಬಿತ್ತುವುದರಿಂದ ನಿಶ್ಚಿತ ಸಸ್ಯ ಸಂಖ್ಯೆ ಕಾಪಾಡಿ, ಮಧ್ಯಾಂತರ ಬೇಸಾಯ ಮಾಡಿ ಕಳೆ ನಿಯಂತ್ರಿಸಿ ಹೆಚ್ಚಿನ ಇಳುವರಿ ಪಡೆಯಲು ಕೂರಿಗೆಯ ಬಳಕೆ ಬಂದಿರಬೇಕು. "ಕೂರಿಗೆಯಲ್ಲಿ ೩ರಿಂದ ೬ಕೂರಿಗೆಯ ತಾಳುಗಳಿದ್ದು ದಿನದಲ್ಲಿ ಹೆಚ್ಚಿನ ಕ್ಷೇತ್ರ ಸಾಲಾಗಿ ಬಿತ್ತುವುದಲ್ಲದೆ ಭೂಮಿಯಲ್ಲಿ ಬೀಜ ಬೀಳುವುದರ ಆಳವನ್ನು ನಿಯಂತ್ರಿಸಬಹುದು. ಅಗಲವಾದ ಸಾಲುಗಳುಳ್ಳ ಹತ್ತಿ ಮತ್ತು ಗೋವಿನ ಜೋಳ(ಮುಸುಕಿನಜೋಳ)ದಲ್ಲಿ ಎರಡು ತಾಳಿನ ಕೂರಿಗೆ, ಜೋಳ, ಶೇಂಗಾ, ಹೆಸರು, ಇನ್ನಿತರ ಮಧ್ಯಮವರಿ ಸಾಲುಗಳುಳ್ಳ ಬೆಳೆಗಳಿಗೆ ಮೂರು ತಾಳಿನ ಕೂರಿಗೆ, ಸಣ್ಣ ಸಾಲಿನ ಬೆಳೆಗಳಾದ ಭತ್ತ, ರಾಗಿ ಬೆಳೆಗಳಲ್ಲಿ ೪ರಿಂದ ೬ಸಾಲಿನ ಕೂರಿಗೆ ಬಳಕೆಯಲ್ಲಿವೆ"[೧೦] ಎನ್ನಲಾಗಿದೆ.

ಕೂರಿಗೆಯ ಸಡ್ಡೆಯಲ್ಲಿ ಬಿತ್ತಿದ ಬೀಜಗಳು ಕೊಳವೆಯ ಮುಖಾಂತರ ಕೂರಿಗೆಯ ತಾಳಿನಿಂದ ತೆರೆದ ಸಾಲಿನಲ್ಲಿ ಬೀಳುತ್ತವೆ. ಬಿತ್ತನೆಯ ಬೀಜದ ಗಾತ್ರಕ್ಕನುಸಾರ ಕೊಳವೆಯಲ್ಲಿ ರಂಧ್ರಗಳಿರುತ್ತವೆ. ಬಿತ್ತುವಾಗ ತಾಳು ಮುರಿದರೆ ಶುಭವೆಂದೂ, ದಿಂಡು ಮುರಿದರೆ ಅಶುಭವೆಂದೂ ನಂಬಲಾಗಿದೆ. ಕೂರಿಗೆಯ ಪೂಜಾವಿಧಾನ ಕುರಿತು ರಟ್ಟಮತಶಾಸ್ತ್ರದಲ್ಲಿ ವಿಸ್ತಾರವಾಗಿ, ಶಾಸ್ತ್ರೋಕ್ತವಾಗಿ ವಿವರಿಸಲಾಗಿದೆ.

"ಮೊಸ ಕೂರಿಗೆ ಮಡಕೆಗಳಂ।
ಕಿಸು ಸುಣ್ಣಮನೆ ಪೂಸಿ ಗಟ್ಟಿದೊಸರಿಂದರಂ? ॥
ದೆಸೆಯಂಬರಕ್ಕೆ (ರಾಷ) ತೆಗಳಿಂ ।
ದೊಸೆದರ್ಚಿಸಿ ಮತ್ತೆ ಮಂತ್ರದಾಕ್ರಮದಿಂದಂ ॥"[೧೧]

ಹೊಸ ಕೂರಿಗೆಯನ್ನು ಸುಣ್ಣ ಹಚ್ಚಿ, ಹೊಸ ಬಟ್ಟೆಯ ತೊಡಿಸಿ ಮಂತ್ರಾಕ್ಷತೆಗಳನ್ನು ಹೇಳುತ್ತಾ ಕ್ರಮಬದ್ಧವಾಗಿ ಪೂಜಿಸುತ್ತಾರೆ. ಜೋಡು ಕೂರಿಗೆಗಳನ್ನು ನಿಲ್ಲಿಸಿ ಶಿವಪಾರ್ವತಿಯರೆಂದು ಸೀರೆ ಪಂಚೆಗಳನ್ನು ಸುತ್ತಿ ಪೂಜೆ ಮಾಡುವ ಪದ್ಧತಿ ಇದೆ. ಕೂರಿಗೆಯನ್ನು ಲಕ್ಷ್ಮೀ ಎಂದೂ ಕರೆಯುವರು. ಒಕ್ಕಲಿಗ ಮುದ್ದಣ್ಣನವರ ವಚನವೊಂದರಲ್ಲಿ ಕೂರಿಗೆ ಜೋಡಿಸುವ ವಿಧಾನ ಹೀಗೆ ಹೇಳಿದ್ದಾನೆ.

"......... ಸ್ಥೂಲವೆಂಬ ದಿಂಡಿಗೆ ತ್ರಿದೇವರಂಬ ತಾಳನಟ್ಟು
ಇಡಾಪಿಂಗಳ ಸುಷುಮ್ನಾನಾಳವೆಂಬ ಕೋವಿಗಳ ಜೋಡಿಸಿ
ಮೇಲೆ ತ್ರಿಕೂಟ ಸ್ಥಾನವೆಂಬ ಬಟ್ಟಲಂ ಬಲಿದು
ಕುಂಡಲಿ ಸರ್ಪನೆಂಬ ಹಗ್ಗವ ಸೇದಿ ಕಟ್ಟಿ ...."[೧೨]

ಮನುಷ್ಯನ ದೇಹಕ್ಕೆ ಕೂರಿಗೆಯನ್ನು ಹೋಲಿಕೆ ಮಾಡಲಾಗಿದೆ. ಅಧ್ಯಾತ್ಮಿಕ ರೀತಿಯ ಚಿಂತನೆಯಿದ್ದರೂ, ಲೌಕಿಕದ ಅನುಭವವನ್ನು ಕಟ್ಟಿಕೊಡಲಾಗಿದೆ. ಕೂರಿಗೆಯ ದಿಂಡಿಗೆ, ಮೂರು ತಾಳು ತುಂಬ್ಸಿ, ತಾಳಿಗೆ ರಂಧ್ರ ಮಾಡಿಸಿ, ಮೇಲಕ್ಕೆ ಮೂರು ಕೊಳವೆಗಳ ಜೋಡಿಸಿ, ಆ ಜೋಡಣೆಯ ಮೇಲೆ ಬಟ್ಟಲ ಇಟ್ಟು, ಹಗ್ಗದಿಂದ ಎಳೆದು ಕಟ್ಟಿರುವುದನ್ನು ವರ್ಣಿಸಲಾಗಿದೆ.

ಕೂರಿಗೆಗೆ ಬೇಕಾಗುವ ಮರದ ಅಳತೆಯ ವಿವರ: ದಿಂಡು–೪ಗೇಣು, ಮೇಳಿ–೩ಗೇಣು, ೪ಇಂಚು, ಒಂದು ತಾಳಿನ ಉದ್ದ –೨ಗೇಣು(ಒಟ್ಟು ಮೂರು ತಾಳುಗಳು), ಈಚು–೧೪ಗೇಣು(೭ಮೊಳ), ಬಟ್ಟಲು–

೩ರಂಧ್ರ ಹೊಂದಿದ್ದು, ಗುಂಡಿ ಆಕಾರ ಹೊಂದಿರುತ್ತದೆ. ೧೨ಇಂಚಿನ ಸಾಲಿನ ಕೂರಿಗೆ, ೧೬ಇಂಚಿನ ಸಾಲಿನ ಕೂರಿಗೆಗಳು ಕಂಡುಬರುತ್ತವೆ. ಭೂಮಿಯ ಫಲವತ್ತತೆ, ಪ್ರಾದೇಶಿಕತೆಯ ಹಿನ್ನಲೆಯಲ್ಲಿ ಇಂತಹ ಕೂರಿಗೆಯ ಬಳಕೆ ಸಾಮಾನ್ಯವಾಗಿರುತ್ತದೆ. ಕೂರಿಗೆಯ ಭಾಗಗಳು ಮತ್ತು ಅವುಗಳ ಜೋಡಣೆಯ ಕುರಿತಾದ ಮಾಹಿತಿಯನ್ನು ಕೃಷಿ ಉಪಕರಣಗಳು ಎಂಬ ಕೃತಿಯಲ್ಲಿ ಹೀಗೆ ವಿವರಿಸಲಾಗಿದೆ.

ಕೂರಿಗೆಯಲ್ಲಿ ಬಿತ್ತುವ ಕೈಗಳು ಅನುಭವ ಹೊಂದಿರಬೇಕು. ಅದಕ್ಕಾಗಿ ಹಳ್ಳಿಗರು 'ಉಡಿಯಾನ ಬೀಜಕ್ಕಿಂತ ಹಿಡಿಯೊಳಗಿನ ಬೀಜ ಮೇಲು' ಎನ್ನುತ್ತಾರೆ. ಸಡ್ಡೆಯ ರಂಧ್ರಗಳ ಗಾತ್ರ ಬಿತ್ತನೆಯ ಬೀಜದ ಗಾತ್ರ ಮತ್ತು ಪ್ರಮಾಣಗಳನ್ನು ಅವಲಂಬಿಸಿರುತ್ತವೆ. ಶೇಂಗಾ, ಭತ್ತ ಬಿತ್ತಲು ದೊಡ್ಡ ತೂತಿನ ಸಡ್ಡೆ ಮತ್ತು ಜೋಳ, ರಾಗಿ ಬಿತ್ತಲು ಸಣ್ಣತೂತಿನ ಸಡ್ಡೆ ಬಳಸುವುದುಂಟು. ಕೂರಿಗೆಯಲ್ಲಿ ಅವರೆ ಕೂರಿಗೆ, ಗೋಧಿಕೂರಿಗೆ, ಎಳ್ಳುಕೂರಿಗೆ ಎಂದೂ ವಿವಿಧ ನಮೂನೆಗಳುಂಟು. ಕೂರಿಗೆಯಿಂದ ಬೀಜದ ಜೊತೆಗೆ ರಸಗೊಬ್ಬರವನ್ನು ಏಕಕಾಲದಲ್ಲಿ ಬಿತ್ತುವುದರಿಂದ ಆಳಿನ ಉಳಿತಾಯ ಮತ್ತು ಭೂಮಿಯ ಹದದಲ್ಲಿ ಹೆಚ್ಚಿನ ಕ್ಷೇತ್ರ ಬಿತ್ತನೆ ಮಾಡಬಹುದು. ಕೂರಿಗೆ ಸಾಲಿನಲ್ಲಿಯ ಬೀಜದ ಅಂತರವನ್ನು ನಿರ್ಧಾರವಾಗಿ ಬಿತ್ತಲು ನಮ್ಮ ಪ್ರಚಲಿತ ಕೂರಿಗೆಯಲ್ಲಿ ಇನ್ನೂ ಸುಧಾರಣೆಯಾಗಬೇಕಾಗಿದೆ. ಈ ನಿಟ್ಟಿನಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳು ಹೆಚ್ಚು ಶ್ರಮಿಸಬೇಕಾಗಿದೆ ಎನಿಸುತ್ತದೆ.

ಕೊರಡು ಅಥವಾ ಡೋಣಿ : ಆಳವಾದ ಉಳುಮೆಯಿಂದ ಹೆಂಟೆ ಕೂಡಿದ ಭೂಮಿಯ ಪುಡಿ ಮಾಡಲು, ಬಿತ್ತನೆ ಮುನ್ನ ಭೂಮಿ ಹರಗಲು, ಬಿತ್ತನೆ ನಂತರ ಹೆಂಟೆಗಳನ್ನು ಪುಡಿಮಾಡಲು ಕೊರಡು ಬಳಸುತ್ತಾರೆ. ಹೆಂಟೆಯ ಪುಡಿಮಾಡಲು ಮರದ ತೊಲ್ಡೆ ಕೊರಡು ಮುಂತಾದ ಉಪಕರಣಗಳನ್ನು ಬಳಸುತ್ತಾರೆ. "ಇದು ಪೊಳ್ಳಾದ, ಅರ್ಧಗೋಲಾಕಾರದ, ಸಾಮಾನ್ಯವಾಗಿ ಬಗನಿಮರದ ತುಂಡು ಅಥವಾ ಎರಡು ಹಲಗೆಗಳನ್ನು ಅರ್ಧ ಗೋಲಾಕಾರದಂತೆ ಜೋಡಿಸಲಾಗಿದೆ. ಈ ಮರದ ತುಂಡಿನ ಉದ್ದಳತೆ ೨ರಿಂದ ೩ಮೀ, ಮಧ್ಯದಲ್ಲಿ ಎರಡು ಕೋಲುಗಳನ್ನು ಜೋಡಿಸಲಾಗಿದೆ. ಈ ಕೋಲುಗಳಲ್ಲಿ ಹಗ್ಗ ಪೋಣಿಸಿ ಹಗ್ಗದಿಂದ ಕೊರಡನ್ನು ನೊಗಕ್ಕೆ ಹೂಡಿ ಎತ್ತುಗಳಿಂದ ಎಳೆಸುವುದುಂಟು. ಹೆಂಟೆಗಳು ಅರ್ಧಗೋಲಾಕಾರದ ಮಧ್ಯ ಸತತವಾದ ಘರ್ಷಣೆ ಮತ್ತು ತಿಕ್ಕಾಟದಿಂದ ಪುಡಿಪುಡಿಯಾಗುವುವು"[೧೩]

ಕೊರಡಿಗೆ ಬೇಕಾಗುವ ಮರದ ವಿವರ, ಕೊರಡು –೭ಗೇಣು ಅಥವಾ ೯ಗೇಣು ಉದ್ದದ ಮರ ಬೇಕು,

ಆಗ್ಯೆಯಿಗಳು–೩–೧/೨ಗೇಣು ಉದ್ದ ಇರುತ್ತವೆ. ಕೊರಡಲ್ಲದೆ ಅನೇಕ ಬಗೆಬಗೆಯ ಉಪಕರಣಗಳನ್ನು ಹೆಂಟೆ ಪುಡಿ ಮಾಡಲು ಬಳಸಲಾಗುತ್ತದೆ.

ನೊಗ : ನೇಗಿಲು, ಕುಂಟೆ, ಕೂರಿಗೆ, ಕೊರಡು, ಹಲುಬೆ, ಗಾಡಿ, ಮುಂತಾದವುಗಳನ್ನು ಹೂಡಿ ಹೊಡೆಯಲಿಕ್ಕೆ ಬಳಸುವುದು ನೊಗ. ಕನ್ನಡ ನಿಘಂಟುವಿನಲ್ಲಿ ಈ ರೀತಿ ಅರ್ಥೈಸಲಾಗಿದೆ. ನೊಗನು, ನೊಗೆ, ಬಂಡಿಯನ್ನಾಗಲಿ ನೇಗಿಲನ್ನಾಗಲಿ, ಎಳೆಯಲು ಎತ್ತು, ಕುದುರೆ ಮೊದಲಾದವುಗಳ ಕತ್ತಿನ ಮೇಲೆ ಇಡುವ ಉದ್ದವಾದ ಮರದ ದಿಂಡು ಯುಗ ಧುರ ನೊಗನೆಂಬುದು ಯುಗನಾಮಂ' (ವಸ್ತುಕೋ.೮೭–೨೯) ಸಾಮಾನ್ಯವಾಗಿ ನೊಗಗಳಲ್ಲಿ ಒಂಟಿ ನೊಗ, ಜೋಡಿನೊಗ ಎಂಬ ಎರಡು ಬಗೆಗಳು. ಜೋಡಿ ನೊಗವನ್ನು ಹೆಚ್ಚಿನ ಶ್ರಮದ ಕೃಷಿಕಾರ್ಯಗಳಿಗೆ ಬಳಸಲಾಗುತ್ತದೆ. ಬಯಲುಸೀಮೆಗಿಂತ ಉತ್ತರ ಕರ್ನಾಟಕದಲ್ಲಿ ಉಳುಮೆಗೊಂದು, ಬಿತ್ತನೆಗೊಂದು, ಹರಗುವುದಕ್ಕೊಂದು ಪ್ರತ್ಯೇಕ ನೊಗಗಳಿರುತ್ತವೆ.

ಸಾಗುವಾನಿ ಮರ ಅಥವಾ ದಪ್ಪವಾದ ಬಿದಿರಿನ ಉದ್ದವಾದ ತುಂಡುಗಳಿಂದ ತಯಾರಿಸುತ್ತಾರೆ. ಎತ್ತಿನ ಕುತ್ತಿಗೆ ಸಂಪರ್ಕ ಬರುವ ಹತ್ತಿರ ನುಣುಪಾಗಿಯೂ, ನೊಗದ ಮಧ್ಯದಲ್ಲಿ ಹಣೆಪಟ್ಟೆ ಇರುತ್ತದೆ. ಈ ಹಣೆಪಟ್ಟೆಯಲ್ಲಿ ಶಿವಲಿಂಗದ ಆಕಾರವನ್ನು ಕೆತ್ತಲಾಗಿರುವ ನೊಗಗಳುಂಟು. ನೊಗದ ಹಣೆಪಟ್ಟೆ ತಗ್ಗು ದಿನ್ನೆಗಳಿಂದ ಕೂಡಿದ್ದು, ನೊಗಕ್ಕೆ ಹೂಡಿದ ಉಪಕರಣಗಳು ಅತ್ತಇತ್ತ ಸರಿದಾಡದಂತೆ ಮಾಡಿರುತ್ತಾರೆ. "ನೊಗದ ಉದ್ದಳತೆಯು ಕೃಷಿ ಉಪಕರಣದ ನಮೂನೆ, ಉಳುಮೆಯ ಆಳ ಮತ್ತು ಬೆಳೆಗಳ ಸಾಲುಗಳ ಅಂತರ ಮತ್ತಿತರ ವಿಷಯಗಳನ್ನು ಅವಲಂಬಿಸಿರುತ್ತದೆ. ಹೆಚ್ಚು ಶ್ರಮದಾಯಕ ಕೃಷಿ ಕಾರ್ಯಗಳಾದ ಕಬ್ಬಿಣದ ತವೆ ನೇಗಿಲಿನಿಂದ ಉಳುಮೆಗೆ ಅತೀ ಕಿರಿದಾದ ಅಂದರೆ ೧೦೦ರಿಂದ ೧೨೦ಸೆಂಮೀ. ಉದ್ದದ ನೊಗ ಬಳಸುವುದುಂಟು. ಮಧ್ಯಾಂತರ ಬೇಸಾಯದ ಎಡೆಕುಂಟೆಗಳನ್ನು ಎಳೆಯಲು ಸಾಮಾನ್ಯವಾಗಿ ಅತೀ ಕಡಿಮೆ ಶಕ್ತಿಬೇಕಾಗುವುದು. ಆಗ ಒಂದೇ ನೊಗಕ್ಕೆ ೩ರಿಂದ ೫ಎಡೆಕುಂಟೆ ಹೂಡಿ ಮಧ್ಯಾಂತರ ಬೇಸಾಯ ಮಾಡುವುದುಂಟು. ಆಗ ನೊಗದ ಉದ್ದಳತೆಯು ೩ರಿಂದ ೫ಮೀ. ಉದ್ದವಾಗಿರಬಹುದು"[೧೪] ಎಂದು ಹೇಳಲಾಗಿದೆ.

ನೊಗದ ಉದ್ದಳತೆಯನ್ನು ಜೊತೆ ಎತ್ತಿನಲ್ಲಿ ಒಂದು ಎತ್ತಿನ ಕುತ್ತಿಗೆಯ ಮಧ್ಯ ಬಿಂದುವಿನಿಂದ ಇನ್ನೊಂದು ಎತ್ತಿನ ಕುತ್ತಿಗೆಯ ಮಧ್ಯ ಬಿಂದುವಿನವರೆಗೆ ಅಳತೆ ಮಾಡುವ ಪದ್ಧತಿ ರೂಢಿಯಲ್ಲಿವೆ. ಕೂರಿಗೆ ಮತ್ತು ಮಧ್ಯಾಂತರ ಬೇಸಾಯದ ನೊಗಗಳ ಆಯ್ಕೆ ಮುಖ್ಯವಾದುದು. ಕೂರಿಗೆ ನೊಗದ ಉದ್ದಳತೆಯು ಕೂರಿಗೆ ಸಾಲುಗಳ ಅಂತರ ಮತ್ತು ತಾಳುಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಸಾಲುಗಳ ಅಂತರ ೪೦ಸೆಂ.ಮೀ ಇದ್ದು ಮೂರು ತಾಳಿನ ಕೂರಿಗೆಗೆ ೧೬೦ಸೆಂ,ಮೀ, ಉದ್ದವಿರುವ ನೊಗದ ಆಯ್ಕೆ ಮಾಡಲಾಗುತ್ತದೆ. ಕುಂಟೆಗೆ ಕುಡದ ಉದ್ದ ಎರಡರಷ್ಟು ನೊಗ ಇರಬೇಕು. ಅಂದರೆ ಕುಡದ ಉದ್ದ ೧ ಮೀಟರ ಆಗಿದ್ದರೆ ಈ ಕುಂಟೆ ನೊಗದ ಉದ್ದ ೨ ಮೀಟರ ಇರಬೇಕು. ಮಧ್ಯಾಂತರ ಬೇಸಾಯದ ನೊಗಗಳು ಎತ್ತುಗಳು ಸಾಲುಗಳ ಮಧ್ಯದಲ್ಲಿ ಚಲಿಸುವಂತೆ, ಸಸಿಗಳನ್ನು ತುಳಿಯದಂತೆ, ಎಡೆಕುಂಟೆಗಳ ಸಂಖ್ಯೆ, ಎಡೆಕುಂಟೆಗಳನ್ನು ಹೂಡುವ ಬಗೆ ಮತ್ತು ಬೆಳೆಗಳ ಸಾಲುಗಳ ಅಂತರವನ್ನು ಅವಲಂಬಿಸಿರುವಂತೆ ತಯಾರಿಸಲಾಗುತ್ತದೆ.

ಕನ್ನಡ ಕಾವ್ಯಗಳಲ್ಲಿ ನೊಗ ಕುರಿತಾದ ಉಲ್ಲೇಖ ಅಷ್ಟಾಗಿ ಕಂಡು ಬರುವುದಿಲ್ಲ. ಆದರೂ ಅನಂತನಾಥ ಪುರಾಣದಲ್ಲಿ ನೊಗದ ಅಳತೆ ಎಷ್ಟಿರಬೇಕೆಂಬುದನ್ನು ಕುರಿತು ಮಾಹಿತಿ ದೊರೆಯುತ್ತದೆ. ಒಂದು ನೊಗದ ಅಳತೆ, ಒಂದೂವರೆ ಮಾರು, ನಾಲ್ಕು ಹಸ್ತ ಇರುತ್ತದೆ. 'ಸಂಯಮೋಪಕರಣಕ್ಕೆಡಗೈ ಬಲಗೈ ಪೆಗಲ್ಗೆ ನೇರ್ಪಡೆ ನೊಗದಂತರಂ..............[ಅ-೪,ಪು-೨೪] ಪಂಪಭಾರತದಲ್ಲಿಯೂ 'ಉಡಿದಿರ್ದಜ್ಜುಗುದೀಸು ತಟಗ್ಗಿದ ನೊಗಂ ಜೀಜಿಚಕ್ರಂ ಸಿಡಿಲ್...........[ಅ-೧೦,ಪು-೯೧] ವಚನಸಾಹಿತ್ಯದಲ್ಲಿ ಒಕ್ಕಲಿಗ ಮುದ್ದಣ್ಣನವರ ವಚನದಲ್ಲಿ, ಉರಿಲಿಂಗಿಪೆದ್ದಿ, ಕಾಡುಸಿದ್ಧೇಶ್ವರರ, ನಗೆಯಮಾರಿತಂದೆ ಮುಂತಾದವರ ವಚನದಲ್ಲಿ ನೊಗದ ಉಲ್ಲೇಖ ಕಾಣಸಿಗುತ್ತದೆ. ಉತ್ತರ ಕರ್ನಾಟಕದಲ್ಲಿ ಎರೆಭೂಮಿ ಹೆಚ್ಚಾಗಿರುವುದರಿಂದ ಕೂರಿಗೆ ನೊಗವನ್ನು ಹೆಚ್ಚು ಬಳಸುತ್ತಾರೆ. ಆರು ಅಡಿ ಉದ್ದವಿರುವ ಈ ನೊಗದಲ್ಲಿ ನೊಗದ ಮುಂಭಾಗದಲ್ಲಿ ಈಶ್ವರ ದೇವರ ಚಿತ್ರವಿರುತ್ತದೆ. ಹರಗುವ ನೊಗಕ್ಕೆ ಕುಳಗುಂಟೆ, ಅತ್ತಿಗುಂಟೆ ಎಂಬ ಎರಡು ತರಹದ ಕುಂಟೆ ಜೋಡಿಸುತ್ತಾರೆ. ಕುಳಗುಂಟೆಯಲ್ಲಿ ನಾಲ್ಕು ಹಾಗೂ ಅತ್ತಿಗುಂಟೆಯಲ್ಲಿ ಮೂರು ಕುಂಟೆಗಳನ್ನು ಜೋಡಿಸುತ್ತಾರೆ. ಅನೇಕ ವೈವಿಧ್ಯತೆಯ ನೊಗಗಳಿವೆ.

ಹಲುಬೆ : ಬಿತ್ತನೆ ನಂತರ ನೆಲಮಟ್ಟಮಾಡಲು, ಕಸಕಡ್ಡಿಯನ್ನು ಒಂದೆಡೆ ಸೇರಿಸಲು ಬಳಸುವ ಸಾಧನ ಹಲುಬೆ. ಹಲ್ಲುಗಳನ್ನು ಹೊಂದಿರುವುದರಿಂದ ಹಲುಬೆಯೆಂದು ಕರೆಯಲಾಗಿದೆ. ಇದನ್ನು ಬಯಲುಸೀಮೆ ಹಾಗೂ ಉತ್ತರ ಕರ್ನಾಟಕದಲ್ಲಿ ಕಡ್ಡಾಯವಾಗಿ ಬಳಸುತ್ತಾರೆ. ಇದರಲ್ಲಿ ಮೂರು, ಆರು, ಹನ್ನೆರಡು ಹಲ್ಲುಗಳ ಹೊಂದಿರುವ ಹಲುಬೆಗಳ ಬಳಕೆಯನ್ನು ಹೆಚ್ಚಾಗಿ ಕಾಣುತ್ತೇವೆ.

ಹಲುಬೆಯನ್ನು ಉಳುಮೆಗೆ ಬಳಸುವ ರೈತನು ಸೂಕ್ಷ್ಮಗ್ರಹಿಯಾಗಿರಬೇಕು. ಏಕೆಂದರೆ ಎಚ್ಚರ ತಪ್ಪಿದರೆ ಪೈರು ನಾಶವಾಗುವ ಸಾಧ್ಯತೆಯೇ ಹೆಚ್ಚು. ಇದನ್ನು ಬಳಸುವಾಗ ರೈತರ ಗಮನ ನಾಲ್ಕು ಕಡೆ ಇರಬೇಕಾಗುತ್ತದೆ. "ಎಡಗೈನಲ್ಲಿ ಮೇಣಿ(ಹಿಡಿಕಾಯಿ ಹಲುಬೆ ನಿಯಂತ್ರಿಸುವ ಮುಖ್ಯ ಅಂಗ) ಹಿಡಿದರೆ, ಬಲಗೈನಲ್ಲಿ ಮೇಣಿ ಕೋಲು(ಇದು ಕುಳಗಳನ್ನು ಪೈರು ಮಂದವಾಗಿರುವ ಸ್ಥಳದಲ್ಲಿ ಒತ್ತಿ ಉಳುಮೆ ಮಾಡಲು, ಕುಂಟೆ ನಿಯಂತ್ರಿಸಲು ಬಳಸುತ್ತಾರೆ). ಮೇಣಿಹಗ್ಗ(ಎತ್ತುಗಳಿಗೆ ಕಟ್ಟಿದ ಹಗ್ಗ) ಮುಳ್ಳುಕೋಲು(ಎತ್ತುಗಳನ್ನು ಎಡಬಲಕ್ಕೆ ಹೋಗದಂತೆ ನಿಯಂತ್ರಿಸಲು ಬಳಸುವ ಕೋಲು) ಹಿಡಿದಿರುತ್ತಾನೆ"[೧೫] ಎಂದು ದೇಶೀ ಕೃಷಿಜ್ಞಾನ ಸಂಪುಟ ೯ರಲ್ಲಿ ಹೇಳಲಾಗಿದೆ. ಅಲ್ಲದೆ ಹಲುಬೆಯಲ್ಲಿ ಇರುವ ಬಿಡಿಭಾಗಗಳು ದಿಂಡು, ಒಂದು ಈಸು, ಹಲ್ಲುಗಳು, ಮೇಣಿ, ಮೇಣಿಕೋಲು, ಮೇಣಿ ಹಿಡಿಕೆ ಎಂಬವುಗಳು. ಇದು ದಕ್ಷಿಣ ಕರ್ನಾಟಕದ ರಾಗಿ ಬೆಳೆಯ ಬೇಸಾಯದಲ್ಲಿ ಬಳಸುವ ಸಾಮಾನ್ಯ ಕೃಷಿ ಉಪಕರಣವಾಗಿದೆ.

ಮಧ್ಯಾಂತರ ಬೇಸಾಯದ ಕುಂಟೆಗಳು : ಬೆಳೆ ಬಿತ್ತಿದ ನಂತರ ಕಳೆ, ಕಸ ನಿಯಂತ್ರಿಸಲು, ಭೂಮಿಯ ಸಡಿಲಿಸಲು, ಭೂಮಿಯ ತೇವಾಂಶ ಆವಿಯಾಗುವುದನ್ನು ಕಡಿಮೆ ಮಾಡಲು, ಕಾಂಡ ಬೇರುಗಳಿಗೆ ಮಣ್ಣು ಏರಿಸಲು ಇಂತಹ ಕುಂಟೆಗಳನ್ನು ಬಳಸುತ್ತಾರೆ. ಸಾಮಾನ್ಯವಾಗಿ ಇವುಗಳನ್ನು ಈ ಕೆಳಗಿನಂತೆ ವಿಭಾಗಿಸಿಕೊಂಡು ಚರ್ಚಿಸಬಹುದಾಗಿದೆ.

೧. **ಎಡೆಕುಂಟೆ** : ಇದು ಎಲ್ಲಾರೀತಿಯಲ್ಲಿ ಕುಂಟೆಯನ್ನು ಹೋಲುತ್ತದೆ. ದಿಂಡು, ಈಸು, ತಾಳು, ಕುಡ, ಹಿಡಿಕೆ ಎಡೆಕುಂಟೆಯ ಮುಖ್ಯಭಾಗಗಳು. ಕುಡದ ಉದ್ದಳತೆ ಬೆಳೆಗಳ ಸಾಲುಗಳ ಅಂತರ ಅವಲಂಬಿಸಿರುತ್ತದೆ. ಒಂದು ಜೊತೆ ಎತ್ತುಗಳಿಗೆ ಒಂದರಿಂದ ನಾಲ್ಕು ಕೆಲವೊಮ್ಮೆ ಆರು ಎಡೆಕುಂಟೆಗಳನ್ನು ಹೂಡಿ ಮಧ್ಯಾಂತರ ಬೇಸಾಯ ಮಾಡುತ್ತಾರೆ. ಅಗಲವಾದ ಸಾಲು ಹೊಂದಿರುವ ಬೆಳೆಗಳಾದ ಮೆಣಸಿನಗಿಡ, ತಂಬಾಕು, ಹತ್ತಿಯಲ್ಲಿ ೧೦೦ರಿಂದ ೧೨೦ಸೆಂಮೀ. ಇರುವ ಒಂದೇ ಕುಂಟೆ ಹೂಡಿ ಹೊಡೆಯಲಾಗುತ್ತದೆ. "ಜೋಳ, ಶೇಂಗಾ, ಭತ್ತ, ರಾಗಿ, ಹೆಸರು, ಹುರುಳಿ, ಅಲಸಂದಿ ಸಾಲುಗಳ ಅಂತರ ೩೦ರಿಂದ ೪೦ಸೆಂಮೀ. ಇರುವುದು. ಈ ಬೆಳೆಗಳಲ್ಲಿ ಮಧ್ಯಾಂತರ ಬೇಸಾಯ ಮಾಡಲು ಒಂದು ಜೊತೆ ಎತ್ತುಗಳಿಗೆ ಮೂರರಿಂದ ನಾಲ್ಕು ಎಡೆಕುಂಟೆಗಳನ್ನು ಹೂಡುವುದುಂಟು. ಎಡೆಕುಂಟೆ ಹೂಡುವ ನೊಗದ ಉದ್ದಳತೆಯ ಸಾಲುಗಳ ಅಂತರ ಮತ್ತು ಎಡೆಕುಂಟೆಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ"[೧೬] ಎನ್ನಲಾಗಿದೆ.

೨. **ಇರಕಕುಂಟೆ** : ಇರಕ ಕುಂಟೆಯ ರಚನೆ ಎಡೆ ಕುಂಟೆಯಂತೆಯೇ ಇರುತ್ತದೆ. ಕುಂಟೆಯ ಕುಡ ಪೈರಿನ ಸಾಲಿನ ಮಗ್ಗುಲಿನಲ್ಲಿ ಚಲಿಸುವುದರಿಂದ ಕಳೆ ನಿಯಂತ್ರಣಕ್ಕೆ ಉತ್ತಮ ಕುಂಟೆ ಬೆಳೆಯ ಮೊದಲಿನ ಹಂತದಲ್ಲಿ ಇದನ್ನು ಬಳಸುತ್ತಾರೆ. ಕುಡ ಮಧ್ಯದಲ್ಲಿ ಸೀಳಿರುತ್ತದೆ. ಇಲ್ಲವೆ ಕೆಲವೊಮ್ಮೆ ಸೀಳದೆ ಏಕತಾಳಾಗಿರುತ್ತದೆ. ಕೆಲವೊಂದು ಸಲ ಅನೇಕ ಇರಕುಡಗಳನ್ನು ಒಂದೇ ದಿಂಡಿಗೆ ಜೋಡಿಸಿ ಮಧ್ಯಾಂತರ ಬೇಸಾಯ ಮಾಡುತ್ತಾರೆ.

೩. ಚಿಪ್ಪಕುಂಟೆ : ಇದು ದಕ್ಷಿಣ ಕರ್ನಾಟಕದ ರಾಗಿ ಬೆಳೆಯಲ್ಲಿ ಬಳಸುವ ಎಡೆಕುಂಟೆ. ಭೂಮಿಯನ್ನು ಸಡಿಲಗೊಳಿಸಲು, ರಾಗಿ ಸಸಿಗಳು ದಟ್ಟವಾದಾಗ ಕೀಳಲು ಚಿಪ್ಪಕುಂಟೆ ಬಳಸುತ್ತಾರೆ. ದಿಂಡಿಗೆ ಅನೇಕ ಹಲ್ಲುಗಳನ್ನು ಜೋಡಿಸಲಾಗಿರುತ್ತದೆ. ಈ ಹಲ್ಲುಗಳು ಭೂಮಿಯಲ್ಲಿ ನಾಟುವ ಭಾಗ ಅಗಲ ಮತ್ತು ಹರಿತವಾಗಿರುತ್ತದೆ. ದಿಂಡಿನ ಉದ್ದಳತೆಗೆ ಅನುಸರಿಸಿ ೨,೮,೧೨ ಕಬ್ಬಿಣದ ಹಲ್ಲುಗಳ ಜೋಡಿಸಲಾಗಿರುತ್ತದೆ.

೪. ತ್ರಿಪಾಲಿ ಕುಂಟೆ : ದಿಂಡಿಗೆ ಜೋಡಿಸಿದ ಕಬ್ಬಿಣದ ಹಲ್ಲುಗಳು ತ್ರಿಕೋನಾಕಾರವಾಗಿರುವುದರಿಂದ ತ್ರಿಪಾಲಿ ಕುಂಟೆ ಎನ್ನುತ್ತಾರೆ. ಒಂದು ಕುಂಟೆಗೆ ಮೂರು ತ್ರಿಕೋನಾಕಾರ ಪಟ್ಟಿಯ ಜೋಡಣೆ ಇರುತ್ತದೆ. ಉತ್ತರಭಾರತದಲ್ಲಿ ಹೆಚ್ಚು ಬಳಕೆ ಇದೆ.

೫. ಭತ್ತದ ಎಡೆಕುಂಟೆ : ಭತ್ತದ ಗದ್ದೆಯಲ್ಲಿ ಮಾನವ ಶಕ್ತಿ ಬಳಸಿ ಮಧ್ಯಾಂತರ ಬೇಸಾಯ ಮಾಡಲು ಬಳಸುವ ಉಪಕರಣ. ಇದರಲ್ಲಿ ಎರಡು ತಿರುಗುವ ಚಕ್ರವಿದ್ದು; ಅವುಗಳಿಗೆ ಹಲ್ಲುಗಳಿವೆ. ಮತ್ತು ಈ ಚಕ್ರ ತಿರುಗಲು ಹಿಡಿಕೆ ಇದೆ. ಈ ಚಕ್ರಗಳು ಮಣ್ಣನ್ನು, ಕಳೆಕಸಗಳನ್ನು ತಿರುಗಿಸಿ ಬುಡಮೇಲಾಗಿ ಮಾಡಿ ಭೂಮಿಯನ್ನು ಸಡಿಲಿಸಿ ಕಳೆ ನಿಯಂತ್ರಿಸುತ್ತದೆ. ಈ ಚಕ್ರಗಳ ಅಳತೆ ೧೫ರಿಂದ ೧೮ಸೆಂಮೀ ಇರುತ್ತದೆ. ಒಟ್ಟಾರೆಯಾಗಿ ಪ್ರಾದೇಶಿಕ ಬಿನ್ನತೆಯಿಂದ ಅನೇಕ ಬಗೆಬಗೆಯ ವಿನ್ಯಾಸಗಳಲ್ಲಿ ಕುಂಟೆಗಳನ್ನು ತಯಾರಿಸಿ ಬಳಸಲಾಗುತ್ತದೆ. ಕೆಲವು ಕಡೆ ದಳೆಗುಂಟೆ, ಬೋದುಗುಂಟೆ ಇನ್ನು ಮುಂತಾದ ಹೆಸರುಗಳಿಂದ ಕರೆಯುವುದನ್ನು ನೋಡಬಹುದಾಗಿದೆ.

ಮೇಟಿ : ಕನ್ನಡ ನಿಘಂಟುವಿನಲ್ಲಿ ಮೇಟಿಯನ್ನು ಕುರಿತು ಈ ರೀತಿ ಅರ್ಥಗಳಿವೆ. ಕಟಾವಿನ ಕಾಲದಲ್ಲಿ ಧಾನ್ಯಗಳನ್ನು ಒಕ್ಕಲು, ಕಣದಲ್ಲಿ ನಡುವ ಕಂಬ; ಮೇಟಿಕಂಗ; ಮೇಂಟಿ, ಮೇಟಿ, ಮೇಧಿ=ಒಕ್ಕುವ ಕಂಬ. ಕೃಷಿ(ಕ ದೈ ತೋ–೩೬)ಶಾಸನಗಳಲ್ಲಿ 'ಬೆಳೆಮತರು ಕೊಟುನಿ[ಂ]ತಾ ಮೇಟಿಯನ್[ಸೌ, ಇ,ಇ,xviii, ೩೦೧–೮;ಸು.೮ನೆಯ ಶತ]' '........... ನಾಲ್ಕು ಬರಿಸ ಪರಿಯಾರಮ ಐದಾನೆ ವರಿಸ ಪಡು ವಾರಮುಂ ಮೇಣ್ವಾಯಸಕ್ತಿಮುಂ ಇನೆತ್ತಮ(ನ್) ಪ್ರಸಾದಂಗೆಯ್ವಾರ್ [ಸೌ.ಇ.ಇ.ix,-i, ೩೬೦,೧೬–೯ನೆಯ ಶತ]' 'ಸ್ವಸ್ತಿ ಸಮಸ್ತ ಗುಣಸಂಪನ್ನರಪ್ಪಜು ವತ್ತೊಕ್ಕಲು ಮಿರ್ದು ಬಿಟ್ಟ ಧರ್ಮಾಮಾವುದೆಂದಡೆ ಮೇಟಿಯಲು ಪಣ ....[ಸೌ.ಇ.ಇ.xi, ii, ೦೫೮–೦೮,೧೧೦೯] ಅನೇಕ ಕಡೆ ಹೀಗೆ ಬಳಸಲಾಗಿದೆ.

'ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಮೇಲು' ಎಂಬ ನಾಣ್ನುಡಿ ಮೇಟಿಯಿಂದಲೇ ಹುಟ್ಟಿರುವಂತದ್ದು. ರಾಶಿ ಮಾಡುವಾಗ ಕಣ ಮಧ್ಯದಲ್ಲಿರುವ ಈ ಕಂಬ ಹಂತಿ ಕಟ್ಟಿಯಾಗಲಿ, ರೋಣಗಲ್ಲಿನಿಂದ ರಾಶಿ ಮಾಡುವಾಗ ಎತ್ತುಗಳು ಹಾಗೂ ರೋಣಗಲ್ಲು ಕಣದಿಂದ ಆಚೆಗೆ ಹೋಗದಂತೆ ನಿಯಂತ್ರಿಸುತ್ತದೆ. ಕಣ ತಯಾರಾದ ನಂತರ ಬೇವು ಇಲ್ಲವೇ ಜಾಲಿಯ ಬಲಿಷ್ಠ ಮರದಿಂದ ಈ ಕಂಬ ತಯಾರಿಸಿ, ಅದಕ್ಕೆ ಶಾಸ್ತ್ರೋಕ್ತ ಪೂಜೆಯ ಸಲ್ಲಿಸಿ, ಹಿರಿಯ ಅನುಭವಿ ರೈತರು ಮೊದಲೇ ತೆಗೆದ ಕುಣಿಯಲ್ಲಿ ನೆಡುತ್ತಾರೆ. ರೈತರ ಕಣದಲ್ಲಿ ತುಂಬಾ ಮಹತ್ವದ ಉಪಕರಣ ಇದಾಗಿದೆ.

ಬಂಡಿ : ಸಾಗಾಣಿಕೆಯ ಉಪಕರಣವಾಗಿದೆ. ಹಳೇ ಮೈಸೂರು ಪ್ರಾಂತ್ಯದಲ್ಲಿ ಬಂಡಿಗೆ ಚಕ್ಕಡಿ ಅಥವಾ ಗಾಡಿ ಎನ್ನುತ್ತಾರೆ. ಗಾಡಿಯೆಂದರೆ, ಜನರನ್ನಾಗಲಿ, ಸಾಮಾನುಗಳನ್ನಾಗಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಉಪಯೋಗಿಸುವ ಚಕ್ರಗಳುಳ್ಳ ವಾಹನ, ಬಂಡಿ, ಶಕಟ, ಚಕ್ಕಡಿ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುವಿನಲ್ಲಿ ಅರ್ಥೈಸಲಾಗಿದೆ. ಬಂಡಿಗಳಲ್ಲಿ ಅನೇಕ ವಿನ್ಯಾಸದ,

ವಿಧಧ ಬಂಡಿಗಳನ್ನು ಕಾಣುತ್ತೇವೆ. "ಎತ್ತಿನಬಂಡಿ, ಎದ್ದಲಬಂಡಿ, ಒಂಟೆತ್ತಿನಬಂಡಿ, ಕಂಬಲಬಂಡಿ, ಕೋಲಾರಿಬಂಡಿ, ಟೀಕ್‌ಬಂಡಿ, ಟೈರ್ಬಂಡಿ, ಜೋಡೆತ್ತಿನಬಂಡಿ, ಪಾರೆಪಟ್ಟಿಗಾಡಿ, ಮಂಟಿಗಾಡಿ ಹಾಗೂ ಬೋರಿತ್ತಾಗಾಡಿ ಮುಂತಾದವು ...."[೧೭] ಉತ್ತರ ಕರ್ನಾಟಕದಲ್ಲಿ ಹಾರನಹಳ್ಳಿ ವಿನ್ಯಾಸದ ಗಾಡಿ ಹೆಚ್ಚು ಪ್ರಖ್ಯಾತಿಯನ್ನು ಪಡೆದರೆ, ಬಯಲುಸೀಮೆ, ಹಳೇ ಮೈಸೂರು ಪ್ರಾಂತ್ಯದಲ್ಲಿ ಗಜಾಂ ಗಾಡಿ ಹೆಸರುವಾಸಿಯಾಗಿದೆ.

ಗಾಡಿ ಸಂಕೀರ್ಣವಾದ ಉಪಕರಣವಾಗಿದ್ದು ಅನೇಕ ಬಿಡಿಭಾಗಗಳಿಂದ ಕೂಡಿಬರುತ್ತದೆ. ನೊಗ, ಮೂಕಿನಮರ, ಚಕ್ರಗಳು, ಹೊಟ್ಟೆಮರ, ಕಬ್ಬಿಣದಪಟ್ಟಿ, ಅಚ್ಚಿನಮರ, ದಬ್ಬೆ, ಕೀಲುಗೂಟ, ಅಟ್ಟು, ಅಟ್ಟಿನಗೂಟಗಳು, ಹಲಗೆ ಮುಂತಾದವುಗಳು. ಕುಶಲಕರ್ಮಿಗಳಿಂದ ಗಾಡಿಯನ್ನು ತಯಾರಿಸಲಾಗುತ್ತದೆ. ಉತ್ತರ ಕರ್ನಾಟಕದ್ದು ಹಾರನಹಳ್ಳಿ ವಿನ್ಯಾಸದ ಗಾಡಿಯಾದರೂ, ಹಳೇ ಮೈಸೂರಿನದು ಗಜಾಂ(ಒರಿಸ್ಸಾ ರಾಜ್ಯದ ಗಜಾಂ ಪ್ರದೇಶದವರು ತಯಾರಿಸಿದ ಗಾಡಿಗಳು) ಗಾಡಿಯಾದರೂ, ಸಾಮಾನ್ಯವಾಗಿ ಗಾಡಿಯ ವಿನ್ಯಾಸ ಒಂದೇ ರೀತಿಯದ್ದಾಗಿರುತ್ತದೆ.

ಕನ್ನಡ ಪ್ರಾಚೀನ ಕಾವ್ಯಗಳಲ್ಲಿ ಸಾಂದರ್ಭಿಕವಾಗಿ ಅನೇಕ ಕಡೆ ಬಂಡಿಗಳ ಉಲ್ಲೇಖ ಇರುವುದು ಕಂಡುಬರುತ್ತದೆ. ಅವುಗಳನ್ನು ಇಲ್ಲಿ ಗುರುತಿಸಲಾಗಿದೆ. ಪಂಪನ ಆದಿಪುರಾಣದಲ್ಲಿ '......... ವೃದ್ಧ ವೃದ್ಧೋಷ ಶಕಟ ಸಂಕಟ..........'[ಪು–೧೮೨] ವಡ್ಡಾರಾಧನೆ ಕಥೆಗಳಲ್ಲಿ, ನಯಸೇನನ ಧರ್ಮಾಮೃತದಲ್ಲಿ 'ಪಿಟ್ಟನೆತ್ತುಮಂ ಬಂಡಿಯಂ ....'[ಪು–೩೫೦] ಕುಮಾರವ್ಯಾಸ ಭಾರತದಲ್ಲಿ '............ಕೊಟ್ಟಿಗೆಯೆತ್ತು ಬಂಡಿ ಕೊಟಾರ ಕೊಪ್ಪರಿಗೆ ಸರಕು..........'[ಸಂ.–೧೬,ಪು–೭೧] ಜೈಮಿನಿ ಭಾರತದಲ್ಲಿ '.......ಕೊಟ್ಟಿಗೆಯ ಕೊಲ್ಲಾರ ಬಂಡಿಗಳ ಮೇಲೆ ಸರಕಿಟ್ಟಣಿಸಿ ....'[ಸಂ.–೨,ಪು–೭] ಒಕ್ಕಲಿಗ ಮುದ್ದಣ್ಣ, ಅಂಬಿಗರ ಚೌಡಯ್ಯ, ಅರಿವಿನ ಮಾರಿತಂದೆ, ಕಾಡುಸಿದ್ದೇಶ್ವರ, ಬಹುರೂಪಿ ಚೌಡಯ್ಯ, ಜೇಡರ ದಾಸಿಮಯ್ಯಗಳ ವಚನಗಳಲ್ಲಿ ಬಂಡಿಯ ಉಲ್ಲೇಖ ಕಂಡುಬರುತ್ತದೆ. ಅಲ್ಲಮನ ವಚನವೊಂದರಲ್ಲಿ ಇಡೀ ದೇಹವನ್ನೇ ಬಂಡಿಗೆ ಹೋಲಿಸಲಾಗಿದೆ.

ದೇಹವೆಂಬುದು ತುಂಬಿದ ಬಂಡಿಕಂಡಯ್ಯಾ
ಕಾಲುಗಳೆರಡು ಗಾಲಿಕಂಡಯ್ಯಾ
ಅದನೆಡಟಸುವರು ಐದು ಜನ ಮಾನಸರು
ಒಬ್ಬರಿಗೊಬ್ಬರು ಸಮವಿಲ್ಲವಯ್ಯಾ
ಅವನಿಚ್ಚೆಯನರಿತು ನಡೆಸದಿದ್ದರೆ, ಅದರಚ್ಚು ಮುರಿದಿತ್ತು ಗುಹೇಶ್ವರ ॥

ಇಲ್ಲಿ ಬಂಡಿ ಸಾಂಕೇತಿಕವಾಗಿ ಬದುಕಿನ ಹೋಲಿಕೆಯಾದರೂ ಸಹಿತ ಕೃಷಿ ಸಂದರ್ಭದಲ್ಲಿ ಮನುಷ್ಯನ ದೇಹದಂತೆ ಅವನ ದಿನನಿತ್ಯ ಭಾಗವಾಗಿ ಬಂಡಿ ಬಳಕೆಯಾಗಿರುವುದನ್ನು ಕಾಣುತ್ತೇವೆ.

ಹಾಗೆಯೇ ಸರ್ವಜ್ಞನ ತ್ರಿಪದಿಗಳಲ್ಲಿ ವಿಶೇಷವಾಗಿ ಬಂಡಿ ಕುರಿತಾದ ಮಾತುಗಳು ಕಂಡುಬರುತ್ತವೆ. 'ಬಂಡಾರ ತುಂಬಿ ನೀ ಬಂಡಿಯಲಿ ಹೇರುವರೆ..........', 'ನಲ್ಲೆತ್ತು ಬಂಡಿ ಬಲವಿಲ್ಲದಾರಂಭ ....', 'ಬಂಡಿಯಿಲ್ಲದವನ ಬೇಸಾಯ ತಲೆ ಹೋದ ಮುಂಡ..........', 'ಎತ್ತು ಇಲ್ಲದ ಬಂಡಿ ಒತ್ತೊತ್ತಿ ನಡೆಸುವರು.........(ರೈಲುಗಾಡಿ) ಎಂದು ಮುಂತಾದ ಕಡೆಯಲ್ಲಿ ಬಂಡಿಯ ಮಹತ್ವವನ್ನು ಕುರಿತು ಹೇಳುತ್ತಾನೆ. ಈ ಕಾರಣದಿಂದ ಒಕ್ಕಲುತನದಲ್ಲಿ ಬಂಡಿಯು ತುಂಬ ಅವಶ್ಯಕವಾಗಿ ಕಂಡುಬರುತ್ತದೆ.

ಹಿಂದೆ ಕಟ್ಟಿಗೆಯ ಉಪಕರಣಗಳನ್ನು ತಯಾರಿಸಲು ಸಾಮಾನ್ಯವಾಗಿ ಕೆಲವು ವಿಶೇಷ ಮರಗಳನ್ನು ಬಳಸಲಾಗುತ್ತಿತ್ತು. ಆದರೆ ಇಂದು ಯಾವ ಮರ ದೊರೆಯುತ್ತದೆಯೋ ಅಂತಹ ಮರವನ್ನೆ ಬಳಸಿ ಉಪಕರಣ ತಯಾರಿಸಲಾಗುತ್ತದೆ. ಹಿರಿಯರ ಅನುಭವದ ಆಧಾರವನ್ನು ಅನುಸರಿಸಿ ಇಂತಿಂತಹ ಉಪಕರಣಕ್ಕೆ ಇಂತದ್ದೇ ಮರಬೇಕೆಂದು ಹುಡುಕಲು ಹೋದರೆ ಇಂದು ಆ ಮರ-ಮುಟ್ಟುಗಳು ದೊರೆಯಲು ಸಾಧ್ಯವಿಲ್ಲ. ಇದು ಪ್ರಕೃತಿಯನ್ನು ಇಂದಿನ ಮಾನವ ತನ್ನ ನಾಗರೀಕತೆಯ ಬದುಕಿಗಾಗಿ ನಾಶ ಮಾಡಿರುವ ಪರಿಸ್ಥಿತಿಯನ್ನು ಸೂಚಿಸುತ್ತದೆ.

ಸಂರಕ್ಷಣೆ ವಿಧಾನ : ಕೃಷಿ ಉಪಕರಣಗಳಲ್ಲಿ ಕಟ್ಟಿಗೆಯಿಂದ ತಯಾರಿಸಿದ ಉಪಕರಣಗಳನ್ನು ಜಾಗ್ರತೆಯಿಂದ ಸಂರಕ್ಷಣೆ ಮಾಡಬೇಕಾಗುತ್ತದೆ. ಏಕೆಂದರೆ 'ಮುಟ್ಟು ಇಲ್ಲಾಂತ ಮೂರ್ಮನೆಗೆ ಹೋದರೆ ಕೆಟ್ಟಿತವನ ಒಕ್ಕಲುತನ', 'ಹತಾರ ಇಲ್ಲದವನು ಹೊತಾರ ಬಾ', ಮುಂತಾದ ಕೃಷಿ ಉಪಕರಣ ಸಂಬಂಧಿ ಗಾದೆಗಳನ್ನು ನೋಡಿದರೆ ಉಪಕರಣಗಳ ಮಹತ್ವ ಎಷ್ಟು ಎಂಬುದು ತಿಳಿಯಬಹುದಾಗಿದೆ. ಕೃಷಿಕರು ತಮ್ಮ ಉಪಕರಣಗಳನ್ನು ಮಗುವಿನಂತೆ ಕಾಪಾಡುತ್ತಾರೆ. ಮಣ್ಣಿನಲ್ಲಿ ಹಾಕಿ ತಟ್ಟಾರಿಸುವುದು, ತಿಪ್ಪೆಗುಂಡಿಯಲ್ಲಿ ಹಾಕುವುದು, ದನಕರುಗಳ ಮೂತ್ರ ಚಿಮುಕಿಸುವುದರಿಂದ ಹುಳುಚು ಹತ್ತದಿರಲೆಂದು ಹೀಗೆ ಮಾಡಲಾಗುತ್ತದೆ. ಅಲ್ಲದೇ ಸ್ವಲ್ಪ ದಿನಗಳ ಪರಿಯಂತರ ದನಕಟ್ಟುವ ಕೊಟ್ಟಿಗೆಯಲ್ಲಿ ಹಾಕುವುದು, ಗೆದ್ದಲು ಹತ್ತದಿರಲೆಂದು ಹಾಗೂ ಗಟ್ಟಿಮುಟ್ಟಾಗಿ ತುಂಬಾ ದಿನಗಳವರೆಗೆ ಬಾಳಿಕೆ ಬರಲೆಂದು ಹೀಗೆ ಸಂರಕ್ಷಿಸುತ್ತಾರೆ. ಮುಟ್ಟುಗಳ ತಯಾರಿಕೆ ಮಾಡಲು ಮರವನ್ನು ಕಡಿದ ನಂತರ ತೊಗಟೆ ತೆಗೆದು ಆರಿಸುವುದು, ಒಣಗಿದ ಕಟ್ಟಿಗೆಯಿಂದ ಕರ್ಮಾಭ್ಯಾಸಿ ಬಡಗಿಯ ಕೈಯಿಂದ ನೇಗಿಲು, ಕುಂಟೆ, ನೊಗ, ಕೂರಿಗೆ ಮುಂತಾದ ಗಳೇವುಗಳನ್ನು ತಯಾರಿಸಿ ಸಂರಕ್ಷಿಸಿಕೊಳ್ಳುತ್ತಾರೆ.

ಒಕ್ಕಲಿಗ ಮುದ್ದಣ್ಣನ ವಚನವೊಂದರಲ್ಲಿ ಕೃಷಿ ಉಪಕರಣಗಳ ಸಂರಕ್ಷಣೆಯ ವಿಧಾನ ಕುರಿತು ಈ ರೀತಿ ಹೇಳಲಾಗಿದೆ.

"ಕುಂಭದ ಮಳೆ ಹೊಯ್ಯಿತ್ತು
ಮೂರಂಗದ ನೇಗಿಲ ತರಿಯಬೇಕು
ಆರಂಗದ ಭೂಮಿಯಲ್ಲಿ ಅರಸಲಾಗಿ ಒಂದೇ ಮರ ಹುಟ್ಟಿತ್ತು
ಹುಟ್ಟವಾಗ ಮರ ಮೂರುಕವೆ. ಅಲ್ಲಿಂದತ್ತಾರು ಕವೆಯಾಯಿತ್ತು.
ಆ ಆರರ ಮಧ್ಯೆದಲ್ಲಿ ಮೂವತ್ತಾರು ಕವೆಯಾಯಿತ್ತು.
ಆ ಮೂವತ್ತಾರರ ಮಧ್ಯದಲಿ ನೂರೊಂದು ಕೊಂಬೆ ಶಾಖೆಗೂಡಿತ್ತು.
ಆ ಮರನನೇರಿ ಹಿಂದು ಮುಂದಣ ಕೊಂಬೆಕ
ಕೊಡಲಿಯಾಡೋದಕ್ಕೆ ತೆರಪ ಮಾಡಿ, ನಡುವಣ ಕೊಂಬೆ ಕೆಡವುತ್ತಿರಲಾಗಿ
ಒಂದು ಹೊಯಿಲಿಗೆ ಇದರಂಗದ ತೊಪ್ಪೆ ಹರಿದು
ಉಭಯಕ್ಕೆ ದಿಂಡು ಹರಿದು
ತ್ರಿವಿಧಕ್ಕೆ ಗರ್ಭಗೆಚ್ಚು ಖಂಡಿತವಾಯಿತ್ತು.
ಮರ ತಟ್ಟಾರಬೇಕೆಂದು ಇರಿಸಿ ಬಂದೆ
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ ॥"[೧೮]

ಮುಂಗಾರು ಮಳೆ ಸುರಿದ ಕೂಡಲೇ ರೈತರು ತಮ್ಮ ಕೃಷಿ ಚಟುವಟಿಕೆಗಳ ಸಿದ್ಧತೆ ಮಾಡಿಕೊಳ್ಳಲು ಮುಂದಾಗುತ್ತಾರೆ. ಅಂತವುಗಳಲ್ಲಿ ಭೂಮಿಯ ಉಳುಮೆ ಮಾಡಲು ಬೇಕಾಗುವ ನೇಗಿಲು, ಕುಂಟೆ, ಕೂರಿಗೆ ತಯಾರಿಸಲು ಭೂಮಿಯಲ್ಲಿ ಕವೆಗಳಿಂದ ಕೂಡಿದ ತನಗೆ ಬೇಕಾಗಿರುವ ಜಾತಿಯ ಮರ ಹುಡುಕಿ, ಅನಗತ್ಯವಾದ ಕವೆ, ಕೊಂಬೆಗಳನ್ನು ಕೊಡಲಿಯಿಂದ ಕಡಿದು ತೆರವು ಮಾಡಿಕೊಂಡು ನಡುವೆ ಇರುವ ಕೊಂಬೆಯ ಕಡಿದು, ಅದರ ಮೇಲಿನ ತೊಗಟೆ ತೆಗೆದು ಅಳತೆಗೆ ತಕ್ಕಂತೆ ದಿಂಡನ್ನು ಎರಡೂ ಕಡೆ ಕತ್ತರಿಸಿ ಕೆಚ್ಚಾದ ಮರವನ್ನು ಹಸಿ ಆರಬೇಕೆಂದು ಹೊಲದಲ್ಲಿಯೇ ಹಾಕಿ ಬರುವ ರೈತನ ಚಿತ್ರ ಈ ವಚನದಲ್ಲಿ ಕಂಡುಬರುತ್ತದೆ. ಇಲ್ಲಿ ರೈತರು ವ್ಯವಸಾಯದ ಉಪಕರಣಗಳ ತಯಾರಿಕೆಯಲ್ಲಿ ವಹಿಸುವ ಮುಂಜಾಗ್ರತೆಯನ್ನು ಸಂರಕ್ಷಣೆಯ ರೀತಿಯಲ್ಲಿ ಕಾಣಬಹುದಾಗಿದೆ.

ಒಕ್ಕಲುತನಕ್ಕೆ ಸಂಬಂಧಿಸಿದ ಉತ್ತುವ, ಬಿತ್ತುವ ಕ್ರಿಯೆಗಳು ಮುಗಿದ ನಂತರ ಮುಂಗಾರು ಮಳೆಗಳು ಸುರಿದು ಸಂಮೃದ್ಧ ಪೈರು ಫಸಲನ್ನು ಹೊತ್ತು ಕೊಯ್ಲಿಗೆ ಸಿದ್ಧವಾಗಿರುವ ಸಂದರ್ಭ, ಅಂದರೆ ಕಾರ್ತಿಕ ಮಾಸದಲ್ಲಿ ಬರುವ ದೀಪಾವಳಿ ಹಬ್ಬದ ವೇಳೆಯಲ್ಲಿ ಒಕ್ಕಲುತನದ ಉಪಕರಣಗಳನ್ನು ಸ್ವಚ್ಛತೆ ಮಾಡಿ ಅವುಗಳಿಗೆ ಸುಣ್ಣ ಬಣ್ಣ ಹಚ್ಚಿ, ಪೂಜೆಯ ವಿಧಿವಿಧಾನ ಪೂರೈಸುತ್ತಾರೆ. ಇಲ್ಲಿಯೂ ಅವರ ಉಪಕರಣಗಳ ಕುರಿತಾದ ಕಾಳಜಿಯನ್ನು ಧಾರ್ಮಿಕ ವಿಧಿಯ ನೆಪದಲ್ಲಿ ಕಾಣಬಹುದಾಗಿದೆ. ನಂತರ ಮುಟ್ಟುಗಳನ್ನು ನೆರಳಿನಲ್ಲಿ, ಕೊಟ್ಟಿಗೆಯ ಅಟ್ಟಣಿಗೆ ಮೇಲೆ ಇಟ್ಟು, ಮಳೆ ಬಿಸಿಲು, ಗಾಳಿ, ಬೆಂಕಿಗಳಿಂದ ಅವುಗಳನ್ನು ರಕ್ಷಿಸುತ್ತಾರೆ. ಭೂಮಿಯನ್ನು ಉಳುಮೆ ಮಾಡುವಾಗ ನೇಗಿಲಿ, ಕುಂಟೆ, ನೊಗಗಳನ್ನು ಹೊಲಗದ್ದೆಗಳಲ್ಲಿ ಬಿಟ್ಟು ಬರುತ್ತಾರೆ. ಅಂತಹ ಸಂದರ್ಭದಲ್ಲಿ ನೇಗಿಲು ನೊಗಗಳನ್ನು ಬದುವಿನ ಮೇಲೆ, ಹೊಲದಲ್ಲಿ ಕಲ್ಲು ಕಟ್ಟಿ ಅದರ ಮೇಲೆ ಇಟ್ಟು ಬರುತ್ತಾರೆ. ಈ ರೀತಿ ಮಾಡುವುದರಿಂದ ಗೆದ್ದಲು ಹುಳು ತಿನ್ನಲು ಸಾಧ್ಯವಿಲ್ಲ ಎಂಬ ನಂಬಿಕೆ. ಈ ರೀತಿಯ ಅನೇಕ ಸಂರಕ್ಷಣೆಯನ್ನು ರೈತರು ಮಾಡಿಕೊಳ್ಳುತ್ತಿರುವುದನ್ನು ಕಾಣುತ್ತದೆ. ಆದರೆ ಇಂದಿನ ಆಧುನಿಕ ದಿನಮಾನಗಳಲ್ಲಿ ಉಪಕರಣಗಳನ್ನು ಕುರಿತಾದ ಪವಿತ್ರ ಭಾವನೆ ಮರೆಯಾಗಿರುವುದನ್ನು ಕಾಣಬಹುದು. ಇದು ಕೃಷಿ ಪ್ರದಾನ ದೇಶವಾದ ಭಾರತದ ಮಟ್ಟಿಗೆ ವಿಶಾದದ ಸಂಗತಿ.

೨. ಕಬ್ಬಿಣದ ಉಪಕರಣಗಳು

ಕಬ್ಬಿಣದ ಉಪಕರಣಗಳು ಕೃಷಿಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಶಿಲಾಯುಗ ಮತ್ತು ನವಶಿಲಾಯುಗದ ನಂತರ ಕಬ್ಬಿಣದ ಬಳಕೆ ಬಂದಾಗಿನಿಂದ ಪರಿಣಾಮಕಾರಿಯಾಗಿ ಕೃಷಿ ಉಪಕರಣಗಳನ್ನು ಕಬ್ಬಿಣದಿಂದ ತಯಾರಿಸಿ ಉಪಯೋಗಿಸಲಾಗುತ್ತದೆ. ಪ್ರಾಚೀನ ಕಾಲದಲ್ಲಿ ಕುಡುಗೋಲು ನಂತರ ಗುದ್ದಲಿ, ಕೊಡಲಿಗಳ ಬಳಕೆಯ ಹಂತವನ್ನು ಕಾಣುತ್ತೇವೆ. ಬೆಳೆಯ ಕೊಯ್ಯಲು ಮಾಡುವ ಉಪಕರಣ ಕುಡುಗೋಲನ್ನು ಕೈಯಲ್ಲಿ ತೆಗೆದುಕೊಂಡು ಪ್ರಾರ್ಥನೆ ಮಾಡುವ ಅಂಶ ಋಗ್ವೇದದಲ್ಲಿ ಕಂಡುಬರುತ್ತದೆ. "........... ಬೀಜಗಳನ್ನು ಬಿತ್ತಿ ಬೆಳೆಯುವ ತೆನೆಗಳು ವಿಪುಲವು ಕತ್ತರಿಸಿ ರಾಶಿ ಹಾಕಲು ಕುಡುಗೋಲುಗಳಿಗೆ ಭಾರವಾದವೂ ಆಗಿರಲಿ; ಈ ಪವಿತ್ರವಾದ ನೇಗಿಲುಗಳು ನಮಗೆ ಹಸುಗಳನ್ನು, ಕುರಿಗಳನ್ನು ಒಳ್ಳೆಯ ಆಹಾರದಿಂದ ದಷ್ಟಪುಷ್ಟರಾದ ಮಹಿಳೆಯರನ್ನು ಒದಗಿಸುವಂತಾಗಲಿ"[೧೬] ಈ ಮೂಲಕ ಕಬ್ಬಿಣದ ಉಪಕರಣಗಳ ಬಳಕೆಯ ಪ್ರಾಚೀನತೆಯನ್ನು ತಿಳಿಯಬಹುದಾಗಿದೆ.

ಕೃಷಿಕನಿಗೆ ಬಡಗಿಯಂತೆ ಕಮ್ಮಾರನೂ ಸಹ ಒಕ್ಕಲುತನದ ಆಯದ ಮೇಲೆ ಜೀವಿಸುವ ವ್ಯಕ್ತಿ. ಕುಳ, ಕುಡ, ಹಾಳು, ಕುಡುಗೋಲು, ಕುರುಪೆ, ಗುದ್ದಲಿ, ಹಾರಿ ಮುಂತಾದವುಗಳನ್ನು ತಯಾರಿಸಲು,

ಬಾಯಿ ತೋಳೆಯಲು(ಹದಗೊಳಿಸಲು), ಬೆಸೆಯಲು ಹಳ್ಳಿಯ ರೈತರು ಕಮ್ಮಾರನಿಗೆ ಆಯ ನೀಡುತ್ತಾರೆ. ಆದರೆ ಕೆಲವು ವಿಶಿಷ್ಟ ಉಪಕರಣಗಳ ತಯಾರಿಕೆ ಅಂದರೆ ಬಂಡಿಯ ಕೆಲಸ, ಮನೆ ನಿರ್ಮಾಣದ ಕೆಲಸಗಳಿಗೆ ಹಣದ ರೂಪದ ಆದಾಯ ಪಡೆಯುತ್ತಾನೆ. ದಸರೆಯ ಕಾಲದಲ್ಲಿ ತಮ್ಮ ಕುಲುಮೆ, ತನ್ನ ಕೈ ಉಪಕರಣಗಳನ್ನು 'ಖಂಡೆಯ ಪೂಜೆ'ಯ ವಿಧಾನದಲ್ಲಿ ಪೂಜಿಸುತ್ತಾರೆ. ಇವರು ವಿಶ್ವಕರ್ಮನ ವಂಶದವರಾಗಿದ್ದು, ಹಳ್ಳಿಗಳಲ್ಲಿ ಕಂಬಾರ ಸಾಲಿ ಅಥವಾ ಕುಲುಮೆ ಕಟ್ಟೆಗಳಲ್ಲಿ ರೈತರು ಬಂದು ತಮ್ಮ ಉಪಕರಣಗಳನ್ನು ಸಿದ್ದಪಡಿಸಿಕೊಳ್ಳುತ್ತಾರೆ. ಆಗ ಕುಲುಮೆಯ ಉರುವಲಿಗೆ ಇದ್ದಲಿ ತಂದು, ತಿದಿಯನ್ನು ತಾವೇ ಒತ್ತಬೇಕಾಗುವಂತಹ ಅಂಶಗಳು ಕೆಲವು ಹಳ್ಳಿಗಳಲ್ಲಿ ಕಂಡುಬಂದರೆ, ಕೆಲವು ಹಳ್ಳಿಗಳಲ್ಲಿ ಕಮ್ಮಾರರೇ ಸ್ವತಃ ಎಲ್ಲಾ ಬಗೆಯ ಕಬ್ಬಿಣದ ವಸ್ತುಗಳನ್ನು ತಯಾರು ಮಾಡುತ್ತಾರೆ. ಕಮ್ಮಾರರು ಕಬ್ಬಿಣ ಕಾಸಿ ಬಡಿದು ತಿದ್ದಿಕೊಡುವ ಚಿತ್ರಗಳು ಇತ್ತೀಚಿಗೆ ಕಣ್ಮರೆಯಾಗುತ್ತಿವೆ. ಬಡಿಗೇರರಷ್ಟು ಹಳ್ಳಿಗಳಲ್ಲಿ ನೆಲೆಯೂರಿ ವಾಸಿಸುವ ಜನಾಂಗ ಇವರಲ್ಲ, ಕೆಲಸ ಹೆಚ್ಚಾಗಿದ್ದಾಗ ಒಂದೆಡೆ ನಿಂತು ನಂತರ ಬೇರೆ ಕಡೆಗೆ ಹೋಗುತ್ತಾರೆ. ಲಿಂಗಾಯತ ಕಂಬಾರರ ಸಂಖ್ಯೆ ಕಡಿಮೆಯಾಗಿ, ಲೋಹಾರ, ಪವಾರ, ಸಾಳುಂಕೆ ಮುಂತಾದ ಮರಾಠಿ, ಗುಜರಾತಿ ಜನಾಂಗ ಹೆಚ್ಚು ಈ ವೃತ್ತಿಯಲ್ಲಿ ನಿರುತರಾಗಿದ್ದಾರೆ. ಇವರನ್ನು 'ಬಯಲು ಕಮ್ಮಾರ'ರೆಂದು ಕರೆಯುವುದು ವಾಡಿಕೆಯಾಗಿದೆ. ಆಧುನಿಕತೆಯ ಪ್ರಭಾವದಿಂದ ಒಕ್ಕಲಿಗರು ತಮ್ಮ ಉಪಕರಣಗಳಲ್ಲಿ ಹೊಸ ವಿನ್ಯಾಸ ಬಯಸಲು ಮುಂದಾಗಿರುವುದರಿಂದ ಹಳೆ ಕಾಲದ ಚರಕ ಕುಲುಮೆ, ಬಾತ ಕುಲುಮೆಗಳು ಅಪರೂಪದ ವಸ್ತುಗಳ ರೀತಿಯಲ್ಲಿ ಜನಪದ ಸಂಗ್ರಹಾಲಯ ಸೇರಿಕೊಂಡಿವೆ. ಇಂದು ಕಬ್ಬಿಣದ ಉಪಕರಣಗಳ ತಯಾರಿಕೆ, ಬಳಕೆಯ ವಿಧಾನ ವಿಸ್ತಾರವಾದ ಕ್ಷೇತ್ರ ವ್ಯಾಪ್ತಿಯನ್ನು ಹೊಂದಿದೆ.

ಕನ್ನಡ ಸಾಹಿತ್ಯದ ಪ್ರಾಚೀನ ಶಾಸ್ತ್ರಕೃತಿ, ಸಾಹಿತ್ಯಕೃತಿ ಹಾಗೂ ಶಾಸನ, ಕೈಫಿಯತ್ತುಗಳಲ್ಲಿ ಜನಜೀವನದ ವಿಧಾನದಲ್ಲಿ ಬಳಕೆಯಾಗಿರುವ ಅಂಶ ಕಂಡು ಬರುತ್ತದೆಯೇ ಹೊರತು; ಈ ಉಪಕರಣಗಳ ತಯಾರಿಕೆಯ ವಿಧಾನ ಎಲ್ಲಿಯೂ ಕಾಣಸಿಗುವುದಿಲ್ಲ. ಆದರೂ ಕಬ್ಬಿಣದ ನೇಗಿಲು ಮತ್ತು ಕೆಲವು ಪ್ರಮುಖ ಉಪಕರಣಗಳ ತಯಾರಿಕೆಯನ್ನು ಕುರಿತಾದ ಚರ್ಚೆಯನ್ನು ಇಲ್ಲಿ ಮಾಡಲಾಗಿದೆ.

ಕಬ್ಬಿಣದ ನೇಗಿಲು : ಕಬ್ಬಿಣದ ಉಪಕರಣದಲ್ಲಿ ತುಂಬಾ ಪ್ರಮುಖವಾದುದು. ಭೂಮಿಯ ಆಳವಾದ ಉಳುಮೆಗೆ, ಕರಿಕೆ, ಜೇಕು, ಕಂಟಿ–ಕಸವನ್ನು ಬುಡಸಮೇತ ಕೀಳಲು ಮತ್ತು ಕಳೆ, ಕಸ, ಬೆಳೆಗಳ ಕೊಳೆಗಳು ಭೂಮಿಯಲ್ಲಿ ಆಳವಾಗಿ ಸೇರಿ ಕೊಳೆತು ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವಂತೆ ಮಾಡಲು ಕಬ್ಬಿಣದ ನೇಗಿಲಿನ ಉಳುಮೆ ಮಾಡುತ್ತಾರೆ.

ಕಬ್ಬಿಣದ ನೇಗಿಲಿನ ಭಾಗಗಳು ೧.ದೇಹ ೨.ತವೆ, ೩.ಗುಳ, ೪.ನೇಗಿಲ ನಿಯಂತ್ರಕ ೫.ಈಸು, ೬.ಉಳುಮೆ ಅಗಲಳತೆ ನಿಯಂತ್ರಕ, ೭.ಉಳುಮೆಯ ಆಳದ ನಿಯಂತ್ರಕ ೮.ಹಿಡಿಕೆ ೯.ಸಾಗಿಸುವ ಚಕ್ರ ಮುಂತಾದ ಭಾಗಗಳನ್ನು ಹೊಂದಿದ್ದು, ಕೃಷಿ ಉಪಕರಣಗಳ ಕೃತಿಯಲ್ಲಿ ಇವುಗಳನ್ನು ಕುರಿತು ಈ ರೀತಿಯಾಗಿ ವಿವರಿಸಲಾಗಿದೆ. "ದೇಹ : ಬೊಲ್ಡ ತೆಗೆಯಬೇಕು. ಆಕಾರವಿಲ್ಲದ ಒಂದು ಕಬ್ಬಿಣದ ತುಂಡು. ಈ ಭಾಗಕ್ಕೆ ಈಸು, ತವೆ, ಕುಳ, ಹಿಡಿಕೆ ಜೋಡಿಸಲಾಗಿದೆ. ತವಿ : ಇದು ಉಬ್ಬಾದ ಅಥವಾ ತಗ್ಗಾದ ಕಬ್ಬಿಣದ ತಗಡು. ಇದು ಗುಳದಿಂದ ಕೊರೆದ ಭೂಮಿಯ ಪದರವನ್ನು ಮೇಲಕ್ಕೆ ಎತ್ತಿ ತಿರುವು ಮುರುವು ಮಾಡುವ ಕಾರ್ಯ ಮಾಡುವುದು. ಈ ತಗಡು ನುಣುಪಾಗಿರುವುದು ಅತ್ಯವಶ್ಯಕ.

ಗುಳ : ಇದು ಒಂದು ಕಡೆ ಹರಿತವಾಗಿರುವ ದಪ್ಪವಾದ ಕಬ್ಬಿಣದ ಪಟ್ಟಿ. ಉಳುಮೆಯಲ್ಲಿ ಭೂಮಿ ಕೊರೆಯುವ ಕಾರ್ಯ ಮಾಡುವುದುಂಟು. **ಈಸು** : ಇದು ಉದ್ದವಾದ ಕಬ್ಬಿಣ ಅಥವಾ ಕೆಲವೊಂದು ಸಲ ಮರದ ತುಂಡು. ನೊಗದಿಂದ ನೇಗಿಲನ್ನು ಎಳೆಯುವ ಸಾಧನ. **ನೇಗಿಲು ನಿಯಂತ್ರಕ** : ಇದು ಉದ್ದವಾದ ಕಬ್ಬಿಣದ ಪಟ್ಟಿ, ನೇಗಿಲು ನಿಯಂತ್ರಿಸುವಲ್ಲಿ ಸಹಾಯಕವಾಗುವುದು. ಉಳುಮೆಯ ಅಗಲಳತೆ ನಿಯಂತ್ರಕ, ಇದರಿಂದ ಉಳುಮೆಯ ಅಗಲಳತೆಯನ್ನು ನಿಯಂತ್ರಿಸುವ ಕಾರ್ಯವನ್ನು ಮಾಡಬಹುದು. **ಉಳುಮೆಯ ಆಳ ನಿಯಂತ್ರಕ** : ಉಳುಮೆಯ ಆಳವನ್ನು ಈ ಭಾಗದಿಂದ ನಿಯಂತ್ರಿಸಬಹುದು. **ಹಿಡಿಕೆ:** ಇದು ಉಳುಮೆಯ ಕಾರ್ಯದಲ್ಲಿ ನೇಗಿಲನ್ನು ನಿಯಂತ್ರಿಸಲು ಅನುಕೂಲವಾಗುವ ಸಾಧನವಾಗಿದೆ. ಚಕ್ರ; ನೇಗಿಲು ಚಲನೆಗೆ ಇದು ಅನುಕೂಲ ಮಾಡುವುದು..............."[೨೦] ಎನ್ನಲಾಗಿದೆ.

ಕಬ್ಬಿಣದ ತವೆ, ನೇಗಿಲು ಪ್ರಾದೇಶಿಕವಾಗಿ ಅನೇಕ ವಿಧವಿಧದ ಹೆಸರುಗಳಿಂದ ಮತ್ತು ವಿನ್ಯಾಸದಲ್ಲಿಯೂ ಭಿನ್ನಭಿನ್ನವಾಗಿ ಕಂಡುಬರುತ್ತವೆ. ಕೋಲಾರ ನೇಗಿಲು, ಸಾಲು ಬಿಡುವ ನೇಗಿಲು, ಮೈಸೂರು ಬಾರ ಪಾಂಟ ನೇಗಿಲು, ಯುರೇಕಾ ನೇಗಿಲು ಮುಂತಾದವುಗಳು ಬಳಕೆಯಲ್ಲಿವೆ. ಕೋಲಾರದ ಕಬ್ಬಿಣದ ನೇಗಿಲದಲ್ಲಿ ಈಸನ್ನು ಮರದಿಂದ ಮಾಡಲಾಗಿರುತ್ತದೆ. ಸುಮಾರು ೧೯೨೦ರಲ್ಲಿ ಈ ನೇಗಿಲು ಬಹಳ ಜನಪ್ರಿಯವಾಗಿತ್ತು. ಇಂದು ಕಬ್ಬಿಣದ ನೇಗಿಲು ಅಲ್ಪಸ್ವಲ್ಪ ಮಾರ್ಪಾಟಿನಿಂದ ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಉತ್ತರ ಕರ್ನಾಟಕದಲ್ಲಿ ನೆಲ ಹರಗಲು ಕಬ್ಬಿಣದ ಮಡಿಕೆ ಬಳಸುತ್ತಾರೆ. ಸುಮಾರು ಮೂರು ಅಡಿ ಆಳದವರೆಗೂ ಇಳಿದು ಉಳುಮೆ ಮಾಡುವ ಈ ಕಬ್ಬಿಣದ ಮಡಕೆ ಇತ್ತೀಚಿಗೆ ಟ್ರ್ಯಾಕ್ಟರ್ ಪ್ರಭಾವದಿಂದ ಮೂಲೆಗುಂಪಾಗಿದೆ. "ಸಂಪೂರ್ಣ ಕಬ್ಬಿಣದಿಂದ ರಚಿತವಾಗಿರುವ ಈ ಮಡಿಕೆಗೆ ಮಜಬೂತ(ಗಟ್ಟಿ) ಎನಿಸುವ ಎರಡು ಹಿಡಿಕೆ, ನೆಲಕ್ಕೆ ಊರುವ ಮಡಿಕೆ, ಎಡ ಬಲಕ್ಕೆ ಬದಲಾಯಿಸುವಂತೆ ಮಾಡಿರುವ ಕೊಂಡಿ ವ್ಯವಸ್ಥೆ, ಮಡಿಕೆಯ ಮುಂದೆ ಆರು ಅಡಿ ಉದ್ದನೆಯ ದಪ್ಪ ಸಲಾಕೆ, ಅದರ ತುದಿಯಲ್ಲಿ ಕುಂಟೆಯನ್ನು ಉರುಳಿಸುತ್ತಾ ಮುಂದೆ ಕರೆದೊಯ್ಯುವ ಒಂದು ಚಕ್ರ ಜೋಡಣೆಯಾಗಿರುತ್ತದೆ"[೨೧] ದೇಶೀ ಕೃಷಿಜ್ಞಾನ ಸಂಪುಟ ೯ರಲ್ಲಿ ಹೀಗೆ ಹೇಳಲಾಗಿದೆ. ಈ ಮಡಿಕೆಗೆ ಆರು ಎತ್ತುಗಳನ್ನು ಏಕಕಾಲಕ್ಕೆ ಹೂಡಿ ಉಳುಮೆಯ ಮಾಡಲಾಗುತ್ತದೆ. ಇದರ ವಿಶೇಷತೆಯೇನಂದರೆ ತಳದಲ್ಲಿರುವ ಕರಿಕೆ, ಜೇಕು, ಕಸ-ಕಡ್ಡಿ, ಬೇರು ಕಿತ್ತೆಸೆದು ಸಂಪೂರ್ಣ ಕಳೆ ನಿರ್ಮೂಲನೆ ಮಾಡುತ್ತದೆ. ಜೊತೆಗೆ ಹೆಂಟೆಯಾಗಿ ಮಣ್ಣನ್ನು ತಳಮೇಲು ಮಾಡುತ್ತದೆ. ಬಿರುಮಳೆ ಸುರಿದರೂ ಹನಿ ನೀರು ಹೊರಗೆ ಬಿಡದೆ ಇಂಗುತ್ತದೆ. ಭೂಮಿಯ ತೇವಾಂಶ ಹೆಚ್ಚಿಸುತ್ತದೆ. ಅಲ್ಲದೆ ರೈತರಲ್ಲಿ ಸಹಕಾರಿ ಹಾಗೂ ಸಾಮೂಹಿಕ ಶ್ರಮದ ಕಲ್ಪನೆ ಮೂಡಿಸಲು ಸಹಕಾರಿಯಾಗುತ್ತಿತ್ತು. ಆಧುನಿಕ ಬದುಕಿನಲ್ಲಿ ತೊಡಗಿಸಿಕೊಂಡಿರುವ ರೈತರು ಇಂತಹ ಮಡಿಕೆಯನ್ನು ಸ್ಥಗಿತ ಮಾಡಿದ್ದಾರೆ. ಶ್ರೀಮಂತರು, ತುಂಬಾ ಗಟ್ಟಿಗರು ಹಿಂದಿನ ಕಾಲದಲ್ಲಿ ತಿಂಗಳು ತನಕ ಇಂತಹ ಉಳುಮೆಯನ್ನು ಕೈಗೊಳ್ಳುತ್ತಿದ್ದರು.

ಕುಡುಗೋಲು : ಕುಡುಗೋಲಿಗೆ ಹಿಡಿಕೆ ತೊಡಿಸುವ, ಕೊಯ್ಲಿಗೆ ಸಿದ್ಧತೆ ಮಾಡಿಕೊಳ್ಳುವ ಬಗೆಯನ್ನು ಕುರಿತು ಒಕ್ಕಲಿಗ ಮುದ್ದಣ್ಣನ ವಚನವೊಂದರಲ್ಲಿ ಹೀಗೆ ಹೇಳಲಾಗಿದೆ.

"...............ಕೊಯ್ದುಂಬ ಪರಿಇನ್ನಾವುದಯ್ಯಾ ಎಂದಡೆ
ಇಷ್ಟವೆಂಬ ಕುಡುಗೋಲಿಗೆ ಪ್ರಣವವೆಂಬ ಹಿಡಿಯಂ ತೊಡಿಸಿ
ಭಾವವೆಂಬ ಹಸ್ತದಿಂ ಹಿಡಿದು ಜನನದ ನಿಲವಂ ಕೊಯ್ದು"[೨೨]

ರೈತರಿಗೆ ಕೃಷಿ ಕೆಲಸದಲ್ಲಿ ಹೆಚ್ಚು ಉಪಕಾರಿಯಾದುದು ಕುಡುಗೋಲು. ಈ ವಚನದಲ್ಲಿ ಕುಡುಗೋಲಿಗೆ ಹಿಡಿಯ ತೊಡಿಸಿ ನಿಲುವನ್ನು ಕಟಾಯಿಸಲು ಸಮತೂಕದ ಕುಡುಗೋಲ ತಯಾರಿಕೆಯ ಅಂಶ ತಿಳಿಯಬಹುದು. ಈ ಉಪಕರಣಕ್ಕೆ ಸುಮಾರು ಎರಡು ಗೇಣು ಅಂದರೆ ೨೦ಇಂಚು ಅಥವಾ ಒಂದು ಅಡಿ ಎಂಟು ಇಂಚು ಕಬ್ಬಿಣದ ಪಟ್ಟಿಯನ್ನು ತೆಗೆದುಕೊಂಡು ಕಮ್ಮಾರನ ಕುಲುಮೆಯಲ್ಲಿ ಕಾಸಿ, ಹದವಾಗಿ ಬಗ್ಗಿಸಿ, ಹರಿತವಾದ ಬಾಯಿ ಬರುವಂತೆ ತಳಿಸುತ್ತಾರೆ. ನಂತರ ಕುಡುಗೋಲಿಗೆ ಹೊಂದಿಕೆಯಾಗುವಂತಹ ಬಿದರಿನ ಇಲ್ಲವೇ ಉತ್ತಮ ಮರದ ಹಿಡಿಕೆಯನ್ನು ತೊಡಸಿ, ಕೈಯಲ್ಲಿ ಸರಾಗವಾಗಿ ಕೊಯ್ಲು ಮಾಡಲು ಸಿದ್ದಮಾಡಲಾಗುತ್ತದೆ.

ಕಮ್ಮಾರನ ಕುಲುಮೆಯಲ್ಲಿ ಕುಡ, ತಾಳು, ಮೂದಾಳು, ಕೊಡಲಿ, ಗಾಡಿಯ ಕಬ್ಬಿಣದ ಸಾಮಾನು, ಗುದ್ದಲಿ, ಪಿಕಾಸಿ, ಕುರ್ಚಿಗಿ ಮುಂತಾದ ಸಲಕರಣೆಗಳಿಗೆ ಅಗತ್ಯ ಪ್ರಮಾಣಕ್ಕೆ ಅನುಗುಣವಾಗಿ ಕಬ್ಬಿಣ ತೆಗೆದುಕೊಂಡು, ತಮಗೆ ಬೇಕಾಗುವ ಅಳತೆ, ಪ್ರಮಾಣ ಮತ್ತು ವಿನ್ಯಾಸದಲ್ಲಿ ತಯಾರ ಮಾಡಿಸಿಕೊಳ್ಳುತ್ತಾರೆ. ಪ್ರಾದೇಶಿಕವಾಗಿ ವಿನ್ಯಾಸದಲ್ಲಿ ಹಲವು ಬದಲಾವಣೆಗಳನ್ನು ಗ್ರಹಿಸಬಹುದು. ಇಂದಿನ ಆಧುನಿಕ ಯುಗದಲ್ಲಿ ಕಬ್ಬಿಣದ ಉಪಕರಣಗಳೇ ಕೃಷಿಯಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿವೆ. ಕಾಡು ಕಡಿದು, ನಾಡು ಮಾಡಿ ಕಾಡುಗಳ ಅಭಾವದಿಂದ ಮುಟ್ಟುಗಳನ್ನು ತಯಾರಿಸುವ ನಿರ್ದಿಷ್ಟ ಮರಗಳ ಕೊರತೆ ಉಂಟಾಗಿದ್ದು; ರೈತರು ಅನಿವಾರ್ಯವಾಗಿ ಕಬ್ಬಿಣದ ನೇಗಿಲು ಇತರ ಉಪಕರಣಗಳ ಮೇಲೆ ಅವಲಂಬಿತರಾಗಿದ್ದಾರೆ. ಅಲ್ಲದೇ ಕೃಷಿಯಲ್ಲಿ ಆಧುನಿಕತೆಯ ಹೆಸರಿನಲ್ಲಿ ಉಳುಮೆಗೆ, ಬಿತ್ತಲು, ಒಕ್ಕಲು ಮಾಡಲು ಕಬ್ಬಿಣದ ಉಪಕರಣಗಳ ಬಳಕೆ ಹೇರಳವಾಗಿವೆ. ಕೃಷಿಯಲ್ಲಿ ಮರದ ಉಪಕರಣಗಳಿಂದಲೇ ಹೆಚ್ಚು ಉಪಯೋಗವಾಗುತ್ತದೆ ಎಂಬುದು ಅನುಭವಿಕ ರೈತರ ಅಭಿಪ್ರಾಯವಾಗಿದೆ. ರೈತರು ಮನಸ್ಸು ಮಾಡಿ ಶ್ರದ್ಧೆಯಿಂದ ತಮ್ಮ ಜಮೀನಿನ ಬದುಗಳಲ್ಲಿ ತಮಗೆ ಬೇಕಾಗುವ ಮರಮುಟ್ಟುಗಳನ್ನು ಬೆಳಸಿಕೊಳ್ಳಬಹುದು. ಈ ಮೂಲಕ ಪರಿಸರ ಪ್ರಜ್ಞೆ ಮತ್ತು ಮಳೆ ತರಿಸಲು ಅಗತ್ಯವಾದ ಮರಗಳನ್ನು ಬೆಳೆಸಿದಂತಾಗುತ್ತದೆ.

ಕನ್ನಡ ಕಾವ್ಯಗಳಲ್ಲಿ ಕುಡ, ಕೊಡಲಿ, ಗುದ್ದಲಿ ಮುಂತಾದ ಕಬ್ಬಿಣದ ಉಪಕರಣಗಳ ಉಲ್ಲೇಖ ಹಲವು ಕಡೆ ಕಂಡುಬರುವುದನ್ನು ಈಗಾಗಲೇ ಮಾರ್ಗ ಮತ್ತು ದೇಶೀಸಾಹಿತ್ಯದ ಕೃಷಿಸಂಬಂಧಿ ಉಲ್ಲೇಖದ ಸಂದರ್ಭದಲ್ಲಿ ವಿವರಿಸಲಾಗಿದೆ. ಆದರೂ ಕೆಲವೊಂದನ್ನು ಇಲ್ಲಿ ಗುರುತಿಸಲಾಗಿದೆ.

ಕುಡ : ಕುಂಟೆಗೆ ಜೋಡಿಸುವ ಕಬ್ಬಿಣದ ಪಟ್ಟಿ, ನೇಗಿಲ ತುದಿಯಲ್ಲಿ ಜೋಡಿಸುವ ಕಬ್ಬಿಣದ ಪಟ್ಟಿ. ಕೃಷಿ ಪದಕೋಶದಲ್ಲಿ ಪಲಗು, ಕುಡ್ಡಾ, ಕುಡ, ಕುಡಾ, ಕುಣ, ಕುಳ, ಗುಳ ಮತ್ತು ಕುಳು ಎಂದು ಅನೇಕ ಬಗೆಯಲ್ಲಿ ಕರೆಯುವ ಹೆಸರುಗಳು ಇದ್ದರೂ, ಅರ್ಥಗಳು ಮಾತ್ರ ಒಂದೇ ಆಗಿವೆ. ಪಂಪರಾಮಾಯಣದಲ್ಲಿ ಕುಡುದ ಬಳಕೆಯನ್ನು ಕುರಿತು ಈ ರೀತಿ ಹೇಳಲಾಗಿದೆ.

"ದೋಷಿ ಪಿಡಿವಂತೆ ದಿವ್ಯದ
ಕಾಸಿದ ಕುಬುವಂ ಕಡಂಗಿ ಕಾಳೋರಗನಂ........."[೨೩]

ಪ್ರಾಚೀನ ಕಾಲದಲ್ಲಿ ಅಪರಾಧಿಗಳಿಗೆ ಶಿಕ್ಷೆ ಕೊಡುವ ಪದ್ಧತಿಗಳಲ್ಲೊಂದಾಗಿದ್ದು ಇಲ್ಲಿ ಕುಳದ ಉಲ್ಲೇಖವನ್ನು ಕಾಣುತ್ತೇವೆ.

ಕೊಡಲಿ :- ಸೌದೆ ಒಡೆಯಲು ಹಾಗೂ ಕೃಷಿಗೆ ಬೇಕಾದ ವಸ್ತುಗಳನ್ನು ಕಡಿಯಲು ಬಳಸುವ ಸಲಕರಣೆ. ಕೃಷಿ ಪದಕೋಶದಲ್ಲಿ "ಕೊಡ್ಲಿ, ಗೊಡ್ಲಿ, ಕೊಳ್ಳಿ, ಕೊಡ್ಲಿ, ಕ್ವಡಿ, ಕೊಡ್ಲಾ, ಬಾಯಿಕೊಡ್ಲಿ,

ಬಾಯಿಗೊಡ್ಲಿ, ಕೊಡಲಿ, ಕೈಗೊಡಲಿ ಎಂದು ಪ್ರಾದೇಶಿಕ ಹಿನ್ನಲೆಯ ರೀತಿಯಲ್ಲಿ ಕರೆಯುವುದನ್ನು ಗುರುತಿಸಲಾಗಿದೆ. ಆದಿಪುರಾಣದಲ್ಲಿ 'ಪರಶು ಪಳಾಕ್ಷ ಸೂತ್ರವರದೋಚಿತ ಚಿಹ್ನೆ..........' ಪರಶು ಎಂದರೆ ಕೊಡಲಿಯೆಂದೇ ಅರ್ಥ. ಒಕ್ಕಲುಮುದ್ದಣ್ಣನ ವಚನದಲ್ಲಿ '.......... ಹಿಂದು ಮುಂದಣ ಕೊಂಬೆಕ ಕೊಡಲಿಯಾಡೋದಕ್ಕೆ ತೆರಪ ಮಾಡಿ, ನಡುವಣ ಕೊಂಬೆ ಕೆಡುವುತ್ತಿರಲಾಗಿ ...."[೨೪] ನೇಗಿಲು ತಯಾರಿಸಲು ಅಗತ್ಯ ಮರ ಹುಡುಕಿ, ರೆಂಬಕೊಂಬೆಯನ್ನು ಕೊಡಲಿಯಿಂದ ತರಿದು, ಬೇಕಾಗುವ ದಿಂಡು ಕಡಿಯಲು ಕೊಡಲಿಯ ಬಳಕೆ ಮಾಡುವುದರ ಅಂಶವನ್ನು ಇಲ್ಲಿ ಹೇಳಲಾಗಿದೆ.

ಗುದ್ದಲಿ : ನೆಲ ಅಗೆಯಲು ಬಳಸುವ ಉಪಕರಣ. ಗುದ್ದಲಿ, ಗುದ್ಲಿ, ಗುದ್ದಿಲ, ಗುದಳಿ, ಗುದ್ದೂಳಿ, ಗುದ್ದೋಳಿ, ಕೈಗುದ್ದಲಿ, ಮಣ್ಣುಗುದ್ದಲಿ, ಕೋಲ್ಗುದ್ಲಿ, ಗಿಡ್ಡಗುದ್ಲಿ ಅನೇಕ ಹೆಸರುಗಳನ್ನು ಕೃಷಿ ಪದಕೋಶದಲ್ಲಿ ಹೇಳಲಾಗಿದೆ. ಹಾಗೆಯೇ ಅಲ್ಲಮಪ್ರಭುವಿನ ವಚನವೊಂದರಲ್ಲಿ ಗುದ್ದಲಿಯ ಉಲ್ಲೇಖ ಹೀಗೆ ಕಂಡುಬರುತ್ತದೆ.

"ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ
ಅಗಿದು ಕಳೆದೆನಯ್ಯಾ ಬ್ರಾಂತಿಯ ಬೇರ ...."[೨೫]

ಅಧ್ಯಾತ್ಮಿಕ ಕೃಷಿಯಲ್ಲಿ ದೇಹವೆಂಬ ಹೊಲವನ್ನು ಹಸನಮಾಡಲು ಅದರಲ್ಲಿರುವ ಕಳೆ-ಕಸ ತೆಗೆಯಲು ಗುದ್ದಲಿಯ ಬಳಕೆಯನ್ನು ಹೇಳಿದರೂ ಲೌಕಿಕದಲ್ಲಿ ಬಳಸುವ ಈ ಸಾಧನವೇ ಪ್ರೇರಣೆಯಾಗಿದೆ. ಸಿದ್ದರಾಮ ಚರಿತ್ರೆಯಲ್ಲಿ "..........ಗುದ್ದಲಿಗೊಂಡನೊಡನೆ ನಾಲ್ ಸಾವಿರ ಸಮರ್ಥ ಗುಡ್ಡರು ಗುದ್ದಲಿಯ........ ಬೇರಣೆವಂತೆ ತೀವಿ ....'[೨೬] ನಾಲ್ಕು ಸಾವಿರ ಗುಡ್ಡರು ಬೇರು ಅಗೆಯಲು ಗುದ್ದಲಿ ಬಳಸುತ್ತಿದ್ದರು ಎಂಬ ಅಂಶ ತಿಳಿಯುತ್ತದೆ. ಇನ್ನೂ ಅನೇಕ ಕಡೆಗಳಲ್ಲಿ ಗುದ್ದಲಿಯ ಬಳಕೆ ಕಾಣಸಿಗುತ್ತವೆ.

ಕಬ್ಬಿಣದ ಕೃಷಿ ಉಪಕರಣಗಳಲ್ಲಿ ಅನೇಕ ರೀತಿಯ ಬದಲಾವಣೆಯನ್ನು ಇಂದು ಕಾಣಬಹುದಾಗಿದೆ. ದೇಶಿಯ ಉಪಕರಣಗಳಲ್ಲಿ ಹಲವು ಅಲ್ಪಸ್ವಲ್ಪ ವ್ಯತ್ಯಾಸ ಹೊಂದಿ ಸುಧಾರಣೆಯಾಗಿವೆ. ಹೊಸದಾಗಿ ಬಳಕೆಗೆ ಬಂದಿರುವ ಉಪಕರಣಗಳು ಹಳ್ಳಿಯ ಬಡಗಿ ಕಮ್ಮಾರರು ಸಿದ್ದಪಡಿಸಲು ಸಾಧ್ಯವಿದ್ದು; ಮಿತವ್ಯಯದಿಂದ ಕೂಡಿವೆ. ಅಲ್ಲದೇ ಅನೇಕ ಆಧುನಿಕ ಉಪಕರಣಗಳು ಹಳ್ಳಿಯಲ್ಲಿಯೇ ದುರಸ್ಥಿ ಮಾಡಲು ಬರುವಂತವುಗಳಾಗಿವೆ. ಕೆಲವು ಸುಧಾರಿತ ಉಪಕರಣಗಳ ಪಟ್ಟಿಯನ್ನು ಕನ್ನಡ ವಿಶ್ವಕೋಶ ಸಂಪುಟ ೫ರಲ್ಲಿ ಹೇಳಿರುವುದನ್ನು ಇಲ್ಲಿ ಸಂಗ್ರಹಿಸಲಾಗಿದೆ. "ಉಳಲು ಕಬ್ಬಿಣದ ನೇಗಿಲು, ಹೆಂಟೆ ಹೊಡೆಯಲು ನಾರ್ವೇಜಿಯನ್ ಹ್ಯಾರೋ, ಸಾಲು ಬಿಡಲು, ಮಣ್ಣೇರಿಸಲು ಎರಡು ರೆಕ್ಕೆಗಳ ರೆಂಟೆ(ರಿಡ್ಜರ್), ಮಣ್ಣು ಏರಿಸಲು ಕೊಪ್ಪರಿಗೆ(ಅಮೇರಿಕನ್ ಲೆವೆಲರ್), ನೆಲ ಪೊಳ್ಳುಮಾಡಲು ಕಬ್ಬಿಣ ತಾಳಿನ ಗುರ್ರಾ, ನೆಲಕೊಚ್ಚಲು ತವೆಗುಂಟೆ(ಡಿಸ್ಕ್ ಹ್ಯಾರೋ), ಬೀಜ ಹಾಗೂ ಗೊಬ್ಬರ ಏಕಕಾಲದಲ್ಲಿ ಬಿತ್ತಲು ಬೀಜ ಗೊಬ್ಬರ ಕೂರಿಗೆ(ಸೀಡ್ ಕಮ್ ಫರ್ಟಿಲೈಜರ್ ಡ್ರಿಲ್) ಕೈಯಿಂದ ಉಳುವಲು ವ್ಯವಸ್ಥೆಯಿರುವ ಯಾಂತ್ರಿಕ ಕೂರಿಗೆ(ಹ್ಯಾಂಡ್ ಆಪರೇಟೆಡ್ ಸೀಡ್ ಡ್ರಿಲ್), ಮೇಲು ಗೊಬ್ಬರ ಕೊಡಲು ಯೋಗ್ಯವಾಗಿರುವ ಗೊಬ್ಬರ ಕೂರಿಗೆ, ವಿವಿಧ ಆಕಾರದ ತಾಳುಗಳುಳ್ಳ ಕಲ್ಟಿವೇಟರ್‌ಗಳು, ಭತ್ತದ ಬೆಳೆಯಲ್ಲಿ ಕಳೆ-ಕಸ ಕಿತ್ತುವ ವೀಡರ್‌ಗಳು, ಒಕ್ಕಣೆ ಉಪಕರಣಗಳು(ರೋಣಗಲ್ಲು, ಗೋಧಿ ತುಳಿಸುವ ಉಪಕರಣ, ಧಾನ್ಯ ಒಕ್ಕಣೆ ಯಂತ್ರಗಳು, ಅವಿಲ ಚಕ್ರ), ಆಲೂಗಡ್ಡೆ ಅಗಿಯಲು, ಮೇವು ಕತ್ತರಿಸಲು

[illegible]

[illegible]

[illegible]

ಚಕ್ರಗತ್ತರಿ , ನೀರಾವರಿ ಭೂಮಿ ಸಿದ್ಧಪಡಿಸುವ ಉಪಕರಣಗಳು[ಭೂಮಿ ಸಮಗೊಳಿಸುವ ತೇಲ್ಗುಂಟೆ, ಸಾಲು ಬಿಡುವ ಡಿಚ್ಚರ್, ದಿನ್ನೆ ನಿರ್ಮಿಸುವ ಚಟ್ಟು(ಬಂಡ್ ಫಾರ್ಮರ್) ಮಣ್ಣೆಳೆಸುವ–(ಲೆವೆಲರ್‌ಗಳು)] ಹುಡಿ ಎರಚಲು ಧೂಳು ಕೋವಿ(ಡಸ್ಟ್‌ಗನ್ನುಗಳ) ಹರಡಿಕೆಗಾಗಿ ಸಿಂಚಕಗಳು(ಸ್ಪ್ರೇಯರುಗಳು) ತೋಟಗಾರಿಕೆಯ ಸುಧಾರಿತ ಉಪಕರಣಗಳು(ಪಿಕಾಸಿ, ಕ್ರೋಬರ್, ಮಮಟಿ, ಶಾವೆಲ್, ಡಿಗ್ಗಿಂಗ್‌ಫೋರ್ಕ್,ಟ್ರೋವೆಲ್, ಸ್ವಿಲ್ ಹ್ಯಾಂಡ್ ಬ್ರೂಮ್, ಡಬಲ್‌ಹೋ, ಎರವರಿ ಕಲ್ಟಿವೇಟರ್, ಗಾರ್ಡನ್‌ಫೋರ್ಕ್, ಪಲ್ವರೈಸಲ್, ಗಾರ್ಡನ್‌ರೇಕ್, ಬಿಲ್‌ರಾಕ್(ಕಂದಲಿ,ಮಚ್ಚು), ಕೊಡಲಿ, ಸಿಕೇಟ್ಚೆಯರ್, ನೈಫ್, ಬಡಿಂಗ್‌ನೈಫ್, ಟ್ರೋನಿಂಗ್(ಗರಗಸ), ವಾಟರ್‌ಕ್ಯಾನ್, ಹಾರೋ, ಹ್ಯಾಂಡ್ ಸ್ಪೇಡ್(ಕೈಗುದ್ದಲಿ) ....”[೨೭] ಎನ್ನಲಾಗಿದೆ.

ಸಂರಕ್ಷಣೆ ವಿಧಾನ : ಕಬ್ಬಿಣದ ಉಪಕರಣಗಳಿಗೆ ತುಕ್ಕು ಹಿಡಿಯುವುದು, ಸವೆತ ಕಂಡುಬರುವುದು, ಮುರಿದು ಹೋಗುವುದನ್ನು ತಡೆಯಲು ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದೇ ಸಂರಕ್ಷಣೆಯಾಗಿದೆ. ಜಾಣತನದಿಂದ ರೈತರು ಈ ಉಪಕರಣಗಳನ್ನು ಬಳಸಿದರೆ ದೀರ್ಘಕಾಲ ಬಾಳಕೆ ಬರುತ್ತವೆ. ನೀರಿನಲ್ಲಿ ತುಂಬಾ ದಿನ ಇದ್ದರೆ ಕಬ್ಬಿಣದ ಉಪಕರಣಗಳು ತುಕ್ಕು ಹಿಡಿದು ಹಾಳಾಗುತ್ತವೆ. ಇದನ್ನು ತಡೆಯಲು ನೀರಿನಲ್ಲಿ ಬಳಸಿದ ನಂತರ ಒಣಗಿಸಿ ಒರಸಿ ಇಡಬೇಕು. ದೊಡ್ಡ ಉಪಕರಣಗಳಾದರೆ ಬಿಸಿಲಲ್ಲಿಯೇ ಒಣಗಿಸಬೇಕು. ಅಲ್ಲದೆ ಕೆಸರು ಗದ್ದೆ, ಕೊಳೆ ಕಸಗಳು ಹತ್ತಿದಾಗ ಕೃಷಿಕಾರ್ಯ ಮುಗಿದ ನಂತರ ಸ್ವಚ್ಚಗೊಳಿಸಬೇಕು. ಅಲ್ಲದೇ ಭೂಮಿಯ ಹದಬೆದೆ ನೋಡಿ ಉಳುಮೆ ಮಾಡುವುದರಿಂದ ಅನಗತ್ಯ ಸವೆತ ತಡೆಯಬಹುದು. ಹದಮೀರಿ ಕುಲುಮೆಯಲ್ಲಿ ಕಾಯಿಸುವುದರಿಂದ ಕಬ್ಬಿಣ ಶಕ್ತಿ ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕು. ಮುರಿದ ಉಪಕರಣಗಳನ್ನು ಕಮ್ಮಾರನ ಕುಲುಮೆಯಲ್ಲಿ ಬೆಸೆಯುವುದರಿಂದ(ಬೆಳ್ಳಗಾರ, ಬಿಳಿಯ ಲೋಹ) ಹೆಚ್ಚು ಕಾಲ ಮತ್ತೆ ಬಳಸಬಹುದು. ಇಂದು ಬೆಸೆಯಲು ಆಧುನಿಕ ರೀತಿಯ ವಿಧಾನವನ್ನೇ ಹೆಚ್ಚಾಗಿ ಅವಲಂಬಿಸಲಾಗಿದೆ. ಒಟ್ಟಾರೆಯಾಗಿ ಕಬ್ಬಿಣದ ಉಪಕರಣಗಳನ್ನು ತುಂಬಾ ಜಾಗ್ರತೆಯಿಂದ ಸಂರಕ್ಷಣೆ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ.

೩. ಚರ್ಮದ ಉಪಕರಣಗಳು

ಕೃಷಿ ಉಪಕರಣಗಳಲ್ಲಿ ಚರ್ಮದ ಉಪಕರಣಗಳು ಉಳುಮೆ, ಹೇರುಗಳನ್ನು ಕಟ್ಟಲು ಇನ್ನೂ ಅನೇಕ ಕೆಲಸಗಳಲ್ಲಿ ಬಳಕೆಯಾಗುತ್ತವೆ. ಬಹಳ ಮುಖ್ಯವಾಗಿ ಬಾರಕೋಲು, ಪಟಗಣ್ಣಿ, ನೊಗಸುತ್ತು ಮತ್ತು ಮಿಣಿಯಂತಹ ಚರ್ಮದ ಉಪಕರಣಗಳನ್ನು ಹೆಚ್ಚು ಬಳಸಲಾಗುತ್ತದೆ. ಆದರೆ ಇಂದು ಚರ್ಮದಿಂದ ತಯಾರಿಸುವ ಸಲಕರಣೆಗಳ ಬಳಕೆ ಕಡಿಮೆಯಾಗಿದೆ. ಕಾರಣ ಪ್ಲಾಸ್ಟಿಕ್ ಬಳಕೆ ಹೇರಳವಾಗಿದ್ದು; ಎಲ್ಲಾ ಕ್ಷೇತ್ರಗಳಲ್ಲಿ ಅಗತ್ಯತೆ ಪೂರೈಸುತ್ತಿರುವುದರಿಂದ ಆ ವಸ್ತುವನ್ನು ಬಳಸಿ ಕೃಷಿಯ ಸಲಕರಣೆಗಳನ್ನು ತಯಾರಿಸಿಕೊಳ್ಳಲಾಗುತ್ತದೆ. ಹಿಂದಿನ ಕಾಲದಲ್ಲಿ ಚರ್ಮದಿಂದ ಮಾಡಿದ ಇಂತಹ ಸಲಕರಣೆಗಳನ್ನು ತುಂಬಾ ದಿನಗಳವರೆಗೆ ಬಾಳಿಕೆ ಬರುತ್ತಿದ್ದು ಅಂತವುಗಳ ತಯಾರಿಕೆಯು ವ್ಯವಸ್ಥಿತ ಪದ್ಧತಿಯಂತೆ ನಡೆಯುತ್ತಿತ್ತು. ಆದರೆ ಇಂದು ಕಾಲ ಬದಲಾದಂತೆ ಇವುಗಳು ಕಣ್ಮರೆಯಾಗುತ್ತಿವೆ.

ಕನ್ನಡ ಕಾವ್ಯ, ಶಾಸ್ತ್ರ ಮತ್ತು ದಾಖಲುಸಾಹಿತ್ಯದಲ್ಲಿ ಇವುಗಳ ಉಲ್ಲೇಖಗಳು ಕಂಡುಬರುತ್ತವೆ. ಆದರೆ ತಯಾರಿಕೆಯ ವಿಧಾನ ತಿಳಿದುಬರುವುದಿಲ್ಲ. ಕಾಯಕ ಮಾಡುವ ವಚನಕಾರರಲ್ಲಿ ಮಾತ್ರ ಚರ್ಮ ಹದಮಾಡುವ ಅಂಶ ಕಾಣಸಿಗುತ್ತದೆ.

ಎತ್ತುಗಳಿಗೆ ಹೊಡೆಯಲು ಬಳಸುವ ಬಾರಿಕೋಲಿನ ಕಟ್ಟಿಗೆಗೆ ಚರ್ಮದಿಂದ ಕುಣಿಕೆ ಮಾಡಿ, ಮುಂದಕ್ಕೆ ಸೆಳೆಯನ್ನು ಮಾಡುತ್ತಿದ್ದರು. ಹಸು, ಎಮ್ಮೆ, ಎತ್ತುಗಳು ಸತ್ತ ನಂತರ ಚರ್ಮ ಸುಲಿದು, ಅದನ್ನು ಒಣಗಿಸಿ ಚರ್ಮಗಾರನು ಹದಮಾಡಿ ತನ್ನ ಆಯುಧಗಳನ್ನು ಉಪಯೋಗಿಸಿ ಅನೇಕ ವಿನ್ಯಾಸದಲ್ಲಿ ಸೆಳೆಯನ್ನು ತಯಾರಿಸುತ್ತಿದ್ದನು. ಎರಡು, ನಾಲ್ಕು ಮತ್ತು ಎಂಟು ಎತ್ತುಗಳನ್ನ ಬೇಸಾಯಕ್ಕೆ ತಕ್ಕಂತೆ ಸೆಳೆಗೋಲಿನ ಉದ್ದ ಇರುತ್ತದೆ. ಹಿಂದೆ ಜೀತದಾಳುಗಳನ್ನು ಬೆದರಿಸಲು, ಹೊಡೆಯಲೂ ಬಳಸುತ್ತಿದ್ದರು. ಇಂದು ಪ್ಲಾಸ್ಟಿಕ್, ನಾರುಗಳಿಂದ ತಯಾರಿಸಲಾಗುತ್ತಿದೆ. ಪಟಗಣ್ಣಿ ಕೃಷಿಯ ಉಳುಮೆ ಕೆಲಸದಲ್ಲಿ ಮುಖ್ಯವಾದುದು. ನೊಗ ಹಾಗೂ ಎತ್ತಿನ ಕೊರಳಿಗೆ ಕಟ್ಟುವ ಪಟ್ಟಿಯಾಗಿದೆ. ಇದನ್ನೂ ಕೂಡ ಚಮ್ಮಾರರು ತಯಾರಿಸುತ್ತಾರೆ. ಸುಮಾರು ಎರಡು ಗೇಣು ಪಟ್ಟಿ ಮಾಡಿ ಪಟ್ಟಿಯ ಎರಡು ಕಡೆಗೆ ಕುಣಿಕೆ ಮಾಡಿ ಆ ಕುಣಿಕೆಗೆ ಸುಮಾರು ಮೂರು ಗೇಣು ಉದ್ದದ ಸೆಳೆಯನ್ನು ಹಚ್ಚುತ್ತಾರೆ. ಚರ್ಮದ ಪಟಗಣ್ಣಿ ಎತ್ತಿನ ಹೆಗಲಿಗೆ ತಂಪು ನೀಡಿ, ಯಾವುದೇ ತರಹದ ಗಾಯಗಳಾಗದಂತೆ ರಕ್ಷಿಸುತ್ತದೆ. ಆದರೆ ಇಂದು ಪ್ಲಾಸ್ಟಿಕ್, ನಾರುಗಳಿಂದ ತಯಾರಿಸಿದ ಪಟಗಣ್ಣಿಯ ಬಳಕೆ ಹೆಚ್ಚು ಕಂಡುಬರುತ್ತದೆ.

ತಯಾರಿಸುವ ವಿಧಾನ ಹೇಗೆಂದರೆ ಸಾಕು ಪ್ರಾಣಿಗಳು ಸತ್ತ ನಂತರ ಅವುಗಳ ಚರ್ಮತೆಗೆದು, ಒಣಗಿಸಿ ಬೇಕಾದ ವಿನ್ಯಾಸದಲ್ಲಿ ತೀಡಿ ತಿದ್ದಿ ಸಿದ್ದಮಾಡಿಕೊಂಡು ತಯಾರಿಸಲಾಗುತ್ತದೆ. ಚರ್ಮದ ಪಟ್ಟಿ ಎರಡು ಗೇಣು ಅಥವಾ ಒಂದು ಅಡಿ ಎಂಟು ಇಂಚು ಉದ್ದವಿರಬೇಕು. ಕುಣಿಕೆ ಪಟ್ಟಿಯನ್ನು ರಂಧ್ರ ಮಾಡಿಕೊಂಡು ಒಂದೊಂದು ಕಡೆಗೆ ಮೂರು ಗೇಣು ಅಂದರೆ ಎರಡೂವರೆ ಅಡಿ ಸೆಳೆ ಹಚ್ಚಲಾಗುತ್ತದೆ.

ಮಿಣಿಯನ್ನು ನೊಗ ಮತ್ತು ನೇಗಿಲಿಗೆ ಕಟ್ಟಲು ಉಪಯೋಗಿಸುತ್ತಾರೆ. ಒಂದು ನಿರ್ದಿಷ್ಟವಾದ ಅಳತೆಯಿರುವುದಿಲ್ಲ. ಅನುಕೂಲಕ್ಕೆ ತಕ್ಕಂತೆ ತಯಾರಿಸಿಕೊಳ್ಳಲಾಗುತ್ತದೆ. ನಾಲ್ಕು ಗೇಣಿನಿಂದ ಆರು ಗೇಣು ಉದ್ದವಿದ್ದು ವೃತ್ತಾಕಾರ ಇರುತ್ತದೆ. ಬಲತ್ಕಾರವಾಗಿಯೂ, ದೀರ್ಘಕಾಲ ಬಾಳಿಕೆ ಬರುತ್ತದೆ. ಅಲ್ಲದೇ ಉಳುಮೆಯ ವೇಳೆ ಎಷ್ಟೇ ಗಟ್ಟಿ, ಭಾರವಾದರೂ ತುಂಡಾಗುವುದಿಲ್ಲ. ಒಳ್ಳೆಯ ಕಸುಬುದಾರನಿಂದ ತಯಾರಿಸಿದರೆ ತುಂಬಾ ವರ್ಷಗಳ ಕಾಲ ಬರುತ್ತದೆ.

ಕನ್ನಡ ಕಾವ್ಯಗಳಲ್ಲಿ ಚರ್ಮದ ಉಪಕರಣಗಳ ಉಲ್ಲೇಖಗಳನ್ನು ಕಾಣಬಹುದು. ಒಕ್ಕಲಿಗ ಮುದ್ದಣ್ಣನವರ ವಚನದಲ್ಲಿ "..........ಚತುಷ್ಟಯವೆಂಬ ಪಶುವಂ ಕಟ್ಟಿ ಓಂಕಾರ ನಾದವೆಂಬ ಸೆಳೆಗೋಲಂ ಪಿಡಿದು ಉತ್ತರ ಕ್ರೀಯೆಂಬ ಸಾಲನೆತ್ತಿ ...."[೨೮] ನೇಗಿಲು ಹೂಡಿದ ಎತ್ತುಗಳನ್ನು ಓಂಕಾರ ನಾದ ಮಾಡಲು ರೈತರು ಬಳಸುತ್ತಿದ್ದರು ಎಂಬ ಪವಿತ್ರ ಭಾವನೆಯ ಹಿನ್ನಲೆಯಲ್ಲಿ ಹೇಳಲಾಗಿದೆ. ಅಕ್ಕಮಹಾದೇವಿಯ ವಚನವೊಂದರಲ್ಲಿ "........... ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ ...."[೨೯] ಜಗತ್ತಿನ ಜನಗಳಿಗೆ ಅಂಟಿಕೊಂಡ ಮಾಯೆಯನ್ನು ಬಿಡಿಸಲು ಬೆಂಗೋಲು (ಬಾರಿಕೋಲು) ಬಳಸಬೇಕು ಎನ್ನುವಲ್ಲಿ ಇದರ ಉಲ್ಲೇಖ ಕಾಣುತ್ತೇವೆ. ಅಮ್ಮುಗೆ ರಾಯಮ್ಮನ ವಚನದಲ್ಲಿ 'ಉತ್ತಮ ತೇಜಿಗೆ ಚಬುಕಿನಲ್ಲಿ ತೆಗೆವರುಂಟೆ ....[ವ-೫೨೭,ಪು-೧೭೧) ಚಬುಕಿ ಎಂದರೆ ಬಾರಿಕೋಲು ಎಂದೇ ಅರ್ಥ. ಕುದುರೆಗಳನ್ನು ಬೆದರಿಸಲು ಬಳಸುತ್ತಿದ್ದರು. ಅಂಬಿಗರ ಚೌಡಯ್ಯನ ವಚನದಲ್ಲಿ '.......... ಹೊಡೆಯಲಕ್ಕೆ ಬಾರುಕೋಲುವಾಯಿತ್ತು ಬಂಡಿಗೆ ....[ವ-

೨೯೦,ಪು-೯೫] ಎನ್ನಲಾಗಿದೆ. ಕಂಬದ ಮಾರಿತಂದೆಯ ವಚನವೊಂದರಲ್ಲಿ '........... ಗೂಳಿಯ ಇರಿತದ ಡಾವರಕ್ಕೆ ನಿಲ್ಲೆ, ಸೆಳೆಗೋಲಿನ ಗಾಣದ ಕೀಟಕವ ನೊಲ್ಲೆ ....'[ವ-೩,ಪು-೨] ಚರ್ಮದ ಬಾರಿಕೋಲಿನ ಹೊಡೆತದ ಬಲತ್ಕಾರವನ್ನು ಇಲ್ಲಿ ಹೇಳಲಾಗಿದೆ.

ಸಂರಕ್ಷಣೆ ವಿಧಾನ : ಚರ್ಮದ ಉಪಕರಣಗಳಾದ ಬಾರಿಕೋಲು, ಪಟಗಣ್ಣಿ, ನೊಗಸುತ್ತು(ಮಿಣಿ) ಇವುಗಳನ್ನು ರೈತರು ಅತ್ಯಂತ ಜಾಗ್ರತರಾಗಿ ರಕ್ಷಿಸಿಕೊಳ್ಳುತ್ತಾರೆ. ನೀರು, ಮಳೆಯ ನೀರಿನಲ್ಲಿ ನೆನೆದರೆ ಬೇಗ ಹಾಳಾಗುತ್ತವೆ. ಅಲ್ಲದೇ ಬೂಷ್ಟು ಇಡಿದು ಆಕಾರಗೆಡುತ್ತವೆ. ಆದ್ದರಿಂದ ನೆನದ ಇಂತಹ ಸಲಕರಣೆಗಳನ್ನು ಆರಿಸಲಾಗುತ್ತದೆ. ಚರ್ಮದ ಈ ಉಪಕರಣಗಳಿಗೆ ಕೃಷಿಯ ಕೆಲಸದ ಆರಂಭದಲ್ಲಿ ಮತ್ತು ಮುಗಿದ ನಂತರ ಔಡಲ(ಹರಳು)ಎಣ್ಣೆ ಹಚ್ಚಿ ತಿಕ್ಕಿ ತೀಡಿ ಇಡುತ್ತಾರೆ. ಇದರಿಂದ ಆ ಸಲಕರಣೆಗಳು ಮಿದುವಾಗಿ ಕೃಷಿ ಕೆಲಸಕ್ಕೆ ಸ್ಪಂದಿಸುತ್ತವೆ. ಒಟ್ಟಾರೆಯಾಗಿ ಚರ್ಮದ ಉಪಕರಣಗಳನ್ನು ಸಂರಕ್ಷಿಸಿಕೊಳ್ಳುವುದು ಮುಖ್ಯವಾದುದು. ಚರ್ಮದ ಮಿಣಿ, ಹಗ್ಗ, ಬಾರುಕೋಲು, ಪಟಗಣ್ಣಿ, ಮಾಡಿಸುವ ಬದಲು ಸೆಣಬಿನಿಂದ ಇವುಗಳನ್ನು ತಯಾರ ಮಾಡುವುದು ಕಂಡುಬರುತ್ತದೆ. ಅಲ್ಲದೇ ಪುಂಡಿಯ ನಾರಿನಿಂದಲೂ ಇಂತಹ ಸಾಮಾನುಗಳನ್ನು ತಯಾರಿಸಿಕೊಳ್ಳಲಾಗುತ್ತಿದೆ. ಪುಂಡಿಯ ನಾರು, ಸೆಣಬಿನ ನಾರುಗಳು ತೊಳೆದಷ್ಟು ಬಿಳುಪು ಮತ್ತು ಮೃದುವಾಗುತ್ತವೆ. ಆದ್ದರಿಂದ ಹಗ್ಗದ ಉಪಕರಣಗಳ ತಯಾರಿಕೆಗೆ ಹೆಚ್ಚು ಉಪಕಾರಿಯಾಗಿವೆ.

೪. ಇತರೆ

ಕೃಷಿಕರಿಗೆ ಅನೇಕ ಬಗೆಯ ಉಪಕರಣಗಳ ಅವಶ್ಯಕತೆ ಇದ್ದು; ಅವುಗಳನ್ನು ತಯಾರಿಸಿಕೊಳ್ಳುವ, ಜಾಗ್ರತೆಯಿಂದ ಕಾಪಾಡಿಕೊಳ್ಳುವ ಜವಾಬ್ದಾರಿ ರೈತರದ್ದು. ಕಟ್ಟಿಗೆ, ಕಬ್ಬಿಣ, ಚರ್ಮದ ಸಲಕರಣೆಗಳಲ್ಲದೇ ಬಿದಿರು ಉಪಯೋಗಿಸಿ ಕೆಲವು ಉಪಕರಣಗಳನ್ನು ತಯಾರಿಸಿಕೊಳ್ಳುವುದುಂಟು. ಬಿದಿರು ಬಹುಪಯೋಗಿಯಾಗಿದ್ದು, ಮಠ, ಮನೆ, ಹುಟ್ಟು, ಸಾವಿನ ಅಲ್ಲದೆ ಅನೇಕ ಧಾರ್ಮಿಕ ಸಂದರ್ಭಗಳಲ್ಲಿಯೂ ಇದರ ಬಳಕೆ ಕಂಡುಬರುತ್ತದೆ. ಕೃಷಿಕರು ಕೆಲವು ಕೃಷಿ ಸಂಬಂಧಿ ಉಪಕರಣಗಳನ್ನು ಬಿದಿರಿನಿಂದ ತಯಾರಿಸಿಕೊಳ್ಳುತ್ತಾರೆ.

ಉಪಕರಣಗಳ ತಯಾರಿಕೆಗೆ ಬಿದಿರು ಬೇಕು. ಸಸ್ಯ ಜಾತಿಯಲ್ಲಿ ಬಿದಿರು ಹುಲ್ಲಿನ ವರ್ಗಕ್ಕೆ ಸೇರಿದರೂ ಅದು ಮರದ ರೀತಿಯಲ್ಲಿ ಗಟ್ಟಿ ಕಟ್ಟಿಗೆಯಾಗಿರುತ್ತದೆ. ಮೇದಾರ ಜಾತಿಯ ಜನಸಮೂದಾಯದ ಕಸುಬಿಗೆ ಸಹಕಾರಿಯಾಗಿದೆ. ಇಂದು ಸಣ್ಣ ಕೈಗಾರಿಕೆಯ ಮಟ್ಟದಲ್ಲಿಯೂ ಬೆಳವಣಿಗೆಯ ಹಂತವನ್ನು ಪಡೆದುಕೊಂಡಿದೆ. ವಚನಕಾರರಲ್ಲಿ ಮೇದಾರ ಕೇತಯ್ಯನೆಂಬ ಶರಣ ಈ ಕಾಯಕ ಮಾಡುತ್ತಿದ್ದನು. ಬಿದಿರು ಮಲೆನಾಡಿನ ಕಾಡುಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಕಸಬುದಾರರು ಕಾಡಿಗೆ ಹೋಗಿ ಬಿದಿರು ಕಡಿದು ಅದನ್ನು ತಂದು ಬೇಕಾದ ಆಕಾರಕ್ಕೆ ಸೀಳಿಕೊಂಡು, ನಿಗದಿಯಂತೆ ಸಲಕರಣೆಯನ್ನು ಪ್ರಮಾಣಕ್ಕೆ ತಕ್ಕಂತೆ ತಯಾರಿಸುತ್ತಾರೆ. ಆಕಾರ, ಗಾತ್ರ, ವಿನ್ಯಾಸಗಳಲ್ಲಿ ಅನೇಕ ಕಲಾತ್ಮಕತೆಯನ್ನು ಮೇದಾರರು ತೋರುವುದು ಕಂಡು ಬರುತ್ತದೆ. ಒಕ್ಕಲಿಗನಿಗೆ ಸಹಾಯಕ ವೃತ್ತಿಗಾರರಾಗಿರುವ ಇವರು ಬಡಗಿ, ಕಮ್ಮಾರ, ಚಮ್ಮಾರರಂತೆ ಆಯಾಗಾರರಲ್ಲ. ತಾವು ತಯಾರಿಸಿದ ಕೃಷಿ ಸಲಕರಣೆಗಳನ್ನು ನಿಗದಿತ ದರ ಇಲ್ಲವೇ ದವಸ ಧಾನ್ಯಗಳಿಗೆ ಮಾರಾಟಮಾಡುತ್ತಾರೆ. ಈ ಉಪಕರಣಗಳ ತಯಾರಿಕೆಯ ವಿಧಾನ ಹೇಗೆಂದರೆ ಕಾಡಿನಿಂದ ನೇರವಾಗಿ ಬೆಳೆದ ಉದ್ದನೆ ಬಿದಿರು ಕಡಿದು ತಂದು ತಯಾರಿಸುವ ಉಪಕರಣದ

ಆಕಾರಕ್ಕೆ ತಕ್ಕಂತೆ ಮೊದಲು ಕತ್ತರಿಸಿ, ಆ ಬಿದರಿನಲ್ಲಿರುವ ಗೆಣ್ಣುಗಳನ್ನು ಸವರಿ, ಕಬ್ಬಿನ ಸಿಪ್ಪೆಯಂತೆ ಸೀಳಿ, ಅಂತಹ ಸೀಳುಗಳಿಂದ ಕಣಜ, ತಟ್ಟಿ, ಜಲ್ಲೆ, ಹೆಡಿಗೆ, ಗೂಡೆ, ಮೊರ ಮುಂತಾದವುಗಳನ್ನು ಕೈಯಿಂದ ಹೆಣೆದು ಬಿಸಿಲಿನಲ್ಲಿ ಒಣಗಿಸಲಾಗುತ್ತದೆ.

ಕತ್ರ, ಕಣಗಿ, ಬಾಯಿಕುಕ್ಕಿ, ಸಡ್ಡೆ, ಅದ್ಲಿ, ನ್ಯಾರೆದೊಣ್ಣೆ, ಹಲುಬೆ, ಗುಣಕುಗಳನ್ನು ಕಡಿದು ತಂದ ಬಿದಿರಿನಿಂದ ತಯಾರಿಸುತ್ತಾರೆ. ಇಂತಹ ಉಪಕರಣಗಳನ್ನು ಮಲೆನಾಡಿನ ಪ್ರಾಂತ್ಯದಲ್ಲಿ ರೈತರೇ ಸಿದ್ಧಮಾಡಿಕೊಳ್ಳುತ್ತಾರೆ. ಉದಾಹರಣೆಗೆ ಕತ್ರಯನ್ನು ಹಿತ್ತಿಲು, ಗದ್ದೆಗಳಲ್ಲಿ ದನಗಳಿಂದ, ಕಾಡುಪ್ರಾಣಿಗಳಿಂದ ರಕ್ಷಣೆ ಪಡೆಯಲು ಉಪಯೋಗಿಸಲಾಗುತ್ತದೆ. ಎಳೆ ಬಿದಿರನ್ನು ತಂದು ತಟ್ಟಿಯಾಕಾರದಲ್ಲಿ ಹೆಣೆಯುತ್ತಾರೆ. ಅವುಗಳನ್ನು ಒಂದರ ಪಕ್ಕದಲ್ಲಿ ಒಂದರಂತೆ ಜೋಡಿಸುತ್ತಾರೆ. ಅಲ್ಲದೇ ಸಡ್ಡೆಯನ್ನು ಒಳ್ಳೆಯ ಕೊಳವೆ ಹೊಂದಿರುವ ನೇರವಾದ ಬಿದಿರು ತಂದು ಅಳತೆಗೆ ತಕ್ಕಂತೆ ಕತ್ತರಿಸಿ, ಕಬ್ಬಿಣದ ಸರಳು ಕಾಯಿಸಿ ರಂಧ್ರ ಮಾಡಿ, ಮೇಲಿನ ಭಾಗಕ್ಕೆ ಬಟ್ಟಲು ಜೋಡಿಸುತ್ತಾರೆ. ಹಾಗೂ ಕಣಗಿ, ಅದ್ಲಿ, ಹಲಬೆ, ನ್ಯಾರೆದೊಣ್ಣೆ, ಗುಣುಕುಗಳನ್ನು ತಯಾರಿಸಿ ಕೊಳ್ಳುತ್ತಾರೆ. ಬಿದಿರು ದೊರೆಯದೇ ಇರುವ ಪ್ರದೇಶಗಳಿಗೆ ಮೇದಾರರು ತಾವು ತಯಾರಿಸಿದ ಇಂತಹ ಸಲಕರಣೆಗಳನ್ನು ಮಾರಾಟಮಾಡಿ ತಮ್ಮ ಉಪಜೀವನವನ್ನು ನಿರ್ವಹಿಸಿಕೊಳ್ಳುತ್ತಾರೆ.

ಸಂರಕ್ಷಣೆ ವಿಧಾನ : ಕೃಷಿಕರು ಯಾವುದೇ ಉಪಕರಣಗಳ ಬಗ್ಗೆ ತುಂಬಾ ಜಾಗ್ರತೆಯನ್ನು ವಹಿಸಬೇಕಾಗುತ್ತದೆ. ಇಲ್ಲದೆ ಇದ್ದರೆ ಗೆದ್ದಲು, ತುಕ್ಕು, ಬೂಷ್ಟು ಹತ್ತಿ ಉಪಕರಣಗಳು ನಾಶಹೊಂದುತ್ತವೆ. ಇಂತಹ ಉಪಕರಣಗಳ ತಯಾರಿಕೆ ಸುಲಭವಾದುದ್ದಲ್ಲ. ಆದ್ದರಿಂದ ಅವುಗಳು ಹಾಳಾಗದಂತೆ ಕಾಳಜಿ ವಹಿಸುವುದು ಮುಖ್ಯವಾಗಿದೆ. ರೈತಾಪಿ ವರ್ಗ ಇವುಗಳ ರಕ್ಷಣೆಗೆ ಅನೇಕ ಮಾರ್ಗೋಪಾಯಗಳನ್ನು ಕಂಡುಕೊಂಡಿದ್ದಾರೆ. ಅವುಗಳು ಈ ಕೆಳಗಿನಂತೆ ಇವೆ. ಧಾನ್ಯವನ್ನು ಸಂಗ್ರಹಿಸಲು, ಬಳಕೆ ಮಾಡಿಕೊಳ್ಳಲು ಉಪಯೋಗಿಸುವ ಕಣಜ, ಹೆಡಿಗೆ, ಗೂಡೆ ಮುಂತಾದವುಗಳನ್ನು ಹಸುವಿನ ಸೆಗಣಿ ಮೂತ್ರ ಕಲಸಿಕೊಂಡು ಈ ಉಪಕರಣಗಳಿಗೆ ಮೆತ್ತುತ್ತಾ ನಯವಾಗುವಂತೆ ಸಾರಿಸುತ್ತಾರೆ. ಹೀಗೆ ಮಾಡುವುದರಿಂದ ಕಾಳುಗಳು ಅದರಲ್ಲಿಯೂ ರಾಗಿ, ನವಣೆ, ಸಾವೆಯಂತಹ ಸಣ್ಣ ಧಾನ್ಯಗಳು ಸೋರಿಹೋಗುವುದಿಲ್ಲ. ಅಲ್ಲದೇ ಗೋಮೂತ್ರದ ಘಾಟು ಇರುವುದರಿಂದ ಹುಳು ಹತ್ತುವುದಿಲ್ಲ ಎಂಬ ನಂಬಿಕೆ ರೈತನದ್ದು. ಗೂಡೆ, ಕಣಜಗಳು ಇಲಿ ಕಡಿಯದಂತೆ ಅಟ್ಟಣಿಗೆಯ ಮೇಲೆ ಇಟ್ಟು ರಕ್ಷಿಸುತ್ತಾರೆ. ಗೆದ್ದಲು ಹತ್ತುವ ನೆಲದ ಮೇಲೆ ಇಡುವುದಿಲ್ಲ. ಒಂದು ಪಕ್ಷ ಇಲಿ ಕಡಿದು ತೂತು ಬಿದ್ದರೆ ಹಳೆ ಬಟ್ಟೆಯನ್ನು ತೂತಿಗೆ ತುಂಬಿ ಗೋತೆಯಲ್ಲಿ ಸೆಗಣಿ ಕಲಸಿ ಮೆತ್ತಿ ಸಂರಕ್ಷಿಸುತ್ತಾರೆ.

ಕನ್ನಡ ಕಾವ್ಯಗಳಲ್ಲಿ ಬಿದಿರಿನ ಉಪಕರಣಗಳಲ್ಲದೇ ಇನ್ನೂ ಕೆಲವು ಉಪಕರಣಗಳ ಉಲ್ಲೇಖಗಳು ಕಾಣಸಿಗುತ್ತವೆ. ಅಂತವುಗಳನ್ನು ಈಗಾಗಲೇ ವಿಸ್ತಾರವಾಗಿ ಹಿಂದಿನ ಅಧ್ಯಾಯಗಳಲ್ಲಿ ಗುರುತಿಸಲಾಗಿದೆ. ಪ್ರಮುಖ ವಿಚಾರಗಳನ್ನು ಮಾತ್ರ ಇಲ್ಲಿ ಚರ್ಚಿಸಲಾಗಿದೆ. ಕಣಜ ಧಾನ್ಯ ಸಂಗ್ರಹಿಸುವ ಈ ಉಪಕರಣದ ಮಾಹಿತಿಯನ್ನು ಅನೇಕ ವಚನಕಾರರಲ್ಲಿ ಕಾಣುತ್ತೇವೆ. ಅರಿವಿನ ಮಾರಿತಂದೆಗಳ ವಚನವೊಂದರಲ್ಲಿ "........... ಕೊಯ್ದು, ಒಕ್ಕಿ, ತೂರಿ ಅಳತೆ ಸಂದಿತ್ತು. ಸದ್ಯೋಜಾತ ಲಿಂಗವೆಂಬ ಕಣಜ ಘಟ್ಟದಲ್ಲಿ............" ಅಧ್ಯಾತ್ಮಿಕ ಚಿಂತನೆಯ ವಚನವಾಗಿದ್ದರೂ ಲೌಕಿಕ ಬದುಕಿನ ಕೊಯ್ಲು ಮಾಡುವ, ಒಕ್ಕಲು ಮಾಡಿ ತೂರಿ ಹಸನಾದ ಧಾನ್ಯವನ್ನು ಅಳತೆ ಮಾಡಿ ಕಣಜದಲ್ಲಿ ಸಂಗ್ರಹಿಸುವ ಅಂಶವನ್ನು ಕಾಣುತ್ತೇವೆ.

ತೋಂಟದ ಸಿದ್ದಲಿಂಗ ಶಿವಯೋಗಿಗಳ ವಚನದಲ್ಲಿ 'ಮನದಲ್ಲಿ ಮತಿಯ ಕಣಜ ಮಾತಿನಲ್ಲಿ ಜ್ಯೋತಿರ್ಲಿಂಗ.........' ಮತೀಯತೆಯನ್ನು ಮನಸ್ಸಿನಲ್ಲಿ ಸಂಗ್ರಹಿಸಿಕೊಂಡು ಡಾಂಭಿಕ ಭಕ್ತಿಯ ಭಾವವನ್ನು ಸೂಚಿಸುವಂತೆ ಎನ್ನುವಲ್ಲಿ ಕಣಜದ ಉಲ್ಲೇಖ ಕಂಡು ಬರುತ್ತದೆ. ಕನ್ನಡ ಭಾರತದಲ್ಲಿ ".........ವರಗುಡ ಶರ್ಕರಾದಿಯ ಕಣಜ ಕೋಡಿಗಳು ಕಳವೆಯಕ್ಕಿಯ ಗೋಧಿ ಕಡಲೆಯ ವಿಳಾಸ ರಾಸಿಯ ...."[೩೧] ಬೆಲ್ಲ, ಭತ್ತ, ಅಕ್ಕಿ, ಗೋಧಿ, ಕಡಲೆ ಮುಂತಾದ ಧಾನ್ಯಗಳನ್ನು ಸಂಗ್ರಹಿಸಲು ಕಣಜ ಬಳಸುವ ಮಾಹಿತಿ ದೊರೆಯುತ್ತದೆ. ಬಸವ ಪುರಾಣದ ಅಧ್ಯಾಯ–೯ರ ಪುಟ–೩೨೨ರಲ್ಲಿ ದವಸ ಧಾನ್ಯ ತುಂಬುವಂತಹ ಪುಟ್ಟಿ ಅಂದರೆ ಹೆಡಗೆಯ ಉಲ್ಲೇಖವಿದೆ.

ಮೊರ ಕಣದಲ್ಲಿ ಧಾನ್ಯ ತೂರಲು, ಸ್ವಚ್ಚಗೊಳಿಸಲು ಅಲ್ಲದೇ ಅನೇಕ ಧಾರ್ಮಿಕ ಕಾರ್ಯಗಳಲ್ಲಿ ಅವಶ್ಯಕವಾಗಿ ಬಳಕೆಯಾಗುವ ಸಲಕರಣೆಯಾಗಿದೆ. ಮಾರಯ್ಯನವರ ವಚನವೊಂದರಲ್ಲಿ "......... ಹೊಲನಗೆಯ್ದು ಮನೆಗೆ .... ಮಾಡುವುದಕ್ಕೆ ಮೊರನಿಲ್ಲ ತೊಳೆವುದಕ್ಕೆ ನೀರಿಲ್ಲ......... ಒಗೆತನಗೆಟ್ಟು ...."[೩೨] ರೈತರ ಒಕ್ಕಲುತನದಲ್ಲಿ ಮೊರದ ಅನಿವಾರ್ಯತೆಯನ್ನು ಕಾಣುತ್ತೇವೆ. ಬಂಡಾರಿ ಶಾಂತರಸನ ವಚನದಲ್ಲಿ 'ಕೈಯಲ್ಲಿ ಹಿಡಿದ ಮೊರನ ಬೇಡ ಎಂಬುವರಿಲ್ಲ ....' ಎನ್ನಲಾಗಿದೆ. ಧರ್ಮಾಮೃತದಲ್ಲಿ 'ಬಂಡಿಯಂತೀವಿದ ಜೋಳಮಂ ತೆಗೆವ ಕೋಣಂ ಮೊರಂ ತಿವಿದ ಧಾನ್ಯಮಂ ತೆಗೆಯಲಾರದೆ ....' ಎನ್ನಲಾಗಿದೆ. ಸಡ್ಡೆ ಕುರಿತಾದ ಉಲ್ಲೇಖಗಳು ಬಂಡಾರಿ ಶಾಂತರಸನ ವಚನದಲ್ಲಿ 'ಕಾಲಲ್ಲಿ ಕಟ್ಟಿದ ಸಡ್ಡೆಯ ಕೀಳುವವರಿಲ್ಲ .... ಸಡ್ಡೆಗೆ ಮೂರು ಕವೆ ....' ಕಾಲಲ್ಲಿ ಸಡ್ಡೆಯ ಯಾಕೆ ಕಟ್ಟಿದ್ದ ಎಂದು ಸ್ಪಷ್ಟವಾಗುವುದಿಲ್ಲ. ಮೂರು ಕವೆಯ ಸಡ್ಡೆಯ ಮಾಹಿತಿ ದೊರೆಯುತ್ತದೆ. ಹೇಮಗಲ್ಲು ಹಂಪನ ವಚನವೊಂದರಲ್ಲಿ "......... ಪಂಚವಿಷಯವೆಂ ಸೆಡ್ಡಿಯ ಕೋಲನಿಕ್ಕಿ ಚಿತ್ತವೆಂಬ ಸೆಡ್ಡಿಯಂ ಬಟ್ಟಲಿಗ ......"[೩೩] ಸೆಡ್ಡೆಯ ಉಲ್ಲೇಖ ಕಾಣಸಿಗುತ್ತದೆ.

ಏತ : ಏತ ನೀರೆತ್ತುವ ಉಪಕರಣ. ಮರ, ಕಬ್ಬಿಣ, ಚರ್ಮದ ವಸ್ತುಗಳನ್ನು ಬಳಸಿ ತಯಾರಿಸಲಾಗುತ್ತದೆ. ಏತವನ್ನು ಕುರಿತು ಕೃಷಿಪದಕೋಶದಲ್ಲಿ "ಬಾವಿಯಿಂದ ನೀರನ್ನು ಮೇಲೆತ್ತುವ ಸಾಧನ. ಯಾತ, ಯೇತ, ಧಮ್ಮೇತ, ಎಂದು ಕರೆಯುತ್ತಾರೆ. ಏತಕೋಲು; ಏತದಲ್ಲಿ ಬನಿಯನ್ನು ಸೇರಿಸಿ ಕಟ್ಟಿರುವ ಕೋಲು ಯಾತಂಬಾನೆ; ಏತದಲ್ಲಿ ಉಪಯೋಗಿಸುವ ಬಾನಿಯಿಂದ ನೀರು ತುಂಬಿ ತರುವ ಸಾಧನ. ಯಾತದ್‌ಬಾಂಡ್ಲಿ; ಏತಕ್ಕಾಗಿ ಉಪಯೋಗಿಸುವ ನೀರಿನ ಬುಟ್ಟಿ. ಯಾತುಂಮ್ಮಾನ್; ಏತದಲ್ಲಿ ಜೋಡಿಸುವ ದೊಡ್ಡ ಮರ"[೩೪] ಇಡೀ ಏತದ ಬಿಡಿಭಾಗಗಳ ಅರ್ಥವನ್ನು ಹೇಳಲಾಗಿದೆ. ಬಸವಣ್ಣನವರ ವಚನವೊಂದರಲ್ಲಿ "ಏತ ತಲೆ ಬಾಗಿದಡೇನು ಗುರು ಭಕ್ತನಾಗಬಲ್ಲುದೆ? ...."[೩೫] ರೈತರು ಕೈತೋಟ ಮಾಡಿಕೊಂಡು ಏತದ ಸಾಧನದಿಂದ ನೀರು ಪೂರೈಸಿಕೊಳ್ಳುತ್ತಿದ್ದರು. ಆಧುನಿಕತೆಯ ಭರಾಟೆಯಿಂದ ಮತ್ತು ಯಂತ್ರಗಳ ಉಪಯೋಗದಿಂದ ಇಂದು ಏತ ಕಣ್ಮರೆಯಾಗಿದೆ. ಅಣ್ಣನವರು ಏತ ತಲೆ ಬಾಗುವ ರೀತಿಯನ್ನು ಡಾಂಭಿಕ ಭಕ್ತನಿಗೆ ಹೋಲಿಸಿದ್ದಾರೆ. ಸರ್ವಜ್ಞನ ವಚನಗಳಲ್ಲಿ "ಮಾತು ಬಲ್ಲಾತಂಗೆ ಯೇತವದು ಸುರಿದಂತೆ ಮಾತಾಡಲರಿಯದಾಯದಾತಂಗೆ ಬರಿಯೇತ ನೇತಾಡಿದಂತೆ ...."[೩೬] ಅದರಂತೆ ಮಾತಿನ ಮಹತ್ವವನ್ನು ಕುರಿತು ಹೇಳುವಾಗ ಏತದ ಬಳಕೆಯಾಗಿದೆ.

"ಪಾತಾಳಕ್ಕಿಳಿಯುವುದು ಸೀತಳವ ತರುವುದು
ಭೂತಳದ ಮೇಲೆ ಇರುತಿಹುದು ಅದು ತಾನು
ಏತರದು ಪೇಳಿ ಸರ್ವಜ್ಞ!"

ಈ ಮೂಲದ ಸಾಲುಗಳು ಏತದ ಕಾರ್ಯಸ್ವರೂಪವನ್ನು ತಿಳಿಸುತ್ತದೆ. ಪ್ರಾಚೀನ ಕಾಲದಲ್ಲಿ ಕೆರೆ, ಬಾವಿಯಿಂದ ನೀರೆತ್ತಲು ಏತವನ್ನು ಹೇರಳವಾಗಿ ಬಳಸುತ್ತಿದ್ದರು ಎಂಬುದನ್ನು ಸರ್ವಜ್ಞತ್ರಿಪದಿಯ ಮೂಲಕ ಖಚಿತಪಡಿಸುತ್ತಾನೆ.

ರಾಟಾಳ : ಬಾವಿಯಿಂದ ನೀರೆತ್ತಲು ಬಳಸುವ ಉಪಕರಣ. ಕೃಷಿ ಪದಕೋಶದಲ್ಲಿ "ಬಾವಿಯಿಂದ ನೀರೆತ್ತಲು ಬಳಸುವ ಗಾಲಿಯ ಯಂತ್ರ, ರಾಟಾಣ, ರಾಟಾಳಿ, ರಾಟಾಳ, ರಾಣೆ, ರಾಳ, ರಾವಾಣ, ರಾವಾಳ, ರಾವಾಳೆ.........."[೩೭] ಎಂದು ಉಲ್ಲೇಖಿಸುತ್ತಾನೆ. ರಾಟೆ ಎಂದರೆ ಕಪ್ಪಿಗಾಗಿ ಬಳಸುವ ಹಗ್ಗ, ರಾಟೆ ಹಗ್ಗವೆಂದರೆ ಕಪ್ಪಿಗಾಗಿ ಬಳಸುವ ದೊಡ್ಡ ಹಗ್ಗ. 'ಘಟೀಯಂತ್ರ'ವೆಂಬ ನೀರೆತ್ತುವ ಯಂತ್ರದ ಉಲ್ಲೇಖ ವಚನಕಾರರಲ್ಲಿ ಕಾಣಸಿಗುತ್ತದೆ. ಆದರೆ ವಚನಗಳಲ್ಲಿ ಇದರ ಪರ್ಯಾಯನಾಮ ಱಾಟಾಳ ಅಥವಾ ಱಾಟಣ ಎಂದು ಬಳಕೆಯಾಗಿದೆ. ಕೆಲವು ಕಾವ್ಯಗಳಲ್ಲಿ 'ಱಾಟಾಣ' ಎಂಬ ರೂಪವು ದೊರೆಯುತ್ತದೆ. ಘಟೀಯಂತ್ರವನ್ನು ಕುರಿತು ಶಾಸನವೊಂದರಲ್ಲಿ ಅದರ ಕಾರ್ಯವಿಧಾನವನ್ನು ಈ ರೀತಿ ವಿವರಿಸಿರುವುದು ಕಂಡು ಬರುತ್ತದೆ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಎಂಬ ಕೃತಿಯಲ್ಲಿ ಎಂ.ಚಿದಾನಂದಮೂರ್ತಿಯವರು ಚರ್ಚಿಸುತ್ತಾ "ಮೇಲ್ಗಡೆ ಚಕ್ರ ತಿರುಗುತ್ತಿರುತ್ತದೆ. ಯಂತ್ರಕ್ಕೆ ಎತ್ತುಗಳನ್ನು ಹೂಡುತ್ತಾರೆ. ನೀರನ್ನು ಹೊತ್ತು ಮೇಲಕ್ಕೆ ಒಂದು ಸಾಲು ಕುಂಭಗಳು ಬರುತ್ತಿದ್ದರೆ, ನೀರನ್ನು ಸುರಿದು ಬರಿದಾದ ಕುಂಭಗಳ ಒಂದುಸಾಲು ಕೆಳಕ್ಕೆ ಇಳಿಯುತ್ತದೆ"[೩೮] ಎಂದು ಅಭಿಪ್ರಾಯ ಪಡುತ್ತಾರೆ. ಪಂಪನ ಆದಿಪುರಾಣದಲ್ಲಿ 'ರಾಟಣದೊಳಗಮ್ಮನೀಂ ಮೊಗೆಪೆಯಾಗದೆ ....' ಸಂಸಾರವನ್ನು ರಾಟಳಕ್ಕೆ ಹೋಲಿಸಿದ್ದಾನೆ. ಸ್ವತಂತ್ರ ಸಿದ್ದಲಿಂಗೇಶ್ವರರ ವಚನದಲ್ಲಿ '......... ರಾಟಳದಂತೆ ತನುವ ತೋಡುತ್ತ ಬಿಡುತ್ತ ತಿರುಗುತ್ತಿಹರಲ್ಲ ....' ಎನ್ನಲಾಗಿದೆ. ಹರಿಹರನ ಗಿರಿಜಾಕಲ್ಯಾಣದಲ್ಲಿ ".........ವಸಂತ ರಾಜಂ ಕತ್ತುರಿಯ ಮಡಿಯೊಳ್ ಕಪ್ಪುರದ ಗಿಡುವಂನಟ್ಟು ಱಾಟಳಮನೆತ್ತಿ ಬೆಳೆಯಿಸಿದನೆಂಬಂ ...."[೩೯] ಗಿಡಗಳಿಗೆ ಪಾತಿಯ ಮಾಡಿ, ಗಿಡನೆಟ್ಟು ರಾಟಳದಿಂದ ನೀರನ್ನೆತ್ತಿ ಹಾಯಿಸುವ ಪದ್ಧತಿಯನ್ನು ಕಾಣುತ್ತೇವೆ. ಕುಮಾರವ್ಯಾಸನ ಆದಿಪರ್ವದಲ್ಲಿ ".......... ಕೌರವರ ರಕುತದ ರಾಟಾಳವನೆತ್ತುವೆನು ಕಟ್ಟು ಮುಡಿಯನೆಂಬೆನು ...."[೪೦] ಗ್ರಾಮೀಣ ಪರಿಸರದ ಅಗಾದ ಅನುಭವ ಹೊಂದಿರುವ ಕವಿ ಕೌರವನ ದೇಹದಲ್ಲಿರುವ ರಕ್ತವನ್ನು ರಾಟಳದಿಂದ ನೀರನ್ನೆತ್ತುವಂತೆ ಎತ್ತಿ ಭೀಮನು ದ್ರೌಪದಿಯ ಮುಡಿಗೆ ಹರಿಸುತ್ತಾನೆ. ಎಂದು ಪ್ರತಿಜ್ಞೆ ಮಾಡುವಲ್ಲಿ ಬಳಸಿರುವುದು ತುಂಬಾ ಔಚಿತ್ಯದಿಂದ ಕೂಡಿದೆ. ಹೀಗೆ ತೋಟದ ಬೆಳೆಗಳಿಗೆ ಏತ ರಾಟಳಗಳೆಂಬ ಉಪಕರಣಗಳ ಸಹಾಯದಿಂದ ನೀರುಣಿಸುತ್ತಿದ್ದರು ಎಂಬುದನ್ನು ಕಾವ್ಯಗಳು ಬಲವಾಗಿ ಸಮರ್ಥಿಸುತ್ತವೆ.

ಕೃಷಿ ಉಪಕರಣಗಳಾದ ಕಟ್ಟಿಗೆ, ಕಬ್ಬಿಣ, ಚರ್ಮ ಮತ್ತು ಇತರೆ ಉಪಕರಣಗಳನ್ನು ಕುರಿತು ಪ್ರಾಚೀನ ಶಾಸ್ತ್ರ ಕೃತಿಗಳು ಮಾರ್ಗಸಾಹಿತ್ಯ ಮತ್ತು ದೇಶೀಸಾಹಿತ್ಯ, ಶಾಸನಗಳಲ್ಲಿ ಉಕ್ತವಾಗಿರುವ ಮಾಹಿತಿಯನ್ನು ಉಪಕರಣಗಳ ತಯಾರಿಕೆ, ಸಂರಕ್ಷಣೆಯ ವಿಧಾನದಲ್ಲಿ ಬಳಸಿಕೊಂಡು ಚರ್ಚಿಸಲಾಗಿದೆ. ಪ್ರತಿಯೊಂದು ಉಪಕರಣಕ್ಕೂ ಆರಿಸುವ ಮರ, ಕಬ್ಬಿಣ, ಚರ್ಮ ಅದನ್ನು ತಂದು ಬಡಗಿ, ಕಮ್ಮಾರ, ಚರ್ಮಗಾರರಿಂದ ತಯಾರಿಸುವುದು, ಅವರಿಗೆ ಆಯದ ರೂಪದಲ್ಲಿ ಧಾನ್ಯ ಇಲ್ಲವೇ ಹಣ ನೀಡುವುದು. ಇಂತಹ ಉಪಕರಣಗಳನ್ನು ಜಾಗ್ರತೆವಹಿಸಿ ಕಾಪಾಡುವುದು. ಮತ್ತು ಅವುಗಳ ಬಗೆಗಿರುವ ಗೌರವ ಪವಿತ್ರ ಭಾವನೆಗಳೂ, ಪೂಜೆ ಮಾಡುವ ವಿಧಾನ ಅಲ್ಲದೇ ತಮ್ಮ ಮಕ್ಕಳಂತೆ ಕಾಪಾಡುವ ಅಂಶಗಳನ್ನು ಗುರುತಿಸಲಾಗಿದೆ.

ಸಲಕರಣೆಗಳ ಹೊಸಬಗೆಯ ತಯಾರಿಕೆಗೆ ಕೃಷಿ ವಿಶ್ವವಿದ್ಯಾನಿಲಯಗಳು ಹೆಚ್ಚಿನ ಆಸಕ್ತಿ ಒಲವುಗಳನ್ನು ತೋರಬೇಕಾಗಿದೆ. ಕೃಷಿ ಪ್ರಾರಂಭದ ಕಾಲದಿಂದಲೂ ಕೃಷಿ ಉಪಕರಣಗಳು ಪ್ರಾದೇಶಿಕ ಭಿನ್ನತೆ, ಹವಾಮಾನ, ಮಣ್ಣಿನ ವಿವಿಧತೆಗನುಗುಣವಾಗಿ ಆಕಾರ, ವಿನ್ಯಾಸಗಳಲ್ಲಿ ಬದಲಾವಣೆ ಪಡೆದುಕೊಂಡಿವೆಯಾದರೂ ರಾಜ್ಯದಲ್ಲಿರುವ ಕೃಷಿವಿಶ್ವವಿದ್ಯಾಲಯಗಳು ಹೊಸ ವಿನ್ಯಾಸ ಮತ್ತು ಸಸ್ಯಗಳ ಸಂಗ್ರಹಣೆ ಎಷ್ಟು? ಒಂದು ಸಾಲಿನಲ್ಲಿ ಬಿತ್ತಬೇಕು ಎಂಬುದನ್ನು ರೈತರಿಗೆ ತಿಳಿಯಪಡಿಸಿ, ಅಂತಹ ಆಧುನಿಕ ಉಪಕರಣಗಳ ತಯಾರಿಕೆ ಮಾಡಲು ಮುಂದಾಗಬೇಕಾಗಿದೆ. ಕೇವಲ ಬೃಹತ್ ಕೃಷಿಯನ್ನಷ್ಟೇ ಗಮನದಲ್ಲಿರಿಸಿಕೊಂಡು ಕೃಷಿ ಉಪಕರಣ ತಯಾರಿಸಿದರೆ ಸಾಲದು. ಸಾಮಾನ್ಯ ರೈತನ ಆರ್ಥಿಕ ಶಕ್ತಿಗೆ ನಿಲುಕುವಂತಹ ಉಪಕರಣಗಳ ತಯಾರಿಕೆಗೆ ಸಂಶೋಧನೆ, ಆವಿಷ್ಕಾರಗಳನ್ನು ಮಾಡಬೇಕಾಗಿದೆ. ಅಲ್ಲದೇ ಕೃಷಿಕರ ಹೊಲಗದ್ದೆಗಳಲ್ಲಿ ಪ್ರಾಯೋಗಿಕವಾಗಿ ಪ್ರಯೋಗಮಾಡಿ ಅದರ ಫಲಿತಗಳನ್ನು ರೈತರಿಗೆ ತಿಳಿಸಿ, ಪ್ರಾಚೀನ ಕಾಲದ ಕೃಷಿತಂತ್ರಗಳನ್ನು ಅವುಗಳಲ್ಲಿ ಬಳಸಿಕೊಂಡು ಆಧುನಿಕವಾಗಿ ಸರಳ ಮಾರ್ಗಗಳ ಮೂಲಕ ರೈತರಿಗೆ ತಿಳಿಸುವುದು ಅತ್ಯಂತ ಪ್ರಮುಖವಾದ ಕೆಲಸಗಳಲ್ಲೊಂದಾಗಿದೆ.

ಅಡಿಟಿಪ್ಪಣಿಗಳು

೧. ಕನ್ನಡ ವಿಷಯ ವಿಶ್ವಕೋಶ ಜಾನಪದ –ಮೈಸೂರು ವಿ.ವಿ.ಪು–೩೨೪
೨. ಅದೇ, ಪು–೩೨೪
೩. ಕೃಷಿಜ್ಞಾನ ಪ್ರದೀಪಿಕೆ–ಶ್ರೀಘನಮಠ ಶಿವಯೋಗಿಗಳು, ಪು–೨೧
೪. ಕೃಷಿ ಉಪಕರಣಗಳು–ಎಂ.ಎಂ.ಹೊಸಮನಿ, ಎಸ್.ಸಿ.ಚಂದ್ರಯ್ಯ, ಪು–೨೧೨
೫. ರೈತ ಜಾನಪದ–ಸಂ–ಡಾ.ಮೃತ್ಯುಂಜಯ ಹೊರಕೇರಿ, ಪು–೩೫
೬. ಜಾನಪದ ಸಾಹಿತ್ಯ ದರ್ಶನ–೭, ಸಂ–ವೃಷಬೇಂದ್ರಸ್ವಾಮಿ, ಪು–೯೭
೭. ಸಂಕೀರ್ಣವಚನ ಸಂಪುಟ–ಸಂ–೧, ಸಂ–ಡಾ.ಎಂ.ಎಂ.ಕಲಬುರ್ಗಿ, ಪು–೬೭೨
೮. ಕೃಷಿ ಉಪಕರಣಗಳು–ಎಂ.ಎಂ.ಹೊಸಮನಿ, ಎಸ್.ಸಿ.ಚಂದ್ರಯ್ಯ, ಪು–೧೩,೧೪
೯. ಅದೇ, ಪು–೨೪
೧೦. ಅದೇ, ಪು–೩೮
೧೧. ರಟ್ಟಮತಂ–ಸಂ–ಹೆಚ್.ಶೇಷಯ್ಯಂಗಾರ್,ಪು–೯೧
೧೨. ಸಂಕೀರ್ಣವಚನ ಸಂಪುಟ– ಸಂ–೧,ಸಂ– ಡಾ.ಎಂ.ಎಂ.ಕಲಬುರ್ಗಿ, ಪು–೬೭೩
೧೩. ಕೃಷಿ ಉಪಕರಣಗಳು–ಎಂ.ಎಂ.ಹೊಸಮನಿ, ಎಸ್.ಸಿ.ಚಂದ್ರಯ್ಯ, ಪು–೨೧
೧೪. ಅದೇ, ಪು–೩೪
೧೫. ದೇಸಿ ಕೃಷಿಜ್ಞಾನ–ಸಂ–೬, ಕೃಷಿ ಉಪಕರಣಗಳು–ಗಾಣದಾಳು ಶ್ರೀಕಂಠ,ಪು–೧೪
೧೬. ಕೃಷಿ ಉಪಕರಣಗಳು–ಎಂ.ಎಂ.ಹೊಸಮನಿ, ಎಸ್.ಸಿ.ಚಂದ್ರಯ್ಯ, ಪು–೪೮
೧೭. ಕೃಷಿ ಪದಕೋಶ–ಸಂ–ಕೆ.ವಿ.ನಾರಾಯಣ, ಹಂಪಿ.ವಿ.ವಿ, ಪು–೪೪–೪೫
೧೮. ಸಂಕೀರ್ಣ ವಚನ ಸಂಪುಟ–೧, ಸಂ–ಡಾ.ಎಂ.ಎಂ.ಕಲಬುರ್ಗಿ.ವ–೧೭೩೯. ಪು–೩೨೪
೧೯. ಕರ್ಮವೀರ–ಮಾಸಿಕ, ಡಿಸೆಂಬರ್–೨೦೦೫, ಲೇ–ಡಾ.ಸೂರ್ಯನಾಥ ಕಾಮತ್
೨೦. ಕೃಷಿ ಉಪಕರಣಗಳು–ಎಂ.ಎಂ.ಹೊಸಮನಿ, ಎಸ್.ಸಿ.ಚಂದ್ರಯ್ಯ, ಪು–೧೭
೨೧. ದೇಸಿ ಕೃಷಿಜ್ಞಾನ–ಸಂ–೬, ಕೃಷಿಉಪಕರಣಗಳು–ಗಾಣದಾಳು ಶ್ರೀಕಂಠ.ಪು–೫
೨೨. ಸಂಕೀರ್ಣ ವಚನ ಸಂಪುಟ– ಸಂ–೧,ಸಂ– ಡಾ.ಎಂ.ಎಂ.ಕಲಬುರ್ಗಿ.ವ–೧೭೪೫. ಪು–೬೭೫
೨೩. ಪಂಪ ರಾಮಾಯಣ–ನಾಗಚಂದ್ರ, ಆ–೯.ಪ–೧೦೧, ಪು–೨೩೯

೨೪. ಸಂಕೀರ್ಣ ವಚನ ಸಂಪುಟ– ಸಂ–೧,ಸಂ– ಡಾ.ಎಂ.ಎಂ.ಕಲಬುರ್ಗಿ,ವ–೧೭೩೯, ಪು–೬೭೦

೨೫. ಅಲ್ಲಮ.ವ.ಸಂ–ಸಂ– ಡಾ.ಬಿ.ವ್ಹಿ.ಮಲ್ಲಾಪುರ,ವ–೧೨೩೧,ಪು–೩೬೪

೨೬. ಸಿದ್ದರಾಮ ಚರಿತ್ರೆ–ರಾಘವಾಂಕ, ಅ–೪,ಪ–೧೯,ಪು–೧೦೩

೨೭. ಕನ್ನಡ ವಿಶ್ವಕೋಶ–ಸಂ–೫,ಮೈ.ವಿ.ವಿ,೧೯೭೨,ಪು–೬೯

೨೮. ಸಂಕೀರ್ಣ ವಚನ ಸಂಪುಟ– ಸಂ–೧,ಸಂ– ಡಾ.ಎಂ.ಎಂ.ಕಲಬುರ್ಗಿ,ವ–೧೭೪೫, ಪು–೬೭೩

೨೯. ಶಿವಶರಣೆಯರ.ವ.ಸಂ–ಸಂ– ಡಾ.ವೀರಣ್ಣರಾಜೂರ,ವ–೧೩೩, ಪು–೪೩

೩೦. ಸಂಕೀರ್ಣ ವಚನ ಸಂಪುಟ– ಸಂ–೧,ಸಂ– ಡಾ.ಎಂ.ಎಂ.ಕಲಬುರ್ಗಿ,ವ–೭೩೨, ಪು–೨೨೫

೩೧. ಕರ್ನಾಟಕ ಭಾರತ ಕಥಾಮಂಜರಿ–ಕುಮಾರವ್ಯಾಸ, ಸಭಾ–ಸಂ–೬,ಪ–೧೬, ಪು–೧೦೦

೩೨. ಸಂಕೀರ್ಣ ವಚನ ಸಂಪುಟ– ಸಂ– ಡಾ.ಬಿ.ಆರ್.ಹಿರೇಮಠ,ವ–೨೨೩೦,ಪು–೭೪೨

೩೩. ಸಂಕೀರ್ಣ ವಚನ ಸಂಪುಟ–ಸಂ–೪,ಸಂ– ಡಾ.ವೀರಣ್ಣರಾಜೂರ,ವ–೩೪೦೨,ಪು–೫೦೬

೩೪. ಕೃಷಿಪದಕೋಶ–ಸಂ–ಕೆ.ವಿ.ನಾರಾಯಣ, ಹಂಪಿ.ವಿ.ವಿ, ಪು–೧೦

೩೫. ಬಸವ.ವ.ಸಂ.ಸಂ–ಡಾ.ಎಂ.ಎಂ.ಕಲಬುರ್ಗಿ, ವ–೧೨೫,ಪು–೩೪

೩೬. ಸರ್ವಜ್ಞನ ವಚನಗಳು–ಸಂ–ಚನ್ನಪ್ಪ ಉತ್ತಂಗಿ, ವ–೧೩೪೪,ಪು–೧೬೭

೩೭. ಕೃಷಿಪದಕೋಶ–ಸಂ–ಕೆ.ವಿ.ನಾರಾಯಣ, ಹಂಪಿ.ವಿ.ವಿ, ಪು–೬೨

೩೮. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ–ಡಾ.ಚಿದಾನಂದ ಮೂರ್ತಿ, ಪು–೩೬೭

೩೯. ಗಿರಿಜಾ ಕಲ್ಯಾಣ–ಹರಿಹರ, ಅ–೨,ಪ–೬೧,ಪು–೧೦೪

೪೦. ಕನ್ನಡ ಭಾರತ–ಸಂ–ಎಂ.ವಿ.ಪ್ರಸನ್ನ, ಆದಿ–ಸಂ–೮,ಪ–೪೮

ಅಧ್ಯಾಯ–ಐದು

ಕೃಷಿ ಬಳಕೆಯ ಪ್ರಾಣಿಗಳು ಮತ್ತು ಕ್ರಿಮಿಕೀಟಗಳ ಆರೈಕೆ

ಅಧ್ಯಾಯ–ಐದು

ಕೃಷಿ ಬಳಕೆಯ ಪ್ರಾಣಿಗಳು ಮತ್ತು ಕ್ರಿಮಿಕೀಟಗಳ ಆರೈಕೆ

ಪ್ರಾಚೀನ ಕಾಲದಲ್ಲಿ ಅಲೆಮಾರಿಯಾಗಿದ್ದ ಮಾನವ ಜನಾಂಗ, ಬೇಟೆಯಾಡುವುದು, ಕಾಡಿನ ಗೆಡ್ಡೆಗೆಣಸು ಹುಡುಕುವುದು, ಅವುಗಳನ್ನೇ ತಿಂದು ಜೀವಿಸುವುದನ್ನು ರೂಢಿಸಿಕೊಂಡಿದ್ದರು. ಕಾಲನಂತರದಲ್ಲಿ ಒಂದು ಕಡೆ ನೆಲೆಯಾಗಿ ನಿಂತು ಕಾಡುಪ್ರಾಣಿಗಳನ್ನು ಪಳಗಿಸಿ, ಸಾಕು ಪ್ರಾಣಿಗಳನ್ನಾಗಿ ಮಾಡಿಕೊಳ್ಳಲು ತೊಡಗಿರಬೇಕು. ಇಂತಹ ಪ್ರಾಣಿಗಳಲ್ಲಿ ನಾಯಿ, ಕುದುರೆ, ಒಂಟೆ ಮತ್ತು ಸಾಕುಪ್ರಾಣಿಗಳು ಕಂಡುಬರುತ್ತವೆ. ಬರುಬರುತ್ತಾ ಕುದುರೆ, ಒಂಟೆಗಳ ಜೊತೆಗೆ ಕುರಿ, ಆಡು, ಆಕಳು, ಎತ್ತು, ಎಮ್ಮೆ ಮುಂತಾದ ಪ್ರಾಣಿಗಳ ಬಳಕೆಯಾಗಿರಬೇಕು. “ಮಾನವಶಾಸ್ತ್ರಜ್ಞರ ಅಭಿಪ್ರಾಯದಂತೆ ಮಾನವನ ಇಂದಿನವರೆಗಿನ ಪ್ರಗತಿಯನ್ನು ಸ್ಥೂಲವಾಗಿ ಎರಡು ಭಾಗಮಾಡಬಹುದು. ಒಂದು ಆಹಾರ ಸಂಗ್ರಹಕಾಲ, ಎರಡು ಉತ್ಪಾದನೆಯ ಕಾಲ. ಮೊದಲನೆಯ ಕಾಲದಲ್ಲಿ ಅವನ ಪ್ರಗತಿ ನಿಧಾನವಾಗಿತ್ತು. ಆ ಕಾಲದಲ್ಲಿ ಅವನು ಆಹಾರಕ್ಕಾಗಿ ಗುಡ್ಡಗಾಡುಗಳಲ್ಲಿ ಅಲೆದಾಡಬೇಕಾಗಿತ್ತು. ಅಲೆದಾಡುವ ಸಂದರ್ಭದಲ್ಲಿ ಅವನಿಗೆ ಬಿಡುವೆಂಬುದುದೇ ಇರಲಿಲ್ಲ, ಮಾನವ ಸಂಸ್ಕೃತಿ ಆರಂಭವಾದದ್ದು ಆತನ ಆಹಾರ ಉತ್ಪಾದನೆಯ ಕಾಲದ ನಂತರವೇ. ಈ ಆಹಾರ ಉತ್ಪಾದನೆಯ ಕಾಲದ ಪ್ರಾಥಮಿಕ ಅವಸ್ಥೆಯೇ ಪಶುಪಾಲನೆ. ಈ ಕಾಲದಲ್ಲಿ ಕಾಡೆಮ್ಮೆ, ಒಂಟೆ, ಕುರಿ, ಆಡು, ಆಕಳು, ನಾಯಿ ಮುಂತಾದ ಪ್ರಾಣಿಗಳೇ ಅವನಿಗೆ ಜೀವನಾಧಾರವಾದವು”.[೧] ಎಂದು ಕನ್ನಡ ವಿಷಯ ವಿಶ್ವಕೋಶ ಜಾನಪದದಲ್ಲಿ ಹೇಳಲಾಗಿದೆ. ಮುಂದುವರೆದು ವ್ಯವಸಾಯಕ್ಕಿಂತ ಮುಂಚೆ ಪಶುಪಾಲನೆ, ಎಲ್ಲಾ ವ್ಯವಸಾಯಗಾರರು ಪಶುಪಾಲಕರಾಗಿದ್ದರು ಎಂಬ ಮಾತನ್ನು ಸಾರ್ವತ್ರಿಕಗೊಳಿಸಲಾಗದು. ಪ್ರಪಂಚದ ಮಾನವ ಇತಿಹಾಸ ಗಮನಿಸಿದರೆ, ಅಮೇರಿಕನ್ ಇಂಡಿಯನ್ನರು ಅವರ ಶೋಧನೆಯಾಗುವ ಶತಮಾನಗಳ ಮುಂಚೆಯೇ ವ್ಯವಸಾಯಗಾರರಾಗಿದ್ದರು. ಆದರೆ ಅವರಿಗೆ ಪಶುಪಾಲನೆ ಗೊತ್ತಿರಲಿಲ್ಲ. ಪೆರುವಿಯನ್ನರು ಲಾಮಾಗಳನ್ನು ಹಿಂಡು ಹಿಂಡಾಗಿ ಪಾಲನೆಮಾಡುತ್ತಿದ್ದರು. ಆ ಪಾಲನೆಗಿಂತ ವ್ಯವಸಾಯವು ಪ್ರಾಚೀನವಾದುದ್ದಾಗಿತ್ತು. ಆದುದರಿಂದ ಪ್ರಾಚೀನ ಮಾನವ ವ್ಯವಸಾಯಗಾರನಾಗುವ ಮುಂಚೆ ಪಶುಪಾಲಕನಾಗಿರಲೇಬೇಕಾಗಿತ್ತು ಎಂದು ಹೇಳಲು ಸಾಧ್ಯವಿಲ್ಲ. “ಆದರೆ ವ್ಯವಸಾಯದ ಪ್ರಗತಿಗೆ, ಆಹಾರದ ಹೆಚ್ಚು ಉತ್ಪಾದನೆಗೆ ಕುದುರೆ,

ಒಂಟೆ, ಎತ್ತು, ಎಮ್ಮೆ ಮುಂತಾದ ಪ್ರಾಣಿಗಳು ನಿಜವಾಗಿಯು ಸಹಾಯ ಮಾಡಿವೆ. ಕಳೆ ಗುದ್ದಲಿಯಿಂದ ವ್ಯವಸಾಯ ಮಾಡುತ್ತಿದ್ದ ಮಾನವ ನೇಗಿಲು ಬಳಸುವಂತಾಗಬೇಕಾದರೆ ಪ್ರಾಣಿಗಳೇ ಅವನಿಸಗೆ ಪ್ರೇರಣೆಯಾಗಿವೆ"[೨] ಎನ್ನಲಾಗಿದೆ.

ತಾನು ಪಳಗಿಸಿಕೊಂಡ ಪ್ರಾಣಿಗಳಾದ ಹಸು, ಎಮ್ಮೆ, ಎತ್ತು, ಕೋಣ, ಕುದುರೆ ಮುಂತಾದವು ಕೃಷಿಕನ ನಿಕಟ ಒಡನಾಡಿಗಳಾದವು. ಕುರಿ, ಕೋಳಿ, ಆಡು, ಹಂದಿ, ನಾಯಿ ಮುಂತಾದ ಇತರೆ ಸಾಕುಪ್ರಾಣಿಗಳು ಕೃಷಿ ಪ್ರಪಂಚದಲ್ಲೇ ನೆಲೆಯೂರಿದವು. ಈ ಪ್ರಾಣಿಗಳು ಕೃಷಿಕನ ಜೀವಂತ ಸಲಕರಣೆಗಳಾದವು. ಇಂತಹ ಪ್ರಾಣಿಗಳಲ್ಲಿ ಹೈನುಗಾರಿಕೆಗಾಗಿ ಆಕಳು, ಎಮ್ಮೆ, ಆಡು, ಕುರಿಗಳನ್ನೂ, ಬೇಸಾಯಕ್ಕಾಗಿ ಎತ್ತು, ಹೋರಿ, ಕೋಣಗಳನ್ನು ಸಾಕುತ್ತಾ ಮತ್ತು ಉಪಯೋಗಿಸುತ್ತ ಬಂದಿದ್ದಾನೆ. ಕೆಲವು ಕಡೆ ಎತ್ತುಗಳನ್ನೂ, ಕೆಲವು ಕಡೆ ಕೋಣಗಳನ್ನು ವ್ಯವಸಾಯಕ್ಕೆ ಬಳಸುತ್ತಾರೆ. ಅಲ್ಲದೆ ಗರ್ಭನಿಲ್ಲದ ಹಸುಗಳನ್ನು, ಬರಡಾದ ಹಸುಗಳನ್ನು ಉಳುಮೆಮಾಡಲು ಬಳಸುವುದು ಕಂಡುಬರುತ್ತದೆ. ಗರ್ಭನಿಲ್ಲದ ಹಸುಗಳನ್ನು ಬೇಸಾಯಕ್ಕೆ ಬಳಸಿದರೆ ಗರ್ಭನಿಲ್ಲುತ್ತದೆ ಎಂಬುದು ಜನಪದರ ನಂಬಿಕೆಯಾಗಿದೆ. ಬುಕಾನನ್ ಪಶುಸಂಗೋಪನೆ ಕುರಿತು ಸಾಕಷ್ಟು ಮಾಹಿತಿಯನ್ನು ನೀಡಿದ್ದಾನೆ. ಶ್ರೀರಂಗಪಟ್ಟಣದ ಪರಿಸರದಲ್ಲಿಯ ಪ್ರಾಣಿಗಳನ್ನು ಕುರಿತು ಹೀಗೆ ಹೇಳಲಾಗಿದೆ. "..........ಶ್ರೀರಂಗಪಟ್ಟಣದ ಪರಿಸರದಲ್ಲಿ ಕೃಷಿಗೆ ಬೇಕಾಗುವಷ್ಟು ಎತ್ತುಗಳು ಹುಟ್ಟುವುದಿಲ್ಲ, ಬಂಡಿ ಎಳೆಯುವ ಜಾತಿಯ ತಳಿವೃದ್ಧಿ ಇಲ್ಲಿ ಮಾಡುತ್ತಿಲ್ಲ. ಇವನ್ನು ಅಲಂಬಾಡಿ, ತಿರುಪುತ್ತೂರು, ಕವಡುಹಳ್ಳಿ, ಕಾನಕಾನಹಳ್ಳಿ (ಕನಕಪುರ) ರಾಮಗಿರಿ (ರಾಮನಗರ) ಮತ್ತು ಮ್ಯಾಗೇರಿಗಳಿಂದ ತರುತ್ತಾರೆ. ಇಲ್ಲಿ ಎರಡು ಜೊತೆ ಎತ್ತುಗಳು ಉಳುವಷ್ಟು ಜಮೀನನ್ನು ಉಳಲು ಕೋಣಗಳಾದರೆ ಮೂರು ಜೊತೆ ಬೇಕು ಎನ್ನುತ್ತಾನೆ"[೩] ಬೇಸಾಯಕ್ಕೆ ಎತ್ತು, ಕೋಣಗಳ ಬಳಕೆ ಮಾಡುವ ಅಂಶ ಕಾಣಸಿಗುತ್ತದೆ.

ಕೃಷಿಕರಾದವರು ಎತ್ತುಗಳನ್ನು ತಮ್ಮ ಮಕ್ಕಳಿಗಿಂತಲೂ, ಹೆಚ್ಚು ಪ್ರೀತಿಯಿಂದ ಪಾಲನೆ ಮಾಡಬೇಕು. ಏಕೆಂದರೆ 'ಎತ್ತು ಇಲ್ಲದ ಮನೆಗೆ ಎದೆ ಇಲ್ಲವೊ' ಎಂಬ ಗಾದೆಯುಂಟು. ಇದರ ಅರ್ಥ ತ್ರಾಣವುಳ್ಳ ಎತ್ತುಗಳು ಇಲ್ಲದೆ ಇದ್ದರೆ ಕೃಷಿಕನಿಗೆ ಧೈರ್ಯ ಇರಲು ಸಾಧ್ಯವಿಲ್ಲ. ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಎತ್ತುಗಳನ್ನು ಕುರಿತಾದ ಅಭಿಪ್ರಾಯ ಈ ರೀತಿ ಇದೆ. "........... ಬಲಹೀನವಾದ ಎತ್ತುಗಳಿಂದ ಯಾವ ಕೆಲಸವೂ ಸಾಗುವುದಿಲ್ಲವಾದ ಕಾರಣ, ಮೈಗಳ್ಳರಾದ ಮನುಷ್ಯರುಗಳನ್ನು, ಬಲಹೀನವಾದ ಎತ್ತುಗಳನ್ನು ಬಿಟ್ಟು ತ್ರಾಣವುಳ್ಳ ಪುಷ್ಟಿಕರವಾದ ಎತ್ತುಗಳನ್ನು, ಬಲಿಷ್ಠರಾದ ಮನುಷ್ಯರುಗಳನ್ನು, ಉತ್ತಮವಾದ ಗಟ್ಟಿಯಾದ ಹದನಾದ ಮೊನೆಯಾದ ಅನುವಾದ ಸಾಮಾನುಗಳನ್ನು ಸಿದ್ಧಮಾಡಿಕೊಂಡು ಭೂಮಿ ವ್ಯವಸಾಯವನ್ನು ಮಾಡಲಾರಂಭಿಸಬೇಕು"[೪] ಎನ್ನುತ್ತಾರೆ. ಕನ್ನಡಭಾರತಿ ಸಂಕ್ರಮಣ ಸಂಚಿಕೆಯಲ್ಲಿ 'ಜನಪದ ಸಾಹಿತ್ಯದಲ್ಲಿ ಎತ್ತಿನ ಚಿತ್ರಣ'ಎಂಬ ಲೇಖನದಲ್ಲಿ ಬಿ.ಎಂ.ತೆಳಗಡಿ,ಕೆ.ಎಚ್.ಬಿಜಾಪೂರರವರು ಎತ್ತು ಮತ್ತು ಕೃಷಿಕನ ಸಂಬಂಧ ಕುರಿತು ಹೇಳುವ ಮಾತುಗಳನ್ನು ಗಮನಿಸಬಹುದು. 'ತನ್ನ ಬೇಸಾಯದ ಎಲ್ಲಾ ಕೆಲಸಗಳಲ್ಲಿಯೂ ಎತ್ತಿನ ಅವಶ್ಯಕತೆ ಅನಿವಾರ್ಯವಾಗಿರುವುದನ್ನು ಮನಗಂಡು, ಅದನ್ನು ಹಾಡುಗಳಲ್ಲಿ ಬಗೆ ಬಗೆಯಾಗಿ ಬಣ್ಣಿಸಿದ್ದಾನೆ. ಶಿವನ ವಾಹನವಾದ ನಂದಿಯೇ ಲೋಕದ ಹಸಿವನ್ನು ಓಂಗಿಸುವುದಕ್ಕಾಗಿ ಭುವಿಗೆ ಬಂದಿದೆಯೆಂದು ಆತ ಭಾವಿಸಿದ್ದಾನೆ. ರೈತನು ಆ ಎತ್ತನ್ನು ಭಕ್ತಿಯಿಂದ ಬಸವನೆಂದು ಕರೆಯುತ್ತಾನೆ. 'ಬಸವನ ಕಟ್ಟಿದವರಿಗೆ ಬೊಗಸೆಲಿ ಹೊನ್ನುಂಟು'ಎನ್ನುವ ರೈತನ

ಅನುಭವವಾಣಿಯಲ್ಲಿ ಎತ್ತು ಒಕ್ಕಲಿಗನ ಸೊತ್ತು, ಸತ್ವ ಎಂಬ ಅಂಶ ಅಡಕವಾಗಿರುವುದನ್ನು ಗುರುತಿಸಬಹುದು. ನಿಜಕ್ಕೂ ಎತ್ತು ಇಲ್ಲದ ರೈತನಿಗೆ ಗೊತ್ತು ಗುರಿಯೇ ಇಲ್ಲದಂತಾಗುತ್ತದೆ. ಈ ಕಾರಣಕ್ಕಾಗಿಯೇ ಮಣ್ಣಿನ ಮಕ್ಕಳಾದ ಒಕ್ಕಲಿಗರಿಗೆ ಬೇಸಾಯದ ಬೆನ್ನೆಲುಬಾದ ಬಸವಣ್ಣನ ಮೇಲೆ ಅಪಾರ ಭಕ್ತಿ, ಅನುಪಮ ಪ್ರೀತಿ. ತಂದೆ-ತಾಯಿ, ಮಡದಿ ಮಕ್ಕಳಿಗಿಂತಲು ಹೆಚ್ಚಿನ ಮಮತೆಯಿಂದ ಬಸವಣ್ಣನನ್ನು ಸಲಹುತ್ತಾರೆ.............' ಎನ್ನಲಾಗಿದೆ.

ವ್ಯವಸಾಯದಲ್ಲಿ ಹೆಚ್ಚು ಬಳಕೆಯ ಪ್ರಾಣಿ ಎತ್ತಾಗಿರುವುದರಿಂದ ಎತ್ತಿನ ದೇಹದ ಭಾಗಗಳು ಬಣ್ಣ, ಎತ್ತಿನ ಗುಣ, ಎತ್ತಿನ ಆಕಾರ,ತಳಿ, ಎತ್ತಿಗೆ ಬರುವ ರೋಗಗಳು ಮತ್ತು ಎತ್ತಿಗೆ ಬಳಸುವ ವಸ್ತುಗಳನ್ನು ಕುರಿತು ಮೊದಲು ಈ ಭಾಗದಲ್ಲಿ ಸಂಗ್ರಹಿಸಿ ಈ ಕೆಳಗಿನಂತೆ ಪಟ್ಟಿಯನ್ನು ತಯಾರಿಸಲಾಗಿದೆ.

೧. ಎತ್ತಿನ ದೇಹದ ಭಾಗಗಳು

ಮುಡ-ಎತ್ತಿನ ಬೆನ್ನಿನ ಮೇಲೆ ಇರುವ ಗುಮ್ಮಟ
ಗೊರಸು-ಕಾಲಿನ ಆಟ್ಟೆಯ ಭಾಗ
ಚಪ್ಪೆ-ಮೊಣಕಾಲಿನ ಮೇಲ್ಭಾಗದ ಪ್ರದೇಶ
ಬಾಲ-ಹಿಂಬದಿಯಲ್ಲಿರುವ ಅಂಗ
ಕೊಂಬು- ತಲೆಯ ಮೇಲ್ಭಾಗದಲ್ಲಿರುತ್ತವೆ.
ಕಣ್ಣು, ಕಿವಿ, ಬಾಯಿ,
ಹೊಳ್ಳೆ-ಮೂಗಿನ ಎರಡು ರಂದ್ರಗಳು

೨. ಎತ್ತಿನ ಬಣ್ಣ

ಬೂದ-ಬೂದು ಬಣ್ಣ ಹೊಂದಿರುತ್ತದೆ
ಕೆಂದ-ಕೆಂದ ಬಣ್ಣ ಹೊಂದಿರುತ್ತದೆ
ಹಂಡಬಂಡ- ಹಂಡಬಂಡಬಣ್ಣ ಹೊಂದಿರುತ್ತದೆ
ಗಲ್ಡ- ಕಪ್ಪು ಪಟ್ಟಿಯಿರುವ ಬಣ್ಣ ಹೊಂದಿರುತ್ತದೆ
ಬಿಳಿ- ಬಿಳಿಯ ಬಣ್ಣ ಹೊಂದಿರುತ್ತದೆ
ಮಾಸ- ಮಾಸಲು ಬಣ್ಣ (ಕಪ್ಪು ಮಿಶ್ರಿತ ಬಣ್ಣ)
ಕಾಲುಗಳು

೩ಎತ್ತಿನ ಗುಣ

ಸರ್ಪ-ಹಾವಿನಂತೆ ಸಿಟ್ಟಿನ ಗುಣವುಳ್ಳ ಎತ್ತು
ಕಲ್ಡಿ- ನಿಧಾನ ಗುಣದ ಎತ್ತು
ಹಂದಿ- ನಿಧಾನ ಗುಣದ ಎತ್ತು
ಕ್ವಾಣ- ನಿಧಾನಗುಣದ ಎತ್ತು
ಸುಬ್ಬ- ಸಂಪನ್ನ ಗುಣದ ಎತ್ತು
ಕಳ್ಳ- ಬೇಸಾಯದಲ್ಲಿ ಮಲಗುವ ಎತ್ತು
ಚಾಟು- ಚುರುಕಾಗಿ ಮುಂದೆ ಸಾಗುವ ಎತ್ತು

೪. ಎತ್ತಿನ ಆಕಾರ

ಮೋಟ-ಗಿಡ್ಡ-ಎತ್ತರವಿಲ್ಲದ ಸಣ್ಣ ಆಕಾರದ ಎತ್ತು
ಹೋರಿ- ಬೀಜ ಒಡೆಯದ ಹರೆಯದ ಎತ್ತು
ಮುದಿಯ- ವಯಸ್ಸಾದ ಎತ್ತು
ಕುಂಟ- ಕಾಲು ಕುಂಟುವ ಎತ್ತು
ಕುಲ್ಡ- ಕಣ್ಣು ಕಾಣದ ಎತ್ತು

೫. ಎತ್ತಿನ ತಳಿಗಳು

ಹಳ್ಳಿಕಾರ್(ಮೂಡ್ಲಿ ತಳಿ)ಎತ್ತು- ಕರ್ನಾಟಕದ ಹೆಮ್ಮೆಯ ತಳಿ. ಥರಪಾರ್ಕರ್- ಹೈದ್ರಾಬಾದ್ ಪ್ರಾಂತ್ಯ(ಪಾಕಿಸ್ತಾನ), ಅಮೃತಮಹಲ್-ಕರ್ನಾಟಕದ ಹೆಮ್ಮೆಯ ತಳಿ, ಡಾಂಗಿ- ಮಹಾರಾಷ್ಟದ ಡಾಂಗಿ ಎತ್ತು ಕೃಷ್ಣತೀರ- ಗುಜರಾತಿ-ರಾಜಸ್ಥಾನ ಕಾಂಕ್ರೇಜ್ ತಳಿ, ಕಾಂಕ್ರೇಜ್- ಗುಜರಾತ್ ತಳಿ, (ಹಳ್ಳಿಕಾರ ಮತ್ತು ಕಾಂಗ್ರೇಜ್ ತಳಿ ಮಿಶ್ರಣ), ಕಂಗಾಯಮ್- ತಮಿಳುನಾಡು ತಳಿ, ದೇವಣಿ ತಳಿ- ಮಹಾರಾಷ್ಟದ

ತಳಿ, ವೆಚೂರ್ ಅಥವಾ ವೆಚ್ಚೂರ್– ಕೇರಳದ ತಳಿ, ಮಲೆನಾಡಗಿಡ್ಡ – ಕರ್ನಾಟಕದ ಮಲೆನಾಡು ಪ್ರದೇಶದ ತಳಿ, ಅಂಬ್ಲಾಚರಿ– ತಮಿಳುನಾಡು ತಳಿ, ಜವಾರಿ– ಉತ್ತರ ಕರ್ನಾಟಕದ ಕೆಲವುಭಾಗಗಳಲ್ಲಿ ಬಳಕೆ, ನಿಮಾರಿ– ಮಹಾರಾಷ್ಟ್ರ– ಮಧ್ಯಪ್ರದೇಶ ತಳಿ, ಖಿಲಾರಿ– ಮಹಾರಾಷ್ಟ್ರದ ತಳಿ, ಸಿಂಧಿ– ಕರಾಚಿ(ಪಾಕಿಸ್ತಾನ) ತಳಿ, ಒಂಗೋಲ್ ತಳಿ– ಆಂಧ್ರ ಪ್ರದೇಶದ ತಳಿ, ಗಿರ್– ಗುಜರಾತಿನ ಕಾಠೇವಾಡಾದ ಗಿರ್, ಅಲ್ಲದೆ ಅಲಂಬಾಡಿ, ಬಚೌರ್, ಕೆಂಪು ಖಾಂಧಾರಿ, ಮಾಳ್ವಿ, ನಾಗೋರಿ, ಖೇರಿಗರ್, ಕೆಂಕಥ, ಸಿರಿ, ಪೊನ್ವಾರ್, ಗವಾಲೋ, ಮೇವಾಟಿ ಮುಂತಾದ ತಳಿಗಳನ್ನು ದೇಶದಾದ್ಯಂತ ಕಾಣಬಹುದಾಗಿದೆ. (ಸಂಗ್ರಹ–ಜಾನುವಾರು–ಎಂ. ನಾರಾಯಣಸ್ವಾಮಿ, ದೇಶೀ ಕೃಷಿಜ್ಞಾನ ಸಂ–೯, ಪು–೭)

೧. ಎತ್ತಿನ ರೋಗಗಳು

ಸಲ್ಡು–ನರಡು– ಗಂಟಲಿನ ರೋಗ, ಕಾಲುಬಾಯಿ– ಗೊರಸಿನಲ್ಲಿ ಹುಳು ಬರುವ ರೋಗ, ಬಾಯೋಡಿ– ಬಾಯಲ್ಲಿ ಗಾಯವಾಗುವ ರೋಗ, ಸೊಡ್ರು– ಮೂಗಿನ ರೋಗ, ಕಪ್ಪಿ– ನಾಲಿಗೆಯಲ್ಲಿ ಗಂಟಾಗುವ ರೋಗ, ಕೊಡದಿನ್ನಿ– ಕೊಂಬಿನ ಬುಡಕ್ಕೆ ಬರುವ ರೋಗ, ಚಪ್ಪೆರೋಗ– ಎತ್ತು ಒಣಕಲಾಗಿ ನರಳುವ ರೋಗ ಹಾಗೂ ಮುಂತಾದವು.

೨. ಎತ್ತಿಗೆ ಬಳಸುವ ವಸ್ತುಗಳು

ಹಲ್ಲೆ–ಗೊರಸಿಗೆ ಬಡಿಯುವ ಲಾಳಾಕೃತಿಯ ಕಬ್ಬಿಣದ ಪಟ್ಟಿ, ನಿಶಾನಿ– ಕೊಂಬಿಗೆ ಕಟ್ಟುವ ಟೇಪು, ಜೂಲು–ಮೈಗೆ ಹೊದಿಸುವ ಅಲಂಕಾರದ ಬಟ್ಟೆ, ಗಗ್ರ–ಕೊರಳಿಗೆ ಕಟ್ಟುವ ಗಂಟೆ, ದಂಡೆ– ಕೊರಳಿನ ಪಟ್ಟಿ, ಮುಗದಾಣ–ಮೂಗಿನ ದಾರ, ಕಣ್ಣಿ–ಎತ್ತನ್ನು ಹಿಡಿದುಕೊಳ್ಳಲು ಬಳಸುವ ಹಗ್ಗ, ಮಕ್ಕಾಡ–ಎತ್ತುಗಳನ್ನು ಕೆಡವಲು ಮುಖಕ್ಕೆ ಹಾಕುವ ಹಗ್ಗದ ಕಟ್ಟು, ಕೋಡು ಕಳಸ(ಗೊಣಸು)– ಕೊಂಬಿನ ತುದಿಗೆ ಹಾಕುವ ಶೃಂಗಾರದ ಹಿತ್ತಾಳೆಯ ವಸ್ತು.

ಎತ್ತಿನ ಆರೈಕೆಯ ವಿಧಾನ : ಕೃಷಿ ಬಳಕೆಯ ಎತ್ತಿನ ಆರೈಕೆಯು ರೈತರಿಗೆ ಪ್ರಮುಖವಾದ ಕೆಲಸವಾಗಿದೆ. ಕನ್ನಡ ಶಾಸ್ತ್ರ, ಕಾವ್ಯ, ಶಾಸನಗಳಲ್ಲಿ ಈ ಕುರಿತಾದ ಮಾಹಿತಿ ಅಷ್ಟಾಗಿ ದೊರೆಯುವುದಿಲ್ಲ. ಆದರೂ ಕೆಲವು ಕೃತಿಗಳಲ್ಲಿ ದೊರೆಯುವ ಆರೈಕೆಯ ಅಂಶಗಳನ್ನು ಈ ಕೆಳಗಿನಂತೆ ಗುರುತಿಸಿಕೊಂಡು ಚರ್ಚಿಸಲಾಗಿದೆ.

ಬೇಸಾಯವನ್ನು ಹೂಡಲು ಅಣಿಯಾಗುವ ರೈತನು, ಬೆಳಗಿನ ಜಾವದಲ್ಲಿ ಎದ್ದು ಎತ್ತುಗಳಿಗೆ ಮೇವು, ಹೊಟ್ಟು ಹಾಕಿ ಮೇಯಿಸಬೇಕು. ಎತ್ತುಗಳು ಬೆಳಗಿನ ವೇಳೆ ಹೊಟ್ಟೆ ತುಂಬಾ ಮೇವು ತಿಂದು ನೀರು ಕುಡಿಯುವಂತೆ ನೋಡಿಕೊಳ್ಳಬೇಕು. ಕೃಷಿಕರು ಯೋಗ್ಯ ಆಹಾರವಾದ ಹುಲ್ಲು, ನೀರು, ಮುಸರೆಯ ಜೊತೆಗೆ ಕಾಲಕಾಲಕ್ಕೆ ತಕ್ಕಂತೆ ಅಂದರೆ ಬೇಸಿಗೆ ಕಾಲದಲ್ಲಿ ಹುರುಳಿ ನುಚ್ಚು ಮತ್ತು ಹುರುಳಿಕಾಳು ನೆನೆಹಾಕಿ ನೆನೆದ ನಂತರ ರುಬ್ಬಿ ತಿನ್ನಲು ಇಡಬೇಕು. ಮಳೆಗಾಲದಲ್ಲಿ ಹತ್ತಿಕಾಳು, ಹಿಂಡಿ, ಕಣಿಕೆಗಳನ್ನು ತಿನ್ನಲು ಇಡಬೇಕು. ಹಿಂಡಿಗಳಲ್ಲಿ ಶೇಂಗಾ ಹಿಂಡಿ, ಸೂರ್ಯಪಾನದ ಹಿಂಡಿ, ಕುಸುಬೆ ಹಿಂಡಿಗಳು, ಕಣಿಕೆಗಳಲ್ಲಿ ಗೋಧಿ, ಮೆಂತೆ, ಅಕ್ಕಿತೌಡು, ಮುಸುಕಿನ ಜೋಳ ಹಾಕಿ ತಯಾರಿಸಲಾಗುತ್ತದೆ. ಇಂತಹ ಪದಾರ್ಥಗಳನ್ನು ಯಥೇಷ್ಠವಾಗಿ ಕೊಟ್ಟು, ವೇಳೆ ವೇಳೆಗೆ ಮೇವು ತಿನಿಸಿ, ನೀರನ್ನು ಕುಡಿಸುವುದರಿಂದ ಎತ್ತುಗಳು ಹೆಚ್ಚು ಬಲಶಾಲಿಗಳಾಗುತ್ತವೆ. ಹುರುಳಿ, ಹಿಂಡಿ, ಕಣಿಕೆಯ ಪ್ರಮಾಣ ಒಂದು ಬಾರಿಗೆ ಈ ಕೆಳಗಿನಂತೆ ಇರಬೇಕಾಗುತ್ತದೆ.

೧. ಹುರುಳಿಯ ನುಚ್ಚು ಒಂದು ಬಾರಿಗೆ ಸುಮಾರು ಒಂದು ಸೇರು ಒಂದು ಎತ್ತಿಗೆ ಬೇಕಾಗುತ್ತದೆ(ಜೋಡಿ ಎತ್ತಿಗೆ ಎರಡು ಸೇರು).

೨. ಹುರುಳಿಕಾಳು ಒಂದು ಬಾರಿಗೆ ಒಂದು ಜೋಡಿ ಎತ್ತಿಗೆ ಒಂದು ಸೇರು ನೆನಸಿ ರುಬ್ಬಿ ತಿನ್ನಿಸಬೇಕಾಗುತ್ತದೆ.

೩. ಹಿಂಡಿ ಒಂದು ಬಾರಿಗೆ ಸುಮಾರು ಒಂದು ಕೆ.ಜಿ ಹಿಂಡಿ, ಎರಡು ಸೇರು ಅಕ್ಕಿ ಅಥವಾ ಗೋಧಿ ಮುಸುಕಿನ ಜೋಳದ ತೌಡು ಸೇರಿಸಿ, ಉಪ್ಪು ಹಾಕಿ ಸುಮಾರು ೬ರಿಂದ ೮ ಗಂಟೆಗಳ ಕಾಲ ನೆನಸಿ ತಿನ್ನಲು ಇಡಬೇಕಾಗುತ್ತದೆ.

೪. ಕಣಿಕೆಯನ್ನು ಒಂದು ಬಾರಿಗೆ ಎರಡು ಎತ್ತುಗಳಿಗೆ ಸುಮಾರು ೨ರಿಂದ ೩ ಸೇರು ಹಾಕಿ, ಜೊತೆಗೆ ಉಪ್ಪು ಬೆರಸಿ ನೆನಸಿ ನಂತರ ತಿನ್ನಲು ಇಡಬೇಕಾಗುತ್ತದೆ.

ಹಸಿರು ಹುಲ್ಲನ್ನು ಜಮೀನಿನಲ್ಲಿ ಬೆಳೆದು, ಇಲ್ಲವೆ ಬದುಗಳಲ್ಲಿ ಬೆಳೆದಿರುವ ಹುಲ್ಲನ್ನು ಕೊಯ್ದು ತಂದು ತಿನ್ನಿಸಲಾಗುತ್ತದೆ. ಇಂತಹ ಹುಲ್ಲುಗಳಲ್ಲಿ ಕೌತಲೆ ಹುಲ್ಲು ಒಳ್ಳೆಯ ಆಹಾರವಾಗಿದೆ. ತಿಂಗಳುಗಟ್ಟಲೇ ತಿನ್ನಿಸಿದರೆ ಎತ್ತುಗಳಿಗೆ ಒಳ್ಳೆಯ ತ್ರಾಣ ಬಂದು ತುಂಬಾ ಉಲ್ಲಾಸದಿಂದ ಕಂಗೊಳಿಸುತ್ತವೆ.

ನಯಸೇನನ ಧರ್ಮಾಮೃತದಲ್ಲಿ ಎತ್ತುಗಳ ಆರೈಕೆಯನ್ನು ಕುರಿತು ಹೀಗೆ ಹೇಳಲಾಗಿದೆ. "ಪಗಲೆಲ್ಲ ತಿರಿ ತಂದು .... ಕಬ್ಬುಗಳಂ ಜೋಳವನಕ್ಕಿಯಂ ಕಡಲೆಯಂ ತೌಡಂ ಮನಂ ಪರ್ಚೆ ಪಿಂಡಿಗಳಂ ಪುಲ್ಗಳನಿಕ್ಕೆ ಮೇದುತಣಿವಿಂ............"[೫] ಹಗಲೆಲ್ಲ ಕಬ್ಬಿನ ಸೋಗೆಯನ್ನು ತಿಂದು ಬಂದ ಎತ್ತುಗಳಿಗೆ ಜೋಳ, ಅಕ್ಕಿ, ಕಡಲೆಯ ತೌಡುಗಳನ್ನು ಮತ್ತು ಹಿಂಡಿಯನ್ನು ಮಿಶ್ರಣಮಾಡಿ ತಿನ್ನಲು ಹಾಕಬೇಕು ಮತ್ತು ಒಳ್ಳೆಯ ಹುಲ್ಲನ್ನು ಮೇಯಿಸಬೇಕು ಎಂದು ರೈತರಿಗೆ ಆರೈಕೆಯ ವಿಧಾನವನ್ನು ತಿಳಿಸಲಾಗಿದೆ. ಕೀಲಾರದ ಭೀಮಣ್ಣನ ವಚನವೊಂದರಲ್ಲಿ ಎತ್ತಿಗೆ ತಿನ್ನಿಸುವ ಹತ್ತಿಯ ಕಾಳು ಮತ್ತು ಮೇವಿನ ಉಲ್ಲೇಖ ಕಾಣಸಿಗುತ್ತದೆ. "ಇಮ್ಮನ ಹತ್ತಿಯ ಕಾಳ ಸುರಿದು ಪಶು ಮೇವುತ್ತಿರಲಾಗಿ ಒಮ್ಮನವ ಮೇದು ಇಮ್ಮನ ...."[೬] ನಿಷ್ಠೆಯಿಂದ ಕಾಯಕ ಮಾಡುವ ರೈತ ಹೆಚ್ಚು ಶ್ರದ್ಧೆಯಿಂದ ಎತ್ತು, ಪಶುಗಳ ಆರೈಕೆಯನ್ನು ಹತ್ತಿಯ ಕಾಳು, ಮೇವನ್ನು ತಿನ್ನಿಸುವುದರ ಮೂಲಕ ಮಾಡಬೇಕು ಎನ್ನುತ್ತಾನೆ.

ಜನಪದ ಕಾವ್ಯಗಳಲ್ಲಂತೂ ಎತ್ತುಗಳ ಆರೈಕೆಯನ್ನು ಕುರಿತು ಅನೇಕ ತ್ರಿಪದಿಗಳಲ್ಲಿ ಹಾಡು ಕಟ್ಟಿ ಹಾಡಲಾಗಿದೆ. ಹಂತಿ ತಿರುಗುವ ಎತ್ತಿನ(ಬಸವಣ್ಣ) ಮೈಮೇಲಿನ ಸುಂಕವನ್ನು ಒಕ್ಕಲು ಮನೆತನದ ತಾಯಿ ತನ್ನ ಸೀರೆಯ ಸೆರಗಿನಿಂದ ಜಾಡಿಸುತ್ತಾಳೆ ಎಂಬ ತ್ರಿಪದಿ, ತನ್ನ ಮಗನ ಎತ್ತು ಎಂಬ ಅಭಿಮಾನ ಒಂದೆಡೆಯಾದರೆ, ದುಡಿಯುವ ಎತ್ತು ಕೂಡ ಮನೆಯ ಮಗನೆಂದೆ ಅವಳ ನಂಬಿಕೆಯಾಗಿದೆ. ಇಂತಹ ಆರೈಕೆ ತುಂಬಾ ವಿಶೇಷವಾಗಿರುವಂತದ್ದು.

ಹಂತಿಯ ಹೊಡೆದೆತ್ತು ಹಂತೇಲಿ ಬಂದಾರ

ಸುಂಕ ಜಾಡಿಸದೆ ಸೆರಿಗೀಲೆ । ಕಂದನಿಗೆ

ಹಂತಿಯ ಎತ್ತು ಹದಿನೆಂಟು॥

(ಕನ್ನಡ ಜಾನಪದ ಗೀತೆಗಳು –ಬಿ.ಎಸ್. ಗದ್ದಗಿಮಠ, ಪು–೩೪)

ದುಡಿಯುವ ಎತ್ತುಗಳಿಗೆ ಹಿಂಡಿ, ಹೊಟ್ಟು, ಹಸಿ ಮೇವು ಹಾಕಿ ಮೇಯಿಸುತ್ತಾನೆ. ತಿಂದು ತಿಂದು ಮೈ ಕೈ ತುಂಬಿಕೊಂಡು ಮಾಟವಾದ ತನ್ನ ಎತ್ತನ್ನು ನೋಡಿ ಅವುಗಳ ಚೆಲ್ಲಾಟವನ್ನು ಕಂಡು

ಆನಂದ ಪಡುತ್ತಾನೆ. ಅನ್ಯರಿಗೂ ಅಭಿಮಾನದಿಂದ ತೋರಿಸುತ್ತಾನೆ. ಅಲ್ಲದೇ ಬೇರೆಯವರ ಎತ್ತುಗಳನ್ನು ಕಂಡು ಅಪಾರ ಗೌರವದಿಂದ ಮಾತನಾಡುವ ಅಂಶಗಳನ್ನು ಈ ಕೇಳಗಿನ ತ್ರಿಪದಿಗಳಲ್ಲಿ ಕಾಣಬಹುದಾಗಿದೆ.

ಹಾದಿಯ ಹೊಲನೋಡ ಗೋಧಿಯ ತೆನಿನೋಡ
ಹಾದು ಹೊಗವನ ನಗಿನೋಡ ।ಎಲೆ ಹುಡುಗ
ಹೋರಿ ಮೇಸೀನಿ ಇಣಿನೋಡ ॥

ಹುಂಡೆಕಾರನ ಎತ್ತು ಹಿಂಡಿಯ ಮೇದಾವು
ಗುಂಡದ ನೀರ ಕುಡಿದಾವು । ಆ ಎತ್ತು
ಕಂಡಲ್ಲಿ ಡರಿಯ ಒಗದಾವು ॥

ಕೃಷಿಕರು ಸಮಯಕ್ಕೆ ಸರಿಯಾಗಿ ಮೇವು, ಹೊಟ್ಟು, ತೌಡು, ಹತ್ತಿಕಾಳು, ಕಣಕ, ಹಿಂಡಿ, ಹಸಿರುಹುಲ್ಲು ತಿನ್ನಿಸಬೇಕು. ನೀರು, ಮುಸುರೆ, ಕಲಗಚ್ಚು ಕುಡಿಸಿ ಆರೈಕೆ ಮಾಡಿದರೆ ಎತ್ತುಗಳು ಬಲಶಾಲಿಗಳಾಗಿ ಒಕ್ಕಲುತನದ ಕೆಲಸ ಕಾರ್ಯಗಳಿಗೆ ಸಜ್ಜಾಗುತ್ತವೆ. ಅಲ್ಲದೆ ರೈತನ ಮನೆಯಲ್ಲಿ ಹರುಷದ ಹೊನಲು ಉಕ್ಕಲು ಸಹಾಯವಾಗುತ್ತದೆ.

ಕೊಟ್ಟಿಗೆ : ಎತ್ತುಗಳನ್ನು ಕಟ್ಟುವ ಮನೆಯೂ ನಿರ್ಮಲ ಹಾಗೂ ಸ್ವಚ್ಛತೆಯಿಂದ ಕೂಡಿರಬೇಕು. ಒಳ್ಳೆಯ ಗಾಳಿ, ಬೆಳಕು ಬರುವಂತಿರಬೇಕು. ಅತಿಯಾದ ಗಾಳಿ ಹಾಗೂ ಉಷ್ಣತೆ ಇರುವ ಜಾಗ ಒಳ್ಳೆಯದಲ್ಲ. ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಕೊಟ್ಟಿಗೆಯ ಸ್ವಚ್ಛತೆಯನ್ನು ಕುರಿತು ಹೀಗೆ ಹೇಳಲಾಗಿದೆ. “............ ಎತ್ತುಗಳ ಕಾಲಿನಲ್ಲಿ ಮತ್ತು ಅವುಗಳ ಮಲಗುವ ಸ್ಥಳದಲ್ಲಿ ಕೆಸರು, ಹುದಲು, ರಾಡಿ, ನೀರು, ರೊಜ್ಜು ಆಗದ ಹಾಗೆ ಆಗಾಗ್ಗೆ ಅವುಗಳ ಸೆಗಣಿಯನ್ನು ಮೂತ್ರವನ್ನು ಬಳಿದು ಹಸನಮಾಡುತ್ತಿರಬೇಕು”[೭] ಎತ್ತುಗಳ ಕಾಲಿನ ಹತ್ತಿರ ಕೆಸರು, ರಾಡಿಯಾಗದಂತೆ ಮೇಲಿಂದ ಮೇಲೆ ಕೊಟ್ಟಿಗೆಯನ್ನು ಸ್ವಚ್ಛಗೊಳಿಸುವ ಕೆಲಸವನ್ನು ರೈತರು ನಿರ್ವಹಿಸಬೇಕು. ಹೀಗೆ ಮಾಡುವುದರಿಂದ ಅನೇಕ ರೋಗಗಳಿಂದ ಪಶುಗಳನ್ನು ಕಾಪಾಡಿದಂತಾಗುತ್ತದೆ. ಅಲ್ಲದೆ ಒಳ್ಳೆಯ ರೀತಿಯ ಅರೈಕೆಯು ಎತ್ತುಗಳಿಗೆ ಅವಶ್ಯಕವಾದದ್ದು ಎನ್ನಲಾಗಿದೆ. ದನಕರು ಎಮ್ಮೆ ಮತ್ತು ಎತ್ತುಗಳನ್ನು ಕಟ್ಟಲು ನಿರ್ಮಾಣ ಮಾಡಿದ ಕೊಟ್ಟಿಗೆಯಲ್ಲಿ ಎತ್ತುಗಳಿಗಾಗಿಯೇ ಪ್ರತ್ಯೇಕ ಕೊಟ್ಟಿಗೆ ಜಾಗ ಗೊತ್ತು ಮಾಡಿ. ಸರಿಯಾದ ರೀತಿಯ ಗಾಳಿ, ಬೆಳಕು ಬಂದು, ಸಮಶೀತೋಷ್ಣದಿಂದ ಕೂಡಿರುವ ಜಾಗದಲ್ಲಿ ಸುಮಾರು ೧೦ಅಡಿ ಅಗಲ ೧೦ಅಡಿ ಉದ್ದವಿರುವಂತೆ ಮಾಡಿ, ಉದ್ದದಲ್ಲಿ ೩ ಅಡಿಗೆ ಮೇವು ತಿನ್ನುವ ಗ್ವಾದನಿ ಅಥವಾ ಮರಗಿ(ದನಗಳಿಗೆ ಮೇವನ್ನು ಹಾಕಲು ಮರದಿಂದ ಮಾಡಿದ ದೊಡ್ಡ ಕಂದಕವಿರುವ ತುಂಡು) ಇಡಬೇಕು. ಎತ್ತು ಕಟ್ಟುವ ನೆಲ ಮುಂಭಾಗ ಸ್ವಲ್ಪ ಎತ್ತರವಿರಬೇಕು. ಹೀಗೆ ಮಾಡುವುದರಿಂದ ಮುಂಗಾಲಿಗೆ ಗೋತೆ, ನೀರಿನ ರಾಡಿ ಬರುವುದಿಲ್ಲ. ಕೆಂಪುಮಸಾರಿ, ಇಲ್ಲವೆ ಕಲ್ಲುಗೊಚ್ಚು ಮಣ್ಣನ್ನು ಹಾಕಿ ನೆಲವನ್ನು ನೀರುಹಾಕಿ ಮೆದುಮಾಡಿ ತಟ್ಟುಮಣಿಯಿಂದ ತಟ್ಟಬೇಕು. ಕಲ್ಲಿನ ಹರಳು ಎತ್ತಿಗೆ ಮಲಗಿದಾಗ ಒತ್ತದಂತೆ ಆರಿಸಬೇಕು. ಇಲ್ಲವಾದರೆ ಕಲ್ಲಿನ ಹಾಸುಬಂಡೆಯನ್ನು ಸ್ವಲ್ಪ ಇಳಿಜಾರು ಇರುವಂತೆ ಹೊಂದಿಸಿ ಕಲ್ಲುಕಲ್ಲಿನ ಮಧ್ಯೆ ಹೆಚ್ಚು ಸಂದು ಇಲ್ಲದಂತೆ ಜೋಡಿಸಬೇಕು. ಹೀಗೆ ಮಾಡುವುದರಿಂದ ಗೋತೆ, ಚೆಲ್ಲಿದ ನೀರು ಓಂದೆ ಹರಿದು ಹೊಗಿ ಗುಂಡಿಯಲ್ಲಿ ಸೇರುತ್ತದೆ. ಕೊಟ್ಟಿಗೆ ರಾಡಿ, ಕೆಸರು ಆಗುವುದಿಲ್ಲ.

ಎತ್ತು ಮಲಗುವ ಜಾಗ ಸೆಗಣಿ ಗೋತೆಯಿಂದ ರಾಡಿಯಾಗದಂತೆ ನೋಡಿಕೊಳ್ಳಬೇಕು ಮತ್ತು ಮಲಗುವ ಜಾಗಕ್ಕೆ ಹುಲ್ಲಿನ ಪುಡಿ ಇಲ್ಲವೆ ಒಲೆಯ ಬೂದಿಯನ್ನು ಹಾಕುತ್ತಾ ಇರಬೇಕು. ಹೀಗೆ ಮಾಡುವುದರಿಂದ ಎತ್ತಿಗೆ ಸಮಶೀತೋಷ್ಣದ ಪರಿಸರ ನಿರ್ಮಿಸಿದಂತಾಗುತ್ತದೆ. ಒಟ್ಟಾರೆಯಾಗಿ ಜಾಗ್ರತೆವಹಿಸಿ ಕೊಟ್ಟಿಗೆಯ ನಿರ್ಮಾಣವನ್ನು ಮಾಡಬೇಕಾಗುತ್ತದೆ.

ಎತ್ತುಗಳಿಗೆ ಕೈಯಾರೈಕೆ ತುಂಬಾ ಮಹತ್ವದ್ದು. ಬೇಸಾಯದಲ್ಲಿ ದುಡಿದು ಸುಸ್ತಾಗಿ ಬಂದ ಎತ್ತುಗಳಿಗೆ ಹೀರೆಕಾಯಿ ಸೊಟ್ಟೆಯಿಂದ ಚೆನ್ನಾಗಿ ಮೈತಿಕ್ಕಿ ಒರಸಿ ಆಮೇಲೆ ಕೋರಿಯಿಂದ ತಿಕ್ಕಿ ಒರೆಸಬೇಕು. ಹೀರೆಕಾಯಿಯನ್ನು ಬಲಿತ ನಂತರ ಒಣಗಿಸಿ ಅಟ್ಟದ ಮೇಲೆ ರೈತರು ಮನೆಯಲ್ಲಿ ಇವುಗಳನ್ನು ಕಾಯ್ದಿರಿಸಿರುತ್ತಾರೆ. ಅಲ್ಲದೆ ಭತ್ತದ ಒಣ ಹುಲ್ಲಿನಿಂದಲೂ, ಕತ್ತದಿಂದಲೂ ಮೈತಿಕ್ಕಿ ಒರೆಸುತ್ತಾರೆ. ಆಮೇಲೆ ಚೆನ್ನಾಗಿ ಮೈ, ಕಾಲುಗಳನ್ನು ತುಂಬಾ ಜಾಗೃತೆಯಿಂದ ಬೇಸರವಿಲ್ಲದಂತೆ ಒರೆಸಿ ತಿಕ್ಕಿದರೆ ಮೈಯ ನರನಾಡಿಗಳು ಸಡಿಲವಾಗಿ ಸಮಧಾತು ಬರುತ್ತದೆ. ಎತ್ತು ಎಷ್ಟೇ ದಣಿದರೂ ಅವುಗಳ ಶ್ರಮವು ಪರಿಹಾರವಾಗಿ ವಿಶ್ರಾಂತಿ ಪಡೆಯುತ್ತವೆ. ಈ ರೀತಿಯ ಆರೈಕೆಯಿಂದ ಎತ್ತುಗಳ ಆರೋಗ್ಯವು ವೃದ್ಧಿಯಾಗುತ್ತದೆ. ಹುಲ್ಲು, ನೀರುಗಳಿಗಿಂತಲೂ ಹೆಚ್ಚು ಪ್ರಯೋಜನಕಾರಿ ಕೈಯಾರೈಕೆಯಾಗಿದೆ. ಎತ್ತುಗಳಿಗೆ ದಿನನಿತ್ಯ ಸ್ವಲ್ಪ ಸ್ವಲ್ಪ ಅನ್ನವನ್ನು, ಹುಳಿ ನೀರನ್ನು, ಕಚ್ಚುನೀರನ್ನು ತಿನಿಸುತ್ತಿರಬೇಕು. ದಿನನಿತ್ಯ ತಪ್ಪದೆ ಮೈಮೇಲೆ ಕೈಯಾಡಿಸಬೇಕು.

ನಯಸೇನನ ಧರ್ಮಾಮೃತದಲ್ಲಿ ಕೊಟ್ಟಿಗೆಯಲ್ಲಿ ಸಾಲಾಗಿ ದಾವಣಿಯಿಂದ ಎತ್ತುಗಳನ್ನು ಕಟ್ಟುವ ಅಂಶ ಕಂಡುಬರುತ್ತದೆ. "........... ಕೊಟ್ಟಿಗೆಯೆತ್ತಿನ ಪಟ್ಟಿಗಳೊಳಂ ...."[೮] ಕೊಟ್ಟಿಗೆಯೆತ್ತುಗಳನ್ನು ಸಾಲಾಗಿ ದಾವಣಿಯಲ್ಲಿ ದೊಡ್ಡೊಕ್ಕಲುತನ ಹೊಂದಿರುವ ರೈತರು ಕಟ್ಟುತ್ತಿದ್ದರು ಎನಿಸುತ್ತದೆ. ಹೆಚ್ಚು ಎತ್ತುಗಳ ಜೋಡಿ ಇದ್ದಾಗ ಅವುಗಳ ಆರೈಕೆಯನ್ನು ತುಂಬಾ ಮುಂಜಾಗ್ರತೆಯಿಂದ ಮಾಡಬೇಕಾಗುತ್ತದೆ. ಗುಪ್ತ ಮಂಚಣ್ಣನ ವಚನವೊಂದರಲ್ಲಿ ಹೋರಿಗಳನ್ನು ಕಟ್ಟದೆ ಬಿಟ್ಟಿರುವ ಅಂಶ ತಿಳಿದುಬರುತ್ತದೆ. "ಎತ್ತು ಹಸುವ ಹಾಯಲಾಗಿ ತೆಕ್ಕೆಯ ನಿಕ್ಕಿದ ಕಣ್ಣಿಯಲ್ಲಿ ತೆಕ್ಕೆಗೆ ನಡೆಯದ ಹಸು, ಕಟ್ಟುಗೊಳ್ಳದ ಹೋರಿ ...."[೯] ದಾವಣಿಯ ತೆಕ್ಕೆಯಲ್ಲಿ ಎತ್ತುಗಳ ಜೊತೆಗೆ ಹಸುಗಳನ್ನು ಕಟ್ಟಬಾರದು ಏಕೆಂದರೆ ಹಸುಗಳಿಗೆ ಎತ್ತುಗಳು ಹಾಯುತ್ತವೆ. ಅಲ್ಲದೆ ಹೋರಿಗಳನ್ನು ಕಟ್ಟದೆ ಬಿಟ್ಟಿರುವ ಅಂಶವನ್ನು ಕುರಿತು ಹೇಳಿರುವುದು ಕಂಡುಬರುತ್ತದೆ. ಇನ್ನೊಂದು ವಚನದಲ್ಲಿ ಕೊಟ್ಟಿಗೆಯನ್ನು ಕುರಿತು ಹೀಗೆ ಹೇಳಲಾಗಿದೆ. "........... ಎತ್ತ ಕಟ್ಟುವುದಿಲ್ಲ, ಎಮ್ಮೆಯ ಕರು ಸತ್ತಲ್ಲದೆ ಕೊಟ್ಟಿಗೆ ಹಾಳಾಗದಯ್ಯ ...."[೧೦] ಎತ್ತುಗಳ ಜೊತೆಗೆ ಎಮ್ಮೆಗಳನ್ನು ಕೊಟ್ಟಿಗೆಯಲ್ಲಿ ಕಟ್ಟಬಾರದು. ಏಕೆಂದರೆ ಎಮ್ಮೆಗಳು ಕೊಟ್ಟಿಗೆಯನ್ನು ಹೆಚ್ಚು ರಾಡಿ ಮಾಡುತ್ತವೆ. ಒಟ್ಟಾರೆಯಾಗಿ ದಾವಣಿಯಲ್ಲಿ ಎತ್ತು ಕಟ್ಟುವ ಮತ್ತು ಹಸು, ಎಮ್ಮೆಯ ಜೊತೆಯಲ್ಲಿ ಎತ್ತನ್ನು ಕಟ್ಟಬಾರದೆಂಬ ಎಚ್ಚರಿಕೆಯ ಮಾತುಗಳನ್ನು ಈ ವಚನಕಾರರಲ್ಲಿ ಕಾಣಬಹುದಾಗಿದೆ.

ಎತ್ತುಗಳಿಗೆ ಕೋಡಕಳಸ ಹಾಕುವುದರ ಹಿಂದೆ ರೈತರ ಸೌಂದರ್ಯದ ಕಲ್ಪನೆ ಇದೆ. ಎತ್ತುಗಳ ಕೊಂಬುಗಳನ್ನು ಇಷ್ಟಬಂದ ಆಕಾರಕ್ಕೆ ಬಗ್ಗಿಸಿಕೊಳ್ಳಲು ಹರಿತವಾದ ಮಚ್ಚು ಮತ್ತು ಇತರೆ ಆಯುಧಗಳಿಂದ ಸವರಲಾಗುತ್ತದೆ. ಹೀಗೆ ಸವರಿದರೆ ಎತ್ತು ಅಂದವಾಗಿ ಕಾಣುತ್ತದೆ. ಕೊಂಬು ಸವರಿದಾಗ ಕೊಂಬಿನ ತುದಿ ಚೂಪಾಗುವುದು ಸಹಜ. ಜಾನುವಾರುಗಳಿಗೆ ಸಿಟ್ಟು ಬಂದಾಗ ಮನುಷ್ಯರನ್ನು ಹಾಯ್ದುರೂ ತೀವ್ರತರದ ಗಾಯಗಳಿಂದ ತಪ್ಪಿಸಿಕೊಳ್ಳಲು, ಎತ್ತುಗಳ ಸೌಂದರ್ಯ ಹೆಚ್ಚಿಸಿಕೊಳ್ಳಲು ಕೋಡು ಕಳಸಗಳನ್ನು

ಹಾಕಲಾಗುತ್ತದೆ. ಇವುಗಳನ್ನು ಕೊಂಬು ಕುಪ್ಪಿಗಳು, ಕೊಂಬು ಕಳಸ, ಕೋಡಣಸು ಎಂದು ಕರೆಯಲಾಗುತ್ತದೆ. ದೇಶೀ ಕೃಷಿಜ್ಞಾನ ಸಂಪುಟ-೯ರಲ್ಲಿ 'ಜಾನುವಾರು' ಎಂಬ ಕೃತಿಯಲ್ಲಿ ಹೀಗೆ ಹೇಳಲಾಗಿದೆ. "ಕೋಡು ಕಳಸದ ತುದಿ ಮೊನಚಾಗಿರುವುದಿಲ್ಲ. ಅದರ ತುದಿಯು ದಪ್ಪನಾಗಿ ದುಂಡಾಗಿರುತ್ತದೆಯಾದ್ದರಿಂದ ಜಾನುವಾರುಗಳು ಆಯ್ದರೂ ತೀವ್ರತರಹದ ಗಾಯವಾಗುವುದಿಲ್ಲ. ರೈತರು ತಮ್ಮ ಅನುಕೂಲಕ್ಕೆ ತಕ್ಕಂತೆ ಕಂಚಿನ ಇಲ್ಲವೆ ಬೆಳ್ಳಿಯ ಕೋಡು ಕಳಸಗಳನ್ನು ಮಾಡಿಸಿಕೊಳ್ಳುತ್ತಾರೆ. ಸಂಕ್ರಾಂತಿ ಹಬ್ಬದಂತಹ ಸಂದರ್ಭಗಳಲ್ಲಿ ದನಗಳ ಮೈತೊಳೆದು ಕೋಡುಕಳಸ ಹಾಕಿ ದನಗಳನ್ನು ಸಿಂಗರಿಸುತ್ತಾರೆ. ಉಳುಮೆಯ ಕಾಲದಲ್ಲಿ ದನಗಳು ಶಕ್ತಿ ಮೀರಿ ದುಡಿಯುವಾಗಲೂ ಕೋಡು ಕಳಸ ಹಾಕಿ ಅವುಗಳಿಗೆ ಗೆಜ್ಜೆ ಕಟ್ಟಿ ತಲೆಯಾಡಿಸುವಾಗ ಹೊರಡುವ ಗೆಜ್ಜೆನಾದದಿಂದ ದನಗಳು ಉಲ್ಲಾಸಿತವಾಗುತ್ತವೆ". ಎನ್ನಲಾಗಿದೆ ರೈತನು ದುಡಿಮೆಯ ಬಳಲಿಕೆಯಲ್ಲಿ ಕೋಡಕಳಸಕ್ಕೆ ಕಟ್ಟಿರುವ ಗೆಜ್ಜೆಯ ಸಂಗೀತದ ನಾದ ಅವನನ್ನು ಮೈಮರೆಸುತ್ತದೆ. ಅಲ್ಲದೆ ಹಾಯಲು ಮುಂದೆ ಬಂದಾಗ ಗೆಜ್ಜೆಯ ಶಬ್ದದಿಂದ ತಿವಿತದ ಮುನ್ಸೂಚನೆಯನ್ನು ಕಂಡುಕೊಳ್ಳಬಹುದು. ಅಲ್ಲದೆ ಬೆಲ್ಲದ ಪಾಕ ಮಾಡಿ ಅದರೊಳಗೆ ಒಂದಿಷ್ಟು ಕೂದಲು ಸೇರಿಸಿ ಕಳಸದೊಳಗೆ ಅದನ್ನು ಹಾಕಿ ಕೊಂಬಿನ ಮೇಲೆ ಕೂರಿಸಲಾಗುತ್ತದೆ. ಇದರಿಂದ ಕೊಂಬು ಕುಪ್ಪಿಯು ಅಲುಗಾಡದೆ ಭದ್ರವಾಗುತ್ತದೆ. ಕೋಡಕಳಸ, ಗೆಜ್ಜೆ, ಟೇಪು, ಜೂಲ, ಕೊರಳಿಗೆ ಕಟ್ಟಿದ ದಂಡೆ ಮುಂತಾದವುಗಳಿಂದ ಎತ್ತುಗಳನ್ನು ಹಬ್ಬಹರಿದಿನಗಳಲ್ಲಿ ಶೃಂಗರಿಸುತ್ತಾರೆ. ಎತ್ತಿನ ಕೊಂಬಿನ ಆರೈಕೆ ಮಾಡುವುದರಿಂದ ಕೊಂಬಿನ ಕಾಯಿಲೆಗಳು ಬರುವುದಿಲ್ಲ. ಅಲ್ಲದೆ ಚೂಪಾದ ಕೊಂಬಿನಿಂದ ಹಾಯದ ಹಾಗೆ ರಕ್ಷಣೆ, ಬೇರೆ ಎತ್ತುಗಳಿಗೆ ಹಾಯದಂತೆ, ಮಣ್ಣು ಹಾಯದಂತೆ ರಕ್ಷಣೆ ಪಡೆಯಲು ಕೊಂಬು ಕಳಸ ತುಂಬಾ ಉಪಕಾರಿಯಾಗಿದೆ.

ಎತ್ತಿಗೆ ಬರುವ ರೋಗ-ರುಜನೆಗಳ ಆರೈಕೆ : ಬೇಸಾಯದ ಬೆನ್ನೆಲುಬಾದ ಜಾನುವಾರಗಳ ಉಪಚಾರವು ಪ್ರಮುಖವಾಗಿರುವಂತದ್ದು. ವ್ಯವಸಾಯವೇ ಪ್ರಮುಖ ಕಸುಬಾಗಿರುವ ಭಾರತ ದೇಶದಲ್ಲಿ ಪಶುಗಳ ಆರೈಕೆ, ಪಶುವೈದ್ಯ ತುಂಬಾ ಮಹತ್ವಪೂರ್ಣವಾದುದ್ದು. ಪಶುವೈದ್ಯದ ಚಿಕಿತ್ಸಾಲಯಗಳು ಹೇರಳವಾಗಿದ್ದರೂ ಜಾನುವಾರುಗಳಿಗೆ ದೇಶೀ ಪಶು ಚಿಕಿತ್ಸಾವಿಧಾನಗಳು ಹೆಚ್ಚು ಬಳಕೆಯಲ್ಲಿವೆ. ಇದಕ್ಕೆ ಕಾರಣ ನಾಟಿವೈದ್ಯೋಪಚಾರ ಹೆಚ್ಚು ಪರಿಣಾಮಕಾರಿ ಮತ್ತು ಅಡ್ಡ ಪರಿಣಾಮಗಳು ಕಡಿಮೆ ಅಲ್ಲದೆ ಕಡಿಮೆ ಖರ್ಚಿನದು. ಹಾಗೂ ಇಂಗ್ಲೀಷ ಔಷಧಿಯನ್ನು ಗೊಮಾತೆಗೆ ಕೊಡಿಸಬಾರದೆಂಬ ನಂಬಿಕೆಯು ಕಾರಣವಾಗಿರಬೇಕು. ರೈತರು ಕೃಷಿಯ ಉಳುಮೆಗೆ ಬಳಸುವ ಎತ್ತುಗಳು. ಹೈನುಗಾರಿಕೆಗಾಗಿ ಸಾಕುತ್ತಿದ್ದ ಎಮ್ಮೆ, ಹಸು, ಆಡು, ಕುರಿ ಮುಂತಾದ ಜಾನುವಾರುಗಳಿಗೆ ಅನೇಕ ಕಾಯಿಲೆಗಳು, ಅಂದರೆ ಅಜೀರ್ಣತೆ, ಭೇದಿ, ಜ್ವರ, ಕೆಮ್ಮು, ಕೆಚ್ಚಲುಬಾವು, ಕಾಲುಬಾಯಿ ಜ್ವರ, ಚಪ್ಪೆರೋಗ, ಹೊಟ್ಟೆಉಬ್ಬರ, ಚರ್ಮರೋಗ ಮುಂತಾದವುಗಳಿಗೆ ದೇಶೀ ಪಶು ಚಿಕಿತ್ಸಾ ವಿಧಾನ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಜಾನುವಾರುಗಳನ್ನು ಸಾಕಿರುವ ಪ್ರತಿಯೊಂದು ರೈತರ ಮನೆಯಲ್ಲಿಯೂ ಮನೆ ವೈದ್ಯರಿರುವದು ಸಾಮಾನ್ಯ ಸಂಗತಿಯಾಗಿದೆ. ಆದರೂ ಪ್ರಾಣಿಗಳ ಬಗ್ಗೆ ದಯೆ, ಕರುಣೆ ಹೊಂದಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಾ ನಾಟಿ ಔಷಧಿಕೊಡುವ ಕಾಯಕವನ್ನು ರೂಢಿಸಿ ಕೊಂಡಿರುವ ಅನೇಕ ನಾಟಿ ವೈದ್ಯರು ನಮ್ಮ ಸಂಸ್ಕೃತಿಯ ಒಳಗೆ ಕಂಡು ಬರುತ್ತಾರೆ. ಕೆಲವು ಪ್ರದೇಶಗಳಲ್ಲಿ ಪ್ರಸಿದ್ಧರಾಗಿ ಜನಮನ್ನಣೆ-ಗೌರವಗಳಿಗೆ ಪಾತ್ರರಾಗಿ ವಿಶೇಷ ವ್ಯಕ್ತಿತ್ವದ ವ್ಯಕ್ತಿಗಳು ಅಪರೂಪಕ್ಕೆ ಕಾಣಸಿಗುತ್ತಾರೆ. ನಾಟಿ ಪಶು ಚಿಕಿತ್ಸಾ ವಿಧಾನವನ್ನು ಸಂಗ್ರಹಿಸಿ ದಾಖಲಿಸುವ ಒಂದು ಪ್ರಾತಿನಿಧಿಕ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಪ್ರಾದೇಶಿಕವಾಗಿ ಅನೇಕ ಪ್ರದೇಶಗಳಲ್ಲಿ ನಾಟಿ ವೈದ್ಯರು ಸಿಗುತ್ತಾರೆ. ಅವರುಗಳಲ್ಲಿ ಮಲೆನಾಡಿನ ಪ್ರಾಂತ್ಯದವರಿರಬಹುದು, ಬಯಲು ಸೀಮೆಯ ಜನರಿರಬಹುದು, ಉತ್ತರ ಕರ್ನಾಟಕ ಭಾಗದವರಿರಬಹುದು ಆದರೆ ಕಾಯಿಲೆಗಳನ್ನು ಗುರುತಿಸಿ ಔಷಧಿ ನೀಡುವ ಕ್ರಮಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿಯ ವಿಧಾನವನ್ನು ಅನುಸರಿಸಲಾಗುತ್ತದೆ. ಆಯಾ ಪ್ರದೇಶದಲ್ಲಿ ದೊರೆಯುವ ಗಿಡಮೂಲಿಕೆಗಳನ್ನು ಉಪಯೋಗಿಸಿ ಕೊಂಡು ಜಾನುವಾರುಗಳಿಗೆ ದೇಸಿ ಚಿಕಿತ್ಸಾ ಕ್ರಮದಲ್ಲಿ ಔಷಧಿಯನ್ನು ನೀಡಲಾಗುತ್ತದೆ. ಅಂಥವರುಗಳಲ್ಲಿ ಕೆಲವರನ್ನು ಮಾತ್ರ ಗುರುತಿಸಿ ಈ ಭಾಗದಲ್ಲಿ ಸಂಗ್ರಹಿಸಲಾಗಿದೆ.

ದೇಶಿ ಕೃಷಿಜ್ಞಾನ ಸಂಪುಟ ೯ರ 'ಜಾನುವಾರು' ಕೃತಿಯಲ್ಲಿ ಎಂ.ನಾರಾಯಣಸ್ವಾಮಿಯವರು ಸಂಗ್ರಹಿಸಿದ ನಾಟಿ ವೈದ್ಯರ ವೈದ್ಯಪದ್ಧತಿಯನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. "ಬ್ಯಾಡಗಿ ತಾಲೂಕಿನ ಮಹಾದೇವಪ್ಪ ಕರಡೇರ ಅವರು ಈ ಕೆಳಕಂಡ ನಾಟಿ ಚಿಕಿತ್ಸೆಗಳನ್ನು ಮಾಡುತ್ತಾರೆ.

ಲದ್ದಿ ಬೇನೆ : ಬ್ಯಾಡಗಿ ತಾಲ್ಲೂಕಿನ ಮಹಾದೇವಪ್ಪ ಕರಡೇರ ತಮ್ಮ ಜಾನುವಾರುಗಳಿಗೆ ಲದ್ದಿ ಬೇನೆ ಆಗಿ ಸಗಣಿಯು ಕುದುರೆ ಲದ್ದಿಯಂತೆ ಗಟ್ಟಿ ಉಂಡೆಗಳಾಗಿ ಸಗಣಿ ಹಾಕಲು ಕಷ್ಟವಾದಾಗ, ಇದರ ಲಕ್ಷಣಗಳಾದ ಮೇವು ತಿನ್ನದಿರುವುದು, ನೀರು ಕುಡಿಯದೆ ಇರುವುದು ಮತ್ತು ಹೊಟ್ಟೆ ಉಬ್ಬರವಾಗುವುದನ್ನು ಗಮನಿಸುತ್ತಾರೆ. ಚಿಕಿತ್ಸೆ ರೂಪದಲ್ಲಿ ಒಂದು ಹಿಡಿ ಹಾಲವಾಣ (ವಾರಜೇಪ ಮರ) ಗಿಡದ ತೊಗಟೆ, ಏಳು ಮೆಣಸಿನಕಾಳು, ಏಳು ಬೆಳ್ಳುಳ್ಳಿ, ಸ್ವಲ್ಪ ಶುಂಠಿ, ಇವುಗಳನ್ನು ಅಕ್ಕಿ ತೊಳೆದ ನೀರಿನಲ್ಲಿ ಹಾಕಿ ಜಜ್ಜಿ ಚರಟವನ್ನು ತೆಗೆದು ಮೂರು ಗೊಟ್ಟದಂತೆ ದಿನಕ್ಕೆ ಒಂದು ಸಾರಿ ಕುಡಿಸಿದರೆ ಸರಗವಾಗಿ ಸಗಣಿ ಹಾಕುವುದಂತೆ.

ಭೇದಿ : (ಉಚ್ಚುವುದು)ವಾಸನೆಯುಕ್ತ ನೀರಿನಂತಹ ಸಗಣಿಯನ್ನು ಉಚ್ಚಿಕೊಳ್ಳುತ್ತಿದ್ದರೆ, ಕಾಡಶೆಂಬಿ ಗಿಡದ ಸೊಪ್ಪು ಎರಡು ಹಿಡಿಯಷ್ಟು, ಕುಂಟಿಗನ ಸೊಪ್ಪು ಒಂದು ಹಿಡಿಯಷ್ಟು, ಏಳು ಮೆಣಸಿನಕಾಳು, ಏಳುಬೆಳ್ಳುಳ್ಳಿ, ಸ್ವಲ್ಪ ಶುಂಠಿಯನ್ನು ಸೇರಿಸಿ ಸಣ್ಣಗೆ ಜಜ್ಜಿ ಮಜ್ಜಿಗೆಯಲ್ಲಿ ಮೂರು ಗೊಟ್ಟದಷ್ಟು ಕುಡಿಸಬೇಕು.

ಮೂಗಿನಲ್ಲಿ ರಕ್ತ ಬರುವುದು : ಅಂಟುವಾಳ ಕಾಯಿಯ ನೊರೆ ಮೂಗಿನಲ್ಲಿ ಬಿಟ್ಟರೆ ರಕ್ತಶ್ರಾವ ಕಮ್ಮಿಯಾಗುವುದು.

ಜ್ವರ : ಹುಲ್ಲು ತಿನ್ನದೆ ಸಪ್ಪೆಮುಖ ಮಾಡಿಕೊಂಡು ಜೊಲ್ಲು ಸುರಿಸುತ್ತಿದ್ದರೆ ಅದು ಜ್ವರ ಆಗಿರಬಹುದು. ಆಗ ಮುಳ್ಳು ಕಳ್ಳಿಬೇರು ಒಂದು ಹಿಡಿ, ಏಳು ಮೆಣಸಿನಕಾಳು, ಏಳು ಬೆಳ್ಳುಳ್ಳಿ, ಸ್ವಲ್ಪ ಶುಂಠಿ ಇವುಗಳನ್ನು ಅಕ್ಕಿ ತೊಳೆದ ನೀರಿನಲ್ಲಿ ಹಾಕಿ ಜಜ್ಜಿ ಚರಟವನ್ನು ತೆಗೆದು ಅಕ್ಕಿ ತೊಳೆದ ನೀರಿನಲ್ಲಿ ಕುಡಿಸಬೇಕು."[೧೧] ಎನ್ನಲಾಗಿದೆ. ಇದೇ ಕೃತಿಯಲ್ಲಿ ಮುಂದುವರೆದು ಹೆಚ್.ವಿ. ಸಜ್ಜನ್(ಹುಲಿಕೇರೆ-ಅಂಚೆ,ಕೂಡ್ಲಿಗಿ-ತಾಲ್ಲೂಕು, ಬಳ್ಳಾರಿ-ಜಿಲ್ಲೆ) ಜವಾರಿ ದನಗಳನ್ನು ಸಾಕುತ್ತಾ ಬಂದವರು. ಅವರ ನಾಟಿ ಚಿಕಿತ್ಸಾ ಕ್ರಮಗಳು ಹೀಗಿವೆ.

ಸೆಲೆ ಆದಾಗ : ನಾಲಿಗೆ ನರ ಬಗೆದು ರಕ್ತಸೋರಿಸಿ, ಬೆಳ್ಳುಳ್ಳಿ, ಮೆಣಸು, ನಿಂಬೆ ಹಣ್ಣಿನ ರಸ ಕುಡಿಸಿದರೆ ಸರಿ ಹೋಗುತ್ತದೆ.

ಹೊಟ್ಟೆ ಉಬ್ಬದರೆ : ಹೊಟ್ಟೆ ಉಬ್ಬಿದರೆ ಮೆಲುಕು ಹಾಕುವುದಿಲ್ಲ. ಆಗ ಬಜೆ ಉಜ್ಜಿಕೊಂಡು, ಔಡಲೆಣ್ಣೆ ಜತೆಗೆ ಬೆರಸಿ ಕುಡಿಸಬೇಕು.

ಉಣ್ಣೆನಿಯಂತ್ರಣಕ್ಕೆ : ಮೈಮೆಲೆ ಉಣ್ಣೆಗಳಿದ್ದರೆ, ಸೀತಾಫಲ ಸೊಪ್ಪನ್ನು ರುಬ್ಬಿ ಮೈಮೇಲೆಲ್ಲಾ ಸವರಬೇಕು.

ಗಾಯಕ್ಕೆ ಹುಳು ಬಿದ್ದಾಗ : ತೊಂಡೆ ಸೊಪ್ಪನ್ನು ರುಬ್ಬಿಗಾಯದ ಮೇಲೆ ಹಚ್ಚಬೇಕು.

ಕಾಲು ಬಾಯಿ ಜ್ವರ : ಇದು ಡಿಸೆಂಬರ ತಿಂಗಳಲ್ಲಿ ಬರುವುದು. ಗೇರು ಬೀಜ ಜಜ್ಜಿ ಮುದ್ದೆಯಲ್ಲಿಟ್ಟು ನುಂಗಿಸುವುದು.

ಹೆಗಲು ಬಾವಿಗೆ : ಹರಿಶಿಣ ಮತ್ತು ಮೊಸರು ಕಲಸಿ ತಿಕ್ಕುವುದು.

ಕಾಲು ಮುರಿದಾಗ : ಮುರಿದ ಕಾಲಿನ ಹೊರಮ್ಮೈ ಮೇಲೆ ಬಂದ್ರಿಕೆ ಸೊಪ್ಪು ಹಾಕಿ ಕಟ್ಟುಹಾಕುವುದು.

ಮೇವು ತಿನ್ನಲಿಕ್ಕೆ : ಸರಳ ಅಜೀರ್ಣತೆಯಿಂದ ದನಗಳು ಬಳಲುತ್ತಿದ್ದರೆ, ಖಿನ್ನತೆ, ಮೇವು ತಿನ್ನದಿರುವುದು, ಮೆಲುಕು ಹಾಕದಿರುವುದು, ಇಂತಹ ಲಕ್ಷಣಗಳು ಕಂಡು ಬರುತ್ತವೆ. ಆಗ ಒಣಮೆಣಸಿನ ಕಾಯಿ ಮತ್ತು ಬಿಳಿ ಈರುಳ್ಳಿ ರುಬ್ಬಿ ತಿನ್ನಿಸಬೇಕು.

ಜ್ವರ ಬಂದಾಗ : ತುಂಬೆ ಸೊಪ್ಪು, ಬೆಳ್ಳುಳ್ಳಿ, ಮೆಣಸು, ರುಬ್ಬಿ ತಿನ್ನಿಸಬೇಕು.

ಹಾಲು ಕರೆಯದೆ ಇದ್ದಾಗ : ಈಶ್ವರಿ ಬಳ್ಳಿಯನ್ನು ಮಜ್ಜಿಗೆಯಲ್ಲಿ ರುಬ್ಬಿ ಕರುವಿಗೆ ಹಚ್ಚಿ ನೆಕ್ಕಿಸಿ, ದತ್ತುರಿಯ ಎರಡು ಎಳೆಯದಾದ ಕಾಯಿಗಳನ್ನು ತಿನ್ನಿಸುವುದರಿಂದ ಕರೆಯದೆ ಇದ್ದ ಆಕಳು ಅಥವಾ ಎಮ್ಮೆ ಹಾಲು ಕರೆಯಲು ಆರಂಭಿಸುತ್ತವೆ.

ಧಾರವಾಡದ ಎತ್ತಿನ ಗುಡ್ಡದ ಶ್ರೀಕಾಂತ್ ತಮ್ಮ ನಾಟಿ ವಿಧಾನಗಳ ಬುತ್ತಿಯನ್ನು ಹೀಗೆ ಬಿಚ್ಚಿಡುತ್ತಾರೆ.

ಕಾಲುಬಾಯಿ ಜ್ವರ : ಈ ಖಾಯಿಲೆಯಲ್ಲಿ ಕಾಲಿನಲ್ಲಿ ಮತ್ತು ಬಾಯಿಯಲ್ಲಿ ಗಾಯಗಳಾಗುತ್ತವೆ. ಆಗ ಸುಡುವ ಉಸುಕಿನಲ್ಲಿ ದನಗಳನ್ನು ನಿಲ್ಲಿಸಿ, ಮಣ್ಣು ಏರಿಸುತ್ತಿದ್ದೆವು. ಈ ಸುಡುವ ಮರಳಿನ ಬಿಸಿಗೆ ಆ ಖಾಯಿಲೆ ಬರಿಸುವ ರೋಗಕ್ರಿಮಿಗಳು ಸತ್ತುಹೋಗುತ್ತವೆ. ಅದೇ ಗಾಯಕ್ಕೆ ಹುಳು ಬಿದ್ದರೆ ಚೆಂಡು ಹೂವಿನ ಸೊಪ್ಪು, ರಾಗಿ ಹಿಟ್ಟು, ಚಿಮಣಿಎಣ್ಣೆ ಮಿಶ್ರಮಾಡಿ ಕಟ್ಟುತಿದ್ದೆವು. ಬಾಯಿಬೇನೆ ಆಗಿ ಬಾಯಿಯಲ್ಲಿ ಗಾಯಗಳಾದರೆ, ಬಾಯಿತೊಳೆದು ಕೊತ್ತಂಬರಿ, ಮೆಂತೆ ಸೊಪ್ಪು ತಿನ್ನಿಸುತ್ತಿದ್ದೆವು.

ಹೊಟ್ಟೆ ಉಬ್ಬಿದರೆ : ಅಜೀರ್ಣತೆಯಿಂದಾಗಿ ಹೊಟ್ಟೆ ಉಬ್ಬುತ್ತದೆ. ಒಳ್ಳೆ ಎಳ್ಳು, ಮೆಣಸು, ವಿಳ್ಳೆದೆಲೆ, ಇವುಗಳನ್ನು ಕುಟ್ಟಿ ಪುಡಿಮಾಡಿ ಅದರ ರಸವನ್ನು ಗೊಟ್ಟದಲ್ಲಿ ಹಾಕಿ ಕುಡಿಸುತ್ತೇವೆ.

ಗಂಟಲುಬೇನೆ, ಚಪ್ಪೆ ಬೇನೆ : ಚಪ್ಪೆ ಬೇನೆ, ಆದರೆ ಹಿಂಗಾಲುಗಳ ಮಾಂಸಖಂಡಗಳು ಊದಿಕೊಳ್ಳುತ್ತವೆ. ಮುಟ್ಟಿದರೆ ಬುರಬುರ ಶಬ್ದ ಬರುತ್ತದೆ, ಆಗ ನಾವು ನರಕ್ಕೆ ಕಾದ ಕಬ್ಬಿಣದ ಸಲಾಖೆಯಿಂದ ಬರೆ ಕೊಡುತ್ತಿದ್ದೆವು.

ಹಿಂಡುವ ದನಗಳಿಗೆ ಕೆಚ್ಚಲು ಬೇನೆ : ಇದು ಆದಾಗ ಬಿಸಿ ನೀರಿನಲ್ಲಿ ಉಪ್ಪು ಬೆರೆಸಿ ಕೆಚ್ಚಲಿಗೆ ಉಜ್ಜುತ್ತೇವೆ. ಗಂಜಲ ಕಾಯಿಸಿ ಹೊಡೆಯುತ್ತೇವೆ. ಮಂಡ್ಯ ಜಿಲ್ಲೆಯ ರೈತ ಗುರು ಪ್ರಸಾದ್ ತಮ್ಮ ಅನುಭವಗಳನ್ನು ಹೀಗೆ ಹಂಚಿಕೊಳ್ತಾರೆ.

ಹೆಗಲು ಬಾವು : ಆದಾಗ ಹುರುಳಿಕಾಳನ್ನು ಚೆನ್ನಾಗಿ ಬಿಸಿ ಮಾಡಿ ಲೋಕಸಾರ (ಲೋಳೆ ಸರ) ದ ಲೋಳೆಯಲ್ಲಿ ಬಿಗಿಯಾಗಿ ಪಟ್ಟಿ ಹಾಕುವುದು.

ಕೆಚ್ಚಲು ಬಾವು : ಲೋಕಸಾರವನ್ನು ಕೆಚ್ಚಲಿಗೆ ಲೇಪಿಸುವುದು.

ರಕ್ತ ಮಿಶ್ರಿತ ಭೇದಿ ಮತ್ತು ಮೂಗಿನಲ್ಲಿ ರಕ್ತ ಸೋರುವುದು: ಮುಟ್ಟಿದರೆ ಮುನಿ ಸೊಪ್ಪನ್ನು ಅರೆದು ರಸವನ್ನು ತಿಳಿಮಜ್ಜಿಗೆಯಲ್ಲಿ ಕುಡಿಸುವುದು.

ಸೆತ್ತೆ ಬೀಳದಿರುವುದು : ಕರು ಹಾಕಿ ಒಂದು ದಿನವಾದರೂ ಸೆತ್ತೆ ಬೀಳದಿದ್ದರೆ ಬಿದಿರು ಸೊಪ್ಪು, ಕುಂಬಳಸೊಪ್ಪಿನ ಚಿಗುರು, ಬೆಲ್ಲ, ಎಳ್ಳು ಎಲ್ಲಾ ಒಟ್ಟಿಗೆ ಸೇರಿಸಿ ತಿನ್ನಿಸುವುದು.

ಗಾಯಗಳು : ಇದ್ದಿಲು ಪುಡಿ, ಅರಿಶಿಣ ಪುಡಿಯನ್ನು ಲೇಪಿಸುವುದು.

ಕಣ್ಣಿನಲ್ಲಿ ನೀರು : ಅಡಿಗೆ ಉಪ್ಪಿನ ದ್ರಾವಣವನ್ನು ಮಾಡಿ ಬಾಯಿಂದ ಕಣ್ಣಿಗೆ ಉಗುಳುವುದು.

ಕೊಂಬು ಗಾಯ : ಕೋಳಿ ಮೊಟ್ಟೆ ಹಾಗೂ ಕೆಮ್ಮಣ್ಣು ಮಿಶ್ರಣವನ್ನು ಗಾಯಗೊಂಡ ಕೊಂಬಿಗೆ ಲೇಪಿಸಿ, ಬಟ್ಟೆ ಸುತ್ತುವುದು.

ಸೆಲೆ : ವೀಳ್ಯದ ಎಲೆ, ಮೆಣಸು, ಇಂಗು ಕೋಳಿಮೊಟ್ಟೆ ಹಾಗೂ ತೆಂಗಿನ ಕಾಯಿ ಮಿಶ್ರಣವನ್ನು ತಿನ್ನಿಸುವುದು. ಅಥವಾ ಬೇವಿನ ಸೊಪ್ಪು ಮತ್ತು ಲಕ್ಕಿ ಸೊಪ್ಪುಗಳನ್ನು ತಿನ್ನಿಸುವುದು.

ಅಜೀರ್ಣ : ಹಸಿಶುಂಠಿ, ಇಂಗು, ಎಣ್ಣೆ, ಬಜೆ ಮತ್ತು ದತ್ತೂರಿ ಗೆಡ್ಡೆಯನ್ನು ತಿನ್ನಲು ಕೊಡುವುದು.

ಹೇನು/ಉಣ್ಣೆ : ಸೀತಾಫಲದ ಸೊಪ್ಪನ್ನು ನುಣ್ಣಗೆ ಅರೆದು ಮೈಗೆಲ್ಲಾ ಲೇಪಿಸುವುದು. ಅಥವಾ ತುಂಬೇರಸವನ್ನು ಲೇಪಿಸುವುದು"೨೨

ಇಂತಹ ಚಿಕಿತ್ಸಾ ವಿಧಾನಗಳಲ್ಲಿ ಭೌಗೋಳಿಕವಾಗಿ ಪಶು ಸಾಕಾಣಿಕೆಯ ರೈತರು ಅನುಸರಿಸುವ ನಾಟಿ ಚಿಕಿತ್ಸಾ ಪದ್ಧತಿಯಲ್ಲಿ ಸಾಕಷ್ಟು ವ್ಯತ್ಯಾಸಗಳಿದ್ದರೂ ಕೆಲವನ್ನು ಮಾತ್ರ ಇಲ್ಲಿ ಹೇಳಲಾಗಿದೆ.

ನಾಟಿ ವೈದ್ಯರಲ್ಲಿ ಅನೇಕ ವಿಶೇಷ ವ್ಯಕ್ತಿಗಳನ್ನು ಅಪರೂಪಕ್ಕೆ ಕಾಣುತ್ತೇವೆ. ಅಂಥವರಲ್ಲಿ ಶಿವಮೊಗ್ಗ ಜಿಲ್ಲೆಯ ಸೂಗೂರು ಗ್ರಾಮದ ನಿವಾಸಿಗಳಾದ ಶ್ರೀಯುತ ಚನ್ನಬಸಪ್ಪನವರು ಒಬ್ಬರು. ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳು, ಬೆಂಗಳೂರು, ಮೈಸೂರು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಧಾರವಾಡ, ಹಾವೇರಿ, ದಾವಣಗೇರೆ ಮುಂತಾದ ಜಿಲ್ಲೆಗಳಲ್ಲಿ ಅನೇಕ ಕಡೆ ಸಂಚರಿಸಿ ಹಲವಾರು ರೋಗಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಿದ್ದಾರೆ. ತಮ್ಮ ಸೇವೆಗೆ ಪ್ರತಿಯಾಗಿ ಯಾವುದೇ ರೀತಿಯ ಸಂಭಾವನೆ ಪಡೆಯದೇ ಇರುವುದು ಇವರ ವೈಶಿಷ್ಟ್ಯವಾಗಿದೆ. 'ಮೂಕಪ್ರಾಣಿಗಳಿಗೆ ಔಸ್ದಿ ಕೊಟ್ಟರೆ ಪುಣ್ಯ ಬರ್ತದೆ' 'ದುಡ್ಡು ಇಸಿಕಂಡರೆ ದೈವಕ್ಕೆ ಅಪಚಾರ ಮಾಡಿದಂತೆ' ಎಂಬ ಜನಪದ ನಂಬಿಕೆಯನ್ನು ರೂಢಿಸಿಕೊಂಡವರಾಗಿದ್ದಾರೆ. ಕೆಲವರು ಔಷಧಿ ಕೊಟ್ಟವರ ಮನೆಯಲ್ಲಿ ಊಟಮಾಡಬಾರದು ಎಂಬ ಸಂಪ್ರದಾಯ ಇಟ್ಟು ಕೊಂಡಿದ್ದಾರೆ. ಮತ್ತೆ ಕೆಲವರು ವೀಳ್ಯೆದೆಲೆ, ಅಡಿಕೆ ಪಡೆಯುತ್ತಾರೆ. 'ತಲೆಯ ಮೇಲೆ ಬಂದದ್ದು ಎಲೆಯ ಮೇಲೆ ಹೋಗಲಿ, ಎಂಬ ನಂಬಿಕೆ ಕೆಲವರದು. ಶ್ರೀಯುತ ಚನ್ನಬಸಪ್ಪ ನವರು ಪಶು ವೈದ್ಯ ಪದ್ಧತಿಯಲ್ಲಿ ಅನೇಕ ಕಾಯಿಲೆಗಳನ್ನು ಗುರುತಿಸಿ ಚಿಕಿತ್ಸೆ ನೀಡಿದ, ಆರೈಕೆಯ ಬಗೆಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಸಂಪಾದಿಸಿ ಕೊಟ್ಟಿರುವ ಬಸವರಾಜ ನೆಲ್ಲೀಸರರವರ ಜಾನುವಾರು ಸಂಜೀವಕ ನಾಟಿ ಪಶುವೈದ್ಯ 'ಸೂಗುರು ಚನ್ನಬಸಪ್ಪ' ಎಂಬ ಕೃತಿಯಲ್ಲಿ ಬಳಸಿರುವ ಅನೇಕ ಬಗೆಯ ರೋಗಗಳ ವಿವರ, ಔಷಧಿಯ ವಿವರ, ಆರೈಕೆಯ ವಿಧಾನಕ್ಕೆ ನೀಡಿದ ಸಲಹೆಗಳನ್ನು ಸಂಗ್ರಹಿಸಿ ಪ್ರಬಂಧಕ್ಕೆ ಪೂರಕ ಮಾಹಿತಿಯಾಗಿರುವುದರಿಂದ ಇಲ್ಲಿ ಬಳಕೆಮಾಡಿ ಕೊಳ್ಳಲಾಗಿದೆ.

ಎತ್ತಿಗೆ ಬರುವ ರೋಗಗಳಾದ ಸಲ್ಟು-(ನೆರಡು), ಕಾಲುಬಾಯಿ, ಬಾಯೊಡಿ, ಸೊಡ್ಡು, ಕಪ್ಪಿ, ಕೊಡದಿಸ್ಸಿ, ಚಪ್ಪೆರೋಗ, ಮುಲ್ಕಿರೋಗ, ಗರ್ಭನಿಲ್ಲವುದು (ಅನೇಕ ನಾಟಿ ವೈದ್ಯರು ಗರ್ಭ ನಿಲ್ಲುವುದಕ್ಕೆ ಔಷಧಿಯನ್ನು ಸೂಚಿಸಿರುವರು) ಮುಂತಾದವುಗಳಲ್ಲಿ ಮುಖ್ಯವಾದವುಗಳನ್ನು ಕುರಿತು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಸೆಲೆ(ಸಲ್ಲು) ಮತ್ತು ನರಡುರೋಗ ಚಿಹ್ನೆ : ಇದು ಯಾವ ಕಾರಣದಿಂದ ಬರುತ್ತದೆಂದರೆ, ಸೀತಾ ಹಾಗೂ ಮೇವು ನೀರಿನ ವ್ಯತ್ಯಾಸದಿಂದ ಬರುತ್ತದೆ. ಇದರ ಪರೀಕ್ಷೆಯೆಂದರೆ ಬಾಯಿನಲ್ಲಿ ಜೊಲ್ಲು ಸುರಿಸುತ್ತದೆ, ಮೂಗು ಹಿಪ್ಪಳಿಸುತ್ತದೆ, ಹೊಟ್ಟೆ ಉಬ್ಬರಿಸುತ್ತದೆ.

ಕಷಾಯ ತಯಾರಿಸುವ ವಿಧಾನ

ಸಾಸಿವೆ ೨೦೦ಗ್ರಾಂ, ಅರಿಷಿಣ೨ಗ್ರಾಂ, ಒಣಶುಂಠಿ ೫೦ಗ್ರಾಂ, ಅಜ್ವಾನ ೫೦ಗ್ರಾಂ, ಈರುಳ್ಳಿ ೧ಕೆ.ಜಿ, ಒಣಮೆಣಸಿನಕಾಯಿ ೧/೪ಕೆ.ಜಿ, ಚಿರಾಯುತ ೫೦ಗ್ರಾಂ, ಹಿಪ್ಪಲಿ ೨೫ಗ್ರಾಂ, ಮೋಡಿ ೨೯ಗ್ರಾಂ, ಇಸಿಗೆ ಸೊಪ್ಪು ೨ಹಿಡಿ, ಲಕ್ಕಿಸೊಪ್ಪು ೨ಹಿಡಿ, ಆಡು ಮುಟ್ಟದ ಸೊಪ್ಪು ೨ಹಿಡಿ, ಬಿಲ್ಪತ್ರೆ ೩ಹಿಡಿ, ಕುರುಟಿಗನ ಸೊಪ್ಪು ೩ಹಿಡಿ, ಹುಚ್ಚುಜಾಡಲಿ ತೊಪ್ಪೆ ೨ಹಿಡಿ(ಕಬಾಳಿ ಅಂತ, ಕಮ್ಮಣ್ಣಿಯಂತಲೂ ಕರೆಯುತ್ತಾರೆ) ಆಯಾ ಕಡೆ ಭಿನ್ನ ಭಿನ್ನ ಹೆಸರುಗಳುಂಟು. ಹುಣಸೆಹಣ್ಣು ೨೦೦ಗ್ರಾಂ ಇವುಗಳನ್ನು ಅರೆದು ಪಾತ್ರೆಯಲ್ಲಿ ಹಾಕಿದ ಹುಣಸೆ ಹಣ್ಣಿನ ನರಸನ್ನು ತೆಗೆದು ಬಿಸಿನೀರಿನಲ್ಲಿ ಕದರಿ ತೊಗಟೆ ಬೆರಕೆ ಕಸಾಯಕ್ಕೆ ಹಾಕಬೇಕು.

ಪಥ್ಯ ಬಿಸಿನೀರು ಕುಡಿಸಬೇಕು ಮೂರು ಚಂಬು, ದಿವಸಕ್ಕೆ ಮೂರು ಹೊತ್ತು ಒಣಮೇವು ತಿನ್ನಲು ಹಾಕಬೇಕು. ನೀರನ್ನು ಗೊಟ್ಟದಲ್ಲಿ ಹಾಕಬಾರದು. ದಗೆ ಇಲ್ಲದಿದ್ದರಿಂದ ಕುಡಿಯುವುದಿಲ್ಲ. ದವಡೆಯಲ್ಲಿ ಎರಡು ಕಡ್ಡಿಯಂತೆ ಮೇವು ತಿಂದರೆ ಒಳ್ಳೆಯದು. ಮೇವನ್ನು ತನ್ನ ಇಚ್ಚೆಗೆ ಎಳೆದುಕೊಂಡ ಮೇಲೆ ಮೆಲುಕು ಹಾಕುತ್ತದೆ. ಕಾಯಿಲೆ ಜೋರಾದರೆ ಹಿಂಡಿಗೆ ಇಳಿದು ಕಾಲು ಕುಂಟುತ್ತದೆ. ಅಡ್ಡಗಾಲು ಹರಿಬಿಟ್ಟು ಮಲಗಲು ತ್ರಾಸು ಪಡುತ್ತದೆ. ಅಡ್ಡಗಾಲು ಬಿಡಬಾರದು. ತಲೆಯ ಕಡೆಗೂ ದಿವಸಕ್ಕೆ ಒಂದು ಸಾರಿ ಜನರನ್ನು ಕರೆದು ಎಬ್ಬಿಸಿ ಕಾಲು ಚಪ್ಪಿತಿಕ್ಕಿ ಹಾಗೆ ಮಲಗಿಸಬೇಕು. ಬಿಸಿನೀರು ಆರಿಸಿ ಕುಡಿಸಬೇಕು. ಒಣಮೇವು ಕೊಡಬೇಕು. ಅಕ್ಕಿ ಮೆಂತೆಕಾಳು ಅಂಬಲಿ ಮಾಡಿ ಮೆಲುಕು ಹಾಕಿದ ಮೇಲೆ ಕೊಡಬಹುದು. ಕುಡಿಯದಿದ್ದರೆ ಗೊಟ್ಟದಲ್ಲಿ ಹುಷರಾಗಿ ಕುಡಿಸಬೇಕು.

ನರಡು ರೋಗದಲ್ಲಿ ಒಂಭತ್ತು ಬಗೆಯ ರೋಗಗಳಿದ್ದು, ಅವುಗಳು ಕುಂದುನರಡು, ದಮ್ಮನರಡು, ನಾರನರಡು, ಊದನರಡು, ಪಿಂಜಲಿನರಡು, ಗುಂಡಿಗೆನರಡು, ದೊಮ್ಮೆನರಡು ಮುಂತಾದವು. ಈ ರೋಗಗಳಿಗೆ ಬೇರೆ ಬೇರೆ ಕಷಾಯಗಳನ್ನು ಹೇಳಲಾಗಿದೆ. ಆದರೂ ಮೇಲೆ ಹೇಳಿರುವ ಕಷಾಯದಂತೆ ಅಲ್ಪ ಸ್ವಲ್ಪ ವ್ಯತ್ಯಾಸದಿಂದ ಕೂಡಿರುತ್ತದೆ. ಆ ಕಾರಣದಿಂದ ಈ ಎಲ್ಲಾ ರೋಗಗಳಿಗೂ ಹೇಳಿರುವ ಔಷಧಿಯನ್ನು ಪ್ರತ್ಯೇಕವಾಗಿ ಹೇಳಲಾಗಿಲ್ಲ.

ಮುಲ್ಕಿ ರೋಗ : ಈ ರೋಗಕ್ಕೆ ಕರಣಮೂಲವೆಂದೂ, ಅಲ್ಲದೇ ಗ್ರಾಮೀಣರ ಬಾಯಲ್ಲಿ ಕಲ್ರ್ಮುಲ್ರ್ ರೋಗವೆಂದು ಕರೆಯುತ್ತಾರೆ.

ಚಿಹ್ನೆ : ಇದು ಮೇವು ನೀರು ವ್ಯತ್ಯಾಸದಿಂದ ಬರುವಂತಹದ್ದು. ಚಟಪಟ ಕಾಲು ಜಾಡಿಸುವುದು, ಮಲಗುವುದು, ಏಳುವುದು, ಬೀಳುವುದು ಮಾಡುತ್ತದೆ. ಇದಕ್ಕೆ ಕರಣಮೂಲಿ ಎಂದು ಮತ್ತು ತೋನಸಿ ಆಸನದಲ್ಲಿ ಆಗಿದೆಯೆಂದೂ ಹೇಳುವುದುಂಟು.

ಮೂಲಿಕೆಗಳು : ಸಾಸಿವೆ ಅರ್ಧಪಾವು, ಕೊತ್ತೊಂಬರಿ ೧ಬೊಗಸೆ, ಅಜ್ವಾನ ೫೦ಗ್ರಾಂ, ಒಣಕೊಬ್ಬರಿ ೧೦೦ಗ್ರಾಂ, ಈರುಳ್ಳಿ ೧/೨ಕೆ.ಜಿ, ಒಣಮೆಣಸಿನಕಾಯಿ ೧ಹಿಡಿ, ಅಡಿಕೆಹಾಳೆಕರುಕು ೨ಹಿಡಿ, ಔಡಲುಸಿಪ್ಪೆ ೨ಹಿಡಿ ಹುಣಸೆಹಣ್ಣು ೧ಪಾವು. ಮಂಗನಬಳ್ಳಿ ಸಣ್ಣನೆಯ ತುಂಡು ಮಾಡಿ ಒಂದು ಬೊಗಸೆಯಲ್ಲಿ ಹಾಕಬೇಕು. ಇದು ಕುಟ್ಟುವಾಗ ಕೈ ಕಡಿಯುತ್ತದೆ. ಇದನ್ನು ಸೌಟಿನಲ್ಲಿ ಬಾಚಿಕೊಂಡು ತೆಗೆದು ಹಾಕಬೇಕು.

ಕಷಾಯ : ಈ ಹಿಂದೆ ಸೆಲೆನರಡಿ ರೋಗಕ್ಕೆ ಹೇಳಿರುವ ಪ್ರಕಾರ ೫ ಮತ್ತು ೮ ದಿವಸ ಹಾಕಬೇಕು.

ಪಥ್ಯ : ಕೊಟ್ಟಿಗೆ ಶುದ್ಧವಾಗಿಡಬೇಕು. ಮೂತ್ರ ಕಟ್ಟಾದರೆ ಮೂತ್ರ ಭೇದಿ ಔಷಧಿಯನ್ನು ಮಾಡಬೇಕು. ಇಲ್ಲದಿದ್ದರೆ ಬೇಗನೆ ಸಾಯುತ್ತವೆ. ಅಪಾಯಕಾರಿ ರೋಗವಾದ್ದರಿಂದ ಜತನ(ಜಾಗ್ರತೆ)ದಿಂದ ಕಾಪಾಡಬೇಕು.

ಮೂತ್ರ ಕಟ್ಟಾದಾಗ ಚಿಹ್ನೆ : ಮಲಗುವುದು, ಏಳುವುದು, ಕಾಲು ಜಾಡಿಸುವುದು ಮಾಡುತ್ತದೆ.

ಕಷಾಯ : ನೆಗ್ಗಲ ಬೇರನ್ನು ಬೇರು ಸಹಿತ ತಂದು ನೀರಿನಲ್ಲಿ ಕೊಳೆಸಿ, ಕಾಡು ಬೆಂಡೆಬೇರು ಗಿಡಸಹಿತ ತಂದು ಪುಡಿಮಾಡಿ ನೀರು ಹಾಕಿ ಕುದಿಸಿ, ಬತ್ತಿಸಿ, ಸಾಣಿಸೋ ಸಣ್ಣೆಯಲ್ಲಿ ಸೋಸಿ ಆ ರಸದಲ್ಲಿ ೫೦ಗ್ರಾಂ ಅಜ್ವಾನದ ಪುಡಿ ಸೇರಿಸಿ ೨ಗೊಟ್ಟ ಹಾಕಬೇಕು. ಪೆಟ್ಲುಪ್ಪು ೧೫ಗ್ರಾಂನ್ನು ಅದೇ ರಸದಲ್ಲಿ ಸೇರಿಸಿ ૩ಸಾರಿ ಹಾಕಬೇಕು. ಶುದ್ಧವಾಗಿಟ್ಟು ಜಾಗ್ರತೆ ಮಾಡಬೇಕು. ಔಷಧಿಯನ್ನು ಹಾಕಿ, ಕಣ್ಣಿಗೆ ಶುಂಠಿಯ ಪುಡಿ ಹಾಕಿ ತಿಕ್ಕುವುದು ಮತ್ತು ಸ್ವಲ್ಪ ಹೊತ್ತು ಬಿಟ್ಟು ಬಿಸಿ ನೀರು ಹೊಡೆದು ಕಣ್ಣನ್ನು ತೊಳೆಯಬೇಕು. ಆಮೇಲೆ ತಲೆಹತ್ತಿರ ನಿಧಾನವಾಗಿ ತಿಕ್ಕಬೇಕು. ಮೂತ್ರ ಮಾಡಿದರೆ ಸರಿ ಇಲ್ಲದಿದ್ದರೆ ತೊಂದರೆ ಅನುಭವಿಸುತ್ತಾ, ಕಾಲು ಬಡಿಯುತ್ತಾ, ಬಹಳ ಕಷ್ಟದಿಂದ ಪ್ರಾಣಬಿಡುತ್ತದೆ.

ಕಾಲುಬೇನೆ, ಬಾಯಿಜ್ವರ : ಈ ರೋಗಗಳು ಬೇಸಿಗೆ ಕಾಲದಲ್ಲಿ ಬಹಳ ಹೆಚ್ಚಾಗಿ ಬರುತ್ತವೆ. ಮಳೆಗಾಲದಲ್ಲಿ ಅಂದರೆ ದೀಪಾವಳಿ ಮತ್ತು ದಸರಾ–ಶ್ರಾವಣದ ಕಾಲದಲ್ಲಿಯೂ ಬರುತ್ತವೆ. ಇದು ಅಂಟುರೋಗ ಊರಲ್ಲಿ ಕಾಣಿಸಿಕೊಂಡರೆ ೧೦ ಅಥವಾ ೧೫ ದಿವಸಗಳಲ್ಲಿ ಊರಲ್ಲೆಲ್ಲಾ ಕಾಣಿಸುತ್ತದೆ. ಒಂದರಿಂದ ಒಂದಕ್ಕೆ ಬಹಳ ಬೇಗ ಹರಡುತ್ತದೆ.

ಔಷಧಿ : ಇದಕ್ಕೆ ಪಟಿಗವನ್ನು ೧೦ಗ್ರಾಂ ತಂದು ಬಿಸಿನೀರಿನಲ್ಲಿ ಅರೆದು ನೀರಿನಲ್ಲಿ ಕದರಿ ಬಾಯಿ ತೊಳೆಯಬೇಕು. ಇದಕ್ಕೆ ಜ್ವರದ ಕಷಾಯವನ್ನು ಮಾಡಿ ಗೊಟ್ಟದಲ್ಲಿ ಮೆಲ್ಲಗೆ ಹೊಟ್ಟೆಗೆ ಹಾಕಬೇಕು.

ಮೂಲಿಕೆಗಳು : ಸಾಸಿವೆ ೧ಪಾವು, ಅರಿಷಿಣ ೭೫ಗ್ರಾಂ, ಒಣಶುಂಠಿ ೭೫ಗ್ರಾಂ, ಈರುಳ್ಳಿ ೧ಕೆ.ಜಿ ಒಣಮೆಣಸಿನ ಕಾಯಿ ೧/೪ಕೆ.ಜಿ, ಕೋಟಾಸೊಪ್ಪು ೫ಹಿಡಿ, ಉತ್ತರಾಣಿಸೊಪ್ಪು ૩ಹಿಡಿ, ಔಡಲಸೊಪ್ಪು ૩ಹಿಡಿ, ಇಸಿಗೆ ಸೊಪ್ಪು ૩ಹಿಡಿ(ಗಂಜಿ ಸೊಪ್ಪು), ಚಿರಾಯಿತ ૩೦ಗ್ರಾಂ, ಹಿಪ್ಪಲಿ ૩೦ಗ್ರಾಂ, ಮೋಡಿ ૩೦ಗ್ರಾಂ, ಹುಣಸೆಹಣ್ಣು ೧ಕೆ.ಜಿ ಇವುಗಳನ್ನು ಕುಟ್ಟಿ ಸಣ್ಣಗೆ ರುಬ್ಬಿ ಪಾತ್ರೆಯಲ್ಲಿ ಹಾಕಿ ನೀರು ಸೇರಿಸಿ ಕದರಿ ಬಿಸಿ ಮಾಡಿ ಆರಿಸಿ ಕಪ್ಪಿನಲ್ಲಿ ನಾಲ್ಕು ಕಪ್ಪು ಗೊಟ್ಟಕ್ಕೆ ಹಾಕಿಕೊಂಡು ನಿಧಾನವಾಗಿ ಹಾಕಬೇಕು. ದಿವಸಕ್ಕೆ ಒಂದು ಹೊತ್ತು ಮೂರು ದಿವಸ ಬಿಸಿ ಮಾಡುತ್ತಾ ರಸ ಗಟ್ಟಿಯಾದರೆ ನೀರು ಸೇರಿಸುತ್ತಾ ಬಿಸಿ ಮಾಡಿ ಹಾಕಿ ಚರಟವನ್ನು ಚೆನ್ನಾಗಿ ರುಬ್ಬಿ ಅದಕ್ಕೆ ಹಾಕಬೇಕು. ಈ ಕಷಾಯ ಮಾಡಿದ್ದು ೬ ಅಥವಾ ೮ ರಾಸುಗಳಿಗೆ ಆಗುತ್ತದೆ. ಜ್ವರ ಬಂತು ಅಂದ ಕೂಡಲೆ ಕಷಾಯ ಮಾಡಿ ಇಟ್ಟುಕೊಂಡಿರುವುದು ಉತ್ತಮ. ಕಾಲಿಗೆ ಬಾಯಿಗೆ ಹುಳ ಬೀಳದಂತೆ ಬೇವಿನ ಎಣ್ಣೆ ಕರ್ಪೂರ ಸೇರಿಸಿ ಹಚ್ಚಬೇಕು, ಮತ್ತು ದೂಳಿನಲ್ಲಿ ಓಡಾಡಿಸಿ ದೂಳನ್ನು ಕಾಲಿಗೆ ಮುಚ್ಚಬೇಕು. ಕೆಸರಿನಲ್ಲಿ ಓಡಾಡಿಸಬಾರದು.

ಪಥ್ಯ : ಮೆಂತ್ಯೆ, ಅಕ್ಕಿ, ನವಣಕ್ಕಿ ಅಂಬಲಿ ಮಾಡಿ ಕುಡಿಸಬೇಕು. ಬಾಳೆಹಣ್ಣು, ಹೆಸರುಬೇಳೆ, ಅಂಬಲಿ ಹಾಕಬೇಕು. ರಾಗಿ ಅಂಬಲಿ, ಹಿಂಡಿ, ಹುರುಳಿ ಕಾಳು, ಹಸಿಹುಲ್ಲು ಕೊಡಬಾರದು ಹಾಗೆ ಅಪಥ್ಯ ಮಾಡಿದರೆ ಸಸಲು ರೋಗ ಬರುತ್ತದೆ. ಮೂವತ್ತು ದಿವಸದವರೆಗೂ ಚೆನ್ನಾಗಿ ನೋಡಿಕೊಳ್ಳಬೇಕು.

ಕೋಡುಹುಣ್ಣು : ಚಿಪ್ಪೆ ಕೋಡಿನ ಸಂಧಿನಲ್ಲಿ ಸೆಲೆತು ಕೆಟ್ಟವಾಸನೆ ಬರುತ್ತದೆ. ಅದನ್ನೇ ಕೋಡುಹುಣ್ಣು ಎಂದು ಗುರುತಿಸಬೇಕು. ಇದಕ್ಕೆ ಬೇಗನೆ ಔಷಧಿ ಮಾಡದಿದ್ದರೆ ಕೋಡು ಪೂರ್ತಿ ಕೊಳೆಯುವುದುಂಟು.

ಮೂಲಿಕೆಗಳು : ನೇರಲ ಚಕ್ಕೆ ೩ಹಿಡಿ, ಮಾವಿನಚಕ್ಕೆ ೩ಹಿಡಿ, ಜಾಲಚಕ್ಕೆ ೩ಹಿಡಿ, ಇವುಗಳನ್ನು ತಂದು ಸ್ವಲ್ಪ ಜಜ್ಜಿ ಪಾತ್ರೆಯಲ್ಲಿ ಹಾಕಿ ಆ ಚಕ್ಕೆ ಸಮಕ್ಕೆ ನೀರು ಹಾಕಿ ಚೆನ್ನಾಗಿ ಕುದಿಸಿದರೆ ಅಡಿಕೆಯ ಕರೆ ಹಾಗೆ ರಸ ಇರುತ್ತದೆ. ಆ ರಸವನ್ನು ಕಪ್ಪಿಗೆ ಬಸಿದುಕೊಂಡು, ಎತ್ತನ್ನು ಹೊರಗೆ ಕಟ್ಟಿ ಹಿಡಿದುಕೊಂಡು ಸಂದಿಗೆ ಬಿಡುತ್ತ ಹಕ್ಕಿಗೆರೆಯಲ್ಲಿ ಸಂದನ್ನು ತೊಳೆಯಬೇಕು. ಒಂಭತ್ತು ದಿವಸಕ್ಕೆ ಒಂದು ಹೊತ್ತು ದಿನವೂ ರಸವನ್ನು ಕಾಯಿಸುತ್ತಾ ತೊಳೆಯಬೇಕು. ತೊಳೆಯುವಾಗ ರಸ ಮೈಗೆ ಸಿಡಿಯುತ್ತದೆ. ಹಳೆಬಟ್ಟೆ ಹಾಕಿಕೊಳ್ಳಬೇಕು. ರಸ ಕಡಿಮೆಯಾದರೆ ಸ್ವಲ್ಪ ನೀರು ಸೇರುತ್ತಾ ಹೋಗಬೇಕು. ಸ್ವಲ್ಪ ಬಸಿಯುವುದನ್ನು ತೊಳೆಯಬೇಕು. ಪಾತ್ರೆಯಲ್ಲಿ ಮೊದಲು ತುಂಬಿದ ಚಕ್ಕೆ ಸಣ್ಣ ಕ್ರಿಮಿಗಳು ಕೋಡಿನ ಮೆದುಳುಗಳನ್ನು ಮೆಯ್ಯುತ್ತವೆ, ಅವುಗಳನ್ನು ತೊಳೆದರೆ ನಾಶವಾಗಿ ಕೋಡಿನ ಸಂದು ಮಾದು ಹೋಗುತ್ತದೆ. ಸಂದಿಗೆ ಹಗ್ಗ ಹಾಕಿಕೊಂಡು ಉಜ್ಜಿಕೊಳ್ಳುತ್ತವೆ, ಎರಡು ಕಡೆ ಕೊಡತ ಹಾಕಿ ಕಟ್ಟಬೇಕು. ಹುಣ್ಣು ಬಹಳವಾಗಿ ಹುಳು ಬೀಳುತ್ತವೆ. ಅಲ್ಲಿಯ ತನಕ ಬಿಡಬಾರದು.

ಹಚ್ಚುವ ಮೂಲಿಕೆ : ಹುಳುಗಳು ಸಾಯಬೇಕಾದರೆ ಮರದ ಬೇರು(ಹೊಂಗೆಯದೆಂದು ಕರೆಯುವುದುಂಟು) ಆ ಮರದ ಕಾಂಡದ ಮೂಡುಗಡೆ ಬೇರು, ವಾರದ ದಿವಸ ಭಾನುವಾರ ಮತ್ತು ಗುರುವಾರ ಅಥವಾ ಅಮವಾಸ್ಯೆ, ಹುಣ್ಣಿಮೆಯಾದರು ಒಳ್ಳೆಯದು. ಇಲ್ಲವಾದರೆ ಯಾವುದೇ ವಾರವಾದರೂ ಪೂಜೆ ಮಾಡಿ ಬೇರನ್ನು ಒಂದು ಗಣ್ಣು ಉದ್ದ ತುಂಡು ಮಾಡಿ ಕಡಿದುಕೊಂಡು, ಒಂದು ತುಂಡನ್ನು ತೊಪ್ಪೆ ಕಳಚಬೇಕು. ಇನ್ನೊಂದಕ್ಕೆ ತೊಪ್ಪೆ ಇರಬೇಕು, ತಂದು ಆಕಾರ ಕೆಟ್ಟುಕೊಳ್ಳುತ್ತಾ ಗಂಧ ತೇದು ಗರಿಯಲ್ಲಿ ಸಂದಿಗೆ ಹಚ್ಚುತ್ತಾ ಹೋಗಬೇಕು (ಕಲ್ಲಿನ ಮೇಲೆ ನಿಂಬೆಹುಳಿ ಬಿಟ್ಟುಕೊಳ್ಳುತ್ತಾ ತೇದು ಹಚ್ಚಬೇಕು) ಆಮೇಲೆ ಕೀವು ಬಂದರೆ ಬಟ್ಟೆಯಲ್ಲಿ ಒರಸಿ ಹಚ್ಚಬೇಕು. ಮಾಯದಿದ್ದರೆ ಎರಡನೇ ಔಷಧಿ ಹೀಗೆ ಮಾಡಬೇಕು. ಚಂಡುಹೂವಿನ ಸೊಪ್ಪಿನ ರಸ ತೆಗೆದುಕೊಂಡು ನೀರು ಹಾಕದೇ ಅದರ ರಸ ತೆಗೆದು ಅದರಲ್ಲಿ ಸೀಮೆ ಅಂಟು ಹಾಕಿ ಕಲಸಿ ಕೈಯಲ್ಲಿ ಅದುಮಬೇಕು. ಒಂದು ದಿವಸ ಬಿಟ್ಟು ಆಮೇಲೆ ನೀರು ತೊಯಿಸಿದ ಬಟ್ಟೆಯನ್ನು ಕೋಡಿನ ಸುತ್ತ ಕಟ್ಟುತ್ತಾ ಬರಬೇಕು. ಅದು ಗಟ್ಟಿಯಾಗಿ ಹೋಗುತ್ತದೆ. ಹಾಗೆಯೇ ಎರಡು ಎತ್ತಿನ ಕೊಂಬಿಗೂ ಬಣ್ಣಹಚ್ಚಬೇಕು. ಅದು ಗೊತ್ತಾಗುವುದಿಲ್ಲ ಗುಣವಾಗಿರುತ್ತದೆ.

ಮೂಗುಹುಣ್ಣು : ಇದನ್ನು ಮೂಗಿನಲ್ಲಿ ಪೀನರಿ ರೋಗವೆಂದು ಹೇಳುತ್ತಾರೆ. ಇದು ಸಿಂಬಳದಲ್ಲಿ ಸಣ್ಣ ಕ್ರಿಮಿಗಳು ಆಗಿ ಗೂಡು ಕಟ್ಟಿಕೊಂಡು ಉಸಿರು ಆಡುವುದಕ್ಕೆ ಬಾರದೆ ಗೊರುಗೊರು ಎನ್ನುತ್ತವೆ. ಸ್ವಲ್ಪ ಇದ್ದಾಗಲೇ ಮೂಲಿಕೆ ರಸ ಬಿಟ್ಟರೆ ಗುಣವಾಗುತ್ತದೆ. ಬಲಾದರೆ ಮೂಗಿನ ಸುತ್ತಾ ಹುಣ್ಣು ಆಗಿ ಬಹಳವಾಗಿ ಉಸಿರಾಡುವುದು ತ್ರಾಸು ಆಗಿ ಜಾನುವಾರಿಗೆ ಕಷ್ಟವಾಗುತ್ತದೆ.

ಮೂಲಿಕೆಗಳು : ತಹಸಿಚೆಕ್ಕೆ ಸ್ವಲ್ಪ ಮತ್ತು ಅದರ ಸೊಪ್ಪು ಒಂದು ಹಿಡಿ, ತುಂಬೆ ಸೊಪ್ಪು, ಎಕ್ಕೆ ಸೊಪ್ಪು ತಂದು ಅರೆದು ಮ್ಯೆಲುತುತ್ತಾ ಒಂದು ಹಳಿಯನ್ನು ಕೆಂಡದ ಮೇಲೆ ಇಟ್ಟು ಸುಟ್ಟು ಬೆಳ್ಳಗೆ ಆಗುತ್ತದೆ. ಅದನ್ನು ಅರೆದು ಮಕ್ಕಳ ಮೂತ್ರದಲ್ಲಿ ಕಲಸಿ ಸೋಸಿ ಎಕ್ಕೆ ಟೊಂಗೆ ತಂದು ಎಲೆ ತರಿದು ಮೂಗಿನಲ್ಲಿ ಆಡಿಸಿ ಆ ರಸವನ್ನು ಬಿಡುವುದು. ಒಂಭತ್ತು ದಿವಸ ಅದನ್ನು ಹಾಗೆ ಇಟ್ಟುಕೊಂಡು ಮಕ್ಕಳ ಮೂತ್ರ ಹಾಕುತ್ತ ಸೋಸಿ ಮೆಲ್ಲಗೆ ಬಿಡುತ್ತ ಬಂದರೆ ಗುಣವಾಗುತ್ತದೆ.

ಗಳಲೆಬೇನೆ ರೋಗ : ಇದು ಯಾವ ಕಾಲದಲ್ಲಿ ಬರುತ್ತದೆ ಎಂದರೆ ಎಳೆ ಹಸಿರು ಹುಲ್ಲು ತಿನ್ನುವ ಕಾಲದಲ್ಲಿ ಎಳೇ ಹುಲ್ಲಿನಲ್ಲಿ ಸಣ್ಣಕ್ರಿಮಿಗಳು ಸೇರಿಕೊಂಡು ಇರುತ್ತವೆ. ಅವುಗಳ ಬೆರಕೆ ತಿನ್ನುವುದರಿಂದ ವಿಷಮಯವಾಗಿ ಜ್ವರ ೧೦೫ ಡಿಗ್ರಿ, ಜ್ವರಬಾಯಿಯಿಂದ ಜೊಲ್ಲು ಬಿಡುತ್ತವೆ. ಐದು-ಆರು ಘಂಟೆ ಹೊತ್ತಿಗೆ ಗಂಟಲು ಬಾತು ದಪ್ಪನಾಗಿ ಆದಹೊತ್ತಿಗೆ ಬಿದ್ದು ಪ್ರಾಣ ಬಿಡುತ್ತವೆ.

ಈ ರೋಗ ಒಂದು ವರುಷ ಮತ್ತು ಎರಡು ವರುಷದ ಕರುಗಳಿಗೆ ಮೊದಲು ಬರುತ್ತದೆ. ಜ್ವರ ಪ್ರಾಬಲ್ಯವಾಗಿ ದೊಡ್ಡಜಾನುವಾರುಗಳಿಗೂ ಬರುತ್ತವೆ. ಆ ಕೂಡಲೇ ಹತ್ತಿರ ಇದ್ದ ಪಶು ವೈದ್ಯರಿಗೆ ತಿಳಿಸಿ ಸೂಜಿ ಮದ್ದು ಹಾಕಿಸಬೇಕು. ನಾಟಿ ಔಷಧಿಯನ್ನು ಮಾಡಿ ಕಾಯಿಲೆ ತಲೆದೋರಿದ ಕ್ಷಣ ಮಾಡಿಹಾಕಬೇಕು.

ಕಷಾಯ : ಸಾಸಿವೆ ೨೫ ಗ್ರಾಂ, ಅರಿಶಿಣ ೨೫ ಗ್ರಾಂ, ಒಣಶುಂಠಿ ೨೫ ಗ್ರಾಂ, ಮೆಣಸು ೨೦೦ ಗ್ರಾಂ, ಬೆಳ್ಳುಳ್ಳಿ ೨೫೦ ಗ್ರಾಂ, ಈರುಳ್ಳಿ ೨ ಕೆಜಿ, ಚಿರಾಯಿತ ೫೦ ಗ್ರಾಂ, ಹಿಪ್ಪಲಿ ೩೦ ಗ್ರಾಂ, ಮೋಡಿ ೩೦ ಗ್ರಾಂ, ಕೋಟಿ ಸೊಪ್ಪು ೫ ಹಿಡಿ, ಮಲ್ಲಿಗೆ ಸೊಪ್ಪು ೩ ಹಿಡಿ, ಬೇವಿನ ಸೊಪ್ಪು ೩ ಹಿಡಿ, ಮರಹಾಲೆಸೊಪ್ಪು ೩ ಹಿಡಿ, ಹುಚ್ಚು ಔಡಲ ತೊಪ್ಪೆ ಸಣ್ಣಗೆ ಹೆಚ್ಚಿದ್ದು ಬೊಗಸೆ ಹುಣಸೆ ಹಣ್ಣು ೨೫೦ ಗ್ರಾಂ, ಉತ್ತರಾಣಿ ಸೊಪ್ಪು ೩ ಹಿಡಿ-ಇವುಗಳನ್ನು ಅರೆದು ಕಷಾಯಮಾಡಿ ಪಾತ್ರೆಯಲ್ಲಿ ಇಟ್ಟುಕೊಂಡು ಮೂರು ಗೊಟ್ಟದಂತೆ ಎಲ್ಲಾ ಜಾನುವಾರುಗಳಿಗೂ ಹಾಕಬೇಕು. ಬಹಳಮಾಡಿ ಇಟ್ಟು ಕೊಂಡು ಒಂದರಿಂದ ಕೈಹಾಕುವಾಗ ಗೊಟ್ಟ ತೊಳೆದು ಕೊಳ್ಳುತ್ತ ಹಾಕಬೇಕು. ಚರಟವನ್ನು ತಿರುವಿ ಪಾತ್ರೆಯಲ್ಲಿ ಹಾಕುತ್ತ ಬಿಸಿ ಮಾಡಿ ಹಾಕಬೇಕು. ರಸಗಟ್ಟಿ ಆದರೆ ನೀರು ಸೇರಿಸುತ್ತ ಹಾಕುವಾಗ ಬಿಸಿಮಾಡಿ ಹಾಕಬೇಕು. ಕುತ್ತಿಗೆ ದಪ್ಪವಾಗುತ್ತದೆ. ಅದಕ್ಕೆ ಅಂಗಡಿಯಲ್ಲಿ ಕಲ್ಲುನಾರು ತಂದು ೨೫೦ ಗ್ರಾಂ ಅರೆದು ಲೊಟದಲ್ಲಿ ಹಾಕಿ ರಗಸೆಪಟ್ಟಿ ಜಜ್ಜಿ ರಸ ಹಿಣಿದು ಬೆಣ್ಣೆಹಾಕಿ ಕೆಂಡದ ಮೇಲೆ ಇಟ್ಟು ಕುದಿಸಿ ಸುಡುವುದನ್ನೆ ಎರಡು ಹೊಳ್ಳೆಯಲ್ಲಿ ಬಿಡುವುದು. ಕಲ್ಲು ನಾರಿನದ್ದಾದ್ದರಿಂದ ಮೂಗು ಗುಳ್ಳೆ ಬರುವುದಿಲ್ಲಾ. ಕುತ್ತಿಗೆ ಬಾವಿಗೆ ರಗಸೆ ಪಟ್ಟಿ ಮಧ್ಯ ಜಜ್ಜಿ ಕಲ್ಲನ್ನು ಕಾಯಿಸಿ ಮಧ್ಯ ಇಟ್ಟುಕೊಂಡು ಮಡಿಸಿ ಕಟ್ಟಿಕೊಂಡು ಕುತ್ತಿಗೆಗೆ ಕಾವು ಕೊಡಬೇಕು. ಬಹಳ ಅಪಾಯವಾದ ರೋಗ ಮುಂಚಿತವಾಗಿ ಆದರಣೆ ಮಾಡಬೇಕು ಮರೆಯಬಾರದು.

ಚಪ್ಪೆರೋಗ ಅಥವಾ ಗಳಲೆರೋಗ : ಚಿಹ್ನೆ ವಿಷಕ್ರಿಮಿಯಿಂದ ಬರುತ್ತದೆ. ಮೂಗು ಹಿಪ್ಪಳಿಸುತ್ತದೆ, ಬಾಯಿಯಲ್ಲಿ ಸ್ವಲ್ಪ ಸ್ವಲ್ಪ ಜೊಲ್ಲು ಬರುತ್ತದೆ, ಹೊಟ್ಟೆ ಉಬ್ಬರಿಸುತ್ತದೆ, ಜ್ವರ ಬರುತ್ತದೆ, ಕೊಡು ಮುಟ್ಟಿನೋಡಿದರೆ ಬಿಸಿ ಇರುತ್ತದೆ. ಮೂರು ಅಥವಾ ಐದು ಗಂಟೆಗೆ ನಾಭಿಸೇರಿ ಕೊಂಬು ತಣ್ಣಗಾಗುತ್ತದೆ. ಜ್ವರ ಬಂದ ೧೨ ಗಂಟೆ ಹೊತ್ತಿಗೆ ಒಂದು ಕಾಲು ಮತ್ತು ಶರೀರದ ಯಾವಭಾಗದಲ್ಲಿ ಆಗಲಿ ಬಾವು ಬರುತ್ತದೆ. ಅದನ್ನು ತಿಕ್ಕಿದರೆ ಪರ ಪರ ಜೀಕ ಜೀಕ ಎಂಬ ಶಬ್ದವು ಬರುತ್ತದೆ. ಇದ್ದನ್ನು ಚಪ್ಪೆ ಜಾಡ್ಯವೆಂದು ತಿಳಿಯಬೇಕು. ಹತ್ತಿರದ ಪಶು ವೈದ್ಯರನ್ನು ಕರೆದು ಕೊಂಡು ಬಂದು ಬೇಗ ಉಪಚಾರ ಮಾಡಿಸುವುದರಿಂದ ಜಾನುವಾರುಗಳು ಮುಕ್ತಿ ಹೊಂದುತ್ತವೆ.

ಕಷಾಯ : ಸಾಸಿವೆ ೧೦೦ ಗ್ರಾಂ, ಅರಿಶಿಣ ೫೦ ಗ್ರಾಂ, ಚಿರಾಯಿತ ೨೫ ಗ್ರಾಂ, ಹಿಪ್ಪಲಿ ೨೦ ಗ್ರಾಂ ಮೋಡಿ ೨೦ ಗ್ರಾಂ, ಮೆಣಸು ೨೦ ಗ್ರಾಂ, ಬೆಳ್ಳುಳ್ಳಿ ಗಡ್ಡೆ ೫, ಅಜ್ವಾನ ೫೦ ಗ್ರಾಂ, ಈರುಳ್ಳಿ ಗಡ್ಡೆ ೪, ಒಣಮೆಣಸಿನ ಕಾಯಿ ಒಂದು ಹಿಡಿ, ಜೀರಿಗೆ ೫೦ ಗ್ರಾಂ, ಬಾಳೆಮರ ಒಳಗಣ ಕುಸುಮ ೨,

ಔಡಲ ತೊಪ್ಪೆ ೨ ಹಿಡಿ, ಕಾಚಾಳಿ ತೆತಕಿಮರದ ಬಿಳಲು ೧ ಹಿಡಿ, ಸಣ್ಣಗೆ ಕತ್ತರಿಸಿಕೊಂಡು ಕುಟ್ಟಬೇಕು, ಮರಹಾಲೆ ಸೊಪ್ಪು ೨ ಹಿಡಿ, ಅಮೃತ ಬಳ್ಳಿ ಸೊಪ್ಪು ಮತ್ತು ದಂಟನ್ನು ಹಾಕಬೇಕು. ಕುರುಟಿಗನ ಸೊಪ್ಪು ೩ ಹಿಡಿ, ಹುಣಸೆ ಹಣ್ಣು ೧೦೦ ಗ್ರಾಂ ಈ ಪ್ರಮಾಣ ಮಾಡಿದ ಕಷಾಯವು ೩ ಜಾನುವಾರುಗಳಿಗೆ ಬರುತ್ತದೆ. ಇದನ್ನು ಸಣ್ಣಗೆ ಅರೆದು ಪಾತ್ರೆಯಲ್ಲಿ ಹಾಕಿ ನೀರು ಸೇರಿಸಿ ಬಿಸಿಮಾಡಿ ಹಾಕಬೇಕು. ಎರಡು ಹೊತ್ತು ಬಹಳ ದನಗಳು ಇದ್ದರೆ ದುಪ್ಪಟ್ಟು ಸೇರಿಸಿ ಬಿಸಿ ಮಾಡುತ್ತಾ ಹಾಕಬೇಕು. ಗಳಲೆ ರೋಗಕ್ಕೆ ಹೇಳಿದಂತೆಯೇ ಉಪಚಾರ ಮಾಡಬೇಕು. ಅಕ್ಕಿ, ಮೆಂತ್ತೆ, ಅಂಬಲಿ ಹಾಕಬೇಕು.

ಮುಳುವು ಬಿಟ್ಟರೆ : ಚಿಹ್ನೆ ಮುಂಗಾಲು ಒಂದು ಕುಂಟುತ್ತದೆ. ಇದು ಸ್ವಾಭಾವಿಕವಾಗಿ ರೈತ ಮಕ್ಕಳಿಗೆಲ್ಲರಿಗೂ ತಿಳಿದ ವಿಷಯ

ಮೂಲಿಕೆಗಳು : ಉತ್ತರಾಣಿ ಸೊಪ್ಪು ೧ಹಿಡಿ ಅರೆದು ಬೆಲ್ಲದ ನೀರಿನಲ್ಲಿ ಕದಡಿ ಸೋಸಿ ಮೂಗಿನಲ್ಲಿ ಹಾಕಬೇಕು. ಮೂರು ದಿವಸದಲ್ಲಿ ಮುಳುವು ಬಿಡದ ಕಾಲಿಗೆ ಕೊಳಗಕ್ಕೆ ಕಡ್ಡಿ ಕಟ್ಟಿ, ಸೀತೊಂಡೆಸೊಪ್ಪು ಮೆಣಸು ೧೦ಗ್ರಾಂ ಅರೆದು ಮಕ್ಕಳ ಮೂತ್ರದಲ್ಲಿ ಕಲಸಿ ಸೋಸಿ ಕೀಲುಗಳನ್ನು ಹುರಿಯಿಂದ ಕೋಡಿಗೆ ಕಟ್ಟಿ ಕಿವಿಯಲ್ಲಿ ಬಿಡುವುದು. ಮುಂದಕ್ಕೆ ಹೊಡೆಯಬೇಕು. ಅರ್ಧ ಗಂಟೆ ಬಿಟ್ಟು ಕಾಲಿಗೆ ಕಟ್ಟಿದ್ದನ್ನು ಬಿಚ್ಚಬೇಕು.

ಮೊಣಕಾಲು ಸಂದು ಅವಡು ರೋಗ : ರೋಗಗಳು ಮೊಣಕಾಲು ಕೊಳಗದ ಹರಡು ಸಂದಿನಲ್ಲಿ ಬಾವು ದಪ್ಪನಾಗಿ ಸ್ವಲ್ಪ ಕುಂಟುತ್ತವೆ. ಇದಕ್ಕೆ ಅವಡು ಎನ್ನತ್ತಾರೆ. ಬಾವು ಗಟ್ಟಿಯಾಗಿ ಮುಟ್ಟಿದರೆ ಮೆತ್ತಗೆ ಇರುತ್ತದೆ. ಇದು ವಿಷಕ್ರಿಮಿಯಿಂದ ಬರುತ್ತದೆ. ಇದೊಂದು ಅಂಟುರೋಗ. ಪಕ್ಕದಲ್ಲಿ ಕಟ್ಟಿದ ದನಗಳಿಗೂ ಬರುತ್ತದೆ; ಆಕಳುಗಳು ಕಂದು ಹಾಕುತ್ತವೆ. ಕಾಲುಗಳಿಗೆ ಇಸುಗಂಧಾರಿ ಸೊಪ್ಪು, ಲಕ್ಕಿ ಸೊಪ್ಪು, ಅರಿಷಿಣದ ಪುಡಿಯನ್ನು ಮಜ್ಜಿಗೆಗೆ ಸೇರಿಸಿ ಬಿಸಿ ಮಾಡಿ ಬೆಚ್ಚಗಿನದನ್ನು ಹಾಕಬೇಕು.

ಔಷಧಿ : ಸಾಸಿವೆ ೨೦೦ಗ್ರಾಂ, ಅರಿಷಿಣ ೫೦ಗ್ರಾಂ, ಒಣಶುಂಠಿ ೫೦ಗ್ರಾಂ, ಮೆಣಸು ೨೦ಗ್ರಾಂ, ಬೆಳ್ಳೊಳ್ಳಿ ೨೦೦ಗ್ರಾಂ, ಈರುಳ್ಳಿ ೧ಕೆ.ಜಿ, ಒಣಮೆಣಸಿನಕಾಯಿ ೨೦೦ಗ್ರಾಂ, ಇಸಿಗೆ ಸೊಪ್ಪು ೩ಹಿಡಿ, ಲಕ್ಕಿ ಸೊಪ್ಪು ೩ಹಿಡಿ, ಉತ್ತರಾಣಿಸೊಪ್ಪು ೩ಹಿಡಿ. ಔಡಲತೊಪ್ಪೆ ೧ಬೊಗಸೆ, ಆಡು ಮುಟ್ಟದ ಸೊಪ್ಪು ೩ಹಿಡಿ–ಸಣ್ಣಗೆ ಹೆಚ್ಚಿ ಕುಟ್ಟಬೇಕು. ಕಂದು ಹಾಕುವುದಕ್ಕೆ ಹೇಳಿದ ಕಷಾಯವನ್ನು ಸೇರಿಸಿಕೊಳ್ಳಬಹುದು.

ದನಗಳಿಗೆ ಹುಳು ಮುಟ್ಟಿದರೆ : ಚಿಹ್ನೆ ಮೈ ಗಂಧೆಯಾಗುತ್ತದೆ, ಹೊಟ್ಟೆ ಉಬ್ಬರಿಸುದು, ಕಣ್ಣು ಹುಬ್ಬು ದಪ್ಪವಾಗುತ್ತದೆ. ಕಿವಿ ಹುಬ್ಬುಗಳು ಸಹ ದಪ್ಪವಾಗುತ್ತವೆ. ಈ ಕಾಯಿಲೆ ಕಂಡ ತಕ್ಷಣವೇ ಔಷಧಿಯನ್ನು ಹಾಕಿಸಬೇಕು.

ಕಷಾಯ ತಯಾರಿಸುವ ವಿಧಾನ : ಉತ್ತರಾಣಿ ಸೊಪ್ಪು ೩ಹಿಡಿ, ಆಡು ಮುಟ್ಟದ ಸೊಪ್ಪು, ಮರಾಲೆ ಸೊಪ್ಪು(ಹಗಲಬಡಕನ ಸೊಪ್ಪು) ಮತ್ತು ಕರೆಹಾಗಲು ಸೊಪ್ಪು ಎಂದು ಕರೆಯುತ್ತಾರೆ. ಕುರುಟಿಗನ ಸೊಪ್ಪು ೨ಹಿಡಿ, ಅಮೃತಬಳ್ಳಿಸೊಪ್ಪು ೩ಹಿಡಿ(ಮಂಗನಬಳ್ಳಿ) ದಂಟು ಮತ್ತು ಬಳ್ಳಿ ಎರಡನ್ನು ಹಾಕಬಹುದು. ಕರಿಮೆಣಸಿನಕಾಳು ೧೦ಗ್ರಾಂ, ಬೆಳ್ಳೊಳ್ಳಿ ೩ಗಡ್ಡೆ ಎಲ್ಲ ಸೊಪ್ಪುಗಳನ್ನು ಸೇರಿಸಿ ಅರೆದು ಸಣ್ಣಗೆ ಮಾಡಬೇಕು. ಅದನ್ನು ಪಾತ್ರೆಯಲ್ಲಿ ಹಾಕಿ ಮಜ್ಜಿಗೆ, ಬಿಸಿನೀರು ಎರಡನ್ನು ಸೇರಿಸಿ, ಸ್ವಲ್ಪ ಬಿಸಿಮಾಡಬೇಕು. ದಿವಸಕ್ಕೆ ಎರಡು ಹೊತ್ತು ಪ್ರತಿಸಾರಿ ಮೂರು ಗೊಟ್ಟ ಹಾಕಬೇಕು. ಇದನ್ನು ಮೂರು ದಿವಸ ಹಾಕಬೇಕು. ಹಾವು ಕಚ್ಚಿ ವಿಷ ವ್ಯತ್ಯಾಸವಾಗಿರುವುದರಿಂದ, ಪೈರಿಗೆ ಔಷಧ ಪ್ರಯೋಗ ಮಾಡಿರುವುದನ್ನು ತಿಂದಿದ್ದರಿಂದಲೂ ಓೀಗಾಗುತ್ತದೆ. ಈ ಔಷಧಿಯ ಚರಟವನ್ನು ಕಣ್ಣು, ಹುಬ್ಬು,

ಕಿವಿ, ಮೈಮೇಲೆ ಎಲ್ಲಾ ಭಾಗದಲ್ಲಿಯೂ ತಿಕ್ಕಬೇಕು. ಮೈಮೇಲಿನ ಗಂಧೆ ಹೋಗಿದ್ದರೂ ಕೂಡ ಹಸಿಹುಲ್ಲು ಮೇವಿಗೆ ಬಿಡಬಾರದು. ಬಿಸಿನೀರು, ಒಣಮೇವನ್ನು ಹಾಕಬೇಕು. ಗಂಜಿ ಮತ್ತು ಅಂಬಲಿ(ರಾಗಿ)ಯನ್ನು ಹಾಕಬಾರದು.

ಎರಡನೇ ಚಿಕಿತ್ಸೆಯಾಗಿ ಮೂಲಿಕೆಗಳು ಕರಿಕೆಬೇರು ಎರಡು ಹಿಡಿ, ಇಸುಗುಂಬಳ ಚಕ್ಕೆ ಅದನ್ನು ಇರುವ ಕಡೆಯಿಂದ ತಂದು, ಬುರುಡೆಯನ್ನು ಮನೆಯಲ್ಲಿ ಇಟ್ಟುಕೊಳ್ಳಬೇಕು. ಚಕ್ಕೆ ಹೊಡೆದು(ಮೊದಲ ವಿಧಾನದಂತೆ ಮಾಡಬೇಕು) ಅರ್ಧ ಬುರುಡೆಯ ಚಕ್ಕೆಯನ್ನು, ಮೆಣಸು ೧೦ಗ್ರಾಂ, ಬೆಳ್ಳೊಳ್ಳಿ ೨ಗಡ್ಡೆ ಅರೆದು ಮಜ್ಜಿಗೆಗೆ ಬಿಸಿನೀರು ಸೇರಿಸಿ ಬಿಸಿ ಮಾಡಿ ಹಾಕಬೇಕು.

ಮೂರನೇ ಚಿಕಿತ್ಸೆಯಾಗಿ ಈಶ್ವರಿ ಸೊಪ್ಪು ೨ಹಿಡಿ, ಎಕ್ಕೆ ಸೊಪ್ಪು ೨ಹಿಡಿ, ಮೆಣಸು ೧ತೊಲ, ಬೆಳ್ಳೊಳ್ಳಿ ೨ಗಡ್ಡೆ, ಒಣಶುಂಠಿ ೩ಕೊಂಬು ಇವುಗಳನ್ನು ಸಮನಾಗಿ ಸೇರಿಸಿ ಪುಡಿಮಾಡಿ ಬಿಸಿನೀರನ್ನು ಮಜ್ಜಿಗೆಯಲ್ಲಿ ಕದಡಿ ಸ್ವಲ್ಪ ಬಿಸಿಮಾಡಿ ಹಾಕಬೇಕು. ಎರಡು ಗೊಟ್ಟದಂತೆ ದಿವಸಕ್ಕೆ ಎರಡುಹೊತ್ತು ಮೂರು ದಿವಸ ಹಾಕಬೇಕು.

ಮೇವು ತಿನ್ನುವುದಕ್ಕೆ : **ಚಿಹ್ನೆ** ಅಂಟುನಾಲಿಗೆ, ನಾಭಿಯಲ್ಲಿ ಜ್ವರಯಿದ್ದರಿಂದ ರುಚಿಬರದೇ ಮೇವು ತಿನ್ನುವುದನ್ನು ಕಡಿಮೆಮಾಡಿ ಬಡವಾಗುತ್ತವೆ.

ಕಷಾಯ ತಯಾರಿಸುವ ವಿಧಾನ : ಸಾಸಿವೆ ೨೦೦ಗ್ರಾಂ, ಒಣಶುಂಠಿ ೫೦ಗ್ರಾಂ. ಅರಿಷಿಣ ೫೦ಗ್ರಾಂ, ಅಜ್ವಾನ ೫೦ಗ್ರಾಂ. ಈರುಳ್ಳಿ ೧ಕೆ.ಜಿ, ಒಣಮೆಣಸಿಕಾಯಿ ೨೦೦ಗ್ರಾಂ. ಇಸಗಿ ಸೊಪ್ಪು ೩ಹಿಡಿ, ಆಡು ಮುಟ್ಟದ ಸೊಪ್ಪು ೩ಹಿಡಿ. ಲಕ್ಕಿ ಸೊಪ್ಪು ೩ಹಿಡಿ, ಮುಂಗಾರ ಬಳ್ಳಿ ೩ಹಿಡಿ. ಔಡಲಚಕ್ಕೆ ೧ಬೊಗಸೆ, ಬಿಲ್ವಪತ್ರೆ ೩ಹಿಡಿ. ಉತ್ತರಾಣಿ ಸೊಪ್ಪು ೩ಹಿಡಿ, ತಾವರೆ ಸೊಪ್ಪು ೩ಹಿಡಿ. ಆವರಿಕೆ ಸೊಪ್ಪು, ಹುಣಸೆಹಣ್ಣು ೫೦ಗ್ರಾಂ, ಚಿರಾಯುತ ಕಡ್ಡಿ ೩೦ಗ್ರಾಂ, ಹಿಪ್ಪಲಿ೩೦ಗ್ರಾಂ, ಮೋದಿ ಕಡ್ಡಿ ೩೦ಗ್ರಾಂ ಇವುಗಳನ್ನು ಸೂಚಿಸುವ ಪ್ರಕಾರವೆ ಹಾಕಬೇಕು. ಮಾಡುವ ವಿಧಾನ:- ಇವುಗಳನ್ನು ಮೇಲೆ ತಿಳಿಸಿದ ಪ್ರಕಾರ ಸಮನಾಗಿ ಸೇರಿಸಿ ಸಣ್ಣಗೆ ಪುಡಿ ಮಾಡಿ ಪಾತ್ರೆಯಲ್ಲಿ ಹಾಕಿ, ಸಮನಾಗಿ ನೀರು ಸೇರಿಸಿ ಬಿಸಿ ಮಾಡಿ ಆರಿಸಿ, ಮೂರು ಗೊಟ್ಟ ಹಾಕಬೇಕು. ದಿವಸಕ್ಕೆ ಮೂರು ಹೊತ್ತು ಬಿಸಿ ಮಾಡಿಟ್ಟು, ರಸಗಟ್ಟಿಯಾದರೆ ನೀರು ಹಾಕುತ್ತಾ ಇರಬೇಕು. ಪಾತ್ರೆಯಲ್ಲಿ ಕಷಾಯ ಆಗುವವರೆಗೂ ದಿವಸವೂ ಬಿಸಿ ಮಾಡುತ್ತಾ ಹೋಗಬೇಕು. ಚರಟವನ್ನು ಮತ್ತೆ ದುಂಡಿಯಲ್ಲಿ ತಿರುವಿ ಪಾತ್ರೆಯಲ್ಲಿ ಹಾಕಿ ಕಾಯಿಸಿ ಸೋಸಿ ಕುಡಿಸಬಹುದು. ಸುಮಾರು ೮ರಿಂದ ೧೦ದಿವಸಗಳ ತನಕ ಹಾಕಬೇಕು. ಇದಕ್ಕೆ ಪ್ರತ್ಯೇಕ ಮಾಡುವ ಅವಶ್ಯಕತೆಯಿಲ್ಲ, ಹಿಂಡಿಯನ್ನು ಹಾಕಬಹುದು, ಹಸಿ ಹುಲ್ಲು, ಒಣಹುಲ್ಲು ಹಾಕಬಹುದು.

ಈ ಕೃತಿಯಲ್ಲಿ ಇನ್ನೂ ಅನೇಕ ರೋಗಗಳ ಚಿಕಿತ್ಸೆ ಕುರಿತಾದ ಮಾಹಿತಿ ಇದೆ. ರಕ್ತಗಚ್ಚಿ ಹುಳು ಮುಟ್ಟಿದರೆ, ಚಕ್ರ ರೋಗ, ನಾರನರಡಿ ರೋಗ, ಊದನರಡಿ ರೋಗ, ಧಮ್ಮು ನರಡು, ಹಲಗೆನರಡು, ಮತ್ತು ಬೇನೆ ರೋಗ ದನಗಳು ಕಂದು ಹಾಕಿದಾಗ, ಪಾರ್ಷಿ(ಲಕ್ವ)ಹೊಡೆದರೆ, ಮೂಗಿನಲ್ಲಿ ರಕ್ತ ಬೀಳುವುದು, ಕೆಚ್ಚಲುಬಾವು ಬಂದಾಗ, ಸಸಲರೋಗ, ಹಂಪೇರು,ಕುಂದುನರಡು ರೋಗ, ಬಾವುರೋಗ, ಜಂತು ಹುಳಕ್ಕೆ, ಎಳೆಕರುಗಳಿಗೆ ಮೂರ್ಚೆ ರೋಗ ಬಂದರೆ, ದೊಮ್ಮೆನಂಜು ರೋಗ, ಎಮ್ಮೆ ಆಕಳುಗಳು ಕರು ಹಾಕಿದ ದೋಷ, ಗರ್ಭನಿಲ್ಲುವುದಕ್ಕೆ ಉಪಚಾರ, ನಾಟಿ ಪಶುವೈದ್ಯ ಉಪಚಾರದ ವಿಧಾನ, ಕಷಾಯ ಮತ್ತು ಪಥ್ಯೆ ಕುರಿತಾದ ಸಮಗ್ರ ಮಾಹಿತಿ ದೊರೆಯುತ್ತದೆ. ಕೃಷಿಕರು ಈ ಎಲ್ಲಾ ಬಗೆಯ ರೋಗ ರುಜಿನಗಳಿಂದ ಸಾಕು ಪ್ರಾಣಿಗಳನ್ನು ಆರೈಕೆ ಮಾಡುತ್ತಾರೆ.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಸಾಕು ಪ್ರಾಣಿಗಳ ಆರೈಕೆ ಕುರಿತಾದ ಮಾಹಿತಿ ಅಷ್ಟಾಗಿ ಹೆಚ್ಚು ಕಂಡು ಬರುವುದಿಲ್ಲ ಆದರೂ ನಯಸೇನನ ಧರ್ಮಾಮೃತದಲ್ಲಿ ಕೃಷಿಕನ ಸಾಕು ಪ್ರಾಣಿಗಳಾದ ಎತ್ತು, ಎಮ್ಮೆ, ಹಸು, ಆಡು, ಕುರಿ, ಮುಂತಾದವು ಮಾಗಿಯ ಕಾಲದಲ್ಲಿ ಹೊಲಗದ್ದೆಗಳಲ್ಲಿ ಕೊಯ್ಲು ಆದನಂತರ ಚಿಗುರಿರುವ ಕುಡಿ ಅದರಲ್ಲಿಯೂ ಔಡಲ(ಹರಳು) ಕುಡಿ, ಜೋಳದ ಕುಡಿ, ಮತ್ತು ಬಿದುರಿನ ಕುಡಿಯನ್ನ ತಿಂದರೆ ಮರಣಾಂತಿಕ ರೋಗಕ್ಕೆ ತುತ್ತಾಗುತ್ತವೆ. ಅಂತಹ ವೇಳೆಯಲ್ಲಿ ಅವುಗಳ ಆರೈಕೆ ತುಂಬ ಮಹತ್ವದ್ದು ಎಂದು ತಿಳಿಸುತ್ತಾನೆ. "...........ನೀನಿಂದು ಕಟಿಲೆಯಂತಿಂದ ಪಶುವಿನಂತಾನಂ ಮದ್ದು ಗುಣಿಕೆಯಂತಿಂದ............."[೧೩] ಕಳಿಲೆ ಎಂದರೆ ಬಿದಿರಿನ ಬುಡದಲ್ಲಿ ಚಿಗುರಿ ಬೆಳೆಯುವುದು. ಇದನ್ನು ಪಶುಗಳು ತಿಂದಾಗ ಬಾಳೆಯ ಹಣ್ಣಿನಲ್ಲಿ ಇಂಗು ಇಟ್ಟು ತಿನ್ನಿಸುತ್ತಾರೆ. ಅಲ್ಲದೇ ಬೆಲ್ಲ, ಮೆಲುಕು ಕಡಿಯುವಂತೆ ಕೆಲವು ಗಿಡಗಳ ದಂಟು ಜಗಿಸುತ್ತಾರೆ. ಅಂತಹ ಮಾಹಿತಿ ಇಲ್ಲಿ ದೊರೆಯುತ್ತದೆ. ಒಟ್ಟಾರೆಯಾಗಿ ನಾಟಿ ವೈದ್ಯದಲ್ಲಿ ಪ್ರಕೃತಿಯ ಮಡಿಲಲ್ಲಿ ದೊರೆಯುವ ಸಸ್ಯಗಳು, ಹೂವು, ಸೊಪ್ಪು, ಕಾಯಿ, ಕಾಂಡ, ತೊಗಟೆ, ಎಲೆ, ಬೇರು, ಅಲ್ಲದೇ ಕೆಲವು ವಿಶಿಷ್ಟ ಸಸ್ಯವರ್ಗಗಳಿಂದ ಉತ್ಪತ್ತಿಯಾಗುವ ಸಾಸವೆ, ಜೀರಿಗೆ, ಈರುಳ್ಳಿ, ಬೇಳ್ಳುಳ್ಳಿ, ಕಾಳುಮೆಣಸು, ಸಾಜೀರಿಗೆ, ಹುಣಸೆಹಣ್ಣು, ಕೊತ್ತಂಬರಿ, ಶುಂಠಿ, ಒಣಮೆಣಸಿನಕಾಯಿ, ಆಜ್ವಾನಕಾಳು, ರಾಗಿ, ಗೋಧಿ, ಕೊಬ್ಬರಿ, ಅರಿಶಿಣ, ಚಿರಾಯುತ, ಮೋಡಿ, ಮುಂತಾದವುಗಳ ಬಳಕೆ ಕಂಡು ಬರುತ್ತದೆ. ಪ್ರಕೃತಿಯ ಕೊಡುಗೆ ಅಪಾರವಾದುದು ಮನುಷ್ಯನ ಜಾಣ್ಮೆ ಪ್ರಕೃತಿಯ ಮುಂದೆ ಚಿಕ್ಕದಾದಂತ್ತೆ ಕಾಣುತ್ತದೆ. ಆದರೂ ಅಂತಹ ಅಗಾದ ಗಿಡಮೂಲಿಕೆಗಳನ್ನು ಪತ್ತೆಮಾಡಿ, ತನ್ನ ಉಪಯೋಗಕ್ಕೆ ಬಳಸಿಕೊಳ್ಳುವಲ್ಲಿ ಹಿಂದೆ ಬಿಳದಿರುವುದನ್ನು ಮರೆಯುವಂತಿಲ್ಲ. ಇಂದು ನಾಟಿ ವೈದ್ಯಕ್ಕಿಂತ ಇಂಗ್ಲೀಷ ಔಷಧಿಯ ಮೇಲೆ ಹೆಚ್ಚು ಅವಲಂಬಿತವಾಗಿರುವುದು ಕಂಡು ಬರುತ್ತದೆ. ಇದಕ್ಕೆ ಕಾರಣ ಅನೇಕ ಕಡೆ ಇಂತಹ ಅಮೂಲ್ಯ ಗಿಡಮೂಲಿಕೆಗಳು ಸಿಗದೆ ನಾಶಹೊಂದಿರುವಂತದ್ದು. ಒಂದು ಪಕ್ಷ ಇದ್ದರೂ ಅದನ್ನು ಕಾಪಾಡಿಕೊಳ್ಳುವಲ್ಲಿ ಮಾನವನ ಕಾಳಜಿ ಇಲ್ಲದೆ ಇರುವುದು ಹಾಗೂ ಅನುಭವದ ಕೊರತೆಯಿಂದ ಅದನ್ನು ಪಥ್ಯೆ ಹಚ್ಚುವಲ್ಲಿ ವಿಫಲನಾಗಿರುವಂತದ್ದು ಕಂಡುಬರುತ್ತದೆ. ಆಧುನಿಕತೆಯ ಭರಾಟೆಯಲ್ಲಿ ರೈತನ ಜೀವನ ಶೈಲಿ ಬದಲಾಗಿದೆ. ಹಸುಗಳ ಆರೈಕೆಯ ಕಾಳಜಿಯೂ ಕಡಿಮೆಯಾಗಿದೆ. ಕೇವಲ ಲಾಭದ ದೃಷ್ಟಿಯಿಂದ ಹೈಬ್ರಿಡ್ ತಳಿಯ ಹಸುಗಳನ್ನು ಸಾಕಲು ಮುಂದಾಗಿ ನಾಟಿ ಹಸುಗಳನ್ನು ಸಾಕುವ ಪ್ರವೃತ್ತಿ ಕಡಿಮೆಯಾಗಿದೆ. ಇಂಗ್ಲೀಷ ಔಷಧಿಯ ಕಡೆಗೆ ಅವನ ಒಲವು ಹೆಚ್ಚಾಗಿದೆ. ಕೃಷಿ ಬಳಕೆಯಲ್ಲಿ ಎತ್ತುಗಳಿಗಿಂತ ಟ್ರಾಕ್ಟರ್, ಟಿಲ್ಲರಗಳ ಬಳಕೆ ಹೆಚ್ಚಾಗಿ ಎತ್ತುಗಳ ಆರೈಕೆಯಲ್ಲಿಯೂ ಸೋಮಾರಿತನ ಕಂಡು ಬರುತ್ತಿದೆ.

ಕೃಷಿಯಲ್ಲಿ ಬಲಿಷ್ಠವಾದ ಎತ್ತುಗಳ ಬಳಕೆ ಮತ್ತು ನಾಟಿ ವೈದ್ಯನ ಅನೇಕ ಚಿಕಿತ್ಸೆಯ ವಿಧಾನ, ಔಷಧಿಗೆ ಅಗತ್ಯವಿರುವ ಗಿಡಮೂಲಿಕೆಗಳನ್ನು ಬೆಳೆಸುವಂತಹ ಕಾಯ್ದಿಟ ಅರಣ್ಯಗಳನ್ನು ಮಾಡುವುದು ಹಾಗೂ ಅನೇಕ ಕೃಷಿ ತಜ್ಞರಿಗೆ ಈ ಕುರಿತಾದ ಮಾಹಿತಿಯನ್ನು ನೀಡುವಂತಹ ಕೆಲಸಗಳನ್ನು ಕೃಷಿ ವಿಶ್ವವಿದ್ಯಾನಿಲಯಗಳು ಮಾಡಬೇಕಾಗಿದೆ. ಏಕೆಂದರೆ ಎಲ್ಲಾ ಅಂಶಗಳಿಗೂ ಪಾಶ್ಚಿಮಾತ್ಯ ಕೃಷಿವಿಧಾನದ ಮೇಲೆ ಅವಲಂಬಿತವಾಗಿ ಪರಾವಲಂಬಿ ಜೀವನ ನಡೆಸುವುದನ್ನು ನಿಲ್ಲಿಸಬೇಕಾಗಿದೆ. ಕೃಷಿ ಪ್ರಧಾನ ದೇಶವಾದ ಭಾರತದ ಆರ್ಥಿಕ ಅಭಿವೃದ್ಧಿ ಈ ಮಟ್ಟದ ವ್ಯವಸಾಯದಲ್ಲಿದೆಯೇ ಹೊರತು ಬೃಹತ್ ಪ್ರಮಾಣದ ಕೃಷಿಯಲಿಲ್ಲ. ಇತ್ತೀಚೀನ ದಿನಗಳಲ್ಲಿ ಸಾವಯುವ ಕೃಷಿ, ಸಹಜ ಕೃಷಿಯತ್ತ ರೈತರ ಒಲವು ಹೆಚ್ಚಾಗಿರುವುದನ್ನು ಕಾಣಬಹುದಾಗಿದೆ.

ಕೃಷಿ ಬಳಕೆಯಲ್ಲಿ ರೈತನಿಗೆ ಸಹಕಾರಿಯಾದ ಮತ್ತು ಅಪಾಯಕಾರಿಯಾದ ಕ್ರಿಮಿಕೀಟಗಳನ್ನು ಇನ್ನೂಮುಂದೆ ಚರ್ಚಿಸಲಾಗಿದೆ. ಭೂಮಿಯಲ್ಲಿ ಕಣ್ಣಿಗೆ ಕಾಣುವ, ಕಾಣದೆ ಇರುವ ಅನೇಕ ಕೀಟಹುಳಗಳಲ್ಲಿ ರೈತನಿಗೆ ಮಿತ್ರನಾಗಿ ಸಹಕಾರಿಯಾಗಿರುವವು ಕೆಲವಾದರೆ ಮತ್ತೆ ಕೆಲವು ಬೆಳೆಗೆ ಹಾನಿಕಾರಕವಾಗಿಯೂ ಇರುವಂತವುಗಳು ಹೇರಳವಾಗಿ ಕಂಡುಬರುತ್ತವೆ. ರೈತಬೆಳೆದ ಬೆಳೆಯಲ್ಲಿ ಸರ್ವರ ಪಾಲು ಇರುವಂತೆ ಕ್ರಿಮಿ ಕೀಟಗಳಿಗೂ ಪಾಲಿದೆ. ರೈತನ ಮಿತ್ರನಂತೆ ಇರುವ ಕೆಲವು ಕ್ರಿಮಿ ಕೀಟಗಳೆಂದರೆ ಗೊಬ್ಬರದ ಹುಳು, ಕಣಜಕೀಟ, ಮಳೆಹುಳು, ಶಿವನಕುದುರೆ, ಮಿಡತೆ, ಎರೆಹುಳು, ಹಾವು, ಇನ್ನೂ ಮುಂತಾದವುಗಳನ್ನು ಕಾಣಬಹುದಾಗಿದೆ. ಇವುಗಳು ರೈತನಿಗೆ ಪ್ರತ್ಯಕ್ಷ ಹಾಗೂ ಪರೋಕ್ಷ ರೀತಿಯಲ್ಲಿ ಸಹಕರಿಸುತ್ತವೆ. ಇಂತವುಗಳ ಆರೈಕೆಯನ್ನು ಕೃಷಿಕರು ಮಾಡಿಕೊಳ್ಳಬೇಕಾದ್ದು ಅವನ ಆದ್ಯ ಕರ್ತವ್ಯಗಳಲ್ಲೊಂದಾಗಿದೆ. ಒಕ್ಕಲಿಗರ ಅನುಭವದ ಹಿನ್ನೆಲೆಯಲ್ಲಿ ಇವುಗಳ ಆರೈಕೆಯನ್ನು ಈ ಕೆಳಗಿನಂತೆ ತಿಳಿಯಬಹುದಾಗಿದೆ.

ಕಣಜಕೀಟ : ಬೆಳೆ ಉತ್ಪಾದನೆಯಲ್ಲಿ ಕಾಣಿಸುವ ಕೀಟಗಳ ಹಾನಿಯನ್ನು ನಿಯಂತ್ರಿಸಲು ನಿಸರ್ಗವು ಅನೇಕ ರೀತಿಯ ಉಪಕಾರಿ ಜೀವಿಗಳನ್ನು ಸೃಷ್ಟಿಸಿದೆ. ಇದನ್ನು ಸರಿಯಾಗಿ ಅರಿಯದ ಕೃಷಿಕರು ವಿಷಗಳನ್ನು ಬಳಸುತ್ತಿದ್ದಾರೆ. ವಿಷಗಳಿಗೆ ಬಲಿಯಾಗುತ್ತಿದ್ದಾರೆ. ಸದಾ ಚುರುಕಿನಿಂದ ಕೆಲಸಮಾಡುವ ಕಣಜವೂ ಬೇಸಾಯ ಕ್ಷೇತ್ರದಲ್ಲಿ ರೈತನ ದೊಡ್ಡ ಗೆಳೆಯ. ಕೀಟಗಳ ಗುಂಪಿಗೆ ಸೇರಿದ ಈ ಜೀವಿಯು ಬೆಳೆಗಳಲ್ಲಿ ಹಾನಿ ಮಾಡುವ ಹುಳುಗಳನ್ನೇ ಹುಡುಕುತ್ತಿರುತ್ತವೆ. ಕನ್ನಡ ಕಡಜ, ಕಡ್ಜೀರಿಗೆ ಎಂದು ಕರೆಯುವ ಈ ಕೀಟ ಇತರೆ ಜೀವಿಗಳು ಸುಳಿದಾಡದ ಜಾಗದಲ್ಲಿ ತಮ್ಮ ಮನೆಯನ್ನು ನಿರ್ಮಿಸಿಕೊಳ್ಳುತ್ತವೆ. ಮಣ್ಣು, ಎಲೆ, ಮೇಣ ಇತ್ಯಾದಿಗಳಿಂದ ತನ್ನ ಗೂಡನ್ನು ಕಟ್ಟಿಕೊಳ್ಳುವ ಕಣಜವು ಆಕಾರ, ಗಾತ್ರ, ನೋಟ, ಬಣ್ಣದಲ್ಲೂ ಭಿನ್ನವಾಗಿವೆ. ಕೆಲವು ಮನುಷ್ಯರಿಗೆ ಏನು ಮಾಡುವುದಿಲ್ಲ. ಹೆಗ್ಗಣದ ಗುಂಪಿಗೆ ಸೇರಿದವು ಅಪಾಯಕಾರಿ. ಇದು ಹಾನಿಕಾರಕ ಕೀಟಗಳ ಮೊಟ್ಟೆ, ಮರಿ, ಕೋಶಗಳ ಮೇಲೆ ಮೊಟ್ಟೆ ಇಟ್ಟು ಆ ಮೂಲಕ ತನ್ನ ಸಂತತಿಯನ್ನು ಹೆಚ್ಚಿಸುತ್ತದೆ. ಕಾಂಡಕೊರೆಯುವ, ಎಲೆ, ಹಣ್ಣು, ಕಾಯಿತಿನ್ನುವ ಹುಳುಗಳು ಮುಂತಾದವುಗಳನ್ನು ನಿಯಂತ್ರಿಸುತ್ತದೆ.

ಗೊಬ್ಬರದ ಹುಳು : ಇದರ ಹೆಸರೇ ಹೇಳುವಂತೆ ಗೊಬ್ಬರ ತಿಂದು ಬದುಕುವ ಹುಳು. ಇದು ಸಾಮಾನ್ಯವಾಗಿ ಸಗಣಿಯ ತಿಪ್ಪೆ, ಸೊಪ್ಪು ಸೇದೆ ಕೊಳೆತ ಜಾಗ ಮತ್ತು ಹೊಲಗದ್ದೆಗಳಲ್ಲಿ ಗೊಬ್ಬರದ ಗುಡ್ಡೆಯ ಬಳಿ ಇರುತ್ತವೆ. ಇವುಗಳು ಗೊಬ್ಬರ ತಿನ್ನುವುದರಿಂದ ಬೆಳವಣಿಗೆ ಹೊಂದಿ, ಗೊಬ್ಬರ ಮಣ್ಣಿನಲ್ಲಿ ಬೇಗ ಬೇರಕೆಯಾಗಲು ಸಹಕರಿಸುತ್ತದೆ. ರೈತರು ಇಂತಹ ಹುಳುಗಳ ಆರೈಕೆ ಮಾಡಿಕೊಳ್ಳುವುದರಿಂದ ಗೊಬ್ಬರದ ಹುಳು ಸ್ರವಿಸುವ ದ್ರವರೂಪದ ವಸ್ತುಗಳು ಭೂಮಿಯ ಫಲವತ್ತತೆಗೆ ಹೆಚ್ಚು ಉಪಯುಕ್ತವಾಗಿವೆ.

ಮಳೆಹುಳು : ಮುಂಗಾರು ಮಳೆಯ ಸಮಯದಲ್ಲಿ ಈ ಹುಳುಗಳು ಭೂಮಿಯಲ್ಲಿ ಕಂಡು ಬರುತ್ತವೆ. ಇವು ಮಣ್ಣು ಮುಕ್ಕುತ್ತಾ ಒಂದು ರೀತಿಯ ದ್ರವವನ್ನು ಭೂಮಿಗೆ ಸೇರಿಸುತ್ತವೆ. ಭೂಮಿಯೂ ಬಿತ್ತನೆ ಮಾಡುವಾಗ ಬೀಜಗಳಿಗೆ ಸಹಕಾರಿಯಾಗುತ್ತದೆ. ಆದರೆ ಇಂದು ಅನೇಕ ರಾಸಾಯನಿಕ ಬಳಕೆಗಳಿಂದ ಹಾನಿಗೊಳಗಾಗಿದೆ. ರೈತರು ಮುಂಜಾಗ್ರತೆವಹಿಸುವುದರಿಂದ ಆರೈಕೆ ಮಾಡಿಕೊಳ್ಳಬಹುದು.

ಶಿವನಕುದುರೆ–ಮಿಡತೆ : ಸಾಮಾನ್ಯವಾಗಿ ಕಾಳುಕಟ್ಟುವ ಸಮಯದಲ್ಲಿ ಹೆಚ್ಚಾಗಿ ಹೊಲಗದ್ದೆಗಳಲ್ಲಿ ಕಂಡುಬರುತ್ತವೆ. ಬೆಳಗಿನ ವೇಳೆಯಲ್ಲಿ ಒಂದು ರೀತಿಯ ಬಲೆಯ ರೀತಿಯ ದಾರವನ್ನು ಸೃಷ್ಟಿಸುತ್ತವೆ. ಇದು ಒಂದು ರೀತಿಯ ಅಂಟು ದ್ರವದಂತೆ ಇರುವುದರಿಂದ ಅನೇಕ ಸಣ್ಣ ಬೆಳೆಹಾನಿಯ ಕ್ರಿಮಿಕೀಟಗಳು

ಇದಕ್ಕೆ ಅಂಟಿಕೊಂಡು ಹಾಳಾಗುತ್ತವೆ. ಅಲ್ಲದೆ ಕಣ್ಣಿಗೆ ಕಾಣುವ, ಎಳೆ ಕಾಳು ಹಾಳುಮಾಡುವ ಹುಳು-ಹುಪ್ಪಟೆಗಳನ್ನು ತಿಂದು ರೈತರ ಬೆಳೆಗಳನ್ನು ಸಂರಕ್ಷಿಸುತ್ತವೆ. ಇಂತಹ ಹುಳುಗಳನ್ನು ಹೊಲಗದ್ದೆಗಳಲ್ಲಿ ರಕ್ಷಿಸಿ ಆರೈಕೆ ಮಾಡುವುದು ಕೃಷಿಕರ ಕರ್ತವ್ಯವಾಗಿದೆ.

ಎರೇಹುಳು : ರೈತನ ಮಿತ್ರನೆಂದೆ ಕರೆಯಲಾಗುತ್ತಿರುವ. ಎರೇಹುಳುವಿನ ಗೊಬ್ಬರವನ್ನು ಕೃತಕವಾಗಿ ಇಂದಿನ ದಿನಗಳಲ್ಲಿ ಹೆಚ್ಚಾಗಿ ತಯಾರಿಸಲಾಗುತ್ತದೆ. ಮಣ್ಣಿನಲ್ಲಿ ಫಲವತ್ತತೆಯನ್ನು ಉಂಟುಮಾಡುತ್ತದೆ. ಇದರ ಬಗ್ಗೆ ಅನೇಕ ರೀತಿಯ ಸಂಶೋಧನೆಗಳು ನಡೆದಿವೆ. ಇಂತಹ ಹುಳುವನ್ನು ರೈತರು ಕಾಪಾಡಿಕೊಂಡು ಸಂರಕ್ಷಿಸಿಕೊಳ್ಳುವುದು ತುಂಬ ಮಹತ್ವವಾಗಿದೆ.

ಹಾವು : ಹಾವುಗಳು ಮನುಷ್ಯರಿಗೆ ಒಂದು ರೀತಿಯಲ್ಲಿ ಅಪಾಯಕಾರಿಗಳಂತೆ ಕಂಡು ಬಂದರೂ ಕೃಷಿಯಲ್ಲಿ ಹೆಚ್ಚು ಸಹಕಾರಿಯಾಗಿವೆ ಎಂದೇ ಹೇಳಬೇಕಾಗುತ್ತದೆ. ಏಕೆಂದರೆ ರೈತನ ಬೆಳೆಗಳಿಗೆ ಹೆಚ್ಚಿನ ಬಾದೆ ಕೊಡುವ ಇಲಿಯ ನಿವಾರಣೆ ನಾಗರ ಹಾವು, ಕೆರೆ ಹಾವುಗಳಿಂದ ಆಗುತ್ತದೆ. ಹೊಲಗದ್ದೆಗಳಲ್ಲಿ ರೈತನ ಧಾನ್ಯವನ್ನು ತಿಂದು ಹಾಳು ಮಾಡುವ ಇಲಿಗಳ ಕಾಟವನ್ನು ಹಾವುಗಳು ನಿಯಂತ್ರಿಸುತ್ತವೆ. ಆ ಕಾರಣದಿಂದ ಹಾವುಗಳನ್ನು ಕೊಲ್ಲದೆ ರಕ್ಷಿಸಿ ಅವುಗಳ ಸಂತತಿ ಬೆಳೆಸಲು ಸಹಕರಿಸಬೇಕಾಗಿದೆ.

ಕನ್ನಡ ಪ್ರಾಚೀನ ಕಾವ್ಯ, ಶಾಸ್ತ್ರ, ಶಾಸನ ಮುಂತಾದವುಗಳಲ್ಲಿ ಕ್ರಿಮಿಕೀಟಗಳ ಅದರಲ್ಲಿಯೂ ರೈತನಿಗೆ ಉಪಕಾರಿಯಾದ ಇಂತಹ ಅನೇಕ ಕ್ರಿಮಿಕೀಟಗಳ ಆರೈಕೆಯನ್ನು ಕುರಿತಾದ ಮಾಹಿತಿ ಕಂಡುಬರುವುದಿಲ್ಲ. ಆದರೂ ಜನಪದರು ತಮ್ಮ ಅನುಭವದ ಹಿನ್ನೆಲೆಯಲ್ಲಿ ರೈತನಿಗೆ ಉಪಕಾರಿಯಾಗುವ ಅನೇಕ ಬಗೆಯ ಕ್ರಿಮಿಕೀಟಗಳನ್ನು ಕಂಡು ಕೊಂಡು ಅವುಗಳ ರಕ್ಷಣೆಯನ್ನು, ಆರೈಕೆಯನ್ನು ಮಾಡಿಕೊಂಡು ಬಂದಿದ್ದಾರೆ. ರೈತರಿಗೆ ಕೆಲವು ಪ್ರಾಣಿ, ಪಕ್ಷಿ, ಕ್ರಿಮಿ-ಕೀಟಗಳು ಪ್ರಕೃತಿಯಲ್ಲಿ ಸಹಕಾರಿಯಾಗಿವೆ. ಇಂತಹ ಅನೇಕ ಸಂಕುಲಗಳನ್ನು ತನ್ನ ಜೊತೆಯಲ್ಲಿಯೇ ಬೆಳಸಿ ಆರೈಕೆ ಮಾಡುವುದರಿಂದ ರೈತನ ಬದುಕು ಹಸನಾಗಿ, ಮನುಷ್ಯನ ನಾಗರಿಕತೆಯ ಪ್ರಜ್ಞೆ ಮುಂದುವರೆದರೆ ಮನುಕುಲ ನೆಮ್ಮದಿ ಕಾಣಲುಸಾಧ್ಯ

ಅಡಿಟಿಪ್ಪಣಿಗಳು

೧. ಕನ್ನಡ ವಿಷಯ ವಿಶ್ವಕೋಶ, ಜಾನಪದ-ಮೈಸೂರು.ವಿ.ವಿ ಪು-೩೨೨
೨. ಅದೇ. ಪು-೩೨೩
೩. ಕರ್ಮವೀರ ಮಾಸಪತ್ರಿಕೆ, ಡಿಸೆಂಬರ-೨೦೦೫, ಲೇ.ಒಕ್ಕಲುತನ ಮತ್ತು ಒಕ್ಕಲಿಗರು- ಡಾ. ಸೂರ್ಯನಾಥ ಕಾಮತ
೪. ಕೃಷಿಜ್ಞಾನ ಪ್ರದೀಪಿಕೆ, ಸಂ-ಶ್ರೀಘನಮಠ ಶಿವಯೋಗಿಗಳು, ಪು-೨೨
೫. ಧರ್ಮಾಮೃತಂ-ಸಂ ಬಿ.ಬಿ.ಮಹೀಶವಾಡಿ, ಎಸ್.ಎಸ್. ಪಾಟೀಲ, ಅ-೧೨ ಪ-೭೬, ಪು-೫೬೨
೬. ಸಂ.ವ.ಸಂಪುಟ-೨, ಡಾ.ವೀರಣ್ಣರಾಜೂರ, ವ-೬೬, ಪು-೨೯
೭. ಕೃಷಿಜ್ಞಾನ ಪ್ರದೀಪಿಕೆ, ಸಂ-ಶ್ರೀಘನಮಠ ಶಿವಯೋಗಿಗಳು, ಪು-೨೦
೮. ಧರ್ಮಾಮೃತಂ-ಸಂ ಬಿ.ಬಿ.ಮಹೀಶವಾಡಿ, ಎಸ್.ಎಸ್. ಪಾಟೀಲ, ಅ-೨ ಪು-೮೩
೯. ಸಂ.ವ.ಸಂ-ಸಂ-ಡಾ.ಎಸ್.ವಿದ್ಯಾಶಂಕರ, ವ-೧೯೮, ಪು-೧೦೫
೧೦. ಅದೇ. ವ-೩೧೫, ಪು-೧೧೦
೧೧. ದೇಶಿಕೃಷಿ ಸಂಪುಟ-೯, ಜಾನುವಾರು-ಡಾ. ಎಮ್.ನಾರಾಯಣಸ್ವಾಮಿ, ಪು-೮೨
೧೨. ಅದೇ. ಪು-೮೯
೧೩. ಧರ್ಮಾಮೃತಂ-ಸಂ ಬಿ.ಬಿ.ಮಹೀಶವಾಡಿ, ಎಸ್.ಎಸ್. ಪಾಟೀಲ, ಅ-೬, ಪು-೨೫೯

ಅಧ್ಯಾಯ–ಆರು

ಕೃಷಿ ಹುಟ್ಟುವಳಿ ಮತ್ತು ಸಂರಕ್ಷಣೆ

೧. ಬೆಳೆಗಳ ಪ್ರಕಾರ
- i ನೀರಾವರಿ ಬೆಳೆಗಳು
  - ೧. ತೋಟಗಾರಿಕೆ
  - ೨. ಮಿಶ್ರಬೆಳೆ
  - ೩. ದ್ವಿದಳ ಬೆಳೆ
- ii ಒಣ ಬೇಸಾಯದ ಬೆಳೆಗಳು
  - ೧. ಮಿಶ್ರಬೆಳೆ
  - ೨. ದ್ವಿದಳ ಬೆಳೆ

೨. ಬೆಳೆಗಳ ಸಂರಕ್ಷಣಾ ವಿಧಾನ
- ೧. ಕಳೆ ಕ್ರಿಮಿಕೀಟಗಳ ನಿವಾರಣೆ
- ೨. ಸುಗ್ಗಿ ವಿಧಾನ

೩. ಬೆಳೆಗಳ ಬಳಕೆಯ ವಿಧಾನ

೪. ಮಾರುಕಟ್ಟೆ ವ್ಯವಸ್ಥೆ

ಅಧ್ಯಾಯ-ಆರು

ಕೃಷಿ ಹುಟ್ಟುವಳಿ ಮತ್ತು ಸಂರಕ್ಷಣೆ

ಮನುಕುಲದ ಚರಿತ್ರೆಯ ಆರಂಭದಿಂದಲೂ ಒಂದಿಲ್ಲೊಂದು ವೃತ್ತಿಯನ್ನು ಮನುಷ್ಯ ಕೈಗೊಳ್ಳುವುದು ಅನಿವಾರ್ಯವಾಗಿದೆ. ವ್ಯಕ್ತಿಯ ಜೀವನಾಧಾರ ವೃತಿಯಾಗಿದೆ. ವೃತ್ತಿಯಿಲ್ಲದೆ ಬಾಳುವುದು, ಬದುಕುವುದು ಅವನಿಗೆ ಕಷ್ಟ ಸಾಧ್ಯ. ಪ್ರತಿಯೊಂದು ವೃತ್ತಿಯು ಶ್ರಮಮೂಲದಿಂದಲೇ ಹುಟ್ಟಿರುವಂತದ್ದು. ಶ್ರಮ ಮತ್ತು ವೃತ್ತಿಗಳು ಅವನ ಆರ್ಥಿಕ ಜೀವನಾಡಿಗಳಾಗಿವೆ. ಪ್ರಾಚೀನ ಮತ್ತು ಮಧ್ಯಕಾಲಿನ ಕರ್ನಾಟಕದ ಸಮಾಜದಲ್ಲಿ ಅನೇಕ ವೃತ್ತಿಗಳು ಬೆಳೆದು ಬಂದಿವೆ. ಅಂತವುಗಳಲ್ಲಿ ಉತ್ಪಾದಕ ವೃತ್ತಿ (productive professions) ಯೂ ಒಂದು. "ನೈಸರ್ಗಿಕ ಸಂಪನ್ಮೂಲ (Natural resoures) ಗಳಿಂದ ವಸ್ತುಗಳನ್ನು ಉತ್ಪಾದಿಸುವ ಕಸುಬುಗಳೇ ಉತ್ಪಾದಕ ವೃತ್ತಿಗಳು. ಈ ವೃತ್ತಿಗಳನ್ನು ಮಾಡುವವರಿಗೆ ಭೂಮಿ (Land), ಶ್ರಮ (Labour), ಹಣರೂಪದ ಬಂಡವಾಳ (Money Capital),ಗಳು ಅವಶ್ಯಕವೆನಿಸುತ್ತವೆ. ಇವು ಇಲ್ಲದಿದ್ದರೆ ವಸ್ತುಗಳ ಉತ್ಪಾದನೆ ಆಗುವುದಿಲ್ಲ. ಪ್ರಾಚೀನ ಮತ್ತು ಮದ್ಯಕಾಲೀನ ಕರ್ನಾಟಕದಲ್ಲಿ ಕಂಡು ಬರುವ ಬೇಸಾಯ ಮುಂತಾದ ವೃತ್ತಿಗಳು ಈ ಉತ್ಪಾದಿಕ ವೃತ್ತಿಯಲ್ಲಿ ಸಮಾವೇಶಗೊಳ್ಳುತ್ತವೆ".[೧] ಎನ್ನಲಾಗದೆ.

ಬೇಸಾಯಕ್ಕೆ ಕರ್ನಾಟಕದ ಹವಮಾನ ಹಿತಕರವಾಗಿರುವುದರಿಂದ ಹಲವಾರು ಬೆಳೆಗಳನ್ನು ಇಲ್ಲಿ ಬೆಳೆಯುತ್ತಾರೆ. ಇಷ್ಟು ವೈವಿಧ್ಯ ಬೆಳೆಗಳು ಬೇರೆ ಯಾವರಾಜ್ಯದಲ್ಲಿಯೂ ಕಂಡು ಬರುವುದಿಲ್ಲ. ಧಾನ್ಯಗಳಲ್ಲಿ ಜೋಳ, ರಾಗಿ, ಮುಸಕಿನಜೋಳ, ಸಜ್ಜೆ, ಗೋಧಿ, ಬಾರ್ಲಿ, ಸಾವೆ, ನವಣೆ, ಹಾರಕ ಹಾಗೂ ದ್ವಿದಳ ಧಾನ್ಯಗಳಲ್ಲಿ ತೊಗರಿ, ಅಲಸಂದಿ, ಹೆಸರು, ಉದ್ದು, ಅವರೆ, ಕಡಲೆ ಮತ್ತು ಎಣ್ಣೆ ಬೆಳೆಗಳಲ್ಲಿ ನೆಲಗಡಲೆ, ಕುಸುಬಿ, ಎಳ್ಳು, ಹುಚ್ಚೆಳ್ಳು, ಅರಳು, ಅಗಸೆ, ನಾರುಬೆಳೆಗಳಲ್ಲಿ ಸೇಣಬು, ಹತ್ತಿ, ಪುಂಡಿ. ಸಾಂಬರ ದಿನಸುಗಳಲ್ಲಿ ಮೆಣಸು, ಲವಂಗ, ಯಾಲಕ್ಕಿ, ಸಾಸುವೆ, ಕೊತ್ತಂಬರಿ, ಜೀರಗಿ, ಈರುಳ್ಳಿ, ಬೆಳ್ಳುಳ್ಳಿಯನ್ನು ರಾಜ್ಯದ ಅನೇಕ ಭಾಗಗಳಲ್ಲಿ ಬೆಳೆಯಲಾಗುತ್ತದೆ. ಅಲ್ಲದೆ, ತೋಟದ ಬೆಳೆಗಳಲ್ಲಿ ತೆಂಗು, ಅಡಿಕೆ, ಬಾಳೆ, ಎಲೆಬಳ್ಳಿ, ಮಾವು, ಸಪೋಟ, ಪ್ಯಾರಲ, ಹಲಸು, ದಾಳಿಂಬೆ, ನಿಂಬೆ, ಅಂಜೂರ, ಸೀತಾಫಲ ಮುಂತಾದವು. ಹಲವು ಬಗೆಯ ತರಕಾರಿಗಳನ್ನು ಬೆಳೆಯಲಾಗುತ್ತದೆ.

ಇಂತಹ ವಿಧವಿಧದ ಬೆಳೆಗಳನ್ನು ನಿಂಬರಗಿ ಶಾಸನದಲ್ಲಿ ಈ ರೀತಿ ಪಟ್ಟಿ ಮಾಡಲಾಗಿದೆ. "ಜೋಳ ಗೋದುಮೆಯಂತಹ ಅನ್ನಾಹಾರ (Food Crofs) ಬೆಳೆಗಳು ಮಾತ್ರವಲ್ಲದೆ ಜೀರಗೆ, ಕರ್ಬು, ಎಲೆವಲ್ಲಿ, ಕೌಂಗು, ತೆಂಗು, ಅಲ್ಲ, ಅರಿಶಿಣ, ಬಾಳೆ, ಈಳೆ, ಖರ್ಜೂರ, ಪಂಕೇರುಹ, ಪಾದರಿ, ಮಲ್ಲಿಗೆಗಳಂತಹ ಹಣದ ಬೆಳೆಗಳನ್ನು (Cash Crops), ಸಹ ಅಂದು ಕೃಷಿಕರು ಬೆಳೆಯುತ್ತಿದ್ದುದ್ದಾಗಿ ಈ ಶಾಸನದಲ್ಲಿ ಹೇಳಿದೆ".[೨] ಈ ಶಾಸನದಲ್ಲಿ ಆಹಾರ ಧಾನ್ಯಗಳು ಮತ್ತು ವಾಣಿಜ್ಯ ಬೆಳೆಗಳು ಎಂಬುದಾಗಿ ಎರಡು ವಿಧದ ಬೆಳೆಗಳನ್ನು ಗುರುತಿಸಲಾಗಿದೆ. ಧಾಖಲುಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ಕೈಫಿಯತ್ತಿನಲ್ಲಿಯೂ ಬೆಳೆಗಳ ಉಲ್ಲೇಖ ಕಂಡುಬರುತ್ತದೆ. "ಬನವಳ್ಳಿ ಬಣಜಿಗರ ಕೈಫಿಯತ್ತು ಆ ಪ್ರದೇಶದಲ್ಲಿ ಬೆಳೆಯುವ ಅಡಕೆ, ಮೆಣಸು, ಯಾಲಕ್ಕಿ, ಭತ್ತ, ಹುಣಸೆಹಣ್ಣು, ಮೇಣಸಿನ ಕಾಯಿ, ಬಾಳೆ, ಎಳ್ಳು, ಹುರುಳಿ, ಉದ್ದು, ಹೆಸರು, ಅರಿಶಿಣ, ಶುಂಠಿ ಕುರಿತು ಮಾಹಿತಿವದಗಿಸುತ್ತದೆ"[೩]

ಕೃಷಿ ಉತ್ಪಾದನೆಯ ಮೂಲದಿಂದ ಬೆಳೆಯುವ ಬೆಳೆಯ ಮಾಹಿತಿಯನ್ನು ಕೃಷಿಜ್ಞಾನ ಪ್ರದೀಪಿಕೆ, ಕನ್ನಡ ಪ್ರಾಚೀನಸಾಹಿತ್ಯ, ಶಾಸ್ತ್ರ ಕೃತಿಗಳು, ಶಾಸನಗಳಲ್ಲಿ ಉಲ್ಲೇಖಿತವಾದ ಬೆಳೆಗಳ ಪ್ರಕಾರವನ್ನು ಕುರಿತು ಈ ಕೆಳಗಿನಂತೆ ವರ್ಗೀಕರಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

I. ನೀರಾವರಿ ಬೆಳೆಗಳು

ಪ್ರಾಚೀನ ಕಾಲದಲ್ಲಿ ನೀರಾವರಿಯು ಮುಖ್ಯವಾಗಿ ಕೆರೆ, ಬಾವಿ, ನದಿ ಮೂಲಗಳನ್ನು ಅವಲಂಬಿಸಿತ್ತು. ರಾಜರು, ಶ್ರೀಮಂತರು ಕೆರೆ ಬಾವಿಗಳನ್ನು ಕಟ್ಟಿಸುವುದು ಪುಣ್ಯದ ಕೆಲಸವೆಂದು ಭಾವಿಸಿದ್ದರು. ಹೀಗಾಗಿ ಅನೇಕ ಕೆರೆ ಕಟ್ಟೆಗಳ ನಿರ್ಮಾಣ, ದುರಸ್ತಿ, ನೀರಿನ ಬಳಕೆಯ ವ್ಯವಸ್ಥೆ ಕಂಡು ಬರುತ್ತದೆ. ಏತ ಮತ್ತು ರಾಟಾಳದಂತಹ ಉಪಕರಣಗಳಿಂದ ಬಾವಿಯ ನೀರನ್ನು, ತೂಬಿನ ವ್ಯವಸ್ಥೆಯಿಂದ ಕೆರೆಯ ನೀರನ್ನು, ಕಾಲುವೆಗಳ ಮೂಲಕ ನದಿಗಳಿಂದ ನೀರನ್ನು ಹಾಯಿಸಿಕೊಂಡು ಬೆಳೆ ಬೆಳೆಯುತ್ತಿದ್ದ ಅಂಶಗಳು ಕಂಡು ಬರುತ್ತವೆ. ಸಾಗುವಳಿ ಭೂಮಿಯನ್ನು ಪ್ರಾರಂಭದಲ್ಲಿ ಸ್ಥೂಲವಾಗಿ ಎರಡು ಬಗೆಯಲ್ಲಿ ವಿಂಗಡಿಸಿರುವ ಅಂಶ ಕಂಡು ಬರುತ್ತದೆ. "ದೇವಮಾತೃಕ ಮತ್ತು ನದಿ ಮಾತೃಕಗಳೆಂದು ಸ್ಥೂಲವಾಗಿ ವಿಂಗಡಿಸಬಹುದು. ಕೇವಲ ಮಳೆ ನೀರನ್ನೆ ಆಶ್ರಯಿಸಿ ಬೆಳೆಯುವ ಹೊಲಗಳು ದೇವಮಾತೃಕಗಳು. ನದಿ-ಕೆರೆ ಮುಂತಾದವುಗಳನ್ನು ಆಶ್ರಯಿಸುವ ಹೊಲಗಳು ನದಿ ಮಾತೃಕಗಳು"[೪] ಎಂದು ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕೃತಿಯಲ್ಲಿ ಹೇಳಲಾಗಿದೆ. ಮುಂದುವರೆದು ಪ್ರಾಚೀನ ಕರ್ನಾಟಕದಲ್ಲಿ ಬೆಳೆಯುತ್ತಿದ್ದ ಬೆಳೆಗಳನ್ನು ಈಗಲೂ ಬೆಳೆಯುತ್ತಿರುವುದನ್ನು ಕಾಣುತ್ತೇವೆ. ಹಿಂದೆ ಭತ್ತ, ಅಡಕೆ, ತೆಂಗು, ಬಾಳೆ, ಮಾವು, ದಾಳಿಂಬೆ ಮುಂತಾದ ತೋಟದ ಬೆಳೆಗಳು ಹೆಚ್ಚು ಪ್ರಸಿದ್ಧಿಯನ್ನು ಪಡೆದಿದ್ದವು. "ಗದ್ದೆಗಳಲ್ಲಿ ಮುಖ್ಯವಾಗಿ ಭತ್ತ ಮತ್ತು ಕಬ್ಬುಗಳನ್ನು ಬೆಳೆಯುತ್ತಿದ್ದರು. ಕೆರೆಯ ನೀರಿನ ಆಶ್ರಯದಿಂದಲೂ, ಬಾವಿಯ ನೀರಿನ ಆಶ್ರಯದಿಂದಲೂ ಬದುಕುತ್ತಿದ್ದ ತೋಟಗಳಲ್ಲಿ ತೆಂಗು, ವೀಳ್ಯೆದೆಲೆ, ಅಡಕೆ, ಬಾಳೆ, (ಮೈಯಿಂದವಾಳೆ ಎಂಬ ಒಂದು ಜಾತಿಯ ಬಾಳೆಯ ಹೆಸರು ಒಂದು ಶಾಸನದಲ್ಲಿದೆ) ಮುಂತಾದವುಗಸ್ನು ಬೆಳೆಯುತ್ತಿದ್ದರು. ಮಾವು, ಹಲಸು, ಈಳೆ, ನಿಂಬೆ, ಮಾದುಫಲ, ಮುಂತಾದ ಹಣ್ಣುಗಳನ್ನು ಪಾದರಿ ಗೊಜ್ಜಗೆ(=ಸೇವಂತಿ) ಸಂಪಗೆ, ಸುರಯಿ, ಜಾದಿ ಅದಿಮುರ್ಕತ್ತೆ, (ಸಂ.ಅತಿಮುಕ್ತ?) ಮುಂತಾದ ಹೂವುಗಳನ್ನು ದವನ ಮರುಗಗಳನ್ನು ಬೆಳೆಯುತ್ತಿದ್ದರು"[೫]

೧. ತೋಟಗಾರಿಕೆ

" 'ತೋಟ' ಎಂದರೆ ಉಧ್ಯಾನ, ಹಿತ್ತಲು, ನೆಟ್ಟು ಬೆಳೆಸಿದ ಗಿಡ–ಮರಗಳ ಸಮೂಹ ಎಂದು ಅರ್ಥ"[೬] ಕೃಷಿಜ್ಞಾನ ಪ್ರದೀಪಿಕೆಯಲ್ಲಿ "ತೋಟದ ಶಬ್ದವು ಫಲಪ್ರದವಾದದ್ದು. ಮುಖ್ಯವಾಗಿ ಪ್ರತ್ಯಕ್ಷಫಲವನ್ನು ಕಾಣಬೇಕೆಂಬ ರಾಜಬುದ್ಧಿಯುಳ್ಳ ಕೃಷಿಕರುಗಳು ತೋಟವನ್ನು ಮಾಡಿದ್ದಾದರೆ.................."[೭] ಎಂದು ಹೇಳಲಾಗಿದೆ. ಕನ್ನಡ ವಿಷಯ ವಿಶ್ವಕೋಶ ಜಾನಪದದಲ್ಲಿ ತೋಟವನ್ನು ಕುರಿತು ಹೀಗೆ ಹೇಳಲಾಗಿದೆ. ಬಾಳೆ, ತೆಂಗು, ಅಡಕೆ, ಮುಂತಾದ ದೀರ್ಘಬಾಳಿಕೆಯ ಬೆಳೆಗಳನ್ನು ಬೆಳೆಯುವ ಪ್ರದೇಶವನ್ನು ತೋಟ, ಬಾಗಾಯ್ತು ಎಂತಲು ವ್ಯವಸಾಯ ಪಾರಿಭಾಷಿಕ ಪದಗಳಿಂದ ಕರೆಯಲಾಗುವುದು. 'ಕೃಷಿಜ್ಞಾನ ಪ್ರದೀಪಿಕೆ' ಯಲ್ಲಿ ಶ್ರೀಘನಮಠ ಶಿವಯೋಗಿಗಳು ತೋಟಮಾಡುವವನು ಅನುಸರಿಸುವ ಕೆಲವು ಅಂಶಗಳನ್ನು ಈ ರೀತಿ ತಿಳಿಸುತ್ತಾರೆ. ತನ್ನ ಸ್ವಾಧಿನದಲ್ಲಿರುವ ಹೊಲದಲ್ಲಿ ಅಥವಾ ಅದರ ಬಳಿಯಲ್ಲಿ ನೀರಿರುವಂತಹ ಹಳ್ಳದ ಆಸ್ಪದವಿದ್ದರೆ, ಆ ಹಳ್ಳದ ಸಮೀಪದಲ್ಲಿ ಬಾವಿಯನ್ನು ತೆಗಿಸಬೇಕು. "ಜಲಶಿಲ್ಪಿಯ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ನೀರಿನ ಸೂಚನೆಯ ಗಿಡಗಳನ್ನು ಅಥವಾ ಹುತ್ತುಗಳನ್ನು ಇಲ್ಲವೆ ಹುಲ್ಲು ಕರಿಕೆಯನ್ನು ಮತ್ತು ಕೊಳೆತ ಎಲೆಗಳನ್ನು ಮದಿಯ ಹುಲ್ಲು, ಆಮು ಬಹುದಿವಸದ ದಾಗಡಿಯ ಬಳ್ಳಿಗಳನ್ನು ಅಥವಾ ತುಂಗಿ ಮೊದಲಾದ ಅನೇಕ ಸೂಚನೆಗಳಲ್ಲಿ ಒಂದಾದರು ಪೂರ್ಣ ಜಲದ ಸೂಚನೆಯಾದ ಮೂಲಿಕೆಯ ಗಿಡಗಳು ಯಾವ ಸ್ಥಳದಲ್ಲಿ ಕಾಣುತ್ತವೆಯೂ ಅಂತ ಸ್ಥಳದಲ್ಲಿ ಬಾವಿಯನ್ನು ತೆಗಿಸಬೇಕು"[೮] ಎಂದು ಸೂಚಿಸುತ್ತಾರೆ.

ಎರಡನೆಯದಾಗಿ ತೋಟಕ್ಕೆ ಅಗತ್ಯವಾದ ಬೇಲಿಯನ್ನು ಮಾಡಿಕೊಳ್ಳಬೇಕು "ತೋಟದ ಸೂತ್ತಲೂ–ಹಾಕಿಸಿದ ಒಡ್ಡಿನ ಹೊರಗಿನ ಮೈಯಲ್ಲಿ ಮೃಗಶಿರ ಕಾಲದಲ್ಲಿ ಹಸಿಯಾದ ಸಮಯವನ್ನು ನೋಡಿ ಸಾಲಾಗಿ ಕಳ್ಳಿಯನ್ನು ಹಚ್ಚಬೇಕು. ಒಡ್ಡಿನ ಹೊರಗಿನ ಮೈಯಲ್ಲಿ ಕಳ್ಳಿಯ ಹಿಂದೆ ಹುಚ್ಚು ಕೇದಿಗೆಯನ್ನು ಹಚ್ಚಿ, ಆ ಕೇದಿಕೆಯ ಹೊಂದಿಗೆ ಸೀಗೆಯ ಬೀಜವನ್ನು ಗಜ, ಎರಡು ಗಜಕ್ಕೆ ಒಂದರಂತೆ ಹಾಕಿ, ಅದರ ಹಿಂದೆ ಚೆನ್ನಾಗಿ ಜಾಲಿಯ ಮುಳ್ಳನ್ನು ಅಥವಾ ಬೋರೆಯ ಮುಳ್ಳನ್ನು ಅಥವಾ ಇಂಗಳದ ಮುಳ್ಳನ್ನು ಇದರಲ್ಲಿ ಯಾವ ಪ್ರಕಾರದ ಮುಳ್ಳುಗಳನ್ನು ಹಚ್ಚಿ ಬಂದೋಬಸ್ತ್ ಮಾಡಬೇಕು"[೯]

ಮೂರನೆಯದಾಗಿ "ತೋಟವನ್ನು ಮಾಡುವ ಭೂಮಿಯಲ್ಲಿ ಅಣುಮಾತ್ರವಾದರೂ ಕರಿಕೆಯು, ಗಣಿಕೆಯು, ಜೇಕು ಇಲ್ಲದಲೇ ಮಳಗಲ ಕಂಟಿ ಹಾಗೂ ಮೊದಿಯ ಹುಲ್ಲು ಮತ್ತು ತುಂಗಿಯ ಹುಲ್ಲು ಈ ಪ್ರಕಾರದ ನಟ್ಟುಗಳಿದ್ದರೆ ಒಂದು ಬೆಳೆಯಾದರೂ ಚೆನ್ನಾಗಿ ಆಗಲಾರದು..........."[೧೦] ಮೇಲೆ ಹೇಳಿದ ರೀತಿಯಲ್ಲಿ ಬೇರುಗಳನ್ನು ಅಗೆದು ತೆಗೆದು ಭೂಮಿಯನ್ನು ಹಸನುಮಾಡಿ, ಗೊಬ್ಬರ ಹಾಕಿ ಮಡಿಕೆ ಹೊಡೆದು, ಹರಗಿ ಸಿದ್ದತೆ ಮಾಡಿಕೊಳ್ಳಬೇಕು.

ತೋಟವನ್ನು ಮಾಡುವವರು ಕಿರಿದೋಟವನ್ನು ಮಾಡಬಾರದು. ಅದರಿಂದ ಶ್ರಮವೂ ವ್ಯರ್ಥ, ಹೆಚ್ಚಿನ ಆದಾಯ ಬರಲಾರದು. ಈ ವಿಷಯವಾಗಿ ಪಾಲ್ಕುರಿಕೆಯ ಸೋಮನಾಥನೆಂಬ ಶಿವಕವಿ ಈ ರೀತಿ ನೀತಿಯನ್ನು ಕುರಿತು ಹೇಳುತ್ತಾನೆ.

ಕಿರಿದೋಟಂ ಕಡೆವಳ್ಳಿ ಬೀದಿಮನೆ ಮುಂಗ್ಯೆಯ್ಯಾ
ರ್ಭಟಂ ಸಾಲದ ದೊರೆಗಾರ್ಯಂ ಘೃತಮಿಲ್ಲದೂ
ಟದಸುಖಂ ಮುಗ್ಧಾಂಗನಾಸಂಗಮಂ ಬರಿಗ್ಯೆಯ್ಯಂ
ಸುರಿದಂದವ್ಯೆ ಹರಹರಾ ಶ್ರೀ ಚೆನ್ನಸೋಮೇಶ್ವರಯ್ಯ"[೧೧]

ಕನ್ನಡಕಾವ್ಯಗಳಲ್ಲಿ ನಯಸೇನನ ಧರ್ಮಾಮೃತದಲ್ಲಿ "ಪದನಱಿದು ಬಿತ್ತದ ಬೆಳೆಸುಂ..........ಪೊಲನರಿಯದ ತೋಟಮಂ..........."[೧೨] ಹದ ಬೆದೆ ಅರಿತು ಬಿತ್ತನೆ ಮಾಡುವುದು, ತೋಟವನ್ನು ಮಾಡಲು ಯೋಗ್ಯಭೂಮಿಯನ್ನು ಆಯ್ಕೆಮಾಡಿಕೊಳ್ಳುವದನ್ನು ಕುರಿತು ತಿಳಿಹೇಳುತ್ತಾನೆ. ಅಲ್ಲದೆ ಸರ್ವಜ್ಞ ಮೂರ್ತಿಯ ವಚನವೊಂದರಲ್ಲಿ

"ತೋಟದ ಬೆಳೆಯನ್ನು । ದಾಟಿ ನೋಡದರಾರು
ಮೀಟು ಜವ್ವನದ ಸೊಬಗಿಯರ ನೆರೆಕಂಡು ।
ದಾಟದವರಾರು ? ಸರ್ವಜ್ಞ".[೧೩]

ತೋಟದ ಬೆಳೆಯಲ್ಲಿ ಮನುಷ್ಯನಿಗಿರುವ ಸೌಂದರ್ಯ ಪ್ರಜ್ಞೆಯನ್ನು ಅರಿತು ತೋಟದ ಬೆಳೆಯನ್ನು ನೋಡದೇ ದಾಟಿ ಹೋಗುವರು ಯಾರು ಇಲ್ಲ. ಅದೇ ರೀತಿ ಯೌವ್ವನದ ಸೊಬಗಿಯರನ್ನು ನೋಡದ ರಸಿಕರಾರು ಇಲ್ಲವೆಂದು ಹೇಳುತ್ತಾನೆ. ತೋಟಗಾರಿಕೆಯಲ್ಲಿ ಬೆಳೆಯುವ ಬೆಳೆಗಳಾದ ತೆಂಗು, ಅಡಿಕೆ, ಬಾಳೆ, ವೀಳೆದೆಲೆ, ಮಾವು, ಹಲಸು, ನಿಂಬೆ, ಪೇರಲ, ಅಂಜುರ, ಬಾದಾಮಿ, ಕಬ್ಬು ಮತ್ತು ಹೂವಿನ ವನಗಳು, ಸಾಂಬರ ಪದಾರ್ಥದ ಉತ್ಪತ್ತಿಗಳಾದ ಏಲಕ್ಕಿ, ಮೆಣಸು, ಅಲ್ಲ, ಕಸಕಸಿ, ಜೀರಿಗೆ, ಶಾಜೀರಿಗೆ, ಸೊಪು, ಚಹಾದ ತೊಪ್ಪಲು, ಮುಂತಾದವುಗಳಲ್ಲಿ ಮುಖ್ಯವಾದ ಬೆಳೆಗಳನ್ನು ಸಸಿಮಾಡುವ, ನಾಟಿಮಾಡುವ ವಿಧಾನವನ್ನು ಕುರಿತು ಕನ್ನಡ ಕಾವ್ಯಗಳು, ಶಾಸನಗಳು, ಜನಪದಕಾವ್ಯ, ಶಾಸ್ತ್ರಕೃತಿಗಳಾದ ಕೃಷಿ ಜ್ಞಾನ ಪ್ರದೀಪಿಕೆ, ಲೋಕೋಪಕಾರದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ತೆಂಗು : ತೆಂಗಿನ ಮರವು ಹುಲ್ಲಿನ ಜಾತಿಯದು. ತೆಂಗು=ತೆಂಗಿನಮರ ಮತ್ತು ಅದರ 'ಕಾಯಿ' ಎಂದು ಸಂಕ್ಷಿಪ್ತ ಕನ್ನಡ ನಿಘಂಟುವಿನಲ್ಲಿ (ಪುಟ-೪೨೧) ಹೇಳಲಾಗಿದೆ. ಇದರಲ್ಲಿಯೇ ತೆಂಗಾಯ್= 'ತೆಂಗಿನ ಕಾಯಿ' ನಾರೀಕೇಳ ಎಂದರ್ಥವಿದೆ. ಕೃಷಿಪದಕೋಶದಲ್ಲಿ ಪ್ರಾದೇಶಿಕವಾಗಿ ಕೋಲಾರ, ದಾವಣಗೆರೆ, ಬೆಂಗಳೂರು, ಮಂಗಳೂರು, ಚಿತ್ರದುರ್ಗ ಹಾಸನ ಮೈಸೂರು, ತುಮಕೂರು, ಉತ್ತರಕನ್ನಡ ಮುಂತಾದ ಕಡೆ ತೆಂಗು ಎಣ್ಣೆ ಉತ್ಪಾದಿಸುವ ಬೆಳೆ, ಆಹಾರ ಪದಾರ್ಥ ಎಂದು ಅರ್ಥ. ಇನ್ನು ಅನೇಕ ರೀತಿಯಲ್ಲಿ ಅಂದರೆ ತೆಂಗು, ಟೆಂಗು, ಕಾಯಿ, ಎಳೆನೀರ್, ಎಳೆದೆಂಗು, ಕೆಂದೆಂಗು ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ.

ತೆಂಗು ಬಹುಪಯೋಗಿ ಬೆಳೆಯಾಗಿದೆ. 'ತೆಂಗು ಬಿತ್ತಿದವನು, ಗಂಡು ಹಡೆದವನು ದರಿದ್ರನಲ್ಲ' ಎಂಬ ಗಾದೆಯು ಜನಬಳಕೆಯಲ್ಲಿ ಪ್ರಸಿದ್ದಿಯನ್ನು ಪಡೆದಿದೆ. ತೆಂಗಿನ ಸಿಪ್ಪೆ, ಎಲೆಗಳಿಂದ ಚಾಪೆ ಹೆಣೆಯುತ್ತಾರೆ. ಮನೆಗೆ ಹೊದೆಸುತ್ತಾರೆ. ತೆಂಗಿನ ಕಡ್ಡಿಯಿಂದ ಕಸಬರಿಗೆ ತಯಾರಿಸುತ್ತಾರೆ, ಊಟದ ಪದಾರ್ಥಗಳಲ್ಲಿ ತೆಂಗಿನ ತುರಿಯನ್ನು ಬಳಸುತ್ತಾರೆ, ಎಳೆನೀರು ಕುಡಿಯಲು, ನೀರಿಲ್ಲದ ಗಿಟಕು ಕಾಯಿಗಳ ಕೊಬ್ಬರಿಯಿಂದ ಎಣ್ಣೆ ತೆಗೆಯುತ್ತಾರೆ. ಮತ್ತು ತೆಂಗಿನ ಮರದ ಬೊಡ್ಡೆಯು ಮನೆಗಳಿಗೆ ತೊಲೆಗಳಂತೆ ಹಾಕುತ್ತಾರೆ. ಅದರ ಬೇರುಗಳಿಂದ ಬೀಸಣಿಕೆಯನ್ನು ಮಾಡುತ್ತಾರೆ. ತೆಂಗಿನ ಬೆಳೆಯಉಲ್ಲೇಖ ಕನ್ನಡದ ಕಾವ್ಯಗಳಲ್ಲಿ ಹೇರಳವಾಗಿ ಬಳಕೆಯಾಗಿದೆ. ಕರ್ನಾಟಕ ಕಾದಂಬರಿಯಲ್ಲಿ "ತಿಲಕಾಶೋಕ ತಮಾಳ ತಾಳ ವಕುಳಾಲಂಕಾರ ಮೇಲ್ಲಾಲತಾಕುಲ ಪೂಗದ್ರುಮ ನಾಳಿಕೇರ ಬಹುಳ............."[೧೪] ಎನ್ನಲಾಗಿದೆ. ಇದೇ ರೀತಿ ಪಂಚತಂತ್ರದಲ್ಲಿ "ಪನಸಾಮ್ರ ಜಂಬು ಜಂಬೀರ ನಾರಿಕೇಳಿ ಕಪಿಸ್ಥಾ ಕದಳೀಸಾರಂಗ........"[೧೫] ತೆಂಗಿನ ಉಲ್ಲೇಖ ಕಂಡು ಬರುತ್ತದೆ.

ಕನ್ನಡ ಶಾಸನಗಳಲ್ಲಿ ತೆಂಗಿನ ಉಲ್ಲೇಖ ಅನೇಕ ಕಡೆ ಹೇರಳವಾಗಿ ಕಾಣಸಿಗುತ್ತದೆ. ಕೆಳದಿ ಅರಸರ ಕಾಲದ ಕವಲೇದುರ್ಗ ಶಾಸನವೊಂದರಲ್ಲಿ ತೆಂಗು, ಅಡಿಕೆ, ಬಾಳೆ, ನಾಟಿ ಮಾಡುವ ಅಂಶ ಕಂಡು ಬರುತ್ತದೆ."..........ನಷ್ಟಕೆ ಕಳೆದ ಭೂಮಿಯನು ರೂಪಮಾಡಿ ಸಸಿಬಾಳೆ, ತೆಂಗು ಹಾಕಿ.........."[೧೬] ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು ಹಸನು ಮಾಡಿಕೊಂಡು ತೋಟಗಾರಿಕೆ ಬೆಳೆಗಳನ್ನು ಮಾಡುವ ಅಂಶ ತಿಳಿದುಬರುತ್ತದೆ. ಕೃಷಿಜ್ಞಾನ ಪ್ರದೀಪಿಕೆಯಲ್ಲಿ ತೆಂಗಿನ ಸಸಿ ಮಾಡುವ ಮತ್ತು ತೆಂಗನ್ನು ನಾಟುವ ವಿಧಾನವನ್ನು ಕುರಿತು, ಈ ರೀತಿ ಹೇಳಲಾಗಿದೆ. ಮೊದಲು ಬೀಜದ ಕಾಯಿಗಳನ್ನು ತರಬೇಕಾದರೆ ನಲ್ವತ್ತು-ಐವತ್ತು ವರ್ಷದ ಹಳೆಯ ಗಿಡದ ಕಾಯಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಆ ಕಾಯಿಗಳು ಮರದಲ್ಲಿಯೇ ಹಣ್ಣಾಗಿ ತಾವೇ ತುಂಬು ಉಚ್ಚಿ ಉದುರಿ ಬಿದ್ದಿರಬೇಕು. ತೆಂಗಿನ ತೋಟವನ್ನು ಮಾಡುವ ವಿಧಾನವನ್ನು ಕುರಿತು ಶ್ರೀಘನಮಠ ಶಿವಯೋಗಿಗಳು ಈ ರೀತಿ ಶಾಸ್ತ್ರಬದ್ದವಾಗಿ ಅನುಮತಿಸುತ್ತಾರೆ. "..........ನಾಲ್ಕು ಮಾರಿಗೆ ಒಂದರಂತೆ, ಚಚ್ಚೌಕು ಒಂದುವರೆ ಗಜ ಅಗಲ, ಒಂದುವರೆ ಗಜ ಉದ್ದವಾಗಿ ಮತ್ತು ಒಂದುವರೆ ಗಜ ತಗ್ಗು ಆಗುವ ಹಾಗೆ ಅವುರಾಸ-ಚವುರಾಸ, ಪೂರ್ವ,ಪಶ್ಚಿಮ ಮತ್ತು ಉತ್ತರ, ದಕ್ಷಿಣಕ್ಕೆ ಸಾಲುಸಾಲಾಗಿ ಕಾಣುವ ಹಾಗೆ ಸಹಸ್ರ ಅಥವಾ ಐದುನೂರು ಇಲ್ಲವೇ ನಾನೂರು ಮಟ್ಟಿಗೂ ತಗ್ಗುಗಳನ್ನು ತೆಗೆಸಿ, ಆ ತಗ್ಗುಗಳಲ್ಲಿ ಉಸುಕು, ಕೆಮ್ಮಣ್ಣು ಸಮನಾಗಿ ಕಲಿಸಿ ತುಂಬಿ ಬರಿಮಾಡಿ ಯಾವತ್ತೂ ತಗ್ಗುಗಳನ್ನು ತಯಾರು ಮಾಡಬೇಕು. ಈ ತಗ್ಗಿನಲ್ಲಿ ಗಡ್ಡೆ ಹಿಡಿಯುವ ಹಾಗೆ ಕೆದರಿ ಅದರ ತಳಕ್ಕೆ ಉಪ್ಪು ಮೊಸರನ್ನು ಚೆಲ್ಲಿ ಅದರ ಮೇಲೆ ಈ ಸಸಿಯನ್ನು ನಿಲ್ಲಿಸಿ, ಸುತ್ತಲೂ ಬಗಲು ಗಟ್ಟಿಯಾಗಿ ತುಳಿದು ನೀರು ಉಣಿಸುವದು.........."[೧೭] ಈ ರೀತಿಯಲ್ಲಿ ಒಂದು ಎಕರೆ ಭೂಮಿಯಲ್ಲಿ ಎರಡು ನೂರಾ ಐವತ್ತು ತೆಂಗಿನ ಗಿಡಗಳನ್ನು ನಾಟಿಮಾಡಿ ತೋಟ ಮಾಡಬಹುದು.

ಲೋಕೋಪಕಾರದಲ್ಲಿ ತೆಂಗಿನ ಮರಗಳಿಂದ ಹೆಚ್ಚು ಫಲವನ್ನು ಪಡೆಯುವ ಬಗೆಯನ್ನು ಕುರಿತು ಈ ರೀತಿ ಹೇಳಲಾಗಿದೆ.

"ತಿಲಮಗಸೆ ವಿಳಂಗಂ ಸಿಂ
ಧುಲವಣಮಿವನೆರೆದು ಜೇನ ಘೃತಮಧ್ಯಮುವಂ॥
ಕಲಸಿ ನಿಶಾಮುಖದೊಳ್ ಮೂ।
ಲಲೇಪನಂಗೆಯ್ಯ ತೆಂಗು ಬಹುಫಲಮಕ್ಕುಂ"[೧೮]

ಎಳ್ಳು, ಅಗಸೆ ಬೀಜ, ವಿಳಂಗ, ಉಪ್ಪು ಇವುಗಳನ್ನು ಒಂದು ಗೂಡಿಸಿ ಅರೆದು, ಜೇನುತುಪ್ಪ, ಮಧ್ಯದಲ್ಲಿ ಕಲಸಿ, ತೆಂಗಿನ ಮರದ ಬುಡಕ್ಕೆ ಲೇಪನ ಮಾಡಲು, ಆ ಮರ ಬಹುಫಲವನ್ನು ನೀಡುತ್ತದೆಂಬುದು ಶಾಸ್ತ್ರಕಾರನ ಅಭಿಮತವಾಗಿದೆ.

ಅಡಿಕೆ : ತೋಟದ ಬೆಳೆಯಾದ ಅಡಿಕೆ ಇಂದಿನ ದಿನಗಳಲ್ಲಿ ಲಾಭದಾಯಕ ಮತ್ತು ಶ್ರೀಮಂತಿಕೆಯ ಬೆಳೆಯಾಗಿದೆ. ಪ್ರಾದೇಶಿಕವಾಗಿ ಭಿನ್ನ ಭಿನ್ನ ರೀತಿಯಲ್ಲಿ ಲಿಪಿಯ ಬಳಕೆಯಲ್ಲಿ ವ್ಯತ್ಯಾಸವಿದ್ದರೂ ಅರ್ಥಮಾತ್ರ ಒಂದೇ ಆಗಿದೆ. ಕೃಷಿ ಪದಕೋಶದಲ್ಲಿ ಹೇಳುವಂತೆ "ಅಡಿಕೆ, ಅಡಕೆ, ಅಡಕ್ಕೆ, ಅಡ್ಕೆ, ಅಡ್ಕಿ, ಎಂದು ಬಳಸಲಾಗುತ್ತದೆ.

ಕನ್ನಡ ಕಾವ್ಯಗಳಲ್ಲಿ ಅಡಿಕೆ ಬೆಳೆಯ ಉಲ್ಲೇಖ ಹೇರಳವಾಗಿ ದೊರೆಯುತ್ತದೆ. ತಾಳೆ ಜಾತಿಯ ಅಡಿಕೆ ತುಂಬಾ ಜನಜನಿತವಾಗಿದೆ. ಪ್ರಾರಂಭದಲ್ಲಿ ಬ್ರಾಹ್ಮಣರೇ ಹೆಚ್ಚಾಗಿ ಈ ಕೃಷಿಯನ್ನು ಜೀವನಾಧಾರ ವೃತ್ತಿಯಾಗಿ ನಂಬಿಕೊಂಡಿದ್ದರು. ಆದರೆ ಈಗ ಎಲ್ಲಾ ವರ್ಗದವರು ಬೆಳೆಯುತ್ತಿದ್ದಾರೆ. ಪಂಪನ

'ಆದಿಪುರಾಣ'ದಲ್ಲಿ ತೋಟದ ಬೆಳೆಗಳ ಉಲ್ಲೇಖ ಹೆಚ್ಚಾಗಿ ದೊರೆಯುತ್ತದೆ. ತೆಂಗು, ಅಡಿಕೆ, ಮಾವು ತುಂಬಾ ನೆಚ್ಚಿನ ಫಲಗಳಾಗಿರುವಂತೆ ಕಂಡುಬರುತ್ತದೆ. ನಾಗಚಂದ್ರನ 'ಪಂಪರಾಮಾಯಣ'ದಲ್ಲಿ ಮದುವೆ ಮಂಟಪದ ಶೃಂಗಾರಕ್ಕೆ ಎಳೆಯ ಅಡಿಕೆ ಗೊನೆಯನ್ನು ಬಳಸಿರುವ ಅಂಶ ಕಾಣಸಿಗುತ್ತದೆ. ನಯಸೇನನ 'ಧರ್ಮಾಮೃತ'ದ ಪದ್ಯವೊಂದರಲ್ಲಿ "ಸಸಿಯಂ ಕೌಂಗಿನ ತೆಂಗಿನ ಸಸಿಯಂ ನೆಜೆಬೆಳೆದು ಮೇಲೆಫಲಮಂ ಕುಡುವಂ ...."[೧೯] ತೋಟಗಾರಿಕೆಯ ಬೆಳೆಮಾಡುವ ಕೃಷಿಜ್ಞಾನವನ್ನು ಅನೇಕ ಕಡೆ ನೀಡುತ್ತಾರೆ.

ಸರ್ವಜ್ಞನ ವಚನವೊಂದರಲ್ಲಿ ಗೋಟಡಿಕೆಯ ಉಲ್ಲೇಖವಿದೆ.

"ಗೋಟಡಿಕೆ ಮೆಲಹೊಲ್ಲ । ಬಾಟೆಯೊಳು ಇರಹೊಲ್ಲ।
ಕೂಟವನು ಮುರಿವ ಸತಿಹೊಲ್ಲ। ಹೆಣ್ಣಿನೊಳು ।
ತಾಟಕಿಯ ಹೊಲ್ಲ ಸರ್ವಜ್ಞ॥"[೨೦]

ಅಂದರೆ ಗೋಟಡಿಕೆ ತಿನ್ನಲು ಯೋಗ್ಯವಲ್ಲ, ಹಾಗೆಯೇ ದಾರಿಯಲ್ಲಿ ಇರುವದು, ಸಂಸಾರ ಮುರಿಯುವ ಹೆಣ್ಣು, ಹಾಗೂ ಹೆಣ್ಣಿನಲ್ಲಿ ತಾಟಕಿ ಯೋಗ್ಯಳಲ್ಲವೆಂದು ಲೌಕಿಕ ಜ್ಞಾನವನ್ನು ಸಾರುತ್ತಾನೆ.

ಕನ್ನಡ ಶಾಸನಗಳಲ್ಲಿ ಅಡಿಕೆ ಬೆಳೆಯ ಉಲ್ಲೇಖ ಅನೇಕ ಕಡೆಗಳಲ್ಲಿ ಕಂಡುಬರುತ್ತದೆ. ನಿಂಬರಿಗಿ ಶಾಸನವೊಂದರಲ್ಲಿ ತೋಟದ ಬೆಳೆಗಳ ಹೆಸರುಗಳು ದೊರೆಯುತ್ತವೆ. "ಕವುಂಗು ತೆಂಗು ಪಂಕೆಯರುಹವುಳ್ಳರಲ್ದ ಪೊಸಮಲ್ಲಿಗೆ ಪಾದರಿ ಬಾಳೆಯೀಳ.........."[೨೧] ಅಗಾಮಿ ವತ್ತಿನೆಟ್ಟ ಅಡಕೆಯ ಮರ ೧೫೦೦ ಸಾವಿರದೈನೂರು ಅಡಕೆಯ ಮರಕ್ಕೆ ಸಲ್ಲುವ ಗುತ್ತಿಗೆ ಲಕ್ಕ ಸಾ.೧೦ ಯರಡು ಲಕ್ಕಲು ಹತ್ತು ಸಾವಿರಕ್ಕೆ ಸಲುವದಂ.........."[೨೨] ಸಾವಿರದ ಐದುನೂರು ಅಡಿಕೆಯ ಮರಕ್ಕೆ ಎರಡು ಲಕ್ಷ ಹತ್ತು ಸಾವಿರ ಗುತ್ತಿಗೆ ಹಣ ನೀಡುವ ಅಂಶ ಕಂಡುಬರುತ್ತದೆ. ಶೃಂಗೇರಿ ಶಾಸನವೊಂದರಲ್ಲಿ ಅಪ್ಪಣ್ಣ ಶಂಕರಲಿಂಗ ಎಂಬುವರು "..........ಐದೂವರೆ ಸಾವಿರ ಅಡಕೆಯ ಮರದ ಕ್ಷೇತ್ರ ವೃತ್ತಿ ೩ ಆ ಮಹಾಜನಂಗಳಿಗೆ ವೃತ್ತಿಯೊಂದಕ್ಕೆ ಭತ್ತ ಖಂ -೨೪ ಅಡಿಕೆಯ ಮರ ಮುನ್ನೂರರ ಲೆಕ್ಕದಲಿ.........."[೨೩] ಐದೂವರೆ ಸಾವಿರ ಅಡಿಕೆ ಮರದ ವಿಸ್ತೀರ್ಣ ಹೊಂದಿರುವ ತೋಟದಲ್ಲಿ ವೃತ್ತಿ ಮಾಡುವ ಜನಗಳಿಗೆ ವರ್ಷವೊಂದಕ್ಕೆ ೨೪ ಖಂಡುಗ ಭತ್ತ ಮತ್ತು ಮೂನ್ನೂರು ಅಡಕೆಮರಗಳನ್ನು ಅವರ ಶ್ರಮಕ್ಕೆ. ಪ್ರತಿಫಲವಾಗಿ, ನೀಡಿರುವುದು ಕಂಡುಬರುತ್ತದೆ.

ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಅಡಿಕೆಯ ನಾಟಿ ಮಾಡುವ ಸಸಿಮಾಡುವ, ವಿಧಾನವನ್ನು ಶಾಸ್ತ್ರೋಕ್ತವಾಗಿ ಹೀಗೆ ವಿವರಿಸುತ್ತಾನೆ. ಸ್ವಲ್ಪ ಮಾತ್ರ ಹಸಿಯಾಗಿ, ಬಲತ ಹಣ್ಣುಗಳಾಗಿರುವ, ಅರಿಶಿಣ ಬಣ್ಣದ ಹಣ್ಣು, ಕಾಯಿಗಳನ್ನು ಮೇಲಿನ ಸೊಪ್ಪೆವೆರಸಿ ತಂದು ಒಂದು ದೊಡ್ಡ ಮಡಿಯನ್ನು ಮಾಡಿ ಆ ಮಡಿಯಲ್ಲಿ ಕೆಮ್ಮಣ್ಣನ್ನು, ಗೊಬ್ಬರವನ್ನು ಸಮಬೆರೆಕೆಯಾಗಿ ತುಂಬಿ ತೆಳ್ಳಗೆ ಹರಗಿ ಸುತ್ತ ಒಡ್ಡು ಕಟ್ಟಿ ಮಡಿಯಲ್ಲಿ ನೀರು ನಿಲ್ಲುವ ಹಾಗೆ ಮಾಡಿ, ಅಡಿಕೆಯ ಬೀಜಗಳನ್ನು ನಾಲ್ಕು ಬೆರಳು ಅಂತರವಾಗಿ, ಆ ಮಡಿಯಲ್ಲಿ ಅಡ್ಡ ಇಟ್ಟು, ಅದರ ಮೇಲೆ ಸ್ವಲ್ಪು ಮಾತ್ರ ಮಣ್ಣನ್ನು ಹರಹಿ ನೀರತೇವು ಆರಗೊಡದೇ, ನೀರು ಬಿಟ್ಟಲ್ಲಿ ಎರಡು ಮೂರು ತಿಂಗಳಲ್ಲಿ ಸಸಿ ಹೊರಡುವುದು. ಆ ಸಸಿಗಳನ್ನು ನಾಲ್ಕಾರು ತಿಂಗಳು ವರಷಾವಧಿಯಾದರೂ ಹಾಗೇ ಬಿಟ್ಟು ನೀರು ಹಾಕುತ್ತ ಮಡಿಯಲ್ಲಿ ಸಸಿಗಳನ್ನು ವರ್ಧನ ಮಾಡಬೇಕು.

ನಾಟಿ ಮಾಡುವ ವಿಧಾನವನ್ನು ಶ್ರೀಘನಮಠ ಶಿವಯೋಗಿಗಳು ಈ ರೀತಿ ತಿಳಿಸುತ್ತಾರೆ. "ನಾಲ್ಕುಮೊಳ ಅಥವಾ ಐದುಮೊಳ ಅಂತರವಾಗಿ ಚಚ್ಚೌಕು ಒಂದೂವರೆ ಮೊಳ ಅಗಲ ಒಂದು ಕಾಲುಮೊಳ ತಗ್ಗಾಗಿರುವ ಕುಣಿಗಳನ್ನು ಸಾಲುಸಾಲಾಗಿ ತಯಾರು ಮಾಡಿಸಿ ಅದರಲ್ಲಿ ಕೆಮ್ಮಣ್ಣನ್ನು

ಉಸುಕನ್ನು ಮತ್ತು ಸ್ವಲ್ಪ ಹಳೆಯ ಗೊಬ್ಬರವನ್ನು ಕಲಿಸಿ ತಗ್ಗಿಗೆ ಬರೀ ಮಾಡಿ ನೀರು ಬಿಟ್ಟು ಅದು ಸ್ವಲ್ಪ ಹಸಿ ಬಿಗಿಯುವ ಹದಕ್ಕೆ ಬಂದಾಗ ಈ ಸಸಿಗಳನ್ನು ಗಡ್ಡೆ ಸಹಿತ ಬೇರು ಕೆದರಿ ಸಸಿಗಳನ್ನು ನಿಲ್ಲಿಸಿ, ಅದಕ್ಕೆ ಕೆಮ್ಮಣ್ಣನ್ನು, ಹಳೆಯ ಗೊಬ್ಬರವನ್ನು ಕೂಡಿಸಿ ಹಾಕಿ, ಗಟ್ಟಿಯಾಗಿ ತುಳಿದು ಕೂಡ್ರಿಸಿ ನೀರು ಬಿಡುವರು."[೨೪] ಅಡಿಕೆಯ ಸಸಿಗಳಿಗೆ ಗಾಳಿಯಿಂದ ರಕ್ಷಣೆ ಮಾಡಲು ಸುತ್ತಲೂ ಚೊಗಚೆಗಿಡ ಅಥವಾ ಯಾವುದೇ ಸಡೇದಗಿಡ ಹಾಕಿ ಬೇಲಿ ಮಾಡುವುದು ಒಳ್ಳೆಯದು. ಕಲ್ಲು ಮಿಶ್ರಿತ ಕೆಂಪು ಮಣ್ಣು, ಕಪ್ಪು ಮಣ್ಣುಭೂಮಿ ಅಡಿಕೆ ಬೆಳೆಯಲು ಉತ್ತಮ. ಮರಳು ಮಿಶ್ರಿತಮಣ್ಣು ಜೇಡಿಮಣ್ಣಿನ ಭೂಮಿ ಹೆಚ್ಚಿನ ಫಲ ನೀಡಲಾರದು.

ಅಡಿಕೆಯ ಗಿಡಗಳು ೧೦-೧೨ ವರ್ಷಗಳಿಗೆ ಫಲನೀಡಲು ಪ್ರಾರಂಭಿಸುತ್ತವೆ. ಒಂದು ಎಕರೆಗೆ ಸುಮಾರು ಸಾವಿರ ಅಡಿಕೆ ಗಿಡಗಳು ಕೂರುತ್ತವೆ. ಅಡಿಕೆ ಪೈರು ಮಾಡುವ ವಿಧಾನವನ್ನು ಕೈಫಿಯತ್ತೊಂದರಲ್ಲಿ ಈ ರೀತಿ ಹೇಳಲಾಗಿದೆ. "ಅಡಿಕೆಯನ್ನು ಮೊಳಕೆಯನ್ನು ಬರಿಸಿ, ಅದು ಎರಡು ಮೊಳದಷ್ಟು ಉದ್ದ ಬೆಳೆದಾಗ ಹತ್ತು ಹೆಜ್ಜೆಗೊಂದರಂತೆ ನೆಡಬೇಕು. ವರ್ಷಕ್ಕೊಮ್ಮೆ ಗಿಡಗಳಿಗೆ ಸೊಪ್ಪು ಗೊಬ್ಬರ ಹಾಕಿಕೊಂಡು ಬರಬೇಕು. ಈ ರೀತಿ ಹನ್ನೆರಡು ವರ್ಷಗಳ ಕಾಲ ಜೋಪಾನ ಮಾಡಿದರೆ ಹದಿಮೂರು, ಹದಿನಾಲ್ಕು ವರ್ಷಕ್ಕೆ ಹಿಂಗಾರ ಬಿಡುತ್ತದೆ. ಹದಿನೈದು ವರ್ಷಕ್ಕೆ ಪೂರಾ ಫಲ ಬಿಡುತ್ತದೆ. ಮರಕ್ಕೆ ತಿಂಗಳಿಗೊಂದು ಸಲ ನೀರು ಹಾಕಬೇಕು. ಐದು ಗಿದ್ದನದ ಭೂಮಿಗೆ ಸುಮಾರು ನೂರು ಮರ ನಿಲ್ಲುತ್ತದೆ. ನೂರು ಮರಕ್ಕೆ ೪ಲಸೇರಿನ ಮಣದಲ್ಲಿ ನಾಲ್ಕು ಮಣ ಎಂಟು ಸೇರು ಅಡಿಕೆಯಾಗುತ್ತದೆ"[೨೫] ಸಸಿಮಾಡುವ ಅಳತೆಗನುಸಾರ ನಾಟಿಮಾಡುವ, ಅಡಿಕೆಫಲನೀಡುವ ವರ್ಷ, ಭೂಮಿಯಲ್ಲಿ ನಿಲ್ಲುವ ಮರಗಳ ಪ್ರಮಾಣ, ಅಡಿಕೆಯ ಫಸಲು ದೊರೆಯುವ ಅಳತೆಯನ್ನು ನಿಖರವಾಗಿ ತಿಳಿಸಲಾಗಿದೆ.

ಬಾಳೆ : ಬಾಳೆ ಇದೊಂದು ಹಣ್ಣಿನ ಬೆಳೆ. ಇದನ್ನು ಬಾಳಿ, ಬಾಳೆ, ಕದಳಿ, ಕದಲಿ, ಎಂದು ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ. ಏಲಕ್ಕಿಬಾಳೆ, ಒಣಬಾಳೆ, ಕಪ್ಪುರವಾಳೆ, ಕರಿಬಾಳೆ,ಕಸಬಾಳೆ, ನಂಜನಗೂಡುಬಾಳೆ, ಜವಾರಿಬಾಳೆ, ಚಂದ್ರಬಾಳೆ, ಗುಜರಾತಿಬಾಳೆ, ಪುಟ್ಟಬಾಳೆ, ಮದರಂಗಬಾಳೆ, ಸೇಲಂಬಾಳೆ ಮುಂತಾದ ವಿಧವಿಧದ ತಳಿಗಳು ಇರುವುದನ್ನು ಕೃಷಿಪದಕೋಶದಲ್ಲಿ ತಿಳಿಸಲಾಗಿದೆ.

ಬಾಳೆ ಕೃಷಿಯಲ್ಲಿ ಎರಡು ವಿಧ. ೧ ಬರಿಬಾಳೆಯ ತೋಟವನ್ನಷ್ಟೇ ಮಾಡುವ, ಹೊರವಲಯದ ಬೆಳೆ ಎಂದೂ ಮಿಶ್ರಬೆಳೆಯಾಗಿ ಬೆಳೆಸುವುದು ಒಳವಲಯದ ಬೆಳೆ ಎಂದು ಕರೆಯುತ್ತಾರೆ. 'ಬಡವನಿಗೆ ಬಾಳಿ, ಬಲವಂತನಿಗೆ ಕಬ್ಬು', 'ಬಾಳೆ ಇದ್ದವನು ಭಾಗ್ಯವಂತನು' ಎಂಬ ಗಾದೆಗಳು ಪ್ರಸಿದ್ಧಿಯನ್ನು ಪಡೆದಿವೆ. ಬಡವ-ಬಲ್ಲಿದರೆನ್ನದೆ ಎಲ್ಲರಿಗೂ ಸೌಖ್ಯ ಉಂಟುಮಾಡುವ ಬೆಳೆ ಬಾಳೆಯಾಗಿದೆ. ಬಾಳೆಯ ಹಣ್ಣನ್ನು ವಿಶೇಷವಾಗಿ ಭೋಜನದ ನಂತರ ಹೆಚ್ಚಾಗಿ ತಿನ್ನಲು ಬಳಸುತ್ತಾರೆ. ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಬಾಳೆಯ ಕುಲಗಳನ್ನು ಈ ರೀತಿ ಪ್ರಸ್ತಾಪ ಮಾಡಲಾಗಿದೆ. "ಬಾಳೆಯ ಕುಲದಲ್ಲಿ ಗುಜರಾತಿ, ರಸಬಾಳೆ, ಸುಗಂಧಿ, ಕರಿಬಾಳೆ, ಕಲ್ಯಾಣಿ, ಬೂದಿಬಾಳೆ, ಸೊನ್ನಿಬಾಳಿ, ಏಣುಬಾಳೆ"[೨೬] ಮುಂತಾದವು.

ಬಾಳೆಯ ತೋಟವನ್ನು ಮಾಡುವ ವಿಧಾನವನ್ನು ಕುರಿತು ಶ್ರೀ ಘನಮಠ ಶಿವಯೋಗಿಗಳು ಈ ರೀತಿಯಲ್ಲಿ ಹೇಳುತ್ತಾರೆ. ಭೂಮಿಗೆ ಮೊದಲು ಗೊಬ್ಬರವನ್ನು ಹಾಕಿ, ದೊಡ್ಡನೇಗಿಲಿನಿಂದ ಮೂರು ಸಾರಿ ರಂಟೆಹೊಡೆದು ಆಮೇಲೆ ದೊಡ್ಡಕುಂಟೆಯಿಂದ ಹದವರಿತು ಚೆನ್ನಾಗಿ ಹರಗಿ, ಪುನಃ ಗೊಬ್ಬರ ಹಾಕಿ, ಮತ್ತೆ ಹರಗಬೇಕು. "ಐದು ಮೊಳಕ್ಕೊಂದು ಅಥವಾ ನಾಲ್ಕು ಮೊಳಕ್ಕೊಂದು ಗಿಡಗಳು ನಿಲ್ಲುವ

ಹಾಗೆ ಅಜಮಾಸು ನೋಡಿ, ಮಡಿಗಳನ್ನು, ಕಾವಲಿಯನ್ನು ಚೆನ್ನಾಗಿ ಮಾಡಿಕೊಂಡು ಪ್ರತಿಯೊಂದು ಮಡಿಯ ಮಧ್ಯಭಾಗದಲ್ಲಿ ಗೇಣು, ಒಂದೂವರೆ ಗೇಣು ಚಚ್ಚೌಕು ಅಗಲ ಮತ್ತು ಒಂದು ಕಾಲು ಮೊಳ ತಗ್ಗಾಗಿರುವ ತಗ್ಗುಗಳನ್ನು ತೆಗೆಸಿ ಅವುಗಳಲ್ಲಿ ಗೇಣುದ್ದ ಹಳೆಯ ಗೊಬ್ಬರವನ್ನು ಹಾಕಿ ಆರು ತಿಂಗಳಿನ ಬಾಳೆಯ ಸಸಿಗಳನ್ನು ತೆಗ್ಗಿನಲ್ಲಿ ನಿಲ್ಲಿಸಿ, ಮೇಲೆ ಹಳೆಯ ಗೊಬ್ಬರವನ್ನು ಹಾಕಿ ಚೆನ್ನಾಗಿ ಬಗಲು ತುಳಿದು ಗಟ್ಟಿಯಾಗಿ ಸಸಿಗಳನ್ನು ಕೂಡಿಸಿ ನೀರು ಕಟ್ಟಬೇಕು"[೨೭] ಎನ್ನುತ್ತಾರೆ.

ಲೋಕೋಪಕಾರದಲ್ಲಿ ಬಾಳೆಹಣ್ಣಿನ ಅಧಿಕ ಇಳುವರಿ ಪಡೆಯುವ ವಿಧಾನವನ್ನು ಕುರಿತು ಈ ರೀತಿಯಲ್ಲಿ ವಿವರಿಸಲಾಗಿದೆ.

"ಕುದುರೆಯ ಪಂದಿಯ ವಿಷ್ಠೆಯೊ ।
ಳೊದವಿದ ಕಿರ್ಚಿಂದೆ ಸೂಜಿಯಂ ಕಾಸಿ ಬೞಿ ॥
ಕ್ಕದಲಱೊಳ್ ಬಾೞೆಯ ಗೊನೆ ಪು
ಟ್ಟಿದೆಡೆಯನಱೆದೂಱೆ ಪಿರಿಯ ಬಿಣ್ಗೊನೆಯಕ್ಕುಂ ॥"[೨೮]

ಕುದುರೆಯ ಕಾಡುಹಂದಿಯ ಲದ್ದಿ ಇವೆರಡನ್ನು ಸೇರಿಸಿ ಕಿಚ್ಚನ್ನಾಗಿಸಿ, ಆ ಕಿಚ್ಚಿನಲ್ಲಿ ಸೂಜಿಯನ್ನು ಚೆನ್ನಾಗಿ ಕಾಯಿಸಿ, ಬಾಳೆಗೊನೆ ಹುಟ್ಟುವ ಸ್ಥಾನವನ್ನರಿತು, ಸೂಜಿಯನ್ನು ಅಲ್ಲಿ ನೆಡಲು ಆ ಗೊನೆಯು ದೊಡ್ಡಪ್ರಮಾಣದಲ್ಲಿ ಬೆಳೆಯುತ್ತದೆ ಎಂದು ತಿಳಿಸುತ್ತಾನೆ.

"ಮೊದಲಲ್ಲಿ ಬಾೞೆಗಂಕೋ ।
ಲದ ಜಲಮಂ ಕ್ರೋಡವಸೆಯುಮಂ ರುಧಿರಮುವಂ ॥
ಕುದಿಯಿಸಿ ಪೊಯ್ದೊಡೆ ದಾಳಿಂ ।
ಬದ ಫಲದಾಕೃತಿಯ ಫಲಮನದು ತಳೆದಿರ್ಕುಂ ॥"[೨೯]

ಬಾಳೆಯ ಸಸಿಯನ್ನು ನೆಡುವ ಮೊದಲು ಅಂಕೋಲೆಯ ಬೀಜದ ರಸ, ಹಂದಿಯ ಮಾಂಸ, ರಕ್ತ ಇವನ್ನು ಕುದಿಸಿ, ಆ ರಸವನ್ನು ಹೊಯ್ಯಲು ಬಾಳೆಯ ಕಾಯಿಗಳು ದಾಳಿಂಬದ ಕಾಯಿಗಳಂತೆ ದುಂಡಗೆ ಬೆಳೆಯುತ್ತವೆ. ಕನ್ನಡ ಕಾವ್ಯಗಳಲ್ಲಿ ಆದಿಕವಿ ಪಂಪನಿಂದ ಹಿಡಿದು ಮುದ್ದಣ್ಣನ ತನಕ ಬರುವ ಪ್ರಮುಖ ಕವಿಗಳು ತಮ್ಮ ಕಾವ್ಯಕೃತಿಗಳಲ್ಲಿ ಅನೇಕ ತೋಟದ ಬೆಳೆಗಳ ಪ್ರಸ್ತಾಪವನ್ನು ಮಾಡಿದ್ದಾರೆ. ತೆಂಗು, ಅಡಿಕೆ, ಬಾಳೆ, ಹಲಸು, ನೇರಳೆ, ದಾಳಿಂಬೆ, ಕಿತ್ತಳೆ, ನಿಂಬೆ, ಮಾವು, ಈಳೆ ಮುಂತಾದ ಹಣ್ಣುಗಳ ವರ್ಣನೆ, ತೋಟದಲ್ಲಿ ಕಂಗೊಳಿಸುವ ಬಗೆ ಋತುಮಾನಗಳ ಹಿನ್ನೆಲೆಯಲ್ಲಿ ಹಣ್ಣುಗಳನ್ನು ಸಮೃದ್ಧವಾಗಿ ನೀಡುವ ಅಂಶವನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ.

ಒಟ್ಟಾರೆಯಾಗಿ 'ಬಾಳೆಯನ್ನು ಹಾಕಿದವನು ಬಾಳಿಯಾನು', 'ಬಾಳೆ ಇದ್ದವನ ಬಾಳುವೆ ಉತ್ತಮ' ಎಂಬ ಗಾದೆಗಳನ್ನು ನೋಡಿದರೆ ಸರ್ವಜನರಿಗೂ ಸಕಲ ಶುಭಕಾರ್ಯಗಳಿಗೂ ಭೋಜನ ಫಲಾಹಾರಗಳಿಗೂ ಅತ್ಯಂತ ರುಚಿಕರವಾಗಿ ಬ್ರಾಹ್ಮಣಾದಿಗಳಿಗೆ ಊಟಕ್ಕೆ ಬಳಸುವ ಎಲೆಯಾಗಿ, ಕವಿ ಜನರು 'ರಂಭಾಫಲ'ವೆಂದು ಉಪಮೆಗೆ ಶೋಭಿಸುವ ಹಣ್ಣು ಇದಾಗಿದೆ.

ಎಲೆಯ ಬಳ್ಳಿ : ಎಲೆಯನ್ನು ವೀಳಯ, ವೀಳೆಯದೆಲೆ ಎಂದು ಕರೆಯುತ್ತಾರೆ. ಕನ್ನಡ ನಿಘಂಟುವಿನಲ್ಲಿ ವೀಳಯ=ಒಂದು ಜಾತಿಯ ಬಳ್ಳಿ ಮತ್ತು ಎಲೆ ಎಂದು ಅರ್ಥ ಹೇಳಲಾಗಿದೆ. ಇದು ತುಂಬಾ ಲಾಭದಾಯಕ ಬೆಳೆಯಾಗಿದೆ. ತೋಟದಲ್ಲಿ ತುಂಬಾ ಅಚ್ಚುಕಟ್ಟಾಗಿ ಈ ಬೆಳೆ ಬೆಳೆಯಲಾಗುತ್ತದೆ. ಬಹು

ಉಪಯೋಗಿಯಾಗಿ ಬೆಳೆಸುತ್ತಾರೆ. "ತಾಂಬೂಲಂ ಪ್ರಿಯಮುತ್ತಮಂ" ಎಂದು ಅಷ್ಟ ವಿದಾರ್ಚನೆಗೆ, ತಾಂಬೂಲಕ್ಕೆ, ಲಗ್ನ, ಮುಂಜಿ, ಬಾಷ್ಟಿಗಿ, ನಿಶ್ಚಯ ಅನೇಕ ಶುಭಕಾರ್ಯಗಳಲ್ಲಿ ಬಳಸಲಾಗುತ್ತದೆ, ನಾಟಿ ವೈದ್ಯದಲ್ಲಿಯೂ ಬಳಸುತ್ತಾರೆ. ತಾಂಬೂಲದ ಸೇವನೆಯಿಂದ ದೇಹದ ಸಮಶೀತೋಷ್ಣ ತರುತ್ತದೆ. ನಾಲಿಗೆಗೆ ರುಚಿ ತರುತ್ತದೆ, ದಂತಗಳು ಬಿಗಿಯಾಗುತ್ತವೆ, ಮುಖ ಲಕ್ಷಣ ಕಂಗೊಳಿಸುತ್ತದೆ. ಈ ಕಾರಣದಿಂದಲೇ "ವೀಳ್ಯೆವಿಲ್ಲದ ಬಾಯಿ ಇಲಿಯ ಗುದ್ದಿನ ಹಾಗೆ" ಎಂಬ ಗಾದೆ ಪ್ರಚಲಿತದಲ್ಲಿದೆ.

ಎಲೆಯ ಬಳ್ಳಿಯ ಹಚ್ಚುವ ವಿಧಾನ ಕುರಿತು ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಈ ರೀತಿ ಹೇಳಲಾಗಿದೆ. ತೋಟಗಾರಿಕೆಗೆ ಸಿದ್ಧಮಾಡಿದ ಭೂಮಿಯಲ್ಲಿ "ಮೊದಲು ಸಡೇದಗಿಡಗಳನ್ನು ಹಾಲಿವಾಣ, ಚೊಗಚಿ ಮೊದಲಾದ ಗಿಡಗಳನ್ನು ಮೊದಲಿಗೆಯೇ ಹಾಕಿರಬೇಕು. ಆ ಗಿಡಗಳು ದೊಡ್ಡವಾದ ಮೇಲೆ ಆ ಗಿಡಗಳ ಬೊಡ್ಡಿಯ ಸಮೀಪದಲ್ಲಿ ಒಂದುಮೊಳ ಅಜಮಾಸು ಬಿಟ್ಟು ಗೇಣು, ನಾಲ್ಕು ಬೆರಳು ಅಗಲ ಗುದ್ದು ಮೊಳ ಅಂದರೆ ಗೇಣು ಎಂಟು ಬೆರಳು; ಅಜಮಾಸು ತಗ್ಗು ಇಟ್ಟು ಎಲ್ಲ ಗಿಡಗಳ ಬೊಡ್ಡೆಯಲ್ಲಿ ಪ್ರತಿ ಮಡಿ ಮಡಿಗಳಲ್ಲಿ ಈ ಪ್ರಕಾರ ತಗ್ಗುಗಳನ್ನು ತೆಗೆದು ಆ ಬೀಜದ ಬಳ್ಳಿಯನ್ನು ತಂದು ಮೊಳಮೊಳದ ತುಂಡು ಮಾಡಿ ಮಲ್ಲಿಗೆ ಹಂಚಿನ ಹಾಗೆ ಸಿಂಬಿಯನ್ನು ಸುತ್ತಿ ಆ ಸಿಂಬಿಗಳನ್ನು ತಗ್ಗಿನಲ್ಲಿ ಇಟ್ಟು ಅದರ ಮೇಲೆ ಕೆಮ್ಮಣ್ಣು ಕುರಿಯ ಗೊಬ್ಬರವನ್ನು ಕೂಡಿಸಿ ಕಲಿಸಿ ಸಣ್ಣ ಬೆಳವಲಕಾಯಿ, ಸಿಂಬೀಕಾಯಿ ಪ್ರಮಾಣ ಉಂಡಿಗಳನ್ನು ಕಟ್ಟಿ ನಾಲ್ಕಾರು ಬೆರಳು ಪ್ರಮಾಣ ಆ ಉಂಡಿಗಳನ್ನು ತಗ್ಗಿನಲ್ಲಿರುವ ಎಲೆಯ ಬಳ್ಳಿಯ ಸಿಂಬಿಯ ಮೇಲೆ ಹೌರಗೆ ಇಟ್ಟು, ಅನವರತು ತೇವು ಆರದ ಹಾಗೆ ನಾಲ್ಕು ದಿವಸಕ್ಕೊಂದು ವೇಳೆ ನೀರು ಬಿಡುತ್ತ ಇರುವಲ್ಲಿ ಮೇಲೆ ಹೌರಗಾಗಿ ಹದಿನೈದು ದಿವಸಗಳಲ್ಲಿ ಕುಡಿಗಳಾಗಿ ತಿಂಗಳಷ್ಟಕ್ಕೆ ಕುಡಿಸಾಗಿ ಬೆಳೆಯುತ್ತ ...."[೩೦]

ಅಡಿಕೆಯ ತೋಟದಲ್ಲಿ ಮತ್ತು ಪ್ರತ್ಯೇಕವಾಗಿಯೂ ಬೆಳೆಯಲಾಗುತ್ತದೆ. ಮೂರು ವರ್ಷದ ಮೇಲೆ ಎಲೆಯಬಳ್ಳಿ ಹಣ್ಣಾದಂತೆ ಕಂಡು ಬರುತ್ತದೆ. ಆಗ ಬಳ್ಳಿಯನ್ನು ಗಿಡಗಳಿಂದ ಕೆಳಗಿಳಿಸಿ, ಬೊಡ್ಡಿಯ ಹಾಗೆ ಉಳಿಸಿ ತುದಿ ಬಳ್ಳಿಯನ್ನು ಕೊಯ್ದು ಬಿಡಲಾಗುತ್ತದೆ. ಬೊಡ್ಡಿಯ ಬಳ್ಳಿಯ ಸಿಂಬಿಸುತ್ತಿ ನೆಲದಲ್ಲಿ ಹೂಳಿ, ಕೆಂಪು ಮಣ್ಣು, ಕುರಿಗೊಬ್ಬರದ ಆರೈಕೆ ಮಾಡುತ್ತಾರೆ. ಅನೇಕ ಬಗೆಯ ಎಲೆಗಳನ್ನು ಕಾಣುತ್ತೇವೆ. ಕನ್ನಡ ಕಾವ್ಯಗಳಲ್ಲಿ ಹೇರಳವಾಗಿ ಉಲ್ಲೇಖಿತವಾಗಿದೆ. ಆದಿಪುರಾಣದ ಆಶ್ವಾಸ–೦೪ರಲ್ಲಿ ಪದ್ಯ ೨೮ರಲ್ಲಿ 'ಅಡಿಕೆ ಮರವು ವೀಳೆಯದ ಹಂಬಿಗೂ(ಹಬ್ಬು) ಯೋಗ್ಯವಾದಂತೆ'. ಅಂದರೆ ಅಡಿಕೆಯ ಮರಗಳಿಗೆ ವೀಳೆಯ ಬಳ್ಳಿಯ ಹಬ್ಬಿಸಿ ಬೆಳೆಯುವುದೇ ಉತ್ತಮ ಎನ್ನಲಾಗಿದೆ. ನಯಸೇನನ ಧರ್ಮಾಮೃತದಲ್ಲಿ "........... ಎಲೆವಳ್ಳಿಯಂತೆ ಕಂಬಮಂ ಸುತ್ತುತುಂ ...."[೩೧] ತೋಟದಲ್ಲಿ ಅಡಿಕೆಯ ಮರ, ಬುರುಗ, ಹಾಲಿವಾಣ, ಚೊಗಚಿ ಮರಗಳಿಗೆ ಬಳ್ಳಿಯನ್ನು ಹಬ್ಬಿಸುತ್ತಾರೆ. ಎಲೆಬಳ್ಳಿಯ ಮಾಡುವ ವಿಧಾನ ತಿಳಿದು ಬರುತ್ತದೆ. ಶಾಸನಗಳಲ್ಲಿ ವೀಳ್ಯದೆಲೆಯ ಕವಳಿಗೆ ಅಥವಾ ಕಟ್ಟುಮಾಡಿ, ಎಣಿಕೆ ಮಾಡುವ, ಎಲೆಯ ಹೇರುಗಳಿಗೆ ಹಣ ರೂಪದ ತೆರಿಗೆ ಕೊಡುವ ಮತ್ತು ಎಲೆಯ ಎಣಿಕೆ ಮಾಡಿ ತೆರಿಗೆ ಕೊಡುವ, ದೇವಾಲಯಗಳಿಗೆ ಧಾನವಾಗಿ ನೀಡುವ ಅನೇಕ ಅಂಶಗಳು ದೊರೆಯುತ್ತವೆ.

ತೋಟದ ಬೆಳೆಗಳಲ್ಲಿ ಅನೇಕ ಹಣ್ಣಿನ ಗಿಡಗಳನ್ನು ನಾಟಿಸಿ, ಬೆಳೆಯ ಪಡೆಯಲಾಗುತ್ತದೆ. ಅಂತಹ ವನಗಳಲ್ಲಿ ಮಾವಿನ ತೋಪು, ನಿಂಬಿಯವನ, ಪೇರಲವನ, ಅಂಜೀರವನ, ಗೋಡಂಬಿವನ, ಯಾಲಕ್ಕಿಗಿಡ ಮುಂತಾದವುಗಳ ತೋಟ ಮಾಡುವ ವಿಧಾನವನ್ನು ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಪ್ರಸ್ತಾಪಿಸಲಾಗಿದೆ. ಅದನ್ನು ಸಂಗ್ರಹಿಸಿ ಹಣ್ಣಿನ ವನಗಳನ್ನು ಮಾಡುವ ಕ್ರಮವನ್ನು ತಿಳಿಯಬಹುದಾಗಿದೆ.

ಮಾವಿನ ಗಿಡಗಳು : ತೋಟ ಮಾಡಲು ಬೇಕಾಗುವ ರೀತಿಯಲ್ಲಿ ಭೂಮಿಯ ಹಸನ ಮಾಡಿ, ನೇಗಿಲು, ಮಡಿಕೆ ಹೊಡೆದು, ಗೊಬ್ಬರಹಾಕಿ ಉಳುಮೆಯ ಮಾಡಿ, ಸಿದ್ದತೆಮಾಡಿಕೊಂಡು, ಮೊದಲು ಮಾವಿನ ಸಸಿಗಳನ್ನು ಮಾಡಿಕೊಳ್ಳಬೇಕು. ಮಡಿಯ ಮಾಡಿ, ಮಡಿಯಲ್ಲಿ ಉಸುಕು, ಮಣ್ಣು, ಕೆಮ್ಮಣ್ಣನ್ನು ಸರಿಬೆರಕೆಮಾಡಿ ತಯಾರು ಮಾಡಿ ಉತ್ತಮ ತರದ ಸವಿಯಾದ ಮಾವಿನ ಹಣ್ಣುಗಳನ್ನು ತಂದು ಅವುಗಳನ್ನು ಹಿಂಡಿಕೊಂಡು ಆ ಬೀಜಗಳನ್ನು ನೀರಿನಿಂದ ತೊಳೆದು ಇಲ್ಲವೆ ಹಾಗೆಯೇ ತೊಳೆಯದೆ, ನಾಲ್ಕಾರು ದಿನ ಬಿಟ್ಟು ಮಡಿಯಲ್ಲಿ ಗೇಣು, ಗೇಣು ಅಂತರವಾಗಿ ಪ್ರತಿಯೊಂದು ಬೀಜವನ್ನು ಅಡ್ಡ ಇಟ್ಟು ಆ ಮೇಲೆ ನಾಲ್ಕು ಬೆರಳುದ್ದ ಹಳೆ ಗೊಬ್ಬರಹಾಕಿ ನೀರು ಹರಿಸಬೇಕು. ಇಂತಹ ಮಡಿಯಲ್ಲಿ ತಯಾರಿಸಲು ಆಗದೆ ಇದ್ದರೆ ನೇರವಾಗಿ ಕುಣಿಗಳಿಗೆ ಮಾವಿನ ಬೀಜ ಹಾಕಬಹುದು. ಸಸಿ ಹಚ್ಚುವ ವಿಧಾನ ಹೇಗೆಂದರೆ "............. ಇಪ್ಪತ್ತು ನಾಲ್ಕು ಮೊಳಕ್ಕೆ ಒಂದರಂತೆ ಹಮಚೌಕು ಗಜದ ಪ್ರಮಾಣ ಅಗಲ ಹಾಗೂ ಒಂದು ಗಜ ತಗ್ಗಾಗಿರುವ ತಗ್ಗುಗಳನ್ನು ಅಗಿಸಿ ಅದರಲ್ಲಿ ಕೆಮ್ಮಣ್ಣನ್ನು, ಸಣ್ಣ ಉಸುಕನ್ನು ಸಮಬೆರಕೆಯಾಗಿ ಕಲಿಸಿ ಭರೀಮಾಡಬೇಕು. ಅಥವಾ ಕೆಮ್ಮಣ್ಣು ಸಿಗದ ಪಕ್ಷಕ್ಕೆ ಅಲ್ಲಿದ್ದ ಮಣ್ಣನ್ನು ಉಸುಕನ್ನು ಸಮನಾಗಿ ಕಲಿಸಿ, ತುಂಬಿ, ಸಿದ್ದಮಾಡಿ ಇಟ್ಟು ಮುಂದೆ ಉತ್ತರಿಯ ಮಳೆಯ ಪ್ರವೇಶ ಕಾಲಕ್ಕೆ ಆ ಕುಣಿಗಳಿಗೆ ಮೊಟ್ಟೆಯ ನೀರು ಬಿಟ್ಟು ಹಸಿ ಮಾಡಬೇಕು. ಮತ್ತು ಆ ಅಗಿಗಳ ಸುತ್ತಲು ಮಣ್ಣುಗಡ್ಡಿಗಳನ್ನು ಹಾಗೆಯೇ ಉಳಿಸಿ ಅವುಗಳ ಅಡ್ಡಬೇರು ಅಥವಾ ಉದ್ದಬೇರುಗಳು ಹರಿಯದ ಹಾಗೆ ಮಣ್ಣುಗಡ್ಡಿಯನ್ನು ಉಳಿಸಿ ಆ ಮಣ್ಣುಗಡ್ಡಿಯ ಒಡೆಯದ ಹಾಗೆ ಅದಕ್ಕೆ ಬಾಳೆಯ ಸೊಪ್ಪೆಯಿಂದ ಅಥವಾ ಮತ್ತವದಾದರೂ ಬಳ್ಳಿಗಳಿಂದ ಬಿಗಿದು, ಸುತ್ತಿ ತೆಗೆದುಕೊಂಡು ಬಂದು ಮೊದಲು ಸಿದ್ದಮಾಡಿದ ಕುಣಿಗಳಲ್ಲಿ ಈ ಗಡ್ಡಿಯು ಕಿಡಿಯುವ ಹಾಗೆ ಕೆದರಿ, ಗೆಡ್ಡೆಸಹಿತ ಅಗಿಯನ್ನು ತಗ್ಗಿನಲ್ಲಿ ಇಟ್ಟು ಮೇಲೆ ಒಂದು ಹೆಡಿಗಿ ಹಳೆಯ ಗೊಬ್ಬರವನ್ನು ಹಾಕಿ, ಚೆನ್ನಾಗಿ ಬಗಲು ತುಳಿದು ಗಟ್ಟಿಯಾಗಿ ಕೂಡ್ರಿಸಬೇಕು. ಹಾಗೂ ನಾಲ್ಕು ಕೊಡ ನೀರು ನಿಲ್ಲುವ ಹಾಗೆ ಸುತ್ತಲು ಒಡ್ಡುಕಟ್ಟಿ, ಎಂಟು ದಿವಸ ಹಾಗೇ ಬಿಟ್ಟು, ಪ್ರತಿಯೊಂದು ಕುಣಿಗೆ ಒಂದು ಕೊಡದಂತೆ ನೀರು ಹಾಕಬೇಕು..........."[೩] ಈ ರೀತಿ ನಾಟಿಸಿ ಸರಿಯಾದ ಬೇಲಿ, ನೀರಿನ ಆರೈಕೆ ಮಾಡಿ ಬೆಳಸಿದರೆ ಉತ್ತಮ ತೋಟದ ನಿರ್ಮಾಣ ಮಾಡಲು ಸಾಧ್ಯ. ಉತ್ತಮ ಮಾವು ಬೆಳೆಯಲು ಸಾಧ್ಯ. ಈ ರೀತಿಯ ಅನೇಕ ತಳಿಯ ಮಾವುಗಳಿರುವುದನ್ನು ಕಾಣಬಹುದು.

ನಿಂಬಿಯವನ : ನಿಂಬಿಯಲ್ಲಿ ಅನೇಕ ಕುಲಗಳುಂಟು. ನಿಂಬಿ, ಗಜನಿಂಬಿ, ಕಿರಿನಿಂಬಿ, ಸಕ್ಕರೆನಿಂಬಿ, ಕಿತ್ತಳೆನಿಂಬಿ, ಬಲ್ಲಿನಿಂಬಿ, ಔರಂಗಬಾದನಿಂಬಿ, ಚಕ್ಕೋತ್ತರನಿಂಬಿ, ಮಾದಳನಿಂಬಿ, ನಾರಂಗ ಮುಂತಾದವುಗಳು. ನಿಂಬಿಯ ಹಣ್ಣಿನ ಬೀಜಗಳನ್ನು ಒಣಗಿಸದೆ ಹಸಿಯಾಗಿಯೇ ತಂದು ಮಡಿಯ ಮಾಡಿ, ಚೆನ್ನಾಗಿ ಹಳೆಯ ಗೊಬ್ಬರ ಹಾಕಿ, ಬೀಜಗಳನ್ನು ಹಾಕಿ ನೀರು ಬಿಡಬೇಕು. ಇಪ್ಪತ್ತು ದಿವಸ ಅಥವಾ ತಿಂಗಳಿಗೆ ಸಸಿಗಳಾಗುತ್ತವೆ. ಒಂದು ವರ್ಷಗಳ ಕಾಲ ಮಡಿಯಲ್ಲಿ ಬಿಟ್ಟು, ಬೆಳಸಿ, ಮೃಗಶಿರ ಮಳೆಗೆ ಕಿತ್ತು ಹಚ್ಚಬೇಕು. ಅದು ಹೇಗೆಂದರೆ "............. ಈ ನಿಂಬಿಯ ಗಿಡಗಳನ್ನು ಹಚ್ಚುವ ಭೂಮಿಯನ್ನು ನೇಗಿಲೆಯಿಂದಾಗಿ ಹೊಡೆದು, ಮಣ್ಣು ಮೆತ್ತಗೆ ಮಾಡಿ, ಚೆನ್ನಾಗಿ ಗೊಬ್ಬರ ಹಾಕಿ, ಹರಗಿ, ಎಂಟುಮೊಳಕ್ಕೊಂದು ತಗ್ಗು ತೆಗೆದು ಅದರಲ್ಲಿ ಉಸುಕು, ಕೆಮ್ಮಣ್ಣು, ಹಳೆಯ ಗೊಬ್ಬರವನ್ನು ಕಲಿಸಿ, ಹಾಕಿ ಭರೀಮಾಡಿ, ಆ ತಗ್ಗಿಗೆ ನೀರು ಬಿಟ್ಟು ಹಸಿಮಾಡಿ, ನಿಂಬಿಯ ಅಗಿಗಳ ಬೇರು ಹರಿಯದ

ಹಾಗೆ ಗಡ್ಡೆ ಸಹಿತ ಅಗಿದು ತಂದು ಸ್ವಲ್ಪ ಕೆದರಿ ಆ ತಗ್ಗಿನೊಳಗೆ ಈ ಸಸಿಗಳನ್ನಿಟ್ಟು ಕುರಿಯ ಗೊಬ್ಬರವನ್ನು, ಕೆಮ್ಮಣ್ಣನ್ನು ಸಮನಾಗಿ ಕಲಿಸಿ ಹಾಕಿ ಗಟ್ಟಿಯಾಗಿ ಬಗಲು ತುಳಿದು ನೀರು ಬಿಡುತ್ತ ಹೋಗಬೇಕು. ಈ ನಿಂಬಿಯ ಸಸಿಗಳನ್ನು ಅದಲು ಬದಲಾಗಿ ಹಚ್ಚದೆ ಒಂದೇ ವನದಲ್ಲಿ ಬೇರೆ ಬೇರೆ ಕುಲದ ಸಸಿಗಳನ್ನು ಒತ್ತಟ್ಟಿಗೆ ಮಾಡಿ ಹಚ್ಚಬೇಕು"[೩೩] ಕಡಿಮೆ ಖರ್ಚಿನಲ್ಲಿ ಬೆಳೆಯ ಬೆಳೆಯಬಹುದು. ಉತ್ತಮ ಮಾರುಕಟ್ಟೆಯ ವ್ಯವಸ್ಥೆ ದೊರೆಯುತ್ತದೆ. ವಿಶೇಷವಾಗಿ ಬೇಸಿಗೆಯಲ್ಲಿ ಹೆಚ್ಚು ಉಪಯೋಗಕಾರಿಯಾಗಿದೆ.

ಪೇರಲವನ : ಪೇರಲವೆಂದೂ, ಜಾಂಪಲವೆಂದೂ ಕರೆಯುತ್ತಾರೆ. ಒಳ್ಳೆಯ ಬೀಜಗಳನ್ನು ಆಯ್ಕೆ ಮಾಡಿಕೊಂಡು ಬೂದಿಯಲ್ಲಿ ಕಲಸಿ, ಬಿಡಿ ಬಿಡಿಯಾಗಿ ಪುನಃ ಬೂದಿಯ ಲೇಪಿಸಿಕೊಂಡು ಬಿಸಿಲಲ್ಲಿ ಚೆನ್ನಾಗಿ ಒಣಗಿಸಿಕೊಂಡು, ಆಡಿನ ಹಾಲಿನಲ್ಲಿ ಒಂದು ದಿವಸ ನೆನೆಯಿಟ್ಟು, ಮಡಿಯನ್ನು ಮಾಡಿ ಗೇಣಿಗೊಂದರಂತೆ ಹಾಕಿ ನೀರು ಹಾಕುತ್ತ ಹೋದರೆ ಮೂರು, ನಾಲ್ಕು ತಿಂಗಳಲ್ಲಿ ಸಸಿಗಳು ಸಿದ್ದವಾಗುತ್ತವೆ. ಉತ್ತರಾ ಅಥವಾ ಮೃಗಶಿರ ಮಳೆಗಾಲದಲ್ಲಿ ಹಚ್ಚಬಹುದು.

ಪೇರಲಗಿಡವನ್ನು ನಾಟುವುದು ಹೇಗೆಂದರೆ "............ ಎಂಟು ಹತ್ತು ಮೊಳಕ್ಕೊಂದರಂತೆ ಸಾಲು ಹಿಡಿದು ಔರಸ, ಚೌರಸ ಸಾಲಾಗುವಂತೆ ತಗ್ಗುಗಳನ್ನು ತೆಗೆಸಿ, ಆ ತಗ್ಗಿನಲ್ಲಿ ಉಸುಕನ್ನು ಮಣ್ಣನ್ನು ಸಮಬೆರಕೆಯಾಗಿ ಕಲಿಸಿ, ಭರೀಮಾಡಿ ನೀರು ಬಿಟ್ಟು ಹಸೀಮಾಡಿ ಆ ಪೇರಲಸಸಿಗಳ ಬೇರು ಹರಿಯದಂತೆ ಗಡ್ಡೆಸಹಿತ ಅಗಿದು ತೆಗೆದು ಆ ತಗ್ಗಿನಲ್ಲಿ ಗಡ್ಡೆ ಮುಳುಗುವ ಹಾಗೆ ಸ್ವಲ್ಪ ಕೆದರಿ ಈ ಸಸಿಗಳನ್ನಿಟ್ಟು ಚೆನ್ನಾಗಿ ಬಗಲು ತುಳಿದು, ಗಟ್ಟಿಯಾಗಿ ಕೂಡ್ರಿಸಿ, ನೀರು ಬಿಡುತ್ತ ಹೋಗಬೇಕು. ಆ ಗಿಡಗಳು ಎರಡು ಮೂರು ವರ್ಷಕ್ಕೆ ಫಲಕ್ಕೆ ಬರುವವು"[೩೪] ಪೇರಲಹಣ್ಣು ಮಾರುಕಟ್ಟೆಯಲ್ಲಿ ಇಂದು ಅತಿಹೆಚ್ಚಾಗಿ ಮಾರಾಟವಾಗುತ್ತದೆ. ಆರೋಗ್ಯ ದೃಷ್ಟಿಯಿಂದ ಒಳ್ಳೆಯ ಹಣ್ಣು ಇದಾಗಿದೆ.

ಅಂಜೀರ ವನ : ರಕ್ತವೃದ್ಧಿಯಾಗಲು ಹೆಚ್ಚಾಗಿ ಅಂಜೀರದ ಹಣ್ಣನ್ನು ಉಪಯೋಗಿಸುತ್ತಾರೆ. ಅತ್ತಿಯ ಹಣ್ಣಿನಂತಿರುತ್ತದೆ. ಗಿಡದ ಕೊಂಬೆಯನ್ನು ಕಿತ್ತು ಹಚ್ಚಲಾಗುತ್ತದೆ. "ಅಂಜರದ ಹಣ್ಣು ಅತ್ತಿಯ ಹಣ್ಣಿನ ಆಕಾರವಾಗಿದ್ದು ಬಹು ಸಿಹಿಯಾಗಿರುವುದು. ಅದರ ಎಲೆಗಳು ಆಲದ ಎಲೆಯಕ್ಕಿಂತಲೂ ದೊಡ್ಡವಾಗುವವು. ಈ ಗಿಡಗಳು ಹಚ್ಚಬೇಕಾದರೆ ಅವುಗಳ ಕೊಲ್ಲೆಯನ್ನು ತಂದು ದಾಳಿಂಬದ ಕೊಲ್ಲೆಯ ಹಚ್ಚಿದ ಹಾಗೆ ಹಚ್ಚಬೇಕು"[೩೫] ಎನ್ನಲಾಗಿದೆ.

ಗೋಡಂಬಿಯ ವನ :ಗೋಡಂಬಿಯ ಮರಗಳು ಕೇರ(ಗೇರ) ಗಿಡಗಳಂತೆ ಇರುತ್ತವೆ. ಯಾವ ತರಹದ ಭೂಮಿಯಲ್ಲಾದರೂ ಬೆಳೆಯುತ್ತವೆ. ತಿನ್ನಲು ರುಚಿಕರವಾದ ಪದಾರ್ಥವು. ಗಿಡದ ಎಲೆಗಳು ಹಸಿರಾಗಿ ಕಾಯಿಗಳು ಬಿಳುಪಾಗಿ ಇರುತ್ತವೆ. ಗೋಡಂಬೆಯ ಕಾಯಿಗಳನ್ನು ಸಿಪ್ಪೆ ಸಹಿತ ತಂದು, ಮೃಗಶಿರ ಮಳೆಯ ಕಾಲದಲ್ಲಿ ತೋಟದಲ್ಲಿ ಮಡಿ ಮಾಡಿ ಬೀಜ ಹಾಕಿ ನೀರು ಹಾಯಿಸಿದರೆ ಸಸಿಗಳಾಗುತ್ತವೆ. ಗೋಡಂಬಿಯ ಗಿಡಗಳನ್ನು ಹೊಲಗಳಲ್ಲಿ ಬೆಳೆಸುವುದು ಹೇಗೆಂದರೆ "........... ಹೊಲದಲ್ಲಿ ಮೊದಲು ಗೊಬ್ಬರವನ್ನು ಹಾಕಿ ಎರಡು ಸಾಲು ನೇಗಿಲೆಯನ್ನಾಗಲಿ, ಮಡಿಕೆಯನ್ನಾಗಲಿ ಹೊಡೆದು ಚೆನ್ನಾಗಿ ಹರಗಿ ಮಣ್ಣು ಮೆತ್ತಗೆ ಮಾಡಿ, ಸುತ್ತಲು ಮಾವಿನ ಗಿಡಗಳ ಕುಣಿಗಳನ್ನು ಇಪ್ಪತ್ತು ನಾಲ್ಕು ಮೊಳಕ್ಕೊಂದರಂತೆ ತೆಗೆಸಿ, ಮಧ್ಯ ಭೂಮಿಯಲ್ಲಿ ಸಾಲು ಸಾಲಾಗಿ ಕಾಣುವಂತೆ ಎಂಟು ಮೊಳಕ್ಕೊಂದು ಹನ್ನೊಂದು ಮೊಳದ ತಗ್ಗುಗಳನ್ನು ತೆಗೆದು ಆ ತಗ್ಗುಗಳಲ್ಲಿ ಕೆಮ್ಮಣ್ಣನ್ನು ಸಣ್ಣ ಉಸುಕನ್ನು

ಹಾಕಿ, ಭರೀ ಮಾಡಿದ ಮೇಲೆ ಒಂದು ಹೆಡಿಗೆ ಹಳೆಯ ಗೊಬ್ಬರ ಹಾಕಿ, ಗೋಡಂಬಿಯ ಬೀಜಗಳನ್ನು ಅಡ್ಡ ಇಟ್ಟು, ಮಣ್ಣು ಮುಚ್ಚಿ ನೀರು ಹಾಕುತ್ತ ಹೋಗಬೇಕು. ಹಾಗೂ ಸುತ್ತಲು ಮಾವಿನ ಬೀಜಗಳನ್ನು ಹಾಕಿ ಅವುಗಳ ಮಧ್ಯದಲ್ಲಿ ಅಲ್ಲಲ್ಲಿಗೊಂದೊಂದು ಪೇರಿಲೆಗಿಡಗಳನ್ನು, ಹಲಸಿನ ಗಿಡಗಳನ್ನು, ಮತ್ತು ಹುಣಸೇ ಗಿಡಗಳನ್ನು ಹಾಕಿದರೂ ಬರುತ್ತದೆ"[೩೬] ಗೋಡಂಬಿ ವನದ ಜೊತೆಗೆ ನೇರಿಲೆವನ, ಹಲಸಿನವನ, ಹುಣಸೇವನ ಮಾಡುವ ವಿಧಾನವನ್ನು ಶಾಸ್ತ್ರಕಾರರು ತಿಳಿಸಿರುವರು.

ಲೋಕೋಪಕಾರ ಕೃತಿಯಲ್ಲಿ ಶಾಸ್ತ್ರಕಾರನು ಹಣ್ಣುಗಳು ಸಿಹಿಯಾಗುವಂತೆ, ಕಾಯಿಗಳು ಹಣ್ಣಾಗದೆ ಬಹಳ ದಿನ ಕಾಯಿಗಳಾಗಿರುವಂತೆ, ಫಲಬಿಡದ ವೃಕ್ಷಗಳು, ಫಲಬಿಡುವಂತೆ ಮಾಡುವ ವಿಧಾನ ಕುರಿತು ಹೇಳಿರುತ್ತಾನೆ. ಅದು ಹೇಗೆಂದರೆ;

"ಮದುಕಂ ವದೂಕಪುಪ್ಪ ।
ಮಧುಶರ್ಕರೆ ಕೋಷ್ಠಮೆಂಬಿವಂ ಮೊದಲೊಳ್‌ಪೂ ॥
ಟ್ಟಧಿಕಫಲಮಾಗಿ ಪಡೆಗುಂ ।
ಮಧುರತೆ(ಯಂ) ಬೀಜವಾಗದಾವಫಲಂಗಳ್ ॥"[೩೭]

ವೃಕ್ಷಗಳ ಹಣ್ಣುಗಳು ಸಿಹಿಯಾಗುವಂತೆ ಮಾಡುವ ಕ್ರಮವನ್ನು ಈ ಪದ್ಯದಲ್ಲಿ ಶಾಸ್ತ್ರಕಾರ ತಿಳಿಸಿರುತ್ತಾನೆ. ಯಷ್ಟಿಮಧುಕಂ, ಇಪ್ಪೆಯ ಹೂವು, ಜೇನುತುಪ್ಪ, ಸಕ್ಕರೆ, ಕೋಷ್ಠಂ ಇವುಗಳೆನ್ನೆಲ್ಲ ಒಂದು ಗೂಡಿಸಿ ಯಾವುದೇ ಮರದ ಬುಡದಲ್ಲಿ ಹಾಕಿ ಹೂಳಲು ಆ ಮರದ ಫಲಗಳು ಸಿಹಿಯಾಗುತ್ತವೆ. ಮತ್ತು ಉತ್ತಮ ಬೀಜಗಳಾಗುತ್ತವೆ ಎಂದು ಹೇಳಲಾಗಿದೆ.

ಕನ್ನಡಸಾಹಿತ್ಯ ಕೃತಿಗಳಲ್ಲಿ ಅನೇಕ ಬಗೆಬಗೆಯ ಹಣ್ಣು ಫಲಗಳ ಉಲ್ಲೇಖ ಕಂಡುಬರುತ್ತವೆ. ಕನ್ನಡ ಕವಿಗಳಿಗೆ ಮಾವು ತುಂಬಾ ಪ್ರಿಯವಾದ ಹಣ್ಣು ಅದರ ವರ್ಣನೆ ಕಲ್ಪನೆಯನ್ನು ಕವಿಗಳು ಹೇರಳವಾಗಿ ಮಾಡಿರುವರು. ಪಂಪನ ಆದಿಪುರಾಣದಲ್ಲಿ

"ತೀವಿರ್ದತ್ತು ಮೊದಲ್ಮೊದಲ್ಗೆ ಪಣೆಯಂ ಮೂಗಯ್ಮಮಾಗಯ್ಯೆನಿ
ತ್ತಾ ವರ್ಕೆಯ್ದೆ ಕವಲ್ಕಿವಲ್ತು ಫಲವುಂ ...."[೩೮]

ಮಾವಿನ ಮರದ ಬುಡದ ಬಡ್ಡೆಯು ದಪ್ಪಮುಪ್ಪವಾಗಿ ಬೆಳೆದಿದ್ದು. ಅನೇಕ ಕವಲುಗಳಾಗಿ ಮೂರುಮೂರು ಮೊಳಕ್ಕೊಂದರಂತೆ ಗಿಣ್ಣುಗಳು ಬಿಟ್ಟು, ಅನೇಕ ರೆಂಬೆಗಳಾಗಿ ಬೆಳೆದು, ಕವಲು ಕವಲುಗಳಲ್ಲಿಯೂ ಫಲಗಳ ಬಿಟ್ಟು ಕಂಗೊಳಿಸುವ ವರ್ಣನೆ ಕಂಡುಬರುತ್ತದೆ. ಪಂಚತಂತ್ರ ಕೃತಿಯಲ್ಲಿ ವನದಲ್ಲಿ ದೊರೆಯುವ ತೋಟದ ಹಣ್ಣುಗಳ ವರ್ಣನೆ ಕಂಡುಬರುತ್ತದೆ.

"ಪನಸಾಮ್ರ ಜಂಬು ಜಂಬೀ ।
ರನಾರಿ ಕೇಳೀ ಕಪಿಸ್ಥಾ ಕದಳೀನಾರಂಗ ।
ನವೀನ ಫಲಾವಳಿಯಂ ।
ವಿನಯದಿನಾ ದ್ವಿಜವರಂಗೆ ಕಪಿವರನಿತ್ತಂ ॥"[೩೯]

ಹಲಸು, ಮಾವು, ನೇರಳೆ, ಕಿತ್ತಳೆ, ತೆಂಗು, ಬಾಳೆ ಬೇಲದ ಅನೇಕ ಬಗೆಯ ಹೊಸಹೊಸ ಹಣ್ಣುಗಳ ವರ್ಣನೆ, ಫಲಭರಿತವಾದ ಹಣ್ಣುಗಳ ವರ್ಣನೆ ಕಾಣಸಿಗುತ್ತದೆ. ನಯಸೇನನ ಧರ್ಮಾಮೃತದಲ್ಲಿ ತೋಟದ ಹಣ್ಣುಗಳ ವರ್ಣನೆ ಕಂಡುಬರುತ್ತದೆ. "ಬಾಟಿಯ ಕರ್ಜೂರದ ಕಿತ್ತಳೆಯ ಕಂದುರದ

ರಂಜಿಪಿಮ್ಮಾವಿನ ಪೇರಳೆಯ ನಾರಂಗದ ಕಂಬೇಳೆಯ ತನಿವಣ್ಣನಿಕ್ಕೆ ಮೆಲ್ವಾದರದಿಂ"[೬೦] ಬಾಳೆ, ಕರ್ಜೂರ, ಕಿತ್ತಳೆ, ಮಾವು, ಪೇರಳೆ, ತೆಂಗು, ಕಂಚೀಕಾಯಿ ಮುಂತಾದ ಹಣ್ಣುಗಳ ಉಲ್ಲೇಖ ಕಾಣಬಹುದು.

ಕನ್ನಡದ ಅನೇಕ ಕವಿಗಳ ಕೃತಿಗಳಲ್ಲಿ ಎಲ್ಲ ಬಗೆಯ ಹಣ್ಣುಗಳ ಉಲ್ಲೇಖ ಕಂಡು ಬರುತ್ತದೆ. ಹರಿಹರನ ಗಿರಿಜಾಕಲ್ಯಾಣದಲ್ಲಿಯಂತೂ ಈಳೆ, ನಿಂಬೆ, ಬಾಳೆ, ಹಲಸು, ನೇರಳೆ, ದಾಳಿಂಬೆ ಮುಂತಾದ ಹಣ್ಣು ಫಲಗಳ ವರ್ಣನೆ ಅಧ್ಯಾಯ ೨ ಮತ್ತು ೫ ರಲ್ಲಿ ವರ್ಣಿತವಾಗಿದೆ. ಹರಿಹರನ ಪರಿಸರ ಪ್ರೇಮ ತುಂಬಾ ಆಗಾದವಾಗಿರುವಂತದ್ದು.

ಅಲ್ಲ : ತೋಟಗಾರಿಕೆಯ ಬೆಳೆಯಾಗಿದ್ದು, ಇಂದು ಅತೀ ಹೆಚ್ಚಿನ ಪ್ರದೇಶಗಲ್ಲಿ ಬೆಳೆಯುತ್ತಾರೆ. 'ಅಲ್ಲ' ಬೆಳೆಯುವ ವಿಧಾನ ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಈ ರೀತಿ ಹೇಳಲಾಗಿದೆ. "ಉಸುಕು ಪಡಿ ಭೂಮಿಯಲ್ಲಿ ಮೇಲಿಂದ ಮೇಲೆ ನೀರನ್ನು ಹಾಕುತ್ತಾ ಹೋದ ಹಾಗೆ ಉಸುಕಿನಲ್ಲಿ ಸ್ವಲ್ಪ ಮಣ್ಣಾನ್ನಾಗಲಿ, ಗೊಬ್ಬರವನ್ನಾಗಲಿ, ಬೂದಿಯನ್ನಾಗಲಿ ಕಲಸಿ ಮಡಿಗಳಲ್ಲಿಯಾದರೂ ಗೇಣು, ಒಂದುವರೆ ಗೇಣು ಉಸಕನ್ನು ಸ್ವಲ್ಪ ಕೆಮ್ಮಣ್ಣನ್ನು, ಗೊಬ್ಬರವನ್ನು ಕಲಸಿ ಭರೀ ಮಾಡಿ ಹಾಕಿ 'ಅಲ್ಲ'ದ ಸಣ್ಣ ಸಣ್ಣ ಮರಿಕೊಂಬುಗಳನ್ನು ಮುರಿದು ಕೊಂಡು ಚೋಟಿಗೊಂದನ್ನು ಊರಿ ನೀರು ಬಿಡಬೇಕು"[೬೧] 'ಅಲ್ಲ' ಹಚ್ಚಿದ ಎಂಟು ತಿಂಗಳಲ್ಲಿ ಒಳ್ಳೆಯ ಬೆಳೆ ಬರುತ್ತದೆ. ಅದನ್ನೆ ಮೂರು ವರ್ಷಗಳ ಕಾಲ ಭೂಮಿಯಲ್ಲಿ ಬಿಟ್ಟು ನೀರು ಹಾಕುತ್ತಾ ಬೆಳೆಸಿದರೆ ಬಲಿತವಾದ 'ಅಲ್ಲ'ವಾಗುತ್ತದೆ. ಅದನ್ನು ಚೆನ್ನಾಗಿ ತೊಳೆದು ಸುಣ್ಣಹಚ್ಚಿ ಒಣಗಿಸಿದರೆ ಶುಂಠಿಯಾಗುತ್ತದೆ. ಸಾಂಬಾರ ಜಿನಸುಗಳಲ್ಲಿ ಮುಖ್ಯವಾದುದ್ದು ಆಗಿದೆ. ಶಾಸನ, ಕಾವ್ಯಕೃತಿಗಳಲ್ಲಿ ಅನೇಕ ಕಡೆ ಉಲ್ಲೇಖವಾಗಿದೆ.

ಕಬ್ಬು : ಕಬ್ಬು ನೀರಾವರಿ ಬೆಳೆಯಾಗಿದೆ. ಕಬ್ಬಿನಲ್ಲಿ ಅನೇಕ ಕುಲಗಳು ಉಂಟು. ಅವುಗಳಲ್ಲಿ ರಸದಾಳಿ ಅಥವಾ ದಾಸರ ಕಬ್ಬು ಎಂದು, ಮಲಸೀಮೆಯಲ್ಲಿ ಗೋಮಾರಿ ಕಬ್ಬು ಅಥವಾ ಹೊಟ್ಟೆಯ ಕಬ್ಬು ಎಂದು ತೆಲಗು ದೇಶದಲ್ಲಿ ಪೆದ್ದಚರಕು, ಗನ್ನೇರಚರಕು ಎಂದು ಎರಡು ವಿಧ. ಅವುಗಳಿಗೆ ಕನ್ನಡ ಭಾಷೆಯಲ್ಲಿ ಹಿರೇಕಬ್ಬು ಮತ್ತು ಕಣಿಗಿಲ ಕಬ್ಬು ಎಂದು ಕರೆಯುತ್ತಾರೆ. ಚಾಣೆಕಬ್ಬು, ಕರಿಕಬ್ಬು ಎಂದು ಬೇರೆ ವಿಧಗಳುಂಟು.

ಕಬ್ಬಿನ ಪೈರು ಮಾಡುವ ವಿಧಾನ ಕುರಿತು ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಈ ರೀತಿ ಹೇಳುತ್ತಾರೆ. "ಸವಿ ನೀರು ಇರುವ ತೋಟಗಳಲ್ಲಿ ಕಬ್ಬನ್ನು ಹಚ್ಚಬೇಕು. ಸವಿ ನೀರಿನಿಂದ ಬೆಳೆದ ಕಬ್ಬಿನ ಬೆಲ್ಲವು ಕೆಡುವುದಿಲ್ಲ, ಸೌಳು ನೀರಿನಿಂದಾದರು ಕಬ್ಬು ಬೆಳೆಯುವುದು. ಆದರೆ ಅದರ ಬೆಲ್ಲವು ಸೌಳಾಗುವುದು ಹಾಗೂ ರಾಡಿಯಾಗುವುದು. ಅದು ಕಾರಣ, ಸವಿ ನೀರು ಇದ್ದಲ್ಲಿ ಕಬ್ಬನ್ನು ಹಚ್ಚಬೇಕು. ಕಬ್ಬಿನ ಹೊಲದಲ್ಲಿ ಸ್ವಲ್ಪಾದರೂ ಕರಿಕೆ ಇರಬಾರದು. ಆ ಭೂಮಿಗೆ ಗೊಬ್ಬರದ ಬಲಾತ್ಕಾರ ವಿಶೇಷವಾಗಬೇಕು. ಮೊದಲು ಗೊಬ್ಬರಹಾಕಿ, ಎರಡು ಸಾಲು ನೇಗಿಲನ್ನು ಹೊಡೆದು ಪುನಃ ಗೊಬ್ಬರಹಾಕಿ, ದೊಡ್ಡ ಕುಂಟೆಯಿಂದ ಮೂರು ಸಾಲು ಚೆನ್ನಾಗಿ ಹರಗಿ ಮಣ್ಣು ಮೆತ್ತಗಾಗುವ ಹಾಗೆ ಮಾಡಿ. ಬೋದು ಎಳಿಸಿ, ಕಾವಲಿಯನ್ನು ತಿದ್ದಿಕೊಂಡು, ಆ ಬೋದಿಗೆ ಗೊಬ್ಬರಹಾಕಿ ಭೂಮಿಯನ್ನು ತಯಾರು ಮಾಡಬೇಕು.

ಬೀಜದ ಕಬ್ಬುಗಳನ್ನು ತಂದು ಗುದ್ದುಮೊಳ ಅಥವಾ ಗೇಣು ಗೇಣು ತುಂಡುಗಳನ್ನು ಮಾಡಬೇಕು. ಆ ತುಂಡುಗಳ ನಡುವೆ ಗಣಿಗೆಲ್ಲುಗಳನ್ನು ಉಳಿಸಿ ಕಡಿದಿರಬೇಕು. ಆ ಕಬ್ಬನ್ನು ಹಚ್ಚಬೇಕಾದರೆ ಮುಂದೆ ಮುಂದೆ ಬೋದುಗಳಿಗೆ ನೀರು ಬಿಡುತ್ತಾ ಆ ನೀರಿನಲ್ಲಿ ಈ ಕಬ್ಬಿನ ಬೀಜದ ಗಣಿಕೆಗಳನ್ನು ತುಳಿಯುತ್ತಾ ಹೋಗಬೇಕು. ಹೀಗೆ ಹೊಲವೆಲ್ಲ ಗಣಿಕೆಗಳ ಹೊಂದಿಗೆ ಗಣಿಕೆಗಳನ್ನು ತುಳಿಯುತ್ತಾ

ಕಬ್ಬಿನ ಬೀಜಗಳನ್ನು ಹಚ್ಚಿ ನೀರು ಕಟ್ಟುತ್ತಹೊಗಬೇಕು. ಹಾಗೂ ಕಬ್ಬು ಹಚ್ಚಿದ ಮೇಲೆ ಹಸಿಯಾರದಂತೆ ನೀರು ಕಟ್ಟಬೇಕು"[೪೨] ಮಾರ್ಗಶಿರ-ಪುಷ್ಯ, ಮಾರ್ಗ ಫಾಲ್ಗುಣದಲ್ಲಿ ಹಚ್ಚಿದರೆ ಉತ್ತಮ. ವೈಶಾಖ-ಜೇಷ್ಠದಲ್ಲಿ ಹಚ್ಚಿದರೆ ಇಳುವರಿ ಕಡಿಮೆಯಾಗುತ್ತದೆ. ಫಲವತ್ತಾದ ಭೂಮಿಯಲ್ಲಿ ಕಬ್ಬು ಚೆನ್ನಾಗಿ ಬರುತ್ತದೆ. ಬೆಲ್ಲ, ಸಕ್ಕರೆ, ಕಾಕಂಬಿ ಮುಂತಾದವುಗಳು ಕಬ್ಬಿನ ಉತ್ಪನ್ನಗಳು. ಬಳಕೆ, ಸಂಗ್ರಹಣೆಯಲ್ಲಿ ಮುಂಜಾಗ್ರತೆ ಅಗತ್ಯವಾಗಿ ಮಾಡಬೇಕು.

ಕನ್ನಡ ಕಾವ್ಯ ಕೃತಿಗಳಲ್ಲಿ ಕಬ್ಬಿನ ಉಲ್ಲೇಖ ಹೇರಳವಾಗಿ ಕಂಡು ಬರುತ್ತದೆ. ಅವುಗಳಲ್ಲಿ ಕೆಲವನ್ನು ಮಾತ್ರ ಉಲ್ಲೇಖಿಸಲಾಗಿದೆ. ದುರ್ಗಸಿಂಹನ ಪಂಚತಂತ್ರದಲ್ಲಿ "ಅಂತಾತಂ ಕರ್ವುವಿತ್ತಿಸುತ್ತಂ ಬೆಲಿಯಂ ಕಟ್ಟಿ ಪಾಲಿಸುತ್ತುವಿರೆ.........."[೪೩] ಕಬ್ಬನ್ನು ಬಿತ್ತಿದ ಮೇಲೆ ಅಗತ್ಯವಾದ ಬೇಲಿಯಕಟ್ಟಿ ಒಂದು ವರ್ಷ ಸುದೀರ್ಘಕಾಲ ಕಾಪಾಡುವ ಅಂಶ ತಿಳಿಬರುತ್ತದೆ.

೨. ಮಿಶ್ರಬೆಳೆ

ರೈತರು ವ್ಯವಸಾಯದಲ್ಲಿ ಭೂಮಿಯನ್ನು ಅನೇಕ ರೀತಿಯಿಂದ ಬಳಸಿಕೊಳ್ಳುತ್ತಾರೆ. ಸಾಗುವಳಿಯ ಭೂಮಿಯಲ್ಲಿ ಒಂದು ಕಾಲಮಿತಿಯಲ್ಲಿ ಅನೇಕ ಬೆಳೆಗಳನ್ನು ಏಕಕಾಲದಲ್ಲಿ ಬೆಳೆದುಕೊಳ್ಳುತ್ತಾರೆ. ಇಂತಹ ಬೆಳೆಗಳನ್ನು ಮಿಶ್ರಬೆಳೆಗಳೆಂದು ಕರೆಯಬಹುದು. ಕೃಷಿಕರು ಯಾವತ್ತೂ ಜಮೀನಿನಲ್ಲಿ ಒಂದೇ ಬೆಳೆಯನ್ನು ಬೆಳೆಯದೆ, ಹಲವು ಬೆಳೆಗಳನ್ನು ಒಟ್ಟಾಗಿ ಬೆಳೆದುಕೊಳ್ಳುತ್ತಾರೆ. ಖುಷ್ಕಿ ನೀರಾವರಿ ಭೂಮಿಯಲ್ಲಿಯೂ ಈ ತರಹದ ಬೆಳೆ ಬೆಳೆಯಲಾಗುತ್ತದೆ. ಆಹಾರಧಾನ್ಯಗಳನ್ನು ತೋಟದಬೆಳೆಗಳಲ್ಲಿ ಮತ್ತು ತರಕಾರಿ ಪಲ್ಯೆಗಳನ್ನು ಮಿಶ್ರಬೆಳೆ ಮಾಡಿಕೊಳ್ಳುವ ಕ್ರಮ ಕುರಿತು ಈ ಭಾಗದಲ್ಲಿ ತಿಳಿದು ಕೊಳ್ಳಬಹುದು. ತೋಟದ ಬೆಳೆಗಳಲ್ಲಿ ಆಹಾರಧಾನ್ಯಗಳಾದ ಭತ್ತ, ಜೋಳ, ರಾಗಿ, ಗೋಧಿ ಮುಂತಾದವುಗಳನ್ನು ಬೆಳೆಯುತ್ತಾರೆ. ಆದರೆ ತೋಟದ ಪ್ರಾರಂಭದಲ್ಲಿ ಅಂದರೆ ಮೊದಲೇ ಎರಡು, ಮೂರು ವರ್ಷಗಳಲ್ಲಿ ಬೆಳೆ ಬೆಳೆದುಕೊಳ್ಳಬಹುದು. ನೀರಿನ ತೇವಾಂಶ ಹೆಚ್ಚಾಗಿರುವುದರಿಂದ ಕರಿಕಿ ಜೇಕು ಹೆಚ್ಚಾಗಿ ಬೆಳೆದು ಹಾನಿಮಾಡುತ್ತದೆ. ಆದ್ದರಿಂದ ತೋಟವನ್ನು ಸ್ವಚ್ಛವಾಗಿ ಹಸನುಮಾಡಿಕೊಳ್ಳುತ್ತಾ ಇದ್ದಾಗ ಮಾತ್ರ ಇಂತಹ ಮಿಶ್ರಬೆಳೆ ಬೆಳೆಯಬಹುದು. ತೆಂಗು, ಹಣ್ಣಿನ ತೋಟಗಳಾದ ಬಾಳೆ, ಮಾವು, ಪೇರಲ ಮುಂತಾದವುಗಳನ್ನು ತೋಟಗಳಲ್ಲಿ ಮಧ್ಯಾಂತರ ಬೆಳೆಯಾಗಿ ಬೆಳೆಯಲಾಗುತ್ತದೆ. ಕೃಷಿಜ್ಞಾನ ಪ್ರದೀಪಿಕೆಯಲ್ಲಿ ತೋಟದ ನೆಲ್ಲು ಮಾಡಿಕೊಳ್ಳುವ ವಿಧಾನ ಕುರಿತು ಹೀಗೆ ಹೇಳಲಾಗಿದೆ. "ಸ್ವಲ್ಪಾದರೂ ಕರಿಕೆ, ಜೇಕು, ಈ ಎರಡು ಪದಾರ್ಥಗಳು ಇಲ್ಲದ ಹಾಗೆ ಭೂಮಿಯನ್ನು ನಿರ್ಮಲಮಾಡಿ ಚೆನ್ನಾಗಿ ಗೊಬ್ಬರ ಹಾಕಿ ಕೂರಿಗೆಯಿಂದ ನೆಲ್ಲು ಬಿತ್ತಿ ಸಮಯವರಿತು ಹುಲ್ಲು ಬಾಡುತ್ತ ಬಂದ ಹಾಗೆ ನಾಲ್ಕಾರು ವೇಳೆ ನೀರು ಬಿಟ್ಟು ಸದೆಯನ್ನು ತೆಗಿಸುತ್ತಾ ಹೊದರೆ, ಒಂದು ಕೂರಿಗೆ ಭೂಮಿಗೆ ಅರವತ್ತು ಎಪ್ಪತ್ತೊ ಹೇರು ನೆಲ್ಲು ಬೆಳೆಯುವದಕ್ಕೆ ಸಂಶಯವಿಲ್ಲ".[೪೪] ಬಹಳ ಶ್ರಮದಾಯಕವಾಗಿ ತೋಟಗಳಲ್ಲಿ ನೆಲ್ಲು ಬಿತ್ತಿ ಬೆಳೆದುಕೊಳ್ಳಬಹುದು ಎಂದು ತಿಳಿಸುತ್ತಾರೆ. ನೀರಿನ ತೇವಾಂಶ ಕಡಿಮೆಯಿರುವ ಭೂಮಿಯಲ್ಲಿ ಜೋಳ, ರಾಗಿ, ನವಣೆಯನ್ನು ಬಿತ್ತಿ ಬೆಳೆದುಕೊಳ್ಳುತ್ತಾರೆ. (ಕೃ.ಜ್ಞಾ.ಪ್ರ.-ಮು-೧೫೯)

ತೋಟಗಳಲ್ಲಿ ಅನೇಕ ಬಗೆಯ ಹಣ್ಣಿನ ಗಿಡಗಳನ್ನು ಮಿಶ್ರಬೆಳೆಯಾಗಿ ಬೆಳೆಯುತ್ತಾರೆ. ಶ್ರಮದಿಂದ ಕೃಷಿಯಲ್ಲಿ ಹೆಚ್ಚಿನ ಲಾಭ ಪಡೆಯಬೇಕಾದರೆ ಇಂತಹ ಮಿಶ್ರಬೆಳೆಯನ್ನು ಬೆಳೆದುಕೊಳ್ಳಬೇಕು. ತೋಟದಲ್ಲಿ ಮಿಶ್ರಬೆಳೆ ಮಾಡಿಕೊಳ್ಳುವ ಕ್ರಮಗಳನ್ನು ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಅನೇಕ ಕಡೆ ತಿಳಿಸಲಾಗಿದೆ.

ಅನೇಕ ಬಗೆಯ ಯುಕ್ತಿಗಳನ್ನು ಹೇಳಲಾಗಿದೆ. ಅದರ ಉಪಯೋಗವನ್ನು ಕೃಷಿಕರು ಪಡೆದುಕೊಳ್ಳಬಹುದು. ಮಾವಿನ ತೋಟದಲ್ಲಿ ಬೆಳೆಯುವ ಮಿಶ್ರಬೆಳೆಯ ಕುರಿತು ಶಾಸ್ತ್ರಕಾರ ಈ ರೀತಿ ಹೇಳುತ್ತಾನೆ. "ಮಾವಿನ ಗಿಡಗಳನ್ನು ಹಾಕುವಾಗ ಅವುಗಳ ಸಂಗಡ ಹುಣಸೆಯ ಮರಗಳನ್ನು, ಹಲಸಿನ ಮರಗಳನ್ನು, ಬೋರಿಯ ಮರಗಳನ್ನು, ನೀರಲ ಮರಗಳನ್ನು ಮತ್ತು ನೆಲ್ಲಿಯ ಮರಗಳನ್ನು ಹಾಗೂ ಬೆಳವಲ ಮರಗಳನ್ನು ಅಲ್ಲದೆ ನಾಲ್ಕಾರು ವರುಷದ ಮೇಲೆ ನೀರಿಲ್ಲದೆ ಮಾವಿನ ಮರಗಳಂತೆ ಫಲವಾಗುವಂಥ ಅತ್ಯುತ್ತಮ ಫಲವೃಕ್ಷಗಳನ್ನು ಹಾಕಬೇಕು".[೪೫] ಮಾವಿನ ಗಿಡಗಳಂತೆ ಅವುಗಳಿಗೂ ಆರೈಕೆಯ ಮಾಡಿದರೆ ಉತ್ತಮ ಫಸಲು ಪಡೆಯಬಹುದು ಎಂದು ಸಲಹೆ ನೀಡುತ್ತಾರೆ. ಅಲ್ಲದೆ ತೆಂಗು ಐದು ವರ್ಷಕ್ಕೆ, ಅಡಿಕೆ ಎಂಟುವರ್ಷಕ್ಕೆ ಫಲ ಬಿಡುತ್ತವೆ. ಆದ್ದರಿಂದ ತೆಂಗು, ಅಡಿಕೆಯ ಹಚ್ಚುವಾಗಲೇ ಕೆಲವು ಮಧ್ಯಾಂತರ ಬೆಳೆ ಬೆಳೆಯುವ ಕ್ರಮ ತಿಳಿಸುತ್ತಾರೆ. ಅದು ಹೇಗೆಂದರೆ "ಈ ಅಡಿಕೆಯ ವನದ ಸುತ್ತಲೂ ಒಳ ಮೈಯಲ್ಲಿ ನಾಲ್ಕು ಬೆರಳಿಗೊಂದು ಸಡೇದ ಗಿಡಗಳನ್ನು ಹಾಕಿ ಅವುಗಳ ಹಿಂದೆ ಗೇಣಿಗೊಂದು ಚೊಗಚೆಯ ಗಿಡಗಳನ್ನು ಹಾಕಿ ಅವುಗಳ ಹಿಂದೆ ಮೊಳಕ್ಕೆ ಒಂದರಂತೆ ನುಗ್ಗಿಯ ಗಿಡಗಳನ್ನು ಹಾಗೂ ಆ ನುಗ್ಗಿಯ ಗಿಡದ ಮದ್ಯದಲ್ಲಿ ಜಾಡಲಗಿಡವನ್ನು ಹಾಕಿದರೆ...........ಮದ್ಯದಲ್ಲಿ ಹಾಕಿದ ಪೇರಲಗಿಡಗಳು............".[೪೬] ಅಡಿಕೆ ತೆಂಗಿನ ಮಧ್ಯದಲ್ಲಿ ಪೇರಲಗಿಡ ಹಾಕಿ ಸುತ್ತಲೂ ನುಗ್ಗಿ ಜಾಡಲಗಿಡಗಳನ್ನು ಹಾಕಿ ತೋಟದಲ್ಲಿ ಬೆಳೆದು ಕೊಳ್ಳುವ ವಿಧಾನ ತಿಳಿಸುತ್ತಾರೆ. ಕೃಷಿಜ್ಞಾನ ಪ್ರಧೀಪಿಕೆಯಲ್ಲಿ ಪುಟ ಸಂಖ್ಯೆ-೧೬೬ರಲ್ಲಿ ನಿಂಬಿಯ ವನದಲ್ಲಿ ಸುತ್ತಲೂ ಮೊಳಕೊಂದು ಗೋಡಂಬಿಯ ಗಿಡಗಳನ್ನು ಅವುಗಳ ಮಧ್ಯದಲ್ಲಿ ಪಪ್ಪಾಯಿಗಿಡಗಳನ್ನು, ಹಲಸಿನ ಗಿಡಗಳನ್ನು ಹಚ್ಚಿ ಫಸಲು ಪಡೆಯಬಹುದು ಎಂದು ಹೇಳುತ್ತಾರೆ. ತೋಟದಲ್ಲಿ ಬೆಳೆಯುವ ಮಿಶ್ರಬೆಳೆಗಳನ್ನು ಕುರಿತಾದ ಮಾಹಿತಿ ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಅನೇಕ ಕಡೆಗಳಲ್ಲಿ ದೊರೆಯುತ್ತದೆ.

ತೋಟದ ಬೆಳೆಯಲ್ಲಿ ಮಿಶ್ರಬೆಳೆಯಾಗಿ ಕಾಯಿ ಪಲ್ಲೆಯನ್ನು, ಹೂವಿನ ಗಿಡಗಳನ್ನು ಹಚ್ಚಿ ಬೆಳೆಯಲಾಗುತ್ತದೆ. ಬಾಳೆಯ ತೋಟದ ಮಧ್ಯದಲ್ಲಿ ಭೂಮಿ ವ್ಯರ್ಥವಾಗದಂತೆ ಒಂದೆರಡು ಬೆಳೆ ಕಾಯಿಪಲ್ಲೆಗಳನ್ನು ಬೆಳೆಯಬಹುದು. ಕಬ್ಬಿನಲ್ಲಿಯೂ ಈ ಬಗೆಯ ಬೆಳೆಯನ್ನು ಬೆಳೆಯಲು ಬರುತ್ತದೆ. ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಈ ಬಗೆಯ ಬೆಳೆಯ ಬೆಳೆಯುವ ವಿಧಾನ ಕುರಿತು ಹೇಳಲಾಗಿದೆ. ಅದು ಹೇಗೆಂದರೆ "..................ಕಬ್ಬಿನೊಳಗೆ ಕೆಲವು ಪಲ್ಲೇದ ಜಿನಸುಗಳನ್ನು, ಬೆಂಡಿಯ ಗಿಡವನ್ನು ಹಾಕಬೇಕು. ಬಾಳೆಯಲ್ಲಿ ಮೆಂತೆ, ಹರೀವಿ ಪಲ್ಲೆ, ಚಕೋತ್ತಿನ ಪಲ್ಲೆ ಹಾಗೂ ರಾಜಗಿರಿಯ ಪಲ್ಲೆ ಹುಳಚಿಕ್ಕನ ಪಲ್ಲೆ ಈ ಪ್ರಕಾರ ಪಲ್ಲೆಯ ಜಿನಸುಗಳನ್ನು ಮತ್ತು ಕೆಲವು ಮಡಿಗಳಲ್ಲಿ ಕೋತಂಬರಿಯ ಬೀಜವನ್ನು ಹಾಕಬೇಕು ಮತ್ತು ಕಬ್ಬಿನೊಳಗೆ ಪುಂಡಿಪಲ್ಲೆ, ಬೆಂಡಿಯ ಗಿಡಗಳನ್ನು ಹಾಕಬೇಕು. ಇವುಗಳು ೧ ತಿಂಗಳು, ೧/೨ ತಿಂಗಳೊಳಗೆ ಕೈಗೆ ಬರುವವು. ಈ ಬಾಳೆಯ ಮಧ್ಯದಲ್ಲಿರು ಪಲ್ಲೆಗಳನ್ನು ತೆಗೆದುಕೊಂಡು ಆ ಭೂಮಿಯನ್ನು ಹಸನ ಮಾಡಿ ಪುನಃ ಗೊಬ್ಬರಹಾಕಿ ಉಳ್ಳಿ, ಬಳ್ಳುಳ್ಳಿಯನ್ನು ಹಾಕಬೇಕು".[೪೭] ಎನ್ನಲಾಗಿದೆ.

೩. ದ್ವಿದಳ ಬೆಳೆ

ಈ ತರಹದ ಬೆಳೆಯನ್ನು ದ್ವಿದಳವೆಂದು, ವಿದಳವೆಂದೂ ಕರೆಯಲಾಗುತ್ತದೆ. ವಿದಲ(ಳ)ಎಂದರೆ ಒಡೆಯುವಿಕೆ ಸೀಳುವಿಕೆ ಎಂಬ ಅರ್ಥ ಸಂಕ್ಷಿಪ್ತ ಕನ್ನಡ ನಿಘಂಟುವಿನಲ್ಲಿದೆ. ದ್ವಿದಳ ಧಾನ್ಯಗಳ

ಕಾಳುಗಳೆಲ್ಲ ಕೋಡುಗಳೊಳಗೆ ಆಗುತ್ತವೆ. ಬೀಜಬಿತ್ತಿದಾಗ ಮೊದಲೂ ಬೇರು ಬಂದು ಅನಂತರ ಧಾನ್ಯವೇ ಮೇಲೆದ್ದು ಬಂದು ಧಾನ್ಯದ ಹೊರಸಿಪ್ಪೆ ಒಡೆದು ಬೀಜ ಇಬ್ಭಾಗವಾಗಿ ಅರಳಿ, ಚಿಗುರು ಮೂಳಕೆ ಮೂಡಿ ಬರುತ್ತವೆ. ಆಹಾರದ ಬೆಳೆಗಳಾಗಿರುವ ಕಡಲೆ, ನೆಲಗಡಲೆ, ಅವರೆ, ಅಲಸಂದೆ, ಹೆಸರು, ಉದ್ದು, ಹುರುಳಿ, ಎಳ್ಳು, ಸಾಸಿವೆ, ಕೊತ್ತಂಬರಿ, ಮುಂತಾದವುಗಳು ದ್ವಿದಳ ಧಾನ್ಯಗಳು. ನೀರಾವರಿಯ ಗದ್ದೆಗಳಲ್ಲಿ ಭತ್ತದ ಕಟಾವು ನಂತರ ಬೆಳೆಯುತ್ತಾರೆ. ಕೆಲವು ಕಡೆ ಗದ್ದೆಯ ಫಲವತ್ತತೆಯನ್ನು ಹೆಚ್ಚಿಸಲು ಬೆಳೆಯುತ್ತಾರೆ. "ಪಶ್ಚಿಮ ಕರಾವಳಿಯ ಗದ್ದೆಗಳಲ್ಲಿ ಭತ್ತದ ಬೆಳೆ ಕಟಾವು ಆದ ನಂತರ ಉತ್ತು ಹೆಂಟೆ ಹೊಡೆದು, ಬೂದಿ ಹರಡಿ, ಹಸನಾಗಿಸಿ, ಉದ್ದು, ಹೆಸರು, ಹುರಳಿ, ಎಳ್ಳುಗಳನ್ನು ಬಿತ್ತಿ ಬೆಳೆಸುತ್ತಾರೆ. ಕರಾವಳಿಯಲ್ಲಿ ಇದು ಹೆಚ್ಚಿನ ಲಾಭದಾಯಕ ಬೆಳೆಯಾಗಿರದೆ, ಗದ್ದೆಗಳ ಫಲವತ್ತತೆಯನ್ನು ಹೆಚ್ಚಿಸಲು ಮಾತ್ರ ಸಹಕಾರಿಯಾಗಿದೆ".[೪೮] ಎಂದು 'ಕೃಷಿಲೋಕ ಪ್ರವೇಶ' ಕೃತಿಯಲ್ಲಿ ಹೇಳಲಾಗಿದೆ. ತೋಟಗಳಲ್ಲಿ ಸಾಮಾನ್ಯವಾಗಿ ದ್ವಿದಳ ಧಾನ್ಯ ಅಲಸಂದೆಯನ್ನು ಬಾಳೆಯ ತೋಟದಲ್ಲಿ ಬೆಳೆಯಲಾಗುತ್ತದೆ. ಆರು ಅಡಿಗಳ ಅಂತರದಲ್ಲಿ ಬಾಳೆಯನ್ನು ಹಾಕಿದಾಗ, ಬಾಳೆಯ ಮಧ್ಯೆ ಮೂರು ತಾಳಿನ ಕೂರಿಗೆಯಿಂದ ಅಲಸಂದೆ ಬಿತ್ತುತ್ತಾರೆ. ಬೆಳೆದ ಬೆಳೆಗೂ ತಂಪು ಮತ್ತು ಫಲವತ್ತತೆಯನ್ನು ನೀಡುತ್ತದೆ. ಈ ರೀತಿಯಲ್ಲಿ ತೋಟಗಳಲ್ಲಿ ಕೆಲವು ದ್ವಿದಳ ಧಾನ್ಯಗಳನ್ನು ಬೆಳೆದು ಕೊಳ್ಳಬಹುದು.

II. ಒಣಬೇಸಾಯದ ಬೆಳೆಗಳು

ಖುಷ್ಕಿ ಭೂಮಿಯಲ್ಲಿ, ಮಳೆಯ ನೀರಿನ ಆಶ್ರೇಯದಲ್ಲಿ ಬೆಳೆಯುವ ಬೆಳೆಗಳನ್ನು ಒಣ ಬೇಸಾಯದ ಬೆಳಗಳು ಎಂದು ಕರೆಯಲಾಗುತ್ತದೆ. ಒಣಭೂಮಿಯನ್ನು ಬೆದ್ದಲುಭೂಮಿ ಎಂದು ಕರೆಯುತ್ತಾರೆ. 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಕೃತಿಯಲ್ಲಿ ಬೆದ್ದಲು ಬೆಳೆಗಳನ್ನು ಈ ರೀತಿ ಪಟ್ಟಿಮಾಡಿ ಹೇಳಲಾಗಿದೆ. ಅದು ಹೇಗೆಂದರೆ "ಬೆದ್ದಲು ಭೂಮಿಗಳಲ್ಲಿ ಜೋಳ, ಬೆಳೆಗಳನ್ನು, ಹತ್ತಿ, ಹರಳು, ಸಾಸಿವೆ, ಕೋತಂಬರಿ, ಸಜ್ಜೆ, ಗೋಧಿ, ಮುಂತಾದವನ್ನು ಬೆಳೆಯುತ್ತಿದ್ದರು............".[೪೯] ಎನ್ನಲಾಗಿದೆ. ಕರ್ನಾಟಕ ಮೈಸೂರು ಪ್ರಾಂತ್ಯಕ್ಕೆ ಭೇಟಿನೀಡಿದ ವಿದೇಶಿ ಪ್ರವಾಸಿಗ 'ಬುಕಾನ್' ಆ ಪ್ರಾಂತ್ಯದಲ್ಲಿ ಬೆಳೆಯುವ ಬೆಳೆಗಳ ಉಲ್ಲೇಖ ಮಾಡುತ್ತಾನೆ. ಕೋಲಾರ ಮಧುಗಿರಿ ಪರಿಸರದಲ್ಲಿ ಗೋಧಿ ಬೆಳೆ ಬೆಳೆಯಲು ಟೀಪ್ಪು ಸುಲ್ತಾನ ಪ್ರೋತ್ಸಾಹ ನೀಡಿದ್ದನೆಂದು ಹೇಳಲಾಗಿದೆ. ಹತ್ತಿಯ ಬೆಳೆ ಶಿರಾ, ಮಧುಗಿರಿ ಪ್ರದೇಶದಲ್ಲಿ ಹೆಚ್ಚೆಂದು ತಿಳಿಸುತ್ತಾನೆ. ಅಲ್ಲದೆ ತನ್ನ ಪ್ರವಾಸದ ಕಾಲದಲ್ಲಿ ಅನೇಕ ಬೆಳೆಗಳ ವಿಚಾರ ಸಂಗ್ರಹಿಸಿದ್ದಾನೆ. ಅವುಗಳು "ಕಡಲೆ, ಹುರುಳಿ, ಉದ್ದು, ಹೆಸರು, ಬರುಗು, ಕಬ್ಬು, ಮೆಂತ್ಯೆ ಎಳ್ಳು, ಹುಚ್ಚೆಳ್ಳು, (ಗುರೆಳ್ಳು)ಅಲಸಂದಿ ತರಗುಣಿ ಹರಳು, ವೀಳ್ಳೆದೆಲೆ, ಅಡಿಕೆ, ತೆಂಗು, ಇವುಗಳ ಬೆಳೆಯ ವಿಚಾರ ಕೂಡ ತನ್ನ ಪ್ರವಾಸದ ಕಾಲದಲ್ಲಿ ವಿವರಗಳನ್ನು ಆತ ಸಂಗ್ರಹಿಸಿದ್ದಾನೆ".[೫೦]

ಆಹಾರದ ಬೆಳೆಗಳು, ದ್ವಿದಳ ಬೆಳೆಗಳು, ವಾಣಿಜ್ಯ ಬೆಳೆಗಳು ಮತ್ತು ಎಣ್ಣೆಕಾಳು ಬೆಳೆಗಳು ಹಾಗೂ ಸಾಂಬಾರ ಜಿನಸುಗಳನ್ನು ಒಣಭೂಮಿಯ ಬೇಸಾಯದಲ್ಲಿ ಬೆಳೆಯಲಾಗುತ್ತದೆ. ಕನ್ನಡ ಶಾಸ್ತ್ರಕೃತಿಗಳು, ಸಾಹಿತ್ಯಕೃತಿಗಳು, ಶಾಸನ ಸಾಹಿತ್ಯದಲ್ಲಿ ಕಂಡು ಬರುವ ಖುಷ್ಕಿ ಬೆಳೆಗಳ ಉಲ್ಲೇಖವನ್ನು ಈ ಭಾಗದಲ್ಲಿ ಕಾಣಬಹುದು. ಒಣ ಬೇಸಾಯದ ಬೆಳೆಗಳಲ್ಲಿ ಎರಡು ಭಾಗಮಾಡಿ ಕೊಂಡು, ಅಂದರೆ ೧. ಮಿಶ್ರಬೆಳೆ ೨. ದ್ವಿದಳಬೆಳೆ ಎಂದು ಚರ್ಚಿಸಲಾಗಿದೆ.

ಮಿಶ್ರಬೆಳೆ :

ಖುಷ್ಕಿ ಭೂಮಿಯಲ್ಲಿಯೂ ಒಂದೇ ಕಾಲಮಿತಿಯಲ್ಲಿ ಅನೇಕ ತರತರಹದ ಬೆಳೆಗಳನ್ನು ರೈತರು ಬೆಳೆದು ಕೊಳ್ಳುತ್ತಾರೆ. ಇದನ್ನು 'ಮಿಶ್ರಬೆಳೆ' ಪದ್ಧತಿ ಎಂದು ಕರೆಯಬಹುದು. ಒಂದೇ ಭೂ ಹಿಡುವಳಿಯಲ್ಲಿ ಹಲವಾರು ವಿಧದ ಕೃಷಿ ಉತ್ಪಾದನೆಗಳನ್ನು ಏಕಕಾಲದಲ್ಲಿ ಕೈಗೊಳ್ಳುವುದು. ಕನ್ನಡ ವಿಶ್ವಕೋಶದಲ್ಲಿ ಮಿಶ್ರಬೆಳೆಗಳನ್ನು ಕುರಿತು ಹೀಗೆ ಹೇಳಲಾಗಿದೆ. "ಒಂದೇ ಜಮೀನಿನಲ್ಲಿ ಗೋಧಿ, ಬಾರ್ಲಿ, ಅಲೂಗಡ್ಡೆ, ಓಟ್ಸ್ ಮೊದಲಾದ ಬೆಳೆಗಳನ್ನು ಏಕಕಾಲದಲ್ಲಿ ಬಿತ್ತುವ ವಿಧಾನ ರಾಗಿ, ಹುರುಳಿ, ಫಸಲು; ಅಚ್ಚೆಳ್ಳು, ಹುರುಳಿ, ಸೊಪ್ಪು, ಫಸಲು; ಅಲಸಂದೆ, ಹೆಸರು, ಅವರೆ, ಫಸಲು; ಅಡಿಕೆ, ತೆಂಗು, ವೀಳ್ಯೆ, ಬಾಳೆ, ಕಾಳು, ಮೆಣಸು ಫಸಲು ಇವೇ ಮುಂತಾದವು ಕರ್ನಾಟಕದ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಮಿಶ್ರ ವ್ಯವಸಾಯದ ಉದಾಹರಣೆಗಳು".[೫೧] ಎನ್ನಲಾಗಿದೆ. ರೈತರು ಪ್ರಾಚೀನ ಕಾಲದಿಂದಲೂ ಈ ಪದ್ಧತಿಯನ್ನು ಅನುಸರಿಸಿರುವುದು ಕಂಡು ಬರುತ್ತದೆ. ಕೆಲವು ಬೆಳೆಗಳ ಜೊತೆಗೆ ಹೊಂದಾಣಿಕೆಯಾಗುವ ಕೆಲವು ಬೆಳಗಳನ್ನು ಬೆಳೆಯುತ್ತಾರೆ. ಉದಾಹರಣೆಗೆ ಜೋಳ, ರಾಗಿ, ನವಣೆ, ಸಾವೆ ಮುಂತಾದ ಆಹಾರ ಧಾನ್ಯಗಳ ಜೋತೆಯಲ್ಲಿ ಅಕ್ಕಡಿಕಾಳುಗಳನ್ನು ಅಂದರೆ ಹರಳು, ತೊಗರಿ, ಅವರೆಯನ್ನು ಆರು, ಎಂಟು, ಹನ್ನೆರಡು ಸಾಲುಗಳಿಗೊಂದರಂತೆ ಹಾಕಿ ಬೆಳೆಯುತ್ತಾರೆ. ಶೇಂಗಾದಲ್ಲಿ ಹತ್ತಿಯ ಅಕ್ಕಡಿಯಾಗಿ, ಮೆಣಸಿನ ಗಿಡದಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಸಾಸಿವೆ, ಜೀರಿಗೆ, ಮುಂತಾದ ಬೆಳೆಗಳನ್ನು ಬೆಳೆದುಕೊಳ್ಳುತ್ತಾರೆ. ಕೆಲವು ಧಾನ್ಯಗಳ ಜೊತೆಯಲ್ಲಿ ಬೆರಸಿ ಕೆಲವು ಬೆಳೆಗಳನ್ನು ಬೆಳೆಯುತ್ತಾರೆ. ಜೋಳ, ರಾಗಿಯಲ್ಲಿ ಸಾಸಿವೆ, ಹೆಸರು, ಅಲಸಂದೆ, ಉದ್ದು, ಸೂರ್ಯಪಾನ ಬೆಳೆಯಲಾಗುತ್ತದೆ. ಅಲ್ಲದೆ ಹೊಲದ ಬದುವಿನ ಹತ್ತಿರ ಕೊನೆಯ ಮೇರೆಗಳಲ್ಲಿ ಗುರೆಳ್ಳು, ಕುಸುಬಿ, ಎಳ್ಳು, ಬಿತ್ತಿ ಬೆಳೆದು ಕೊಳ್ಳುತ್ತಾರೆ. ಒಂದು ಹೊಲದಲ್ಲಿ ಒಂದೇ ಬೆಳೆ ಬೆಳೆದಾಗ ಕೀಟಗಳ ವಂಶ ವೃದ್ಧಿಯಾಗುತ್ತದೆ. ಬೆಳೆದ ಫಸಲು ಕೀಟಗಳಿಗೆ ಆಹಾರವಾಗಿ ರೈತರು ಹಾನಿಗೆ ಒಳಗಾಗುತ್ತಾರೆ. ಒಂದೇ ಬೆಳೆ ಮಾಡುವುದರಿಂದ ಬೆಳೆಗಳು ಅದೇ ಸತ್ವವನ್ನು ಹೀರಿ ಭೂಮಿ ಬಡವಾಗುತ್ತದೆ. ಆದ್ದರಿಂದ ಪರ್ಯಾಯ ಬೆಳೆಗಳನ್ನು ಮಾಡುವುದಾಗಲಿ, ಮಿಶ್ರಬೆಳೆ ಮಾಡುವುದಾಗಲಿ ಅನಿವಾರ್ಯವೆನಿಸಿದೆ. ಇಂತಹ ಬೆಳೆಗಳಲ್ಲಿ ಏಕದಳ ಮತ್ತು ದ್ವಿದಳ ಧಾನ್ಯಗಳ ಬೆಳೆಗಳಿವೆ. ಮಿಶ್ರ ಬೆಳೆಗಳ ಉಲ್ಲೇಖದ ಅಂಶಗಳನ್ನು ಮುಂದಿನ ಭಾಗದಲ್ಲಿ ಕಾಣಬಹುದಾಗಿದೆ.

ರಟ್ಟಮತದ ನಾಲ್ಕನೇ ಅಧ್ಯಾಯದಲ್ಲಿ ವಾಯುಚಕ್ರದ ಸಹಾಯದಿಂದ ಯಾವ ದಿಕ್ಕಿನಿಂದ ಗಾಳಿ ಬೀಸಿದರೆ ಮಳೆ ಬರುತ್ತದೆ. ಹಾಗೂ ಗೋವುಗಳ ಲಕ್ಷಣದಿಂದ ಮಳೆಯ ಸ್ವರೂಪ ಹೇಳಿ, ಬೆಳೆಗಳು ಬೆಳೆಯುವುದನ್ನು ಕುರಿತು ಹೇಳುವಾಗ ಖುಷ್ಕಿ ಬೆಳೆಗಳ ಉಲ್ಲೇಖ ಪದ್ಯ ೧೧, ೧೨ರಲ್ಲಿ ಹೇಳುತ್ತಾನೆ. ಅವುಗಳು "............ ಕಟಿವೆ(ಭತ್ತ), ಸಜ್ಜಿ, ಹೆಸರು, ಗೋದುವೆ, ಎಳ್ಳು, ಉದ್ದು, ತೊಗರಿ, (ಕವು(೨) ವ್ರೀಹಿ(ಭತ್ತ), ಜೋಳ, ಸಕಲಧಾನ್ಯಗಳು ಸಣಂಬು, ಪಟ್ಟೆ, ಗುಲುಗುಂಜಿ, ಅಗಸೆ(ನೀಲಿಗಿಡ) ಹೊಂಬರಜು(ಅಲಸಂದೆ), ಗಂಧಶಾಲಿ, (ಪುನುಗು ರಾಜ ಭತ್ತ), ಜೋಳ, ನವಣೆ, ಸಾಸಿವೆ ಮೊದಲಾದ ಧಾನ್ಯಗಳು".[೫೨] ಎನ್ನಲಾಗಿದೆ.

ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಶಾಸ್ತ್ರಕಾರನು ಅನೇಕ ಕಡೆ ಮಿಶ್ರಬೆಳೆಗಳನ್ನು ಬೆಳದುಕೊಳ್ಳುವ ಯುಕ್ತಿಯನ್ನು ತಿಳಿಯಪಡಿಸಿದ್ದಾನೆ. ಒಣಬೇಸಾಯದ ಖುಷ್ಕಿ ಭೂಮಿಯಲ್ಲಿ ಧಾನ್ಯಗಳು ಬಿತ್ತನೆಯ ಮಾಡುವಾಗ ಯಾವ ಯಾವ ಧಾನ್ಯದ ಜೊತೆಗೆ ಬೆರಸಿ, ಬಿತ್ತಿ ಬೆಳೆದುಕೊಳ್ಳಬಹುದು ಎಂಬುವುದನ್ನು

ಈ ಕೆಳಗಿನಂತೆ ಸಂಗ್ರಹಿಸಿ ತಿಳಿಸಲಾಗುವುದು. ಎರಿಯ ಹೊಲದಲ್ಲಿ ಮುಂಗಾರಿನ ಬೆಳೆಯಾದ ಬೆಳ್ಳೊಳ್ಳಿಯ ಬಿತ್ತುವಾಗ ಅದರ ಜೊತೆಯಲ್ಲಿ ಬೇರೆ ಬೆಳೆ ಬೆಳೆಯುವುದು ಹೇಗೆಂದರೆ, "ಬೆಳ್ಳೊಳ್ಳಿಯೊಳಗ ಗಜಕ್ಕೊಂದರಂತೆ ಹಗ್ಗಕ್ಕೆ ಗುಬ್ಬಿಯ ಹಾಕಿ ಅವರಸ, ಚವರಸ ಸಾಲಾಗುವ ಹಾಗೆ ಮೆಣಸಿನಗಿಡಗಳನ್ನಾಗಲಿ, ಬದನೆಯ ಗಿಡಗಳನ್ನಾಗಲಿ ಹಚ್ಚಬೇಕು. ಮುಂದೆ ಬೆಳ್ಳೊಳ್ಳಿ ಅಗೆದು ತೆಗೆದುಕೊಂಡು ಮೇಲೆ ಆ ಗಿಡಗಳ ಮಧ್ಯದಲ್ಲಿ ಹರಗುತ್ತ ಹೋದ ಹಾಗೆ ಮೆಣಸಿನಕಾಯಿಗಳಾದರೂ, ಬದನೆಯ ಕಾಯಿಗಳಾದರೂ ನೀರು ಕಟ್ಟಿದ ಗಿಡಗಳಹಾಗೆ ಆಗುತ್ತವೆ.".[೫೩] ಬೆಳ್ಳೊಳ್ಳಿಯ ಜೊತೆಗೆ ಮೆಣಸಿನಕಾಯಿ, ಬದನೆಕಾಯಿ ಬೆಳೆದುಕೊಳ್ಳಬಹುದು ಎಂದು ತಿಳಿಸಲಾಗಿದೆ. ಅಲ್ಲದೇ ಗೊಬ್ಬರ ಹಾಕಿ ಭೂಮಿ ಸಿದ್ದಮಾಡಿಕೊಂಡು ಹಸ್ತ, ಚಿತ್ತ, ಸ್ವಾತಿ ಮಳೆಯಲ್ಲಿ ಬೆಳ್ಳೊಳ್ಳಿಯೊಳಗೆ ಸವದತ್ತಿಯ ಕೂರಿಗೆಯಲ್ಲಿ ಮೆಂತ್ಯೆ ಬಿತ್ತಬಹುದು ಮತ್ತು ಮೆಂತ್ಯೆಯ ಒಳಗೆ ನಾಲ್ಕು ಸೇರಿಗೆ ಒಂದು ಸೇರು ಸಾಸಿವೆ ಕಲಿಸಿ ಬಿತ್ತಿ ಬೆಳೆಯ ಮಾಡಿಕೊಳ್ಳಬಹುದು ಎಂದು ತಿಳಿಸುತ್ತಾರೆ. ಈ ರೀತಿಯ ಮಿಶ್ರಬೆಳೆಯನ್ನು ಎರಿಯ ಸೀಮೆಯ ರೈತರು ತುಂಬಾ ಜಾಗ್ರತರಾಗಿ ಮಾಡಿಕೊಳ್ಳುತ್ತಾರೆ. ಹಿಂಗಾರು ಬೆಳೆಯಾದ ಹತ್ತಿಯ ಜೊತೆಗೆ ನವಣೆ, ಎಳ್ಳು, ಬಿತ್ತಿ ಬೆಳೆಯ ಮಾಡಿಕೊಳ್ಳಬಹುದೆಂದು ತಿಳಿಸಲಾಗಿದೆ. "............. ಹತ್ತಿಯ ಹೊಲಗಳಲ್ಲಿ ಎಳ್ಳು ಬಿತ್ತಿ ಬೆಳೆಯನ್ನು ಮಾಡಿಕೊಂಡರೂ ಬರುತ್ತದೆ. ನವಣಿಯ ಬಿತ್ತಿದ ರೀತಿಯ ಹಾಗೇ ಎಳ್ಳು ಬಿತ್ತಿ ಹತ್ತಿಯ ಅಕ್ಕಡಿಯನ್ನು ಹಾಕಬೇಕು. ಎಳ್ಳು ಬಿತ್ತಬೇಕಾದರೆ ಒಂದು ಸೇರು ಎಳ್ಳಿನಲ್ಲಿ ಎಂಟು ಸೇರು ಸಣ್ಣ ಉಸುಕು ಕಲಿಸಿ ಅಡುವು ಆಗದ ಹಾಗೆ, ಅಂಗಲು ಆಗದ ಹಾಗೆ ಜಾಣತನದಿಂದ ಬಿತ್ತಬೇಕು".[೫೪] ಎನ್ನಲಾಗಿದೆ. ನಾಲ್ಕು ತಾಳಿನ ಕೂರಿಗೆಯಲ್ಲಿ ಎರಡು ತೂತುಗಳಿಗೆ ಬೆಣೆಯನ್ನಿಟ್ಟು ಮುಚ್ಚಿ ಇಬ್ಬರು ಹತ್ತಿಕಾಳು ಅಕ್ಕಡಿಯ ಹಾಕಬೇಕು. ಒಬ್ಬರು ಕೂರಿಗೆಯಿಂದ ನವಣಿಯ ಬಿತ್ತಬೇಕು. ಹೀಗೆ ಬಿತ್ತಿದಾಗ ಒಂದು ಸಾಲು ನವಣೆ, ಒಂದು ಸಾಲು ಹತ್ತಿಯಾಗಿ ಚೆನ್ನಾಗಿ ಬೆಳೆಬರುತ್ತದೆ. ಇದೇ ರೀತಿ ಎಳ್ಳಾನಾದರೂ ಹತ್ತಿಯ ಜೊತೆ ಬಿತ್ತಿ ಬೆಳೆಯಬಹುದು. ಸಾಮಾನ್ಯವಾಗಿ ಬಳ್ಳಾರಿಯ ಪ್ರಾಂತ್ಯದಲ್ಲಿ ಈ ಪ್ರಕಾರದ ಬೆಳೆ ಬೆಳೆಯುವ ಸಂಪ್ರದಾಯ ಕಂಡುಬರುತ್ತದೆ.

ಹಿಂಗಾರಿ ಧಾನ್ಯ ಬಿಳಿಜೋಳದಲ್ಲಿ ಮಿಶ್ರಬೆಳೆಯ ಮಾಡಿಕೊಳ್ಳುವುದರ ಬಗ್ಗೆ ತಿಳಿಸಲಾಗಿದೆ. ಅದು ಹೇಗೆಂದರೆ, "ಬಿಳಿಜೋಳದಲ್ಲಿಯಾದರೂ ಕುಸುಬಿಯ ಅಕ್ಕಡಿಯನ್ನು ಹಾಕಬೇಕು. ಹಾಗೂ ವಟಾಣಿ ಧಾನ್ಯವೆಂದರೆ ಚಣಿಗಿ, ಲೆಂಕಿ, ಬಟ್ಟಗಡಲಿ, ಕರಿಹೆಸರು ಮೊದಲಾದವುಗಳನ್ನು ಕೂಡಿಸಿ ಬಿತ್ತಬೇಕು........... ಬಿಳಿಜೋಳದ ಬೆಳೆಯು ಮತ್ತು ಧಾನ್ಯವು ಮುಂಗಾರಿಯಕ್ಕಿಂತಲೂ ವಿಶೇಷವಾದದ್ದು".[೫೫] ಬಿಳಿಜೋಳದ ಒಟ್ಟಿಗೆ ಕಡಲೆ, ಹೆಸರು ಧಾನ್ಯಗಳನ್ನು ಮಿಶ್ರಬೆಳೆಯಾಗಿ ಬೆಳೆದುಕೊಳ್ಳಬಹುದು. ಗೋಧಿಯ ಬಿತ್ತನೆ ಮಾಡುವಾಗ ಅದರ ಸಂಗಡ ಕುಸುಬಿಯ ಬೆಳೆಯ ಮಾಡಿಕೊಳ್ಳುವುದನ್ನು ಹೇಳಲಾಗಿದೆ. ಅದು ಹೇಗೆಂದರೆ "ಗೋಧಿಯನ್ನು ಬಿತ್ತುವಾಗ ಅದರ ಸಂಗಡ ಕುಸುಬಿ ಅಕ್ಕಡಿಯನ್ನು ಹಾಕಬೇಕು. ಮತ್ತು ಗೋಧಿಯ ಸುತ್ತಲೂ ನಾಲ್ಕು ಕಡೆಗೂ ಬದು ಹಿಡಿದು ಹೊರಮೈಯಲ್ಲಿ ಕುಸುಬಿಯನ್ನು ಮೂರು ಸಾಲು ಬಿತ್ತಬೇಕು. ಕುಸುಬೆಯು ತೈಲಧಾನ್ಯಗಳಲ್ಲಿ ವಿಶೇಷವು. ಕುಸಿಬಿಯಲ್ಲಿ ಮುಳ್ಳು ಕುಸುಬಿ, ಬೋಳು ಕುಸುಬಿ ಎಂದು ಎರಡು ವಿಧಗಳುಂಟು".[೫೬] ಎಂದು ತಿಳಿಸುತ್ತಾರೆ. ಈ ರೀತಿ ಬಿತ್ತುವುದರಿಂದ ಗೋಧಿಯ ಬೆಳೆಯನ್ನು ದನಕರಗಳು ತಿಂದು ಹಾಳು ಮಾಡುವುದನ್ನು ತಡೆಯಬಹುದು. ಕುಸುಬಿ ಮುಳ್ಳುಗಳಿಂದ ಕೂಡಿರುವುದರಿಂದ ತಕ್ಷಣ ಬಾಯಿಹಾಕಲಾಗುವುದಿಲ್ಲ. ಬಿತ್ತುವ ಕೆಲವು ಧಾನ್ಯಗಳ

ಜೊತೆಯಲ್ಲಿ ತಂಪು ಎರಿ, ಮಡಿಕಟ್ಟು ಭೂಮಿಯಲ್ಲಿ ಸೊಪ್ಪು, ಹವೀಜ, ಮೆಂತ್ಯೆ, ಸಾಸಿವೆ, ಸಬ್ಬಸಗಿ, ಗಜ್ಜರಿ, ಜೀರಿಗೆ, ಶಾಜೀರಿಗೆ, ಹಿರಿಯ ಬೀಜ, ಸವತೆಯ ಬೀಜ, ಮಂಡೆಯ ಬೀಜ ಮುಂತಾದವುಗಳನ್ನು ಧಾನ್ಯದಲ್ಲಿ ಸ್ವಲ್ಪ ಸ್ವಲ್ಪ ಕೂಡಿಸಿ ಬಿತ್ತನೆ ಮಾಡಿ ಬೆಳೆದುಕೊಳ್ಳಬಹುದು ಎಂಬುದು ಶಾಸ್ತ್ರಕಾರನ ಅಭಿಮತ. ಈ ರೀತಿಯ ಮಿಶ್ರಬೆಳೆಗಳನ್ನು ರೈತರು ಮಾಡಿಕೊಂಡು ಲಾಭಮಾಡಿಕೊಳ್ಳುತ್ತಾರೆ. ಆದ್ದರಿಂದಲೇ ಇರಬೇಕು 'ಎರಿಯ ಹೊಲ' ಹೊಂದಿದವನು ದೊರೆಯಂತೆ ಮೆರೆಯುತ್ತಾನೆ ಎಂಬ ನಂಬಿಕೆಯ ಮಾತು ಪ್ರಚಾರದಲ್ಲಿದೆ.

ಕನ್ನಡಕಾವ್ಯ ಕೃತಿಗಳಲ್ಲಿ ಕೆಲವು ಕಡೆ ಕೃಷಿಯಲ್ಲಿ ಬೆಳೆಯುವ ಬೆಳೆಗಳ ಮಾಹಿತಿ ದೊರೆಯುತ್ತದೆ. ಪಂಪನ ಆದಿಪುರಾಣದಲ್ಲಿ ಭತ್ತ, ಗೋಧಿ, ನವಣೆ, ಸಾವೆ, ಬರಗು ಮತ್ತು ತೃಣಧಾನ್ಯ ಎಳ್ಳು ತಲಮ ಸೂರಿಗೆ, ಹುರುಳಿ, ಉದ್ದು, ತಡುಗಣಿ, ತೊಗರಿ, ಅವರೆ, ಕಡಲೆ, ಕುಸುಬಿ, ಹತ್ತಿ, ಸಾಸುವೆ, ಜೀರಿಗೆ, ಕೊತ್ತುಂಬರಿ ಮೊದಲಾದ ಬೆಳೆಗಳ ಉಲ್ಲೇಖ ಕಂಡುಬರುತ್ತದೆ. ವಚನಕಾರರಲ್ಲಿ ಅನೇಕ ಒಣ ಬೇಸಾಯದ ಧಾನ್ಯಗಳ ಮಾಹಿತಿ ಕಂಡುಬರುತ್ತದೆ. ಒಂದು ವಚನದಲ್ಲಿ ಹದಿನೆಂಟು ಧಾನ್ಯಗಳ ಉಲ್ಲೇಖ ಇದೆ. ಇವು ಪ್ರಾಯಶಃ ದೇವರಿಗೆ ನೈವೇದ್ಯ ಮಾಡಬಹುದಾದ ಧಾನ್ಯಗಳನ್ನು ಸೂಚಿಸುತ್ತದೆ. "ಈ ಹದಿನೆಂಟು ಧಾನ್ಯಗಳೆಂದರೆ ಯವ (ಗೋಧಿಯ ವಿಶೇಷ), ಗೋಧುಮ (ಗೋಧಿ), ಧಾನ್ಯ (ಭತ್ತ), ತಿಲ (ಎಳ್ಳು), ಕಂಗು(ನವಣೆ), ಕುಲತ್ಥಕ(ಹುರುಳಿ), ಮಾಷ (ಉದ್ದು), ಮುದ್ಗ (ಹೆಸರು), ಮಸೂರ (ಕಾಡುಕಡಲೆ); ನಿಷ್ಪಾವ (ಅವರೆ), ಶ್ಯಾಮಕ (ಸಾವೆ), ಸರ್ಷಪ (ಸಾಸುವೆ), ಗವೇರ್ದಕ (ಕಾಡುಗೋಧಿ), ನೀವಾರ (ತಾನಾಗಿ ಬೆಳೆದ ಕಾಡು ಧಾನ್ಯ), ಅಡಕ (ತೊಗರಿ), ಸತೀನಕ (ನೆಲೆಗಡಲೆ), ಚಣಕ (ಕಡಲೆ), ಚಿನಕ(ಕೊತ್ತುಂಬರಿಯ ಜಾತಿ)".[೫೭] ಎಂದು ಶ್ರೀವತ್ಸ ನಿಘಂಟುವಿನಲ್ಲಿ ಅರ್ಥಗಳನ್ನು ಹೇಳಲಾಗಿದೆ.

ಕಾಡುಸಿದ್ದೇಶ್ವರ ವಚನದಲ್ಲಿ "........... ಹೊಲಹಸನಮಾಡಿ ಗೋಧಿ, ಕಡಲೆ, ಜೋಳ ಮೊದಲಾದ ಹದಿನೆಂಟು ಧಾನ್ಯ ಜೀನಸು ಇಲ್ಲದೆ ಬಿತ್ತಿ ಬೆಳೆದು ....".[೫೮] ಒಣಬೇಸಾಯದಲ್ಲಿ ಹೊಲಗಳ ಹಸನಮಾಡಿಕೊಂಡು ಆಹಾರ ಧಾನ್ಯಗಳಾದ ಗೋಧಿ, ಕಡಲೆ, ಜೋಳ ಹಾಗೂ ಎಲ್ಲಾ ಬಗೆಯ ಹದಿನೆಂಟು ಬಗೆಯ ಧಾನ್ಯಗಳನ್ನು ಬಿತ್ತಿ ಬೆಳೆದುಕೊಂಡ ಬಗ್ಗೆ ಮಾಹಿತಿ ದೊರೆಯುತ್ತದೆ. ರಾಮ ಧಾನ್ಯ ಚರಿತ್ರೆಯಲ್ಲಿ "...........ನೆಲ್ಲು ನಾನಿರೆ ಗೋಧಿ ಮೊದಲಾದೆಲ್ಲ ಧಾನ್ಯಗಳಿರಲು ....".[೫೯] ರಾಗಿ-ನೆಲ್ಲು ಮಧ್ಯೆ ಯಾವುದು ಶ್ರೇಷ್ಠವೆಂಬ ಚರ್ಚೆ ಕಾವ್ಯದಲ್ಲಿ ಬರುವಾಗ ಗೋಧಿ ಮತ್ತು ಇತರೆ ಧಾನ್ಯಗಳ ಉಲ್ಲೇಖ ಕಂಡುಬರುತ್ತವೆ. ಅಲ್ಲದೆ ಕೃತಿಯಲ್ಲಿ ಅನೇಕ ಕಡೆ ಒಣಬೇಸಾಯದ ಬೆಳೆಗಳಾದ ಜೋಳ, ರಾಗಿ, ನವಣೆ, ಸಾವೆ, ಹಾರಕ, ಗೋಧಿ, ನೆಲ್ಲು ಮತ್ತು ದ್ವಿದಳ ಧಾನ್ಯಗಳ ಉಲ್ಲೇಖ ಕಂಡುಬರುತ್ತದೆ.

ಸಿದ್ಧರಾಮನ ವಚನವೊಂದರಲ್ಲಿ "ನೀರಿಲ್ಲದ ಭೂಮಿಯಲ್ಲಿ ಮೂರು ಹೇರು ನವಣೆಯ ಬೆಳೆದುದ ಕಂಡೆ ಆ ನವಣೆ ....".[೬೦] ನವಣೆ ಬಡವರ ಪಾಲಿನ ಭಾಗ್ಯದ ಬೆಳೆಯಾಗಿದೆ. ಖುಷ್ಕಿ ಭೂಮಿಯಲ್ಲಿ ಬೆಳೆಯುವ ಆಹಾರ ಧಾನ್ಯದ ಬೆಳೆಯಾಗಿದೆ. ನೀರಿನ ಪ್ರಮಾಣ ಕಡಿಮೆ ಇದ್ದರು ಬೆಳೆಯುವ ಕೆಲವು ಬೆಳೆಗಳಲ್ಲಿ ನವಣೆಯೂ ಒಂದು ಎನ್ನುತ್ತಾನೆ. ಸೊಡ್ಡಳ ಬಾಚರಸನ ವಚನದಲ್ಲಿ "........... ನವಣೆ, ಹಾರಕ, ಬರಗು, ಸಾವೆ, ದೊಸಿಗಳೆಂಬುಧಾನ್ಯ ಐವತ್ತು ಖಂಡುಗ...............".[೬೧] ಒಣಬೇಸಾಯದ ಬೆಳೆಗಳಾದ ನವಣೆ, ಹಾರಕ, ಬರಗು(ಬಾರ್ಲಿ), ಸಾವೆಯ ಉಲ್ಲೇಖ ಕಂಡುಬರುತ್ತದೆ. ಕಾಡುಸಿದ್ಧೇಶ್ವರ

ಇನ್ನೊಂದು ವಚನದಲ್ಲಿ "............ ಶ್ರೀಗರೀ ಗಜಗ ಹಚ್ಚೆ, ಉಳ್ಳಿ, ಮುಲ್ಲಂಗಿ, ಬೆಳ್ಳೊಳ್ಳಿ, ಸಬ್ಬಸಗಿ, ನಾರುಗಡ್ಡೆ, ತೆಂಗು, ಹಲಸು, ಮಾವು..............".[೬೨] ಖುಷ್ಕಿ ಭೂಮಿಯಲ್ಲಿ ಮಿಶ್ರಬೆಳೆಯಾಗಿ ಬೆಳೆಯುವ ಹುರುಳಿ, ಮೂಲಂಗಿ, ಬೆಳ್ಳೊಳ್ಳಿ, ಸಬ್ಬಸಗಿ ಮತ್ತು ತೆಂಗು, ಹಲಸು, ಮಾವುಗಳ ಉಲ್ಲೇಖ ಕಂಡುಬರುತ್ತದೆ.

೨. ದ್ವಿದಳ ಬೆಳೆ

ಆಹಾರ ಬೆಳೆಗಳಾಗಿರುವ ಕಡಲೆ, ನೆಲಗಡಲೆ, ಅವರೆ, ಅಲಸಂಡೆ, ಹೆಸರು, ಉದ್ದು, ತೊಗರಿ, ಹುರುಳಿ, ಸಾಸಿವೆ, ಎಳ್ಳು, ಕೊತ್ತುಂಬರಿ ಮುಂತಾದವುಗಳೆಲ್ಲ ದ್ವಿದಳಧಾನ್ಯಗಳಾಗಿವೆ.

ಕೃಷಿಜ್ಞಾನ ಪ್ರದೀಪಿಕೆಯಲ್ಲಿ ದ್ವಿದಳ ಧಾನ್ಯಗಳಾದ ಶೇಂಗಾ, ಕಡಲೆ, ಎಳ್ಳು, ಕುಸುಬೆ, ಹುರುಳಿ, ಅಲಸಂದೆ, ಗೋಧಿ, ಉದ್ದು, ಹೆಸರು ಮುಂತಾದವುಗಳನ್ನು ಬಿತ್ತಿ ಬೆಳೆದುಕೊಳ್ಳುವ ಕ್ರಮ ಕುರಿತು ಹೇಳಲಾಗಿದೆ. ಮುಂದೆ ಬಿತ್ತನಾ ವಿಧಾನದಲ್ಲಿ ಅವುಗಳ ಚರ್ಚೆ ಮಾಡಲಾಗಿದೆ. ಲೋಕೋಪಕಾರ ಶಾಸ್ತ್ರ ಕೃತಿಯಲ್ಲಿ ಕೆಲವು ದ್ವಿದಳ ಬೆಳೆಗಳ ಉಲ್ಲೇಖ ನೋಡಬಹುದು. "ಜವೆ, ಪೆಸಱುರ್ದ್ದೆಂಬಿವನಾಡುವ ....".[೬೩] ಹೆಸರು, ಉದ್ದು, ದ್ವಿದಳಗಳ ಪ್ರಸ್ತಾಪ ಕಂಡುಬರುತ್ತವೆ. ಶಾಸನ ಸಾಹಿತ್ಯದಲ್ಲಿ ಅನೇಕ ಕಡೆ ಧಾನದತ್ತಿ ನೀಡುವ ಶಾಸನಗಳಲ್ಲಿ ತೆರಿಗೆ ಹಾಕುವ ಮಾಹಿತಿ ಇರುವ ಶಾಸನಗಳಲ್ಲಿ ದ್ವಿದಳ ಧಾನ್ಯಗಳ ಮಾಹಿತಿ ದೊರೆಯುತ್ತವೆ. ಬೇಲೂರಿನ ಒಂದು ಶಾಸನದಲ್ಲಿ "...........ಬೇಳೆವಿದಲೆ ಪೈಕ ಗೋಧಿ, ಕಡಲೆ, ಎಳ್ಳು, ಅಗಸೆ, ಕುಸುಬೆ, ಹೆಸರು, ಉದ್ದು, ತೊಗರಿ, ಹುರುವಳ್ಳಿ ಮುಂತಾದವು............".[೬೪] ದ್ವಿದಳ ಧಾನ್ಯಗಳಿಗೆ ಕರ ವಸೂಲು ಮಾಡುವಲ್ಲಿ ಈ ಬೆಳೆಗಳ ಹೆಸರು ಕಂಡುಬರುತ್ತವೆ. ಕನ್ನಡ ಕಾವ್ಯಕೃತಿಗಳಲ್ಲಿ ಅನೇಕ ಕಡೆ ದ್ವಿದಳ ಧಾನ್ಯಗಳ ಉಲ್ಲೇಖ ಕಾಣಸಿಗುತ್ತವೆ. ವಡ್ಡಾರಾಧನೆಯಲ್ಲಿ "..........ಮಗನೆ ಈತನಂಗಡಿಯ ಲವಡಂ ಪೆಜಿಸಿ ತಿಂದು..........".[೬೫] ಎನ್ನಲಾಗಿದೆ. 'ಅವಡೆ' ಎಂದರೆ ಅಲಸಂದೆ ಎಂದರ್ಥ. ಅಂಗಡಿಯ ಮುಂಭಾಗದಲ್ಲಿ ಬೀಸಾಡಿದ ಅಲಸಂದೆಯ ಬೀಜಗಳನ್ನು ಆರಿಸಿ, ತಿಂದು ಬದುಕುತ್ತಿರುವ ಅಂಶ ಕಂಡುಬರುತ್ತದೆ. ಇಂತಹ ಸನ್ನಿವೇಶಗಳಿಂದ ಅಂದು ಅಲಸಂದೆ ಹೇರಳವಾಗಿ ಬೆಳೆಯುವ ಒಂದು ದ್ವಿದಳ ಬೆಳೆಯಾಗಿತ್ತು ಎಂದು ತಿಳಿಯಬಹುದಾಗಿದೆ.

ಒಟ್ಟಾರೆಯಾಗಿ ಒಣಬೇಸಾಯದ ಬೆಳೆಗಳಲ್ಲಿ ಆಹಾರ ಧಾನ್ಯಗಳು, ಹಣ್ಣಿನ ಬೆಳೆಗಳು, ಎಣ್ಣೆಯ ಕಾಳುಗಳು ಮುಂತಾದವುಗಳನ್ನು ಪ್ರಾದೇಶಿಕವಾಗಿ ಭೂಮಿಯ ಭಿನ್ನತೆಗೆ ಅನುಗುಣವಾಗಿ ಬೆಳೆದುಕೊಳ್ಳುತ್ತಾರೆ. ಖುಷ್ಕಿ ಬೇಸಾಯದಲ್ಲಿ ಅನೇಕ ವೈವಿಧ್ಯಮಯ ಮಿಶ್ರಬೆಳೆಗಳನ್ನು ಬೆಳೆದುಕೊಳ್ಳುತ್ತಾರೆ. ಒಣಬೇಸಾಯದ ಬೆಳೆಗಳ ಬಿತ್ತನೆ ವಿಧಾನ ಕುರಿತು ಅಧ್ಯಾಯ-೦೭ರಲ್ಲಿ ಬಿತ್ತನೆ ಎಂಬ ಭಾಗದಲ್ಲಿ ಚರ್ಚಿಸಲಾಗಿದೆ. ಬೆಳೆಗಳಲ್ಲಿ ಖುಷ್ಕಿ ಬೆಳೆಗಳು, ತೋಟದ ಬೆಳೆಗಳು, ಮಿಶ್ರಬೆಳೆಗಳು, ದ್ವಿದಳ ಬೆಳೆಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

೨. ಬೆಳೆಗಳ ಸಂರಕ್ಷಣಾ ವಿಧಾನ

ರೈತರು ತಾವು ಬೆಳೆದ ಬೆಳೆಗಳನ್ನು ಅವುಗಳ ಜೊತೆಯಲ್ಲಿ ಬೆಳೆಯುವ ಕಳೆಗಳ ನಿವಾರಣೆಯಿಂದ ರಕ್ಷಣೆ ಮಾಡಿಕೊಳ್ಳುವುದು ಒಂದು ವಿಧವಾದರೆ, ಬೆಳೆಗಳಿಗೆ ಬರುವ ರೋಗ ತರುವ ಕ್ರಿಮಿಕೀಟಗಳಿಂದ ರಕ್ಷಣೆ ಪಡೆಯುವುದು ಮತ್ತು ಅವುಗಳನ್ನು ನಿವಾರಿಸಿಕೊಳ್ಳುವುದು ಕೃಷಿಯ ಮುಖ್ಯ ಚಟುವಟಿಕೆಗಳಲ್ಲಿ ಪ್ರಮುಖವಾದದ್ದು. ಪಾರಂಪರಿಕವಾದ ಬೆಳೆಗಳಿಗೆ ಅನೇಕ ಬಗೆಯ ರೋಗಗಳು ಬರುವುದು ಸಹಜವಾಗಿದೆ. ಹಿಂದಿನ ಕಾಲದಲ್ಲಿ ಅವುಗಳಿಗೆ ಪರಿಸರದಲ್ಲೇ ಅನೇಕ ರೋಗ ನಿವಾರಕಗಳು ಲಭ್ಯವಿದ್ದವು. ಆದರೆ

ಇಂದು ರೋಗಗಳ ನಿವಾರಣೆಗೆ ಮಾರುಕಟ್ಟೆಯಲ್ಲಿ ಅನೇಕ ಕಂಪನಿಯ ರಾಸಾಯನಿಕ ಔಷಧಿಗಳು ಲಭ್ಯವಿರುವುದು ದುರಂತವೇ ಸರಿ. ರೈತರು ಬೆಳೆದ ಬೆಳೆಗಳನ್ನು ಅನೇಕ ಪ್ರಾಣಿ, ಕೀಟ–ಪಕ್ಷಿಗಳು ಬಾದಿಸುತ್ತವೆ. ಅವುಗಳಿಂದ ಬೆಳೆಗಳ ಸಂರಕ್ಷಣೆಯ ವಿಧಾನ ಕುರಿತು ತಿಳಿಯುವ ಅಗತ್ಯವಿದೆ. ಪ್ರಕೃತಿಯ ಮಡಿಲಲ್ಲಿ ಬದುಕಿ ಬಾಳುವ ಪ್ರಾಣಿ, ಕ್ರಿಮಿ–ಕೀಟಗಳಲ್ಲಿ ಕೆಲವು ರೈತನ ಸಂಗಾತಿಗಳಾದರೆ ಮತ್ತೆ ಕೆಲವು ಅಪಾಯಕಾರಿ ಕೀಟಗಳಾಗಿವೆ. ರೈತನು ಬೆಳೆದ ಬೆಳೆಯಲ್ಲಿ ಅವುಗಳಿಗೂ ಒಂದು ಪಾಲು ಇದೆ. ಆದರೂ ಸಂರಕ್ಷಣೆಯ ಅಂಶಗಳನ್ನು ಕನ್ನಡ ಸಾಹಿತ್ಯ, ಶಾಸನ, ಜನಪದ ಸಾಹಿತ್ಯ ಮುಂತಾದ ಕೃಷಿ ಸಂಬಂಧಿ ಉಲ್ಲೇಖಗಳಲ್ಲಿ ಕಾಣುತ್ತೇವೆ. ಅಂತವುಗಳನ್ನು ಕ್ರೋಢಿಕರಿಸಿ ಚರ್ಚಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಪ್ರಾಚೀನಕಾಲದ ಋಗ್ವೇದ ಮತ್ತು ಅಥರ್ವಣ ವೇದಗಳಲ್ಲಿ ಬೆಳೆಗಳನ್ನು ಸಂರಕ್ಷಣೆ ಮಾಡಲು ಏನೇನು ಪ್ರಾರ್ಥನೆ ಮಾಡುತ್ತಿದ್ದರು ಎಂದರೆ "ಸಿಡಿಲು ಮಿಂಚಿನಿಂದ ಬೀಜಗಳು ಕೆಡದಂತಿರಲು, ಮನೆಯಲ್ಲಿ ಧಾನ್ಯದಾಸ್ತಾನಾಗಲು ಕೃಷಿಯ ಶಕ್ತಿಯಾಗಲು, ಸಸ್ಯಗಳಿಗೆ ರೋಗಗಳು ತಗುಲದಿರಲು, ಹಸುವಿನ ಕ್ಷೇಮ ಮತ್ತು ಅಭಿವೃದ್ಧಿಯಾಗಲು, ಧಾನ್ಯ ಸಂವೃದ್ಧಿಯಾಗಲು ಹೆಚ್ಚಿನ ಮಳೆಪಡೆಯಲು ಧಾನ್ಯದ ಹೊಲಗಳಿಗೆ ಬೀಳುವ ಸೋಂಕು ಕೀಟಗಳ ನಿವಾರಣೆಯಾಗಲು ಏನೇನು ಮಂತ್ರಗಳನ್ನು ಪಠನ ಮಾಡಬೇಕು ....".[೬೬] ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ವೇದಗಳು ಸಂಹಿತೆಗಳ ಕಾಲದಲ್ಲಿ ವ್ಯವಸಾಯಕ್ಕೆ ಮಹತ್ವನೀಡಿ, ಅದನ್ನು ಗೌರವ ಪೂಜ್ಯನೀಯ ಭಾವದಿಂದ ಕಾಣಲಾಗುತ್ತಿತ್ತು. ಬೆಳೆಗಳ ರೋಗ ಹತೋಟಿ, ರಕ್ಷಣೆ, ಧಾನ್ಯದಾಸ್ತಾನು ಮುಂತಾದವುಗಳ ಬಗ್ಗೆ ಅವರು ಗಮನ ಹರಿಸಿದ್ದರು ಎಂಬುದು ತಿಳಿಯುತ್ತದೆ. 'ಮಿತಾಕ್ಷರ ಸಂಹಿತೆ' ಎಂಬ ಕೃತಿಯನ್ನು ಬರೆದಿರುವ ವಿಜ್ಞಾನೇಶ್ವರ ಎಂಬ ಕವಿ ಹೇಳುವಂತೆ "ಬೆಳೆಗಳ ಬಗ್ಗೆ ಜನ ಹೆಚ್ಚು ಶ್ರದ್ದೆ ವಹಿಸುತ್ತಿದ್ದರು. ಗಿಡಮರಗಳಿಗೆ ನೀರನ್ನು ಸರಿಯಾದ ಸಮಯದಲ್ಲಿ ಎರೆಯುವುದಲ್ಲದೆ, ಬೆಳೆಗಳನ್ನು ಪ್ರಾಣಿಗಳಿಂದ ಹಾಗೂ ಕಳ್ಳಕಾಕರ ಹಾವಳಿಯಿಂದ ರಕ್ಷಿಸಲು ಶ್ರಮಿಸುತ್ತಿದ್ದರು. 'ಕೆಯ್ಗೆಬೇಲಿ ಶಿಶುವಿಂಗೆ ಪಾಲ್' ಎನ್ನುತ್ತಾನೆ ನಯಸೇನ. ದನ, ಕರು, ಆಡು, ಹಂದಿ, ಮುಂತಾದ ಪ್ರಾಣಿಗಳೇನಾದರೂ ಹೊಲಗದ್ದೆಗಳಿಗೆ ನುಗ್ಗಿ ಬೆಳೆದು ನಿಂತಿರುವ ಬೆಳೆಗಳನ್ನು ತಿಂದು ಹಾಳುಮಾಡಿದರೆ ಆ ಪ್ರಾಣಿಗಳ ಒಡೆಯರಿಗೆ ದಂಡವನ್ನು ವಿಧಿಸಬೇಕು..............."[೬೭] ಎನ್ನಲಾಗಿದೆ. ಬೆಳೆ ಸಂರಕ್ಷಣೆಗೆ ಮುಂತಾದ ಕ್ರಮಗಳು ಇರುವುದನ್ನು ತಿಳಿಸುತ್ತಾನೆ. ಬೆಳೆಗಳ ಸಂರಕ್ಷಣಾ ವಿಧಾನದಲ್ಲಿ ೧. ಕಳೆ, ಕ್ರಿಮಿ–ಕೀಟಗಳ ನಿವಾರಣೆ, ೨. ಸುಗ್ಗಿಯ ವಿಧಾನ ಎಂದು ಎರಡು ವಿಭಾಗ ಮಾಡಿಕೊಂಡು ಚರ್ಚಿಸಲಾಗಿದೆ.

೧. ಕಳೆ, ಕ್ರಿಮಿ–ಕೀಟಗಳ ನಿವಾರಣೆ

ಬೆಳೆಯೊಡನೆ ಕಳೆ, ಭೂಮಿಯ ಪೋಷಕಾಂಶಗಳಿಂದ ಬೆಳೆಯೂ, ಕಳೆಯೂ ಬೆಳೆಯುತ್ತವೆ. ಕಳೆಗಳನ್ನು ಕಾಲಕಾಲಕ್ಕೆ ಹದಬೆದೆ ನೋಡಿ, ಹೊರಪು ನೋಡಿ, ಎಡೆ ಕುಂಟೆಯಿಂದ, ಕುರ್ಚಿಗಿಯಿಂದ, ಕೈಗುದ್ದಲಿಯಿಂದ ಕಿತ್ತು ಹಾಕಬೇಕು. ರೋಗಗಳನ್ನು ತರುವ ಕೀಟಗಳು ಜೀವಜನ್ಯಗಳಾಗಿರುವುದರಿಂದ ಉಪದ್ರವಕಾರಕ ರೋಗಗಳಿಗೆ ಕಾರಣವಾಗಿವೆ. ಕಳೆಗಳು ಸಸ್ಯಗಳಾಗಿದ್ದು, ಈ ಕಳೆಗಳು ಬೆಳೆಗಳಿಗೆ ಅಡ್ಡಿಯನ್ನುಂಟುಮಾಡಿದರೂ, ಹಲವು ವೇಳೆ ಅನೇಕ ಉಪಯೋಗಗಳಿಗೆ ಬರುತ್ತವೆ. ಕೆಲವು ಆಹಾರಗಳಲ್ಲಿ ತಿನ್ನಲು ಉಪಯೋಗಿಸಿದರೆ, ಮತ್ತೆ ಕೆಲವು ಔಷಧಿಗಳಿಗೆ ಬಳಸುತ್ತಾರೆ. ಅನೇಕ ಬಗೆಯ ಕಳೆಗಳಿವೆ.

ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಕಳೆಗಳು ಇಲ್ಲದ ಹಾಗೆ ಹೊಲಗಳನ್ನು ಹಸನು ಮಾಡಿಕೊಳ್ಳುವ ವಿಧಾನಗಳನ್ನು ತಿಳಿಸುತ್ತಾರೆ. ಬಿತ್ತನೆಗೂ ಮೊದಲು ಹೊಲ-ಗದ್ದೆಗಳಲ್ಲಿ ಇರುವ ಕಳೆಯನ್ನು ತೆಗೆಯಲು ಎಂಟು, ಹತ್ತು, ಹನ್ನೆರಡು ಎತ್ತುಗಳ ಕಬ್ಬಿಣದ ನೇಗಿಲು ಹೊಡೆದು, ಮಾಗಿಯ ಕಾಲದಲ್ಲಿಯೇ ಕಳೆಯ ನಿವಾರಣೆ ಮಾಡುವುದು ಬಹಳ ಮುಖ್ಯ. "ಅದರಲ್ಲಿ ಕರಿಕೆ, ಕಣಿಗೆ, ನಟ್ಟುಗಳು ಇರಲಾಗದು; ಹೊಲದ ಮಧ್ಯದಲ್ಲಿ ಕಲ್ಲುಕುಟರಿ, ನಟ್ಟು, ಸಣ್ಣ ಸಣ್ಣ ಗಿಡಗಳು, ಬನ್ನಿಯ ಕಂಟಿ, ಬೇವಿನ ಕಂಟಿ, ವಡಿಯನ ಕಂಟಿ, ಎಕ್ಕಿಯ ಗಿಡಗಳು, ಮುಳಗಲ ಕಂಟಿ ಮುಂತಾದ ಗಿಡಗಳಿದ್ದರೆ, ಅವುಗಳ ಬೇರು ಸಹಿತ ಅಗೆದು ತೆಗೆಯ ಬೇಕು............"[೬೮] ಎಂದು ಸಲಹೆ ನೀಡುತ್ತಾರೆ. ಬೆಳೆಯ ಬಿತ್ತಿದ ನಂತರ ಬೆಳೆಗಳ ಸಾಲುಗಳಲ್ಲಿ ಬೆಳೆಯುವ ಕಳೆಯ ನಿವಾರಣೆಗೆ ಎಡೆ ಕುಂಟೆಯನ್ನು ಸಾಲುಗಳ ಮಧ್ಯ ಹದ ನೋಡಿ ಹೊಡೆಯಬೇಕು. ಕಳೆಯ ಗುದ್ದಲಿ, ಕುರ್ಚಗಿಯಿಂದ ಕಳೆಯ ತೆಗೆಯಬೇಕು. ಕರಿಕೆಯ ಹೊಲಕ್ಕೆ ಸೆಣಬು ಹಾಕಿದರೆ ಕರಿಕೆ ಅಳಿಯುತ್ತದೆ. ಸಾಲು ಬಿತ್ತನೆ ಮಾಡಿದ ನೆಲ್ಲು, ಜೋಳ, ರಾಗಿ, ನವಣೆ, ಮೆಣಸಿನ ಗಿಡ, ದ್ವಿದಳ ಧಾನ್ಯಗಳು ಮತ್ತು ಯಾವುದೇ ಬೆಳೆ ಬಿತ್ತನೆ ಮಾಡಿದ ಮೇಲೆ ಸಸಿಯಾದಾಗ ನಂತರದಲ್ಲಿ ಕನಿಷ್ಠ ಎರಡು ಮೂರು ಸಾರಿ ಎಡೆ ಕುಂಟೆ ಹೊಡೆದು ಕಳೆ-ಕಸ ಸದೆ, ರವದಿ ತೆಗೆಯಬೇಕು. ಹೊರಪು ನೋಡಿ ಹರಗಿದರೆ ಕೂಲಿಯ ಆಳುಗಳಿಂದ ಕಳೆಯ ತೆಗೆಯುವುದು ಕಡಿಮೆಯಾಗುತ್ತದೆ. ಅಲ್ಲದೆ ಬೆಳೆಯ ಬುಡಕ್ಕೆ ಮಣ್ಣು ಬಿದ್ದು ಬೆಳೆಗಳು ಚೆನ್ನಾಗಿ ಫಲಿಸುತ್ತವೆ. ಎಡೆ ಕುಂಟೆ ಹೊಡೆಯುವ ಮಾಹಿತಿ ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಹೀಗೆ ಹೇಳಲಾಗಿದೆ. "ಒಂದಾವರ್ತಿ, ಸದೆಯ ತೆಗಿಸಿ ಕೆಲವು ದಿವಸದ ಮೇಲೆ ಮನಿಸಾಲಿನ ಎಡೆಯ ಕುಂಟೆ ದಿಂಡಿಗೆ ಸಣ್ಣ ಪಿಳ್ಳೆಕುಡಗಳ ಹಾಕಿ ಗಿಡಗಳ ಬೊಡ್ಡಯ ನಾಲ್ಕು ಬೆರಳು ಉಳಿಯುವ ಹಾಗೆ ಅನವರಿತು ಪೂರ್ವ-ಪಶ್ಚಿಮಕ್ಕೆ ಒಂದಾವರ್ತಿ ಉತ್ತರ-ದಕ್ಷಿಣಕ್ಕೆ ಒಂದಾವರ್ತಿ ಹೀಗೆ ಅವರಸ, ಚವರಸ ಎಡೆಯ ಹರಗಿದರೆ ಗಿಡಗಳ ಬೊಡ್ಡಿಗೆ ಮಣ್ಣು ಏರಿ ನೀರು ಕಟ್ಟಿದ ಹಾಗಾಗಿ ವಿಶೇಷ ಬೆಳೆಯಾಗಿ............"[೬೯] ಮೆಣಸಿನ ಗಿಡಗಳಿಗೆ ಈ ರೀತಿ ಎಡೆ ಹೊಡೆದರೆ, ಬೇರೆ ಬೆಳೆಗಳಿಗೆ ಒಂದು ಕಡೆ ಅಂದರೆ ಸಾಲುಗಳು ಬಿತ್ತಿದ ಕಡೆ ಒಂದೇ ಮಗ್ಗಲು ಎಡೆಯ ಹೊಡೆದು ಕಸ ನಿವಾರಣೆ ಮಾಡಬೇಕು. ಕಬ್ಬಿನ ಬೆಳೆಯಲ್ಲಿ ಕಬ್ಬು ಬೆಳೆಯುತ್ತಾ ಬಂದ ಹಾಗೆ ಸದೆಯೂ ಹುಟ್ಟುತ್ತ ಹೋದಹಾಗೆ ಎರಡು ಮೂರು ವೇಳೆ ಸದೆಯನ್ನು ತೆಗೆಸಬೇಕು. ಸದೆ ತೆಗೆಸಿ ಹದದ ಮೇಲೆ ನೀರು ಕಟ್ಟುತ್ತ ಹೋದರೆ ಒಳ್ಳೆಯ ಬೆಳೆ ಬರುತ್ತದೆ. ಈ ರೀತಿ ಬೆಳೆಗಳಲ್ಲಿ ಕಳೆ-ಕಸ ಸದಿಯ ನಿವಾರಣೆ ಮಾಡಿ ಕೊಳ್ಳಬೇಕೆಂದು ಶ್ರೀಘನಮಠ ಶಿವಯೋಗಿಗಳು ಸಲಹೆ ನೀಡುತ್ತಾ ಅನೇಕ ಯುಕ್ತಿಗಳನ್ನು ರೈತರಿಗೆ ಪರಿಚಯಿಸುತ್ತಾರೆ.

ಒಕ್ಕಲಿಗ ಮುದ್ದಣನ ವಚನದಲ್ಲಿ ಕಳೆ ನಿವಾರಣೆಯನ್ನು ಕುರಿತು ಈ ರೀತಿ ಹೇಳುತ್ತಾರೆ.

"..............ನೀಲಬ್ರಹ್ಮವೆಂಬ ಸಸಿ ಹುಟ್ಟಿತ್ತು.
ಆ ಸಸಿಯು ಮುಟ್ಟುವ ಸಪ್ತವರ್ಣದ ಸದೆಯ ಕಳೆದು
ಅಷ್ಟವರ್ಣದ ಅಲಬಂಕಿತ್ತು. ದಶವಾಯುವೆಂಬ ಕಸಮಂತೆಗೆದು
ಆಸಸಿ ಪಸರಿಸಿ ಪ್ರಜ್ವಲಿಸಿ ಫಲಕ್ಕೆ ಬರಲಾಗಿ..............."[೭೦] ಎನ್ನಲಾಗಿದೆ.

ಕಳೆಯ ನಿವಾರಣೆಯ ಕ್ರಮವನ್ನು ಬಹಳ ನಿಖರವಾಗಿ ವಚನಕಾರರು ಹೇಳಿದ್ದಾರೆ. ಹುಟ್ಟಿದ ಸಸಿಗೆ ಏಳುವರ್ಣದ ಸದೆ, ಅಂದರೆ ಅನೇಕ ಬಗೆಯ ಕಳೆಗಳು ಎಂದು ಅರ್ಥಮಾಡಿ ಕೊಳ್ಳಬಹುದು.

ಅಷ್ಟವರ್ಣದ ಅಲಬ ಎಂದರೆ ಬೆಳೆಯಲ್ಲಿ ಬೆಳೆಯುವ ಕಳೆಯ ಒಂದು ಬಗೆ, ಇದರಲ್ಲಿ ಎಂಟು-ಹತ್ತು ಬಗೆಗಳಿವೆ ಎಂದು ಕೃಷಿಪದಕೋಶದಲ್ಲಿ ಗುರುತಿಸಲಾಗಿದೆ. ಇಂತಹ ಕಳೆ ಕಿತ್ತು ಹಾಗೂ ಹತ್ತು ಹಲವು ಬಗೆಯ ಕಸವನ್ನು ತೆಗೆದು ಸಸಿ ಆರೈಕೆ ಮಾಡಿದರೆ, ಅದು ಎಲ್ಲಾಕಡೆ ಹಬ್ಬಿ ಬೆಳೆದು ಉತ್ತಮ ಫಲ ನೀಡುತ್ತದೆ ಎಂದು ಹೇಳುತ್ತಾರೆ.

ಅರಿವಿನ ಮಾರಿತಂದೆಯ ವಚನದಲ್ಲಿ "ಕೆಯಿಬೆಳೆವಲ್ಲಿ ಸದೆಗೆ ಮುನಿವರಲ್ಲದೆ ಬೆಳೆಗೆ ಮುನಿದವರುಂಟೆಅಯ್ಯ............ "ಎನ್ನುತ್ತಾರೆ. ಯಾರಾದರು ಸದೆ ಕಳೆಗೆ ಮೂಗು ಮುರಿಯುತ್ತಾರೆಯೇ ಹೊರತು, ಬೆಳೆಗಲ್ಲ ಎಂಬ ಮಾತು ಕಳೆಯ ತಿರಸ್ಕಾರ ಸೂಚಿಸುತ್ತದೆ. ಮಡಿವಾಳ ಮಾಚಿದೇವರ ವಚನದ '.............ಕಸಗೊಂಡ ಭೂಮಿಯಲ್ಲಿ ಸಸಿ ಪಲ್ಲವಿಸುವುದೇ........'ಎನ್ನುವಲ್ಲಿ ಕಸದಿಂದ ಸಸಿ ಬೆಳೆಯಲಾರದು ಎಂಬ ಅಂಶ ತಿಳಿಯುತ್ತದೆ. ಸರ್ವಜ್ಞನ ತ್ರಿಪದಿಯಲ್ಲಿ "ತೋಟದಲಿ ಕಳೆ ಹೊಲ್ಲ, ಕೀಟ ಬೆಳಸಿಗೆ ಹೊಲ್ಲ............".[೧೧] ತೋಟದಬೆಳೆ ಮಾಡುವವರು ಕಳೆಯನ್ನು ಬೆಳೆಯಲು ಬಿಡಬಾರದು. 'ಆಳಾಗಿ ಮಾಡಿ ಅರಸಾಗಿ ಉಣ್ಣಬೇಕು' ಎಂಬ ಗಾದೆಯಂತೆ ತೋಟದಲ್ಲಿ ನೀರಿನ ತಂಪು ಹೆಚ್ಚಾಗಿರುತ್ತದೆ ಆದ್ದರಿಂದ ಕಳೆ-ಕೀಟಗಳ ಕಾಟ ಹೆಚ್ಚಾಗಿರುತ್ತದೆ. ಇದನ್ನು ಅರಿತು ಲೋಕಜ್ಞಾನಿಯಾದ ಸರ್ವಜ್ಞ ಈ ರೀತಿ ರೈತರಿಗೆ ಎಚ್ಚರಿಕೆ ನೀಡಿದ್ದಾನೆ. ಕಳೆಯಲ್ಲಿ 'ಅಣ್ಣೆಯು ಹುಟ್ಟಿದರೆ ಹೊಲಹಾಳು, ಹೆಣ್ಣು ಹುಟ್ಟಿದರೆ ಮನೆ ಹಾಳು' ಎಂಬ ಗಾದೆಯು ಉಂಟು. ಆದರೆ ಅಣ್ಣೆ ಹುಟ್ಟಿದರೆ ಹೊಲಹಾಳಾಗುತ್ತದೆ. ಹೆಣ್ಣು ಹುಟ್ಟಿದರೆ ಮನೆ ಹಾಳು ಎಂದು ಹೇಳುವುದು ಸಮಂಜಸವಲ್ಲ. "ಕಲ್ಲು ಕಸಗಳನ್ನು ಬಿಟ್ಟಂತ ಹೊಲದೊಳಗೆ ಹುಲ್ಲನ್ನೇ ಬೆಳೆದ.......' 'ಹರಗದ ಎತ್ತಾಗಿ ಬರಡಾದ ಹಯನಾಗಿ, ಹರಟೆ ಹೊಡೆಯುವ ಮಗನಾಗೆ ಹೊಲದಲ್ಲಿ ಕರಡವೇ ಬೆಳಗು............ ಅಣುಬೆ ಭತ್ತವೂ ಅಲ್ಲ ಅಣಬೆ ಸತ್ತಿಗೆಯಲ್ಲ ಅಣಬೆ ಭತ್ತ ಆಗಲು ಸಾಧ್ಯವಿಲ್ಲ. ಮಳೆಗಾಲದಲ್ಲಿ ಅಸಿಯಾದ ನೆಲದಲ್ಲಿ ಛತ್ರಿಯಾಕಾರದಲ್ಲಿ ಕಂಡು ಬಂದರೂ ಅದು ಕಸದ ರಾಶಿಯೇ ಆಗಿರುತ್ತದೆ. ಇಂತಹ ಅನುಭವದ ಮಾತುಗಳು ಕಂಡು ಬರುತ್ತವೆ. ಅಲ್ಲದೆ ಒಕ್ಕಲಿಗ ಮುದ್ದಣ್ಣನ ವಚನದಲ್ಲಿ 'ಮೂರು ನೆಲದ ಭೂಮಿಯ ಆರೈದುಬೆಳೆದೆಹೆನೆಂದಡೆ............'ಎನ್ನುವಲ್ಲಿ, ಕಾಡುಸಿದ್ದೇಶ್ವರರ 'ಹೊನ್ನುತೆತ್ತಲ್ಲದೆ ಹೊಲಮಾಡಬಾರದು ....' ಎನ್ನುವಲ್ಲಿ ಮತ್ತು 'ಹತ್ತು ಹೊನ್ನಿಗೆ ಒಂದು ಹೊಲವಮಾಡಿ ಹತ್ತು ಖಂಡುಗವ ಧಾನ್ಯವ ಬೆಳೆದು..............' ಎನ್ನುವ ಈ ಮಾತುಗಳಲ್ಲಿ ಹೊಲಮಾಡಿ ಬೆಳೆಯ ಬೆಳೆಯಲು ಆರೈಕೆ ಅಗತ್ಯ. ಅಂದರೆ ಕಸ-ಕಳೆ ಸದೆ ರವದಿ ತೆಗೆಸುವ, ನೀರು ಹಾಯಿಸುವ ಮತ್ತು ಎಡೆ ಸಾಲು ಕುಂಟಿಯಲ್ಲಿ ಹರಗಿ ಹುಲ್ಲು ನೊಲ್ಲಿ, ಕರಕಿ, ತೆಗೆಯುವ ಹಾಗೂ ಹಣ, ಹೊನ್ನು ಖರ್ಚುಮಾಡಿ ಹೊಲಗಳ ಕಳೆ-ಕಸ ತೆಗ್ಗು ತೆವರು ಬದುತಿದ್ದಿಕೊಂಡು ಬೆಳೆ ಬೆಳೆಯುವ, ಕಳೆ ಕೀಳಲು ಬೇಸಾಯದ ಕೆಲಸಕ್ಕೆ ಹೊನ್ನು ಖರ್ಚು ಮಾಡಿದರೆ ಖಂಡುಗ ಗಟ್ಟಲೆ ಧಾನ್ಯವ ಬೆಳೆದು ತುಂಬಿ ಕೊಳ್ಳಬಹುದು ಎಂದು ಹೇಳುತ್ತಾನೆ. ಅಲ್ಲಮನ ವಚನವೊಂದರಲ್ಲಿ 'ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ, ಭ್ರಾಂತಿಯ ಬೇರು ಅಗೆದು ಕಳೆದನಯ್ಯ ಸಂಸಾರ ವ್ಯಾಮೋಹದ ಹೆಂಟೆಯ ಹೊಡೆದು...............' ತೋಟಮಾಡಬೇಕಾದರೆ ಕರಿಕೆ ಕಣಿಗಲದ ಬೇರನ್ನು ಗುದ್ದಲಿಯಿಂದ ಅಗಿದು ತೆಗೆಯಬೇಕು. ಗುದ್ದಲಿಯಿಂದ ಅಗೆದಾಗ ಹೆಂಡೆಗಳು, ಹುಲ್ಲಿನ ಬೇರುಗಳು ಏಳುತ್ತವೆ. ಹೆಂಡೆಯ ಒಡೆದು ಪುಡಿಮಾಡಿ. ಹುಲ್ಲಿನ ಬೇರು ಆರಿಸಿ, ಹೊಲನ ಹಸನ ಮಾಡಬೇಕು ಎಂದು ಹೇಳುತ್ತಾರೆ. ಕಳೆ-ಕಸ ತೆಗೆದು ಬೆಳೆಗಿಂತ ಬೇಗನೆ ಬೆಳೆಯುವ ಅನೇಕ ವಿಧದ ಹುಲ್ಲು, ಕಂಟಿ,

ಬಳ್ಳಿಯ ಜಾತಿಯ ಕಳೆಯ ಕಿತ್ತು ಹೊಲಗಳಲ್ಲಿ ಬೆಳೆಯುವ ಬೆಳೆಗಳಿಗೆ ಆರೈಕೆ ಮಾಡುವುದು ಪ್ರಮುಖ ಕೆಲಸವಾಗಿದೆ.

ಲೋಕೋಪಕಾರದ ಒಂದು ಪದ್ಯದಲ್ಲಿ ಸಸಿಗಳ ಆರೈಕೆ ಮಾಡುವ ವಿಧಾನ ಕುರಿತು ಹೀಗೆ ಹೇಳಲಾಗಿದೆ.

"ಸಸಿಯ ಕೆಲಗೆಲದೊಳೊದವಿದ ।

ಕಸಮಂ ಕಿಟ್ಟೂಲಿಕಲ್ ಸಿಡಿಲ್ ಮುಗಿಲುಂ ಕೂ ॥

ರ್ವಿಸಿಲುಟಿಕ್ಕಿ ವಹ್ನಿ ಪುಟುವಾ ।

ಯಸಮೆಂಬಿವನೆಯ್ದೆ ಕಾವುದಬ್ದಂಬರೆಗಂ ॥".೨

ಒಂದು ವರ್ಷಗಳ ಕಾಲ ಸಸ್ಯಗಳನ್ನು ತುಂಬಾ ಜಾಗ್ರತೆಯಿಂದ ಕಾಪಾಡಬೇಕು. ಅದು ಹೇಗೆಂದರೆ ಸಸಿಗಳ ಸುತ್ತ ಹುಟ್ಟಿದ ಕಳೆ-ಕಸ ಕೀಳುವುದು, ಆಲಿಕಲ್ಲು, ಸಿಡಿಲು, ಬಿಸಿಲು, ಬೆಂಕಿ, ಹುಳುಗಳು, ಕಾಗೆಗಳಿಂದ ಹಾನಿಯಾಗದಂತೆ, ಮುಟ್ಟಿ ಬಾದಿಸದಂತೆ ಕಾಪಾಡಬೇಕು ಎಂದು ಶಾಸ್ತ್ರಕಾರರು ತಿಳಿಸುತ್ತಾರೆ.

ಬೆಳೆಗಳ ಸಂರಕ್ಷಣೆಯಲ್ಲಿ ಅನುಸರಿಸುವ ಕ್ರಮಗಳಲ್ಲಿ ಕ್ರೀಮಿ-ಕೀಟಗಳ ನಿವಾರಣೆಯು ಒಂದು. ಬೆಳೆಗಳಿಗೆ ರೋಗಗಳು ಬರುವುದು ಸಾಮಾನ್ಯ, ಅವುಗಳ ನಿವಾರಣೆಮಾಡಿಕೊಳ್ಳಲು ಬಳಸುವ ಕ್ರಮ ಕುರಿತು ತಿಳಿಯುವ ಉದ್ದೇಶ ಇಲ್ಲಿ ಮಾಡಲಾಗಿದೆ. ಸಾಮಾನ್ಯವಾಗಿ ರೈತರಿಗೆ ರೋಗದ ಪರಿಣಾಮ ಮತ್ತು ನಿವಾರಣೆಯಲ್ಲಿ ಹೆಚ್ಚು ಆಸಕ್ತಿಯಿರುವಂತೆ ರೋಗದ ಕಾರಣಗಳನ್ನು ಅರಿವುದರಲ್ಲಿ ಆಸಕ್ತಿ ಇರಲಾರದು. ಬೆಳೆಯ ಬಣ್ಣಗಳಲ್ಲಿಯ ವ್ಯತ್ಯಾಸ, ಬೆಳೆಯುವ ಆಕಾರದಲ್ಲಿಯ ವ್ಯತ್ಯಾಸದಿಂದ ರೋಗ ಗುರುತಿಸುತ್ತಾರೆ. ನೈಸರ್ಗಿಕವಾಗಿ ನಡೆಯುವ ರೋಗನಿವಾರಣೆಯ ಕ್ರಮಗಳು ಕಣ್ಮರೆಯಾಗಿ ಮಾರುಕಟ್ಟೆಯಲ್ಲಿ ರಾಸಾಯನಿಕ ಔಷಧಿಗಳು ಹೇರಳವಾಗಿವೆ. ಅವುಗಳ ಉಪಯೋಗದಿಂದ ಪರಿಸರ ನಾಶ ಆ ಪರಿಸರದಲ್ಲಿ ಬದುಕುವ ರೈತನ ಸಂಗಾತಿ ಹುಳು ಹುಪ್ಪಡೆಗಳು ನಾಶವಾಗಿವೆ. ಅಷ್ಟೇ ಅಲ್ಲದೆ ಅಂತಹ ಆಹಾರಧಾನ್ಯ, ಹಣ್ಣುಗಳು, ತರಕಾರಿಯ ಉಪಯೋಗದಿಂದ ಮಾನವನ ಆರೋಗ್ಯದ ಮೇಲೆ ಅನೇಕ ರೀತಿಯ ಪರಿಣಾಮಗಳು ಉಂಟಾಗಿವೆ. ಪ್ರಕೃತಿಯಲ್ಲಿಯ ಜೈವಿಕ ಸರಪಳಿಯ ನಾಶದಿಂದ ಮನುಷ್ಯನ ಬದುಕು ಸಂಕಷ್ಟದಲ್ಲಿ ಸಿಲುಕಿದೆ.

ಬೆಳೆಗಳಿಗೆ ರೋಗಗಳು ಬರಲು ಕ್ರೀಮಿ-ಕೀಟಗಳೆ ಕಾರಣ, ಕೃಷಿ ಪದಕೋಶದಲ್ಲಿ ಗುರುತಿಸಿದ ಕೆಲವನ್ನು ಇಲ್ಲಿ ಹೆಸರಿಸಲಾಗಿದೆ. ಅಲ್ಲದೇ ರೋಗದ ನಿವಾರಕಗಳನ್ನು ಕಾಣಬಹುದು. "ಅಕ್ಕಿಚಿಟ್ಟೆ, ಹುಣ್ಣೆ, ಉನ್ನಿ ಗೊರವ, ಎಲೆಕತ್ತರಿಸುವ ಹುಳ, ಎಳ್ಳಿನ ಕೀಡೆ, ಬದಲ್, ಒರಲೆ, ಕಡಲೆಹುಳು, ಕತ್ತರಿಹುಳು, ಕಪ್ಪು ಕೂದಲಿನ ಹುಳು, ಕಬ್ಬಕ್ಕಿ, ಕರಿ, ಗೊಣ್ಣೆ, ಕುಂಚನ, ಕುಂಡ್ಯಳ್ಳ, ಕೂದಲಿನ ಕೀಡೆ, ಕೆಂಗುಳ, ಕೆಂಪುಜೇಡ, ಕೆಂಬೊತ, ಕೊಂಡಿಲು, ಕೊಕ್ರಕ್ಕಿ, ಕೊರಕ, ಜಗಿ ತಿಗಳೆ, ತೆನೆಹೀರಕ, ನೊಣ, ನೋಳಿಯ, ಬೆಂಕಿಚಿಟ್ಟೆ, ಬೇರುಗಂಡಿನ ದುಂಡುಕ್ರೀಮಿ, ಮಾರಿ ಮುಂತಾದವುಗಳು. ಗೀಜಗ, ಗುಬ್ಬಿ, ಕಾಗಿ ,ಮಂಗ, ಹಂದಿ, ಮಿಗ, ನರಿ, ಮುಳ್ಳಂದಿ, ಗಿಳಿ, ಕರಡಿ, ಇಲಿ, ಇರುವೆ, ಮುಸಿಯಾ, ಮೊಲ ಮುಂತಾದವುಗಳು. ಬೆಳೆಗೆ ಬರುವ ರೋಗಗಳು ಕೊಳೆರೋಗದ ಅಣಬೆರೋಗ, ಅರಿಸಿನ ಮುಂಡಿಗೆರೋಗ, ಉರಿಜೆಂಕಿ ರೋಗ, ಉಳಾಡ್ಕರೋಗ, ಉಳ್ಳೆರೋಗ, ಮಚ್ಚೆರೋಗ, ಎಲೆಕಾಡಿಗೆರೋಗ, ಚುಕ್ಕಿರೋಗ, ಕಾಂಡರೋಗ, ಕಾಡಿಯರೋಗ, ಕೆಂಪು ಚುಕ್ಕಿಯರೋಗ, ಕೊಕ್ಕರೆರೋಗ, ಕಂದುರೋಗ, ಜಂಗಮರೋಗ,

ಒಣಗು ರೋಗ, ನವಣೆಯ ಕಾಡಿಗೆರೋಗ, ಬೂದುರೋಗ, ಬುಳುಸುರೋಗ, ಬೆಂಕಿರೋಗ, ಸಿಂಬುಳುರೋಗ, ಸುಳುಕಟ್ಟುರೋಗ, ಹಿಕ್ಕಲುರೋಗ, ಹುಳತರೋಗ, ಸುಳಿರೋಗ, ಬೆಳೆನಾಶ ಮಾಡುವ ಹುಳುಗಳು, ಅಂದಿಹುಳು, ಅಕ್ಕಿ ಮೂತಿಹುಳು, ಕಂಬಳಿಹುಳು, ಎಲೆಹುಳು, ಕಡಲೆಹುಳು, ಕತ್ತರಿಹುಳು, ಕಪ್ಪು ತಲೆಹುಳು, ಕರಡಿಹುಳು, ಕಾಳುಹುಳು, ಕುಣಿತಹುಳು, ಕುದುರೆ ಮಸಾಲೆಹುಳು, ಕೊಕ್ಕೆಹುಳು, ಕೋರಿಹುಳು, ಗಡ್ಡೆಹುಳು, ಗುಡಾರಹುಳು, ಗೊಣ್ಣೆಹುಳು, ಕೊಂಡಲಿಹುಳು, ನೆತ್ತಿಹುಳು, ಬಸವನಹುಳು, ಬಾಲುಳು, ಬಿಲ್ಲಿಹುಳು, ಮೆಣಸಿನಹುಳು, ರಾಣಿಹುಳು, ಸ್ವೋರೆಹುಳು, ಹಸುರುಳು, ಮುಂತಾದವುಗಳು ರೋಗ ನಿವಾರಕಗಳು ಇಲಿನಾಶಕ, ಉಣ್ಣಿಪುಡಿ, ಎಕಾಲೆಕ್ಸ, ಎಣ್ಣೆಮರಿ, ಪಾಸಾಣ, ಗಂಧಕದ ಪುಡಿ, ಜಾಪತ್ರೆ, ಜಮಾಕ್ಷನ, ಟಾರೆಣ್ಣೆ, ಡಿ.ಎ.ಪಿ, ಡಿ.ಡಿ.ಟಿ. ದಿಂಡೀನ ದೀಪದ ಬಲೆಗಳು, ಧೂಳು, ಧೂಪ, ನವಕ್ರಾನ್, ಫಿನೆಲ್, ಬಗಡಿಮಿಶ್ರಣ, ಬಾವಿಸ್ಟಿನ್, ಬಿಸಿಸುಣ್ಣ, ಬೇವಿನ ಕಷಾಯ, ಬೋದೋ ಅಂಟು, ಬೋರಕ್ಸ, ಮೆಣಿಸಿನ ಕಷಾಯ, ಮೆಲೆತೀನು, ಯಕ್ಕದಕಡ್ಡಿ, ರಾಳ, ಹಸನುದ್ರಾವಕ, ಹುಡಿ, ಹೆಂಡಾಸಲ್ಫಾನ್, ಹೊಂಗೆ ಹಿಂಡಿ, ಹೊಗೆ ಸೊಪ್ಪು ಮುಂತಾದವುಗಳು".[೩]

ಕನ್ನಡ ವಿಶ್ವಕೋಶದಲ್ಲಿ ಕೃಷಿಗೆ ನಷ್ಟಕಾರಿಗಳಾದ ಕೀಟಗಳು ಮತ್ತು ನಿವಾರಣೋಪಾಯವನ್ನು ತಿಳಿಸಿರುತ್ತಾರೆ. ಅವುಗಳನ್ನು ಈ ರೀತಿ ಸಂಗ್ರಹಿಸಬಹುದು. "ರಸಹೀರಿ ನಷ್ಟಪಡಿಸುವ ಕೀಟಗಳು ಈ ಪಂಗಡದ ಕೀಟಗಳಲ್ಲಿ ಸಸ್ಯ ಹೇನುಗಳು ಮುಖ್ಯ. ಇವುಗಳಿಂದ ಭಾದಿಸಲ್ಪಡುವ ಸಸ್ಯವೇ ಇಲ್ಲವೆನ್ನಬಹುದು. ಇವು ವಿಶ್ವವ್ಯಾಪಿ ಅಲ್ಪಸಂಖ್ಯಾತ ಸಣ್ಣ, ಮೃದು, ವಿವಿಧ ಬಣ್ಣದವು ಹಸಿರು ಕಪ್ಪು, ಬೂದು, ಡಾಟಾಲ, ಹೀಗೆ ಈ ಹೇನುಗಳಿಗೆ ಸಾಮಾನ್ಯವಾಗಿ ರೆಕ್ಕೆಗಳಿಲ್ಲ. ಹಿಂಭಾಗದ ಇಕ್ಕೆಲಗಳಲ್ಲಿ ಒಂದೊಂದು ಮಯಾಣದ ನಾಳಗಳು (ಕಾರ್ನಿಕಲ್) ಇವೆ. ಸಸ್ಯದ ಚಿಗುರು ಸುಳಿಹೂ ಮುಂತಾದ ಎಲೆಯ ಭಾಗಗಳಿಗೆ ತಮ್ಮ ಮೂತಿಯನ್ನು ಚುಚ್ಚಿ ರಸವನ್ನು ಹೀರುತ್ತದೆ. ಆದ್ದರಿಂದ ಸಸ್ಯಗಳು ಬಾಡಿ ಒಣಗುತ್ತವೆ...........ಈ ಪ್ರಾಣಿಗಳು ಹತೋಟಿಗೆ ಅವುಗಳ ನೈಸರ್ಗಿಕ ಶತ್ರುಗಳು ಸಹಾಯಕ, ಗುಲಗಂಜಿಯ ಹುಳು, ಸಿರ್ಫಿದ್ ನೊಣಗಳು ಕ್ರೈಸೊಫಿಡ್ ಕೀಟಗಳು ಸಾಕಷ್ಟಿದ್ದರೆ ರಾಸಾಯನಿಕಗಳು ಬೇಕಾಗುವುದಿಲ್ಲ. ಅವಿಲ್ಲದಿದ್ದಾಗ ಹೊಂಗೆ ಎಣ್ಣೆ, ರಾಳದ ಸಾಬೂನು, ಹೊಗೆ ಸೊಪ್ಪಿನ ಕಷಾಯ ಅಥವಾ ಯಾವುದಾದರೂ ರಂಜಕ ಕ್ರಿಮಿನಾಶಕವನ್ನು ಉಪಯೋಗಿಸಬಹುದು. ಬೂಷ್ಟುತಿ ಗಣಿಗಳು, ಶಲ್ಕಕೀಟಗಳು, ಬಿಳಿನೊಣಗಳು (ಅಲೆರೋಡಿದ್); ಇವು ಸಹ ರಸವನ್ನು ಹೀರುವ ಕೀಟಗಳೇ. ಈ ಪಂಗಡದ ಕೀಟಗಳೂ ಸಸ್ಯ ಹೇನುಗಳಂತೆ ಅಸಂಖ್ಯಾತವಾಗಿ ಒಟ್ಟಾಗಿದ್ದು ರಸವನ್ನು ಸದಾ ಹೀರಿ ವೈರಿಗೆ ಸಾವು ಉಂಟುಮಾಡುತ್ತವೆ. ....ಈ ಕೀಟಗಳ ಹತೋಟಿಗೆ ಅವು ಹೆಚ್ಚಾಗಿ ಮುತ್ತಿರುವ ಸಸ್ಯಭಾಗಗಳನ್ನು ಕತ್ತರಿಸಿ ನಾಶಮಾಡಬೇಕು. ಆ ಮೇಲೆ ಸಸ್ಯಹೇನುಗಳಿಗೆ ಮಾಡಿದಂತೆ ಸ್ಪರ್ಶ ಕೀಟನಾಶಕವನ್ನು ಉಪಯೋಗಿಸಬಹುದು. ಈ ಕೀಟಗಳನ್ನು ಹರಡುವ ಇರುವೆಗಳಿದ್ದಲ್ಲಿ ಅವುಗಳ ಗೂಡನ್ನು ನಾಶಮಾಡಬೇಕು. ನೈಸರ್ಗಿಕ ಶತ್ರುಗಳ ಉಪಯೋಗದಿಂದ ಅವುಗಳನ್ನು ಹತೋಟಿಯಲ್ಲಿಡಬಹುದು.

ಸಸ್ಯ ತಿಗಣೆಗಳು : ಇವು ಸಹ ರಸವನ್ನು ಹೀರುವ ತಿಗಣೆಗಳೇ. ಇವು ಹಲವಾರು ಕುಲಗಳಿಗೆ ಸೇರಿವೆ. ವಾಸನೆತಿಗಣೆಗಳು, ಸೊಳ್ಳೆತಿಗಣೆಗಳು, ಜರತಾರಿತಿಗಣೆಗಳು, ನೆಗೆಯುವತಿಗಣೆಗಳು, ನೊರೆತಿಗಣೆಗಳು ಮತ್ತು ಎಲೆಜಿಗಿಗಳು ಇತ್ಯಾದಿ. ವಾಸನೆತಿಗಣೆಗಳು ಗಾತ್ರದಲ್ಲಿ ದಪ್ಪ ಮತ್ತು ಮಧ್ಯಸ್ಥ. ಇವು ಅನೇಕ ಬಗೆಯ ಬೆಳೆಗಳಿಗೆ ಬಿದ್ದು ರಸವನ್ನು ಹೀರುತ್ತವೆ. ....ಈ ಕೀಟಗಳ ನಡತೆಯನ್ನು

ಅನುಸರಿಸಿ ಹತೋಟಿ ಕ್ರಮಗಳನ್ನು ನಿರೂಪಿಸಬೇಕು. ಕೆಲವನ್ನು ದೀಪಕ್ಕೆ ಆಕರ್ಷಿಸಿ ಕೊಲ್ಲಬಹುದು. ಸಾಧ್ಯವಿದ್ದರೆ ಬಲೆಯನ್ನು ಬೀಸಿ ಹಿಡಿದು ಇವನ್ನು ಕೊಲ್ಲಬಹುದು. ಕೀಟನಾಶಕಗಳ ಉಪಯೋಗದಿಂದ ಸಸ್ಯಭಾಗಗಳನ್ನು ಉಜ್ಜಿ ಹೊರಸೂಸಿದ ರಸವನ್ನು ಹೀರುತ್ತವೆ. ಕೆಲವು ಸಸ್ಯಗಳ ಮೇಲೆ ಗಂಟುಗಳನ್ನು ಮಾಡುತ್ತವೆ..........ಹೊಗೆಸೊಪ್ಪಿನ ಕಷಾಯದಂಥ ಸ್ಪರ್ಶನಾಶಕದಿಂದ ಡ್ರಿಪ್ಸ್ ಕೀಟಗಳನ್ನು ಹತೋಟಿಗೊಳಿಸಬಹುದು. ಕೊರೆಯುವ ಕೀಟಗಳು:– ಇವು ಸಸ್ಯಗಳ ಬೇರು, ಕಾಂಡ, ರೆಂಬೆ, ಮೊಗ್ಗು, ಹಣ್ಣು, ಬೀಜಗಳನ್ನು ಕೊರೆದು ಅಂಗಾಂಶವನ್ನು ತಿನ್ನುತ್ತವೆ. ....ಕೀಟನಾಶಕಗಳ ಬಳಕೆಯಿಂದ ನಿವಾರಿಸುವುದು. ....".[೭೪]

ಶಾಸ್ತ್ರಕೃತಿಗಳಾದ ಕೃಷಿಜ್ಞಾನ ಪ್ರದಿಪಿಕೆ, ಲೋಕೋಪಕಾರದಲ್ಲಿ, ಕನ್ನಡಸಾಹಿತ್ಯ ಕೃತಿಗಳಲ್ಲಿ, ಶಾಸನ ಮತ್ತು ಜನಪದ ಕಾವ್ಯಗಳಲ್ಲಿ ದೊರೆಯುವ ಕೃಷಿಪೀಡೆಗಳು, ಅವುಗಳ ನಿವಾರಣೆಯ ಕ್ರಮಗಳನ್ನು ತಿಳಿಯಬಹುದಾಗಿದೆ.

ಲೋಕೋಪಕಾರದಲ್ಲಿ ತೋಟದ ಬೆಳೆಗಳಿಗೆ ಬಾದಿಸುವ ಕ್ರಿಮಿಕೀಟಗಳ ನಿವಾರಣೆಯ ಕ್ರಮ ಕುರಿತು ವಿವರಣಾತ್ಮಕವಾಗಿ ಅಧ್ಯಾಯ ೬ರಲ್ಲಿ ೧೦ ರಿಂದ೧೪ನೇ ಪದ್ಯಗಳಲ್ಲಿ ಮಾಹಿತಿ ದೊರೆಯುತ್ತದೆ. ಸಸ್ಯಗಳಿಗೆ ಆಲಿಕಲ್ಲು, ಸಿಡಿಲು, ಮಂಜಿನ ಬಾಧೆಯಿಂದ ರಕ್ಷಣೆ ಪಡೆಯುವ ವಿಧಾನ ಕುರಿತು ಪದ್ಯ ೧೦ರಲ್ಲಿ ಈ ರೀತಿ ಹೇಳುತ್ತಾನೆ.

"ಮೊಸಗರ್ೂಟಂ ವಿಧಿಯಿಂದೆ ಸೂಸೆ ಭರದಿಂ ಬೀಟಚ್ವಾಲಿಕಲ್ಲುಂನಿವಾ ।
ರಿಸುಗುಂ ಪೆರ್ಮರನಂ ಸಿಡಿಲ್ವೊಡೆದೊಡಂತಾಬೂದಿಯಂ ಕೊಂಡು ವ ॥
ಹ್ನಿಸಮೇತಂ ಪೊಗೆಯೆಕ್ಕೆ ಮಂಜಿನೊದವಂಕಾಗುಂ ಮರಕ್ಕೆಯ್ದೆ ಧೂ ।
ಪಿಸೆ ಮತ್ಸ್ಯಾಮಿಷ ಸರ್ಪಪಾಜ್ಯಕದಳೀಪತ್ರಂಗಳಿಂ ಕೊರ್ವುಗುಂ ॥"[೭೫]

ಮೊಸರನ್ನವನ್ನು ಸಸಿಗಳಿಗೆ ಕ್ರಮದಿಂದ ಹಚ್ಚುತ್ತಿರಲು ಒಂದು ವರ್ಷಗಳ ಕಾಲ ಆಲಿಕಲ್ಲು ಬಿದ್ದಿರುವ ಸಸ್ಯಗಳಿಗೆ ಲೇಪಿಸಲು ಆಲಿಕಲ್ಲುಗಳಿಂದಾದ ಬಾಧೆಗಳನ್ನು ನಿವಾರಣೆ ಮಾಡಬಹುದು. ಹಿಂದೆ ಹಣ್ಣಿನ ಮರಕ್ಕೆ ಸಿಡಿಲು ಬಡಿದಿದ್ದರೆ ಅದರ ಬೂದಿಯನ್ನು ತಂದು ಅಂಟು ಮತ್ತು ರಾಳದಲ್ಲಿ ಬೆರಸಿ ಹೊಗೆ ಕೊಡಲು ಮಂಜಿನ ಬಾಧೆಸಸಿಗಳಿಗೆ ಇರುವುದಿಲ್ಲ. ಆಸಸಿಗಳಿಗೆ ಮೀನ, ಮಾಂಸ, ಸಾಸಿವೆ, ತುಪ್ಪ, ಬಾಳೆ, ಎಲೆ, ಇವುಗಳ ಹೊಗೆ ಕೊಡಲು ಸಸಿಗಳು ಸೊಕ್ಕಿ ಬೆಳೆಯುತ್ತವೆ. ಮರಗಳನ್ನು ಬಾಧಿಸುವ ಹುಳುಗಳನ್ನು ನಾಶಮಾಡುವ ವಿಧಾನ ಕುರಿತು ಪದ್ಯ-೧೧ರಲ್ಲಿ ಹೇಳಲಾಗಿದೆ.

ಹಿಂಗುವ ಚಾದ್ವಯ ಮರಿಚ ವಿ ।
ಳಂಗಾರುಷ್ಕಾರ ಪತಾಕಮಳ ? ಸರ್ಷಪ ಗೋ ॥
ಶೃಂಗ ಪಶುಮಾತ್ರದಿಂ ವೃ ।
ಕ್ಷರಿಗಳ ನಿಂಬಾಗಿ ಪೂರೆಯೆ ಕೀಟಾಪಹರಂ".[೭೬]

ಇಂಗು, ಬಜೆ, ಅತಿಬಜೆ, ಮೆಣಸು, ವಿಳಂಗ, ಕೇಜಿಬೀಜಂ, ಗುಬ್ಬಿಬಳ್ಳಿ, ಸಾಸಿವೆ, ಆಕಳ ಕೊಂಬು, ಇದನ್ನು ಗೋಮೂತ್ರದಲ್ಲಿ ಕೊಳೆಸಬೇಕು. ನಂತರ ಸಸಿಗಳ ಕಾಂಡದ ಸುತ್ತಲೂ ಹಾಕಲೂ ಮರವನ್ನು ಬಾಧಿಸುವ ಹುಳುಗಳು ಸಾಯುತ್ತವೆ ಎಂದು ಕೀಟನಿವಾರಣೆಯ ಬಗ್ಗೆ ತಿಳಿಸುತ್ತಾರೆ. ಮರಗಳಿಗೆ ರೋಗಗಳು ಬಾರದೆ ಇರುವಂತೆ ಆರೈಕೆ ಮಾಡುವ ವಿಧಾನವನ್ನು ಪದ್ಯ-೧೨ರಲ್ಲಿ ಚರ್ಚಿಸಿರುವುದನ್ನು ಕಾಣಬಹುದು.

"ಸಮವಾಗಿ ಕೊಂಡು ದೊಪಿಸು ।

ಗೆ ವಿಳಂಗ ಮಹಿಷಿಮತ್ಸ್ಯಮಾಂಸಂನಿಶೆ ಸಾ॥

ಸಿವೆಯಂ ಮತ್ತಿಯ ಪೂವೆಂ ।

ಬಿವಜುಂ ತರುನಿರುಜಿಮಾಗಿ ಫಳದೊಳ್ ನೆರೆ (ಜೌ)ಗುಂ".[೭೭]

ವಿಳಂಗ, ಮಹಿಪಾಷಿ, (ಧೂಪಂ) ಮೀನಮಾಂಸ, ಅರಿಸಿಣ, ಸಾಸಿವೆ, ಮತ್ತಿಯ ಹೂ, ಇವುಗಳನ್ನು ಸಮ ಪ್ರಮಾಣದಲ್ಲಿ ತೆಗೆದುಕೊಂಡು ಧೂಪಿಸಲು ಆ ಮರಗಳು ಯಾವ ರೋಗವಿಲ್ಲದೆ ಬೆಳೆಯುತ್ತವೆ. ಎಂಬುದು ಶಾಸ್ತ್ರಕಾರನ ಅಬಿಮತವಾಗಿದೆ.

ಕೆಲವು ಔಷಧಿಯ ಕಷಾಯಮಾಡಿ ಆ ರಸವನ್ನು ಹನಿ ಹನಿಯಾಗಿ(Drip) ಮರದ ಬುಡಕ್ಕೆ ಹಾಕಿ ಆರೈಕೆ ಮಾಡುವ ಅಂಶವನ್ನು ಪದ್ಯ-೧೪ರಲ್ಲಿ ತಿಳಿಸಲಾಗಿದೆ.

"ಕಸರಿಯ ನೀರಿಡುವುದು ಸ ।

ಬ್ಬಸಿಗೆಯನರೆದಿಕ್ಕೆ ಮರನಮೊದಲೊಳದಂ ಸೇ ॥

ಕಿಸುವುದು ಮೇಣಜ ಮಾಂಸದ ।

ರಸಮಂ ತಳಿವುದು ತಳಿರ್ತು ನುಣ್ಬು ಪಡೆಗುಂ".[೭೮]

ಸಬ್ಬಸಿಗೆಯ ಅರಿದು ಕಷಾಯಮಾಡಿ ಆ ರಸವನ್ನು ಸಸಿಯ ಬುಡಕ್ಕೆ ಹನಿ ಹನಿಯಾಗಿ ಹಾಕಬೇಕು. ಅಥವಾ ಆಡಿನ ಮಾಂಸದ ರಸವನ್ನು ಸಸಿಯ ಬುಡಕ್ಕೆ ಹಾಕಬೇಕು ಹೀಗೆ ಮಾಡುವುದ ರಿಂದ ಆ ಮರಗಳು ಚಿಗುರಿ ಸೊಂಪಾಗಿ ಬೆಳೆಯುತ್ತವೆ. ಈ ರೀತಿಯ ಅನೇಕ ಬಗೆಯ ರೋಗಗಳ ಪತ್ತೆ, ನಿವಾರಕಗಳ ಬಳಕೆಯ ವಿಧಾನ, ಸಸ್ಯಗಳು ನಿರೋಗದಿಂದ ಬೆಳೆಯುವಂತೆ ಮಾಡಲು ಇರುವ ಕ್ರಮಗಳು, ಹೆಚ್ಚು ಸಮೃದ್ಧವಾಗಿ ಬೆಳೆಯಲು ಕೈಗೊಳ್ಳಬೇಕಾದ ವಿಧಾನ ಕುರಿತು ಲೋಕೋಪಕಾರ ಕೃತಿಯ ಕರ್ತೃ ಚಾವುಂಡರಾಯ ತನ್ನ ಶಾಸ್ತ್ರಕೃತಿಯಲ್ಲಿ ನಿಖರವಾಗಿ ತಿಳಿಸುತ್ತಾನೆ. ಆದರೆ ಈ ವಿಧಾನಗಳನ್ನು ಇಂದು ಬಳಕೆಯಲ್ಲಿ ತರುವಂತ ರೈತರು ತುಂಬಾ ವಿರಳ, ಆಧುನಿಕ ಕೃಷಿ ವಲಯಗಳು ರೈತರನ್ನು ಆಕರ್ಷಿಸಿರುವುದು ಇದಕ್ಕೆ ಕಾರಣ ಇರಬಹುದು.

ಕೃಷಿ ಜ್ಞಾನಪ್ರದೀಪಿಕೆಯಲ್ಲಿ ಭೂಮಿಯ ತಿದ್ದುವಿಕೆ, ಹರಗುವಿಕೆ, ಬೇಕಾಗುವ ಸೇವಕರ ವ್ಯವಸ್ಥೆ, ಬಾವಿ ಮಾಡುವ ವಿಧಾನ, ಬಿತ್ತನೆ ವಿಧಾನ, ಬೆಳೆಗಳ ಸಂಗ್ರಹ ಕುರಿತು ಹೇಳಲಾಗಿದೆ. ಆದರೆ ಬೆಳೆಗಳಿಗೆ ಬರುವ ರೋಗಗಳು, ಅವುಗಳ ನಿವಾರಣೆ ಕುರಿತು ಹೇಳುವ ಮಾಹಿತಿ ದೊರೆಯುವುದಿಲ್ಲ. ಮಾಡುವುದು, ಹಂಗಾಮಿಗನುಸರಿಸಿ ಬೆಳೆಮಾಡುವುದು, ಹದಬೆದೆ ನೋಡಿ ಗಳೆ ಹೊಡೆಯುವುದು ಮತ್ತು ಬಿತ್ತನೆ ಮಾಡುವುದು, ಸಾವಯವ ಗೊಬ್ಬರದ ಬಳಕೆ, ಪರ್ಯಾಯ ಬೆಳೆ ಮಾಡುವುದು, ಮಿಶ್ರಬೆಳೆ ಮಾಡುವುದು, ಕೀಟಗಳನ್ನು ಕೈಯಿಂದ ಆರಿಸುವುದು ಮತ್ತು ಗಿಡಗಳನ್ನು ಜಾಡಿಸಿ ಕೀಟಗಳು ಜಲ್ಲಿಯಲ್ಲಿ ಬೀಳುವಂತೆ ಮಾಡುವುದು, ಪಕ್ಷಿಗಳನ್ನು ಆಕರ್ಷಿಸಲು ಚರಗ ಚೆಲ್ಲುವುದು, ಸಂಗಾತಿ ಬೆಳೆಗಳನ್ನು ಬೆಳೆಯುವುದು ಮುಂತಾದ ಜೈವಿಕ ಕ್ರಮಗಳನ್ನು ರೈತರು ಅನಾದಿಕಾಲದಿಂದಲೂ ಅನುಸರಿಸುತ್ತಾ ಬಂದಿದ್ದಾರೆ.

ಕನ್ನಡ ಸಾಹಿತ್ಯ ಕೃತಿಗಳಲ್ಲಿ ಬೆಳೆಗಳ ಸಂರಕ್ಷಣೆಯ ಸರಳ ಮಾರ್ಗಗಳನ್ನು ರೈತರು ಅನುಸರಿಸುವುದು ಕಂಡು ಬರುತ್ತವೆ. ರೋಗಗಳು ಅವುಗಳ ನಿವಾರಣೆಗೆ ಔಷದೋಪಚಾರ ಕುರಿತಾದ ಮಾಹಿತಿಗಳು ದೊರೆಯುವುದಿಲ್ಲ. ಆದರೆ ಪ್ರಾಣಿ–ಪಕ್ಷಿ, ಕ್ರಿಮಿ–ಕೀಟಗಳಿಂದುಂಟಾಗುವ ಹಾನಿಯನ್ನು ತಡಿಯಲು ಅನುಸರಿಸುವ ಕ್ರಮಗಳನ್ನು ತಿಳಿಯಬಹುದಾಗಿದೆ. ಹರಿಶ್ಚಂದ್ರಕಾವ್ಯದಲ್ಲಿ ಸಸಿಗಳಿಗೆ ಹಂತ ಹಂತವಾಗಿ ಬರುವ ಪೀಡೆಗಳನ್ನು ಈ ರೀತಿ ಹೇಳಲಾಗಿದೆ. “ಮೊಳೆವ ಬೀಜವನು ಕ್ರಿಮಿ–ಕೀಟಕಂಗಳು ಸಸಿಯ ನೆಳಹುಲ್ಲೆಗಳು ಹೊಡೆಯ ನೆರಳೆಗಳು ಸನಿದಂಟು................”.[೭೯] ಮೊಳಕೆಯ ಬೀಜಗಳನ್ನು ಕ್ರಿಮಿ–ಕೀಟಗಳು, ಎಳೆಯ ಸಸಿಯನ್ನು ಹುಲ್ಲೆಗಳು, ಹೊಡೆಯನ್ನು ಜಿಂಕೆಗಳು, ತೆನೆಗಳನ್ನು ಗಿಳಿ, ನವಿಲು, ದುಂಬಿ, ಮುಂತಾದ ಪಕ್ಷಿ ಸಮೂಹಗಳು, ಧಾನ್ಯಗಳನ್ನು ಇಲಿ, ಹೆಗ್ಗಣಗಳು ನಾಶಮಾಡುತ್ತವೆ. ರೈತರು ಹಂತ ಹಂತವಾಗಿ ಬೆಳೆಯ ಸಂರಕ್ಷಣೆ ಮಾಡಿಕೊಳ್ಳಬೇಕು. ಅಕ್ಕಮ್ಮನ ಒಂದು ವಚನವೊಂದರಲ್ಲಿ “ಕೆಯಿಗೆ ಬೆಚ್ಚು ಬೆದರ ಕಟ್ಟುವಲ್ಲಿ............ಎನ್ನಕೆಯ್ಯ ತಪ್ಪಲಲ್ಲಿ ಕಾಷ್ಠವನೆಟ್ಟು ಕಟ್ಟಿದಮತ್ತೆ ವಿಹಂಗಕುಲ ಮೃಗಜಾತಿ ಮುಟ್ಟಲಿಲ್ಲ............”.[೮೦] ಬೆಳೆದು ನಿಂತಹೊಲವನ್ನು ಕಳ್ಳಕಾಕರಿಂದ, ಪ್ರಾಣಿ ಪಕ್ಷಿಗಳಿಂದ ಸಂರಕ್ಷಣೆ ಮಾಡಿಕೊಳ್ಳಲು ಅನುಸರಿಸುವ ಸರಳ ಕ್ರಮ ಕುರಿತು ಹೇಳಲಾಗಿದೆ. ಮಡಿಕೆಯೊಂದಕ್ಕೆ ಬಣ್ಣ ಹಚ್ಚಿ ಮನುಷ್ಯರ ಮುಖದಂತೆ ಕಣ್ಣು, ಮೂಗಿನ ಆಕಾರ ಮಾಡಿ, ಹುಲ್ಲು ಬಳಸಿ ದೇಹದ ಆಕಾರಮಾಡಿ, ಹಳೆಯ ಬಟ್ಟೆಯ ತೊಡಿಸಿ ‘ಬೆದರು ಗೊಂಬೆ’ಯ ಮಾಡಿ ಬೆಳೆಯ ಹೊಲಗಳಲ್ಲಿ ನಿಲ್ಲಿಸುತ್ತಿದ್ದರು. ಯಶೋಧರ ಚರಿತ್ರೆಯಲ್ಲಿ ಬೆದರುಗೊಂಬೆ (ಬೆರ್ಚು) ಉಲ್ಲೇಖ ಕಂಡು ಬರುತ್ತದೆ. “............ವಾರಿಯ ಬೀರರ್ ಪಾಳಿಯೊಳೆಸೆದರ್ ಪಾಪದ ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆಱುದಿಂ..........[೮೧] ಇಲ್ಲಿ ಬೆರ್ಚು ಎಂದರೆ ಬೆದರು ಗೊಂಬೆ ಎಂದು ಅರ್ಥ. ಜೋಳದ ತೆನೆ ತಿನ್ನಲು ಬರುವ ಪಕ್ಷಿಸಂಕುಲಗಳನ್ನು ಬೆದರಿಸಲು ಕಟ್ಟಿದ ಬೆರ್ಚಿನ ರೀತಿಯಲ್ಲಿ ಆ ವೀರರು ಕಾಣುತ್ತಾರೆ ಎಂದು ಹೇಳುವಲ್ಲಿ ಬಳಕೆಯಾಗಿದೆ.

ಕೋಲಶಾಂತಯ್ಯನ ವಚನದಲ್ಲಿ “.................ಒಂದು ಹೊಲ ಬೆಳೆಯಿತ್ತು ಬೆಳೆಯ ಮೇಯ ಬಂದ ಎರಳೆ..........”.[೮೨] ಹೊಲಗಳಲ್ಲಿ ಬಿತ್ತಿದ ಬೆಳೆಗಳನ್ನು ತಿನ್ನಲು ಬರುವ ಪ್ರಾಣಿಗಳಲ್ಲಿ ಎರಳೆ (ಜಿಂಕೆ) ಯೂ ಒಂದು ಆ ಪ್ರಾಣಿಯಿಂದ ಬೆಳೆಯ ರಕ್ಷಣೆ ಮಾಡಿ ಕೊಳ್ಳುತ್ತಿದ್ದರು. ಅಲ್ಲದೆ ಮನಮುನಿ ಗುಮ್ಮಟ ದೇವನ ವಚನವೊಂದರಲ್ಲಿ “ಕಲ್ಲು ಕವಣೆಯ ನುಂಗಿ, ಇಡುವಾತನ ಹಣೆತಾಗಿತ್ತು...........ಈ ವಚನದಲ್ಲಿ ಕವಣೆಯ ಉಲ್ಲೇಖ ಕಂಡು ಬರುತ್ತದೆ. ಹಗ್ಗದಿಂದ ತಯಾರಿಸಿದ ಕವಣೆ ಕಲ್ಲು ಇಟ್ಟು ಹೊಡೆಯಲು ಬಳಸುವ ಉಪಕರಣ ಆಗಿದೆ. ಹೊಲದಲ್ಲಿ ಬೆಳೆದ ಹಾಲು ಕಾಳುಗಳಿಗೆ ಹಕ್ಕಿ–ಪಕ್ಷಿಗಳ ಕಾಟ ತುಂಬ ಇರುತ್ತದೆ. ಇಂತವುಗಳ ನಿವಾರಣೆಗೆ ಹೊಲದಲ್ಲಿ ಮಂಚಿಗೆ ಹಾಕಿ ಅದರ ಮೇಲೆ ನಿಂತ ಕವಣೆಗಳಿಂದ ಕಲ್ಲು ಹೊಡೆದು ಹಕ್ಕಿಗಳು ಓಡಿಸುತ್ತಾರೆ. ಇದು ಬೆಳೆಯ ಆರೈಕೆಯ ಒಂದು ವಿಧಾನವಾಗಿದೆ. ಸಾಮಾನ್ಯವಾಗಿ ಹೆಣ್ಣುಮಕ್ಕಳು ಹೊಲಕಾವಲು ಕಾಯುವಂತಹ, ಕಾರ್ಯದಲ್ಲಿ ಭಾಗವಹಿಸುತ್ತಾರೆ.

ಜನಪದ ಕಾವ್ಯಗಳಲ್ಲಿ ಬೆಳೆಗಳ ಸಂರಕ್ಷಣೆಯನ್ನು ಕುರಿತು ಅನೇಕ ಪೂರಕ ಮಾಹಿತಿಗಳು ದೊರೆಯುತ್ತವೆ. ಬೆಳೆಗಳಿಗೆ ರೋಗ ತರುವವು ಮಾರಿ–ಮಸಣಿ ಶೂದ್ರ ದೇವತೆಗಳು. ಅಂತಹ ದೇವ–ದೈವಗಳನ್ನು ತೃಪ್ತಿಪಡಿಸಲು ಅನೇಕ ಆಚರಣೆಗಳನ್ನು ಮಾಡುತ್ತಿದ್ದರು. ಆದರೆ ಕ್ರಮಬದ್ಧ ರೋಗನಿವಾರಣೆಯ ವಿಧಾನ ಎಲ್ಲೂ ಕಂಡು ಬರುವುದಿಲ್ಲ. ಬಿ.ಎಸ್.ಗದ್ದುಗಿಮಠರ ‘ಕನ್ನಡ ಜಾನಪದಗೀತೆಗಳು’ ಕೃತಿಯಲ್ಲಿ “ನಮ್ಮ ಒಕ್ಕಲಿಗನಿಗೆ, ಧರ್ಮಕ್ಕಿಂತ ದೇವರ ಭಾವನೆಯೇ ದೊಡ್ಡದು ಅವನಿಗೆ ಊರ ಮುಂದಿನ

ಪಾದಗಟ್ಟೆಯ ಬಸವನು ಬೇಕು. ಊರ ಹೊರಗಿನ ಗರಡುಗಂಬದೆದುರಿನ ಹನುಮನು ಬೇಕು; ರೋಗಾಧಿಗಳು ಪೀಡೆಯಾದರೆ ಮಾರಿ–ಮೊಸಣಿ ಮೊದಲಾದ ದೇವತೆಗಳೂ ಬೇಕು. ಬೂತ ಪಿಶಾಚಿಗಳ ಕಾಟ ಉಪಟಳವಾದರೆ ನವಗ್ರಹಾದಿಗಳ ಬಲವು ಬೇಕು...............".[೬೩] ಎನ್ನುತ್ತಾರೆ. ಊರು ಸುಟ್ಟರು 'ಹನುಮಪ್ಪ ಹೊರಗೆ' ಎಂಬ ಗಾದೆಯಂತೆ ಹನುಮಪ್ಪನು ಒಕ್ಕಲಿಗನಿಗೆ ಸುಗ್ಗಿಯ ದೇವರಲ್ಲ. ಕಾಟಪೀಡೆಗಳನ್ನು ಕಳೆದುಕೊಳ್ಳಲು ನಡೆದುಕೊಳ್ಳುವ ದೇವರಾಗಿದ್ದಾನೆ. ನಮ್ಮ ಹಳ್ಳಿಗರಿಗೆ ಗ್ರಾಮದೇವತೆಯಂದರೆ ದ್ಯಾಮವ್ವ– ದುರುಗವ್ವಗಳು ಬೆಳೆಗಳು ಒಣಗಿದರೆ, ದನಕರಗಳಿಗೆ ಪೀಡೆಯಾದರೆ, ಊರಲ್ಲಿ ರೋಗಾಧಿಗಳು ಹಬ್ಬಿದರೆ ಇವೆಲ್ಲಕ್ಕೂ ಕಾರಣ ಈ ದೇವತೆಗಳೆಂದು ನಂಬಿದ್ದರು.

ಏಳು ಮಕ್ಕಳತಾಯಿಯೆಂಬ ದೈವ ಕುರಿತು ಹೀಗೆ ಹೇಳಲಾಗಿದೆ.

"ಜೋಳದ ಹೊಲವನ್ನು ಏಳುಮಕ್ಕಳತಾಯಿ
ಹಾಳಮಾಡಬ್ಯಾಡ ನಂ ಬೆಳಸು । ಸುಗ್ಗ್ಯಾಗ
ಬಲಿಕೊಟ್ಟು ಕೈಯ ಮುಗಿದೇವ ॥".[೬೪]

ಜೋಳದ ಬೆಳೆಯ ಹಾಳುಮಾಡ ಬೇಡ ಸುಗ್ಗಿಯಲ್ಲಿ ಬಲಿಕೊಡುತ್ತೇನೆ ಎಂದು ಬೇಡುವ ಅಂಶವನ್ನು ಕಾಣುತ್ತೇವೆ.

೨. ಸುಗ್ಗಿ ವಿಧಾನ

ಒಕ್ಕಲುತನದಲ್ಲಿ ಉತ್ತುವುದು, ಬಿತ್ತುವುದು, ಒಕ್ಕುವುದು ಈ ಮೂರು ಪ್ರಮುಖ ಕ್ರಮಗಳನ್ನು ಕಾಣಬಹುದು. ಸುಗ್ಗಿಯ ಕಾಲವೆಂದರೆ ರೈತರಿಗೆ ಎಲ್ಲಿಲ್ಲದ ಸಂತೋಷ ತರುವಂತದ್ದು. ಕಣಮಾಡುವುದು, ಮೇಟಿಯ ನಾಟುವುದು, ತೆನೆ ಮುರಿಸಿ ಹಂತಿಯ ಕಟ್ಟುವುದು, ಮೇದೆ ಕಂಕಿಗಳ ವಿಂಗಡಿಸುವುದು, ತೂರಿ ರಾಶಿ ಮಾಡುವುದು ಮತ್ತು ಮೇಟಿಯ ರಾಶಿ, ಬೂದರಾಶಿ, ಕರಿಬಂಟ, ಬಿಳಿಬಂಟ, ಗೋಪಾಳರಿಗೆ ಧಾನ ಧರ್ಮಮಾಡುವುದು ಕಂಡುಬರುವ ಸನ್ನಿವೇಶಗಳಾಗಿವೆ. ಸುಗ್ಗಿಯಲ್ಲಿ ಅನೇಕ ಉಪಕರಣಗಳನ್ನು ಬಳಸಲಾಗುತ್ತದೆ. ಮೇಟಿ, ರೋಣಗಲ್ಲು, ಸೆಳ್ಳು, ರಾಘೋಲು, ಜಂತೆ, ಗುಂಟೆ, ಹತಿಗಣ್ಣಿ, ಮೆಟ್ಟುತಾಳು, ಗೋರುಮಣೆ, ಹಲಿಬೆ, ನ್ಯಾರೇದೊಣ್ಣೆ, ಮೊರ, ಮುಂತಾದವುಗಳಾಗಿವೆ. ಸುಗ್ಗಿಯ ಸಂಭ್ರಮ ರೈತರಲ್ಲಿ ತಾವು ಪಟ್ಟ ಶ್ರಮಕ್ಕೆ ಪ್ರತಿಫಲ ದೊರೆಯುವ ಕಾಲವಾಗಿದ್ದು. ರೈತರು ಒಕ್ಕಲುಮಾಡುವ ವಿಧಾನ ಪ್ರಾದೇಶಿಕವಾಗಿ ಭಿನ್ನತೆಯಿಂದ ಕೂಡಿದ್ದು. ಹವಮಾನ, ದೊರೆಯುವ ಸಲಕರಣೆಗಳು ರೈತರು ಕಂಡುಕೊಂಡಿರುವ ಸುಗ್ಗಿಯ ವಿಧಾನದಲ್ಲಿ ಭಿನ್ನತೆ ತೋರುತ್ತವೆ.

ಉತ್ತರ ಕರ್ನಾಟಕದ ಸುಗ್ಗಿಯ ಸಂಪ್ರದಾಯಗಳಿಗೂ, ಮಲೆನಾಡಿನ ಸುಗ್ಗಿಯ ಸಂಪ್ರದಾಯಗಳಿಗೂ ಅನೇಕ ವ್ಯತ್ಯಾಸಗಳುಂಟು. ಉತ್ತರ ಕರ್ನಾಟಕದಲ್ಲಿ ಬಯಲಿನಲ್ಲಿ ಕಣಮಾಡಿ ಒಕ್ಕಲುಮಾಡಿದರೆ, ಮಲೆನಾಡಿನಲ್ಲಿ ಮನೆಯ ಮುಂದೆಯೇ ಕಣಮಾಡುವ ಅಂಶಗಳು ಕಂಡುಬರುತ್ತವೆ. ಕನ್ನಡ ವಿಷಯ ವಿಶ್ವಕೋಶ ಜಾನಪದದಲ್ಲಿ ಮಲೆನಾಡು, ಬಯಲು ನಾಡಿನಲ್ಲಿ ಒಕ್ಕಲು ಮಾಡುವ ವಿಧಾನವನ್ನು ಸಂಗ್ರಹಿಸಿ ಹೀಗೆ ಹೇಳಲಾಗಿದೆ. "ಒಕ್ಕಲು ಮಾಡುವ ರೀತಿ ಬಯಲುನಾಡಿಗಿಂತ ಸ್ವಲ್ಪ ಭಿನ್ನವಾಗಿದೆ. ಮನೆಯ ಮುಂದೆಯೇ ಕಣ. ಬಯಲುನಾಡಿನಲ್ಲಾದರೆ ಆಯ ಹೊಲಗಳಲ್ಲಿಯೇ ಕಣ. ಹುಲ್ಲು ಹರಡುವುದನ್ನು ಬಯಲುನಾಡಿನಲ್ಲಿ 'ಹೆಗೆ' ಎಂದರೆ, ಮಲೆನಾಡಿನಲ್ಲಿ 'ನೆರಗು' ಎನ್ನುತ್ತಾರೆ. ಅಲ್ಲಿ ಪೂರ್ಣ ಬಣವೆ ಮುಗಿಯುವವರೆಗೂ ದವಸದ ರಾಶಿ ಮಾಡುವುದಿಲ್ಲವಾದರೆ, ಇಲ್ಲಿ ಎರಡೆರಡು

ನೆರಗಿಗೇ ರಾಶಿ ಮಾಡುತ್ತಾರೆ. ಎಲ್ಲೆಲ್ಲು ರೋಣಗಲ್ಲು (ಕಾಂಡಕಲ್ಲು) ಬಳಸುತ್ತಿರುವುದರಿಂದ ಮೇಟಿ ನೆಡುವುದಾಗಲಿ, ಹಂತಿ ಹೊಡೆಯುವದಾಗಲಿ ಕಾಣಸಿಗುವುದು ಅಪರೂಪ. ಮೊದಲ ಎರಡು ನೆರಗು ಮುಗಿಯುತ್ತಿದ್ದಂತೆಯೇ ಅವನ್ನು ದುಂಡಗೆ ಮಾಡಿ, ತೂರಿ ರಾಶಿ ಮಾಡುತ್ತಾರೆ. ರಾಶಿ ಮಾಡಿದ ಮನುಷ್ಯ ನೆರೆಕೋಲು, ಮೆರೆಕೋಲು ತೆಗೆದುಕೊಂಡು ಮುಳ್ಳು ಹಣ್ಣಿನ ಕಡೆಗೆ ಹೊರಡುತ್ತಾನೆ. ದಾರಿಯಲ್ಲಿ ಯಾರು ಮಾತನಾಡಿದರೂ ಮಾತಾಡುವುದಿಲ್ಲ ನೆರೆಕೋಲಿನಿಂದ ಮುಳ್ಳುಹಣ್ಣಿನ ಗಿಡಕ್ಕೆ ಹೊಡೆದು ಎಲೆಗಳನ್ನು ಉದುರಿಸಿ, ಒಂದು ಎಲೆಯನ್ನು ಅದರ ತುದಿಗೆ ಸಿಕ್ಕಿಕೊಂಡು ಕಣದ ಕಡೆ ಹೊರಡುತ್ತಾನೆ............".[೮೫] ಮಲೆನಾಡಿನಲ್ಲಿ ಒಕ್ಕಲುಮಾಡುವ ವಿಧಾನ ಇದಾಗಿದೆ. ಬಯಲು ಸೀಮೆಯ ಒಕ್ಕಲು ಪದ್ಧತಿಯ ಕುರಿತು "ಒಕ್ಕಲು, ಸುಗ್ಗಿ ವಿಶೇಷವಾದ ಕ್ರಿಯೆ. ದವಸಗಳ ವೈವಿಧ್ಯಮಯತೆಯಿಂದಾಗಿ ಅದು ವಾರಗಟ್ಟಲೇ, ತಿಂಗಳುಗಟ್ಟಲೇ, ನಡೆಯುತ್ತದೆ. ವಿರಾಮವಾಗಿ ಮನರಂಜನಾತ್ಮಕವಾಗಿ ಆ ಕೆಲಸ ನಡೆಯುತ್ತದೆ. ಕಣವನ್ನು ತಯಾರುಮಾಡುವುದೇ ಒಂದು ವಿಶೇಷ. ಜಾಗವನ್ನು ಆರಿಸಿ ಕೊಳೆಗಳಿದ್ದರೆ ಕೆತ್ತಿ ನೆಲಗಟ್ಟಿಯಾಗಲೆಂದು ಅದನ್ನು ದನಕರುಗಳಿಂದ ತುಳಿಸುತ್ತಾರೆ. ಅನಂತರ ನೀರು ಸಗಣಿ ಹಾಕಿ ಸಾರಿಸಿ ಮನೆಯ ಅಂಗಳದಂತೆ ನಯಗೊಳಿಸುತ್ತಾರೆ. ಅದರ ಮಧ್ಯಭಾಗದಲ್ಲಿ ಮೇಟಿ ಗೂಟ ನೆಡಿಸಲು ಮುಹೂರ್ತ ಕೇಳಿ ಸುಮಾರು ಎಂಟು ಅಡಿ ಎತ್ತರದ ಬನ್ನಿಮರದ ತುಂಡೊಂದನ್ನು ಕತ್ತರಿಸಿಕೊಂಡು ಬರುತ್ತಾರೆ. ಎರಡು ಅಡಿ ಆಳದ ತಗ್ಗು ತೆಗೆದು, ತಗ್ಗನ್ನು ಪೂಜೆಮಾಡಿ ಎಡೆ ಹಿಡಿದು ಪಾವಲಿಸಮೇತ ಅದನ್ನು ಹುಗಿದು ಗೂಟ ನೆಟ್ಟು ಭದ್ರಪಡಿಸುತ್ತಾರೆ. ಹೆಣೆಯ ಪ್ರಮಾಣಕ್ಕನುಗುಣವಾಗಿ ದೀಪಾವಳಿಯಂದು ಇದೇ ಉದ್ದೇಶಕ್ಕಾಗಿ ತೆಗೆದಿಟ್ಟ ಬೂದಿಯಿಂದ ಪಂತಿ ಕಟ್ಟುತ್ತಾರೆ. ಮೇಟಿಯ ಸುತ್ತ ಸಣ್ಣ ಪಂತಿಯಿಂದ ಶುರುವಾದ ಇದು ಹೆಣೆಯ ಸುತ್ತ ದೊಡ್ಡದಾಗಿ ನಾಲ್ಕು ಸಣ್ಣ ಸುತ್ತುಗಳನ್ನು ಅಲ್ಲಿ ಪಡೆಯುತ್ತದೆ. ಇದನ್ನು 'ಕರಿಬಂಟನನ್ನು ಕಟ್ಟುವುದು' ಎಂದು ಕರೆಯುತ್ತಾರೆ. ಶೂರನಾಗಿದ್ದ ಕರಿಬಂಟ ತಮ್ಮ ಹೆಣೆಯನ್ನು ಕಾಯುತ್ತಾನೆಂಬ ನಂಬಿಕೆ ಅವರಲ್ಲಿ ಒಡಮೂಡುತ್ತದೆ. ಪೈರುಗಳನ್ನು ಹಾಕಿ ಹಂತಿ ಹೊಡೆಯುತ್ತಾರೆ. ಹಂತಿ ಹೊಡೆಯುವಾಗ ಅವರು ಹಾಡುವ ಪದಗಳು ಪ್ರಸಿದ್ಧವಾಗಿವೆ. ಇಡೀ ರಾತ್ರಿ ದನಗಳಿಗೂ ರೈತರಿಗೂ ಬೇಸರವನ್ನು ನೀಗಿಸಿ, ಹುರುಪು ಹುಮ್ಮಸ್ಸನ್ನಿಯುತ್ತವೆ. ....".[೮೬] ಎಂದು ಹೇಳಲಾಗಿದೆ.

ಧಾನ್ಯವನ್ನು ಒಕ್ಕಲು ಮಾಡಲು ಮೊದಲೂ ಕಣದ ತಯಾರಿ ಮಾಡುವುದು ಮುಖ್ಯವಾದ ಕೆಲಸವಾಗಿದೆ. ಕಣದ ತಯಾರಿಯ ವಿಧಾನ ಕುರಿತು ಜೈಮಿನಿಭಾರತದಲ್ಲಿ ಮಾಹಿತಿದೊರೆಯುತ್ತದೆ. "...............ಚತುರ್ಬಲವಂ ಬಹಳ ಗಿರಿಪುರ ದೇಶವನ ಪಳ್ಳಕೊಳ್ಳಂಗಳಂ ತುಳಿದು ಕಣದ ಘಟ್ಟಣೆಯಂತೆ ಸಮಮಾಗಲು...............".[೮೭] ಚತುರ್ಬಲ ಸೈನ್ಯದಿಂದ ಯಾಗಮಾಡುವ ಜಾಗವನ್ನು ಸಮತಟ್ಟು ಮಾಡುವ ವರ್ಣನೆ ಇಲ್ಲಿದೆ. ಆದರೂ ಕವಿಗೆ ರೈತರ ಬದುಕಿನಲ್ಲಿ ಹಾಸೊಹೊಕ್ಕಿರುವ ಕಣ ಮಾಡುವ ವಿಧಾನ ಪ್ರೇರಣೆಯನ್ನು ನೀಡಿದೆ. ಆದ್ದರಿಂದ ಕಣವನ್ನು ಮಾಡುವ ಮೊದಲೂ ಹೇರು ತಗ್ಗುಗಳ ಸಮಮಾಡಿ, ಎಲ್ಲಾ ಗಟ್ಟಿಯಾಗುವಂತೆ ತುಳಿದು ಪೆಟ್ಮಣೆಗಳಿಂದ ಬಡಿದು ದಮಾಸು ಮಾಡಿ ಕಣವನ್ನು ತಯಾರಿಸುವ ವಿಧಾನದ ವರ್ಣನೆ ಮಾಡಿದ್ದಾನೆ. ಹೊಡೆ ಹುಲ್ಲು ಬಂಕಣ್ಣಗಳ ವಚನದಲ್ಲಿ "ಧರೆಯ ಮೇಲೆ ಬಿದ್ದಬೀಜ ಧರೆಯಲ್ಲಿಯೇ ಅಳಿದು ಆಕಾಶದಲ್ಲಿ ಫಲವಾಯಿತ್ತು. ಆ ಫಲವ ಬಯಲಕಣದಲ್ಲಿ ಒಕ್ಕಿ ಮನದ ಹಗಹದಲ್ಲಿ ತುಂಬಿ............".[೮೮] ಈ ವಚನದಲ್ಲಿ ಕಣದ ಉಲ್ಲೇಖ ಕಂಡು ಬರುತ್ತದೆ. ಇಡೀ ಸುಗ್ಗಿಯ ವಿಧಾನ ಕುರಿತು ಅನೇಕ ಜನಪದ ಕವಿಗಳು ಹಾಡುಕಟ್ಟಿ ಹಾಡಿದ್ದಾರೆ. ಒಕ್ಕಲಿಗನ

ಕಣದಲ್ಲಿ ಬಸವಣ್ಣನನ್ನು ಹಿಗ್ಗಿನಿಂದ ಧನ್ಯತೆಯಿಂದ ಹಾಡಿಹೊಗಳಿದ್ದಾರೆ. ಒಬ್ಬ ಜನಪದ ಕವಿ ಹೀಗೆ ಬಣ್ಣಿಸುತ್ತಾನೆ.

"ಸುಗ್ಗಯಲ್ಲಿ ಒಕ್ಕಲಿಗ ಉಗ್ಗಡಿಸಿ ಹಾಡುವನು
ಕಗ್ಗಾಯ ತುಂಬಿ ಹಣ್ಣಾಗಿ । ಕಣತುಂಬಿ
ಹಿಗ್ಗುವುದು ಲೋಕರಸ ಕುಡಿದು ॥
ಬಸವ ಹಲೆ ಹಲೆ ಹಂತಿ ಬಸವ ಹಲೆ ಹಲೆ ರಾಶಿ
ಬಸವ ಹುಲು ಹುಲುಸು ಕಣ ಕಣಕೆ । ಒಕ್ಕಲಿಗ
ಬಸವ ಹೊಲಗೆಲಸ ಕಡೆತನಕ".[೫೯]

ಒಕ್ಕಲಿಗರು ದಿನನಿತ್ಯ ಬಳಸುವ ಹಾಡು ಮಾತುಗಳು ಜನರ ನಾಲಿಗೆಯ ಮೇಲೆ ನಲಿದಾಡುವಂತೆ ಮಾಡಿದ್ದಾನೆ. ಉತ್ತು, ಬಿತ್ತು, ಎತ್ತು, ಕಗ್ಗಾಯಿ, ಹಣ್ಣು, ಕಣ, ರಾಶಿ, ಹುಲುಸು, ಹಂತಿ, ಕಣ, ಒಕ್ಕಲಿಗ, ಸೂಡು, ಗೂಡು ಮುಂತಾದ ಸುಗ್ಗಿಯಲ್ಲಿ ಬಳಸುವ ಪದಗಳ ಉಲ್ಲೇಖ ಕಂಡು ಬರುತ್ತದೆ.

ಒಕ್ಕಲುತನ ಕಾಯಕದ ವಚನಕಾರ ಒಕ್ಕಲಿಗ ಮುದ್ದಣ್ಣಗಳ ವಚನದಲ್ಲಿ ಕ್ರಮಬದ್ಧವಾಗಿ ಸಮಗ್ರ ಸುಗ್ಗಿಯ ವಿಧಾನ ತಿಳಿಯಬಹುದಾಗಿದೆ. ಅದು ಹೇಗೆಂದರೆ

"..................ಕೊಯ್ದುಂಬ ಪರಿ ಇನ್ನಾವುದಯ್ಯ ಎಂದಡೆ
ಇಷ್ಟವೆಂಬ ಕುಡಗೋಲಿಗೆ ಪ್ರಣವವೆಂಬ ಹಿಡಿಯಂತೊಡಿಸಿ
ಭಾವವೆಂಬ ಹಸ್ತದಿಂಬ ಪಿಡಿದು, ಜನನದ ನಿಲವಂ ಕೊಯ್ದು
ಮರಣದ ಸಿವುಡ ಕಟ್ಟಿ, ಆಕಾಶವೆಂಬ ಬಣವೆಯನೊಟ್ಟಿ
ಉನ್ಮನಿಯೆಂಬ ತೆನೆಯನ್ನರಿದು, ಮನೋರಥವೆಂಬ ಬಂಡಿಯಲ್ಲಿ ಹೇರಿ
ಮುಕ್ತಿಯೆಂಬ ಕೋಟಾರಕ್ಕೆ ತಂದು
ಅಷ್ಟಾಂಗ ಯೋಗವೆಂಬ ಜೀವಧನದಿಂದೊಕ್ಕಿ
ತಾಪತ್ರಯದ ಮೆಟ್ಟನೇರಿ, ಪಾಪದಹೊಟ್ಟತೂರಿ
ಪುಣ್ಯದ ಬೀಜಮಂ ತಳೆದು..................".[೬೦]

ಕೊಯ್ಯಲಿಗೆ ಬಂದ ಬೆಳೆಯ ಕೊಯ್ಯಲು ಮಾಡಿ ಒಕ್ಕಲು ಮಾಡುವ ಇಡೀ ಕ್ರಿಯೆಯನ್ನು ಆಧ್ಯಾತ್ಮಿಕತೆಯ ಹಿನ್ನಲೆಯಲ್ಲಿ ಹೇಳಿದರೂ ಒಕ್ಕಲು ಕುರಿತಾದ ಕ್ರಿಯೆಯ ಸ್ಪಷ್ಟೀಕರಣ ಕಾಣುತ್ತದೆ. ಕೊಡುಗೋಲಿನಿಂದ ನಿಲುವು ನಿಂತ ಬೆಳೆಯ ಕೊಯ್ದು ಸಿವುಡು ಕಟ್ಟಿ, ಪಿರಾಮಿಡ ಆಕಾರದಲ್ಲಿ ಬಣವೆ ಹಾಕಿ, ಒಣಗಿ ಪಕ್ವತೆ ಪಡೆದ ತೆನೆಗಳನ್ನು ಬೇರ್ಪಡಿಸಿ ಬಂಡಿಯಲ್ಲಿ ಕಣಕ್ಕೆ ತಂದು ಒಕ್ಕಲು ಮಾಡಿ ತೂರುವ ಮೆಟ್ಟನ್ನು ಹೇರಿ ಜೋಳ್ಳು ಹೊಟ್ಟು ಗಾಳಿಗೆ ತೋರಿ, ಗಟ್ಟಿ ಕಾಳುಗಳ ಪಡೆಯುವ ಸುಗ್ಗಿಯ ವಿಧಾನ ಕಂಡು ಬರುತ್ತದೆ.

ಸಮಜದಲ್ಲಿ ಒಕ್ಕಲಿಗರು ತನ್ನಗಳಿಕೆಯನ್ನು ಹೇಗೆ ಬಳಸುತ್ತಿದ್ದರು ಎಂಬುದಕ್ಕೆ ಇಳಿಹಾಳ ಬೊಮ್ಮಯ್ಯನ ಹಂತಿಯ ಹಾಡಿನಲ್ಲಿ ಹೀಗೆ ಹೇಳುತ್ತಾನೆ.

"ಕಡೆಯ ಬಲಕಿನತಾಳ ಎಡೆಯಾತ್ತು ಅರಸನಿಗೆ
ಎಡಗಡೆಯ ತಾಳ ಪಶುಪಕ್ಕಿ । ಜೀವನಕೆ
ನಡುಪಿನ ತಾಳ ರೈತನಿಗೆ ।

ಒಂದು ತಾಳದ ಬೆಳೆಯ ಬಂದವರಿಗಿಲ್ಲೆನ್ನೆ
ಮುಂದು ಕೊಡುಗೈಯು ಒಕ್ಕಲಿಗ । ನಾಡೊಳಗೆ
ಹೊಂದಿ ದಾಸೋಹ ಶಿವಮತಕೆ".[೯೧] ಎನ್ನುತ್ತಾನೆ.

ಹಂತಿಯ ಹಾಡು ಪದವೆಂದು ಕರೆಸಿಕೊಳ್ಳುವ ಈ ತ್ರಿಪದಿಗಳು ಬೀಸುವ ಮತ್ತು ಒಕ್ಕಲು ಮಾಡುವ ಸಂದರ್ಭದಲ್ಲಿ ಬಳಕೆಯಾಗುತ್ತವೆ. ಎರಡು ಸಂದರ್ಭ ಗಮನಿಸಿದರೆ ಶ್ರಮದ ಪರಿಹಾರಕ್ಕಾಗಿ ಇಂತಹ ಹಾಡುಗಳು ಹುಟ್ಟಿಕೊಂಡಂತೆ ಕಂಡರೂ ಅವುಗಳು ಹಿಂದಿನ ಉದ್ದೇಶ, ತ್ರಿಪದಿಯ ಮೂರು ಸಾಲುಗಳಲ್ಲಿ ವಸ್ತು, ಲಯ, ಧಾಟಿಯನ್ನು ಹೊಂದಿಸಿಕೊಂಡು ತಮ್ಮ ಅನುಭವದ ಮಾತುಗಳನ್ನು ಕಟ್ಟಿಕೊಡುವುದಾಗಿದೆ. ಹಂತಿಯ ಹೊಡೆಯುತ್ತ, ರಾಗೋಲಿನಿಂದ ತೆನೆ ಎಳೆಯುತ್ತ, ರಾತ್ರಿ, ಮಧ್ಯರಾತ್ರಿ, ಕಡೆರಾತ್ರಿಯವರೆಗೆ ತಮ್ಮ ಪಾಡನ್ನು ಹಾಡಿಕೊಳ್ಳುವ ಇಂತಹ ಕ್ರಿಯೆಗಳೇ ಹಂತಿಯ ಹಾಡುಗಳು "ಹಂತಿ ಮುಖ್ಯವಾಗಿ ಒಂದು ಕೆಲಸದ ಪ್ರಕ್ರಿಯೆ ಆದುದರಿಂದ ಈ ಕೆಲಸದ ಪ್ರಕ್ರಿಯೇಯನ್ನು ದಾಖಲಿಸುವುದನ್ನೆ ಹಂತಿಯ ಹಾಡುಗಳು ಮಾಡುತ್ತಿವೆ".[೯೨] ಎನ್ನಲಾಗಿದೆ. ಕುಂಬಾರ ಗುಂಡಯ್ಯನ ಹಂತಿ ಹಾಡಗಳನ್ನು ಗಮನಿಸಬಹುದು.

"ಸುಗ್ಗಿಯ ಕಣಕೇಳೊ, ಸಗ್ಗುವದು ರೈತರಿಗೆ
ಹಿಗ್ಗಿ ಹಾಡುವದಕೆ ಬೆಳವಲವು । ಜಾಡಯ್ಯ
ಬುಗ್ಗೆ ಕುಣಿಯುದಕೆ ಶಿವರೂಪ ॥
ಕುಣಿ ಕುಣಿದು ಜಾಡಯ್ಯ, ಮಣಿ ಮಣಿದು ಹಾಡಿದರೆ
ಕಣತುಂಬಿ ರಾಶಿ ಹೊರಸೂಸಿ । ಒಕ್ಕಲಿಗ
ಮಣಿದು ದಾಸೋಹ ಹೊಸಮತಕೆ".[೯೩]

ಸುಗ್ಗಿಯ ಕಣ ರೈತರಿಗೆ ಸ್ವರ್ಗವಿದ್ದಂತೆ. ಶರಣರು ಹುಲುಸನ್ನು ನೀಡುವ ಶಿವನ ಭಂಟರು ಎಂಬ ಭಕ್ತಿಯ ಭಾವ ವ್ಯಕ್ತವಾಗಿದೆ. ಹಂತಿಯ ತಿರುಗುವ ಬಸವಣ್ಣನ ಸುಂಕವನ್ನು ತನ್ನ ಸೇರಗಿನಿಂದ ಜಾಡಿಸುವ ಹೆಣ್ಣುಮಗಳ ಚಿತ್ರವಂತು ಕಣ್ಣಿಗೆ ಕಟ್ಟುವಂತದ್ದು.

"ಹಂತಿಯ ಹೊಡೆದೆತ್ತು, ಹಂತೇಲಿ ಬಂದಾರ
ಸುಂಕ ಜಾಡಿಸದೆ ಸೆರಗೀಲೆ । ಕಂದನಿಗೆ
ಹಂತಿಯ ಎತ್ತು ಹದಿನೆಂಟು".[೯೪] ಇಂತಹ ತ್ರಿಪದಿಗಳಲ್ಲಿ ಸುಗ್ಗಿಯ ಅನೇಕ ಅನುಭವ ನೀಡುವಂತಹವುಗಳು ಹೇರಳವಾಗಿ ದೊರೆಯುತ್ತವೆ.

ಸುಗ್ಗಿಯ ಸಂಪ್ರದಾಯಗಳಲ್ಲಿ ಅನೇಕ ಸಂಪ್ರದಾಯಗಳನ್ನು ರೈತರು ಆಚರಿಸುತ್ತಾರೆ. ಪ್ರಾದೇಶಿಕವಾಗಿ ಅನೇಕ ಭಿನ್ನತೆಯನ್ನು ಕಂಡರೂ ಆಚರಣೆಯ ಹಿಂದಿನ ಉದ್ದೇಶ ಮಾತ್ರ ಒಂದೇ ಆಗಿರುತ್ತದೆ. ಕರಿಬಂಟ, ಬಿಳಿಬಂಟ, ಬೂದುಗನ ಕುರಿತು ಬಿ.ಎಸ್. ಗದ್ದಗಿಮಠರವರು ಹೀಗೆ ಹೇಳುತ್ತಾರೆ. "ತೂರುವ ಮೆದಕ್ಕೆ ಬಿಳಿಬಂಟನನ್ನು, ರಾಶಿಗೆ ಕರಿ ಬಂಟ ಅಥವಾ ಬಿಳಿಬಂಟನನ್ನು ಕಟ್ಟುವ ಸಂಪ್ರದಾಯವು ಸುಗ್ಗಿಯ ಕಣದಲ್ಲಿ ಉಂಟು. ಈ ಕರಿಬಂಟ ಬಿಳಿಬಂಟರು ಯಾರು ? ಎಂಬುದನ್ನು ವಿಚಾರ ಮಾಡಬೇಕಾಗಿದೆ. ಕಣದ ರಾಶಿಯನ್ನು ಕಾಯಲು ಉಗ್ರವೀರ ಬಂಟ ವೀರಘಂಟೆಯ ಮಡಿವಾಳನಿಗೆ ಒಕ್ಕಲಿಗನು ಕರಿಬಂಟನೆಂದೂ, ಮತ್ತು ಪಾವನ ಭಕ್ತಿಯುಳ್ಳ ಮಹಾಶರಣ ಹರಳಯ್ಯನಿಗೆ ಬಿಳಿಬಂಟನೆಂದು

ಕರೆದಿರುವನು. ಕರಿಬಂಟನೆಂದರೆ ಈಗಿನ ಒಕ್ಕಲಿಗನಿಗೆ ಕಂಕಿಯ ಸುಟ್ಟ ಕರುಕಾಗಿದೆ. ಬಿಳಿಬಂಟ ಎಂದರೆ ಕಣದ ದಂಡೆಯ ಮೇಲಿರುವ ಒಲೆಯ ಬೂದಿಯಾಗಿದೆ".[೬೫] ಬೂದುಗ ಎಂದರೆ ಅಲ್ಲಮಪ್ರಭು ಕಣದಲ್ಲಿ ಪೂಜೆಗೊಳ್ಳುವ ಬುದ್ದಿವಂತಲಿಂಗ ಎಂದು ಹೇಳುತ್ತಾರೆ. ಈಗ ಅದು 'ಬೂದುಗ' ಎಂದು ಕಣದಲ್ಲಿ ಕರೆಯುತ್ತಾರೆ. ಇಂದು ಕೂಡ ಕಣದಲ್ಲಿ ಒಂದು ಸಣ್ಣ ರಾಶಿ ಮಠಕ್ಕೆ ಸಲುವುದನ್ನು ಕಾಣಬಹುದು. ವೀರಣ್ಣ ದಂಡೆಯವರು ದೇಶೀ ಎಂಬ ಲೇಖನದಲ್ಲಿ ಹೀಗೆ ಬರೆಯುತ್ತಾರೆ. "ಬುದ್ದಿವಂತಯ್ಯ, 'ಬುದ್ದಯ್ಯ' ಬೂದ್ದಯ್ಯ' ಎಂಬ ಹೆಸರುಗಳು ವೀರಶೈವರಲ್ಲಿ ಹೆಚ್ಚಾಗಿ ಕಂಡು ಬರುವವು............ಮಹಾ ಜ್ಞಾನಿಯಾದ ಅಲ್ಲಮನಿಗೆ...........ಒಕ್ಕಲಿಗರಾದ ವೀರಶೈವರು...........ತಮ್ಮ ಕಾಯಕದಲ್ಲಿ.......... ಮುಖ್ಯಸ್ಥಾನವನ್ನಿತ್ತು, ಕಣದಲ್ಲಿ ಬೂದ್ದಿವಂತ ಲಿಂಗನೆಂದು ಪೂಜೆಮಾಡಿದ್ದಾರೆ. ಅಲ್ಲದೆ ಸುಗ್ಗಿಯ ಉಪಕರಣ ಸೆಳ್ಳು, ರಾಗೋಲು, ಜಂತೆಗುಂಟೆ, ಹತ್ತಿಗಣಿ, ಮೆಟ್ಟು...........ಮೊದಲಾದ ಈ ಉಪಕರಣಗಳು ಒಬ್ಬೊಬ್ಬ ಶರಣರ ಹೆಸರಿನೊಡನೆ ಈಗ ಸಂಪ್ರದಾಯಗಳಾಗಿ ಬಳಕೆಯಲ್ಲಿವೆ".[೬೬] ಎಮ್.ಎಸ್. ಲಠ್ಠೆಯವರು ತಮ್ಮ ಉತ್ತರ ಕರ್ನಾಟಕದ ಹಂತಿ ಹಾಡುಗಳು ಎಂಬ ಸಂಕಲನಕ್ಕೆ ಪ್ರಸ್ತಾವನೆ ಬರೆಯುತ್ತಾ 'ಬೂದುಗ' ಅಲ್ಲಮಪ್ರಭುವಿನ ಸಂಕೇತ ಎಂಬ ಮಾತನ್ನು ಅನುಮೊದಿಸುತ್ತಾ, ರಾಶಿಯಲ್ಲಿ ಸಣ್ಣದೊಂದು ರಾಶಿಮಾಡುತ್ತಾರೆ. ಅದಕ್ಕೆ ಬೂದುಗನ ರಾಶಿಯೆಂಬ ಹೆಸರಿನಿಂದ ಕರೆಯುತ್ತಾರೆ ಎಂದು ಅಭಿಪ್ರಾಯ ಪಡುತ್ತಾರೆ.

ಹಂತಿಯ ಮುಕ್ತಾಯ ಕರಿಬಂಟನನ್ನು ಮಾಡುವ ಮೂಲಕವಾಗುತ್ತದೆ. ಅದಕ್ಕಿಂತ ಮುಂಚೆ ಹಂತಿಯ ಎತ್ತುಗಳ ಬಿಚ್ಚುವ ಅಂಶ ಈ ಕೆಳಗಿನ ತ್ರಿಪದಿಯಲ್ಲಿ ನೋಡಬಹುದು.

"ಹಂತಿ ಹತ್ತಿಗಿ ಬಂತು ಕಂಕಿ ಕಡಿಯಕ ಬಂತು
ಕಂಚಿನಾರೋತಿ ಬೆಳೆಗ್ಯಾರ । ಬಸವಣ್ಣ
ಹಂತಿಯ ಕೊಳ್ಳ ಹರದಾರೋ".[೬೭] ಬಸವಣ್ಣನಿಗೆ ಕಂಚಿನ ತಾಟಿನಲ್ಲಿ ಮುತ್ತೈದೆರು ಆರತಿ ಬೆಳಗಿ ಹಂತಿ ಬಿಚ್ಚುತ್ತಾರೆ. ಮುಂದೆ ಕರಿ ಬಂಟನ ರೂಹ ಕಣದಲ್ಲಿ ಬರೆಯುತ್ತಾರೆ. ರವದಿ ಸುಟ್ಟು ಕರಕದಿಂದ ಮಂಡಲ ಬರೆಯುತ್ತಾರೆ. ಬಂಟ ಎಂದರೆ ಕಾಪಾಡುವ ಶಕ್ತಿ, ವೀರ ಎಂಬ ಅರ್ಥಗಳಿವೆ. ಕರಿಬಂಟನ ಕುರಿತು ಹಂತಿಯ ಹಾಡುಗಳನ್ನು ಈ ರೀತಿ ಹೇಳಲಾಗಿದೆ.

"ಮದನ ಮನಗಿಸಬೇಕು ।ಮಂಡಲ ಬರೀಬೇಕು
ಸುತ್ತ ಕರಿಬಂಟನ ಕಟ್ಟಬೇಕು ।
ಕರಿಹನುಮ ನಿನ್ನರೂಹ ಬರೆದೆವು ಬಂಡಿಯಮ್ಯಾಲ
ಸಗರ ಶಾಪುರದ ಕರಿಹನುಮ । ನಿನನಾಮ
ಬರೆದೇವು ನಮ್ಮ ಕಣದಾಗ".[೬೮] .... ಈ ಕರಿಬಂಟ ಕರಿಹನುಮ ಎಂಬ ಸುಳುವು ಇಲ್ಲಿ ದೊರೆಯುತ್ತದೆ. ಹನುಮಂತನು ದುಷ್ಟಶಕ್ತಿಯ ಸಂಹಾರಕನು, ಆತನ ಕರಿಯ ನಿಶಾನೆಯನ್ನು ತಮ್ಮ ಕಣದಲ್ಲಿ ಹಾಕಿ ದುಷ್ಟವಿದ್ಯೆಗಳಿಗೆ ಕಣಕ್ಕೆ ಪ್ರವೇಶ ಇಲ್ಲದಂತೆ ಮಾಡಲಾಗುತ್ತದೆ.

ರಾಶಿ ತೂರುವ ಕೊನೆಯ ಕೆಲಸವನ್ನು ತುಂಭ ನಿಷ್ಠೆ ಶ್ರದ್ಧೆಗಳಿಂದ ಹಂತಿಯ ಹಾಡಿನಲ್ಲಿ ಹಾಡುತ್ತಾರೆ.

"ಮೂಡಲ ಮಾರಿಗಿ ಮೂಲ ನಕ್ಷತ್ರ ತಿಳಿಯಬೇಕು
ಊದನೀಡಿ ಕುಂತು ಮದನ ಪಡಿಬೇಕು । ರಾವ ತಿಳಿಯಬೇಕು

ಮೂಲಿಯ ಗಾಳಿಬಿಟ್ಟು ಮುತ್ತು ಸುರದಂಗಾಯ್ತು
ಮತ್ತಬಾ ಓಲಿಗ ಅನುತಿದ್ದರೊ । ಬುಟ್ಟಿ ಕೊಡುತ್ತಿದ್ದರೊ".[೯೯]

ಹಂತಿ ನೆಡೆದಾಗ ಮತ್ತು ಮದನ ತೂರುವಾಗ ಒಕ್ಕಲಿಗರು ಓಲಿಗ್ಯೋ ಓಲಿಗೋ, ಎನ್ನುತ್ತಾರೆ. ರಾಶಿ ಹುಲುಸಾಗಲಿ ಎಂದು, ತೂರುವ ಕೆಲಸಕ್ಕೆ ಗಾಳಿ ಅನುಕೂಲಕರವಾಗಿ ಬೀಸಲಿ ಎಂದು ಕೂಗುತ್ತಾರೆ.

ಒಟ್ಟಾರೆಯಾಗಿ ಸುಗ್ಗಿಯ ವಿಧಾನದಲ್ಲಿ ಕಣ ಮಾಡುವುದು ಮೇಟಿಯನ್ನು ಬನ್ನಿಯ ಮರದಿಂದ ತಯಾರಿಸಿ ನೆಡುವುದು. ಮೇಟಿ ಸುತ್ತ ತೆನೆ ಹರಡಿ ತುಳಿಸುವುದು. ನಂತರ ಕಂಕಿಯ ಬೇರೆ ಕಾಳು ಬೇರೆ ಮಾಡಿ, ಗಾಳಿಯಿಂದ ತೂರಿ ರಾಶಿ ಮಾಡುವುದು ಕೊನೆಗೆ ಕಣದ ಮೇಟಿಯ ಕೀಳುವುದು, ರಾಶಿಯ ಮನೆಗೆ ತಂದು ಹಗೇವು, ಪಣತ, ಕಣಜಗಳಲ್ಲಿ ಸಂಗ್ರಹಿಸುವುದು. ಇವೆಲ್ಲ ಕ್ರಿಯೆಗಳನ್ನು ರೈತರು ಸುಗ್ಗಿಯ ವೇಳೆ ನಿರ್ವಹಿಸುತ್ತಾರೆ. ಆದರೆ ಇಂದು ಸುಗ್ಗಿಯ ಸಂಭ್ರಮ ಆಧುನಿಕತೆಯ ಸ್ಪರ್ಶದಿಂದ ಹಾಳಾಗಿದೆ. ಸುಗ್ಗಿಯ ವಿಧಾನಗಳು ಬದಲಾಗಿವೆ. ಹೊಲ ಗದ್ದೆಯಲ್ಲಿಯೇ ಕಾಳು ಬೇರೆ ಮಾಡುವ ಬಣವೆ ಹಾಕಿದ ನಂತರ ಸಿಕ್ಕ ಸಿಕ್ಕ ಸ್ಥಳದಲ್ಲಿ ಕಾಳುಗಳು ಬಿಡಿಸುವಂತಹ ಯಂತ್ರಗಳು ಬಂದು ಸುಗ್ಗಿಯ ಕೆಲಸ ಮರೆತು ಹೋಗುವ ದಿನಗಳು ಬಂದಿವೆ. ವಚನದ ಪಿತಾಮಹ ಫ.ಗು. ಹಳಕಟ್ಟಿಯವರ ಮಾತು ಕೇಳಿದರೆ ಬದುಕು ಇರುವ ತನಕ ಹಂತಿಹಾಡು ಹಾಡುತ್ತೇನೆ ಎಂಬ ಅವರ ದಿಟ್ಟತನದ ಮಾತು ರೈತ ಸಮುದಾಯಕ್ಕೆ ಸ್ಫೂರ್ತಿಯ ಸೆಲೆಯಾಗಿದೆ. 'ಅಲ್ಲೋ ಮಾರಾಯ ಹಂತೀನೇ ಕಳಕೊಂಡೀವಿ ನೀ ಇನ್ನಾ ಹಂತೀಕಳಕೊಂಡಿಲ್ಲ, ವಿಜ್ಞಾನದ ಸಂತ್ಯಾಗ ಹಾದೀತಪ್ಪಿದ ಅಜ್ಞಾನಿಗಳು ಕೊಡ ನೀನೊ ಧನಿಗೂಡಸಬ್ಯಾಡ, ಹಂತಿಯೆಂದರ ಹಂತಿಕೂಡಿ ಉಣ್ಣುವ ಪಂತಿ. ಕೊಟ್ಟ ಬಸವಗ ಕೊಡುಹಂತಿ ಜಗದಾಗ ನಿಲ್ಲದ ಸಾಗುವ ಈ ಸಂತಿ ಹೀಂಗ (ಪಂಕ್ತಿ) ಪಂತಿ ಇರೂಮಟಾ, ಸಂತಿ ಇರೂಮಟಾ ಈ ಹಂತಿ ಇದ್ದ ಇರತದ. ಹ್ಯಾಂಗ ಅಂದರತ, ಬೀಜ ಇರೂಮಟಾ ಬೆಳಿ, ಬೆಳಿ ಹೊಟ್ಯಾಗ ತಾಳ, ತಾಳಿನ ಹೊಟ್ಯಾಗ ಬದುಕು ಇದ್ದಾಂಗ. ಕಾಳು ಇದ್ದ ಬಳಿಕ ಕಣ ಇಲ್ಲಂದ್ರ ಹ್ಯಾಂಗ್ರೋ ಹುಚ್ಚಪ್ಪಗೋಳ್ರ್ಯಾ ಅಂತ ನಗ್ತಾರ ಬಲ್ಲೋರು. ರಾಶಿ ರೂಪ ಬದಲಾದರ ಹಾಡ ಕಳಕೋಬೇಕೇನು ? ನಾನು ನಿರಂತರ ಅನ್ನುದಾದರ ಹಾಡು ನಿರಂತರ ಅನಬೇಕಾಗ್ತದ. ಅಂತ ಈ ಹಂತೀಹಾಡು ಕಟ್ಟಿಹಾಡ್ತೀನಿ" ಎಂದು ದಿನಪತ್ರಿಕೆಯಲ್ಲಿ ಪ್ರಕಟವಾದ 'ವಚನಗುಮ್ಮಟ ಹಳಕಟ್ಟಿ' ಎಂಬ ಲೇಖನದಲ್ಲಿ ಹಂತಿ ಕುರಿತು ಬಿ.ಆರ್.ಪೋಲಿಸ್ ಪಾಟೀಲ್ ರವರು ಮೇಲಿನಂತೆ ಅಭಿಪ್ರಾಯ ಪಡುತ್ತಾರೆ.

೩. ಬೆಳೆಗಳ ಬಳಕೆಯ ವಿಧಾನ

ಕೃಷಿಕರು ತಾವು ಬೆಳೆದ ಬೆಳೆಯನ್ನು ಹೇಗೆ ಬಳಸುತ್ತಾರೆಂದರೆ ಕಣದಿಂದ ತಂದ ಬೆಳೆಗಳ ಸಂಗ್ರಹಣೆ ಮತ್ತು ತನಗೆ ಬೇಕಾದ ವಸ್ತುಗಳನ್ನು ಕೊಂಡುಕೊಳ್ಳಲು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದು, ಧಾನ್ಯಗಳಿಗೆ ಹುಳು ಹತ್ತದಂತೆ, ನೀರಿನಿಂದ ನೆನೆಯದಂತೆ, ತೇವಾಂಶದಿಂದ ಹಾಳಗದಂತೆ, ಹಾಗೂ ಇಲಿ ಇರುವೆಯಂತಹ ಕ್ರಿಮಿ-ಕೀಟಗಳಿಂದ ರಕ್ಷಣೆಯನ್ನು ಮಾಡಿಕೊಳ್ಳುತ್ತಾರೆ. ಧಾನ್ಯಗಳ ಸಂಗ್ರಹದ ವಿಧಾನ ಕೃಷಿಯ ಪ್ರಾರಂಭದಿಂದಲೇ ಬಂದಿರುವಂತದ್ದು. ಪ್ರಾರಂಭದಲ್ಲಿ ನಾಳೆಯ ಜೀವನಕ್ಕಾಗಿ ಸಂಗ್ರಹಿಸುವುದರ ಅನಿವಾರ್ಯತೆಯನ್ನು ರೈತರು ಕಂಡು ಕೊಂಡಿದ್ದರು. ಈ ಕಾರಣದಿಂದ ತನಗೆ ಬೇಕಾದ ಅನೇಕ ಸಂಗ್ರಹಣೆಯ ಉಪಕರಣಗಳನ್ನು ತಯಾರಿಕೆ ಮಾಡಿಕೊಂಡು ಬಳಸಲು ತೊಡಗಿರಬಹುದು. ಅಂತವುಗಳಲ್ಲಿ "ಕಣಜ, ಹಗೆವು, ಪಣತಾ ಹೆಡಿಗೆ, ಗೂಡು, ಓಡೆ, ಕುದಿರ್, ಕೊಡ್ಸು, ಕೊಳಗ, (ಕಡಾಯಿ), ಗಡಗಿ, ಗಾದಿ, ಗುಡಾಣ, ಗುಡಾರಾಪಟ್ಟಿ, ಗುಮ್ಮಿ, ಗುಳಿ,

ಅಂಬರ್ಕಾನಿ, ಗೊದಾಮು, ಗ್ವಾನೆ, ಚಾಳಿ, ಟಾರ್ಪಾಲು, ಬಿದರತಟ್ಟಿ, ತಿರಿ, ತೊಂಟೆ, ದರ್ಸೆ, ದುಯ್ಯೇರಿ, ದೋಣಿ, ಧಾನ್ಯಗಾರ, ಪೆಟ್ಟಿ, ಬಖಾರಿ, ಬರ್ಳ, ಬೀಂಜ್ನ ಕಣಜ, ಬುಟ್ಟಿ, ಭತ್ತದ ಮುಡಿ, ಮಂಡೆ, ಮೂಗಂಡ್ಗ, ವಾಡೆ, ಹಿಲೇರಿ".[೧೦೦] ಮುಂತಾದವುಗಳು.

ಕನ್ನಡ ವಿಷಯ ವಿಶ್ವಕೋಶ ಜ್ಞಾನಪದದಲ್ಲಿ ಧಾನ್ಯಗಳ ಸಂಗ್ರಹಣೆ, ಬಳಕೆಯ ಹಂತ ಕುರಿತು ಸಂಗ್ರಹಿಸಿ ಈ ರೀತಿ ಹೇಳಲಾಗಿದೆ. "ವರ್ಷಪರ್ಯಂತ ಕಷ್ಟಪಟ್ಟು ಬೆವರು ಹರಿಸಿ ಬೆಳೆದ ದವಸ ಧಾನ್ಯಗಳನ್ನು ಹುಳು ಹತ್ತದಂತೆ, ರೋಗ ತಗಲದಂತೆ, ಪಕ್ಷಿ–ಪ್ರಾಣಿಗಳು ತಿನ್ನದಂತೆ ಸಂರಕ್ಷಿಸಲು ಕೃಷಿಕ ತನ್ನದೇ ಆದ ಮಾರ್ಗಗಳನ್ನು ಕಂಡುಕೊಂಡಿದ್ದಾನೆ. ಮಲೆನಾಡಿನಲ್ಲಿ ಪಣತಾವನ್ನು ವಾಸದ ಜಾಗದಲ್ಲಿಯೇ ಮಾಡಿಕೊಂಡು ಹೆಚ್ಚು ಬೆಳೆಯುವವರು ಅವುಗಳಲ್ಲಿ ಸಂಗ್ರಹಿಸುತ್ತಾರೆ. ಕಡಿಮೆ ಪ್ರಮಾಣದಲ್ಲಿ ಬೆಳೆಯುವರು ಬಿದರಿನಿಂದ ಅಥವಾ ವಾಲೆಯಿಂದ ವೃತ್ತಾಕಾರವಾಗಿ ಹಣೆದ ಕಣಜಗಳಲ್ಲಿ ತುಂಬಿ, ಮೇಲೆ ಹುಲ್ಲು ಹಾಕಿ ಸೆಗಣಿಯಿಂದ ಮೆತ್ತುತ್ತಾರೆ. ಮನೆ ಬಳಕೆಗೆ ಬೇಕಾಗುವ ದವಸ ಧಾನ್ಯಗಳನ್ನು ಉಡಾಣಿ' ಎಂದು ಕರೆಸಿಕೊಳ್ಳುವ ದೊಡ್ಡ ಮಣ್ಣಿನ ಮಡಿಕೆಗಳಲ್ಲಿ ತುಂಬಿಟ್ಟುಕೊಳ್ಳುತ್ತಾರೆ. ಬಯಲು ನಾಡಿನಲ್ಲಿ ಇವಲ್ಲದೇ ಹಗೇವು ಅತ್ಯುತ್ತಮ ಬೀಜ ಸಂರಕ್ಷಕ ಗೋದಾಮು ಆಗಿದೆ. ಕಳ್ಳಕಾಕರಿಂದಂತೂ ಇದು ಪೂರ್ಣ ರಕ್ಷಣೆ ಪಡೆಯುತ್ತದೆ. ಒಂದು ಹಳ್ಳಿಯ ಮನೆಯ ಸಂಖ್ಯೆಗಳ ಅರ್ಧದಷ್ಟಾದರೂ ಹಗೇವುಗಳಿರುತ್ತವೆ. ಐದಾರು ಖಂಡುಗದ ತನಕ ಹಿಡಿಯುವ ಹಗೇವುಗಳಿರುತ್ತವೆ. ದವಸಧಾನ್ಯಗಳನ್ನು ತುಂಬುವ ಮೊದಲು ಆಯಾ ದವಸದ ಕುನಿಯನ್ನು ತಳದಲ್ಲಿ ಹಾಕಿ ಆನಂತರ ದವಸವನ್ನು ತುಂಬುತ್ತಾರೆ. ಸುಮಾರು ವರ್ಷಗಳವರೆಗೆ ಆ ಕಾಳುಗಳು ಏನೂ ಆಗುವುದಿಲ್ಲ. ಕ್ಷಾಮಡಾಮರ ತಲೆದೋರಿದಾಗ ಹಗೇವುಗಳನ್ನು ತೆಗೆಯುವುದು ಉಂಟು. ಬಯಲು ನಾಡಿನಲ್ಲಿ ಪಣತಗಳು ಸಣ್ಣ ಹಗೇವುಗಳಂತೆ ಮನೆಯ ಒಳಗೆ ಜಗುಲಿಯ ಮೇಲೆ ಇರುತ್ತವೆ. ಮಲೆನಾಡಿನಲ್ಲಿ ಇವು ನೆಲದ ಮೇಲಿದ್ದರೆ, ಬಯಲು ನಾಡಿನಲ್ಲಿ ನೆಲದ ಮಾಳಿಗೆಯಲ್ಲಿರುತ್ತವೆ. ಇವಲ್ಲದೆ ಮನೆಯ ಒಳಗಿನ ಗೋಡೆಗಳಲ್ಲಿ ಹುಗಿದ ದೊಡ್ಡ ಗುಡಾಣಗಳು ಓಡೇವು/ ವಾಡೇವು ಎನಿಸಿಕೊಳ್ಳುತ್ತವೆ. ಇವು ಮೂರು ನಾಲ್ಕು ಇದ್ದು ಬೇಕಾದ ದಿನ ಬಳಕೆಯ ದವಸಗಳನ್ನು ತುಂಬಿಕೊಂಡಿರುತ್ತಾರೆ. ಕೆಳಗಿರುವ ರಂಧ್ರದ ಮುಖಾಂತರ ಬೇಕಷ್ಟು ತೆಗೆದುಕೊಂಡು ಬಟ್ಟೆ ಮುಚ್ಚುತ್ತಾರೆ. ಮೇಲೆ ಮೆತ್ತಿಗೆ ಹಾಕಿರುತ್ತಾರೆ. ದ್ವಿದಳ ಧಾನ್ಯಗಳನ್ನು ಸಂಗ್ರಹಿಸಿಡುವುದರಲ್ಲೂ ಗ್ರಾಮೀಣ ಸ್ತ್ರೀಯರು ನಿಪುಣರು. ತೊಗರಿ, ಅವರೆ ಮುಂತಾದವುಗಳಿಗೆ ಕೆಮ್ಮಣ್ಣು ಹಚ್ಚಿ ಇಬ್ಬನಿಯಲ್ಲಿ ಒಣಹಾಕಿ ತೆಗೆದಿಟ್ಟು ವರ್ಷಪೂರ್ತಿ ಹಾಳಾಗದಂತೆ ನೋಡಿಕೊಳ್ಳುತ್ತಾರೆ".[೧೦೧] ಹೀಗೆ ದವಸ ಧಾನ್ಯಗಳ ಸಂಗ್ರಹಣೆ, ಬಳಕೆಯ ವಿಧಾನ ಕುರಿತು ಮಾಹಿತಿ ಸಾಹಿತ್ಯ ಕೃತಿಗಳಲ್ಲಿ ಮತ್ತು ಶಾಸ್ತ್ರಕೃತಿಗಳಲ್ಲಿ ದೊರೆಯುತ್ತದೆ.

ಪ್ರಾಚೀನ ಸಾಹಿತ್ಯದ ವೇದ, ಉಪನಿಷತ್ತು, ಸಂಹಿತೆಗಳಲ್ಲಿ ಕೃಷಿಯ ಕುರಿತಾದ ಅನೇಕ ಮಾಹಿತಿಗಳ ಉಲ್ಲೇಖ ಕಂಡುಬರುತ್ತವೆ. ಮನೆಯಲ್ಲಿ ಧಾನ್ಯಗಳ ದಾಸ್ತಾನು ಮಾಡುತ್ತಿದ್ದರು ಎಂಬ ಅಂಶ ತಿಳಿಯುತ್ತದೆ. ಅಂದು ವ್ಯವಸಾಯ ಸಮೃದ್ಧಿಯಿಂದ ಕೂಡಿದ್ದು. ಬೆಳೆಯ ಬೆಳೆಯುವ, ರಕ್ಷಿಸುವ, ರೋಗಗಳಿಂದ ಹತೋಟಿ ಮಾಡುವ ಧಾನ್ಯಗಳ ದಾಸ್ತಾನುಗಳ ಬಗ್ಗೆ ಗಮನಹರಿಸಿದ್ದರು. ನಾಗರಿಕತೆಗಳು ಹುಟ್ಟಿಕೊಂಡಿರುವ ಕಾಲವನ್ನು ಗಮನಿಸಿದರೆ, ಭಾರತದ ವ್ಯವಸಾಯ ದ್ರಾವಿಡ ಮೂಲದಿಂದ ಬಂದಿರುವಂತದ್ದು ಎಂಬ ಅಂಶ ತಿಳಿಯುತ್ತದೆ. ನೇಗಿಲ ಬಳಕೆ, ಧಾನ್ಯಗಳನ್ನು ಕುಟ್ಟುವ ಗಿರಣಿ, ಹತ್ತಿಯಿಂದ ಬಟ್ಟೆ ಮಾಡುವ

ವಿಧಾನ. ಬೃಹತ್ತಾದ ಕಣಜಗಳು ಸಿಂಧೂ ನಾಗರಿಕತೆಯ ಕಾಲದಲ್ಲಿ ಕಂಡುಬರುತ್ತದೆ. ಅಂದರೆ ವ್ಯವಸಾಯದಲ್ಲಿ ತುಂಬ ಪ್ರಗತಿಯನ್ನು ಕಂಡುಕೊಂಡ ಕಾಲವಾಗಿರುವ ಅಂಶಗಳು ಕಾಣಸಿಗುತ್ತವೆ. ಅಲ್ಲಿಯ ಧಾನ್ಯ ಸಂಗ್ರಹಿಸುವ ಕಣಜ, ಅದರಲ್ಲಿಯ ವ್ಯವಸ್ಥೆಗಳು ಆಶ್ಚರ್ಯ ಉಂಟುಮಾಡುವಂತಿವೆ. "ಬೃಹತ್ತಾದ ಕಟ್ಟಡ ಹರಪ್ಪಾದ ದೊಡ್ಡ ಕಣಜ. ಇದರ ವಿಸ್ತೀರ್ಣ ೧೬೮\೧೩೫ ಇದೆ. ಅದು ೨೩ ಅಡಿ ಅಗಲದ ಒಂದು ದೊಡ್ಡ ಓಣಿಯಿಂದ ಬೇರ್ಪಡುವ ಎರಡು ಸಮನಾದ ಭಾಗಗಳಿಂದ ಆಗಿದೆ. ಪ್ರತಿಯೊಂದು ಭಾಗದಲ್ಲಿಯೂ ಆರು ಕೋಣೆಗಳಿವೆ. ಗೋಡೆಗಳು ಬಹಳ ದಪ್ಪವಾಗಿದೆ. ೯ಅಡಿ ದಪ್ಪವಿರುವ ಅವುಗಳು ಜೊತೆಯಾಗಿ ನಿಂತಿವೆ. ಪ್ರತಿಯೊಂದು ಕೋಣೆಯನ್ನು ಮೂರು ಸಮನಾಂತರವುಳ್ಳ ಗೋಡೆಗಳಿಂದ ನಾಲ್ಕು ಸಣ್ಣ ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಈ ಗೋಡೆಗಳು ಎರಡು ಕಡೆಗಳಲ್ಲೂ ವಿಶಾಲತರವಾದ ಶಿಲಾಸ್ತಂಭಗಳಿಂದ ಕೊನೆಗೊಳ್ಳುತ್ತವೆ. ಮೊಹೆಂಜೊದಾರೊದಲಿಯೂ ಇಂತಹದೇ ಕಣಜವೊಂದು ದೊರೆತಿದೆ. ಬೇರೆಯ ಸಂಸ್ಕೃತಿಗಳಲ್ಲೂ ಕ್ರೀಟ್ ಮತ್ತು ನಾಸಸ್ ಇಂತಹ ಕಣಜಗಳ ಉಲ್ಲೇಖವಿದೆ".[೧೦೨] ಸಿಂಧೂ ಪ್ರಾಂತ್ಯ ಫಲವತ್ತಾದ ವ್ಯವಸಾಯ ಯೋಗ್ಯ ಭೂಮಿಯನ್ನು ಹೊಂದಿದ್ದು ವ್ಯವಸಾಯೋತ್ಪನ್ನಗಳನ್ನು ಅತ್ಯಾಧುನಿಕ ದಾಸ್ತಾನು ಪದ್ಧತಿಯ ರೀತಿಯಲ್ಲಿ ಬೃಹತ್ ಕಣಜಗಳಲ್ಲಿ ಶೇಖರಿಸಿಡುತ್ತಿದ್ದರು ಎಂದು ತಿಳಿಯುತ್ತದೆ. ಇಲಿ ಹೆಗ್ಗಣ ಮುಂತಾದ ಪ್ರಾಣಿ, ಕ್ರಿಮಿ-ಕೀಟಗಳಿಂದ, ಮಹಾಪೂರದ ಹಾವಳಿಯಿಂದ ಧಾನ್ಯವನ್ನು ದಸ್ತಾನು ಮಾಡಿ ಕಾಪಾಡುತ್ತಿದ್ದರು. ಗಾಳಿ ಬೆಳಕುಗಳ ವ್ಯವಸ್ಥೆ ಶೀತವಾಗದಂತೆ ನೆಲಗಟ್ಟು ನಿರ್ಮಾಣ, ಗಾಡಿಯಿಂದ ತಂದ ಸರಕುಗಳ ಸುಲಭವಾಗಿ ಇಳಿಸುವ ಏರಿಸುವ ವ್ಯವಸ್ಥೆಯನ್ನು ಕಣಜದಲ್ಲಿ ಕಾಣಬಹುದಾಗಿದೆ.

ಕೃಷಿಜ್ಞಾನ ಪ್ರದೀಪಿಕೆ, ಶಾಸನಸಾಹಿತ್ಯ, ಕನ್ನಡಸಾಹಿತ್ಯ, ಜನಪದಸಾಹಿತ್ಯದಲ್ಲಿ ಕಂಡುಬರುವ ಧಾನ್ಯಗಳ-ದವಸಗಳ ಬಳಕೆಯ ವಿಧಾನ ಕುರಿತು ಸಂಗ್ರಹಿಸಿ ಚರ್ಚಿಸಬಹುದಾಗಿದೆ. ಕೃಷಿಜ್ಞಾನ ಪ್ರದೀಪಿಕೆಯಲ್ಲಿ ದ್ವಿದಳ ಧಾನ್ಯಗಳ ಸಂಗ್ರಹಣೆ ಮತ್ತು ಹುಳು ಹತ್ತದಂತೆ ಕಾಪಾಡುವ ಮತ್ತು ಬಳಕೆಯ ಮಾಡುವ ವಿಧಾನ ಕುರಿತು ಹೀಗೆ ಹೇಳಲಾಗಿದೆ. "........... ಕಡಲಿ ಮುಂತಾದ ಕಟಾಣದ ಧಾನ್ಯಗಳಲ್ಲಿ ಮತ್ತು ಖರೀಪದ ಮುಂಗಾರಿಯ ಅಕ್ಕಡಿಯ ಧಾನ್ಯಗಳಾದ ಅವರಿ, ಅಲಸಂದಿ, ತೊಗರೆ, ಹೆಸರು, ಹುರುಳಿ ಮಡಿಕಿ ಮೊದಲಾದ ಧಾನ್ಯಗಳಲ್ಲಿ ಈ ನವಣೆಯನ್ನು ಸಮತೂಕವಾಗಿ ಕಲಿಸಿ, ತುಂಬಿ, ಮೇಗೇಣು ಚೋಟು ಉದ್ದ ನವಣೆಯನ್ನು ಹಾಕಿ ತುಂಬಿ ಇಟ್ಟರೆ ಅಂತ ಧಾನ್ಯಗಳು ಎಷ್ಟು ದಿವಸದವರೆಗೂ ಇಟ್ಟ ಕಾಲಕ್ಕೂ ಹುಳುಗಳು ಹತ್ತುವುದಿಲ್ಲ........... ತಮಗೆ ಬೇಕಾದಾಗ ಹಿಟ್ಟು ಜಲ್ಲಿಸುವ ಸಾಣಿಗೆಯಲ್ಲಿ ಜಲ್ಲಿಸಿದರೆ ತತ್ಕಾಲಕ್ಕೆ ಒಂದು ತಾಸಿನೊಳಗೆ ಖಂಡಗ ಗಟ್ಟಲೆ ಧಾನ್ಯವನ್ನಾದರೂ ಕಡೆಗೆ ಮಾಡಿಕೊಳ್ಳಬಹುದು".[೧೦೩] ಎನ್ನುತ್ತಾರೆ. ಅಲ್ಲದೆ ರಾಗಿ, ಸಾವೆಗಳಜೋತೆಗೂ ಬೆರೆಸಿ ತುಂಬಿಕೊಳ್ಳಬಹುದು. "ಮುಂದುವರಿದು ಈ ಧಾನ್ಯಗಳನ್ನು ಕಣಜದಲ್ಲಿ ಗಳಿಗೆಯಲ್ಲಿ, ಗುಮ್ಮಿಗಳಲ್ಲಿ ಇಲ್ಲವೆ ಬುಟ್ಟಿಗಳಲ್ಲಿ ತುಂಬಿ ಮೇಲೆ ಗೇಣು, ಚೋಟು ಉದ್ದವಾಗು ಹಾಗೆ ರಾಗಿಯನ್ನು ಹಾಕಿ ಮೆತ್ತು ಹಾಕಿ ಇಟ್ಟರೆ ಎಷ್ಟುದಿವಸ ಇದ್ದಕಾಲಕ್ಕೊ ಹುಳುಗಳು ಅತ್ತುವದಿಲ್ಲವೋ ಎನ್ನಲಾಗಿದೆ. ನೆಲ್ಲು ಭತ್ತವನ್ನು ಎಷ್ಟುದಿವಸಗಳತನಕ ಕಣಜಗಳಲ್ಲಿ ತುಂಬಿ ಇಟ್ಟರು ಕೆಡುವುದಿಲ್ಲ. ಕಣಜಗಳಲ್ಲಿ ತುಂಬಿ ಸಗಣಿಯ ಮೇಲೆ ಹಾಕಿ ಸಾರಿಸುತ್ತಾರೆ. ಇದು ಭತ್ತ ಸಂಗ್ರಹಣೆಯ ವಿಧಾನವಾಗಿದೆ. ಬೆಲ್ಲ ಸಂರಕ್ಷಣೆ ಮತ್ತು ಬಳಕೆ ಮಾಡುವ ಬಗೆಯನ್ನು ಕುರಿತು ಶ್ರೀಘನಮಠ ಶಿವಯೋಗಿಗಳು ಈ ರೀತಿ ಸಲಹೆ ನೀಡುತ್ತಾರೆ. ಗಟ್ಟಿಯಾದ ಪೆಂಟೆ, ಹಲಗೆಯ

ಬೆಲ್ಲಮಾಡಿ ಬೆಲೆ ಹೆಚ್ಚಾಗುವವರೆಗೆ ಸಂಗ್ರಹಮಾಡಿ ಮಾರಾಟಮಾಡಿದರೆ ಉತ್ತಮ. ಅದಕ್ಕಾಗಿ ಬೆಲ್ಲ ಕೆಡದ ಹಾಗೆ ಮಾಡುವದು ಹೇಗೆಂದರೆ "..........ಪೆಂಟೆಗಳನ್ನಾಗಲಿ, ಹಲಗೆಯನ್ನಾಗಲಿ, ಚಾಪೆಯ ಚೀಲದಲ್ಲಿ ಅಥವಾ ಕಪ್ಪಡದ ಚೀಲದಲ್ಲಿ ಇಲ್ಲವೆ ಹಳೆಯ ಅರಿವೆಗಳಲ್ಲಿ ಕಟ್ಟಿ, ಬಹಳವಾಗಿದ್ದರೆ ಕಣಜಗಳಲ್ಲಿ ಸ್ವಲ್ಪ ಇದ್ದರೆ ಗುಮ್ಮಿಗಳಲ್ಲಿ ಇಡಬೇಕಾದರೆ ಜವಿಯ ಗೋದಿಯನ್ನು ಬೆಳೆದಿದ್ದರೆ ತಳದಲ್ಲಿ ಒಂದು ಗೇಣು ಜವೆಯನ್ನು ಹಾಕಿ ಅದರ ಮೇಲೆ ಬೆಲ್ಲದ ಪೆಂಟೆಗಳನ್ನಿಟ್ಟು ಸಂದು ಸಂದಿಗೆ ಇಳಿಯುವ ಹಾಗೆ ಜವೆಯನ್ನು ಸುರಿಸಿ ಅದರ ಮೇಲೆ ಮತ್ತೂ ಬೆಲ್ಲವನ್ನಿಟ್ಟು ತರತರಕ್ಕೆ ಜವೆಯನ್ನು ಸುರಿಯುತ್ತ ಯಾವತ್ತೂ ಬೆಲ್ಲವನ್ನು ಮಡಗಿದವೇಲೆ ಒಂದು ಗೇಣು ಎತ್ತರವಾಗಿ ಜವೆಯನ್ನು ಹಾಕಿಬಿಡಬೇಕು................".[೧೦೪] ಹೀಗೆ ಮಾಡುವುದರಿಂದ ಎಷ್ಟು ದಿವಸ ಇಟ್ಟರು ಬೆಲ್ಲ ಕೆಡುವದಿಲ್ಲ. ಜವೆಯ ಗೋಧಿ ಇಲ್ಲದೆ ಇದ್ದರೆ ಕುಸಬಿ, ನವಣಿ, ರಾಗಿ, ಸಾವೆ ಹಾಕಿ ಇಟ್ಟರು ಬರುತ್ತದೆ. ಧಾನ್ಯಗಳು ಯಾವು ಇಲ್ಲದೆ ಇದ್ದರೆ ಉಸುಕು [ಮರಳು] ಉಪಯೋಗಿಸಬಹುದು.

ಶ್ರೀಘನಮಠ ಶಿವಯೋಗಿಗಳು ಅರಿಷಿಣವನ್ನು ಬಳಕೆ ಮಾಡಲು ಅನುಸರಿಸುವ ಮಾರ್ಗಗಳನ್ನು ತಿಳಿಸುತ್ತಾರೆ. ಅರಿಷಿಣವನ್ನು ಧಾರಣಿ ಬರುವವರೆಗೆ ತುಂಬಿ ಇಡಬೇಕಾದರೆ, ಹಗೆಯಲ್ಲಿ ಹಾಕಿದರೆ ಕೊಳ್ಳಿ ಹಾಯುತ್ತವೆ. ಹಾಗೆಯೇ ಇಟ್ಟರೆ ಹುಳು ಅತ್ತುತ್ತವೆ. ಆದ್ದರಿಂದ ಅರಿಷಿಣ ಸಂರಕ್ಷಿಸುವ ಬಗೆ ಹೇಗೆಂದರೆ "..........ಹದಕ್ಕೆ ಹಾಕಿ ಸಿದ್ದಮಾಡಿದ ಅರಿಸಿಣವನ್ನು ತೆಳ್ಳಗೆ ಹರಹಿ ಸ್ವಲ್ಪ ಆರಿಸಿ ಆರಿದ ಮೇಲೆ ಅವುಗಳನ್ನು ಗುಮ್ಮಿಗಳಲ್ಲಾಗಲಿ, ಕಣಜಗಳಲ್ಲಾಗಲಿ ಹಾಕಿಡಬೇಕಾದರೆ ತಳಕ್ಕೆ ಸಣ್ಣ ಉಸುಕು ಹಾಕಿ ಅರಿಸಿಣವನ್ನು ಗೇಣು ಎತ್ತರ ಸುರುವಿ ಅದರ ಮೇಲೆ ನಾಲ್ಕು ಬೆರಳು ಬಜಿಯಪುಡಿಯನ್ನು ಉದುರಿಸಿ, ಸ್ವಲ್ಪ ಉಸುಕನ್ನು ಹಾಕಿ ಇದರಂತೆ ಮತ್ತು ಅರಿಸಿಣವನ್ನು ಉಸುಕನ್ನು ತರ ತರಕ್ಕೆ ಹಾಕುತ್ತಾ ಅದರ ಮೇಲೆ ಬಜಿಯ ಪುಡಿಯನ್ನು ಉದುರಿಸುತ್ತ ಯಾವತ್ತೂ ಅರಿಸಿಣಗಳು ಆಗುವವರೆಗೂ ಹಾಕಿ ಮೇಲೆ ಒಂದುಗೇಣು ಎತ್ತರ ಉಸುಕುಹಾಕಿ ತುಂಬಿ ಇಟ್ಟರೆ ಎಂದಿಗೂ ಹುಳುಗಳು ಹತ್ತದೆ ಇರುವವು..........."[೧೦೫] ಮಾರಾಟ ಮಾಡುವ ವೇಳೆಯಲ್ಲಿ ಅರಿಸಿಣ ಹೊರತೆಗೆದು ಕಡಾಯದಲ್ಲಿ ಹಾಕಿ, ನೀರುಹಾಕಿ ಒಳ್ಳೆಯ ಅರಿಸಿಣದ ಹಿಟ್ಟು ಕಲಸಿ ಒಂದು ಹೊಸ ಬಿದಿರ ಪುಟ್ಟಿಯಲ್ಲಿ ಅರಿಶಿಣವನ್ನು ಹಾಕಿ ಎದ್ದಿ ತೆಗೆದು ಆರಿಸಿದರೆ ಬಣ್ಣವಾಗುವದು. ನಂತರ ಚೀಲಕ್ಕೆ ತುಂಬಿ ಇಟ್ಟರೆ ಬರುತ್ತದೆ. ನಂತರ ಧಾರಣಿ ಬಂದಾಗ ಮಾರಾಟ ಮಾಡಬಹುದು. ಶ್ರೀಘನಮಠಶಿವಯೋಗಿಗಳು ಅಡಿಕೆಯನ್ನು ಸಂರಕ್ಷಿಸಿ ಬಳಕೆ ಮಾಡುವುದರ ಮಾರ್ಗವನ್ನು ಸೂಚಿಸುತ್ತಾರೆ. ಹಣ್ಣಾದ ಅಡಿಕೆಯ ಗೊನೆಯನ್ನು ಕುಡುಗೋಲಿನಿಂದ ಮಾಡಿದ ದೋಟಿಯ ಕೋಲಿನಿಂದ ಕೊಯ್ದು, ಸೊಪ್ಪೆಯನ್ನು ಸುಲಿದು ಹಂಡೆಯಲ್ಲಿ ಕಾದಿಟ್ಟ ನೀರಿಗೆ ಹಾಕಿ ಅಡಿಕೆ ಹದ ಮಾಡಲು ಸಿದ್ದಮಾಡಿಕೊಂಡ [ವೀಳೆಯದ ಎಲೆ, ಅಡಿಕೆ, ಕಾಚು, ಸುಣ್ಣ ರುಬ್ಬಿದ ಮಿಶ್ರಣ] ಮಿಶ್ರಣಹಾಕಿ ಕುದಿಸಿ ಹದಕ್ಕೆ ಬಂದಾಗ ಹೊರತೆಗೆಯಬೇಕು. ನಂತರ ಹೇಗೆ ಮಾಡಬೇಕೆಂದರೆ ".............ಆ ನೀರು ತೊಗರಿಯ ಕಟ್ಟಿನ ಹಾಗೆ, ಹುರುಳಿ ಕಟ್ಟಿನ ಹಾಗೆ ಕೆಂಪಾಗಿ ಸ್ವಲ್ಪು ಮಂದವಾಗಬೇಕು. ಆ ಅಡಕೆಯು ಕುದಿದು ಮೃದುವಾಗಬೇಕು. ಈ ಹದಕ್ಕೆ ಬಂದಾಗಲೇ ಇಳಿಸಿ ಆ ನೀರನ್ನು ಬಸಿದು ಕೊಂಡು ಒತ್ತಟ್ಟಿಗೆ ಇಟ್ಟಿರಬೇಕು. ಕುದಿಸಿದ ಅಡಕೆಯನ್ನು ಬಿದಿರು ಚಾಪೆಯ ಮೇಲೆ ತೆಳ್ಳಗೆ ಹರವಿ ಏಳು ದಿವಸ ಚೆನ್ನಾಗಿ ಒಣಗಿಸಬೇಕು. ಅವು ಒಣಗಿದ ಮೇಲೆ ಮೊದಲು ಕುದಿಸಿದ ಬಿಸಿಯ ರಸವನ್ನು ಅಡಿಕೆಯ ಮೇಲೆ ಚಿಮುಕು ಹೊಡೆದು ಚೆನ್ನಾಗಿ ಬೆರೆಸಿದರೆ ಬಣ್ಣವಾಗುವವು. ಆ ಬಸಿದ ರಸವು ಆರಿ ಗಟ್ಟಿಯಾಗಿ ಅರಗಿನ ಹಳ್ಳೆಯ ಹಾಗೆ ಆಗಿದ್ದರೆ ಅದನ್ನು ಹಾಗೇ ಇಟ್ಟುಕೊಂಡಿದ್ದು ಯಾವಾಗ್ಗೆ ಅಡಿಕೆಗೆ

[illegible]

ಬಣ್ಣಮಾಡ ಬೇಕಾಗುವದೊ ಆ ಸಮಯಕ್ಕೆ ಬಿಸಿ ನೀರನ್ನು ಶಾವಿಗೆ ಎಸರಿನ ಹಾಗೆ ಕಾಸಿ ಅದರಲ್ಲಿ ಆ ಹಲ್ಲೆಯನ್ನು ಹಾಕಿ ಸ್ವಲ್ಪು ಕುದಿಸಿದರೆ ಅದು ಕರಗಿ ನೀರಾಗುವದು. ಆ ನೀರನ್ನು ಒಣಗಿದ ಅಡಕೆಯ ಮೇಲೆ ಚಿಮುಕು ಹೊಡೆದು ಸಮರಸವಾಗುವ ಹಾಗೆ ಬರಿಸಿದರೆ ಚೆನ್ನಾಗಿ ಬಣ್ಣವಾಗುವದು. ಮತ್ತು ಮಾರಾಟಕ್ಕೆ ರಂಜನೆಯಾಗಿ ಕಾಣಿಸುವದು ಹಾಗೂ ಅಡಿಕೆ ಒಗರು ಹೋಗಿ ರುಚಿಯಾಗುವದು ....".[೧೦೬] ಎಂಬುದು ಶಾಸ್ತ್ರಕಾರನ ಅಭಿಮತವಾಗಿದೆ.

ಕನ್ನಡ ಸಾಹಿತ್ಯ ಕೃತಿಗಳಲ್ಲಿ ಕೃಷಿ ಉತ್ಪನ್ನಗಳ ಸಂಗ್ರಹಣೆ ಮಾಡುವ ಕೆಲವು ಉಪಕರಣಗಳು ಮತ್ತು ಬಳಕೆ ಬಗೆಯನ್ನು ಕುರಿತು ದೊರೆಯುವ ಮಾಹಿತಿಯನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಕಣಜ : ಧಾನ್ಯ ಸಂಗ್ರಹಿಸುವ ಪ್ರಮುಖ ಉಪಕರಣವಾಗಿದೆ. ವಚನಕಾರರಲ್ಲಿ ಅನೇಕ ಕಡೆ ಉಲ್ಲೇಖವಾಗಿದೆ. ಅರಿವಿನ ಮಾರಿತಂದೆಗಳ ವಚನವೊಂದರಲ್ಲಿ "..........ಕೊಯ್ದು ಒಕ್ಕಿ ತೂರಿ ಅಳತೆ ಸಂದಿತ್ತು ಸದ್ಯೋಜಾತ ಲಿಂಗವೆಂಬ ಕಣಜ ಘಟದಲ್ಲಿ..............".[೧೦೭] ಕೊಯ್ಯಲು ಆಗಿ, ಕಣದಲ್ಲಿ ರಾಶಿಯಾದ ಧಾನ್ಯಗಳನ್ನು ಅಳೆದು, ಕಣಜದಲ್ಲಿ ಎಲ್ಲಾ ಬಗೆಯ ಧಾನ್ಯಗಳ ಸಂಗ್ರಹಿಸಿ, ತಮಗೆ ಬೇಕಾದಾಗ ಬಳಸಿಕೊಳ್ಳುತ್ತಾರೆ. ತೋಂಟದ ಸಿದ್ದಲಿಂಗ ಶಿವಯೋಗಿಗಳ ವಚನದಲ್ಲಿ ಕಣಜದ ಉಲ್ಲೇಖ ಕಂಡುಬರುತ್ತದೆ. ಕನ್ನಡಭಾರತದಲ್ಲಿ "...........ವರಗುಡಶರ್ಕರಾದಿಯ ಕಣಜ ಕೋಟೆಗಳು ಕಳವೆಯಕ್ಕಿಯ ಗೋಧಿ ಕಡಲೆಯಾ ವಿಳಸ ರಾಶಿಯ.............".[೧೦೮] ಬೆಲ್ಲ ಮುಂತಾದ ಪದಾರ್ಥಗಳು ಅಕ್ಕಿ, ಗೋಧಿ, ಕಡಲೆ ವಿಳಸಿಯ ವಸ್ತುಗಳನ್ನು ಕಣಜದಲ್ಲಿ ಸಂಗ್ರಹಿಸುತ್ತಿದ್ದರು. ಅಗತ್ಯ ಬಿದ್ದಾಗ ಬಳಸುತ್ತಿದ್ದರು ಎಂಬ ಅಂಶ ತಿಳಿದುಬರುತ್ತದೆ. ಬಸವಪುರಾಣದಲ್ಲಿಯೂ ಭತ್ತ, ದವಸ ಧಾನ್ಯಗಳನ್ನು ಕಣಜ ಮುಂತಾದ ಸಂಗ್ರಹ ಉಪಕರಣದಲ್ಲಿ ಸಂಗ್ರಹಿಸುವ ಅಂಶ ತಿಳಿಯುತ್ತದೆ. ಅಂದರೆ ಧಾನ್ಯಗಳ ಸಂಗ್ರಹಣೆ ಬಳಕೆ ವಿಧಾನ ಅಂದಿನ ಕಾಲದಲ್ಲಿ ತುಂಬಾ ಉತ್ತಮ ರೀತಿಯಲ್ಲಿತ್ತು ಎಂದು ಅರಿಯಬಹುದು .

ಹಗೇವು : ನೆಲದಲ್ಲಿ ಗುಂಡಿಯ ತೆಗೆದು ಮಾಡಿಕೊಂಡಿರುವ ಸಂಗ್ರಹಣೆಯ ಸಾಧನ. ವಚನಕಾರರಲ್ಲಿ ಬಿತ್ತುವ, ಕೊಯ್ಯುವ, ಕಣದಲ್ಲಿ ರಾಶಿ ಮಾಡುವ ,ತೂರುವ ,ಜೊಳ್ಳನ್ನು ಬೇರೆಮಾಡಿ, ಕೊಳಗದಲ್ಲಿ ಅಳತೆಮಾಡಿ ಹೆಡಿಗೆಗೆ ತುಂಬಿ ಮನೆ ಒಳಗೆ, ಇಲ್ಲವೇ ಮನೆ ಹೊರಗೆ ಇರುವ ಹಗೆಯಲ್ಲಿ ಹಾಕುವ ಉಲ್ಲೇಖಗಳು ಕಂಡುಬರುತ್ತವೆ. ಸೊಡ್ಡಳ ಬಾಚರಸನ ವಚನದಲ್ಲಿ "..........ಒಕ್ಕುವನಯ್ಯ, ತೂರುವನಯ್ಯ, ಲೋಕಾಧಿ ಲೋಕಂಗಳ ಹಗೆಯ ನಿಕ್ಕುವನಯ್ಯ..........".[೧೦೯] ಒಕ್ಕಲು ಮಾಡಿ ತೂರಿ ರಾಶಿಯ ಮಾಡಿ ಹಗೆಯದಲ್ಲಿ ಸಂಗ್ರಹಿಸುವ ಅಂಶ ತಿಳಿದು ಬರುತ್ತದೆ. ಕಾಡುಸಿದ್ದೇಶ್ವರ ವಚನದಲ್ಲಿ "............ಹತ್ತು ಖಂಡುಗವ ಧಾನ್ಯವ ಬೆಳೆದು ಹಗೆಯ ಮೆಟ್ಟಿ ಹಾಗೆಯೇ ಹಾಕಿ ಮುಂದೆ ಮಾರಿ ಕಡಬಡಿಯ ಕೊಟ್ಟ.............".[೧೧೦] ಹೇರಳವಾಗಿ ಧಾನ್ಯವನ್ನು ಬೆಳದವರು ಹಗೇವುಗಳನ್ನು ತೆಗೆಸಿ ಅವುಗಳಲ್ಲಿ ಸಂಗ್ರಹಿಸಿ ಮಾರುಕಟ್ಟೆಯಲ್ಲಿ ಬೆಲೆ ಬಂದಾಗ ಮಾರಾಟ ಮಾಡುವ ಮತ್ತು ಕಡಕೊಟ್ಟು ತನಗೆ ಬೇಕಾದಾಗ ಪಡೆಯುವ, ಮಾರಾಟ ಮಾಡಿ ಬಂದ ಹಣವನ್ನು ಬಡ್ಡಿ ಕೊಡುವ ಅಂಶ ಕಂಡು ಬರುತ್ತದೆ. ರೈತರು ಈ ಎಲ್ಲಾ ವಿಧಾನ ಅನುಸರಿಸಿ ತಾವು ಬೆಳೆದ ಧಾನ್ಯಗಳನ್ನು ಬಳಸುತ್ತಿದ್ದರು. ಅಕ್ಕನ ವಚನದಲ್ಲಿ "ಬಲ್ಲಿದ ಹಗೇಹ ತೆಗೆವನ್ನಬರ ಬಡವನ ಹರಣ ಹೊದಂತಾಯಿತ್ತು ....".[೧೧೧] ಎಂಬ ಮಾತು ಅಲ್ಲಮ ಪ್ರಭುವಿನ "ಉಳ್ಳವರ ಹಗೆಯುವ ತೆಗೆವನ್ನಕ್ಕರ ಇಲ್ಲದವರ ಹರಣ ಹೋಯಿತ್ತೆಂಬ ಗಾದೆವಿನಗಾಯಿತ್ತಯ್ಯ...........".[೧೧೨] ಎಂಬಲ್ಲಿಯ ಹೋಲಿಕೆ ಗಮನಿಸಿದರೆ, ಆಕಾಲದ ಸಾಮಾಜಿಕ

ಸ್ಥಿತಿಯ ಚಿತ್ರಣ ತಿಳಿಯುತ್ತದೆ. ಶ್ರೀಮಂತರು ಹಗೆಯಲ್ಲಿ ಸಂಗ್ರಹಿಸಿದ ಧಾನ್ಯ ತೆಗೆದು ಬಡವರಿಗೆ ಹಂಚುವಷ್ಟರಲ್ಲಿ ಬಡವನ ಜೀವ ಹಾರಿ ಹೋಗಿರುತ್ತದೆ. ಇಂದಿನ ಸರ್ಕಾರದ ಯೋಜನೆಗಳು ಫಲಾನುಭವಿಗಳಿಗೆ ಮುಟ್ಟುವಷ್ಟರಲ್ಲಿ ಅವನ ಹರಣ ಹೋಗುತ್ತದೆ ಎಂಬ ಮಾತು ಸತ್ಯದ ಮಾತಾಗುತ್ತದೆ. ಸರ್ವಜ್ಞನ ವಚನವೊಂದರಲ್ಲಿ ಹಗೆದ ಉಲ್ಲೇಖ ಹೀಗೆ ಕಂಡು ಬರುತ್ತದೆ. "ಮುಗಿಲ ಮಾಳಿಗೆ ಲೇಸು ,ಜಗಲಿ ಸೂಳಿಗೆ ಲೇಸು, ಹಗೆಯದ ಭತ್ತವುಣಲೇಸು...........".[೧೧೩] 'ಎಂದು ಹೇಳುವಾಗ ಹಗೆಯಲ್ಲಿ ಹಾಕಿದ ಭತ್ತದ ಊಟ ತುಂಬಾ ರುಚಿಯಾಗಿರುತ್ತದೆ ಎನ್ನುತ್ತಾನೆ. ಇಂದು ಊಟದ ಧಾನ್ಯಗಳಾದ ಜೋಳ, ರಾಗಿ, ಭತ್ತ ಮುಂತಾದುವುಗಳನ್ನು ಸಂಗ್ರಹಣೆ ಮಾಡಿಕೊಳ್ಳದೇ ಸುಗ್ಗಿಯ ಕಣದಲ್ಲಿಯೇ ಮಾರಿ ಬಂದ ಹಣದಿಂದ ಮಾರುಕಟ್ಟೆಯಲ್ಲಿ ಬೇಡಿದ ಹಣ ತೆತ್ತು ಕೊಂಡು ತಂದು ಬಳಸುವ ಕಾಲವನ್ನು ಕಾಣುತ್ತೇವೆ.

ಪ್ರಾಚೀನ ಕಾಲದಿಂದಲೂ ಜನಪದೀಯವರು ಧಾನ್ಯಗಳ ಸಂಗ್ರಹಣೆ, ಅವುಗಳ ಹುಳು ಹತ್ತದಂತೆ ಬರಗಾಲ ಅರಗಾಲದಲ್ಲಿ ಬಳಕೆಗೆ, ತಮಗೆ ಅಗತ್ಯವಾದ ಬೇರೆ ವಸ್ತು ಕೊಂಡು ಕೊಳ್ಳುವ ಮತ್ತು ಮಾರುಕಟ್ಟೆಯಲ್ಲಿ ಬೆಲೆ ಬಂದಾಗ ಮಾರಿ ಲಾಭಗಳಿಸಲು ಬಂದ ಹಣವನ್ನು ಬಡ್ಡಿಯ ನೀಡಲು ಮತ್ತು ಕೆಲವರು ಕೂಲಿಯ ರೂಪದಲ್ಲಿ ಧಾನ್ಯಗಳನ್ನು ನೀಡಲು ಮುಂತಾದ ಕಾರಣಗಳಿಗಾಗಿ ದವಸ ಧಾನ್ಯಗಳನ್ನು ಸಂಗ್ರಹಿಸಿ ಬಳಸುತ್ತಿರುವ ಅಂಶಗಳು ಕಂಡುಬರುತ್ತವೆ.

೪ ಮಾರಾಟ ವ್ಯವಸ್ಥೆ

ಮಾನವನ ಜೀವನಕ್ಕೆ ಆಧಾರವಾದ ವೃತ್ತಿಗಳಲ್ಲಿ ಉತ್ಪಾದಕ ವೃತ್ತಿಯ ವಲಯಕ್ಕೆ ಸೇರುವಂತದ್ದು ಕೃಷಿಯಾಗಿದೆ. ಕೃಷಿ ಮೂಲದಿಂದ ಅನೇಕ ಬಗೆಯ ತೋಟದ ಬೆಳೆಗಳು, ಹಣ್ಣಿನ ಬೆಳೆಗಳು, ಆಹಾರ ಧಾನ್ಯಗಳು, ಬಳಕೆಯಲ್ಲಿ ಉಪಯೋಗಿಸುವ ಅನೇಕ ವಸ್ತುಗಳು ಜೀವನಾವಶ್ಯಕ ವಸ್ತುಗಳು, ಅಲಂಕಾರಿಕ ವಸ್ತುಗಳು ಮುಂತಾದವುಗಳ ಉತ್ಪನ್ನ ನಡೆಯುತ್ತದೆ. ಇಂತಹ ಉತ್ಪನ್ನಗಳ ಹಂಚಿಕೆಗಾಗಿ ಅನೇಕ ಬಗೆಯ ವ್ಯವಸ್ಥೆಗಳು ಪ್ರಾಚೀನ ಕಾಲದಿಂದಲೂ ನಡೆಯುತ್ತಿವೆ. ಇಂತಹ ವ್ಯಾಪರದ ವೃತ್ತಿಯನ್ನು ಮಾಡುವವರು ವರ್ತಕರಾಗಿರುತ್ತಾರೆ. ಕೃಷಿ ಉತ್ಪನ್ನಗಳನ್ನು ಸಂತೆ, ಪೇಟೆ, ಪಟ್ಟಣ, ಅಂಗಡಿಗಳಲ್ಲಿ ಮಾರಾಟ ಮಾಡುವ ವ್ಯವಸ್ಥೆ ಇರುವಅಂಶ ಕಾವ್ಯಗಳಲ್ಲಿ ಕಂಡುಬರುವುದು ವಿರಳ. ಕಂಡುಬಂದರೂ ಉತ್ಪ್ರೇಕ್ಷೆಯೇ ಹೆಚ್ಚಾಗಿರುವಂತದು ಈ ಮಾಹಿತಿಯನ್ನು ಒದಗಿಸುವಲ್ಲಿ ಶಾಸನಗಳು ಹೆಚ್ಚು ವಸ್ತು ನಿಷ್ಠತೆಯಿಂದ ಕೂಡಿರುವವು. "ವರ್ತಕರು ವಿನಿಮಯ (ವ್ಯಾಪಾರ) ವೃತ್ತಿಯವರು, ಉತ್ಪಾದನ, ವಿನಿಮಯ ವೃತ್ತಿಯವರು ಎಂದು ಎರಡು ತೆರನಾಗಿದ್ದು ಕರ್ನಾಟಕದ ವರ್ತಕರಲ್ಲಿ ವ್ಯಾಪಾರವನ್ನೇ ವೃತ್ತಿಯಾಗಿಸಿಕೊಂಡ ಶೆಟ್ಟಿ-ಬಣಜಿಗರು, ಸೆಟ್ಟಿಗುತ್ತ, ನಕರ, ಮುಂಮುರಿದಂಡ, ವಡ್ಡವ್ಯವಹಾರಿ ಗವಜಿ, ಗಾತ್ರಿಗ, ಸೆಟ್ಟಿಗಾಜಿ, ಹಲರು ಎಳಮೆ ಸಾಲಿಕೆ ಬಲ್ಲಾಳುಗಳು ಸಂಘ ರಚಿಸಿಕೊಳ್ಳದ ವಿನಿಮಯ ವರ್ತಕರಾಗಿದ್ದಾರೆ. ಜೊತೆಗೆ ಉತ್ಪಾದನೆ-ವಿನಿಮಯ ಕಾರ್ಯಗಳೆರಡನ್ನು ಮಾಡುವ ಕುಂಬಾರ ಅಕ್ಕಸಾಲಿ, ಮಾದಿಗ, ಸಮಗಾರ ಮೇದ ಮೊದಲಾದವರು ಉತ್ಪಾದಕ ವಿನಿಮಯ ವರ್ತಕರಾಗಿದ್ದಾರೆ".[೧೧೪] ಎಂದು ಶಾಸನಗಳಲ್ಲಿ ಕರ್ನಾಟಕದ ವರ್ತಕರು ಕೃತಿಯಲ್ಲಿ ಹೇಳಲಾಗಿದೆ. ಪ್ರಾಚೀನ ಕರ್ನಾಟಕದ ಅತ್ಯಂತ ಪ್ರಭಾವಶಾಲಿ ಮತ್ತು ಶ್ರೀಮಂತ ವರ್ತಕರು ವೀರ ಬಣಂಜುಗಳು ದೇಶದ ಸಮಸ್ತ ವ್ಯಾಪಾರ ವಹಿವಾಟು ಇವರ ಕೈಯಲ್ಲಿದ್ದು ಅಂದಿನ ರಾಜರ ಮೇಲೆ ಹೆಚ್ಚು ಪ್ರಭಾವ ಬೀರಿದ್ದರು.

ಕೃಷಿ ಉತ್ಪನ್ನಗಳು ಸಾಮಾಜಿಕ ವಿತರಣೆಗಾಗಿ ಬಂದು ಸೇರುವ ಜಾಗವನ್ನು ಮಾರುಕಟ್ಟೆ ಎಂದು ಹೇಳಬಹುದು. ಈ ಮಾರುಕಟ್ಟೆಯ ಸ್ವರೂಪ ಹಿಂದಿಗಿಂತ ಇಂದು ಅನೇಕ ರೀತಿಯಲ್ಲಿ ಬದಲಾವಣೆ ಪಡೆದಿವೆ. ಕೃಷಿಪದಕೋಶದಲ್ಲಿ ಮಾರುಕಟ್ಟೆ ಎಂದರೆ ಹೀಗೆ ಅರ್ಥೈಸಲಾಗಿದೆ. "ಒಂದು ವಸ್ತುವನ್ನು ಮಾರಲು ನಿರ್ಧಿಷ್ಟ ಪಡಿಸಿದ ಪ್ರದೇಶ, ದಲ್ಲಾಳಿ ಮಾರುಕಟ್ಟೆ ಎಂದರೆ ಕೊಡುವವನಿಗೂ ಕೊಳ್ಳವವನಿಗೂ ವ್ಯವಹಾರ ನಡೆಸುವಂತೆ ದಲ್ಲಾಳಿಗಳು ಸಹಾಯ ಮಾಡುವ ಕಟ್ಟೆ".[೧೧೫] ಮಾರುಕಟ್ಟೆಯಲ್ಲಿ ಬಳಕೆಯಾಗುವ ಪದಗಳನ್ನು ಕೃಷಿ ಪದ ಕೋಶದಲ್ಲಿ ಅರ್ಥಸಹಿತ ವಿವರಿಸಲಾಗಿದೆ. ಕ್ರಯ: ಕೊಳ್ಳುವುದು, ಖರೀದಿ ಕೊಂಡುಕೊಳ್ಳುವಿಕೆ ಗಿರಾಕಿ: ಕೊಂಡುಕೊಳ್ಳುವ ವ್ಯಕ್ತಿ, ಕೋಠಗಾರ: ಮಾರಾಟ ನಿಯೋಗಿಯ ಹೆಸರು, ಟೋಕು: ಸಗಟು ಮಾರಾಟ, ಪ್ಯಾಟಿ: ನಗರದಲ್ಲಿರುವ ಮಾರುಕಟ್ಟೆ, ಗಂಜು: ದಲ್ಲಾಳಿ ಅಂಗಡಿ ಅಥವಾ ರೈತರ ಬೆಳೆಗಳ ಮಾರಾಟದ ಅಂಗಡಿ. ಬೇರ: ವ್ಯಾಪಾರ, ಬೆಲೆ ದರ, ಕನಿಷ್ಠ ಬೆಲೆ, ರೈತರ ಉತ್ಪಾದನೆಗೆ ಮಾರುಕಟ್ಟೆಯಲ್ಲಿ ಬೆಲೆಯಿಲ್ಲದಿರುವಾಗ ಸರ್ಕಾರ ನಿರ್ಧರಿಸಬಹುದಾದ ಮಾರಾಟ ಬೆಲೆ. ರಖಂದರ: ಒಟ್ಟುಧಾರಣೆ, ಮುನಾಪಿ, ಲಾಭ, ಚೌಕಾಶಿ; ವ್ಯಾಪಾರದ ಸಂಧರ್ಭದಲ್ಲಿ ಬೆಲೆ ಇಳಿಸುವಂತೆ, ಏರಿಸುವಂತೆ ನಡೆಸುವ ವಾದ. ಮೆಣಸಿಗ; ಮೆಣಸಿನ ವ್ಯಾಪಾರ ಮಾಡುವವ. ಎಲೆವರದ; ವೀಳೆದೆಲೆಯ ವ್ಯಾಪಾರಿ ಮತ್ತು ವ್ಯಾಪಾರ, ಕೈ ಮುಚ್ಚು ವ್ಯಾಪಾರ ಪದ್ಧತಿ: ವ್ಯಾಪಾರ ಮಾಡಿಸುವಾಗ ದಲ್ಲಾಳಿಗಳು ಬಳಸುವ ಒಂದು ರಹಸ್ಯ ಪದ್ದತಿ, ಚಿಲ್ಲರೆ ವ್ಯಾಪಾರದ ಕಟ್ಟೆ: ಬಳಕೆದಾರರಿಗೆ ದಿನಸಿ ಒದಗಿಸುವ ಕಟ್ಟೆ, ಚಿಲ್ಲರೆ ವ್ಯಾಪಾರಿ: ಸಣ್ಣ ಪ್ರಮಾಣದ ಮಾರಾಟ ಮಾಡುವ ವ್ಯಾಪಾರಸ್ಥ ಈ ಕ್ಷೇತ್ರದಲ್ಲಿ ದೊರೆತ ಪದಗಳು ರೈತರಿಗೂ, ಮಾರುಕಟ್ಟೆಗೂ ಇರುವ ಸಂಬಂಧದ ಸ್ವರೂಪವನ್ನು ತಿಳಿಸುತ್ತವೆ. ಮಾರುಕಟ್ಟೆಯು ರೈತರಿಂದ ನಿರ್ದೇಶಿತನಾಗುವುದಿಲ್ಲವೆಂಬುದು ಈ ಪದಗಳ ಸ್ವರೂಪದಿಂದ ಸ್ಪಷ್ಟವಾಗುತ್ತದೆ.

ಬೆಳೆಗಳನ್ನು ಬೆಳೆದಾದ ಮೇಲೆ ಫಸಲನ್ನು ಅಳತೆ, ಎಣಿಕೆ, ತೂಕಗಳ ಮೂಲಕ ಪ್ರಮಾಣ ಮಾಡಲಾಗುತ್ತದೆ. ಇಳುವರಿಯ ಆಧಾರದ ಮೇಲೆ ಭೂಮಿಯನ್ನು ಗುರುತಿಸುವ ಪದ್ಧತಿಯೊಂದಿತ್ತು. ಅಷ್ಟು ಖಂಡುಗ, ಇಷ್ಟು ಖಂಡುಗ ಭೂಮಿ ಎಂದು ಹೇಳಲಾಗುತಿತ್ತು. ಕೋಲುಗಳ ಮೂಲಕ ಭೂಮಿಯನ್ನು ಅಳೆಯಲಾಗುತ್ತಿತ್ತು. ಇಂದು ಚೈನು, ಕೊಂಡಿಗಳಿಂದ ಸರ್ವೇ ಮಾಡಲಾಗುತ್ತದೆ. ಹಾಗಯೇ ಬೆಳೆಯ ಅಳತೆ ಗಾತ್ರ ಅವಲಂಬಿಸಿದ್ದು ಕಾಲನಂತರದಲ್ಲಿ ಇಂದು ತೂಕವನ್ನು ಅವಲಂಬಿಸರುವುದನ್ನು ಕಾಣುತ್ತೇವೆ.

ಮಾರುಕಟ್ಟೆಯಲ್ಲಿ ಮಾರುವ ಮತ್ತು ಕೊಳ್ಳುವ ಪಧಾರ್ಥಗಳು, ಅನೇಕ ಸರಕುಗಳನ್ನು ಕೊಡುಕೊಳ್ಳುವಿಕೆ ಪ್ರಾಚೀನ ಕಾಲದಿಂದ ಇಂದಿನ ಕಾಲದವರೆಗೂ ಹಲವು ಬಗೆಗಳಲ್ಲಿ ನಡೆಯುತ್ತಿದೆ. ಇಂದು ವ್ಯಾಪಾರದ ವಿಧಾನ ಅನೇಕ ಹೊಸ ರೀತಿಯ ವಿನ್ಯಾಸ ಪಡೆದುಕೊಂಡಿದೆ. ಕನ್ನಡ ಸಾಹಿತ್ಯ, ಶಾಸನ, ಜನಪದಕಾವ್ಯಗಳಲ್ಲಿ ವ್ಯಾಪಾರದ ಸ್ವರೂಪ ಬೆಳೆದುಬಂದ ಬಗೆಯನ್ನು ತಿಳಿಯಲು, ಮಾರುಕಟ್ಟೆಯಲ್ಲಿ ಕಂಡು ಬರುವ ನಾಲ್ಕು ಪ್ರಕಾರಗಳನ್ನು ಮಾಡಿಕೊಂಡು ಈ ಕೆಳಗಿನಂತೆ ತಿಳಿಯಬಹುದಾಗಿದೆ.

ಸಂತೆ : ಸಂತೆ ಪ್ರಾಚೀನ ಮತ್ತು ಮಧ್ಯಕಾಲೀನ ಹಾಗೂ ಇಂದು ಕೂಡ ಕರ್ನಾಟಕದ ಮುಖ್ಯ ವ್ಯಾಪಾರದ ಕೇಂದ್ರ, ನಮ್ಮ ಸಂತೆಯ ಕಲ್ಪನೆ ಇಂದು ಮುಂದುವರೆದ ದೇಶಗಳಲ್ಲಿಯೂ ತುಂಬಾ ವ್ಯವಸ್ಥಿತ ಹಾಗೂ ಅಚ್ಚುಕಟ್ಟಾಗಿ ನಡೆಯುತ್ತಿರುವುದನ್ನು ಕಾಣುತ್ತೇವೆ. ಪ್ರತಿಯೊಂದು ಹೋಬಳಿ, ತಾಲ್ಲೂಕ ಮಟ್ಟಗಳಲ್ಲಿ ನಿರ್ಧಿಷ್ಟ ವಾರಗಳಂದು ನಡೆಯುತ್ತವೆ. ಕೃಷಿ ಉತ್ಪನ್ನಗಳು, ಕೃಷಿ ಅವಲಂಬಿತ ಉಪಕರಣಗಳು ರೈತರಿಗೆ ಕೆಲವು ಅಗತ್ಯ ವಸ್ತುಗಳು ವ್ಯಾಪಾರ ವಹಿವಾಟುಗಳು ನಡೆಯುವ ಸ್ಥಳ ಸಂತೆಯಾಗಿದೆ.

ಸಂಕ್ಷಿಪ್ತ ಕನ್ನಡ ನಿಘಂಟುವಿನಲ್ಲಿ 'ಸಂತೆ' ಎಂದರೆ 'ನಿಯಮಿತ ಕಾಲಾವಧಿಗೆ ಕೊಡುಕೊಳ್ಳುವದಕ್ಕಾಗಿ ಸೇರುವ ಜನರ ಗುಂಪು, ಸಮೂಹ' ಎಂದು ಅರ್ಥ ಹೇಳಲಾಗಿದೆ. ಸಂತೆ ಸೇರುವ ಸ್ಥಳವನ್ನು ಮಾರುಕಟ್ಟೆಯೆಂದು ಕರೆಯಲಾಗುತ್ತದೆ. ಮನುಷ್ಯನ ಬದುಕಿನ ಸರ್ವೋತೋಮುಖ ಅಭಿವೃದ್ಧಿ ಸಾಧಿಸುವಲ್ಲಿ ಸಂತೆ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಹೀರೆ ಬೇವಿನೂರ ಶಾಸನದಲ್ಲಿ ಧರ್ಮಸಂತೆಯ ಉಲ್ಲೇಖ ಕಂಡುಬರುತ್ತದೆ. ಇಲ್ಲಿ ಸರುಕಗಳ ಮೇಲೆ ಸಂತೆಯ ಸುಂಕ ಮಾರಾಟ ತೆರಿಗೆ ವಿಧಿಸುತ್ತಿರಲಿಲ್ಲ. ಧರ್ಮದ ಸಂತೆಯ ಸಂರಕ್ಷಣೆ ಮಾಡಿದವರಿಗೆ ರಾಜ್ಯಸಂಪದ, ಸಂಪ್ರಾಪ್ತವಾಗುವುದೆಂಬ ನಂಬಿಕೆ ಇತ್ತು. "ಕ್ಷಿತಿರುಹಮಂ ಸಂತೆಯಮಂ ಪ್ರತಿಪಾಳಿಸಿ ದವರ್ಗ್ಗೆ ರಾಜ್ಯ ಸಂಪದ ವಕ್ಕುಂ".[೧೧೬] ಎಂಬ ಉಕ್ತಿ ಕಂಡುಬರುತ್ತದೆ. ಹೊಸದಾಗಿ ಸಂತೆಯ ನಿರ್ಮಿಸಿ ವರ್ತಕರ ಆಕರ್ಷಿಸಲು, ಸುಂಕ ರಿಯಾಯಿತಿ, ಕಾಲಕ್ರಮದಲ್ಲಿ ಹಾಳಾದ ಸಂತೆಗಳ ದುರಸ್ಥಿ ಮಾಡಿಸುತ್ತಿದ್ದ ಆಂಶಗಳು ಕಂಡುಬರುತ್ತವೆ. ಸಂತೆ ಕೂಡುವ ದಿನಗಳು ರವಿವಾರವಾಗಿದ್ದು ಕಾಲ ಬದಲಾದಂತೆ ಶುಕ್ರವಾರ, ಮಂಗಳವಾರ, ಸೋಮವಾರ ,ಶನಿವಾರ, ಗುರುವಾರಗಳಲ್ಲಿ ಸಂತೆ ನಡೆಯುತ್ತದೆ. ಸಂತೆಯ ದಿನ ಜಕಾತಿ ವಸೂಲಾತಿಯನ್ನು ಇಂದು ಕೂಡ ಕಾಣುತ್ತೇವೆ. ಹಿಂದಿನ ಕಾಲದಲ್ಲಿ ಇದನ್ನು ಧರ್ಮ ಕಾರ್ಯಗಳಿಗೆ, ಉಚಿತ ಭೋಜನಕ್ಕೆ ಬಳಸುತ್ತಿದ್ದರು. ಅಂದು ಸಂತೆಗಳಲ್ಲಿ ಪಸಿಗೆ ಎತ್ತಲಾಗುತ್ತಿತ್ತು ಇಂದು ಕೂಡ 'ಸಂತೆಯ ಪಸಿಗೆ ಪದ್ಧತಿ' ಜೀವಂತವಾಗಿದೆ. ಇಂತಹ ಹಣ ಅಥವಾ ವಸ್ತುಗಳನ್ನು ಉಚಿತ ಪ್ರಸಾದ ನಿಲಯ, ಧಾರ್ಮಿಕ ಸಂಸ್ಥೆಗಳಿಗೆ ಬಳಸುತ್ತಿದ್ದರೆಂಬ ವಿವರಗಳು ಅನೇಕ ಶಾಸನಗಳಲ್ಲಿ ಕಾಣಸಿಗುತ್ತವೆ.

ಕನ್ನಡ ಕಾವ್ಯಗಳಲ್ಲಿ ಸಂತೆ ಕುರಿತಾದ ಮಾಹಿತಿ ಅಷ್ಟಾಗಿ ಇಲ್ಲ. ಆದರೂ ಸಂತೆ ಪೇಟೆಯಲ್ಲಿ ನಡೆಯುವ ವ್ಯಾಪಾರ ವಹಿವಾಟಿನ ಅಂಶಗಳು ಕಾಣಸಿಗುತ್ತವೆ. ಅಕ್ಕಮಹಾದೇವಿಯ ವಚನದಲ್ಲಿ 'ಸಂತೆಯೊಳಗೊಂದು ಮನೆಯ ಮಾಡಿ ಶಬುದಕ್ಕೆ ನಾಚಿದಡೆ ಎಂತಯ್ಯ..........' ಎಂಬಲ್ಲಿ ಸಂತೆಯ ಉಲ್ಲೇಖ ಕಾಣುತ್ತೇವೆ. ಜೈಮಿನಿಭಾರತದಲ್ಲಿ ಸಂತೆಯ ಉಲ್ಲೇಖ ಕಂಡುಬಂದು, ಸಂತೆಯಲ್ಲಿ ಗಂದಸಾಲೆಅಕ್ಕಿ, ಅತ್ಯುತ್ತಮವಾದಧಾನ್ಯ, ತರಕಾರಿ, ಹಣ್ಣು , ಹಂಪಲು ಕೊಳ್ಳುವ –ಮಾರುವ ಬಗೆಯನ್ನು ತಿಳಿಸಲಾಗಿದೆ. ಒಟ್ಟಾರೆಯಾಗಿ ಸಂತೆ ಮಧ್ಯಕಾಲೀನ ಕರ್ನಾಟಕದ ಅಂದಿನ ದಿನಮಾನಗಳಲ್ಲಿ ರಾಜ್ಯದ ಆರ್ಥಿಕ ಸಂಪತ್ತಿನ್ನಲ್ಲೊಂದಾಗಿದ್ದು, ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿದೆ. ಶ್ರೀಮಂತ, ಬಡವ, ಕೂಲಿಕಾರ್ಮಿಕರು ಸಂತೆಯಿಂದ ಉಪಯೋಗ ಪಡೆಯುತ್ತಿದ್ದಾರೆ. ಆದರೆ ಇಂದು ಮದ್ಯವರ್ತಿಗಳ ಕಾಟ, ದಲ್ಲಾಳಿಗಳ ವರ್ತನೆ, ಬೃಹತ್ ಪ್ರಮಾಣದಲ್ಲಿ ಅಂಗಡಿ ನಿರ್ಮಾಣ ಮಾಡಿ ವ್ಯಾಪಾರ ನಡೆಸುವ ವ್ಯಕ್ತಿಗಳು, ಬೇರೆ ರಾಜ್ಯಗಳಿಂದ ವಸ್ತುಗಳನ್ನು ತಂದು ಮಾರಾಟ ಮಾಡುವುದು, ಸ್ಥಳೀಯ ಬೆಳೆಯನ್ನು ಬೆಳೆದು ಮಾರಲು ಬರುವ ರೈತ ಸಮುದಾಯಕ್ಕೆ ಅನೇಕ ರೀತಿಯ ಕಿರಿ ಕಿರಿ ಉಂಟಾಗಲು ಸಾದ್ಯವಾಗಿದೆ ಎನ್ನಬಹುದು. ಆದರೂ ಸಂತೆಗಳು ಅನೇಕ ಸಣ್ಣ ವ್ಯಾಪಾರಿಗಳಿಗೆ, ಕೂಲಿಕಾರ್ಮಿಕರಿಗೆ ಜೀವನಾಧಾರವನ್ನು ಒದಗಿಸಿವೆ ಎಂದು ಹೇಳಬಹುದು. ಒಬ್ಬ ಸಣ್ಣ ವ್ಯಾಪಾರಿ ತನ್ನ ಸುತ್ತಮುತ್ತಲ ಪರಿಸರದಲ್ಲಿ ಸಂತೆ ನಡೆಯುವ ದಿನಗಳಲ್ಲಿ ಅಂಗಡಿ ಹೂಡಿ ಜೀವನ ಸಾಗಿಸುತ್ತಾನೆ. ರೈತರು ತಾವು ಬೆಳೆದ ಧಾನ್ಯ, ತರಕಾರಿ, ಪಲ್ಯ, ಅನೇಕ ಬಗೆಯ ದಿನಸುಗಳನ್ನು ಮಾರಾಟ ಮಾಡಿ ತಮಗೆ ಅಗತ್ಯ ವಸ್ತುಗಳನ್ನು ಕೊಂಡು ಜೀವನ ನಡೆಸುತ್ತಾರೆ. ಈ ಕಾರಣದಿಂದ ಸಂತೆ ಒಂದು ಮಹತ್ವದ ಸಂಸ್ಥೆಯಾಗಿದೆ.

ಅಂಗಡಿ : ಅಂಗಡಿ ಎಂದರೆ ಪದಾರ್ಥಗಳನ್ನು ಮಾರುವ ಸ್ಥಳವೆಂದು ಅರ್ಥ. (ಸಂಕ್ಷಿಪ್ತ ಕನ್ನಡ ನಿಘಂಟು) ಸಂತೆಯಲ್ಲಿ ಬಯಲು ಅಂಗಡಿ, ಕಟ್ಟಿದ ಅಂಗಡಿಗಳು ಇದ್ದರೆ ಪೇಟೆ, ಪಟ್ಟಣಗಳಲ್ಲಿ ಕಟ್ಟಿದ

ಮಳಿಗೆಗಳಲ್ಲಿ ದಿನನಿತ್ಯ ವ್ಯಾಪಾರ ವಹಿವಾಟು ನಡೆಯುತ್ತದೆ. ಸಾಲು ಅಂಗಡಿಗಳು, ಬಿಡಿ ಬಿಡಿ ಅಂಗಡಿಗಳು, ಹಂದಗೇರಿಯೇ ಅಂಗಡಿಯಾಗಿ ಅನೇಕ ಬಗೆಯ ದಿನಸು ಮಾರುವ ವರ್ತಕರ ಬೀದಿಗಳೆ ಅಂಗಡಿಯಾಗಿರುತ್ತವೆ. ಇಂತಹ ಅಂಗಡಿಗಳನ್ನು ಕಟ್ಟಿಸಿ ದೇವಾಲಯ, ಜಿನಾಲಯಗಳಿಗೆ ದಾನವಾಗಿ ನೀಡಿದರೆ ಪುಣ್ಯಬರುತ್ತದೆ ಎಂದು ಜನ ಭಾವಿಸಿದಂತೆ ಕಂಡುಬರುತ್ತದೆ. "ಅಂಗಡಿಗಳಲ್ಲಿ ೧. ಸಾಮಾನ್ಯ (ಕಟ್ಟಡವಿರುವ) ಅಂಗಡಿ. ೨. ಬಯಲು ಅಂಗಡಿ, ೩. ಧರ್ಮದ ಅಂಗಡಿ, ೪. ದೇವರ ಅಂಗಡಿ, ೫. ಮಾನ್ಯದ ಅಂಗಡಿ ಇತ್ಯಾದಿ ಪ್ರಭೇದಗಳು ತೋರಿಬರುತ್ತವೆ. ಇವುಗಳಲ್ಲಿ ಧರ್ಮದ ಅಂಗಡಿ, ದೇವರ ಅಂಗಡಿ, ಮಾನ್ಯದ ಅಂಗಡಿಗಳಿಗೆ ಕರವಿನಾಯಿತಿಯಿದ್ದಿತು. ಅಂಗಡಿಗಳ ಮೇಲೆ ಅಂಗಡಿ ಅಧಿಕಾರಿಯಿದ್ದನು. ಈತನು ಅಂಗಡಿಯಿಂದ ದೇವಾಲಯಗಳಿಗೆ ಸಲ್ಲಬೇಕಾದ ವಸ್ತುಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದ".[೧೧೭] ಎಂದು ಶಾಸನಗಳ ಆಧಾರದಿಂದ ವಿವರಿಸುತ್ತಾರೆ.

ಅಂಗಡಿಗಳಲ್ಲಿ ಕೃಷಿಕರು ಬೆಳೆದ ಉತ್ಪನ್ನಗಳು ಮಾರಾಟವಾಗುತ್ತವೆ. ಆಹಾರ ಧಾನ್ಯಗಳಾದ ಜೋಳ, ರಾಗಿ, ಸಜ್ಜೆ, ನವಣೆ, ಅಕ್ಕಿ, ಸಾವೆ, ಗೋಧಿ ಮುಂತಾದವು ದ್ವಿದಳ ಧಾನ್ಯಗಳಾದ ಬೇಳೆಕಾಳುಗಳು, ವಿವಿಧ ಕಾಳುಗಳು ಸಾಂಬಾರ ಪದಾರ್ಥಗಳು ಮಾರಾಟವಾಗುತ್ತವೆ. ದಿನನಿತ್ಯದ ವ್ಯವಹಾರ ಅಂಗಡಿಗಳಲ್ಲಿ ನಡೆಯುತ್ತದೆ. ರೈತರು ಉಪಯೋಗಿಸುವ ಉಪಕರಣಗಳು, ರೈತರಿಗೆ ಉಪಯೋಗಿ ವಸ್ತುಗಳು ಅಂಗಡಿಯಲ್ಲಿ ದೊರೆಯುತ್ತವೆ. ಪದಾರ್ಥಗಳಲ್ಲಿ ಉತ್ತಮ, ಮಧ್ಯಮ ಹಾಗೂ ಕನಿಷ್ಠವೆಂಬಂತೆ ಭಾಗಮಾಡಿ, ಬೆಲೆಯಲ್ಲಿಯೂ ತಾರತಮ್ಯತೆಯಿಂದ ಮಾರಾಟಮಾಡಲಾಗುತ್ತದೆ. ಇಂದು ಅಂಗಡಿಯ ವ್ಯಾಪಾರ ವಹಿವಾಟು ಅನೇಕ ಬಗೆಯ ಹೊಸತನ ಕಂಡುಕೊಂಡಿದೆ. ಮನೆಯ ಬಾಗಿಲಿಗೆ ಪದಾರ್ಥಗಳನ್ನು ಮುಟ್ಟಿಸುವ ವ್ಯವಸ್ಥೆಯು ಕಂಡುಬರುತ್ತದೆ. ರೈತನಿಗೆ ಮಾತ್ರ ಅಂದು ಇಂದು ಅಂಗಡಿಗಳು ಹಾಗೆಯೇ ಇರುವ ಅಂಶ ಕಂಡುಬರುತ್ತದೆ.

ಪೇಟೆ : ಪೇಟೆಯಲ್ಲಿಯೂ ಕೊಡ ಕೊಳ್ಳುವ ಮಾರುವ ಪ್ರಕ್ರಿಯೆಗಳೇ ನಡೆಯುತ್ತವೆ. ಸಂತೆ ಮತ್ತು ಪಟ್ಟಣಗಳಲ್ಲಿ ಪೇಟೆ ಕಂಡುಬರುತ್ತದೆ. ಪೇಟೆಯಲ್ಲಿ ಎರಡು ವಿಧ. ಒಂದು ಹೊರಪೇಟೆ ಮತ್ತೊಂದು ಒಳಪೇಟೆ. ಹೊರಪೇಟೆ ಸಂತೆಯಲ್ಲಿ ಕಂಡುಬಂದರೆ ಒಳಪೇಟೆ ಪಟ್ಟಣದಲ್ಲಿ ಕಂಡುಬರುತ್ತದೆ. ನಿಗದಿತ ದಿನ ಸಂತೆಯಲ್ಲಿ ಪೇಟೆಯ ವಹಿವಾಟು ಕಂಡು ಬಂದರೆ ಪಟ್ಟಣದ ಪೇಟೆ ಬೀದಿಗಳಲ್ಲಿ ದಿನ ನಿತ್ಯ ವ್ಯಾಪಾರ ವಹಿವಾಟು ನಡೆಯುತ್ತದೆ. ಪೇಟೆಗೆ ಚತುಸ್ಸಿಮೆ ಗುರುತಿಸುವ ಅನೇಕ ಅಗತ್ಯ ಸೌಲಭ್ಯ ಕಲ್ಪಿಸುವ, ದುರಸ್ತಿಗೊಳಿಸುವ, ವರ್ತಕರನ್ನು ಆಕರ್ಷಿಸುವ ಅಂಶಗಳು ಶಾಸನಗಳಲ್ಲಿ ಕಂಡುಬರುತ್ತವೆ. "ಪೇಟೆ ಕಟ್ಟಿಸಿದ ತರುವಾಯ ಬಂದ ಒಕ್ಕಲುಗಳಿಗೆ ೧ ವರ್ಷ ಸುಂಕ ರಿಯಾಯಿತಿ ಕ್ರಮೇಣ ಅನುಕೂಲಕ್ಕೆ ತಕ್ಕಂತೆ ಕಟ್ಟಳೆ-ಸೌಕರ್ಯ ಒದಗಿಸುತ್ತಿದ್ದ ಉಲ್ಲೇಖ ಬಾಗೂರ ಶಾಸನದಲ್ಲಿದೆ. ಕೃಷ್ಣರಾಯಪೂರ ಪೇಟೆಯಲ್ಲಿ ಬಂದು ನೆಲೆಸುವ ಒಕ್ಕಲುಗಳಿಗೆ ೩ ವರ್ಷ ಸುಂಕ ಪರಿಹಾರವಿದ್ದಿತು. ಆದರೆ ಆಮೇಲೆ ಅಲ್ಪ ಪ್ರಮಾಣದ ತೆರಿಗೆ ವಿಧಿಸಿದುದು ಗೊತ್ತಾಗುತ್ತದೆ. ಇಂಥ ಅನೇಕ ಸೌಲಭ್ಯಗಳಿಂದಾಗಿ ವರ್ತಕರು ಪೇಟೆಗಳತ್ತ ಧಾವಿಸಿಬರುತ್ತಿದ್ದರು".[೧೧೮] ಎನ್ನಲಾಗಿದೆ.

ಪಟ್ಟಣ : ವ್ಯಾಪಾರದ ಪ್ರಮುಖ ವಹಿವಾಟು ಕೇಂದ್ರ ಪಟ್ಟಣ. ಸಂತೆ ಜರುಗುವ ಸ್ಥಳಗಳು ಪಟ್ಟಣಗಳಾಗಿದ್ದವು. ಸಂತೆಯು ಕಟ್ಟಿಸಿ ಗ್ರಾಮವನ್ನೇ ಪಟ್ಟಣವಾಗಿಸಿ, ಹೊಸದಾಗಿ ಕಟ್ಟಿಸಿದ ಪಟ್ಟಣ, ಮೂಲಗ್ರಾಮದಿಂದ ಪ್ರತ್ಯೇಕವಾಗಿರುವ ಅಂಶ ಬೇಪೂರ ಶಾಸನದಲ್ಲಿ ಕಂಡುಬರುತ್ತದೆ. ಪಟ್ಟಣಗಳ

ನಿರ್ಮಾಣದ ಉದ್ದೇಶ ವಾಣಿಜ್ಯೋದ್ಯಮ ಬೆಳೆಸುವುದು, ಅದಕ್ಕಾಗಿ ವರ್ತಕರಿಗೆ ಪ್ರಾರಂಭದಲ್ಲಿ ಅನೇಕ ಬಗೆಯ ವಿನಾಯತಿ, ಸೌಲಭ್ಯಗಳು ದೊರಕಿಸಿಕೊಟ್ಟ ಅಂಶಗಳು ಶಾಸನಗಳಿಂದ ತಿಳಿದುಬರುತ್ತದೆ.

ಒಟ್ಟಾರೆಯಾಗಿ ಪ್ರಾಚೀನ ಕರ್ನಾಟಕದಲ್ಲಿ ಸಂತೆ, ಅಂಗಡಿ, ಪೇಟೆ ಮತ್ತು ಪಟ್ಟಣಗಳು ರಾಜರು, ಶ್ರೀಮಂತ ವರ್ತಕರ ಪ್ರೋತ್ಸಾಹ, ಪ್ರೇರಣೆ ಸಹಾಯದಿಂದ ಬೆಳೆದುಬಂದಿವೆ ಎನ್ನಬಹುದು. ಕನ್ನಡ ಸಾಹಿತ್ಯ, ಶಾಸನ ಜನಪದಗಳಲ್ಲಿ ಕಾವ್ಯಗಳಲ್ಲಿ ೧. ವ್ಯಾಪಾರ ವಹಿವಾಟು ೨. ಸಾಕಾಣಿಕೆ ಮತ್ತು ೩. ಕರ(ತೆರಿಗೆ) ಪದ್ಧತಿಗಳು ಹೇಗೆ ನಡೆಯುತ್ತಿದ್ದವು ಎಂಬುದನ್ನು ಈ ಕೆಳಗಿನಂತೆ ಪರಿಶೀಲಿಸಬಹುದಾಗಿದೆ.

ವ್ಯಾಪಾರ ವಹಿವಾಟು : ವ್ಯಾಪಾರವನ್ನೇ ವೃತ್ತಿಯಾಗಿ ಮಾಡಿಕೊಂಡ ವರ್ತಕರು ಬೇರೆ ಬೇರೆ ಸ್ಥಳ, ಪ್ರದೇಶಗಳಿಗೆ ಪಾದಮಾರ್ಗ, ಜಲಮಾರ್ಗಗಳ ಮೂಲಕ ಒಂಟಿಯಾಗಿ, ಇಲ್ಲವೇ ಗುಂಪು ಗುಂಪಾಗಿ ವ್ಯಾಪಾರಕ್ಕೆ ತೆರಳುತ್ತಿದ್ದರು. ಪ್ರಾಚೀನ ಕಾಲದಲ್ಲಿ ಈ ವರ್ತಕರು ಹಸುಬೆ, ಮೂಟೆ, ಹೆಡಗಿ, ಬರಕ, ಕಲ್ಲಿ, ಕೊಡ, ಚರ್ಮದ ಚೀಲ, ಬಿದಿರಿನ ಕೊಳವೆ ಮುಂತಾದವುಗಳನ್ನು ಸರಕು ತುಂಬಲು ಬಳಸುತ್ತಿದ್ದರು. ಎತ್ತು, ಕತ್ತೆ, ಕುದುರೆ, ಕೋಣ, ಎಮ್ಮೆ, ತೊತ್ತು, ಬಂಡಿಗಳ ಮೂಲಕ ಸರಕು ಸಾಗಿಸುತ್ತಿದ್ದರು. ಶಾಸನಗಳಲ್ಲಿ ವ್ಯಾಪಾರ ವಹಿವಾಟಿನ ಮಾಹಿತಿ ಸಂಗ್ರಹಿಸಿ, ವ್ಯಾಪಾರ ನೆಡೆಯುತ್ತಿದ್ದ ಬಗೆಯನ್ನು ತಿಳಿಯಬಹುದಾಗಿದೆ. ಪ್ರಾಚೀನ ಕರ್ನಾಟಕದ ಸಂತೆ, ಪೇಟೆ, ಪಟ್ಟಣಗಳಲ್ಲಿ ಮಾರಾಟವಾಗುತ್ತಿದ್ದ ಸರಕುಗಳನ್ನು ಕುರಿತು ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. ಅವುಗಳು "ಭತ್ತ, ಜೋಳ, ಅಕ್ಕಿ, ಎಳ್ಳು, ಹಾಲಿವಳ್ಳಿ, ಅವರೆ, ಕಡಲೆ, ತೊಗರಿ, ಗೋಧಿ, ಉದ್ದು; ಜೀರಿಗೆ, ಸಾಸಿವೆ, ಮೆಣಸು, ಅಲ್ಲ, ಶುಂಠಿ, ಅರಿಸಿಣ, ಯಾಲಕ್ಕಿ, ಮೆಂತೆ, ಸಬ್ಬಸಗಿ, ಕೋತಂಬರಿ, ಬಳ್ಳೊಳ್ಳಿ, ಈರುಳ್ಳಿ, ಬಜೆ, ಬದ್ರಮಸ್ತೆ, ಇಂಗು; ಹತ್ತಿ, ಹಂಜಿ, ಮೂಲು ಸೀರೆಪಟ್ಟ, ಪಳಿವಟ್ಟ, ಪಟ್ಟಸೂತ್ರ, ಬಟ್ಟೆ, ಪಂಚವಣಿಗೆ, ಸಣಬು, ಕಂಬಳಿ, ಹುಲಿದೊಗಲು; ವೀಳ್ಯೆದೆಲೆ, ಅಡಿಕೆ ಸುಣ್ಣ; ಭದ್ರಹಸ್ತಿ, ಜಾತ್ಯಶ್ವ, ಇಂದ್ರನೀಲ, ಚಂದ್ರಕಾಂತ, ಮುತ್ತು, ಮಣಿ ಮಾಣಿತ್ಯ, ವಜ್ರ ವೈಢೂರ್ಯ, ಗೋವೇಧಿಕ, ಪುಷ್ಯರಾಗ, ಪದ್ಮರಾಗ, ಪವಳ, ಮರಕತ, ಕರ್ತೇತನಪಟ್ಟೆ, ಚಿನ್ನ, ತವರು; ಬೆಲ್ಲ, ಸಕ್ಕರೆ, ಉಪ್ಪು, ಎಣ್ಣೆ, ತುಪ್ಪ; ಲವಂಗ, ಅಗರು, ಚಂದನ, ಕುಂಕುಮ, ಮಲೆಗಜ, ಕರ್ಪೂರ, ಕಸ್ತೂರಿ; ದವಣ, ಬಳೆ, ಕಾಡಿಗೆ (ತಾಳೆ), ಓಲೆ, ಕಾಯಿಪಲ್ಯೆ; ಬಾಳೆಯಹಣ್ಣು, ತೆಂಗಿನಕಾಯಿ, ವಿಲಿವಾದ್ರಕಾಯಿ, ನೆಲ್ಲಿಕಾಯಿ, ಹೂವು, ಹೂಮಾಲೆ, ಕಬ್ಬು, ಹಿಪ್ಪಲಿ, ಶಂಖ, ಕಾಷ್ಠ, ಕುದುರೆ, ಎತ್ತು, ಆನೆ ಅರಗು, ನಾರು, ಬೇರು, ಸದಹುಗೆ, ಚಮರಿ, ಸೆಳಂಬಿ, ಸೈಂಧವ, ಕಾರಬೀಜ, ಉಂಬಳ, ನೀಲಿಯ ಗುಳಿಗೆ, ಮೊರ ಪಾದರಕ್ಷೆ, ಮಿಣಿ, ಗಡಿಗೆ, ಹುಲ್ಲು ಇತ್ಯಾದಿ............".[೧೯೯] ಇವುಗಳಲ್ಲಿ ಸಾಂಬಾರ ವಸ್ತುಗಳು ದವಸ-ಧಾನ್ಯ, ಹತ್ತಿ, ಸೀರೆ, ಅಡಿಕೆ, ವೀಳ್ಯೆದೆಲೆ, ಎಣ್ಣೆ, ಬೆಲ್ಲ, ಸಕ್ಕರೆ, ಉಪ್ಪು, ಕಾಯಿಪಲ್ಯೆಗಳು ಅಧಿಕ ಬಳಕೆಯಾಗುತ್ತಿದ್ದು. ಈ ವಸ್ತುಗಳಲ್ಲಿ ಹೆಚ್ಚಿನವು ಕರ್ನಾಟಕದಲ್ಲಿ ಬೆಳೆಯುತ್ತಿದ್ದರು.

ಸಗರ ಶಾಸನದಲ್ಲಿ ವಿದ್ಯಾಧಾನಕ್ಕೆ ಕಾಜಗಾರ ಶೆಟ್ಟಿ ತಾನು ಮಾರಿದ ಸಮಸ್ತ ವಸ್ತುಗಳನ್ನು ನೀಡಿದ ವಿವರ ದೊರೆಯುತ್ತದೆ. "...............ದೇವಮಾನಮಂ ಅಲ್ಲಿ ಮಾರಿದ ಸಮಸ್ತ ಭಣ್ಡಕ್ಕೆ ಕಾಜಗಾರ ಸೆಟ್ಟಿಯುಮ್ಮಾಱದ ಸಮಸ್ತ ಭಣ್ಡಕ್ಕಂ ಗದ್ಯಾಣಕ್ಕೆ ವೆಸವಿವೊನ್ದು ೧ ಮೆಣಸಿನ ಹೇಱುಂಗೆ ಮೆಳಸು ಮಾನವೊನ್ದು ೧ ಅಡಿಕೆಯ ಹೇಱುಂಗೆ ಅಡಕೆ ಇಪ್ಪತ್ತೈಯ್ದು ಎಲೆಯ ಹೇಱುಂಗೆ ನೂಱು ೧೦೦ ತಲೆವೊಱಿಗೆ ಎಲೆ ಅಯ್ವತು ೫೦ ಭಣ್ಡಿಯ ಭತ್ತಕ್ಕೆ ಬಳ್ಳ ಎರಡು ೨ ಕೋಣದ ಹೇಱುಂಗೆ ಬಳ್ಳ

ಒನ್ದು ೧ ಎತ್ತಿನ ಹೇಱುಂಗೆ ಮಾನ ಎರಡು ೨ ಕರ್ತ್ತೆಯ ಹೇಱುಂಗೆ ಮಾನ ೨..............".[೧೨೦] ಈ ಶಾಸನದಲ್ಲಿ ಮೆಣಸು, ಅಡಕೆ, ಎಲೆ, ಭತ್ತ ಮುಂತಾದ ಮಾರಾಟ ಮಾಡುವ ವಸ್ತುಗಳ ಉಲ್ಲೇಖ ಮತ್ತು ಮಾನ, ಬಳ್ಳ, ಎಂಬ ಅಳತೆ ಮಾಪನ ಮಾಹಿತಿ ಹಾಗೂ ವೀಳೆದೆಲೆಯ ಎಣಿಕೆಯ ಮಾಹಿತಿ ದೊರೆಯುತ್ತದೆ. ಮಾನ್ವಿ ತಾಲ್ಲೂಕಿನ ಬಾಗಿನೋಳಿದಿಡ್ಡಿಯ ಒಂದು ಶಾಸನದಲ್ಲಿ ಮಾರಾಟದಿಂದ ಬರುವ ಲಾಭಾಂಶದಲ್ಲಿ ದೇವರಿಗೆ ದಾನ ಬಿಟ್ಟ ವಿವರ ದೊರೆಯುತ್ತದೆ. "..........ಮೆಣಸು ಸುಂಠಿ ಹಿಪ್ಲಿ ಸಖ್ಖರ ಬೆಲ್ಲ ಅರಿಶಿನವಲ್ಲ ಸಾಸವೆ ಜೀರಿಗೆ..........ದಂಗಳೆಲ್ಲ..........ಹೊಂಗೆ ಕೊಟ್ಟಲ್ಲಿಯರ ವೀಸ ಕೊಂಡಲ್ಲಿಟ್ಟರು ಹೇಱುಂಗೆ ಎಲೆ ೧೦೦ಹೊತ್ತಳಕ್ರಮದಿಂ ಕೊಟ್ಟರು..........."[೧೨೧] ಅನೇಕ ಸಾಂಬಾರ ಜಿನಸುಗಳ ಉಲ್ಲೇಖ ಕಂಡು ಬರುತ್ತದೆ.

ಮಾರಾಟವಾಗುವ ಸರಕುಗಳು, ವರ್ತಕರು, ತೂಕ, ಅಳತೆ, ಎಣಿಕೆ, ಮಾಪನ, ಸುಂಕ ಹೇರುವ ಬಗೆ, ಪ್ರಾದೇಶಿಕ ಭಿನ್ನತೆ ಮಾಹಿತಿ, ಅನೇಕ ಶಾಸನಗಳಲ್ಲಿ ದೊರೆಯುತ್ತದೆ. ಅವುಗಳಲ್ಲಿ ಮುಖ್ಯವಾಗಿ ದಿಗ್ಗಾವಿಶಾಸನ, ಸರಡಗಿ ಶಾಸನ, ಇಂಗಳಗಿಶಾಸನ, ಅಂಕಲಗಿ ಶಾಸನ, ಕುಳಗೇರಿಶಾಸನ, ಅಡಕಿಶಾಸನ, ಪೇಡಂಶಾಸನ, ಹರಸುರಶಾಸನ, ಚಿಕ್ಕ ಮುದನೂರುಶಾಸನ, ಗೂಬ್ಬೂರುಶಾಸನ, ನೀಲವಂಜಿಶಾಸನ, ದೇವದುರ್ಗಶಾಸನ, ಬೇಲೂರುಶಾಸನ, ವೆಂಕಟ್ಟಯ್ಯನ ವೃತ್ತಶಾಸನ ಮುಂತಾದವುಗಳಲ್ಲಿ ಕಾಣಸಿಗುತ್ತದೆ. ಮೂರನೇ ಅಧ್ಯಾಯದಲ್ಲಿ ಪೂರ್ಣ ವಿವರಣೆ ನೀಡಿ ಬರೆಯಲಾಗಿದೆ. ಕಾವ್ಯಗಳಿಗಿಂತ ಶಾಸನಗಳಲ್ಲಿ ವ್ಯಾಪಾರ ವಹಿವಾಟಿನ ವಿವರ ನಿಖರವಾಗಿ ದೊರೆಯುತ್ತದೆ ಎಂದು ಹೇಳಬಹುದಾಗಿದೆ.

ಕನ್ನಡ ಸಾಹಿತ್ಯದಲ್ಲಿ ವ್ಯಾಪಾರ ವಹಿವಾಟಿಗಳಲ್ಲಿ ಕುರಿತಾದ ಮಾಹಿತಿ ವಿರಳವಾಗಿ ದೊರೆಯುತ್ತದೆ. ಪ್ರಾಚೀನ ಗದ್ಯಕೃತಿಯಾದ ವಡ್ಡಾರಾಧನೆಯ 'ಭದ್ರಬಾಹು ಭಟ್ಟಾರನ ಕತೆ'ಯಲ್ಲಿ ಚಿತ್ರದಪಟಗಳನ್ನು ತೋರಿಸಿ ಜನರನ್ನು ಮೊಸಗೊಳಿಸಿ ಭತ್ತ ಅಳತೆ ಮಾಡಿಕೊಳ್ಳುವ ಸಾಮಾಜಿಕ ಚಿತ್ರಣ ಕಂಡು ಬರುತ್ತದೆ. "............ಧಾನ್ಯಮನಱುವತ್ತು ಬಳ್ಳಮನಿರ್ಪತ್ತು ಬಳ್ಳಮೆಂದಳೆಗುಮೀತನೊರ್ವಂ ವೈಕನೆಂಬೊಂ ಕಳ್ಳಂ..............".[೧೨೨] ಸುಳ್ಳು ಹೇಳದ, ಮೋಸ ವಂಚನೆ ಮಾಡದ ವ್ಯಾಪಾರಿ ಜಗತ್ತಿನಲ್ಲಿಯೇ ಇಲ್ಲ. ವ್ಯವಹಾರದಲ್ಲಿ ಇಂತಹ ಅನೇಕ ಬಗೆಯ ವಂಚನೆಗಳನ್ನು ಕಾಣುತ್ತೇವೆ. ಈ ರೀತಿಯ ವಂಚನೆಗೆ ರೈತರು ಒಳಗಾಗುವುದು ಅವರ ಮುಗ್ಧತೆಯ ಪ್ರತೀಕವಾಗಿದೆ. ಇಲ್ಲಿ ಬಳಕೆಯಾಗುವ ಅಳತೆಯ ಮಾಪನ 'ಬಳ್ಳ, ನಡುಗನ್ನಡ ಕಾಲದಲ್ಲಿ ಹೇರಳವಾಗಿ ಬಳಕೆಯಲ್ಲಿತ್ತು ಎನಿಸುತ್ತದೆ. ಧರ್ಮಾಮೃತದಲ್ಲಿ "ನಮ್ಮ ಸೆಟ್ಟಿಯ ಮಾತೊಳ್ಳಿದವು 'ಬಳ್ಳಂ' ಕಿಱಿದೆಂಬಂತೆ............".[೧೨೩] ಬಳ್ಳದ ಬಳಕೆ ಅದು ಶೆಟ್ಟಿಯ ಬಳ್ಳ ಕಿರಿದು ಎಂಬ ಲೋಕರೂಡಿಯ ಮಾತಾಗಿ ಕಂಡುಬರುತ್ತದೆ. ಅಲ್ಲದೆ ರಾಶಿಯ ಧಾನ್ಯಮನಳೆವರು..........; ಧಾನ್ಯಮಂ ಕೊಟ್ಟು ಪೊಳ್ಳಂ ಕೊಳ್ವರು.........; ಇಂತಹ ಮಾತುಗಳು ಧರ್ಮಾಮೃತದಲ್ಲಿ ಕಾಣಬಹುದು. ಪಂಪ ಭಾರತದಲ್ಲಿಯೂ 'ಸೆಟ್ಟಿಯ ಬಳ್ಳಂಕಿರಿದು ಎಂಬ ಉಲ್ಲೇಖವಿದೆ. ಬಸವಣ್ಣನವರ ವಚನವೊಂದರಲ್ಲಿ 'ಮಸಿಯಹೂಸಿ ನೇರಿಲಹಣ್ಣು ಮಾರುವಂತೆ' ಎಂಬ ಮಾತಿನಿಂದ ವ್ಯಾಪಾರದಲ್ಲಿ ನಡೆಯುತ್ತಿದ್ದ ಮೋಸ, ವಂಚನೆಗಳ ಪರಿಚಯವಾಗುತ್ತದೆ. ಅಲ್ಲದೆ ಬಸವಣ್ಣನವರ ವಚನದಲ್ಲಿ ಇಡೀ ವ್ಯಾಪಾರದ ಚಿತ್ರವೊಂದು ಹೀಗೆ ಕಂಡುಬರುತ್ತದೆ.

"ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನ್ನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ

ಒಮ್ಮನವಾದಡೆ ಒಡನೆ ನುಡಿವನು
ಇಮ್ಮನ ವಾದಡೆ ಒಡನೆ ನುಡಿಯನು,
ಕಾಣಿಯಸೋಲ ಅರ್ಧಕಾಣಿಯಗೆಲ್ಲ
ಜಾಣ ನೋಡವ್ವಾ, ನಮ್ಮ ಕೂಡಲಸಂಗಮದೇವ".[೧೨೪]

ಕೂಡಲಸಂಗಮನಾಥನಿಗೆ ಶೆಟ್ಟಿಯನ್ನು ಹೋಲಿಸಲಾಗಿದೆ. ಅಂಗಡಿಯ ಇಟ್ಟು ಕುಳಿತಿರುವ ಹರದ ಒಮ್ಮನ ಅಂದರೆ ಹೆಚ್ಚಿನ ಬೆಲೆಗೆ ಸ್ಪಂದಿಸಿ, ಇಮ್ಮನ ಅಂದರೆ ಕಡಿಮೆಯಾದರೆ ಮಾತಾಡದೆ, ಒಂದು ಕಾಣಿ, ಅರ್ಧಕಾಣಿಯನ್ನು ಕಳೆದುಕೊಳ್ಳದೆ ಜಾಣಾತನದಿಂದ ವ್ಯಾಪಾರ ಮಾಡುವ ಅಂಶ ಕಂಡುಬರುತ್ತದೆ. ಪಂಚತಂತ್ರದಲ್ಲಿ ಧಾನ್ಯ ಮಾರಿ ಹೊನ್ನು ಪಡೆಯುವ ಅಂಶ ಕಂಡುಬರುತ್ತದೆ. "........... ಸಮಸ್ತ ಧಾನ್ಯಮಂ ಸಂಪೂರ್ಣವಾಗಿ ಬೆಳೆದು ಆ ಧಾನ್ಯಮಂ ಮಾಜಿ ಪೊನ್ನಂ ಪಡೆದು...........".[೧೨೫] ತಾವು ಬೆಳೆದ ಧಾನ್ಯಗಳನ್ನು ಹಣಕ್ಕೆ ಮಾರಿ ಬಂದ ಹಣದಿಂದ ಹೊನ್ನು ಪಡೆಯುತ್ತಿದ್ದರು. ಹೊನ್ನನ್ನು ಸಂಪತ್ತು ಎಂದು ಭಾವಿಸಿ ಸಂಗ್ರಹಿಸುತ್ತಿದ್ದರು. ವ್ಯಾಪಾರಿಗಳು ಬಂದ ಲಾಭಾಂಶದಲ್ಲಿ ಹೊನ್ನು ಕೊಂಡು ಸಂಪಾದಿಸುತ್ತಿದ್ದರು ಎಂಬ ಅಂಶವೂ ಕಂಡುಬರುತ್ತದೆ. ಬಸವಣ್ಣ, ಸಿದ್ದರಾಮೇಶ್ವರ, ಘಟ್ಟಿವಾಳಯ್ಯ, ಮನಸಂದಮಾರಿತಂದೆ, ಮೋಳಿಗೆಮಾರಯ್ಯ, ಸೊಡ್ಡಳಬಾಚರಸ ಮಡಿವಾಳಪ್ಪರ ವಚನಗಳಲ್ಲಿ ಧಾನ್ಯಗಳ ಉಲ್ಲೇಖ, ಧಾನ್ಯಗಳನ್ನು ಅಳೆಯಲು ಬಳಸುವ ಖಂಡುಗ, ಕೊಳಗಗಳ ಮಾಹಿತಿ ಕಂಡುಬರುತ್ತದೆ. ಹಾಗಾಗಿ ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿ ವ್ಯಾಪಾರ-ವಹಿವಾಟು ನಡೆಯುವ ಅಂಶಗಳು ಹೆಚ್ಚಾಗಿ ಕಂಡುಬರುತ್ತವೆ. ಕರ್ನಾಟಕದಲ್ಲಿ ಒಳನಾಡಿನ ವ್ಯಾಪಾರ ನಿರಂತರವಾಗಿ ಸಾಗಿದ್ದು, ವರ್ತಕರು ಅಧಿಕ ಸಂಖ್ಯೆಯಲ್ಲಿ ವಾಣಿಜ್ಯೋದ್ಯಮದಲ್ಲಿ ತೊಡಗಿಸಿಕೊಂಡಿರುವ ಅಂಶಗಳು ತಿಳಿದು ಬರುತ್ತವೆ.

ಕಲಬುರ್ಗಿ ಶಾಸನವೊಂದರಲ್ಲಿ ಸಂತೆಯಲ್ಲಿ ಮಾರಾಟವಾಗುತ್ತಿದ್ದ ನಿತ್ಯವ್ಯವಹಾರದ ಹಣ್ಣು ಕಾಯಿಗಳ ಬೆಲೆಗಳನ್ನು 'ದಮ್ಮ' 'ದಮ್ಮಾಣಿ' ರೂಪದಲ್ಲಿ ತಿಳಿಸಲಾಗಿದೆ. 'ದಮ್ಮ' ಒಂದು ನಾಣ್ಯವಾಗಿದೆ. ದಮ್ಮಾವು A coin of the value of four kaasus. ಈ ನಾಣ್ಯದ ಬಳಕೆಯಲ್ಲಿ ವಿಶೇಷವಾಗಿ ಮಸಾಲೆ ಜೀನಸು, ಹಾಗೂ ಹಣ್ಣು ತರಕಾರಿಗಳ ಕೊಡುಕೊಳ್ಳುವಿಕೆಯಲ್ಲಿ ಪ್ರಚಲಿತವಾಗಿತ್ತೆಂದು ಶಾಸನಗಳಲ್ಲಿ ಆಧಾರಗಳಿವೆ.

"೧. ಅಲ್ಲ ಕೆ ೩ದಮ್ಮ ನಿಂ
೨. ಬೆಯ ಕಾಯಿಗೆ ೩ದಮ್ಮ
೩. ಬಾಳೆಯ ಹಣ್ಣಿಗೆ ೩ದ
೪. ಮ್ಮ ಮಾವಿನ ಹಣ್ಣಗೆ
೫. ೩ ದಮ್ಮ ನೆಲ್ಲಿಯ ಕಾಯಿಗೆ
೬. ೧ ದಮ್ಮ ಮಾವಿನ ಕಾಯಿಗೆ ೧
೭. ದಮ್ಮ ಹುಣಿಸೆಯ ಹಣ್ಣಿಗೆ ೧
೮. ದಮ್ಮ ಹಾಣಿ
೯. ಬಳಕೆ ಮಾಡುವರು"[೧೨೬] ಅಲ್ಲ, ಸಿಂಬೆಕಾಯಿ, ಬಾಳೆಹಣ್ಣು, ಮಾವಿನಹಣ್ಣು, ನೆಲ್ಲಿಕಾಯಿ,

ಮಾವಿನಕಾಯಿ, ಹುಣಸೆಹಣ್ಣು, ಮುಂತಾದ ಮಾರಾಟ ಸರಕುಗಳು. 'ದಮ್ಮ' ನಾಣ್ಯದ ಉಲ್ಲೇಖ, 'ದಮ್ಮ' ನಾಣ್ಯದ ಬೆಲೆಗೆ ಮಾರಾಟವಾಗುವ ವಿವರಣೆ ದೊರೆಯುತ್ತದೆ. ಸಂತೆಯ ವ್ಯಾಪಾರ ವಹಿವಾಟು ಕಾಣಬಹುದು.

ಸಾಗಾಣಿಕೆ : ಸರಕುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆ ತೆಗೆದುಕೊಂಡು ಹೋಗುವುದಕ್ಕೆ ಸಾಗಾಣಿಕೆ ಎನ್ನಬಹುದು. ವರ್ತಕರು ಸ್ಥಳದಿಂದ ಸ್ಥಳಕ್ಕೆ ಊರೂರಿಗೆ, ಗ್ರಾಮ, ನಗರ, ಪಟ್ಟಣಗಳನ್ನು ಸುತ್ತಾಡಿ ವ್ಯವಹಾರ ಮಾಡಬೇಕಾಗುತ್ತದೆ. ಅದಕ್ಕಾಗಿ ತಾವು ಮಾರುವ, ಕೊಳ್ಳುವ ವಸ್ತುಗಳನ್ನು ಸಾಗಿಸಲು ಬಂಡಿ, ಹಡಗು, ದೋಣಿಗಳಲ್ಲಿ. ಎತ್ತು, ಕತ್ತೆ, ಕುದುರೆ, ಆಳುಗಳು ಮುಂತಾದವುಗಳನ್ನು ಸಾಗಾಣಿಕೆಯಾಗಿ ಬಳಸುತ್ತಿದ್ದರು. ಪಾದಮಾರ್ಗದ ವ್ಯವಹಾರ, ಜಲಮಾರ್ಗದ ವ್ಯವಹಾರ ನಡೆಸುತ್ತಿದ್ದರು. ಸಾಗಾಣಿಕೆಯನ್ನು ಕುರಿತು ಅನೇಕ ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. ವ್ಯಾಪಾರದ ಮಾರ್ಗ, ಸುಂಕದ ಬಗೆ, ಯಾವ ಯಾವ ಹೇರಿಗೆ ಎಷ್ಟು ಸುಂಕ ಅದನ್ನು ಯಾವ ದೇವರಿಗೆ ಧರ್ಮಕಾರ್ಯಗಳಿಗೆ ನೀಡಿರುವ ಮಾಹಿತಿ, ಸುಂಕದ ಅಧಿಕಾರಿಗಳು, ಸುಂಕಠಾಣೆ ಮುಂತಾದ ಅಂಶಗಳು ದೊರೆಯುತ್ತವೆ.

ಎಮ್ಮಡಗಿ ಶಾಸನದಲ್ಲಿ ಸಾಗಾಣಿಕೆಯಲ್ಲಿ ಬಳಸುವ ಪ್ರಾಣಿ ಮತ್ತು ಸಾಗಾಣಿಕೆಯ ಸಾಧನಗಳ ವಿವರ ದೊರೆಯುತ್ತದೆ. "...........ಚತು ಸಮುದ್ರ ಪರಿಯುತಂ ಎತ್ತು, ಕತ್ತೆ, ಕೋಣ, ಬಂಡಿ, ಭೈತ್ರ ಸಹಿತಂ ಬಂದಾ ಕಲಸಾಸನಮಂ ಹೇಜಿಂಗೆ ನೂಜಿಳೆಯಂಕೊಟ್ಟರು...........".[೧೨೭] ಸಾಗಾಣಿಕೆಯಲ್ಲಿ ಬಳಸುವ ಪ್ರಾಣಿ ಮತ್ತು ಸಾಧನಗಳ ಉಲ್ಲೇಖ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. ಅವು ಯಾವುವೆಂದರೆ ಸೇಡಂ, ಬೆನವಳ್ಳಿ, ಸಿಂಗನಲ್ಲೂರು, ಮಾರೆಹಳ್ಳಿ ಶಾಸನಗಳು. ಸಾಗಾಣಿಕೆಯ ಸಂದರ್ಭದಲ್ಲಿ ಕೆಲವು ಹೇರಿಗೆ ಸುಂಕ ರಿಯಾಯಿತಿ ನೀಡಿರುವ ಅಂಶಗಳು ಕಂಡುಬರುತ್ತವೆ. ಕೌಲೇದುರ್ಗದ ಶಾಸನದಲ್ಲಿ "......... ಎತ್ತು ೨೦ ಯಿಪ್ಪತ್ತು ಎತ್ತಿನಲು ಕಾಲಂ ಪತ್ತಿಲು ಸುಂಕವಿಲ್ಲದೆ ಭತ್ತರಾಗಿ ಹೇಜಿಕೊಂಡು ಬಹಿರಿಯಂದು ....".[೧೨೮] ಎತ್ತಿನ ಹೇರಿನ ಭತ್ತ, ರಾಗಿಯ ಹೇರುಗಳಿಗೆ ಸುಂಕ ವಿನಾಯತಿ ಇರುವ ಅಂಶ ತಿಳಿಯುತ್ತದೆ. ಶೃಂಗೇರಿಯ ಶಾಸನದಲ್ಲಿ ಅಕ್ಕಿ, ಭತ್ತ, ಉಪ್ಪು, ರಾಗಿ, ವಿದಳ, ಬೂಸ, ಜಿನಸುಗಳನ್ನು ಹೇರಿದ ಎತ್ತಿನ ಹೇರಿಗೆ ಯಾವ ಠಾಣೆಯಲ್ಲಿಯೂ ಸುಂಕ ನೀಡದೆ ಮಾರಾಟ ಮಾಡುವ ಅಂಶ ತಿಳಿದುಬರುತ್ತದೆ. ಕೌಲೇದುರ್ಗದ ಶಾಸನದಲ್ಲಿ ವ್ಯಾಪಾರದ ಮಾರ್ಗಗಳು ಅನೇಕವು ಇದ್ದ ಬಗ್ಗೆ ಮಾಹಿತಿ ದೊರೆಯುತ್ತದೆ. "..........ಸಹಯೆಂಟು ಪೇರೆಗಳಲ್ಲಿ ಅರಮನೆಯ ಸುಂಕಕೆ ನಡೆವಂಥಾ ಉಭಯ ಮಾರ್ಗಕ್ಕೆ ಹೇರು ೧ಕೆ ವಿಸದಲೇಕ ಅರಗದ ಠಾಣೆ ವಂದರ ಸ್ಥಳದ ಸುಂಕದಲಿ ಅಡಕೆ ಲಕ್ಷ ೧ಕೆ ಸಲುವದು। ೧೦ ಹಾಗದಲೆಕ । ಕೆಳದಿ ಹೋಬಳಿಯ ಕಲುಸೆಮಾರ್ಗದ ಸುಂಕ। ಜಂಬೂರು ಮಾರ್ಗ ಸುಂಕ, ಸೊರಬ ಗುತ್ತಿ ಮಾಗದ ಸುಂಕ ಸಹಾ...........".[೧೨೯] ಕಲುಸೆ, ಜಂಬೂರು, ಸೊರಬ, ಗುತ್ತಿ ಸಾಗಾಣಿಕೆಯ ಮಾರ್ಗಗಳಾಗಿದ್ದವು. ಆ ಭಾಗದಲ್ಲಿ ಸಾಗಾಣಿಕೆಯ ಮಾರ್ಗಗಳು, ಬೀದಿಗಳ ಕುರಿತಾದ ಮಾಹಿತಿ 'ಶಾಸನಗಳಲ್ಲಿ ಕರ್ನಾಟಕದ ವರ್ತಕರು ಕೃತಿ'ಯಲ್ಲಿ ಹೀಗೆ ಹೇಳಲಾಗಿದೆ. "ಪಾದಮಾರ್ಗದ ವ್ಯಾಪಾರ ಬಂಡಿಯದಾರಿ, ಬಂಡಿಯ ಹೆದ್ದಾರಿ, ರಾಜಬೀದಿ ಕೀಳ್ವಟ್ಟೆ, ಮೇಲ್ವಟ್ಟೆ, ಅಡ್ಡಾವಟ್ಟೆಗಳ ಮುಖಾಂತರ ಸಾಗಿಸುತ್ತಿದ್ದಿತು. ಮಧ್ಯದಲ್ಲಿ ನದಿ ಹಳ್ಳಗಳನ್ನು ತೆಪ್ಪ, ದೋಣಿಗಳ ಮೂಲಕ ದಾಟುತ್ತಿದ್ದರು. ನದಿಯ ಆಳ ಕಡಿಮೆ ಇದ್ದಾಗ ಇಳಿದು ನಡೆದು ಬರುತ್ತಿದ್ದರು. ಹೀಗೆ ನದಿಯನ್ನು ನಡೆಯುತ್ತಾ ದಾಟುವುದಕ್ಕೆ ಅನುಕೂಲವಾದ ಜಲಮಾರ್ಗವೇ ಕಡವು ಇದಲ್ಲದೆ ಕೆಲವು ನದಿಗಳಿಗೆ

ಸೇತುವೆ ಕಟ್ಟಿದ್ದರು. ತೇರದಾಳ ಶಾಸನ ಸಮುದ್ರಯಾನವನ್ನು ತಿಳಿಸುತ್ತದೆ".[೧೩೦] ಸಾಗಾಣಿಕೆಯ ವಿವರಣಾತ್ಮಕ ಮಾಹಿತಿಯನ್ನು ಅಧ್ಯಾಯ ೦೩ರಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಕರ (ತೆರಿಗೆ) ಪದ್ಧತಿ : ದೇಶದ ಆದಾಯದ ಪ್ರಮುಖ ಮೂಲ ತೆರಿಗೆಯಿಂದ ಬರುವಂತದ್ದು. ತೆರಿಗೆಯು ಕೊಳ್ಳುವ ಮತ್ತು ಮಾರುವ ವಸ್ತುಗಳಿಂದ ಸಂಗ್ರಹಿಸಲಾಗುತ್ತದೆ. ತೆರಿಗೆಯ ಠಾಣೆಗಳು, ಅಧಿಕಾರಿಗಳು ವಸೂಲಿಯ ವಿಧಾನಗಳು, ತೆರಿಗೆಯಲ್ಲಿರುವ ಅನೇಕ ಬಗೆಗಳನ್ನು ಕಾಣುತ್ತೇವೆ. ಕೃಷಿಕರು ತಾವು ಬೆಳೆದ ಬೆಳೆಗಳಲ್ಲಿ ಹಕ್ಕಿಪಕ್ಷಿಗಳಿಗೆ ಒಂದುಪಾಲು, ತನ್ನಾಶ್ರಯದ ಕಸುಬುದಾರರಿಗೆ ಒಂದುಪಾಲು, ಪ್ರಭುತ್ವದ ವ್ಯವಸ್ಥೆಗೆ ಒಂದುಪಾಲು ಉಳಿದದ್ದು ತನಗೆ ಎಂದು ನಂಬಿರುವ ಕಾಲವೊಂದಿತ್ತು. 'ಸುಂಕದವರ ಮುಂದೆ ಸುಖದುಃಖ ಹೇಳಿಕೊಂಡರೇನು ಪ್ರಯೋಜನ ಎಂದು ಜನ ತಿಳಿದುಕೊಂಡಿದ್ದರು. ಪ್ರಾಚೀನ ಕಾಲದಲ್ಲಿ ಹಣರೂಪದಲ್ಲಿ ಮತ್ತು ಧಾನ್ಯರೂಪದಲ್ಲಿ ತೆರಿಗೆ ನೀಡುತ್ತಿರುವ ಅಂಶಗಳು ಕಂಡುಬರುತ್ತವೆ. "ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಬೇರೆ ಬೇರೆ ಪ್ರದೇಶ, ಕಾಲಗಳಲ್ಲಿ ವಸ್ತುಗಳಿಗೆ ಸಂತೆಯ ಸುಂಕ(ಆಯ)ವನ್ನು ಹಣ ಮತ್ತು ವಸ್ತುಗಳ ರೂಪದಲ್ಲಿ ಆಕರಿಸುತ್ತಿದ್ದ, ಸರಕು ತುಂಬಿದ ವಸ್ತುವಿಗನುಗುಣವಾಗಿ ಇದು ಹೆಚ್ಚು ಕಡಿಮೆಯಾಗಿದ್ದು, ಒಂದೇ ಶತಮಾನದಲ್ಲಿ (ಸಂತೆಯ ಸುಂಕದಲ್ಲಿ) ಕೆಲವು ಕಡೆ ಏಕರೂಪತೆ, ಇನ್ನೂ ಕೆಲವು ಕಡೆ ಬಹುರೂಪತೆ ಇದ್ದ ಸಂಗತಿಯ ಆಯಾ ಸಂತೆ–ಪೇಟೆ, ಪಟ್ಟಣಗಳಿಗೆ ಬರುತ್ತಿದ್ದ, ಅಲ್ಲಿ ಬೆಳೆಯುತ್ತಿದ್ದ ಸರಕು(=ವಸ್ತು)ಗಳು ಮತ್ತು ಇವುಗಳ ಪ್ರಮಾಣವೂ ಕರ್ನಾಟಕದ ಶಾಸನಗಳಿಂದ ಗೊತ್ತಾಗುತ್ತದೆ. ಸಂತೆಯ ಸುಂಕವನ್ನು ಸರಕುಗಳ ತೂಕ, ತುಂಬಿದ ವಸ್ತುವಿನ ಗಾತ್ರ, ಸಾಗಿಸುವ ವಾಹನ, ಸರಕಿನ ಬೆಲೆ, ಅಳತೆ, ಪ್ರಮಾಣ,ಹಾಗೂ ರಾಶಿ(=ಬಟ್ಟಲು)ಗಳ ಮೇಲೆ ನಿಗದಿಪಡಿಸುತ್ತಿದ್ದರು. ವರ್ತಕರು ಸಂತೆಯ ಸುಂಕದೊಂದಿಗೆ ಮಾರಾಟದ ಸುಂಕವನ್ನು ಸಲ್ಲಿಸಬೇಕಿದ್ದಿತು. ಇದು ವಸ್ತುವಿನ ಮಾರಾಟದ ಪ್ರಮಾಣದ ಮೇಲೆ ನಿರ್ಣಯವಾಗುವಂಥದ್ದು".[೧೩೧] ಎಂದು ಹೇಳಲಾಗಿದೆ.

ಪ್ರಾಚೀನ ಸಾಹಿತ್ಯದಲ್ಲಿ ತೆರಿಗೆಯ ಕುರಿತಾದ ಮಾಹಿತಿ ತಿಳಿದುಬರುತ್ತದೆ. 'ರಾಜನು ದೇಶವನ್ನು ರಕ್ಷಿಸುವುದಕ್ಕೆ ಪ್ರಜೆಗಳು ಹಿಂದಿರುಗಿ ಕೊಡುವ ಪ್ರತಿಫಲವೇ ತೆರಿಗೆಗಳೆಂದು ಗೌತಮ ಸಂಹಿತೆ, ನಾರದ ಸಂಹಿತೆ ಮುಂತಾದ ಸ್ಮೃತಿಗಳು ಭಾವಿಸಿದ್ದವು. ಧರ್ಮದಿಂದ ರಾಜ್ಯ ಭಾರ ಮಾಡುವ ರಾಜನಿಗೆ ದೇಶದಲ್ಲಿ ರೈತರು ಬೆಳೆಯುವ ಬೆಳೆಯ ಆರನೆಯ ಒಂದು ಭಾಗ ಸಲ್ಲಿಸಬೇಕೆಂದು U.N.Ghoshal ಬರೆದ 'hindu Revenue System' ನಲ್ಲಿ ವಸಿಷ್ಠಾರ ಅಭಿಪ್ರಾಯ ದಾಖಲಿಸಲಾಗಿದೆ. ಕನ್ನಡ ಕಾವ್ಯಕೃತಿಯಾದ ಪಂಪನ ಆದಿಪುರಾಣದಲ್ಲಿ "ಪದನಂ ಕಾಣಿಸಿಕೊಳ್ಳುವಲ್ಲಿ ಮಟಿಗಳ್ ಷಡ್ಭಾಗಮಂ ಕೊಂಡು ತಪ್ಪದೆ ಭೂಪರ್ ಪ್ರತಿಪಾಳಿಪರ್ ಪ್ರಜೆಗಳಂ ....".[೧೩೨] ಸಕಾಲದಲ್ಲಿ ಮಳೆ ಸಮೃದ್ಧವಾಗಿ ಬಿದ್ದು ಭೂಮಿಯ ಯಾವ ಭಾಗವು ಪಾಳು ಬೀಳದಂತೆ ಬೆಳೆಯುತ್ತಿದ್ದು, ರಾಜರು ರೈತರ ಉತ್ಪತ್ತಿಯಲ್ಲಿ ೧/೬ (ಆರರಲ್ಲಿ ಒಂದು ಭಾಗ) ಭಾಗವನ್ನು ತೆರಿಗೆಯ ರೂಪದಲ್ಲಿ ಪಡೆಯುತ್ತಿದ್ದರು. ಇದಕ್ಕೆ ಪ್ರತಿಯಾಗಿ ಪ್ರಜೆಗಳ ರಕ್ಷಣೆ ಹೊಣೆ ರಾಜನದಾಗಿತ್ತು.

ಕಾವ್ಯಕೃತಿಗಳಲ್ಲಿ ಜೇಡರ ದಾಸಿಮಯ್ಯನ ಒಂದು ವಚನದಲ್ಲಿ "ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ, ಇರುಳೆಲ್ಲಾ ನಡೆದನಾ ಸುಂಕಕಂಜಿ ....".[೧೩೩] ಮಾರುಕಟ್ಟೆಗೆ ಹೋಗುವಾಗ ನೀಡಬೇಕಾದ ದಾರಿಯ ಸುಂಕ ಕೊಡದೆ ವಂಚಿಸಿ ರಾತ್ರಿ ದಾರಿ ಸವೆಸುವ ಒಬ್ಬ ವ್ಯಕ್ತಿ ಹರಿದ

ಗೋಣಿಯಲ್ಲಿ ತುಂಬಿದ ಭತ್ತ ಸುರಿದು ಹೋಗಿರುವ ಚಿತ್ರ ಕಂಡುಬರುತ್ತದೆ. ಸುಂಕದ ಬಂಕಣ್ಣನ ವಚನದಲ್ಲಿ " ಎಲ್ಲರಸುಂಕ, ಎತ್ತು, ತೊತ್ತು, ಬಂಡಿ ಬಲ್ಲೆತ್ತು, ಎನ್ನ ಸುಂಕ ಎಲ್ಲರ ಪರಿಯಲ್ಲ ....".[೧೩೪] ಎತ್ತು, ತೊತ್ತು, ಬಂಡಿ, ಬಲಿಷ್ಠ ಎತ್ತುಗಳು ಹೇರಿಗೆ ಸುಂಕ ಹೇರುತ್ತಿದ್ದರು ಎಂಬ ಅಂಶತಿಳಿದು ಬರುತ್ತದೆ. ದೇಶಿಕೇಂದ್ರ ಸಂಗನ ಬಸವಯ್ಯನ ವಚನದಲ್ಲಿ ತೆರಿಗೆಯಾಗಿ ಹೊನ್ನು ನೀಡುತ್ತಿರುವ ಅಂಶ ತಿಳಿಯುತ್ತದೆ. "...........ತೆರಿಗೆಯ ಹೊನ್ನ ಒಂದೆರಡು ಹಪ್ತಿಯ ಮಾಡಿಕೊಟ್ಟು...........".[೧೩೫] ಬಂಗಾರವನ್ನು ತೆರಿಗೆಯಾಗಿ ಸಲ್ಲಿಸುವ ಮಾಹಿತಿ ತಿಳಿಯುತ್ತದೆ. ಸಿದ್ಧರಾಮಚರಿತ್ರೆಯಲ್ಲಿ "..........ಹತ್ತು ಸಾವಿರ ಗಡಿಗೆ ಗೋಟನಿತು ಹಾಗಾಗಳಂ ಕೊಟ್ಟು ....ಸಾಸಿರ ಗಡಿಗೆಯೂ ಹಾಗಮಂ..........".[೧೩೬] ಹತ್ತು ಸಾವಿರ ಗಡಿಗೆಯ ಪ್ರಮಾಣದ ಅಡಿಕೆಗೆ ಸಾವಿರ ಗಡಿಗೆಯ ಗೋಟಡಿಕೆಯನ್ನು ಹಾಗ(ತೆರಿಗೆ)ಯಾಗಿ ನೀಡುವ ಅಂಶ ತಿಳಿದುಬರುತ್ತದೆ. ನಯಸೇನನ ಧರ್ಮಾಮೃತದಲ್ಲಿ 'ಸುಂಕಿಗನಂ ಕಂಡ ಭಂಡ ಮುಳ್ಳನಂತೆ ಸಂಕಿಸುತ್ತುಂ' ಎನ್ನುವಲ್ಲಿ ಸುಂಕ ವಸೂಲಿ ಮಾಡುವ ಅಧಿಕಾರಿ ಕುರಿತು ಹೇಳುತ್ತಾನೆ. ಕೆಳದಿನೃಪವಿಜಯದಲ್ಲಿ ಕೆರೆ, ಕಾಲುವೆ ನಿರ್ಮಿಸಿ ನೀರಿನ ತೆರಿಗೆಯನ್ನು ವಿಧಿಸುವ, ಮೋಸದ ಲೆಕ್ಕ ನಿಲ್ಲಿಸಿ, ಕೊಬ್ಬಿದ ವರ್ತಕರ ಕಿರುಕುಳ ನಿಲ್ಲಿಸಿ, ಸುಂಕವನ್ನು ವಸೂಲಿ ಮಾಡುತ್ತಿದ್ದರು. ಕ್ರಮಬದ್ಧ ಬರವಣಿಗೆಯ ಮೂಲಕ ಅಯ-ವ್ಯಯಗಳ ರಾಜಸ್ವ ಹೆಚ್ಚಿಸುವಂತೆ ಮಾಡಲಾಗುತ್ತಿತ್ತು. ಹೀಗೆ ತೆರಿಗೆಯ ಕುರಿತಾದ ಮಾಹಿತಿ ಸಾಹಿತ್ಯಕೃತಿಗಳಲ್ಲಿ ವರ್ಣಿತವಾಗಿರುತ್ತದೆ.

ಶಾಸನಗಳಲ್ಲಿ ಅಸಂಖ್ಯಾತ ತೆರಿಗೆಯ ಅಂಶಗಳು ಕಂಡುಬರುತ್ತವೆ. ಎಷ್ಟೂ ತೆರಿಗೆಗಳು ಅರ್ಥವಾಗುದಿಲ್ಲ. ತೆರಿಗೆಯ ವಿಧಾನ ಕುರಿತಾದ ಮಾಹಿತಿಯನ್ನು ಕೆಲವು ತೆರಿಗೆಯ ಬಗೆಗಳಿಂದ ತಿಳಿಯಲು ಪ್ರಯತ್ನಿಸಲಾಗಿದೆ. ಅವುಗಳು ಸಂತೆಸುಂಕ, ಮಾರಾಟ ತೆರಿಗೆ, ಬೆಳೆಯ ಸುಂಕ, ಸ್ಥಳ ಸುಂಕ, ಒಕ್ಕಲುಸುಂಕ, ಎತ್ತಿನ ಸುಂಕ, ಬಂಡಿದೆರೆ ಮುಂತಾದವುಗಳು. ಅಲ್ಲದೆ ಸಂತೆಯ ಆಯ, ಮಾರಾಟಕರ, ಅಂಗಡಿಯ ಆಯ, ಶೆಟ್ಟಿದೆರೆ, ಸೆಟ್ಟವಣ, ವರ್ತಕಸುಂಕ, ನದಿಯಾಬೀಯ, ಮೇಯಿದೆರೆ, ಗಾಡಿಯ ಸುಂಕ, ಬಂಡಿದೆರೆ, ಕೀಳ್ಪಟ್ಟೆ ಸುಂಕ, ಮೇಲ್ಸಲೆ ಸುಂಕ, ನೆಲಮೆಟ್ಟು, ಅಡ್ಡದೆರೆ, ಕತ್ತರಿವಣ, ಅಯಿಲದೆರೆ, ಬಸಗೆ, ಕುಳಿಯ ಸುಂಕ, ತಳಱ ಸುಂಕ, ಪನ್ನಾಯ, ದಂಡದಾಯ, ತಿಪ್ಪೆ ಸುಂಕ, ತಳಬಾಂಡದ ಸುಂಕ, ಬಳಂಲೇಯ ತೇಱ, ಬೀರವಣ, ಮದುವೆದೆರೆ, ಮನೆದೆಱ, ಮೆಂಟಿಗಂಡುಗ, ಹಡವಳೆಯ, ವಡ್ಡರಾವುಳ, ಹಾರಿಕಾಯ ಸುಂಕ, ಹಾಲಾವು ಹೊಲದೆಱ, ಮುಂತಾದವುಗಳನ್ನು ಕಾಣುತ್ತೇವೆ.

ಅಡಿಟಿಪ್ಪಣಿಗಳು

೧. ಶಾಸನಗಳಲ್ಲಿ ಕರ್ನಾಟಕದ ವರ್ತಕರು- ಡಾ.ಬಿ.ಆರ್. ಹಿರೇಮಠ, ಪು-೭
೨ ಹೈದ್ರಬಾದ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು ಸಂ- ಡಾ.ಫ್ಹಿ. ಶಿವಾನಂದ, ಪು-XXXV
೩. ಕನ್ನಡ ದಾಖಲು ಸಾಹಿತ್ಯ- ಡಾ.ಕೆ.ರವೀಂದ್ರನಾಥ, ಪು-೧೧೭
೪. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಡಾ. ಎಂ. ಚಿದಾನಂದ ಮೂರ್ತಿ, ಪು-೯೦೪
೫. ಅದೇ-ಪು-೪೦೫
೬. ಹಿರಿಗನ್ನಡ ಅರ್ಥಕೋಶ-ಸಂ-ಶಿವರಾಂಕಾರಂತ, ಪು-೨೩೯
೭. ಕೃಷಿಜ್ಞಾನ ಪ್ರದೀಪಿಕೆ-ಶ್ರೀಘನಮಠ ಶಿವಯೋಗಿಗಳು, ಪು-೯೨

೮. ಅದೇ- ಪು-೯೩
೯. ಅದೇ-ಪು-೧೨೨
೧೦. ಅದೇ- ಪು-೧೨೪
೧೧. ಅದೇ- ಪು-೯೩
೧೨. ಧರ್ಮಾಮೃತ-ಸಂ-ಬಿ.ಬಿ. ಮಹಿಷವಾಡಿ ಎಸ್.ಪಿ.ಪಾಟೀಲ್, ಪು-೫೦೩
೧೩. ಸರ್ವಜ್ಞನ ವಚನಗಳು-ಸಂ-ಚೆನ್ನಪ್ಪ ಉತ್ತಂಗಿ, ಪು-೨೦೬
೧೪. ಕರ್ನಾಟಕ ಕಾದಂಬರಿ-ಗದ್ಯಾನುವಾದ-ಹ.ವೆ.ನಾರಾಯಣ ಶಾಸ್ತ್ರಿ, ಪು-೭೮
೧೫. ಕರ್ನಾಟಕ ಪಂಚತಂತ್ರ-ಗದ್ಯಾನುವಾದ-ಗುಂಡ್ಮಿ ಚಂದ್ರಶೇಖರ ಐತಾಳ. ಪದ್ಯ-೧೭೯, ಪು-೧೩೨
೧೬. ಕೆಳದಿ ಅರಸರ ಶಾಸನ ಸಂಪುಟ- ಸಂ-ಕೆಳದಿ ವೆಂಕಟೇಶ ಜೋಯಿಸ, ಪು-೭೦
೧೭. ಕೃಷಿಜ್ಞಾನ ಪ್ರದೀಪಿಕೆ-ಶ್ರೀಘನಮಠ ಶಿವಯೋಗಿಗಳು, ಪು-೧೩೮
೧೮. ಲೋಕೋಪಕಾರ-ಸಂ-ಹೆಚ್.ಶೇಷಯ್ಯಂಗಾರ್, ಪು-೧೦೦
೧೯. ಧರ್ಮಾಮೃತ-ಬಿ.ಬಿ.ಮಹೀಷವಾಡಿ ಎಸ್.ಪಿ. ಪಾಟೀಲ್. ಪದ್ಯ-೨೫, ಪು-೧೫೧
೨೦. ಸರ್ವಜ್ಞನ ವಚನಗಳು-ಉತ್ತಂಗಿ ಚನ್ನಪ್ಪ ವಚನ-೧೭೪೨,ಪು-೨೧೪
೨೧. ಹೈದ್ರಬಾದ ಕರ್ನಾಟಕ ಭಾಗದ ಕನ್ನಡ ಶಾಸನಗಳು-ಸಂ- ಡಾ.ವಿ.ಶಿವಾನಂದ, ಪು-೧೪೯
೨೨. ಕೆಳದಿ ಅರಸರ ಶಾಸನ ಸಂಪುಟ-ಸಂ-ಹೆಚ್. ಶೇಷಯ್ಯಂಗಾರ್, ಮೇಳಗೆ-೪೫ ಕ್ರಿಶ ೧೫೩೦, ಪು-೩೭
೨೩. ಇ.ಸಿ.IX ಶೃಂಗೇರಿ – ೦೭, ಕ್ರಿ.ಶ.೧೬೦೩, ಪು-೨೪೩
೨೪. ಕೃಷಿಜ್ಞಾನ ಪ್ರದೀಪಿಕೆ-ಶ್ರೀಘನಮಠ ಶೀವಯೋಗಿಗಳು, ಪು-೧೩೯
೨೫. ಕನ್ನಡ ದಾಖಲು ಸಾಹಿತ್ಯ- ಡಾ. ಕೆ.ರವೀಂದ್ರನಾಥ, ಪು-೧೧೭
೨೬. ಕೃಷಿಜ್ಞಾನ ಪ್ರದೀಪಿಕೆ-ಶ್ರೀಘನಮಠ ಶಿವಯೋಗಿ, ಪು-೧೪೫
೨೭. ಅದೇ- ಪು-೧೪೩
೨೮. ಲೋಕೋಪಕಾರ-ಹೆಚ್.ಶೇಷಯ್ಯಂಗಾರ್ ಅದ್ಯಾಯ -೦೬,   ಪು-೯೯
೨೯. ಅದೇ-ಅದ್ಯಾಯ -೦೬. ಪು-೯೯
೩೦. ಕೃಷಿಜ್ಞಾನ ಪ್ರದೀಪಿಕೆ-ಶ್ರೀ ಘನಮಠ ಶಿವಯೋಗಿಗಳು, ಪು-೧೬೧
೩೧. ಧರ್ಮಾಮೃತಂ-ಬಿ.ಬಿ.ಮಹೀಷವಾಡಿ ಬಿ.ಎಸ್ ಪಾಟೀಲ ಅ-೧, ಪು-೩೧
೩೨. ಕೃಷಿಜ್ಞಾನ ಪ್ರದೀಪಿಕೆ-ಶ್ರೀಘನಮಠ ಶಿವಯೋಗಿಗಳು,ಪುಟ -೧೨೫
೩೩. ಅದೇ- ಪು-೧೬೫
೩೪. ಅದೇ- ಪು-೧೬೬
೩೫. ಅದೇ- ಪು-೧೬೬
೩೬. ಅದೇ- ಪು-೧೭೯
೩೭. ಲೋಕೋಪಕಾರ-ಸಂ-ಹೆಚ್.ಶೇಷ್ಯ್ಯಂಗಾರ್, ಅ-೦೬, ಪು-೧೦೨
೩೮. ಆದಿಪುರಾಣ-ಗದ್ಯಾನುವಾದ.ಕೆ.ಎಲ್.ನರಸಿಂಹಶಾಸ್ತ್ರಿ, ಅ-೧೧, ಪ-೯೭, ಪು-೪೫೧
೩೯. ಪಂಚತಂತ್ರ-ಗದ್ಯಾನುವಾದ-ಗುಂಡ್ಮಿ ಚಂದ್ರಶೇಖರ ಐತಾಳ, ಪ-೧೭೯. ಪು-೧೩೨
೪೦. ಧರ್ಮಾಮೃತಂ-ಸಂ- ಬಿ.ಬಿ.ಮಹೀಷವಾಡಿ. ಎಸ್.ಪಿ.ಪಾಟೀಲ್, ಅ-೧, ಪ-೧೨೦. ಪು-೨೯
೪೧. ಕೃಷಿಜ್ಞಾನ ಪ್ರದೀಪಿಕೆ-ಶ್ರೀ ಘನಮಠ ಶಿವಯೋಗಿಗಳು, ಪು-೧೮೨
೪೨. ಅದೇ- ಪು-೧೬೯
೪೩. ಪಂಚತಂತ್ರ- ಗದ್ಯಾನುವಾದ-ಗುಂಡ್ಮಿ ಚಂದ್ರಶೇಖರ ಐತಾಳ, ಪು-೪೨
೪೪. ಕೃಷಿಜ್ಞಾನ ಪ್ರದೀಪಿಕೆ-ಶ್ರೀ ಘನಮಠ ಶಿವಯೋಗಿಗಳು, ಪು-೧೪೯
೪೫. ಅದೇ- ಪು-೧೩೧

೪೬. ಅದೇ- ಪು-೧೪೨
೪೭. ಅದೇ- ಪು-೧೫೦
೪೮. ಕೃಷಿಲೋಕ ಪ್ರವೇಶ-ಕೈಂತಜೆ ವಿಷ್ಣುಭಟ್ಟ, ಪು- ೨೩
೪೯. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಡಾ. ಎಂ.ಚಿದಾನಂದ ಮೂರ್ತಿ, ಪು-೪೦೬
೫೦. ಕರ್ಮವೀರ ಮಾಸಪತ್ರಿಕೆ-ಲೇ-ಒಕ್ಕಲುತನ ಮತ್ತು ಒಕ್ಕಲಿಗರು ಡಾ. ಸೂರ್ಯನಾಥ ಕಾಮತ್ ೧೨-೦೬-೨೦೦೫
೫೧. ಕನ್ನಡವಿಶ್ವಕೋಶ –ಕನ್ನಡ ಅಧ್ಯಯನ ಸಂಸ್ಥೆ ಬೆಂಗಳೂರು, ಪು-೯೮
೫೨. ರಟ್ಟಮತಂ-ಸಂ. ಶೇಷಯ್ಯಂಗಾರ್, ಪೀಠಿಕೆ, ಪು-VI,
೫೩. ಕೃಷಿಜ್ಞಾನ ಪ್ರದೀಪಿಕೆ-ಶ್ರೀ ಘನಮಠ ಶಿವಯೋಗಿಗಳು, ಪು-೬೮
೫೪. ಅದೇ- ಪು-೭೩
೫೫. ಅದೇ- ಪು-೭೬
೫೬. ಅದೇ- ಪು-೭೯
೫೭. ಶ್ರೀವತ್ಸ ನಿಘಂಟು-ಟಿ.ವಿ.ವೆಂಕಟಾಚಲಶಾಸ್ತ್ರಿ , ಪು- ೨೨೩
೫೮. ಸಂ.ವ.ಸಂ.-೦೫- ಸಂ- ಡಾ.ವೀರಣ್ಣ ರಾಜೂರ, ವ-೮೭, ಪು-೬೫
೫೯. ರಾಮಧಾನ್ಯ ಚರಿತ್ರೆ- ಕನಕದಾಸ, ಪ-೩೫, ಪು-೬೦
೬೦. ಸಿದ್ದರಾಮೇಶ್ವರ ವಚನ ಸಂಪುಟ-ಸಂ- ಡಾ.ಎನ್.ವಿದ್ಯಾಶಂಕರ ವ-೧೩೦೩, ಪು-೩೬೩
೬೧. ಸಂ.ವ.ಸಂ- ೦೪- ಡಾ.ಬಿ.ಅರ್. ಹಿರೇಮಠ, ವ-೭೮೭, ಪು-೨೫೮
೬೨. ಸಂ.ವ.ಸಂ. ೦೫- ಡಾ. ವೀರಣ್ಣರಾಜೂರ, ವ-೪೩೬, ಪು-೨೪೩
೬೩. ಲೋಕೋಪಕಾರ-ಸಂ-ಶೇಷಯ್ಯಂಗಾರ್, ಅ-೦೬, ಪ-೧೫, ಪು-೯೫
೬೪. ಇ.ಸಿ. IX. ಬೇಲೂರು-೧೭೧, ಕ್ರಿ.ಶ.೧೩೮೨, ಪು-೧೪೧
೬೫. ವಡ್ಡಾರಾಧನೆ-ಗದ್ಯಾನುವಾದ-ಸಂ-ಟಿ.ಕೇಶವಭಟ್ಟ, ಪು-೮೪
೬೬. ಕನ್ನಡ ವಿಷಯವಿಶ್ವಕೋಶ ಜಾನಪದ- ಡಾ.ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಪು-೩೨೯
೬೭. ಕನ್ನಡ ವಿಷಯ ವಿಶ್ವಕೋಶ-ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಪು-೫೭೪
೬೮. ಕೃಷಿಜ್ಞಾನ ಪ್ರದೀಪಿಕೆ-ಶ್ರೀಘನಮಠ ಶಿವಯೋಗಿಗಳು, ಪು-೨೫
೬೯. ಅದೇ- ಪುಟ-೬೭
೭೦. ಸಂ..ವ ಸಂ-೧, ಸಂ- ಡಾ. ಎಂ.ಎಂ ಕಲಬುರ್ಗಿ, ವ-೧೭೪೫, ಪು-೬೭೩
೭೧. ಸರ್ವಜ್ಞನ ವಚನಗಳು-ಚನ್ನಪ್ಪ ಉತ್ತಂಗಿ, ವ-೪೨೧, ಪು-೫೩
೭೨. ಲೋಕೋಪಕಾರ-ಸಂ- ಹೆಚ್.ಶೇಷಯ್ಯಂಗಾರ್, ಅ-೬, ಪ-೦೯, ಪು-೯೪
೭೩. ಕೃಷಿಪದಕೋಶ-ಸಂ-ಕೆ.ವಿ. ನಾರಾಯಣ. ಕನ್ನಡ ವಿ.ವಿ.ಹಂಪಿ, ಅಧ್ಯಾಯ-೦೮ ಪು-೧೯೧
೭೪. ಕನ್ನಡವಿಶ್ವಕೋಶ-ಸಂ-ಐದು. ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ, ಪು-೭೭
೭೫. ಲೋಕೋಪಕಾರ-ಸಂ- ಹೆಚ್. ಶೇಷಯ್ಯಂಗಾರ್, ಅ-೬, ಪ-೧೦, ಪು-೯೪
೭೬. ಅದೇ-ಪ-೧೧, ಪು-೯೪
೭೭. ಅದೇ-ಪ-೧೨, ಪು-೯೪
೭೮. ಅದೇ-ಪ-೧೪, ಪು-೯೫
೭೯. ಹರಿಶ್ಚಂದ್ರಕಾವ್ಯ-ರಾಘವಾಂಕ, ಅ-೩, ಪ-೬೩, ಪು-೧೪೩
೮೦. ಶಿವಶರಣೆಯರ ವಚನ ಸಂಪುಟ-ಸಂ- ಡಾ.ವೀರಣ್ಣ ರಾಜೂರ ವ-೩೯೩, ಪು-೧೨೪
೮೧. ಯಶೋಧರ ಚರಿತ್ರೆ-ಜನ್ನ, ಅ-೧, ಪ-೫೫, ಪು-೨೪
೮೨. ಸಂ.ವ.ಸಂ-೨, ವ-೧೧೬, ಪು-೫೦

೮೩. ಕನ್ನಡ ಜಾನಪದ ಗೀತೆಗಳು- ಡಾ.ಬಿ.ಎಸ್ ಗದ್ದಗಿನ ಮಠ, ಪು-೯
೮೪. ಅದೇ- ಪು-೨೮
೮೫. ಕನ್ನಡ ವಿಷಯ ವಿಶ್ವಕೋಶ ಜಾನಪದ-ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ, ಪು-೩೩೨
೮೬. ಅದೇ- ಪು-೩೩೩
೮೭. ಜೈಮಿನಿ ಭಾರತ-ಸಂ-ಬಿ.ಎಸ್. ಸಣ್ಣಯ್ಯ, ಡಾ. ರಾಮೇಗೌಡ-ಸಂ-೧೫, ಪ-೦೬, ಪು-೧೪೭
೮೮. ಸಂ.ವ.ಸಂ-೦೪, ಡಾ.ಬಿ.ಆರ್. ಹಿರೇಮಠ, ವ-೧೨೦೫, ಪು-೪೮೯
೮೯. ಬಸವಪಂಥ-ಮಾಸಿಕ- ಸೆಂಬರ್- ೨೦೦೫, ಪು-೧೫
೯೦. ಸಂ.ವ.ಸಂ- ಡಾ.ಎಂ.ಎಂ.ಕಲಬುರ್ಗಿ, ವ-೧೭೪೫, ಪು-೬೭೪
೯೧. ಕನ್ನಡ ಜಾನಪದ ಗೀತೆಗಳು, ಡಾ.ಬಿ.ಎಸ್. ಗದ್ದಗಿಮಠ, ಪು-೧೩೯
೯೨. ದೇಶೀಸೃಷ್ಠಿ- ಡಾ. ವೀರಣ್ಣ ದಂಡೆ, ಪು-೭೦
೯೩. ಕನ್ನಡ ಜಾನಪದ ಗೀತೆಗಳು, ಡಾ. ಬಿ.ಎಸ್.ಗದ್ದಗಿಮಠ, ಪು-೧೪೪
೯೪. ಅದೇ- ಪು-೩೪
೯೫. ಅದೇ- ಪು-೧೪೦
೯೬. ದೇಶೀಸೃಷ್ಠಿ- ಡಾ. ವೀರಣ್ಣ ದಂಡೆ, ಪು-೩೫೧
೯೭. ದೇಶೀಸೃಷ್ಠಿ- ಡಾ. ವೀರಣ್ಣ ದಂಡೆ, ಪು-೭೫
೯೮. ಅದೇ- ಪು-೭೬
೯೯. ಅದೇ- ಪು-೭೭
೧೦೦. ಕೃಷಿಪದಕೋಶ-ಸಂ-ಕೆ.ವಿ.ನಾರಾಯಣ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ,
೧೦೧. ಕನ್ನಡ ವಿಷಯ ವಿಶ್ವಕೋಶ, ಜಾನಪದ-ಕನ್ನಡ ಅಧ್ಯಯನ ಸಂಸ್ಥೆ ಮೈ.ವಿ.ವಿ, ಪು-೩೩೪
೧೦೨. ಅದೇ- ಪು-೩೨೮
೧೦೩. ಕೃಷಿಜ್ಞಾನ ಪ್ರದೀಪಿಕೆ-ಶ್ರೀಘನಮಠ ಶಿವಯೋಗಿಗಳು, ಪು- ೬೪,೬೫
೧೦೪. ಅದೇ- ಪು-೧೭೨
೧೦೫. ಅದೇ- ಪು-೧೭೬.
೧೦೬. ಅದೇ- ಪು-೧೪೦
೧೦೭. ಸಂ.ವ.ಸಂ-೧, ಡಾ. ಎಂ.ಎಂ. ಕಲಬುರ್ಗಿ, ವ-೭೩೨, ಪು-೨೨೫
೧೦೮. ಕನ್ನಡ ಭಾರತ, ಸಂ-ಎಂ.ವಿ ಪ್ರಸನ್ನ, ಸಭಾ-ಸಂ-೬, ಪ-೧೬
೧೦೯. ಸಂ.ವ.ಸಂ-೦೪, ಸಂ- ಡಾ. ಬಿ.ಆರ್.ಹಿರೇಮಠ, ವ-೮೨೬, ಪು-೨೭೩
೧೧೦. ಸಂ.ವ.ಸಂ-೦೫-ಸಂ- ಡಾ. ವೀರಣ್ಣ ರಾಜೂರ, ವ-೮೮, ಪು-೬೬
೧೧೧. ಶಿವಶರಣೆಯರ ವಚನ ಸಂಪುಟ,ಸಂ- ಡಾ. ವೀರಣ್ಣ ರಾಜೂರ, ವ-೨೪೨, ಪು-೭೫
೧೧೨. ಅಲ್ಲಮನ ವಚನ ಸಂಪುಟ,ಸಂ- ಡಾ. ಬಿ.ವ್ಹಿ. ಮಲ್ಲಾಪುರ,
೧೧೩. ಸರ್ವಜ್ಞನ ವಚನಗಳು, ಸಂ-ಚನ್ನಪ್ಪ ಉತ್ತಂಗಿ, ವ-೧೬೭೮, ಪು-೨೦೯
೧೧೪. ಶಾಸನಗಳಲ್ಲಿ ಕರ್ನಾಟಕದ ವರ್ತಕರು- ಡಾ.ಬಿ.ಆರ್. ಹಿರೇಮಠ, ಪೀಠಿಕೆ, ಪು-೦೨
೧೧೫. ಕೃಷಿಪದಕೋಶ ಸಂ-ಕೆ.ವಿ.ನಾರಾಯಣ, ಪ್ರಸಾರಂಗ ಹಂಪಿ, ವಿ.ವಿ, ಪು-೨೮೯
೧೧೬. ಅದೇ- ಪು-೧೧೬
೧೧೭. ಅದೇ- ಪು-೧೧೬
೧೧೮. ಅದೇ- ಪು-೧೧೭
೧೧೯. ಅದೇ- ಪು-೧೨೮
೧೨೦. ಕಲಬುರ್ಗಿ ಜಿಲ್ಲೆಯ ಶಾಸನಗಳು- ಡಾ. ಹನುಮಾಕ್ಷಿ ಗೋಗಿ. ಸಗರ-೨೮, ಪು-೯೩೪

೧೨೧. ಕನ್ನಡ ವಿ.ವಿ. ಶಾಸನ ಸಂ–ರಾಯಚೂರು ಜಿಲ್ಲೆಯ ಬಾಳಿನೊಳಿದಿಡ್ಡೆ–ಕ್ರಿ.ಶ. ೧೧೪೮, ಪು–೨೭೨

೧೨೨. ವಡ್ಡಾರಾಧನೆ–ಗದ್ಯಾನುವಾದ,ಸಂ– ಟಿ.ಕೇಶವಭಟ್ಟ, ಪು–೪೦

೧೨೩. ಧರ್ಮಾಮೃತಂ–ಸಂ.ಬಿ.ಬಿ.ಮಹೀಷವಾಡಿ, ಎಸ್.ಪಿ ಪಾಟೀಲ್, ಪು–೨೭೯

೧೨೪. ಬಸವಣ್ಣನವರ ವಚನಗಳು–ವ–೧೧೫

೧೨೫. ಪಂಚತಂತ್ರ– ಗದ್ಯಾನುವಾದ– ಗುಂಡ್ಮಿ ಚಂದ್ರಶೇಖರ ಐತಾಳ, ಪು–೨೦೫

೧೨೬. ಹೈದ್ರಬಾದ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನ–ಸಂ– ಡಾ. ವ್ಹಿ. ಶಿವಾನಂದ, ಪು–೨೬೨

೧೨೭. ಅದೇ– ಎಮ್ಮಡಗಿ– ೯೧, ಪು–೨೨೨

೧೨೮. ಕೆಳದಿ ಶಾಸನ ಸಂಪುಟ–ಕೆಳದಿ ವೆಂಕಟೇಶ ಜೋಯಿಸ–ಕೌಲೇದುರ್ಗ–೪೮, ಕ್ರಿ.ಶ. ೧೬೧೬, ಪು–೮೩

೧೨೯. ಅದೇ–ಕೌಲೇದುರ್ಗ–೧೮೫, ಪು–೨೯೬

೧೩೦. ಶಾಸನಗಳಲ್ಲಿ ಕರ್ನಾಟಕದ ವರ್ತಕರು–ಆರ್.ಸಿ.ಹಿರೇಮಠ, ಪು–೧೨೧

೧೩೧. ಶಾಸನಗಳಲ್ಲಿ ಕರ್ನಾಟಕ ವರ್ತಕರು–ಆರ್.ಸಿ. ಹಿರೇಮಠ, ಪು–೧೨೩

೧೩೨. ಆದಿಪುರಾಣ–ಗದ್ಯಾನುವಾದ, ಕೆ.ಎಲ್.ನರಸಿಂಹಶಾಸ್ತ್ರಿ, ಪ– ೫೧, ಪು–೫೬

೧೩೩. ಸಂ.ವ.ಸಂ–೦೨, ವ–೮೮೦, ಪು–೨೭೭

೧೩೪. ಸಂ.ವ.ಸಂ–೦೪– ಆರ್.ಸಿ. ಹಿರೇಮಠ, ವ–೬೧೪, ಪು–೨೦೯

೧೩೫. ಸಂ.ವ.ಸಂ–೦೭– ಡಾ.ವೀರಣ್ಣ ರಾಜೂರ, ವ–೫೬೩, ಪು–೧೭೬

೧೩೬. ಸಿದ್ಧರಾಮನ ಚರಿತ್ರೆ–ರಾಘವಾಂಕ, ಅ–೭, ಪ–೧೦, ಪು–೧೬೬

ಅಧ್ಯಾಯ–ಏಳು

ಕೃಷಿಭೂಮಿಯ ಸಿದ್ಧತಾ ವಿಧಾನ

೧. ರಂಟೆ–ಕುಂಟೆ ಹೊಡೆಯುವ ಪದ್ಧತಿ

೨. ಬದು ಕಟ್ಟುವುದು

೩. ಬಿತ್ತನೆ

ಅಧ್ಯಾಯ–ಏಳು

ಕೃಷಿಭೂಮಿಯ ಸಿದ್ದತಾ ವಿಧಾನ

ಕೃಷಿಗೆ ಭೂಮಿಯೇ ಮುಖ್ಯ ಆಕರ. ಅನೇಕ ವಿಧವಿಧದ ಮಣ್ಣಿನ ಬಗೆಯನ್ನು ಈ ಭೂಮಿ ಹೊಂದಿದೆ. ಅಂದರೆ ಎರೆ, ಮಸಾರಿ, ಮೊರಡಿ, ಮಸಬು, ಉಸುಕು, ಗರಸುಮಸಾರಿ, ಕೆಂಪುಮಸಾರಿ, ಕೆಂಪುಮೊರಡಿ, ಕರಲುಭೂಮಿ, ಸೌಳುಭೂಮಿ, ಕಟಕದಭೂಮಿ ಮುಂತಾದವುಗಳು. ಇಂತಹ ಭೂಮಿಯನ್ನು ಕೃಷಿಯೋಗ್ಯವಾಗಿ ಮಾಡಿಕೊಳ್ಳುವ ವಿಧಾನ ಕುರಿತು ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಯಾವ ತರಹದ ಭೂಮಿಯನ್ನು ಹೇಗೆ ರಂಟೆ–ಕುಂಟೆ ಹೊಡೆಯಬೇಕು. ಯಾವ ಯಾವ ಬೆಳೆಗಳಿಗೆ ಎಷ್ಟು ಸಾರಿ ಹೊಡೆಯಬೇಕು ಎಂಬುದನ್ನು ಕುರಿತು ವಿಸ್ತಾರವಾಗಿ ಹೇಳಲಾಗಿದೆ. ಅಲ್ಲದೇ ಕೃಷಿಭೂಮಿ ಗೊಬ್ಬರದ ಆರೈಕೆ ಮಾಡಿ ನಂತರ ರಂಟೆ–ಕುಂಟೆ ಹೊಡೆಯುವ ಅಂಶಗಳನ್ನು ತಿಳಿಸಲಾಗಿದೆ. ಕನ್ನಡಶಾಸ್ತ್ರ, ಕಾವ್ಯ, ಶಾಸನ, ಜನಪದರಲ್ಲಿ ಹೊಲಗಳ ಉಳುಮೆಯನ್ನು ನೇಗಿಲಿನಿಂದ ಹೊಡೆದು ಕುಂಟೆಯಿಂದ ಹರಗಿ ಬಿತ್ತುವ ಮಾಹಿತಿಗಳು ಪ್ರಾಸಂಗಿಕವಾಗಿ ಅನೇಕ ಕಡೆ ದೊರೆಯುತ್ತವೆ. ಅವುಗಳನ್ನು ಸಂಗ್ರಹಿಸಿ ಈ ಅಧ್ಯಾಯದಲ್ಲಿ ಕೃಷಿ ಭೂಮಿಯ ಸಿದ್ದತಾ ವಿಧಾನವನ್ನು ಚರ್ಚಿಸಲಾಗಿದೆ.

೧.ರಂಟೆ–ಕುಂಟೆ ಹೊಡೆಯುವ ಪದ್ಧತಿ

ಮಾನವನ ನಾಗರಿಕತೆಯ ಜೊತೆಜೊತೆಯಲ್ಲಿ ವ್ಯವಸಾಯದ ಇತಿಹಾಸವು ಸೇರಿಕೊಂಡಿದೆ. ಅನಾದಿಕಾಲದಿಂದಲೂ ಕೃಷಿಕರು ಭೂಮಿಯ ಉಳುಮೆ ಮಾಡಿಕೊಂಡು ಬಂದಿದ್ದಾರೆ. ಹಸಿವಿನ ತೀವ್ರತೆ ಒಂದಡೆಯಾದರೆ, ಸಂಗ್ರಹಣೆ ಮತ್ತೊಂದು ಬಗೆಯದಾಗಿದೆ. ಪ್ರಾರಂಭದ ವ್ಯವಸಾಯ ಸಂವೃದ್ಧಿಯತ್ತ ಸಾಗಿದ್ದು, ಸಾಕಷ್ಟು ಪೂಜ್ಯ ಹಾಗು ಪವಿತ್ರ ಭಾವನೆಯನ್ನು ಪಡೆದಿತ್ತು. ಎಂಬ ಅಂಶ ವೇದಗಳು ಮತ್ತು ವೇದಾನಂತರದ ಕಾಲದ ಸಾಹಿತ್ಯದಿಂದ ತಿಳಿದುಬರುತ್ತದೆ. "ಅಥರ್ವಣವೇದ, ಯಜುರ್ವೇದ, ಸಂಹಿತೆ, ಬ್ರಾಹ್ಮಣಗಳು, ರಾಮಾಯಣ, ಮಹಾಭಾರತ ಕಾಲಗಳು ಕಬ್ಬಿಣ ಕಂಡುಕೊಂಡ ಕಾಲವದು. ನೇಗಿಲು ಮುಂತಾದ ಉಪಕರಣಗಳಿಗೆ ಕಬ್ಬಿಣವನ್ನು ಬಳಸಿದ, ಕಾಡು ಕಡಿದು ವ್ಯವಸಾಯಕ್ಕಾಗಿ ಉಳುಮೆ ಮಾಡಿದ, ವ್ಯವಸಾಯ ಕ್ಷೇತ್ರವನ್ನು ವಿಸ್ತರಿಸಿದ ಕಾಲವದು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ವೇದಗಳ ಕಾಲದಲ್ಲಿ ನೇಗಿಲನ್ನು ಎರಡರಿಂದ ಎಂಟು ಎತ್ತುಗಳು ಎಳೆಯುತ್ತಿದ್ದವು. ಪ್ರತೀವರ್ಷ ಮಳೆ ಬರುತ್ತಿದ್ದಂತೆಯೇ ಉಳುಮೆ ಪ್ರಾರಂಭವಾಗುತ್ತಿತ್ತು. ...."[೧] ಎನ್ನಲಾಗಿದೆ.

ಪ್ರಾರಂಭದ ಕಾಲದಿಂದಲೂ ರಂಟೆ ಹೊಡೆದು, ಕುಂಟೆಯಿಂದ ಹರಗುವುದು, ಬಿತ್ತುವುದು ವ್ಯವಸಾಯದ ಪದ್ಧತಿಯಾಗಿದೆ. ಆದರೆ ಭೂಮಿಯನ್ನು ಪರೀಕ್ಷಿಸಿ ಅದಕ್ಕೆ ತಕ್ಕ ಹಾಗೆ ಶ್ರಮದಿಂದ ಯುಕ್ತಿ ಉಳುಮೆ ಮಾಡುವಲ್ಲಿ ರೈತರು ಎಡವಿದ್ದಾರೆ ಎಂದೇ ಹೇಳಬಹುದು. ಸಾಮಾನ್ಯವಾಗಿ ಬೇಸಿಗೆಯಲ್ಲಿ ಭೂಮಿ ಕಾಯಿದು ಮಳೆಯಾದಾಗ ಭೂಮಿಯ ಕಾದ ಮಣ್ಣಿನ ಸಾರವು ಹೊಲದಲ್ಲಿ ಇಮರಿಕೊಂಡರೆ, ಆ ಭೂಮಿ ಅತೀ ಉತ್ತಮ ಹದಕ್ಕೆ ಬರುವುದು. ಮುಂಗಾರುಮಳೆಯ ನೀರು ಭೂಮಿಯಲ್ಲಿ ನಿಲ್ಲುವ ಹಾಗೆ ಒಡ್ಡು ಹಾಕಿಸಿ, ನಿಲ್ಲಿಸಿ ನಂತರ ಮಡಿಕೆ ಹೊಡೆದರೆ ಮೇಲಿನ ನಿಸ್ಸಾರವಾದ ಮಣ್ಣು ಕೆಳಗಾಗಿ ಭೂಮಿಯಲ್ಲಿಯ ರಸವತ್ತಾದ ಮಣ್ಣು ಮೇಲೆ ಬರುತ್ತದೆ. ಹೀಗೆ ಭೂಮಿಯಲ್ಲಿ ಒಡ್ಡು ಹಾಕಿ ನೀರು ನಿಲ್ಲಿಸುವುದು, ರಂಟೆಕುಂಟೆ ಹೊಡೆಯುವ ವಿಧಾನವನ್ನು ತಿಳಿಯಬಹುದಾಗಿದೆ.

'ರಂಟೆ' ಎಂದರೆ ಭೂಮಿಯ ಉಳುಮೆ ಮಾಡಲು ಬಳಸುವ ಉಪಕರಣ. ಅದೇ ನೇಗಿಲು ಅಥವಾ ಮಡಿಕೆ, 'ನೇಗಲಿನಿಂದ ಭೂಮಿ ಉಳುವುದೇ ರೆಂಟೆ ಹೊಡೆಯುವುದು ಎಂದರ್ಥ; ಆಧ್ಯಾತ್ಮಿಕ ಅರ್ಥದಲ್ಲಿ ಶಿಶುನಾಳು ಶರೀಫರ ಈ ಹಾಡು ರಂಟೆಯ ಮಹತ್ವವನ್ನು ಸಾರುತ್ತದೆ.

'ಕುಂಟ ಕುರುಡರೆಂಟು ಮಂದಿ ರಂಟಿಹೊಡೆಯಲು
ಸುಂಟರಗಾಳಿಗೆ ಸಿಗದೆ ಲೋಕದ
ರಂಟಿ ಹೊಡಿಯಲೂ ರಂಟಿಹೊಡೆಯಲೂ
ಸುಜ್ಞಾನವೆಂಬ ಕುಂಟಿಯಹೊಡಿ, ರಂಟಿಹೊಡೆಯಲೂ
ಅಜ್ಞಾನವೆಂಬ ಕುರಿಗೆಹೊಡಿ ಬೀಜಬಿತ್ತಲು............॥ 'ಕುಂಟೆ' ಎಂದರೆ ನೆಲವನ್ನು ಮಡಿಮಾಡಿ, ಸಾಲುಗಳನ್ನು ಕ್ರಮಬದ್ಧಗೊಳಿಸಿ, ಅವುಗಳ ನಡುವೆ ಇರುವ ಕಳೆಯನ್ನು ತೆಗೆಯುವ ಉಪಕರಣ. ಭೂಮಿಯನ್ನು ಹರಗಲು ಬಳಸಲಾಗುವುದು. ರಂಟೆ ಹೊಡೆಯುವುದು ಎಂದು ಉತ್ತರ ಕರ್ನಾಟಕದ ಭಾಗಗಳಲ್ಲಿ ಕರೆದರೆ, ನೇಗಿಲು ಹೊಡೆಯುವುದು ಎಂದು ದಕ್ಷಿಣ ಕರ್ನಾಟಕದ ಪ್ರದೇಶಗಳಲ್ಲಿ ಕರೆಯುವುದು ವಾಡಿಕೆಯಾಗಿದೆ. ಅದೇ ರೀತಿ ಉತ್ತರ ಕರ್ನಾಟಕದ ಭಾಗದಲ್ಲಿ ಮಡಿಕೆ ಹೊಡೆಯುವದಕ್ಕೆ, ದಕ್ಷಿಣ ಭಾಗದಲ್ಲಿ ಹರಗುವುದು ಎಂದು ಬಳಸಲಾಗುತ್ತದೆ.

ಪ್ರಾಚೀನ ಕಾವ್ಯಗಳಲ್ಲಿ ರಂಟೆ, ಕುಂಟೆ ಹೊಡೆಯುವ ಅಂಶಗಳೂ ಅನೇಕ ಕಡೆ ಕಾಣಸಿಗುತ್ತವೆ. ಅಂತವುಗಳಲ್ಲಿ ಒಕ್ಕಲಿಗ ಮುದ್ದಣ್ಣನ ವಚನದಲ್ಲಿ

"ಭಕ್ತಿಯೆಂಬ ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲಂ ಪಿಡಿದು
ಅಂತಃಕರಣ ಚತುಷ್ಟಯವೆಂಬ ಪಶುವಂಕಟ್ಟಿ
ಓಂಕಾರನಾದವೆಂಬ ಸೆಳೆಕೋಲಂಪಿಡಿದು
ಉತ್ತರ ಕ್ರೀಯೆಂಬ ಸಾಲನೆತ್ತಿ
ದುಃಕರ್ಮವೆಂಬ ಕಂಟಕದ ಗುಲ್ಮವಂ ಕಡಿದು
ಅರುಹೆಂಬ ರವಿಯ ಕಿರಣದಿಂದ ಒಣಗಿಸಿ
ಅವಂ ಕೂಡಲೊಟ್ಟಿ ಜ್ಞಾನಾಗ್ನಿಯೆಂಬ ಅಗ್ನಿಯಿಂದ ಸುಟ್ಟುರುಹಿ
ಆ ಹೊಲನಂ ಹಸಮಾಡಿ ಬಿತ್ತುವ ಪರಿ ಇನ್ನಾವುದೆಯ್ಯಾ ಎಂದೆಡೆ........".[3]

ಕೃಷಿಕಾಯಕದಲ್ಲಿ ಭಕ್ತಿಯ ಪರಕಾಷ್ಟತೆಯನ್ನು ಕಂಡು ಕೊಂಡ ವ್ಯಕ್ತಿ ಮುದ್ದಣ್ಣ. ಭೂಮಿಯನ್ನು ನೇಗಿಲಿನಿಂದ ಎತ್ತು ಹೂಡಿ ಸೆಳೆಗೋಲಿನಿಂದ ಎತ್ತುಗಳ ಬೆದರಿಸಿ, ಅನೇಕ ಸಾರಿ(ಸಲ) ರಂಟೆ

ಹೊಡೆದು ಭೂಮಿಯಲ್ಲಿಯ ಕಂಟಿ, ಗಿಡ, ಕಣೆಗಿಲೆ, ಕರಿಕೆ ತೆಗೆದು ಅವುಗಳು ಒಣಗಿದ ನಂತರ ಭೂಮಿಯಲ್ಲಿ ಸುಟ್ಟು ಬಿತ್ತಲು ಯೋಗ್ಯವಾಗುವ ರೀತಿಯಲ್ಲಿ ಭೂಮಿಯ ಹಸನಮಾಡುವ ಪದ್ಧತಿಯನ್ನು ಈ ವಚನದಲ್ಲಿ ಕ್ರಮಬದ್ಧವಾಗಿ ತಿಳಿಸಿಕೊಟ್ಟಿದ್ದಾನೆ.

ರನ್ನನ ಗದಾಯುದ್ಧ ಕೃತಿಯಲ್ಲಿ ಭೀಮನ ಗದಾಯುದ್ಧದ ವರ್ಣನೆಯನ್ನು ಕವಿ ಕೃಷಿಗೆ ಹೋಲಿಸಿ ಚಿತ್ರಿಸಿದ್ದಾನೆ. "ಕುರುಧರೆಯಂ ನಿಜೋಗ್ರಗದೆಯೋರ್ಗಳಿನುಱ್ತು ಸಮಸ್ತ ವೈರಿ ಭೂಪರ ರುಧಿರಾಂಬುವಿಂದೆ ....".[೩] ಕುರುಕ್ಷೇತ್ರವೆಂಬ ಹೊಲವನ್ನು ತನ್ನ ಪ್ರಚಂಡವಾದ ಗದಾಪ್ರಹಾರಗಳಿಂದ ಉತ್ತು, ಶತ್ರುರಾಜರ ರಕ್ತಜಲದಿಂದ ನೆಲವನ್ನು ಹದಗೊಳಿಸಿ, ಮದದಾನೆಗಳ ನೆತ್ತಿಗಳನ್ನು ಸೀಳಿ ತೆಗೆದ ಹೊಸ ಮುತ್ತುಗಳನ್ನು ಬೀಜವಾಗಿಸಿ, ಸಾಲುಸಾಲಾಗಿ ಬಿತ್ತಿ ಬೆಳೆಯ ಬೆಳೆದನೆಂದು ಹೇಳುವಾಗ ಉಳುಮೆಯ ಕ್ರಮಬದ್ಧ ವಿಧಾನವನ್ನು ಕವಿ ಹೇಳಿರುವುದನ್ನು ಕಾಣುತ್ತೇವೆ. ಕುಮಾರವ್ಯಾಸಭಾರತದಲ್ಲಿ "ಮಸಗೆ ಮಾಡಿದ ಹೊಲನು .... ಹುದುವಿನಾರಂಭ ....".[೪] ಎನ್ನಲಾಗಿದೆ. ಅಂದರೆ ರಂಟೆಕುಂಟೆಯಿಂದ ಕಳೆ, ಕಸ, ಕಿತ್ತು ಹಸನು ಮಾಡದ ಹೊಲವು, ಹದವರಿತು ಮಾಡದ ಬೇಸಾಯ ಯಾವುದೇ ಫಲ ನೀಡಲಾರದು. ಆದುದರಿಂದ ರಂಟೆಕುಂಟೆಯ ಹದವರಿತು ಹೊಡೆಯುವ ಬೇಸಾಯ ಫಲದಾಯಕವಾದುದ್ದೆಂದು ತಿಳಿಸುತ್ತಾನೆ.

ವಚನಕಾರರ ಅನೇಕ ವಚನಗಳಲ್ಲಿ ರಂಟೆ ಕುಂಟೆ ಹೊಡೆಯುವ ಪದ್ಧತಿಯನ್ನು ಕುರಿತು ಹೇರಳವಾಗಿ ಹೇಳಲಾಗಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಸಂಗ್ರಹಿಸಲಾಗಿದೆ. ಹಡಪದ ಅಪ್ಪಣ್ಣನ ವಚನವೊಂದರಲ್ಲಿ 'ಹಸನಮಾಡಿ ಹರಗಿ ಹೊಲದಲ್ಲಿ ಕಸವ ಬಿತ್ತುವ ಮರುಳರಂತೆ ....' [೧೦೫೩,ಪು-೩೫೫] ಕೃಷಿ ಭೂಮಿಯ ಹರಗಿ ಹೊಲದಲ್ಲಿಯ ಕಸ-ಕರಿಕೆ, ಕಣೆಗಿಲೆ, ಕಿತ್ತು ರಂಟೆ ಹೊಡೆದು ಸಿದ್ಧತೆ ಮಾಡಿಕೊಳ್ಳಬೇಕು. ಜಾಣನಾದ ಕೃಷಿಕ ಯೋಗ್ಯ ಬೀಜಗಳನ್ನು ಬಿತ್ತುತ್ತಾನೆಯೇ ಹೊರತು ಕಸದ ಬೀಜಗಳನ್ನು ಬಿತ್ತಲಾರ. ಅಜ್ಞಾತ ಶರಣರ ವಚನದಲ್ಲಿ '........... ಬೀಳ ಭೂಮಿ ಹಸನಾಗಲೊಲ್ಲದೆ ಜಾಣಬಿತ್ತಿಗೆಯ ಬಿತ್ತಿದರೆ ಬೆಳೆಯುವುದೆಂತಯ್ಯ...........'[ಸಂ.ವ.ಸಂ-ಸಂ-೪,ಪು-೪೧೦] ಎನ್ನಲಾಗಿದೆ. ಯಾವುದೇ ಬಿತ್ತನೆ ಮಾಡಲು ಹೊಲ ಹಸನ ಮಾಡುವುದು ಅವಶ್ಯಕ. ಹಾಗೆಯೇ ಬೀಳು ಭೂಮಿಯನ್ನು ರಂಟೆ ಕುಂಟೆಯಿಂದ ಹರಗಿ ಹಸನುಮಾಡಿ ಬಿತ್ತುವ ಬಗೆಯನ್ನು ಹೇಳಲಾಗಿದೆ. ಸೊಡ್ಡೊಳಬಾಚರಸನ ವಚನದಲ್ಲಿ 'ಹದನರಿದು ಹರಗುವ ಬೆದೆಯರಿದು ಬಿತ್ತುವ ....' [ಸಂ.ವ.ಸಂ-ಸಂ-೪,ವ-೮೨೬,ಪು-೨೭೩] ಎಂದು ತಿಳಿಸಲಾಗಿದೆ. ಕಾಡುಸಿದ್ದೇಶ್ವರರ ವಚನವೊಂದರಲ್ಲಿ

"ಹಾದಿ ಹೊಲವ ಮಾಡಿ ಮೂರೆತ್ತು ಹೂಡಿ,
ಆ ಮೂರೆತ್ತಿಗೆ ಒಂದು ನೊಗ ಕಟ್ಟಿ ನೇಗಿಲ ಹೂಡಿ
ಕರಕಿಯ ಬಿಟ್ಟು ಕಣಗಿಲ ತೆಗೆದು ....".[೫]

ಮಾಗಿಯ ಕಾಲದಲ್ಲಿ ಕಬ್ಬಿಣದ ನೇಗಿಲಿನಿಂದ ಉಳುಮೆ ಮಾಡುವ ವಿಧಾನ ಈ ವಚನದಲ್ಲಿ ಕಾಣಸಿಗುತ್ತದೆ. ಕಬ್ಬಿಣದ ನೇಗಿಲಿಗೆ ಮೂರು ಎತ್ತು ಅಂದರೆ ಮೂರು ಜೊತೆ ಎಂದರ್ಥ. ಆರು ಎತ್ತುಗಳನ್ನು ಹೂಡಿ ಹೊಡೆದರೆ ಹೊಲದ ಶಾಶ್ವತ ಕಳೆಗಳಾದ ಕರಿಕೆ, ಕಣೆಗಿಲೆ, ಕಸ-ಕಡ್ಡಿ ತೆಗೆದು ಹಸನುಮಾಡುವ ಬಗೆಯನ್ನು ಹೇಳಲಾಗಿದೆ.

ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲೆಂದು ಹೇಳಿ, ಒಕ್ಕಲುತನದ ಮಹತ್ವ ಮತ್ತು ಕೃಷಿಯ ಯಂತ್ರ ನಿರಂತರವಾಗಿ ತಿರುಗಿದರೆ ಮಾತ್ರ ದೇಶದ ಜೀವನಧಾರೆ ಹರಿಯುತ್ತದೆಂಬ ಕೃಷಿಜ್ಞಾನವನ್ನು

ಅನೇಕ ಕಡೆ ತನ್ನ ತ್ರಿಪದಿಗಳಲ್ಲಿ ಹರಳುಗಟ್ಟಿದ ಸರ್ವಜ್ಞ ಬೇಸಾಯ ಪದ್ಧತಿಯನ್ನು ಕುರಿತು ಒಂದು ತ್ರಿಪದಿಯಲ್ಲಿ ಹೀಗೆ ಹೇಳುತ್ತಾನೆ.

"ಎತ್ತೆಮ್ಮೆ ಹೂಡುವುದು। ಉತ್ತೊಮ್ಮೆ ಹರಗುವುದು
ಬಿತ್ತೊಮ್ಮೆ ಹರಗಿ ಕಳೆದೆಗೆದರಾ ಬೆಳೆಯು ।
ಎತ್ತಗ್ಯೆಯದ್ದು ಸರ್ವಜ್ಞ ॥".[೬]

ರಂಟೆ ಹೊಡೆಯುವ, ನಂತರ ಹರಗುವ, ಬಿತ್ತನೆ ಮಾಡುವ, ಬಿತ್ತಿ ಮತ್ತೊಮ್ಮೆ ಎಡೆ ಹೊಡೆದು ಕಳೆ, ಕಸ ತೆಗೆದರೆ ಆ ಬೆಳೆಯು ಸಂವೃದ್ದವಾಗಿ ಬೆಳೆದು ರೈತರ ಕೈ ಸೇರುತ್ತದೆ, ಎಂದು ಹೇಳುವ ತ್ರಿಪದಿಯಲ್ಲಿ ಬೇಸಾಯದ ವಿಧಾನವನ್ನು ಕುರಿತು ಮೂರು ಸಾಲುಗಳಲ್ಲಿಯೇ ಹೇಳಿರುವುದು ಕಂಡುಬರುತ್ತದೆ.

ಕೃಷಿಪಂಡಿತನಾದ ನಯಸೇನ ತನ್ನ ಧರ್ಮಾಮೃತ ಕೃತಿಯಲ್ಲಿ "........... ಬೆಳಸು ಬಂದೊಡೆ ನೆಲನಂ .... ಬಿಡುವಂತೆ ....".[೭] ಬೆಳೆಯ ಕೊಯ್ಲಿನ ನಂತರ ಕೃಷಿಭೂಮಿಯನ್ನು ಸ್ವಲ್ಪ ದಿನಗಳ ಕಾಲ ಖಾಲಿಬಿಟ್ಟು ನಂತರ ಹರಗಬೇಕು. ಏಕೆಂದರೆ ಈ ವೇಳೆಯಲ್ಲಿ ದನಕರಗಳು ಭೂಮಿಯಲ್ಲಿ ನಡೆದಾಡಿದರೆ ಉತ್ತಮ ಎಂಬುದು ಹಿರಿಯರ ನಂಬಿಕೆ. ಈ ರೀತಿಯ ಉಳುಮೆಯ ಪದ್ಧತಿ, ಪೈರು ಹೆಚ್ಚು ಇಳುವರಿ ಕೊಡಲು ಸಹಕಾರಿಯಾಗಿದೆ. ಇನ್ನೊಂದು ಕಡೆ 'ಸೌಳಪ್ಪ ಭೂಮಿಯನುತ್ತುದಕಮನೆಜೆುದು ಕಸಮಂ ಕಳೆದುಬಿತ್ತಿ ಬೇಲಿಯನಿಕ್ಕಿ ಪಿರಿದು ಪ್ರಯತ್ನಮಂ ಮಾಡಿದೊಡಂ ಕರಿಯ ಭೂಮಿಯ ಬೆಳೆಸಿನಂತಕ್ಕುಮೆ ....'[ಧರ್ಮಾಮೃತ-ಪು-೨೯೭] ಎನ್ನುವಲ್ಲಿ, ಸೌಳಪ್ಪ ಭೂಮಿಯ ಉಳುಮೆ ವ್ಯರ್ಥ ಸಾಹಸವೇ ಸರಿ, ಯಾವ ತರಹದ ಭೂಮಿಯಲ್ಲಿ ಯಾವ ರೀತಿಯ ಉಳುಮೆ ಮಾಡಬೇಕು ಎಂಬ ತಿಳುವಳಿಕೆಯನ್ನು ಇಂತಹ ಕಡೆ ನೀಡುತ್ತಾನೆ.

ಕನ್ನಡ ಶಾಸನಗಳಲ್ಲಿ ರಂಟೆಕುಂಟೆ ಹೊಡೆದು ಭೂಮಿ ಸಿದ್ದತೆಗೊಳಿಸುವಂತಹ ವಿಧಾನ ಅಷ್ಟಾಗಿ ಕಂಡುಬರುವುದಿಲ್ಲ. ಆದರೂ ಪೂರಕವಾಗಿ ದೊರೆಯುವ ಮಾಹಿತಿಯನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಗೊಬ್ಬೂರು ಶಾಸನವೊಂದರಲ್ಲಿ ಶ್ರೀ ಮಹಾಲಿಂಗ ಮೇಳೇಶ್ವರ ದೇವರಿಗೆ ಒಕ್ಕಲಾಗಿರುವ ಎಲ್ಲಾ ವರ್ಗದ ಜನರನ್ನು ಒಂದು ಸೂಡು ಕಟ್ಟಿದ ಜೋಳವನ್ನು ದೇವರಿಗೆ ಒಪ್ಪಿಸಬೇಕು ಎಂದು ವರ್ಣಿಸುವ ಅಂಶ ಕಾಣಸಿಗುತ್ತವೆ. "............ ಆ ಹಿರಿಯ ಗೊಬ್ಬೂರ ಹಳ್ಳಿಗಳೊಳಗಾಗಿ ಗೊಬ್ಬೂರ ಚತುಸ್ಸೀಮೆಯಿಂದೊಳಗೆ ಜಾತಿ ವಿಜಾತಿಯೆ ನೊಗನಿಕ್ಕಿ ಉತ್ತುಹರಗಿ ಬಿತ್ತಿ ಬೆಳೆದು ಆ ಹಿರಿಯ ಮಹಾಜನಂಗಳಿಗೆ ಸೂಡು ಜೋಳಮಂ ತೆತ್ತು ಗೆಯ್ಯೂಟಂಸ್ತ ಮೇಳ್ಳಾಸಿರ್ಬ್ಬರುಂ ನೆರೆದು ತಾವು ಮಾಸಡಿಸಿದ ಶ್ರೀಮಹಲಿಂಗ ಮೇಳೇಶ್ವರ ದೇವರಿಗೆ ವರಿಷ ಪ್ರತಿ ನಡೆವ(ವೊ)ಂದು ಕುಂಟೆಯ ಮೇಳಿಯಲೊಂದೊಂದು ಹಣವಿನ ಲೆಕ್ಕದಲು ಆ ವೊಕ್ಕಲು ಎನಿಸು ಕುಂಟೆಯಲು ಎನಿಸು ಕುಂಟೆಗಳ್ಗ ಮೇಳೆಯಲೊಂದೊಂದು ಹಣವಿನ ಆ ಸಮಸ್ತ ...."[೮] ಎಂದು ವರ್ಣಿಸಿದೆ. ಮಾನ್ವಿ ಶಾಸನವೊಂದರಲ್ಲಿ ಊರ ಹೊಲಬೀಳು ಬಿದ್ದಾಗ ಉಳುಮೆ ಮಾಡುವ ರೀತಿ ಹೀಗೆ ಕಂಡುಬರುತ್ತದೆ. '......... ಕವುಲುವೂರ ಹೊಲಗಳು ಪಾಂಡವ ಬೀಳು ಬಿಡುಯಿರಲಾಗಿಯಿನಕಿರ್ದಿ ಹೊಲಗಳಿಗೆ ಮಡಿಕೆಕಟಿಕಿರ್ದಿ ಮಾಡಲಿಕ್ಕೆ ಮೂರು ವರ್ಷ ಕವುಲು ....'[ಮಾನ್ವಿ ಶಾಸನ-೩೪. ಪು-೨೫೪] ಸಾಮೂಹಿಕವಾಗಿ ದೇವರ ಹೊಲಗಳನ್ನು ಮಡಿಕೆ ಹೊಡೆದು ಹಸನು ಮಾಡುವ ಪದ್ಧತಿ ಕಂಡುಬರುತ್ತದೆ.

ಜನಪದರಲ್ಲಿ ಇಳಿಹಾಳ ಬೊಮ್ಮಯ್ಯನ ಹಂತಿಹಾಡುಗಳಲ್ಲಿ ಹೊಳೆದಂಡಿಯಲ್ಲಿ ಬೆಳೆವ ಕಣಜದ ಭೂಮಿಯಲ್ಲಿ ಬೆಳೆ ಬೆಳೆದು, ಮೂತಾಳ ಕೂರಿಗೆಯಿಂದ ಬಿತ್ತಿದ ಹೊಲದಲ್ಲಿ ಒಂದು ತಾಳು ಅರಸನಿಗೆ [ತೆರಿಗೆಗೆ] ಎರಡನೆಯ ತಾಳು ಪಶು-ಪಕ್ಷಿಗಳಿಗೆ, ಮೂರನೆ ತಾಳು ತನಗೆ ಮತ್ತು ತನ್ನ ಅವಲಂಬಿತರಿಗೆ ಎನ್ನುತ್ತಾನೆ. ಎಲ್ಲಾ ಒಕ್ಕಲಿಗರು ಕಡ್ಡಾಯವಾಗಿ ದೊಡ್ಡರೈತರ ಬೇಸಾಯ ಕೆಲಸ ಮಾಡಬೇಕು. ಭೂಮಿಯ ಉಳುಮೆ ಮಾಡುವುದು ರೈತನ ಕರ್ತವ್ಯವಾಗಿದೆ. ದೊಡ್ಡರೈತರೂ ಕೃಷಿಕಾರ್ಯದಲ್ಲಿ ಭಾಗವಹಿಸುತ್ತಿದ್ದರು ಎನ್ನಲಾಗಿದೆ.

"ದೊಡ್ಡ ಒಕ್ಕಲಿಗಾಗಿ ಕಡ್ಡಾಯ ಹೊಲಗೆಲಸ
ಸಡ್ಡೊಡೆದ ರೈತ ಬೆಳೆಯುವದಕೆ ....".[೯] ಎನ್ನುತ್ತಾರೆ.

ತೋಟಗಾರಿಕೆಯ ಭೂಮಿಯನ್ನು ರಂಟೆಕುಂಟೆಯ ಹೊಡೆದು ಸಿದ್ದತೆ ಮಾಡುವ, ತಗ್ಗು ತೆವರು ಸಮತಟ್ಟು ಮಾಡಿ ಗುಂಡಿ ತೆಗೆದು ನಾಟಲು ಸಿದ್ದಮಾಡುವ ಅಂಶಗಳನ್ನು ತಿಳಿಯಬಹುದು. 'ತೋಟವನ್ನು ಮಾಡದೆ ಕೋಟಲೆ ಹೋಗದು' ಎಂಬ ಗಾದೆಯಂತೆ ಯುಕ್ತಿಯಿಂದ ಹದ ಬೆದೆ ಅರಿತು ವ್ಯವಸಾಯ ಮಾಡಿ ತೋಟ ಮಾಡಲು ಮುಂದಾಗಬೇಕು. ತೋಟದ ಭೂಮಿಗೆ ನೀರಿನ ಆಸರೆ ಮುಖ್ಯವಾದುದು. ಅದನ್ನು ಶೋಧಿಸಿಕೊಂಡು ಬಾವಿ-ಕೆರೆ-ಹಳ್ಳದ ಅನುಕೂಲವಿದ್ದ ಕಡೆ, ಭೂಮಿಗೆ ಬದು ಕಟ್ಟಿ ನೀರು ನಿಲ್ಲುವಂತೆ ಮಾಡಿಕೊಂಡು ಹೊಲದಲ್ಲಿರುವ ಕಳೆ, ಕಸಗಳನ್ನು ನಟ್ಟು ಕಡಿದು ತೆಗೆಯಬೇಕು. ನಂತರ ಭೂಮಿಯ ಮಣ್ಣಿನ ಗುಣಕ್ಕೆ ಅನುಸಾರವಾಗಿ ಕೊಟ್ಟಿಗೆ ಗೊಬ್ಬರ ಹಾಕಿ ದೊಡ್ಡ ನೇಗಿಲು ಕಟ್ಟಿ ಚೆನ್ನಾಗಿ ಮೂರು ಸಲ (ಸಾಲು) ಹೊಡೆದು ಆಮೇಲೆ ದೊಡ್ಡ ಕುಂಟೆಯಿಂದ ಚೆನ್ನಾಗಿ ಹರಗಿ, ಗೊಬ್ಬರ ಹಾಕಿ ಮತ್ತೆ ಹರಗಬೇಕು. ಶ್ರೀ ಘನಮಠ ಶಿವಯೋಗಿಗಳ ಅನುಮತದಂತೆ ತೋಟದ ಭೂಮಿಯ ಸಿದ್ದತಾ ವಿಧಾನವನ್ನು ಈ ರೀತಿ ಹೇಳಲಾಗಿದೆ. "......... ಭೂಮಿಯನ್ನು ಒಂದು ಸಾಲು ನೇಗಿಲೆಯನ್ನು ಹೊಡೆದು ಚೆನ್ನಾಗಿ ಗೊಬ್ಬರವನ್ನು ಹಾಕಿ ಮತ್ತೊಂದು ಸಾಲು ನೇಗಿಲೆಯನ್ನು ಹೊಡೆದು ಎರಡು ಸಾಲು, ಮೂರು ಸಾಲು, ಚೆನ್ನಾಗಿ ಹರಗಿ ಪುನಃ ಗೊಬ್ಬರ ಹಾಕಿ, ಮಡಿಕೆ ಹೊಡೆದು, ಹರಗಿ ಸಿದ್ದ ಮಾಡಿಕೊಂಡರೆ ಆ ಭೂಮಿಯಲ್ಲಿ ಬೇಕಾದ ಪದಾರ್ಥಗಳನ್ನು ಮಾಡಿಕೊಳ್ಳಲಿಕ್ಕೆ ಬರುವುದು".[೧೦] ಎನ್ನಲಾಗಿದೆ. ಲೋಕೋಪಕಾರದಲ್ಲಿ ತೋಟ ಮಾಡುವ ಭೂಮಿಯ ಸಿದ್ದತೆ ಕುರಿತು ಹೀಗೆ ಹೇಳಲಾಗಿದೆ.

"ಉದಕಸಮೃದ್ಧಿಯಪ್ಪ ನೆಲನಂ ನೆಱಶೋಧಿಸಿ ಕೊಳ್ಳನೇಟಿನಂ ।
ತದಱೊಳೆ ಬಿತ್ತಿ ಘಾತಪದದೊಳ್ ಕೆಡೆಯುತ್ತೆ ಬಟಿಕ್ಕವಿರ್ಮೊಟಿಂ ॥
ಚದುರಸಮಾಗಿ ನಾಲ್ಕುಮೊಟಿನಾಗಿದೆ ಗಣ್ಪು ವಿಘಾತದಿಂ ಪೊದ ।
ಟ್ಟೊದವಿದೆ ತೋಡಿ ಕೂಡೆ ಸುರಿಗಾಗುಟಿ ತೀವಿದ ಗೊಬ್ಬರಂಗಳೊಳ್॥".[೧೧]

ನೀರಿನಿಂದ ಸಂವೃದ್ಧಿಯಾದ ಭೂಮಿಯ ತೆಗ್ಗು ದಿನ್ನೆಗಳನ್ನು ಸಮಮಾಡಿ, ಬೀಜವನ್ನು ಬಿತ್ತುವುದು. ಇಲ್ಲವೇ ಸಸಿಗಳನ್ನು ಎರಡು ಮೊಳ ಅಗಲ, ನಾಲ್ಕು ಮೊಳ ಆಳ ತಗ್ಗುಗಳನ್ನು ನಯವಾಗಿ ತೋಡಿಸಿ ಅವುಗಳಿಗೆ ಗೊಬ್ಬರ ತುಂಬಿಸುವುದು. ಆನಂತರದಲ್ಲಿ ತಗ್ಗುಗಳ ಮಧ್ಯೆಮಧ್ಯೆದಲ್ಲಿ ಮರಗಳು ಒಂದಕ್ಕೊಂದು ತಾಗದಂತೆ ೧೬,೧ಳ ಹಾಗೂ ೧೦ ಪ್ರಮಾಣದಲ್ಲಿ ಜಾಗವನ್ನು ಬಿಟ್ಟು ಉತ್ತಮ, ಮಧ್ಯಮ ಮತ್ತು ಕನಿಷ್ಠ ಪ್ರಕಾರದ ಮರಗಳನ್ನು ನೆಡುವುದು. ಆ ನಂತರ ಪ್ರಮಾಣವರಿತು ಮಣ್ಣು ಗೊಬ್ಬರವನ್ನು

ಸಮನಾಗಿ ಬೆರಸಿ ಆ ತಗ್ಗುಗಳಿಗೆ ತುಂಬಬೇಕು. ಇದು ಭೂಮಿ ಸಂಸ್ಕಾರವೆನಿಸಿಕೊಳ್ಳುತ್ತದೆ. ಇನ್ನೊಂದು ಪದ್ಯದಲ್ಲಿಯೂ ಭೂಮಿ ಸಂಸ್ಕಾರ ಕುರಿತು ಹೀಗೆ ಹೇಳಲಾಗಿದೆ.

"ಪವಣಱಿದು ಗುಟಿಗಳೊಳ್ ತೀ ।
ವುದಯ್ದುಂ ತೆಱದ ಮಣ್ಣುಮಂ ಗೊಬ್ಬರಮಂ ॥
ಸಮನಾಗಿ ಕೂಡಿ ಬುಧ ಕ
ಲ್ಪ ವೃಕ್ಷನನುಮತದೆ ಭೂಮಿ ಸಂಸ್ಕಾರಮಿದುಂ ॥".[೧೨]

ಅಳತೆಗನುಸಾರವಾಗಿ ತೆಗೆದ ಕುಳಿಗಳಲ್ಲಿ ಐದು ಬಗೆಯ ಮಣ್ಣು, ಗೊಬ್ಬರ ಸಮನಾಗಿ ಬೆರಸಿಕೊಂಡು, ಆ ಕುಳಿ(ಗುಂಡಿ)ಯಲ್ಲಿ ತುಂಬುವುದು ಹೀಗೆ ಮಾಡುವುದು ಹಿರಿಯರ ಅನುಮತದಲ್ಲಿ ತೋಟದ ಭೂಮಿ ಸಿದ್ದತೆ ಎನಿಸಿಕೊಳ್ಳುತ್ತದೆ.

ಕೃಷಿಜ್ಞಾನ ಪ್ರದೀಪಿಕೆಯಲ್ಲಿ ತೋಟದ ಪೈರು ಮಾಡುವಾಗ ಭೂಮಿಯನ್ನು ರಂಟೆ ಕುಂಟೆ ಹೊಡೆಯುವದನ್ನು ಕುರಿತು ಹೀಗೆ ಹೇಳಲಾಗಿದೆ. ಯಾವುದೇ ತೋಟದ ಬೆಳೆ ಅಂದರೆ ಅಡಿಕೆ, ತೆಂಗು, ಬಾಳೆ, ಎಲೆಬಳ್ಳಿ, ಮಾವು, ನಿಂಬೆ, ದಾಳಿಂಬೆ, ಪೇರಲ, ಉದ್ಯಾನವನ ಮತ್ತು ಕಬ್ಬು ಬೆಳೆಗಳನ್ನು ಮಾಡಲು ಅನುಸರಿಸುವ ಪದ್ಧತಿಯನ್ನು ಕುರಿತು ವಿಸ್ತಾರವಾಗಿ ಹೇಳಲಾಗಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಸಂಗ್ರಹಿಸಲಾಗಿದೆ. ವಿಶೇಷವಾಗಿ ಕಬ್ಬಿನ ಪೈರು ಮಾಡುವಾಗ ಭೂಮಿ ಸಂಸ್ಕರಿಸುವ ಬಗೆಯನ್ನು ಶ್ರೀ ಘನಮಠ ಶಿವಯೋಗಿಗಳು ಹೀಗೆ ಸೂಚಿಸುತ್ತಾರೆ. "......... ಮೊದಲು ಗೊಬ್ಬರ ಹಾಕಿ, ಎರಡು ಸಾಲು ನೇಗಿಲೆಯನ್ನು ಹೊಡೆದು, ಪುನಃ ಗೊಬ್ಬರ ಹಾಕಿ, ದೊಡ್ಡಕುಂಟೆಯಿಂದ ಮೂರು ಸಾಲು ಚೆನ್ನಾಗಿ ಹರಗಿ ಮಣ್ಣು ಮೆತ್ತಗಾಗುವ ಹಾಗೆ ಮಾಡಿ, ಬೋದು ಎಳಿಸಿ, ಕಾವಲಿಯನ್ನು ತಿದ್ದಿಕೊಂಡು ಆ ಬೋದಿಗೆ ಗೊಬ್ಬರ ಹಾಕಿ ಭೂಮಿಯನ್ನು ತಯಾರು ಮಾಡಬೇಕು".[೧೩] ಎಂದು ಹೇಳುತ್ತಾರೆ.

ಖುಷ್ಕಿ ಅಥವಾ ಮಳೆಯಾಧಾರಿತ ಭೂಮಿಯ ಹಸನು ಮಾಡಿ ರಂಟೆ ಕುಂಟೆ ಹೊಡೆಯುವ ವಿಧಾನವನ್ನು ತಿಳಿಸುವಾಗ ಮುಂಗಾರಿ ಮತ್ತು ಹಿಂಗಾರಿ ಬೆಳೆಗಳಿಗೆ ಭೂಮಿಯ ಸಿದ್ದತೆ ಹೇಗೆ ಮಾಡಬೇಕೆಂಬುದನ್ನು ಶ್ರೀಘನಮಠ ಶಿವಯೋಗಿಗಳು ಈ ರೀತಿ ಸೂಚಿಸುತ್ತಾರೆ. ".......... ಬೇಸಿಗೆಯಲ್ಲಿ ಮಡಿಕೆ ಹೊಡೆದು ಹರಗುವ ಭೂಮಿಯು ಸಣ್ಣ ಎರಿ ಅಂದರೆ ಬಹಳವಾಗಿ ಬೀಡಿ ಸೆಳೆಯದಂಥ ತಂಪು ಎರಿಗಳು ಮತ್ತು ಕೇಸರಿ, ಕರ್ಲು, ಮಡಿಕಟ್ಟು, ವಂಡುಭೂಮಿ, ಗರಸುಭೂಮಿ, ಮರಡಿಯ ಪೈಕಿ ಮೃದುವಾದ ಭೂಮಿ, ಕಲ್ಲು ಭೂಮಿಗಳಲ್ಲಿ ಗುಣಿಗಲ್ಲು ಭೂಮಿ ಮೊದಲಾದ ಸ್ವಲ್ಪ ಮೃದುವಾದ ಭೂಮಿಗಳನ್ನು ಪರೀಕ್ಷಿಸಿ ಬೇಸಿಗೆಯಲ್ಲಿ ಎರಡು ಎತ್ತಿನ ಮಡಿಕೆಯ ಹೊಡೆದು ಆ ಹಳ್ಳಿಗಳು ಸ್ವಲ್ಪ ಬಿಸಿಲು ತಾಕಿ ಒಡೆಯುವದಕ್ಕೆ ಬಂದಾಗ ಮೂರು ಸಾಲು ಬೇಸಿಗೆಯ ಹರತಿಯನ್ನು ಕಾಳಜಿಯ ಮೇಲೆ ಚೆನ್ನಾಗಿ ಹರಗಿ ಹೊಲದಲ್ಲಿ ಕೊಯ್ಲಿ ಕಸ, ರವದಿ ಮೊದಲಾದ ಮಲೀನಗಳು ಇಲ್ಲದ ಹಾಗೆ ಹೆಟ್ಟಿ ಹೊಡೆದು ಆರಿಸಿ. ಕಡೆಯಲ್ಲಿ ಗೊಬ್ಬರದ ನಿಮಿತ್ಯವಾಗಿ ಮಾಡಿದ ತಗ್ಗಿಗೆ ಹಾಕಿಸಿ ....".[೧೪] ಇಲ್ಲಿ ಹೇಳಿರುವದಲ್ಲದೇ ಬೀಡೆ ಸೆಳೆಯುವಂತಹ ಗಟ್ಟಿಎರಿ, ಉಸುಕು ಮಿಶ್ರಿತವಾದ ಗಟ್ಟಿಕರ್ಲು, ಉಸುಕು ಮಿಶ್ರಿತವಾದ ಹಾಳು ಹಾಗೂ ಉಸುಕು ಮಿಶ್ರಿತವಾದ ಕೆಂಪು ಮಸಾರಿ ಮತ್ತು ಉಸುಕು ಭೂಮಿಯಲ್ಲಿ ಬೇಸಿಗೆ ಕಾಲದಲ್ಲಿ ಮಡಿಕೆ ಹಾಯುವುದಿಲ್ಲ. ಅಕಾಲಮಳೆ ಬಂದ ಕಾಲದಲ್ಲಿ ಹದ ಬೆದೆ

ನೋಡಿ, ಎರಡು ಸಾಲು ಮಡಿಕೆ ಹೊಡೆದು, ಚೆನ್ನಾಗಿ ಮೂರು ಸಲ ಹರಗಿ ಕಸಕಡ್ಡಿ ತೆಗೆದು ಹಸನುಮಾಡಬೇಕೆಂದು ಸೂಚಿಸುತ್ತಾರೆ.

ಹಿಂಗಾರಿಯ ಬೆಳೆಗಳಾದ ಹತ್ತಿ,ಕಡಲೆ, ಬಿಳಿಜೋಳ, ಗೋಧಿ, ಪೈರು ಮಾಡಲು ಹೊಲದ ಸಿದ್ಧತೆಯನ್ನು ಕುರಿತು ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಹೀಗೆ ಹೇಳುತ್ತಾರೆ. "........... ಎರಿಯ ಹೊಲಗಳಿಗೆ ಗೊಬ್ಬರವನ್ನು ಹಾಕಿ ಮಡಿಕೆಯ ಹೊಡೆದು ಮೂರು ಸಾಲು ಬೇಸಿಗೆಯಲ್ಲಿ ಹರಗಬೇಕು. ಆಮೇಲೆ ನೊಲ್ಲಿ ಹುಟ್ಟದ ಹಾಗೆ ಒಂದು ಸಾಲು, ಎರಡು ಸಾಲು ಒಳಗಡೆ ಮಳೆಯಾದ ಮೇಲೆ ಹರಗಿರಬೇಕು. ನೊಲ್ಲಿಯ ಹರತಿ ಹರಗಬೇಕಾದರೆ ಹೊರಪು ನೋಡಿ ಸದಿಯು ಹೋಗುವ ಹಾಗೆ ಹರಗಬೇಕು. ಆಮೇಲೆ ಬಿತ್ತುವ ಮುಂದೆ ಮತ್ತೊಮ್ಮೆ ಹರಗಿ ಬಿತ್ತಬೇಕು".[೧೫] ಎಂದು ಹೇಳುತ್ತಾರೆ. ಗೋಧಿಯನ್ನು ಬಿತ್ತುವ ಹೊಲವನ್ನು ಹರಗಿದಷ್ಟು ಉತ್ತಮ. ಸುಮಾರು ಏಳು ಇಲ್ಲವೇ ಎಂಟು ಸಲ ಹರಗಿದರೆ ವಿಶೇಷ ಬೆಳೆ ಬರುತ್ತದೆ. ಮಡಿಕಟ್ಟು ಅಥವಾ ಎರೆಯಾದರೆ ಹೊಲವನ್ನು ಎರಡು ಸಲ ಮಡಿಕೆ ಹೊಡೆದು ಬೇಸಿಗೆಯಲ್ಲಿ ಮೂರು ಸಲ ಹರಗಬೇಕು. ಹೆಚ್ಚು ಗೊಬ್ಬರದ ಸತ್ವ, ಫಲವತ್ತಾದ ಹೊಲವಾಗಿದ್ದರೆ, ಮಡಿಕೆ ಹೊಡೆದು ಹಾಗೆ ಬಿಡಬೇಕು. ಮುಂಗಾರಿನ ಮಳೆಯ ನೀರು ಸಾಲಿನಲ್ಲಿ ನಿಂತು ತಂಪು ಹಿಡಿಯುತ್ತದೆ. ನಂತರ ಹೊರಪು ನೊ ಕಟ್ಟಿ, ತೆಗ್ಗು ತೆವರು ಸಮತಟ್ಟು ಮಾಡಿಕೊಂಡು ಪ್ರತೀವರ್ಷ ಮಡಿಕೆ ಹೊಡೆದು ಚೆನ್ನಾಗಿ ಹರತೆ ಮಾಡಬೇಕು. ಭೂಮಿಯ ಮಣ್ಣು, ವೈವಿಧ್ಯತೆ ಗಮನಿಸಿ ಕೊಟ್ಟಿಗೆ ಗೊಬ್ಬರ, ಹಸಿರೆಲೆ, ಕಸಕಡ್ಡಿ ಗೊಬ್ಬರ ಹಾಕಿ ಮಡಿಕೆ ಹೊಡೆದು ಹದಬೆದೆ ನೋಡಿ ಹರಗಬೇಕು. ಕರಿಕೆ, ಕಣೆಗಿಲೆ, ಕಲ್ಲುಹುರಿಗಳನ್ನು ನಟ್ಟು ಕಡಿಸಿ ಯುಕ್ತಿಯಿಂದ ಹೊಲಗಳನ್ನು ಹಸನುಮಾಡಿಕೊಳ್ಳಬೇಕು. ಬಲಿಷ್ಠವಾದ ಎತ್ತುಗಳು, ವ್ಯವಸಾಯದ ಉಪಕರಣಗಳು ಮತ್ತು ಮಾನವ ಶ್ರಮ ಸರಿಯಾಗಿ ಬಳಕೆಯಾದರೆ ಹಾಗೂ ಅನೇಕ ಬಗೆಯ ಕೃಷಿಜ್ಞಾನದ ತಿಳುವಳಿಕೆಯನ್ನು, ಪ್ರಾಚೀನ ಕೃಷಿಪದ್ಧತಿಗಳನ್ನು ತಿಳಿಸುವಂತಹ ಕಾರ್ಯವನ್ನು ಕೃಷಿವಿಶ್ವವಿದ್ಯಾನಿಲಯಗಳು ಸಕಾಲದಲ್ಲಿ ಮಾಡಿದರೆ ರೈತ ವರ್ಗಕ್ಕೆ ಉಪಕಾರವಾಗುತ್ತದೆ.

೨.ಬದು ಕಟ್ಟುವುದು

ಕೃಷಿಕರು ಹೊಲಗದ್ದೆಗಳ ಆರೈಕೆ ಮಾಡುವುದು ಅತ್ಯಗತ್ಯವಾಗಿದೆ. ಹೊಲದ ಮಣ್ಣು ಅಮೂಲ್ಯವಾದುದ್ದು. ಆ ಮೇಲ್ಮಣ್ಣು ಬೆಳೆಗಳಿಗೆ ಅವಶ್ಯಕವಾದ ಸಾರವನ್ನು ಒದಗಿಸುತ್ತದೆ. ಅಂತ ಮಣ್ಣನ್ನು ರಕ್ಷಿಸುವುದು ಪ್ರಮುಖವಾದ ಕೆಲಸ. ಮಳೆಯ ನೀರಿನಿಂದ ಹಾಗೂ ಬಿರುಗಾಳಿಗಳಿಂದ ಹೊಲದ ಮೇಲ್ಮಣ್ಣಿನ ಕಣ ಕಣಗಳು ಕೊಚ್ಚಿಹೊಗದಂತೆ ಹಾಗೂ ಹಾರಿ ಹೊಗದಂತೆ ತಡೆಯುವುದು ಮಣ್ಣಿನ ರಕ್ಷಣೆ ಎನಿಸುತ್ತದೆ. ನಾವು ಮಣ್ಣನ್ನು ರಕ್ಷಿಸಿದರೆ ಮಣ್ಣು ಬೆಳೆಗಳನ್ನು ರಕ್ಷಿಸುತ್ತದೆ. ಮಣ್ಣು ರೈತರಿಗೆ ಕಣ್ಣು ಇದ್ದಹಾಗೆ, ಹೇಗೆ ಕಣ್ಣನ್ನು ರಕ್ಷಣೆ ಮಾಡುತ್ತೇವೆಯೂ ಅದೇ ರೀತಿ ಮಣ್ಣಿನ ರಕ್ಷಣೆಯ ಅವಶ್ಯಕತೆ ಇದೆ. ಆಕಾಶದಿಂದ ಬೀಳುವ ಒಂದೊಂದು ಮಳೆಯ ಹನಿಯು ಹೊಲದಲ್ಲಿ ಇಂಗಬೇಕು. ಅಂದಾಗಲೇ 'ಸುಜಾಲಾಂ ಸುಫಲಾಂ ಸಸ್ಯಶ್ಯಾಮಲಾಂ' ಆಗುತ್ತದೆ. ಈ ಮಣ್ಣನ್ನು ರಕ್ಷಿಸಲು ರೈತರು ಅನೇಕ ವಿಧಾನಗಳನ್ನು ಅನುಸರಿಸಿಕೊಂಡು ಬಂದಿದ್ದಾರೆ. ಮಣ್ಣಿನ ಒಡ್ಡುಗಳು (ಬದುವು), ಹಾಳೆಯ ಹುಲ್ಲು ಹುಚ್ಚಿ ಹಾಳೆಗಳ ನಿರ್ಮಾಣ, ಕಲ್ಲಿನ ಬಚ್ಚಲು ಮತ್ತು ಇಳು ಜಾರಿಗೆ ಅಡ್ಡವಾಗಿ ಗಳೆಹೊಡೆಯುವುದು ಮತ್ತು ಬೆಳೆಮಾಡುವುದು ಹಾಗೂ ಒಡ್ಡುಗಳ ಮೇಲೆ ಗಿಡ ಮರಗಳನ್ನು ಬೆಳೆಸುವುದು.

ಪ್ರತಿ ವರ್ಷ ನಟ್ಟುಕಡಿಸುವುದು, ಹೊಸ ಒಡ್ಡುಗಳ ನಿರ್ಮಾಣ, ಹಳೆಯ ಬದುಗಳ ದುರಸ್ತಿ, ತಗ್ಗು ತೆವರುಗಳ ತಿದ್ದುಪಡಿಕೆ, ಗಿಡ ಕಂಟಿಗಳ ತೆಗೆಯುವುದು ಮುಂತಾದ ಕೃಷಿ ಚಟುವಟಿಕೆಗಳನ್ನು

[illegible]

ಮಾಡುವುದು ಹೊಲಗಳ ಆರೈಕೆಯಾಗುತ್ತದೆ. ಇದರಿಂದ ಅಗಾದವಾದ ಪ್ರಯೋಜನ ದೊರೆಯುತ್ತದೆ. 'ಅಂಗೈಯಂತ ಹೊಲಮಾಡಿದರೆ ಮುಂಗೈಎಲ್ಲ ತುಪ್ಪ'. ಎಂದು ಹಿರಿಯರು ನಂಬಿದ್ದರು. ಯಾವುದೇ ಹೊಲಗದ್ದೆಗಳಿಗೂ ಸುತ್ತಲೂ ಒಂದು ಮೊಳ ಅಥವಾ ಎರಡು ಮೊಳ ಎತ್ತರವಾಗಿ ಹಾಕಿರುವ ಮಣ್ಣಿನ ಇಲ್ಲವೆ ಕಲ್ಲಿನ ಒಡ್ಡುಗಳು ಹೊಲದ ಬದುಗಳಾಗಿವೆ. ಬದು ಎಂದರೆ 'ಹೊಲ, ಗದ್ದೆಗಳ ಅಂಚಿನಲ್ಲಿ ರಚಿಸಿದ ಮಣ್ಣಿನ ಒಡ್ಡು.' ಎಂದು ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ ಅರ್ಥೈಸಲಾಗಿದೆ. 'ಒಡ್ಡು ಇಲ್ಲದ ಹೊಲ ಗೊಡ್ಡೆಮ್ಮೆ ಸಾಕಿದಂತೆ' ಎಂದು ಹಿರಿಯರ ಮಾತುಗಳನ್ನು ಗಮನಿಸಬಹುದಾಗಿದೆ. ಹೊಲಗಳ ಬಾಂದು, ಕಲ್ಲು ಮತ್ತು ಮೇರೆಯನ್ನು ಗುರುತಿಸಿ ಕೊಳ್ಳಲು ಬದುಗಳು ಸಹಕಾರಿಯಾಗುತ್ತವೆ. ಸಾರಯುಕ್ತ ಮಣ್ಣು, ಹಾಕಿದ ಗೊಬ್ಬರ, ಉಳುಮೆ ಮಾಡಿದ ಮಣ್ಣು ಕೊಚ್ಚಿ ಹೊರಹೋಗದಂತೆ ಈ ಬದುಗಳು ತಡೆಯುತ್ತವೆ. 'ಸಾಂಪ್ರದಾಯಿಕ ಒಕ್ಕಲುತನ' ಕೃತಿಯ ಲೇಖಕರಾದ ಈರಯ್ಯ ಕಿಲ್ಲೇದಾರರ ಅನುಭವದ ಅಭಿಪ್ರಾಯಗಳನ್ನು ಆದರಿಸಿ, ಈ ಕೆಳಗಿನ ಬದು ನಿರ್ಮಾಣ ಮಾಡುವ ವಿಧಾನವನ್ನು ಪೂರಕವಾಗಿ ಇಲ್ಲಿ ಬಳಸಿಕೊಳ್ಳಲಾಗಿದೆ.

೧. **ಮಣ್ಣಿನ ಒಡ್ಡುಗಳು :** ಹೊಲದ ನಾಲ್ಕುಕಡೆ ಬದುಗಳಿದ್ದರೆ, ಅಂಗೈಯಂತೆ ಹೊಲವಾಗುತ್ತದೆ. ನಡುವೆ ಮಣ್ಣು ನೀರಿನ ಸಂಗ್ರಹವಾಗುತ್ತದೆ. ಮಲೆನಾಡಿನ ಭತ್ತದ ಗದ್ದೆಗಳು ಇದಕ್ಕೆ ಉತ್ತಮ ನಿದರ್ಶನವಾಗಿದೆ. ಅರೆ ಮಲೆನಾಡು ಮತ್ತು ಬೆಳವಲನಾಡಿನಲ್ಲಿ ಹೊಲಗಳು ಇಳಿಜಾರಾಗಿರುತ್ತವೆ. ಮತ್ತು ಎರೆ ಜಮೀನು ಇರುವುದರಿಂದ ಮಣ್ಣಿನ ಸವಕಳಿ ಹೆಚ್ಚಾಗಿರುತ್ತದೆ. ಇಂತಹ ಪ್ರದೇಶದಲ್ಲಿ ಮಣ್ಣಿನ ಒಡ್ಡುಗಳನ್ನು ಹಾಕುವುದು ಅವಶ್ಯಕವಾದದ್ದು. ಹತ್ತರಿಂದ ಹದಿನೈದು ಅಡಿ ಅಗಲ ಹಾಗೂ ಎಳರಿಂದ ಹತ್ತು ಅಡಿ ಎತ್ತರದ ಮಣ್ಣಿನ ಒಡ್ಡುಗಳನ್ನು ಹಾಕಲಾಗುತ್ತದೆ.

೨. **ಮಣ್ಣಿನ ಹಾಳೆಗಳ ನಿರ್ಮಾಣ :** ಮಣ್ಣಿನ ಒಡ್ಡು ಹೊಲದ ಮೇಲ್ಮಣ್ಣು ಕೊಚ್ಚಿಕೊಂಡು ಹೋಗದಂತೆ ಹಾಗೂ ಹೋದಲ್ಲಿ ಬಿದ್ದ ಮಳೆಯ ನೀರು ಹೊಲದಲ್ಲಿಯೇ ಇಂಗುವಂತೆ ಮಾಡಿದ ವ್ಯವಸ್ಥೆಯಾಗಿದ್ದು, ಹುಲ್ಲಿನ ಹಾಳೆಗಳು ಮಣ್ಣನ್ನು ಮಾತ್ರ ರಕ್ಷಿಸಿ ನೀರನ್ನು ಸೋಸಿ ಕೆಳಗೆ ಬಿಡುತ್ತವೆ. ಒಡ್ಡಿನ ಒಳಗಡೆ ಎರಡು ನೂರರಿಂದ ಮೂರು ನೂರು ಅಡಿಗೊಂದರಂತೆ ಇಳುಕಲ್ಲಿಗೆ ಅಡ್ಡವಾಗಿ ಈ ಹಾಳೆಗಳನ್ನು ಮಾಡುತ್ತಾರೆ.

೩. **ಕಲ್ಲಿನ ಬಚ್ಚಲುಗಳು :** ಹೊಲದ ವಿಸ್ತೀರ್ಣ ದೊಡ್ಡದ್ದಾಗಿದ್ದರೆ ಇಡೀ ಹೊಲದ ನೀರನ್ನು ಸಂಗ್ರಹಿಸಿಡುವುದು ಕಷ್ಟವಾಗುತ್ತದೆ. ಅಲ್ಲದೇ ಹಿಂದಿನ ಹೊಲಗಳ ಒಡ್ಡುಗಳು ಹೊಡೆದು ದೊಡ್ಡಪ್ರಮಾಣದ ನೀರು ಬಂದಾಗಲೂ ತೊಂದರೆಯಾಗುತ್ತದೆ. ಆದ್ದರಿಂದ ಇದನ್ನು ತಪ್ಪಿಸಲು ಹೊಲದ ಕೆಳಗಡೆ ಒಂದು ಮೂಲೆಯಲ್ಲಿ ಕಲ್ಲಿನ ಬಚ್ಚಲನ್ನು ನಿರ್ಮಾಣ ಮಾಡುತ್ತಾರೆ. ಈ ಬಚ್ಚಲು ಮೂವತ್ತು ಅಡಿ ಉದ್ದ ಹಾಗೂ ಎಂಟರಿಂದ ಹತ್ತು ಅಡಿ ಎತ್ತರದಲ್ಲಿ ದೊಡ್ಡ ದೊಡ್ಡ ಕಲ್ಲುಗಳಿಂದ ಕಟ್ಟುತ್ತಾರೆ. ಬಚ್ಚಲಿನ ಒಂದುಗಡೆ ಲಾವಂಚದಂತಹ ದಟ್ಟ ಹಾಗೂ ಆಳವಾಗಿ ಬೇರು ಬಿಡುವ 'ಮದಿ' ಹುಲ್ಲನ್ನು ಹಚ್ಚುತ್ತಾರೆ.

೪. **ಬದುಗಳ ಮೇಲೆ ಗಿಡ–ಮರ ಬೆಳೆಸುವುದು :** ಹೊಲಗಳ ಬದುಗಳ ಮೇಲೆ ಜಾಲಿ, ಬೇವು, ಬನ್ನಿ ಮತ್ತು ಕೆಲವು ಗಿಡಗಳನ್ನು ಬೆಳೆಸುವುದರಿಂದ ಗಳೆಯದ ಸಾಮಾನುಗಳ ತಯಾರಿಕೆಗೂ ಮತ್ತು ಹೊಲಗಳ ಬದುಗಳನ್ನು ಗಟ್ಟಿ ಗೊಳಿಸಲು ಈ ಗಿಡ–ಮರಗಳು ಸಹಕಾರಿಯಾಗುತ್ತವೆ.

ಕನ್ನಡ ಸಾಹಿತ್ಯ, ಶಾಸನ, ಜನಪದರಲ್ಲಿ ಬದುಕಟ್ಟುವ, ಹೊಲಗಳ ಹಾರೈಕೆ ಮಾಡಿಕೊಳ್ಳುವ ಮಾಹಿತಿಯನ್ನು ಸಂಗ್ರಹಿಸಿ ಈ ಭಾಗದಲ್ಲಿ ಚರ್ಚಿಸಲಾಗಿದೆ.

ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಒಡ್ಡು ಹಾಕುವ ವಿಧಾನ ಕುರಿತು ವಿಸ್ತಾರವಾಗಿ ತಿಳಿಸಲಾಗಿದೆ. ಸಮತಟ್ಟಾದ ಭೂಮಿಗೆ ಸುತ್ತಲೂ ಒಡ್ಡು ಹಾಕುವುದು, ಒಂದು ಮೈ ಇಳಿತರ ಮತ್ತೊಂದು ಮೈ ಎತ್ತರವಾಗಿದ್ದರೆ ಯಾವರೀತಿ ಒಡ್ಡು ಹಾಕಬೇಕು. ಎಡಬಲದ ಕಡೆ ಒಡ್ಡು ಹಾಕುವುದು, ಕೆಳಗಿನ ತಗ್ಗಿಗೆ ಒಡ್ಡು ಬಲಿಸುವುದು, ಅಗತ್ಯವಿದ್ದರೆ ಕೋಡಿ ಬಿಡುವುದು ಮುಂತಾದ ಯುಕ್ತಿಗಳನ್ನು ಈ ಗ್ರಂಥದಲ್ಲಿ ತಿಳಿಸಲಾಗಿದೆ. ಅಲ್ಲದೇ ಒಡ್ಡಿಗೆ ಹಾಕುವ ಮಣ್ಣು ಒಡ್ಡಿನ ಬಳಿಯ ಮಣ್ಣೆ ಆಗಿರದೆ ದೂರದ ತೆವರು ಮಣ್ಣು ಆಗಿರಬೇಕು. ಎರೆಯ ಮಣ್ಣಿನಿಂದ ಒಡ್ಡು ಹಾಕಬಾರದು. ಗರಸು ಮಣ್ಣು, ಕಲ್ಲು ಮೊರಡಿ ಮತ್ತು ಕಲ್ಲುಗಳು ಹೇರಳವಾಗಿ ದೊರೆತರೆ, ಸುತ್ತಲೂ ಕಲ್ಲು ಗೋಡೆಯ ಕಟ್ಟಿ ಕಲ್ಲು ಒಡ್ಡು ಹಾಕುವುದು ಉತ್ತಮ; ಎಂಬುವುದು ಶಾಸ್ತ್ರಕಾರರ ಅಭಿಪ್ರಾಯವಾಗಿದೆ. ಒಡ್ಡು ಹಾಕುವ ವಿಧಾನ ಕುರಿತು ಹೀಗೆ ಹೇಳುತ್ತಾರೆ. "...............ಒಡ್ಡಿನ ಎದೆಯಲ್ಲಿ ಅದರ ಸಮೀಪದಲ್ಲಿಯೇ ಮಣ್ಣನ್ನು ಕಡಿದು ಒಡ್ಡಿಗೆ ಹಾಕದೆ ಹಿಂದೆ ಹೇಳಿದಂತೆ ಆ ಒಡ್ಡಿಗೆ ದೂರವಾದ ತೆವರು ತನ್ನ ಹೊಲದಲ್ಲಿ ಯಾವಕಡೆ ಇರುವದೋ, ಆ ತೆವರನ್ನು ದೊಡ್ಡ ನೇಗಿಲು ಕಟ್ಟಿ ಚೆನ್ನಾಗಿ ಹೊಡೆದು ಮಣ್ಣು ಮಾಡಿ, ಚಕ್ಕಡಿ ಬಂಡಿಗಳ ಮೇಲಿಂದ ತಂದು, ಆ ಮಣ್ಣನ್ನು ಒಡ್ಡಿಗೆ ಹಾಕಿ ಒಡ್ಡು ಎತ್ತರವಾದ ಮೇಲೆ, ಎದೆ ಒಡ್ಡು ಹಾಕಿ ಎದೆಯನ್ನು ತುಂಬಬೇಕು. ಎದೆ ಒಡ್ಡು ತುಂಬಬೇಕಾದರೆ ಹೊಲದಲ್ಲಿಯ ತೆವರು ದೂರವಾಗಿದ್ದರೆ ಚಕ್ಕಡಿಯಿಂದ ತಂದು ತುಂಬಬೇಕು ಅಥವಾ ತೆವರು ಸಮೀಪದಲ್ಲಿ ಇದ್ದರೆ ಕುಂಟಿಯ ಒಳಬಾಜೂದಲ್ಲಿ ಹಲಗಿಯನ್ನಾಗಲಿ ಕಟ್ಟಿ ಅಥವಾ ತಾಳಿಗೆ ಹಗ್ಗವನ್ನಾದರೂ ಸುತ್ತಿ, ಇಲ್ಲವೆ ತಾಳಿಗೆ ತಟ್ಟನ್ನು ಹೊಲಿದು ಮೇಲೆ ಹಗ್ಗವನ್ನು ಸುತ್ತಿ ಕುಂಟಿಯನ್ನು ಹರಗಿದಂತೆ ಮಣ್ಣನ್ನು ಎಳಸಿ ತಂದು ಎದೆಯನ್ನು ತುಂಬಿಕೊಳ್ಳಬೇಕು".[೧೬] ಎನ್ನಲಾಗಿದೆ. ಈ ರೀತಿ ಮಾಡುವುದರಿಂದ ನೀರು ಹರಿದು ಬಂದು ಬದುವಿನ ಎದೆಗೆ ತಾಕಿ ನಂತರ ಹೊಲದ ತುಂಬ ಹರವಿ, ಮೇಲ್ಲನೆ ಹರಿದು ಹೋಗುವುದರಿಂದ ಹೊಲತಂಪಾಗುತ್ತದೆ. ವಂಡು ಬಿಟ್ಟು ತೇವಾಂಶ ಹೆಚ್ಚಾಗಲು ಸಹಕಾರಿಯಾಗುತ್ತದೆ.

ಹೊಲಗಳು ತಗ್ಗು, ತೆವರು, ಹಳ್ಳ, ಕೊರಿ, ಚೀರಲಗಳು ಇದ್ದರೆ ಅಂತಹ ಹೊಲಗಳಲ್ಲಿ ಪೂರ್ಣ ಪ್ರಮಾಣದ ಬೆಳೆಬರುವುದಿಲ್ಲ. ಇಂತಹ ಹೊಲಗಳನ್ನು ಸಮತಟ್ಟು ಮಾಡಿಕೊಳ್ಳುವ ಸುಲಭಯುಕ್ತಿಯನ್ನು ಶ್ರೀಘನಮಠ ಶಿವಯೋಗಿಗಳು ಈ ರೀತಿ ತಿಳಿಸುತ್ತಾರೆ. "ಹರಗುವ ಕುಂಟಿಯ ತಾಳಿಗೆ ಜಾಡರ ಲಾಳಿದಟ್ಟೆಯ ಹಾಗೇ ದಂಟುಗಳನ್ನು ಸುಲಿದು, ಹುರಿಯಿಂದ ಹೆಣೆದು ತಟ್ಟಿಯ ಹಾಗೆ ಮಾಡಿ ಇಲ್ಲವೇ ಕಟ್ಟಿಗೆಯ ಹಲಗಿಯನ್ನಾದರೂ ಸಣ್ಣ ಸಣ್ಣ ಕಟ್ಟಿಗೆಗಳನ್ನಾದರೂ ಕಟ್ಟಿ ಅಥವಾ ತಾಳಿಗೆ ಹಗ್ಗವನ್ನಾದರೂ ಸುತ್ತಿ ಇಲ್ಲವೇ ತಾಳಿನ ಪ್ರಮಾಣಕ್ಕು ತಟ್ಟನ್ನಾದರೂ ಬಿಗಿಯಾಗಿ ಹೊಲಿದು, ಮೇಲೆ ಹಗ್ಗವನ್ನು ಸುತ್ತಿ ಕುಂಟೆಯನ್ನು ತಯಾರುಮಾಡಿ ಇಟ್ಟು, ಮೊದಲೂ ದೊಡ್ಡ ತೆವರಾದರೆ ದೊಡ್ಡ ನೇಗಿಲಿಯಿಂದ ಸಣ್ಣ ತೆವರಾದರೆ, ಸಣ್ಣ ನೇಗಿಲಿಯಿಂದ ಹೊಡೆದು ಮಣ್ಣನ್ನು ಮೆತ್ತಗೆ ಮಾಡಿ ಮೇಲೆ ಹೇಳಿದ ಪ್ರಕಾರ ಕುಂಟೆಯ ಕುಡದೆದೆಯಲ್ಲಿ ಅಂದರೆ ಆ ಕುಡದ ಒಳಬಾಜೂವಿನಲ್ಲಿ ಹಿಂದೆ ಹೇಳಿದ ಹಾಗೆ ತಟ್ಟು ಮೊದಲಾದದ್ದರಲ್ಲಿ ಯಾವುದನ್ನಾದರೂ ಕಟ್ಟಿ, ಎತ್ತುಗಳನ್ನು ಹೂಡಿ ಹೊಲವನ್ನು ಹರಗಿದ ಹಾಗೆ ದೂರಿನ ಮಣ್ಣನ್ನು ಅಲ್ಲಲ್ಲಿಗೆ ಒತ್ತಿಕೊಂಡು ಬಂದು, ಸ್ವಲ್ಪ ಸ್ವಲ್ಪ ಮೂಂದಕ್ಕೆ ಸಾಗಿಸಿಕೊಳ್ಳುತ್ತ ತಗ್ಗಿನ ಕಡೆಗೆ ಬರತಿಯನ್ನು ಮಾಡಿ ಸಮತಳ ಮಾಡಬೇಕು. ಕುಂಟಿಯನ್ನು ತೆವರಿನಿಂದ ತಗ್ಗಿನವರೆಗು ಒಮ್ಮೆಗೆ ಒಯ್ಯಲಾಗದು. ಹಾಗೆ ಒಯ್ದರೆ ಮಣ್ಣು ಸೋರಿ ಹೊಗುತ್ತದೆ. ಎತ್ತುಗಳಿಗೆ ಬಹಳ ಭಾರವಾಗುತ್ತದೆ.

ಅದು ಕಾರಣ, ಸ್ವಲ್ಪ ಸ್ವಲ್ಪು ಸಾಗಿಸುತ್ತಾ ಸುಲಭದಿಂದ ತೆವರು ಮಣ್ಣು ತೆಗ್ಗಿಗೆ ಬರತಿಯಾಗಿ ಹೊಲವು ಸಮತಳವಾಗುವುದು".[೧೭]

ಮುಂದುವರೆದು ದೊಡ್ಡಹಳ್ಳಗಳಿದ್ದರೆ ಅವುಗಳನ್ನು ತುಂಬಿಸಿಕೊಳ್ಳುವ ಯುಕ್ತಿಯನ್ನು ಕುರಿತು ಹೇಳುತ್ತಾರೆ. ಗರಸು, ಗಟ್ಟಿ ಭೂಮಿಗಳಿಗೆ ಒಂದರಿಂದ ಒಂದೂವರೆ ಗಜದ ಕಟ್ಟಿಗೆ ಗೂಟ, ಎರೆಯ ಭೂಮಿಯಾದರೆ ಒಂದಾಳು ಉದ್ದದ ಕಟ್ಟಿಗೆ ಗೂಟವನ್ನು ತಗ್ಗು ತೆಗೆದು ನಿಲ್ಲಿಸಬೇಕು. ಜಾಲಿ, ಬಸರಿಯ ಕಟ್ಟಿಗೆಗಳನ್ನು ಹುಗಿಲು ತೆಗೆದು ಗೇಣು ಒಂದೂವರೆ ಗೇಣಿಗೊಂದು ಗೂಟಗಳನ್ನಾಗಲಿ, ಮೊಳೆಗಳನ್ನಾಗಲಿ ಕವಲಿನ ಹಾಗೆ ಯಾಸಿಯ ಮೇಲೆ ಹೊಡೆದು ಹಳ್ಳದಲ್ಲಿ ನಡಿಸಬೇಕು. ಗಟ್ಟಿಯಾಗಿ ನೆಟ್ಟು ಅಡ್ಡಗಟ್ಟಿಗೆಯನ್ನು ಹಾಕಿ ಬಿಗಿಮಾಡಬೇಕು. "..............ಆಕಂಬಗಳಿಗೆ ಹಿಂದಿನ ಮೈಯಿಗೆ ಮುಂದಿನ ಮೈಕಡೆಗೆ ಜೀಟುಗೂಲು ಕೊಟ್ಟಹಾಗೆ ಕವಿಗಂಭಗಳನ್ನಾಗಲಿ ಅಥವಾ ಕವಿಗಳಿಲ್ಲದ ಕಟ್ಟಿಗೆಗಳಿಗಾದರೂ ಹುಗುಲು ಹೊಡೆದು, ಗೂಟಗಳನ್ನು ಹಾಕಿ ಬಿಗಿಯಾಗುವ ಹಾಗೆ ಮಾಡಿ ಜೀಟುಕೊಟ್ಟು ನಿಲ್ಲಿಸಿ ಗಟ್ಟಿಮಾಡಿ ಬಿಡಬೇಕು. ಹೀಗೆ ಮಾಡುವುದರಿಂದ ಎಷ್ಟು ದೊಡ್ಡಹಳ್ಳವಾದರೂ ನೀರು ಬಸಿದು ಹೋಗಿ ವಂಡು ಬಿಟ್ಟು ಹಳ್ಳ ಹೂಳುವದು..................".[೧೮] ಎನ್ನಲಾಗಿದೆ.

ಹೊಲಗಳ ಮಧ್ಯದಲ್ಲಿ ಗಿಡಗಳಾಗಲಿ, ಕಲ್ಲುಗಳಾಗಲಿ, ಇರದಂತೆ ತೆಗೆಯಬೇಕು. ಮರಗಳ ನೆರಳಿಗೆ ಬೆಳೆಯಾಗುವುದಿಲ್ಲ. ಮಣ್ಣಿನ ಬದುಗಳಲ್ಲಿ ಬೇವಿನ ಬೀಜಗಳನ್ನು ಹಾಕಿ ಸುತ್ತಲೂ ಬೇವಿನ ಗಿಡಗಳನ್ನು ಬೆಳಸಿಕೊಳ್ಳಬಹುದು. ಬೇಲಿಯೂ ಆಗುತ್ತದೆ ಮತ್ತು ಕಟ್ಟಿಗೆ, ಕೃಷಿ ಉಪಕರಣಗಳ ತಯಾರಿಕೆಗೆ ಮರ ದೊರೆಯುತ್ತದೆ. ಮುಂದುವರೆದು ಹೊಲದ ಮಧ್ಯದಲ್ಲಿ ಕಲ್ಲುಬಂಡೆ ಕಲ್ಲುಹುರಿಗಳನ್ನು ತೆಗೆಸುವ ವಿಧಾನವನ್ನು ಕುರಿತು ಈ ರೀತಿ ಹೇಳಲಾಗಿದೆ. ".............ಆ ಕಲ್ಲುಗಳನ್ನು ದೊಡ್ಡಸುತ್ತಿಗೆಯಿಂದ, ಚಾನಗಳಿಂದ ಅಥವಾ ಸುರಂಗದಿಂದ ಹೊಡೆದು; ಹೊಲದ ಇಳಿಜಾರಿಯ ಕಡೆಗೆ ಬದವು ಹಿಡಿದು ಗೂಡೆಯ ಹಾಗೆ ಚೆನ್ನಾಗಿ ಕಟ್ಟಬೇಕು. ಮತ್ತು ಆ ಕಲ್ಲುಗಳನ್ನು ವಡ್ಡರ ಬಂಡಿಯ ಮೇಲಿಂದಾಗಲಿ ತಂದು ಬದುವಿಗೆ ಹಾಕಿಸಬೇಕು. ಮಣ್ಣಿನ ಮರೆಯಲ್ಲಿ ನೇಗಿಲಿಗೆ ತಟ್ಟುವಂತ ಕಲ್ಲುಗಳಿದ್ದರೆ ಅವುಗಳನ್ನು ಅಗೆದು ಸುತ್ತಲೂ ಬಯಲು ಮಾಡಿ ಚಾನಗಳಿಂದಾಗಲಿ, ಚಮ್ಮಟಿಗೆಯಂತ ದೊಡ್ಡಸುತ್ತಿಗೆಯಿಂದಾಗಲಿ ಹೊಡೆದು, ತಂದು ಹೊಲದ ಮೇರೆಗೆ ಹಾಕಬೇಕು".[೧೯] ಎನ್ನುತ್ತಾರೆ. ಈ ರೀತಿಯಲ್ಲಿ ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಮಣ್ಣಿನ ಬದು, ತಗ್ಗು ತೆವರು ಸಮತಟ್ಟು ಮಾಡುವುದು, ದೊಡ್ಡಹಳ್ಳ ತುಂಬಿಸಿ ಬದುಗಳನ್ನು ನಿರ್ಮಾಣ ಮಾಡುವುದು ಮತ್ತು ಕಲ್ಲಿನ ಬದುಗಳ ಕಟ್ಟಿ ನಿರ್ಮಿಸುವ ಯುಕ್ತಿಗಳನ್ನು ರೈತಾಪಿ ವರ್ಗಕ್ಕೆ ತಿಳಿಸಿಕೊಡಲಾಗಿದೆ.

ಒಕ್ಕಲಿಗ ಮುದ್ದಣನವರ ವಚನವೊಂದರಲ್ಲಿ ಭೂಮಿಯ ಆರೈಕೆ ಮಾಡುವ ಬಗೆಯನ್ನು ಕುರಿತು ಹೀಗೆ ಹೇಳಲಾಗಿದೆ.

"ನೀಕೊಟ್ಟ ಭೂಮಿಗೆ ಮುಂದೆ ಕರಲು, ಹಿಂದೆ ಇಗ್ಗರಲು
ಅಲ್ಲಿಂದ ಆಚೆ ಮಧ್ಯಭೂಮಿ
ಮೂರು ನೆಲದ ಭೂಮಿಯ ಆರೈದು ಬೆಳೆದೆಹೆ ನೆಂದೆಡೆ
ಇದಾರ ವಶವು ಅಲ್ಲ................".[೨೦]

ಭೂಮಿ ದೇವರು ಕೊಟ್ಟ ದೇಣಿಗೆ ಎಂಬ ಭಾವನೆ ಇದ್ದು, ಕರಲು, ಇಗ್ಗರಲು, ಯಾವುದೇ ಕಠಿಣದ ನೆಲವನ್ನು ತಗ್ಗು, ತೆವರು, ಕಲ್ಲು ಕಂಟಿಗಳನ್ನು ತಿದ್ದಿಕೊಂಡು, ಬದು ಕಟ್ಟಿ ಆರೈಕೆ ಮಾಡಿದರೆ

[illegible]

ಬೆಳೆಯನ್ನು ಬೆಳೆಯಲು ಸಾಧ್ಯ ಎನ್ನುತ್ತಾರೆ. ಸಿದ್ಧರಾಮೇಶ್ವರನ ವಚನವೊಂದರಲ್ಲಿ ಹೀಗೆ ಹೇಳಲಾಗಿದೆ. "ಹೊಲ ಮೇರೆಯಿಂ ಮೇರೆ ಹೊಲಬುದಪ್ಪಿದ ನಾದಕಳೆಗಳ..................".(ಸಿದ್ದ,ವ.ಸ-ವ-೮೪೭,ಪು-೨೪೦) ಹೊಲಗಳಿಗೆ ಇರುವ ಮೇರೆ ಅಥವಾ ಬದುಗಳನ್ನು ರೈತರು ಮೀರಬಾರದು ಎಂಬ ಎಚ್ಚರಿಕೆಯ ಮಾತು ಕಂಡು ಬರುತ್ತದೆ. ಹೊಲಗಳ ಬದುಗಳು ಭದ್ರವಾಗಿದ್ದರೆ ಅಕ್ಕ ಪಕ್ಕದ ರೈತರ ಮಧ್ಯೆ ಜಗಳ ಉದ್ಭವಿಸಲಾರದು. ಆದರೆ ಇಂದು ಇರುವ ಬದುಗಳನ್ನೂ ಕಿತ್ತು ಸಣ್ಣದು ಮಾಡಿ ಅಥವಾ ಇಲ್ಲವಾಗಿಸಿ ಹೊಲದ ಸಾರಯುಕ್ತ ಮಣ್ಣನ್ನು ಕಳೆದುಕೊಂಡು, ರೈತರು ಹೊಲಗಳ ಆರೈಕೆಯ ವಿಷಯದಲ್ಲಿ ತಪ್ಪು ಹೆಜ್ಜೆ ಇಡುತ್ತಿರುವುದನ್ನು ಗಮನಿಸಬಹುದು.

ಸೋಮನಾಥ ಚರಿತ್ರೆಯಲ್ಲಿ ಹೊಲಗದ್ದೆಗಳನ್ನು ಅಳೆದು ಮೇರೆಗಳನ್ನು ಗುರುತಿಸಿ ಕಲ್ಲುಬಾಂದುಗಳನ್ನು ಹಾಕಿಸುವ ಅಂಶ ಕಾಣಸಿಗುತ್ತದೆ. ಅಂದರೆ ಹೊಲಗಳ ಆರೈಕೆಯಲ್ಲಿ ರೈತರು ಮತ್ತು ಆಡಳಿತ ವ್ಯವಸ್ಥೆ ಸರಿಯಾದ ರೀತಿಯ ಕ್ರಮಗಳನ್ನು ಕಂಡುಕೊಳ್ಳುತ್ತಿದ್ದರು ಎಂಬ ಅಂಶ ತಿಳಿಯುತ್ತದೆ. "............ದಿನರಾತ್ರಿಗಳನಳೆದು ಹೊಲಮೇರೆಯೊಳು ನಡಲೆಂದು.............". ಎನ್ನಲಾಗಿದೆ.

ಕನ್ನಡ ಶಾಸನಗಳಲ್ಲಿ ಬದು, ಮೇರೆಯ ಉಲ್ಲೇಖಗಳು ಕಂಡು ಬರುತ್ತವೆ. ಆದರೆ ನಿಖರವಾಗಿ ಬದುನಿರ್ಮಾಣ ಮಾಡುವ ಯಾವುದೇ ವಿಧಾನಗಳನ್ನು ಕುರಿತು ಮಾಹಿತಿ ದೊರೆಯುವದಿಲ್ಲ. ಭೂಮಿಯ ವ್ಯಾಜ್ಯ ತಡೆಗಟ್ಟಲು, ದೇವರಿಗೆ ದತ್ತಿದಾನ ನೀಡಿದ ಭೂಮಿಗೆ ಮೇರೆಗಳನ್ನು ತಿಳಿಸುವಾಗ ನಾಲ್ಕು ದಿಕ್ಕಿಗೆ ಕಲ್ಲುಗಳನ್ನು ಹಾಕಿಸುತ್ತಿದ್ದರು. ಕುಕ್ಕನೂರು ಶಾಸನವೊಂದರಲ್ಲಿ "ನಟ್ಟಕಲ್ಲು, ಲಿಂಗಮುದ್ರೆ ಕಲ್ಲು, ಮುಗ್ಗಲ್ಲು, ಸಾಲುಗಲ್ಲು, ಒಳತಗಲ್ಲು ಮುಂತಾದ ಪ್ರಭೇದಗಳನ್ನು ಕುರಿತು ಹಾಕಿದ ವಿವರವನ್ನು ಹೇಳಲಾಗಿದೆ. (ಕುಕ್ಕ-೧೩೭೯)".[೨೨] ಗುಂಜಹಳ್ಳಿಶಾಸನದಲ್ಲಿ ಗಡಿಕಟ್ಟಿದವರಿಗೆ ಎರೆಯ ಹೊಲನೀಡಿ ಚಕ್ಕು ಬಂದಿಯನ್ನು ಈ ರೀತಿ ಹೇಳಲಾಗಿದೆ. "....................ಪುರ್ವಕ್ಕೆ ಕುಜಂಣಪನ ಹೊಲ ಪ॥ ಬಕಿರೆಡಿ ಹೊಲಾ ದ ॥ ದಂಡಕದ ಅವರ ಹೊಲ । ವು। ಕೊಂಡಿಭಟರ ಮನ್ಯವು ಯಿಯಪಂದೆ ಮೇರೆ................". (ಕನ್ನಡ.ವಿ.ವಿ.ಶಾ.ಸಂ. ಪು-೯) ಎಂದು ಹೇಳುವಲ್ಲಿ ಚಕ್ಕುಬಂದಿ ಬದುಗಳು ಹೊಲಕ್ಕೆ ಎಷ್ಟು ಮುಖ್ಯ ಹಾಗೂ ಮಹತ್ವದವು ಎಂಬ ಅಂಶ ತಿಳಿದುಬರುತ್ತದೆ.

ಹೊಲಗದ್ದೆಗಳಿಗೆ ಬದು ಕಟ್ಟುವುದರಿಂದ ಅನೇಕ ಬಗೆಯ ಉಪಯೋಗಗಳುಂಟು. ಭೂಮಿಯ ಫಲವತ್ತತೆ ತಡೆಯುವುದು, ಗೊಬ್ಬರ, ಮಣ್ಣು ಕೊಚ್ಚಿಹೊಗದಂತೆ ತಡೆಯಲು ಹಾಗೂ ಭೂಮಿಯಲ್ಲಿ ತೇವಾಂಶ ನಿಲ್ಲಲು, ಅಲ್ಲದೇ ಬದುಗಳಿಗೆ ನೀರು ಬಂದು ಅಪ್ಪಳಿಸಿ ನೀರು ಹಿಂದೆ ಸರಿದು ಹೊಲದ ತುಂಬ ಒಂದೆರೆಡು ಇಂಚು ನಿಂತು ಭೂಮಿಯಲ್ಲಿ ಇಮರಿಕೊಳ್ಳುವುದರಿಂದ ತುಂಬ ಉಪಕಾರಿಯಾಗುತ್ತದೆ. ಬದುಗಳಲ್ಲಿ ಬೆಳೆಯುವ ಹಸಿರು ಹುಲ್ಲು ದನಕರುಗಳಿಗೆ ತಿನ್ನಲು ಉತ್ತಮ ಆಹಾರವಾಗುತ್ತದೆ. ಅಲ್ಲದೇ ಬದುಗಳ ಮೇಲೆ ಬೆಳೆಸುವ ಮರಗಳಿಂದ ಅನೇಕ ಉಪಯೋಗಗಳು ಆಗುತ್ತವೆ.

೩. ಬಿತ್ತನೆ

ಕೃಷಿ ಕ್ರಿಯೆಗಳಲ್ಲಿ ತುಂಬಾ ಮಹತ್ವದ್ದು ಬಿತ್ತನೆ. "ಬಿತ್ತನೆ ಎಂದರೆ ಬೀಜವನ್ನು ಬಿತ್ತುವಿಕೆ; ಬೀಜಾವಾಪ"ಎಂದು ಸಂಕ್ಷಿಪ್ತ ಕನ್ನಡ ನಿಘಂಟುವಿನಲ್ಲಿ ಅರ್ಥೈಸಲಾಗಿದೆ. ಬಿತ್ತ ಎಂದರೆ ಬೀಜ; ಬಿತ್ತು ಎಂದು ಅರ್ಥಗಳಿವೆ. ಸಾಮಾನ್ಯವಾಗಿ ಭೂಮಿಯಲ್ಲಿ ನಾಟುವ, ಬಿತ್ತುವಿಕೆಯನ್ನು ಬಿತ್ತನೆ ಎಂದು ಕರೆಯಬಹುದು. ಬಿತ್ತನೆಗೆ ರೈತರು ಅನೇಕ ಉಪಕರಣಗಳನ್ನು ಬಳಸುತ್ತಾರೆ. ಅಂತವುಗಳಲ್ಲಿ ಕೂರಿಗೆ,

ನೇಗಿಲು, ಮೂದಾಳು, ಸಡ್ಡೆ, ಕೂರಿಗೆ ಬಟ್ಟಲು ಇನ್ನೂ ಮುಂತಾದ ಸಲಕರಣೆಗಳು ಬೇಕಾಗುತ್ತವೆ. ಕೂರಿಗೆಯನ್ನು ಕುರಿತು ಕೃಷಿಪದಕೋಶದಲ್ಲಿ ಹೀಗೆ ಹೇಳಲಾಗಿದೆ. "ಬೀಜಬಿತ್ತಲು ಬಳಸುವ ಉಪಕರಣ, ಕೊಳವೆಯ ರೂಪದಲ್ಲಿದ್ದು, ಮೇಲಿನ ಬಾಯಿಯಿಂದ ಬೀಜವನ್ನು ಹಾಕಿದಾಗ ಇನ್ನೊಂದು ತುದಿಯಿಂದ ಕೆಳಗೆ ಭೂಮಿಗೆ ಬೀಜ ಬೀಳುತ್ತದೆ. ಇದನ್ನು ಲಕ್ಷ್ಮೀಎಂದು ತಿಳಿಯುವುದುಂಟು. ಜೋಡು ಕೂರಿಗೆಗಳನ್ನು ನಿಲ್ಲಿಸಿ ಶಿವಪಾರ್ವತಿರೆಂದು ತಿಳಿದು ಸೀರೆ ಪಂಚೆಗಳನ್ನು ಸುತ್ತಿ ಪೂಜೆಮಾಡುವರು. ಬಿತ್ತುವಾಗ ಇದರ ತಾಳುಮುರಿದರೆ ಶುಭವೆಂದು ದಿಂಡು ಮುರಿದರೆ ಅಶುಭ ಎಂದು ತಿಳಿಯಲಾಗುತ್ತದೆ ".[೨೨]

ರಟ್ಟಮತ ಶಾಸ್ತ್ರಕಾರನು ಬಿತ್ತನೆಯ ಕ್ರಮಗಳನ್ನು ಕುರಿತು ಹೀಗೆ ಹೇಳುತ್ತಾನೆ. "ಯಾವಯಾವ ನಕ್ಷತ್ರಗಳಲ್ಲಿ ಯಾವ ಯಾವ ಧಾನ್ಯಗಳನ್ನು ಬಿತ್ತಿದರೆ ಉತ್ತಮ, ಯಾವ ಯಾವ ಗ್ರಹನಕ್ಷತ್ರಗಳ ಯೋಗದಲ್ಲಿ ಬೀಜಬಿತ್ತಿದರೆ ಕೇಡು, ಎಂಬುದನ್ನು ವಿವರಿಸಿ, ಬೀಜವನ್ನು ಬಿತ್ತುವ ಸಾಧನವಾದ ಕೂರಿಗೆಯನ್ನು ಪೂಜಿಸುವ ವಿಧಾನ, ಬೀಜಬಿತ್ತಲು ಹೊರಟಾಗ ಉಂಟಾಗುವ ಕೆಟ್ಟ ಮತ್ತು ಒಳ್ಳೆಯ ಶಕುನಗಳು ಇವನ್ನು ಹೇಳಿ.............".[೨೩] ರೈತರಿಗೆ ಬಿತ್ತನೆ ಉಪಕರಣದ ಬಗ್ಗೆ ಅಪಾರ ಗೌರವ ಮತ್ತು ಪೂಜ್ಯನೀಯ ಭಾವನೆ ಇತ್ತು ಎಂಬುದನ್ನು ತಿಳಿಸುತ್ತಾನೆ.

ಪ್ರಾಚೀನ ಕಾಲದಲ್ಲಿ ಉಳುಮೆಯ, ಬಿತ್ತನೆಯ ದೇವತೆಗಳಿರುವ ಅಂಶಗಳು ತಿಳಿದುಬರುತ್ತವೆ. ಮಳೆ ಆಧಾರಿತ ಭೂಮಿಯಾಗಲಿ, ನೀರಾವರಿ ಭೂಮಿಯಾಗಲಿ, ಬಿತ್ತನೆ ಮಾಡಲು ಹದ ಬೆದೆ ತುಂಬಾ ಮುಖ್ಯವಾದದ್ದು. 'ಒಂದು ದಿನದ ಅರಿಶಿಣದ ಕೂಳು ವರುಷದ ಗಂಜಿ ಕೆಡಿಸಿತ್ತು.' ಎಂದು ಹೇಳುವ ಅನುಭವಿಕರ ನುಡಿ ಇದಕ್ಕೆ ಪೂರಕವಾಗಿದೆ. ಬಿತ್ತನೆಯ ಕ್ರಿಯೆಯಲ್ಲಿ ಸಾಲುಗಳನ್ನು ಹೊಡೆಯುವುದು, ಜಾಣ ಬಿತ್ತನೆ, ಹದ ಬೆದೆ, ನೆಲದ ಹದಗೊಳಿಸುವಿಕೆ, ಹಸನುಮಾಡುವುದು, ಮುಂಬರತೆ, ಸಾಲು ಮುಚ್ಚುವುದು ಮುಂತಾದವುಗಳನ್ನು ಕಾಣುತ್ತೇವೆ. ನಮ್ಮ ಹಿರಿಯರು ಬಿತ್ತನೆ ವಿಷಯದಲ್ಲಿ ಕೃಷಿಜ್ಞಾನ ಪಂಡಿತರೇ ಸರಿ. ಅವರ ಪರಂಪರಾಗತ ಮಾರ್ಗಗಳು ಇಂದು ಕಣ್ಮರೆಯಾಗಿರುವುದು ದುರಂತರವೇ ಸರಿ.

ಕನ್ನಡಸಾಹಿತ್ಯ, ಶಾಸ್ತ್ರ ಮತ್ತು ಶಾಸನ ಹಾಗೂ ಜನಪದರಲ್ಲಿ ಕಾಣುಬರುವ ಬಿತ್ತನೆ ವಿಧಾನದ ಕ್ರಮಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ. ರಟ್ಟಮತ ಶಾಸ್ತ್ರಕಾರನು ಬೀಜ ಬಿತ್ತುವ ನಕ್ಷತ್ರಗಳನ್ನು, ಧಾನ್ಯಗಳನ್ನು ಯಾವ ಯಾವ ನಕ್ಷತ್ರಗಳಲ್ಲಿ ಬಿತ್ತಿದರೆ ಉತ್ತಮ, ಮಧ್ಯಮ, ಕನಿಷ್ಠ ಎಂಬುದನ್ನು ವಿಸ್ತಾರವಾಗಿ ಹೇಳಿರುವನು. ಕೆಲವು ನಕ್ಷತ್ರಗಳಲ್ಲಿ ಅಂದರೆ ಉತ್ತರೆ, ಉತ್ತರಭಾದ್ರಪದ, ಉತ್ತರಾಷಡ, ಮಘ, ಹಸ್ತ, ಧನಿಷ್ಠೆ, ಮೃಗಶಿರ, ರೇವತಿ ನಕ್ಷತ್ರಗಳಲ್ಲಿ ಬಿತ್ತಿದರೆ ಹೆಚ್ಚು ಇಳುವರಿಯನ್ನು ಪಡೆಯಲಾಗದೆಂದೂ, ರೋಹಿಣಿ, ಪುಷ್ಯದಲ್ಲಿ ಭತ್ತ, ಪುನರ್ವಸುನಲ್ಲಿ ನೆಲ್ಲು, ಅನುರಾಧೆಯಲ್ಲಿ ಗೋಧಿ, ಅಶ್ವಿನಿಯಲ್ಲಿ ಹತ್ತಿ, ಉತ್ತರೆಯಲ್ಲಿ ಕಡಲೆ ಇನ್ನೂ ಮುಂತಾದ ನಕ್ಷತ್ರಗಳಲ್ಲಿ ಧಾನ್ಯಗಳನ್ನು ಬಿತ್ತುವುದು ಉತ್ತಮ ಎಂದು ಶಾಸ್ತ್ರಕಾರನ ಅಭಿಮತವಾಗಿದೆ. ಅಧ್ಯಾಯ ಮೂರರಲ್ಲಿ ಹೆಚ್ಚಿನ ವಿವರಣೆಯನ್ನು ಕೃಢೀಕರಿಸಿ ಬರೆಯಲಾಗಿದೆ. ಇಂದಿನ ದಿನಮಾನಗಳಲ್ಲಿ ಈ ರೀತಿ ನಕ್ಷತ್ರಗಳನ್ನು ನೋಡಿ ಬಿತ್ತನೆ ಮಾಡುವ ಪ್ರಮಾಣ ಕಡಿಮೆಯಾಗಿದ್ದರೂ ಗ್ರಾಮೀಣ ಪ್ರದೇಶದಲ್ಲಿ ಶಾಸ್ತ್ರ ಹೇಳುವವರ ಬಳಿ ಹೋಗಿ, ಇಲ್ಲವೇ ತಾವು ನಂಬಿರುವ ದೇವರ ಪ್ರಸಾದವನ್ನು ಕೇಳಿ ಬಿತ್ತುವ ಪದ್ಧತಿಯನ್ನು ಕಾಣುತ್ತೇವೆ.

ಕನ್ನಡಸಾಹಿತ್ಯ ಕೃತಿಗಳಲ್ಲಿ ಬಿತ್ತನೆಯ ಪದ್ಧತಿಯನ್ನು ಕುರಿತು ಶಾಸ್ತ್ರೋಕ್ತವಾಗಿ ಹೇಳಿರುವ ಅಂಶಗಳು ಕಂಡು ಬರುವುದಿಲ್ಲ. ಪ್ರಾಸಂಗಿಕವಾಗಿ ಬಿತ್ತುವ ಕ್ರಿಯೆಯನ್ನು ಕುರಿತು ಉಲ್ಲೇಖಗಳು ಕಾಣಸಿಗುತ್ತವೆ. ಒಕ್ಕಲಿಗ ಮುದ್ದಣನವರ ವಚನವೊಂದರಲ್ಲಿ

"......ಆ ಹೊಲನಂ ಹಸಮಾಡಿ ಬಿತ್ತುವ ಪರಿ ಇನ್ನಾವುದೆಯ್ಯಾ ಎಂದೆಡೆ
ನಾದ, ಬಿಂದು, ಕಳೆ, ಮಳೆಗಾಲದ ಹದ ಬೆದೆಯನರಿದು
ಸ್ಥೂಲವೆಂಬ ದಿಂಡಿಗೆ ತ್ರಿದೇವರೆಂಬ ತಾಳನಟ್ಟು
ಇಡಾಪಿಂಗಳ ಸುಷುಮ್ನಾನಾಳವೆಂಬ ಕೋವಿಗಳ ಜೋಡಿಸಿ
ಮೇಲೆ ತ್ರಿಕೂಟ ಸ್ಥಾನವೆಂಬ ಬಟ್ಟಲಂ ಒಲಿದು
ಕುಂಡಲೀ ಸರ್ಪನೆಂಬ ಹಗ್ಗವ ಸೇದಿಕಟ್ಟಿ
ಹಂಸನೆಂಬ ಎತ್ತು ಹೂಡಿ
ಪ್ರಣವನೆಂಬ ಬೀಜವ ಪಶ್ಚಿಮ ಮುಖಕ್ಕೆ ಬಿತ್ತಿ
ಸರ್ವಶಾಂತಿ ನಿರ್ಮಲವೆಂಬ ಮೇಘ ಸ್ಮರಿಯಲ್ಕೆ..........".[೨೪]

ಈ ವಚನದಲ್ಲಿ ಬಿತ್ತನೆ ಪೂರ್ವದ ವಿಧಾನ, ಬಿತ್ತನೆ ಉಪಕರಣ ಕೂರಿಗೆಯ ದಿಂಡಿಗೆ ಮೂರು ಕೊಳವೆಗಳನ್ನು ಜೋಡಿಸಿ ಹಗ್ಗವನ್ನು ಬಿಗಿದು ಮೂರು ಕೋವಿಗಳು ಸೇರುವಲ್ಲಿ ಬಟ್ಟಲನ್ನು ಬಿಗಿದು, ಎತ್ತನ್ನು ಹೂಡಿ ಪಶ್ಚಿಮಕ್ಕೆ ಮುಖಮಾಡಿ, ಬಿತ್ತನೆಯ ಚಟುವಟಿಕೆಯನ್ನು ಆರಂಭಿಸಿದ ಅಂಶ ತಿಳಿದುಬರುತ್ತದೆ. ರೈತರು ಹದ ಬೆದೆಯನ್ನರಿತು ಬಿತ್ತುವ ಪರಿಯನ್ನು ತಿಳಿಸುತ್ತಾನೆ. ರಂಟೆ, ಕುಂಟೆ ಹೊಡೆದು ಕಸ, ಕಳೆ ತಗೆದು ಭೂಮಿ ಹಸನ ಮಾಡುವುದು ಮೊದಲಹಂತವಾದರೆ, ನಂತರ ಬಿತ್ತುವ ಉಪಕರಣ, ಬೀಜಗಳ ಸಂಗ್ರಹಣೆಮಾಡಿ ಸಿದ್ಧತೆ ಮಾಡಿಕೊಳ್ಳುವುದು ಎರಡನೆ ಹಂತ, ಬೀಜವ ಮಡಿಲಲ್ಲಿ ಕಟ್ಟಿಕೊಂಡು ಪಶ್ಚಿಮಕ್ಕೆ ಮುಖಮಾಡಿ ಬಿತ್ತಬೇಕು ಎಂದು ಸೂಚಿಸುವುದು ಮೂರನೆ ಹಂತವಾಗಿದೆ. ಒಟ್ಟಾರೆಯಾಗಿ ಬಿತ್ತನೆ ಕ್ರಮವನ್ನು ತಿಳಿಸುತ್ತಾರೆ.

ಚನ್ನಬಸವಣ್ಣನವರ ವಚನದಲ್ಲಿ ಬಿತ್ತನೆ ಒಂದು ವಿಶೇಷವಾದ ಅನುಭವ. ಬಿತ್ತನೆಯ ಜಾಣತನವನ್ನು ಕುರಿತು ಹೀಗೆ ಹೇಳುತ್ತಾರೆ.

"ಒಮ್ಮೆ ನೆಲದಲ್ಲಿ ಬಿತ್ತಿದ ಬಿತ್ತುವ
ಕಿತ್ತಿ ಕಿತ್ತಿ ಮತ್ತೆ ಬಿತ್ತುತ್ತಾ ಹೋದಡೆ
ಆ ಬಿತ್ತು ಮೊಳೆತು ಕಳೆಯೇರಿ ಬೆಳೆದು
ಬೆಳೆಸನೀವ ಪರಿಯಿನ್ನೆಂತೋ..............:"[೨೫]

ಬಿತ್ತನೆ ಮಾಡಿದ ಬೆಳೆ ನಾಟದೆ ಹೋದರೆ ಮತ್ತೆ ಮತ್ತೆ ಪುನರಪಿ ಬಿತ್ತುವುದು ಸರಿಯಾದ ಕ್ರಮವಲ್ಲ. ಹಾಗೆ ಬಿತ್ತನೆ ಮಾಡಿದರೆ ಆ ಬೀಜ ಸರಿಯಾಗಿ ಮೊಳಕೆಯಾಗಿ ಉತ್ಕೃಷ್ಟ ಬೆಳೆಯನ್ನು ನೀಡಲಾರದು ಎಂಬ ತಿಳುವಳಿಕೆಯನ್ನು ಇಲ್ಲಿ ನೀಡಲಾಗಿದೆ. ನಯಸೇನ ಹೇಳುವಂತೆ 'ಪದನರಿದು ಬಿತ್ತದ ಬೆಳಸು' ವ್ಯರ್ಥವಾಗುತ್ತದೆ. ಆದ್ದರಿಂದ ಹದ ಬೆದೆಯರಿತು ಸರಿಯಾದ ಕ್ರಮದಲ್ಲಿ ಬಿತ್ತುವುದು ಉತ್ತಮ ಎನ್ನುತ್ತಾನೆ.

ಅಜ್ಞಾತ ಶರಣರ ವಚನವೊಂದರಲ್ಲಿ ಬಿತ್ತುವ ಭೂಮಿ ಹೇಗಿರಬೇಕು ಮತ್ತು ಜಾಣಬಿತ್ತಿಗೆ ಮಾಡಿದರೆ ಎಂತಹ ಹೊಲದಲ್ಲಿ ಮಾಡಬೇಕು ಎಂಬುದನ್ನು ಕುರಿತು ಹೀಗೆ ಹೇಳಲಾಗಿದೆ.

"............ಬೀಳ ಭೂಮಿ ಹಸನಾಗ ಲೊಲ್ಲದೆ,
ಜಾಣ ಬಿತ್ತಿಗೆಯ ಬಿತ್ತಿದ್ದರೆ ಬೆಳೆಯುವುದ್ದೆಂತ್ತಯ್ಯ".[೨೬]

ಯಾವುದೇ ಭೂಮಿಯನ್ನು ಉಳುಮೆ ಮಾಡದೆ ಬಿಟ್ಟರೆ ಅದು ಗಿಡ, ಗಂಟಿ, ಕಸ ಬೆಳೆದು ಬೀಳು ಭೂಮಿಯಾಗುತ್ತದೆ. ಇಂತಹ ಭೂಮಿಯನ್ನು ಹಸನ ಮಾಡಿ ಬೀಜ ಬಿತ್ತಲೂ ಮುಂದಾದಾಗ ಜಾಣ ಬಿತ್ತಿಗೆಯ ಮಾಡಿದರೆ ಬೆಳೆಯು ಶ್ರೇಷ್ಠವಾಗಿ ಬರಲು ಸಾಧ್ಯವಿಲ್ಲ ಎನ್ನುತ್ತಾರೆ. ಏಕೆಂದರೆ ಹೊಸದಾಗಿ ರಂಟೆ, ಕುಂಟೆ ಹೊಡೆದು ಹಸನಾದ ಭೂಮಿಗೆ ಹೆಚ್ಚಿನ ಬೀಜವನ್ನು ಹಾಕಬೇಕಾಗುತ್ತದೆ. ಆ ಭೂಮಿಯಲ್ಲಿ ಎಲ್ಲಾ ಬೀಜಗಳು ಮೊಳಕೆ ಬರಲಾರವು. ಇಂತಹ ತಿಳುವಳಿಕೆ ಇಲ್ಲಿ ಕಂಡು ಬರುತ್ತದೆ. ಬಸವಣ್ಣನವರ ಒಂದು ವಚನದಲ್ಲಿ 'ಬಿತ್ತುಬೆಳೆಯಿತ್ತು, ಕೆಯ್ಯ ಕೊಯ್ಯಿತ್ತು............' ಎಂಬಲ್ಲಿಯೂ, ಕುಮಾರವ್ಯಾಸ ಭಾರತದಲ್ಲಿ '...............ಇಕ್ಕುದೆರೆಯದೆ ಬಿತ್ತಿ ಬೆಳೆಯದೆ ಪುಕ್ಕಟ್ಟೆಯ ಸ್ವರ್ಗಾದಿ ಭೋಗವು.............' ಎನ್ನುವಲ್ಲಿಯೂ ಮತ್ತು ಮೋಳಿಗೆ ಮಾರಯ್ಯನ ವಚನದಲ್ಲಿ 'ಒಂದು ಬೀಜವ ಬಿತ್ತಿ..........' ಎನ್ನುವಲ್ಲಿ, ಶಿವಲೆಂಕ ಮಂಚಣ್ಣನ ವಚನದಲ್ಲಿ 'ಹಸನಮಾಡಿ ಹರಗಿ ಹೊಲದಲ್ಲಿ ಕಸವ ಬಿತ್ತುವ ಮರುಳರಂತೆ............' ಎನ್ನುವಲ್ಲಿಯೂ ಬಿತ್ತನೆಯ ಉಲ್ಲೇಖಗಳು ಕಂಡು ಬರುತ್ತವೆ. ಗ್ರಾಮೀಣ ಬದುಕಿನ ಅನುಭವಗಳೇ ನಮ್ಮ ಕನ್ನಡ ಕಾವ್ಯಗಳಲ್ಲಿ ಹರಳು ಗಟ್ಟಿರುವುದರಿಂದ ರೈತನ ಕೃಷಿ ಬದುಕಿನ ಹಲವಾರು ಅಂಶಗಳು ವರ್ಣನಾತ್ಮಕವಾಗಿ ಕಂಡು ಬರುವುದನ್ನು ಹೇರಳವಾಗಿ ಕಾಣುತ್ತೇವೆ.

ಜಾನಪದ ಕಾವ್ಯಗಳಲ್ಲಿ ಬಿತ್ತನೆಯನ್ನು ಕುರಿತು ಹೇಳುವುದಕ್ಕಿಂತ ಬೆಳೆಯ ಸಂಮೃದ್ಧಿ, ಬೆಳೆಯ ರಕ್ಷಣೆ, ಸುಗ್ಗಿ ವಿಧಾನ ಮುಂತಾದವುಗಳನ್ನು ಕುರಿತು ಹೆಚ್ಚಾಗಿ ಹೇಳಲಾಗಿದೆ. ಬಿತ್ತನೆಯ ವಿಧಾನ ಕುರಿತು ಹಂತಿಯ ಹಾಡುಗಳಲ್ಲಿ ಮಾಹಿತಿ ದೊರೆಯುತ್ತದೆ. ಇಳಿಹಾಳು ಬೊಮ್ಮಯ್ಯ ನವರ ಹಂತಿಹಾಡಿನಲ್ಲಿ ಹೀಗೆ ಹೇಳಲಾಗಿದೆ.

"ಮಳೆಯಾಗಿ ಸಿಗಲಿಲ್ಲ ಒಳಹಸಿಯು ಬಿತ್ತುದಕೆ
ಜಳಕಾರಿ ಹಸಿಯು ತಳಕಾತು । ಯೋಚಿಸಿದ
ಒಳ ನೆನಸಿ ಬೀಜಬಿತ್ತೋಣ ॥೩೫॥

ಬಿಳಿಜೋಳ ಕಡಲೆಗಳ ಬೆಳೆತನಕ ನೆನೆಬಿಟ್ಟು
ಬೆಳಕಾಗಿ ಬೀಜಬುಟ್ಟಿಯೊಳು । ಅವಸರದಿ
ಹೊಲಕೊಯ್ದು ಬೊಮ್ಮ ಬಿತ್ತುದಕೆ ॥೩೬॥".[೨೭]

ಈ ಜನಪದ ತ್ರಿಪದಿಗಳಲ್ಲಿ ಕಂಡು ಬರುವ ಅಂಶಗಳು ಮಳೆಯು ಅನೇಕ ದಿನಗಳ ತನಕ ಬಾರದೆ, ಬಿರು ಮಳೆ ಬಂದಾಗ ಬೇಗನೆ ಭೂಮಿಯ ಹಸಿ ಆರುತ್ತದೆ. ಅಂತಹ ವೇಳೆಯಲ್ಲಿ ಹೇಗೆ ಬಿತ್ತನೆ ಮಾಡಬೇಕು ಎಂಬ ಕ್ರಮವನ್ನು ಕುರಿತು ಇಲ್ಲಿ ಹೇಳಲಾಗಿದೆ. ಅಂದರೆ ಬಿಸಿಲ ಜಳದಿಂದ ಭೂಮಿಯ ಹಸಿ ಆರಿದಾಗ, ಮತ್ತೆ ಮಳೆ ಬರುವ ತನಕ ಕಾಯದೆ, ಹದಬೆದೆಯ ಜಾಣತನ ಅರಿತ ರೈತರು ರಾತ್ರಿ ಇಡೀ ಬೀಜನೆನೆಸಿ ಅದನ್ನು ತೆಗೆದು ಬುಟ್ಟಿಯಲ್ಲಿ ಹಾಕಿ ಆರಿಸಿ ಬಿತ್ತುತ್ತಾರೆ. ಹೀಗೆ ಬಿತ್ತುವುದರಿಂದ ಕಡಿಮೆ ತೇವಾಂಶದಲ್ಲಿಯೇ ಬೀಜ ಮೊಳಕೆ ಬರುತ್ತದೆ. ಆದರೆ ಒಂದು ವಾರದೊಳಗೆ ಮಳೆ ಬಾರದೆ ಹೋದರೆ ನೆನೆಸಿ ಬಿತ್ತಿದ ಬೀಜಗಳು ಬೆಂಡಾಗಿ ಹುಟ್ಟುವುದಿಲ್ಲ. ಸಾಮಾನ್ಯವಾಗಿ ಗಟ್ಟಿಕಾಳುಗಳಾದ ಜೋಳ, ಕಡಲೆ, ಶೇಂಗ ನೆನೆಯಿಟ್ಟು ಬಿತ್ತಬಹುದೆಂದು ಸೂಚಿಸಲಾಗಿದೆ. ಮಳೆ ಕಡಿಮೆ ಬೀಳುವ ಪ್ರದೇಶದಲ್ಲಿ ರೈತರು ಬೀಜ ಬಿತ್ತನೆ ಮಾಡಲೂ ಇಂತಹ ಪದ್ಧತಿಗಳನ್ನು ಅನುಸರಿಸುತ್ತಾರೆ.

ಕನ್ನಡಶಾಸನಗಳಲ್ಲಿ ಭೂಮಿ ಹಸನು ಮಾಡುವ, ಅನೇಕ ವಿಧದ ಬೆಳೆಗಳ, ಭೂಮಿಯ ಗುತ್ತಿಗೆ ನೀಡುವ ಮತ್ತು ದತ್ತಿದಾನವಾಗಿ ನೀಡುವ ಅನೇಕ ಅಂಶಗಳು ಹೇರಳವಾಗಿ ದೊರೆಯುತ್ತವೆ. ಆದರೆ ಭೂಮಿಯಲ್ಲಿ ಕ್ರಮಬದ್ಧವಾದ ಬಿತ್ತನೆಯ ಕ್ರಮವನ್ನು ಕುರಿತು ಎಲ್ಲಿಯೂ ಹೇಳಿರುವ ಅಂಶಗಳು ಕಂಡು ಬರುವುದಿಲ್ಲ. ಆದರೂ ಗೊಬ್ಬೂರು ಶಾಸನವೊಂದರಲ್ಲಿ ದೇವರಿಗೆ ಸೇರಿದ ಭೂಮಿಯನ್ನು ಸಾಮೂಹಿಕವಾಗಿ ಉಳುಮೆ ಮಾಡುವ, ಬಿತ್ತನೆ ಮಾಡುವ ಅಂಶ ಕಾಣಸಿಗುತ್ತವೆ. "............ ಆ ಹಿರಿಯ ಗೊಬ್ಬೂರ ಹಳ್ಳಿಗಳೊಳಗಾಗಿ ಗೊಬ್ಬೂರ ಚತುಸ್ಸೀಮೆಯಿಂದ ದೊಳಗೆ ಜಾತಿ ವಿಜಾತಿಯೆ ನೊಗನಿಕ್ಕಿ ಉತ್ತು ಹರಗಿ ಬಿತ್ತಿ ಬೆಳೆದು ಆ ಹಿರಿಯ ಮಹಾಜನಂಗಳಿಗೆ ಸೂಡು ಜೋಳಮಂ ತೆತ್ತು ಗೆಯ್ಯೂಂಸ್ತ ಮೇಳ್ಸಾಸಿರ್ಬ್ಬರುಂ ನೆರೆದು ತಾವು ಮಾಸಡಿಸಿದ ಶ್ರೀಮಹಲಿಂಗ ಮೇಳೇಶ್ವರ ದೇವರಿಗೆ ವರಿಷ ಪ್ರತಿ ನಡೆವ(ವೊ)ಂದು ಕುಂಟೆಯ ಮೇಳಿಯಲೊಂದೊಂದು ಹಣವಿನ ಲೆಕ್ಕದಲು ಆ ವೊಕ್ಕಲು ಎನಿಸು ಕುಂಟೆಯಲು ಎನಿಸು ಕುಂಟೆಗಳ್ಗ ಮೇಳೆಯಲೊಂದೊಂದು ಹಣವಿನ ಆ ಸಮಸ್ತ ಮೇಳ್ಸಾಸಿರ್ಬ್ಬರುಂ..............".[೨೮] ರೈತರೆಲ್ಲರೂ ಸಾಮೂಹಿಕವಾಗಿ ನೊಗಕಟ್ಟಿ ಭೂಮಿಯ ಹರಗಿ ಬಿತ್ತನೆ ಮಾಡಿ ಸಿದ್ದಪಡಿಸಿ ನಂತರ ಬೀಜವ ಬಿತ್ತಿ ಬೆಳೆಯ ಬೆಳೆದು, ದೇವರಿಗೆ ಒಂದು ಸೂಡು ಜೋಳ ನೀಡುತ್ತಿದ್ದರೆಂದು ವರ್ಣಿಸಲಾಗಿದೆ. ಶಾಸನಗಳಲ್ಲಿ ಎರೆ, ಮಸಂಬು, ಮೊರಡಿ, ಉಸುಕು ಭೂಮಿಯಲ್ಲಿ ಬೀಜವರಿ ಎಷ್ಟು ಖಂಡುಗ ಬರುತ್ತದೆ. ಅಂತಹ ಭೂಮಿಗೆ ಬೀಜದ ಪ್ರಮಾಣ ಎಷ್ಟು ಬೇಕು ಎಂಬ ಮಾಹಿತಿಗಳು ದೊರೆಯುತ್ತವೆ. ಆದರೆ ಈ ರೀತಿಯಲ್ಲಿಯೇ ಬಿತ್ತನೆ ಮಾಡಬೇಕೆಂಬುದನ್ನು ಹೇಳಿರುವುದು ಕಾಣಸಿಗುವುದಿಲ್ಲ.

ಕೃಷಿಜ್ಞಾನಪ್ರದೀಪಿಕೆಯಲ್ಲಿ ಶ್ರೀ ಘನಮಠ ಶಿವಯೋಗಿಗಳು ಮುಂಗಾರಿ, ಹಿಂಗಾರಿ ಹಾಗೂ ಮಧ್ಯಮ ವೇಳೆಯ ಬೆಳೆಗಳ ಬಿತ್ತನೆಯ ವಿಧಾನವನ್ನ ಕುರಿತು ಈ ರೀತಿ ಹೇಳುತ್ತಾರೆ. ಅವುಗಳಲ್ಲಿ ಕೆಲವು ಪ್ರಮುಖ ಬೆಳೆಗಳ ಬಿತ್ತನೆ ಕ್ರಮವನ್ನು ಕುರಿತು ಈ ಭಾಗದಲ್ಲಿ ಹೇಳಲಾಗಿದೆ.

ಭತ್ತ : ಭತ್ತ ಪ್ರಮುಖವಾದ ಬೆಳೆಯಾಗಿದೆ. ಈ ಬೆಳೆಯನ್ನು ಗದ್ದೆನೆಲ್ಲು, ಕೂರಿಗೆನೆಲ್ಲು ಎಂದು ಎರಡು ವಿಧದಲ್ಲಿ ಬಿತ್ತಿ ಬೆಳೆಯುತ್ತಾರೆ. ನೀರಾವರಿಯ ಆಸರೆಯಿಂದ ಗದ್ದೆನೆಲ್ಲು ಹೆಚ್ಚಾಗಿ ಮಾಡಿದರೆ, ಕೂರಿಗೆಯನೆಲ್ಲಿಗೆ ಮಳೆಯೇ ಆಸರೆ. ಇಲ್ಲವೇ ನೀರಿನ ಪ್ರಮಾಣ ಕಡಿಮೆಯಿರುವ ಕಡೆ ಬೆಳೆಯಲಾಗುತ್ತದೆ. ಕೂರಿಗೆಯ ನೆಲ್ಲು ಯಾವ ದೇಶದಲ್ಲಾದರೂ, ಯಾವ ಭೂಮಿಯಲ್ಲಾದರೂ ಬೆಳೆಯುತ್ತದೆ. ಹೊಳೆ, ಕೆರೆ, ಕಾಲುವೆ. ಒಡ್ಡು, ಇಲ್ಲವೇ ಮಳೆಯ ನೀರಿನ ಮೂಲಗಳಿಂದ ಬಿತ್ತಿ ಬೆಳೆಯಬಹುದು. ನೆಲ್ಲು ಬಿತ್ತುವ ಹೊಲ ಸಮತಟ್ಟಾಗಿದ್ದು, ನೀರು ನಿಲ್ಲುವಂತೆ ಇರಬೇಕು. ಮತ್ತು ಫಲವತ್ತಾಗಿರಬೇಕು. 'ಹಾಕೋ ಗೊಬ್ಬರ ಬೇಳೀ ನೋಡೋ ಅಬ್ಬರ; ಬಿತ್ತೋಬತ್ತ ಎಂಬ ಗಾದೆಗಳು ಪ್ರಚಲಿತದಲ್ಲಿವೆ. ಕೂರಿಗೆಯ ನೆಲ್ಲು ಬಿತ್ತನೆಯಲ್ಲಿ ಎರಡು ರೀತಿಯ ವಿಧಾನವನ್ನು ಕೃಷಿಜ್ಞಾನಪ್ರದೀಪಿಕೆಯಲ್ಲಿ ಹೇಳಲಾಗಿದೆ. ಅದು ಹೇಗೆಂದರೆ ಒಂದನೆಯದಾಗಿ "ಭೂಮಿಯು ಉತ್ತಮ ಪ್ರಕಾರದ್ದಾಗಿ ಕಸುವಿನ ಭೂಮಿಯಾದರೆ ಪೂರ್ವ-ಪಶ್ಚಿಮಕ್ಕೆ ಸಾಲು ಮಾಡಿ ಒಂದಾವರ್ತಿ ಬಿತ್ತಿ, ಉತ್ತರ-ದಕ್ಷಿಣಕ್ಕೆ ಸಾಲು ಮಾಡಿ ಮತ್ತೊಂದಾವರ್ತಿ ಬಿತ್ತಬೇಕು. ನೆಲ್ಲು ಬಿತ್ತುವುದಕ್ಕೆ ನಾಲ್ಕು ಕಾಳಿನ ಕೂರಿಗೆಯಿಂದ ಬಿತ್ತುವುದು ಉತ್ತಮವು. ಎರಡೆತ್ತರ ಬಿತ್ತಬೇಕಾದರೆ ಎಂಟು ಬೆರಳು ಅಗಲವಾಗಿ ತಾಳು ಹಾಸಬೇಕು. ಒಂದು ಎತ್ತರ ಬಿತ್ತಬೇಕಾದರೆ ಹನ್ನೆರಡು ಬೆರಳು ಅಗಲವಾಗಿ ತಾಳು ಹಾಸಬೇಕು............ನೆಲ್ಲು ಬಿತ್ತುವ ಭೂಮಿಯೂ ಬಹಳ

ಕಸುವಿನ ಭೂಮಿಯಲ್ಲದಿದ್ದರೆ ಹಿಂದೆ ಹೇಳಿದ ಹಾಗೆ ಎರಡೆತ್ತರವಾಗಿ ಬಿತ್ತದೆ ಪೂರ್ವ–ಪಶ್ಚಿಮಕ್ಕೆ ಆಗಲಿ ಅಥವಾ ಉತ್ತರ–ದಕ್ಷಿಣಕ್ಕೆ ಆಗಲಿ ಸಾಲಾಗಿ ಬಿತ್ತಿ ಅದರ ಆರೈಕೆಯನ್ನು ಮಾಡುವಲ್ಲಿ ಎಡೆಯ ಹೊಡೆಯುವಲ್ಲಿ...........".[೨೯] ಎರಡನೇ ಬಗೆಯ ಭತ್ತದ ಬಿತ್ತನೆಯ ಕ್ರಮವನ್ನು ತಿಳಿಸಲಾಗಿದೆ.

ಸರ್ವ ಶುಭಕಾರ್ಯಗಳಿಗೆ, ಗುರುದೇವತ ಕಾರ್ಯಗಳಿಗೆ, ಪ್ರಾಚೀನ ಕಾಲದಿಂದಲೂ ರಾಜನ್ನವೆಂದೆ ವರ್ಣಿಸಿಕೊಂಡು ಸರ್ವರಿಗೆ ಭೋಜನಕ್ಕೆ ಅನುಕೂಲವಾದ ನೆಲ್ಲನ್ನು ಎಲ್ಲರೂ ಬೆಳೆದು ಕೊಳ್ಳುವುದು ಉತ್ತಮ. 'ನೆಲ್ಲಕ್ಕಿ ಅನ್ನ ನೆಲ್ಲಿ ಮೇಲಿನ ತುಪ್ಪ' ಎಂಬ ಗಾದೆಯ ಮಾತು, 'ಸರ್ವಾರಂಭ್ಯ:ಸ್ತಂಡುಲ ಪ್ರಸ್ಥಮೂಲ್ಯೆ:' ಎಂಬುದು ನೆಲ್ಲಿನ ಮಹತ್ವವನ್ನು ಸಾರುವಂತದ್ದಾಗಿದೆ. ನೆಲ್ಲು ಬಿತ್ತುವ ಕಾಲ ಮೃಗಾಶಿರ ಮಳೆ ಉತ್ತಮ, ಆರಿದ್ರದಲ್ಲಿ ಮಧ್ಯಮ, ಪುಷ್ಯದಲ್ಲಿ ಸಾಮಾನ್ಯವೆಂದೂ, ಅನಿವಾರ್ಯವಾಗಿ ಬಿತ್ತಬೇಕಾದರೆ ಪಕ್ಕದಲ್ಲಿ ಹಳ್ಳ, ಬಾವಿ ನೀರಿನ ಆಸರೆ ಇದ್ದರೆ ಬಿತ್ತಬಹುದು. ಮಳೆ ಒಮ್ಮೆ ಬಾರದೆ ಕೈ ಕೊಟ್ಟರೆ ಒಂದು ಸಾರಿಯಾದರೂ ನೀರು ಹಾಯಿಸಿ ನೆಲ್ಲು ಬೆಳೆಯಬಹುದು. ನಿಷ್ಠೆಯಿಂದ ಕಳೆ, ಕಸ ತೆಗೆದು ಆರೈಕೆ ಮಾಡಿದರೆ ಗದ್ದೆಯ ನೆಲ್ಲಿನ ಹಾಗೆಯೇ ಬೆಳೆಯಬಹುದು ಎಂಬುದು ಶಾಸ್ತ್ರಕಾರನ ಅಭಿಮತ.

ಮುಂಗಾರಿ ಧಾನ್ಯಗಳ ಬಿತ್ತನೆ ಮಾಡುವ ವಿಧಾನ ಕುರಿತು ಶ್ರೀ ಘನಮಠ ಶಿವಯೋಗಿಗಳ ಅಭಿಮತವೆನ್ನೆಂದರೆ. ಮುಂಗಾರಿ ಧಾನ್ಯಗಳೆಂದರೆ ಜೋಳ, ನೆಲ್ಲು, ನವಣಿ, ರಾಗಿ, ಸಾವಿ, ಬರಗು, ಸಜ್ಜೆ, ಹರಳು, ಎಳ್ಳು, ಶೇಂಗ ಮತ್ತು ತೊಗರಿ, ಹೇಸರು, ಉದ್ದು, ಹುರುಳಿ, ಹಲಸಂದೆ, ಅವರೆ, ಬಳ್ಳೊಳ್ಳಿ, ಮೆಣಸಿನ ಗಿಡ, ಹವೀಜ, ಜೀರಿಗೆ, ಪುಂಡಿ, ಮಡಿಕೆ, ಮುಂತಾದ ಹದಿನೆಂಟು ಬಗೆಯ ದಿನಸುಗಳು. ಮುಂಗಾರಿ ಹಿಂಗಾರಿಗಳ ಮಧ್ಯ ಆಶ್ಲೇಷ, ಮಘ, ಹುಬ್ಬಿ ಮಳೆಗಳಲ್ಲಿ ಹತ್ತಿಯ ಬೆಳೆ ಬೆಳೆಯಲಾಗುತ್ತದೆ. ಮುಂಗಾರಿ ಧಾನ್ಯ ಬಿತ್ತುವುದಕ್ಕೆ ರೋಹಿಣಿ, ಮೃಗಾಶಿರ, ಆರಿದ್ರ, ಪುಷ್ಯ, ಪುನರ್ವಸು, ಆಶ್ಲೇಷ ಈ ಆರು ಮಳೆಗಳಲ್ಲಿ ಬಿತ್ತುವುದು ಉತ್ತಮ. ಮೊರಡಿ, ಮಸಂಬು, ಉಸುಕು, ಮಸಾರಿ, ಗರಸು ಮಸಾರಿ, ಕೆಂಪುಮಸಾರಿ, ಕೆಂಪುಮೊರಡಿ, ಕರಲುಭೂಮಿ, ಸವಳುಭೂಮಿ, ಕಟಕಭೂಮಿಗಳಲ್ಲಿ ರಂಟೆ, ಕುಂಟೆ ಹೊಡೆದು ಗೊಬ್ಬರ ಗೊಡುಗಳಿಂದ ಸಿದ್ಧತೆ ಮಾಡಿಕೊಂಡು ಹದವಾದ ಮಳೆ ಬಂದನಂತರ ಬಿತ್ತುವ ಕ್ರಿಯೆಯನ್ನು ಆರಂಭಿಸಬೇಕು ಎನ್ನಲಾಗಿದೆ.

ಜೋಳ : ಜೋಳದ ಬಿತ್ತನೆಯನ್ನು ಎಲ್ಲಾತರಹದ ಭೂಮಿಯಲ್ಲಿ ಬಿತ್ತಿ ಬೆಳೆಯಬಹುದು. ಕಪ್ಪು ಮಿಶ್ರಿತ, ಮಸಾರಿ, ಉತ್ತಮ. ಮುಂಗಾರಿಜೋಳ ಬಿತ್ತನೆ ವಿಧಾನ ಕುರಿತು ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಹೀಗೆ ಹೇಳಲಾಗಿದೆ. "........... ಮುಂಗಾರಿಯ ಜೋಳವನ್ನು ಸ್ವಲ್ಪ ಸಜ್ಜೆ, ಬೆರಸುಗಾಳು ಕೂಡಿಸಿ ಬಿತ್ತಬೇಕು. ಹಾಳು ಮೋಳಿಗಳಿಗೆ ಸೆಜ್ಜೆಯನ್ನು ಬಿತ್ತಬೇಕು. ಉಸುಕು ಭೂಮಿಯಲ್ಲಿ ಸೆಜ್ಜೆಯನ್ನು ಬಿತ್ತಬೇಕು. ರೋಹಿಣಿ, ಮೃಗಾಶಿರ ಮಳೆಗಳಲ್ಲಿ ಯಾವ ಭೂಮಿಗಳಿಗಾದರೂ ಮುಂಗಾರಿಯ ಜೋಳವನ್ನು ಖರೀಪದ ಯಾವತ್ತು ಅಕ್ಕಡಿ ಧಾನ್ಯಗಳು ಸಹಿತ ಬಿತ್ತವುದು ಉತ್ತಮವು".[೩೦] ಜೋಳದ ಜೊತೆಯಲ್ಲಿ ಹೆಸರು, ಅಲಸಂದಿ, ಉದ್ದು, ಸೂರ್ಯಪಾನ ಅಕ್ಕಡಿಕಾಳುಗಳಾದ ತೊಗರಿ, ಪುಂಡಿ, ಕುಸುಬಿಯನ್ನು ಬಿತ್ತುತ್ತಾರೆ.

ಶೇಂಗಾ : ಶೇಂಗಾ ಬೆಳೆಗೆ ಎರೆಯ ಭೂಮಿ ರಸವತ್ತಾದ ಭೂಮಿ. ಖುಷ್ಕಿಭೂಮಿಯಲ್ಲಿ ಮಳೆಯ ಆಸರೆಯ ಬೆಳೆಯಾಗಿ, ತೋಟಗಳಲ್ಲಿ ನೀರಾವರಿ ಆಸರೆಯಿಂದ ಬೆಳೆಯಲಾಗುತ್ತದೆ. ಶೇಂಗಾ ಬೀಜಗಳನ್ನು ಮುಗ್ಗುಹಾಯದ ಒಳ್ಳೆಯ, ಒಣಗಿದ ಬೀಜಗಳ ಆಯ್ಕೆಮಾಡಿಕೊಳ್ಳುವುದು ಮುಖ್ಯವಾದುದು.

ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಶೇಂಗಾ ಬೀಜ ಬಿತ್ತುವ ವಿಧಾನವನ್ನು ಕುರಿತು ಹೀಗೆ ಹೇಳಲಾಗಿದೆ. "............ ಅಂಥ ಬೀಜಗಳನ್ನು ಕೂರಿಗಿ ಹಿಂದೆ ಬುಕ್ಕಾ ಕಟ್ಟಿ ನಾಲ್ಕು ಬೆರಳಿಗೊಂದು ಬೀಜ ಬೀಳುವಂತೆ ಬಿತ್ತಬೇಕು. ಇಲ್ಲವೆ ಮಡಿಕೆಯ ಸಾಲು ಹಾಸಿ ಹಿಂದೆ ಬುಕ್ಕಾ ಕಟ್ಟಿ ಬಿತ್ತಿದರೂ ಬರುತ್ತದೆ".[೩೧] ಶೇಂಗಾವನ್ನು ಕೂರಿಗೆಯಿಂದಲೂ ಬಿತ್ತಬಹುದು. ಶೇಂಗಾ ಬಿತ್ತಲು ದೊಡ್ಡ ಬಟ್ಟಲು ದಪ್ಪ ರಂಧ್ರವಿರುವ ಕೊಳವೆಗಳನ್ನು ಬಳಸುತ್ತಾರೆ. ಇಲ್ಲವಾದರೆ ಕೂರಿಗೆ ದಿಂಡಿಗೆ ಸೆಡ್ಡೆಯನ್ನು ಕಟ್ಟಿ ಬಿತ್ತಲಾಗುತ್ತದೆ. ಎರಡು ತಾಳಿನ ಸೆಡ್ಡೆ, ಒಂಟಿ ತಾಳಿನ ಸೆಡ್ಡೆಯನ್ನು ಬಳಸಲಾಗುತ್ತದೆ. ತೋಟ ಮತ್ತು ಕಡಿಮೆ ಭೂಮಿಯಿದ್ದರೆ ನಾಲ್ಕು ಬೆರಳಿಗೊಂದರಂತೆ ನಾಟುತ್ತಾ ಹೋಗುತ್ತಾರೆ. ಬಳ್ಳಿಯ ಹಾಗೆ ಹಬ್ಬಿ ಬೇರಿನಲ್ಲಿ ಕಾಯಿಗಳಾಗುತ್ತವೆ. ಇವುಗಳನ್ನು ಗುದ್ದಲಿಯಿಂದ ಅಗಿದು ಆರಿಸಲಾಗುತ್ತದೆ. ಇಲ್ಲವೇ ಮಡಿಕೆ ಹೊಡೆದು ಹಿಂದಿನಿಂದ ಆರಿಸಿ ರಾಶಿ ಮಾಡಿಕೊಳ್ಳುತ್ತಾರೆ. ಇದು ಒಂದು ಬಗೆಯ ಶೇಂಗಾವಾದರೆ, ಬಿತ್ತನೆಯ ಕಾಳು ಬೆಳೆದು ನೇರ ಬೇರುಗಳಲ್ಲಿ ಕಾಯಿಗಳಾಗುತ್ತವೆ. ಇಂಥ ಶೇಂಗಾವನ್ನು ಹದಬೆದೆ ನೋಡಿ ನೆಲ ಹಸಿಯಾದಾಗ ಕಿತ್ತು ಹಾಕಿ, ಮೆದೆ ಮಾಡಿದ ಶೇಂಗಾ ಗಿಡಗಳು ಒಣಗಿದ ನಂತರ ಕಾಯಿ ಬೇರೆ ಮಾಡಿ ರಾಶಿ ಮಾಡುತ್ತಾರೆ. ಶೇಂಗಾದ ಹೊಟ್ಟು ದನಕರುಗಳಿಗೆ ತುಂಬಾ ಪೌಷ್ಟಿಕ ಆಹಾರವಾಗಿದೆ.

ನವಣೆ : ಮುಂಗಾರಿಯಲ್ಲಿ ಬಿತ್ತುವ ಧಾನ್ಯ. ಕೆಲವು ದೇಶಗಳಲ್ಲಿ ವಿಶೇಷವಾಗಿ ಬೆಳೆಯುತ್ತಾರೆ. ಕರ್ನಾಟಕದ ಬಳ್ಳಾರಿ, ಗುಲಬರ್ಗಾ, ರಾಯಚೂರು, ಬಿಜಾಪುರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಋಷ್ಕಿಯಲ್ಲಿ ಬಿತ್ತಿ ಬೆಳೆಯುತ್ತಾರೆ. ನೂರು ದಿನಗಳಲ್ಲಿ ಕಟಾವಿಗೆ ಬರುತ್ತದೆ. ಎಲ್ಲಾ ತರಹದ ಭೂಮಿಯಲ್ಲಿಯೂ ಬೆಳೆಯುತ್ತದೆ. ನವಣೆಯಲ್ಲಿ ಬೂದರನವಣಿ, ಹಾಲುನವಣಿ, ಮಾಗಿಯನವಣಿ, ಕೆಂಪುನವಣಿ, ಕಪ್ಪುನವಣಿ ಎಂದು ಹಲವು ವಿಧಗಳುಂಟು. ಬೂದರನವಣಿ ಊಟಕ್ಕೆ ತುಂಬಾ ರುಚಿಕರವಾಗಿರುತ್ತದೆ. 'ಅಚ್ಚೇರೊಬ್ಬನಿಗೆ, ಆರಿದರಿಬ್ಬರಿಗೆ, ಮಜ್ಜಿಗೆ ಹಾಕಿದರೆ ಮತ್ತೊಬ್ಬನಿಗೆ' ಎಂಬ ಮಾತು ನವಣೆ ಬಗ್ಗೆ ಪ್ರಚಲಿತವಾಗಿದೆ. ಬಡವರ ಪಾಲಿನ ಭಾಗ್ಯದ ಬೆಳೆ ನವಣಿಯಾಗಿದೆ. ಜೋಳದ ರೀತಿಯಲ್ಲಿಯೇ ಬಿತ್ತನೆ ಮಾಡಲಾಗುತ್ತದೆ. ಸೆಡ್ಡೆಯಿಂದ ಬಿತ್ತುವಾಗ ಉಸುಕು ಕಲಸಿ ಬಿತ್ತುತ್ತಾರೆ. ಬಟ್ಟಲು ಕಟ್ಟಿದ ಕೂರಿಗೆಯಲ್ಲೂ ಬಿತ್ತಲಾಗುತ್ತದೆ. ಉಸುಕು ಬೆರಸಿದ ನವಣಿಯನ್ನು ಬುಕ್ಕಾದಲ್ಲಿ ಹಾಕಿಕೊಂಡು ಬಿತ್ತನೆ ಮಾಡುತ್ತಾರೆ. "ಜೂನ್, ಜುಲಾಯಿ ತಿಂಗಳಲ್ಲಿ, ಬೆಳೆಸುವ ಪ್ರದೇಶಗಳಿಗೆ ಗೊಬ್ಬರ ಹರಡಿ ಉಳುಮ ಮಾಡಿ ಹಸನಾಗಿಸಿ ಒಂದಡಿ ಅಂತರದ ಸಾಲುಗಳಲ್ಲಿ ಮೂರು ನಾಲ್ಕಿಂಚು ದೂರಕ್ಕೆ ಬಿತ್ತನೆ ಮಾಡುತ್ತಾರೆ. ಬೀಜ ಮೊಳೆತು ಗಿಡಗಳಾದಾಗ ಹದವಾಗಿ ರಾಸಾಯನಿಕ ಗೊಬ್ಬರ ಕೊಡುತ್ತಾರೆ".[೩೨] ಎಂದು ಕೃಷಿಲೋಕ ಪ್ರವೇಶ ಕೃತಿಯಲ್ಲಿ ಹೇಳಲಾಗಿದೆ. ಸಿದ್ಧರಾಮೇಶ್ವರರ ವಚನವೊಂದರಲ್ಲಿ 'ನೀರಿಲ್ಲದ ಭೂಮಿಯಲ್ಲಿ ಮೂರು ಹೇರು ನವಣೆಯ ಬೆಳೆದುದ ಕಂಡೆ...........' ಇಲ್ಲಿ ಮೂರು ಹೇರು ನವಣೆಯನ್ನು ಎಷ್ಟು ಭೂಮಿಯಲ್ಲಿ ಬೆಳೆದರು ಎಂಬುದು ಸ್ಪಷ್ಟವಾಗುದಿಲ್ಲ.

ನವಣೆಯ ಬಿತ್ತನೆಯ ರೀತಿಯಲ್ಲಿಯೇ ರಾಗಿ, ಸಾವೆ, ಹಾರಕಗಳನ್ನು ಬಿತ್ತನೆ ಮಾಡಲಾಗುತ್ತದೆ. ಕೂರಿಗೆಯಿಂದ ಬಿತ್ತನೆ ಮಾಡುವುದು ಕಷ್ಟ. ಏಕೆಂದರೆ ಇವು ಸಣ್ಣಕಾಳುಗಳು ಆದ್ದರಿಂದ ಸಣ್ಣ ಉಸುಕನ್ನು ಇಲ್ಲವೆ ಹುಡಿ ಮಣ್ಣು, ಮಡಿಗೊಬ್ಬರ ಹಾಗೂ ರಾಸಾಯನಿಕ ಗೊಬ್ಬರವನ್ನು ಸಮಪ್ರಮಾಣದಲ್ಲಿ ಬೆರಸಿ ಬಿತ್ತನೆ ಮಾಡಲಾಗುತ್ತದೆ. ಕೂರಿಗೆಗಿಂತ ಮೂದಾಳಿಗೆ ಹಿಂದೆ ಸೆಡ್ಡೆ ಕಟ್ಟಿ ಬಿತ್ತನೆ ಮಾಡಲಾಗುತ್ತದೆ. ಅಲ್ಲದೇ ಸಾಲುಗಳನ್ನು ಹೊಡೆದು ಆ ಸಾಲುಗಳಿಗೆ ಕೈಯಿಂದ ಈ ಧಾನ್ಯಗಳನ್ನು ಉದುರಿಸಿ ಕುಂಟೆಯಿಂದ

ಸಾಲು ಮುಚ್ಚಿ ಕೊರಡು ಹೊಡೆಯುತ್ತಾರೆ. ರಾಗಿಯನ್ನು ಫಲವತ್ತಾದ ಮಣ್ಣಿನಲ್ಲಿ ಏರು ಮಡಿಮಾಡಿ ಒಂದು ದಿನ ಮೊದಲೇ ನೆನಸಿದ ರಾಗಿ ಬೀಜಗಳನ್ನು ಹರಡಿ ನಯವಾಗಿ ಮೇಲುಮಣ್ಣು ತೆಳುವಾಗಿ ಹಾಕಿ ನೀರು ಹಾಯಿಸಿ ಸಸಿ ಮಾಡಿಕೊಂಡು ಸುಮಾರು ಇಪ್ಪತ್ತು-ಇಪ್ಪತ್ತೈದು ದಿನಗಳೊಳಗೆ ಭೂಮಿಯಲ್ಲಿ ನಾಟಿ ಮಾಡಿ ಬೆಳೆಸುತ್ತಾರೆ. ಇಂಥಹ ರಾಗಿ ಕವಲುಗಳಾಗಿ ಬೆಳೆದು ಕೊಬ್ಬಿ ಹೆಚ್ಚು ಇಳುವರಿಯನ್ನು ನೀಡುತ್ತದೆ. ದಕ್ಷಿಣದ ಪೀಠಭೂಮಿ, ಕಡಿಮೆ ಮಳೆ ಬೀಳುವ ಪ್ರಾಂತ್ಯದಲಿ ರಾಗಿ ಹೆಚ್ಚಾಗಿ ಬೆಳೆಯುತ್ತಾರೆ. ಆದರೆ ಹೈದ್ರಾಬಾದ ಕರ್ನಾಟಕದ ಭಾಗದಲ್ಲಿ ರಾಗಿ ಬೆಳೆ ಕಡಿಮೆಯಾಗಿ ಬೆಳೆಯಲಾಗುತ್ತದೆ.

ಕನ್ನಡ ಕಾವ್ಯಗಳಲ್ಲಿ ಈ ಧಾನ್ಯಗಳ ಉಲ್ಲೇಖಗಳು ಅನೇಕ ಕಡೆ ಕಾಣಸಿಗುತ್ತದೆ. ವಡ್ಡಾರಾಧನೆಯ ಒಂದು ಕಥೆಯಲ್ಲಿ 'ಪ್ರಥಮ ದಿವಸದೊಳೆ ಪಾರಕಿನ ಕೂಟುಮವರೆಯ ....' ಎನ್ನಲಾಗಿದೆ. ಧರ್ಮಾಮೃತದಲ್ಲಿ '........... ಸಾವೆಯನಲ್ಲಿ ಬಿತ್ತುವರಂತೆ...............' ಎಂದೂ, ಸೊಡ್ಡಳ ಬಾಚರಸನ ವಚನದಲ್ಲಿ '.......... ನವಣೆ ಹಾರಕ ಬರಗು ಸಾವೆ ದೂಸಿಗಳೆಂಬುಧಾನ್ಯ ಐವತ್ತು ಖಂಡುಗ...........' ಹೀಗೆ ನವಣೆ, ರಾಗಿ, ಸಾವೆ, ಹಾರಕ, ಬರಗುಗಳ ಉಲ್ಲೇಖ ಕಂಡುಬರುತ್ತವೆ.

ಕನಕದಾಸರ ರಾಮಧಾನ್ಯ ಚರಿತ್ರೆಯಲ್ಲಿ ರಾಗಿ ಮತ್ತು ಭತ್ತದ ಹೋಲಿಕೆಯಿಂದ ರಾಘವನ ಕಥೆಯನ್ನು ಬರೆದಿದ್ದಾರೆ. ಇಲ್ಲಿ ರಾಗಿ ರಾಘವನಾಗಿ ಮೆರೆದು ಎಲ್ಲರ ನೆಚ್ಚಿನ ಆಹಾರ ಧಾನ್ಯವಾಗಿದೆ.

'ಎಲ್ಲಾ ನವಧಾನ್ಯದಲಿ ಈತನೆ, ಬಲ್ಲಿದನು, ಹುಸಿಯಲ್ಲಿ ಬಡವರ
ಬಲ್ಲಿದರನಾರೈದು ಸಲಹುವನಿವಗೆ ಸರಿಯುಂಟೆ ।
ನೆಲ್ಲಿನಲಿ ಗುಣವೇನು, ಭಾಗ್ಯಾದಿ ಬಲ್ಲಿದರ ಪತಿಕರಿಸುವನು ಅವ ।
ನಲ್ಲಿ ಸಾರವ ಕಾಣೆನೆಂದನು ಕಪಿಲಮುನಿ ನಗುತಾ'

ಎಂದು ಹೇಳುವಲ್ಲಿ ರಾಗಿಯ ಮಹತ್ವ ತಿಳಿದುಬರುತ್ತದೆ. 'ರಾಗಿ ಉಂಡವ ನಿರೋಗಿ' ಎಂಬ ಗಾದೆಯನ್ನು ನೋಡಬಹುದಾಗಿದೆ. ರಾಗಿಯ ಮುದ್ದೆ ಬಸಿಸಾರು ಎಂಥವರ ಬಾಯಲ್ಲಿಯೂ ನೀರೂರುವಂತೆ ಮಾಡುತ್ತದೆ. ರಾಗಿ, ನವಣೆ, ಸಾವೆ, ಹಾರಕ ಬಡವರ ಪಾಲಿನ ಭಾಗ್ಯಗಳು. ಕನ್ನಡ ಶಾಸನವೊಂದರಲ್ಲಿ ರಾಗಿ ಪೂಜೆಯ ಉಲ್ಲೇಖ ಕಂಡುಬರುತ್ತದೆ. ರಾಗಿಮರೂರು ಶಾಸನದಲ್ಲಿ "............ ರಾಗಿಮರೂರ ಗ್ರಾಮದ ರಘುನಾಥರಾಯರಿಗೆ ರಾಗಿ ಪೂಜೆ ಗಂಧ ಪುಷ್ಪ ....".[೩೩] ಈ ಭಾಗದಲ್ಲಿ ಪ್ರಮುಖ ಬೆಳೆಯಾಗಿರುವುದರಿಂದ ರಾಗಿಯ ಪೂಜೆಯನ್ನು ಮಾಡುತ್ತಿರುವ ಅಂಶ ಕಂಡುಬರುತ್ತದೆ. ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಶ್ರೀಘನಮಠಶಿವಯೋಗಿಗಳ ಅಭಿಮತದಂತೆ ಮೆಣಸಿನ ಗಿಡ ನಾಟುವುದು, ಬಳ್ಳೊಳ್ಳಿ ಬಿತ್ತನೆ, ಹತ್ತಿ ಬಿತ್ತನೆ, ಬಿಳಿಜೋಳ, ಗೋಧಿ, ಕಡಲೆಗಳ ಬಿತ್ತನೆ ಕ್ರಮವನ್ನು ಕುರಿತು ಈ ಕೆಳಗಿನಂತೆ ಸಂಗ್ರಹಿಸಿ ಹೇಳಲಾಗಿದೆ.

ಮೆಣಸಿನಗಿಡ : ಎರೆಯ ಹೊಲದಲ್ಲಿ ಬೆಳೆಯುವ ಮುಂಗಾರಿ ಬೆಳೆಯಾಗಿದೆ. ಷಡ್ರಸಗಳಲ್ಲೊಂದಾದ ಕಾರವನ್ನು ಒದಗಿಸುವುದು ಮೆಣಸು. ಇದರಲ್ಲಿ ಹಲವಾರು ಬಗೆಗಳಿವೆ. ಗುಂಟೂರು, ಬ್ಯಾಡಗಿ, ಕರಿಕಾಯಿ, ಬಿಳಿಕಾಯಿ, ಗಾಂಧಾರಿ, ಜಾಲಕಾಯಿ ಮುಂತಾದವು. ಏರು ಮಡಿ ಮಾಡಿ ಮುಗ್ಗ ಹತ್ತದ ಬೀಜತಂದು, ಮಡಿಯಲ್ಲಿ ಹರವಿ ತೆಳುವಾಗಿ ಕೊಟ್ಟಿಗೆಯ ಗೊಬ್ಬರಹಾಕಿ, ಎಲೆಯ ತೊಪ್ಪಲು ಅಂದರೆ ಬೇವು, ತೊಗಚಿ, ಹೊಂಗೆಯನ್ನು ಮುಚ್ಚಿ ನೀರು ಹಾಕಿ ಬೆಳೆಸಬೇಕು. ಸಸಿಗಳ ನಾಟಿಯ ವಿಧಾನವನ್ನು ಈ ಕೃತಿಯಲ್ಲಿ ಹೀಗೆ ಹೇಳಲಾಗಿದೆ. '..........ಆ ಗಿಡಗಳ ಮಧ್ಯದಲ್ಲಿ ಸಣ್ಣಕುಡುಗಳಿಂದ ಎಡಿಯ

ಹರಗುವದಕ್ಕೆ ಅಡಚಣೆ ಆಗದ ಹಾಗೆ ಮೊದಲೇ ಬೇತು ನೋಡಿ, ಒಂದು ಹುಡಿಯನ್ನು ತೆಗೆದುಕೊಂಡು ಅದಕ್ಕೆ ಒಂದೂವರೆ ಮೊಳಕ್ಕೆ ಒಂದರಂತೆ ಕಡ್ಡಿಯ ಹಾಕಿ ಗುರುತು ಮಾಡಿಕೊಂಡು, ಆ ನೂಲಿಕೆಯ ಆಚೆಗೊಂದು, ಈಚೆಗೊಂದು ಗೂಟವನ್ನು ಹೊಡೆದು, ಕಟ್ಟಿ ಆಗುರ್ತಿಗೆ ಸರಿಯಾಗಿ ಚೋಟು ತಗ್ಗಾಗುವ ಹಾಗೆ, ಕೆದರಿ ಅದರಲ್ಲಿ ನೀರು ಹಾಕಿ, ಎರಡೆರಡು ಮೆಣಸಿನ ಅಗಿಗಳನ್ನು ಹಚ್ಚಿ ಗಟ್ಟಿಯಾಗಿ ಕೂಡ್ರಿಸಬೇಕು. ಇದರಂತೆ ಗಿಡಗಳು ಯಾಸಿಯಾಗದಂತೆ ಅವರಸ, ಚೌರಸ, ಸಾಲುಸಾಲು ಕಾಣುವಂತೆ ಗಿಡಗಳನ್ನು ದಾರ ಹಿಡಿದು ಹಚ್ಚಬೇಕು'.[ಪು–೬೭] ಎಂದು ಶಾಸ್ತ್ರಕಾರನ ಅಭಿಮತವಾಗಿದೆ. ಅಲ್ಲದೆ ನೇಗಿಲಿನಿಂದ ಒಂದು ಕಡೆಯ ಸಾಲುಗಳನ್ನು ಹೊಡೆದು, ಸಾಲುಸಾಲುಗಳ ಮಧ್ಯೆ ಎಡೆ ಹರಗಲು ಬರುವಂತೆ ಒಂದೂವರೆ ಅಡಿ ಅಂತರದ ಉದ್ದಸಾಲುಗಳನ್ನು ಹೊಡೆದು, ಅಡ್ಡಸಾಲುಗಳನ್ನು ಒಂದೂವರೆ ಅಡಿ ಅಂತರ ಇರುವಂತೆ ಎರಡು ತಾಳಿನ ನೇಗಿಲಿನಿಂದ ಹೊಡೆದು ಮೆಣಸಿನ ಸಸಿಗಳನ್ನು ನಾಟಿಸಲಾಗುತ್ತದೆ.

ಬಳ್ಳೊಳ್ಳಿ : ಬಳ್ಳೊಳ್ಳಿಯ ಬಿತ್ತನಗೆ ಯೋಗ್ಯವಾದ ಭೂಮಿ ತಂಪು ಎರೆ. ಹೊಲವನ್ನು ಚೆನ್ನಾಗಿ ಹರಗಿ, ಗೊಬ್ಬರ ಹಾಕಿ ದೊಡ್ಡ ದೊಡ್ಡ ಮಡಿಗಳನ್ನು ಮಾಡಿ, ಮಳೆಯ ನೀರು ಹರಿದುಹೋಗದಂತೆ ಸುತ್ತಲೂ ಬದು ಕಟ್ಟಿ, ಭೂಮಿಯ ಸಿದ್ದತೆಯನ್ನು ಮಾಡಿಕೊಂಡು ಬಿತ್ತುವ ವಿಧಾನ ಹೇಗೆಂದರೆ 'ನಾಲ್ಕು ತಾಳಿನ ಕೂರಿಗೆ ದಿಂಡಿಗೆ ಐದು, ಆರು ಬೆರಳಿಗೊಂದು ತಾಳು ಹಾಸಿ ಬುಕ್ಕಾ ಕಟ್ಟಿ ನಾಲ್ಕು ಬೆರಳಿಗೊಂದು ಕಾಳು ಬೀಳುವಂತೆ ಅಥವಾ ಐದು ಬೆರಳು, ಆರು ಬೆರಳಿಗೊಂದು ಕಾಳು ಬೀಳುವಂತೆ ಕಡಲೀ ಬಿತ್ತಿ ಶೇಂಗಾದ ಬಿತ್ತಿಗೆಯ ಹಾಗೆ ಬಿತ್ತಿ ಅದರ ಮೇಲೆ ಹರಗಿ ಮತ್ತು ಅಡ್ಡ ಒಮ್ಮೆ ಇದರಂತೆ ಬಿತ್ತಿ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಕ್ಕೆ ಅವರಸ– ಚವರಸ ಎರಡು ಸಾಲು ಬಿತ್ತಿದಲ್ಲಿ ಸ್ವಲ್ಪಾದರೂ ಭೂಮಿ ಹೋಗದೆ ಚೆನ್ನಾಗಿ ಬೆಳೆಯುವುದು. ಮುಂಗಾರಿಯ ಕಾಲದಲ್ಲಿ ಎರೆಯ ಹೊಲಗಳಲ್ಲಿ ಬಿತ್ತಬೇಕಾದರೆ ಹೊಂಗಲ ಬಳ್ಳೊಳ್ಳಿಯನ್ನೇ ಬಿತ್ತಬೇಕು'.[ಪು–೬೮] ಎಂದು ಘನಮಠ ಶ್ರೀಯವರು ಸಲಹೆ ಮಾಡಿದ್ದಾರೆ. ಬೆಳ್ಳೊಳ್ಳಿಯ ಜೊತೆಗೆ ಮೆಂತೆ, ಸಾವೆ ಕಲಸಿ ಬಿತ್ತುತ್ತಾರೆ. ಕೆಲವರು ಮೆಣಸಿನಗಿಡ, ಬದನೆಯ ಗಿಡಗಳನ್ನು ಹಚ್ಚಿ ಬೆಳೆಯುತ್ತಾರೆ. ಇಂತಹ ತಂಪು ಎರೆಗಳಲ್ಲಿ ಜೀರಿಗೆ, ಶಾಜೀರಿಗೆ, ಸಬ್ಬಸಗಿ, ಸೋಪು, ಗೆಜರಿ ಬೀಜಗಳನ್ನು ಮುಂಗಾರಿನಲ್ಲಿ ಬಿತ್ತುತ್ತಾರೆ. ಎನ್ನಲಾಗಿದೆ.

ಹತ್ತಿ : ಮುಂಗಾರಿ ಹಿಂಗಾರಿಗಳ ಮಧ್ಯದ ಬೆಳೆ ಹತ್ತಿಯಾಗಿದೆ. ಅನೇಕ ವಿಧದ ಹತ್ತಿಗಳುಂಟು. ಅವುಗಳಲ್ಲಿ ಜವಾರಿಹತ್ತಿ, ಇಲಾಯಹತ್ತಿ, ಗಂಗಿಹತ್ತಿ, ಕೆಂಪುಹತ್ತಿ ಮುಂತಾದವು. ಜವಾರಿ, ವಿಲಾಯ ಹತ್ತಿಯನ್ನು ಆಶ್ಲೇಷ ಮಳೆಯಲ್ಲಿ ಬಿತ್ತುತ್ತಾರೆ. ಗಂಗಿಹತ್ತಿ, ಕೆಂಪುಹತ್ತಿಯನ್ನು ಮೃಗಾಶಿರ, ಆರಿದ್ರ, ಪುಷ್ಯ ಮಳೆಗಳಲ್ಲಿ ಮುಂಗಾರಿಯಲ್ಲಿ ಬಿತ್ತುತ್ತಾರೆ. ಕಪ್ಪು ಮೊರಡಿ, ಕಪ್ಪುಕೇಸರಿ, ಕೆಂಪುಮಸಾರಿ, ಎರೆಯಭೂಮಿ, ವಂಡುಭೂಮಿ ಉತ್ತಮ. ಕಬೀರನ ಮಗ ಕಮಾಲನು ತನ್ನ ವಚನವೊಂದರಲ್ಲಿ ಹತ್ತಿಯ ಫಲದ ಶ್ರೇಷ್ಠತೆ ಕುರಿತು ಹೀಗೆ ಹೇಳುತ್ತಾನೆ.

ಕಾಫೇಕಫಲಂ । ಭುಜೇಕಬಲಂ ॥

ನಯನೇಕತೇಜಂ । ಮೇಘೇಕಜಲಂ ॥

ಅಂದರೆ ಫಲಗಳಲ್ಲಿ ಹತ್ತಿಯ ಫಲ ಶ್ರೇಷ್ಠವೆಂದೂ, ಬಲದಲ್ಲಿ ಭುಜಬಲ, ಸರ್ವತೇಜದಲ್ಲಿ ಕಣ್ಣಿನ ತೇಜಸ್ಸು, ಸರ್ವಜಲದಲ್ಲಿ ಮಳೆ ಜಲವೇ ಶ್ರೇಷ್ಠವೆಂದು ಹೇಳುತ್ತಾನೆ. ಆದರೆ ಕಬೀರನು ಮಾವಿನ ಫಲ, ಅಣ್ಣತಮ್ಮಂದಿರನ ಬಲ, ನದಿಯಜಲ, ಸೂರ್ಯನ ತೇಜಸ್ಸು ಶ್ರೇಷ್ಠವೆಂಬ ವಾದಕ್ಕೆ ಪ್ರತಿಯಾಗಿ ಕಮಾಲನು ಈ ಮೇಲಿನಂತೆ ಹೇಳುತ್ತಾನೆ.

ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಹತ್ತಿಯ ಬಿತ್ತನೆ ವಿಧಾನ ಕುರಿತು ಈ ರೀತಿ ಹೇಳಲಾಗಿದೆ. 'ನಾಲ್ಕು ತಾಳಿನ ಕೂರಿಗೆಯ ಮಾಡಿಸಿ ಮಂಡಿಯನ್ನು ಕಟ್ಟಿ, ಆ ಮಂಡಿಯ ಎರಡು ತೂತುಗಳಿಗೆ ಬೆಣೆಯನಿಟ್ಟು ಮುಚ್ಚಿ, ಇಬ್ಬರು ಹತ್ತಿಯ ಕಾಳು ಅಕ್ಕಡಿಯ ಹಾಕಬೇಕು. ಒಬ್ಬನು ಕೂರಿಗೆಯಿಂದ ನವಣೆಯನ್ನು ಬಿತ್ತಬೇಕು. ಹೀಗೆ ಬಿತ್ತಿದರೆ ಒಂದು ಸಾಲು ನವಣೆ, ಒಂದು ಸಾಲುಹತ್ತಿಯಾಗಿ ಚೆನ್ನಾಗಿ ಬೆಳೆದು ನವಣೆಯ ಬೆಳೆಯು ತೀವ್ರವಾಗಿ ಕೈಗೆ ಬರುವುದು..........'[ಪು-೭೩]ಎನ್ನುತ್ತಾರೆ. ಸಾಮಾನ್ಯವಾಗಿ ಬಳ್ಳಾರಿ ಪ್ರಾಂತ್ಯದಲ್ಲಿ ಈ ರೀತಿ ಬೆಳೆಯುವ ಸಂಪ್ರದಾಯವಿದ್ದು. ನವಣೆ ಬಿತ್ತಿದ ಹಾಗೆ ಹತ್ತಿಯ ಹೊಲದಲ್ಲಿ ಎಳ್ಳು ಬಿತ್ತುತ್ತಾರೆ, ಹತ್ತಿಯ ಅಕ್ಕಡಿ ಹಾಕಲಾಗುತ್ತದೆ.

ಬಿಳಿಜೋಳ : ಧಾನ್ಯಗಳಲ್ಲಿ ಬಿಳಿಜೋಳ ರುಚಿಕರವಾದುದು. ಇದು ಏಕದಳ ಸಸ್ಯವಾಗಿದೆ. ಏಕದಳವೆಂದರೆ ಬೀಜ ಮೊಳೆಯುವಾಗ ಬೀಜ ಭಾಗ ಮೇಲಕ್ಕೆ ಕಾಣಿಸದೆ ಸೂಜಿಯಂತೆ ಒಂದೇ ಆಗಿ ಮೇಲಕ್ಕೆ ಬಂದು ಕಾಂಡ, ಎಲೆ ಬಿಟ್ಟು ನಂತರ ಗೊಂಚಲು ಕಾಳುಗಳಾಗುತ್ತವೆ. ಭತ್ತ, ರಾಗಿ, ಜೋಳ, ಗೋಧಿ, ಸೆಜ್ಜೆ, ನವಣೆ, ಹಾರಕ, ಸಾವೆ ಮುಂತಾದವು ಏಕದಳ ಸಸ್ಯಗಳು. ಬಿಳಿಜೋಳದಲ್ಲಿ ಅನೇಕ ಕುಲಗಳುಂಟು. ಅವುಗಳಲ್ಲಿ ದಪ್ಪಕಾಳಿನ ಬಿಳಿಯ ಬಣ್ಣದ ಗಟ್ಟಿತೆನೆಯ ಬೀಜಗಳು ಉತ್ತಮ. ಎರೆಯ ಹೊಲಗಳಲ್ಲಿ ಮುಂಗಾರಿಗಿಂತ ಹಿಂಗಾರಿಯಲ್ಲಿಯೇ ಉತ್ತಮ ಬೆಳೆಬರುತ್ತದೆ. ಕೊಟ್ಟಿಗೆಯ ಗೊಬ್ಬರಹಾಕಿ, ಮಡಿಕೆ ಹೊಡೆದು ಮೂರು ಸಾಲು ಬೇಸಿಗೆಯಲ್ಲಿ ಹರಗಿ, ಮಳೆಯಾದ ಮೇಲೆ ಮತ್ತೆ ಎರಡು ಸಾಲು ಹರಗಿ ಬಿತ್ತನೆಗೆ ಸಿದ್ದಮಾಡಬೇಕು. ಬಿತ್ತನೆ ವಿಧಾನ ಹೇಗೆಂದರೆ '..........ಕೂರಿಗೆಯ ಹಿಂದೆ ಮೂರು ತಾಳಿನ ಕೂರಿಗೆಯಾದರೆ ಮೂರು ಮಂದಿ, ನಾಲ್ಕು ತಾಳಿನ ಕೂರಿಗೆಯಾದರೆ ನಾಲ್ಕು ಮಂದಿ, ಹುಡುಗರನ್ನಾಗಲಿ, ಹೆಂಗಸರನ್ನಾಗಲಿ, ಹಚ್ಚಿ ತಾಳಿಗೆ ಬುಕ್ಕಾ ಕಟ್ಟಿ ಅವರ ಉಡಿ ಒಳಗೆ ಗೊಬ್ಬರವನ್ನು ಕಟ್ಟಿಸಿ, ಮುಂದೆ ಕೂರಿಗೆಯಿಂದ ಜೋಳವನ್ನು ಬಿತ್ತುತ್ತ ಹೋದ ಹಾಗೆ, ಹಿಂದೆ ಸಾಲಿನಲ್ಲಿ ಗೊಬ್ಬರ ಬೀಳುವ ಹಾಗೆ, ಬುಕ್ಕಾದಿಂದ ಗೊಬ್ಬರವನ್ನು ಹಾಕುತ್ತಾ ಅದರ ಹಿಂದೆ ಕುಂಟೆಯಿಂದ ಬೆಳೆಸಾಲು ಹರಗಿ ಸಾಲು ಮುಚ್ಚುತ್ತಾ ಹೋಗಬೇಕು'.[ಪು-೭೪] ಎಂದು ಶ್ರೀಘನಮಠ ಶ್ರೀಗಳು ಸಲಹೆ ನೀಡುತ್ತಾರೆ.

ಬಿಳಿಜೋಳವನ್ನು ಉತ್ತರಿ, ಹಸ್ತ, ಚಿತ್ತ, ಸ್ವಾತಿ, ವಿಶಾಖೆಯವರೆಗೂ ಬಿತ್ತಬಹುದು. ಹುಬ್ಬಿಯ ಎರಡು ಚರಣದಿಂದ ಉತ್ತರಿಯ ಅಂತ್ಯದವರೆಗೂ ಬಿತ್ತುವುದು ಉತ್ತಮ. ಉತ್ತಮ ಬೀಜಗಳನ್ನು ತಂದು ಹದಬೆದೆಯ ಕಾಲ ತಿಳಿದು ಬಿತ್ತಿದರೆ ಹೆಚ್ಚು ಇಳುವರಿ ಪಡೆಯಬಹುದು.

ಗೋಧಿ : ಗೋಧಿಯು ಎಲ್ಲಾ ಭೂಖಂಡಗಳಲ್ಲಿ ಬೆಳೆಯುತ್ತದೆ. ಕೆಲವು ದೇಶಗಳಲ್ಲಿ ಗೋಧಿಯನ್ನ ವಿಶೇಷವಾಗಿ ಬೆಳೆಯುತ್ತಾರೆ. ಹಾಗೂ ಎಲ್ಲಾ ಹವಮಾನಗಳಲ್ಲಿ ಗೋಧಿ ಬೆಳೆಯಲು ಬರುವುದಿಲ್ಲ. ಉತ್ತರ ಭಾರತದಲ್ಲಿ ಅಂದರೆ ಚಳಿ ಹೆಚ್ಚಿರುವ ಪ್ರದೇಶದಲ್ಲಿ ವಿಶೇಷ ಬೆಳೆಯಾಗಿದೆ. ಗೋಧಿಯಲ್ಲಿ ಉಮಿಗೋಧಿ, ಖಂಡ್ಗಗೋಧಿ ಎಂದು ಎರಡು ಬಗೆ ಇವೆ. ಮಡಿಕಟ್ಟು, ಎರೆಯ ಹೊಲ ಉತ್ತಮ. ಗೋಧಿಯ ಬಿತ್ತುವ ಹೊಲವನ್ನು ಮಡಿಕೆ ಹೊಡೆದು ಬೇಸಿಗೆಯಲ್ಲಿ ಮೂರು ಸಾಲು ಹರಗಬೇಕು. ಗೋಧಿ ಬಿತ್ತುವ ಹೊಲವನ್ನು ಏಳು ಸಾಲು ಹರಗಿದರೆ ವಿಶೇಷವು. ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಈ ರೀತಿ ಹೇಳಲಾಗಿದೆ.'..........ಬೇಸಿಗೆಯಲ್ಲಿ ಮೂರು ಸಾಲು ಮಳೆಯಾದ ಮೇಲೆ ಸಮಯವನ್ನರಿತು ಹೊಂಬಿಸಿ ಒಳಗೆ ಮೂರು ಸಾಲು ನಾಲ್ಕು ಸಾಲು ಹರಗಿದ ಮೇಲೆ ಗೋಧಿಯನ್ನು ಬಿತ್ತುವ ಸಮಯಕ್ಕೆ ನೊಲ್ಲಿ ಮೊದಲಾದ ಹುಲ್ಲು ಸದಿಯು ನಾಟಿದ್ದರೆ ಮತ್ತೊಂದು ಸಾಲು ಹರಗಿ ಗೋಧಿಯನ್ನು

ಬಿತ್ತಬೇಕು.........'ಗೋಧಿಯನ್ನು ಬಿತ್ತುವಾಗ ಅದರ ಸಂಗಡ ಕುಸುಬಿಯ ಅಕ್ಕಡಿ ಹಾಕುತ್ತಾರೆ. ಅಲ್ಲದೇ ಬದು ಸುತ್ತಲೂ ಕುಸುಬಿಯನ್ನು ಹಾಕಲಾಗುತ್ತದೆ. ಎರೆಯಭೂಮಿ, ವಂಡುಭೂಮಿ, ಮಡಿಯಭೂಮಿ ಮತ್ತು ಕರಲುಭೂಮಿಯಲ್ಲಿ ಗೋಧಿಯನ್ನು ಹಸ್ತಮಳೆಯಲ್ಲಿ ಬಿತ್ತುವುದು ಉತ್ತಮ. ಅನಿವಾರ್ಯವಾಗಿ ಅಡಚಣೆಯಾದರೆ ಚಿತ್ತಿ, ಸ್ವಾತಿ ಮಳೆಯಲ್ಲಾದರು ಬಿತ್ತಬಹುದು. ಕೆರೆಯಮಡಿ, ಹೊಳೆಯ ಮಡಿಗಳಾದರೆ ಸ್ವಾತಿ, ವಿಶಾಖಗಳಲ್ಲಿಯೂ ಬಿತ್ತಬಹುದು. 'ಎರೆಯನ್ನು ಮಾಡಿದವನೆ ದೊರೆಯಾಗುವನು' ಎಂಬ ಗಾದೆಯ ಮಾತು ಪ್ರಸಿದ್ಧಿಯನ್ನು ಪಡೆದಿದೆ.

ಕಡಲೆ : ಕಡಲೆಯು ಗೋಧಿಯ ಹಾಗೆ ಮೃಷ್ಟಾನದಲ್ಲಿ ಉತ್ತಮ ಆಹಾರವು. ತ್ರಾಣವು, ಪುಷ್ಟಿಯನ್ನು ನೀಡುತ್ತದೆ. ಕಪ್ಪು ಮಣ್ಣಿನ ಭೂಮಿಯಲ್ಲಿ ಚಳಿಗಾಲದಲ್ಲಿ ಅಕ್ಟೋಬರ ಎರಡನೇ ವಾರದಿಂದ ನವಂಬರ ಎರಡನೆ ವಾರದವರೆಗೆ ಹಿಂಗಾರಿ ಬೆಳೆಯಾಗಿ ಬಿತ್ತನೆ ಮಾಡುತ್ತಾರೆ. ಎರೆಯಭೂಮಿ, ವಂಡುಭೂಮಿ, ಮಡಿಕಟ್ಟು ನೆಲದಲ್ಲಿ ಬಿತ್ತುತ್ತಾರೆ. ಬಿತ್ತನೆಯ ವಿಧಾನ ಹೇಗೆಂದರೆ '...............ನೇಗಿಲುಗಳಿಗೆ ಹಿಂದೆ ಸಡ್ಡೆಯ ಕಟ್ಟಿ ಬಿತ್ತುತ್ತಾರೆ. ಪೂರ್ವ-ಪಶ್ಚಿಮಕ್ಕೆ ಒಂದಾವರ್ತಿ ಮತ್ತೆ ಉತ್ತರ-ದಕ್ಷಿಣಕ್ಕೆ ಮತ್ತೊಂದಾವರ್ತಿ ಬಿತ್ತಿ, ಕುಂಟೆಯಿಂದ ಹರಗಿ ಕೊರಡು ಹೊಡೆಯುತ್ತಾರೆ. ಹೀಗೆ ಬಿತ್ತುವುದರಿಂದ ಹೊಲದ ತುಂಬ ಬೀಜ ಹರವಿದಂತಾಗಿ ನಾಲ್ಕು-ಐದು ಇಂಚಿಗೆ ಒಂದರಂತೆ ಸಸಿಗಳು ಹುಟ್ಟುತ್ತವೆ'. ಖುಷ್ಕಿಬೆಳೆಯಾದರೆ ಒಂದು ಎಕರೆಗೆ ನಾಲ್ಕು ಕ್ವಿಂಟಾಲ ಇಳುವರಿ ಬರುತ್ತವೆ. ನೀರಾವರಿ ಯಾದರೆ ಎಂಟರಿಂದ ಹತ್ತು ಕ್ವಿಂಟಾಲ್ ಬೆಳೆ ಬರುತ್ತದೆ.

ಅಗಸಿ ಹಿಂಗಾರಿ ಧಾನ್ಯವು. ಎರೆಯ ಭೂಮಿಯಲ್ಲಿ ಸಣ್ಣ ಉಸುಕು ಅಥವಾ ಸಣ್ಣ ಮಣ್ಣು ಕಲಸಿ ಬಿತ್ತುತ್ತಾರೆ. ಸಣಬು, ಸಿರಂಜಿ, ನೀಲಿಯ ಬೀಜಗಳನ್ನು ಬಿತ್ತಿ ಬೆಳೆಯ ಮಾಡಿಕೊಳ್ಳುವ ವಿಷಯ ಕುರಿತು ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಮಾಹಿತಿ ದೊರೆಯುತ್ತದೆ. ಈ ಬೆಳೆಗಳಿಗೆ ಎರೆಯ ಹೊಲಗಳೇ ಶ್ರೇಷ್ಠವಾದವು. ಉತ್ತಮ ಮಳೆಯಾಗದಿದ್ದರೆ ಎರೆಯ ಹೊಲಗಳು 'ಎರಿ ಮಳೆಯಾಗದಿದ್ದರೆ ಬಾಯಿತೆರಿ' ಎಂಬ ಗಾದೆ ಪ್ರಚಲಿತದಲ್ಲಿದೆ. ಒಟ್ಟಾರೆಯಾಗಿ ಉತ್ತಮ ಮಳೆಯಾದರೆ ಈ ಬೆಳೆಗಳನ್ನು ಬಿತ್ತಿ ಬೆಳೆಯಬಹುದು. ತೋಟದ ಬೆಳೆಗಳಲ್ಲಿ ಕೆಲವು ಬೆಳೆಗಳನ್ನು ಬಿತ್ತುವ ವಿಧಾನ ಕುರಿತು ಶ್ರೀ ಘನಮಠ ಶಿವಯೋಗಿಗಳು ಈ ರೀತಿ ಹೇಳಿರುವರು. ಕಸಕಸಿ ಇದನ್ನು ಮಡಿಮಾಡಿ ಚೆಲ್ಲುತ್ತಾರೆ. ಅಥವಾ ಕೂರಿಗೆಯಿಂದ ಬಿತ್ತುತ್ತಾರೆ. ತೋಟದ ಭೂಮಿಯಲ್ಲಿ ಗೊಬ್ಬರವನ್ನು ಹಾಕಿ ಎರಡು ಸಾಲು ಮಡಿಕೆ ಹೊಡೆದು, ಪುನಃ ಗೊಬ್ಬರವನ್ನು ಹಾಕಿ ಮೂರು ಸಾಲು ಹರಗಿ ಭೂಮಿಯ ಸಿದ್ಧತೆ ಮಾಡಿಕೊಂಡು ಹೀಗೆ ಬಿತ್ತಬೇಕು. '..................ಕೂರಿಗೆಯಿಂದ ಬಿತ್ತಬೇಕಾದರೆ ಒಣಮಣ್ಣಿನಲ್ಲಿ ಒಂದು ಸೇರು ಕಸಕಸಿಯಲ್ಲಿ ಇಪ್ಪತ್ತು ನಾಲ್ಕು ಸೇರು ಸಣ್ಣ ಉಸುಕನ್ನು ಕೂಡಿಸಿ, ನಾಲ್ಕು ತಾಳಿನ ಕೂರಿಗೆಯಿಂದ ಹೌರಗೆ ಬಿತ್ತಿ ಮಡಿಯನ್ನು ಮಾಡಿ ಚೆನ್ನಾಗಿ ನೀರು ಹೋಗುವಹಾಗೆ ಕಾವಲಿಗಳನ್ನು ಮಾಡಿಕೊಂಡು ನೀರು ಬಿಟ್ಟು ಎಲ್ಲಾ ಕಾವಲಿಗಳಲ್ಲಿ ಉಳ್ಳಿಯ ಅಗಿಗಳನ್ನು ಹಚ್ಚಬೇಕು'. ಎನ್ನುತ್ತಾರೆ.

ಜೀರಿಗೆಯನ್ನು ಮುಂಗಾರಿ ಕಾಲದಲ್ಲಿ ಬೆಳೆಯುತ್ತಾರೆ. ತೋಟದಲ್ಲಿ ಜೀರಿಗೆಯನ್ನು ಬಿತ್ತುವ ಭೂಮಿಯು ಜಿರಾಯುತ್ತದಲ್ಲಿ ಬೈಲು ಹೊಲಗಳಲ್ಲಿಯಾಗಲಿ ಅಥವಾ ತೋಟಗಳಲ್ಲಿ ಆಗಲಿ ಮೊದಲೂ ಗೊಬ್ಬರವನ್ನು ಹಾಕಿ ಎರಡು ಸಾಲು ಮಡಿಕೆಯನ್ನು ಹೊಡೆದು ಮೂರು ಸಾಲು ಚೆನ್ನಾಗಿ ಹರಗಿ ಬಿತ್ತಲು ಸಿದ್ಧತೆಮಾಡಿಕೊಂಡು ಜೀರಿಗೆ, ಶಾಜೀರಿಗೆ ಬಿತ್ತನೆ ಮಾಡುವ ವಿಧಾನವನ್ನು ಕುರಿತು ಶ್ರೀಘನಮಠ ಶಿವಯೋಗಿಗಳು ಹೀಗೆ ಹೇಳುತ್ತಾರೆ. '.........ನಾಲ್ಕು ತಾಳಿನ ಕೂರಿಗೆಯಿಂದ ಒಂದು ಸೇರು

ಅಳತೆಯ ಮಾಪಿನ ಜೇರಿಗೆಯಲ್ಲಿ ಎಂಟು ಸೇರು ಅಳತೆಯ ಮಾಪಿನ ಸಣ್ಣ ಉಸುಕನ್ನು ಕೂಡಿಸಿ ಬಿತ್ತಬೇಕು. ಹಾಗೂ ತೋಟಗಳಲ್ಲಿ ಕೂರಿಗೆಯಿಂದ ಬಿತ್ತಿ ಮಡಿ ಮಡಿ ನೀರು ಬಿಟ್ಟರೂ ಬರುತ್ತದೆ. ಅಥವಾ ಮಡಿಗಳನ್ನು ಮಾಡಿ ಅಡವು ಹಾಗೂ ಅಂಗಲ ಆಗದಂತೆ ಹವಣಾಗಿ ಬೀಜಗಳನ್ನು ಚೆಲ್ಲಿ ನೀರು ಬಿಟ್ಟರು ಬರುತ್ತದೆ'. ಎಂದು ಅಭಿಪ್ರಾಯ ಪಡುತ್ತಾರೆ.

ತೋಟಗಳಲ್ಲಿ ನೆಲ್ಲುಗದ್ದೆಗಳನ್ನು ಮಾಡಿಕೊಳ್ಳಬಹುದು. ಕೂರಿಗೆ ನೆಲ್ಲು ಬಿತ್ತಿ ಬೆಳೆಯಬಹುದು. ಕರಿಕೆ, ಜೇಕುಯಿಲ್ಲದಂತೆ ಭೂಮಿಯನ್ನು ಹಸನು ಮಾಡಿ ಬಿತ್ತಬೇಕು. ಎರಡು ಸಾಲು ಮಡಿಕೆಯನ್ನು ಹೊಡೆದು ಕುರಿಯ ತರುಬಿದರೆ ಉತ್ತಮ, ಇಲ್ಲವಾದರೆ ಪುನಃ ಗೊಬ್ಬರ ಹಾಕಿ ಮೂರು ಸಾಲು ಚೆನ್ನಾಗಿ ಹರಗಿ ಸಿದ್ದತೆ ಮಾಡಿಕೊಂಡು ಮೃಗಶಿರ ಮಳೆಯು ಕೂಡಿದ ನಾಲ್ಕನೆಯ ದಿವಸ ಒಣಮಣ್ಣಿನಲ್ಲಿಯಾದರೂ ಎರಡೆತ್ತರವಾಗಿ ಬಿತ್ತಿ, ನೀರು ಹೋಗುವ ಹಾಗೆ ಕಾವಲಿಯನ್ನು ಮಡಿಗಳನ್ನು ಚೆನ್ನಾಗಿಮಾಡಿ ಮೊಟ್ಟೆಯಿಂದ ನೀರು ಉಣಿಸಬೇಕು. ಅದೇ ಹಸಿಯಿಂದ ನಾಟಿಕೊಳ್ಳುತ್ತದೆ. ಎಂದು ಶ್ರೀಘನಮಠ ಶಿವಯೋಗಿಗಳು ತಿಳಿಸುತ್ತಾರೆ. ತೋಟದಲ್ಲಿ ನೆಲ್ಲು ಬೆಳೆಯುವ ಅವಶ್ಯಕತೆ ನಮ್ಮ ದೇಶದಲ್ಲಿಲ್ಲ; ಕಾರಣ ನೆಲ್ಲು ಬೆಳೆಯಲು ಹೇರಳವಾದ ಭೂಮಿ ಇದೆ. 'ದ್ರವಿಡಮಂಟಂ' ನ್ಯಾಯದಂತೆ ತೋಟಗಳಲ್ಲಿ ಗದ್ದೆಯನ್ನ ಮಾಡುವುದು ಸರಿಯಲ್ಲ ಎನ್ನಲಾಗಿದೆ.

ಜಾನಪದ ಕಾವ್ಯಗಳಲ್ಲಿ ಬಿತ್ತನೆ ಮತ್ತು ಕೂರಿಗೆಯ ಸಿದ್ದತೆಯನ್ನು ಕುರಿತು ತುಂಬ ಸ್ವಾರಸ್ಯಕರವಾದ ಆಚರಣೆಗಳು ಕಂಡು ಬರುತ್ತವೆ. ಬಡಗಿಯರ ಮನೆಯಲ್ಲಿ ಕೂರಿಗೆ ತುಂಬಿಸುವ ಕೆಲಸ ತುಂಬ ಶಾಸ್ತ್ರೋಕ್ತವಾಗಿ ನೆಡೆಯುತ್ತದೆ. ಬಡಿಗೇರಿಗೆ ಕೊಡುವ ಆಯದ ಜೊತೆಗೆ, ಹೆಣ್ಣು ಮಕ್ಕಳು ಆರತಿಯೊಂದಿಗೆ ಹೂವು ಹಾರ ತೆಗೆದು ಕೊಂಡು ಆತನಿಗೆ ಆಯಕೊಟ್ಟು ಕೂರಿಗೆಯನ್ನು ಪೂಜಿಸುತ್ತಾರೆ. ಅದರಂತೆ ಜನಪದ ಸಾಹಿತ್ಯದಲ್ಲಿ ಕೂರಿಗೆಯ ಕುರಿತು ತ್ರಿಪದಿಯೊಂದು ಈ ರೀತಿಯಾಗಿ ಮಾಹಿತಿಯನ್ನು ಒದಗಿಸುತ್ತದೆ.

"ಕರಿಯ ಗೊಂಗಡಿ ತಂದು ಮುರಿದು ಟೊಪ್ಪಿಗಿಮಾಡಿ
ಹೊತ್ತಾನ ಒಕ್ಕಲಿಗ ಹೆಗಲಿಗಿ । ಕೂರಿಗಿ ದಿಂಡ
ಇಟ್ಟಾನ ತನ್ನ ಮನಿ ಮುಂದ ॥".[೩೪]

ಅಲ್ಲದೆ ಮನೆಗೆ ತಂದ ಕೂರಿಗೆಯನ್ನು ಗೌರವ, ಅಪಾರ ಭಕ್ತಿಯಿಂದ ವಿಶೇಷ ಪೂಜೆಮಾಡುತ್ತಾರೆ. ಅದು ಮತ್ತೊಂದು ತ್ರಿಪದಿಯಲ್ಲಿ ಹೀಗೆ ಅಭಿವ್ಯಕ್ತವಾಗಿದೆ.

"ಕೂರಿಗಿ ಪೂಜಕ ಏನೇನ ಇಡಬೇಕ
ಜರತಾರಿ ಮಡಿಬೇಕ ಉಡುಸೋದಕ । ಲಕ್ಷ್ಮಿಗಿ
ಕುಂಬಳ ಕಾಯಿ ಬೇಕ ಒಡಿಯೋದಕ ॥".[೩೫]

ಪೂಜೆಯ ನಂತರ ಭಕ್ತಿ ಭಾವದಿಂದ ನಮಸ್ಕರಿಸಿ ಹೊಲಕ್ಕೆ ತೆಗೆದು ಕೊಂಡು ಹೋಗಿ ದಿಕ್ಕು ದೆಸೆ ನೋಡಿ ಇಡುವ ಚಿತ್ರ ಇನ್ನೊಂದು ತ್ರಿಪದಿಯಲ್ಲಿ ಹೀಗೆ ಕಂಡು ಬರುತ್ತದೆ.

"ಕೂರಿಗಿ ಹಿಡಿದಾನ ತಲಮ್ಯಾಲ ಹೊತ್ತಾನ
ಎರಿ ಹೊಲದ ದಾರಿಹಿಡಿದಾನ । ಒಕ್ಕಲಿಗ
ಗಂಗಿ ದಿಕ್ಕೀಗಿ ಇಳವ್ಯಾನ ॥".[೩೬]

ಈ ರೀತಿ ಹೊಲಕ್ಕೆ ಕೂರಿಗಿಯನ್ನು ರಾತ್ರಿ ಇಲ್ಲವೆ ಬೆಳಗಿನ ಜಾವ ಹೊಲಕ್ಕೆ ತಂದು ಬೆಳಗಿನ ಶುಭವೇಳೆಯಲ್ಲಿ ಬಿತ್ತನೆ ಪ್ರಾರಂಭಿಸುತ್ತಾನೆ. ಅಂತಹ ಅಂಶಗಳನ್ನು ಈ ಕೆಳಗಿನ ತ್ರಿಪದಿಗಳಲ್ಲಿ ಕಾಣಬಹುದಾಗಿದೆ.

"ಬೆಳ್ಳನ್ನ ಎರಡೆತ್ತು ಬೆಳ್ಳಿಯಬಾರಕೋಲ
ಬಂಗಾರ ಸಡ್ಡಿ ಬಲಗೈಯ್ಗೆ । ಹಿಡಕೊಂಡು
ಹೊನ್ನ ಬಿತ್ಯಾರ ಹೊಳಿಸಾಲೊ ॥

ಬಡವ ನಿನ್ಹೊಲದಾಗ ಇದು ಏನು ಸೋಜಿಗ
ಹವಳಗವಳೆಂಬ ಎರಡೆತ್ತು । ಅಣ್ಣಯ್ಯ
ಮಾದೇಶ ರಥವ ನಡಸ್ಯಾನೊ ॥".[೩೭]

ಬಿಳಿಯ ಎತ್ತುಗಳು ಬೆಳ್ಳಿಯ ಬಾರಕೋಲು ಬಂಗಾರಿಯ ಸಡ್ಡೆಯನ್ನು ಬಲಗೈಲ್ಲಿ ಹಿಡಿದು ಹೊನ್ನ ಬಿತ್ತುತ್ತೇವೆ. ಈ ರಥವ ನೆಡೆಸೋ ಎಂದು ಮಹಾದೇವನಿಗೆ ಬೇಡುತ್ತಾರೆ. ಬಿತ್ತುವ ಕ್ರಿಯೆ ಪವಿತ್ರ ಮತ್ತು ಶುಭಕರವೆಂದು ನಂಬಿದ್ದರು. ಹೊಲದಲ್ಲಿ ಬಿತ್ತನೆ ಮಾಡುವಾಗ ಹಬ್ಬದ ವಾತವರಣವಿದ್ದು ಸಿಹಿ ಅಡಿಗೆ ಮಾಡಿ ಉಣ್ಣುತಿದ್ದರು.

ಎಲಿಯೆಟ್ ಎಂಬ ವಿದೇಶಿ ವ್ಯಕ್ತಿಯೊಬ್ಬ ಮೈಸೂರು ಭಾಗದ ಕೃಷಿಯಲ್ಲಿ ಬಿತ್ತನೆ ವಿಧಾನ ಹೇಗಿತ್ತೆಂಬುದನ್ನು ಕುರಿತು ಹೀಗೆ ಹೇಳುತ್ತಾನೆ. "............ಇಲ್ಲಿನ ಕೂರಿಗೆ ಹನ್ನೆರಡು ಸಾಲುಗಳಲ್ಲಿ ರಾಗಿ ಬಿತ್ತಬಲ್ಲುದಾಗಿದ್ದು, ಇಂತದ್ದು ಭಾರತದಲ್ಲಿ ಇನ್ನೇಲ್ಲು ಇಲ್ಲಾ ಹನ್ನೆರಡರ ಮಧ್ಯ ಹದಿಮೂರನೇಯ ಸಾಲು ಬೆಳೆಕಾಳನ್ನು ಅದು ಬಿತ್ತುತ್ತದೆ. ಎಂದು ಅವನು ತಿಳಿದಿದ್ದಾನೆ. ಮೈಸೂರು ರೈತನ ಈ ಕೂರಿಗೆಗೆ ಸಮಾನವಾದದ್ದು ಬೇರೆಲ್ಲೂ ಇಲ್ಲಾ ಎಂದು ಹೇಳಿದ್ದಾನೆ".[೩೮]

ಬಸವಪಥ ಮಾಸಿಕ ಪತ್ರಿಕೆ ಒಂದರಲ್ಲಿ "ಉತ್ತಿ ಬಿತ್ತುವ ಮಂತ್ರ,
ಬಿತ್ತಿ ಬೆಳೆಯುವ ಮಂತ್ರ
ಸತ್ಯಾಶಿವಮಂತ್ರ ನಿನ್ಹೆಸರು ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ".[೩೯]

ಬಸವಣ್ಣನನ್ನು ಜನರು ಎತ್ತಿನ ರೂಪದ ಪರಿಕಲ್ಪನೆಯ ಮೂಲಕ ನೆನಪಿಸಿಕೊಳ್ಳುತ್ತಾರೆ. ಬಸವಣ್ಣನ ಹೆಸರು ಜನರಿಗೆ ಶಿವಮಂತ್ರವಿದ್ದಂತೆ. ಗಳೆ ಹೊಡೆಯುವ, ಬಿತ್ತುವ ಹಾಗೂ ಬಿತ್ತಿ ಬೆಳೆಯುವ ಮಂತ್ರ ಬಸವಣ್ಣನೆ ಆಗಿದ್ದಾನೆ.

ಒಟ್ಟಾರೆಯಾಗಿ ಬಿತ್ತನೆ ರೈತರಿಗೆ ಬಹುಮುಖ್ಯವಾದ ಕೆಲಸ 'ಒಂದು ದಿನದ ಅರಿಶಿಣದ ಕೂಳು ವರುಷದ ಅನ್ನ ಕೆಡಿಸಿತ್ತು ಎಂಬ ಗಾದೆ ಮಾತು, ಹದ ಬೆದೆಯನ್ನು ಕುರಿತು ಬಿತ್ತುವ ಕ್ರಿಯೆಯನ್ನು ಎಚ್ಚರಿಸುವಂತದ್ದು. ಭೂಮಿಯಲ್ಲಿಯ ಗಿಡ, ಕಂಟಿ, ಕಲ್ಲು, ಕರಿಕಿ, ಕಣಗಿಲೆ ಮತ್ತು ಮುಂತಾದ ಸದಿಗಳನ್ನು ತೆಗೆಸಿ ಹಸನು ಮಾಡಿ, ಅಗತ್ಯವಾದ ಬದುಗಳನ್ನು ಕಟ್ಟಿಕೊಂಡು ಭೂಮಿಯನ್ನು ಸಂಪಾಗಿರುವಂತೆ ಮಾಡಿಕೊಳ್ಳಬೇಕು. ಈ ರೀತಿ ಭೂಮಿಯ ತಗ್ಗು ತೆವರು ತಿದ್ದಿ ಕೊಂಡು ಕೊಟ್ಟಿಗೆ ಗೊಬ್ಬರ ಹಾಕಿ ಮಡಿಕೆ ಹೊಡೆದು, ಹರಗಿ ಮಳೆ ಬಂದ ನಂತರ ಮತ್ತೆ ಗೊಬ್ಬರ ಹಾಕಿ ಎರಡು

ಮೂರು ಸಾಲು ಹರಗಿ ಭೂಮಿಯನ್ನು ಸಿದ್ಧತೆ ಮಾಡಿಕೊಂಡು, ಮುಂಗಾರು ಮಳೆಮಾರುತಗಳು ಭೂಮಿಗೆ ಬೀಳಲೂ ನೆಲ ತಂಪಾದಾಗ ಬಿತ್ತನೆಯ ಕೆಲಸಕ್ಕೆ ಅಗತ್ಯ ಬೀಜಗಳ ಆಯ್ಕೆಮಾಡಿಕೊಂಡು, ಬಿತ್ತನೆಯ ಕಾರ್ಯದಲ್ಲಿ ರೈತರು ತೊಡಗಿಕೊಳ್ಳುತ್ತಾರೆ. ಘನ ಸರಕಾರಗಳು ಉತ್ತಮ ಬೀಜ, ಗೊಬ್ಬರ ಮತ್ತು ತಾಂತ್ರಿಕವಾದ ಸಲಹೆಗಳನ್ನು ನೀಡುವುದರ ಮೂಲಕ ರೈತರ ಬಿತ್ತನೆ ಕೆಲಸಕ್ಕೆ ಸಹಕಾರಿ ಯಾಗಬಹುದಾಗಿದೆ.

ಅಡಿಟಿಪ್ಪಣಿಗಳು

೧. ಕನ್ನಡ ವಿಷಯ ವಿಶ್ವಕೋಶ ಜಾನಪದ-ಮೈ.ವಿ.ವಿ, ಪು-೩೨೯
೨. ಸಂಕೀರ್ಣ.ವ.ಸಂ-ಸಂ- ಡಾ.ಎಂ.ಎಂ.ಕಲಬುರ್ಗಿ, ಪ-೧೭೪೫, ಪು-೬೭೩
೩. ಗದಾಯುದ್ಧ-ಗದ್ಯಾನುವಾದ-ಆರ್.ವಿ.ಕುಲಕರ್ಣಿ,ಪ-೫, ಪು-೧೮೨
೪. ಕನ್ನಡ ಭಾರತ-ಸಂ-ಎಂ.ವಿ.ಪ್ರಸನ್ನ,ಸಭಾ-ಸಂ-೬, ಪ-೮
೫. ಸಂಕೀರ್ಣ.ವ.ಸಂ-೫, ಸಂ- ಡಾ.ವೀರಣ್ಣರಾಜೂರ, ವ-೩೭೭, ಪು-೧೦೯
೬. ಸರ್ವಜ್ಞನ ವಚನಗಳು-ಸಂ-ಚನ್ನಪ್ಪುತ್ತಂಗಿ, ವ-೧೩೫೮, ಪು-೧೬೮
೭. ಧರ್ಮಾಮೃತಂ-ಸಂ-ಬಿ.ಬಿ.ಮಹೀಶವಾಡಿ, ಎಸ್.ಎಸ್.ಪಾಟೀಲ್, ಅ-೧೪, ಪು-೬೬೨
೮. ಕನ್ನಡ ವಿ.ವಿ.ಶಾಸನ-ಸಂ-೭ (ರಾಯಚೂರು ಜಿಲ್ಲೆ) ಗೊಬ್ಬೂರು-೨,ಪು-೪೭
೯. ಕನ್ನಡ ಜಾನಪದ ಗೀತೆಗಳು-ಡಾ.ಬಿ.ಎಸ್.ಗದ್ದಗಿಮಠ,ಪ-೯, ಪು-೨೮೦
೧೦. ಕೃಷಿಜ್ಞಾನ ಪ್ರದೀಪಿಕೆ-ಶ್ರೀಘನಮಠ ಶಿವಯೋಗಿಗಳು, ಪು-೧೨೪
೧೧. ಲೋಕೋಪಕಾರ-ಸಂ-ಎಚ್.ಶೇಷಯ್ಯಂಗಾರ್, ಅ-೬,ಪ-೩, ಪು-೬೨
೧೨. ಅದೇ-ಪ-೫, ಪು-೯೩
೧೩. ಕೃಷಿಜ್ಞಾನ ಪ್ರದೀಪಿಕೆ-ಶ್ರೀಘನಮಠ ಶಿವಯೋಗಿಗಳು, ಪು-೯೩
೧೪. ಅದೇ- ಪು-೪೯
೧೫. ಅದೇ- ಪು-೭೫
೧೬. ಅದೇ- ಪು-೩೫
೧೭. ಅದೇ- ಪು-೩೭
೧೮. ಅದೇ- ಪು-೩೯
೧೯. ಅದೇ- ಪು-೪೦
೨೦. ಸಂಕೀರ್ಣ.ವ.ಸಂ-ಸಂ- ಡಾ.ಎಂ.ಎಂ.ಕಲಬುರ್ಗಿ, ಪ-೧೭೪೨, ಪು-೬೭೨
೨೧. ಹೈದರಾಬಾದ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು. ಸಂ- ವಿ.ಶಿವಾನಂದ, ಪಿಠೀಕೆ, ಪು-XXXV
೨೨. ಕೃಷಿಪದಕೋಶ-ಸಂ-ಕೆ.ವಿ.ನಾರಾಯಣ, ಪು-೧೬
೨೩. ರಟ್ಟಮತಂ-ಸಂ-ಡಾ.ಎಚ್.ಶೇಷಯ್ಯಂಗಾರ್, ಪಿಠೀಕೆ, ಪು-VIII
೨೪. ಸಂಕೀರ್ಣ.ವ.ಸಂ-ಸಂ-ಡಾ.ಎಂ.ಎಂ.ಕಲಬುರ್ಗಿ, ವ-೧೭೪೨, ಪು-೬೭೩
೨೫. ಚನ್ನ.ವ.ಸಂ-ಸಂ- ಡಾ.ಬಿ.ವ್ಹಿ.ಮಲ್ಲಾಪುರ, ವ-೧೧೦೪, ಪು-೩೭೮
೨೬. ಸಂಕೀರ್ಣ.ವ.ಸಂ-ಸಂ- ಡಾ.ಬಿ.ಆರ್.ಹೀರೆಮಠ, ವ-೧೯೭,ಪು-೭೧
೨೭. ಕನ್ನಡ ಜಾನಪದ ಗೀತೆಗಳು- ಡಾ.ಬಿ.ಎಸ್.ಗದ್ದಗಿಮಠ, ಪು-೨೮೨
೨೮. ಕನ್ನಡ ವಿ.ವಿ.ಶಾಸನ-ಸಂ-೭ (ರಾಯಚೂರು ಜಿಲ್ಲೆ),ಪು-೪೭
೨೯. ಕೃಷಿಜ್ಞಾನ ಪ್ರದೀಪಿಕೆ-ಶ್ರೀಘನಮಠ ಶಿವಯೋಗಿಗಳು, ಪು-೫೬
೩೦. ಅದೇ. ಪು-೬೪

೩೧. ಕೃಷಿಲೋಕ ಪ್ರವೇಶ–ಕೈಂತಜೆ ವಿಷ್ಣುಭಟ್ಟ, ಪು–೨೦

೩೨. ಕೃಷಿಜ್ಞಾನ ಪ್ರದೀಪಿಕೆ–ಶ್ರೀಘನಮಠ ಶಿವಯೋಗಿಗಳು, ಪು–೬೬

೩೩. ಇ.ಸಿ–೮, ರಾಗಿಮರೂರು–೧೦೩, ಪು–೧೭೨

೩೪. ದೇಶಿದೃಷ್ಟಿ– ಡಾ.ವೀರಣ್ಣದಂಡೆ, ಪು–೭೨

೩೫. ಅದೇ. ಪು–೭೩

೩೬. ಅದೇ. ಪು–೭೩

೩೭. ಅದೇ. ಪು–೭೩

೩೮. ಕರ್ಮವೀರ–೨೦೦೫, ಒಕ್ಕಲುತನ ಮತ್ತು ಒಕ್ಕಲಿಗರು– ಡಾ.ಸೂರ್ಯನಾಥಕಾಮತ

೩೯. ಬಸವಪಥ–ಮಾಸಿಕ ಡಿಸೆಂಬರ–೨೦೦೫, ಪು–೧೩

ಅಧ್ಯಾಯ–ಎಂಟು

ಕೃಷಿ ಸಂಬಂಧಿ ನಂಬಿಕೆ–ಆಚರಣೆಗಳು

ಅಧ್ಯಾಯ-ಎಂಟು

ಕೃಷಿ ಸಂಬಂಧಿ ನಂಬಿಕೆ-ಆಚರಣೆಗಳು

ನಂಬಿಕೆ ಆಚರಣೆಗಳು ಮನುಷ್ಯನ ದಿನನಿತ್ಯದ ಬದುಕಿನಲ್ಲಿ ಹಾಸುಹೊಕ್ಕಿವೆ. ಇವುಗಳು ಬದುಕಿನ ಎರಡು ಮುಖಗಳಾಗಿವೆ. ನಂಬಿಕೆಯು ಮಾತಿನ ಮೂಲಕ ಸ್ಫೂರ್ತಿ ನೀಡಿದರೆ, ಆಚರಣೆಗಳು ಕ್ರಿಯೆಯ ಮೂಲಕ ಮನುಷ್ಯರಿಂದ ವಿಶಿಷ್ಟ ಸ್ಥಾನ ಪಡೆದುಕೊಳ್ಳುತ್ತವೆ. ಆದಿ ಮಾನವನ ಜೊತೆಯಲ್ಲೇ ಬೆಳೆದು ಬಂದಿರುವ ಇವುಗಳು ಬಹುತೇಕ ಪ್ರಕೃತಿಯ ಮೂಲದವುಗಳಾಗಿವೆ. ಆದ್ದರಿಂದ ದೈವಿ ಸಂಬಂಧದ ಸೃಷ್ಟಿಗಳಾಗಿದ್ದು; ಮಾನವನು ಭಯ ಭಕ್ತಿಗಳಿಂದ ಮತ್ತು ಮನಸ್ಸಿನ ಅಸ್ಥಿರ ಭಾವನೆಗಳಿಂದ ಅನೇಕ ನಂಬಿಕೆ ಆಚರಣೆಗಳನ್ನು ಅನಾದಿಕಾಲದಿಂದ ಉಳಿಸಿಕೊಂಡು ಬಂದಿದ್ದಾನೆ. ಹಾಗಾಗಿ ಯಾವುದೇ ದೇಶದ ಜನಾಂಗದ ಸಂಸ್ಕೃತಿಯ ಪೋಷಣೆ, ನಾಗರಿಕತೆಯ ಬೆಳವಣಿಗೆಗೆ ನಂಬಿಕೆ, ಆಚರಣೆಗಳು ಮುಖ್ಯ ಅಂಗಗಳಾಗಿವೆ. 'ಜಾನಪದದ ನಂಬಿಕೆಗಳು' ಎಂಬ ಕೃತಿಯ ಪ್ರಸ್ತಾವನೆಯಲ್ಲಿ ಹೀಗೆ ಹೇಳಲಾಗಿದೆ. "ನಂಬಿಕೆ ಅಥವಾ ನೆಚ್ಚಿಕೆಯು ಒಂದು ಮಾನಸಿಕಸ್ಥಿತಿ ಪರಂಪರಾಗತವಾಗಿ ಸ್ವೀಕೃತವಾದ ಒಂದು ಭಾವರೂಪ; ಪುನರಾವರ್ತಿತ ಹಾಗೂ ಸಾಂಪ್ರದಾಹಿಕ ಅಭಿಪ್ರಾಯೋಕ್ತಿ ವಸ್ತು ಸ್ಥಿತಿಯೊಡನೆ ಅಸಂಬದ್ಧವೂ ಅವೈಜ್ಞಾನಿಕವೂ ಆದ ಸಂಬಂಧವುಳ್ಳ ಹೇಳಿಕೆ. ಇದರಲ್ಲಿ ಮಾತು ಒಂದು ಭಾಗ, ಕ್ರಿಯೆ ಮತ್ತೊಂದು ಭಾಗ" [೧]. ಎನ್ನುತ್ತಾರೆ.

ಸಮಾಜದ ಅನೇಕ ಸ್ತರಗಳಲ್ಲಿ, ಹಲವಾರು ಭಿನ್ನತೆಗಳನ್ನು ಹೊಂದಿ ನಂಬಿಕೆ ಆಚರಣೆಗಳು ಬೆಳವಣಿಗೆಯನ್ನು ಹೊಂದಿವೆ. "ಸಮಾಜದ ಎಲ್ಲಾ ಸ್ತರಗಳಲ್ಲೂ ನಂಬಿಕೆ-ಆಚರಣೆಗಳು ಅಸ್ತಿತ್ವದಲ್ಲಿವೆ. ಮಾನವನು ಸಮಾಜಕ್ಕೆ ಅದರ ಕಟ್ಟುಕಟ್ಟಳೆಗಳಿಗೆ ಬದ್ಧನಾಗಿ ನಡೆದುಕೊಳ್ಳುವುದರಿಂದ ಇವುಗಳಿಂದ ಹೊರತಾಗಿರಲು ಸಾಧ್ಯವಿಲ್ಲ. ಮೂಲ ಆಶಯ ಇವುಗಳಲ್ಲಿ ಒಂದೇ ಆಗಿದ್ದರೂ ಇವು ಭಿನ್ನ ಭಿನ್ನ ಪ್ರದೇಶಗಳಲ್ಲಿ ಸ್ವತಂತ್ರವಾಗಿ ರೂಪುಗೊಳ್ಳಲು ಅವಕಾಶ ಉಂಟು".[೨] ಎಂದು ಜೀನಹಳ್ಳಿ ಸಿದ್ದಲಿಂಗಪ್ಪ ಅಭಿಪ್ರಾಯಪಟ್ಟಿದ್ದಾರೆ. ಜನಪದ ನಂಬಿಕೆಗಳು ಮನುಷ್ಯನ ಹುಟ್ಟು, ವಿವಾಹ, ಸಾವು, ಧಾರ್ಮಿಕ ವಿಧಿವಿಧಾನಗಳು, ಮಳೆ, ಬೆಳೆ, ವ್ಯವಸಾಯ, ಬೇಟೆ, ಹಬ್ಬ-ಹರಿದಿನ ಇನ್ನೂ ಮುಂತಾದವುಗಳಿಂದ ಹುಟ್ಟುತ್ತವೆ. ಇಂತಹ ನಂಬಿಕೆಗಳ ಮೂಲ ಆಶಯ ಕ್ರಮಬದ್ಧವಾಗಿ, ಶಾಸ್ತ್ರೋಕ್ತವಾಗಿ, ಸಾಂಪ್ರದಾಯಿಕವಾಗಿ

ಆಚರಣೆಗಳಲ್ಲಿ ತೊಡಗಬೇಕು. ಅದರಂತೆಯೇ ನಡೆದುಕೊಳ್ಳಬೇಕು ಎಂಬುದಾಗಿದೆ, ಇವುಗಳು ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿವೆ.

ಈ ಅಧ್ಯಾಯದಲ್ಲಿ ಕೃಷಿಚಟುವಟಿಕೆ ಕುರಿತಾದ ಕೆಲವು ನಂಬಿಕೆ, ಆಚರಣೆಗಳನ್ನು ಚರ್ಚಿಸಲಾಗಿದೆ. ಕೃಷಿ ನಿರಂತರವಾಗಿ ನಡೆಯುವ ಚಟುವಟಿಕೆಯಾಗಿದ್ದು, ಋತುಮಾನಗಳೊಂದಿಗೆ ಹೊಂದಿಕೊಂಡು ತಲೆಮಾರಿನಿಂದ ತಲೆಮಾರಿಗೆ ದಾಟುತ್ತಾ ಬಂದಿದೆ. ಇದು ಕೇವಲ ಶ್ರಮದ ಚಟುವಟಿಕೆ ಅಷ್ಟೇಆಗಿರದೆ, ಹತ್ತಾರು ನಂಬಿಕೆಗಳ ಆಗರವಾಗಿದೆ. ಕೃಷಿಕರು ಶ್ರಮದೊಡನೆ ಉತ್ತಮ ಫಸಲಿಗಾಗಿ ಪೂರಕವಾದ ವಲಯವನ್ನು ಸೃಷ್ಟಿಸಿಕೊಂಡಿದ್ದಾರೆ. ಅಲ್ಲಿ ನಂಬಿಕೆಗಳಿವೆ, ದೈವಗಳಿವೆ, ಸಂಪ್ರದಾಯಗಳಿವೆ, ಆಚರಣೆಗಳಿವೆ. 'ಕನ್ನಡ ಜಾನಪದಗೀತೆಗಳು' ಎಂಬ ಕೃತಿಯಲ್ಲಿ ಬಿ.ಎಸ್. ಗದ್ದಗಿಮಠರವರು ಕರ್ನಾಟಕದ ಸಂಪ್ರದಾಯಗಳನ್ನು ಕುರಿತು ಹೀಗೆ ಹೇಳುತ್ತಾರೆ. "ಒಕ್ಕಲಿಗನು ತನ್ನ ಬೇಸಾಯದಲ್ಲಿ ಕಾಲಮಾನಕ್ಕೆ ತಕ್ಕಂತೆ ಅನೇಕ ಸಂಪ್ರದಾಯಗಳನ್ನು ಆಚರಿಸುತ್ತಾ ಬಂದಿದ್ದಾನೆ. ವಿಶೇಷವಾಗಿ ಈ ಸಂಪ್ರದಾಯಗಳು ಕರ್ನಾಟಕದಲ್ಲಿ ಶತಶತಮಾನಗಳಲ್ಲಿ ಬದಲಾಗುತ್ತಾ ಬಂದು, ಮುಂದೆ ೧೨ನೇ ಶತಮಾನದಲ್ಲಿ ಶಿವಶರಣರಕಾಲಕ್ಕೆ ವಿಶೇಷ ರೂಪಗಳನ್ನು ತಾಳಿ ಈಗಲೂ ಕರ್ನಾಟಕದ ಬಹು ಭಾಗಗಳಲ್ಲಿ ಬಳಕೆಯಲ್ಲಿದ್ದುದು ಕಂಡು ಬರುತ್ತದೆ. ಹನ್ನೆರಡನೆಯ ಶತಮಾನ ಎಲ್ಲಾ ಕ್ಷೇತ್ರಗಳಲ್ಲಿಯೂ ಕ್ರಾಂತಿಯ ಕಾಲ ಇದು ತನ್ನ ಪ್ರಭಾವವನ್ನು ಕೃಷಿ-ಕರ್ಮ ಕ್ಷೇತ್ರದಲ್ಲಿಯೂ ತೋರಿಸಿರುವುದು..............".[೩] ಎನ್ನಲಾಗಿದೆ.

ಒಕ್ಕಲುತನದಲ್ಲಿ ಪ್ರಮುಖವಾಗಿ ಮೂರು ಕ್ರಮಗಳನ್ನು ಕಾಣಬಹುದು. ಅವುಗಳು ೧.ಉತ್ತುವುದು. ೨.ಬಿತ್ತುವುದು ೩. ಒಕ್ಕವುದು ಈ ಮೂರರಲ್ಲಿಯೂ ಒಕ್ಕಲಿಗರು ಕೆಲವು ವಿಶಿಷ್ಟ ನಂಬಿಕೆ ಆಚರಣೆಗಳನ್ನು ನೇಮನಿತ್ಯದಿಂದ ಪಾಲಿಸುವುದು ಕಂಡುಬರುತ್ತದೆ. ಅಂತವುಗಳನ್ನು ಸಂಗ್ರಹಿಸಿ ಈ ಭಾಗದಲ್ಲಿ ವಿಶ್ಲೇಷಿಸಲಾಗುವುದು.

ಉತ್ತುವುದು

ಕೃಷಿ ಚಟುವಟಿಕೆಗಳಲ್ಲಿ ಉತ್ತುವುದು ತುಂಬ ಮಹತ್ವದ ಕ್ರಿಯೆಯಾಗಿದೆ. ರೈತನು ಬಿತ್ತಿ ಬೆಳೆದು ಕೊಳ್ಳಲು ಭೂಮಿಯನ್ನು ಹದ-ಬೆದೆ ಅರಿತು ಉತ್ತಬೇಕಾಗುತ್ತದೆ. 'ಹದನೋಡಿ ಹರಗು, ಬೆದಿ ನೋಡಿ ಬಿತ್ತು;' 'ಅಂಗೈಯಂತೆ ಹೊಲಮಾಡಿದರೆ ಮುಂಗೈ ಎಲ್ಲ ತುಪ್ಪ' ಎಂಬ ಗಾದೆಯ ಮಾತುಗಳು ಉತ್ತುವ ಕ್ರಿಯೆಯ ಮಹತ್ವ ತಿಳಿಸುತ್ತವೆ. ಹೊಲದ ಹದವೆಂದರೆ ಹೊಲದಲ್ಲಿ ಮಣ್ಣು ಬಿರುಸಾಗಿರಬಾರದು, ತೇವಾಂಶವು ಹೆಚ್ಚಾಗಿದ್ದು ರಾಡಿಯೂ ಇರಬಾರದು. ಹೊಲದಲ್ಲಿ ಗೊಬ್ಬರಹಸಿ ಇದ್ದು ಮಣ್ಣನ್ನು ಮುಷ್ಟಿಯಲ್ಲಿ ಹಿಡಿದರೆ ಹುಡಿಯಾಗಬೇಕು. ಅದು ಹದಬಂದಕಾಲ, ಇಂತಹ ಸಂದರ್ಭನೋಡಿ ಗಳೆ ಹೊಡೆಯುವುದು ಉತ್ತಮ. ಅಲ್ಲದೇ ಭೂಮಿಯ ಮಣ್ಣು ಈ ವೇಳೆಯ ಉಳುಮೆಯಿಂದ ಮೃದುವಾಗುತ್ತದೆ. ಇಂದು ಹದ-ಬೆದೆ ಎಂದರೇನು ಎಂದು ತಿಳಿಯದವರಾಗಿ ರೈತರು ಇದ್ದು, ಎಷ್ಟೋಹೊತ್ತಿಗೆ, ಯಾವಾಗ ಬೇಕು ಆಗ ಉತ್ತುವ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಕೃಷಿ ಕಾಯಕ ಮಹತ್ವ ಕಳೆದು ಕೊಂಡಿದೆ. 'ಹದ ತಪ್ಪಿದರೆ ಎಲ್ಲವೂ ತಪ್ಪುವವು' ಎಂಬ ನುಡಿಗಟ್ಟು ಬಳಕೆಯಾಗಿರುವುದು ಈ ಕಾರಣದಿಂದಲೇ ಇರಬೇಕು.

ಉತ್ತುವುದು, ಬಿತ್ತುವುದು ಒಂದು ದೀಕ್ಷೆಯ ಮಂತ್ರವಾಗಿದೆ ಎಂದು ಶರಣರು ಭಾವಿಸಿದ್ದರು. ಕಲ್ಯಾಣ ಬಸವಯ್ಯನೆಂಬ ಶರಣರು ಹೀಗೆ ಹೇಳುತ್ತಾರೆ.

"ಉತ್ತು ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವ ಮಂತ್ರ ನಿನ್ಹೆಸರು । ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ".[೪]

ಉತ್ತು, ಬಿತ್ತುವುದರ ಶ್ರೇಷ್ಠತೆ ಈ ವಚನದಲ್ಲಿ ತಿಳಿದು ಬರುತ್ತದೆ. ಇಂತಹ ಉತ್ತುವ ಕೆಲಸ ಕುರಿತಾದ ನಂಬಿಕೆ ಆಚರಣೆಗಳು ಹಲವಾರು ರೈತ ಸಮೂದಾಯದಲ್ಲಿ ಬೆಳೆದು ಬಂದಿವೆ. ಅವುಗಳಲ್ಲಿ ಅನೇಕ ಪ್ರಾದೇಶಿಕ ವೈಶಿಷ್ಟ್ಯತೆ, ಭಿನ್ನತೆಗಳು ಕಾಣಸಿಗುತ್ತವೆ. ಅಂತವುಗಳಲ್ಲಿ ಕೆಲವು ನಂಬಿಕೆ ಆಚರಣೆಗಳನ್ನು ಮಾತ್ರ ಇಲ್ಲಿ ಬಳಸಿಕೊಳ್ಳಲಾಗಿದೆ. ನಮ್ಮ ನಾಡಿನಲ್ಲಿ ಯುಗಾದಿಗೆ ಹೊಸಮಳೆ ಬೀಳಲು ಪ್ರಾರಂಭವಾಗುತ್ತದೆ. ಆಗ ರೈತನ ಆರಂಭ ಪ್ರಾರಂಭಾಗುತ್ತದೆ. ನೇಗಿಲು, ನೊಗ, ರಂಟೆ, ಕುಂಟೆಗಳು ತಯಾರಾಗುತ್ತವೆ. ಹೊನ್ನಾರು ಕಟ್ಟುವ ಮೊದಲಿಗೆ ಬೇಸಾಯದ ಸಲಕರಣೆಗಳನ್ನು ತೊಳೆದು ಪೂಜಿಸುವುದು ಎಲ್ಲೆಡೆ ಕಾಣಬರುವ ಪದ್ಧತಿಯಾಗಿದೆ. ಭೂಮಿಯ ಮೇಲೆ ರೈತರಿಗೆ ಅಪಾರ ಭಕ್ತಿ, ಗೌರವ, ಶ್ರದ್ದೆಗಳಿದ್ದು, ತನಗೆ ನೆಲೆ, ಅನ್ನ, ಆಶ್ರಯ ನೀಡುವ ಭೂಮಿ ತಾಯಿಯಲ್ಲಿ ದೈವತ್ವವನ್ನು ಕಂಡು ಕೊಂಡಿದ್ದಾರೆ. ಭೂಮಿತಾಯಿಯ ಆರಾಧನೆಗೆ ವಿವಿಧ ರೀತಿಯ ಕ್ರಿಯೆಗಳು, ಆಚರಣೆಗಳು ಅನೇಕ ವಿಧಾನಗಳು ಭಾರತದ ಎಲ್ಲಾ ಕಡೆ ಪ್ರಚಲಿತದಲ್ಲಿವೆ. ಉತ್ತರ ಕರ್ನಾಟಕದ ಸೀಗೆಹುಣ್ಣಿಮೆ, ಮಲೆನಾಡಿನ ಭೂಮಿಹುಣ್ಣಿಮೆ, ಬಯಲು ಸೀಮೆಯ ಹೊನ್ನಾರು, ಕೊಂತಿಹಬ್ಬ, ಮುಂತಾದವುಗಳನ್ನು ಕಾಣಬಹುದು.

ಹೊನ್ನಾರು ಹೊನ್ನಾರು ಅಥವಾ ಹೊನ್ನೇರು ಎಂದು ಕರೆಯುವ ಇದು ವರ್ಷದ ಮೊದಲ ಆಚರಣೆಯಾಗಿದೆ. ದಕ್ಷಿಣ ಕರ್ನಾಟಕದಲ್ಲಿ ವಿಶೇಷವಾಗಿ ಕಂಡುಬರುತ್ತದೆ. "ಹೊನ್ನೇರು ಎಂದರೆ ಹೊನ್ನಿನವಾರು, ಅರ್ಥಾತ್ ಬಂಗಾರದ ನೇಗಿಲು. ಮೊದಲು ಮಳೆ ಬಿದ್ದ ಹೊತ್ತಲ್ಲಿ ರೈತರಿಗೆ ನೆಲ ಉಳುವ ಸಂಭ್ರಮ ನೆಲ ಉಳುವ ಮುನ್ನ ಭೂಮ್ತಾಯಿಯನ್ನು ಪ್ರಾರ್ಥಿಸಿ, ನೇಗಿಲು, ಮೇಣಿ, ನೊಗ ಹಾಗೂ ಜೋಡೆತ್ತುಗಳಿಗೆ ಅರಿಶಿಣ-ಕುಂಕುಮದ ಬೊಟ್ಟಿಟ್ಟು, ಅರಿಶಿಣ ಲೇಪಿಸಿದ ಅಂಗುನೂಲು ಕಟ್ಟಿ, ಅಕ್ಷತೆ ಇಟ್ಟು ಹೂವಿನ ಎಳೆಯನ್ನು ಸುತ್ತಿ ಪೂಜೆ ಸಲ್ಲಿಸುವ ಆಚರಣೆ ಎಲ್ಲೆಡೆ ಕಾಣಬಹುದು".[೫] ಎಂದು 'ಕೃಷಿಯ ಆಚರಣೆ' ಎಂಬ ಕೃತಿಯಲ್ಲಿ ಮಲ್ಲಿಕಾರ್ಜುನ ಹೊಸಪಾಳ್ಯ ಅಭಿಪ್ರಾಯ ಪಡುತ್ತಾರೆ. ರೈತರು ತುಂಬಾ ಶ್ರದ್ದೆ, ಭಕ್ತಿಗಳಿಂದ ಉಳುಮೆಯ ಕ್ರಿಯೆಯಲ್ಲಿ ತೊಡಗುವ ಆಚರಣೆ ಇದಾಗಿದೆ. ಕೃಷಿ ಉಪಕರಣಗಳನ್ನು ತೊಳೆದು, ಬೇಸಾಯಕ್ಕೆ ಹೂಡುವ ಎತ್ತುಗಳನ್ನು ಮೈ ತೊಳೆದು ಸಿಂಗರಿಸುತ್ತಾರೆ. ನಂತರ ರಾತ್ರಿ ನೆನಸಿಟ್ಟ ಅಕ್ಕಿ ಮತ್ತು ಎಳ್ಳಿಗೆ ಕಾಯಿ ಬೆಲ್ಲ ಹಾಕಿ ಕಲಸಿದ ಎಡೆಯನ್ನು ಮೊದಲು ಎತ್ತು-ದನಗಳಿಗೆ ತಿನ್ನಿಸುತ್ತಾರೆ. ನಂತರ ಉಳಿದದ್ದನ್ನು ಬಂದವರಿಗೆ ಹಂಚುತ್ತಾರೆ. ಈ ಕಾರ್ಯಗಳನ್ನು ಮನೆಯ ಹೆಣ್ಣು ಮಕ್ಕಳು ಮಡಿಯಿಂದ ಶುದ್ಧವಾಗಿ ನಿರ್ವಹಿಸುತ್ತಾರೆ. ಕ್ರಮಬದ್ದವಾಗಿ ಪೂಜೆಯ ವಿಧಾನಗಳನ್ನು ಪೂರೈಸಿ ನಂತರ ಹೊಲವನ್ನು ಸಾಂಕೇತಿಕವಾಗಿ ಮೂರು ಸುತ್ತು ಉಳುಮೆ ಮಾಡುತ್ತಾರೆ. ಕೆಲವು ಕಡೆ ಐದು, ಒಂಭತ್ತು ಸುತ್ತು ಉಳುತ್ತಾರೆ ಅಲ್ಲದೇ ಹೂಡಿದ ಎತ್ತುಗಳನ್ನು ಬಿಚ್ಚಿ ಮತ್ತೇ ಎಡ-ಬಲಕ್ಕೆ ಹೂಡಿ ಗಳೆ ಹೊಡೆಯುವ ಪದ್ಧತಿಗಳು ಕೆಲವು ಕಡೆ ಉಂಟು. ಕೆಲವರು ಬೆಳಗ್ಗೆ ಮತ್ತು ಸಾಯಂಕಾಲ ಎರಡು ಹೊತ್ತು ಹೂಡುತ್ತಾರೆ. ಹೊಲದಲ್ಲಿ ತೇವಾಂಶವಿದ್ದು ಹದವಿದ್ದರೆ ಸ್ವಲ್ಪ ಹೆಚ್ಚಾಗಿಯೇ ಉಳುಮೆ ಮಾಡುತ್ತಾರೆ. ಕೆಲವು ಕಡೆ ಹೊನ್ನೇರು ಪೂಜೆ ಸರಿರಾತ್ರಿ ಎರಡು ಗಂಟೆಗೆ ನೆಡೆಯುತ್ತದೆ. ಅಂತಹ ಆಚರಣೆಯಲ್ಲಿ ನೇಗಿಲನ್ನು ಎಳೆಯಲು ನಿಜವಾದ ಎತ್ತುಗಳನ್ನು ಬಳಸದೆ, ಮನುಷ್ಯರನ್ನೇ

ಎತ್ತುಗಳನ್ನಾಗಿಸಿ, ಇಬ್ಬರ ಮೇಲೆ ನೊಗ ಇಟ್ಟು ನೇಗಿಲು ಹೂಡಿ ಒಬ್ಬಗಡ್ಡದಾರಿ ವ್ಯಕ್ತಿ ಉಳುವಂತೆ ನಟಿಸುತ್ತಾನೆ. ಈ ಬಗೆಯ ಆಚರಣೆ ಕರ್ನಾಟಕ, ತಮಿಳುನಾಡು ಗಡಿಯ ಭಾಗಗಳಲ್ಲಿ ಕಾಣಬಹುದಾಗಿದೆ.

ಕಾರಬ್ಬ ದಕ್ಷಿಣ ಕರ್ನಾಟಕದ ರೈತಾಪಿ ವರ್ಗದಲ್ಲಿ ಆಚರಿಸುವ ಬಹುಮುಖ್ಯ ಆಚರಣೆ. ಈ ಆಚರಣೆಯು ನಿರ್ದಿಷ್ಟ ವರ್ಷದ ಬೇಸಾಯದ ಕೆಲಸಗಳಿಗೆ ಮುನ್ನುಡಿ. ತುಂಬಾ ಸರಳವಾಗಿ ಆಚರಿಸಲ್ಪಡುವ ಕ್ರಿಯೆ. ಗೊಲ್ಲಸಮುದಾಯದಲ್ಲಿ ವಿಶೇಷವಾಗಿ ಕಾಣಬಹುದಾದ ಹಬ್ಬ. ಮೃಗಶಿರ, ಆರಿದ್ರ ಮಳೆಗಳ ಸಂದರ್ಭದಲ್ಲಿ ಈ ಹಬ್ಬ ಆಚರಿಸುವುದು ವಾಡಿಕೆಯಾಗಿದೆ. ದೇಶಿ ಕೃಷಿಜ್ಞಾನದ 'ಕೃಷಿಆಚರಣೆ' ಎಂಬ ಕೃತಿಯಲ್ಲಿ ಈ ಆಚರಣೆಯನ್ನು ಹೀಗೆ ಸಂಗ್ರಹಿಸಿ ಕೊಡಲಾಗಿದೆ. "ಸಸಿ ಮಡಿಹಾಕುವ ದಿವಸದ ಬೆಳಿಗ್ಗೆ ಕರಿನ ಸೊಪ್ಪನ್ನು ತಂದು ತೋರಣ ಮಾಡಿ ಬಾಗಿಲಿಗೆ ಕಟ್ಟುತ್ತಾರೆ. ಕರಿನ ಸೊಪ್ಪೆಂದರೆ ಮಾವು, ಬೇವು ಮತ್ತು ಲಕ್ಕಿ ಈ ಮೂರು ಸೊಪ್ಪುಗಳ ಸಂಗ್ರಹ. ಬೇಸಾಯದ ಸಲಕರಣೆಗಳಾದ ನೇಗಿಲು, ನೊಗ, ಮೇಣಿ ಇತ್ಯಾದಿ ಮುಟ್ಟುಗಳನ್ನೆಲ್ಲಾ ತೊಳೆದು ಅವುಗಳಿಗೆ ಸುಣ್ಣ-ಕೆಮ್ಮಣ್ಣು ಹಚ್ಚಿ, ಅಂಗು ನೂಲು (ಹರಿಶಿನದದಾರ) ಕಟ್ಟಿ ಎಡೆಹಾಕಿ ಪೂಜಿಸುತ್ತಾರೆ. ಎತ್ತು ಕರುಗಳಿಗೂ ಮೈತೊಳೆದು ಅವುಗಳ ಹಣೆಗೆ, ಗೋಪುರಕ್ಕೆ, ಮುಂಗೊರಸಿಗೆ ಅಕ್ಷತೆ (ಅಕ್ಕಸ್ತೆ)ಇಟ್ಟು ಕೊರಳಿಗೆ ಅಂಗುನೂಲು ಕಟ್ಟಿ ಎಡೆ ತಿನ್ನಿಸುತ್ತಾರೆ"[೬]. ಹೀಗೆ ಕೃಷಿಯ ಉಪಕರಣಗಳನ್ನೂ, ಎತ್ತುಗಳನ್ನೂ ಶೃಂಗಾರಮಾಡಿ ಪೂಜಿಸಿದ ನಂತರ ಅದೇ ದಿನ ಸಾಯಂಕಾಲ ಮನೆಯಲ್ಲಿ ಬಿದಿರಿನಲ್ಲಿ ಮಾಡಿದ ಹೊಸಕುಕ್ಕೆಯನ್ನು ತೆಗೆದುಕೊಂಡು ಅದಕ್ಕೆ ಬಿತ್ತನೆಯ ರಾಗಿ ತೊಡಿಕೊಂಡು ನಡುಮನೆಯಲ್ಲಿ ನೆಲಸಾರಿಸಿ ರಂಗೋಲಿ ಬಿಡಿಸಿದ ಜಾಗದಲ್ಲಿ ಆ ಬುಟ್ಟಿಯನ್ನು ಇಟ್ಟು, ಅದನ್ನು ಸಿಂಗಾರಮಾಡಿ, ಅಂಗುನೂಲು, ಅಕ್ಕಸ್ತೆ ಇಟ್ಟು, ವಿಭೂತಿ ಧರಿಸಿ ಕುಕ್ಕೆಸಮೇತ ಹೊಲಕ್ಕೆ ತೆಗೆದುಕೊಂಡು ಹೋಗಿ ರಾಗಿ ಬಟ್ಲು ತೊಳೆಯುತ್ತಾರೆ. ಕೆಲವು ಕಡೆಗಳಲ್ಲಿ ವಿಶೇಷವಾಗಿ ಕಾರಬ್ಬವನ್ನು ಆಚರಣೆಮಾಡುವುದು ಕಂಡು ಬರುತ್ತದೆ.

ಯುಗಾದಿಯಲ್ಲಿ ಹೊಸ (ಮೊದಲ)ಬೇಸಾಯ ಹೂಡಲು ಎತ್ತುಗಳೊಂದಿಗೆ ನೇಗಿಲು, ಪೂಜಾ ಸಾಮಾನುಗಳನ್ನು ತೆಗೆದುಕೊಂಡು ಹೋಗಿ, ದೇವರ ಹೊಲಕ್ಕೆ ಹೊರಟಾಗ 'ಕಾಗೆ ದಾರಿಯಲ್ಲಿ ಎಡಕಟ್ಟಿದರೆ' ಆ ವರ್ಷದ ಬೇಸಾಯ ಕುಲಗೆಟ್ಟಂತೆ ಮತ್ತು ಅನೇಕ ಎಡರು ತೊಡರುಗಳು ಬರುವುದು ಸಾಧ್ಯ ಎಂದು ಜನರು ನಂಬುತ್ತಾರೆ. ಇಂತಹ ಅನೇಕ ನಂಬಿಕೆ ಆಚರಣೆಗಳು ಕಾಣಸಿಗುತ್ತವೆ.

ಬೇಸಾಯ ಕುರಿತಾದ ಆಚರಣೆಗಳಲ್ಲಿ ಮಲೆನಾಡಿನ ನಾಮಧಾರಿ ಒಕ್ಕಲಿಗರಲ್ಲಿ ಆರಂಭದಲ್ಲಿ 'ಶಕ್ಕುದಾರ'ಕಟ್ಟುವ ಶುಭಾಚರಣೆಯೂ ಒಂದು. "ವರ್ಷಾರಂಭದಲ್ಲಿ ಮೊದಲ ಬಾರಿಗೆ ಉಳುಮೆ ಕಟ್ಟುವುದಕ್ಕೆ ಶಕ್ಕುದಾರ ಕಟ್ಟುವುದು ಎನ್ನುತ್ತಾರೆ. ಶಕುನ ನೋಡಿ ಕಟ್ಟುವುದು ಎಂಬುದು ಇದರ ಅರ್ಥ. ಇದಕ್ಕೆ ಯುಗಾದಿಯ ಅನಂತರ ಒಂದು ನಿರ್ದಿಷ್ಟ ದಿನ ಆಗಬೇಕು. ಗುರುವಾರ ಮತ್ತು ಭಾನುವಾರ ಯೋಗ್ಯದಿನಗಳು. ಅಂಥ ದಿನ ಗ್ರಾಮ ದೇವತೆಗೆ ಹಣ್ಣು ಕಾಯಿಕೊಟ್ಟು, ಜೋಯಿಸರು ಸೂಚಿಸಿದ ವೇಳೆಗೆ ಸರಿಯಾಗಿ ಎತ್ತುಗಳನ್ನು 'ಮೂಡುಮುಖ'ನಾಗಿ ನಿಲ್ಲಿಸಿ ನೇಗಿಲು ಹೂಡುತ್ತಾರೆ. ಮೇಳಿ ಹಿಡಿದು ಉಳುವ ವ್ಯಕ್ತಿ ಎತ್ತುಗಳಿಗೆ ಕಾಯಿ ಒಡೆದು ಎಲೆ ಅಡಿಕೆ ಹಣ್ಣುಗಳನ್ನು ಇಟ್ಟು ಪೂಜೆ ಸಲ್ಲಿಸಿ ಗದ್ದೆಯನ್ನು ಮೂರು ಸುತ್ತು ಉಳುತ್ತಾನೆ. ಮುಂದೆ ಮಳೆ ಬಿದ್ದ ಮೇಲೆ ಮಣ್ಣಿನ ಹದ ನೋಡಿಕೊಂಡು ಗದ್ದೆ ಉಳುಮೆ ಆರಂಭಿಸಲಾಗುವುದು"[೭]. ಎಂದು 'ಮಲೆನಾಡಿನವೈಷ್ಣವ ಒಕ್ಕಲಿಗರಸಂಸ್ಕೃತಿ' ಕೃತಿಯಲ್ಲಿ ಹೇಳಲಾಗಿದೆ. ಮಲೆನಾಡಿನ, ಅರೆ ಮಲೆನಾಡಿನ ಭಾಗಗಳಲ್ಲಿ 'ಮಾಗಿಉಕ್ಕೆ'ಹೊಡೆದರೆ ಒಳ್ಳೆಯದು ಎಂಬ ನಂಬಿಕೆ ಬಲವಾಗಿತ್ತು. ಆದರೆ ಇಂದು ಬೇಸಿಗೆಯಲ್ಲಿ ಉಳುಮೆ ಮಾಡಿದರೆ ಮುಂಗಾರುಮಳೆ

ಜೋರಾಗಿ ಬಂದು ಭೂಮಿಯ ಸಾರವೆಲ್ಲ ಕೊಚ್ಚಿಹೋಗುತ್ತದೆ ಎಂದು ಅರಿತ ರೈತರು ಈ ಆಚರಣೆ ಬದಲಾಯಿಸಿಕೊಂಡಿದ್ದಾರೆ.

ಉತ್ತುವ ಕ್ರಿಯೆಗೆ ಸಂಬಂಧಿಸಿದ ಕೆಲವು ಆಚರಣೆಗಳನ್ನು ಕೃಷಿಪದಕೋಶ– ಕೃತಿ ಆಧಾರದಿಂದ ಸಂಗ್ರಹಿಸಿ ಕೊಡಲಾಗಿದೆ.

ಆರೂಡು ಯುಗಾದಿಯ ದಿನ ವಿದ್ಯುಕ್ತವಾಗಿ ನಡೆಸುವ ಮೊದಲ ಉಳುಮೆಯಿದಾಗಿದೆ. ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಕಾಣುತ್ತೇವೆ.

ಉತ್ತರ ಮುಖ ಮೊದಲ ಸಲ ಉಳುಮೆಯನ್ನು ಪೂರ್ವಾಭಿಮುಖವಾಗಿ ಮಾಡಲು ಸಾಧ್ಯವಿಲ್ಲದಾಗ ಅಪರೂಪವಾಗಿ ಉತ್ತರ ಮುಖವಾಗಿ ಕಲ್ಬುರ್ಗಿ ಜಿಲ್ಲೆಗಳಲ್ಲಿ ಉಳುಮೆ ಮಾಡುವ ಆಚರಣೆಯಾಗಿದೆ.

ಊರ ಹಿಡಿಯುವುದು ವರ್ಷದ ಆರಂಭದಲ್ಲಿ ಬೇಸಾಯಕ್ಕೆ ಮೊದಲು ಸಲ್ಲಿಸುವ ದೇವರ ಪೂಜೆ. ಬಿಜಾಪೂರ ಜಿಲ್ಲೆಯ ಭಾಗಗಳಲ್ಲಿ ಆಚರಣೆಯಲ್ಲಿದೆ.

ಎತ್ತು ಕಟ್ಟುವುದು ಹೊಲ ಉಳಲು ಒಳ್ಳೆಯ ದಿವಸ ನೋಡಿ ಎತ್ತುಗಳ ಕುತ್ತಿಗೆಗೆ ನೊಗಯಿಟ್ಟು ನೇಗಿಲಕಟ್ಟಿ ಶಾಸ್ತ್ರಕ್ಕೆಂದು ಹತ್ತು ಹೆಜ್ಜೆ ಉಳುವ ಪದ್ಧತಿ ಕೋಲಾರ ಪ್ರಾಂತ್ಯಗಳಲ್ಲಿ ಕಂಡುಬರುತ್ತದೆ.

ಕಂಬಳ ಕೋಲಿ ಕೊನೆಯ ಉಳುಮೆಯೆಂದು ಮಾಡುವ ಒಂದು ಆಚರಣೆಯಾಗಿದ್ದು, ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಕಂಡುಬರುತ್ತದೆ.

ಕುಂಟೆ ಅಮರ ಸೂದು ಕುಂಟೆಯನ್ನು ಯುಗಾದಿ ಅಮವಾಸ್ಯೆಯ ದಿನ ಪೂಜೆಮಾಡಿ ಹರಗಲು ಸಿದ್ಧಪಡಿಸುವುದು. ಕಲ್ಬುರ್ಗಿ ಜಿಲ್ಲೆಯ ಭಾಗಗಳಲ್ಲಿ ಆಚರಿಸಲಾಗುತ್ತದೆ.

ಕೆಳಮುಖ ಹೊಡಿಯೋದು ಮೊದಲ ಉಳುಮೆಯನ್ನು ಪೂರ್ವಾಭಿಮುಖವಾಗಿಯೇ ಮಾಡಬೇಕೆಂಬ ನಂಬಿಕೆ ಚಿತ್ರದುರ್ಗ ಭಾಗದಲ್ಲಿ ಕಂಡುಬರುತ್ತದೆ. ಕೆಳಬೇಸಾಯ ಎಂದೂ, ಮೂಡುಳ್ಮೆ ಎಂದು ಕರೆಯುತ್ತಾರೆ.

ಗದ್ದೆ ಕೋರಿ ಗದ್ದೆ ಬೇಸಾಯದ ಕೊನೆಯ ದಿನದ ಉಳುಮೆ ಸಂಬಂಧದ ಆಚರಣೆಗಳು ದಕ್ಷಿಣ ಕನ್ನಡದಲ್ಲಿ ಕಾಣಸಿಗುತ್ತವೆ.

ಭೋ ಬಸವ ಭೋ ಬಸವ ಹೊಲದಲ್ಲಿ ಕಬ್ಬಿಣದ ನೇಗಿಲು, ಕೂರಿಗೆಗಳು ಸಾಗುವಾಗ ಸಾಲು ಹಿಡಿದು ನಡೆಯಲೆಂದು ನೆರೆದ ಎಲ್ಲರೂ ಉಚ್ಚಸ್ವರದಲ್ಲಿ ಹೀಗೆ ಹೇಳುವರು. ಹೀಗೆ ಹೇಳಿದರೆ ಎತ್ತುಗಳು ಸಾಲಿಗೆ ಬೀಳುವವೆಂಬ ನಂಬಿಕೆ ರಾಯಚೂರು ಜಿಲ್ಲೆಯ ಭಾಗಗಳಲ್ಲಿ ಕಂಡುಬರುತ್ತದೆ.

ನೊಗಕಡಿ ಊರಿನೊಳಕ್ಕೆ ಎತ್ತಿನ ಮೇಲೆ ನೊಗ ಹೂಡಿಕೊಂಡು ಬಂದಾಗ ದಂಡದ ರೂಪವಾಗಿ ನೊಗದ ಮೇಲೆ ಕೊಡಲಿಯಿಂದ ಗುರುತು ಮಾಡುವ ಆಚರಣೆ ತುಮಕೂರಿನ ಪ್ರಾಂತ್ಯದಲ್ಲಿ ಕಂಡುಬರುತ್ತದೆ.

ಬಲಿ ಅನ್ನ ವ್ಯವಸಾಯದ ಆರಂಭದಂದು ಹೊಲದ ಸುತ್ತ ಚೆಲ್ಲುವ ನೈವೇದ್ಯದ ಅನ್ನ. ಶಿವಮೊಗ್ಗ ಜಿಲ್ಲೆಯ ಭಾಗಗಳಲ್ಲಿ ಕಂಡುಬರುವ ಆಚರಣೆಯಾಗಿದೆ.

ಆರ್ಲ ಪೂಜೆ ಉತ್ತರಕನ್ನಡದಲ್ಲಿ ಗದ್ದೆ ಉಳುವಾಗ ಮೊಟ್ಟ ಮೊದಲು ಮಾಡುವ ಪೂಜೆಯಾಗಿದೆ.

ಒಸ್ನೇರು ಪೂಜೆ ಬೆಂಗಳೂರು ಸುತ್ತಮುತ್ತ ನೇಗಿಲು ಕಟ್ಟುವಾಗ ಮಾಡುವ ಪೂಜೆಯಾಗಿದೆ.

ಬ್ಯಾಸಾಯ ಪೂಜೆ ಬಳ್ಳಾರಿಯ ಭಾಗದಲ್ಲಿ ಹೊಲ ಹಸನು ಮಾಡುವ ಮುನ್ನ ಮಾಡುವ ಪೂಜೆ ಇದಾಗಿದೆ.

ಮಡ್ಕೆ ಪೂಜೆ ಬಳ್ಳಾರಿಯ ಭಾಗದಲ್ಲಿ ಹೊಲ ಉಳುಮೆ ಮಾಡುವಾಗ ಮೊದಲು ಆಚರಿಸುವ ಪೂಜೆಯಾಗಿದೆ.

ವಣ್ಣೇರ್ಪೂಜೆ ಮೈಸೂರಿನ ಭಾಗದಲ್ಲಿ ಮೊದಲ ಬಾರಿ ಉಳುಮೆ ಮಾಡುವಾಗ ಆಚರಿಸುವ ಪೂಜೆ ಇದಾಗಿದೆ.

ಶಶಿ ಕೊಡೊದು ಉತ್ತರ ಕನ್ನಡದಲ್ಲಿ ಸಂಪೂರ್ಣ ಉಳುಮೆ ಮುಗಿದ ನಂತರ ಮಾಡುವ ಒಂದು ಆಚರಣೆಯಾಗಿದೆ.

ಹೊಸ ಸಾಗುವಳಿ ರಾಯಚೂರು ಭಾಗದಲ್ಲಿ ಕುಂಟೆ ಸಾಗಿಸುವುದು ಎಂಬುವುದಕ್ಕೆ ಇರುವ ಇನ್ನೊಂದು ಪದ ವರ್ಷದ ಆರಂಭ ದಿನ ಎತ್ತು, ಕುಂಟೆಯ ಪೂಜೆ ಮಾಡಿ ಐದು ಸಾಲು ಗಳೇವು ಹೊಡೆದು ಬರುವ ಆಚರಣೆಯಾಗಿದೆ.

ನೇಗಿಲು ಕುಂಟೆ ಇತ್ಯಾದಿಗೆ ಬಳಸುವ ಮರಗಳನ್ನು 'ಮಿ'ಯಿಂದ ಕೊನೆಗೊಳ್ಳುವ ತಿಥಿಗಳನ್ನು ಬಿಟ್ಟು, ಉಳಿದ ಯಾವ ದಿನವಾದರು ಕತ್ತರಿಸಿದರೆ ಆ ಮರಕ್ಕೆ ಹುಳು ಬೀಳುವುದಿಲ್ಲ ಎಂಬ ನಂಬಿಕೆ ಇದಾಗಿದೆ.

ಇನ್ನೂ ಮುಂತಾದ ನಂಬಿಕೆ ಆಚರಣೆಗಳು, ಉತ್ತುವ ಕ್ರಿಯೆ ಕುರಿತಾದವುಗಳಾಗಿವೆ. ಕೆಲವನ್ನು ಮಾತ್ರ ಈ ಭಾಗದಲ್ಲಿ ಹೇಳಲಾಗಿದೆ. ನಮ್ಮ ಹಳ್ಳಿಯ ರೈತ ಮಹಿಳೆಯರು ತಮ್ಮ ದಿನನಿತ್ಯದ ಕಾಯಕದಲ್ಲಿ ಭೂಮಿ ತಾಯಿಯ ಪ್ರಾರ್ಥಿಸುತ್ತಾರೆ ಎಂದು ಜನಪದ ಕವಿ ಹೀಗೆ ಹೇಳುತ್ತಾನೆ : ಬೆಳಗಾಗುತ ಎದ್ದು ಯಾರ್‍ಯಾರ ನೆನೆಯಾಲಿ, ಎಳ್ಳು ಜೀರಿಗೆಯ ಬೆಳೆವಂಥ ಭೂಮಿತಾಯಿಯ ಎದ್ದೊಂದು ಗಳಿಗೆ ನೆನೆದೆನ ಎನ್ನುತ್ತಾರೆ. ಇನ್ನೂ ರೈತರು ಕೋಳಿ ಕೂಗುವ ಮೊದಲೇ ಎದ್ದು ಎತ್ತುಗಳ ಮುಖ ನೋಡಿ ಅವುಗಳಿಗೆ ಹೊಟ್ಟು, ಮೇವು ಹಾಕಿ ಹೊತ್ತೇರುವ ಮೊದಲೇ ಹೊಲಕ್ಕೆ ಹೋಗಿ ಹೊಲ ನೋಡಿ ಬರುತ್ತಾರೆ. ಸರ್ವಜ್ಞ ಮೂರ್ತಿಯ ತ್ರಿಪದಿಯಲ್ಲಿ ಹೀಗೆ ಹೇಳಲಾಗಿದೆ : 'ಉತ್ತೊಮ್ಮೆ ಹರಗದಲೆ ಬಿತ್ತೊಮ್ಮೆ ನೋಡದಲೇ ಹೊತ್ತೇರಿ ಹೊಲಕೆ ಹೊದರೆ ಅವನ ನೆತ್ತರ ಸುಡುವ ಸರ್ವಜ್ಞ ಎನ್ನುತ್ತಾನೆ.

೨. ಬಿತ್ತುವುದು

ಬಿತ್ತುವುದು ಒಂದು ವಿಶಿಷ್ಟ ರೀತಿಯ ಕ್ರಿಯೆಯಾಗಿದೆ. 'ಹದ ನೋಡಿ ಬಿತ್ತು, ಬೆದಿ ನೋಡಿ ಬೆಳಿ; 'ಬೆದೆ ಬಂದ ಕಾಲದಲ್ಲಿ ಬೇಲಿಯಲ್ಲಿ ಚೆಲ್ಲಿದರೂ ಬೆಳೆಯುತ್ತದೆ.' ಎಂಬ ಗಾದೆಯ ಮಾತುಗಳು ಬಿತ್ತುವ ಮಹತ್ವ ತಿಳಿಸುತ್ತವೆ. ಬಿತ್ತುವಾಗ ಭೂಮಿ ಒಂದು ರೀತಿಯಲ್ಲಿ ಹದಮಾಡಿ ಇಟ್ಟಂತಾಗಿದ್ದು, ಮಣ್ಣಿನಲ್ಲಿ ಬೀಜ ಚೆಲ್ಲಿದರೆ ತಾನೇ ಮಣ್ಣಿನಲ್ಲಿ ಮುಳಗಬೇಕೆಂದು ಹೇಳುತ್ತಾರೆ. ಭೂಮಿಯ ಮಣ್ಣು ಮೃದುವಾಗಿರುವಂತೆ ಉಳುಮೆ ಮಾಡಬೇಕೆಂದು ಅನುಭವಿ ರೈತರು ಹೇಳುತ್ತಾರೆ. ಬಿತ್ತುವ ಕ್ರಿಯೆಯನ್ನು ಕುರಿತು ಅನೇಕ ಬಗೆಬಗೆಯ ಆಚರಣೆಗಳು, ಪ್ರಾದೇಶಿಕತೆ ಹಿನ್ನೆಲೆಯಲ್ಲಿ ಭಿನ್ನ ಭಿನ್ನ ಸ್ವರೂಪದಲ್ಲಿ ಬಳಕೆಯಲ್ಲಿವೆ. ಅಂತವುಗಳಲ್ಲಿ ಕೆಲವು ಆಚರಣೆಗಳನ್ನು ಸಂಗ್ರಹಿಸಿ ಇಲ್ಲಿ ಚರ್ಚಿಸಲಾಗಿದೆ.

ಒಕ್ಕಲಿಗರಿಗೆ ಉತ್ತಿ ಬಿತ್ತಿ ಸಂವೃದ್ಧ ಬೆಳಯ ಪಡೆಯುವುದೇ ಅವರ ಉದ್ದೇಶವಾಗಿದೆ. ಮುಂಗಾರುಮಳೆ ಬರುತ್ತಲೇ ರೈತರು ತುಂಬಾ ಉತ್ಸಾಹದಿಂದ ಹೊಲ-ಗದ್ದೆಗಳನ್ನು ಹಸನ ಮಾಡಿ, ಆಗಿಹುಣ್ಣಿಮೆಯ ವೇಳೆಗೆ ಬಿತ್ತುವುದಕ್ಕೆ ಆರಂಭಿಸುತ್ತಾರೆ. ಬಿತ್ತನೆ ಮಾಡುವ ಹಿಂದಿನ ದಿವಸ ಅಂಬಲಿ, ಕಿಚಡಿ ತಯಾರಿಸಿ, ಗ್ರಾಮದೇವತೆಗಳ ಗುಡಿಗೆ ಹೋಗಿ ನೈವೇದ್ಯ ಅರ್ಪಿಸುವರು. ಮನೆಯಲ್ಲಿ ಜಗುಲಿಯ

ಮೇಲೆ ಕೂರಿಗೆ, ಸಡ್ಡೆಯನ್ನಿಟ್ಟು ಪೂಜಿಸುವರು. ಈ ಪದ್ಧತಿಯನ್ನು ಕುರಿತು 'ಜಾನಪದ ಸಂಪದ' ಕೃತಿಯಲ್ಲಿ ಹೀಗೆ ಹೇಳಲಾಗಿದೆ: "ಈ ಪದ್ಧತಿಗೆ ಕೂರಿಗೆ ದೇವಿ ಪೂಜೆಯೆಂದು ಹೆಸರು. ಬಿತ್ತಲು ಹೊರಟವರು ಅಂಬಲಿ ಕುಡಿದು, ಒಂದು ಹಿಡಿ ಬೀಜವನ್ನು ಜಗುಲಿಯ ಮೇಲಿಟ್ಟು, ಐದು ಹಿಡಿ ಬೀಜಗಳನ್ನು ಗ್ರಾಮದೇವತೆಯ ಹೊಸ್ತಿಲಿಗೆ ಸುರುವಿ, ನಮಸ್ಕರಿಸಿ ಬಿತ್ತಲು ಹೋಗುವುದು, ಮೊದಲಿನಿಂದಲೂ ನೆಡೆದು ಬಂದ ರೂಢಿ".[೮] ಇದು ಒಕ್ಕಲಿಗರಲ್ಲಿ ಕಂಡು ಬರುವ ಒಂದು ಬಗೆಯ ಆಚರಣೆಯಾಗಿದೆ.

ಕೂರಿಗೆಯ ಪೂಜೆ ಒಂದು ಪವಿತ್ರ, ಶ್ರದ್ಧಾಭಕ್ತಿಗಳಿಂದ ಮಾಡುವ ಒಂದು ಆಚರಣೆ. ಜೋಳ, ರಾಗಿ, ಅಕ್ಕಡಿ ಕಾಳು ಮುಂತಾದವುಗಳನ್ನು ಸಾಲು ಬಿತ್ತನೆ ಮಾಡಲು ಕೂರಿಗೆಯನ್ನು ಬಳಸುತ್ತಾರೆ. ಇದು ಮುಖ್ಯವಾಗಿ ದಕ್ಷಿಣ ಮತ್ತು ಉತ್ತರ ಕರ್ನಾಟಕದ ಭಾಗಗಳಲ್ಲಿ ಚಾಲ್ತಿಯಲ್ಲಿದೆ. ಮೂರು, ಐದು ಮತ್ತು ಏಳು ತಾಳುಗಳುಳ್ಳ ಕೂರಿಗೆಗಳಿವೆ. ಕೂರಿಗೆಯ ದಿಂಡನ್ನು ಗಟ್ಟಿ ಮರದಲ್ಲಿ ಮಾಡಲಾಗುತ್ತದೆ. ಕೊಳವೆಗಳು ಬಿದಿರಿನಲ್ಲಿ ಮಾಡುತ್ತಾರೆ. ಬಿತ್ತನೆಯ ಕ್ರಿಯೆ ಕೂರಿಗೆ ತುಂಬುವ ಕೆಲಸದಿಂದ ಪ್ರಾರಂಭವಾಗುತ್ತದೆ. ಪ್ರಾರಂಭದಲ್ಲಿ ಬಡಿಗೇರ ಅಡಿಗಲ್ಲು, ಅಡಿಗಟ್ಟೆಗಳನ್ನು ಪೂಜಿಸುವ ಆಚರಣೆ ಮಾಡಲಾಗುತ್ತದೆ. ವೀರಣ್ಣ ದಂಡೆಯವರ 'ದೇಶೀದೃಷ್ಟಿ' ಕೃತಿಯಲ್ಲಿ ಕೂರಿಗೆಯ ತುಂಬಿಸುವ, ಬಡಿಗೇರ ಮನೆಯಿಂದ ಶಾಸ್ತ್ರೋಕ್ತವಾಗಿ ಪೂಜೆಮಾಡಿ ತರುವ ಮತ್ತು ಕೂರಿಗೆಗೆ ವಿಶೇಷ ಪೂಜೆ ಹಾಗೂ ಬಿತ್ತನೆಯ ಕಾರ್ಯದವರೆಗೆ ನಡೆಯುವ ಆಚರಣೆಯನ್ನು ಕುರಿತು ವಿಸ್ತಾರವಾಗಿ ಹೇಳಿದ್ದಾರೆ. ಅದು ಹೇಗೆಂದರೆ

"ಅಡಿಗಲ್ಲು ಅಡಿಗಟ್ಟಿ ಪೂಜೆ ಮೊದಲ ಹೊಂಬಲ ಪೂಜಿ
ಕೂರಿಗಿ ಪೂಜೆ ಮೊದಲೀಗೆ । ಮ್ಯಾಲಿರುವ
ಶಿವಲಿಂಗ ಪೂಜಿಸರಿಯ್ಯಾಗೊ".[೯]

ಬಡಿಗೇರ ಮನೆಯಲ್ಲಿ ತಯಾರಾದ ಕೂರಿಗೆಯ ಪೂಜೆಯನ್ನು ಅತ್ಯಂತ ಶಿಸ್ತಿನಿಂದ ಕ್ರಮಬದ್ಧವಾಗಿ ಮಾಡಲಾಗುತ್ತದೆ. ಬಡಗಿಗೆ ಕೊಡಬೇಕಾದ ಆಯವನ್ನು ನೀಡಿ, ಒಕ್ಕಲಿಗನ ಮನೆಯ ಹೆಣ್ಣು ಮಕ್ಕಳು ಆರತಿ, ಹೂ, ಹಣ್ಣು, ಉಡಿ ಅಕ್ಕಿಯನ್ನು ತಂದು ಕೂರಿಗೆಯ ಪೂಜಿಸಿ, ಉಡಿಯಕ್ಕಿಯನ್ನು ಆಯದ ಜೊತೆಗೆ ಆತನಿಗೆ ನೀಡುತ್ತಾರೆ. ಕೂರಿಗೆಯ ತೆಗೆದುಕೊಂಡು ಹೋಗುವ ಬಗೆ ಹೇಗೆಂದರೆ

"ಕರಿಯ ಗೊಂಗಡಿ ತಂದು ಮುರಿದು ಟೊಪ್ಪಿಗಿ ಮಾಡಿ
ಹೊತ್ತಾನ ಒಕ್ಕಲಿಗ ಹೆಗಲಿಗಿ । ಕೂರಿಗಿ ದಿಂಡ
ಇಟ್ಟಾನ ತನ್ನ ಮನಿಮುಂದ" [೧೦]. ಎನ್ನಲಾಗಿದೆ.

ಕಂಬಳಿ ಟೊಪ್ಪಿಗೆಯ ಹಾಗೆ ಗೊಪ್ಪೆ ಹಾಕಿಕೊಂಡು, ಕೂರಿಗೆ ಹೊತ್ತ ರೈತ ಕೈಯಲ್ಲಿ ಕುಡುಗೋಲು, ಕೊಡಲಿ ಮುಂತಾದ ಆಯುಧಗಳನ್ನು ಹಿಡಿಯುತ್ತಾನೆ. ಕೂರಿಗೆಯು ಲಕ್ಷ್ಮೀಯ ಸಂಕೇತವೆಂದು ಜನಪದರೂ ಭಾವಿಸಿದ್ದರು. ಕೂರಿಗೆಯ ಹೊತ್ತ ರೈತ ಯಾರ ಹತ್ತಿರವೂ ಮಾತನಾಡದೆ ಕರಿಯ ಗೊಂಗಡಿ ಹಾಸಿ, ದಿಕ್ಕು ನೋಡಿ ಇಡುತ್ತಾನೆ. ಕೂರಿಗೆಗೆ ಮನೆಯಲ್ಲಿ ವಿಶೇಷ ಪೂಜೆ ಜರುಗುತ್ತದೆ. ಅದಕ್ಕೆ ಸೀರೆ ಸುತ್ತಿ, ಹೆಣ್ಣುಮಕ್ಕಳು ಧರಿಸುವ ಅಮೂಲ್ಯ ಆಭರಣಗಳ ಹಾಕಿ, ಎದುರಿಗೆ ಆರತಿ ತಟ್ಟೆಯು ಇಟ್ಟು, ಕಾಯಿ ಒಡೆದು ಕರ್ಪೂರವ ಬೆಳಗಿ ನಂತರ ಸಿಹಿ ಅಡಿಗೆಯ ನೈವೇದ್ಯವನ್ನು ಅರ್ಪಿಸುತ್ತಾರೆ.

"ಕೂರಿಗಿ ಪೂಜಕ ಏನೇನ ಇಡಬೇಕ
ಜರತಾರಿ ಮಡಿಬೇಕ ಉಡುಸೋದಕ । ಲಕ್ಷ್ಮೀಗಿ
ಕುಂಬಳಕಾಯಿ ಬೇಕ ಒಡಿಯೋದಕ".[೧೧]

ನಂತರ ಕೂರಿಗೆಯನ್ನು ಕಂಬಳಿ ಟೊಪ್ಪಿಗೆ ಹಾಕಿಕೊಂಡು ಹೊತ್ತು ಅತ್ಯಂತ ಭಕ್ತಿ ಭಾವದಿಂದ ಹೊಲಕ್ಕೆ ಸಾಗಿಸಲಾಗುತ್ತದೆ. ಆ ಮೇಲೆ ದಿಕ್ಕು ದೆಸೆ ನೋಡಿ ಹೊಲದಲ್ಲಿ ಇಡುತ್ತಾರೆ.

"ಕೂರಿಗೆ ಹಿಡಿದಾನ ತಲಿಮ್ಯಾಲ ಹೊತ್ತಾನ
ಎರಿ ಹೊಲದ ದಾರಿ ಹಿಡಿದಾನ । ಒಕ್ಕಲಿಗ
ಗಂಗಿ ದಿಕ್ಕೀಗಿ ಇಳವ್ಯಾನ"[೨೨]

ನಂತರ ಕೂರಿಗೆಯಿಂದ ಬಿತ್ತನೆ ಕ್ರಿಯೆಯನ್ನು ಪ್ರಾರಂಭಿಸಲು ಮುಂಜಾನೆಯ ಶುಭ ಸಮಯದಲ್ಲಿ ಹೊಲದಲ್ಲಿ ಕೂರಿಗೆಯ ಹೂಡಿ ಹೊಡೆಯುವುದನ್ನು ಕುರಿತು ಎರಡು ತ್ರಿಪದಿಯಲ್ಲಿ ಹೀಗೆ ಹೇಳಲಾಗಿದೆ :

"ಬೆಳ್ಳನ್ನ ಎರಡೆತ್ತು ಬೆಳ್ಳಿಯ ಬಾರಕೋಲು
ಬಂಗಾರ ಸೆಡ್ಡಿ ಬಲಗೈಯ್ಯಗ್ಗಿ । ಹಿಡಕೊಂಡು
ಹೊನ್ನ ಬಿತ್ಯಾರ ಹೊಳಿಸಾಲೊ ॥

ಬಡವ ನಿನ್ಹೊಲದಾಗ ಇದು ಏನು ಸೋಜಿಗ
ಹವಳಗವಳೆಂಭ ಎರಡೆತ್ತು । ಅಣ್ಣಯ್ಯ
ಮಾದೇವ ರಥವ ನಡೆಸ್ಯಾನೊ ॥"[೧೩]

ಬಿಳಿಯ ಎತ್ತುಗಳು, ಬೆಳ್ಳಿಯ ಬಾರುಕೋಲು, ಬಂಗಾರದ ಸೆಡ್ಡೆ ಬಲಗೈಲಿ, ಹೊನ್ನು ಬಿತ್ತುವುದು ಮತ್ತು ಮಾದೇಶನ ರಥವ ನಡಸ್ಯಾರ ಎಂಬ ಬಿತ್ತಣಿಕೆಯ ಸಂದರ್ಭದಲ್ಲಿ ಬಳಸಿರುವ ಮಾತುಗಳು ಈ ಆಚರಣೆಯ ಮಹತ್ವ, ಪವಿತ್ರತೆ, ಶುದ್ಧತೆಯನ್ನು ಕುರಿತು ಹೇಳುವಂತವುಗಳಾಗಿವೆ. ಕೂರಿಗೆ ಪೂಜೆಯ ಕುರಿತಾದ ಶಾಸ್ತ್ರೋಕ್ತ ಆಚರಣೆಯ ವಿಸ್ತಾರವಾದ ವಿವರಣೆಯನ್ನು ಶಾಸ್ತ್ರಗ್ರಂಥವಾದ 'ರಟ್ಟಮತ'ವೆಂಬ ಕೃತಿಯಲ್ಲಿ ಈ ರೀತಿ ಹೇಳಲಾಗಿದೆ.

"ಮಿಂದು ದಳಿಂಬಮನುಟ್ಟುಂ ।
ಚಂದನಮಂ ಪೂಸಿ ನೆರೆಯ ಪಟ್ಟನ ಬೊಟ್ಟಿಂ ॥
ಟ್ಟಂದು ನವಕುಸುಮದಾಕೃತ ।
ದಿಂದಂ ಬಾಸಿಂಗಮನಿಮಿಂ ಕಟ್ಟಿದ ಬಟುಕಂ ॥೨೫॥

ಪೊಸಕೂರಿಗೆ ಮಡಕೆಗಳಂ ।
ಕಿಸುಸುಣ್ಣ ಮನೆ ಪೂಸಿ ಗಟ್ಟಿದೊಸರಿಂದರಂ ॥
ದೆಸೆಯಂಬರಕ್ಕೆ(ರಾಕ್ಷ) ತೆಗಳಿಂ ।
ದೊಸೆದರ್ಚಿಸಿ ಮತ್ತೆ ಮಂತ್ರದಾ ಕ್ರಮದಿಂದಂ ॥೨೮॥"

ಕೃಷಿಕನು ಸ್ನಾನಮಾಡಿ ಮಡಿ ವಸ್ತ್ರಗಳನ್ನು ಉಟ್ಟು ಮೈಗೆ ಭಸ್ಮ ಗಂಧ ಕುಂಕುಮಾಧಿಗಳನ್ನು ಧರಿಸಿಕೊಂಡು ಇಷ್ಟದೇವತಾ ಪೂಜೆಯನ್ನು ಮಾಡಿ ಹೂಮಾಲೆಗಳನ್ನು ಕೊರಳಲ್ಲಿ ಹಾಕಿಕೊಂಡು ಪೂಜೆಯ ಕಾರ್ಯ ನೆರವೇರಿಸಿ ಮಂಗಳಾಕ್ಷತೆಯನ್ನು ಕೂರಿಗೆಯ ಮೇಲೆ ಚಲ್ಲಿ ಕ್ರಮಬದ್ದವಾಗಿ ಪೂಜಿಸುತ್ತಾನೆ ಎನ್ನಲಾಗಿದೆ.

ಜಾನಪದೀಯರ ಪ್ರಣಯ ಮತ್ತು ದಾಂಪತ್ಯ ಗೀತೆಗಳಲ್ಲಿ ಬರುವ ಒಂದು ತ್ರಿಪದಿಯಲ್ಲಿ

ಹಾಡು ಹಾಡೆಂದರೆ, ನಾನೇನು ಹಾಡಾಲೆ
ಹಾಡೊ ನನಗೆಣೆಯ ನನಮ್ಯಾಲೆ ।
ಮೂಡಾಣ ಜಾಣ ಕೂರೀಗಿ ಹೊಡ್ಡೆದಾಂಗ ॥ ಎನ್ನುವಲ್ಲಿ ಕೂರಿಗೆ ನಡೆಸುವುದು ಒಂದು ಜಾಣತನದ ವಿದ್ಯೆಯಾಗಿದೆ ಎಂಬುದು ತಿಳಿದುಬರುತ್ತದೆ. ದಕ್ಷಿಣ ಮತ್ತು ಉತ್ತರ ಕರ್ನಾಟಕ ಭಾಗಗಳಲ್ಲಿ ಈ ಆಚರಣೆಯಲ್ಲಿ ಉದ್ದೇಶ ಒಂದೇ ಆದರೂ ಸಹ ಮಾಡುವ ರೀತಿಯಲ್ಲಿ ವ್ಯತ್ಯಾಸ ಕಾಣುತ್ತೇವೆ. ದಕ್ಷಿಣ ಭಾಗದಲ್ಲಿ ಬಿತ್ತನೆಗೆ ಸೂಕ್ತ ಹದವಿರುವ ಸಮಯದಲ್ಲಿ ಎತ್ತುಗಳ ಜೊತೆಗೆ, ಬಿತ್ತನೆ ಸಾಮಾಗ್ರಿ ಸಮೇತ ಹೊಲಕ್ಕೆ ಹೋಗುತ್ತಾರೆ. ಕೂರಿಗೆಗೆ ಎತ್ತುಗಳನ್ನು ಹೂಡಿ ನಿಲ್ಲಿಸಿ, ಕ್ರಮಬದ್ಧವಾಗಿ ಪೂಜೆಮಾಡಿ, ನಮಸ್ಕರಿಸಿ, ರಾಗಿ ಬಿತ್ತಲು ನಿಂತವರ ಮಡಿಲಿಗೆ ಮೂರು ಬೊಗಸೆ ಹಾಕಿ, ಒಳ್ಳೆಯದಾಗಲಿ ಎಂದು ಹೆಣ್ಣುಮಕ್ಕಳು ಹಾರೈಸುತ್ತಾರೆ. ನಂತರ ಬಿತ್ತನೆಯ ಕ್ರಿಯೆ ಪ್ರಾರಂಭವಾಗುತ್ತದೆ. ಆದರೆ ಉತ್ತರ ಕರ್ನಾಟಕ ಭಾಗದಲ್ಲಿ ಇದು ಸಾಮೂಹಿಕ ಕ್ರಿಯೆಯಾಗಿದೆ. ಕೂರಿಗೆಯನ್ನು ಮನೆಯಲ್ಲಿಯೇ ಇಟ್ಟು ಪೂಜಿಸಿ ನಂತರ ಹೊಲಕ್ಕೆ ತೆಗೆದುಕೊಂಡು ಹೋಗಿ ಬಿತ್ತಲು ಪ್ರಾರಂಭಿಸುತ್ತಾರೆ. ಅಲ್ಲದೇ ಈ ಪೂಜೆಗೆ ಊರಿನ ಹಿರಿಯರನ್ನ ಕಿರಿಯರನ್ನ ಪ್ರಸಾದಕ್ಕೆ ಕರೆಯುವ ರೂಢಿ ಇದೆ. ವಿಶೇಷ ಅಡಿಗೆ ಮಾಡಿ ಬಂದವರಿಗೆ ಬಡಿಸುತ್ತಾರೆ. ಸಾಮಾನ್ಯವಾಗಿ ಜೋಳ ಮತ್ತು ಸಜ್ಜೆಯ ಕಡುಬು, ಸೇಂಗಾ ಹೋಳಿಗೆ, ಎಣ್ಣೆಗಾಯಿ ಬದನೆಕಾಯಿ, ಅಗಸಿಚಟ್ನಿ, ಉಳ್ಳಾಗಡ್ಡಿ ಚಟ್ನಿ ವಿವಿಧ ರೀತಿಯ ಪಲ್ಯಗಳು ಮಾಡುವುದು ವಾಡಿಕೆಯಾಗಿದೆ.

ಬಿತ್ತನೆಯ ಬೆಳೆಯನ್ನು ಯಾವುದು ಹಾಕಬೇಕು, ಯಾವುದು ಬಿಡಬೇಕು ಎಂಬುದನ್ನು ತಿಳಿಯಲು ಹಾಗೂ ಯಾವ ಬೆಳೆ ಸಮೃದ್ಧಿಯಾಗಿ ಬರುತ್ತದೆಂದು ಅರಿತುಕೊಳ್ಳಲು ಶಿವಮೊಗ್ಗ ಮತ್ತು ಚಿತ್ರದುರ್ಗದ ಅನೇಕ ಭಾಗಗಳಲ್ಲಿ ಆಚರಣೆಯಲ್ಲಿರುವ ನಂಬಿಕೆಗನ್ನು ಕುರಿತು 'ಮಲೆನಾಡು ಜಾನಪದ ಕೃತಿಯಲ್ಲಿ ಹೀಗೆ ಹೇಳಲಾಗಿದೆ. "ಬೆಳೆಯ ಸಮೃದ್ಧಿಯ ವಿಚಾರದಲ್ಲಿ ಅನೇಕ ತರಹದ ಧಾನ್ಯದ ಕಾಳುಗಳನ್ನು ಒಂದೊಂದು ಕಡೆ ನೆಲದಲ್ಲಿ ಹೂಳಿಟ್ಟು ಅವುಗಳನ್ನು, ದೇವರನ್ನು ಹೊಂಡಿಸಿ ತೆಗೆಸುವ ಕ್ರಮ ಕಂಡುಬರುತ್ತದೆ. ಮೊದಲು ಯಾವ ಕಾಳು ಸಿಗುತ್ತದೆ, ಅದರ ಬೆಳೆ ಊರಿಗೆ ಸಮೃದ್ಧಿಯಾದ ಫಲವನ್ನು ಕೊಟ್ಟಂತೆ. ಹೀಗೆ ಅನೇಕ ತರದ ಧಾನ್ಯಗಳನ್ನು ಒಂದು ಮಡಕೆಯಲ್ಲಿ ಹಾಕಿ ಮೇಲಿನಿಂದ ಮಡಕೆಯನ್ನು ಕೈಬಿಟ್ಟಾಗ ಯಾವ ಕಾಳು ದೂರದಲ್ಲಿ ಉರುಳಿ ನಿಂತುಕೊಳ್ಳುತ್ತದೋ ಅದರ ಬೆಳೆ ಹೆಚ್ಚಿಗೆ ಎಂಬ ನಂಬಿಕೆ "[೧೪]. ಆ ಧಾನ್ಯವನ್ನು ಹೆಚ್ಚಾಗಿ ಬಿತ್ತುತ್ತಾರೆ. ಬಿತ್ತನೆಮಾಡಲು ಮುನ್ಸೂಚನೆಯಾಗಿ ಈ ಆಚರಣೆ ಮಾಡಲಾಗುತ್ತದೆ.

ಮಲೆನಾಡಿನ ಭಾಗಗಳಲ್ಲಿ ಬೀಜ ಮೂಹೂರ್ತ ಮೇ ತಿಂಗಳು ಅರುಣಗಿರಿಯ ರಥೋತ್ಸವ ದಿನ ಸಾಂಪ್ರದಾಯಿಕತೆಯಿಂದ ನಡೆಯುತ್ತದೆ. ಇದನ್ನು ಕುರಿತು 'ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ' ಕೃತಿಯಲ್ಲಿ ಹೀಗೆ ಹೇಳಲಾಗಿದೆ "ಸಗಣಿಯಿಂದ ಸಾರಿಸಿದ ಕುಕ್ಕೆಗೆ ಕೆಂಪು ಬಿಳಿಸಾಮು

ಲೇಪಿಸಿ, ಅದಕ್ಕೆ ಬೀಜದ ಭತ್ತವನು ತುಂಬುತ್ತಾರೆ. ಈ ಬೀಜದ ಭತ್ತದ ಮೇಲೆ ಸಗಣಿಯಿಂದ ರೂಪಿಸಿದ ಬೆನಕನನ್ನು (ಹಸುವಿನ ಸಗಣಿಯ ಸಣ್ಣ ಉಂಡಗೆ ನಾಲ್ಕಾರು ಹಸಿರು ಗರುಕೆಯ ದಳಗಳನ್ನು ಸಿಕ್ಕಿಸಿರುತ್ತಾರೆ) ಇಟ್ಟು ಮೂಹೂರ್ತ ಮಾಡುವ ವ್ಯಕ್ತಿ ಗದ್ದೆಗೆ ಹೋಗುತ್ತಾನೆ. ಆಗೋಡಿಯ ಪೂರ್ವದಿಕ್ಕಿನ ಮೂಲೆಯಲ್ಲಿ ಬೀಜದ ಕುಕ್ಕೆಯನ್ನಿಟ್ಟು ಪಕ್ಕದಲ್ಲಿ ಹಣತೆ ಹತ್ತಿಸಿಟ್ಟು ಹಣ್ಣು, ಕಾಯಿಗಳಿಂದ ಪೂಜಿಸಿ, ಆ ಮೇಲೆ ಪೂಜೆಗೈದ ಜಾಗದಲ್ಲಿ ಸಣ್ಣ ನೇಗಿಲಿನಿಂದ ಮೂರೊ, ಐದೊ ಸಾಲು ಬಗೆದು ಹೂಲಿಗ್ಯೋ ಎಂದು ಹೇಳುತ್ತಾ ಬೀಜ ಬಿತ್ತುತ್ತಾರೆ. (ಗಾಳಿ ಇರುವೆ ಎದ್ದ ಕಾಲದಲ್ಲಿ ಬೀಜ ಮೂಹೂರ್ತ ಮಾಡಿದರೆ ಶ್ರೇಷ್ಠ ಎಂಬ ನಂಬಿಕೆ ಇದೆ)".[೧೫] ಎನ್ನಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ, ತಮಿಳುನಾಡಿನ ಪ್ರದೇಶಗಳಲ್ಲಿ ನೇಗಿಲು ಪೂಜೆ ಎಂಬ ವಿಶಿಷ್ಟ ಆಚರಣೆ ಮಾಡುತ್ತಾರೆ. ಅದು ಹೇಗೆಂದರೆ, ಹಸಿ ಸಗಣಿ ಬಟ್ಟಲಾಕಾರ ಮಾಡಿ ಸ್ವಲ್ಪ ಒಣಗಿಸಿ ಅದಕ್ಕೆ ಕೆಮ್ಮಣ್ಣು ಹಾಕಿ ಮುಂದಿನ ವರ್ಷ ಬಿತ್ತನೆ ಮಾಡುವ ಧಾನ್ಯಗಳ ಕಾಳುಗಳನ್ನು ಸ್ವಲ್ಪ ಸ್ವಲ್ಪ ಬಿತ್ತಬೇಕು. ಬಿತ್ತಿದ ನಂತರ ಸಗಣಿಯ ಬಟ್ಟಲನ್ನು ಹೊಸ ನೇಗಿಲುಗಳಿಗೆ ಕಟ್ಟುತ್ತಾರೆ. ಹೀಗೆ ಬಿತ್ತಿದ ಬೀಜಕ್ಕೆ ಒಂಭತ್ತು ದಿನಗಳವರೆಗೆ ನೀರು ಹಾಕಿ, ಕೊನೆಯದಿನ ಮನೆಯ ಹಿರಿಯರು, ಗ್ರಾಮದ ಹಿರಿಯರು ಸೇರಿ ಮೊಳಕೆ ಪರೀಕ್ಷಿಸುತ್ತಾರೆ. ಬೆಳೆಯ ಮೊಳಕೆಯ ಪ್ರಮಾಣ ನೋಡಿ ಮುಂದಿನ ವರ್ಷ ಹೆಚ್ಚಾಗಿ ಬಿತ್ತನೆ ಮಾಡುವ ಬೆಳೆಯನ್ನು ನಿರ್ಧರಿಸುತ್ತಾರೆ. ಅದು ಹೇಗೆಂದರೆ. "ರಾಗಿ ಐವತ್ತು ಪೈಸೆ (ಅರ್ಧಭಾಗ)ಮೊಳಕೆ ಬಂದಿದ್ದರೆ ಎಂಟಾಣಿ ಬೆಳೆ. ಮುಕ್ಕಾಲು ಭಾಗ ಬಂದಿದ್ದರೆ ಹನ್ನೆರಡಾಣಿ ಬೆಳೆ ಆಗುತ್ತದೆ. ಈ ರೀತಿ ನಿರ್ಧರಿಸಿ ಯಾವುದು ಹೆಚ್ಚು ಹುಲುಸಾಗಿ ಮೊಳಕೆ ಬಂದಿರುತ್ತದೆಯೋ ಅದನ್ನು ಈ ವರ್ಷಜಾಸ್ತಿ ಪ್ರಮಾಣದಲ್ಲಿ (ಒಂದ್ ಕೈ ಮುಂದೆ ಮಾಡಿ ಬಿತ್ಬೇಕು) ಬಿತ್ತ ಬೇಕೆಂದು ತೀರ್ಮಾನಿಸಿ ಕೊಳ್ಳುತ್ತಾರೆ. ಹೇಗೆಂದರೆ ಹೆಸರು ಕಾಳು ಉತ್ತಮವಾಗಿ ಮೊಳಕೆಯಾಗಿದ್ದರೆ ಅಕ್ಕಡಿಸಾಲಿಗೆ ಬೇರೆ ಕಾಳುಗಳನ್ನು ಕಡಿಮೆ ಮಾಡಿ ಹೆಸರು ಕಾಳು ಜಾಸ್ತಿ ಮಾಡುತ್ತಾರೆ. ತೊಗರಿ ಚೆನ್ನಾಗಿ ಮೊಳಕೆ ಬಂದಿದ್ದರೆ ಅದನ್ನು ಹೆಚ್ಚು ಮಾಡುತ್ತಾರೆ. ತೀರ್ಮಾನ ಮುಗಿದ ನಂತರ ಊರವರೆಲ್ಲರೂ ಸಾಮೂಹಿಕವಾಗಿ ತೆರಳಿ ಎಲ್ಲಾ ಮೊಳಕೆ ಬಂದ ಬಟ್ಟಲುಗಳನ್ನು ಗಂಗಮ್ಮನಿಗೆ (ನೀರಿನಸೆಲೆ)ಬಿಡುತ್ತಾರೆ ".[೧೬] ಇಂತಹ ಆಚರಣೆಗಳು ಕಂಡುಬರುತ್ತವೆ.

"ಮಗೆ ಮುಂಡುಗ ಹಾಕುವುದು"ಎಂಬ ಆಚರಣೆಯಲ್ಲಿ ಮಲೆನಾಡಿನ ವ್ಯವಸಾಯಗಾರರು 'ಎರಕಲು ಗೂಟದ' ಆಚರಣೆ ಮಾಡುತ್ತಾರೆ. ಮಗೆ ಮಳಿಯ ವೇಳೆ ಮಾಡುವ ಆಚರಣೆ ಇದಾಗಿದ್ದು, ಹಳ್ಳದ ದಂಡೆಯಲ್ಲಿ ಬೆಳೆಯುವ ಮುಂಗಡದ ತುಂಡುಗಳನ್ನು ಕಡಿದುತಂದು ಗದ್ದೆಯ ಪ್ರತಿ ಹಾಳೆಯಲ್ಲಿ ರಾತ್ರಿ ಹೊತ್ತು ಒಬ್ಬ ಗಂಡಸು ಮೈಮೇಲೆ ನೂಲೆಳೆಯಿಲ್ಲದಂತೆ ಬೆತ್ತಲೆಯಾಗಿ ಹೋಗಿ ನೆಡುತ್ತಾರೆ. ಹೀಗೆ ನೆಡುವುದರಿಂದ ಭೂಮಿ ಫಲವಂತಿಕೆ ಕಳೆದುಕೊಳ್ಳುವುದಿಲ್ಲ ಹಾಗೂ ಕ್ರಿಮಿ-ಕೀಡೆಗಳ ಕಾಟ ಬರುವುದಿಲ್ಲವೆಂಬ ನಂಬಿಕೆ ಇದೆ. ನಾಟಿ ಸಸಿಗಳನ್ನು ನಾಟಿಸಿ ಚಿಗುರೊಡೆಯುವಾಗ ಆಚರಿಸುತ್ತಾರೆ. ಅಲ್ಲದೇ ಇನ್ನೊಂದು ವಿಶಿಷ್ಟ ಆಚರಣೆ ಈ ಭಾಗಗಳಲ್ಲಿದೆ. ಅದು 'ತೋಟದ ಶಾಂತಿ' ಮಾಡುವುದು ಹೊಸ ಜಾಗ ಸಾಗುವಳಿ ಮಾಡಿ ಅಡಿಕೆ, ಭತ್ತ ಮೊದಲಾದ ಸಸಿಗಳನ್ನು ಹಾಕುವ ಹೊತ್ತಿನಲ್ಲಿ ಅಲ್ಲಿಗೆ ಬಲಿಕೊಡುವ ವಾಡಿಕೆ ಕಂಡುಬರುತ್ತದೆ. ಅಡಿಕೆ, ಭತ್ತ, ಕಬ್ಬು ಬಿತ್ತಿರುವ ಫಸಲಿಗೆ ಶಾಂತಿ ಮಾಡುವುದಕ್ಕೋಸ್ಕರ, ದುಷ್ಟಶಕ್ತಿಗಳಿಗೆ ತೃಪ್ತಿಪಡಿಸಲು 'ಹಾರ' ಕೊಡುವ ಆಚರಣೆ ಇದಾಗಿದೆ.

ಇನ್ನೂ ಹಲವಾರು ನಂಬಿಕೆ ಆಚರಣೆಗಳು ಕಾಣಸಿಗುತ್ತವೆ. 'ಕೃಷಿಪದಕೋಶ' ಕೃತಿಯಲ್ಲಿ ಬಳಸಿರುವ ಕೆಲವು ಆಚರಣೆಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಎಡೆ ಉಳುಮೆ ಪ್ರಾರಂಭ ಮಾಡುವ ಮೊದಲು ಸೂರ್ಯನ ಕಡೆಗೆ ಮುಖ ಮಾಡಿ ಕುಂಟೆ, ಮಡ್ಕೆ, ನೇಗಿಲು, ಕೂರಿಗೆಗೆ ಕಾಯಿ ಒಡೆದು ಪ್ರಾರಂಭಿಸುತ್ತಾರೆ. ಇದಕ್ಕೆ ಬಳ್ಳಾರಿ ಭಾಗದಲ್ಲಿ ಎಡೆ ಎಂದು ಕರೆದು ಆಚರಿಸುತ್ತಾರೆ.

ಕರಣ ಬೀಜ ಬಿತ್ತಲು ಗೊತ್ತುಮಾಡಿದ ಒಳ್ಳೆಯ ದಿವಸ, ಕೋಲಾರ ಭಾಗದಲ್ಲಿ ಆಚರಣೆಯಲ್ಲಿದೆ.

ಕಳಸ್ಮಂದು ಬಳ್ಳಾರಿಯ ಭಾಗದಲ್ಲಿ ಆಚರಣೆಯಲ್ಲಿದೆ. ಊರ ದೇವರಿಗೆ ವಿಶೇಷ ಪೂಜೆ ಸಂದರ್ಭದಲ್ಲಿ ಗೊತ್ತಾದ ಒಂದು ಮನೆತನದವರು ಮೊದಲು ಕಳಸ ಹಿಡಿದು ದೇವರಿಗೆ ಹೋಗುವರು. ಈ ಮನೆಯವರಿಗೆ ಕಳಸದ ಮನೆ ಎನ್ನುತ್ತಾರೆ. ಅವರು ಬಿತ್ತಿದ ಮೇಲೆಯೇ ಉಳಿದ ಊರಿನ ಮಂದಿ ಬಿತ್ತಲು ಪ್ರಾರಂಭಿಸುವುದಕ್ಕೆ ಕಳಸ್ಮಂದು ಎನ್ನುತ್ತಾರೆ.

ಕಾರ್ತಿಕದ ಕಾಯಿ ಚಿಕ್ಕಮಂಗಳೂರು ಭಾಗದ ಆಚರಣೆಯಾಗಿದೆ. ತೆಂಗು ಸಸಿ ಮಾಡಲು ಕಾರ್ತಿಕ ಮಾಸದಲ್ಲಿ ದೊರಕಿದ ಕಾರ್ತಿಕ ಕಾಯಿ ಶ್ರೇಷ್ಠವೆಂಬ ನಂಬಿಕೆಯಿದೆ.

ಕೂರಿಗೆ ಸಾಗಿಸುವುದು ರಾಯಚೂರು ಜಿಲ್ಲೆಯಲ್ಲಿ ಆಚರಣೆಯಲ್ಲಿದೆ. ಹಿಂಗಾರಿ ಅಥವಾ ಮುಂಗಾರಿ ಬೆಳೆಯ ಬಿತ್ತನೆ ಕೂರಿಗೆ ಪೂಜೆ ಮಾಡಿದ ಮೇಲೆಯೇ ಆಗಬೇಕು ಎನ್ನುವ ನಂಬಿಕೆ.

ನಿಧಿಕಾಳು ಬಳ್ಳಾರಿಯ ಭಾಗದಲ್ಲಿ ಆಚರಣೆಯಲ್ಲಿದೆ. ಬಿತ್ತುವ ಮುನ್ನ ಐದು ನಮೂನೆಯ ಕಾಳುಗಳನ್ನು ಕಲೆಸಿ ಬಿತ್ತುತ್ತಾರೆ. ಅದಕ್ಕೆ ನಿಧಿಕಾಳು ಎನ್ನುತ್ತಾರೆ.

ಇಳಗೂರ್ಗಿ ಪೂಜೆ ಚಿತ್ರದುರ್ಗ ಭಾಗದಲ್ಲಿ ಆಚರಿಸುತ್ತಾರೆ. ಮೊಳಕೆ ನಾಟಿದ ಮೇಲೆ ಕೂರಿಗೆಗೆ ಸಲ್ಲಿಸುವ ಪೂಜೆಯಾಗಿದೆ.

ಬೆಳಗೂರಿಗೆ ರಾಯಚೂರು ಭಾಗದಲ್ಲಿ ಕಂಡುಬರುತ್ತದೆ. ಬಿತ್ತಿದ ತರುವಾಯ ಮಾಡುವ ಪೂಜೆಯಾಗಿದೆ.

ಮದ್ಗಿಗತ್ತಿ ಪೂಜೆ ಬಳ್ಳಾರಿಯ ಭಾಗದಲ್ಲಿ ಬಿತ್ತುವ ದಿನ ಬೆಳಿಗ್ಗೆ ಕೂರಿಗೆಯನ್ನು ಶೃಂಗಾರ ಮಾಡಿ ಆಚರಿಸುವ ಪೂಜೆ ಇದಾಗಿದೆ.

ಬೀಜದ ಫಣಿ ರಾಯಚೂರು ಭಾಗದಲ್ಲಿ ಬೀಜಬಿತ್ತನೆ ಮಾಡಲು ಭವಿಷ್ಯ ಹೇಳುವುದು.

ಬೆನಕಪ್ಪ ಚಿತ್ರದುರ್ಗ, ಹಾಸನ ಭಾಗಗಳಲ್ಲಿ ಬಿತ್ತನೆಗೆ ಮುಂಚೆ ಪೂಜೆಗೊಳ್ಳುವ ಕಲ್ಲುದೇವರು.

ಮುಂಬಿತ್ನೆ ಬೀಜ ಚಿತ್ರದುರ್ಗ ಜಿಲ್ಲೆಯಲ್ಲಿ ಬಿತ್ತನೆಗೆ ಮೊದಲು ಊರ ದೇವಾಲಯಗಳ ಮುಂದೆ ಇಟ್ಟು ಬರುವ ಬೀಜ.

ಬಿತ್ನೆ ಹಬ್ಬ ತುಮಕೂರು ಭಾಗದಲ್ಲಿ ಮೊದಲ ಬಿತ್ತನೆಯ ದಿನ ಮಾಡುವ ಹುಗ್ಗಿ ಹಬ್ಬದ ಆಚರಣೆಯಾಗಿದೆ.

ಹಸರಂಬಲಿ ರಾಯಚೂರು, ಕಲಬುರ್ಗಿ ಭಾಗದಲ್ಲಿ ಬಿತ್ತಿ ಉಳಿದ ಬೀಜಗಳಿಂದ ಅಂಬಲಿ ಮಾಡಿ ಮಧ್ಯರಾತ್ರಿ ಹೊಲಕ್ಕೆ ಒಯ್ದು ಚೆಲ್ಲುವ ಆಚರಣೆಯಾಗಿದೆ. ಇನ್ನು ಮುಂತಾದ ಬಿತ್ತುವ ಆಚರಣೆಗಳನ್ನು ಕಾಣುತ್ತೇವೆ.

೩. ಒಕ್ಕುವುದು

ಒಕ್ಕುವುದು ಕೃಷಿಕರಲ್ಲಿ ಒಂದು ವಿಶಿಷ್ಟ ಬಗೆಯ ಸಂಪ್ರದಾಯವಾಗಿದೆ. ಸುಗ್ಗಿಯ ಕಾಲದಲ್ಲಿ ಅನೇಕ ಬಗೆಯ ನಂಬಿಕೆ ಆಚರಣೆಗಳು ಪರಂಪರಾಗತವಾಗಿ ನೆಡೆದುಕೊಂಡು ಬಂದಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಅನೇಕ ಆಚರಣೆಗಳು ಕಣ್ಮರೆಯಾಗಿವೆ. ಅಲ್ಲದೇ ರೈತರಲ್ಲಿ ಕಣಮಾಡಿ ಒಕ್ಕಲು ಮಾಡುವ ಕ್ರಿಯೆಗಳು ಬದಲಾಗಿವೆ. ಅನೇಕ ಯಂತ್ರಗಳಿಂದ, ಡಾಂಬರಿನ ರಸ್ತೆಯನ್ನೇ ಕಣವಾಗಿ ಬಳಸುವುದನ್ನು ಕಾಣಬಹುದಾಗಿದೆ. ಹಿಂದಿನಿಂದ ನಡೆದುಬಂದ ಸುಗ್ಗಿಯ ಕೆಲವು ಆಚರಣೆಗಳನ್ನು ಈ ಭಾಗದಲ್ಲಿ ಸಂಗ್ರಹಿಸಲಾಗಿದೆ. ಸುಗ್ಗಿಯ ಸಂಪ್ರದಾಯದಲ್ಲಿ ಕಣ ಮಾಡುವುದು, ಮೇಟಿ ನಾಟುವುದು, ತೆನೆ ಮುರಿಸಿ ಹಂತಿಕಟ್ಟುವುದು, ರಾಶಿ ಮಾಡುವುದು, ಕರಿಭಂಟ, ಬೂದುಗ, (ಬುದ್ಧಿವಂತ ಲಿಂಗ) ಮತ್ತು ಗೋಪಾಳ, ದಾನಧರ್ಮ ಕುರಿತಾದ ಸಂಪ್ರಾದಾಯಗಳು ಕಂಡುಬರುತ್ತವೆ. ಅವುಗಳ ಮೂಲ ಅರ್ಥವನ್ನು ರೈತರು ಇಂದು ಬಿಡಿಸಿ ಹೇಳಲಾರರು, ಅದರೂ ಹಿರಿಯರು ಮಾಡುವುದನ್ನು ನಾವು ಮಾಡುತ್ತೇವೆ ಎಂದು ಹೇಳುತ್ತಾರೆ.

ಒಕ್ಕಲಿಗರು ಶುಭದಿನಗಳಲ್ಲಿ ಮನೆ, ಊರಿನ ಹತ್ತಿರ; ಇಲ್ಲವೇ ಹೊಲ-ಗದ್ದೆಗಳಲ್ಲಿ ಕಣ ಮಾಡುತ್ತಾರೆ. ಸಾಮಾನ್ಯವಾಗಿ ಬ್ರೇಸ್ತವಾರ ಅಥವಾ ಗುರುವಾರ ಕಣ ಮಾಡಲು ಶ್ರೇಷ್ಠವೆಂದು ನಂಬಲಾಗಿದೆ. ಇಂತಹ ದಿನಗಳಂದು ಕಣಕೆತ್ತಿ, ನೀರು ಹೊಡೆದು ಎತ್ತುಗಳಿಂದ ತುಳಿಸಿ, ಕರೆಗಣ ಸಿದ್ದ ಮಾಡಿಕೊಳ್ಳುತ್ತಾರೆ, ಹೀಗೆ ಮಾಡಿದ ನಂತರ ಮೇಟಿಯ ನಾಟಲು ಕುಣಿಯನ್ನು ತೆಗೆದು, ಆ ಕುಣಿಯ ಹಸಿಯ ಮಣ್ಣನ್ನು ತೆಗೆದುಕೊಂಡು ಹೋಗಿ ಹೊಲದ ಸಮೀಪದ ಹಾದಿಯಲ್ಲಿ ಹಾಕುವ ಸಂಪ್ರದಾಯವಿದೆ, ಈ ಆಚರಣೆಯ ಅರ್ಥವನ್ನು ಬಿ.ಎಸ್ ಗದ್ದಗಿಮಠರವರು ತಮ್ಮ 'ಕನ್ನಡ ಜಾನಪದ ಗೀತೆಗಳು' ಎಂಬ ಕೃತಿಯಲ್ಲಿ ಹೀಗೆ ಬಿಡಿಸುತ್ತಾರೆ "ಕಣದ ಮೇಟಿಯ ಕುಣಿಕೆಯ ಐದು ಬೊಗಸೆ ಹಸಿ ಮಣ್ಣನ್ನು ಹಾದಿಗೆ ಹಾಕುವುದೆಂದರೆ, ಹಾದಿಗೆ ಔತಣ ಕೊಟ್ಟಂತೆ. ಸುಗ್ಗಿಯ (ದಾಸೋಹ)ನಡೆದಿದೆ, ಕೊನೆಯ ರಾಶಿಯ (ಆರಾಧನೆ)ದಿನಗಳು ಶುರುವಾದವು. ಜೋಗಿ, ಜಂಗಮ, ದಾಸ, ಬಡವರು, ಪರದೇಶಿಗಳು, ಭಿಕ್ಷಕರು ಮೊದಲಾದವರು ಒಕ್ಕಲಿಗನ ಕಣಕ್ಕೆ ಬಂದು ಅವನು ಕೊಡುವ ದಾನವನ್ನು ಒಯ್ಯಬೇಕೆಂದು ಹಾದಿಗೆ ಹಾಕಿದ ಈ ಹಸಿ ಮಣ್ಣು ಸೂಚಿಸುತ್ತದೆ. ಆ ಹಸಿ ಮಣ್ಣನ್ನು ಗುರುತಿಸಿದ ಮೇಲೆ ಸೂಚಿಸಿದ ಎಲ್ಲಾ ಜನರು ಸುಗ್ಗಿಯ ಕಣಕ್ಕೆ ಭಿಕ್ಷಕ್ಕೆಂದು ಹೊಗುವದನ್ನು ಬೆಳವಲದ ಎಲ್ಲಾ ಹಳ್ಳಿಗಳಲ್ಲಿಯೂ ಪ್ರತ್ಯೆಕ್ಷ ಕಾಣಬಹುದು".[೧೭] ಎಂದು ಹೇಳಿ ಕಣವನ್ನು ಕುರಿತು ಹೀಗೆ ಹೇಳಲಾಗಿದೆ.

ಕಣವೆ ಮಂಟಪವಾತೊ ಗುಣವಂತ ಬಸವೇಶ
ಹೊಣೆಗಾರ ರೈತ ದಂಡೇಶ । ಕಣಮೇಟಿ
ಗಣಿಗುರುವು ಕಣಕೆ ಪ್ರಭುಲಿಂಗೊ ॥

ಸುಗ್ಗಿಯ ಕಣವೇ ಮಂಟಪವೆಂದು ತಿಳಿದು, ಮೇಟಿಯೇ ಚನ್ನಬಸವ, ಆರಾಧನೆಯ ಮಾಡಿಸುವವನು ರೈತ ಅಂದರೆ ಬಸವೇಶ, ಇದಕ್ಕೆ ಗಣಿಯಾದ ಗುರುಪ್ರಭುದೇವ, ಕಣದೊಳಗಿನ ಬುದ್ಧಿವಂತ ಎಂದು ಒಕ್ಕಲಿಗರು ನಂಬಿದ್ದರು.

ದಕ್ಷಿಣ ಕರ್ನಾಟಕ ಭಾಗಗಳಲ್ಲಿಯೂ ಕಣ ಮಾಡುವ ಪದ್ಧತಿ ಮೇಲೆ ಹೇಳಿದಂತೆ ಅಂದರೆ ಕಣಕೆತ್ತಿ, ನೀರು ಹಾಕಿ ಕರೆಕಣ ಮಾಡಲು ಎತ್ತು, ಆಕಳು, ಎಮ್ಮೆ, ಸಾಕುಪ್ರಾಣಿಗಳ ಬಳಸಲಾಗುತ್ತದೆ.

ಆದರೆ ಹಂತಿಗೆ ಆಕಳು, ಎತ್ತು ಮಾತ್ರ ಬಳಸುತ್ತಾರೆ. ಮೇಟಿಗೆ ಬನ್ನಿ, ಶ್ರೀಗಂಧ, ಇಲ್ಲವೆ ಜಾಲಿಮರಗಳನ್ನು ಮಾತ್ರ ಬಳಸುತ್ತಾರೆ. ಮೇಟಿಯ ಮರವನ್ನು ಶನಿವಾರ ಅಥವಾ ಬುಧವಾರ ಇಲ್ಲವೆ ಅಮವಾಸೆಯ ದಿನ ಪೂಜೆಮಾಡಿ, ದೂಪಹಾಕಿ ಕಡಿಯುವುದು ಒಳ್ಳೆಯದೆಂದು ನಂಬಲಾಗಿದೆ. ಎಂ.ಭೈರೇಗೌಡರ 'ಜಾನಪದ ವೈವಿಧ್ಯ' ಕೃತಿಯಲ್ಲಿ ಈ ಆಚರಣೆಯನ್ನು ಕುರಿತು ಹೀಗೆ ಹೇಳುತ್ತಾರೆ "................ಕಣದಲ್ಲಿ ನೆಡಿಸಿದ ಮೇಟಿಗೆ ರಾಗಿಯನ್ನು ಕಂತೆಮಾಡಿ ಮುಡಿಸುವರು. ಹಂತಿಯ ಕೆಲಸ ಮುಗಿದ ನಂತರ ಮುಂದೆ ಬರುವ ಕಾರ ಹುಣಿಮೆಯ ದಿನ ಆ ತೆನೆಗಳಿಂದ ಕಾಳುಗಳನ್ನು ತೆಗೆದು ಅದರಿಂದ ತಯಾರಿಸಿದ ಖಾದ್ಯವನ್ನು ಎತ್ತುಗಳಿಗೆ ತಿನ್ನಿಸಿ ತಾವು ಉಣ್ಣುವರು. ಕಣ ಮಾಡುವ ಜಾಗದಲ್ಲಿ ಬನ್ನಿ ಇಲ್ಲವೇ ಎಕ್ಕದ ಗಿಡಬೆಳೆದಿದ್ದರೆ ಪ್ರಶಸ್ತ ಎನ್ನುವರು".[೧೮] ಅಲ್ಲದೇ ಕಣವನ್ನು ರೈತರು ಅತ್ಯಂತ ಪವಿತ್ರವೆಂದು ಭಾವಿಸಿ, ಚಪ್ಪಲಿ ಮೆಟ್ಟಿಕೊಂಡು ಬರುವಂತಿಲ್ಲ ಹಾಗೂ ಎಲೆ ಅಡಿಕೆ ಹಾಕುವಂತಿಲ್ಲ. ತೂರುವಾಗ ಮಾತನಾಡಬಾರದು ಎಂಬ ನಂಬಿಕೆಗಳಿವೆ, ಅವುಗಳ ಅರ್ಥ ಕಣವು ತಿನ್ನುವ ಅನ್ನ ಒಕ್ಕಲುಮಾಡುವ ಜಾಗವಾಗಿರುವುದರಿಂದ ಅದು ಗಲೀಜು ಆಗಬಾರದು. ತೂರುವಾಗ ಮಾತನಾಡಿದರೆ ಧೂಳು ದೇಹದೊಳಗೆ ಹೋಗಿ ಉಸಿರಾಟಕ್ಕೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕಾಗಿ ಈ ನಿಯಮಗಳನ್ನು ಮಾಡಿಕೊಂಡಿರುತ್ತಾರೆ. ಕಣದಲ್ಲಿ ಒಕ್ಕಲು ಮಾಡಲು ಬಳಸುವ ಸಲಕರಣೆಗಳನ್ನು ವಿಶಿಷ್ಟ ರೀತಿಯಾಗಿ ಕರೆಯುತ್ತಾರೆ. ಉದಾಹರಣೆಗೆ ತೂರುವ ಮರಕ್ಕೆ ಕೊಂಗ, ಪೊರಕೆಗೆ ಬುದ್ಧಿವಂತ, ಬೂದಿಗೆ ವಿಭೂತಿ, ಗುಂಡು ಕಲ್ಲಿಗೆ ರಥ, ಎತ್ತುಗಳಿಗೆ ಬಸವ, ಕೋಡುಗೋಲಿಗೆ ಬಸವಣ್ಣ ಅಥವಾ ಆಯುಧ, ಮೆರೆಗೋಲಿಗೆ ಮೆರೆಬಸವ, ರಾಗಿತೂರುವ ಉದ್ದಿಗೆಗೆ ಕುದುರೆ ಎಂದೂ ಕರೆಯುತ್ತಾರೆ. ಕಣದ ಭಾಷೆಯೇ ವಿಶಿಷ್ಟ ಮತ್ತು ಕೇಳಲು ಚೆಂದವಾಗಿ ಇರುತ್ತದೆ.

ಮಲೆನಾಡಿನ ಭಾಗಗಳಲ್ಲಿ ಮನೆಯ ಹತ್ತಿರ ಇಲ್ಲವೇ ಗದ್ದೆಯ ಬಳಿಯಲ್ಲಿ ಕಣ ಮಾಡುತ್ತಾರೆ. ಈ ಕಣ ಬಯಲು ಸೀಮೆಯ ಕಣದಷ್ಟು ದೊಡ್ಡದಾಗಿರುವುದಿಲ್ಲ. ಕೆಲವೊಮ್ಮೆ ಭತ್ತವನ್ನು ಮರದಿಮ್ಮಿಗೆ ಬಡಿದು ಬೇರ್ಪಡಿಸುತ್ತಾರೆ. ನಂತರ ಉಳಿದ ಕಾಳುಗಳನ್ನು ಕಣದಲ್ಲಿ ಒಕ್ಕಲು ಮಾಡುವ ಮೂಲಕ ಬೇರ್ಪಡಿಸುತ್ತಾರೆ.

ಗೂಡು ಪೂಜೆಯ ಆಚರಣೆ ಉತ್ತರ ಕರ್ನಾಟಕದ ರಾಶಿ ಪೂಜೆಯಾಗಿದೆ. ಇದು ನವಂಬರ, ಡಿಸೆಂಬರ ತಿಂಗಳಲ್ಲಿ ನೆಡೆಯುತ್ತದೆ. ಜೋಳ, ಸಜ್ಜೆ ಮುಂತಾದ ಬೆಳೆಗಳನ್ನು ತೆನೆಯ ಸಮೇತ ಕಟಾವು ಮಾಡಿ ಹೊಲದಲ್ಲಿಯೇ ಗೋಪುರಾಕೃತಿಯಲ್ಲಿ ಜೋಡಿಸುತ್ತಾರೆ. ಇದನ್ನೆ ಗೂಡು ಎನ್ನುತ್ತಾರೆ. ಒಂದು ಶುಭ ದಿನ ಬೆಳಗ್ಗೆ ಬಂಡಿಯನ್ನು ಹೂಡಕೊಂಡು ಬುತ್ತಿ ಭಂಡಾರವನ್ನು ತುಂಬಿಕೊಂಡು ಇಡೀ ಮನೆ ಮಂದಿಯಲ್ಲ ಹೊಲಕ್ಕೆ ಹೋಗಿ ಗೂಡನ್ನು ಶ್ರದ್ದೆ ಭಕ್ತಿಗಳಿಂದ ಪೂಜಿಸುತ್ತಾರೆ.

"ಮಿಂಚು ದೇವ ಪಂಚ ಕಲ್ಲುಗಳ
ಪಂಚ ಭೂಷಣದ ಮೆರಗು
ಅವುಗಳೆಡೆಯಲಿ ಸಜ್ಜೆ ಕಡುಬಿನ ನೈವೇದ್ಯ
ಗಾಳಿ ದೇವಗ ಭೂದೇವಗ
ಭೂ ತಾಯಿಯ ಮಡಿಲೊಳಗೆ ಸಾಗೇತಿ ಗೂಡುಪೂಜೆ"[೧೯] ಎಂದು ಪದ ಹಾಡುತ್ತಾರೆ.

ಹಿರಿಯರು ಹೊಲದ ಬದುವನ್ನು ಸುತ್ತುಹಾಕಿ, ಸಜ್ಜೆ ಗಡುಬಿನ ನೈವೇದ್ಯವನ್ನು ಗೂಡಿನ ಮುಂದಿಟ್ಟು ಬೀಜಹೊತ್ತು ಬೆಳೆಸಿದ ಭೂ ತಾಯಿಗೆ ನಮ್ಮ ಮೊದಲ ತುತ್ತು ಎನ್ನುತ್ತಾರೆ.

ಮಲೆನಾಡಿನ ಭಾಗ ಮತ್ತು ಅರೆ ಮಲೆನಾಡಿನ ಭಾಗಗಳಲ್ಲಿ ಕಣದ ಸುಗ್ಗಿಯಲ್ಲಿ ಕಣ್ಣಬ್ಬ ಅಥವಾ ಭರತ ಹುಣ್ಣಿಮೆ ವಿಶಿಷ್ಟ ರೀತಿಯ ಆಚರಣೆಯಾಗಿದೆ. ಅದು ಉತ್ತರ ಕರ್ನಾಟಕದ ಗೂಡು ಪೂಜೆಯನ್ನು ಹೋಲುತ್ತದೆ ಅನಿಸುತ್ತದೆ. ಇವರು ಇಡೀ ಹೊಲದಲ್ಲಿಯ ಬೆಳೆಯನ್ನು ಗೂಡು ಹಾಕಿ ಪೂಜಿಸಿದರೆ. ಮಲೆನಾಡಿನ ಭಾಗದಲ್ಲಿ ಸಾಂಕೇತಿಕವಾಗಿ ಆಚರಿಸುತ್ತಾರೆ. ಅದು ಹೇಗೆಂದರೆ "ಕಣದಲ್ಲಿ ಮೂರು ಸಿವುಡು ಸೊಪ್ಪೆಯನ್ನು ನಿಲ್ಲಿಸಿ ಗೂಡಿಸಲಿನಂತೆ ಹಾಕಬೇಕು. ಕೆಳಗಡೆ ನೆಲಬಳಿದು, ರಂಗೋಲಿ ಹಾಕಿ ಮೂರು ಚಿನ್ನಪ್ಪನನ್ನು ಇಟ್ಟು ಅಂದಿನ ವಿಶೇಷವಾದ ಅಡುಗೆಯಾದ ಹುರುಳಿಕಾಳಿನ ಮುಟಿಕೆಯನ್ನು ಅಲ್ಲಿ ಇಡಬೇಕು. ಪಕ್ಕದಲ್ಲಿ ದೀಪವನ್ನು ಹಚ್ಚಿ ಅದರಲ್ಲಿ ಗೇರು ಬೀಜಕ್ಕೆ ಒಂದು ಸೂಜಿಯನ್ನು ಸಿಕ್ಕಿಸಿ ಇಟ್ಟಿರಬೇಕು. ಜರಡಿಯಲ್ಲಿ ಎಲ್ಲಾ ತರಹದ ಪೂಜಿಸುವ ವಸ್ತುಗಳನ್ನು ತೆಗೆದುಕೊಂಡು ಬಂದು ಪೂಜಿಸಬೇಕು. ಇದೇ ಸಂದರ್ಭದಲ್ಲಿ ಹಳ್ಳದ ದಂಡೆಯಲ್ಲಿಯೂ ಈ ರೀತಿ ಗುಡಿಸಲು ಹಾಕಿ ಪೂಜಿಸುತ್ತಾರೆ"[೨೦]. ಎನ್ನಲಾಗಿದೆ.

ಬಯಲು ಸೀಮೆಯಲ್ಲಿ ಧಾನ್ಯವನ್ನು ಕಟಾವು ಮಾಡಿ ಕಣಕ್ಕೆ ತಂದು ಒಕ್ಕಲುಮಾಡಿ, ತೂರಿದ ನಂತರ 'ರಾಶಿ ಪೂಜೆ' ಮಾಡುತ್ತಾರೆ. ಜೋಳದ ರಾಶಿಯ ಪಕ್ಕದಲ್ಲಿ ಒಂದು ಕೋಡುಗಲ್ಲು, ಒಂದು ಮಿಳ್ಳೆ, ಒಂದು ಬೂತಪ್ಪ(ಬೆನ್ನಪ್ಪ), ಮೆರೆಕೋಲು, ಕುಕ್ಕೆ, ಮೊರ ಇತ್ಯಾದಿ ಒಕ್ಕಲು ಸಲಕರಣೆಗಳನಿಟ್ಟು ಪೂಜಿಸುತ್ತಾರೆ. ಮಲೆನಾಡಿನ ಭತ್ತದ ರಾಶಿಯ ಪೂಜೆಯೂ ಹೀಗೆಯೇ ನಡಿಯುತ್ತದೆ. ಒಂದು ಕುಕ್ಕೆಯಲ್ಲಿ ಭೂತನ ಕಾಳು ಅಂತ ತುಂಬಿಟ್ಟು ಅವನ್ನು ಮನೆಯ ಹೆಣ್ಣು ಮಗಳು ಹೊತ್ತುತಂದು ಹಗೇವುಗೆ ಮೂರು ಹಿಡಿ ಹಾಕಿ, ತೆಗೆದುಕೊಂಡು ಹೋಗುತ್ತಾರೆ. ಮಲೆನಾಡಿನ ಕಡೆ ಈ ರೀತಿ ತುಂಬಿದ ಭತ್ತವನ್ನು ಎತ್ತಿಗೆ ತಿನಿಸುತ್ತಾರೆ. ರಾಶಿಯ ಪೂಜೆಯ ದಿನ 'ರಾಶಿಕಿಚಡಿ' ಅಂತ ವಿಶೇಷ ಅಡಿಗೆಯನ್ನು ಜೋಳದಿಂದ ತಯಾರಿಸುತ್ತಾರೆ. ನಂತರ ಕಿಚಿಡಿಯನ್ನು ಊಟ ಮಾಡುತ್ತಾರೆ. ಹೀಗೆ ಸುಗ್ಗಿಯ ಹಬ್ಬದ ಮರುದಿನ ಮಾಡಿದ ಅಡುಗೆಯೆಲ್ಲವನ್ನು ಕಲಸಿಕೊಂಡು ಎಲ್ಲಾ ಹೊಲಗಳಿಗೂ ಹೊಲ್‌ಗ್ಯಾ, ಓಲ್‌ಗೋ ಉಗ್ಗಿ ಬರುವುದು ಇಲ್ಲಿನ ವಿಶೇಷವಾದ ಆಚರಣೆಯಾಗಿದೆ. ಇಂತಹ ಅನೇಕ ಆಚರಣೆಗಳನ್ನು ಕುರಿತು ವಿಶ್ಲೇಷಿಸಿರುವುದನ್ನು 'ಮಲೆನಾಡಿನ ಜಾನಪದ' ಕೃತಿಯಲ್ಲಿ ಗಮನಿಸಬಹುದು.

ಒಕ್ಕಲಿಗರ ಸುಗ್ಗಿಯ ಸಂದರ್ಭದಲ್ಲಿ ಕಂಡು ಬರುವ ಎರಡು ಪ್ರಮುಖ ಆಚರಣೆಗಳು ಬೂದುಗ ಮತ್ತು ಕರಿಭಂಟನನ್ನು ಕುರಿತಾದವುಗಳು, ಬೂದುಗ, ಕರಿಭಂಟನ ಆಚರಣೆ ಹಂತಿಯ ಕೊನೆಯಲ್ಲಿ ಮಾಡುವಂತದ್ದಾಗಿರುತ್ತದೆ. ಅದನ್ನು ಮಾಡುವ ಬಗೆಯನ್ನು ಕುರಿತು 'ದೇಶೀದೃಷ್ಟಿ' ಕೃತಿಯಲ್ಲಿ ಹೀಗೆ ಹೇಳಲಾಗಿದೆ. 'ಕಡಿ ಎತ್ತಿನ ಹೆಂಡಿ ಹಿಡಿದು, ಅದರಲ್ಲಿ ಮದನ ಕಲಿಸಿ, ಲಿಂಗಾಕಾರಮಾಡಿ ಹಂತಿ ಕಟ್ಟಿದ ಎತ್ತುಗಳ ಬಾಲದ ಜಡೆಯ ಎಳೆಗಳನ್ನು ಕಿತ್ತಿತಂದು ಬುದುಗನ ತಲೆಗೆ ಚುಚ್ಚುತ್ತಾರೆ. ಇದು ಬೂದಗನ ನಿರ್ಮಾಣದ ಪದ್ಧತಿ. ಇದಕ್ಕೆ ಕೆಲವು ಕಡೆ 'ಚೆಂದಕಿರಾಮ' ಎಂತಲೂ ಕರೆಯುತ್ತಾರೆ. ಇತ್ತೀಚೆಗೆ ಈತನನ್ನು ಅಲ್ಲಮನ ಪ್ರತೀಕವೆಂತಲೂ ಕರೆಯಲಾಗುತ್ತದೆ. ಬೂದುಗ ಮಾಡುವ ಎಲ್ಲಾ ವಸ್ತುಗಳು ತಮ್ಮ ಮಂಗಳ ಮಯವಾದವುಗಳು. ಅದಕ್ಕಾಗಿ ಇವನು ಸತ್ ಶಕ್ತಿಯ ದೇವರಿದ್ದು ಕಣದಲ್ಲಿಯ ರಾಶಿ ಕಾಯುವ ಜವಾಬ್ದಾರಿ ಅವನದಾಗಿರುತ್ತದೆ. ಅದಕ್ಕಾಗಿ ಇದು ದುಷ್ಟಶಕ್ತಿಯ

ಪ್ರತೀಕವಾಗಿರಲಿಕ್ಕಿಲ್ಲ ಎಂದು ವೀರಣ್ಣ ದಂಡೆಯವರು ಅಭಿಪ್ರಾಯಪಡುತ್ತಾರೆ. 'ತನ್ನ ರಾಶಿಗೆ ಕೇಡು ಬರದಿರಲಿ, ಭೂತ, ಪಿಶಾಚಿ ಮೊದಲಾದವುಗಳ ಕಂಟಕ ಹತ್ತದಿರಲಿ ಎಂದು ದುಷ್ಟಶಕ್ತಿಯ ಸಂಕೇತವಾದ ಈ ಬೂದುಗನನ್ನು ಮಾಡಿ ಸ್ತುತಿಸುತ್ತಾನೆ' ಎಂದು 'ಉತ್ತರ ಕರ್ನಾಟಕದ ಹಂತಿಯ ಹಾಡುಗಳು' ಕೃತಿಯಲ್ಲಿ ಎಂ.ಎಸ್.ಲಠ್ಠೆಯವರು ಅಭಿಪ್ರಾಯ ಪಡುತ್ತಾರೆ. ಒಟ್ಟಾರೆಯಾಗಿ ಈ ಆಚರಣೆ ತುಂಬ ಕುತೂಹಲಕಾರಿಯಾಗಿದ್ದು ಇನ್ನೂ ಹೆಚ್ಚಿನ ಸಂಶೋಧನೆಯಾಗಬೇಕಾದ ವಿಷಯವಾಗಿದೆ.

ಕರಿಭಂಟನ ಆಚರಣೆಯೂ ಒಕ್ಕಲು ವೇಳೆಯಲ್ಲಿ ವಿಶೇಷವಾದದ್ದು. ಮದನ ಮನಗಿಸಿದ ನಂತರ ದಂಡಿಯ ಸುತ್ತ ಒಳಮಗ್ಗಲು ಮಲಗಿಸಿದ ಮದನದ ಮೇಲೆ ರವದಿಸುಟ್ಟ ಕರಕದಿಂದ ಮಂಡಲ ಬರೆಯುತ್ತಾರೆ. ಇದನ್ನೆ ಕರಿಭಂಟ ಎಂದು ಕರೆಯುತ್ತಾರೆ. ಭಂಟ ಎಂದರೆ ಕಾಪಾಡುವ ಶಕ್ತಿಶಾಲಿ, ವೀರ ಎಂಬ ಅರ್ಥಗಳು ಬರುತ್ತವೆ. ಕರಿಭಂಟನನ್ನು ಬರೆದು ಕಡೆಗಾಗುವ ಸುಂದರವಾದ ಸನ್ನಿವೇಶವನ್ನು ಜಾನಪದೀಯರು ಹೀಗೆ ಹೇಳುತ್ತಾರೆ.

"ಹೊಲಕ ಹೊಂಟಾಳ ನಾರಿ ಉಟ್ಟಾಳ ಹೂವಿನ ಸೀರಿ
ತೊಟ್ಟಾಳ ಮಗ್ಗಿಯ ಕುಬಸ। ಹೊತ್ತಾಳ ಹುಗ್ಗಿಯ ಹರಿಯ
ಯಂಬಲ ಗಡಗಿ ಎದುರಾಗಿ ಬರುವಾಗ
ಕಂರಿಬಂಟನ ಬರೆದು ಕಡಿಗಾಗಿ ।"

ಕಣದ ರಾಶಿಯ ಮೇಲೆ ಕೆಟ್ಟ ದೃಷ್ಟಿ ಬೀಳದಿರಲೆಂದು, ತಮ್ಮ ರಾಶಿ ಹುಲುಸಾಗಲಿ ಎಂದೂ, ಯಾವುದೇ ಕೆಟ್ಟ ಕಂಟಕಗಳು, ದುಷ್ಟ ಶಕ್ತಿಗಳು ಕಣದಲ್ಲಿ ಬರದಿರಲಿ ಎಂದೂ ದುಷ್ಟಶಕ್ತಿಯ ನಿವಾರಕನಾದ ಹನುಮನ ರೂಪವನ್ನು ಕಣದಲ್ಲಿ ಬರೆಯುತ್ತಾರೆ. ಕೆಲವು ಕಡೆ ಕಂರಿಭಂಟನನ್ನು 'ಮಡಿವಾಳ' ಶರಣನೆಂದೂ ಕರೆಯುತ್ತಾರೆ.

ರೈತರು ಬಿಡುವಿನ ವೇಳೆಯಲ್ಲಿ ಮತ್ತು ಜಾನುವಾರುಗಳಿಗೆ ಸಂಬಂಧಿಸಿದಂತೆ ಹಲವಾರು ನಂಬಿಕೆ ಆಚರಣೆಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಗ್ರಹಿಸಿ ಹೇಳಲಾಗಿದೆ.

ಸುಗ್ಗಿಯ ಸಂಭ್ರಮದ ಹಬ್ಬವಾಗಿ ಸಂಕ್ರಾಂತಿ ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿ ಆಚರಿಸಲಾಗುತ್ತದೆ. ತಮಿಳುನಾಡಿನಲ್ಲಿ ಬಹುದೊಡ್ಡ ಹಬ್ಬವಾಗಿ 'ಪೊಂಗಲ್' ಎಂದೂ, ಕರ್ನಾಟಕದಲ್ಲಿ ಸಂಕ್ರಾತಿ ಎಂದು ಕರೆಯುತ್ತಾರೆ. ಸಂಕ್ರಾಂತಿಯು ಎಲ್ಲಾ ರಾಜ್ಯಗಳಲ್ಲಿ ಒಂದೇ ಸಮಯಕ್ಕೆ ಆಚರಿಸುವ ಹಬ್ಬವಾದರೂ, ಅದರ ಉದ್ದೇಶ ಒಂದೇ ಆದರೂ ಮಾಡುವ ವಿಧಾನಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳುಂಟು. ಕರ್ನಾಟಕದ ಅನೇಕ ಭಾಗಗಳಲ್ಲಿ ಭಿನ್ನ ಭಿನ್ನ ರೀತಿಯಲ್ಲಿ ಆಚರಣೆ ಮಾಡುತ್ತಾರೆ. ಎಳ್ಳು, ಕಡಲೆ, ಹುರಿಗಡಲೆ, ಕೊಬ್ಬರಿ, ಬೆಲ್ಲದ ಮಿಶ್ರಣದ ಎಳ್ಳು-ಬೆಲ್ಲ ಬೀರುವ ಸಂಪ್ರದಾಯ. 'ಪೊಂಗಲ್' ಹುಗ್ಗಿ ಗೊಜ್ಜಿನ ಸಿದ್ಧತೆಕೂಡ ಪ್ರಾಮುಖ್ಯತೆ ಪಡೆಯುತ್ತದೆ. ಹಳ್ಳಿಗಳಲ್ಲಿ ಕಣದ ಪೂಜೆ, ಭೂಮಿಪೂಜೆ, ಕುಣಿತಗಳು ಮತ್ತು ಹಳ್ಳಿಗಳಲ್ಲಿ ಹಸು ಎತ್ತುಗಳ ಮೈತೊಳೆದು ಕೊಂಬಿಗೆ ಬಣ್ಣ ಬಳಿದು ಅಲಂಕಾರ ಮಾಡಿ, ಗೋಪೂಜೆ ಮಾಡುತ್ತಾರೆ. ಕೆಲವು ಕಡೆ ಮೆರವಣಿಗೆ ಮಾಡಿಸಿ ಕಿಚ್ಚು ಹಾಯಿಸಿ ದುಡಿದ ಪ್ರಾಣಿಗಳಿಗೆ ದೃಷ್ಟಿತಾಗದಿರಲೆಂದು ಹೀಗೆ ಮಾಡುತ್ತಾರೆ. 'ಎಳ್ಳು ಬೆಲ್ಲ ಕೊಳ್ಳಿ, ಒಳ್ಳೊಳ್ಳೆ ಮಾತನಾಡಿ' ಎಂದೂ, 'ಹೂವಾಗಿ ಬಾಳೋಣ ಜಳ್ಳನ್ನು ಗಾಳಿಗೆ ತೂರೋಣ' ಎಂದು ಹಾರೈಕೆಯ ಮಾತುಗಳು ಕಂಡುಬರುತ್ತವೆ. ಸಕಲಧಾನ್ಯಗಳನ್ನು ಮನೆಯ ಚೀಲ, ಗುಡಾಣ, ಹರವಿ,

ಕಣಜ ಮುಂತಾದವುಗಳಲ್ಲಿ ತುಂಬಿ ತುಳುಕಾಡುವ ಕಾಲದಲ್ಲಿ ಈ ಹಬ್ಬದ ಆಚರಣೆ ವಿಶೇಷವಾಗಿದೆ. ಇದು ಸಮೃದ್ಧಿಯ ಸಂಕೇತ ಆಗಿದೆ. ಜೀವಿಗಳ ಚೇತನವಾದ 'ಸೂರ್ಯ' ಕರ್ಕರಾಶಿಯಿಂದ ಉತ್ತರಾಯಣ ಮಕರ ರಾಶಿಯತ್ತ ತನ್ನ ದಿಕ್ಕು ಬದಲಿಸುವುದರಿಂದ ಈ ಹಬ್ಬಕ್ಕೆ ವೈಜ್ಞಾನಿಕ ಮಹತ್ವವೂ ಇದೆ. ಸಂಕ್ರಮಣ ಎಂದರೆ ಪರಿವರ್ತನೆ ಎಂದೂ ಹೇಳಲಾಗುತ್ತದೆ.

ಯುಗಾದಿ ರೈತರ ಸಂಪೂರ್ಣ ಬಿಡುವಿನ ಕಾಲದಲ್ಲಿ ಬರುವಂತಹ ಹಬ್ಬ. ವ್ಯವಸಾಯದ ಕೊನೆ ಮತ್ತು ಆರಂಭದಲ್ಲಿ ಬರುವಂತದ್ದು. 'ಊರಿಗೆ ಬಂತು ಯುಗಾದಿ, ನಮಗೆ ಬಂತು ತಗಾದೆ' ಎಂಬ ಗಾದೆ ಕೆಲವು ಕಡೆ ಕಂಡುಬರುತ್ತದೆ. ತುಂಬಾ ಕೆಲಸಗಳು ರೈತಾಪಿ ವರ್ಗದಲ್ಲಿ ಈ ವೇಳೆಯಲ್ಲಿ ಕಂಡುಬರುತ್ತವೆ. ದನ-ಕರುಗಳಿಗೆ ಮೇವು ಸಂಗ್ರಹಣೆ, ವ್ಯವಸಾಯ ಸಲಕರಣೆಗಳನ್ನು ಹೊಂದಿಸಿಕೊಳ್ಳುವುದು, ಅನೇಕ ದನಗಳ ಜಾತ್ರೆ, ದೇವರ ಜಾತ್ರೆಗಳು ಕಂಡುಬರುತ್ತವೆ. ಯುಗಾದಿಯೂ ಮೂರು ದಿನದ ಹಬ್ಬ. ಮೊದಲನೆಯ ದಿನ ಮುಸುರೆ ಹಬ್ಬ, ಪಾತ್ರೆ, ಪಗಡಗಳನ್ನು ತೊಳೆದು ಹೊಸ ನೀರು ತುಂಬಿ ಹದಿನೈದು ದಿನಗಳಿಂದ ಮಾಡುವ ಸ್ವಚ್ಛತಾ ಕಾರ್ಯಕ್ಕೆ ಅಂತಿಮ ರೂಪ ನೀಡಲಾಗುತ್ತದೆ. ಎರಡನೆಯ ದಿನ ಸಿಹಿ ಹಬ್ಬ. ಮನೆಯ ಮಕ್ಕಳೆಲ್ಲ ಎಣ್ಣೆಯ ಸ್ನಾನ ಮಾಡಿ ಹೊಸ ಬಟ್ಟೆ ತೊಡುತ್ತಾರೆ. ಎಲ್ಲಾ ಬಾಗಿಲುಗಳ ಹೊಸ್ತಿಲಿಗೂ, ದನಗಳ ಕೊಟ್ಟಿಗೆಗೂ ಮಾವಿನ ಎಲೆ ತೋರಣ ಕಟ್ಟಿ ಬೇವಿನ ಚಿಕ್ಕ ಚಿಕ್ಕ ಕೊಂಬೆಗಳನ್ನು ಮನೆಯ ಎಲ್ಲಾ ಕಡೆಗೂ ಸಿಂಗರಿಸುತ್ತಾರೆ. ಮನೆಯ ಯಜಮಾನ ಎಲ್ಲರಿಗೂ ಬೇವು-ಬೆಲ್ಲ ಹಂಚುತ್ತಾನೆ. ಮನೆಗೆ ಯಾರೇ ಬಂದರೂ ಅವರಿಗೆ ಬೇವು-ಬೆಲ್ಲ ನೀಡಲಾಗುತ್ತದೆ. ಹೋಳಿಗೆ, ಗಟ್ಟಕ್ಕಿ ಪಾಯಸ, ಅಕ್ಕಿಪಾಯಸ, ಕಡುಬು ವಿಶೇಷ ಅಡುಗೆಗಳು. ಈ ದಿನ ಕೆಲವು ಕಡೆ ಎತ್ತುಗಳಿಗೆ ಗೌಸು(ಜೂಲು) ಹೊದಿಸಿ, ಚೆಂಡುಹೂವಿನಹಾರ ಹಾಕಿ ಬಂಡಿ ಕಟ್ಟಿ ದೇವಾಲಯಕ್ಕೆ ಮೂರು ಸುತ್ತು ಹಾಕುತ್ತಾರೆ. ಮೈಸೂರು ಸೀಮೆಯಲ್ಲಿ ದವಸ-ಧಾನ್ಯಗಳನ್ನು ಕಣದಲ್ಲಿ ಒಟ್ಟಿ ಪೂಜಿಸುವುದು ಕಂಡುಬರುತ್ತದೆ. ಮೂರನೇ ದಿನದ ಹಬ್ಬ ಹೊಸತೋಡುಕು. ಇದು ಕರಿಹಬ್ಬ ಎಂದು ಜನಪ್ರಿಯವಾಗಿದೆ.

ಉತ್ತರ ಕರ್ನಾಟಕದ ಕೆಲವು ಕಡೆ ಚಕ್ಕಡಿ (ಗಾಡಿ)ಗೆ ತರತರ ಬಣ್ಣ ಹಚ್ಚಿ ಸಿಂಗರಿಸುತ್ತಾರೆ. ಚಕ್ಕಡಿಯ ಒಂದೊಂದು ಭಾಗಕ್ಕೆ ಒಂದೊಂದು ಬಣ್ಣ, ಗಾಲಿಗಳಿಗೆ ಕೆಮ್ಮಣ್ಣು, ಗಾಲಿ ಅಂಚಿಗೆ, ಗುಂಭಗಳಿಗೆ, ಗುಜ್ಜುಗಳಿಗೆ ಸುಣ್ಣ ಬಳಿಯುವುದು ವಾಡಿಕೆ. ಬಯಲು ಸೀಮೆಯಲ್ಲಿ ಕೆಲವು ಜನಾಂಗದವರು ಕೃಷಿ ಆಯುಧಗಳನ್ನಿಟ್ಟು ಪೂಜಿಸುತ್ತಾರೆ. ಇದನ್ನು ಗಳೆ ಪೂಜೆ ಎಂದು ಕರೆಯುತ್ತಾರೆ. ಅಲ್ಲದೇ ಹಿರಿಯರ ಸಮಾಧಿಗಳಿಗೆ ಹಣ್ಣು-ಕಾಯಿ ಎಡೆ ಹಾಕಿ ಪೂಜಿಸುತ್ತಾರೆ. ಮನೆಯಲ್ಲಿಯ ಹಳೆಯ ಮಡಿಕೆಗಳ ಎಸೆದು ಹೊಸಮಡಿಕೆಗಳನ್ನು, ಕೆಲವು ವ್ಯವಸಾಯದ ಸಾಮಾನುಗಳನ್ನು ತರುತ್ತಾರೆ. ಹಬ್ಬದ ಮೊದಲನೇ ದಿನ ಪಂಚಾಂಗ ಕೇಳಿ, ಮಳೆ-ಬೆಳೆ ಮತ್ತು ಮನುಷ್ಯರ ಭವಿಷ್ಯ ತಿಳಿದುಕೊಳ್ಳುವುದು. ಯುಗಾದಿ ಎರಡನೇ ದಿನ ಚಂದ್ರನ ನೋಡಿ ಮಳೆ ಬೆಳೆ ನಿರ್ಧಾರ ಮಾಡುವುದು ಚಂದ್ರನ ಯಾವ ಭಾಗ ಮೇಲಿರುತ್ತದೆಯೋ ಆ ಭಾಗಕ್ಕೆ ಉತ್ತಮ ಫಸಲು, ಬಿದ್ದಭಾಗಕ್ಕೆ ಸಾಧಾರಣ ಎಂದು ನಿರ್ಧರಿಸುತ್ತಾರೆ. ಇನ್ನು ಅನೇಕ ಬಗೆ ಬಗೆಯಲ್ಲಿ ಆಚರಿಸಿಕೊಳ್ಳುತ್ತಾರೆ.

ಭತ್ತ ಮುಂತಾದ ಬೆಳೆಗಳು ಹೊಡೆ ಕೀಳುವ ಸಮಯದಲ್ಲಿ ಭೂಮಾತೆ ಗರ್ಭಿಣಿಯಾದಳೆಂದು ಭಾವಿಸಿ, ಅವಳಿಗೆ ಸೀಮಂತ ಮಾಡಿ ಆಕೆಯ ಸುಪ್ತ ಬಯಕೆಗಳನ್ನು ತೀರಿಸುವ ಅರ್ಥಪೂರ್ಣ ಆಚರಣೆಯೇ ಈ ವಿಶಿಷ್ಟ ಭೂಮಿ ಹುಣ್ಣಿಮೆ. ರೈತರು ಭೂಮಿಯ ಋಣ ತೀರಿಸಲು ಮಾಡಿಕೊಂಡ

ಆಚರಣೆಯಾಗಿದೆ. ಭೂಮಿ ಹುಣ್ಣಿಮೆಯನ್ನು ಕುರಿತು ವಿಶಿಷ್ಟವಾದ ಲೇಖನವನ್ನು ಶ್ರೀಕಂಠ ಕೂಡಿಗೆಯವರು ಅರ್ಥಪೂರ್ಣವಾಗಿ ಬರೆದಿದ್ದಾರೆ. ಮಲೆನಾಡು, ಅರೆ ಮಲೆನಾಡಿನ ಭಾಗಗಳಲ್ಲಿ ಕಂಡುಬರುತ್ತದೆ. ಗೌರಿ ಹಬ್ಬದ ಹೊತ್ತಿಗೆ ಗಡಿಗೆ ಮುಳುಗೊ ಪೈರು, ಮಾರ್ನವಮಿಗೆ ಮಾರುದ್ದ ಹೊಡೆ, ಸಿವರಾತ್ರಿಗೆ ಸೀಳುಕಾಯಿ, ಯುಗಾದಿಗೆ ಉಗುಳುಕಾಯಿ ಎಂಬ ಮಾತುಗಳು ಫಸಲಿನ ಒಂದೊಂದು ಹಂತದ ಬೆಳವಣಿಗೆಯನ್ನು ಕುರಿತು ಹೇಳಿರುವುದಾಗಿದೆ. ಈ ಹಬ್ಬದ ಆಚರಣೆಯ ಕುರಿತು 'ಮಲೆನಾಡು ಜಾನಪದ'ಎಂಬ ಕೃತಿಯಲ್ಲಿ ಚರ್ಚಿಸುತ್ತಾ. "ಸಮೃದ್ಧಿಯಾಗಿ ಬೆಳೆದು ಮಾರುದ್ದ ಹೊಡೆ ಕಿತ್ತ ಫಸಲಿಗೆ ಶಾಂತಿ ಮಾಡಿಸುವ ಸಲುವಾಗಿ 'ಭೂಮಿ ಹುಣ್ಣಿಮೆ' ಹಬ್ಬದ ಆಚರಣೆ ಕಂಡುಬರುತ್ತದೆ. ವಿವಿಧ ರೀತಿಯ ವಿಶೇಷವಾದ ಅಡುಗೆಯನ್ನು ಮಾಡಿಕೊಂಡು ದೊಡ್ಡವರು ಚಿಕ್ಕವರು ಜೊತೆಗೂಡಿ 'ಹೆಡಿಗೆ'ಯೊಂದಿಗೆ ಹೋಗಿ, ಹೊಲದಲ್ಲಿ ಬೆಳೆಯನ್ನು ನೋಡಿ ಉಂಡುಟ್ಟು ನಲಿಯಲು, ಶಾಂತಿಯುತವಾಗಿ ಪೂಜೆಗೈದು, ಎಡೆಹಾಕಿ, ಒಂದು ಎಡೆಯನ್ನು ಭೂಮಿ ತಾಯಿಯ ಮಡಿಲಲ್ಲಿರಿಸಿ ನಂತರ ಊಟ ಮಾಡುವುದು ಇಲ್ಲಿನ ಪದ್ಧತಿ. ಇದೇ ಹೊತ್ತಿನಲ್ಲಿ ಅಲ್ಲೇ ಸುತ್ತಲಿನ ಚೌಡವ್ವನ ಬಳಿಯೂ ಎಡೆ ಹಾಕಿಕೊಂಡು ಊಟ ಮಾಡಬೇಕು. ಎಲ್ಲಾ ಆದ ಮೇಲೆ ಬನ್ನಿ ಮುಡಿಯಲು ಆ ಹೊಲದ ೩-೩ ದಂಟುಗಳನ್ನು ಕಿತ್ತುಕೊಂಡು ಚಿಕ್ಕ ಮಕ್ಕಳು ಹೆಣೆದು ಕೈಯಲ್ಲಿಡಿದುಕೊಂಡು ಕೇಕೆಹಾಕುತ್ತ ಮನೆಗೆ ಬರುತ್ತಾರೆ".[೨೧] ಎನ್ನುತ್ತಾರೆ. ಭೂಮಿಗೆ ಚೆಲ್ಲುವ ಚೆರಗ ವಿಶೇಷವಾಗಿ ಕಂಡು ಬರುತ್ತದೆ. ಮಾಡಿದ ಅಡಿಗೆಯನ್ನು ಎಲ್ಲಾ ಸ್ವಲ್ಪ ಸ್ವಲ್ಪ ಒಂದು ಪಾತ್ರೆಯಲ್ಲಿ ಹಾಕಿಕೊಂಡು ಅದನ್ನು ಬೆರಸಿ ಕೊಂಡು ಭೂಮಿಯ ಬದುವಿನ ಸುತ್ತ ಚೆಲ್ಲುತ್ತಾರೆ. ಇಂತಹ ಆಚರಣೆಯನ್ನು ಉತ್ತರ ಕರ್ನಾಟಕ ಭಾಗದಲ್ಲಿ ಎಳ್ಳಾಮಾವಾಸ್ಯೆಯ ದಿನ ಮಾಡುತ್ತಾರೆ. ಜೋಳದ ಬೆಳೆ ಬೆಳೆದು ನಿಂತಾಗ ಈ ಬೆಳಗೆ ಚರಗ ಚೆಲ್ಲುವ ಕ್ರಿಯೆಮಾಡುತ್ತಾರೆ. ಇದು ಜೋಳದ ಬೆಳೆಗೆ ಅರ್ಪಿಸಿದ ಆಹಾರ ಮತ್ತು ಪೂಜೆಸಲ್ಲಿಸುವ ದ್ಯೋತಕವಾಗಿದೆ. ವೀರಣ್ಣ ದಂಡೆಯವರು 'ದೇಸೀದೃಷ್ಟಿ' ಕೃತಿಯಲ್ಲಿ ಇದರ ಕುರಿತು ವಿಶ್ಲೇಷಿಸುತ್ತಾ.

"ಹುಗ್ಗಿ ಹೂರಣಗಡಬ ಚೆಜ್ಜಕದ್ಹೋಳಿಗಿ

ಒಗ್ಗರಣಿ ಗುಳ್ಳಿ ಹದಿನಾರ । ಹಾಕ್ಕೊಂಡು

ತಗ್ಗಿನ ಹೊಲಕ ಸರಗವ".[೨೨] ಎಂದು ಹಂತಿಪದದಲ್ಲಿ ದಾಖಲಾಗಿದೆ, ಚರಗ ಚೆಲ್ಲಿ, ಸಂಜೆ ಜೋಳದ ದಂಟುಗಳಿಂದೆ ತಯಾರಿಸಿದ ಸೋನ್ಯಾದ ಬುಟ್ಟಿಯನ್ನು ಊರಲ್ಲಿ ಮೆರಸಿ, ಗುಡಿ ಗುಡಿಗೂ ದೀಪ ಮುಡಿಸುವ ಕೆಲಸ ನಡೆಯುತ್ತದೆ.

ಜಾನುವಾರುಗಳಿಲ್ಲದೆ ನಮ್ಮ ಕೃಷಿಯನ್ನಾಗಲಿ, ಕೃಷಿಕರನ್ನಾಗಲಿ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಜಾನುವಾರು ಕುರಿತಾದ ಆಚರಣೆಗಳು ಅನೇಕ ಕಡೆಗಳಲ್ಲಿ ವೈವಿಧ್ಯತೆಯನ್ನು ಪಡೆದುಕೊಂಡಿದೆ. ಅಂತಹವುಗಳಲ್ಲಿ ಕೆಲವನ್ನು ಇಲ್ಲಿ ಸಂಗ್ರಹಿಸಲಾಗಿದೆ.

ದೀಪಾವಳಿ ಮೂರು ದಿನದ ಆಚರಣೆ. ರೈತರಿಗೆ, ದನಕರುಗಳಿಗೆ ಬಿಡುವಿನ ಕಾಲವದು. ಈ ಹಬ್ಬದಲ್ಲಿ ದನಗಳ ಪೂಜೆಗೆ ಹೆಚ್ಚಿನ ಆದ್ಯತೆ ಕಂಡು ಬರುತ್ತದೆ. ಇದನ್ನು ಹಟ್ಟಿಹಬ್ಬ, ದೀವಳಿಗೆಹಬ್ಬ, ದೊಡ್ಡಹಬ್ಬ, ಪಣತಿಹಬ್ಬ ಎಂದು ಕರೆಯುತ್ತಾರೆ. ಮಲೆನಾಡಿನ ಭಾಗಗಳಲ್ಲಿ ಬಸವಣ್ಣನಿಗೆ ಬಾಸಿಂಗ ಕಟ್ಟಿ, ಮದುವೆಯ ರೀತಿಯ ಸಂಭ್ರಮದಿಂದ ಆಚರಿಸುತ್ತಾರೆ. ದೀಪಾವಳಿ ಸಂದರ್ಭದಲ್ಲಿ ಪಂಜಿಸಮೇಳ, ಅಂಟಿಕೆ-ಪಂಟಿಕೆಮೇಳ, ಭಗವಂತಿಮೇಳ, ಹಟ್ಟಿ ಆಚರಣೆಗಳು ಆಯಾ ಪ್ರಾದೇಶಿಕ ಹಿನ್ನಲೆಯಲ್ಲಿ

ಸೃಷ್ಠಿಗೊಂಡವುಗಳಾಗಿವೆ. ಈ ಆಚರಣೆಯ ಬಗೆಯನ್ನು ಕುರಿತು 'ಮಲೆನಾಡು ಜಾನಪದ' ಕೃತಿಯಲ್ಲಿ ಹೀಗೆ ಹೇಳಲಾಗಿದೆ. "..............ಹರೆಯದ ಹುಡುಗರು ಈ ಹಬ್ಬದ ಮೂರು ದಿನವೂ ಊರ ದೇವಸ್ಥಾನದ ಮುಂದೆ ಸೇರಿ ಪಂಜುಗಳನ್ನು ಉರಿಸುತ್ತ, ಬೀಸಾಡುತ್ತ, ಗಂಡ, ಹೆಂಡಿರು, ಹುಡುಗಿಯರು ಮೊದಲಾದವರ ಮೇಲೆ ಅವರ ವಿಶಿಷ್ಟ ಸ್ವಭಾವಗಳನ್ನು ಎತ್ತಿ ಹೇಳುತ್ತಾ ಹಾಡುತ್ತಾರೆ. ಹಗಲು ಹೊತ್ತು ಇವುಗಳ ನಿಷಿದ್ಧ; ಅಂಟಿಕೆ–ಪಂಟಿಕೆ ಸಂಪ್ರದಾಯ ಮಲೆನಾಡಿನ ಒಂದು ವಿಶಿಷ್ಠ ಆಚರಣೆಯ ಕುರುಹಾಗಿದೆ. ಇದನ್ನು ಜ್ಯೋತಿ ನೀಡುವ, ದೀಪ ಬೆಳಗುವ ಹಬ್ಬವೆಂದೂ, ಶುದ್ದ ಧಾರ್ಮಿಕ ಸಂಪ್ರದಾಯವೆಂದೂ ಹೇಳಲಾಗುತ್ತದೆ. ಪಾಡ್ಯದ ದಿನದಿಂದ ವರ್ಷ ತೊಡಕಿನ ಮೂರು ರಾತ್ರಿಯೂ ಈ ಮೇಳದವರು ಸೇರಿ ದೇವಾಲಯದಲ್ಲಿ ಪೂಜೆ ನಡೆಸಿ ದೀಪವನ್ನು ಹಚ್ಚಿಕೊಂಡು ಹಾಡಿನ ಸೇವೆಯೊಂದಿಗೆ ಊರಾಡಲು ಹೋಗುತ್ತಾರೆ. ಪ್ರತಿ ಮನೆಯಲ್ಲೂ ದೀಪಕ್ಕೆ ಎಣ್ಣೆ ಬಿಡಿಸಿಕೊಳ್ಳುವಾಗ ದೀಪ ಕೆಡುವಂತಿಲ್ಲ. ಹಾಗೇನಾದರೂ ಆದರೆ ಅದು ಅಪಶಕುನ, ಮನೆಯವರಿಗೆ ಕೇಡು ಎಂಬ ನಂಬಿಕೆಯಿದೆ. ಅಲ್ಲದೇ ಎರಡು ಮೇಳಗಳೂ ಎದರು ಬದುರು ಸೇರುವಂತಿಲ್ಲ"[೨೩] ಎನ್ನಲಾಗುತ್ತದೆ. ಭಾಗವಂತಿಕೆ ಮೇಳದ ಸಂಪ್ರದಾಯ, ಪಾಡ್ಯದ ದಿನ ಬಲೀಂದ್ರನ ಪೂಜೆಯ ದಿನ ಎಣ್ಣೆಸ್ನಾನದ ವಿಶಿಷ್ಟತೆ, ನೀರು ತುಂಬುವುದು, ಲಕ್ಷ್ಮೀಪೂಜೆ, ಹಟ್ಟೆವ್ವನಪೂಜೆ, ಇದನ್ನು ಆಕಳ ಸಗಣಿಯಿಂದ ಶಂಕುವಿನಾಕಾರದಲ್ಲಿ ಮೈದಳೆದ ಹಟ್ಟೆವ್ವನಿಗೆ ವಿವಿಧ ತರದ ಹೂ, ದಂಟು, ಧಾನ್ಯಗಳಿಂದ ಅಲಂಕರಿಸಿ ಪೂಜಿಸುತ್ತಾರೆ. ಇದೇ ರೀತಿ ಚಿಕ್ಕ ಹಟ್ಟೆವ್ವಗಳನ್ನು ಮನೆಯ ವಿವಿದೆಡೆ ಇಟ್ಟು ಪೂಜಿಸಲಾಗುತ್ತದೆ. ಅಲ್ಲದೇ ಮನೆಯ ಜಗಲಿಯಿಂದ ಮುಂಬಾಗಿಲತನಕ, ಗಳೆಗಳಿಗೆ ಕೆಮ್ಮಣ್ಣು ಪಟ್ಟಿ, ಸುಣ್ಣದ ಬಟ್ಟು ಇಟ್ಟು ಅಲಂಕರಿಸುತ್ತಾರೆ. ಇನ್ನು ಮುಂತಾದ ಬಗೆಬಗೆಯ ಆಚರಣೆಗಳು ಕಾಣಸಿಗುತ್ತವೆ.

ಇದು ತಮಿಳುನಾಡಿನ ಕೃಷಿಕರಲ್ಲಿ ಹಿಂದಿನಿಂದಲೂ ನಡೆದು ಬಂದ 'ಕಂಬಳಿ' ಆಚರಣೆಯಾಗಿದೆ. ಇದು ಉತ್ತರ ಕರ್ನಾಟಕದ ಕಾರಬ್ಬವನ್ನು ಹೋಲುತ್ತದೆ. ಎರಡು ಕಡೆಯೂ ಎತ್ತುಗಳ, ಕೋಣನ ಓಟವೇ ಮುಖ್ಯವಾದುದು. ಕಂಬಳ ಎಂದರೆ ಕೆಸರುಗದ್ದೆ ಎಂಬ ಅರ್ಥವೂ ಇದೆ. ಚೆನ್ನಾಗಿ ಉತ್ತು ಕೆಸರು ಮಾಡಿ ನೀರು ನಿಲ್ಲಿಸಿರುವ ವಿಶೇಷ ಸ್ಥಳಗಳಲ್ಲಿ ಕೋಣಗಳ ಜೋಡಿಯನ್ನು ಓಡಿಸುವ ರೋಮಾಂಚಕಾರಿ ಕ್ರೀಡೆ ಇದಾಗಿದೆ. ಇದರಲ್ಲಿ ಭಾಗವಹಿಸುವ ಕೋಣಗಳನ್ನು ಅತಿ ಕಾಳಜಿಯಿಂದ ಪೌಷ್ಠಿಕ ಆಹಾರ ಹಾಕಿ ಸಾಕುತ್ತಾರೆ. ಇವುಗಳನ್ನು ಉಳುಮೆಯ ಕಾರ್ಯಕ್ಕೆ ಬಳಸುವುದಿಲ್ಲ. ಕೊಟ್ಟಿಗೆಯಿಂದ ಹೊರಗೆ ಬಿಡುವುದಿಲ್ಲ. ಜನರ ದೃಷ್ಠಿ ತಾಗದಿರಲೆಂದು ಅನೇಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. 'ಕೃಷಿಆಚರಣೆ' ಎಂಬ ಕೃತಿಯಲ್ಲಿ ವಿವರಿಸುತ್ತಾ. "........... ಅವುಗಳ ಕುತ್ತಿಗೆಗೆ ಮಂತ್ರಿಸಿದ ತಾಯಿತ, ಎಡಗಾಲಿನ ಹಳೆಯ ಮೆಟ್ಟು (ಚಪ್ಪಲಿ), ಕಾಸರಕನ ಮರದಲ್ಲಿ ಮಾಡಿದ ತಾಳಿ, ಕಬ್ಬಿಣದ ಇಲ್ಲವೇ ಕಳ್ಳಿಗಿಡದ ಉಂಗುರ ಹೀಗೆ ಹಲವಾರು ದೃಷ್ಠಿ ನಿವಾರಕ ವಸ್ತುಗಳನ್ನು ಕಟ್ಟುತ್ತಾರೆ. ಇದನ್ನು ಕಟ್ಟುವುದಕ್ಕು ಸಹ ಮಾಂತ್ರಿಕರನ್ನು ಕರೆಸುತ್ತಾರೆ. ....".[೨೪] ಕಂಬಳದಲ್ಲಿ ಮೂರು ವಿಧಗಳ ಓಟವಿದೆ. ಹಗ್ಗದ ಓಟ, ಕಣೆ ಹಲಗೆಯ ಓಟ, ಮತ್ತು ಹಲಗೆಯ ಓಟವೆಂದು, ತುಂಬಾ ವಿಶಿಷ್ಟವಾಗಿ ಆಚರಿಸುತ್ತಾರೆ.

ಕಾರಹುಣ್ಣಿಮೆ ಉತ್ತರಕರ್ನಾಟಕದವರಿಗೆ ವಿಶೇಷ ಹಬ್ಬ. ಜಾನುವಾರುಗಳೇ ಈ ಹಬ್ಬದ ಕೇಂದ್ರಬಿಂದು. ಬಯಲುಸೀಮೆಯಲ್ಲಿ ಸಂಕ್ರಾಂತಿ ಇರುವಂತೆ ಬಿಸಿಲು ನಾಡವರಿಗೆ ಕಾರಹುಬ್ಬ. 'ಕನ್ನಡ ಜಾನಪದ ಗೀತೆಗಳು' ಕೃತಿಯಲ್ಲಿ ಇದರ ಆಚರಣೆ ಕುರಿತು ಹೀಗೆ ಹೇಳಲಾಗಿದೆ. "ಉತ್ತರಕರ್ನಾಟಕದಲ್ಲಿ

ಕಾರಹುಣ್ಣಿಮೆಯು ದನಗಳ ಹಬ್ಬ, ಅಂದು ಒಕ್ಕಲಿಗರು 'ಹೊನ್ನುಗ್ಗಿ'ಯನ್ನು ಮಾಡಿ, ದನಗಳನ್ನೂ, ಬಂಡಿ, ರೆಂಟೆ, ಕುಂಟೆ ಮೊದಲಾದ ಸಾಮಾಗ್ರಿಗಳನ್ನೂ ತೊಳೆದು ಪೂಜೆಮಾಡುತ್ತಾರೆ. ಒಕ್ಕಲುತನದ ಕೆಲಸ ಬೊಗಸೆಗಳು ಸುರುವಾಗಲೆಂದು ಹಾರೈಸುತ್ತಾರೆ. ಎತ್ತು ಮೊದಲಾದವುಗಳಿಗೆ ಹುಗ್ಗಿಯನ್ನುಣಿಸುತ್ತಾರೆ. ಅವುಗಳನ್ನು ಸಿಂಗಾರಮಾಡಿ ಮೋಜು ಮಜಲು ಕಟ್ಟಿ ಮೇರೆಸುತ್ತಾರೆ. ಹುಣ್ಣಿಮೆಯ ದಿವಸ ಸಂಜೆಯ ಮುಂದೆ ಎತ್ತುಗಳ 'ಕರಿಹರಿದು' ಮಳೆ ಬೆಳೆಗಳನ್ನರಿತುಕೊಳ್ಳುತ್ತಾರೆ. ಕೆಂದೆತ್ತು ಕರಿಹರಿದರೆ ಕೆಂಜೋಳ ಬೆಳೆಯುವದೆಂದೂ, ಬಿಳಿಯೆತ್ತು ಕರಿಹರಿದರೆ ಬಿಳಿಜೋಳ ಬೆಳೆಯುವುದೆಂದೂ, ಎರಡು ಕೂಡಿ ಹರಿದರೆ ಸಮಕಾಲವೆಂದೂ, ಬೆಳೆಗಳ 'ಬಲತಾಣ'(ಬಲಕಾಲ)ವನ್ನು ತಿಳಿದು ಭೂಮಿಯಲ್ಲಿ ಬೀಜವನ್ನು ಚೆಲ್ಲಲು ಉದ್ಯುಕ್ತರಾಗುವರು. ಎತ್ತಿನ ಕರಿ (ಬೇವಿನ ತಪ್ಪಲ)ಯನ್ನು ತರಿದು ಕಣಗಳಿಗೆ, ಬಳತ, ಹಗೆ ಮೊದಲಾದವುಗಳಲ್ಲಿ ಚೆಲ್ಲುವರು. ರಾಶಿಯು ಹುಲುಸಾಗಿ ಈ ಎಲ್ಲಾ ಭಂಡಾರಗಳು ತುಂಬುಲೆಂಬುದೇ ಇದರ ಉದ್ದೇಶವಾಗಿದೆ".[೨೫] ಕಾರಹುಣ್ಣಿಮೆ ಹಬ್ಬ ಒಕ್ಕಲಿಗನಿಗೆ ತುಂಬಾ ಮಂಗಳಕರವಾದುದೆಂದು ನಂಬಲಾಗಿದೆ. ತುಂಬಾ ವಿಶಿಷ್ಟವಾಗಿ ಆಚರಿಸುತ್ತಾರೆ.

ಹುಲ್ಲಿನ ಎಸಳುಗಳಲ್ಲಿ ಐದು ಅಥವಾ ಏಳು ಸುತ್ತಿನ ಅಂದರೆ ಹೆಡೆಗಳ ಸಿಂಬೆಯಾಕಾರದಲ್ಲಿ ಹೆಣೆದು ಅದರೊಳಗೆ ಹಣತೆಯನ್ನು ಕೂರಿಸುತ್ತಾರೆ. ಇದೇ ಆಣಿ–ಪೀಣಿ. ಇದನ್ನು ಕೈಯಲ್ಲಿ ಹಿಡಿದು ದನಕಾಯುವ ಹುಡುಗರು ಮನೆ ಮನೆ ಸುತ್ತುತ್ತಾರೆ. ಪ್ರತಿಯೊಂದು ಮನೆಯೂ ದನಕರುಗಳಿಂದ ತುಂಬಿರಲಿ. ಅವುಗಳಿಂದ ಸಮೃದ್ಧಿಯಾಗಲಿ, ಅವುಗಳಿಗೆ ಯಾವುದೇ ರೀತಿಯ ರೋಗರುಜನಾದಿಗಳು ಬಾರದಿರಲಿ ಎಂದು ಪದಗಳನ್ನು ಹಾಡುತ್ತಾ ಆಚರಿಸುತ್ತಾರೆ. ಮುಂಗಾರು ಬೆಳೆ ಮನೆಗೆ ಬಂದ ಕಾಲ ಹಿಂಗಾರಿಯ ಬಿತ್ತನೆಯ ತಯಾರಿಯ ಕಾಲದಲ್ಲಿ ಜಾನುವಾರುಗಳಿಗೆ ವಂದಿಸುವ ರೀತಿಯಲ್ಲಿ ನಡೆಯುವ ಈ ಆಚರಣೆ ಅರ್ಥ ಪೂರ್ಣವಾದುದಾಗಿದೆ.

ಕೃಷಿಕರಲ್ಲಿ ಇನ್ನೂ ಅನೇಕ ನಂಬಿಕೆ ಆಚರಣೆಗಳನ್ನು ಕಾಣುತ್ತೇವೆ. ಮಳೆಯ ಕುರಿತಾದ ನಂಬಿಕೆ. ಆಚರಣೆಗಳು ಹೇರಳವಾಗಿವೆ. ಅಲ್ಲದೇ ಪ್ರಾದೇಶಿಕತೆಯ ದೃಷ್ಟಿಯಿಂದ ಅನೇಕ ವೈವಿಧ್ಯತೆಯಿಂದ ಕೂಡಿದ ಆಚರಣೆಗಳು ಕಂಡುಬರುತ್ತವೆ. ಈ ಅಧ್ಯಾಯದಲ್ಲಿ ಉತ್ತುವ, ಬಿತ್ತುವ, ಮತ್ತು ಒಕ್ಕುವ ಆಚರಣೆಗಳಲ್ಲಿ ಕೆಲವು ಮುಖ್ಯವಾದವುಗಳನ್ನು ಮಾತ್ರ ಇಲ್ಲಿ ಹೇಳಲಾಗಿದೆ. ಅಲ್ಲದೇ ಕೆಲವು ಪ್ರಮುಖವಾದ ಸಂಕ್ರಾತಿ, ಯುಗಾದಿ ಮತ್ತು ಭೂಮಿಹುಣ್ಣಿಮೆ ಮತ್ತು ಜಾನುವಾರು ಸಂಬಂಧಿ ದೀಪಾವಳಿ, ಕಂಬಳ, ಕಾರಹಬ್ಬ, ಮತ್ತು ಆಣಿ–ಪೀಣಿ, ಆಚರಣೆಗಳ ಕುರಿತಾಗಿ ಇಲ್ಲಿ ಹೇಳಲಾಗಿದೆ. ಜನಪದರಲ್ಲಿ ಆಚರಣೆಗೊಳ್ಳುವ ನಂಬಿಕೆ, ಆಚರಣೆಗಳು ತುಂಬಾ ಹೆಚ್ಚಿನ ವ್ಯಾಪ್ತಿಯನ್ನು ಹೊಂದಿವೆ.

ಅಡಿಟಿಪ್ಪಣಿಗಳು

೧. ಜಾನಪದ ನಂಬಿಕೆಗಳು–ಎಂ.ಸಿ.ವಸಂತಕುಮಾರ, ಪ್ರಸ್ತಾವನೆ, ಪು–viii
೨. ಮಲೆನಾಡ ಜಾನಪದ– (ಪ್ರಸಂ)– ಡಾ.ಎಚ್.ತಿಪ್ಪೇರುದ್ರಸ್ವಾಮಿ, ಪು–೧೬೧
೩. ಕನ್ನಡ ಜಾನಪದ ಗೀತೆಗಳು–ಡಾ.ಬಿ.ಎಸ್.ಗದ್ದಗಿಮಠ, ಪು–೧೩೭
೪. ಅದೇ–ಪು–೨೩೯
೫. ಕೃಷಿ ಆಚರಣೆ–ಮಲ್ಲಿಕಾರ್ಜುನ ಹೊಸಪಾಳ್ಯ ಪು–೧೭
೬. ಅದೇ– ಪು–೨೭

೭. ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ- ಡಾ.ಅಂಬಳಿಕೆ ಹಿರಿಯಣ್ಣ, ಪು-೯೫
೮. ಜಾನಪದ ಸಂಪದ-ಸಂ- ಡಾ.ಮಲ್ಲಿಕಾರ್ಜುನ ಶಿ.ಲಠ್ಠೆ, ಪು-೨೭೦
೯. ದೇಶೀದೃಷ್ಟಿ- ಡಾ.ವೀರಣ್ಣದಂಡೆ, ಪು-೭೨
೧೦. ಅದೇ-ಪು-೭೨
೧೧. ಅದೇ-ಪು-೭೩
೧೨. ಅದೇ-ಪು-೭೩
೧೩. ಅದೇ-ಪು-೭೩
೧೪. ಮಲೆನಾಡ ಜಾನಪದ- (ಪ್ರಸಂ)- ಡಾ.ಎಚ್.ತಿಪ್ಪೇರುದ್ರಸ್ವಾಮಿ, ಪು-೧೬೮
೧೫. ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ- ಡಾ.ಅಂಬಳಿಕೆ ಹಿರಿಯಣ್ಣ, ಪು-೯೬
೧೬. ಕೃಷಿ ಆಚರಣೆ- ಮಲ್ಲಿಕಾರ್ಜುನ ಹೊಸಪಾಳ್ಯ, ಪು-೪೮
೧೭. ಕನ್ನಡ ಜಾನಪದ ಗೀತೆಗಳು- ಡಾ.ಬಿ.ಎಸ್.ಗದ್ದಗಿಮಠ, ಪು-೧೩೮
೧೮. ಜಾನಪದ ವೈವಿಧ್ಯ- ಡಾ.ಎಂ.ಬೈರೇಗೌಡ, ಪು-೧೧೭
೧೯. ಕೃಷಿ ಆಚರಣೆ-ಮಲ್ಲಿಕಾರ್ಜುನ ಹೊಸಪಾಳ್ಯ, ಪು-೮೧
೨೦. ಮಲೆನಾಡ ಜಾನಪದ- (ಪ್ರಸಂ)- ಡಾ.ಎಚ್.ತಿಪ್ಪೇರುದ್ರಸ್ವಾಮಿ, ಪು-೧೭೧
೨೧. ಅದೇ-ಪು-೧೬೯
೨೨. ದೇಸೀದೃಷ್ಟಿ-ಡಾ.ವೀರಣ್ಣ ದಂಡೆ, ಪು-೭೪
೨೩. ಮಲೆನಾಡು ಜಾನಪದ- (ಪ್ರಸಂ.) ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪು-೧೭೫-೧೭೬
೨೪. ಕೃಷಿಆಚರಣೆ-ಮಲ್ಲಿಕಾರ್ಜುನ ಹೊಸಪಾಳ್ಯ, ಪು-೯೪
೨೫. ಕನ್ನಡ ಜಾನಪದ ಗೀತೆಗಳು-ಡಾ.ಬಿ.ಎಸ್.ಗದ್ದಗಿಮಠ, ಪು-೧೮೫

ಅಧ್ಯಾಯ–ಒಂಭತ್ತು

ಕೃಷಿಶಾಸ್ತ್ರ ಸಾಹಿತ್ಯ : ಸಾಂಸ್ಕೃತಿಕ ಮಹತ್ವ

೧. ಕೃಷಿ ಪರಿಭಾಷೆಗಳ ಅನನ್ಯತೆ

೨. ಪ್ರಾದೇಶಿಕ ವೈಶಿಷ್ಟ್ಯ

೩. ಭಾಷಿಕ ಸಂರಚನೆ

ಅಧ್ಯಾಯ–ಒಂಭತ್ತು

ಕೃಷಿಶಾಸ್ತ್ರ ಸಾಹಿತ್ಯ : ಸಾಂಸ್ಕೃತಿಕ ಮಹತ್ವ

ಅಸಿ, ಮಸಿ, ಕೃಷಿ, ವಾಣಿಜ್ಯ, ಗೋಪಾಲಿಕ, ಯಾಚನೆ ಎಂಬ ಆರು ಪ್ರಕಾರದ ಕೆಲಸಗಳಲ್ಲಿ ಕೃಷಿ ಕೆಲಸವೇ ಮುಖ್ಯವಾದದ್ದು. ಕೃಷಿಯೆ ಎಲ್ಲಾ ಕೆಲಸಗಳಿಗೂ ಮೂಲ. ಕೃಷಿ ಕೆಲಸದಿಂದ ಬೆಳೆಮಾಡಿಕೊಳ್ಳಲು ಅನೇಕ ಬಗೆಯ ಯುಕ್ತಿಗಳು, ವಿಧಾನಗಳು, ಬೆಳೆಗೆ ತಗಲುವ ಉಪದ್ರವಗಳು ಮುಂತಾದವುಗಳನ್ನು ಹಿಂದಿನ ಅಧ್ಯಾಯಗಳಲ್ಲಿ ಹೇಳಲಾಗಿದೆ. ಇನ್ನೂ ಕೃಷಿಯ ಮಹತ್ವ ಕುರಿತು ಕೆಲವು ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಕೃಷಿಶಾಸ್ತ್ರದ ಮಹತ್ವ ಕುರಿತು ಅನೇಕ ಅನುಭವಿ ಕವಿಗಳು ತಮ್ಮ ಕೃತಿಗಳಲ್ಲಿ ಹೇಳಿರುವರು. 'ಕೃಷಿ ಜ್ಞಾನ ಪ್ರದೀಪಿಕೆ' ಯಲ್ಲಿ "ಉತ್ತಮ ಖೇತ್; ಮಧ್ಯಮ ಬೇಪಾರ್; ಕನಿಷ್ಠ ನೌಕರ್; ಭೀಕ ನಿದಾನ;"[೧] ಎಂದು ಕಭೀರನು ಹೇಳಿದ್ದಾನೆ. ಅಂದರೆ ಭೂಮಿಯ ವ್ಯವಸಾಯ ಉತ್ತಮ, ವ್ಯಾಪಾರ ಮಧ್ಯಮ, ಪರಸೇವಾ ಕನಿಷ್ಠ, ಬೇಡಿಕೊಂಡು ಜೀವನ ಮಾಡುವುದು ಕೇವಲ ಸಾಮಾನ್ಯ, ಎನ್ನುವಲ್ಲಿ ಒಕ್ಕಲುತವೇ ಮಹತ್ವದ್ದೂ ಎಂದು ತಿಳಿಯುತ್ತದೆ. 'ಕೃಷಿತೋ ನಾಸ್ತಿದುರ್ಭಿಷಂ, ಜಪಿತೋನಾಸ್ತಿ ಪಾತಕಃ, ಮೌನಿನಃ ಕಲಹೋನಾಸ್ತಿ ನಭಯಂ ಜಾಸ್ತಿ ಜಾಗ್ರತಃ' ಎಂಬ ಯುಕ್ತಿಯಂತೆ ಭೂಮಿಯ ವ್ಯವಸಾಯವನ್ನು ಜಾಗ್ರತೆಯಾಗಿ ಮಾಡಿದರೆ ದುರ್ಭಿಷಾದಿಗಳು ಬರುವುದಿಲ್ಲ ಎಂಬ ಪುರಾಣದ ಈ ವಾಕ್ಯ ಸಕಲಜನರೆಲ್ಲರೂ ಕೃಷಿಜ್ಞಾನ ಪರಿಣಿತರಾಗಿರಬೇಕೆಂಬ ಆಶಯ ಸಕಾಲದಲ್ಲಿಯೂ ಶ್ರೇಷ್ಠವಾದದ್ದು. 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು' ಸರ್ವಜ್ಞ ಮೇಟಿ ವಿದ್ಯೆಯ ಮಹತ್ವ ಕುರಿತು ಹೇಳಿದ್ದಾನೆ. ಮೇಟಿ ಒಕ್ಕಲುತನದ ಸಂಕೇತ, ಅದರಂತೆ ಮೇಟಿ ವಿದ್ಯೆ ಒಕ್ಕಲುತನ ವೃತ್ತಿಯ ಸಂಕೇತ ಎನಿಸುತ್ತದೆ. ಈ ವಿದ್ಯೆ ಕಲಿಯಲು ಹೊಲವೇ ಶಾಲೆ, ಅನುಭವಿ ರೈತನೆ ಮಾರ್ಗದರ್ಶಕರು. ಮಳೆ ನಂಬಿ ದುಡಿದು, ಹದ–ಬೆದೆ ನೋಡಿ ಹರಗಿ ಬಿತ್ತಿ, ಬೆಳೆಯಬೇಕು. ಈ ನೌಕರಿಗೆ ಯಾವುದೇ ರಜೆ ಇಲ್ಲ, ಭತ್ಯೆಯಿಲ್ಲ, ಪಗಾರವಿಲ್ಲ ಆದರೂ ಸ್ವತಂತ್ರ ಜೀವಿ ರೈತ. ತನ್ನ ಜೊತೆಯಲ್ಲಿ ಪ್ರಕೃತಿ, ಸಾಕುಪ್ರಾಣಿ, ಒಕ್ಕಲುತನದ ಉಪಕರಣಗಳೇ ಅವನ ಸಂಗಾತಿಗಳು. ಮೇಟಿ ರೈತರಿಗೆ ಗೌರವದ ಸಂಕೇತ, ಮೇಟಿಯನ್ನು ಶುಭದಿನದಂದು ನಡೆಸಿ ಸುಗ್ಗಿ ಮುಗಿದ ನಂತರ ಕೀಳುತ್ತಾರೆ.

ನಮ್ಮ ಹಳ್ಳಿಗಳ ಒಕ್ಕಲುತನದ ಸೊಬಗನ್ನು ಅನೇಕ ಕವಿಗಳು ಹಾಡಿದ್ದಾರೆ. ಆನಂದ ಕಂದರು 'ನಮ್ಮ ಹಳ್ಳಿಯ ಊರಾ ನಮಗಾ ಪಾಡ ಯಾತಕವ್ವಾ ಹುಬ್ಬಳ್ಳಿ ಧಾರವಾಡಾ' ಎನ್ನುತ್ತಾರೆ. ತನ್ನ ಹಳ್ಳಿಯಲ್ಲೇ ರೈತರು ನೆಮ್ಮದಿಯನ್ನು, ಸ್ವರ್ಗವನ್ನು ಕಂಡುಕೊಂಡಿದ್ದಾರೆ. ಗೀಗೀಪದ, ಹಂತಿಹಾಡು, ಸೋಬಾನಪದ, ಬೀಸುಕಲ್ಲಿನಪದ, ಕೋಲಾಟದ ಪದ, ಲಾವಣಿಪದ, ದೊಡ್ಡಾಟ ಮತ್ತು ಸಣ್ಣಾಟ ಮೊದಲಾದ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಹಳ್ಳಿಗಳು ಜನಪದ ಸಾಹಿತ್ಯದ ಕಣಜಗಳಾಗಿದ್ದವು. ದುಡಿಮೆಯ ದಣಿವನ್ನು ಜೀವನದ ಕಷ್ಟಗಳನ್ನು ಮರೆಯಲು ಹಿಗ್ಗಿನಿಂದ ಹಾಡಿ ಸುಗ್ಗಿ ಮಾಡುತ್ತಿದ್ದರು. ಆದರೆ ಇಂದು ಒಕ್ಕಲುಯಂತ್ರಗಳ ಬಳಕೆಯಿಂದಾಗಿ ಕಣಮಾಡುವ, ಒಕ್ಕುವ ಶ್ರಮ ರೈತರಿಗೆ ಬೇಕಾಗಿಲ್ಲ. ಶ್ರಮದ ಆಯಾಸ, ಅದನ್ನು ಮರೆಯಲು ಹಾಡುತ್ತಿದ್ದ ಹಂತಿಯ ಪದಗಳನ್ನು ಹಾಡುವ ಕೊರಳ ಕಂಠಗಳು ಮೂಕವಾಗಿವೆ. ಒಕ್ಕಲುತನ ಬದಲಾಗಿ ಬಂಡವಾಳ ಹಾಕಿ ಮಾಡುವ ವ್ಯಾಪಾರವಾಗಿದೆ. ಆದರೆ ಸಾಮಾನ್ಯ ರೈತರ ಸ್ಥಿತಿ, ಅತ್ತ ವೈಜ್ಞಾನಿಕ ಒಕ್ಕಲುತನ ಮಾಡಲು ಆಗದೆ, ಇತ್ತ ಸಾಂಪ್ರದಾಯಿಕ ಒಕ್ಕಲುತನದತ್ತ ಹಿಂತಿರುಗಲೂ ಆಗದೆ ತ್ರಿಶಂಕು ಸ್ಥಿತಿಗೆ ರೈತರು ತಲುಪಿದ್ದಾರೆ. ಹತಾಶಯ ಬದುಕು, ನಂಬಿದ ಮಳೆ ಕಣ್ಣುಮುಚ್ಚಾಲೆ ಆಟವಾಡುತ್ತಿದೆ. ಬರಗಾಲದ ಬವಣೆಗೆ ತುತ್ತಾಗಿ ಆತ್ಮಹತ್ಯೆಯಂತ ಪ್ರಯತ್ನಗಳು ಸಾಮಾನ್ಯವಾಗಿವೆ.

ಮಲಯಪ್ರಾಂತ್ಯ, ಚೋಳಮಂಡಲ ರಾಜ್ಯದ ಜನರು ಭೂಮಿಯ ವ್ಯವಸಾಯ ಮಾಡುವುದರಲ್ಲಿ ಬುದ್ಧಿವಂತರು. 'ಆಳಾಗಿ ಮಾಡಿದವನು ಅರಸಾಗಿ ಉಂಬುವನು' ಎಂಬ ನಾಣ್ಣುಡಿಯಂತೆ ಈ ಕೃಷಿಯಿಂದಲೇ ಧನ ಧಾನ್ಯ ಸಕಲಸಂಪತ್ತು ಪಡೆಯುತ್ತಾರೆ. ಆದರೆ ನಮ್ಮ ದೇಶದ ಜನರು ಕೃಷಿಜ್ಞಾನ ಪರಿಣಿತರಲ್ಲ, ಕೈಲಾದ ಮಟ್ಟಿಗೆ ಶ್ರಮಪಟ್ಟು ಭೂಮಿಯ ವ್ಯವಸಾಯ ಮಾಡದೆ, ಪ್ರಾರಬ್ಧ ನಂಬಿರುವರು ಕೆಲವರು ಆದರೆ, ಮತ್ತೇ ಕೆಲವರು ಕೃಷಿಯ ಯುಕ್ತಿಗಳನ್ನು ಅನುಸರಿಸಿ ಗೌರವದಿಂದ ಈ ವೃತ್ತಿಯ ನಂಬಿದವರು ಇದ್ದಾರೆ. ಒಂದು ವರ್ಷ ಹೊಲ ಬೆಳೆಯದಿದ್ದರೆ ಎರಡನೇಯ ವರ್ಷ ಬಿತ್ತುವುದನ್ನು ಬಿಡಬೇಕೇ? ಎಷ್ಟು ವೇಳೆ ಕೆಟ್ಟರು ಮತ್ತೊಮ್ಮೆ ಪ್ರಯತ್ನ ಮಾಡಬೇಕು ಎನ್ನುವುದನ್ನು ರೈತರು ನಂಬಿರಬೇಕಾಗುತ್ತದೆ. ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಶ್ರೀಘನಮಠ ಶಿವಯೋಗಿಗಳು ಕೃಷಿಯಲ್ಲಿ ಬಳಸಬೇಕಾಗಿರುವ ಉಪಸಾಧನಗಳನ್ನು ಈ ರೀತಿ ಹೇಳುತ್ತಾರೆ. "ಆದ್ದರಿಂದ ಯಾವತ್ತು ಜನರು ತಮ್ಮ ತಮ್ಮ ಕೆಲಸಗಳಲ್ಲಿ ಜಾಗ್ರತೆಯಿಂದ, ಉದ್ಯೋಗ, ಸಾಹಸ, ಧೈರ್ಯ, ಬಲ, ಬುದ್ಧಿ, ಪರಾಕ್ರಮಗಳೆಂಬ ಉಪಸಾಧನಗಳಿಂದ ಮತ್ತು ಅರ್ಥಶಕ್ತಿ, ಬುದ್ಧಿಶಕ್ತಿ, ಕಾಯಶಕ್ತಿಗಳೆಂಬ ತ್ರಿವಿಧ ಸಾಧನಗಳಿಂದ ಇವುಗಳನ್ನೆಲ್ಲ ಮೇಳೈಸಿ ಇವುಗಳಿಗೆ ಒಂದಾದರೂ ಕಡಿಮೆಯಾಗದಂತೆ ದೃಢ ಬುದ್ಧಿಯಿಂದ ಆ ಕೆಲಸವು ಸ್ಥಿತಿಗೆ ಮುಟ್ಟುವವರೆಗೂ ಮತ್ತೊಮ್ಮೆ ಮತ್ತೊಮ್ಮೆ ಯತ್ನವನ್ನು ಮಾಡುತ್ತ ಹೋದರೆ,............"[9] ಎನ್ನಲಾಗಿದೆ.

'ಒಕ್ಕಲಿಗ ಸೊಕ್ಕದಿದ್ದರೆ ಜಗವೆಲ್ಲ ಬಿಕ್ಕುವುದು' ಎಂದು ಸರ್ವಜ್ಞ ಕವಿ ಹೇಳಿರುವಂತೆ ರೈತ ಒಕ್ಕುತ್ತಿದ್ದ, ರಾಶಿಮಾಡಿ, ತಾನುಂಡು ಉಳಿದದ್ದನ್ನು ಇತರರಿಗೂ ಕೊಡುತ್ತಿದ್ದ. ಅಂತೆಯೇ ಉಂಡವರು 'ಅನ್ನದಾತಾಸುಖೀಭವ' ಎಂದು ಹಾರೈಸುತ್ತಿದ್ದರು. ಒಕ್ಕಲುತನದ ಮಹತ್ವ ಕುರಿತು ಈರಯ್ಯ ಕಿಲ್ಲೇದಾರರು ಹೀಗೆ ಹೇಳುತ್ತಾನೆ. "ಒಕ್ಕಲುತನದ ವೃತ್ತಿ ಗೌರವದ ವೃತ್ತಿ ಎನಿಸಿತ್ತು. ನೇಗಿಲ ಹೊಡೆಯುವ ರೈತ ನೇಗಿಲಯೋಗಿ ಎನಿಸಿದ್ದ, ತನ್ನ ಹೊಲದಲ್ಲಿ ತಲ್ಲೀನನಾಗಿ ದುಡಿಯುವದು ರೈತನಿಗೆ ಹೆಮ್ಮೆಯ ಕೆಲಸ

ಎನಿಸಿತ್ತು. ಬೆಳೆಗಳು ರೈತನೊಡನೆ ಮಾತಾಡುತ್ತಿದ್ದವು. ಬೆಳೆಗಳ ಭಾಷೆ ರೈತನಿಗೆ ಅರ್ಥವಾಗುತ್ತಿತ್ತು. ಮೂಕ ಎತ್ತುಗಳು ಇಂದಿಗೂ ರೈತನ ಮಾತನ್ನು ಕೇಳುತ್ತವೆ. ಹೊಲಕ್ಕೆ ಗೊಬ್ಬರ ಹಾಕುವುದು ಬೆಳೆಗಳಿಗೆ ಅಲ್ಲ. ಎರೆಹುಳು ಮತ್ತು ಸೂಕ್ಷ್ಮ ಜೀವಾಣುಗಳ ವಂಶವೃದ್ಧಿಗೆ ಹಾಗೂ ಅವುಗಳ ಚಟುವಟಿಕೆ ಹೆಚ್ಚಿಸಲು ಗೊಬ್ಬರ ಆಹಾರವಾಗಿದೆ. ಈ ಸಾವಯವ ಗೊಬ್ಬರ ತಿಂದು ಬೆಳೆದು ಅಲ್ಪಾವಧಿಯಲ್ಲಿ ಸೂಕ್ಷ್ಮಾಣುಜೀವಿಗಳು ನಶಿಸಿ ಬೆಳೆಗಳಿಗೆ ಪೋಷಕಾಂಶಗಳನ್ನು ಒದಗಿಸಬಲ್ಲವು. ಅಂತೆಯೇ ಹೊಲದಲ್ಲಿ ರವದಿ, ಕೋಲಿ, ಕಸಕಡ್ಡಿ ಮತ್ತು ದನಕರಗಳು ತಿಂದುಬಿಟ್ಟ ಚಿಪ್ಪಾಡಿಯನ್ನು ಹರಡುತ್ತಿದ್ದರು. ಕಾಲಾಂತರದಲ್ಲಿ 'ಒಕ್ಕಲು ಹಕ್ಕಲಾಗುವುದು, ಹಕ್ಕಲು ಒಕ್ಕಲಾಗುವುದು' ಸಹಜ ಸಂಗತಿ ಎನಿಸಿತ್ತು".[೩] ರೈತರಿಗೆ ಹೊಲ, ಗಿಡಮರ, ಮಳೆ ಮುಂತಾದವುಗಳ ಬಗ್ಗೆ ಅಪಾರ ಗೌರವ, ಭಕ್ತಿ ವಿಶ್ವಾಸಗಳಿದ್ದವು. ನಿಸರ್ಗದೊಡನೆ ಒಂದಾದ ಬದುಕು ರೈತನದಾಗಿತ್ತು. 'ಕೈ ಕೆಸರಾದರೆ ಬಾಯಿ ಮೊಸರು' ಎಂದು ನಂಬಲಾಗಿತ್ತು. ಹತ್ತಿ, ತೊಗರಿ, ಕಡಲೆಯಂತಹ ಬೆಳೆಗಳನ್ನು ಹವಾಮಾನ ಗಮನಿಸಿ ಹಿಂಗಾರಿಯಲ್ಲಿ ಕೀಟದ ಬಾಧೆ ಇಲ್ಲದಂತಹ ವೇಳೆಯಲ್ಲಿ ಬೆಳೆಯುತ್ತಿದ್ದರು. ಅಂಬಲಿ, ಚರಗ ಚೆಲ್ಲುವ ವಿಧಾನಗಳಿಂದ ಜೈವಿಕ ಕೀಟಗಳ ಹತೋಟಿ ಮಾಡುತ್ತಿದ್ದರು. ದೈವವನ್ನು ನಂಬಿ ಶ್ರಮಪಟ್ಟು ದುಡಿಯುತ್ತಿದ್ದರು. ಬೆಳೆ ಬರಲಿ ಬಾರದೆ ಇರಲಿ, ಅರ್ಧ ಬರಲಿ, ಪೂರ್ತಿ ಬರಲಿ, ಬಂದಿದ್ದರಲ್ಲಿ ತೃಪ್ತಿಪಡುತ್ತಿದ್ದರು.

ಕೃಷಿಶಾಸ್ತ್ರದ ಸಾಂಸ್ಕೃತಿಕ ಮಹತ್ವವನ್ನು ಈ ಕೆಳಗಿನ ಚರ್ಚಿತವಾದ ಅಂಶಗಳಿಂದ ಅರ್ಥ ಮಾಡಿಕೊಳ್ಳಬಹುದಾಗಿದೆ. ಮಣ್ಣನ್ನು ಕುರಿತು ಹೇಳುವುದಾದರೆ, ಮಣ್ಣು ಸಕಲ ಜೀವರಾಶಿಗಳಿಗೆ ಆಶ್ರಯ ಸ್ಥಾನವಾಗಿದೆ. ಮಣ್ಣಿನಲ್ಲಿ ಚೈತನ್ಯ ಶಕ್ತಿಯಿದ್ದು, ಅದು ಜನ್ಮಕೊಡುವ ಸಾಮರ್ಥ್ಯ ಹೊಂದಿದೆ. ಆದ್ದರಿಂದಲೇ ನಮ್ಮ ಹಿರಿಯರು 'ಭೂಮಿತಾಯಿ' ಎಂದು ಗೌರವದಿಂದ ಕರೆಯುತ್ತಿದ್ದರು. ಹೊಲಗಳ ಮೇಲ್ಮಣ್ಣು ಉತ್ತಮವಾದದು, ಅದು ಒಳ್ಳೆಯ ಬೆಳೆ ಬೆಳೆಯಲು ಸಹಕಾರಿಯಾಗಿದೆ ಎಂದು ಮನಗಂಡಿದ್ದರು. ನಮ್ಮ ಪೂರ್ವಿಕರು 'ಅಂಗೈಯಂತೆ ಹೊಲಮಾಡಿದರೆ ಮುಂಗೈಎಲ್ಲಾ ತುಪ್ಪ' ಎಂದೂ, 'ಒಡ್ಡು ಇಲ್ಲದ ಹೊಲ ಗೊಡ್ಡೆಮ್ಮೆ ಸಾಕಿದಂತೆ' ಎಂಬ ಮಾತುಗಳು ಮಣ್ಣಿನ ರಕ್ಷಣೆಯನ್ನು ಕುರಿತು ಆಡಿದಂತವುಗಳಾಗಿವೆ. ಪಾರಂಪರಿಕ ಸಂಸ್ಕೃತಿಯನ್ನು ಸಾರುವ ಈ ಯುಕ್ತಿಗಳು ಇಂದು ರೈತರು ಹೇಗೆ ಹೊಲಗದ್ದೆಗಳನ್ನು ಸಂರಕ್ಷಿಸಿಕೊಳ್ಳಬೇಕೆಂಬ ಜಾಗೃತಿಯನ್ನು ಮೂಡಿಸುವಂತವುಗಳಾಗಿವೆ. ಮಣ್ಣಿನ ರಕ್ಷಣೆಯಿಂದ ತೇವಾಂಶ ಹೆಚ್ಚಾಗುವುದು, ಅಂತರ್ಜಲದ ಮಟ್ಟ ಮೇಲೆರುತ್ತದೆ, ಗೊಬ್ಬರದ ಪೋಷಕಾಂಶಗಳು ಬೇರೆಡೆಗೆ ಕೊಚ್ಚಿಹೋಗುವುದನ್ನು ತಡೆಯಬಹುದು ಅಲ್ಲದೇ ನದಿ, ಕೆರೆ ಮತ್ತು ಆಣೆಕಟ್ಟುಗಳು ಹೂಳು ತುಂಬುವ ಸಮಸ್ಯೆ ನಿವಾರಣೆಯಾಗುತ್ತದೆ. ಇಂತಹ ಪ್ರಯೋಜನ ಪಡೆಯಲು ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಅನುಸರಿಸಬೇಕಾದ ಅನಿವಾರ್ಯತೆ ತುಂಬಾ ಇರುವಂತಿದೆ ಎಂದು ಹೇಳಬಹುದಾಗಿದೆ.

ಸಾವಯವ ಕೃಷಿಬೆಳೆ ಸಾತ್ವಿಕದ್ದು, ರಾಸಾಯನಿಕ ಬಳಕೆಯ ಕೃಷಿಬೆಳೆ ರಾಕ್ಷಸಿ ಸ್ವರೂಪದ್ದೆಂಬ ಭಾವನೆ ಇಂದು ಮೂಡತೊಡಗಿದೆ. ಸಾವಯವ ಕೃಷಿಗೆ ಸಗಣಿಗೊಬ್ಬರ ಅವಶ್ಯಕವಾದದ್ದು. ಸಗಣಿ ಸಂಗ್ರಹಿಸುವ ಸ್ಥಳಕ್ಕೆ 'ತಿಪ್ಪೆ'ಎಂದು ಹೆಸರು. ಈ ತಿಪ್ಪೆಗಳು ಹೆಚ್ಚಾಗಿ ನೀರು ನಿಲ್ಲುವ ಸ್ಥಳಗಳಲ್ಲಿ ಇರಬಾರದು. ತಿಪ್ಪೆ ಗೊಬ್ಬರ ಕೊಳೆಯ ಬೇಕೆ ಹೊರತು, ನೀರು ನಿಂತು ಕೊಳೆಯ ಬಾರದು. ಚೆನ್ನಾಗಿ ಕೊಳೆತ ಸಗಣಿಯ ಗೊಬ್ಬರದಲ್ಲಿ ಸೂಕ್ಷ್ಮಾಣು ಜೀವಿಗಳು ಮತ್ತು ಪೋಷಕಾಂಶಗಳು ನಾಶವಾಗದೆ ಜೀವಂತವಾಗಿರುತ್ತವೆ. ಆದ್ದರಿಂದ ಹೊಲ–ಗದ್ದೆಗಳಲ್ಲಿ ತುಂಬಾ ದಿನಗಳವರೆಗೆ ಗುಂಪಿ ಬಿಡದೆ, ಹೊಲದಲ್ಲಿ

ಹರಡಿ ಮಣ್ಣಿನಲ್ಲಿ ಬೆರೆಸಬೇಕು. ಆಗ ಬಿಸಿಲಿನ ಪ್ರಖರತೆಯಿಂದ ಸೂಕ್ಷ್ಮ ಪೋಷಕಾಂಶಗಳ ರಕ್ಷಣೆ ಮಾಡಬಹುದು. 'ಸಗಣಿಯ ಗೊಬ್ಬರಹಾಕಿ, ಬೆಳೆಯ ಅಬ್ಬರ ನೋಡು'ಎಂಬ ಗಾದೆಯ ಮಾತು ಪ್ರಚಲಿತದಲ್ಲಿದೆ. ಆದ್ದರಿಂದ ರೈತರು ಎಲ್ಲಾ ಹೊಲಗಳಿಗೂ ಸೆಗಣಿಗೊಬ್ಬರ ಎಲ್ಲಿಂದ ತರಬೇಕೆಂಬ ಆತಂಕಕ್ಕೆ ಒಳಗಾಗದೆ ನಮ್ಮ ಹಿರಿಯರ ಅನುಭವದಂತೆ ಸಗಣಿಯ ಗೊಬ್ಬರ ಒಮ್ಮೆ ಹೊಲದಲ್ಲಿ ಹಾಕಿದರೆ ಅದರ ಸತ್ವವು ಮೂರು ನಾಲ್ಕು ವರ್ಷಗಳ ತನಕ ಬೆಳೆಗಳಿಗೆ ಲಭ್ಯವಾಗಿ, ಸದೃಢವಾಗಿ ಬೆಳೆಯಲು ಸಹಕಾರಿಯಾಗುತ್ತದೆ. ಆದ್ದರಿಂದ ಹೊಲಗಳಿಗೆ ಮೂರು ನಾಲ್ಕು ವರ್ಷಕ್ಕೆ ಒಂದಾವರ್ತಿ ಹೊಲಗಳಿಗೆ ಗೊಬ್ಬರ ಹಂಚಿಕೆ ಮಾಡಿಕೊಳ್ಳಬೇಕು. ಹೀಗೆ ಮಾಡುವುದರಿಂದ ರಾಸಾಯನಿಕ ಗೊಬ್ಬರದಂತೆ ಪ್ರತಿ ಬೆಳೆಗೆ ಪುನಃಪುನಃ ಹಾಕುವಂತಿಲ್ಲ. ಮೇಲು ಗೊಬ್ಬರವಾಗಿ ಸಾರಜನಕದಂತಹ ಗೊಬ್ಬರವನ್ನು ಕೊಡಬೇಕಾದ ಅವಶ್ಯಕತೆಯಿಲ್ಲ. ಹಿಂದೆ ದಾರಿಯಲ್ಲಿ ಸಗಣಿಬಿದ್ದರೆ ಅದನ್ನು ಕಾಲಿನಿಂದ ಗುರುತಿಸಿ ಇದನ್ನು ನಾನು ಒಯ್ಯುತ್ತೇನೆ ಎಂದು ಸಂಕೇತಮಾಡಿ ಹೋಗುತ್ತಿದ್ದರು. ಇಂದು ಸೆಗಣಿಎಲ್ಲಿ ಬಿದ್ದರೂ ನೋಡದಂತಹ ಕಾಲ ಬಂದಿದೆ. ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಶಾಸ್ತ್ರಕಾರನು ಯಾವ ಯಾವಹೊಲಗಳಿಗೆ ಗೊಬ್ಬರವನ್ನು ಹೇಗೆ ಹಾಕಬೇಕೆಂಬ ವೈಧಾನಿಕತೆಯನ್ನು ಕುರಿತು ಹೇಳಿರುವುದನ್ನು ಗಮನಿಸಬಹುದು.

ಸಾಂಪ್ರದಾಯಿಕ ವಿಧಾನಗಳಲ್ಲಿ ಖರ್ಚಿಲ್ಲದೆ ಬಹಳ ಸುಲಭವಾಗಿ ಬೀಜಗಳ ಸಂಗ್ರಹಣೆಯನ್ನು ನಮ್ಮ ಪೂರ್ವಿಕರು ಮಾಡಿಕೊಳ್ಳುತ್ತಿದ್ದರು. ಜವಾರಿ ಬೀಜಗಳು ರೈತರ ಹೊಲದಲ್ಲೇ ಉತ್ಪಾದನೆ ಮಾಡಿದಂತವು ಆಗಿವೆ. ಬೀಜಗಳ ಆಯ್ಕೆಮಾಡುವಾಗ ಸದೃಢವಾದ, ತೆನೆ ದೊಡ್ಡದಾದ, ಕಾಳು ದಪ್ಪನಾಗಿರುವಂತಹವುಗಳನ್ನು ಆರಿಸಿಕೊಂಡು ಬಡೆ ಮಣೆಯಿಂದ ಬಡಿದು ಕಾಳುಗಳನ್ನು ಮೊದಲು ಬಿಸಿಲಿನಲ್ಲಿ ಒಣಗಿಸಿ, ನಂತರ ರಾತ್ರಿ ನೆರಳಿನಲ್ಲಿ ಆರಲು ಬಿಟ್ಟು, ಬೆಳಿಗ್ಗೆ ಇಬ್ಬನಿ ಬಿದ್ದಾಗ ಬೀಜವನ್ನು ಬೇವಿನ ತಪ್ಪಲು ಹಾಗೂ ಬೂದಿಯಲ್ಲಿ ಮಿಶ್ರಣಮಾಡಿ ಗಡಿಗೆ, ಗಳಿಗೆಯಲ್ಲಿ ಸಂಗ್ರಹಿಸಿಡುತ್ತಾರೆ. ಹೀಗೆ ಇಡುವುದರಿಂದ ಯಾವುದೇ ಕೀಟಗಳ ಕಾಟಗಳು ಆಗಲಾರವು. ಜವಾರಿ ಬೀಜಗಳು ಸತ್ವಯುತ ಹಾಗೂ ಆರೋಗ್ಯದಾಯಕವಾಗಿದ್ದು. ಒಳ್ಳೆಯ ಸತ್ವ ಮತ್ತು ರುಚಿಯನ್ನು ಹೊಂದಿದ ಬೆಳೆಯನ್ನು ನೀಡುತ್ತವೆ. 'ಜವಾರಿ ಜ್ವಾಳದ ರೊಟ್ಟಿ, ಜವಾರಿ ಭತ್ತದ ಅನ್ನಾ ಹರ್‍ಯಾಗ ಮಾಡಿದ್ದು ರಾತರಿತನಕಾ ಹಳೊಸುದುಲ್ಲಾ, ಜವಾರಿ ಮೂಲ ಬಾಳ ಚೊಲೊ, ಹಾಬ್ರಿಡ ಕೂಳಾ ಹೊಟ್ಯಾಗ ಉರಿತ್ಯೆತಿ, ರಟ್ಯಾಗ ಕಸವು ಬರೊದಿಲ್ಲಾ'. ಎಂದು ಹಳೆಯ ತಲೆಮಾರಿನ ರೈತರು ಆಗಾಗ ಹೇಳುತ್ತಿರುತ್ತಾರೆ. 'ಹೈಬ್ರೀಡ್ ಬೀಜಗಳು ಹೆಚ್ಚು ಇಳುವರಿ ಕೊಡುತ್ತವೆ' ಎಂಬ ಕೃಷಿವಿಜ್ಞಾನಿಗಳ ಮಾತಿಗೆ 'ಕಸಾ ತಿನ್ನೂದ ತುಸು ತಿನ್ನಿರಿ' ಎಂದು ಹೇಳುತ್ತಾರೆ. ಅವರ ಮಾತುಗಳಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಸ್ವಾಲಂಬಿ ಕೃಷಿಗೆ ಜವಾರಿ ಬೀಜಗಳು, ಇದಕ್ಕಾಗಿ ರೈತರು ಯಾವ ಕಾಲಕ್ಕು ಅವಲಂಬಿತರಾಗಬಾರದು. ಯಾವುದೇ ತಂತ್ರಗಾರಿಕೆ ಕಸರತ್ತುಗಳಿಲ್ಲದೆ ತನ್ನ ಹೊಲದಲ್ಲಿ ತಾನೇ ಬೀಜಗಳ ಸಂಗ್ರಹಣೆ ಮಾಡಿಕೊಳ್ಳಬಹುದು. ಇಂತಹ ಬೀಜಗಳು ಹೆಚ್ಚು ರೋಗ ನಿರೋಧಕ ಶಕ್ತಿ ಹೊಂದಿರುತ್ತವೆ. ಬೀಜಗಳ ಕುರಿತಾದ ಕಾನೂನು, ಪೇಟೆಂಟು, ವಿಶ್ವವ್ಯಾಪಾರ ಒಪ್ಪಂದದಿಂದ ಕಂಪನಿಗಳ ಏಕಸ್ವಾಮ್ಯತೆಯ ಹಂಗುನಮ್ಮ ರೈತರಿಗಿಲ್ಲದಂತೆ ಮನೆಯ ಗಡಿಗೆಯಲ್ಲಿಟ್ಟ ಬೀಜಗಳನ್ನು ದನಗಳ ಸೆಗಣಿ, ಗೋಮೂತ್ರದಿಂದ ಬೀಜೋಪಚಾರ ಮಾಡಬಹುದಾಗಿದೆ. ಉದಾಹರಣೆಗೆ- ಹತ್ತಿ ಕಾಳಿನ ಬೀಜಕ್ಕೆ ಕೋಣಗಳ ಸೆಗಣಿಯಿಂದ ಬೀಜೋಪಚಾರ ಮಾಡಬಹುದು. ಲೋಕೋಪಕಾರ ಗ್ರಂಥದ (ಅಧಿಕಾರ-೬, ಪದ್ಯ-೪೧)ದಲ್ಲಿ ಹಲವಾರು ಹುಲ್ಲಿನ

ಬೀಜಗಳನ್ನು ಸೆಗಣಿಯಲ್ಲಿ ಕಲಸಿ ಬೀಜೋಪಚಾರ ಮಾಡುವ ವಿಧಾನವನ್ನು ಹೇಳಿರುವನು. ಇನ್ನೂ ಕೃಷಿಜ್ಞಾನ ಪ್ರದೀಪಿಕೆಯಲ್ಲಿ ತೋಟದ ಬೆಳೆ, ಋಷ್ಕಿ ಬೆಳೆಗಳ ಬೀಜ ಸಂರಕ್ಷಣೆಯ ಅಂಶಗಳನ್ನು ಹೇಳಲಾಗಿದೆ. ಅಲ್ಲದೆ ಸಾಹಿತ್ಯ ಕೃತಿಗಳಲ್ಲಿ ಬೀಜ ಕುರಿತಾದ ಸಾಕಷ್ಟು ಮಾಹಿತಿ ದೊರೆಯುತ್ತದೆ. ಆದರೆ ಬೀಜ ಸಂಗ್ರಹಣೆ ಮಾಡುವ ವಿಧಾನಗಳು ಕಾಣಸಿಗುವುದಿಲ್ಲವಾದರೂ ಬೀಜದ ಮಹತ್ವವನ್ನು ಕುರಿತು ಹೇಳಲಾಗಿದೆ.

ಹಸಿರು ಕ್ರಾಂತಿಯ ಫಲದಿಂದ ಬಂದ ಆಧುನಿಕ ಕೃಷಿ, ಅನೇಕ ಅವಾಂತರಗಳನ್ನು ಸೃಷ್ಠಿ ಮಾಡಿದೆ ಎಂದೇ ಹೇಳಬಹುದು. ಬಹಳ ಜನರಿಗೆ ಇಂದು ಒಕ್ಕಲುತನದಲ್ಲಿ ನಿರಾಸೆ ಮೂಡಿದೆ. ಇದಕ್ಕೆ ಕಾರಣಗಳು ಅನೇಕ. ಕೂಲಿಕಾರರ ತೊಂದರೆ, ವಾಣಿಜ್ಯ ಬೆಳೆಗಳ ಉತ್ಪಾದನೆಕಡೆಗೆ ಹೆಚ್ಚು ಒಲವು ಮತ್ತು ಅನೇಕ ಅನುಕೋಲತೆಗಳು ದೊರಕಿವೆ, ಆದರೆ ಆಹಾರದ ಬೆಳೆಗಳದ್ದೆ ಸಮಸ್ಯೆಯಾಗಿದೆ. ಹೈಬ್ರೀಡ್ ಬೀಜ, ಕ್ರಿಮಿನಾಶಕ, ರಾಸಾಯನಿಕ ಗೊಬ್ಬರಗಳ ಹೆಚ್ಚಾದ ಬಳಕೆಯಿಂದ ಮತ್ತು ನೀರಿನ ಸೌಲಭ್ಯಗಳು ಹೆಚ್ಚಾಗಿರುವುದರಿಂದ, ಆಧುನಿಕ ಯಂತ್ರಗಳ ಉಳುಮೆಯಿಂದ ಭೂಮಿಯ ಮಣ್ಣು ನಿಸಾರವಾಗಿದೆ. ಭೂಮಿತಾಯಿ ಇಂದು ಭೂಮಿ ಮಾತ್ರವಾಗಿದೆ. ಸಾಂಪ್ರದಾಯಿಕ ಮತ್ತು ಸಾವಯವ ಕೃಷಿಯಿಂದ ಆಧುನಿಕ ಕೃಷಿಗೆ ಪರ್ಯಾಯ ವಿಧಾನಗಳನ್ನು ಅನುಸರಿಸಿದಾಗ ಕೆಲವಾದರೂ ಸಮಸ್ಯೆಗಳಿಗೆ ಪರಿಹಾರ ದೊರೆಯಬಹುದಾಗಿದೆ. ಅಂತಹ ವಿಧಾನಗಳೆಂದರೆ ಹದಾ, ಬೆದಿ, ಹಂಗಾಮು ಬಿತ್ತನೆ, ಸೆಗಣಿ ಗೊಬ್ಬರ ಬಳಕೆ, ಮಣ್ಣಿನ ಹದಾ, ಪರಿಸರದ ಸಮತೋಲನ ಕಾಪಾಡುವಂತವುಗಳು ಅಲ್ಲದೇ ಇನ್ನೂ ಅನೇಕ ವಿಧಾನಗಳನ್ನು ಕಾಣಬಹುದು.

'ಹದನೋಡಿ ಹರಗು, ಬೆದಿನೋಡಿ ಬಿತ್ತು' ಈ ಗಾದೆ ನಮ್ಮ ಜನಪದಿಯರ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಟ್ಟಿದೆ. ಇಂದು ನಾವು ಭೂಮಿಯ ಹದವೆಂದರೇನೆಂದು ತಿಳಿಯದವರಾಗಿದ್ದೇವೆ. ಹೊಲದ ಹದವೆಂದರೆ ಮಣ್ಣು ಬಿರುಸಾಗಿರಬಾರದು, ತೇವಾಂಶ ಹೆಚ್ಚಾಗಿ ರಾಡಿಯೂ ಇರಬಾರದು. ಅಂತಹ ಸಂದರ್ಭನೋಡಿ ಗಳೆ ಹೊಡೆಯುವುದರಿಂದ ಭೂಮಿಯ ಮಣ್ಣು ಮೃದುವಾಗುತ್ತದೆ. ಮಣ್ಣನ್ನು ಮುಟ್ಟಿಗೆಯಲ್ಲಿ ಹಿಡಿದರೆ ಉಂಡಿಯಾಗಬೇಕು ಇದು ಹದಬಂದ ಕಾಲ. 'ಹದಬಂದ ಕಾಲದಲ್ಲಿ ಕದ ಮೈಮೇಲೆ ಬಿತ್ತು' ಎಂಬ ಗಾದೆಯೂ ಪ್ರಚಲಿತದಲ್ಲಿದೆ. ಹದಬಂದಾಗ ಏನಾದರೂ ತೊಂದರೆ ರೈತನ ಆ ವರ್ಷದ ಒಕ್ಕಲುತನ ಕೆಟ್ಟಂತೆ ಎಂಬುದು ಈ ಮಾತಿನ ಅರ್ಥ. ಇನ್ನೂ ಬೆದಿನೋಡಿ ಬಿತ್ತು ಎನ್ನುವದಕ್ಕೆ ಬಂದರೆ, ಬಿತ್ತುವಾಗ ಭೂಮಿ ಒಂದು ರೀತಿಯಲ್ಲಿ ಹದಮಾಡಿ ಇಟ್ಟಂತಾಗಿದ್ದು ಮಣ್ಣಿನಲ್ಲಿ ಬೀಜ ಚೆಲ್ಲಿದರೆ ತಾನೇ ಮಣ್ಣಲ್ಲಿ ಮುಳುಗುವಂತಿರಬೇಕು. ಇದು ಬೆದಿಯ ಕಾಲವಾಗಿದೆ. ಇಂತಹ ಬಿತ್ತುವ ವಿಧಾನಗಳನ್ನು ಅನುಸರಿಸಬೇಕಾಗಿದೆ. ಅಲ್ಲದೇ ಹಂಗಾಮು ಬಿತ್ತನೆಯಲ್ಲಿ ಎರಡು ಬಗೆಗಳುಂಟು. ಅವು ಹಿಂಗಾರಿ, ಮುಂಗಾರಿಯಂದು. ಬೆಳೆಗಳನ್ನು ಹಂಗಾಮಿಗೆ ಅನುಸರಿಸಿ ಮಾಡುವುದರಿಂದ ಕಳೆ ನಿಯಂತ್ರಣ, ಕೂಲಿಕಾರರ ಕೊರತೆ ನೀಗಿಸಲು, ಕೀಟ ಹಾಗೂ ರೋಗಗಳ ಬಾದೆಯಿಂದ ಬೆಳೆಗಳನ್ನು ರಕ್ಷಿಸಲು ಸಹಕಾರಿಯಾಗುತ್ತದೆ. ಕೃಷಿಜ್ಞಾನ ಪ್ರದೀಪಿಕೆ ಗ್ರಂಥದಲ್ಲಿ ಇಂತಹ ಅನೇಕ ಕ್ರಮಗಳನ್ನು ಹೇಳಿರುವುದು ಕಂಡುಬರುತ್ತದೆ.

ಬೆಳೆಗಳ ಕಾಲಗ್ಯೆ ಪದ್ಧತಿ ಅನುಸರಿಸುವುದು ಅಂದರೆ ಬೆಳೆ ನಿಗದೀಕರಣವಾಗಿದೆ. ನಾವಿಂದು ಒಂದೇ ಬೆಳೆಯನ್ನು ಅಂದರೆ ಹತ್ತಿ, ಮೇಕ್ಕೆಜೋಳ ಮುಂತಾದ ಬೆಳೆಗಳನ್ನು ಅನೇಕ ವರ್ಷಗಳ ಕಾಲ

ಬಿತ್ತನೆ ಮಾಡುತ್ತೇವೆ. ಹೀಗೆ ಮಾಡದೆ, ಒಮ್ಮೆ ಹತ್ತಿ ಹಾಕಿದ ಹೊಲಕ್ಕೆ ನಾಲ್ಕು ವರ್ಷಗಳವರೆಗೆ ಹತ್ತಿ ಬಿತ್ತಬಾರದು. ಕೆಲವು ಬೆಳೆಗಳು ಆಳವಾದ ಬೇರು ಬಿಡುತ್ತವೆ, ಬಿಡುವುದಿಲ್ಲಾ ಈ ಸಂಗತಿಯನ್ನು ಗಮನಿಸಿ ಬೆಳೆ ಪರಿವರ್ತನೆ ಮಾಡುವುದು ಒಳ್ಳೆಯ ವಿಧಾನವಾಗಿದೆ. ಇನ್ನೂ ಒಂದೇ ಹೊಲದಲ್ಲಿ ಒಂದೇ ಬೆಳೆ ಬೆಳೆದಾಗ ಕೀಟಗಳ ವಂಶಾಬಿವೃದ್ಧಿಯಾಗುತ್ತದೆ. ಬೆಳೆದ ಪಸಲು ಕೀಟಗಳಿಂದ ಹಾನಿಗೊಳಗಾಗುತ್ತದೆ. ಅಲ್ಲದೇ ಒಂದೇ ಬೆಳೆ ಮಾಡುವುದರಿಂದ ಬೆಳೆಗಳು ಅದೇ ಸತ್ವವನ್ನು ಹೀರಿ ಭೂಮಿ ಬಡವಾಗುತ್ತದೆ. ಆದ್ದರಿಂದ ಪರ್ಯಾಯ ಬೆಳೆ ಮಾಡುವುದು ಒಂದು ಉಪಾಯವಾಗಿದೆ.

ಮಿಶ್ರ ಬೆಳೆಮಾಡುವುದು ಇಂದು ಅನಿವಾರ್ಯ ಕ್ರಮವಾಗಿದೆ. ಉದಾಹರಣೆಗೆ ಎರಡು ಸಾಲು ಜೋಳ ಒಂದು ಸಾಲು ಹೆಸರು ಇಲ್ಲಾ ಮಡಿಕೆ ಮತ್ತೆ ಎರಡು ಸಾಲು ಜೋಳ ಒಂದು ಸಾಲು ತೊಗರಿ, ತೊಗರಿಯಲ್ಲೇ ಪುಂಡಿ ಹಾಗೂ ಅಲಸಂದಿಯನ್ನು ಕೂಡಿಸಿ ಬಿತ್ತುತ್ತಿದ್ದರು. ಅಲ್ಲದೆ ಜೋಳ, ರಾಗಿಯಲ್ಲಿ ಎಂಟು, ಹತ್ತು ಮತ್ತು ಹನ್ನೆರಡು ಸಾಲುಗಳಿಗೆ ಅಕ್ಕಡಿಕಾಳು ಹಾಕಿ ಬೆಳೆ ಮಾಡಿಕೊಳ್ಳಲಾಗುತಿತ್ತು. ಇಂತಹ ಸಾಂಪ್ರದಾಯಿಕ ವಿಧಾನ ಅನುಸರಿಸಬೇಕಾಗಿದೆ. ಹೀಗೆ ಮಿಶ್ರಬೆಳೆ ಮಾಡುವುದರಿಂದ ಅನೇಕ ಲಾಭಗಳುಂಟು ಮತ್ತು ಹೊಲದ ಮಣ್ಣಿಗೆ ಹಿತಕರವೆನಿಸುತ್ತದೆ. ಏಕದಳ, ದ್ವಿದಳ ಬೆಳೆಗಳ ಮಿಶ್ರಣದಿಂದಾಗಿ ಬೆಳೆಗಳು ಪೋಷಕಾಂಶಗಳನ್ನು ಹೀರಿಕೊಳ್ಳುವಲ್ಲಿ ಸ್ಪರ್ಧೆ ಇರಲಾರದು. ಕೀಟ ಹಾಗೂ ರೋಗಗಳ ಬಾಧೆ ಕಡಿಮೆಯಾಗುವುದು. ಒಂದು ಬೆಳೆ ಕಟಾವಿನ ನಂತರ ಇನ್ನೊಂದು ಕಟಾವಿಗೆ ಬರುತ್ತವೆ. ಉದಾಹರಣೆಗೆ ಶೇಂಗಾ, ಹೆಸರು, ಜೋಳದಂತಹ ಬೆಳೆಗಳು ಮೊದಲು ಕಟಾವಿಗೆ ಬರುತ್ತವೆ. ನಂತರ ಕಟಾವಿಗೆ ಬರುತ್ತದೆ. ಅದರಂತೆ ಗೋಧಿ, ಕಡಲೆ ಹಿಂಗಾರಿಯಲ್ಲಿ ಬೇಗ ಕಟಾವಿಗೆ ಬಂದರೆ, ಕುಸುಬೆ ನಂತರ ಕಟಾವಿಗೆ ಬರುತ್ತದೆ. ಈ ಮಿಶ್ರಬೆಳೆಗಳು ಸಂಗಾತಿಬೆಳೆಗಳಾಗಿವೆ. ಒಂದು ಬೆಳೆ ಇನ್ನೊಂದು ಬೆಳೆಗೆ ಪೂರಕ ಹಾಗೂ ಪ್ರೇರಕ ಎನಿಸಿವೆ. ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಹಿಂಗಾರಿ, ಮುಂಗಾರಿಯಲ್ಲಿ ಮಿಶ್ರಬೆಳೆ ಮಾಡುವ ಕ್ರಮಬದ್ದತೆಯನ್ನು ವಿವರಿಸಲಾಗಿದೆ. ಈ ಜ್ಞಾನ ಇಂದಿನ ಕೃಷಿಗೆ ಅತ್ಯವಶ್ಯಕವಾಗಿದೆ.

ಜೈವಿಕ ಕೀಟಗಳ ಹತೋಟಿಗೆ ನಮ್ಮ ಪ್ರಾಚೀನರು ಕಂಡುಕೊಂಡ ವಿಧಾನಗಳು ಹಬ್ಬ ಹರಿದಿನಗಳು. ಈ ಆಚರಣೆಗಳಿಗೂ ಬಾಧಿಸುವ ಕೀಟಗಳ ನಿಯಂತ್ರಣಕ್ಕೂ ಎಲ್ಲಿಂದೆಲ್ಲಿಯ ಸಂಬಂಧವೆಂದು ಆಶ್ಚರ್ಯ ಪಡಬೇಕಾಗಿಲ್ಲಾ. ಋತುಮಾನಕ್ಕನುಸರಿಸಿ ಮಾಡುವ, ಬೆಳೆಗಳ ಬೆಳವಣಿಗೆಯ ಹಂತ ಹಂತಗಳಲ್ಲಿ ಬರುವ ಹುಣ್ಣಿಮೆ, ಅಮವಾಸ್ಯೆಗಳು ಮತ್ತು ಪಂಚಮಿ ಹಬ್ಬದಲ್ಲಿಯ 'ಕೆರ್ಯಾಂಬಲಿ', ಜೋಕೋಮಾರನ ಹಬ್ಬದಲ್ಲಿಯ 'ಆಳ್ಯಾಂಬಲ' ಮತ್ತು ಸೀಗಿ ಹುಣ್ಣಿಮೆಯ ಸಂದರ್ಭದಲ್ಲಿ ಚರಗಾ ಚಲ್ಲುವುದು ಕರ್ನಾಟಕದ ಅದರಲ್ಲಿಯೂ ಉತ್ತರ ಕರ್ನಾಟಕದ ಹಲವಾರು ಕಡೆ ಪ್ರಚಲಿತದಲ್ಲಿರುವ ಆಚರಣೆಗಳಾಗಿವೆ. ರೈತರು ಮುಂಗಾರಿ ಬಿತ್ತನೆಯ ಎರಡು ತಿಂಗಳಲ್ಲಿ ಪಂಚಮಿ ಹಬ್ಬ ಬರುತ್ತದೆ. ಈ ಸಂದರ್ಭದಲ್ಲಿ ಕೆರ್ಯಾಂಬಲಿ ಎಂದು ಆಚರಿಸುವ ಆಚರಣೆಯಲ್ಲಿ ತರ ತರಹದ ಅಡುಗೆ, ವಿಧ ವಿಧದ ಉಂಡೆಗಳು ಮತ್ತು ಅರಳು, ಅರಳಿಟ್ಟು ಎಲ್ಲವನ್ನು ಬುಟ್ಟಿಯಲ್ಲಿ ತುಂಬಿಕೊಂಡು ಹೊಲಕ್ಕೆ ಹೋಗಿ ಪೂಜೆಮಾಡಿ ನೈವೇದ್ಯ ಹಿಡಿದು ನಂತರ ಆ ಪದಾರ್ಥವನ್ನೆಲ್ಲ ಚೂರು ಚೂರುಮಾಡಿ ಹೊಲದ ತುಂಬೆಲ್ಲಾ ಸಿಂಪಡಿಸುತ್ತಾರೆ. ಎರಡು ತಿಂಗಳ ಬೆಳೆಯಿರುವಾಗ ಕೀಟಗಳು ಮರಿಹಂತದಲ್ಲಿರುತ್ತವೆ. ಈ ವೇಳೆಯಲ್ಲಿ ಕೀಟಗಳತ್ತ ಪಕ್ಷಿಗಳನ್ನು ಆಕರ್ಷಿಸಿ ತಿನ್ನುವಂತೆ ಮಾಡುವ ಜೈವಿಕ ಕೀಟ ಹತೋಟಿ ವಿಧಾನ ಇದಾಗಿದೆ. ಇದಕ್ಕೆ ಇದರಂತೆ ಜೋಕುಮಾರನ ಹಬ್ಬ ಮತ್ತು ಸೀಗೆ ಹುಣ್ಣಿಮೆಯ ಹಬ್ಬಗಳಲ್ಲಿಯೂ 'ಚರಗ' ಚೆಲ್ಲುವ ಸಂಪ್ರದಾಯ

ಕಂಡುಬರುತ್ತದೆ. ಇಂತಹ ಸಾಂಸ್ಕೃತಿಕ ಬದುಕಿನ ಕೃಷಿಯ ಕುರಿತಾದ ಚಿತ್ರಣಗಳು ನಮ್ಮ ಪ್ರಾಚೀನರಲ್ಲಿ ಅನಾವರಣಗೊಂಡಿವೆ.

ಧಾನ್ಯಗಳ ಸಂರಕ್ಷಣೆಯ ಸುರಕ್ಷಿತ ವಿಧಾನಗಳನ್ನು ಕುರಿತು ನಮ್ಮ ಹಿರಿಯರಲ್ಲಿ ಅಗಾದವಾದ ಜ್ಞಾನವಿರುವುದು ಕಂಡುಬರುತ್ತದೆ. ಉಳಿಸಿದ ಕಾಳು ಬೆಳಸಿದ ಕಾಳಿನಷ್ಟೆ ಮಹತ್ವದ್ದಾಗಿದೆ. ಬೆಳಸಿದ ಕಾಳನ್ನು ಸಂಗ್ರಹಿಸಿಡುವುದು ದೊಡ್ಡ ಸಮಸ್ಯೆ. ಆಹಾರ ಧಾನ್ಯಗಳು, ಬೇಳೆ ಕಾಳುಗಳನ್ನು ನುಸಿ, ಬುರು ಬುರಿ, ಸೊರಬದಂತಹ ಕೀಟಗಳು ತೂತು ಕೊರೆಯುತ್ತವೆ. ಅಲ್ಲದೇ ಇಲಿ ಮತ್ತು ಹೆಗ್ಗಣಗಳು ಇಡಿಯಾಗಿ ಕಾಳುಗಳನ್ನು ತಿಂದು ಹಾಕುತ್ತವೆ. ಅವುಗಳನ್ನು ರಕ್ಷಿಸಲು ಅನೇಕ ರಾಸಾಯನಿಕ ಕೀಟನಾಶಕಗಳನ್ನು ಬಳಸಲು ಕೃಷಿ ವಿಜ್ಞಾನಿಗಳು ಶಿಫಾರಸ್ಸು ಮಾಡುತ್ತಾರೆ. ಆದರೆ ನಮ್ಮ ಪ್ರಾಚೀನರ ನೈಸರ್ಗಿಕ ವಿಧಾನಗಳೇ ತುಂಬಾ ಮಹತ್ವ ಮತ್ತು ಆರೋಗ್ಯ ಪೂರ್ಣವಾದವುಗಳಾಗಿವೆ. ಉದಾಹರಣೆಗೆ ಜೋಳ ಸಂಗ್ರಹಣೆಯ ಹಗೇವು. 'ಖರೆ ಒಕ್ಕಲ ಅಂದರ ಹಿತ್ತಲದಾಗ ಬಣವಿ, ಹಗೇದಾಗ ಜ್ವಾಳಾ ತುಂಬಿರಬೇಕು'. ಒಕ್ಕಲಿಗರ ಕುರಿತು ಹೇಳುವ ಈ ಗಾದೆ ಮಾತು ಅರ್ಥ ಪೂರ್ಣವಾಗಿದೆ. ಜೋಳ ಎರಡು, ಮೂರು ವರ್ಷಗಳ ಕಾಲ ಕೆಡದಂತೆ ಸಂಗ್ರಹಿಸಿಡಲು 'ಹಗೆ' ಎಂದು ಕರೆಯುವ ಹಗೇವುಗಳು ತುಂಬಾ ಸುರಕ್ಷಿತ ಹಾಗೂ ನೈಸರ್ಗಿಕ ತಂತ್ರಜ್ಞಾನದಿಂದ ತಯಾರಿಸಿಕೊಂಡಂತವು. ಒಕ್ಕಲಿಗೆ ತಕ್ಕಂತೆ ಹಗೇವುಗಳ ಸಂಖ್ಯೆಗಳಿರುತ್ತವೆ. ಇವು ಮನೆಯ ಮುಂದೆ, ಒಳಗಡೆ, ಬಾಗಿಲ ಹತ್ತಿರ, ಇಲ್ಲವೇ ಕೆಲವು ಕಡೆ ಊರಹೊರಗಡೆ ಎಲ್ಲಾ ರೈತರು ನಿರ್ಮಾಣ ಮಾಡಿಕೊಂಡಿರುತ್ತಾರೆ. ವಿಶೇಷವಾಗಿ ಜೋಳ, ರಾಗಿ ಸಂಗ್ರಹಿಸುತ್ತಾರೆ. ಹಗೇವುಗಳಲ್ಲಿ ಹಾಕಿದ ಧಾನ್ಯ ಉಟಕ್ಕೆ ತುಂಬಾ ರುಚಿಕರವಾಗಿರುತ್ತವೆ. ಇಂತಹ 'ಜೋಳದ ರೊಟ್ಟಿ ತಿಂದರೆ ರೆಟ್ಯಾಗ ಕಸವು' ಎಂಬ ಗಾದೆ ಪ್ರಚಲಿತದಲ್ಲಿದೆ. ಹಗೇವು ತಾಯಿಯ ಹೊಟ್ಟೆಯಂತೆ, ಇವುಗಳನ್ನು ಹಳ್ಳಿಯ ಪಾಮರರೆನಿಸಿದ ರೈತರ ತಂತ್ರಜ್ಞಾನಕ್ಕೆ ಇಂದಿನ ಯಾವ ತಾಂತ್ರಿಕತೆಯೂ ಸಾಟಿಯಾಗಲಾರದು. ಇತ್ತಿಚೀನ ನೀರಾವರಿ ವ್ಯವಸ್ಥೆಗಳಿಂದ ಹಗೇವುಗಳು ನೀರು ತುಂಬಿ ಹಾಳಾಗಿವೆ. ಒಕ್ಕುವ ಯಂತ್ರಗಳು ಬಂದಿದ್ದರಿಂದಾಗಿ ಕಣಮಾಡುವ, ಒಕ್ಕುವ ರಾಶಿಮಾಡಿ ಹಗೇವಿನಲ್ಲಿ ತುಂಬಿಸಿಡುವ ಕ್ರಮ ತಪ್ಪಿಹೋಗಿವೆ. ಇನ್ನೂ ಭತ್ತ ಸಂಗ್ರಹಣೆಯ ಕಣಜಗಳನ್ನು ಕಾಣಬಹುದು. ಕಣಜಗಳಲಿಟ್ಟ ಭತ್ತದ ಕಾಳನ್ನು ಹಾಳುಮಾಡುವ ಸೊರಬದಿಂದ ರಕ್ಷಿಸಬಹುದು. ಕಣಜದ ಭತ್ತವು ಉಟಕ್ಕೆ ರುಚಿಕರವಾಗಿರುತ್ತದೆ. ಎರಡು, ಮೂರು ವರ್ಷಗಳತನಕ ಸಂಗ್ರಹಿಸಿಡಬಹುದು. ಹೀಗೆ ಇನ್ನೂ ಮುಂತಾದ ಧಾನ್ಯಗಳ ಸಂಗ್ರಹಣೆ ಮತ್ತು ಸಂರಕ್ಷಣೆಯಲ್ಲಿ ನಮ್ಮ ಹಿರಿಯರು ತೋರಿದ ತಂತ್ರಯುಕ್ತಿಗಳು ಪಾರಂಪರಿಕ ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ.

ರೈತರು ರಾಶಿ ಮಾಡಿದ ನಂತರ ಧಾನ್ಯಗಳನ್ನು ಜೋಪಾನವಾಗಿಡುವುದರ ಜೊತೆಗೆ, ಕಟಾವು ನಂತರ ರವದಿಯುಳ್ಳ ದಂಟನ್ನು ಸಂರಕ್ಷಿಸಿಕೊಳ್ಳುವುದು ಒಂದು ಮುಖ್ಯವಾದ ಕೆಲಸವಾಗಿದೆ. ಬೇಸಿಗೆಯಲ್ಲಿ ದನಕರುಗಳಿಗೆ ಬೇಕಾಗುವ ಒಣಮೇವನ್ನು ಒಂದೆಡೆ ಗುಡ್ಡೆ ಹಾಕುವುದು ಉತ್ತರ ಕರ್ನಾಟಕದ ಅನೇಕ ಊರುಗಳಲ್ಲಿ ಕಾಣಬಹುದು. ಊರಲ್ಲಿ, ಹೊಲದಲ್ಲಿ ಅಥವಾ ಊರಮುಂದಿನ ಬಯಲು ಜಾಗಗಳಲ್ಲಿ ನಾನಾ ರೀತಿಯ ಆಕಾರ, ವಿನ್ಯಾಸ, ಗಾತ್ರಗಳಲ್ಲಿ ಬಣವೆ ಒಟ್ಟುತ್ತಾರೆ. ಬಣವೆ ಒಟ್ಟುವುದು ಒಂದು ಕಲೆಗಾರಿಕೆಯಾಗಿದ್ದು, ಎಲ್ಲಾ ರೈತರೂ ಇದರಲ್ಲಿ ಪರಿಣಿತರಾಗುವುದಿಲ್ಲ. ಮೈಯಾಳುಗಳನ್ನು ಮಾಡಿಕೊಂಡು ಪರಿಣಿತ ರೈತರನ್ನು ಕರೆದುಕೊಂಡು ಕೆಲವರು ಬಣವೆ ಒಟ್ಟುತ್ತಾರೆ. ಹೆಚ್ಚುಕಾಲ ಬಾಳಿಕೆಬರಲು ತಳದಲ್ಲಿ ಚಿಕ್ಕ ಚಿಕ್ಕ ಪೆಂಡಿಗಳನ್ನು ಒತ್ತೊತ್ತಾಗಿ ಒಟ್ಟುತ್ತಾರೆ. ನಂತರ ಸಮನಾದ ಅಟ್ಟಣೆಯಿಂದ ಸುತ್ತಲೂ

[illegible]

ಬುಡುಚನ್ನು (ದಂಟಿನ ತಳಭಾಗದ ಬೇರು)ಬಡಿದು ಸಮನಾಗುವಂತೆ ತಟ್ಟುತ್ತಾರೆ. ಮಳೆಯ ನೀರು ಒಳಗೆ ಹೋಗದಂತೆ ಇಳಿಜಾರಾಗಿ ಪೆಂಡಿಗಳನ್ನು ಚುಚ್ಚಿ ಇಳಿಬಿಡುತ್ತಾರೆ. ಪೂರ್ತಿಗೊಂಡಾಗ ತ್ರಿಕೋಣಾಕಾರ ತಾಳುತ್ತದೆ. ಇದು ರೈತರ ಸೌಂದರ್ಯ ಪ್ರಜ್ಞೆ ಮತ್ತು ಅವರ ಕಲೆಗಾರಿಕೆಗೆ ಸಾಕ್ಷಿಯಾಗಿದೆ. ಇಂತಹ ಅನೇಕ ತಂತ್ರಗಾರಿಕೆಗಳನ್ನು ಒಕ್ಕಲುತನದಲ್ಲಿ ಬಳಸುತ್ತಿದ್ದರು. ಪ್ರಾಚೀನ ಸಾಹಿತ್ಯದಲ್ಲಿ ಬಣವಿಯ ಉಲ್ಲೇಖ ಕಾಣುತ್ತೇವೆಯೇ ಹೊರತು ಸಂರಕ್ಷಣೆಯ ವಿಧಾನ ಕಂಡುಬರುವುದಿಲ್ಲ. ಇಂತಹ ಅನೇಕ ಸಾಂಸ್ಕೃತಿಕ ಮಹತ್ವಗಳು ಕೃಷಿಯಲ್ಲಿ ಅಡಗಿವೆ.

ಕೃಷಿಯೊಂದಿಗೆ ಬೆಳೆದ ದನಕರುಗಳ ಲಾಲನೆ, ಪಾಲನೆ ಮತ್ತು ರಕ್ಷಣೆಯೂ ರೈತರ ಬದುಕಿ ಒಂದು ಭಾಗವೇ ಆಗಿದೆ. ದನಗಳನ್ನು ಕಟ್ಟಲು ಹಗ್ಗ, ಕಣ್ಣಿ, ಹಾಗೂ ಮೂಗುದಾಣ, ಬಾರಕೋಲು, ಬಾಯಿಕುಕ್ಕೆಗಳು ಮತ್ತು ಸೌಂದರ್ಯ ಪ್ರಜ್ಞೆಯಿಂದ ದನಕರುಗಳ ಸಿಂಗರಿಸಲು ತಯಾರಿಸಿಕೊಂಡ ಹಣೆಪಟ್ಟಿ, ಗೊಂಡೇವು, ಕೊರಳ ಸರ, ಹಣೆಗೆಜ್ಜೆ, ಕೋಡಿನ ಅಣಸು ಮುಂತಾದ ಉಪಕರಣಗಳನ್ನು ತಯಾರಿಸುವುದು, ಮಾರುವುದು ಪ್ರಾಮುಖ್ಯತೆ ಪಡೆದಿದೆ. ಅಲ್ಲದೇ ಇದು ಕೆಲವು ಕುಟುಂಬಗಳ ಉಪಜೀವನಕ್ಕೆ ನಾಂದಿಯಾಯ್ತಿ. ದನಗಳ ಚರ್ಮದಿಂದ ನೊಗಸುತ್ತು, ಪಟಗಣ್ಣಿ, ಚಪ್ಪಲಿ ಮತ್ತು ಬೂಟುಗಳ ತಯಾರಿಕೆ ಹಾಗೂ ಅನೇಕ ಚರ್ಮವಾದ್ಯಗಳಾದ ಹಲಗೆ, ದಮ್ಮಡಿ, ಚಂಡೆ, ಮೃದಂಗ, ಮದ್ದಳೆ ಹಾಗೂ ಡೊಳ್ಳು, ನಗಾರಿ ತಯಾರಿಕೆ ಮಾಡವುದು. ಹಲಗೆ ಅತ್ಯಂತ ಪ್ರಾಚೀನ ಚರ್ಮವಾದ್ಯವಾಗಿದೆ. ಕೊಂಬುಗಳಿಂದ ಬಾಚಣಿಕೆ ಮತ್ತು ಇತರೆ ಅಲಂಕಾರದ ವಸ್ತುಗಳ ಉತ್ಪಾದನೆಗಳು ಒಂದು ದೊಡ್ಡ ಉದ್ಯಮವಾಗಿ ಬೆಳೆಯಲು ಕಾರಣವಾಯಿತು. ಎತ್ತು ದನಕರುಗಳು ರೈತನ ಬದುಕಿನ ಜೊತೆಗೆ ಸಂಯೋಗಾತ್ಮಕ ಸಂಬಂಧ ಬೆಳೆದು ಕಾರಹುಣ್ಣಿಮೆಯ ಕರಿ ಹರಿಸುವುದು, ದೀಪಾವಳಿಯ ಶೃಂಗಾರಗಳು, ಮಣ್ಣೆತ್ತಿನ ಅಮವಾಸೆಯ ಆಚರಣೆಗಳು ಮತ್ತು ಕಂಬಳ, ಆಣಿ–ಪಿಣಿಯಂತ ಇನ್ನೂ ಮುಂತಾದ ರೈತರ ಬದುಕಿನ ಸಾಂಸ್ಕೃತಿಕ ಘಟನೆಗಳು ಇಂದು ಮೂದಲಿನ ವೈಭವ, ಸಡಗರ ಕಳೆದುಕೊಂಡ ಹಬ್ಬ ಹರಿದಿನಗಳು ಕೇವಲ ತಾಂತ್ರಿಕ ಹಾಗೂ ವ್ಯಹಾರಿಕವಾಗಿ ಮಾರ್ಪಟ್ಟಿರುವುದು ವಿಷಾದನೀಯ ಸಂಗತಿಯಾಗಿದೆ.

ಮಳೆ ಬಾಳಿಗಾಧಾರ, ಮಳೆಯೇ ನೀರಿನ ಮೂಲ. ಮಳೆಯನ್ನು ಕುರಿತಂತೆ ಮನುಷ್ಯರು ಬೆಳೆಸಿಕೊಂಡು ಬಂದಿರುವ ನಂಬಿಕೆ ಆಚರಣೆಗಳಿಗೂ ಕೃಷಿಗೂ ನೇರ ಸಂಬಂಧವಿದೆ. ಕಾಲ ಕಾಲಕ್ಕೆ ಮಳೆ ಬರಬೇಕಾದುದರ ಅಗತ್ಯ, ಮಳೆ ಹೆಚ್ಚಾದರೆ, ಕಡಿಮೆಯಾದರೆ ಅದರಿಂದಾಗುವ ವಿಕೋಪಗಳ ಗಾಢಾವಾದ ಅನುಭವ ರೈತರಿಗಿದೆ. ಮಳೆಯನ್ನು ಕುರಿತು ಪ್ರಾರ್ಥನೆ, ಲೆಕ್ಕಾಚಾರಗಳು, ಶಕುನ, ಶಾಸ್ತ್ರ ಕೇಳುವುದು ಮತ್ತು ನಂಬಿಕೆ ಆಚರಣೆಗಳು ಆತನ ಬದುಕಿನೊಟ್ಟಿಗೆ ಬೆಳೆದುಬಂದ ಸಾಂಸ್ಕೃತಿಕ ಸಂದರ್ಭಗಳಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲಾ ಮಳೆ ಸಂಬಂಧಿ ಆಚರಣೆಗಳಿಗೂ ಕೃಷಿಕರು ಅಥವಾ ಕೃಷಿ ಕಾರ್ಮಿಕರೆ ಮೂಲಾವಾಗಿದ್ದಾರೆ. ಇಡೀ ಗ್ರಾಮ ಸಾಮೂಹಿಕವಾಗಿ ಇಂತಹ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಆದರೆ ಇಂದೂ ಕೂಡಾ ಇಂತಹ ಆಚರಣೆಗಳು ಮುಂದುವರೆದರೂ ಮೊದಲಿನ ಸಾಮೂಹಿಕ ಒಗ್ಗಟ್ಟು ಕಣ್ಮರೆಯಾಗಿದೆ ಎನ್ನಬಹುದು.

ಪ್ರಾಚೀನ ಮತ್ತು ಮಧ್ಯಕಾಲಿನ ಕರ್ನಾಟಕದಲ್ಲಿ ಸಮುದಾಯದ ಜೀವನ ಮತ್ತು ಸಹಕಾರ ಸೌಹಾರ್ದಯುತವಾಗಿ ಕಂಡುಬರುತಿತ್ತು. ವೃತ್ತಿ ಸಂವರ್ಧನೆ ಹಾಗೂ ಸಾಮಾಜಿಕ ಸ್ಥಾನಮಾನಗಳಿಗೆ

ಹೆಚ್ಚಿನ ಗೌರವ ಪ್ರಾಶಸ್ತ್ಯ ವಿರುವುದನ್ನು ಶಾಸನಗಳು ದಾಖಲಿಸಿವೆ. ಇದರ ಫಲವಾಗಿಯೇ ಅನೇಕ ಉತ್ಪಾದಕ ಸಂಘಗಳು, ವಿನಿಮಯ ಸಂಘಗಳು, ಆಯುಧ ಜೀವಿಗಳ ಸಂಘಗಳು, ಶ್ರಮಜೀವಿಗಳ ಸಂಘಗಳು ನಿರ್ಮಾಣವಾಗಿದ್ದವು. ಇಂತವುಗಳಲ್ಲಿ ಬಾಡಸ ರೊಕ್ಕಲು, ತೋಟಿಗರೈನೂರ್ವರು, ಮೇಳೆಸಾಸಿರ್ವರು ಗಳೆಯ ಮೂನ್ನೂರ್ವರು ಹಾಗೂ ಅರುವತ್ತೊಕ್ಕಲುಗಳು ಕರ್ನಾಟಕದ ಪ್ರಮುಖ ಕೃಷಿ ಸಂಘಗಳೆಂದು 'ಘನ ಶ್ರೀ'ಎಂಬ ಗ್ರಂಥದ 'ಶಾಸನೋಕ್ತ ಕೃಷಿಸಂಘ; ಅರುವತ್ತೊಕ್ಕಲು'ಎಂಬ ಲೇಖನದಲ್ಲಿ ಡಾ. ಬಿ.ಆರ್.ಹಿರೇಮಠ ಹೇಳುತ್ತಾರೆ. ಮುಂದುವರೆದು, "ಗ್ರಾಮೀಣ ಪ್ರದೇಶದಲ್ಲಿ ಕೃಷಿಕಾರ್ಯ ಮಾಡುವ ರೈತರು ವೃತ್ತಿ ಗೌರವ, ಸಮುದಾಯ ಜೀವನ ಹಾಗೂ ಸಹಕಾರ ತತ್ತ್ವಗಳ ಮೇಲೆ ರಚಿಸಿಕೊಂಡ ಸಂಘವೇ 'ಅರವತ್ತೊಕ್ಕಲು'. ಶಾಸನೋಕ್ತ ಸಂಘಗಳ ಪೂರ್ವಪದ ಹೆಚ್ಚಾಗಿ ವೃತ್ತಿವಾಚಿಯಾಗಿರುತ್ತದೆ, ಈ ಸಂಘದ ಪೂರ್ವದಲ್ಲಿ ವೃತ್ತಿ ಸೂಚಿಪದವಿರುವುದಿಲ್ಲ. ಆದರೆ ಮುತ್ತಗಿ ಶಾಸನದ 'ಬೆವಸಾಯ ಮಾಡುವಂಥಾ ವೊಕ್ಕಲು', ಐರಗಿ ಶಾಸನದ 'ಒಕ್ಕಲು ಮಕ್ಕಳು' ಹಾಗೂ ನೂಲವಿ ಶಾಸನದ 'ಅರವತ್ತೊಕ್ಕಲು ಮಕ್ಕಳು' ಉಲ್ಲೇಖಗಳಿಂದ 'ಅರವತ್ತೊಕ್ಕಲು' ರೈತ ಸಂಘವೆಂಬುದು ಸ್ಪಷ್ಟವಾಗುತ್ತದೆ. ಕೆಲವು ಶಾಸನಗಳು ಇದನ್ನು 'ಅರವತ್ತು ಕೊತ್ತಳಿ' ಎಂದು ಕರೆದಿವೆ. ಪ್ರಾಚೀನ ಕರ್ನಾಟಕ ಪ್ರತಿಯೊಂದು ಗ್ರಾಮದಲ್ಲಿಯೂ ಈ ರೈತ ಸಂಘಗಳಿದ್ದವು. ಈ ಸಂಘದ ಸದಸ್ಯರ ಸಂಖ್ಯೆ ಸಾಂಪ್ರದಾಯಿಕವಾಗಿ ಅರವತ್ತೆಂದು ಪರಿಣಿತವಾಗಿದೆ. ಕೆಲವುಸಲ ಈ ಸಂಖ್ಯೆ ಪ್ರದೇಶದಿಂದ ಪ್ರದೇಶಕ್ಕೆ ಕಾಲದಿಂದ ಕಾಲಕ್ಕೆ ಭಿನ್ನವಾಗಿದುದು ಕಂಡುಬರುತ್ತದೆ"[೪] ಎಂದು ಅಭಿಪ್ರಾಯಪಡುತ್ತಾರೆ. ಇಂದಿನ ದಿನಗಳಲ್ಲಿ ಅನೇಕ ಉತ್ಪಾದಕ ಸಂಘಗಳು ರಚನೆ, ವಿನ್ಯಾಸದಲ್ಲಿ ಮಾರ್ಪಾಟಾಗಿ ಚಾಲ್ತಿಯಲ್ಲಿರುವುದನ್ನು ಕಾಣುತ್ತೇವೆ. ಇದು ಸಾಂಸ್ಕೃತಿಕ ಮುಂದುವರಿಕೆಯೇ ಆಗಿದೆ.

ಇಂದು ಕೃಷಿ ಎಂದರೆ ಕೇವಲ ಭೂಮಿಯಲ್ಲಿ ಉತ್ತು ಬಿತ್ತಿ ಬೆಳೆಯುವುದಕಷ್ಟೆ ಸೀಮಿತವಾಗಿರದೆ ಹಲವಾರು ಕ್ಷೇತ್ರಗಳಲ್ಲಿ ಬೆಳವಣಿಗೆ ಹೊಂದಿದೆ. ಅಂದರೆ ಹಂದಿ, ಕೋಳಿ, ರೇಷ್ಮೆ ಸಾಕಾಣಿಕೆ, ಕೃಷಿ, ತೋಟಗಾರಿಕೆ ಮತ್ತು ಜೇನು, ಅಣಬೆ ಸಾಕಾಣಿಕೆ ಮತ್ತು ಮೀನುಗಾರಿಕೆ ಇನ್ನೂ ಮುಂತಾದವುಗಳಲ್ಲಿ ಬೆಳವಣಿಗೆ ಹೊಂದಿದೆ. ಈ ಎಲ್ಲಾ ಕ್ಷೇತ್ರಗಳಿಗೂ ಕೃಷಿಯೇ ಮೂಲವಾಗಿದೆ ಎಂಬುದು ಹೆಮ್ಮೆಯ ಸಂಗತಿಯಾಗಿದೆ. ಈ ಮೇಲಿನ ಎಲ್ಲಾ ಸಂಗತಿಗಳನ್ನು ಗಮನಿಸಿದರೆ ಕೃಷಿಶಾಸ್ತ್ರದ ಸಾಂಸ್ಕೃತಿಕ ಮಹತ್ವ ಎಷ್ಟೆಂಬುದು ಪರಿಚಯವಾಗುತ್ತದೆ. ಅಲ್ಲದೇ ಅದರ ಪ್ರಸ್ತುತತೆಯನ್ನು ಕಾಣಬಹುದಾಗಿದೆ.

ಆದರೆ ಇಂದಿನ ಸಂದರ್ಭದಲ್ಲಿ 'ನನ್ನ ಪಾಡು ನನ್ನ ಮಕ್ಕಳಿಗೂ ಬೇಡ' ಎಂದು ರೈತರು ಗೊಣಗುವಂತಾಗಿದೆ. ರೈತರ ಮಕ್ಕಳು ಒಕ್ಕಲುತನ ವೃತ್ತಿಮಾಡಲು ಹಿಂಜರಿಯುತ್ತಿದ್ದಾರೆ. ಬೇರೆ ವೃತ್ತಿಮಾಡುವವರು ಒಕ್ಕಲುತನದ ಕಡೆ ತಿರುಗಿಯೂ ನೋಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಳ್ಳಿಯ ರೈತರು, ಕೂಲಿಕಾರರು ಪಟ್ಟಣಗಳಲ್ಲಿ ದೊರೆಯುವ ಹೆಚ್ಚು ಕೂಲಿಯ ಕೆಲಸಗಳತ್ತ ಆಕರ್ಷಿತರಾಗಿದ್ದಾರೆ. ಕೃಷಿ ಕೆಲಸಗಳಿಗೆ ಅನಿವಾರ್ಯವಾಗಿ ಆಧುನಿಕ ಯಂತ್ರಗಳ ಅವಲಂಬನೆ ಹೆಚ್ಚಾಗುತ್ತಿದೆ. ಸಣ್ಣ ರೈತರು ಕೃಷಿ ಕೆಲಸ ತೊರೆಯುವಂತಹ ಅನಿವಾರ್ಯತೆಯನ್ನು ಆಧುನಿಕ ಬದುಕು ತಂದು ಹಾಕಿದೆ. ಕೃಷಿಯಲ್ಲಿ ಆಸಕ್ತಿ ಮೂಡಿಸುವ, ಭರವಸೆ ಹುಟ್ಟಿಸುವ, ಪ್ರಾಚೀನ ಕೃಷಿವಿಧಾನಗಳನ್ನು ಪಠ್ಯಕ್ರಮಗಳಲ್ಲಿ ಅಳವಡಿಸಿಕೊಂಡು ಬೋಧಿಸುವ ಕೃಷಿವಿಶ್ವವಿದ್ಯಾಲಯಗಳು ಇಲ್ಲದಂತಾಗಿವೆ. ಕೃಷಿಯೂ 'ಒಂದು ಪವಿತ್ರ ಉದ್ಯೋಗ' ಅದು ಗೌರವದ ವೃತ್ತಿ ಎಂಬ ಸಾರ್ವತ್ರಿಕ ಅಭಿಪ್ರಾಯಗಳು ಕಣ್ಮರೆಯಾಗಿವೆ.

ಇಂತಹ ವೇಳೆಯಲ್ಲಿ ಆಡಳಿತ ನಡೆಸುವ ಸರ್ಕಾರಗಳು, ಕೃಷಿವಿಶ್ವವಿದಯಾಲಯಗಳು ರೈತನ ಬದುಕನ್ನು ಹಸನಾಗಿಸಿ ಒಕ್ಕಲುತನದ ಸಾಂಸ್ಕೃತಿಕ ಮಹತ್ವವನ್ನು ಉಳಿಸುವ ಹೊಣೆ, ಕೃಷಿಶಾಸ್ತ್ರದ ಸಾಂಸ್ಕೃತಿಕ ಮಹತ್ವ ತಿಳಿಯಲು ಕೃಷಿ ಪಾರಿಭಾಷೆಗಳ ಅನನ್ಯತೆ, ಪ್ರಾದೇಶಿಕತೆ ಮತ್ತು ಭಾಷಿಕ ವೈಶಿಷ್ಟ್ಯಗಳ ಹಿನ್ನಲೆಯನ್ನು ಈ ಕೆಳಗಿನಂತೆ ತಿಳಿಯಬಹುದಾಗಿದೆ.

೧. ಕೃಷಿ ಪರಿಭಾಷೆಗಳ ಅನನ್ಯತೆ

'ಪದಕೋಶ' ಭಾಷೆಯ ಒಂದು ಅಂಗವಾಗಿದೆ. ಭಾಷೆಯನ್ನು ಕಲಿಯಲು ಪದಕೋಶಗಳ ಪರಿಚಯ ಅಗತ್ಯ. ಕನ್ನಡದಲ್ಲಿ ಪದಕೋಶ ಸಂಗ್ರಹಿಸುವ ಕೆಲಸ ಬಹು ಹಿಂದಿನಿಂದಲು ನಡೆದುಬಂದಿದೆ. ಪದಕೋಶಗಳ ರಚನೆಯು ಹಲವಾರು ದೃಷ್ಠಿಕೋನದಿಂದ ನಡೆದಿರುತ್ತದೆ. ಇದರ ನಿರ್ಮಾಣಕ್ಕೆ ಲಿಖಿತ ಆಧಾರಗಳು, ಶಾಸನಗಳು, ಸಾಹಿತ್ಯಕೃತಿಗಳು ಸಾಮಾನ್ಯ ಆಕರಗಳು, ಜನರ ಆಡುಮಾತಿನ ರೂಪದಲ್ಲಿದ್ದು ಲಿಖಿತರೂಪ ಪಡೆಯದ ಎಷ್ಟೋಪದಗಳನ್ನು ಕಾಣುತ್ತೇವೆ. ಹೀಗೆ ನಿಘಂಟುವಿನಲ್ಲಿ ದಾಖಲಾಗದೆ ಉಳಿಯುವ ಪದಗಳಲ್ಲಿ ಸಮುದಾಯದ ಹಲವು ವ್ಯಕ್ತಿಗಳಿಗೆ ಸಂಬಂಧಿಸಿದ ಪದಗಳೇ ಹೆಚ್ಚಾಗಿರುತ್ತವೆ. ವೃತ್ತಿಪದಗಳ ಸಂಗ್ರಹ ಮತ್ತು ವಿಶ್ಲೇಷಣೆಯ ಕಾರ್ಯ ಸಾಮಾಜಿಕ ಭಾಷಾಧ್ಯಯನದ ದೃಷ್ಟಿಯಿಂದ ತುಂಬಾ ಉಪಯುಕ್ತವಾದುದು. ಆಧುನಿಕ ವಿಜ್ಞಾನ, ತಂತ್ರಜ್ಞಾನದ ಪ್ರಭಾವದಿಂದ ವಂಶಪರಂಪರಗತವಾಗಿ ಬಂದಿರುವ ಕರಕುಶಲ ಕಲೆಗಳಾದ ಕುಂಬಾರಿಕೆ, ಕಂಬಾರಿಕೆ, ಬಡಗಿತನ, ಕ್ಷೌರ, ಚಮ್ಮಾರಿಕೆ, ಮೇದಾರಿಕೆ ಮುಂತಾದ ವೃತ್ತಿಗಳಿಗೆ ಸಂಬಂಧಿಸಿದ ಪದಸಂಪತ್ತನ್ನು ತಿಳಿದುಕೊಳ್ಳಲು ವೃತ್ತಿಪದಗಳು ಮಹತ್ವದ ಪಾತ್ರವಹಿಸುತ್ತವೆ. ಎಸ್.ಎಸ್. ಅಂಗಡಿಯವರು 'ವಚನಸಾಹಿತ್ಯ ಭಾಷೆ' ಎಂಬ ಕೃತಿಯಲ್ಲಿ "ವೃತ್ತಿಪದಕೋಶಗಳೆಂದರೆ ಒಂದೇ ವೃತ್ತಿಗೆ ಸಂಬಂಧಪಟ್ಟ ಸಮಗ್ರ ಪದಗಳನ್ನು ಸಂಗ್ರಹಿಸಿ ಆ ಪದಗಳನ್ನು ಅವುಗಳ ವಿಶಿಷ್ಟತೆ ಮತ್ತು ಪ್ರರೂಪದ ಪ್ರಕಾರ ವರ್ಗೀಕರಿಸಿ ಅರ್ಥವಿವರಣೆಯನ್ನು ಕೊಡುವ ನಿಘಂಟುಗಳೇ ಆಗಿವೆ. ವೃತ್ತಿಪದಗಳು ಹೆಚ್ಚಾಗಿ ಅಚ್ಚಗನ್ನಡ ಪದಗಳಾಗಿರುವುದರಿಂದ ಅಂತವುಗಳನ್ನು ಸಂಗ್ರಹಿಸಿ ಅವುಗಳ ಅರ್ಥಕೊಡುವುದು ಅಗತ್ಯವಾಗಿದೆ. ಅವು ಕನ್ನಡಶಬ್ದಕೋಶಕ್ಕೆ ಉತ್ತಮ ಕೊಡುಗೆಗಳಾಗುತ್ತವೆ ಎಂಬುದರ ಬಗ್ಗೆ ಅನುಮಾನಗಳಿಲ್ಲ. ಒಂದು ವೃತ್ತಿಯನ್ನು ಅವಲಂಬಿಸಿದ ಜನರು ತಮ್ಮದೇ ಆದ ಸಮಾಜ ಮತ್ತು ಸಾಂಸ್ಕೃತಿಕ ಚೌಕಟ್ಟನ್ನು ಹೊಂದಿರುತ್ತಾರೆ. ತಮ್ಮ ವೃತ್ತಿಯಲ್ಲಿ ವಿಶಿಷ್ಟ ಪದಪ್ರಯೋಗಗಳನ್ನು, ನುಡಿಗಟ್ಟುಗಳನ್ನು ಬಳಸುತ್ತಿರುತ್ತಾರೆ. ಅವುಗಳನ್ನು ಸಂಗ್ರಹಿಸಿ ಅಭ್ಯಾಸಿಸುವುದರಿಂದ ಆ ಸಮುದಾಯದ ಭಾಷಾಪ್ರಯೋಗ, ಸಾಂಸ್ಕೃತಿಕ ಅಂಶಗಳು ಹಾಗೂ ವೃತ್ತಿಸಮುದಾಯದ ಜನಾಂಗ ಅಧ್ಯಯನಕ್ಕೂ ತುಂಬಾ ಸಹಕಾರಿಯಾಗುತ್ತವೆ".[೫] ಎಂದು ಅಭಿಪ್ರಾಯಪಡುತ್ತಾರೆ. ಕನ್ನಡದಲ್ಲಿ ವಿವಿಧ ವೃತ್ತಿಪದಗಳ ಸಂಗ್ರಹ ಮತ್ತು ವಿಶ್ಲೇಷಣೆಯ ಕಾರ್ಯ ಇತ್ತೀಚಿಗೆ ನಡೆಯುತ್ತದೆ. ಕನ್ನಡದಲ್ಲಿ ಅನೇಕ ವೃತ್ತಿ ಪದಕೋಶಗಳು ರಚನೆಯಾಗಿವೆ. ಅವುಗಳಲ್ಲಿ ಡಾ.ವಿ.ಶಿವಾನಂದರವರ 'ಕನ್ನಡ ವೃತ್ತಿ ಪದಕೋಶ' 'ಕಲುಬುರ್ಗಿ ಜಿಲ್ಲೆಯ ಒಕ್ಕಲುತನ ವೃತ್ತಿಪದಗಳ ಅಧ್ಯಯನ' ಆರ್.ವೈ.ಕುಲಕರ್ಣಿಯವರ 'ವಿಜಾಪುರ ಜಿಲ್ಲೆಯ ನೇಕಾರರ ವೃತ್ತಿಪದಗಳ ಅಧ್ಯಯನ' ದೇವಾನಂದ ಮಾಲಗತ್ತಿಯವರ 'ಚಮ್ಮಾರರು ಮತ್ತು ಅವರ ಉಪಕರಣಗಳು' ಹೆಚ್.ಗಂಗಾಧರಚಾರ್‌ರವರ 'ವಿಶ್ವಕರ್ಮ ಶಬ್ದಕೋಶ' ಹೆಚ್.ಎಂ.ಮಹೇಶ್ವರಯ್ಯ ನವರ 'ಮಲೆನಾಡ ವೃತ್ತಿಪದಕೋಶ' ಡಾ.ಎಸ್.ಎಸ್.ಅಂಗಡಿಯವರ 'ಕ್ಷೌರಿಕರು ಮತ್ತು ಅವರ ವೃತ್ತಿಪದಗಳು' ಹಾಗೂ ಕುಂಬಾರರ ವೃತ್ತಿಪದಕೋಶಗಳು ಕಂಡುಬರುತ್ತವೆ. ಅದರಲ್ಲಿಯೂ ಕನ್ನಡ ವಿಶ್ವವಿದ್ಯಾಲಯದಿಂದ ರಚನೆಗೊಂಡ 'ಕೃಷಿಪದಕೋಶ' ತುಂಬಾ ಮಹತ್ವದ ಕೃತಿಯಾಗಿದೆ ಎನ್ನಬಹುದು.

ವೃತ್ತಿಪದಕೋಶಗಳ ಅಧ್ಯಯನವು ಭಾಷಾವಿಜ್ಞಾನಿಗಳಿಗೆ ಮಾತ್ರ ಸೀಮಿತವಾಗಿರದೇ ಸಮಾಜಶಾಸ್ತ್ರಜ್ಞರಿಗೂ, ಜಾನಪದಶಾಸ್ತ್ರಜ್ಞರಿಗೂ ಪ್ರಯೋಜನಕಾರಿಯಾಗಿವೆ. ಈ ತೆರನಾದ ಅಭ್ಯಾಸವು ಸಂಸ್ಕೃತಿ, ಭಾಷಾತಾಂತ್ರಿಕತೆ, ವಲಸೆಹೋಗುವ ವಿಷಯಗಳ ಸಂಬಂಧವನ್ನು ವಿಶ್ಲೇಸಿಸಲು ತುಂಬಾ ವೈವಿಧ್ಯಪೂರ್ಣವಾದ ವಿಸ್ತಾರವನ್ನು ಒದಗಿಸುತ್ತವೆ. ಕೃಷಿಗೆ ಸಂಬಂಧಿಸಿದ ಕೆಲವು ವಿಶಿಷ್ಟ ಪಾರಿಭಾಷಿಕ ಪದಗಳು ಸಂಸ್ಕೃತಿಯ ಒಳಗೆ ಪರಂಪರೆಯಿಂದ ಪರಂಪರೆಗೆ ಮುಂದುವರೆದು ಬರುತ್ತವೆ. ಅಂತಹ ಪದಗಳು ನಿರ್ದಿಷ್ಟ ಅರ್ಥವನ್ನು ಸೂಚಿಸದೆ ಹಲವಾರು ಕ್ಷೇತ್ರಗಳಲ್ಲಿ ಹೋಲಿಕೆ, ಸಂದರ್ಭ, ಸನ್ನಿವೇಶದ ಹಿನ್ನಲೆಯಲ್ಲಿ ಅರ್ಥಪೂರ್ಣತೆಯನ್ನು ಪಡೆದುಕೊಂಡಿರುತ್ತವೆ. ಕೃಷಿಯ ಬದುಕು ಅನೇಕ ಕ್ಷೇತ್ರಗಳಿಗೆ ಮೂಲವಾಗಿರುವುದರಿಂದ ಕೃಷಿ ಮೂಲದ ಪರಿಭಾಷೆಗಳು ಸಂಸ್ಕೃತಿಯಲ್ಲಿ ಹಲವಾರು ಬಗೆಯಲ್ಲಿ ಹರಡಿರುವುದನ್ನು, ಅವುಗಳ ಅನನ್ಯತೆಯನ್ನು ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

ಮೇಟಿ, ಮೇಳಿ, ಕೃಷಿಮೂಲದ ಪದಗಳಾಗಿದ್ದು. ಸರ್ವಜ್ಞನು 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು' ಎಂದು ಹೇಳುವಲ್ಲಿ ಮೇಟಿ ಪದದ ಬಳಕೆ ಮಾಡಿದ್ದಾನೆ. ಮೇಟಿ ಒಕ್ಕಲುತನದ ಸಂಕೇತ, ಮೇಟಿ ವಿದ್ಯೆ ಒಕ್ಕಲುತನದ ವೃತ್ತಿಯ ಸಂಕೇತ ಎನಿಸಿದೆ. ಈ ವಿದ್ಯೆ ಕಲಿಯಲು ಯಾವ ಶಾಲೆಗೂ ಹೋಗಬೇಕಾಗಿಲ್ಲ, ಹೊಲವೆ ಶಾಲೆ, ಅನುಭವಿ ರೈತನೆ ಮಾರ್ಗದರ್ಶಕನಾಗಿದ್ದಾನೆ. ಇಲ್ಲಿ ಮೇಟಿ ಪದವನ್ನು ವಿದ್ಯೆಗೆ ಹೋಲಿಸಿರುವುದರ ಔಚಿತ್ಯತೆ ಕಂಡುಬರುತ್ತದೆ. ಎಷ್ಟೇ ವಿದ್ಯೆಯನ್ನು ಕಲಿತರು ಅದು ಮೇಟಿ ವಿದ್ಯೆಗೆ ಸಾಟಿಯಾಗಲಾರದು ಎಂಬ ಭಾವನೆ ವ್ಯಕ್ತವಾಗುತ್ತದೆ. ಒಕ್ಕಲಿಗ, ಒಕ್ಕಲುತನದ ಶ್ರೇಷ್ಠತೆಯನ್ನು ಎತ್ತಿಹಿಡಿಯಲಾಗಿದೆ. ಮೇಟಿ ತಿರುಗಿದರೆ ದೇಶದ ಆರ್ಥಿಕತೆ ಸಭಲೀಕರಣ ಹೊಂದಿ ದೇಶದ ರಾಟಿ ತಿರುಗುತ್ತದೆ. ಇಂದು ಸಮಾಜದಲ್ಲಿ ಗಣ್ಯವ್ಯಕ್ತಿಗಳನ್ನು ಕುರಿತು ಹೇಳುವಾಗಲೂ ಬಳಸುತ್ತಾರೆ. ಅಲ್ಲಮ ಪ್ರಭುವಿನ ವಚನವೊಂದರಲ್ಲಿ'..............ಮೇಳವಿಲ್ಲದವನ ಒಗೆತನ ಆಳಿಯ ಬಾಳುವೆ............' ಎಂಬ ಮಾತು ಬರುತ್ತದೆ. ಒಕ್ಕಲುತನ ಮಾಡಲು ತಾಳ-ಮೇಳ ಶುದ್ದವಾಗಿರಬೇಕು ಎಂಬುದು ಈ ಮಾತಿನ ಅರ್ಥವಾಗಿದೆ. ಅಂದರೆ ಬಲಶಾಲಿ ಎತ್ತು, ಸದೃಢವ್ಯಕ್ತಿಗಳು, ಬಂಡಿ, ಕೆಲಸದ ಆಳುಗಳು, ಉಪಕರಣಗಳು ಹೆಣ್ಣುಮಕ್ಕಳು ಇವೆಲ್ಲವೂ ಒಕ್ಕಲಿಗನ ತಾಳ-ಮೇಳಗಳಾಗಿವೆ. ಈ ತಾಳ-ಮೇಳ ಪದ ಇಂದು ಸಂಗೀತ ಕ್ಷೇತ್ರದಲ್ಲಿ ಬಳಕೆಯಾಗುತ್ತದೆ. ಇದು ಕೃಷಿಮೂಲದಿಂದ ತೆಗೆದುಕೊಂಡ ಪರಿಭಾಷೆಯಾಗಿದೆ. ಸಂಗೀತದಲ್ಲಿಯೂ ಹಾಡುವವರು, ವಾದ್ಯಗಳ ನುಡಿಸುವವರು ಮತ್ತು ಹಿಮ್ಮೇಳದವರು ಇರುವುದನ್ನು ಕಾಣಬಹುದಾಗಿದೆ.

ಗೊಟ್ಟ, ಏತ ಮತ್ತು ಕಪಿಲೆ ಪದಗಳನ್ನು ನೋಡಬಹುದಾದರೆ, 'ಗೊಟ್ಟ' ಎಂದರೆ ದನಕರುಗಳಿಗೆ ಔಷಧಿ, ಅಂಬಲಿ ಕುಡಿಸಲು ಬಳಸುವ ಬಿದಿರಿನ ಸಲಕರಣೆಯಾಗಿದೆ. 'ಕೊಟ್ಟ' ಎಂದೂ 'ಕೊಟ್ಟೆ'ಎಂದು ಕರೆಯುತ್ತಾರೆ. ರನ್ನನ ಗದಾಯುದ್ಧದಲ್ಲಿ '...........ಮೆಯ್ಯುಡಗುಂತಿಜಿತಿಜಿದು ತಿಂದುಂ ಗೊಟ್ಟಂಗುಡಿದುಂ.............'(ಪು-೮೭)ಎಂದು ಹೇಳುವಾಗ ಗೊಟ್ಟಪದದ ಬಳಕೆಯಾಗಿದೆ. ರೈತಾಪಿವರ್ಗದಲ್ಲಿ ಇಂದು ಕೊಟ್ಟಿಗೆ, ಗೋಶಾಲೆ ಎಂಬ ವಿಶಾಲಾರ್ಥದಲ್ಲಿ ಬಳಕೆಯಾಗುತ್ತದೆ. ಇನ್ನೂ ಏತ ಅಥವಾ ಯಾತ ಎಂಬ ಪದವನ್ನು ಕುರಿತು ಹೇಳುವುದಾದರೆ, 'ಯಾತ ತಲೆತೊಗಿದರೆ ಪಾತಾಳದ ನೀರು ಬಂತು, ತಾತ ತಲೆತೊಗಿದರೆ ಪಗಡಿಬಿತ್ತು' ಎಂಬ ಗಾದೆಯಲ್ಲಿ ಮತ್ತು ಬಸವಣ್ಣನವರ ವಚನವೊಂದರಲ್ಲಿ 'ಏತ ತಲೆಬಾಗಿದಡೇನು ಗುರುಭಕ್ತನಾಗಬಲ್ಲದೆ?........' ಎಂಬಲ್ಲಿ ಈ ಪದ

ಬಳಕೆಯಾಗಿದೆ. ಯಾತ ಮೇಲೆ ಕೆಳಗೆ ತೂಗಿದರೆ ಮಾತ್ರ ನೀರು ಮೇಲೆಬರಲು ಸಾಧ್ಯ, ಅವಿಭಕ್ತ ಕುಟುಂಬದ ತಾತನ ತಲೆಯ ಮೇಲಿನ ಪೇಟಾ ಕೆಳಗೆ ಬೀಳಬೇಕಾದರೆ ಆತನು ತಲೆದೂಗುವಂತೆ ಮನೆತನ ನಡೆಯಬೇಕಾಗುತ್ತದೆ. ಮನೆತನ ನಡೆಸುವ ಹೊಣೆಗಾರಿಕೆ, ಅದು ಶ್ರಮದಾಯಕ ಎಂಬ ಅರ್ಥ ಬರುವಂತಿದೆ. ಬಸವಣ್ಣನವರು ಡಾಂಭಿಕ ಭಕ್ತನ ಕುರಿತು ಹೇಳುವಾಗ ಏತ ಪದ ಬಳಸಿದ್ದಾರೆ. ನೈಜ ಭಕ್ತಿಯ ಕೊರತೆಯನ್ನು ಸೂಚಿಸುತ್ತದೆ. ಏತ ಮೇಲೆ ಕೆಳಗೆ ತಲೆದೂಗಿದರೆ ಆಳದ ನೀರು ಮೇಲೆ ಬರುತ್ತದೆ. ಆದರೆ ಅದು ಬಾಗಿದ ಕಾರಣದಿಂದ ಭಕ್ತನಾಗಲಾರದು. ಅಂದರೆ ಪ್ರಪಂಚದಲ್ಲಿ ಎಷ್ಟೋಜನ ವಿನಯರಂತೆ ಕಂಡರೂ, ಮನಸ್ಸಿನಲ್ಲಿ ಭಕ್ತಿ ಇರಲಾರದು ಎಂಬ ಅರ್ಥ ಬರುತ್ತದೆ. ಇಂದು ನೀರಾವರಿ ಕ್ಷೇತ್ರದಲ್ಲಿ ಏತ ನೀರಾವರಿ (ಲಿಫ್ಟ್ ಇರಿಗೇಷನ್) ಯೋಜನೆಗಳು ಸಾಕಷ್ಟು ಜಾರಿಯಲ್ಲಿರುವುದನ್ನು ಕಾಣಬಹುದಾಗಿದೆ. ಇನ್ನೂ ಹಿಂದಿನ ಕಾಲದಲ್ಲಿ ತೋಟದಲ್ಲಿ ನೀರು ಹಾಯಿಸುವ ಪದ್ಧತಿಗಳಲ್ಲಿ ಕಪ್ಲಿಯೂ ಒಂದು. ಇತ್ತಿಚೀನ ದಿನಗಳಲ್ಲಿ ಆಧುನಿಕತೆಯ ಸ್ಪರ್ಶದಿಂದ ಕಣ್ಮರೆಯಾಗಿರುವಂತಿದೆ. ಕಪಿಲೆ ಹೊಡೆಯುವ ಸಂದರ್ಭದಲ್ಲಿ ಎತ್ತುಗಳು ಹಿಂದೆ ಮುಂದೆ ಸರಿದಾಡಿದರೆ ನೀರು ಮೇಲೆ ತುಂಬಿಕೊಂಡು ಬಂದು ಕಾಲುವೆಗೆ ಸುರಿಯುತ್ತದೆ. ಇಂದು ಮಲೆನಾಡಿನ ಕೆಲವುಭಾಗಗಳಲ್ಲಿ ಕಾಣಬಹುದು. ಯಾವುದೇ ಕೆಲಸವಾಗದೆ ಅನೇಕ ಸಾರಿ ತಿರುಗಾಡುವಂತಹ ಸಂದರ್ಭಕ್ಕೆ ಅನ್ವರ್ಥಕವಾಗಿ ಈ ಮಾತು ಬಳಸಲಾಗುತ್ತಿದೆ.

ಹಗೇವು, ಕಣಜ, ಸಡ್ಡೆ ಪದಗಳನ್ನು ಕುರಿತು ಈ ರೀತಿ ತಿಳಿಯಬಹುದು. ಹಗೇವು, ಕಣಜ ರೈತರು ನೈಸರ್ಗಿಕವಾಗಿ ತಯಾರಿಸಿಕೊಂಡ ಧಾನ್ಯ ಸಂಗ್ರಹಣೆಯ ಸ್ಥಳ. ಅನೇಕ ವಚನಗಳಲ್ಲಿ ಉಲ್ಲೇಖವಾಗಿದೆ. ಇಂದು ಹಗೇವುಗಳು ಅಳಿವಿನ ಅಂಚಿಗೆ ಬಂದಿವೆ. ಅದಕ್ಕೆ ಕಾರಣಗಳು ಹಲವಾರು. ಆದರೂ ಹಗೇವು ಪದ ಸಾಂಸ್ಕೃತಿಕ ಬದುಕಿನಲ್ಲಿ ಬಳಕೆಯಾಗುವುದನ್ನು ಕಾಣುತ್ತೇವೆ. ಉದಾಹರಣೆಗೆ ಯಾರಿಗಾದರೂ ಸಂಬಂಧಿಗಳಿಗೆ, ಬೇಡವಾದವರಿಗೆ ಹಣ ಕೊಡಬೇಕಾದ ಪ್ರಸಂಗದಲ್ಲಿ 'ನಮ್ಮ ಮನೆಯಲ್ಲಿ ಹಗೇವು ತುಂಬಿಸಿದಿವಾ, ಕಣಜ ತುಂಬಿಸಿದಿವಾ' ಎಂದು ಸಾಮಾನ್ಯವಾಗಿ ಬಳಕೆಮಾಡುತ್ತೇವೆ. ಹಿಂದೆ ಧಾನ್ಯಗಳನ್ನು ದಾಸ್ತಾನುಮಾಡಿಕೊಂಡು, ಎರಡು ಮೂರು ವರ್ಷಗಳ ತನಕ ಅವಶ್ಯಕತೆಗಳಿಗನುಗುಣವಾಗಿ ಬಳಸುತ್ತಿದ್ದರು. ಈ ಕಲ್ಪನೆಯ ಹಿನ್ನಲೆಯಲ್ಲಿ ಹಣದ ದಾಸ್ತಾನು, ಕೂಡಿಟ್ಟ ಹಣ ಮುಂದು ವರೆದು ಹೇಳುವುದಾದರೆ ಬ್ಯಾಂಕಿನಲ್ಲಿ ಹುಂಡಿ ಮಾಡುವ ಪದಗಳು ಬಂದಿರುವುದನ್ನು ನೋಡಬಹುದು. ಇನ್ನೂ ಮಲೆನಾಡಭಾಗದಲ್ಲಿ 'ಮನೆ ಹಿಂದೆ ಗಿಡ ನೆಟ್ಟಿದಿವಾ ತೆಗೆದು ತೆಗೆದು ಕೊಡಲು ಎಂದು ಹೇಳುವುದನ್ನು ಕಾಣಬಹುದು. ಇನ್ನೂ 'ಸಡ್ಡೆ' ಬಿತ್ತನೆಯ ಉಪಕರಣ. ನೇರವಾಗಿ ಎತ್ತರವಾಗಿ ಇರುತ್ತದೆ. ಸಡ್ಡೆಯಿದ್ದಹಾಗೆ ಇದ್ದಿಯ ಎಂದು ನಯ ವಿನಯವಿಲ್ಲದೆ, ತಗ್ಗಿ, ಬಗ್ಗಿ ನಡೆದುಕೊಳ್ಳದೆ ಇರುವಂತಹ ವ್ಯಕ್ತಿಗಳನ್ನು ಕುರಿತು ಆಡುವ ಲೋಕರೂಡಿಯ ಮಾತಿನಲ್ಲಿ ಬಳಸುತ್ತಾರೆ. ಅಲ್ಲದೇ ಒಬ್ಬ ವ್ಯಕ್ತಿಯಲ್ಲಿರುವ ದಡ್ಡತನವನ್ನು ಕುರಿತು ಹೇಳುವಾಗಲು ಬಳಕೆಯಲ್ಲಿರುವ ಪದವಾಗಿದೆ.

ಒಕ್ಕಲು, ಕಮತ ಪದಗಳು ಸಾಂಸ್ಕೃತಿಕವಾಗಿ ಮುಂದುವರೆದು ಬಂದಿರುವುದನ್ನು ಗಮನಿಸಬಹುದು. ಆಧುನಿಕ ಜೀವನದಲ್ಲಿ ಓದಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಅನೇಕ ಪದವಿಗಳನ್ನು ಪಡೆದಂತಹ ವ್ಯಕ್ತಿಗಳಿಗೆ ಗ್ರಾಮೀಣ ಪ್ರದೇಶದ ಅನುಭವಿ ಹಿರಿಯರು ಅವರ ಬುದ್ದಿಮತ್ತೆಯನ್ನು ಗಮನಿಸಿ ಹೀಗೆ ಹೇಳುತ್ತಾರೆ. 'ಓದು ಒಕ್ಕಾಲು ಬುದ್ದಿ ಮುಕ್ಕಾಲು' ಎನ್ನುತ್ತಾರೆ. ಅಂದರೆ ಓದು ಕಾಲುಭಾಗ, ಬುದ್ದಿ ಮೂಕ್ಕಾಲು ಭಾಗ.ಆದರೂ ಗ್ರಾಮೀಣ ಪ್ರತಿಭೆಯ ಮುಂದೆ ನಿಮ್ಮ ವಿದ್ಯೆ ಕಡಿಮೆಯೆ ಎಂಬುದನ್ನು

ಈ ಮಾತು ಅರ್ಥೈಸುತ್ತದೆ. ಪ್ರಾಚೀನ ಕೃಷಿಗೆ 'ಕಮತ' ಎಂದು ಕರೆಯುತ್ತಿದ್ದು. ಒಕ್ಕಲುತನ ಇತ್ತೀಚಿನ ಪರಿಭಾಷೆಯಾಗಿದೆ. ಎಷ್ಟು ಎತ್ತಿನ ಕಮತ ಹೊಂದಿದ್ದಾರೆ ಎಂಬುವುದರ ಮೇಲೆ ಆ ರೈತರ ಶ್ರೀಮಂತಿಕೆ, ಬಲಾಢ್ಯತೆಯನ್ನು ಪ್ರಮಾಣಿಸಲಾಗುತ್ತಿತ್ತು. ಆದರೆ ಇಂದು ಎಲ್ಲದಕ್ಕೂ 'ಕಮ್ಮಿ ಆಗಿದೆ ತಾ' ಎಂಬ ಅರ್ಥದಲ್ಲಿ ಬಳಸುತ್ತಿರುವುದನ್ನು ಕಾಣಬಹುದಾಗಿದೆ.

ಎತ್ತು, ಕೋಣ ಪದಗಳನ್ನು ಕುರಿತು ನೋಡುವುದಾದರೆ, 'ಎತ್ತು ಏರಿಗೆ ಕೋಣ ನೀರಿಗೆ', 'ಹೆಣ್ಣು ಮಕ್ಕಳಿಗೆ ಹಿರಿತನವಲ್ಲ ಕೋಣನ ಗಳೇವಲ್ಲ. ಇಂತಹ ಗಾದೆಯ ಮಾತುಗಳು ಇಂದು ಪ್ರಚಲಿತದಲ್ಲಿರುವುದನ್ನು ನೋಡಬಹುದಾಗಿದೆ. ಮೊದಲನೆ ಗಾದೆಯೂ ಗಂಡ–ಹೆಂಡತಿ, ಅಧಿಕಾರಿ–ಕೆಳನೌಕರ, ಅಲ್ಲದೇ ಹೊಂದಾಣಿಕೆಯಿಲ್ಲದ ಯಾವುದೇ ಕೆಲಸದ ಸಂದರ್ಭದಲ್ಲಿ ಬಳಸುತ್ತಾರೆ. ಅಲ್ಲದೇ ಹೆಣ್ಣು ಮಕ್ಕಳಿಗೆ ಹಿರಿತನ ಸಿಕ್ಕರೆ ಆ ಮನೆತನ ಸ್ತ್ರೀಪ್ರಧಾನತೆ ಪಡೆದುಕೊಳ್ಳುತ್ತದೆ ಎಂಬುದು ಪುರುಷ ಪ್ರಧಾನ ಸಮಾಜದ ಮಾತಾಗಿದೆ. ಇನ್ನೂ ಕೋಣನ ಬೇಸಾಯ ನಿಧಾನ ಗತಿಯದಾಗಿದ್ದು, ಗಳೆಯೂ ಮುಂದೆ ಸಾಗುವುದಿಲ್ಲ. ಆದರೆ ಎತ್ತುಕೊಳ್ಳಲು ಶಕ್ತಿಯಿಲ್ಲದ ಅಶಕ್ತರು ಕೋಣ, ಹಸುಗಳನ್ನೇ ಬೇಸಾಯಕ್ಕೆ ಬಳಸುವುದು ಸಾಮಾನ್ಯ ಸಂಗತಿಯಾಗಿದೆ. ಮುಂದುವರೆದು 'ಕೋಣನ ಮುಂದೆ ಕಿನ್ನರಿ' ಭಾರಿಸಿದಂತೆ ಎಂಬಲ್ಲಿ ಕಿನ್ನರಿ ಸಂಗೀತ ನುಡಿಸುವ ಸಲಕರಣೆ. ಕೋಣ ನಿಧಾನಗತಿ, ಮಬ್ಬು ಬುದ್ದಿಯದು. ಅಲ್ಲದೇ ಅರಿತುಕೊಳ್ಳಲು ಆಗದೆ ಇರುವಂತಹ ವ್ಯಕ್ತಿಗಳಿಗೆ ಹೋಲಿಸಿ ಹೇಳುವ ಸಂದರ್ಭ ಇದಾಗಿದೆ. ಇನ್ನೂ ಮಣ್ಣೆತ್ತಿನ ಅಮವಾಸ್ಯೆ ಎತ್ತುಗಳ ಪೂಜಿಸಲೆಂದೆ ಸೃಷ್ಠಿಯಾದುದು. ಕುಂಬಾರರ ಮನೆಯಲ್ಲಿ ಮಾಡಿದ ಮಣ್ಣಿನ ಎತ್ತುಗಳನ್ನು ತಂದು ಪೂಜಿಸುತ್ತಾರೆ. ಇಂದಿನ ದಿನಮಾನಗಳಲ್ಲಿ ವೈಭವ ಕಣ್ಮರೆಯಾದರೂ ಉತ್ತರ ಕರ್ನಾಟಕದ ಅನೇಕ ಕಡೆ ಸಾಂಸ್ಕೃತಿಕ ಹಬ್ಬವಾಗಿ ಆಚರಣೆಯಾಗುತ್ತಿದೆ. ಮಣ್ಣೆತ್ತಿನ ಅಮವಾಸ್ಯೆಯ ಮರುದಿನ, ಕರಿದಿನವಾಗಿದ್ದು ಅಂದು 'ಎಂಟೆತ್ತಿನ ಮೇಲೆ ಕುಂಟೆತ್ತು ಬಂದೈತಿ ನಿಡ್ರಮ್ಮ' ಎಂಬ ಸಂದೇಶವನ್ನು ಸಾರುವ ಗ್ರಾಮೀಣರ ಈ ಆಚರಣೆ ಗಮನಿಸುವಂತದ್ದು. ಸಮಾಜದಲ್ಲಿ ಬಲಾಢ್ಯರು, ಅಸಾಯಕರು ಬದುಕುವುದು ಸಹಜ. ವ್ಯವಸ್ಥೆಯಲ್ಲಿ ಅಸಾಯಕರು ಬದುಕುವುದು ಕಷ್ಟ. ಇದನ್ನರಿತ ಜನಪದರು ಅಸಾಯಕರನ್ನು ಕಡೆಗಣಿಸದೆ ಬಲಾಢ್ಯರು ಅವರನ್ನು ಮೇಲೆತ್ತಲಿ ಎಂಬ ಸಂದೇಶವನ್ನು ಈ ಸಾಲು ಸಾರುತ್ತದೆ. ಎಂಟೆತ್ತಿನ ಒಕ್ಕಲುತನ ಬಲಾಢ್ಯತೆ ಸೂಚಿಸಿದರೆ, ಕುಂಟೆತ್ತು ಅಸಾಯಕತೆಯ ಸಂಕೇತವಾಗಿದೆ. ಇಂತಹ ಅನೇಕ ಕೃಷಿ ಸಂಬಂಧಿ ಪರಿಭಾಷೆಗಳ ಸಾಂಸ್ಕೃತಿಕ ಅನನ್ಯತೆಯನ್ನು ಸೃಷ್ಠಿಮಾಡಿವೆ ಎಂದು ಹೇಳಬಹುದು.

ಗಿಡ–ಮರ, ಕೊಡಲಿ ಪದಗಳ ಕುರಿತಂತೆ 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ' ಎಂಬ ಮಾತಿನಲ್ಲಿ ಮನೆಯಲ್ಲಿ ಚಿಕ್ಕಮಕ್ಕಳನ್ನು ತಿದ್ದುವಿಕೆಯಾಗಲಿ, ಯಾವುದೆ ಕೆಲಸವಾಗಲಿ ಸಣ್ಣದಾಗಿರುವಾಗಲೆ ಮಾಡಿದರೆ ಅಂತಹ ತೊಂದರೆ ಆಗಲಾರದು. ಅಲಕ್ಷಮಾಡಿದರೆ ಮುಂದೆ ಸಮರ್ಥವಾಗಿ ನಿಭಾಯಿಸಲು ಆಗುದಿಲ್ಲ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಅಲ್ಲದೇ 'ಉಗುರಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡರು' ಎಂಬಲ್ಲಿ ಸಣ್ಣದರಲ್ಲಿಯೆ ಇತ್ಯಾರ್ಥವಾಗುವ ಸಮಸ್ಯೆಯನ್ನು ದೊಡ್ಡದಾಗುವಂತೆ ಮಾಡುವ ಸಂದರ್ಭದಲ್ಲಿ ಬಳಸುತ್ತಾರೆ.

ಮುಂದುವರೆದು ಒಡ್ಡು, ಹೊಲ, ಮಳೆ ಪದಗಳನ್ನು ಕುರಿತು ಗಮನಿಸುದಾದರೆ, 'ಒಡ್ಡುಯಿಲ್ಲದ ಹೊಲ ಗೊಡ್ಡೆಮ್ಮೆ ಸಾಕಿದಂತೆ', 'ಅಂಗೈಯಂತ ಹೊಲಮಾಡಿದರೆ ಮುಂಗೈ ಎಲ್ಲಾ ತುಪ್ಪ' ಎಂಬ

ಗಾದೆಗಳಲ್ಲಿ ಹೊಲಗಳಿಗೆ ಒಡ್ಡುಗಳು ತುಂಬಾ ಅವಶ್ಯಕ, ಒಡ್ಡಗಳಿಲ್ಲದ ಹೊಲಗಳಲ್ಲಿ ಬೆಳೆ ಮಾಡುವುದು ಕಷ್ಟ. ಏಕೆಂದರೆ ಮಳೆ ಬಂದಾಗ ಗೊಬ್ಬರ, ಮಣ್ಣಿನ ಸಾರವೆಲ್ಲ ಕೊಚ್ಚಿ ಬೇರೆಯವರ ಹೊಲ ಸೇರುತ್ತದೆ. ಅಂತಹ ಹೊಲದಲ್ಲಿ ಪೈರು ಬರಲು ಸಾಧ್ಯವಿಲ್ಲ. ಹಾಗೆಯೇ ಹಾಲು ಕರೆಯದೆ ಇರುವ ಗೊಡ್ಡೆಮ್ಮೆ ಸಾಕಿದರೆ ಯಾವುದೆ ಪ್ರಯೋಜನವಿಲ್ಲ ಎಂಬುದು ಮನುಷ್ಯನ ಸ್ವಾರ್ಥ ಸ್ವಭಾವದ ಆಲೋಚನೆಯಾಗಿದೆ. ಇದರ ಹಿಂದೆ ನಿರೂಪಯೋಗಿಯಾದ ಜೀವಿಗಳನ್ನು ಆರೈಕೆಮಾಡುವುದು ವ್ಯರ್ಥವೆಂಬ ವ್ಯವಹಾರ ಬುದ್ಧಿಯನ್ನು ಕಾಣುತ್ತೇವೆ. ಕೆಲಸಕ್ಕೆ ಬಾರದ ವ್ಯಕ್ತಿಗಳನ್ನು ಕುರಿತು ಇಂತಹ ಭಾವನೆ ವ್ಯಕ್ತವಾಗುತ್ತದೆ. ಇನ್ನೂ ಅಂಗೈ ಗುಂಡಿಯಾಗಿರುವುದರಿಂದ ಅದರಲ್ಲಿ ನೀರು, ತುಪ್ಪ ಯಾವುದೇ ದ್ರವರೂಪದ ಪದಾರ್ಥ ನಿಲ್ಲುತ್ತದೆ. ಹೊಲಗಳಲ್ಲಿ ಒಡ್ಡು, ಬದುಗಳ ನಿರ್ಮಾಣ ಮಾಡಿ ಅಂಗೈರೀತಿ ಮಾಡಿಕೊಂಡರೆ ನೀರು ಹೊಲದಲ್ಲಿ ಇಮರಿಕೊಂಡು ತೇವಾಂಶ ಹೆಚ್ಚಾಗಿ ಫಲವತ್ತತೆಯಿಂದ ಕೂಡಿ ಒಳ್ಳೆಯ ಬೆಳೆ ಬಂದು ರೈತರ ಸಂಪತ್ತು ಹೆಚ್ಚಾಗುತ್ತದೆ ಎಂಬ ಆಶಯ ಈ ಮಾತಿನಲ್ಲಿದೆ. ಇನ್ನೂ ಮಳೆಯ ಕುರಿತು ಸಾಕಷ್ಟು ಗಾದೆಗಳು, ನುಡಿಗಟ್ಟುಗಳು ಹುಟ್ಟಿಕೊಂಡು ಸಮಾಜದ ಸಾಂಸ್ಕೃತಿಕ ಬದುಕಿನೊಳಗೆ ಅನನ್ಯತೆಯನ್ನು ಪಡೆದುಕೊಂಡಿವೆ. ಉದಾಹರಣೆಗೆ 'ಕುಟುಕೋ ಮಳೆ ಬೇಡ, ಲೋಟಕೋ ಗಂಡ ಬೇಡ' ಎಂಬ ಗಾದೆಯನ್ನು ಅರ್ಥ ಮಾಡಿಕೊಳ್ಳಬಹುದು.

ಇನ್ನೂ ಮಣ್ಣಾಳು, ಶ್ರಮಿಕ ವರ್ಗದವರ ಹಿನ್ನಲೆಯಲ್ಲಿ 'ಕಳ್ಳ ಒಕ್ಕಲಲ್ಲ ನಾಯಿ ಜನಗಿ(ಬಾಣಂತಿ)ಯಲ್ಲ', 'ಕಳ್ಳ ಎತ್ತಿಗೆ ಚಪ್ಪರಿಸಿದ್ದೆ ನೆಪ' ಎಂಬ ಗಾದೆಗಳನ್ನು ಗಮನಿಸಿದರೆ ಕಳ್ಳತನ ಮಾಡುವ ವ್ಯಕ್ತಿ ಎಂದೂ ಒಕ್ಕಲಾಗಲು ಸಾಧ್ಯವಿಲ್ಲ. ಅಲ್ಲದೇ ಕೆಲಸ ಮಾಡದ ಸೋಮಾರಿಗಳು, ಮೈಗಳ್ಳರನ್ನು ಕುರಿತು ಸಮಾಜದಲ್ಲಿ ಇಂತಹ ಅನುಭವದ ನುಡಿಗಳು ಸಾಕಷ್ಟು ಕಂಡು ಬರುತ್ತವೆ. ಇನ್ನೂ ಮಾಡಲು ಏನೂ ಕೆಲಸವಿಲ್ಲದೆ ಇದ್ದಾಗ 'ಕುಳಿತುಕೊಂಡು ಗೆಣಸು ಕೀಳಲಾ' ಎಂಬ ಉಕ್ತಿಯನ್ನು ನೋಡಬಹುದು. ಕಾಲಹರಣ ಮಾಡದ ವ್ಯಕ್ತಿಗಳು, ಒಬ್ಬರು ಕೆಲಸದಲ್ಲಿ ನಿರತರಾದಾಗ ಅವರ ಮುಂದೆ ಸುಮ್ಮನೆ ಕುಳಿತುಕೊಳ್ಳಬೇಕಾದ ಸಂದರ್ಭದಲ್ಲಿ ಇಂತಹ ಮಾತುಗಳು ಬಳಕೆಯಾಗುವುದನ್ನು ಕಾಣುತ್ತೇವೆ.

ಒಟ್ಟಾರೆಯಾಗಿ ಪಾರಿಭಾಷಿಕ ಪದಗಳು ಸಂಸ್ಕೃತಿಯ ಒಳಗೆ ಹೇರಳವಾಗಿ ಬಳಕೆಯಾಗಿವೆ. ಕೃಷಿ ಉಪಕರಣಗಳು, ಸಾಕು ಪ್ರಾಣಿಗಳು ಸಸ್ಯಜನ್ಯಗಳು, ಮಳೆ ಕುರಿತು ಮತ್ತು ಮನುಷ್ಯ ಶ್ರಮದ ಹಿನ್ನಲೆಯ ಕೃಷಿ ಮೂಲದ ಪದಗಳು ಅನೇಕ ಕ್ಷೇತ್ರಗಳಲ್ಲಿ ಹರಡಿವೆ. ಕೃಷಿಯೇ ಸಮಾಜದ ಮೂಲ ಕಸುಬಾಗಿರುವುದರಿಂದ ಅದು ಅನೇಕ ಕ್ಷೇತ್ರಗಳಿಗೆ ಪ್ರೇರಕ ಮತ್ತು ಪೂರಕವಾಗಿರುವುದರಿಂದ ವಿಸ್ತಾರವಾದ ವ್ಯಾಪಕತೆಯನ್ನು ಪಡೆದುಕೊಂಡಿದೆ. ಈ ಕಾರಣದಿಂದ ಕೃಷಿ ಪಾರಿಭಾಷಿಕ ಪದಗಳು ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿವೆಯೆಂದು ಈ ಮೇಲಿನ ಅಂಶಗಳಿಂದ ತಿಳಿಯಬಹುದಾಗಿದೆ.

೨. ಪ್ರಾದೇಶಿಕ ವೈಶಿಷ್ಟ್ಯ

ಪ್ರಾದೇಶಿಕ ವೈಶಿಷ್ಟಗಳು ಭಾರತೀಯರ ಕರ್ನಾಟಕದ ಕನ್ನಡಿಗರ ಜೀವಾಳವಾಗಿದೆ. ಭಾಷೆ, ಉಡುಗೆ-ತೊಡುಗೆ ಬದುಕಿನ ವಿಧಾನಗಳಲ್ಲಿ ನಂಬಿಕೆ, ಆಚಾರ, ವಿಚಾರ, ನಡೆ-ನುಡಿಗಳಲ್ಲಿಯೂ ಅನೇಕ ವೈಶಿಷ್ಟಗಳನ್ನು ಕಾಣುತ್ತೇವೆ. ಅಂತದ್ದರಲ್ಲಿ ಕೃಷಿಯನ್ನೇ ಮೂಲವೃತ್ತಿಯಾಗಿ ಹೊಂದಿರುವ ನಮ್ಮನಾಡಿನಲ್ಲಿ ಕೃಷಿವಿಧಾನಗಳು ಪ್ರದೇಶದಿಂದ ಪ್ರದೇಶಕ್ಕೆ, ಭೌಗೋಳಿಕತೆ-ಹವಾಮಾನದ ರೀತಿಗಳನ್ನು ಅನುಸರಿಸಿ, ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿವೆ. ಕರ್ನಾಟಕದ ವ್ಯವಸಾಯದ ಭೂಮಿ ಅನೇಕ

ಬಗೆಬಗೆಯ ವೈಶಿಷ್ಟತೆಗಳನ್ನು ಹೊಂದಿದ್ದು, ಕರ್ನಾಟಕದಲ್ಲಿ ಏಕರೂಪ ವ್ಯವಸಾಯದ ಪದ್ಧತಿಯನ್ನು ಕಾಣಲು ಸಾಧ್ಯವಿಲ್ಲ.

ಪ್ರಾದೇಶಿಕವಾಗಿ ವೈಶಿಷ್ಟತೆಯನ್ನು ಗುರುತಿಸುವಾಗ ಒಂದು ಪ್ರದೇಶದ ವ್ಯವಸಾಯ ಪದ್ಧತಿ ಇನ್ನೊಂದು ಪ್ರದೇಶದಲ್ಲಿ ಕಾಣಸಿಗುವುದಿಲ್ಲ. ಮಳೆಯಆಶ್ರಯ, ನೀರಾವರಿಯ ಮೂಲಗಳು. ಬೆಳೆಗಳ ಬೆಳೆಯುವ ಭೂಮಿ, ಹವಮಾನದ ಏರಿಳಿತಗಳಿಂದ ಇಂತಹ ಭಿನ್ನತೆಗಳು ಉಂಟಾಗುತ್ತವೆ. ಪ್ರಾಚೀನಕಾಲದ ಸಾಹಿತ್ಯ, ಶಾಸನಗಳಲ್ಲಿಯ ಕೃಷಿಯ ವಿಧಾನಗಳ ಪೂರಕ ಉಲ್ಲೇಖಗಳಿಗೂ, ಈಗಿನ ಕಾಲದಲ್ಲಿ ಬದಲಾಗಿರುವ ಕೃಷಿಯ ವೈವಿಧ್ಯತೆಗೂ ಅನೇಕ ರೀತಿಯ ವ್ಯತ್ಯಾಸಗಳನ್ನು ಕಾಣುತ್ತೇವೆ. ಆದಾಗ್ಯೂ ಆಯಾ ಪ್ರದೇಶದ ಭೂ ಪ್ರದೇಶ, ಸಸ್ಯಸಂಕುಲ, ಪ್ರಾಣಿಸಂಕುಲ, ಹವಾಗುಣ, ನೀರಿನ ಮೂಲಸೆಲೆಗಳ ವೈವಿಧ್ಯತೆಗಳಿಂದ ಹಾಗೂ ಜನರ ಆಸಕ್ತಿ, ಕೃಷಿಯ ತಂತ್ರಗಳು, ಅವರ ಸೌಂದರ್ಯದ ಕಲ್ಪನೆ ಮುಂತಾದ ಅಂಶಗಳಿಂದ ವೈವಿಷ್ಟತೆ ಉಂಟಾಗಲು ಕಾರಣವಾಗಿರುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನದ ಅನುಕೂಲಕ್ಕಾಗಿ ದಕ್ಷಿಣಕರ್ನಾಟಕ ಮತ್ತು ಉತ್ತರ ಕರ್ನಾಟಕ ಎಂದು ವಿಭಾಗಿಸಿಕೊಂಡು, ಅಲ್ಲಿಯ ಉಳುಮೆ ಪದ್ಧತಿ, ಉಪಕರಣಗಳ ದೃಷ್ಟಿ, ಬೆಳೆಗಳು ಹಾಗೂ ಸುಗ್ಗಿವಿಧಾನ ಮತ್ತು ಇತರೆ ಅಂಶಗಳಲ್ಲಿಯ ಕೆಲವು ಪ್ರಾದೇಶಿಕ ವೈಶಿಷ್ಟತೆಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ದಕ್ಷಿಣ ಕರ್ನಾಟಕ ಭಾಗವು ಮೈಸೂರು, ಮಂಡ್ಯ, ಹಾಸನ, ಬೆಂಗಳೂರು, ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಕರಾವಳಿ ಕರ್ನಾಟಕ, ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ಮತ್ತು ಕೊಡಗು ಮುಂತಾದ ಪ್ರದೇಶಗಳನ್ನು ಒಳಗೊಂಡಿದೆ. ಈ ಪ್ರದೇಶ ಸಹ್ಯಾದ್ರಿ ಪರ್ವತಶ್ರೇಣಿ, ದಟ್ಟವಾದ ಅರಣ್ಯ ಸಂಪತ್ತು, ನೈಸರ್ಗಿಕವಾದ ಸಂವೃದ್ದ ಸಸ್ಯ ಬೆಳವಣಿಗೆಗೆ, ತುಂಗಾ, ಭದ್ರಾ, ಕಾವೇರಿ, ಹೇಮಾವತಿ, ಕಪಿಲಾ, ವೇದಾವತಿ, ನೇತ್ರಾವತಿ, ಶರಾವತಿ ಮುಂತಾದ ನದಿಗಳು, ವಿವಿಧ ನಮೂನೆಯ ಬೆಳೆಗಳಿಗೆ ಜೀವಧಾತುಗಳಾಗಿ ಭಿನ್ನ ರೀತಿಯ ಭೌಗೋಳಿಕ ಪರಿಸರ ಹಾಗೂ ಸಾಂಸ್ಕೃತಿಕ ಪರಂಪರೆಯ ಹೊಂದಿದ್ದು ವೈವಿಧ್ಯತೆಗೆ ಪ್ರಸಿದ್ದಿಯಾಗಿವೆ. ಈ ಭಾಗಗಳಲ್ಲಿ ಹಲಸು, ಮಾವು, ಪೇರಲ ಮುಂತಾದ ಹಣ್ಣುಗಳು ಅಣಬೆ, ಗೆಣಸು, ಆಲೂಗಡ್ಡೆ, ಕೋಸು, ಕ್ಯಾರೇಟು ಮುಂತಾದ ತರಕಾರಿ ಬೆಳೆಗಳು, ಅಡಿಕೆ, ತೆಂಗು, ಬಾಳೆ, ಕಾಫೀ, ಟೀ, ಮೆಣಸು, ಅನೇಕ ಸಾಂಬಾರ ದಿನಿಸುಗಳು, ಭತ್ತ, ರಾಗಿ, ಜೋಳ, ನವಣೆ, ಮೆಕ್ಕೆಜೋಳ, ಮುಂತಾದ ಆಹಾರಧಾನ್ಯಗಳ ಜೊತೆಗೆ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ.

ಉತ್ತರ ಕರ್ನಾಟಕ ಭಾಗವು ಬಿಜಾಪುರ, ಧಾರವಾಡ, ಬೆಳಗಾಂ, ರಾಯಚೂರು, ಗುಲ್ಬರ್ಗಾ, ಬೀದರ್ ಹಾಗೂ ಬಳ್ಳಾರಿ ಜಿಲ್ಲೆಗಳನ್ನು ಒಳಗೊಂಡ ಸಮಶೀತೋಷ್ಣ ವಾತಾವರಣ ಪ್ರದೇಶ. ಭೌಗೋಳಿಕವಾಗಿ ಕಪ್ಪು ಮತ್ತು ಮಸಾರಿ ಭೂಮಿಯನ್ನು ಹೊಂದಿದ್ದು 'ಬಯಲು ಸೀಮೆ' ಎಂದೇ ಕರೆಯಲಾಗುತ್ತಿದೆ, ಅತಿ ಕಡಿಮೆ ಮಳೆಯಾಗುವ ಈ ಪ್ರದೇಶಗಳಲ್ಲಿ ಇಲ್ಲಿನ ಹವಾಮಾನಕ್ಕೆ ಅನುಗುಣವಾಗಿ ಜೋಳ, ಮೆಕ್ಕೆಜೋಳ, ಗೋಧಿ, ಜವೆಗೋಧಿ, ಸಜ್ಜೆ, ನವಣೆ, ವಿವಿಧ ಕಾಳು-ಕಡಿಗಳು, ದ್ರಾಕ್ಷಿ, ದಾಳಿಂಬೆಯಂಥ ಹಣ್ಣು ಹಂಪಲು ಬೆಳೆಯುತ್ತಾರೆ. ಪ್ರಾಚೀನ ಕವಿಗಳ ಕೃತಿಗಳಲ್ಲಿ, ಶಾಸನ ಸಾಹಿತ್ಯದಲ್ಲಿ ಇಂತಹ ಬೆಳೆಗಳ ಉಲ್ಲೇಖಗಳನ್ನು ಕಾಣುತ್ತೇವೆ.

ಪ್ರಾದೇಶಿಕತೆಯನ್ನು ಗುರುತಿಸಲು, ಅಧ್ಯಯನದ ಅನುಕೂಲ ದೃಷ್ಟಿಯಿಂದ ಪ್ರಮುಖವಾಗಿ ಉಳುಮೆ ಉಪಕರಣಗಳು, ಕೃಷಿ ಬಳಕೆ ಪ್ರಾಣಿಗಳು, ಬೆಳೆಗಳು ಮತ್ತು ಸುಗ್ಗಿಪದ್ಧತಿಗಳ ಹಿನ್ನಲೆಯಲ್ಲಿ ವಿಶ್ಲೇಷಣೆ ಮಾಡಲು ಪ್ರಯತ್ನಿಸಲಾಗಿದೆ.

ಕೃಷಿ ಉಪಕರಣಗಳ ಸ್ವರೂಪ, ಹೆಸರುಗಳಲ್ಲಿ ಭಿನ್ನತೆಗಳು ಕಂಡುಬರುತ್ತವೆ. ಮಲೆನಾಡು, ಕರಾವಳಿ, ನೀರಾವರಿ ಪ್ರದೇಶ ಸೇರಿದಂತೆ ಬಯಲು ಸೀಮೆಯ ಉಳುಮೆಯಲ್ಲಿ ವೈವಿಧ್ಯತೆ ಕಂಡುಬರುತ್ತವೆ. ಮಣ್ಣಿನ ವಿವಿಧತೆಗೆ ಅನುಗುಣವಾಗಿ ಉಪಕರಣಗಳನ್ನು ಬಳಸಲಾಗುತ್ತದೆ. ಕರ್ನಾಟಕ ಕೃಷಿವಲಯದಲ್ಲಿ ವೈವಿಧ್ಯವಿದ್ದರೂ ಉಳುಮೆ, ಬಿತ್ತನೆ, ಕಳೆ ಕೀಳುವ ಉಪಕರಣಗಳ ಬಳಕೆಯಲ್ಲಿ ಅಂಥ ಹೆಚ್ಚಿನ ವ್ಯತ್ಯಾಸ ಕಂಡುಬರುವುದಿಲ್ಲ. ಪ್ರಾದೇಶಿಕವಾಗಿ ಉಪಕರಣಗಳ ಹೆಸರು, ಕೃಷಿಯಲ್ಲಿ ಬಳಸುವ ಬೇಸಾಯ ಕ್ರಿಯೆಯ ಪದಗಳು ಬೇರೆಯಾಗಿರಬಹುದೇ ವಿನಾಃ ಬಳಸುವ ವಿಧಾನ. ಬಳಕೆಯಾಗುವ ಸ್ತರ ಎಲ್ಲವೂ ಒಂದೇಯಾಗಿರುತ್ತದೆ. ಅಂತವುಗಳಲ್ಲಿ ಕೆಲವು ಅಂಶಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ನೇಗಿಲು ಉಳುಮೆಯ ಉಪಕರಣ. ರಾಜ್ಯದ ಬಹುತೇಕ ಎಲ್ಲಾ ಕಡೆ ದೇಶಿ ನೇಗಿಲ ಬಳಕೆಯಿದೆ. ಬಯಲುಸೀಮೆ ಹಾಗೂ ಉತ್ತರಕರ್ನಾಟಕದಲ್ಲಿ ಬಳಕೆಯಾಗುತ್ತಿದ್ದ ನೇಗಿಲು ದೊಡ್ಡದಾಗಿದ್ದರೆ, ಕರಾವಳಿ, ಮಲೆನಾಡು ಪ್ರದೇಶದಲ್ಲಿ ಅತಿಹೆಚ್ಚು ಮಳೆ ಬೀಳುವ ಭಾಗಗಳಲ್ಲಿ ಬಾತುಕೋಳಿ ಕಾಲಿನ ಆಕಾರದ ಸಣ್ಣ ನೇಗಿಲು ಬಳಕೆಯಾಗುತ್ತದೆ. ಏಕೆಂದರೆ ಕೆಸರು ಗದ್ದೆಯ ಉಳುಮೆಗೆ ಇಂತಹ ನೇಗಿಲು ಅಗತ್ಯವಾಗಿದೆ. ಉತ್ತರಕರ್ನಾಟಕದಲ್ಲಿ ನೇಗಿಲಿಗೆ ಮಡಿಕೆ ಎನ್ನುತ್ತಾರೆ. ಬಯಲು ಸೀಮೆಯಲ್ಲಿ ನೇಗಿಲು ಎನ್ನಲಾಗಿದೆ. ಉತ್ತರ ಕರ್ನಾಟಕದಲ್ಲಿ ನೇಗಿಲನ್ನು ವಿವಿಧ ಉಳುಮೆ ಚಟುವಟಿಕೆಗಳಲ್ಲಿ ಬಳಸುತ್ತಾರೆ. ಅದರಲ್ಲಿ ಹತ್ತು ಎತ್ತಿನ, ಆರು ಎತ್ತಿನ, ನಾಲ್ಕು ಎತ್ತಿನ ಮಡಿಕೆ, ರಂಟೆ ಮಡಿಕೆ, ಕಬ್ಬಿಣದ ಮಡಿಕೆ, ಬೀಜ ಮಡಿಕೆ ಹೊಡೆಯುತ್ತಾರೆ. 'ಮಲೆನಾಡ ವೈಷ್ಣವ ಒಕ್ಕಲಿಗರ ಸಂಸ್ಕೃತಿ' ಎಂಬ ಕೃತಿಯಲ್ಲಿ ಡಾ.ಅಂಬಳಿಕೆ ಹಿರಿಯಣ್ಣನವರು ಮಲೆನಾಡಿನ ನೇಗಿಲುಗಳನ್ನು ಕುರಿತು ಹೀಗೆ ಹೇಳುತ್ತಾರೆ. ".............. ಕನ್ನಡಜಿಲ್ಲೆ ನೇಗಿಲು (ಸಣ್ಣ ನೇಗಿಲು), ಮಂಡೆ ನೇಗಿಲು (ನಾಡು ಅಥವಾ ದೊಡ್ಡ ನೇಗಿಲು), ಮತ್ತು ಕಬ್ಬಿಣ ನೇಗಿಲು ಎಂಬ ಮೂರು ಬಗೆಗಳಿವೆ. ಕನ್ನಡ ಜಿಲ್ಲೆ ನೇಗಿಲು ಉಳುವ ಭಾಗದಲ್ಲಿ ಉದ್ದವಾಗಿರುತ್ತದೆ. ಮಂಡೆ ನೇಗಿಲಿಗೆ ಈಸು, ಮೇಳಿ ಜೋಡಿಸುವ ಭಾಗದಲ್ಲಿ ಮಂಡೆ (ಬುರುಡೆ) ಇರುತ್ತದೆ. ಈಸು, ಮೇಳಿ, ಕುಳ(ಗುಳ)ಇಂಥ ಅನೇಕ ಬಿಡಿಭಾಗಗಳು ಸೇರಿ ಒಂದು ಪೂರ್ಣ ನೇಗಿಲಾಗುತ್ತದೆ. ನೇಗಿಲು ತಯಾರಿಸಲು ಬೇಕಾದ ಮರದ ತುಂಡನ್ನು ಮತ್ತಿ, ಹಲಸು, ಹೊನ್ನೆ, ಬೋಗಿ ಮುಂತಾದ ಮರಗಳಿಂದ ಒದಗಿಸಿಕೊಳ್ಳುತ್ತಾರೆ. ನೇಗಿಲಿಗೆ ಜೋಡಿಸುವ ಕುಳ ಮುಕ್ಕಾಲು ಅಂಗುಲ ದಪ್ಪ, ಎರಡುವರೆ ಅಂಗುಲ ಅಗಲದ ಒಂದು ಕಬ್ಬಿಣದ ಪಟ್ಟಿ. ಈ ಪಟ್ಟಿಯ ತುದಿಯನ್ನು ಹರಿತಗೊಳಿಸಿ ನೇಗಿಲಿಗೆ ಜೋಡಿಸಿರುತ್ತಾರೆ. ಉಳುವವನು ನೇಗಿಲು ಹಿಡಿಯಲು ಬಳಸುವ ಸಾಧನಕ್ಕೆ ಮೇಳಿ ಎಂದು ಹೆಸರು. ನೇಗಿಲಿನ ಈಸು ಸುಮಾರು ಆರೇಳು ಅಡಿ ಉದ್ದವಾಗಿರುತ್ತದೆ. ಈಸಿಗೆ ನೊಗಬಿಗಿದು ಎತ್ತು ಹೂಡುತ್ತಾರೆ".[೬]

ಜಮೀನಿನ ಮಣ್ಣನ್ನು ತಳಮೇಲು ಮಾಡಲು ಬಳಸುವುದೇ ಕುಂಟೆ. ಉತ್ತರ ಕರ್ನಾಟಕಕ್ಕೆ ಹೋಲಿಸಿದರೆ ಬಯಲು ಸೀಮೆ ಹಾಗೂ ಮಲೆನಾಡು ಕರಾವಳಿ ಪ್ರದೇಶಗಳಲ್ಲಿ ಕುಂಟೆಗಳ ಬಳಕೆ ಕಡಿಮೆ ಎಂದೇ ಹೇಳಬಹುದು. ಬಯಲು ಸೀಮೆಯಲ್ಲಿ ನಾಲ್ಕಾರು ತರದ ಕುಂಟೆ ಬಳಸುತ್ತಾರೆ. ಉತ್ತರಕರ್ನಾಟಕದ ಭಾಗಗಳಲ್ಲಿ ಎಡೆ ಕುಂಟೆಯನ್ನು ವಿಶೇಷವಾಗಿಯೂ, ಹೆಚ್ಚಾಗಿಯೂ ಬಳಸುತ್ತಾರೆ. ಸಸಿಗಳ ಎತ್ತರ ಕಡಿಮೆಯಿದ್ದಾಗ ಕುಳ ಬಳಸಿ ಈ ಕುಂಟೆ ಬಳಸುತ್ತಾರೆ. ಇದು ಒಂದಿಂಚು ಕರಿಕೆ, ಕಸಗಳು ಉಳಿಯದಂತೆ ಸಾಲುಗಳ ಹತ್ತಿರದವರೆಗೂ ಉಳುಮೆಮಾಡಿ ಸಾಲುಗಳಿಗೆ ಮಣ್ಣು ಏರುವಂತೆ ಮಾಡುತ್ತವೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹತ್ತು ಎತ್ತಿನ ಕುಂಟೆ, ನಾಲ್ಕು ಎತ್ತಿನ ಕುಂಟೆ, ರೆಂಟೆ,

ಕುಂಟೆ, ಐದು ಗೇಣಿನ ಕುಂಟೆ, ಎಡೆಕುಂಟೆ, ದಳೆಕುಂಟೆ, ಬೋದುಕುಂಟೆ, ಜಂತುಕುಂಟೆ, ರಾಶಿಕುಂಟೆ ಅನೇಕ ವೈವಿಧ್ಯದ ಕುಂಟೆಗಳ ಬಳಕೆ ಚಾಲ್ತಿಯಲ್ಲಿವೆ. ಹೆಗ್ಗುಂಟೆ ಬೃಹದಾಕಾರದ ಕುಂಟೆಯಾಗಿದೆ. ಇದನ್ನು ನಾಡ ಕುಂಟೆಯೆಂದು ಕರೆಯಲಾಗುತ್ತದೆ. ಮುಂಗಾರು ಮಳೆಯಾದಾಗ ಭೂಮಿಯಲ್ಲಿನ ತೇವಾಂಶ ಹಾಳಾಗದಂತೆ ಭೂಮಿ ಮುಚ್ಚಗೆ ಮಾಡಲು ಈ ಉಪಕರಣವನ್ನು ಬಯಲು ಸೀಮೆಯಲ್ಲಿ ಹೆಚ್ಚಾಗಿ ಬಳಸುತ್ತಾರೆ. ಮಳೆಯಾದ ನಂತರ ಹಾಗೂ ಬಿತ್ತನೆ ಮಾಡುವ ಪೂರ್ವದಲ್ಲಿ ರಂಟೆ ಕುಂಟೆ ಹೊಡೆಯುವುದು ಸಂಪ್ರದಾಯ. ಈ ಕುಂಟೆ ಹೊಡೆಯುವುದರಿಂದ ತಳದ ಮಣ್ಣು ಬಿಸಿಲಿಗೆ ಹರಡಿಕೊಳ್ಳಲು ಸಹಾಯ ಮಾಡುತ್ತದೆ. ಇದರ ಉಪಯೋಗಗಳನ್ನು ಕುರಿತು ಕೃಷಿ ಉಪಕರಣಗಳು ಕೃತಿಯಲ್ಲಿ ಗಾಣದಾಳು ಶ್ರೀಕಂಠರವರು ಹೀಗೆ ಹೇಳುತ್ತಾರೆ. "ಭೂಮಿಯಲ್ಲಿರುವ ಕೀಟಗಳ ಮೊಟ್ಟೆ ಮೇಲ್ಭಾಗಕ್ಕೆ ಬಂದು, ಬಿಸಿಲಿಗೆ ಬೆಂದು ನಾಶವಾಗಲಿ ಎಂಬ ಉದ್ದೇಶ ಈ ರೆಂಟೆ ಕುಂಟೆಯದ್ದಾಗಿದೆ. ಈ ಉಪಕರಣ ಬಳಸಿ ಉಳುಮೆ ಮಾಡುವುದರಿಂದ ಬಿತ್ತನೆ ಮಾಡುವಾಗ ಕೂರಿಗೆ ನೆಲಕ್ಕೆ ಊರಲು ಸರಳವಾಗುತ್ತವೆ. ಅಲ್ಲದೇ ಜೋಳ, ತೊಗರಿ, ಸಜ್ಜೆ, ಎಳ್ಳಿನಂತಹ ಬೆಳೆಗಳನ್ನು ಕೊಯ್ಲು ಮಾಡಿದ ನಂತರ ನೆಲದಲ್ಲಿ ಉಳಿಯುವ ಕೂಳೆ(ಕೋಲೆ)ಗಳನ್ನು ಇಡಿಯಾಗಿ ಮೇಲಕ್ಕೆ ಎತ್ತಲು ಸಹಕಾರಿಯಾಗುತ್ತವೆ".[೭] ಎನ್ನಲಾಗಿದೆ.

ಎಡೆ ಕುಂಟೆ ಎರೆಭೂಮಿಯಲ್ಲಿ ಹೆಚ್ಚಾಗಿ ಬಳಕೆ ಮಾಡಲಾಗುತ್ತದೆ. ಉತ್ತರಕರ್ನಾಟಕದಲ್ಲಿ ಸುಮಾರು ವರ್ಷಗಳ ಹಿಂದೆ ಈ ಕುಂಟೆ ಬಳಕೆಯಲ್ಲಿದ್ದು ಅತ್ಯಂತ ನಾಜೂಕಿನ ಕುಂಟೆ ಇದಾಗಿದೆ. ಎರಡು ಎತ್ತಿನ ಸಹಾಯದಿಂದ ಏಕಕಾಲಕ್ಕೆ ಒಂದೇ ನೊಗಕ್ಕೆ ಮೂರು ಕುಂಟೆಗಳನ್ನು ಕಟ್ಟಿ ಕಳೆ ತೆಗೆಯುತ್ತಿದ್ದರು. ಬಯಲು ಸೀಮೆಯಲ್ಲಿ ಎಡೆ ಕುಂಟೆಯ ಬಳಕೆ ಹೆಚ್ಚಾಗಿದೆ. ಸಾಮಾನ್ಯವಾಗಿ ರಾಗಿ ಬಿತ್ತನೆ ಮಾಡಿದ ನಂತರ ಮಂದವಾಗಿ ಬೆಳೆಯುವ ಪೈರುಗಳನ್ನು ತೆಳ್ಳಗೆ ಮಾಡಲು ಚಿಪ್ಪುಕುಂಟೆಯನ್ನು ಬಳಸುತ್ತಾರೆ. ಉತ್ತರ ಕರ್ನಾಟಕದ ರೈತರು ಬಳಸುವ ತರಹದ ಕುಂಟೆ ಇಲ್ಲಿ ಬಳಸುವುದು ಕಡಿಮೆ. ಸಸಿ ಎತ್ತರ ಬೆಳೆದಾಗ ಮಾತ್ರ ಉತ್ತರಕರ್ನಾಟಕದ ರೈತರು ಬಳಸುವಂತಹ ಕುಂಟೆಯನ್ನು ಬಳಸುತ್ತಾರೆ. ಕುಂಟೆ ಬಳಸಿ ಉಳುಮೆ ಮಾಡುತ್ತಾನೆಂದರೆ ಅವನೊಬ್ಬ ಬೇಸಾಯ ಪರಿಣಿತನೆಂದೇ ಹೇಳಬೇಕು. ಏಕೆಂದರೆ ಕುಂಟೆ ಬಳಸುವವನಿಗೆ ಸೂಕ್ಷ್ಮಸಂವೇದನೆ ಇರಬೇಕು ಮೈಯಲ್ಲ ಕಣ್ಣಾಗಿರಬೇಕು. ಎತ್ತುಗಳನ್ನು ಬಲಗೈಯಲ್ಲಿ ನಿಯಂತ್ರಿಸಬೇಕು, ಎಡ ಬಲದ ಚಿಪ್ಪು (ಕುಳ)ಗಳನ್ನು ಬೇಕಾದ ಕಡೆ ಊರಬೇಕು, ಬೇಡವಾದ ಕಡೆ ತೇಲಿಸಬೇಕು. ಎತ್ತುಗಳು ಹಾದಿತಪ್ಪಿದಾಗ ಬಲಗೈಯಲ್ಲಿನ ಮುಳ್ಳುಕಡ್ಡಿಯನ್ನು ಬಳಸಿ ಎತ್ತುಗಳನ್ನು ತಟ್ಟಿಕೊಳ್ಳಬೇಕು. ಇದರ ಜೊತೆ ಪೈರು ಎಲ್ಲಿ ದಟ್ಟವಾಗಿದೆ ಅಲ್ಲಿ ಆಳವಾಗಿ ಕುಂಟೆಯನ್ನು ಒತ್ತಬೇಕು. ಕಳೆ ಇದ್ದಕಡೆಗೆ ಕುಂಟೆಯನ್ನು ಎತ್ತೊಯ್ಯಬೇಕು. ಪೈರು ಇಲ್ಲದಕಡೆ ಕುಂಟೆ ಹೊಡೆಯಬಾರದು. ಇಂತಹ ಅನೇಕ ಸೂಕ್ಷ್ಮ ವಿಚಾರಗಳನ್ನು ಒಂದೇ ಸಮಯದಲ್ಲಿ ಗ್ರಹಿಸುವಂತಹ ಜಾಣ್ಮೆ ರೈತರಲ್ಲಿ ಕಂಡು ಬರುತ್ತದೆ. ಕುಂಟೆ ಹೊಡೆದು ಭೂಮಿಯನ್ನು ಜಳ್ಳು (ಜಾಲರಿಯಂತೆ) ಮಾಡಿದರೆ ಪೈರಿನ ಸಾಲಿಗೆ ಮಣ್ಣುಸೇರಿ, ಪಕ್ಕದ ಸಾಲು ನೀರಿಂಗಿಸಿಕೊಳ್ಳಲು ಸಿದ್ಧವಾಗುತ್ತದೆ. ಆಗ ಪೈರು ಚೆನ್ನಾಗಿ ಬಂದು ಇಳುವರಿ ಹೆಚ್ಚಾಗುತ್ತದೆ.

ಒಂದೊವರೆಯಿಂದ ಎರಡು ಅಡಿ ಉದ್ದದ ಸುಮಾರು ನಾಲ್ಕೂವರೆ ಅಂಗುಲ ದಪ್ಪದ ಮರದ ದಿಮ್ಮಿಗೆ ತಳದಲ್ಲಿ ಎರಡು ನೇರ ಅಥವಾ ಒಳಬಾಗಿದ ಕಬ್ಬಿಣದ ಪಟ್ಟಿಯನ್ನು ಜೋಡಿಸಿರುತ್ತಾರೆ. ಈ ಹಲ್ಲುಗಳು ಭೂಮಿಯನ್ನು ಕೊರೆಯಲು ಅನುಕೂಲವಾಗಿದೆ. ಹತ್ತು ಎತ್ತಿನ ಕುಂಟೆ ಸುಮಾರು ವರ್ಷಗಳ

ಹಿಂದೆ ರೈತ ಸಮೂಹದಲ್ಲಿ ಬಳಕೆಯಲ್ಲಿತ್ತು. ಈ ಕುಂಟೆಯನ್ನು ಜಮೀನು ಹರಗಲು ಹತ್ತು ಎತ್ತು ಹಾಗೂ ಎಂಟು ಜನರು ಏಕಕಾಲಕ್ಕೆ ಉಳುಮೆಮಾಡುತ್ತಿದ್ದರು. ಒಂದು ಬಾರಿ ಇಂತಹ ಕುಂಟೆಯ ಉಳುಮೆ ಮಾಡಿದರೆ ಹತ್ತು ವರ್ಷಗಳವರೆಗೆ ಕುಂಟೆ ಉಳುಮೆ ಮಾಡುವ ಪ್ರಮೇಯವೇ ಬರುತ್ತಿರಲಿಲ್ಲ. ಏಕೆಂದರೆ ಈ ಕುಂಟೆಯ ಉಳುಮೆ ಮಾಡಿದರೆ ಎರಡು ಅಡಿ ಆಳಕ್ಕೆ ಇಳಿದು ಜೇಕು, ಕಳೆ, ಕಸ ಬುಡಮೇಲು ಮಾಡುವುದರ ಜೊತೆಗೆ ಮಣ್ಣನ್ನು ತಳಮೇಲು ಮಾಡುತ್ತಿತ್ತು. ಇಂದು ಈ ಕುಂಟೆ ಮೂಲೆಗುಂಪಾಗಿದೆ. ಇದಕ್ಕೆ ಬಳಸುತ್ತಿದ್ದ ನೊಗಮಾತ್ರ ಕೆಲವು ಮನೆಗಳಲ್ಲಿ ಕಾಣಿಸುತ್ತದೆ. ಇಂದು ನಾಲ್ಕೂ ಎತ್ತಿನ ಕುಂಟೆ ಬಳಕೆಯಲ್ಲಿದೆ. ಶೇಂಗಾ ಹರಗಲು, ಮಡಿಕೆ ಹೊಡೆದ ಹೊಲವನ್ನು ಹರಗಲು ಮಾಗಿಮಾಡಲು ಈ ಕುಂಟೆಯನ್ನು ಉತ್ತರ ಕರ್ನಾಟಕದಲ್ಲಿ ಬಳಸುತ್ತಾರೆ.

ಐದು ಗೇಣಿನ ಕುಂಟೆ ಹೆಚ್ಚು ಭಾರವಲ್ಲದ ಹಾಗೂ ಬೇವಿನ ಕಟ್ಟಿಗೆಯಿಂದ ಮಾಡಿದ ನಾಲ್ಕು ಅಡಿ ಉದ್ದವಿರುವ ಕುಂಟೆಯಾಗಿದೆ. ಬಿತ್ತನೆ ಮಾಡಿದ ನಂತರ ಈ ಕುಂಟೆಯ ಸಹಾಯದಿಂದ ಬೀಜಗಳನ್ನು ಮಣ್ಣಿನಲ್ಲಿ ಮುಚ್ಚಲು ಹಾಗೂ ಕಳೆಗಳನ್ನು ಬೇರುಸಮೇತ ಹೊರಹಾಕಲು ಬಳಸುತ್ತಾರೆ. ಈ ಕುಂಟೆಯ ಅಲಗಿನಲ್ಲಿ ಸಿಕ್ಕಿಹಾಕಿಕೊಂಡಿರುವ ಕಳೆಗಳ ಬೇರುಗಳನ್ನು ಕೀಳಲು ಮೇಲಕ್ಕೆ ಎತ್ತಬೇಕಾಗಿರುವುದರಿಂದ ಇದನ್ನು ಹಗುರವಾಗಿರುವಂತೆ ಮಾಡಿಕೊಂಡಿರುತ್ತಾರೆ. ಇನ್ನು ದಳೆ ಕುಂಟೆ ಬೆಳೆ ಬೆಳೆದ ನಂತರ ಈ ಕುಂಟೆಯ ಹಲ್ಲುಗಳಿಗೆ ಬಳ್ಳಿಯಿಂದ ಸಿಂಬೆಸುತ್ತಿ ಮಧ್ಯದಮಣ್ಣು ಪಕ್ಕದ ಬೆಳೆಗಳ ಬೇರುಗಳಿಗೆ ಬಿದ್ದು ಬೇರುಗಳು ಹೊರಕಾಣದಂತೆ ರಕ್ಷಣೆ ಮಾಡುತ್ತದೆ. ಅಲ್ಲದೇ ಮಳೆಯ ನೀರು ನಿಲ್ಲಲು ಸಹಕಾರಿಯಾಗಿದೆ. ಇದನ್ನು ಈಗಲೂ ಉತ್ತರಕರ್ನಾಟಕದ ಗದಗ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ಬಳಸಲಾಗುತ್ತದೆ. ಬೋದುಗುಂಟೆ ಒಂದೊವರೆ ಅಡಿ ಎತ್ತರ, ಐದು ದಡಿ ಉದ್ದವಿರುವ ಎರಡು ಹಲ್ಲುಗಳನ್ನು ಹೊಂದಿರುತ್ತವೆ. ಜೊತೆಗೆ ಹಲ್ಲುಗಳಲ್ಲಿ ಅಲಗನ್ನು ಜೋಡಿಸಲಾಗಿರುತ್ತದೆ. ಹಬ್ಬು ಶೇಂಗ ಹರಗಿದ ನಂತರ ಬಳ್ಳಿಯಿಂದ ಕಳಚಿಕೊಂಡಿರುವ ಶೇಂಗಾ ಹೆಕ್ಕಲು ಈ ಕುಂಟೆಯನ್ನು ಉಳುಮೆ ಮಾಡುತ್ತಾರೆ. ಒಟ್ಟಾರೆಯಾಗಿ ಕುಂಟೆ ಕೃಷಿ ಚಟುವಟಿಕೆಗಳಲ್ಲಿ ಉತ್ತಮ ಸಲಕರಣೆ.

ಕೂರಿಗಿ ಬೀಜ ಬಿತ್ತನೆ ಮಾಡುವ ಉಪಕರಣ. ಈ ಉಪಕರಣ ಕುರಿತು ತುಂಬ ಗೌರವದ ಭಾವನೆ ಎಲ್ಲಾ ಭಾಗದ ರೈತರಲ್ಲಿದೆ. ಭೂಮಿಯ ವೈವಿಧ್ಯತೆ, ವ್ಯವಸಾಯದ ಕ್ರಮಗಳಲ್ಲಿಯ ಭಿನ್ನತೆಗನುಗುಣವಾಗಿ ಆಕಾರ ವಿನ್ಯಾಸದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸದ ಕೂರಿಗೆಗಳನ್ನು ಬಳಸುತ್ತಾರೆ. ಬೆಂಗಳೂರು, ತುಮಕೂರು, ಚಿತ್ರದುರ್ಗದ ಭಾಗಗಳಲ್ಲಿ ಆರುತಾಳಿನ ಲಳಿಗಿ, ಭತ್ತ ಬಿತ್ತಲು(ಕಟ್ಟಿಗೆ ಲಳಗಿ) ಕಟ್ಟಿನ ಲಳಿಗಿ ಕೂರಿಗೆಗಳನ್ನು ಒರಟು ನೆಲದಲ್ಲಿ ಬಳಸಲು ಉಪಯೋಗಿಸುತ್ತಾರೆ. ಚಿತ್ರದುರ್ಗ ಭಾಗದಲ್ಲಿ ಬಳಸುವ ನೇಗಲ್ಲೂರಿಗೆ ನೇಗಿಲ ಹಿಂಭಾಗಕ್ಕೆ ಸೇರಿಸಿದ ಕೂರಿಗೆಯಾಗಿದ್ದು ಗಡಸುನೆಲಕ್ಕೆ ಉಪಯೋಗವಾಗಿದೆ. ಬಳ್ಳಾರಿಯಲ್ಲಿ ಬಳಸುವ ಆರುತಾಳುಗಳಿರುವ ಕೂರಿಗೆ, ಸುತ್ತಿಗೆ ಹನ್ನೆರಡು ಸಾಲುಗಳ ಬಿತ್ತನೆಯಾಗುತ್ತದೆ. ಹತ್ತಿ, ನವಣೆ, ಬಿತ್ತಲು ಬಳಸುತ್ತಾರೆ. ಬಿಚ್ಚೂರ್ಗಿ ಎಂದು ಕರೆಯುತ್ತಾರೆ. 'ಸೈಜಂತಿ' ನಾಲ್ಕು ತಾಳಿನ ಕೂರಿಗೆಯಾಗಿದ್ದು ಧಾರವಾಡ ಭಾಗದಲ್ಲಿ ಈರುಳ್ಳಿ ಬಿತ್ತನೆಗೆ ಬಳಸುತ್ತಾರೆ. ಹಲಕ್ಕ ಕೂರಿಗೆ ಮೂರು ಗೇಣು, ಮೂರುತಾಳಿನ ಕೂರಿಗೆಯಾಗಿದ್ದು ರಾಯಚೂರು ಭಾಗದಲ್ಲಿ ಹತ್ತಿಕಾಳು ಬಿತ್ತಲು ಬಳಸುತ್ತಾರೆ. ಮುಗ್ಗೂರಿಗೆ ಮೂರುತಾಳಿನ ಕೂರಿಗೆಯಾಗಿದ್ದು ಧಾರವಾಡ ಬೆಂಗಳೂರು, ರಾಯಚೂರು ಜಿಲ್ಲೆಗಳಲ್ಲಿ ಬಳಸುತ್ತಾರೆ.

'ನೊಗ' ಕೃಷಿಯಲ್ಲಿ ಅತ್ಯುಪಯುಕ್ತವಾದ ಸಲಕರಣೆ. ಉತ್ತರ, ದಕ್ಷಿಣ ಕರ್ನಾಟಕ ಭಾಗಗಳಲ್ಲಿ ಎಲ್ಲಾ ಕಡೆಯಲ್ಲಿಯೂ ವೈವಿಧ್ಯತೆಯಿಂದ ಕೂಡಿದ ನೊಗಗಳ ಬಳಕೆ ಕಂಡುಬರುತ್ತದೆ. ಗಾಡಿನೊಗ, ಹರಗುವನೊಗ, ಕೂರಿಗೆನೊಗ, ಹೆಗ್ಗುಂಟೆನೊಗ, ದಂಡೆನೊಗ, ಕಳೆನೊಗ, ಖಂಡಕಿನೊಗ ಅನೇಕ ತರತರಹದ ನೊಗಗಳು ಇರುವುದನ್ನು ಕಾಣುತ್ತೇವೆ. ಕೂರಿಗೆ ನೊಗ ಉತ್ತರ ಕರ್ನಾಟಕದಲ್ಲಿ ಬಹಳ ವರ್ಷಗಳಿಂದ ಬಳಸುವ ನೊಗ ಇವಾಗಿವೆ. ಹರಗುವ ನೊಗಗಳಲ್ಲಿಯೂ ಅನೇಕ ವೈವಿಧ್ಯತೆ ಕಾಣುತ್ತೇವೆ. ಆರಿನೊಗ ತುಮಕೂರು ಭಾಗದಲ್ಲಿ ಕುಂಟೆ, ನೇಗಿಲು, ಗಾಡಿಗೆ ಬಳಸುವ ನೊಗವಾಗಿದೆ. ಕಳೆನೊಗ ಉತ್ತರಕನ್ನಡ ಜಿಲ್ಲೆಗಳಲ್ಲಿ ಎತ್ತುಗಳು ನೊಗದಿಂದ ತಪ್ಪಿಸಿಕೊಳ್ಳದಂತೆ ಅವುಗಳ ಕುತ್ತಿಗೆಗೆ ಹಾಕುವ ಚೌಕಾಕಾರದ ಕಟ್ಟಾಗಿದೆ. ಡಬ್ಬಿನಗಾ ವಿಜಾಪುರದ ಕಡೆ ಒಂದು ಬಗೆಯಲ್ಲಿ ನೊಗದಂತೆ ಕಾರ್ಯನಿರ್ವಹಿಸುವ ಕಟ್ಟಿಗೆಯ ಸಾಧನವಾಗಿದೆ. 'ತೊಲರಿನೊಗ' ಬೀದರ್, ಗುಲ್ಬರ್ಗಾ ಕಡೆಯಲ್ಲಿ ಬಳಸುವ ಹತ್ತು ಗೇಣಿನ ನೊಗವಾಗಿದೆ. ಉತ್ತರ ಕನ್ನಡ ಜಿಲ್ಲೆಗಳಲ್ಲಿ ದಂಡೆನೊಗ ನಾಲ್ಕು ಎತ್ತುಗಳನ್ನು ಕಟ್ಟಬಹುದಾದ ದೊಡ್ಡನೊಗವಾಗಿ ಬಳಸುತ್ತಾರೆ. ದಂಡ್ರನೊಗ ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆಯನ್ನು ಹರಗುವಾಗ ಬಳಸುವ ನೊಗವಾಗಿದೆ. ಹೀಗೆ ಅನೇಕ ಕಡೆಯಲ್ಲಿ ಹಲವಾರು ಹೆಸರುಗಳಿಂದ ಕರೆದು ಬಳಸಲಾಗುತ್ತದೆ. ಆಕಾರ, ವಿನ್ಯಾಸ, ಬಳಕೆಯ ವಿಧಾನ, ಕರೆಯುವ ಹೆಸರುಗಳಲ್ಲಿಯೂ ವೈವಿಧ್ಯತೆ ಗುರುತಿಸಬಹುದಾಗಿದೆ.

'ಕೊರಡು' ಅಥವಾ 'ಡೋಣಿ' ಎಂದು ಕರೆಯುವ ಈ ಉಪಕರಣ ನೆಲಸಮಮಾಡಿ ಸಾಲುಗಳನ್ನು ಮುಚ್ಚಲು ಬಳಸುತ್ತಾರೆ. ಪೊಳ್ಳಾದ, ಅರ್ಧಗೋಲಾಕಾರದಿಂದ ರಚಿತವಾಗಿರುವ ಮರದಕೊರಡು, ಕುಂಟೆಯಿಂದ ಹರಗುವ ಮುನ್ನ ಭೂಮಿಯ ಮೇಲೆ ಹೊಡೆಯುತ್ತಾರೆ. ಬಿತ್ತನೆ ಮುನ್ನಾ ಮತ್ತು ಬಿತ್ತನೆ ನಂತರ, ಹೆಂಟೆಗಳನ್ನು ಒಡೆಯಲು ಬಳಸುತ್ತಾರೆ. ಇನ್ನೂ ಅನೇಕ ಕೃಷಿ ಉಪಕರಣಗಳಲ್ಲಿ ಬಗೆಬಗೆಯ ವೈವಿಧ್ಯತೆಯನ್ನು ಗುರುತಿಸಬಹುದಾಗಿದೆ.

ಸಾಗಾಟದ ಉಪಕರಣವಾದ ಗಾಡಿ, ಕೃಷಿಯಲ್ಲಿ ತುಂಬಾ ಮಹತ್ವದ ಉಪಕರಣ. 'ಬಂಡಿಯಿಲ್ಲದವನ ಬೇಸಾಯ ತಲೆ ಹೋದ ಮುಂಡ...............' ಎಂದು ಸರ್ವಜ್ಞ ಹೇಳುವ ಮಾತು ಗಾಡಿಯ ಮಹತ್ವ ಅವನ್ನು ವಿವರಿಸುತ್ತದೆ. ಹಳೇ ಮೈಸೂರು, ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಬಂಡಿಗೆ ಚಕ್ಕಡಿ ಅಥವಾ ಗಾಡಿ ಎನ್ನುತ್ತಾರೆ. ಕರ್ನಾಟಕದ ಎಲ್ಲಾ ಭಾಗದಲ್ಲೂ ಬಂಡಿ ತಂತ್ರಜ್ಞಾನ ಒಂದೇ ಇದ್ದರೂ ಮೇಲ್ಮೈ ವಿನ್ಯಾಸದಲ್ಲಿ ಸ್ವಲ್ಪ ಬದಲಾವಣೆಯಾಗುತ್ತದೆ, ಬಳಕೆಯಲ್ಲೂ ವ್ಯತ್ಯಾಸವಿರುತ್ತದೆ. ಬಯಲು ಸೀಮೆಯಲ್ಲಿ ಒಂದು ಕಡೆ ತೋಟಗಾರಿಕೆ ಬೆಳೆಗಳನ್ನು ಸಾಗಿಸುವುದಕ್ಕಾಗಿ ಬಳಸಿದರೆ, ಮತ್ತೊಂದೆಡೆ ಬೀಜ, ಗೊಬ್ಬರ, ಮಣ್ಣು ಸಾಗಿಸಲು ಬಳಸುತ್ತಾರೆ. ಉತ್ತರಕರ್ನಾಟಕದಲ್ಲಿ ಹಾರ್ನಳ್ಳಿ ವಿನ್ಯಾಸದ ಗಾಡಿ ಖ್ಯಾತಿ ಪಡೆದರೆ, ಬಯಲುಸೀಮೆ, ಹಳೇ ಮೈಸೂರು ಪ್ರಾಂತ್ಯದಲ್ಲಿ ಗಜಾಂಗಾಡಿ ಹೆಸರುವಾಸಿಯಾಗಿದೆ. ಬೆಂಗಳೂರು, ಮೈಸೂರು, ಚಿತ್ರದುರ್ಗ, ಕೋಲಾರಗಳಲ್ಲಿ, ಉತ್ಸಾಡಿ, ಜೋಡೇತ್ತಿನ ಗಾಡಿ ಬಳಕೆ ಕಂಡುಬರುತ್ತದೆ. ಪಾರಾಗಾಡಿ ಮೈಸೂರು ಭಾಗದಲ್ಲಿ ದವಸ ಧಾನ್ಯ ಸಾಗಿಸಲು ಬಳಸುವ ಬಂಡಿಯಾಗಿದೆ. ಪಾರೆಪಟ್ಟಿ ಗಾಡಿಯಲ್ಲಿ ಗೊಬ್ಬರಸಾಗಿಸಲು ಬಳಸುತ್ತಾರೆ. ಚಿತ್ರದುರ್ಗಭಾಗದಲ್ಲಿ ಕೋಲಾರಿ ಬಂಡಿ, ಧಾರವಾಡದಲ್ಲಿ ಎತ್ತಿನ ಬಂಡಿ, ಕೋಲಾರದಲ್ಲಿ ಉದ್ದಬಂಡಿ, ರಾಯಚೂರು, ಕಲಬುರ್ಗಿ, ಬೀದರ, ವಿಜಾಪುರ ಭಾಗಗಳಲ್ಲಿ ಬಂಡಿ ಎಂದು ಕರೆಯಲಾಗುತ್ತದೆ. ಆಧುನಿಕ ಕೃಷಿಯಲ್ಲಿ ಟೈರ್ ಬಂಡಿಗಳನ್ನು ಬಳಸಲಾಗುತ್ತದೆ. ಟೈರ್ ಸೇರ್ಪಡೆಯಾಗಬೇಕು.

ವ್ಯವಸಾಯಕ್ಕಾಗಿ ಬಳಸುವ ಉಪಕರಣಗಳಲ್ಲಿ ವೈವಿಧ್ಯತೆವಿದ್ದು, ಒಂದೊಂದು ಉಪಕರಣಕ್ಕೂ ತನ್ನದೇ ಆದ ಉಪಯೋಗ ಹಾಗೂ ವೈಶಿಷ್ಟತೆ ಇದೆ. ಇವುಗಳ ಬಳಕೆಯಲ್ಲಿಯೂ ಸಂಪ್ರದಾಯ ನಿಷ್ಠವಾದ ಮನೋಭಾವನೆಯೇ ಪ್ರಧಾನವಾಗಿ ಕಂಡುಬರುತ್ತದೆ. ಉಪಕರಣಗಳಿಗಾಗುವ ಕೆಡಕು ತಮ್ಮ ಬದುಕಿನ ಮೇಲಾದ ಕೆಡಕು ಎಂದೇ ರೈತರು ನಂಬಿರುತ್ತಾರೆ. ನೇಗಿಲು, ನೊಗ, ಕೂರಿಗೆ ಮುರಿದರೆ ಒಳ್ಳೆಯದಲ್ಲ ಎಂದು ತಿಳಿಯಲಾಗುತ್ತದೆ. ಪ್ರತಿಯೊಂದು ಕೆಲಸಕ್ಕೆ ಹೋಗುವ ಮೊದಲು ಕೃಷಿ ಉಪಕರಣಗಳಿಗೂ ನಮಸ್ಕರಿಸುವ ಪದ್ಧತಿ ಸಂಪ್ರದಾಯದಂತೆ ಕಂಡುಬಂದರೂ ಅದು ಒಂದು ಉತ್ತಮ ಸಂಸ್ಕೃತಿಯ ಧ್ಯೋತಕವಾಗಿದೆ ಎಂದು ವಿವೇಚಿಸಬಹುದು.

ಬೇಸಾಯದ ಕ್ರಿಯೆಗಳಲ್ಲಿಯೂ ಅನೇಕ ವೈಶಿಷ್ಟತೆಗಳನ್ನು ಗುರುತಿಸಬಹುದು. ಉತ್ತರಕರ್ನಾಟಕದಲ್ಲಿ ಉಳುಮೆಯು ಅನೇಕ ವೈವಿಧ್ಯತೆಯಿಂದ ಕೂಡಿದೆ. ದಕ್ಷಿಣ ಕರ್ನಾಟಕದ ಬೇಸಾಯ ಕ್ರಮಗಳಲ್ಲಿ ಸಾಕಷ್ಟು ಭಿನ್ನತೆಗಳಿವೆ. ಉತ್ತರಕರ್ನಾಟಕ, ಬಯಲುಸೀಮೆಯ ಕೃಷಿ ಬೇಸಾಯ ಕುರಿತು ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಈ ರೀತಿ ಹೇಳಲಾಗಿದೆ. ನಮ್ಮ ರೈತರು ಭೂಮಿಯನ್ನು ಹಸನು ಮಾಡಲು “ಎಂಟು–ಹತ್ತು–ಹನ್ನೆರಡು ಎತ್ತುಗಳಿಂದ ಹೊಡೆಯುವ ಸಾಮರ್ಥ್ಯವು ತನಗೆ ಇಲ್ಲವಾದರೆ ಆರು ಎತ್ತುಗಳಿಂದ ಅಥವಾ ನಾಲ್ಕು ಎತ್ತುಗಳಿಂದ ನೇಗಿಲವನ್ನು ಹೊಡೆಯಬೇಕು. ಒಂದು ಪಕ್ಷದಲ್ಲಿ ದ್ರವ್ಯ ಶಕ್ತಿಯು ಇಲ್ಲದಾಗಿ ಎಂಟು, ಆರು, ನಾಲ್ಕು ಎತ್ತುಗಳನ್ನು ತೆಗೆದುಕೊಳ್ಳುವ ತ್ರಾಣವು ತನಗೆ ಇಲ್ಲವಾದರೆ ಎರಡು ಎತ್ತುಗಳಿಂದ ಹೊಡೆಯಬೇಕು. ಎರಡು ಎತ್ತಿನ ಮಡಿಕೆಯನ್ನು ಕಟ್ಟಬೇಕಾದರೆ ಎರಡೇ ಎತ್ತುಗಳಾದರೂ ತ್ರಾಣವುಳ್ಳವಾಗಿರಬೇಕು. ಮಡಿಕೆಯು ಮತ್ತು ಅದರ ಈಸು ಬಹಳ ಬಾಗಿನ ಮೇಲೆ ಅನುಲಾಗಿ ಎತ್ತುಗಳಿಗೆ ಜಡವಾಗದೆ ಇದ್ದು ಮುಂಜವು ಹದನಾಗಿ ಬಲತ್ಕಾರವಾಗಿರಬೇಕು. ಆ ಸಣ್ಣ ನೇಗಿಲನ್ನು ಹೊಡೆಯುವವನು ಜಾಗ್ರತನಾಗಿ ನಡುವೆ ಗಟ್ಟಿ ನೆಲವನ್ನು ಉಳಿಸದಂತೆ ಸಾಲಿನೊಂದಿಗೆ ಸಾಲು ಓಡಿದು ಹತ್ತೆಯಾಗಿ ಹೆಳ್ಳಿ ಕೀಳುವ ಹಾಗೆ ಎರಡು ಸಾಲು ಅಥವಾ ಮೂರು ಸಾಲು ಮಡಿಕೆ ಹೊಡೆದು ತದನಂತರ ಆ ಹೆಳ್ಳಿಗಳು ಬಿಸಿಲು ತಿಂದು ಹೊಡೆಯುವ ಹದಕ್ಕೆ ಬಂದಾಗಲೆ ಕುಂಟಿಯ ಕಟ್ಟಿ ಮೂರು ಸಾಲು ಚೆನ್ನಾಗಿ ಹರಗಬೇಕು...........”.[೮] ಎನ್ನುತ್ತಾರೆ.

ಮಲೆನಾಡಿನ ಭಾಗಗಳಲ್ಲಿ ಬೇಸಾಯದ ಆರಂಭವನ್ನು ಶಕ್ಕುದಾರ ಕಟ್ಟುವುದು ಎನ್ನುತ್ತಾರೆ. ಶಕುನ ನೋಡಿ ಕಟ್ಟುವುದು ಎಂದು ಇದರ ಅರ್ಥ. ಯುಗಾದಿಯ ನಂತರ ಒಂದು ಒಳ್ಳೆಯ ದಿನ ನೇಗಿಲು ಕಟ್ಟಿ ಹೊಡೆಯುತ್ತಾರೆ. ಮುಂಗಾರು ಮಳೆ ಸುರಿಯುವುದಕ್ಕೆ ಮೊದಲು ಆರು ಕಟ್ಟಿ 'ಅಗೋಡಿ ಬಿತ್ತನೆ ಗದ್ದೆ'ಗಳ ತಯಾರಿಗಾಗಿ ಉಳುಮೆ ಮಾಡುತ್ತಾರೆ. ಇದನ್ನು 'ಮಾಗಿಹೂಟಿ' ಎಂದು ಕರೆಯುತ್ತಾರೆ. ಅನುಕೂಲ ಇದ್ದವರು ಎರಡು ಉಕ್ಕೆಯಾದ ಗದ್ದೆಗಳಿಗೆ ಮುಂಗಾರು ಬೆಳೆಯಾಗಿ ಹೆಸರು, ಎಳ್ಳು, ಅವರೆ, ಹರಳು ಮುಂತಾದವುಗಳನ್ನು ಹಾಕುತ್ತಾರೆ. ಭತ್ತನಾಟಿ ಮೊದಲೇ ಇವು ಕೊಯ್ಲಿಗೆ ಬರುತ್ತವೆ. 'ಮಲೆನಾಡ ವೈಷ್ಣವ ಒಕ್ಕಲಿಗರ ಸಂಸ್ಕೃತಿ' ಕೃತಿಯಲ್ಲಿ ಡಾ.ಅಂಬಳಿಕೆ ಹಿರಿಯಣ್ಣರವರು ಹೀಗೆ ಮಲೆನಾಡ ಉಳುಮೆಯ ಕ್ರಮವನ್ನು ತಿಳಿಸುತ್ತಾ. “ಅಗೆ ಹಾಕುವ ಗದ್ದೆಗಳನ್ನು ಅಗೋಡಿ ಎಂದು ಕರೆಯುತ್ತಾರೆ. ಎರಡು ಮೂರು ಬಾರಿ ಉತ್ತು (ಒಂದು ಸಲ ಉದ್ದುದ್ದ ಉಳುಮೆ ಮಾಡಿದರೆ ಮತ್ತೊಂದು ಸಲ ಅಡ್ಡಡ್ಡ ಉಳುಮೆ ಮಾಡುತ್ತಾರೆ. ಹೀಗೆ ಮಾಡುವುದರಿಂದ ಮಣ್ಣು ಚೆನ್ನಾಗಿ ಪುಡಿಯಾಗುತ್ತದೆ. ಇದು ಮೊಳಕೆ ಮೇಲೆ ಬರಲು ಸಹಾಯಕ.) ಮಣ್ಣು ಪುಡಿಯಾಗುವಂತೆ ತೇವ ಆರಿ ಹೋಗದಂತೆ 'ಕೊರಡು'

ಹೊಡೆದಿಟ್ಟು ಬೀಜ ಹಾಕುವ ಕಾಲ ಸನ್ನಿಹಿತವಾದಾಗ ಎಕರೆಗೆ ಆರು ಗಾಡಿ ಗೊಬ್ಬರದಂತೆ 'ಅಗೋಡಿ ಮತ್ತು ಬಿತ್ತನೆ ಗದ್ದೆಗಳಿಗೆ ಗೊಬ್ಬರ ಸಾಗಿಸಿ ಅದನ್ನು ಚೆಲ್ಲಿಸುತ್ತಾರೆ. ಅಂಚು ಕೆತ್ತವುದು, ಹೆಂಟೆ ಹೊಡೆಯುವುದು, ಕಸಕಡ್ಡಿಗಳನ್ನು ಹೆರಕುವುದು ಬೇಲಿ ಕಟ್ಟುವುದು ಇತ್ಯಾದಿ ಪ್ರಾಥಮಿಕ ಕೆಲಸಕಾರ್ಯಗಳಾದ ಮೇಲೆ ಗೊಬ್ಬರ ಮಣ್ಣಿನಲ್ಲಿ ಕತ್ತಿ ಹೋಗುವಂತೆ ಒಂದೊ ಎರಡೊ ಉಕ್ಕೆ ಉಳುಮೆ ಮಾಡಿ ಕೊರಡು ಹೊಡೆದು ಇಡುತ್ತಾರೆ".[೯] ಎನ್ನಲಾಗಿದೆ. ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಭೌಗೋಳಿಕ ಸನ್ನಿವೇಶ, ಹವಾಮಾನ, ಮಳೆಯ ಆಶ್ರಯ, ನೀರಾವರಿಯ ಅಂಶಗಳು, ಬೆಳೆ ಬೆಳೆಯುವ ಪದ್ಧತಿಗಳು. ಉಳುಮೆಯಲ್ಲಿ ಅನೇಕ ವೈಶಿಷ್ಟ್ಯತೆಗಳು ಉಂಟಾಗಲು ಕಾರಣವಾಗಿವೆ.

ಕೃಷಿ ಬಳಕೆ ಪ್ರಾಣಿಗಳಲ್ಲಿ ಅನೇಕ ವೈವಿಧ್ಯತೆಯ ತಳಿಗಳನ್ನು ಕಾಣುತ್ತೇವೆ. ಪ್ರಾದೇಶಿಕ ಭಿನ್ನತೆಯ ಹಿನ್ನೆಲೆಯಲ್ಲಿ ಕೆಲವನ್ನು ಇಲ್ಲಿ ಪರಿಚಯಿಸಲಾಗಿದೆ. ದಕ್ಷಿಣ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಂಡುಬರುವ ಗೋತಳಿಗಳಲ್ಲಿ 'ಹಳ್ಳಿಕಾರ್' ತಳಿಯು ತುಂಬಾ ಉತ್ತಮ ತಳಿಯಾಗಿದೆ. ಮೂಡ್ಲಿ ತಳಿ ಮತ್ತು ಮೂಡಲ ಜಾತಿ ತಳಿ ಎಂದು ಗುರುತಿಸುತ್ತಾರೆ. ಕರ್ನಾಟಕದ ಪೂರ್ವ ಭಾಗದ ಜಿಲ್ಲೆಗಳು ಈ ತಳಿಯ ಉಗಮ ಸ್ಥಳವಾಗಿವೆ. ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು, ತುಮಕೂರು, ಹಾಸನ, ಚಿತ್ರದುರ್ಗ ಜಿಲ್ಲೆಯಲ್ಲಿ ಈ ತಳಿಯ ಜಾನುವಾರುಗಳು ಕಂಡುಬರುತ್ತವೆ. ಬೂದು ಬಣ್ಣ ಹೊಂದಿರುವ ಇವು ಮೈಮೇಲೆ ಪ್ರತಿಯೊಂದು ಕರಿಕೂದಲಿಗೆ ಒಂದು ಬಿಳಿ ಕೂದಲು ಹೊಂದಿರುತ್ತವೆ. ಚಿಗುರಿಯಂತೆ ಚೂಟಿಯಾಗಿರುತ್ತವೆ. ಇವು ದುಡಿಯುವ ದನಗಳಾಗಿದ್ದು, ಕರ್ನಾಟಕ ಮಣ್ಣಿನ ಮುತ್ತಿನ ತಳಿಯಾಗಿವೆ. 'ಜಾನುವಾರು' ಎಂಬ ಕೃತಿಯಲ್ಲಿ ಡಾ.ಎಂ. ನಾರಾಯಣಸ್ವಾಮಿಯವರು ಈ ತಳಿಯನ್ನು ಕುರಿತು ಹೀಗೆ ವಿವರಿಸುತ್ತಾರೆ."..........ಕೃಷಿಕರು ಇವನ್ನು ಹಳ್ಳಿಕಾರ್ ಪಡ್ಡೆ, ಹಳ್ಳಿಕಾರ್ ಹೋರಿ, ಹಳ್ಳಿಕಾರ್ ಹಸು ಕೂಡಾ ದುಡಿಮೆಯ ದನ. ಹೊಲದ ಕೆಲಸ, ಕಣದ ಕೆಲಸ, ಗಾಡಿಯ ಕೆಲಸ, ಭಾರ ಎಳೆಯುವ ಕೆಲಸಗಳಲ್ಲಿ ಇವುಗಳ ಸಾಧನೆ ಹೆಚ್ಚು. ದುಡಿಮೆಯಲ್ಲಿ ಇದೊಂದು ಛಲದ ತಳಿ. ಸಣ್ಣ ರೈತರ ಕೃಷಿ ಚಟುವಟಿಕೆಗಳಿಗೆ ನೆರವಾಗುತ್ತಿರುವ ಜತೆಗಾರ ತಳಿಗಳಿವು....."[೧೦]ಎನ್ನಲಾಗಿದೆ.

'ಅಮೃತ ಮಹಲ್' ತಳಿಯು ಮೈಸೂರು ಅರಸರ ಬೆಣ್ಣೆಚಾವಡಿಯ ತಳಿಯಾಗಿದ್ದು, ಇವಕ್ಕೆ ಟಿಪ್ಪು ಸುಲ್ತಾನ 'ಅಮೃತ ಮಹಲ್' ಎಂದು ನಾಮಕರಣ ಮಾಡಿದನು. ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮೈಸೂರು, ತುಮಕೂರು, ಬೆಂಗಳೂರು, ಕೋಲಾರ, ಬಳ್ಳಾರಿ, ರಾಯಚೂರು, ಗದಗ, ಧಾರವಾಡ ಮತ್ತು ಹುಬ್ಬಳ್ಳಿ ಕಡೆಯಲ್ಲಿ ಹೆಚ್ಚು ಬಳಕೆಯಲ್ಲಿವೆ. ಸಾಮಾನ್ಯವಾಗಿ ಬಿಳಿ, ಬೂದು, ಕಪ್ಪು ಬಣ್ಣದ ದನಗಳು, ಹಳ್ಳಿಕಾರ್ ತಳಿಗಿಂತ ದೊಡ್ಡವು ಕೊಂಬುಗಳು, ಮೈಕಟ್ಟು, ಗಂಗೆದೊಗಲು ದೊಡ್ಡವು. ಹೆಚ್ಚಿನ ಭಾರವಾದ ಎತ್ತಿನ ಬಂಡಿಯನ್ನು ಬಹುದೂರದ ಸ್ಥಳಗಳಿಗೆ ಕೊಂಡೊಯ್ಯಲು ಉಪಯುಕ್ತ ದುಡಿಮೆಯ ದನಗಳು. ಈ ಎತ್ತುಗಳು ಅತ್ಯಂತ ಶ್ರಮಜೀವಿಗಳು. ಇವುಗಳನ್ನು ಕುರಿತಾದ ವಿವರವಾದ ಮಾಹಿತಿ 'ಜಾನುವಾರು ' ಕೃತಿಯಲ್ಲಿ ದೊರೆಯುತ್ತದೆ.

ಕೃಷ್ಣಾತೀರದ ತಳಿ ಇದು ಕರ್ನಾಟಕದಲ್ಲಿ ಹರಿಯುವ ಕೃಷ್ಣನದಿ ಪಾತ್ರ, ಮಲಪ್ರಭಾ ಮತ್ತು ಘಟಪ್ರಭಾ ನದಿಗಳ ಕಪ್ಪು ಜಿಗುಟು ಮಣ್ಣಿನ ಪ್ರದೇಶ ಇವುಗಳ ಉಗಮ ಸ್ಥಳವಾಗಿದೆ. ಬೆಳಗಾವಿ, ಬಿಜಾಪುರ, ಬಾಗಲಕೋಟ, ರಾಯಚೂರು, ಧಾರವಾಡ ಜಿಲ್ಲೆ ಮತ್ತು ಮಹಾರಾಷ್ಟ್ರ ಆಂಧ್ರಪ್ರದೇಶದ ಕೆಲವು ಭಾಗಗಳಲ್ಲಿ ಕಂಡುಬರುತ್ತವೆ. ಮೈಬಣ್ಣ ಬೂದು, ಕಂದು, ಕಪ್ಪು ಅಥವಾ ಬಿಳಿಯಾಗಿರುತ್ತವೆ.

ದೊಡ್ಡ ಗಾತ್ರದ ಮೈಹೊಂದಿದ್ದು ಮುಂಗಾಲು ಮತ್ತು ಹಿಂಗಾಲುಗಳ ಹೊದಿಕೆಯ ಬಣ್ಣ ಕಪ್ಪು. ಗಂಗೆಯ ತೊಗಲು ಹೊಂದಿದ್ದು ಕಿವಿಗಳು ಚಿಕ್ಕವು ಮತ್ತು ತುದಿ ಚೂಪು, ದೇಹದ ಉದ್ದ ಚಿಕ್ಕದ್ದಾಗಿರುತ್ತವೆ. 'ಜಾನುವಾರು' ಕೃತಿಯಲ್ಲಿ ಡಾ. ಎಂ. ನಾರಾಯಣಸ್ವಾಮಿಯವರು ಈ ತಳಿಯನ್ನು ಕುರಿತು ಹೀಗೆ ಹೇಳುತ್ತಾರೆ."ಕೃಷಿಗಾಗಿ ಬಳಸುವ ದುಡಿಮೆಯ ತಳಿ ಇದು. ಜೊತೆಗೆ ಸಾಕಷ್ಟು ಹಾಲನ್ನು ಕೊಡುತ್ತವೆ. ಬಿಗಿದುಕೊಂಡಿರುವ ಕಪ್ಪು ಮಣ್ಣಿನ ಉಳುಮೆ ಕೆಲಸದಲ್ಲಿ ಗೇಯುವ ಕಷ್ಟ ಸಹಿಷ್ಣು ದನಗಳಿವು. ಹೆಚ್ಚಿನ ಭಾರವನ್ನು ಎಳೆಯುತ್ತವೆ. ಗಿರ್ ಮತ್ತು ಒಂಗೋಲ್ ತಳಿಯ ಗುಣಗಳು ಕೃಷ್ಣಾತೀರ ತಳಿಯಲ್ಲಿ ಸಮ್ಮಿಶ್ರಣಗೊಂಡಿರುವುದರಿಂದ ಕೃಷಿಕರ ಮನೆಗೆ ಸಾಕಷ್ಟು ಹಾಲನ್ನು ಕರೆಯುತ್ತವೆ".[೧೧] ಎನ್ನಲಾಗಿದೆ.

ದೇವಣಿ ತಳಿ ಅಥವಾ ದೇವನಿ ತಳಿಯ ಉಗಮ ಸ್ಥಳ ಮಹಾರಾಷ್ಟ್ರದ ಉದಗೀರ್ ತಾಲೂಕಿನ ದೇವಣಿ ಎಂಬ ಗ್ರಾಮ. ಕರ್ನಾಟಕದ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಈ ತಳಿಯು ಬಳಕೆಯಲ್ಲಿದೆ. ಬಿಳಿಯ ಬಣ್ಣದಲ್ಲಿ ಕಪ್ಪು ಚುಕ್ಕೆಗಳು, ಇದರ ಮೈ ಸಂಪೂರ್ಣ ಬಿಳಿ ಬಣ್ಣದಿಂದ ಕೂಡಿರುತ್ತವೆ. ಮತ್ತು ಮುಖ ಕಪ್ಪಾಗಿರುತ್ತವೆ. ದುಡಿಯುವ ತಳಿಗಳಿವೆ. ಹಾಲು ಕೊಡುವ ತಳಿಯೂ ಹೌದು. ಬೀದರ್‌ನ ಕಲ್ಲುಭೂಮಿಯನ್ನು ಹಾಗೂ ಜಿಗುಟು ಮಣ್ಣಿನಲ್ಲಿ ಉಳುಮೆ ಮಾಡಲು ಶಕ್ತವಾಗಿರುವ ತಳಿಗಳಾಗಿವೆಯೆಂದು 'ಜಾನುವಾರು' ಕೃತಿಯಲ್ಲಿ ಹೇಳಲಾಗಿದೆ.

ಮಲೆನಾಡ ಗಿಡ್ಡ ತಳಿಯು ಕರ್ನಾಟಕದ ಮಲೆನಾಡು ಪ್ರದೇಶದ ಜಿಲ್ಲೆಗಳಾದ ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಕೊಡಗು, ಹಾವೇರಿ, ದಾವಣಗೇರಿ, ಚಿಕ್ಕಮಗಳೂರು ಜಿಲ್ಲೆಯ ಭಾಗಗಳಲ್ಲಿ ಕಂಡುಬರುತ್ತವೆ. ಕಪ್ಪು, ಕಂದು, ಕೆಂಪು, ಬಿಳಿ, ಮತ್ತು ಇವುಗಳ ಮಿಶ್ರಬಣ್ಣಗಳಲ್ಲಿ ಈ ತಳಿಗಳ ಮೈಬಣ್ಣವಿರುತ್ತವೆ. ಸಣ್ಣಗಾತ್ರದ ದೇಹ ಹೊಂದಿರುತ್ತವೆ. ಹೆಚ್ಚು ರೋಗನಿರೋಧಕ ಶಕ್ತಿ ಹೊಂದಿವೆ. ದುಡಿಮೆಗೆ ಹೆಸರಾದ ತಳಿಯಾಗಿದ್ದು ಎರಡು, ಮೂರು ಲೀಟರ್ ಹಾಲು ಕರೆಯುತ್ತವೆ. ವಿಶೇಷವಾಗಿ "ತಲೆತಲಾಂತರದಿಂದ ಮಲೆನಾಡಿನ ಸಣ್ಣ ಹಿಡುವಳಿದಾರರ ಭೂಮಿಯನ್ನು ಉಳಲು ಬಳಸಿ ಸುಸ್ಥಿರ ಕೃಷಿಗೆ ಕಾರಣವಾದ ತಳಿ. ಇವುಗಳ ನಿರ್ವಹಣೆ ತುಂಬಾ ಸುಲಭ. ಕೊಡಬೇಕಾದ ಆಹಾರ ಕಡಿಮೆ. ರೈತರ ಸಮುದಾಯಕ್ಕೆ ಮಲೆನಾಡಿನ ನಿಸರ್ಗ ಒದಗಿಸಿಕೊಟ್ಟ ತಳಿಯೇನೋ ಇದು ಎಂದರೂ ತಪ್ಪಾಗಲಾರದು".[೧೨] ಎಂದು ಡಾ.ಎಂ.ನಾರಾಯಣಸ್ವಾಮಿಯವರು ತಮ್ಮ ಕೃತಿಯಲ್ಲಿ ಅಭಿಪ್ರಾಯ ಪಡುತ್ತಾರೆ.

ಜವಾರಿ ತಳಿ ಉತ್ತರಕರ್ನಾಟಕದ ಜಿಲ್ಲೆಗಳಾದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಿಜಾಪುರ, ಬಾಗಲಕೋಟ, ಗದಗ, ಹಾವೇರಿ, ಬೆಳಗಾವಿ ಮತ್ತು ಧಾರವಾಡಗಳಲ್ಲಿ ಇವುಗಳ ಉಗಮಸ್ಥಳಗಳು. ಇವುಗಳನ್ನು ಗುಲ್ಬರ್ಗದ 'ಜೇವರ್ಗಿಯ ಜವಾರಿ ತಳಿ'ಯೆಂದು ಕರೆಯಲಾಗುತ್ತದೆ. ಮೈಬಣ್ಣ ಕೆಂಪು, ಕಪ್ಪು, ಬೂದು ಇಲ್ಲವೇ ಮಿಶ್ರಣ. ಸಣ್ಣಗಾತ್ರದ ದನಗಳು. ರೋಗನಿರೋಧಕ ಶಕ್ತಿ ಅಧಿಕ ವಾತಾವರಣದ ವೈಪರೀತ್ಯಗಳಿಗೆ ಹೊಂದಿಕೊಳ್ಳುವಂತಹ ದನಗಳು. ಇವುಗಳ ಕೊಂಬು ಚಿಕ್ಕದು, ಕಾಲುಗಳು ಶಕ್ತಿಯುತವಾಗಿರುತ್ತವೆ.

ಪ್ರಾದೇಶಿಕತೆಗಳ ಹಿನ್ನಲೆಯಲ್ಲಿ ಆಯಾ ಭಾಗ, ಜಿಲ್ಲೆಗಳಲ್ಲಿ ಹುಟ್ಟಿ ಬೆಳೆದ ದೇಶೀ ತಳಿಗಳನ್ನು ಕೃಷಿಯಲ್ಲಿ ಬಳಸಿಕೊಳ್ಳುವುದನ್ನು, ಅಂತಹ ತಳಿಗಳಲ್ಲಿ ಭಿನ್ನತೆಗಳಿದ್ದರೂ ಕೃಷಿಭೂಮಿ, ಉಳುಮೆಯ ಉಪಕರಣ, ಬೇಸಾಯದ ಕ್ರಮದ ಹಿನ್ನಲೆಯಲ್ಲಿ ಆಯಾ ಭಾಗಗಳಲ್ಲಿ ಅವು ಪ್ರಸಿದ್ಧಿ ಪಡೆದವುಗಳಾಗಿವೆ ಎನ್ನಬಹುದು.

ಬೆಳೆಗಳನ್ನು ಬೆಳೆಯಲು ಕರ್ನಾಟಕ ರಾಜ್ಯದ ಹವಾಗುಣ ಹಿತಕಾರವಾಗಿದೆ. ಅದರಿಂದ ಹಲವಾರು ಬೆಳೆಗಳನ್ನು ಬೆಳೆಯುತ್ತಾರೆ. ಇಲ್ಲಿಯ ಬೆಳೆಗಳಷ್ಟು ವೈವಿಧ್ಯತೆ ಬೇರೆ ಯಾವ ರಾಜ್ಯಗಳಲ್ಲಿಯೂ ಕಂಡುಬರುವುದಿಲ್ಲ. ಧಾನ್ಯಗಳಾದ ಜೋಳ, ರಾಗಿ, ಭತ್ತ, ಮುಸುಕಿನ ಜೋಳ, ಸಜ್ಜೆ, ಗೋಧಿ, ಬಾರ್ಲಿ, ಸಾವೆ, ನವಣೆ, ಹಾರಕ; ದ್ವಿದಳ ಬೆಳೆಗಳಲ್ಲಿ ತೊಗರಿ, ಅಲಸಂದಿ, ಹೆಸರು, ಉದ್ದು, ಅವರೆ, ಈರುಳ್ಳಿ, ಕಡಲೆ; ಎಣ್ಣೆ ಬೆಳೆಗಳಲ್ಲಿ ನೆಲಗಡಲೆ, ಕುಸುಬೆ, ಎಳ್ಳು, ಹುಚ್ಚೆಳ್ಳು, ಹರಳು, ಅಗಸೆ; ನಾರು ಬೆಳೆಗಳಲ್ಲಿ ಹತ್ತಿ, ಪುಂಡಿ; ಸಾಂಬಾರು ಬೆಳೆಗಳಲ್ಲಿ ಮೆಣಸಿನಕಾಯಿ, ಸಾಸಿವೆ, ಕೊತ್ತೊಂಬರಿ, ಜೀರಿಗಿ, ಈರುಳ್ಳಿ, ಬೆಳ್ಳೊಳ್ಳಿ ಹೀಗೆ ಅನೇಕ ಬೆಳೆಗಳು ರಾಜ್ಯದ ಅನೇಕ ಭಾಗಗಳಲ್ಲಿ ಬೆಳೆಯುತ್ತವೆ. ಇದೇ ರೀತಿ ಕಾಫಿ, ಟೀ, ಏಲಕ್ಕಿ, ಗೋಡಂಬಿ, ವೀಳೆದೆಲೆ, ಕೋಕೋ ತೆಂಗು, ಅಡಿಕೆ, ಮೆಣಸು, ಇಂತಹ ತೋಟದ ಬೆಳೆಗಳಲ್ಲದೆ ಮಾವು, ಸಪೋಟ, ಬಾಳೆ, ಹಲಸು, ದಾಳಿಂಬೆ, ನಿಂಬೆ, ಅಂಜೂರ್, ಸೀತಾಫಲ, ಕಲ್ಲಂಗಡಿ, ಕರಬೂಜ ಇಂಥ ಹಣ್ಣಿನ ಬೆಳೆಗಳು ಹವಾಮಾನ ಹಾಗೂ ನೀರಾವರಿ ಅನುಕೂಲವಿರುವೆಡೆ ಬೆಳೆಯುತ್ತಾರೆ. ಇನ್ನೂ ಹಲವಾರು ತರಕಾರಿ ಬೆಳೆಗಳು ಹೂವಿನ ಗಿಡಗಳು, ಬೆಳೆಯಲಾಗುತ್ತದೆ.

ಸಮಗ್ರ ಕರ್ನಾಟಕವನ್ನು ವ್ಯವಸಾಯದ ವೈವಿಧ್ಯತೆಯ ಆಧಾರದ ಮೇಲೆ ಹಲವಾರು ವಿಭಾಗಗಳಾಗಿ ಮಾಡಬಹುದಾಗಿದೆ. ಆದರೆ ಈ ಅಧ್ಯಯನದ ಸಂದರ್ಭದಲ್ಲಿ ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಭಾಗಗಳೆಂದು ಗುರುತಿಸಿಕೊಂಡು ಬೆಳೆಗಳನ್ನು ಕುರಿತು ಚರ್ಚಿಸಲಾಗಿದೆ.

ದಕ್ಷಿಣ ಕರ್ನಾಟಕದ ಭಾಗಗಳು ಯಾವುವೆಂದರೆ ಕರಾವಳಿ ಭಾಗಗಳಲ್ಲಿ ಬರುವ ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳು ಬರುತ್ತವೆ. ಇಲ್ಲಿ ಒಂದು ಕಡೆ ಎತ್ತರವಾದ ಪಶ್ಚಿಮ ಘಟ್ಟಗಳು, ಇನ್ನೊಂದು ಕಡೆ ಸಮುದ್ರ ಬರುತ್ತದೆ. ಅನೇಕ ನದಿ ತೊರೆಗಳು ಹರಿಯುತ್ತವೆ. ಬಹುಪಾಲು ಮಳೆ ಬೀಳುವ ಈ ಭಾಗ ಮೆಕ್ಕಲುಮಣ್ಣು ಹೊಂದಿದ್ದು ಇಲ್ಲಿ ಮುಖ್ಯ ಬೆಳೆ ಭತ್ತವಾಗಿದ್ದು ಇದರ ಜೊತೆಗೆ ಹುರುಳಿ, ಹೆಸರು, ಉದ್ದು, ಅಲಸಂದಿ ಮತ್ತು ಮೆಣಸಿನಕಾಯಿ, ಶುಂಠಿ, ಹಾಗೂ ಆಲೂಗಡ್ಡೆ, ಮೆಣಸು ಬೆಳೆಯಲಾಗುತ್ತದೆ. ಮಾವು, ನಿಂಬೆ, ತೆಂಗು, ಅಡಿಕೆ, ಇಲ್ಲಿಯ ಪ್ರಧಾನ ತೋಟದ ಬೆಳೆಗಳು. ಗೋಡಂಬಿಯ ಬೇಸಾಯ ಮಾಡಲಾಗುತ್ತದೆ. ಪೂರ್ವ ಹಾಗೂ ಪಶ್ಚಿಮ ಘಟ್ಟಗಳ ಇಳಿಜಾರುಗಳಲ್ಲಿಯ ಕಾಡುಗಳಲ್ಲಿ ಕೊಡಗು ಜಿಲ್ಲೆ ಹಾಗೂ ಚಿಕ್ಕ ಮಗಳೂರು, ಶಿವಮೊಗ್ಗ, ಹಾಸನ, ಧಾರವಾಡ, ಬೆಳಗಾವಿ ಜಿಲ್ಲೆಗಳ ಪಶ್ಚಿಮ ಭಾಗ ದಕ್ಷಿಣಕನ್ನಡ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳ ಪೂರ್ವಭಾಗ ಬೆಟ್ಟಗಳ ಭಾಗವಾಗಿದ್ದು, ಮಳೆ ಹೇರಳವಾಗಿ ಬೀಳುತ್ತದೆ. ಇಲ್ಲಿನ ಮಣ್ಣು ಲ್ಯಾಟರೈಟ್ (ಫಲವತ್ತಾದದ್ದು) ಬಗೆಯದು. ಇಲ್ಲಿಯೂ ಕೂಡ ಭತ್ತವೇ ಪ್ರಧಾನ ಬೆಳೆ. ಕಬ್ಬು, ಜೋಳ, ರಾಗಿ, ಅಕ್ಕಿ, ಶೇಂಗಾ, ಉಣ್ಣೆ ಬೀಜಗಳನ್ನು ಬೆಳೆಯಲಾಗುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ತೆಂಗು ಮತ್ತು ಅಡಿಕೆ ಹಾಗೂ ಕೊಡಗು, ಹಾಸನ, ಚಿಕ್ಕಮಗಳೂರಿನಲ್ಲಿ ಕಾಫಿ ತೋಟ, ಚಹಾ ಮತ್ತು ಕಿತ್ತಳೆ ಬೆಳೆ ಬೆಳೆಯಲಾಗುತ್ತದೆ.

ರಾಜ್ಯದ ದಕ್ಷಿಣ ಭಾಗದಲ್ಲಿಯ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯ ಪೂರ್ವ ಭಾಗ ಹಾಸನ, ಮೈಸೂರು, ಚಾಮರಾಜನಗರ ಜಿಲ್ಲೆಯ ಕೆಲವು ಭಾಗಗಳು ಮರಳು ಮಿಶ್ರಿತ ಮಣ್ಣಿನ ಭೂಮಿಗಳಿದ್ದು, ಇಲ್ಲಿ ರಾಗಿಯನ್ನು ಬೆಳೆಯುತ್ತಾರೆ. ಉಳಿದಂತೆ ತಗ್ಗು ಪ್ರದೇಶಗಳಲ್ಲಿ ಭತ್ತ ಬೆಳಯುತ್ತಾರೆ. ಕೆಲವು ಜಿಲ್ಲೆಗಳ ಪೂರ್ವಭಾಗ ಮಧ್ಯಭಾಗ ಒಣಹವೆಯ ಪ್ರದೇಶವಾಗಿದ್ದು ಚಿಕ್ಕಮಗಳೂರು, ಹಾಸನ, ತುಮಕೂರು, ಮಂಡ್ಯ ಜಿಲ್ಲೆಯ ಪ್ರದೇಶಗಳಲ್ಲಿ ಮಳೆಯ ಅಭಾವವಿದ್ದು ನೀರಾವರಿ ಕಾಲುವೆಯಲ್ಲಿ ಭತ್ತ, ಕಬ್ಬು ಬೆಳೆದರೆ ಮಳೆಯ ಆಶ್ರಯದಲ್ಲಿ ರಾಗಿ, ಹುರುಳಿ, ಹರಳು ಬೆಳೆಯುತ್ತಾರೆ. ಇಲ್ಲಿ ತೆಂಗು ಮತ್ತು

ಅಡಿಕೆಯನ್ನು ಕಾಣಬಹುದು. ಕೋಲಾರ, ಬೆಂಗಳೂರು, ತುಮಕೂರು ಮತ್ತು ಮಂಡ್ಯ ಜಿಲ್ಲೆಯ ಆಗ್ನೇಯ ದಿಕ್ಕಿನಲ್ಲಿ ಬರುವ ಪ್ರದೇಶಗಳು ಒಣಹವೆಯನ್ನು ಹೊಂದಿದ್ದು, ಕೆಂಪು ಗೋಡು ಮಣ್ಣು ಹೊಂದಿದ್ದು, ರಾಗಿ ಇಲ್ಲಿಯ ಮುಖ್ಯ ಬೆಳೆಯಾಗಿದೆ. ಕೆರೆ ನೀರಾವರಿ ಸೌಲಭ್ಯವಿರುವೆಡೆಯಲ್ಲಿ ಭತ್ತ, ಅಡಿಕೆಯನ್ನು ಬೆಳೆಯುತ್ತಾರೆ. ತರಕಾರಿ ಹಾಗೂ ಹಣ್ಣಿನ ಗಿಡಗಳನ್ನು ಗಣನೀಯ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ.

ಉತ್ತರ ಕರ್ನಾಟಕ ಜಿಲ್ಲೆಗಳಾದ ಧಾರವಾಡ ಮತ್ತು ಬೆಳಗಾವಿಯ ಬೆಟ್ಟಗಳ ವಿಭಾಗದ ಪೂರ್ವಕ್ಕಿರುವ ಈ ಪ್ರದೇಶಗಳಲ್ಲಿ ಇಲ್ಲಿಯ ಮಣ್ಣು ಕೆಂಪು ಇಲ್ಲವೆ ಕಪ್ಪು ಬಗೆಯದು. ಮಳೆಯ ಪ್ರಮಾಣ ಕಡಿಮೆ ಮತ್ತು ಅನಿಶ್ಚಿತತೆಯಿಂದ ಕೂಡಿರುತ್ತದೆ. ಹಿಂಗಾರು ಜೋಳ, ಭತ್ತ, ಶೇಂಗಾ, ಮೆಣಸಿನಕಾಯಿ, ತಂಬಾಕು, ಹತ್ತಿ, ಕುಸುಬೆ, ಗೋಧಿ, ಮುಸುಕಿನ ಜೋಳ, ಬೇಳೆಧಾನ್ಯಗಳು ಮುಖ್ಯ ಬೆಳೆಗಳಾಗಿವೆ. ಕರ್ನಾಟಕದ ಈಶಾನ್ಯ ಮೂಲೆಯ ಪ್ರದೇಶಗಳಾದ ಬೀದರ್ ಜಿಲ್ಲೆ ಹಾಗೂ ಕಲಬುರ್ಗಿ ಜಿಲ್ಲೆಯ ಈಶಾನ್ಯ ಭಾಗಗಳಲ್ಲಿ ಫಲವತ್ತತೆ ಕಪ್ಪು ಮಣ್ಣನ್ನು ಹೊಂದಿದ್ದು, ಮಳೆಯ ಪ್ರಮಾಣ ಹೆಚ್ಚಾಗಿದ್ದು, ಕಬ್ಬು, ದ್ವಿದಳಧಾನ್ಯಗಳು, ಜೋಳ ಇಲ್ಲಿಯ ಮುಖ್ಯ ಬೆಳೆಗಳು. ತಗ್ಗುಪ್ರದೇಶಗಳಲ್ಲಿ ಭತ್ತ ಬೆಳೆಯಲಾಗುತ್ತದೆ. ಬೀಜಾಪುರ, ಗುಲ್ಬರ್ಗಾ, ಬಳ್ಳಾರಿ ಜಿಲ್ಲೆಗಳು, ಧಾರವಾಡ ಜಿಲ್ಲೆಯ ಪೂರ್ವಭಾಗ, ರಾಯಚೂರು ಬೆಳಗಾವಿ ಮತ್ತು ಚಿತ್ರದುರ್ಗ ಜಿಲ್ಲೆಯ ವಾಯುವ್ಯ ಭಾಗಗಳು ಈ ಪ್ರದೇಶದ ಬಹುಭಾಗ ಎರೆಮಣ್ಣು ಇಲ್ಲೆಲ್ಲ ಹಿಂಗಾರಿ ಬೆಳೆಗಳಾಗಿ ಹತ್ತಿ, ಜೋಳ, ಶೇಂಗಾ ಮುಖ್ಯ ಬೆಳೆಗಳು. ಗೋಧಿ ಮೊದಲಾದ ಧಾನ್ಯಗಳನ್ನು ಬೆಳೆಯಲಾಗುತ್ತದೆ. ರಾಜ್ಯದ ಉತ್ತರಭಾಗದಲ್ಲಿ ಜೋಳ ಸಾಮಾನ್ಯ ಜನರ ಮುಖ್ಯ ಆಹಾರ ಬೆಳೆಯಾಗಿದ್ದು, ಉತ್ತಮ ಪೌಷ್ಟಿಕ ಗುಣಗಳನ್ನುಳ್ಳ ಆಹಾರ ಇದಾಗಿದೆ. ಜೋಳದ ದಂಟು ಅಥವಾ ಕಡ್ಡಿ ದನಗಳಿಗೆ ಮೇವಾಗಿ ಬಳಕೆಯಾಗುತ್ತದೆ. ರಾಗಿ ರಾಜ್ಯದ ಬಹುತೇಕ ಜನತೆಯ ಮುಖ್ಯ ಆಹಾರವಾಗಿದ್ದು, ಉತ್ತಮ ಪೌಷ್ಟಿಕತೆಯಿಂದ ಕೂಡಿದೆ. ತುಮಕೂರ, ಹಾಸನ, ಮೈಸೂರು, ಮಂಡ್ಯ, ಕೋಲಾರ ಜಿಲ್ಲೆಯಲ್ಲಿ ಹೆಚ್ಚು ಬೆಳೆಯುತ್ತದೆ. ಗೋಧಿ ಹಿಂಗಾರಿ ಬೆಳೆಯಾಗಿದ್ದು; ಉತ್ತಮ ಪೌಷ್ಟಿಕ ಆಹಾರವಾಗಿದೆ. ಧಾರವಾಡ, ಗದಗ, ಹಾವೇರಿ, ಕೊಪ್ಪಳ, ಬಿಜಾಪುರ, ಬೆಳಗಾಂ, ರಾಯಚೂರು, ಗುಲ್ಬರ್ಗಾ ಜಿಲ್ಲೆಯಲ್ಲಿ ಹೆಚ್ಚು ಬೆಳೆಯುತ್ತಾರೆ. ಹೀಗೆ ಮಣ್ಣಿನ ಗುಣ, ಮಳೆ, ನೀರಿನ ಆಸರೆ, ಹವಾಗುಣ ಕೃಷಿಪದ್ಧತಿಗನುಗುಣವಾಗಿ ಅನೇಕ ಪ್ರಾದೇಶಿಕ ವೈಶಿಷ್ಟ್ಯತೆಗಳಿವೆ ಎಂಬುದನ್ನು ಕಾಣಬಹುದು.

ಸುಗ್ಗಿ ರೈತರ ಬಹುಮುಖ್ಯ ಕೃಷಿಕ್ರಿಯೆಗಳಲ್ಲಿ ಒಂದು ಮಹತ್ವದ ಕೆಲಸವಾಗಿದೆ. ಕೃಷಿಯ ಬೆಳೆಗಳು, ಪ್ರಾದೇಶಿಕ ಹವಾಮಾನ, ಸುಗ್ಗಿಯ ಕ್ರಮಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯನ್ನು ಹೊಂದಿವೆ. ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದಲ್ಲಿ ಕಂಡುಬರುವ ಕೆಲವು ವೈಶಿಷ್ಟ್ಯತೆಗಳನ್ನು ಮಾತ್ರ ಇಲ್ಲಿ ಗುರುತಿಸಲಾಗಿದೆ.

ಒಕ್ಕಲಿಗಾಗಿ ಕಣ ಮಾಡುವ ಜಾಗ ಸಮತಟ್ಟಾಗಿರಬೇಕು. ಎತ್ತರ ಮತ್ತು ಕಲ್ಲು ಹೊಡೆಯಲು, ಹಂತಿ ಹೊಡೆಯಲು ಸುಲಭ ರೀತಿಯದ್ದಾಗಿರಬೇಕು. ರೈತರು ಕಣಗಳನ್ನು ಅನೇಕ ವಿಧಾನಗಳಲ್ಲಿ ಮಾಡಿಕೊಳ್ಳುತ್ತಾರೆ. ಕೆಲವರು ಹೊಲಗದ್ದೆಗಳಲ್ಲಿ ಕೆಲವರು ಶಾಶ್ವತ ಕಣವನ್ನು, ಮತ್ತೆ ಕೆಲವು ರೈತರು ಒಟ್ಟಿಗೆ ಸೇರಿ ಕಣಗಳನ್ನು ಮಾಡಿಕೊಳ್ಳುತ್ತಾರೆ. ಸಿದ್ಧಮಾಡಿ ತುಳಿಸಿದ ಕಣದ ಮಧ್ಯದಲ್ಲಿ 'ಮೇಟಗೂಟ' ನೆಡುತ್ತಾರೆ. ಇದು ಸಾಮಾನ್ಯವಾಗಿ ಬನ್ನಿ ಮರದ್ದು ಶ್ರೇಷ್ಠ ಎಂಬ ನಂಬಿಕೆಯಿದೆ. ಈ ಮೇಟಿಗೆ

ದಪ್ಪನೆಯ ಮಿಣಿಹಗ್ಗವನ್ನು ಕಟ್ಟಿ, ಆ ಹಗ್ಗಕ್ಕೆ ದನಗಳು ಅಥವಾ ಎತ್ತುಗಳನ್ನು ಕಟ್ಟುತ್ತಾರೆ ಹೊರತು, ಎತ್ತು ಕೋಣ ಕಟ್ಟುವುದಿಲ್ಲ. ಹೀಗೆ ಹುಲ್ಲನ್ನು, ತೆನೆಗಳನ್ನು ತುಳಿಸುವುದಕ್ಕೆ ಹಂತಿ ತುಳಿಸುವುದೆಂದೂ, ಹಂತಿ ಹೊಡೆಯುವುದೆಂದು ಕರೆಯಲಾಗುತ್ತದೆ. ಒಕ್ಕಲು ಉಪಕರಣಗಳನ್ನು ಕುರಿತು ರೈತರ ಹಾಡುಗಳು ಹುಟ್ಟಿಕೊಂಡಿವೆ.

"ಕಂಚಿನ ಕಣಮಾಡಿ ಕಾಚಿನ ಮೇಟಿಯ ನೆಡಿಸಿ
ಜಂತಗುಂಟಿ ಹಲ್ಲಜರತಾವ। ಕಣದಣ್ಣ
ತೂರಪುಟ್ಟ ಬಂಗಾರ ॥"[೧೩]

ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ ಎಂಬ ಕೃತಿಯಿಂದ ಈ ಹಾಡನ್ನು ಸಂಗ್ರಹಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ರೋಣಗಲ್ಲು(Round) ಬಂದ ಮೇಲೆ ಮೇಟಿ ತನ್ನ ಪ್ರಾಮುಖ್ಯತೆ ಕಳೆದುಕೊಳ್ಳುತ್ತಿದೆ. ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ರೋಣಗಲ್ಲು ಬಳಕೆಯಾಗುತ್ತಿದೆ. ಆದರೆ ಉತ್ತರ ಕರ್ನಾಟಕದ ಧಾರವಾಡ, ಬಿಜಾಪುರ, ಬಳ್ಳಾರಿ ಮುಂತಾದ ಜಿಲ್ಲೆಗಳಲ್ಲಿ ಮೇಟಿಯ ವೈಭವಗಳನ್ನು ಈಗಲೂ ನೋಡಬಹುದು. ಒಕ್ಕಲು ಕ್ರಿಯೆ ರೋಣಗಲ್ಲು ಕುರಿತು "ಬಿ.ಎನ್. ಶ್ರೀ ಸತ್ಯನ್ ಅವರು ೧೯೬೭ರಲ್ಲಿ ಪ್ರಕಟಿಸಿರುವ ಚಿತ್ರದುರ್ಗ ಜಿಲ್ಲೆಯ ಗೆಜೆಟಿಯರ್‌ನಲ್ಲಿ "About ೧೯೧೮ the stoneroller about ೨ ೧/೨ feet long and about ೧,೩/೪ feet Indian eter, fitted with an axle and a frame work was introduced" ಎಂದು ತಿಳಿಸುತ್ತಾರೆ. ಒಕ್ಕಲು ಮಾಡುವ ಕ್ರಮದ ಬಗ್ಗೆ ಅಲ್ಲಿ ವಿವರಿಸುತ್ತಾ ಬಡಿಯುವುದು, ಉದ್ದುವುದು, ಎತ್ತುಗಳ ಕಾಲಿನಿಂದ ತುಳಿಸುವುದು ಮತ್ತು ಈಚೆಗೆ ರೋಣಗಲ್ಲಿನಿಂದ ಒಕ್ಕುವುದು ಎಂದು ತಿಳಿಸಿದ್ದಾರೆ".[೧೪]

ಸಾಸಿವೆ, ಕೊತ್ತಂಬರಿಯಂತ ಸಣ್ಣ ಕಾಳು ಬೆಳೆಗಳನ್ನು ಕೈಯಿಂದ ಉಜ್ಜಿ, ಅಲಸಂದಿ, ತೊಗರಿ, ಹೆಸರು, ಕಲ್ಲಿಗೆ ಬಡಿದು ಒಕ್ಕಲುಮಾಡುವುದನ್ನು ಕಾಣುತ್ತೇವೆ. ಮೇಟಿ ಗೂಟ ಇಂದು ಕಣದಲ್ಲಿ ನೆಡುವ ಒಂದು ಸಂಪ್ರದಾಯದಂತೆ ಕೆಲವು ಕಡೆ ಕಂಡುಬರುತ್ತದೆ.

ಹಂತಿಯ ಕಟ್ಟುವ ಕಾರ್ಯ ಸುಗ್ಗಿ ಕಾಲದಲ್ಲಿ ತಿಂಗಳುತನಕ ನೆಡೆಯುವ ಕ್ರಿಯೆಯಾಗಿದೆ. ಹಂತಿಯನ್ನು ಸಂಜೆಯ ವೇಳೆಗೆ ಕಟ್ಟಿ ಬೆಳಗು ಮುಂಜಾನೆ ತನಕ ನೆಡೆಯುತ್ತದೆ. ಹಂತಿ ಹೊಡೆಯುವವರಿಗೆ, ಎತ್ತುಗಳಿಗೆ, ಕಂತಿ ತೆಗೆಯುವರೆಗೆ ಸುಗ್ಗಿಯ ಕಣದಲ್ಲಿ ನಿದ್ದೆಮಾಡದೆ ಎಚ್ಚರದಿಂದ ಇರಲು, ಶ್ರಮದ ಪರಿಹಾರದ ಹಿನ್ನಲೆಯಲ್ಲಿ 'ಹಂತಿ' ಹಾಡುಗಳು ಹುಟ್ಟಿಕೊಂಡಿವೆ. ಹಲವಾರು ವೈವಿಧ್ಯಮಯ ಹಾಡುಗಳಲ್ಲಿ ಪ್ರಾದೇಶಿಕ ಅನುಭವ, ದೈವ, ಶಿವಶರಣರು, ಸಾಹಸಿಗಳ ಕತೆ, ಐತಿಹಾಸಿಕತೆ, ಸೌಂದರ್ಯದ ಕಲ್ಪನೆಯ ಹಿನ್ನಲೆಯಾಗಿ ಹುಟ್ಟಿಕೊಂಡಿವೆ. ಉತ್ತರ ಕರ್ನಾಟಕ ಭಾಗಗಳಲ್ಲಿ ತುಂಬಾ ವಿಶೇಷವಾಗಿ ಹಂತಿಯ ಹಾಡುಗಳ ಸಂಪ್ರದಾಯ ಬೆಳೆದು ಬಂದಿದೆ. ಮಾದರಿಯಾಗಿ ಈ ಹಾಡನ್ನು ನೋಡಬಹುದು.

"ಅವರೆತ್ತು ಇವರೆತ್ತು ನಮ್ಮೆತ್ತು ನಿಮ್ಮೆತ್ತು
ಮಠದವರೆತ್ತು ಕಡೆಸುತ್ತು । ತಿರುಗಿದರ
ಖಂಡುಗದ ರಾಶಿ ಕಡೆಗಾತು ॥"[೧೫]

ಚಿತ್ರದುರ್ಗ, ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಣಗಳನ್ನು ಸಗಣಿ ನೀರಿನಿಂದ ಸಾರಿಸಿ ಬಳಿಯಲಾಗುವುದು. ಬಳಿದ ನಂತರ ಮನೆಯಿಂದ ಒಲೆಯ ಬೂದಿತಂದು, (ಈ ಬೂದಿಯನ್ನು ದೀಪಾವಳಿಯ ಹಬ್ಬದಂದೆ ಸಂಗ್ರಹಿಸಿಟ್ಟಿರುತ್ತಾರೆ) ಸಗಣಿಯಿಂದ ವೃತ್ತಾಕಾರವಾಗಿ ಬಳಿದ ಭಾಗದ

ಹೊರಭಾಗಕ್ಕೆ ಹೆಣೆಯ ಪ್ರಮಾಣಕ್ಕೆ ಅನುಗುಣವಾಗಿ ಬೂದಿಯಿಂದ ಪಂಕ್ತಿ ಕಟ್ಟುವರು. ಮೇಟಿಯ ಹತ್ತಿರ ಒಂದು ಸಣ್ಣ ಪಂಕ್ತಿ, ಹೆಣೆಗೆ ಅನುಗುಣವಾಗಿ ಹೊರಭಾಗಕ್ಕೆ ನಾಲ್ಕು ಸುತ್ತುಗಳಿರುವ ಒಂದು ದೊಡ್ಡ ಪಂಕ್ತಿ ಕಟ್ಟುತ್ತಾರೆ. ಇದಕ್ಕೆ ಪಂಕ್ತಿಗೆ ಸುತ್ತು ಕಟುವುದೆಂದು ದಕ್ಷಿಣ ಕರ್ನಾಟಕ ಭಾಗದಲ್ಲಿ ಕರೆಯುತ್ತಾರೆ. ಹೀಗೆ ಪಂಕ್ತಿ ಕಟ್ಟುವ ಬೂದಿಗೆ 'ಬಂಟ' ಎಂದು ಕರೆದು, ಬಳಿಬಂಟ ಮತ್ತು ಕರಿಬಂಟ ಎಂದು ಎರಡು ವಿಧದಲ್ಲಿ ಕರೆಯುತ್ತಾರೆ. ಒಲೆಯ ಬೂದಿ ಬಿಳಿಯ ಬಂಟ ಎನಿಸಿಕೊಂಡರೆ, ಒಕ್ಕಲಾದ ನಂತರ ಬರುವ ಕಂಕಿಯನ್ನು ಸುಟ್ಟರೆ ಬರುವುದು ಕರಿಬಂಟ. ಇವರೆಡೂ ಕಣಕ್ಕೆ ಮತ್ತು ಮುಂದೆ ರಾಶಿಗೆ ಪಂಕ್ತಿ ಕಟ್ಟಲು ಬಳಕೆಯಾಗುತ್ತವೆ. ಕಣದ ಮತ್ತು ರಾಶಿಯ ಆರಾಧನೆ ಆಚರಣೆಯಲ್ಲಿ ಈ ಬಂಟರು ರಕ್ಷಕರಾಗಿದ್ದಾರೆ.

ಉತ್ತರ ಕರ್ನಾಟಕ ಭಾಗಗಳಲ್ಲಿ ಕರಿಬಂಟ ಎಂದರೆ ಕಣದಲ್ಲಿ ಕಂಕಿಯನ್ನು ಸುಟ್ಟು ಮಾಡಿದ ಕರಿಯ ಬಣ್ಣದ ಮೂರ್ತಿ. ಬೂದಗ ಎಂದರೆ ಕಣದಲ್ಲಿ ಪೂಜಿಸುವ ದೇವತೆ. ಬಳ್ಳಾರಿಯ ಭಾಗದಲ್ಲಿ ಬೂಟೆಪ್ಪ ಎಂದರೆ ಜೋಳದ ರಾಶಿಯ ಮೇಲೆ ಸಗಣಿಯಿಂದ ಮಾಡಿದ ದೇವರು. ಮಂಗಳೂರು ಭಾಗದಲ್ಲಿ ಬೂದನ ಪೂಜೆ ಮಾಡುತ್ತಾರೆ. ಗದ್ದೆಯಲ್ಲಿ ಭತ್ತವನ್ನು ಕುಯ್ಲುಗ ಮಾಡುವ ಆಚರಣೆಯಾಗಿ ಕಂಡುಬರುತ್ತದೆ. ಉತ್ತರಕರ್ನಾಟಕ ಭಾಗದಲ್ಲಿ ತುಂಬ ವಿಶೇಷ ಆಚರಣೆಗಳಾಗಿದ್ದು ಒಕ್ಕಲಿಗರ ಎರಡು ಸಂಕೇತ ಶಕ್ತಿಗಳಾಗಿ ಇವು ಕಂಡುಬರುತ್ತವೆ. 'ಹಂತಿಯ ಕೊನೆಗೆ ಕಟ್ಟಿದ ಎತ್ತಿನ ಸಗಣಿಯನ್ನು ಹಿಡಿದು, ಅದರಲ್ಲಿ ಮದನ ಕಲಸಿ ಲಿಂಗಾಕೃತಿಯನ್ನಾಗಿ ಮಾಡಿ, ಅದರ ನೆತ್ತಿಗೆ ಎತ್ತಿನ ಬಾಲದ ಜಡೆಗಳ ಎಸಳುಗಳನ್ನು ಕಿತ್ತಿ ಹಚ್ಚುತ್ತಾನೆ. ಇದನ್ನು 'ಬೂದುಗ' ಎಂದು ಕರೆಯುತ್ತಾರೆ. ಜೋಳದ ರವದಿಯನ್ನು ಸುಟ್ಟು ಆ ಕರುಕಿನಿಂದ ಕಣದಲ್ಲಿ ಮಂಡಲ ಬರೆಯುವರು ಅಲ್ಲದೇ ಅರ್ಧ ಚಂದ್ರಾಕೃತಿಯ ಚಿಹ್ನೆಯ ಗುರುತು ಹಾಕುವರು. ಇದನ್ನು 'ಕರಿಬಂಟ' ಎಂದು ಕರೆಯುತ್ತಾರೆ.

ಡಾ.ಬಿ.ಎಸ್.ಗದ್ದಗಿಮಠರವರು. 'ಕಣದ ರಾಶಿಯನ್ನು ಕಾಯಲು ಉಗ್ರವೀರಬಂಟ' ವೀರಘಂಟೆಯ ಮಡಿವಾಳನಿಗೆ ಒಕ್ಕಲಿಗನು ಕರಿಬಂಟನೆಂದು ಮತ್ತು ಪಾವನ ಭಕ್ತಿಯುಳ್ಳ ಮಹಾಶರಣ ಹರಳಯ್ಯನಿಗೆ 'ಬಿಳಿಭಂಟ'ನೆಂದು ಕರೆದಿರುವರು. ಡಾ.ಎಂ.ಎಸ್.ಲಠ್ಠೆಯವರು ತಮ್ಮ 'ಉತ್ತರ ಕರ್ನಾಟಕದ ಹಂತಿಯ ಹಾಡುಗಳು' ಎಂಬ ಕೃತಿಯ ಪ್ರಸ್ತಾವನೆಯಲ್ಲಿ ಬೂದುಗ ಅಲ್ಲಮ ಪ್ರಭುವಿನ ಸಂಕೇತವೆಂದು ಅನುಮೋದಿಸುತ್ತ ರಾಶಿಯಲ್ಲಿ ಮಾಡುವ ಸಣ್ಣದೊಂದು ರಾಶಿಯೇ ಬೂದುಗನ ರಾಶಿಯೆಂದು ಕರೆಯುತ್ತಾರೆ. ಕರಿಬಂಟನೆಂದರೆ 'ಹನುಮನ' ಸಂಕೇತವೆಂದು ಹೇಳುತ್ತಾರೆ. ಡಾ.ವೀರಣ್ಣ ದಂಡೆಯವರು ತಮ್ಮ ದೇಸಿ ಕೃತಿಯಲ್ಲಿ ಈ ಆಚರಣೆಗಳನ್ನು ಕುರಿತು ವಿಸ್ತಾರವಾದ ಚರ್ಚೆಯನ್ನು ಮಾಡಿ ಬೂದುಗ ಒಂದು ಸತ್‌ಶಕ್ತಿಯಾಗಿದ್ದು, ಬಹುಶಃ ಭೂಮಿತಾಯಿಗೆ ಮಗನಂತೆ ಇದ್ದು ಫಲಕೊಡುವ ಶಕ್ತಿಯಾಗಿ, ಒಕ್ಕಲಿಗರ ಆರಾಧ್ಯದೇವನಾಗಿದ್ದಾನೆಯೇ ಹೊರತು, ದುಷ್ಟಶಕ್ತಿಯನ್ನು ಸಂಕೇತವಲ್ಲವೆಂದೂ ಸಾಕಷ್ಟು ಕಾರಣಗಳ ಹಿನ್ನೆಲೆ ಕೊಟ್ಟು ಹೇಳುತ್ತಾರೆ. ದುಷ್ಟಶಕ್ತಿಯನ್ನು ಸಂಹಾರ ಮಾಡುವವನೂ, ಚೆಲುವನ್ನು ಕಾಪಾಡಿ, ಬಲವನ್ನು ಮತ್ತು ಫಲವನ್ನು ಕೊಡುವ ಹನುಮಂತನ ಮೇಲೆ ಒಕ್ಕಲಿಗರಿಗೆ ನಂಬಿಕೆ. ಹಾಗಾಗಿ ತಮ್ಮ ಕಣದಲ್ಲಿ ಅವನನ್ನು ತಂದು ಇರಿಸಿ ರಕ್ಷಣೆಯ ಜವಾಬ್ದಾರಿ ಹೊರೆಸಿದ್ದಾರೆ. ಅವನೇ 'ಕರಿಬಂಟ' ಎಂದು ಹೇಳುತ್ತಾರೆ.

"ಮದನ ಮನಸಿಗಬೇಕು ಮಂಡಲ ಬರಿಬೇಕು
ಸುತ್ತ ಕರಿಬಂಟ ಕಟ್ಟಬೇಕು.

ಮದನ ಮುಗಿಸಿದ ನಂತರ ರವದಿಯಲ್ಲಿ ಸುಟ್ಟು, ಅದರ ಕರುಕಿನಿಂದ ಕಣದಲ್ಲಿ ಮಂಡಲ ಬರೆಯುತ್ತಾನೆ.

ಕರಿ ಹನುಮ ನಿನ್ನ ರೂಹ ಬರಿದೇವು ಬಂಡಿಯ ಮ್ಯಾಲ

ಸಗರ ಶಾಪುರದ ಕರಿಹನುಮ । ನಿನನಾಮ

ಬರದೇವ ನಮ್ಮ ಕಣದಾಗ ॥"[೧೬] ಎಂದು ಹಾಡುವ ಒಕ್ಕಲಿಗರ ಮಾತುಗಳನ್ನು ಉದಾರಿಸುತ್ತಾರೆ. ಒಟ್ಟಾರೆಯಾಗಿ ಇದು ಉತ್ತರಕರ್ನಾಟಕ ಭಾಗದಲ್ಲಿ ಸುಗ್ಗಿಯ ಕಣದಲ್ಲಿ ವಿಶಿಷ್ಟ ಬಗೆಯ ಆಚರಣೆಯಾಗಿದೆ.

ಸುಗ್ಗಿಯ ಕಣ ರೈತನಿಗೆ ಹಬ್ಬದ ಸಡಗರ ಸಂಭ್ರಮ ನೀಡುತ್ತದೆ. ತಾನು ಬೆಳೆದ ಬೆಳೆಯ, ತನ್ನ ಶ್ರಮದ ಪ್ರತಿಫಲ ಪಡೆಯುವ ದಿನಗಳಲ್ಲಿ ತಿಂಗಳುಗಟ್ಟಲೆ ಕಣದಲ್ಲಿಯೇ ರೈತರು ಕಾಲಕಳೆಯುತ್ತಾರೆ. ಕಣದಲ್ಲಿ ಹಾಕಿದ ಧಾನ್ಯಗಳನ್ನು ಮೈಸೂರು ಸೀಮೆಯವರು 'ಬಣವೆ'ಯೆಂದು ಕರೆದರೆ ಉತ್ತರಕರ್ನಾಟಕದವರು 'ಗೂಡು' ಎಂದು ಕರೆಯುತ್ತಾರೆ. ಬಯಲು ಸೀಮೆಯು ಸೇರಿದಂತೆ ಹೆಚ್ಚು ಕಡಿಮೆ ಕರ್ನಾಟಕದ ಎಲ್ಲಾ ಕಡೆ ಸಾರ್ವವರ್ತಿಕ ಎಂಬಂತೆ ಪ್ರಚಲಿತವಿರುವ 'ಪೊಲಿ' ಆಚರಣೆ ಎಂದರೆ ರಾಶಿಪೂಜೆ. ಬಯಲು ಸೀಮೆಯಲ್ಲಿ ಇದನ್ನು ಕಣದ ಪೂಜೆ ಎಂತಲೂ ಕರೆಯುತ್ತಾರೆ. ದಕ್ಷಿಣ ಕರ್ನಾಟಕದ ರಾಗಿ ಬೆಳೆಯುವ ಹೆಚ್ಚಿನ ಎಲ್ಲಾ ರೈತಾಪಿ ಜನರು ಇದನ್ನು ಆಚರಿಸುತ್ತಾರೆ. ಸಾಮಾನ್ಯವಾಗಿ ಫೆಬ್ರವರಿ ಮಾರ್ಚ್ ತಿಂಗಳಲ್ಲಿ ಈ ಕಣದ ಪೂಜೆ ನಡೆಯುತ್ತದೆ. ವಾರಗಟ್ಟಲೆ ದುಡಿದು, ಕಣವನ್ನು ಸಿದ್ದಪಡಿಸುತ್ತಾರೆ. ಕಣದಲ್ಲಿ ರಾಗಿಯನ್ನು ಒಟ್ಟು ಐದು ರಾಶಿಗಳನ್ನಾಗಿ ವಿಂಗಡಿಸುತ್ತಾರೆ. ಈ ರೀತಿಯ ವಿಂಗಡಣೆಯಾದ ನಂತರ ಕಣದ ಉಳಿದ ಭಾಗವನ್ನು ಸಾರಿಸಿ, ರಂಗೋಲಿ ಬರೆದು ಕಣದಲ್ಲಿ ಬಳಸಿದ ಎಲ್ಲಾ ಸಾಧನ ಸಲಕರಣೆಗಳನ್ನು ಪೂಜೆಗೆ ಸಿದ್ದಪಡಿಸುತ್ತಾರೆ. ರಾಶಿ ಸುತ್ತಲೂ ರಂಗೋಲಿ ಬಿಡಿಸಿ, ಮಾವಿನ ಎಲೆ, ಲಕ್ಕಿಸೊಪ್ಪು, ತುಂಬೆ ಹೂವು, ಕಬ್ಬಿನ ಸೂಲಂಗಿ, ಕಣಗಿಲೆ ಹೂವು ಇತ್ಯಾದಿಗಳಿಂದ ಸಿಂಗರಿಸಲಾಗುತ್ತದೆ. ರಾಶಿಯ ತುದಿಗೆ ಕುಡುಗೋಲು, ಮೆರೆಗೋಲುಗಳನ್ನು ಸಿಕ್ಕಿಸಲಾಗುತ್ತದೆ. ಸಗಣಿಯಿಂದ ಪಿಳ್ಳೆರಾಯನನ್ನು ಮಾಡಿ, ಅದಕ್ಕೆ ಗರಿಕೆ, ತುಳಸಿ, ಹೊನ್ನೆ ಹೂವುಗಳನ್ನು ಚುಚ್ಚುತ್ತಾರೆ. ಇಲ್ಲಿ ಎಲ್ಲಕಿಂತಲೂ ಮುಖ್ಯವಾದುದೆಂದರೆ ಮೊರಗಳಿಂದಲೇ ರಚಿಸಿದ ದೇವರ ಗುಡಿ ಮತ್ತು ಅದರೊಳಗಿನ ದೀಪ. ಎಲ್ಲಾ ಸಿದ್ದತೆ ಮುಗಿದ ಬಳಿಕ ಮನೆಯ ಹಿರಿಯ ವ್ಯಕ್ತಿ ಪೂಜೆ ನೆರವೇರಿಸಿ ತೀರ್ಥವನ್ನು ರಾಶಿಯ ಸುತ್ತಲೂ ಚಿಮುಕಿಸುತ್ತಾ, ಹೆಚ್ಚೆಚ್ಚೋಗ್ಲಿ ಹಚ್ಚೆಚ್ಚೋಗ್ಲಿ ಎನ್ನುತ್ತ ಮೂರು ಸುತ್ತು ಪ್ರದಕ್ಷಣೆ ಬರುತ್ತಾನೆ. ಎಂದು 'ದ್ರಾವಿಡ ಸಂಸ್ಕೃತಿ' ಎಂಬ ಕೃತಿಯಲ್ಲಿ ದಕ್ಷಿಣ ಭಾರತದ ಕೃಷಿ ಸಂಸ್ಕೃತಿಯಲ್ಲಿ 'ಪೊಲಿ'ಯ ಪರಿಕಲ್ಪನೆ ಎಂಬ ಲೇಖನದಲ್ಲಿ ದಕ್ಷಿಣ ಕರ್ನಾಟಕದ ಕಣದ ವೈಶಿಷ್ಟ್ಯತೆಯನ್ನು ಡಾ.ಎ.ಸುಬ್ಬಣ್ಣರೈ ಅವರ ವಿವರಣೆ ಕೃತಿ ಪ್ರಾದೇಶಿಕತೆಯನ್ನು ವಿವರಿಸುತ್ತಾರೆ.

೩. ಭಾಷಿಕ ಸಂರಚನೆ

'ಭಾಷೆಯೆಂಬುದು ಒಂದು ಸಂಸ್ಕೃತಿಯ ವಾಹಕ. ಇದು ಮೌಖಿಕವಾಗಿರಬಹುದು ಅಥವಾ ಶಿಷ್ಟವಾಗಿರಬಹುದು. ಒಬ್ಬ ವ್ಯಕ್ತಿಯ ಆಡು ಭಾಷೆಯು ಆ ಸಮುದಾಯದ, ಆ ಪ್ರದೇಶದ ಅವನು ಬದುಕುವ ಕ್ರಮವನ್ನು ಅನುಸರಿಸಿರುತ್ತದೆ. 'ಕನ್ನಡ ಹಸ್ತಪ್ರತಿ ರಚನೆ' (ಭಾಷಿಕ ವಿವೇಚನೆ) ಎಂಬ ಕೃತಿಯಲ್ಲಿ ಡಾ.ಎಸ್.ಎಸ್.ಅಂಗಡಿಯವರು ಹೀಗೆ ಹೇಳುತ್ತಾರೆ. "ಭಾಷೆಯ ಮೂಲಕವೇ ಭಾಷಿಕರು ತಮ್ಮ ವಿಚಾರಗಳನ್ನು ಅನಿಸಿಕೆಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಭಾಷೆಯ ಮೂಲಕ ನಾವು

ಸಮರ್ಥವಾಗಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವ ಅವಕಾಶವಿದೆ. ಭಾಷೆಯ ಮೂಲಕವೇ ಭಾಷಿಕರ ನಡೆ–ನುಡಿ, ಆಚಾರ–ವಿಚಾರಗಳು, ಮನಸ್ಸಿನ ಭಾವನೆಗಳು ಪೀಳಿಗೆಯಿಂದ ಪೀಳಿಗೆಗೆ ಸಾಗಿಸಲ್ಪಡುತ್ತವೆ. ಭಾಷೆ ಕೇವಲ ಪದಗಳನ್ನಷ್ಟೇ ಒಳಗೊಳ್ಳದೇ ಆ ಪದಗಳ ಹಿಂದೆ ಆ ಭಾಷೆಯನ್ನಾಡುವ ಜನರ ಬದುಕು, ಜೀವನಕ್ರಮದ ಅನೇಕ ಅಂಶಗಳನ್ನೊಳಗೊಂಡಿರುತ್ತದೆ. ಮೇಲ್ನೋಟಕ್ಕೆ ಸ್ವತಂತ್ರ ಎಂದು ಕಂಡುಬಂದರೂ ಅದರ ಹಿಂದೆ ಒಂದು ಜನಾಂಗದ ಸಂಸ್ಕೃತಿಯ ಗಾಢವಾದ ಸಂಬಂಧವಿರುತ್ತದೆ"[೧೭]. ಎಂಬುದನ್ನು ಪ್ರಾದೇಶಿಕ ಬೇದದ ಹಿನ್ನೆಲೆಯಲ್ಲಿ ಭಾಷೆಯ ರಚನೆಯನ್ನು ಹಿಡಿದೊಟ್ಟಿದ್ದಾರೆ.

ಮಾನವನ ಬದುಕಿನಲ್ಲಿ ಕೃಷಿ, ಕೃಷಿಉತ್ಪಾದನೆಗಳು ಮಹತ್ವದ ಅಂಶಗಳಾಗಿವೆ. ಬಿತ್ತುವ, ಹಸನು ಮಾಡುವ, ಒಕ್ಕುವ, ಬೆಳೆ ನಾಟುವ, ಕಳೆ ಕೀಳುವ, ಕೊಯ್ಲು ಮಾಡುವ, ಒಕ್ಕಲು ಮಾಡುವ, ಕುಟ್ಟುವ ಕೇರುವ ಮುಂತಾದ ಸಂದರ್ಭಗಳಲ್ಲಿ ಮೌಖಿಕ ಸಾಹಿತ್ಯದಲ್ಲಿ ಅನೇಕ ವೈವಿದ್ಯತೆಯಿಂದ, ಪ್ರಾದೇಶಿಕ ಭಿನ್ನತೆಯಿಂದ ಭಾಷೆಯ ಬಳಕೆಯಾಗಿರುವುದು ಕಂಡುಬರುತ್ತದೆ. ಭಾಷೆಯಲ್ಲಿ ವೈಶಿಷ್ಟತೆಯನ್ನು ಅನೇಕ ಬಗೆಯಲ್ಲಿ ಗುರುತಿಸಲು ಸಾಧ್ಯ. ಪ್ರಸ್ತುತ ಅಧ್ಯಾಯದಲ್ಲಿ ಮೌಖಿಕ ಸಾಹಿತ್ಯವನ್ನು ಗಮನಿಸಿ, ಮಾತೃಭಾಷಿಕ ವೈಶಿಷ್ಟತೆಗಳನ್ನು ಕೃಷಿ ಮತ್ತು ಗಾದೆಗಳು, ಕೃಷಿ ಮತ್ತು ಒಗಟುಗಳು, ಕೃಷಿ ಮತ್ತು ನುಡಿಗಟ್ಟುಗಳೆಂದು ಮೂರು ವಿಭಾಗಗಳಲ್ಲಿ ಗುರುತಿಸಿಕೊಂಡು ವಿಶ್ಲೇಷಿಸಲಾಗಿದೆ.

೧. **ಕೃಷಿ ಮತ್ತು ಗಾದೆಗಳು :** ಒಂದು ಸಮಾಜದ ಅನುಭವ ಸಂಪತ್ತಿಗೆ ಕುಶಾಗ್ರತೆ, ಚತುರತೆ, ಭಾಷೆಯ ಸೊಗಡು ಮತ್ತು ಲೋಕಾನುಭವಗಳಿಗೆ ಆ ಜನ ಸಮುದಾಯದಲ್ಲಿ ಬಳಕೆಯಲ್ಲಿರುವ ಗಾದೆಗಳೇ ಸಾಕ್ಷಿಯಾಗಿರುತ್ತವೆ. ಜಗತ್ತಿನ ಯಾವುದೇ ಜನಾಂಗದಲ್ಲಾದರೂ ಗಾದೆಗಳು ಬಳಕೆಯಾಗುತ್ತ ಬಂದಿವೆ. ಆಯಾ ಜನಾಂಗದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನ ಮೌಲ್ಯವನ್ನು ಅರ್ಥಪೂರ್ಣವಾಗಿ ಹಿಡಿದಿಡುವ ಮಾಧ್ಯಮಗಳಾಗಿವೆ. ಸಾಂಸ್ಕೃತಿಯ ಭಿನ್ನತೆಗೆ ಗಾದೆಮಾತುಗಳ ಕಾರಣಗಳಾಗಿರುವುದುಂಟು. ಒಂದೇ ದೇಶದಲ್ಲಿಯೇ ಅನೇಕ ಪ್ರಾದೇಶಿಕ ಭಿನ್ನತೆಗಳನ್ನು ಕಾಣುತ್ತೇವೆ. ಕೆಲವು ಅಂಶಗಳಲ್ಲಿ ಸಮಾನ ಮನೋಧರ್ಮವನ್ನು ಕಾಣುತ್ತೇವೆ. ಇತ್ತೀಚಿನ ದಿನಗಳಲ್ಲಿ ಜನಪದ ವಿದ್ವಾಂಸರ ಗಾದೆಗಳ ಕುರಿತಾದ ಅಧ್ಯಯನ ಹೆಚ್ಚಿನ ಮಹತ್ವ ಪಡೆದುಕೊಂಡು, ಅನೇಕ ಬಗೆಯಲ್ಲಿ ಗಾದೆಗಳನ್ನು ಕುರಿತು ಅಧ್ಯಯನಗಳು ನಡೆದಿವೆ, ನಡೆಯುತ್ತಲಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ; 'ಗಾದೆ ವೇದಕ್ಕೆ ಸಮಾನ; 'ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು' ಎಂಬ ಇತ್ಯಾದಿ ಗಾದೆಗಳು, ಗಾದೆಯ ಮಹತ್ವಕ್ಕೆ ಹಿಡಿದ ಕನ್ನಡಿಗಳಾಗಿವೆ.

ಕೃಷಿಯನ್ನು ಕುರಿತಾದ ಗಾದೆ(ನಾಣ್ನುಡಿ)ಗಳು ಬೆಳೆದುಕೊಂಡು ಬಂದಿವೆ. ಶತಶತಮಾನಗಳ ಅನುಭವಗಳು ಹನಿಗೂಡಿ, ಹರಳುಗಟ್ಟಿ ಉಳಿದುಕೊಂಡು ಬಂದಿವೆ. ಕೆಲವು ಕೃಷಿ ಗಾದೆಗಳನ್ನು ನೋಡುವುದಾದರೆ, ಅವುಗಳು 'ಬಾಳೆ ಬಗೆದು ಹಾಕು, ತೆಂಗು ತೇಲಿ ಹಾಕು; ಅಡಕೆ ಆಲಕ್ಕೆ ಹಾಕು, ತೆಂಗು ತೇಲಿಸಿ ಹಾಕು ಇತ್ತಾದಿ.

'ಕಡಲೆಕಾಯಿ ಬಿತ್ತಿ, ಕಾಗೆ ಕಾವಲು ಹಾಕಿದಂತೆ'

'ಬಾಳೆಗೆ ಕೊನೆ, ಚೇಳಿಗೆ ಬಸಿರು'

'ಕೀರೆಸೊಪ್ಪಿಗೂ ನಾಚಿಕೆಯಿಲ್ಲ; ಕುಡ್ಡಿಗೂ ನಾಚಿಕೆಯಿಲ್ಲ'

'ಕೆರೆಕಿತ್ತರೆ ಬೈಲು ಮೇಲೆ'

'ಕುಂಟೆಯಾಡಿದ ಹೊಲ ಚೆಂದ, ದಂಟು ಆಡಿದ ಹೆಣ್ಣು ಚೆಂದ'

ಕೊಟ್ಟ ಸಾಲ ಕೇಳದೇ ಹೋಯಿತು, ಮಾಡಿದ ಆರಂಭ ನೋಡದೇ ಹೋಯಿತು'

'ತಗ್ಗು ಗದ್ದೆಗೆ ಮಾರು ಬೆಳೆ, ಎತ್ತರ ಗದ್ದೆಗೆ ಒಂದೇ ಬೆಳೆ'

'ಕೃತ್ತಿಕೆ ನಕ್ಷತ್ರ ಕಾದರೆ ಗದ್ದೆಗೆ ಒಳ್ಳೇದು'

'ಉಡಿಯೊಳಗಿನದು ಹಿಂದೆ, ಹಿಡಿಯೊಳಗಿನದು ಮುಂದೆ'

'ಕಾಲಮೀರುವ ಮುನ್ನ ಬಿತ್ತನೆಯಾಗಬೇಕು'

'ಆಷಾಢದ ಗಾಳಿ ಬೀಸಿ ಬೀಸಿ ಬಡಿದಾಗ ಹೇಸಿ ನನ ಜೀವ ಹೆಂಗಸಾಗಬಾರದೇ'

'ಅಂಗೈ ಹಾಗೆ ಹೊಲ ಮಾಡಿದರೆ ಮುಂಗೈ ತುಂಬ ತುಪ್ಪ'

'ಉತ್ತಮ ಹೊಲ, ಮಧ್ಯಮ ವ್ಯಾಪಾರ, ಕನಿಷ್ಟ ಚಾಕರಿ'

'ಉತ್ತು ಬಾಳುವವನ ಬದುಕು ಎತ್ತಲೂ ಲೇಸು'

'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಲೇಸು'

'ಎತ್ತು ಇಲ್ಲದ ಮನೆಗೆ ಲದ್ದೆ ಇಲ್ಲವು'

'ಆಕಾಶದ ಮಳೆ ಭೂಮಿಗೆ ಬೆಳೆ'

'ಗದ್ದೆಯಿಂದ ಹೊಲ, ಗೊಡ್ಡಿ ಹೆಂಡತಿ ಹೀನ'

'ಭರಣಿ ಮಳೆಯಿಂದ ಧರಣಿಗೆಲ್ಲಿ ಸುಖ'

'ಹದ ನೋಡಿ ಬಿತ್ತು, ಬೆದಿ ನೋಡಿ ಬೆಳಿ'

'ಊರಾಗಿನಕ ಕೆಸರ ನೋಡಿ ಹೊಲಕ್ಹೋಗೋದು ಬಿಟ್ಟಂತೆ'

'ಮಾತು ಮುಂದಾತು ಹೊಲಾ ಅಂಗಲಾತು'

'ಹೊಲ ಬಿತ್ತಿ ಹೊಡಿ, ಮ್ಯಾರಿ ಹತ್ತಿ ಬಿತ್ತು'

'ಕರಿ ಹೊಲ ಕಸುವು ಕಡ್ಡದ ಹೊಲ ಗೊಡ್ಡು'– ಇಂತಹ ಸಾವಿರಾರು ಗಾದೆಗಳನ್ನು ಕಾಣುತ್ತೇವೆ. 'ಕೃಷಿಗಾದೆಗಳು' ಎಂಬ ಗ್ರಂಥದಿಂದ (ಲೇ–ಎಂ.ಎ ನಾರಾಯಣರೆಡ್ಡಿ ಮತ್ತು ಪಿ.ನಾರಾಯಣಸ್ವಾಮಿ) ಕೆಲವು ಗಾದೆಗಳನ್ನು ವಿವರಣೆಸಹಿತ ವಿಶ್ಲೇಷಿಸಲಾಗಿದೆ.

'ಬಾಳೆಗೊಂದು ಗೊನೆ ಬಾಳೋಳಿಗೊಂದು ಮನೆ'

ಈ ಗಾದೆಯು ಅರ್ಥಪೂರ್ಣವಾದುದು. ಬಾಳೆ ಒಂದು ತೋಟದ ಬೆಳೆಯಾಗಿದೆ. ಇದರ ಸ್ವರೂಪ ಮೃದುತ್ವದಿಂದ ಕೂಡಿದ್ದು, ಎಲೆ, ದಿಂಡು, ತೆವಳಿ, ಸುಳಿ, ಗೊನೆ ಹೊಂದಿರುತ್ತದೆ. ಒಂದು ಬಾಳೆಯ ಗಿಡದಲ್ಲಿ ಒಂದೇ ಗೊನೆ ಮಾತ್ರ ಸಾಧ್ಯ. ಇದು ಪ್ರಕೃತಿಯ ನಿಯಮವಾಗಿದೆ. ಹಾಗೆಯೇ ಹಸನಾದ ಜೀವನ ನಡೆಸುವ ಹೆಣ್ಣಿಗೆ ಒಪ್ಪ ಓರಣ ಅಚ್ಚುಕಟ್ಟಾದ ಸ್ವಂತ ಮನೆಯಿರಬೇಕು. ಆಗ ಅವಳು ಇನ್ನೊಬ್ಬರ ಹಂಗಿಲ್ಲದೇ ಬದುಕಬಹುದು. ವಾಸಿಸಲು ಮನೆಯಿಲ್ಲದವರ ಸಂಕಟ ಇಲ್ಲಿ ವ್ಯಕ್ತವಾಗುತ್ತದೆ.

'ತೆಂಗು ಬಡತನ ಇಂಗು'

ಬಹುಪಯೋಗಿ ಬೆಳೆ ತೆಂಗು, ಬಯಸಿದ್ದನ್ನು ಕೂಡುವ ಕಲ್ಪವೃಕ್ಷ. ಅದರ ಪ್ರತಿಯೊಂದು ಭಾಗವು ಉಪಯುಕ್ತ. ಬಡತನದ ಬೇಗೆ ಯಾರಿಗೂ ಬೇಡ. ಅಂತಹ ಕಡುಬಡತನವನ್ನು ಸಹ ಹೋಗಲಾಡಿಸುವ ಸಾಮರ್ಥ್ಯ ತೆಂಗಿಗೆ ಇದೆ ಎಂಬುದೇ ಈ ಮಾತಿನ ಅರ್ಥ.

‘ನುಗ್ಗೆ ಮುರಿದು ಸಾಕಬೇಕು, ಮಕ್ಕಳ್ನ ಹೊಡೆದು ಸಾಕಬೇಕು’

ನುಗ್ಗಿಯ ಮರದ ಕಾಯಿ, ಸೊಪ್ಪು ಮತ್ತು ಹೂವು ಪೌಷ್ಠಿಕಾಂಶ ಹೊಂದಿರುವ ತರಕಾರಿಯಾಗಿದೆ. ಅಲ್ಲದೆ ತುಂಬಾ ಮೃದುವಾದ ಮರವಾಗಿದೆ. ಅದರ ರೆಂಬೆ ಕತ್ತರಿಸಿ ನಾಟಿದರೆ ಮರವಾಗಿ ಬೆಳೆದು ಯಥೇಚ್ಚ ಫಲ ನೀಡುತ್ತದೆ. ಅದೇ ರೀತಿ ಮಕ್ಕಳನ್ನು ಅತಿ ಮುದ್ದಾಗಿ ಬೆಳೆಸಿದರೆ, ಲಂಗು ಲಗಾಮು ಇಲ್ಲದೆ ಬೆಳೆದು ಸಮಾಜದ ಕಂಟಕರಾಗಬಹುದು. ತಪ್ಪು ಮಾಡಿದಾಗ ಒಂದೆರೆಡು ಕೊಟ್ಟರೆ ಭಯದಿಂದ ಮಕ್ಕಳು ಸುಸಂಸ್ಕೃತರಾಗಿ ಬೆಳೆಯುತ್ತಾರೆ. ನುಗ್ಗೆಗೆ ಹೋಲಿಸಿರುವುದು ಅರ್ಥಪೂರ್ಣವಾಗಿದೆ.

‘ಸ್ಯಾವೆ ಅಕ್ಕಿ ಕೂಳಲ್ಲ, ಸೋರೆಕಾಯಿ ನೀರಲ್ಲ’

ಸ್ಯಾವೆ ಅಂದರೆ ಸಾವೆ. ಇದು ಒಂದು ಆಹಾರಧಾನ್ಯ. ಬಡಬಗ್ಗರು ತಿನ್ನುತ್ತಾರೆ. ಸಾವೆಯನ್ನು ಕುಟ್ಟಿ ಅಕ್ಕಿಯ ತೆಗೆದು, ಅನ್ನ ಮಾಡಿ ತಿಂದರೆ ಅದು ಅಷ್ಟು ರುಚಿ ಬರುವುದಿಲ್ಲ. ಅದನ್ನೇ ತಿನ್ನುತ್ತಿದ್ದರೆ ಹೊಟ್ಟೆ ಉರಿ ಕಾಣಿಸಿಕೊಳ್ಳುತ್ತದೆ. ಕೆಲವು ಕಾಯಿಲೆಗೆ ಪಥ್ಯ ಹೇಳುವಾಗ ಈ ಅನ್ನ ತಿನ್ನಲು ಹೇಳುತ್ತಾರೆ. ಅದೇ ರೀತಿ ಮಣ್ಣಿನ ಮಡಿಕೆಯಲ್ಲಿಯ ನೀರು ಕುಡಿದರೆ ತೃಪ್ತಿಯಾಗುತ್ತದೆಯೇ ಹೊರತು, ಸೋರೆ ಬುರುಡೆಯಲ್ಲಿ ಶೇಖರಿಸಿಟ್ಟ ನೀರನ್ನು ಕುಡಿದರೆ ತೃಪ್ತಿಯಾಗದು. ಸಮಾನ ಗುಣಧರ್ಮ ಕಾಣುತ್ತೇವೆ.

‘ಹೊಲದಲ್ಲಿ ಅಣ್ಣೇ ಸೊಪ್ಪು ಕೊಡದೋನು, ಮನೇಲಿ ರಾಗಿ ಕೊಟ್ಟಾನ’

ಅಣ್ಣೇ ಸೊಪ್ಪು ಹೊಲದಲ್ಲಿಯ ಒಂದು ಕಳೆ. ಹೊಲಗದ್ದೆಗಳಲ್ಲಿ ತಂತಾನೆ ಬೆಳೆಯುತ್ತದೆ. ಇದನ್ನು ತರಕಾರಿ ಸೊಪ್ಪಾಗಿ ತಿನ್ನಲು ಬಳಸುತ್ತಾರೆ. ಅಂತಹ ಕಳೆಯನ್ನು ಕಿತ್ತು ದಾನ ಕೊಡದವನು ಮನೆಯಲ್ಲಿಯ ರಾಗಿ ಕೊಡುವುದು ಅಸಾಧ್ಯ. ಇಲ್ಲಿ ವ್ಯಕ್ತಿಯ ಜಿಪುಣತನ ವ್ಯಕ್ತವಾಗುತ್ತದೆ.

‘ಎರೆಹೊಲ ಲೇಸು, ಕರೆಹೆಂಡ್ರು ಲೇಸು’

ಎರೆಮಣ್ಣಿನ ಹೊಲ ಒಕ್ಕಲಿಗನಿಗೆ ಅತ್ಯುತ್ತಮವಾದುದು. ತೇವಾಂಶವನ್ನು ಹೆಚ್ಚುಕಾಲ ಹೊಂದಿ ಫಲವತ್ತಾದ ಭೂಮಿಯಾಗಿದ್ದು, ಉತ್ತಮ ಫಸಲು ನೀಡುತ್ತದೆ. ಅದೇ ರೀತಿ ಕಪ್ಪು ಬಣ್ಣದ ಹೆಣ್ಣು ಮದುವೆ ಮಾಡಿಕೊಂಡರೆ ಅವಳ ಕಡೆ ಯಾರೂ ನೋಡುವದಿಲ್ಲ. ಬಿಳಿ ಬಣ್ಣದ ಹೆಂಡತಿಯಾದರೆ ಎಲ್ಲರ ಕಣ್ಣು ಆಕೆಯ ಮೇಲೆಯೇ. ಇಲ್ಲಿ ಬಣ್ಣಕ್ಕೆ ಆದ್ಯತೆ ನೀಡಲಾಗಿದ್ದು, ಅದರ ಲಾಭ ನಷ್ಟ ತಿಳಿಯಬಹುದಾಗಿದೆ.

‘ಒಕ್ಕಲಗಿತ್ತಿಗೆ ಮಡಿಯಿಲ್ಲ, ಹುಳ್ಳಿ ಹೊಲಕ್ಕೆ ಗೊಬ್ಬರವಿಲ್ಲ’

ವ್ಯವಸಾಯದಲ್ಲಿ ಬಿಡುವಿಲ್ಲದ ದುಡಿಮೆ ಮಾಡಬೇಕಾಗುತ್ತದೆ. ಒಕ್ಕಲಗಿತ್ತಿಯಾದ ರೈತಮಹಿಳೆ ಸ್ನಾನ, ಮಡಿ, ಪೂಜೆ ಮಾಡುತ್ತಾ ಕಾಲಹರಣ ಮಾಡಿದರೆ ವ್ಯವಸಾಯದ ಕೆಲಸ ಕೆಡುತ್ತದೆ. ಕಾಯಕದಲ್ಲಿಯೇ ಎಲ್ಲಾ ದೈವ ಕಂಡವರು ಒಕ್ಕಲಿಗರು. ಅದೇ ರೀತಿ ಹುರುಳಿ ಬಿತ್ತಿದ ಹೊಲಕ್ಕೆ ಗೊಬ್ಬರ ಹಾಕುವ ಅಗತ್ಯವಿಲ್ಲ. ಸೊಪ್ಪು, ಸದೆಬಿದ್ದು ಮಣ್ಣಿಗೆ ಸೇರಿ, ಸಾರಜನಕಯುಕ್ತವಾದ ಅಂಶಗಳನ್ನು ಸಸಿಗಳಿಗೆ ನೀಡುತ್ತವೆ. ಅದರಿಂದ ಫಲವತ್ತತೆ ಹುರುಳಿ ಹೊಲದಲ್ಲಿ ಹೆಚ್ಚಾಗುತ್ತದೆ.

‘ಓಣಿ ಪಕ್ಕದ ಹೊಲ ಮಾಡಬೇಡ, ಓಡುಗಾಲು ಸೊಸೆ ತರಬೇಡ’

ಓಣಿ ಪಕ್ಕದ ಹೊಲವೆಂದರೆ ಜನ, ದನ, ಎಲ್ಲಾ ತಿರುಗಾಡುವ ದಾರಿಯ ಬದಿ ಹೊಲವಾಗಿದೆ. ಇಂತಹ ಹೊಲಕ್ಕೆ ಜನ, ದನ, ಕುರಿ, ಮೇಕೆ ಮುಂತಾದವುಗಳಿಂದ ಬೆಳೆ ಹಾಳಾಗುವ ಸಾಧ್ಯತೆಯೇ ಹೆಚ್ಚು, ಏನಾದರೂ ನಿಷ್ಠುರ ಖಂಡಿತ. ಅದೇ ರೀತಿ ಪದೆ ಪದೆ ತೌರು ಮನೆಗೆ ಹೋಗುವ ಸೊಸೆಯಿದ್ದರೆ

ಅಂತಹ ಹೆಣ್ಣುಮಗಳು ಸರಿಯಾಗಿ ಬಾಳಲಾರಳು. ಅದರಿಂದ ಜೀವನವಿಡೀ ನರಳಬೇಕಾಗುತ್ತದೆ. ಅಂತಹ ಲಕ್ಷಣದ ಹೆಣ್ಣನ್ನು ಸೊಸೆ ಮಾಡಿಕೊಳ್ಳಬೇಡ ಎಂಬ ಎಚ್ಚರಿಕೆಯ ಮಾತು ಇಲ್ಲಿ ತಿಳಿಯುತ್ತದೆ.

'ನಾಟಿ ಹಾಕಿದ ಹೊಲ ಚೆಂದ, ಮೇಟಿ ನೆಟ್ಟ ಕಣ ಚೆಂದ'

ಸಾಲಾಗಿ ಪೈರು ನೆಟ್ಟರೆ ಅಂತಹ ಹೊಲ ನೋಡಲು ಚೆಂದವಾಗಿರುತ್ತದೆ. ಇಂತಹ ಹೊಲಗಳಲ್ಲಿ ಸಾಲು ತೆಗೆಯುವುದು, ಕಳೆ ತೆಗೆಯುವುದು ಸುಲಭ. ಹೊಲದಲ್ಲಿ ಅಚ್ಚುಕಟ್ಟುತನ ಎದ್ದುಕಾಣುತ್ತದೆ. ಅದೇ ರೀತಿ ಕಣದ ಮಧ್ಯಭಾಗದಲ್ಲಿ ಬಲವಾದ ಮೇಟಿ ನೆಟ್ಟು ಮೇಟಿಯ ಹಗ್ಗಕ್ಕೆ ಸಾಲು ಸಾಲಾಗಿ ಎತ್ತು, ದನ, ಕರು ಕಟ್ಟಿದರೆ ಕಣ ಚೆಂದವಾಗುತ್ತದೆ. ಏಕೆಂದರೆ ಕಣ ಮಾಡುವಾಗ ದನಕರುಗಳ ಗೊರಸುಗಳಿಂದ ಮಣ್ಣು ಗಟ್ಟಿಯಾಗಿ ನೆಲ ಕಟ್ಟಿಕೊಳ್ಳುತ್ತದೆ. ಅಂತಹ ಕಣವನ್ನು ಸಗಣೆಯಿಂದ ಸಾರಿಸಿದರೆ, ಧಾನ್ಯಗಳ ಒಕ್ಕಲು ಮಾಡಲು ಚೆನ್ನಾಗಿ ಆಗುತ್ತದೆ.

'ಸಾದೆತ್ತಿಗೆ ಎರಡು ಹೇರು'

ಹೊಲದ ಕೆಲಸವನ್ನೆಲ್ಲಾ ತತ್‌ಕ್ಷಣ ಮುಗಿಸುವವರೆಗೆ ಮತ್ತಷ್ಟು ಕೆಲಸ ಹೆಗಲಿಗೆ ಬೀಳುತ್ತದೆ. ಆದರೆ ಸೋಗು ಹಾಕಿ ನುಣುಚಿಕೊಳ್ಳುವವರಿಗೆ ಈ ಸಮಸ್ಯೆಯಿರುವುದಿಲ್ಲ. ದುಡಿಯುವ ಎತ್ತಿಗೆ ಮತ್ತಷ್ಟು ಕೆಲಸದ ಹೊರೆ ಹೆಚ್ಚು. ಎಳೆಯುವ ಎತ್ತಿಗೆ ಏಟು ಕೊಡುತ್ತಾರೆ ಹಾಗೆ.

'ಸಜ್ಜೆ ಸಾಲಿನ ಹೊಲ ಚೆಂದ, ಗೆಜ್ಜೆ ಕಾಲಿನ ಮಗ ಚೆಂದ'

ಸಜ್ಜೆ ಒಳ್ಳೆಯ ಆಹಾರಧಾನ್ಯ. ಹೊಲದಲ್ಲಿ ಸಜ್ಜೆಯ ಸಾಲುಗಳಿದ್ದರೆ ನೋಡಲು ತುಂಬಾ ಆಕರ್ಷಕ. ಅದರಲ್ಲೂ ಕಾಳು ತುಂಬಿದ ತೆನೆಗಳಿದ್ದರೆ ಇನ್ನೂ ಚೆನ್ನ. ತೆನೆಗಳು ಭಾರಕ್ಕೆ ಅತ್ತಿತ್ತ ಅಲುಗಾಡುತ್ತಿದ್ದರೆ ನೋಡಲು ಅಂದ. ಹಾಗೆಯೇ ಗೆಜ್ಜೆ ಸರ ಹಾಕಿದ ಮಗು, ತೊದಲು ಮಾತುಗಳನ್ನು ಸುತ್ತಾ ಅಂಬೆಗಾಲು ಇಟ್ಟು, ಪುಟ್ಟ ಪುಟ್ಟ ಹೆಜ್ಜೆಯನ್ನು ಇಡುತ್ತಾ ನಡೆದರೆ ಚೆಂದವಾಗಿರುತ್ತದೆ.

'ಅರೀದುದ್ದ ಆರಂಭ ಮಾಡಿ, ವೊಡೇವಾಲಕ್ಮುಂದೆ ಮೇದೆ ಹಾಕ್ದ'

ಪಡ್ಡೆ ಹುಡುಗರಿಗೆ ಕಷ್ಟ-ಸುಖದ ಅರಿವು ಇರುವುದಿಲ್ಲ. ಅನುಭವವಿಲ್ಲದೇ ಆತುರ ಹೆಚ್ಚು. ಅಂತವರು ವ್ಯವಸಾಯ ಮಾಡಲು ಬಂದರೆ ಬೆಳೆ ಕುಯ್ಲಿನ ಹದಕ್ಕೆ ಬಂದಿದೆಯೇ, ಇಲ್ಲವೋ ಎಂಬ ವಿವೇಚನೆ ಮಾಡದೇ[ಅಂದರೆ ವೊಡೇವಾಲೋದು ಅಂದರೆ ತೆನೆಗಳಲ್ಲಿ ಕಾಳು ಬಲಿತು ತೆನೆಗಳು ಭಾರವಾಗಿ ನೆಲಕ್ಕೆ ಬಾಗುವುದು ಎಂದು ಅರ್ಥ.] ಬೆಳೆಯನ್ನು ಕಟಾವು ಮಾಡಿದರೆ ತುಂಬಾ ನಷ್ಟ ಸಂಭವಿಸುತ್ತದೆ. ಕಾಳುಗಳು ಜೊಳ್ಳಾಗುತ್ತವೆ. ಮೇದೆ ಹಾಕಿದರೆ ಅದು ಬರೀ ಹುಲ್ಲಾಗುತ್ತದೆ.

'ಆರಂಭದ ಬುಡ ಕಷ್ಟ, ಅಧಿಕಾರದ ತುದಿ ಕಷ್ಟ'

ಒಕ್ಕಲುತನ ಒಂದು ಹಂತಕ್ಕೆ ಬರುವಂತೆ ಮಾಡುವುದು ತುಂಬಾ ಕಷ್ಟ ಒಮ್ಮೆ ಚೆನ್ನಾಗಿ ಸ್ಥಿರಗೊಂಡರೆ ನಂತರದ ದಿನಗಳಲ್ಲಿ ಚೆನ್ನಾಗಿ ನಿಭಾಯಿಸಬಹುದು. ಆದರೆ ಅಧಿಕಾರ ಹಾಗಲ್ಲ. ಮೊದಮೊದಲು ಕೈಬೀಸಿಕೊಂಡು ಕಾಲಹಾಕಬಹುದು. ಆಗ ಜವಾಬ್ದಾರಿ ಇರುವುದಿಲ್ಲ. ಆದರೆ ಬಡ್ತಿ ಸಿಕ್ಕು ಅಧಿಕಾರದಲ್ಲಿ ಮೇಲಕ್ಕೇರಿದಂತೆಲ್ಲಾ ಜವಾಬ್ದಾರಿ ಹೆಚ್ಚಾಗಿ ತನ್ನ ಮೇಲೆಯೇ ಬೀಳುವಂತಾಗುತ್ತದೆ.

'ಉತ್ತೋದ ಹೊಲಾನ ಬಿತ್ತೋನು ಕೆಡಿಸಿದ'

ಚೆನ್ನಾಗಿ ಉಳುಮೆ ಮಾಡಿ ಹಸನು ಮಾಡಿದ ಹೊಲದಲ್ಲಿ ಅನುಭವ ಇರುವವರು ಬಿತ್ತನೆ ಮಾಡಿದರೆ ಚೆನ್ನಾಗಿರುತ್ತದೆ. ಹಾಗಾಗದೆ ಬಿತ್ತುವ ಕಾರ್ಯದ ಅನುಭವ ಇಲ್ಲದ ವ್ಯಕ್ತಿ ಬಿತ್ತನೆ ಮಾಡಲು

ಹೋದಾಗ ಒಬ್ಬರು ಮಾಡಿದ ಒಳ್ಳೆಯ ಕೆಲಸವನ್ನು ಮತ್ತೊಬ್ಬರು ಹಾಳುಮಾಡಬಲ್ಲರು ಎಂದು ಇದರ ಅರ್ಥ.

'ಹಸಿಅಡಕೆ ಬೀಳು, ಗೋಟಡಕೆ ಮೇಲು'

ಹಸಿ ಅಡಕೆಯೆಂದರೆ ಒಣಗಿಸದ ಅಥವಾ ಬೇಯಿಸದ ಅಡಕೆಯಾಗಿರುತ್ತದೆ. ಇದನ್ನು ತಿಂದರೆ ಆರೋಗ್ಯಕ್ಕೆ ಒಳ್ಳೆಯದಲ್ಲ. ಅದರಲ್ಲಿ ಒಗರು ಪದಾರ್ಥವಿದ್ದು, ಗಂಟಲುಕಟ್ಟುತ್ತದೆ, ತಲೆಸುತ್ತುತ್ತದೆ. ಚೆನ್ನಾಗಿ ಒಣಗಿಸಿದ ಗೋಟಡಿಕೆಯಲ್ಲಿ ಒಗರಿನ ಅಂಶ ತೀರಾ ಕಡಿಮೆಯಿದ್ದು, ಯಾವ ದುಷ್ಪರಿಣಾಮವಾಗುವದಿಲ್ಲ. ಆದ್ದರಿಂದ ಗೋಟಡಿಕೆ ಹಸಿ ಅಡಿಕೆಗಿಂತ ಮೇಲು ಎಂಬುದು ಈ ಮಾತಿನ ಅರ್ಥವಾಗಿದೆ.

'ಒಕ್ಕಲಿದ್ದರೆ ಊರು, ಮಕ್ಕಳಿದ್ದರೆ ಮನೆ ಅಕ್ಕರೆಯಿದ್ದರೆ ತವರು'

ರೈತರು ಇದ್ದರೆ ಹೊಲ, ಗದ್ದೆ ಮತ್ತು ತೋಟಗಳು ಕಂಗೊಳಿಸಿ ಊರಿಗೆ ಸೊಗಸು. ಹಾಗೆಯೇ ಮಕ್ಕಳು ಮನೆಯಲ್ಲಿ ಇದ್ದರೆ ಆ ಮನೆಯಲ್ಲಿ ಸಂತೋಷ ತುಂಬಿರುತ್ತದೆ. ಅದೇ ರೀತಿ ಮದುವೆಯಾದ ಹೆಣ್ಣುಮಕ್ಕಳಿಗೆ ಅಕ್ಕರೆಯಿಂದ ಕರೆದುಕೊಂಡು ಹೋಗುವವರಿದ್ದರೆ ಅಂತಹ ತವರು ಸ್ವರ್ಗ.

'ಒಡೇರಯ್ಯ ಒಕ್ಕಲಿಲ್ಲ, ಒಳಗೆರೆ ಗದ್ದೆ ಅಲ್ಲ'

ಒಕ್ಕಲು ಎಂದರೆ ರೈತ. ಕೃಷಿ ಕೆಲಸದಲ್ಲಿ ನಿರತನಾಗಿರುವವನು ಸದಾ ದುಡಿಯುವುದೊಂದೇ ಅವನ ಗುರಿ. ಆದರೆ ಅಲ್ಲಿ ಇಲ್ಲಿ ಭಿಕ್ಷೆ ಬೇಡಿ ಬದುಕುವ ಒಡೇರಯ್ಯ ಮೈಮುರಿದು, ದುಡಿದು ಕೆಲಸ ಮಾಡಲು ಸಾಧ್ಯವೇ, ಹಾಗಾಗಿ ಅವನು ರೈತನಾಗಲು ಸಾಧ್ಯವಿಲ್ಲ. ಅದೇ ಕೆರೆಯ ಅಂಗಳದಲ್ಲಿ ಭತ್ತ ನಾಟಿ ಮಾಡಿದರೆ ಮಳೆ ಬಂದು ಕೆರೆ ತುಂಬಿದರೆ ಅದೆಲ್ಲಾ ಮುಳುಗಡೆಯಾಗುತ್ತದೆ? ಆದ್ದರಿಂದ ತಿಳಿದು ತಿಳಿದು ಇಂತಹ ತಪ್ಪು ಮಾಡಿದಂತಾಗುತ್ತದೆ.

'ಭರಣಿ ಮಳೆ ಹುಯ್ದರೆ ಧರಣಿಯೆಲ್ಲಾ ಬೆಳೆ'

ಭರಣಿ ನಕ್ಷತ್ರದ ಮಳೆ ಮಳೆಗಾಲದ ಆರಂಭವನ್ನು ಸೂಚಿಸುತ್ತದೆ. ಆಗ ಮಳೆಯಾದರೆ ರೈತನಿಗೆ ಸಮೃದ್ಧಿಯೆಂಬ ನಂಬಿಕೆ. ಈ ಮಳೆ ಭೂಮಿಗೆ ಬಿದ್ದ ಕೂಡಲೆ ಎಳ್ಳು, ಭತ್ತ ಮುಂತಾದವುಗಳನ್ನು ಬಿತ್ತುತ್ತಾರೆ. ಭರಣಿ ಮಳೆಯಾದರೆ ಭೂಮಿಯೆಲ್ಲಾ ಹಚ್ಚ ಹಸಿರಾಗುತ್ತದೆ.

'ಮಗೆ ಮಳೆ ಹುಯ್ದರೆ ಮಗೆ ಗಾತ್ರ ತೆನೆ'

ಮಗೆ ಮಳೆ ಎಂದರೆ ಮಖಾ ನಕ್ಷತ್ರದ ಮಳೆ. ಈ ಮಳೆ ಚೆನ್ನಾಗಿ ಆದರೆ ರಾಗಿ ಬೆಳೆ ಬಲು ಹುಲುಸಾಗಿ ಫಲಿಸುತ್ತದೆ. ಈ ಮಳೆ ಬೀಳುವ ವೇಳೆಗೆ ರಾಗಿ ಬೆಳೆಯಲ್ಲಿ ತೆನೆ ಮೂಡುವುದುಂಟು. ಹಾಗಾಗಿ ತೆನೆಗಳು ಬಲಿತು ಕೈತುಂಬ ಫಸಲು ಸಿಗುವುದು ಖಚಿತ.

'ಹುಳ್ಳಿ ಹುಳಿತರೆ ಜೋಳಕ್ಕೆ ಕಡೇನಾ?'

ಹುರುಳಿ ಕಾಳು ಹಳೆಯದಾದಷ್ಟು ಒಳ್ಳೆಯದೇ. ಸಂಗ್ರಹಣೆಯಲ್ಲಿ ಅವು ಕೆಟ್ಟು ಹಾಳಾಗುವದಿಲ್ಲ ಆದರೆ ಜೋಳ ಹಾಗಲ್ಲ. ಅವುಗಳನ್ನು ಸ್ವಲ್ಪ ಕಾಲ ಇಟ್ಟರೂ ಮುಗ್ಗಲು ಹಿಡಿಯುತ್ತವೆ. ಅಥವಾ ಹುಳುತಿಂದು ಹಾಳಾಗುತ್ತವೆ. ಹುರುಳಿ ಹಳೆಯದಾದರೂ ಜೋಳಕ್ಕಿಂತ ಕಡೆಯಾಗಲು ಸಾಧ್ಯವಿಲ್ಲ. ಈ ಗಾದೆಯಲ್ಲಿ ಎರಡು ವಿದಧ ವಸ್ತುಗಳ ಗುಣ ವಿಶೇಷಗಳನ್ನು ಹೋಲಿಸಲಾಗಿದೆ.

'ಅಂಗ್ಯೆ ಹಾಗೆ ಹೊಲಾ ಮಾಡಿದ್ರೆ, ಮುಂಗ್ಯೆ ತುಂಬಾ ತುಪ್ಪ'

ಅಂಗೈಯಲ್ಲಿ ತುಪ್ಪ ಸುರಿದರೆ ಅದು ಪಕ್ಕಕ್ಕೆ ಹೋಗದೆ ಅಲ್ಲಿಯೇ ಉಳಿಯುತ್ತದೆ. ಅದರ ಅರ್ಥ ಅಂಗೈ ರೀತಿ ಹೊಲ ಮಾಡಿದರೆ ಅದರ ಮೇಲ್ಮಣ್ಣು ಹಾಗೂ ತೇವಾಂಶಗಳು ಅಲ್ಲಿಯೇ ಉಳಿಯುತ್ತವೆ. ಅದಕ್ಕೆ ಹಾಕಿದ ಗೊಬ್ಬರ ಗೋಡುಗಳು ಕೊಚ್ಚಿಹೋಗದೆ ಬೆಳೆಗೆ ಸಿಗುವುದರಿಂದ ಫಸಲು ಚೆನ್ನಾಗಿ ಬಂದು ರೈತನಿಗೆ ತುಪ್ಪ ತಿಂದಂತೆ ಆಗುತ್ತದೆ ಎಂದು ಅರ್ಥ.

'ಅಸ್ತದ ಮಳೇಲಿ ಆರಂಭ ಬೇಡ, ಚಿತ್ತೆ ಮಳೇಲಿ ಹೇರಾಟ ಬೇಡ'

ಅಸ್ತದ ಮಳೆ ಹಸ್ತ ನಕ್ಷತ್ರದ ಮಳೆ. ಮುಂಗಾರಿನ ಕಡೆಯ ಭಾಗದಲ್ಲಿ ಬರುವ ಮಳೆಯಾಗಿದೆ. ಈ ಮಳೆಗೆ ಬಿತ್ತನೆ ಮಾಡಿದರೆ ಮುಂಬರುವ ದಿನಗಳಲ್ಲಿ ಹೆಚ್ಚಿನ ಮಳೆಗಳು ಬರುವುದಿಲ್ಲ. ಹಾಗಾಗಿ ಈ ಬೆಳೆ ಸರಿಯಾಗಿ ಬರಲಾರದು. ಅದೇ ರೀತಿ ಹಸ್ತ ಮಳೆಯ ನಂತರ ಬರುವ ಚಿತ್ತೆ ಮಳೆ ಇದ್ದಕ್ಕಿದ್ದಂತೆ ಸುರಿಯುವ ಮಳೆಯಾಗಿದೆ. ಅದರಿಂದಾಗಿ ಕಟಾವಿಗೆ ಬಂದ ಫಸಲನ್ನು ಕೊಯ್ಲು ಮಾಡಿ ಸಾಗಿಸುವುದು ಬಲುಕಷ್ಟ. ಇದು ರೈತರೆಲ್ಲರ ಅನುಭವವಾಗಿದೆ.

'ಆರಿದ್ರೆ ಮಳೆಗೆ ಆಗಿರುವ ಉಕ್ಕೆಗೆ ಬಿತ್ತುಬಿಡು, ಚಿತ್ತೆ ಮಳೆ ಎಲ್ಲಿಂದಾದ್ರೂ ಬರ್ತದೆ'

ಮೃಗಶಿರದ ನಂತರ ಬರುವುದೇ ಆರಿದ್ರ ಮಳೆ. ಅದುವರೆಗೆ ಮಾಡಿದ ಉಳುಮೆಗೆ ಸಾಧ್ಯವಿದ್ದಷ್ಟು ಬಿತ್ತನೆ ಮಾಡುವುದು ಒಳ್ಳೆಯದು. ಅದಾದ ನಂತರ ಹಸ್ತ, ಚಿತ್ತ, ಮಳೆಗಳು ಬಾರದೇ ಇರುವುದಿಲ್ಲ ಹಾಗಾಗಿ ಅಂತಹ ಬೆಳೆ ಹಾಳಾಗದು. ಎಂಬ ನಂಬಿಕೆ. ಅಲ್ಲದೆ ಚಿತ್ತೆ ಮಳೆ ನಂಬಿಕೆಯ ಮಳೆಯಾಗಿದೆ.

'ಸ್ವಾತಿ ಮಳೆ ಬಂದ್ರೆ ಮುತ್ತಿನಂಥ ಜೋಳ'

ಸ್ವಾತಿ ಎಂದರೆ ಜಿನುಗು ಮಳೆ. ಇದು ಸಾಮಾನ್ಯವಾಗಿ ಸಮುದ್ರದ ಮೇಲೆ ಸುರಿದಾಗ ಹವಳದ ಮುತ್ತುಗಳಾಗುತ್ತವೆ ಎಂಬ ಪ್ರತೀತಿ. ಉತ್ತರ ಕರ್ನಾಟಕದಲ್ಲಿನ ಬೆಳೆಗೆ ಇಂತಹ ಸೋನೆ ಮಳೆ ಬಲು ಅನುಕೂಲಕರ. ಹಾಗಾಗಿ ತೆನೆಗಳು ತುಂಬ ಬೆಳ್ಳನೆಯ ಕಾಳು ಕಟ್ಟಿ ಪೋಣಿಸಿದ ಮುತ್ತುಗಳಂತೆ ಕಾಣುತ್ತವೆ.

'ಹೆಡ್ಡನ ಬೇಸಾಯ ಗೊಬ್ಬರದಲ್ಲಿ'

ಹೆಡ್ಡ ಅಂದರೆ ಏನೂ ತಿಳಿಯದವನು. ಅಂತವನೂ ಸಹ ಉತ್ತಮ ಬೆಳೆ ತೆಗೆಯಬಲ್ಲ. ಅದರ ಗುಟ್ಟು ಧಾರಾಳವಾಗಿ ಹಾಕುವ ಗೊಬ್ಬರ. ಹಾಗೆ ಹಾಕಿದರೆ ಯಾವ ಬೆಳೆಬಾರದೆ ಇರುತ್ತದೆ. ಗೊಬ್ಬರ ಹಾಕದೆ ಇದ್ದರೆ ಕೆಲಸ ಮಾಡಿದ್ದು ವ್ಯರ್ಥ.

'ಹಸ್ತ ರೈತನಿಗೆ ಹಸ್ತವಿತ್ತ ಮಳೆ'

ಹಸ್ತ ನಕ್ಷತ್ರದ ಮಳೆ ಬಹುಮುಖ್ಯವಾದ ಮಳೆ. ರೈತರಿಗೆ ಈ ಮಳೆ ಬಂದೇ ಬರುತ್ತದೆ ಎಂಬ ನಂಬಿಕೆ. ಈ ಮಳೆ ಬಂದರೆ ರಾಗಿ, ಅವರೆ, ಜೋಳ ಮುಂತಾದ ಬೆಳೆಗಳು ಬಹುಚೆನ್ನಾಗಿ ಫಲಿಸುತ್ತವೆ. ಕಾಳು ಬಲಿಯುವ ಹೊತ್ತಿಗೆ ಈ ಮಳೆ ಬರುವುದು ಸಹಜ. ರೈತರೆಲ್ಲರಿಗೂ ಕಾಳು, ಕಡ್ಡಿ, ಮೇವು ಯಥೇಚ್ಛವಾಗಿ ಸಿಗುತ್ತದೆ. ಹಾಗಾಗಿ ಇದನ್ನು ಹಸ್ತವಿತ್ತ ಅಥವಾ ಅಭಯವಿತ್ತು ರೈತರ ದನಕರುಗಳನ್ನು ಕಾಪಾಡುವ ಮಳೆ ಎನ್ನುತ್ತಾರೆ. ಈ ಮಳೆಯಲ್ಲಿ ಕೆರೆ ಕುಂಟೆಗಳು ತುಂಬಿ ಎಲ್ಲಾ ಕಡೆ ಹಸಿರು ಕಂಡುಬರುತ್ತದೆ.

'ಎತ್ತಿಲ್ಲದೋನಿಗೆ ಕೋಣನೇ ಸಂಜೀವ'

ಕೆಲವು ರೈತರಿಗೆ ಎತ್ತುಗಳನ್ನು ಕಟ್ಟಲು ಸಾಮಾರ್ಥ್ಯ ಇರುವುದಿಲ್ಲ. ಎತ್ತುಗಳ ಬೆಲೆ ದುಬಾರಿ.

ಆದರೆ ಹಾಗೆಂದ ಮಾತ್ರಕ್ಕೆ ವ್ಯವಸಾಯವನ್ನು ಕೈಬಿಡಲು ಸಾಧ್ಯವೇ? ಅಂತವರಿಗೆ ಎಮ್ಮೆ, ಕೋಣಗಳೇ ಸರ್ವಸ್ವ. ಅವು ಕೃಷಿಕೆಲಸವನ್ನು ಚುರುಕಾಗಿ ಮಾಡದಿದ್ದರೂ ಅವರ ಅಂತಸ್ತಿಗೆ ಕೋಣಗಳೇ ದೊಡ್ಡ ಆಸ್ತಿಯಾಗಿವೆ.

'ಉಳುಮೆಯ ಕಾಲಕ್ಕೆ ಯಾತ್ರೆ ಮಾಡಿದರೆ, ಕಟಾವಿನ ಕಾಲಕ್ಕೆ ಕತ್ತಿ ಹುಡುಕಬೇಕಿಲ್ಲ.'

ಇದರ ಅರ್ಥ ಒಕ್ಕಲಿಗರು ಕಾಲಕಾಲಕ್ಕೆ ತನ್ನ ಹೊಲಗದ್ದೆಗಳನ್ನು ಉತ್ತು ಬಿತ್ತಿ ಬೆಳೆದರೆ ನಿರೀಕ್ಷಿಸಿದಷ್ಟು ಕಾಳು ಸಿಗುತ್ತವೆ. ಅವನು ಅದನ್ನು ಬಿಟ್ಟು ಹದಬೆದೆಯಲ್ಲಿ ಯಾತ್ರೆ ಜಾತ್ರೆಯಂತ ಕಾಲಹರಣ ಮಾಡಿದರೆ, ಹೊಲದಲ್ಲಿ ಬೆಳೆಯು ಇರಲು ಹೇಗೆ ಸಾಧ್ಯ?. ಅಂದ ಮೇಲೆ ಕೊಯ್ಯಲು ಕುಡುಗೋಲು ಯಾತಕ್ಕೆ ಎಂಬ ಅರ್ಥ.

'ಹತ್ತಿ ಬಿತ್ತದ ಒಕ್ಕಲಿಗನಿಲ್ಲ, ಅತ್ತೆಯನ್ನು ಬಯ್ಯದ ಅಳಿಯನಿಲ್ಲ'.

ಹತ್ತಿ ವಾಣಿಜ್ಯ ಬೆಳೆ. ಉತ್ತರಕರ್ನಾಟಕದಲ್ಲಿ ಸಾಮಾನ್ಯವಾಗಿ ಎಲ್ಲರು ಹತ್ತಿಯನ್ನು ಬೆಳೆಯುತ್ತಾರೆ. ಅದನ್ನು ಬಿತ್ತಿ ಬೆಳೆಯದ ರೈತರು ಅಪರೂಪ. ಅದೇ ರೀತಿ ಮಗಳನ್ನು ಕೊಟ್ಟು ಅತ್ತೆ ತಾಯಿಗೆ ಸಮಾನಳಾದರೂ ಅಳಿಯನಾದವನು ಅತ್ತೆಯನ್ನು ಬಯ್ಯದೆ ಬಿಡನು. ಅದು ಲೋಕರೂಢಿಯಾಗಿದೆ.

'ಸುಂಕದವನು ಗೋದಾನ ಮಾಡಿದಹಾಗೆ'.

ಸುಂಕದವನು ಅಂದರೆ ಸುಂಕ ವಸೂಲು ಮಾಡುವವನು. ಅವನಿಗೆ ಕನಿಕರ, ದಯಾದಾಕ್ಷಿಣ್ಯಗಳು ಇರುವುದಿಲ್ಲ. ಒಂದು ವೇಳೆ ಅವನ ಮನಸ್ಸು ಮೃದುವಾಗಿದ್ದೇ ಆದರೆ ಸುಂಕ ವಸೂಲು ಮಾಡಲು ಆಗುವುದಿಲ್ಲ. ಅವನು ಕರ್ತವ್ಯ ಭ್ರಷ್ಟನಾಗುತ್ತಾನೆ. ಅವನ ಮನಸ್ಸು ಯಾವಾಗಲೂ ಕಠಿಣವಾಗಿರಬೇಕು. ಅಂತಹ ಗುಣಗಳಿರುವ ಸುಂಕದವನು ಹಸುವನ್ನು ದಾನಮಾಡುವುದು ಎಲ್ಲಾದರುಂಟೆ ಅದು ಸಾಧ್ಯವಿಲ್ಲ.

'ವಡ್ಡು ಇಲ್ಲದ ಹೊಲ ಗೊಡ್ಡೆಮ್ಮೆ ಇದ್ದಂತೆ'

ವಡ್ಡು ಅಂದರೆ ಬದು. ಹೊಲ ಸಮತಟ್ಟಾಗಿರಲಿ, ಇಳಿಜಾರಿನಿಂದ ಕೂಡಿರಲಿ, ಅಲ್ಲಲ್ಲಿ ಹಾಗೂ ಸುತ್ತ ಎತ್ತರದ ಬದುಗಳನ್ನು ಹಾಕಬೇಕು ಹಾಗೆ ಮಾಡಿದಲ್ಲಿ ಬಿದ್ದ ಮಳೆಯ ನೀರು ಅಲ್ಲಿಯೇ ಇಂಗಿ ತೇವಾಂಶ ಭೂಮಿಯಲ್ಲಿ ಉಳಿದು ಬೆಳೆಗಳಿಗೆ ಅನುಕೂಲಕರ. ಅದೇ ವಡ್ಡು ಇಲ್ಲದೆ ಹೋದರೆ ಫಲವತ್ತತೆ ನಷ್ಟವಾಗುತ್ತದೆ. ಹಾಗೆ ಕರು ಹಾಕದ ಗೊಡ್ಡೆಮ್ಮೆಗೆ ಆರೈಕೆ ಮಾಡಿದರೆ ಅದು ಕೂಡ ವ್ಯರ್ಥ.

'ಎದ್ದು ಹೊಲ ನೋಡು, ಬಿದ್ದ ಮಳೆಗೆ ಬಿತ್ತು'

ರೈತನಾದವನು ಬೆಳಿಗ್ಗೆ ಎದ್ದ ಕೂಡಲೇ ಹೊಲದ ಕಡೆ ಹೋಗಿ ಅಡ್ಡಾಡಿ ಬರಬೇಕು. ಅದು ಅವನ ದಿನಚರಿಯಾಗಬೇಕು. ಆ ರೀತಿ ನೋಡದವನಿಗೆ ಹೊಲಗದ್ದೆಗಳು ಯಾತಕ್ಕೆ? ಅದೇ ರೀತಿ ಮಳೆ ಬಿದ್ದ ಕೂಡಲೇ ಬಿತ್ತನೆ ಕೆಲಸಮಾಡುವುದು ಬುದ್ಧಿವಂತನ ಕೆಲಸ. ಸಿಕ್ಕಿದ ಅವಕಾಶವನ್ನು ಕಳೆದುಕೊಳ್ಳಬಾರದು.

'ಉತ್ತ ಹೊಲದಲ್ಲಿ ಹೆಂಟೆ, ಮಾರಿಗುಡಿಯಲ್ಲಿ ಗಂಟೆ'

ತೇವವಿದ್ದಾಗ ಹೊಲ ಉತ್ತರೆ ಹೆಂಟೆಗಳು ಏಳುವುದಿಲ್ಲ. ಹದವಾಗಿದ್ದಾಗ ಉತ್ತು ಹರಗಬೇಕು. ಆಗ ಮಣ್ಣು ಹುಡಿಹುಡಿಯಾಗಿದ್ದು ಬಿತ್ತಿದ ಕಾಳು ಸಲೀಸಾಗಿ ಮೊಳೆಯಬಲ್ಲದು. ತೇವ ಆರಿ ಭೂಮಿ ಬಿಗುವಾದಾಗ ಉಳುಮೆ ಮಾಡಿದರೆ ದೊಡ್ಡ ದೊಡ್ಡ ಹೆಂಟೆಗಳು ಏಳುವುದು ಸಹಜ. ಅಲ್ಪ ಸ್ವಲ್ಪ ಮಳೆಯಾದರೂ ಅವು ಕರಗುವುದಿಲ್ಲ. ಬಿತ್ತನೆ ಕೆಲಸ ಸರಿಯಾಗದು. ಅಂತಹ ವ್ಯವಸಾಯ ಮಾರಮ್ಮನ ಗುಡಿಯಲ್ಲಿನ ಗಂಟೆಯಂತೆ.

'ಹಾಳು ಬಿದ್ದ ಹೊಲ ಹಾಗಕ್ಕು ಬೇಡ'.

ವ್ಯವಸಾಯ ಮಾಡದೆ ಬೀಡು ಬಿಟ್ಟ ಭೂಮಿಯಲ್ಲಿ ಕಳೆ–ಕಸ, ಮುಳ್ಳುಗಿಡಗಳು, ಹುತ್ತಗಳು ಮುಂತಾದವು ಬೆಳೆದು ಓಡಾಡಲು ಕಷ್ಟವಾಗುತ್ತದೆ. ಅದರ ಮುಖಾಂತರ ಹಾದು ಹೋಗುವುದು ಭಯ ಉಂಟು ಮಾಡುವಂತದ್ದು ಬೆಳೆಯಿರುವ ಹೊಲವಾದರೆ ನಿರ್ಭಯದಿಂದ ಓಡಾಡಬಹುದು.

'ಕರಲು ಹೊಲ ಮಾಡಬೇಡ, ಕಳ್ಳನ ಗೆಳೆತನ ಮಾಡಬೇಡ'.

ಕರಲು ಹೊಲವೆಂದರೆ ಗರಜು ಭೂಮಿ. ಅದು ಫಲವತ್ತಾಗಿರುವುದಿಲ್ಲ. ಅದರಲ್ಲಿ ಏನು ಬೆಳೆಯಿಟ್ಟರೂ ಫಲಿಸುವುದಿಲ್ಲ. ಹಾಗೆಯೇ ಕಳ್ಳನನ್ನು ನಂಬಿದರೆ ಯಾವತ್ತಿದ್ದರೂ ಮೋಸವೇ. ಅವನ ಸಹವಾಸ ಒಳ್ಳೆಯದಲ್ಲ.

ರೈತರ ಕೃಷಿ ಚಟುವಟಿಕೆಯಾದ ಉತ್ತುವುದು, ಬಿತ್ತುವುದು, ಮಳೆ, ಬೆಳೆ, ತೆರಿಗೆ, ಒಕ್ಕಲು, ಅನುಭವ, ನಂಬಿಕೆಯ ನುಡಿಗಳು ಮುಂತಾದವು ಇಂತಹ ಗಾದೆಗಳು ಸೃಷ್ಠಿಯಾಗಲು ಕಾರಣವಾಗಿವೆ. ಹಿರಿಯರ ಇಂತಹ ನುಡಿಗಳು ಮುಂದಿನ ತಲೆಮಾರಿನ ಜನರಿಗೆ ದಾರಿದೀಪಗಳಾಗುತ್ತವೆ. ಜನಪದರ ಇಂತಹ ಅನುಭವದ ನುಡಿಗಳು ಕೃಷಿಕರು ಬಳಸುವ ಸಾಧನಗಳು, ಭೂಮಿಯ ಮಹತ್ವ, ರೈತನ ಜೀವನ, ಬುದ್ಧಿವಂತಿಕೆಯ ಚರಿತ್ರೆಯನ್ನು ಬಿಚ್ಚಿಟ್ಟು, ವ್ಯವಸಾಯದ ಮಹತ್ವವನ್ನು, ಸ್ವರೂಪವನ್ನು ಕಟ್ಟಿಕೊಡುವಲ್ಲಿ ಮಹತ್ತರವಾದ ದಾಖಲೆಗಳಾಗಿವೆ ಎಂಬುದನ್ನು ಈ ಅಧ್ಯಯನದಿಂದ ತಿಳಿದುಬರುತ್ತದೆ.

೨. ಕೃಷಿ ಮತ್ತು ಒಗಟುಗಳು ಜಗತ್ತಿನ ಯಾವುದೇ ಜನಾಂಗದ ಮೌಖಿಕ ಸಾಹಿತ್ಯ ಪರಂಪರೆಯಲ್ಲಿ ಗೀತೆ, ಕಥೆಗಳ ನಂತರದ ಸ್ಥಾನ ಗದ್ಯಪ್ರಕಾರಗಳಾದ ಗಾದೆ, ಒಗಟುಗಳಿಗೆ ಸಲ್ಲುವಂತದ್ದು. ಕರ್ನಾಟಕ ಜನಪದ ಸಾಹಿತ್ಯ ಪ್ರಕಾರಗಳ ಪ್ರಾದೇಶಿಕ ವೈಶಿಷ್ಟ್ಯತೆಗೆ ಸಂಬಂಧಿಸಿದಂತೆ 'ಒಡಲು' ಎಂಬ ವಿಶಿಷ್ಟ ಪ್ರಕಾರವೂ ಒಗಟಿಗೆ ಪೂರಕ ಸಂಬಂಧವನ್ನು ಹೊಂದಿ ಪ್ರಚಾರವಾಗಿದೆ. ಇವುಗಳಲ್ಲಿ ಹಳ್ಳಿಗರ ಅತ್ಯಂತ ಆಳವಾದ ಜೀವಾನುಭವ, ಹರಿತವೂ ಸೂಕ್ಷ್ಮವೂ ಆದ ಸಾದೃಶ್ಯಜ್ಞಾನಗಳು ಬುದ್ದಿಯ ಜೊತೆಗೂಡಿ ಇಂತಹ ಒಗಟುಗಳು ಮೂಡಿಬರುತ್ತವೆ. ಬುದ್ದಿಯ ಚತುರತೆ, ಕಲ್ಪನಾಶಕ್ತಿ, ಹಾಸ್ಯಪ್ರಜ್ಞೆ, ಭಾಷಾಪ್ರಭುತ್ವ, ಪರಿಸರದ ವಿಶ್ಲೇಷಣೆ ಇವುಗಳ ಜೊತೆಗೆ ಉದ್ದೇಶ ಪೂರಿತವಾದ ಅಸಂಗತ ಸಂಯೋಜನೆ, ಒಟ್ಟುಗೂಡಿಸುವ ಅಂಶಗಳು ಸೇರಿಕೊಂಡಿರುತ್ತವೆ. ಒಗಟನ್ನು ಕುರಿತು ಎಚ್.ಜೆ.ಲಕ್ಕಪ್ಪಗೌಡರು ಈ ರೀತಿ ಹೇಳುತ್ತಾರೆ."ಒಗಟಿಗೆ ಸಂವಾದಿಯಾಗಿ ಭಾರತದ ಹಾಗೂ ಪ್ರಪಂಚದ ಬೇರೆ ಬೇರೆ ಭಾಷೆಗಳಲ್ಲಿ ಸಂವಾದಿ ಪದಗಳು ದೊರೆಯುತ್ತವೆ. ಒಗಟು, ಒಡಪು ಬಂಟು ಮುಂಡಿಕೆ. ಬ್ರಹ್ಮೋದ್ಯ, ಪ್ರಶ್ನೆ, ಕೂಟ, ಪ್ರಹೇಳಿಕಾ, ವಿಡಿಕಥಾ, ವಿಡಿತಹುತಿ, Riddle ಮುಂತಾದ ಹೆಸರುಗಳು ಇದಕ್ಕಿವೆ. ನಿಜವಾದ ಅರ್ಥವನ್ನು ಉದ್ದೇಶವನ್ನು ಅಡಗಿಸಿಟ್ಟು ಕೇಳುಗನನ್ನು ವಿವಿಧ ಕಲ್ಪನೆಗಳ ಊಹೆಗಳ ಜಗತ್ತಿನಲ್ಲಿ ಓಡಾಡಿಸಿ ಅವನ ಬುದ್ಧಿ ಪ್ರಖರತೆಯನ್ನು ಅನುಭವದ ಆಳವನ್ನು ಸ್ಮರಣಶಕ್ತಿಯನ್ನು ಪರೀಕ್ಷೆಗೀಡುಮಾಡುವ, ಆ ಮೂಲಕ ಹಾಸ್ಯವನ್ನು ಹೊಮ್ಮಿಸುವ, ಬೆರಗನ್ನು ಚಿಮ್ಮಿಸುವ ವಾತಾವರಣವನ್ನು ಕುತೂಹಲದ ಮೊನೆಯ ಮೇಲಿಟ್ಟು ಜೀವಂತಗೊಳಿಸುವ ಅಪೂರ್ವಶಕ್ತಿ ಈ ಒಗಟಿಗಿದೆ".[೮] ಎನ್ನುತ್ತಾರೆ.

ಒಗಟು ಪದಕ್ಕೆ ಪರ್ಯಾಯವಾಗಿ 'ಒಡಚ್ಚಥೆ' 'ಬೆಡಗು' ಎಂಬ ಶಬ್ದಗಳು ಬಳಕೆಯಲ್ಲಿವೆ. ಒಡಚ್ಚಥೆ ಪ್ರಯೋಗ ಒಗಟು ಕಥಾಮೂಲವಾಗಿರುವುದನ್ನು ಸೂಚಿಸಿದೆ. 'ಬೆಡಗು' ಒಗಟು ಪದಾರ್ಥಾಂತರದಿಂದ ಮತ್ತೊಂದನ್ನು ಸಾಂಕೇತಿಕವಾಗಿ ಸೂಚಿಸುವ ಅದರ ಒಂದು ಲಕ್ಷಣವನ್ನೇ

ಹೇಳುತ್ತದೆ. ಒಗಟುಗಳು ಹೆಂಗಸರಲ್ಲಿ, ಮಕ್ಕಳಲ್ಲಿ, ಗಂಡಸರು, ವೃದ್ದರು ಎಲ್ಲರಲ್ಲಿಯೂ ದೊರೆಯುತ್ತವೆ. ಒಗಟುಗಳು ದೇಹದ ಅಂಗಾಂಗಗಳು, ಆಲೋಚನೆಗಳು, ಪ್ರಾಣಿ, ನಿಸರ್ಗ, ವ್ಯವಸಾಯೋಪಕರಣಗಳು, ಊಟೋಪಚಾರಗಳು, ಲೆಕ್ಕಚಾರ, ನಡಾವಳಿಗಳು, ವಿಧಿ ಆಚರಣೆಗಳು, ನೀರು, ನೆಲ, ಆಕಾಶ, ಗುಡುಗು, ಸಿಡಿಲು ಹೀಗೆ ಸಮಸ್ತ ಸಂಗತಿಗಳೂ ವಸ್ತುವಾಗಿ ಹೊಂದಿರುತ್ತವೆ. ಅನೇಕ ವೈವಿಧ್ಯತೆಯಿಂದ ಕೂಡಿದ ಒಗಟುಗಳಿವೆ. ಅನೇಕ ವಿದ್ವಾಂಸರು ವಿಸ್ತಾರವಾದ ಚರ್ಚೆ, ಸಂಶೋಧನೆ ಮಾಡಿ ಒಗಟುಗಳನ್ನು ಕುರಿತು ಬರೆದಿದ್ದಾರೆ. ಸಂಶೋಧಕರು ಸುಮಾರು ಒಗಟುಗಳನ್ನು ಸಂಗ್ರಹಿಸಿದ್ದರೂ ಅನೇಕ ಒಗಟುಗಳು ಅಪ್ರಕಟಿತವಾಗಿಯೇ ಇವೆ. ಈ ಭಾಗದಲ್ಲಿ ಕೆಲವು ಕೃಷಿವಿಷಯಕ್ಕೆ ಪೂರಕವಾದ ಒಗಟುಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

"ನೆಲದಗಲ ಕೂರಿಗಿ
ಮುಗಿಲಗಲ ಬಟ್ಟಲು
ಬೀತ್ತೋದು ಕಾಣಲ್ಲ
ಭೂಮಿಯ ತುಂಬಾ ಬೀಜ ಇಡ್ತಾವೆ".

ಬಿತ್ತುವ ಕ್ರಿಯೆಯನ್ನು ಬಳಸಿಕೊಂಡು ಮಳೆಯನ್ನು ವರ್ಣಿಸುವುದು. ಈ ಒಗಟಿನ ಉದ್ದೇಶವಾಗಿದೆ. ಕೂರಿಗೆ ಬಿತ್ತುವ ಸಾಧನ ಇದರಿಂದ ಬಿತ್ತಿದರೆ ಸಮಪ್ರಮಾಣದಲ್ಲಿ ಬೀಜ ಭೂಮಿಗೆ ಬೀಳುತ್ತದೆ. ಹಾಗೆಯೇ ನೆಲದಗಲದ ಕೂರಿಗೆ ಮಣೆಯಿಂದ ಮುಗಿಲಗಲದ ಬಟ್ಟಲಿನಿಂದ ಮಳೆಯನ್ನು ಬಿತ್ತಲಾಗುತ್ತದೆ ಎಂಬ ಕಲ್ಪನೆ ಸುಂದರವಾಗಿದೆ. ಬಿತ್ತುವುದು ಕಣ್ಣಿಗೆ ಕಾಣಿಸದಿದ್ದರೂ ಅಸಂಖ್ಯಾತ ಮಳೆಯ ಹನಿಗಳು ಬೀಜರೂಪದಲ್ಲಿ ಭೂಮಿಯ ಮೇಲೆ ಬೀಳುತ್ತವೆ.

'ನಾಲ್ಕು ಜನ ಕುಟ್ತಾರೆ, ಇಬ್ಬರು ಕೇರ್ತಾರೆ, ಇಬ್ಬರು ನಿತ್ಗ ನೋಡ್ತಾರೆ, ಒಬ್ಳು ಗೂಡುಸ್ತಾಳೆ'– ಅಂದರೆ, ಹಸು

ಹಸುವಿನ ನಾಲ್ಕು ಕಾಲು, ಎರಡು ಕಿವಿ, ಒಂದು ಕೋಡು, ಬಾಲ– ಇವುಗಳ ಕ್ರಿಯೆಯನ್ನು ಬಣ್ಣಿಸುವ ಒಗಟಾಗಿದೆ.

'ಅಲ್ಲಿ ಉಳು ಉಳು
ಇಲ್ಲಿ ಉಳು ಉಳು
ಸಿಂಗೇರಿ ತಂಕ ಪುಳ್ಳಿ ಉಳು– ಅಂದರೆ, ಕುರಿ ಹಿಕ್ಕೆ

ಕುರಿದಾರಿಯಲ್ಲಿ ಹಿಕ್ಕೆ ಉದುರಿಸಿಕೊಂಡು ಹೋಗುವುದನ್ನು ಪುಳ್ಳಿಉಳು ಎಂಬ ಪದ ಅರ್ಥೈಸುತ್ತದೆ. ಉಳು ಉಳು ಎಂಬ ಪದ ಪುನರಾವರ್ತನೆ ಹಿಕ್ಕೆ ಉದುರುವ ಕ್ರಿಯೆಯನ್ನು ಕಟ್ಟಿಕೊಡುತ್ತದೆ.

ಸಸ್ಯ ಸಂಬಂಧಿ ಒಗಟುಗಳಲ್ಲಿ ಮೆಣಸಿನಕಾಯಿ, ಏಲಕ್ಕಿ, ಅಡಿಕೆ, ಈರುಳ್ಳಿ, ಬಾಳೆ, ಮಾವು, ತೆಂಗು, ಹಲಸಿನ ಕಾಯಿ, ತೊಂಡೆಕಾಯಿ, ಹಾಗಲಕಾಯಿ, ಕಿತ್ತಲೆ, ಶುಂಠಿ, ಗೆಣಸು, ಮಡಿವಾಳಬೇರು, ಚೀಸಿಕಾಯಿ ಇನ್ನೂ ಮುಂತಾದ ಒಗಟುಗಳು ಪ್ರಚಾರದಲ್ಲಿವೆ.

ಉದ್ದುದ್ದದವನೆ ಉರಿಮುಖದವನೆ
ಎದ್ದು ಬಾರೊ ಮುದ್ದುಕುಮಾರ – ಅಂದರೆ, ಮೆಣಸಿನಕಾಯಿ.

ಉದ್ದುದ್ದದವನು ಎನ್ನುವುದು ಮೆಣಸಿನಕಾಯಿ ಉದ್ದನೆಯ ಆಕಾರವನ್ನು, ಉರಿಮುಖದವನು ಎನ್ನುವುದು ಅದರ ಗುಣ ಸ್ವಭಾವವನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

ಹಗ್ಗ ಹಾಸ್ತು ಕ್ವಾಣ ಮುನುಗ್ತು–ಅಂದರೆ, ಚೀನಿಕಾಯಿ

ಅಡ್ಡ ಹರೆ ಮೇಲೆ ದೊಡ್ಡು ಕೂತದೆ–ಅಂದರೆ, ಹಲಸಿನಕಾಯಿ

ಚೀನಿಕಾಯಿ ಬಳ್ಳಿಯನ್ನು ಹಾಸಿದ ಹಗ್ಗಕ್ಕೂ ಅದರ ಗಾತ್ರವನ್ನು ಕೋಣನಿಗೂ ಹೋಲಿಸಲಾಗಿದೆ. ಮರದ ಮೇಲೆ ಇಳಿ ಬಿದ್ದಿರುವ ಒಂದು ವಾಸ್ತವ ಚಿತ್ರದ ಕಲ್ಪನೆ ಹಲಸಿನಕಾಯಿ ಕುರಿತಾದ ಒಗಟಿನಲ್ಲಿದೆ.

'ಗಮ ಗಮ ಗರತಿ ಎಲ್ಲೆಲ್ಲಿರತಿ ಸೀರೆ ಪ್ಯಾಟೇಲಿರತಿ'–ಅಂದರೆ, 'ಮಡಿವಾಳದ ಬೇರು' ಸುವಾಸನೆಯುಕ್ತವಾದ ಈ ಬೇರನ್ನು ಕ್ರಿಮಿಕೀಟಗಳು ಬಾರದಂತೆ ಸ್ತ್ರೀಯರು ಸೀರೆಯಲ್ಲಿಡುತ್ತಾರೆ.

ರೆಕ್ಕೆಯುಂಟು ಹಾರಲಾರೆ

ಕೊಕ್ಕುಂಟು ಕೂಗುಲಾರೆ

ನಾಕಚ್ಚಿದವರಿಗೆ ಉರಿ– ಅಂದರೆ, 'ಶುಂಠಿ'

ರೆಕ್ಕೆ, ಕೊಕ್ಕುಗಳು ಒಂದು ಪಕ್ಷಿಯ ಕಲ್ಪನೆ ಮೂಡಿಸುತ್ತವೆ. ಆದರೆ ಅವು ಶುಂಠಿಯ ಆಕಾರ ಹೇಳುತ್ತವೆ. ಶುಂಠಿಯ ಕಾರಗುಣ ತಿಳಿದು ಬರತ್ತದೆ.

'ನಿತ್ತೂರಕ್ಕನಿಗೆ ನೆತ್ತೀಲೆ ಬಸಿರು

ಕುಂತೂರಕ್ಕನಿಗೆ ಕುಂಡೇಲಿ ಬಸಿರು

ಮಾಳೂರಕ್ಕನಿಗೆ ಕೆನ್ನೇಲಿ ಬಸಿರು'– ಈ ಒಗಟು, ಬಾಳೆ, ಏಲಕ್ಕಿ, ಅಡಿಕೆಗಳು ಫಲ ಹೊಂದುವ ಕ್ರಿಯೆಯನ್ನು ಚಮತ್ಕಾರದ ರೀತಿಯಲ್ಲಿ ಹೇಳುತ್ತದೆ. ಈ ಒಗಟಿನ ಉದ್ದೇಶ, ಕುತೂಹಲ, ವೈಚಿತ್ರ್ಯ ಈ ಎರಡರ ಸಂಮಿಶ್ರಣವಾಗಿದೆ.

'ಅಪ್ಪ ಆಕಾಶಕ್ಕೆ

ಅವ್ವ ಪಾತಾಳಕ್ಕೆ

ಮಗ ಯಾಪಾರಕ್ಕೆ

ಮಗಳು ಮದುವೇಗೆ' – ಅಚಿದರೆ, 'ಅಡಿಕೆಯ ಮರ'

ಈ ಒಗಟಿನಲ್ಲಿ ಕುಟುಂಬದ ಜೀವನದ ಚಿತ್ರವಿರುವಂತೆ ಬಾಹ್ಯದಲ್ಲಿ ಕಾಣುತ್ತದೆ. ಬಹುರೂಪ ಮತ್ತು ಬಹೂಪಯೋಗಿ ಗುಣಗಳನ್ನು ಹೇಳುತ್ತದೆ. ಅಡಿಕೆಮರದ ಬೇರು ಪಾತಾಳದಲ್ಲಿ, ತುಂಡೆ ಆಕಾಶದಲ್ಲಿ, ಅಡಿಕೆ ಹೋಳು ಅಂಗಡಿಯಲ್ಲಿ, ಹಿಂಗಾರ ಹೊಂಬಾಳೆಗಳು ಮದುವೆಯ ಮನೆಯಲ್ಲಿ ಇದು ಒಗಟಿನ ಧನ್ಯಾರ್ಥ ಹೇಳುತ್ತದೆ. ಆದರೆ ಒಂದು ಪುಟ್ಟ ಸಂಸಾರದಲ್ಲಿ ತಂದೆ, ತಾಯಿ, ಮಗ ಮತ್ತು ಮಗಳ ಸ್ಥಾನಮಾನ ಮತ್ತು ಅವರ ಕಾರ್ಯ ಸ್ವಭಾವವನ್ನು ಹೇಳುತ್ತದೆ.

'ತಾಯಿ ಸದರಿ ಮಗಳು ಮಿಟುಗಾಣಿ'– ಅಂದರೆ,ಮೆಣಸಿನ ಹಾಗೂ ಕಾಯಿ, ಇಲ್ಲಿ ಮೆಣಸಿನ ಗಿಡವೇ ತಾಯಿ, ಮೆಣಸಿನಕಾಯಿಯೇ ಮಗಳು, ವಯೋಮಾನ ಮತ್ತು ಮನೋಧರ್ಮಕ್ಕನುಗುಣವಾಗಿ ತಾಯಿ ಮತ್ತು ಮಗಳ ವರ್ತನೆಯನ್ನು ಅರ್ಥಪೂರ್ಣವಾಗಿ ನಿರೂಪಿಸುತ್ತದೆ. ಮೆಣಸಿನಕಾಯಿ ಕುರಿತು ಅನೇಕ ಒಗಟುಗಳಿವೆ.

'ಅಂಗಿ ಕಳಿ ಬಾವ್ಯಾಗಿಳಿ'– ಅಂದರೆ, 'ಬಾಳೆಹಣ್ಣು'

'ಅಕ್ಕ ಅಕ್ಕ ಗಿಡನೋಡು

ಗಿಡ ತುಂಬ ಕಾಯ್ ನೋಡು

ಶಿಂದೋಪ್ರ ಬಾಯ್ ನೋಡು'– ಅಂದರೆ, 'ಏಲಕ್ಕಿ'

'ಅಂತರದಾಗ ಆಡೋಗಿಡದ
ಅದರ ಹೊಟ್ಯಾಗ ಸೇರ ಬೆಳ್ಳಿಕಡಗ
ಅದನ್ನ ಹೊಡದೋನು ಹುಬ್ಬಳ್ಳಿ ಹುಡುಗ'– ಅಂದರೆ, 'ತೆಂಗಿನ ಕಾಯಿ'

'ಹಸರಂಗಿ ತೊಟ್ಟಾನ, ಹಳದಿ ಚಣ್ಣಾ
ಹುಟ್ಟಾನ ವರ್ಷಕ್ಕೊಮ್ಮೆ ಬರತಾನ
ಎಲ್ಲರ ಮನಿ ಹೊಕ್ಕಾನ, ಗಡ್ಡಾ
ಸೀಪಾಕ ಹಚ್ಚಾನ' – ಅಂದರೆ, 'ಮಾವು'

'ಅಡ್ಡಕೋದರ ಚಕ್ರಲ್ಲ
ಉದ್ದಕೋದ್ರ ಶಂಖಲ್ಲ ಮೂಸಿದ್ರ
ವಾಸ್ನಿ, ಹಿಂಡಿದ್ರ ನೀರು, ಬಿಡಿಸಿದ್ರ
'ಹತ್ತಿಪ್ಪತ್ತು'– ಅಂದರೆ, 'ಈರುಳ್ಳಿ'

ಬಣ್ಣದ ಸೀರಿ ಉಟಗೊಂಡ ಮಣ್ಣಾಗ ಕುಂತಾಳ –'ಗಜ್ಜರಿ', ಒಂದು ಕಾಲಿನ ಹಕ್ಕಿಗೆ ಒಂಬೈನೂರ ಮೊಟ್ಟೆ – 'ಜೋಳ',

ಚಿನ್ನದ ಗುಡೀಲಿ ಬೆಳ್ಳಿಲಿಂಗ –'ಹಲಸಿನತೊಳೆ', ದೊಡ್ಡಾಲದ ಮರ ದೊಪ್ಪನೆ ಬಿತ್ತು. ಸಂತೇ ಜನ ಎಲ್ಲ ಚಲ್ಲಾಪಿಲ್ಲಿ– 'ಸೂರ್ಯಸ್ತ', ಹಸಿರು ಹಾವು ಹರದು ಹರದು ಮಟ್ಟೆ ಇಕ್ತು –'ತೊಂಡೆಬಳ್ಳಿ'. ಇನ್ನೂ ಮುಂತಾದ ಒಗಟುಗಳನ್ನು ಕಾಣಬಹುದು. ಇಡೀ ಬದುಕನ್ನು ನಿಸರ್ಗದ ಮಡಿಲಲ್ಲಿ, ಅದರೊಳಗೆ ಒಂದಾಗಿ,ಬದುಕಿನ ಶೋಧನೆ ನಡೆಸುವ ರೀತಿ ಅನನ್ಯವಾದುದು. ಪ್ರಕೃತಿಯ ಅನೇಕ ಬಗೆ ಬಗೆಯ ವಸ್ತು ವೈವಿಧ್ಯತೆಗಳು ಒಗಟುಗಳು ಹುಟ್ಟಿ ಬರಲು ಕಾರಣವಾಗಿವೆ. ಜನಪದಿಯರು ಬುದ್ಧಿಯಕಸರತ್ತನ್ನು, ಅವುಗಳನ್ನು ಬಿಡುಸುವಾಗಿನ ಕೂತುಹಲ ಮತ್ತು ಆಸಕ್ತಿಯನ್ನು ನೋಡಿದರೆ ಅವರ ಬದುಕಿನ ಹುಮ್ಮಸ್ಸು ಅರ್ಥವಾಗುತ್ತದೆ. ಇಂತಹ ಅನೇಕ ಭಾಷಿಕ ವೈವಿಧ್ಯತೆಗಳನ್ನು ಅನೇಕ ಪ್ರಾದೇಶಿಕ ಭಿನ್ನತೆಗಳನ್ನು ಗುರುತಿಸುವುದು ಅಷ್ಟು ಸುಲಭದ ಕೆಲಸವಲ್ಲ.

೩. ಕೃಷಿ ಮತ್ತು ನುಡಿಗಟ್ಟುಗಳು : ನುಡಿಗಟ್ಟು ಎಂದರೆ ಹೇಳಿಕೆ, ರೂಢಿಮಾತು, ಪಡೆನುಡಿ' ಎಂದು ಕನ್ನಡ-ಕನ್ನಡ ಶಬ್ದಕೋಶದಲ್ಲಿ ಹೇಳಲಾಗಿದೆ. 'ಮಾತಿನ ಜೋಡಣೆ, ಒಕ್ಕಣೆ, ನುಡಿವಳಿ ಎಂದು ಸಂಕ್ಷಿಪ್ತ ಕನ್ನಡ ನಿಘಂಟುವಿನಲ್ಲಿ ಅರ್ಥೈಸಲಾಗಿದೆ. "ನುಡಿಗಟ್ಟುಗಳಲ್ಲಿ ಶಬ್ದ ಮತ್ತು ಅರ್ಥಗಳಿಗೆ ಅವಿನಾಭಾವ ಸಂಬಂಧವಿರುತ್ತದೆ. ಅವು ಪಾರ್ವತಿ ಪರಮೇಶ್ವರರ ಹಾಗೆ ಅನ್ಯೋನ್ಯವಾಗಿರುತ್ತವೆ ಎಂದು ಕಾಳಿದಾಸ ಹೇಳುತ್ತಾನೆ. ಶಬ್ದಗಳಿಂದ ನೇರವಾದ ಅರ್ಥವ್ಯಕ್ತವಾದರೆ ಅದನ್ನು ವಾಚ್ಯಾರ್ಥವೆಂದು ಕರೆಯುತ್ತಾರೆ. ವ್ಯಾಚಾರ್ಥವನ್ನುಮೀರಿದ, ವಿಶಿಷ್ಟವಾದ ಭಾವವು ವ್ಯಕ್ತವಾದರೆ ಅದನ್ನು ಲಕ್ಷ್ಯಾರ್ಥವೆಂದುಕರೆಯಲಾಗುತ್ತದೆ. ಆದರೆ ಕಾವ್ಯಗಳಲ್ಲಿ ವ್ಯಂಗ್ಯಾರ್ಥವೆಂದು ಅರ್ಥಬರುತ್ತದೆ. ಆದರೆ

ವ್ಯಂಗ್ಯಾರ್ಥ ನಮಗೆ ಇಲ್ಲಿ ಪ್ರಸ್ತುತವಲ್ಲ. ವಾಚ್ಯಾರ್ಥ ನೀಡುವ ಬಿಡಿ ಬಿಡಿ ಪದಗಳನ್ನು ಸೂಚ್ಯಾರ್ಥಕೊಡುವಂತೆ ಅವುಗಳನ್ನು ಸಮಾಸಗೊಳಿಸಿ ವಿಶಿಷ್ಟ ಅರ್ಥಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಹೀಗೆ ರಚಿತವಾದ ಪದ ಪುಂಜವೇ ನುಡಿಗಟ್ಟು ಎನಿಸುತ್ತದೆ. ನುಡಿಗಟ್ಟು ಆಯಾಭಾಷೆಯ ಜಾಯಮಾನಕ್ಕೆ ಅನುಗುಣವಾಗಿರುತ್ತದೆ. ಆದ್ದರಿಂದ ನುಡಿಗಟ್ಟನ್ನು ಒಂದುಭಾಷೆಯಿಂದ ಮತ್ತೊಂದು ಭಾಷೆಗೆ ಭಾಷಾಂತರಿಸಲು ಬರುವುದಿಲ್ಲ. ಏಕೆಂದರೆ ಇದಕ್ಕೆ ಶಬ್ದಶಃ ಅರ್ಥವಿರುವುದಿಲ್ಲ"[೧೯]. ಅಂತಹ ಕೆಲವು ನುಡಿಗಟ್ಟುಗಳನ್ನು ಇಲ್ಲಿ ಕಾಣಬಹುದು. ಜನಪದೀಯರ ಅನುಭವದ ಹಿನ್ನಲೆಯಲ್ಲಿ ಅನೇಕಾನೇಕ ವೈವಿಧ್ಯದ ನುಡಿಗಟ್ಟುಗಳನ್ನು ಕಾಣುತ್ತೇವೆ. ಪ್ರೊ. ಸುಧಾಕರ ರವರ 'ಜನಪದ ನುಡಿಗಟ್ಟುಗಳ ಕೋಶ' ಎಂಬ ಗ್ರಂಥದ ಆಧಾರದಿಂದ ಈ ಭಾಗದಲ್ಲಿ ಕೃಷಿಸಂಬಂಧಿ ನುಡಿಗಟ್ಟುಗಳಲ್ಲಿ ಕೆಲವನ್ನು ಮಾತ್ರ ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ.

'ಗಾಳಿ ಬಂದಾಗ ತೂರಿಕೊ'

ಈ ನುಡಿಗಟ್ಟು ಬೇಸಾಯ ವೃತ್ತಿಯ ಹಿನ್ನಲೆಯಲ್ಲಿ ಮೂಡಿ ಬಂದಿರುವುದು ಸ್ಪಷ್ಟ. ಒಂದೆರಡು ದಶಕಗಳ ಹಿಂದೆಯಷ್ಟೆ ವ್ಯವಸಾಯದಲ್ಲಿ ಗಾಳಿಗಿದ್ದ ಮಹತ್ವ ಮನ್ನಣೆ ಅಷ್ಟಿಷ್ಟಲ್ಲ. ಈಗ ರಾಶಿ ಯಂತ್ರಗಳು ಬಂದು ನೈಸರ್ಗಿಕ ಗಾಳಿಯ ಮಹತ್ವವನ್ನು ಕಡಿಮೆ ಮಾಡಿವೆ. ಆಗ ಬೆಳಗಿನಿಂದ ಸಾಯಂಕಾಲದವರೆಗೂ ಮೆಟ್ಟನ್ನೇರಿ ತಲೆಮೇಲೆ ಪುಟ್ಟಿ ಹೊತ್ತು ನಿಂತರೂ ತೂರಲಾಗದ ಸಂದರ್ಭಗಳು ಒದಗಿಬರುತ್ತಿದ್ದವು. ರಾಶಿ ಮಾಡಲೂ ವಾಯು ದೇವನ ಕೃಪೆ ಬೇಕೆ ಬೇಕಾಗಿತ್ತು. ಗಾಳಿ ಬೀಸಿದಾಗ ಅದರ ಸದುಪಯೋಗ ಪಡೆದುಕೊಳ್ಳಬೇಕು.

'ಹಗೇವಿಗಿಳಿದಂತಾಗು'

ಧಾನ್ಯ ಸಂಗ್ರಹಿಸಿಡಲು ಭೂಮಿಯ ಒಳಗೆ ಕೊರೆದ ಕಣಜಕ್ಕೆ ಹಗೇವು ಎನ್ನುತ್ತಾರೆ. ಧಾನ್ಯ ತೆಗೆದು ಕೊಳ್ಳಲು ಹಗೇವಿನ ಬಾಯಿ ಕಿತ್ತಕೂಡಲೇ ಒಳಗೆ ಇಳಿಯುವಂತಿಲ್ಲ. ಹಾಗೆ ಇಳಿದರೆ ಉಸಿರು ಕಟ್ಟಿ ಸಾಯುವ ಸಂಭವ ಉಂಟು. ಆದ್ದರಿಂದ ಕಂಬಳಿಯನ್ನು ಹಗೇವಿನ ಒಳಕ್ಕೆ ಬಿಟ್ಟು ತಿರುಗಿಸುತ್ತಾರೆ. ಇದರಿಂದ ಒಳಗಿರುವ ಧೂಳು ದೂಸರ ದೂರವಾಗುತ್ತದೆ. ಗಾಳಿ ಒಳಗೆ ನುಸುಳಿದೆಯೇ ಇಲ್ಲವೆ ಎಂಬುದನ್ನು ಪರೀಕ್ಷಿಸಲು ಒಂದು ದೀಪವನ್ನು ಹಗೇವಿನ ಒಳಗೆ ಬಿಡುತ್ತಾರೆ. ದೀಪ ನಂದದಿದ್ದರೆ ಒಳಗೆ ಆಮ್ಲಜನಕವಿದೆ ಎಂಬುದು ತಿಳಿಯುತ್ತದೆ. ಇದು ರೈತನ ವೈಜ್ಞಾನಿಕವಾದ ಕೃಷಿ ಜ್ಞಾನವಾಗಿದೆ. ಇಷ್ಟಾದರೂ ಹಗೇವಿನ ಒಳಗೆ ಪುಷ್ಕಳ ಆಮ್ಲಜನಕ ಇರುವುದಿಲ್ಲ. ಆದ್ದರಿಂದ ಉಸಿರು ಕಟ್ಟುವಂತಾಗು ಎಂದರ್ಥ.

'ಹೆಗಲು ಕೊಡುವ ಎತ್ತಾಗಿಸು'

ಭಾರವನ್ನು ಹೊರಲು ತಾನಾಗಿ ಮುಂದೆ ಬರುವಂತೆ ಮಾಡು ಎಂಬುದು ಈ ನುಡಿಗಟ್ಟಿನ ಅರ್ಥ. ಗಾಡಿಗೆ ಹೂಡುವ ಎತ್ತುಗಳು ಎಷ್ಟೊಂದು ರೂಢಿಯಾಗಿರುತ್ತವೆ ಎಂದರೆ ಗಾಡಿಯ ಮೂಕು ಎತ್ತುವುದೊಂದೆ ತಡ ನೊಗಕ್ಕೆ ಹೆಗಲು ಕೊಡುತ್ತವೆ. ಅಷ್ಟೆ ಅಲ್ಲ ಕೆಲವು ಎತ್ತುಗಳು ರೈತ ಹೆಸರು ಕರೆದರೆ ಸಾಕು ದೂರದಲ್ಲಿ ಮೇಯಿತ್ತಿದ್ದವು ಓಡಿಬಂದು ನೊಗಕ್ಕೆ ಹೆಗಲು ಕೊಡುವುದನ್ನು ಪ್ರತ್ಯಕ್ಷವಾಗಿ ಕಾಣಬಹುದಾಗಿದೆ. ಅವು ಅಷ್ಟು ತರಬೇತಿಯಾಗಲು ಈ ಹಿಂದೆ ರೈತ ಬಾರುಕೋಲಿನಿಂದ ಹೊಡೆದು ಬಡಿದು ಮಾಡಿರುತ್ತಾನೆ. ಮೇಲವರ್ಗದವರು ಕೀಳವರ್ಗದವರನ್ನು ಇದೆ ರೀತಿ ತರಬೇತಿಗೊಳಿಸಿ

ನಾವು ಇರುವುದೆ ಇಂತಹ ಕೆಲಸ ಮಾಡುವುದಕ್ಕೆ ಎಂಬ ಭಾವನೆ ಬಲವಾಗಿ ಬೇರೂರುವಂತೆ ಮಾಡಿರುವ ಅರ್ಥವಂತಿಕೆ ಈ ನುಡಿಗಟ್ಟಿನಲ್ಲಿದೆ.

'ವಾರದ ಹೊಲಕ್ಕೆ ಗೊಬ್ಬರ ಹೊಡಿ'

ವಾರದ ಎಂದರೆ ಪಾಲಿನ, ಕೋರಿನ ಎಂದರ್ಥ. ವಾರದ ಹೊಲ ಎಂದರೆ ಇಬ್ಬರಿಗೂ ಬೆಳೆಯ ಅರ್ಧ ಭಾಗ ಎಂದು ಕರಾರು ಮಾಡಿಕೊಂಡು ಬೇಸಾಯ ಮಾಡುವ ಒಂದು ಪದ್ಧತಿ. ಸ್ವಂತ ಹೊಲ ಹೆಂಡತಿ ಇದ್ದಂತೆ, ಕೋರಿನ ಹೊಲ ಇಟ್ಟುಕೊಂಡ ಹೆಣ್ಣಿನಂತೆ. ಹೆಂಡತಿಗಿಂತ ಇಟ್ಟುಕೊಂಡವಳ ಮೇಲೆ ಹೆಚ್ಚಿನ ಪ್ರೀತಿ ಇರುವಂತೆ ತನ್ನ ಸ್ವಂತಹೊಲವನ್ನು ಅಲಕ್ಷಮಾಡಿ ಪಾಲಿನ ಹೊಲಕ್ಕೆ ಗೊಬ್ಬರ ಹೊಡಿಯುತ್ತಾನೆ. ಈ ಉತ್ಸಾಹದಲ್ಲಿ ಸ್ವಂತಹೊಲ ಹಾಳಾಗಿ ಹೋಗುತ್ತದೆ. ಆದ್ದರಿಂದ ಮಾಡಬೇಕಾದುದ್ದನ್ನು ಬಿಟ್ಟು ಬೇರೆ ಹೊಲಕ್ಕೆ ದುಡಿಯುವುದು. ಅದಕ್ಕಾಗಿ ತನ್ನ ಹಣ ಶ್ರಮ ವ್ಯಯಿಸುವುದು ಜಾಣತನವಲ್ಲ ಎಂಬ ತಿಳಿವಳಿಕೆ ಈ ನುಡಿಗಟ್ಟಿನಲ್ಲಿದೆ.

'ಹಸುಬೆ ಚೀಲಕ್ಕೆ ತುಂಬು'

ಉದ್ದ ಬಟ್ಟೆಯ, ಮಧ್ಯ ಬಾಯಿಯ ಒಂದು ಚೀಲ ಹಸಬೆ. ಇದರ ಎರಡು ಬದಿಗೂ ದವಸ ಧಾನ್ಯಗಳನ್ನು ತುಂಬಿ ಹೆಗಲ ಮೇಲೆ ಹಾಕಿಕೊಂಡು ಹೋಗುವುದನ್ನು ಕಾಣಬಹುದಾಗಿದೆ. ಹಸಬೆಗೆ ಬಾಯಿ ಒಂದು, ಹೊಟ್ಟೆ ಎರಡು. ಹೆಗಲಿಗೆ ಹಾಕಿಕೊಂಡರೆ ಹಿಂದೊಂದು ಮುಂದೊಂದು ಇಳಿಬೀಳುತ್ತವೆ. ಹಸಬೆಯನ್ನು ಹೊಟ್ಟೆಗೆ ಹೋಲಿಸಿರುವುದು ಅರ್ಥ ಪೂರ್ಣವಾಗಿದೆ. ಪಂಪ ತನ್ನ ಕಾವ್ಯದಲ್ಲಿ ಹಸಬೆಯನ್ನು ಹೊಟ್ಟೆಗೆ ಹೋಲಿಸಿದ್ದಾನೆ.

'ಅಕ್ಕಲಾಯವಾಗಿ ಸಿಕ್ಕು'

ಈ ನುಡಿಗಟ್ಟಿನ ಅರ್ಥ ಪುಗಸಟ್ಟೆ ಸಿಕ್ಕು ಎಂದರ್ಥ. ಹಕ್ಕಲು ಎಂದರೆ ಹೊಲ ಜಾಳಾದ ಮೇಲೆ ಅಲ್ಲಲ್ಲಿ ಬಿದ್ದ ತೆನೆಕಾಳು ಕಾಯಿ ಮೊದಲಾದವುಗಳನ್ನು ಬಡಬಗ್ಗರು ಆಯ್ದುಕೊಳ್ಳುತ್ತಾರೆ. ಅದಕ್ಕೆ ಪ್ರತಿಯಾಗಿ ಅವರು ಏನೂ ಕೊಡಬೇಕ್ಕಾದದ್ದಿಲ್ಲ. ಉಚಿತವಾಗಿ ಸಿಕ್ಕುವ ಪದಾರ್ಥಕ್ಕೆ ಅಕ್ಕಲಾಯವಾಗಿ ಸಿಕ್ಕು ಎಂಬ ನುಡಿಗಟ್ಟಿನ ಬಳಕೆಯಾಗುತ್ತಿದೆ.

'ಉಜ್ಜುಗೊರಡು ಹೊಡಿ'

ಬಡಿಗಾರನ ಹತ್ತಿರವಿರುವ ಒಂದು ಸಲಕರಣೆ ಉಜ್ಜುಗೊರಡು. ಇದು ಕಟ್ಟಿಗೆಯನ್ನು ಅತ್ಯಂತ ನಯಗೊಳಿಸುತ್ತದೆ. ಉತ್ತರ ಕರ್ನಾಟಕದಲ್ಲಿ ಈ ಪದ ಹೆಚ್ಚಾಗಿ ಬಳಕೆಯಿದೆ. ಈ ಸಲಕರಣೆಗೆ ಮೈಸೂರು ಭಾಗದಲ್ಲಿ ಹತ್ತರಿ ಎಂದು, ಮಲೆನಾಡಿನ ಕಡೆಗೆ ಕೀಸುಳಿ ಎಂದು, ತುಮಕೂರು ಬೆಂಗಳೂರು ಭಾಗದಲ್ಲಿ ತೋಬಡ ಎಂದು ಕರೆಯುತ್ತಾರೆ. ಈ ನುಡಿಗಟ್ಟಿಗೆ ನಷ್ಟವನ್ನುಂಟು ಮಾಡು, ನಾಜುಕಾಗಿ ಮೆತ್ತನೆ ಮಾತುಗಳನ್ನಾಡು ಎಂಬ ಅರ್ಥಗಳು ಬರುತ್ತವೆ. ನಯವಂಚಕ ವ್ಯಕ್ತಿಗಳನ್ನು ಕುರಿತು ಗ್ರಾಮೀಣ ಪ್ರದೇಶದಲ್ಲಿ ಬಳಕೆಯಾಗುತ್ತಿದೆ.

'ಎಮ್ಮೆ ಮೇಲೆ ಮಳೆ ಹುಯ್ದಂತೆ ಹೋಗು'

ನೀರಿಗೂ ಎಮ್ಮೆಗೂ ಅದೇನು ನಂಟೋ. ಎಮ್ಮೆಯನ್ನು ಕೆರೆಯಲ್ಲಿ ಬಿಡಬಾರದೆಂಬ ಮತ್ತೊಂದು ಮಾತಿದೆ. ಏಕೆಂದರೆ ನೀರನ್ನು ತುಂಬ ಇಷ್ಟಾಪಡುವ ಎಮ್ಮೆಗಳು ಕೆರೆಯಿಂದ ಬೇಗನೆ ಹೊರಗೆ ಬರುವುದಿಲ್ಲ. ಅಲ್ಲಿಯೇ ಮಲಗಿ ಆನಂದಿಸುತ್ತವೆ. ಎತ್ತು ಹಸುಗಳು ಮಳೆಯಲ್ಲಿ ತೊಯಿಸಿಕೊಳ್ಳಲು ಇಷ್ಟಪಡುವುದಿಲ್ಲ. ಅಷ್ಟೆ ಅಲ್ಲ ಮಳೆ ಬರುವುದನ್ನು ವಾಸನೆಯಿಂದ ಗ್ರಹಿಸಿ ಮನೆಗೆ ಓಡುತ್ತವೆ. ಆದರೆ

ಎಮ್ಮೆ ತನ್ನ ಸಹಜ ನಡಿಗೆಯನ್ನು ಮತ್ತಷ್ಟು ನಿಧಾನಗೊಳಿಸಿ ಮಳೆಯಲ್ಲಿ ಮೀಯುತ್ತಾ ಆನಂದವಾಗಿ ಸಾಗುತ್ತವೆ. ನಿಧಾನ ನಡಿಗೆಗೆ ಈ ನುಡಿಗಟ್ಟಿನ ಬಳಕೆಯಾಗುತ್ತದೆ.

'ಕಡಿದಾದರೂ ಕಷ್ಟವಾಗು ಬಳಿದಾದರೂ ಕಷ್ಟವಾಗು'

ಏನೇ ಮಾಡಿದರೂ ತೊಂದರೆ ತಪ್ಪದಿರುವುದಕ್ಕೆ. ಅಂದರೆ ಅತಿಯಾದ ಅನಾನುಕೂಲಕ್ಕೆ ಈ ನುಡಿಗಟ್ಟು ಬಳಕೆಯಾಗುತ್ತದೆ. ಕಡಿದು, ಬಳಿದು ಎಂಬ ಪದಗಳು ಅಪ್ಪಟ ಕೃಷಿ ಸಂಬಂಧಿ ಪದಗಳಾಗಿವೆ. ಕಡಿದು ಎಂದರೆ ಕುಂಟೆಯ ಅಥವಾ ನೇಗಿಲಿನ ದಿಂಡು ಮತ್ತು ಮೇಣಿಯ ಭಾಗ ಮೇಲಕ್ಕೆದ್ದು ಉಳಲು ಸಾಧ್ಯವಾಗದೆ ಇರುವುದು. ನೇಗಿಲಿನ ದಿಂಡಿನ ಭಾಗ ನೆಲಕ್ಕೆ ಕುಳಿತು ಗುಳದ ಭಾಗ ನೆಲಕ್ಕೆ ತಾಕದೆ ಮೇಲೇಳುವುದರಿಂದ ಉಳಲು ಸಾಧ್ಯವಾಗದಿರುವುದಕ್ಕೆ ಬಳಿದು ಎನ್ನುತ್ತಾರೆ. ಒಟ್ಟಾರೆ ಹಾಗೆ ಮಾಡಿದರೂ ಕಷ್ಟ ಹೀಗೆ ಮಾಡಿದರೂ ಕಷ್ಟ ಎಂಬಂತಹ ಪರಿಹಾರ ಕಾಣದ ತೊಂದರೆಗೆ ಈ ನುಡಿಗಟ್ಟಿನ ಬಳಕೆ ಸಮಯೋಚಿತವೆನಿಸುತ್ತದೆ.

'ಕಣ್ಣಿ ಹಾಕು'

ನೇಗಿಲಿಗೆ ಅಥವಾ ಗಾಡಿಗೆ ಕಟ್ಟಿದ ಎತ್ತುಗಳ ಕೊರಳಿಗೆ ಕಣ್ಣಿ ಅಗಡಿನಿಂದ ಸುತ್ತಿ ಒಳಗೂಟಕ್ಕೆ ಮಲಕು ಹಾಕುತ್ತಾರೆ. ಎಳೆಯಲಾಗದ ಎತ್ತುಗಳು ಪ್ರಯತ್ನ ಪಟ್ಟು ನೊಗವನ್ನು ಹೆಗಲಿನಿಂದ ಕೆಳಕ್ಕೆ ಹಾಕಿ ನಿಂತುಬಿಡುತ್ತವೆ. ಇದಕ್ಕೆ ಕಣ್ಣಿ ಹಾಕುವುದು ಎಂದು ಹೇಳುತ್ತಾರೆ. ಉತ್ತರ ಕರ್ನಾಟಕದ ಕೆಲವೆಡೆ ಬಳಗ ಒಗೆಯುವುದು ಎಂದು ಹೇಳುತ್ತಾರೆ. ಈ ನುಡಿಗಟ್ಟಿನ ಅರ್ಥ ಅಸಹಕಾರ ತೋರು, ಕಳಚಿಕೊಳ್ಳು ಎಂದಾಗುತ್ತದೆ.

'ಕವಣೆ ಕಲ್ಲಿನಂತೆ ಬರು'

ಕವಣೆ ಎಂದರೆ ಹೊಲದಲ್ಲಿ ತೆನೆಯ ಕಾಳುಗಳನ್ನು ತಿನ್ನಲು ಬರುವ ಹಕ್ಕಿಗಳನ್ನು ಓಡಿಸಲು ಅವುಗಳಿಗೆ ಕಲ್ಲು ಬೀರುವ ಸಾಧನವಾಗಿದೆ. ಈ ನುಡಿಗಟ್ಟಿನ ಅರ್ಥ ರಭಸದಿಂದ ಬರು, ವೇಗದಿಂದ ಬರು ಎಂದಾಗುತ್ತದೆ.

'ಕೂರಿಗೆ ದಾಳು ಮುಳುಗು'

ಪ್ರಕೃತಿಯ ನೇರ ಒಡನಾಟದಲ್ಲಿ ಬೆಳೆವ ರೈತರಿಗೆ ಆಕಾಶದಲ್ಲಿ ಕಾಣುವ ನಕ್ಷತ್ರಗಳು ತಮ್ಮದೆಯಾದ ಕೃಷಿ ಸಂಬಂಧಿ ಪರಿಕರಗಳ ಹೆಸರನ್ನು ಕೊಟ್ಟು ಅರಿವು ಮೂಡಿಸುವುದು ಅವರ ಪ್ರತಿಭೆಗೆ ಸಾಕ್ಷಿಯಾಗಿದೆ. ಬಿತ್ತನೆ ಉಪಕರಣವಾದ ಕೂರಿಗೆ ಮೂರು ತಾಳಿನ, ಆರು ತಾಳಿನ, ಒಂಬತ್ತು ತಾಳಿನ, ಹನ್ನೆರಡು ತಾಳಿನ ಕೂರಿಗೆ ಇರುವುದುಂಟು. ಇದರಲ್ಲಿ ಮೂರು ತಾಲಿನ ಕೂರಿಗೆ ಇಲ್ಲಿ ಪ್ರಸ್ತುತ. ಏಕೆಂದರೆ ಮೂರು ತಾಳಿನ ದಾಯದ ರೂಪದಲ್ಲಿ ಮೂರು ನಕ್ಷತ್ರಗಳು ಗೋಚರಿಸುತ್ತವೆ. ಪೂರ್ವದಿಂದ ಹೊರಟು ಪಶ್ಚಿಮದತ್ತ ವಾಲಿ ಕೊನೆಗೆ ಅಸ್ತಾಗತವಾಗುತ್ತವೆ. ಕೂರಿಗೆ ದಾಳು (ಕೂರಿಗೆ+ತಾಳು)ಮುಳುಗುವುದು ಬೆಳಗಿನ ಜಾವದ ಸೂಚನೆ. ಕೂರಿಗೆ ತಾಳು ಮುಳುಗುದು ಎಂದರೆ ಬೆಳಗಿನ ಜಾವ ಎಂದು ಅರ್ಥವಾಗಿದೆ.

'ತಟ್ಟಿಸು'

ಕೃಷಿ ಪರಿಕರಗಳಲ್ಲಿ ಕಬ್ಬಿಣಕ್ಕೆ ಮಹತ್ವದ ಸ್ಥಾನವಿದೆ. ಕುಡ, ಕುಡುಗೋಲು, ಪಿಕಾಸಿ, ಹಾರೆ ಮುಂತಾದ ಉಪಕರಣಗಳನ್ನು ಕಮ್ಮಾರರ ಹತ್ತಿರ ಒಯ್ದು ಕಾಸಿ ಬಡಿದು ಹರಿತಗೊಳಿಸುತ್ತಾರೆ. ಹೀಗೆ ಹರಿತಗೊಳಿಸುವ ಪ್ರಕ್ರಿಯೆಯನ್ನು ತಟ್ಟಿಸುವುದೆಂದು ಕರೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ ಕೆಲವೆಡೆ

ಇದಕ್ಕೆ ಹಣಿಸುವುದು ಎಂದು ಕರೆಯುತ್ತಾರೆ. ತಟ್ಟಿಸು ಎಂಬುದಕ್ಕೆ ಹರಿತಗೊಳಿಸು, ಮೊನಚುಮಾಡು, ಕಾರ್ಯ ಸುಗಮವಾಗಿ ಸಾಗುವಂತೆ ಮಾಡು ಎಂಬ ಅರ್ಥಗಳಿವೆ.

'ಪಡಿಯಾಡು'

ಈ ನುಡಿಗಟ್ಟಿಗೆ ದವಸಧಾನ್ಯ ಕದ್ದು ಮಾರಾಟಮಾಡು ಎಂದು ಅರ್ಥವಿದೆ. ಹಳ್ಳಿಗಾಡಿನ ಅವಿಭಕ್ತ ಕುಟುಂಬದಲ್ಲಿ ಸೊಸೆಯರ ಖರ್ಚುವೆಚ್ಚಕ್ಕೆ ಅಂದರೆ ಅವರ ಎಲೆ ಅಡಿಕೆ ಹೋಗೆಸೊಪ್ಪು ನಶ್ಯತಿಕ್ಕುವ ಚಟಗಳಿಗೆ ಹಣವನ್ನು ಮನೆಯ ಯಜಮಾನರು ಕೊಡುವುದಿಲ್ಲ. ಊಟದ ನಂತರ ಮನೆಯ ಯಜಮಾನರೆ ಎಲ್ಲರಿಗೂ ಆ ತೆವರಿನ ಪದಾರ್ಥಗಳನ್ನು ಹಂಚಿ ಬಿಡುತ್ತಾರೆ. ಆದರೆ ಅವರು ಕೊಟ್ಟದ್ದು ಸಾಲದೆ ಕೆಲವು ಕಿಲಾಡಿ ಸೊಸೆಯರು ಬಿಂದಿಗೆ ತೆಗೆದು ಕೊಂಡು ಬಾವಿಯಿಂದ ನೀರು ಸೇದಿಕೊಂಡು ಹೊರಟಾಗ ಅವುಗಳಲ್ಲಿ ದವಸಹಾಕಿಕೊಂಡು ಹೋಗಿ , ಅಂಗಡಿಯಲ್ಲಿ ಏನೋ ತೆಗೆದು ಕೊಳ್ಳುವಂತೆ ಹೋಗಿ, ಸುರಿದು ಬಾವಿಯ ಬಳಿಗೆ ಹೋಗುತ್ತಾರೆ. ಅಥವಾ ಗಂಡಸರಿಲ್ಲದಾಗ ಮನೆಯಲ್ಲಿ ಮಾರಾಟಮಾಡಿ ಗಂಟು ಮಾಡುತ್ತಾರೆ. ಈ ಹಿನ್ನಲೆಯಲ್ಲಿ ಪಡಿಯಾಡು ಎಂಬ ನುಡಿಗಟ್ಟು ಅರ್ಥ ಪೂರ್ಣವಾಗಿ ಅಭಿವ್ಯಕ್ತವಾಗಿದೆ.

ಒಟ್ಟಿನಲ್ಲಿ, ಕೃಷಿಶಾಸ್ತ್ರದ ಮಹತ್ವಕುರಿತಂತೆ ಇಂದಿನ ಆಧುನಿಕ ದಿನಮಾನಗಳಲ್ಲಿ ಅಧ್ಯಯನ ಪೂರ್ಣ ವಿಷಯವಾಗಿರುತ್ತದೆ. ಯಾಕೆಂದರೆ ಸಾಕಷ್ಟು ಮಳೆ, ಹುಲುಸಾದ ಬೆಳೆ, ಜನಸಂಖ್ಯೆ ವಿರಳತೆಯ ಆ ದಿನಮಾನಗಳಲ್ಲಿ 'ಯಂತ್ರಕೃಷಿ'ಗಿಂತ 'ಕೈಕೃಷಿ'ಯೇ ಪ್ರಾಧಾನ್ಯತೆ ಪಡೆದಿತ್ತು. ಹೀಗಾಗಿ ಆ ಸ್ವರೂಪದ ಕೃಷಿಯ ಸಾಮಾಗ್ರಿಗಳು, ಪ್ರಾಣಿಗಳ ಬಳಕೆ, ಆರೈಕೆ ಇತ್ಯಾದಿಗಳಲ್ಲಿ ಸಾಕಷ್ಟು ವ್ಯತ್ಯಾಸಗಳಾಗಿವೆ. ಹೀಗಾಗಿ, ಪ್ರಾಚೀನ ಕೃಷಿಜ್ಞಾನದ ಅಧ್ಯಯನವೆಂದರೆ ಅದು ಒಂದು ಕಾಲದ ವರ್ಣನಾತ್ಮಕ ಕೃಷಿಶಾಸ್ತ್ರದ ಅಧ್ಯಯನ ಅಧ್ಯಯನವೆನಿಸುತ್ತದೆ. ವಿಶೇಷವಾಗಿ ಜನಪದ ಸಾಹಿತ್ಯ ಕೃಷಿ ಪರಿಸರದಲ್ಲಿ ಸೃಷ್ಟಿಯಾದುದಾಗಿದೆ. ಹಂತಿ, ಒಕ್ಕಲು, ಉಳುಮೆ, ನಾಟಿ, ಹೀಗೆ ಕೃಷಿ ಪರಿಸರದಲ್ಲಿ ಜನ್ಯವಾದ ಸಾಹಿತ್ಯದ ಮೂಲಕ ಒಂದು ಜನಾಂಗದ ಭಾಷೆ, ಭಾವನೆಗಳ ಅಧ್ಯಯನವಾದಂತೆ ಅವರ ಒಟ್ಟು ಬದುಕಿನ ಸಾಂಸ್ಕೃತಿಕ ಅಧ್ಯಯನವೇ ಆಗುತ್ತದೆ. ಈ ಹಿನ್ನಲೆಯಲ್ಲಿ ಸಾಹಿತ್ಯ, ಭಾಷೆ, ಇತ್ಯಾದಿಗಳ ಮೂಲಕ ಹುಟ್ಟಿಕೊಂಡ ಗಾದೆ, ಒಡಪು, ನುಡಿಗಟ್ಟು ಇತ್ಯಾದಿ ಅಧ್ಯಯನಗಳಿಗೆ 'ಕೃಷಿಶಾಸ್ತ್ರ' ಬಹುದೊಡ್ಡ ಭೂಮಿಕೆಯಾಗಿದೆಂದು ಈ ಮೇಲಿನ ಅಂಶಗಳ ವರ್ಣನಾತ್ಮಕ ವಿವರಣೆಯಿಂದ ಸ್ಪಷ್ಟವಾಗಬಲ್ಲದು.

ಅಡಿಟಿಪ್ಪಣಿಗಳು

೧) ಕೃಷಿಜ್ಞಾನ ಪ್ರದೀಪಿಕೆ–ಶ್ರೀ ಘನಮಠಶಿವಯೋಗಿ, ಪುಟ–೨೦೦

೨) ಅದೇ, ಪುಟ–೨೦೭

೩) ಸಾಂಪ್ರದಾಯಿಕ ಒಕ್ಕಲುತನ–ಈರಯ್ಯ ಕಿಲ್ಲೇದಾರ, ಪುಟ–೭೪

೪. ಘನಶ್ರೀ–ಸಂ–ಡಾ.ಸಂಗಮೇಶ ಸವದತ್ತಿ ಮಠ, ಪು–೨೬೬

೫) ವಚನಸಾಹಿತ್ಯ ಭಾಷೆ–ಡಾ.ಎಸ್.ಎಸ್.ಅಂಗಡಿ. ಲೇ–ವಚನಗಳಲ್ಲಿ ವೃತ್ತಿಪದಗಳು: ಭಾಷೆ ಮತ್ತು ಸಂಸ್ಕೃತಿ

೬) ಮಲೆನಾಡ ವೈಷ್ಣವ ಒಕ್ಕಲಿಗರ ಸಂಸ್ಕೃತಿ–ಅಂಬಳಿಕೆ ಹಿರಿಯಣ್ಣ, ಪುಟ–೧೧೧

೭) ಕೃಷಿ ಉಪಕರಣ– ಗಾಣಧಾಳು ಶ್ರೀಕಂಠ, ಪುಟ–೧೧

೮) ಕೃಷಿಜ್ಞಾನ ಪ್ರದೀಪಿಕೆ– ಶ್ರೀ ಘನಮಠಶಿವಯೋಗಿ, ಪುಟ–೨೪–೨೬

೯) ಮಲೆನಾಡ ವೈಷ್ಣವ ಒಕ್ಕಲಿಗರ ಸಂಸ್ಕೃತಿ– ಅಂಬಳಿಕೆ ಹಿರಿಯಣ್ಣ, ಪುಟ–೯೬

೧೦) ಜಾನುವಾರು– ಎಂ.ನಾರಾಯಣಸ್ವಾಮಿ, ಪುಟ–೮
೧೧) ಅದೇ– ಪು–೧೬
೧೨) ಅದೇ– ಪು–೨೧
೧೩) ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ– ಎಂ.ಜಿ.ಈಶ್ವರಪ್ಪ, ಪು–೧೪೩
೧೪) ಅದೇ– ಪು–೧೪೩
೧೫) ಅದೇ– ಪು–೧೪೫
೧೬) ದೇಶಿ–ಸಂ–೧, ಡಾ.ವೀರಣ್ಣ ದಂಡೆ, ಪು–೩೫೭
೧೭) ಕನ್ನಡ ಹಸ್ತಪ್ರತಿ ರಚನೆ (ಭಾಷಿಕ ವಿವೇಚನೆ), ಡಾ.ಎಸ್.ಎಸ್.ಅಂಗಡಿ
೧೮) ಮಲೆನಾಡು ಜಾನಪದ –ಸಂ–ಎಚ್.ತಿಪ್ಪೇರುದ್ರ ಸ್ವಾಮಿ, ಪು–೬೧–೬೨
೧೯) ಕನ್ನಡ ವ್ಯಾಕರಣ–ಲೇ, ಶ್ರೀ ಶಿವಶರಣಯ್ಯ ಸೊಪ್ಪಿಮಠ, ೨೦೦೭

ಅಧ್ಯಾಯ–ಹತ್ತು

ಸಮಾರೋಪ

ಅಧ್ಯಾಯ–ಹತ್ತು
ಸಮಾರೋಪ

ಕೃಷಿ ನಾಡಿನ ಆರ್ಥಿಕ ಸುಭದ್ರತೆಯ ಬೆನ್ನೆಲುಬು. ಭಾರತಿಯರ ಪ್ರಮುಖ ಕಸುಬು. ಹೀಗಾಗಿ ಕೃಷಿಯ ಪ್ರಗತಿಯೇ ರಾಷ್ಟ್ರದ ಪ್ರಗತಿ. ನಮ್ಮ ಪ್ರಾಚೀನ ಶಾಸ್ತ್ರಜ್ಞರಿಗೆ ಕೃಷಿಯೂ ಒಂದು ಶಾಸ್ತ್ರವಾಗಿ ಪರಿಭಾವಿಸಿದ್ದು, ಅದರಲ್ಲಿಯ ಮನುಕುಲದ ಬೆಳವಣಿಗೆಯ ಕಾರಣ. ಹೀಗಾಗಿ ಕನ್ನಡ ಕಾವ್ಯಗಳಲ್ಲಿ ಕೃಷಿಗೆ ಪ್ರಾಧಾನ್ಯತೆ ದೊರೆಯಿತು. ಕೆಲವು ಕೃತಿಗಳು ಪೂರ್ಣಪ್ರಮಾಣದಲ್ಲಿ ಕೃಷಿಯನ್ನೇ ಸಾಹಿತ್ಯದ ವಸ್ತುವನ್ನಾಗಿರಿಸಿಕೊಂಡು ರಚನೆಗೊಂಡಿವೆ. ಅಂತವುಗಳಲ್ಲಿ ಕೃಷಿಜ್ಞಾನ ಪ್ರದೀಪಿಕೆಗೆ ವಿಶಿಷ್ಟ ಸ್ಥಾನ ಸಲ್ಲುತ್ತದೆ. ಹಾಗೆಯೇ ಕೃಷಿ ಕುರಿತು ರಟ್ಟಕವಿಯ 'ರಟ್ಟಮತ', ಚಾವುಂಡರಾಯನ 'ಲೋಕೋಪಕಾರ', ಕೆಳದಿಬಸವರಸನ 'ಶಿವತತ್ತ್ವರತ್ನಾಕರ' ಮುಂತಾದ ಕೃತಿಗಳು ಕೃಷಿಯ ವೈಧಾನಿಕತೆಯನ್ನು ಉಲ್ಲೇಖಿಸುತ್ತವೆ. ಇದರ ಜೊತೆಗೆ ಶಾಸನೋಕ್ತ ಕೃಷಿ ಸಂಬಂಧಿ ತೆರಿಗೆ ಪದ್ಧತಿ, ಮುಂತಾದವು ಕೃಷಿಶಾಸ್ತ್ರ ಸಾಹಿತ್ಯದ ವ್ಯಾಪಕತೆಯನ್ನು ಪ್ರತಿನಿಧಿಸುತ್ತವೆ. ಲೌಕಿಕ ಶಾಸ್ತ್ರಸಾಹಿತ್ಯ ಗುಂಪಿಗೆ ಸೇರುವ ಗಜ, ಅಶ್ವ, ಕಾಮ, ವೈದ್ಯಶಾಸ್ತ್ರಗಳಂತೆ 'ಕೃಷಿಶಾಸ್ತ್ರ ಸಾಹಿತ್ಯ' ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

ಮಧ್ಯಕಾಲಿನ ಕನ್ನಡ ಸಾಹಿತ್ಯದಲ್ಲಿ ಲೋಕಕ್ಕೆ ಉಪಯುಕ್ತವಾಗುವಂತಹ ಲೌಕಿಕ ಶಾಸ್ತ್ರ ಗ್ರಂಥಗಳು ಹೆಚ್ಚಾಗಿಯೇ ರಚನೆಯಾಗಿವೆ. ಅವು ಲೋಕ ವ್ಯವಹಾರವನ್ನು ಮುನ್ನೆಡೆಸುವ ಸಂವಿಧಾನಗಳಾಗಿ ಹೆಸರು ಮಾಡಿದ್ದವು. ಅರವತ್ನಾಲ್ಕು ಕಲೆಗಳಲ್ಲಿ ಶಾಸ್ತ್ರವನ್ನು ಪರಿಭಾವಿಸಿಕೊಂಡು ಬಂದ ಪ್ರಾಚೀನರು ಆ ವೇಳೆಯ ಅಗತ್ಯತೆಗಳನ್ನು ಮತ್ತು ಉಪಯೋಗಗಳನ್ನು ಕಟ್ಟಿಕೊಡುವ ಜವಾಬ್ದಾರಿಯನ್ನು ಇವುಗಳ ರಚನೆಯಲ್ಲಿ ತೋರಿದ್ದಾರೆಂದು ಹೇಳಬಹುದು. ಇಂತಹ ಶಾಸ್ತ್ರ ಸಮ್ಮತ ಕಲೆಗಳಲ್ಲಿ ಕೃಷಿಯೂ ಒಂದು. ಶಿವಯೋಗಿ ಸಿದ್ಧರಾಮ ಹೇಳುವಂತೆ 'ಕೃಷಿಯ ಮಾಡಿ ಉಣ್ಣದೆ ಹಸಿವು ಹರಿಯ ಪರಿಯಿನ್ನೆಂತು' ಎನ್ನುವ ಮಾತು, ಸೋಮೇಶ್ವರ ಕವಿಯು ಹೇಳುವ 'ಬೆಳೆಯೇ ಸರ್ವರ ಜೀವನಂ' ಎನ್ನುವುದು ಹಾಗೂ ನಯಸೇನ, ಕುಮಾರವ್ಯಾಸ, ಸರ್ವಜ್ಞರು ಹೇಳಿರುವ ಅನೇಕ ಮಾತುಗಳು ಕೃಷಿಯ ಮಹತ್ವ ತಿಳಿಸುವಂತಹವುಗಳಾಗಿವೆ. ಅಂದಿನ ಸಮಾಜದಲ್ಲಿ ಪ್ರಧಾನ ಉದ್ಯೋಗವಾಗಿ ಬೆಳೆದು, ಲೋಕೋಪಯೋಗಿ ಉದ್ಯಮವಾಗಿ ಬೆಳೆಯದೇ ಇರುವುದು ಕಂಡು ಬರುತ್ತದೆ. ಈ ಕಾರಣದಿಂದ ಕೃಷಿಯ ವೈಧಾನಿಕತೆಯನ್ನು ಕಲೆಹಾಕಿ ಒಂದೆಡೆ ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಪ್ರಾಚೀನ ಸಂಕಲನ ಗ್ರಂಥಗಳಾದ ಸೂಕ್ತಿ ಸುಧಾರ್ಣವ, ಕಾವ್ಯಸಾರಗಳಂಥ ಕೃತಿಗಳಲ್ಲಿ ಕೃಷಿಸಂಬಂಧಿ ಸಂಗತಿಗಳಿರುವುದನ್ನು ಡಾ.ವೈ.ಸಿ. ಭಾನುಮತಿಯವರು ತಮ್ಮ 'ಜಾನಪದ ಭಿತ್ತಿ' ಕೃತಿಯಲ್ಲಿ ಹೀಗೆ ಉಲ್ಲೇಖಿಸಿದ್ದಾರೆ. ನಮ್ಮದು ವ್ಯವಸಾಯ ಪ್ರಧಾನವಾದ ನಾಡು. ಕೃಷಿ ಇಂದಿಗೂ ಸಮಾಜದ ಬಹುಪಾಲು ಜನರ ಜೀವನಾಧಾರವಾಗಿದೆ. ಮನುಷ್ಯ ಯಾವ ಯಾವ ಉದ್ಯೋಗ ಹಿಡಿದು ಧನಾರ್ಜನೆ ಮಾಡಬಹುದೆಂಬುದನ್ನು ಸಂಕಲನ ಗ್ರಂಥಗಳಲ್ಲಿ ನಿರೂಪಿಸುವಾಗ "ಪಶುಗಳ ನೋವುತೊಮ್ಮೆ ಕೃಷಿಯಂ ಬೆವಹಾರಮನೊಲ್ದು ಮಾಡಿಯಾರ್ಜಿಸುವುದು ವಿತ್ತಮಂ"[೧] ಎಂದು ಸಮಾಜದಲ್ಲಿನ ವಿವಿಧ ಕಸುಬುಗಳನ್ನು ಕುರಿತು ಪ್ರಸ್ತಾಪಿಸಿದೆ. ಅಂತೆಯೇ ಪಶುಪಾಲನೆ ಕೃಷಿಕಾರ್ಯಗಳ ಬಗೆಗೆ ಸಮಕಾಲೀನ ಸಮಾಜದಲ್ಲಿ ಆದರಭಾವನೆ ಇದ್ದಂತೆ ತೋರುತ್ತದೆ. ಈ ಕಸುಬುಗಳಿಂದ ಆರ್ಜಿಸಿದ ಅರ್ಥದಿಂದ ಧರ್ಮಸಾಧನೆ ಮಾಡುವ ಮಾರ್ಗವನ್ನು ವಿವರಿಸಲಾಗಿದೆ. ಗಳಿಸಿದ ವಿತ್ತವನ್ನು ಸಾಧುಸಂತರಿಗೆ ಧಾರೆ ಎರೆಯಬೇಕು. ಅನಂತರ ಕೊಟ್ಟ ದಾನ ಸದ್ವಿನಿಯೋಗವಾಯಿತೇ ಇಲ್ಲವೆ ಎಂಬುದನ್ನು ಗಮನಿಸುತ್ತಿರಬೇಕು. ಇಲ್ಲದಿದ್ದರೆ "ಒಲ್ದು ಬೀಜಮಂ ಬಿತ್ತಿ ಬಟಿಕ್ಕಮಾರಯದೆ ಸುಮ್ಮನಿರಲ್ಕದು ಕೆಟ್ಟುಹೋಗದೇ"[೨] ಎಂದು ಕೃಷಿ ಸಂಬಂಧದ ದೃಷ್ಟಾಂತ ನೀಡಿರುವಲ್ಲಿ ಬೀಜ ಬಿತ್ತುವಿಕೆಯ ಅನಂತರದ ಕ್ರಿಯೆಗಳ ಸೂಚನೆಯಿದೆ.

ಕರ್ನಾಟಕದಲ್ಲಿ ಎರಡು ವಿಧದ ಬೇಸಾಯ ರೂಢಿಯಲ್ಲಿದೆ. ಬಿತ್ತನೆ ಮಾಡುವುದು ಮತ್ತು ನಾಟಿ ಹಾಕುವುದು. "ಅಮರೇಂದ್ರಂ ನಿಜಹಸ್ತದಿಂದಗೆಯನಾಯ್ದುದ್ಯಾನದೊಳ್ ತಂದು ಕಲ್ಪಮಹೀಜಂಗಳನಿಟ್ಟ" ಎಂಬ ವರ್ಣನೆಯಲ್ಲಿ ನಾಟಿ ಬೇಸಾಯ ಪದ್ಧತಿಯ ಸುಳಿವಿದೆ. ಅಗೆ ಎಂಬ ಶಬ್ದ ಇಂದಿಗೂ ಪ್ರಚಲಿತವಿರುವುದನ್ನು ಗಮನಿಸಬಹುದು.

ವಿವಿಧ ಜಾತಿಯ ಭತ್ತವನ್ನು ಬೆಳೆದರೂ ಸಂಕಲನ ಗ್ರಂಥಗಳಲ್ಲಿ ಗಂಧಶಾಳಿ ಭತ್ತ ಬೆಳೆಯುತ್ತಿದ್ದ ಗದ್ದೆಯ ವರ್ಣನೆ ನಿಚ್ಚಳವಾಗಿ ಬಂದಿದೆ. ಈ ಗಂಧಶಾಳಿಯೇ ಗ್ರಾಮೀಣರ ಬಾಯಲ್ಲಿ ಗಮಸಾಲೆ ಎಂದಾಗಿದೆ. ಸಕಲೇಶಪುರ, ಕೊಡಗು, ತಿರ್ಥಹಳ್ಳಿ ಭಾಗಗಳಲ್ಲಿ ಈ ಭತ್ತವನ್ನು ಈಗಲೂ ಬೆಳೆಯುವರು.

ಕುಡಿಯ ಎಂಬುದು ಇಂದು ಜನಾಂಗವಾಚಕವಾಗಿದ್ದರೂ ಹಿಂದೆ ಇದು ಕೃಷಿಕಾರ್ಯ ಮಾಡುವ ಒಕ್ಕಲಿಗನನ್ನು ನಿರ್ದೇಶಿಸುವ ಅರ್ಥ ಪಡೆದಿತ್ತು. ಕುಡಿಯನೆಂದರೆ ಒಕ್ಕಲಿಗ ಎಂಬ ಮಾತು ಶಬ್ದಮಣಿದರ್ಪಣದಲ್ಲಿಯೂ ದೊರೆಯುತ್ತದೆ.

"ಕುಡಿಯಂ ಪೊನ್ನನೆ ಬಿತ್ತಿ ಪೊನ್ ಬೆಳೆದೊಡಾ ಪೊಂಗಾಯ್ತು ಕಂಪೆಂಬವೊಲ್
ಕಡುಗೆಂಪುಂ ಕಡುಗಂಪುಮಗ್ಗಲಿಸೆ ನಾಡೂರೂರ ಸುತ್ತುಂ ಬೆಡಂ
ಗಿಡಿದಿರ್ಕುಂ ಕೆಱೆಯೇರಿ ಯುದ್ಧದೊಳೊಡಂಬಟ್ಟುದ್ದದಿಂದೆತ್ತಲುಂ
ಕುಡುಗೋಲುರ್ಚದ ಗಂಧಶಾಳಿವನಮುತ್ಕೀರಾಳಿ ಲೀಲಾಸ್ಪದಂ"[೩].

ಎಂಬ ವರ್ಣನೆ ತೀರ ಸಹಜವಾಗಿದ್ದು ಯಾವುದೇ ಹಳ್ಳಿಯ ಪೈರು ತುಂಬಿದ ಗದ್ದೆ ಬಯಲನ್ನು ಕಣ್ಮುಂದೆ ತರುವಂತಿದೆ.

ಕೊಯ್ದು ಗದ್ದೆಯಲ್ಲಿರುವ ತೆನೆಗಳು ತಲೆ ಕೊಯ್ಯಿಸಿಕೊಂಡು ಲಜ್ಜೆಯಿಂದ ಬಾಗಿದಂತೆ, ಭೂಮಿಯೆಂಬ ಹೆಣ್ಣು ಉಟ್ಟ ಹೊನ್ನಿನ ಬಟ್ಟೆಯಂತೆ ಕವಿಗೆ ತೋರುತ್ತದೆ.[೪] ಅಂತೆಯೇ ಕಬ್ಬಿನ ಗದ್ದೆಗಳು[೫] ಅಡಿಕೆ ಮಾವು ಮಲ್ಲಿಗೆಗಳ[೬] ವರ್ಣನೆಗಳು ಸುಖ ಸಂತೃಪ್ತಿಯ ನೆಮ್ಮದಿಯ ನಾಡಿನ ಚಿತ್ರವನ್ನು ಕಟ್ಟಿಕೊಡುತ್ತವೆ. ಭತ್ತ ಅಡಿಕೆ ಕಬ್ಬು ಮಾವು ಮಲ್ಲಿಗೆಗಳು ಈ ನಾಡಿನ ಯಾವತ್ತೂ ಸಮೃದ್ಧ ಬೆಳೆಗಳಾಗಿದ್ದವು ಎಂಬ ಸಂಗತಿ ಕೂಡ ತಿಳಿದು ಬರುತ್ತದೆ.

ಕೃಷಿಯ ವಿವರಗಳಿಗಿಂತ ಪೈರಿಗೆ ಮುತ್ತುವ ಹಕ್ಕಿಗಳನ್ನು ಸೋವುವ ಹೆಂಗಳೆಯರನ್ನು ವರ್ಣಿಸುವುದರಲ್ಲಿ ಶಿಷ್ಟ ಕವಿಗಳಿಗೆ ವಿಶೇಷ ಆಸಕ್ತಿ. ಆದರೂ ಕೆಲವು ಸಹಜ ವರ್ಣನೆಗಳು ಜಾನಪದ ನೆಲೆಯನ್ನು ಗುರುತಿಸಲು ಸಹಾಯಕವಾಗಿವೆ.

"ಕವಣೆಯ ಬಿಟ್ಟು ಮಾಮಿಡಿಯ ಮಿಟ್ಟೆಗಳಿಂ ತೆಗೆದೆಚ್ಚು ಕಂಕಣಾ
ರವಮೊಗವಂತು ಚಪ್ಪರಿಸಿ ಛೀಛ್ಛೆನೆ ತೆಂಗಿನ ಪತ್ರದಂದದಿಂದ
ಸವಡಿಸಿ ಚಚ್ಚಲಚ್ಚಲಲ ಚಚ್ಚಲಲೆಂದು ಬೈದು ಪಾ
ಟವದೊಳೆ ಪಕ್ಕಿ ಸೋದು ಬೆಳೆಗಾಯ್ದುದು ಪಾಮರಕಾಮಿನೀಜನಂ"[೭]

"ಹಕ್ಕಿ ಓಡಿಸುವ ಈ ತಂತ್ರಗಳು ಜನಪದದಲ್ಲಿ ಬಳಕೆಯಲ್ಲಿರುವಂಥವೆ ಆಗಿವೆ. ಕವಣೆಕೊಲು ಬಿಡುವುದು, ಕೈಗೆ ಸಿಕ್ಕಿದ ಒಣಕಾಯಿ ಸಿಪ್ಪೆಗಳಿಂದ ಹೊಡೆಯುವುದು, ಎಲ್ಲಕ್ಕಿಂತ ಮಿಗಿಲಾಗಿ ಚಚ್ಚಲ ಎಂಬ ಪಕ್ಷಿಭಾಷೆಯ ಬಳಕೆ ಜಾನಪದೀಯ ದೃಷ್ಟಿಯಿಂದ ಮೆಚ್ಚುವಂತಿವೆ. ಗಿಳಿ ಓಡಿಸಲು ಮಂಚಿಕೆ ಏರುವುದು"[೮] ಗೋರಿ ಹಾಡು ಹೇಳುವ ಉಲ್ಲೇಖಗಳೂ ಸಂಕಲನ ಗ್ರಂಥಗಳಲ್ಲಿ ದೊರೆಯುತ್ತದೆ.

ಕೃಷಿಕ ಸಮಾಜದಲ್ಲಿ ಕೃಷಿಶಾಸ್ತ್ರದ ಅರ್ಥ ಮತ್ತು ಸ್ವರೂಪ ತುಂಬಾ ವ್ಯಾಪಕವಾದುದು. ಕೇವಲ ಭೂಮಿಯಿಂದ ಬೆಳೆಯನ್ನು ಬೆಳೆದುಕೊಳ್ಳುವುದಕ್ಕೆ ಮಾತ್ರ ಸಿಮೀತವಾಗಿರದೆ, ಭೂಮಿಯ ಉತ್ತುವುದು, ಹಸನು ಗೊಳಿಸುವುದು, ಬಿತ್ತುವುದು, ಬೆಳೆ ಉತ್ಪಾದನೆ, ಬೆಳೆಯ ಆರೈಕೆ, ಒಕ್ಕಲು,ಮಾರಾಟ ವ್ಯವಸ್ಥೆ, ತೆರಿಗೆ ಪದ್ಧತಿ, ಅಲ್ಲದೆ ಕೃಷಿ ಪ್ರಾಣಿಗಳ ಆರೈಕೆ, ಕೃಷಿ ಸಂಬಂಧಿ ಸಲಕರಣೆಗಳ ಸಂರಕ್ಷಣೆ, ಭೂಮಿಯ ವೈಶಿಷ್ಟತೆ, ನೀರಾವರಿ ಪದ್ಧತಿ, ಹವಮಾನ ಮತ್ತು ಕೃಷಿಯ ಮಹತ್ವವನ್ನು ಕುರಿತದ್ದಾಗಿರುವ ಇಂತಹ ಬಹುಶಿಸ್ತೀಯ ಅರ್ಥಸಾಂದ್ರತೆಯನ್ನು ಕೃಷಿಶಾಸ್ತ್ರ ಒಳಗೊಂಡ ಹಾಗೂ ಇತರೆ ಶಾಸ್ತ್ರ ಗ್ರಂಥಗಳಲ್ಲಿ ಕೃಷಿಗೆ ಸಂಬಂಧಿಸಿದ ಅನೇಕ ಅಂಶಗಳ ಕಡೆ ಗಮನಹರಿಸಲಾಗಿದೆ. ಎತ್ತುಗಳ ಆರೈಕೆ, ಕೃಷಿ ಸಲಕರಣೆಗಳ ಸಂರಕ್ಷಣೆ, ಕೊಟ್ಟಿಗೆ ಸಿದ್ದತೆ, ಭೂಮಿಯ ಆರೈಕೆ, ಒಡ್ಡು ಹಾಕುವ ಪದ್ದತಿ, ಗೊಬ್ಬರ ಸಂಗ್ರಹಣೆ, ಬಳಕೆಯ ವಿಧಾನ, ಬಾವಿ ಕಡಿಸುವ ವಿಧಾನ, ಮಳೆ-ಬೆಳೆ ವಿಚಾರ ಮತ್ತು ಬೆಳೆ ಮಾಡುವ ವಿಧಾನ ಹಾಗೂ ತೋಟಮಾಡುವ ಭೂಮಿಯ ಸಂಸ್ಕಾರ, ತೋಟಮಾಡುವ ವಿಧಾನಗಳನ್ನು ಶಾಸ್ತ್ರಿಯವಾಗಿ ನಿರೂಪಿಸಲಾಗಿದೆ. ಅಲ್ಲದೆ ಹಿರಿಯರ ಅನುಭವದ ಜ್ಞಾನ ಹಾಗೂ ಅನೇಕ ವೈವಿಧ್ಯ ಬೆಳೆಗಳ ಮಾಹಿತಿ, ಮರೆಯಾಗುತ್ತಿರುವ ಪ್ರಾಚೀನರ ಬದುಕಿನ ಬಗೆಯನ್ನು ಇಂತಹ ಕೃತಿಗಳಲ್ಲಿ ಜೀವಂತವಾಗಿ ಕಾಣಬಹುದು. ನಮ್ಮ ಕವಿ ಪುಂಗವರು ಕಟ್ಟಿಕೊಟ್ಟಿರುವ ವೈವಿಧ್ಯಮಯವಾದ ಕೃಷಿ ಬದುಕಿನ ಚಿತ್ರಣವನ್ನು ಪ್ರಬಂಧದಲ್ಲಿ ವಿಶ್ಲೇಷಣೆಗೆ ಒಳಪಡಿಸಿಕೊಳ್ಳಲಾಗಿದೆ.

ಕಾವ್ಯ ಸಾಹಿತ್ಯವನ್ನು ಬಿಟ್ಟರೆ ಕೃಷಿಗೆ ಸಂಬಂಧಿಸಿದ ಮಾಹಿತಿಗಳನ್ನು ಶಾಸನ, ಕೈಫಿಯತ್ತು, ಬಿನ್ನವತ್ತಳೆ ಮುಂತಾದ ದಾಖಲು ಸಾಹಿತ್ಯ ಪ್ರಕಾರಗಳಿಂದ ಹೊರತೆಗೆಯಲಾಗಿದೆ. ಭೂಮಿಗೆ ಸಂಬಂಧಿಸಿದ ಮಾಹಿತಿ, ಸಾಮೂಹಿಕ ಬೇಸಾಯ, ಬೆಳೆಗಳು, ಭೂಮಾಪನವಿಧಾನ, ಸೀಮೆಗಲ್ಲು, ಬಾಂದು ಮತ್ತು ಮೇರೆಗಳನ್ನು ಕುರಿತಾದ ಮಾಹಿತಿ, ಮತ್ತು ಕಂದಾಯ, ನೀರಾವರಿ ವ್ಯವಸ್ಥೆ, ಮಾರುಕಟ್ಟೆಯ ವ್ಯವಸ್ಥೆಯನ್ನು ಕುರಿತಾದ ಅಂಶಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಕೈಫಿಯತ್ತುಗಳಲ್ಲಿ ಅನೇಕ ಬೆಳೆಗಳ ಉಲ್ಲೇಖ ಹಾಗೂ ಅಡಿಕೆ ಬೆಳೆ ಮಾಡುವ ವಿಧಾನ, ಭೂಮಿಯನ್ನು ಸಂಸ್ಕರಿಸಿಕೊಳ್ಳುವ ವಿಧಾನವನ್ನು ಹೇಳಲಾಗಿದೆ. ಅಲ್ಲದೇ ಕೃಷಿ ಕಾರ್ಮಿಕರ ಕುರಿತು, ಅವರಿಗೆ ನೀಡುವ ಕೂಲಿಯ ಮಾಹಿತಿಯು ಶಾಸನಗಳಲ್ಲಿ

ದೊರೆಯುವುದನ್ನು ಸಂಗ್ರಹಿಸಿ ಚರ್ಚಿಸಲಾಗಿದೆ. ಪ್ರಾಚೀನರ ಇಂತಹ ಅನೇಕ ಪದ್ಧತಿಗಳು ಇಂದಿನ ಜೀವನಕ್ಕೆ ದಾರಿದೀಪವಾಗಿವೆ. ಅಂತಹವುಗಳನ್ನು ಅಧ್ಯಯನದಲ್ಲಿ ತೊಡಗಿಸಿಕೊಂಡು ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ.

ಕೃಷಿ ಕೆಲಸದ ನಿರ್ವಹಣೆಗೆ ಅನೇಕ ಬಗೆಯ ಸಾಧನ ಸಲಕರಣೆಗಳು ಅವಶ್ಯಕ. ಕೈಗಳ ಮುಂದುವರಿಕೆಯೇ ಕೃಷಿ ಉಪಕರಣಗಳು. ಕೃಷಿ ಉಪಕರಣಗಳನ್ನು ಕಟ್ಟಿಗೆ, ಕಬ್ಬಿಣ, ಚರ್ಮ ಮತ್ತು ಇತರೆ ಉಪಕರಣಗಳೆಂದು ವರ್ಗೀಕರಿಸಿಕೊಂಡು ಅವುಗಳ ತಯಾರಿಕೆ, ಸಂರಕ್ಷಣೆಯ ವಿಧಾನವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಲಾಗಿದೆ. ಕೃಷಿಗೆ ಸಹಾಯಕರಾದ ಬಡಿಗ, ಕಮ್ಮಾರ, ಚಮ್ಮಾರ, ಮುಂತಾದವರಿಂದ ವಿಧಿ ವಿಧಾನಗಳಿಂದ ಉಪಕರಣಗಳು ತಯಾರಾಗುವ ಬಗೆಯನ್ನು ಶಾಸ್ತ್ರಕೃತಿಗಳು ಮತ್ತು ಕಾವ್ಯಕೃತಿಗಳಿಂದ ಇಂತಹ ಮಾಹಿತಿ ಸಂಗ್ರಹಿಸಿ ಈ ಅಧ್ಯಾಯದಲ್ಲಿ ವೈಧಾನಿಕವಾಗಿ ಕಟ್ಟಿಕೊಡಲಾಗಿದೆ. ಸಂರಕ್ಷಣೆ ವಿಧಾನದಲ್ಲಿ ಕಂಡುಬರುವ ಜಾಣತನ, ಅವು ಹೆಚ್ಚು ಕಾಲ ಬಾಳಿಕೆ ಬರುವಂತೆ ಎಚ್ಚರಿಕೆ ವಹಿಸುವುದು, ಅನೇಕ ವಿಧದ ಮರಗಳನ್ನು ಬಳಸಿಕೊಳ್ಳುವುದು, ಯಾವ ಮರದಿಂದ ಯಾವ ಯಾವ ಉಪಕರಣ ತಯಾರಿಸಿದರೆ ಸೂಕ್ತವೆಂಬ ಅಂಶಗಳನ್ನು ಗುರುತಿಸಲಾಗಿದೆ. ಕೃಷಿಯ ಪ್ರಾರಂಭ ಕಾಲದಿಂದಲೂ ಪ್ರಾದೇಶಿಕ ಹಿನ್ನಲೆ, ಹವಮಾನ, ಮಣ್ಣಿನ ವೈವಿಧ್ಯತೆಗೆ ಅನುಗುಣವಾಗಿ ಉಪಕರಣಗಳು ಆಕಾರ, ವಿನ್ಯಾಸಗಳಲ್ಲಿ ಬದಲಾವಣೆಯಾಗಿದ್ದರೂ ಅಂತಹ ಮೂಲಭೂತ ಬದಲಾವಣೆ ಕಂಡು ಬರುವುದಿಲ್ಲ. ಆದ್ದರಿಂದ ಕೃಷಿ ವಿಶ್ವ ವಿದ್ಯಾಲಯಗಳು ಹೊಸ ವಿನ್ಯಾಸ ಮತ್ತು ಸಸ್ಯಗಳ ಸಂಗ್ರಹಣೆ ಎಷ್ಟು ಒಂದು ಸಾಲಿನಲ್ಲಿ ಬಿತ್ತಬೇಕು ಎಂಬುದನ್ನು ರೈತರಿಗೆ ತಿಳಿಯ ಪಡಿಸಿ, ಅಂತಹ ಬಿತ್ತುವ ಉಪಕರಣದ ತಯಾರಿಕೆ ಮಾಡಬೇಕಾಗಿದೆ. ಕೇವಲ ಕೃಷಿಯನ್ನು ಬೃಹತ್ ಉದ್ಯಮ ಮಾಡುವ ನೆಪದಿಂದ ದೊಡ್ಡಪ್ರಮಾಣದ ಉಪಕರಣಗಳನ್ನು ತಯಾರಿಸಿ ಪ್ರಗತಿ ಸಾಧಿಸಿದ್ದೇವೆ ಎಂದು ಹೇಳುವುದು ಭಾರತದಂತಹ ದೇಶಕ್ಕೆ ಸೂಕ್ತವಲ್ಲ. ಯಾಕೆಂದರೆ ಹಳ್ಳಿಗಳ ನಾಡಾದ ಭಾರತದಲ್ಲಿ ಅನೇಕ ಸಣ್ಣ ಪುಟ್ಟ ಸಾಮಾನ್ಯ ರೈತರು ಇರುವುದರಿಂದ ಅವರ ಆರ್ಥಿಕ ಶಕ್ತಿಗೆ ನಿಲುಕುವಂತಹ ಉಪಕರಣಗಳ ತಯಾರಿಕೆ ಆಗಬೇಕಾಗಿದೆ. ತಂತ್ರಜ್ಞಾನಗಳ ಆವಿಷ್ಕಾರ, ರೈತರ ಹೊಲಗದ್ದೆಗಳಲ್ಲಿ ಪ್ರಾತ್ಯಕ್ಷತೆಯ ಕಾರ್ಯ ಮಾಡುವುದರ ಕಡೆಗೆ ಕೃಷಿ ವಿಶ್ವ ವಿದ್ಯಾಲಯಗಳು, ಕೃಷಿ ಇಲಾಖೆಗಳು ಹೆಚ್ಚಿನ ಆಸಕ್ತಿ ಒಲವು ತೋರಬೇಕಾಗಿದೆ ಎಂಬ ಅಂಶವನ್ನು ಈ ಅಧ್ಯಯನದಿಂದ ಮನಗಾಣಬಹುದಾಗಿದೆ.

ವ್ಯವಸಾಯದಲ್ಲಿ ಎತ್ತು, ಕೋಣ, ಹಸು, ಕುದುರೆ ಇನ್ನೂ ಮುಂತಾದ ಸಾಕು ಪ್ರಾಣಿಗಳ ಬಳಕೆ ಪ್ರಾಚೀನ ಕಾಲದಿಂದಲೂ ಕಂಡು ಬರುತ್ತದೆ. ಕೃಷಿ ಉಳುಮೆಯಲ್ಲಿ ಎತ್ತು, ಕೋಣ, ಕೆಲವೊಮ್ಮೆ ಹಸುಗಳನ್ನು ಬಳಸುವುದು ಕಂಡು ಬರುತ್ತದೆ. ಕೃಷಿ ಬಳಕೆ ಪ್ರಾಣಿಗಳಲ್ಲಿ ರೈತನ ಸಂಗಾತಿ ಎತ್ತು ಆಗಿದೆ. ಅಲ್ಲದೇ 'ಎತ್ತು ಇಲ್ಲದ ಮನೆಗೆ ಎದೆ ಇಲ್ಲವೂ' ಎಂಬ ಗಾದೆ ಅರ್ಥ ಪೂರ್ಣವಾಗಿ ಬಳಕೆಯಾಗಿದೆ. ಎತ್ತುಗಳನ್ನು ತಮ್ಮ ಮಕ್ಕಳಿಗಿಂತಲೂ ಹೆಚ್ಚಾದ ಪ್ರೀತಿಯಿಂದ ಸಾಕುತ್ತಾರೆ. ಎತ್ತುಗಳ ಕುರಿತಾದ ಮಾಹಿತಿ, ಅನೇಕ ತಳಿಗಳು ಪ್ರಾದೇಶಿಕವಾಗಿ ಪ್ರಾಮುಖ್ಯತೆ ಪಡೆದಿರುವ ಬಗೆ ಹಾಗೂ ಅವುಗಳಿಗೆ ಬರುವ ರೋಗಗಳು, ಮೇವು, ನೀರುಗಳಿಂದ ಆರೈಕೆ, ಕೊಟ್ಟಿಗೆಯ ಸಿದ್ಧತೆ, ಅವು ಮಲಗುವ ಸ್ಥಳದಲ್ಲಿ ಕೆಸರು, ರಾಡಿ, ನೀರು, ರೋಜ್ಜು, ಆಗದಂತೆ ನೋಡಿಕೊಳ್ಳುವ ಬಗೆಯನ್ನು ಹೇಳಲಾಗಿದೆ. ಪಶುಗಳಿಗೆ ಬರುವ ಅನೇಕ ರೋಗ ರುಜಿನೆಗಳು ಮತ್ತು ಅನೇಕ ನಾಟಿ ವೈದ್ಯರಿಂದ ಅವುಗಳ ಚಿಕಿತ್ಸ

ವಿಧಾನಗಳು, ಗಿಡಮೂಲಿಕೆ ಔಷಧಿ ನೀಡುವ ನಾಟಿ ವೈದ್ಯರ ಕ್ರಮಗಳು ಇವೆಲ್ಲವುಗಳನ್ನು ಸಂಗ್ರಹಿಸಿ ಈ ಅಧ್ಯಾಯದಲ್ಲಿ ಕಟ್ಟಿಕೊಡಲಾಗಿದೆ. ದೇಶೀ ಪಶುಚಿಕಿತ್ಸ ವಿಧಾನಗಳಲ್ಲಿ ಸತ್ಯಾಸತ್ಯತೆಗಳನ್ನು ಸಂಶೋಧನೆಗೆ ಅಳವಡಿಸಿ ಅನೇಕ ಉಪಯುಕ್ತ ಮಾರ್ಗಗಳನ್ನು ತಿಳಿಯಲು ಘನ ಸರಕಾರಗಳು ಆ ನಿಟ್ಟಿನಲ್ಲಿ ಪ್ರಯತ್ನ ಮಾಡಿದರೆ, ನಾಟಿಚಿಕಿತ್ಸ ಪದ್ಧತಿಯ ಪರಂಪರೆಯನ್ನು ಉಳಿಸಲು ಮತ್ತು ರೈತಾಪಿ ವರ್ಗಕ್ಕೆ ಗಿಡಮೂಲಿಕೆ ಸಸ್ಯವರ್ಗಗಳನ್ನು ಕಾಪಾಡಿಕೊಂಡು ಬರಲು ತಿಳುವಳಿಕೆ ನೀಡುವ ಯೋಜನೆ ಮತ್ತು ಕ್ರಮವನ್ನು ಕೈಗೊಳ್ಳಲೂ ಪ್ರಯತ್ನಿಸಬೇಕೆಂದು ಮನವರಿಕೆ ಮಾಡಿಕೊಡಲಾಗಿದೆ.

ಬೇಸಾಯಕ್ಕೆ ಕರ್ನಾಟಕದ ಹವಾಮಾನ ತುಂಬ ಹಿತಕರವಾಗಿರುವುದರಿಂದ ಹಲವಾರು ಬೆಳೆಗಳನ್ನು ಇಲ್ಲಿ ಬೆಳೆಯಲಾಗುತ್ತದೆ. ಇಷ್ಟು ವೈವಿಧ್ಯತೆಯಿಂದ ಕೂಡಿದ ಬೆಳೆಗಳನ್ನು ಬೆಳೆಯುವುದು ಬೇರೆ ಯಾವ ರಾಜ್ಯದಲ್ಲಿಯೂ ಕಂಡು ಬರುವುದಿಲ್ಲ. ಆಹಾರ ಧಾನ್ಯಗಳಲ್ಲಿ ಭತ್ತ, ಜೋಳ, ರಾಗಿ, ಸಜ್ಜೆ, ಗೋಧಿ, ಭಾರ್ಲಿ,ಸಾವೆ, ನವಣೆ, ಹಾರಕ, ಮುಂತಾದವು. ದ್ವಿದಳ ಧಾನ್ಯಗಳಲ್ಲಿ ತೂಗರಿ, ಅಲಸಂದಿ, ಹೆಸರು, ಉದ್ದು, ಕಡಲೆ, ಮತ್ತು ಎಣ್ಣೆ ಬೆಳೆಗಳಲ್ಲಿ ನೆಲೆಗಡಲೆ, ಕುಸುಬಿ, ಎಳ್ಳು, ಹುಚ್ಚೆಳ್ಳು, ಹರಳು, ಅಗಸೆ, ನಾರು ಬೆಳೆಗಳಲ್ಲಿ ಸೇಣಬು, ಹತ್ತಿ, ಪುಂಡಿ, ಸಾಂಬಾರು ಬೆಳೆಗಳಲ್ಲಿ ಯಾಲಕ್ಕಿ, ಲವಂಗ, ಸಾಸಿವೆ, ಕೊತ್ತಂಬರಿ, ಜೀರಿಗೆ, ಈರುಳ್ಳಿ, ಬೆಳ್ಳುಳ್ಳಿಯನ್ನು ಅಲ್ಲದೇ ತೋಟದ ಬೆಳೆಗಳಾದ ತೆಂಗು, ಅಡಿಕೆ, ಬಾಳೆ, ಎಲೆ ಬಳ್ಳಿ, ಮಾವು, ಸಪೋಟಾ, ಪೇರಲಾ, ಹಲಸು, ದಾಳಿಂಬೆ, ನಿಂಬೆ, ಅಂಜುರಾ, ಸೀತಾಫಲ ಮುಂತಾದವು ಮತ್ತು ಹಲವು ಬಗೆಯ ತರಕಾರಿ ಮತ್ತು ಹೂವುಗಳನ್ನು ಬೆಳೆಯುತ್ತಾರೆ. ಇಂತಹ ಬೆಳೆಗಳನ್ನು ವರ್ಗಿಕರಣ ಮಾಡಿಕೊಂಡು ಕೃಷಿಜ್ಞಾನ ಪ್ರದೀಪಿಕೆ, ಲೋಕೋಪಕಾರದಂತ ಶಾಸ್ತ್ರ ಕೃತಿಗಳಲ್ಲಿ ಕಾಣಸಿಗುವ ಉತ್ತುವ, ಬಿತ್ತುವ, ನಾಟಿಸುವ ಮತ್ತು ಭೂಮಿಯನ್ನು ಸಂಸ್ಕರಿಸುವ, ಬೆಳೆಯ ಸಂರಕ್ಷಿಸುವ ಹಾಗೂ ಕ್ರಿಮಿ-ಕೀಟಗಳಿಂದ ರಕ್ಷಿಸುವ ಕ್ರಮಬದ್ದ ವಿಧಾನಗಳನ್ನು ಮತ್ತು ತೋಟದ ಬೆಳೆಗಳನ್ನು ಮಾಡುವಲ್ಲಿ ಭೂಮಿ ಸಂಸ್ಕರಣ, ಸಸಿಗಳನ್ನು ನಾಟಿಸುವ ಬಗೆ ಮತ್ತು ಕ್ರಮಬದ್ದವಾಗಿ ನೀರನ್ನು ಹಾಯಿಸುವ ವಿಧಾನಗಳನ್ನು ಕುರಿತು ಹೇಳಿರುವ ಶಾಸ್ತ್ರಕಾರರ ವೈಧಾನಿಕತೆಯನ್ನು ಬಳಸಿಕೊಂಡು ವಿಶ್ಲೇಷಣೆ ಮಾಡಿ ಪ್ರಬಂಧದಲ್ಲಿ ಕಟ್ಟಿಕೊಡಲಾಗಿದೆ. ಅಲ್ಲದೇ ಕನ್ನಡ ಕಾವ್ಯ ಕೃತಿಗಳಲ್ಲಿ, ಜಾನಪದ ಕೃತಿಗಳಲ್ಲಿ ಹಾಗೂ ಶಾಸನಗಳಲ್ಲಿ ಕಂಡು ಬರುವ ಈ ಬಗೆಯ ಮಾಹಿತಿಯನ್ನು ಆಯಾ ಭಾಗಗಳಲ್ಲಿ ಬಳಸಿಕೊಳ್ಳಲಾಗಿದೆ. ಹೀಗೆ ಮಾಡಿರುವುದರಿಂದ ಅನೇಕ ಬೆಳೆಗಳನ್ನು ಬೆಳೆಯುವ ಮಣ್ಣಿನ ಹವಮಾನ, ನೀರಿನ ಮೂಲ ಗಮನಿಸಿ ಯಾವ ಯಾವ ಬೆಳೆಗಳನ್ನು ಹೇಗೆ ಬೆಳೆದುಕೊಳ್ಳಬೇಕು ಎಂಬ ಕ್ರಮಬದ್ದತೆಯನ್ನು ಮತ್ತು ಬೆಳೆಗಳ ನಿಗಧಿಕರಣವನ್ನು ಹೇಗೆ ಮಾಡಿಕೊಳ್ಳಬೇಕು ಎಂಬ ಮಾಹಿತಿಯನ್ನು ಮತ್ತು ಮಿಶ್ರಬೆಳೆ ಮಾಡುವ ಅಂಶಗಳನ್ನು ಸಂಗ್ರಹಿಸಿ ಒಂದೆಡೆ ಕಲೆ ಹಾಕಿ ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ.

ಇನ್ನೂ ಬಳಕೆ ವಿಧಾನದಲ್ಲಿ ಕೃಷಿಕರು ತಾವು ಬೆಳೆದ ಬೆಳೆಗಳನ್ನು ಕಣಜ, ಹಗೇವು, ಪಳತ, ಹೆಡಿಗೆ, ಗೂಡೆ, ಕೊಳಗ, ಗುಡಾಣ, ಗುಡಾರ ಪಟ್ಟಿ, ಗುಮ್ಮಿ, ಗೂಳಿ, ಧಾನ್ಯಗಾರ, ವಾಡೆ, ಹಿಲೆರಿ ಮುಂತಾದವುಗಳಲ್ಲಿ ಸಂಗ್ರಹಿಸುತ್ತಿದ್ದರು. ಹುಳು ಹತ್ತದಂತೆ, ತೇವಾಂಶದಿಂದ ನೆನೆಯದಂತೆ, ಇಲಿ, ಇರುವೆ ಮುಂತಾದ ಕ್ರಿಮಿ ಕೀಟಗಳಿಂದ ರಕ್ಷಣೆ ಮಾಡಲು ಬಳಸುತ್ತಿದ್ದರು. ಅಂತಹ ಸಲಕರಣೆಗಳು ಇಂದು ಮಾಯವಾಗಿವೆ. ಇವುಗಳನ್ನು ಪುನಃ ನೆನಪಿಸುವ ಅವುಗಳನ್ನು ಬಳಸುವ ಹಾಗೂ ಅಂತಹ ಸಲಕರಣೆಗಳ ಮಹತ್ವವನ್ನು ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ. ಅಲ್ಲದೇ ಇಂದು ಸುಗ್ಗಿ ಸಂಪ್ರದಾಯದ

ವೈಭವದ ರೈತನ ಬದುಕು ನಾಶವಾಗಿದೆ. ಅಂತಹ ಸುಗ್ಗಿಯ ವೈಭವ ಮತ್ತು ಸುಗ್ಗಿ ಸಲಕರಣೆಗಳನ್ನು ಆಧುನಿಕತೆಯ ಬದುಕಿನಲ್ಲಿ ನಾವು ಕಳೆದುಕೊಂಡಿದ್ದೇವೆ. ಅಲ್ಲದೇ ಕೃಷಿ ಸಂಬಂಧಿ ಆಚರಣೆ, ನಂಬಿಕೆ, ಸಹಕಾರದ ಜೀವನದ ಕ್ರಮ ಕಾಣದಂತಾಗಿದೆ. ಹಾಗೂ ಮೇಟಿ, ರೋಣಗಲ್ಲು, ಸೇಳ್ಳು, ರಾಘೋಲು, ಜಂತೆ, ಕುಂಟೆ, ಹತಿಗಣ್ಣಿ, ಮೆಟ್ಟುತಾಳು, ಗೋರುಮಣೆ, ಹಲುಬೆ, ನ್ಯಾರೊದೊಣ್ಣಿ, ಮೊರ ಮುಂತಾದ ಸಲಕರಣೆಗಳನ್ನು ಬಳಸಿಕೊಂಡು ರೈತನ ಸುಗ್ಗಿಯ ಸೊಬಗನ್ನು ಸಾಹಿತ್ಯ ಕೃತಿಗಳಲ್ಲಿ ದೊರೆಯುವ ಅಂಶಗಳಿಂದ ಕಟ್ಟಿಕೊಡಲಾಗಿದೆ.

ಕೃಷಿ ವಿಜ್ಞಾನಿಗಳು ಹೆಚ್ಚು ಇಳುವರಿ ಪಡೆಯಲು ಸಸ್ಯಗಳ ಬೆಳೆವಣಿಗೆಯನ್ನು ಕುಂಟಿತ ಮಾಡಿ ಬೆಳೆವಣಿಗೆಗೆ ಹೋಗುವ ಸತ್ವವನ್ನು ಇಳುವರಿಯ ಕಡೆಗೆ ತಿರುಗಿಸಿದ್ದಾರೆ. ಇಂತಹ ಸಂಶೋಧನೆಯನ್ನು ಮಾಡುವಾಗ ದೇಶಿಯ ತಳಿಗಳನ್ನು ಬಳಸಿಕೊಳ್ಳಬೇಕು. ಅಲ್ಲದೇ ಪ್ರತಿಯೊಬ್ಬ ರೈತರು ಪ್ರತ್ಯೇಕ ಬೆಳೆಹಾಕುವಂತೆ ಹಾಗೂ ಅದರಿಂದಾಗುವ ಪ್ರಯೋಜನಗಳನ್ನು ತಿಳಿಸಬೇಕು. ಇದರಿಂದ ಕ್ರಿಮಿ ಕೀಟಗಳ ಹಾವಳಿ ತಡೆಯಬಹುದು. ಮತ್ತು ಮಾರುಕಟ್ಟೆಯಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಪಡೆಯಬಹುದೆಂದು ರೈತರಿಗೆ ಮನವರಿಕೆ ಮಾಡಿಕೊಡಬೇಕು. ಈ ರೀತಿಯ ಬೆಳೆಗಳ ನಿಗದೀಕರಣದಿಂದ ಅನೇಕ ಮಹತ್ವದ ಉಪಯೊಗವನ್ನು ರೈತರು ಪಡೆಯಬಹುದಾಗಿದೆ. ಇಂತಹ ಅಂಶಗಳು ಪ್ರಾಚೀನರು ಅನುಸರಿಸುತ್ತಿದ್ದ ಕೃಷಿ ಪದ್ಧತಿಯಲ್ಲಿ ಕಾಣಸಿಗುತ್ತವೆ. ಅಲ್ಲದೆ ಅವರ ಅಪಾರವಾದ ಕೃಷಿ ಜ್ಞಾನವನ್ನು ಸಂಗ್ರಹಿಸಿ ಪಠ್ಯಗಳನ್ನಾಗಿ ಸಿದ್ದಪಡಿಸಿ ಅಂತಹ ಜ್ಞಾನವನ್ನು ಯುವಪಿಳಿಗೆಗೆ, ಯುವ ಕೃಷಿ ವಿಜ್ಞಾನಿಗಳಿಗೆ ಮತ್ತು ರೈತ ಸಮುದಾಯಕ್ಕೆ ಪರಿಚಯಿಸುವ ಕಾರ್ಯ ನೆಡೆಯಬೇಕಾಗಿದೆ ಎಂಬ ಫಲಿತವನ್ನು ಪ್ರಬಂಧದ ಈ ಭಾಗದಿಂದ ತಿಳಿಬಹುದಾಗಿದೆ.

ವ್ಯವಸಾಯದ ಆರಂಭದಿಂದಲೂ ರಂಟೆ ಹೊಡೆದು, ಕುಂಟೆಯಿಂದ ಹರಗುವುದು, ಬಿತ್ತುವುದು ವ್ಯವಸಾಯದ ಪದ್ಧತಿಯಾಗಿದೆ. ಆದರೆ ಭೂಮಿಯ ಮಣ್ಣನ್ನು ಪರೀಕ್ಷಿಸಿ ಅದಕ್ಕೆ ತಕ್ಕ ಹಾಗೆ ಶ್ರಮದಿಂದ, ಯುಕ್ತಿಯಿಂದ ಉಳುಮೆ ಮಾಡುವಲ್ಲಿ ರೈತರು ಎಡವಿದ್ದಾರೆ ಎಂದೇ ಹೇಳಬಹುದು. ಸಾಮಾನ್ಯವಾಗಿ ಬೇಸಿಗೆಯಲ್ಲಿ ಭೂಮಿ ಕಾಯ್ದು ಮುಂಗಾರು ಮಳೆಯಾದಾಗ, ಭೂಮಿಯ ಕಾದ ಮಣ್ಣಿನ ಸಾರವು ಹೊಲದಲ್ಲಿ ಇಮರಿಕೊಂಡು ಭೂಮಿ ಉತ್ತಮ ಹದಕ್ಕೆ ಬರುತ್ತದೆ. ಈ ಕಾರಣದಿಂದ ಶಾಸ್ತ್ರಕಾರರ ಅಭಿಮತದಂತೆ ರಂಟೆ ಕುಂಟೆ ಹೊಡೆಯುವ ಪದ್ಧತಿ, ಒಡ್ಡು, ಬದುನಿರ್ಮಾಣ ಮಾಡುವುದು ಮತ್ತು ಹದವರಿತು ಉತ್ತುವ, ಬಿತ್ತುವ, ತಂತ್ರ ಯುಕ್ತಿಗಳನ್ನು ಸಂಗ್ರಹಿಸಿ ಮಹಾಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ. ಇದರ ಉಪಯೋಗ ರೈತಾಪಿ ವರ್ಗ, ಕೃಷಿಯಲ್ಲಿ ಆಸಕ್ತಿ ತೋರುವ ವಿದ್ಯಾವಂತ ಸಮುದಾಯಕ್ಕೆ ಮತ್ತು ವ್ಯವಸಾಯವನ್ನು ಕ್ರಮಬದ್ದ ವಿಧಾನದಲ್ಲಿ ಮಾಡಬಯಸುವ ಲೋಕದ ಜನತೆಗೆ ಅನೇಕ ರೀತಿಯ ಉಪಯುಕ್ತ ಮಾಹಿತಿಗಳು ಈ ಭಾಗದಲ್ಲಿ ಕಾಣಸಿಗುತ್ತವೆ. ಕೃಷಿಜ್ಞಾನ ಪ್ರದೀಪಿಕೆ, ರಟ್ಟಮತ, ಲೋಕೋಪಕಾರದಂತ ಶಾಸ್ತ್ರಕೃತಿಗಳಲ್ಲಿ ದೊರೆಯುವ ಅನೇಕ ಬಗೆಯ ಯುಕ್ತಿವಿಧಾನಗಳನ್ನು ಮತ್ತು ಕನ್ನಡಸಾಹಿತ್ಯ ಕೃತಿಗಳಿಂದ ಮತ್ತು ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಮಾಹಿತಿಯನ್ನು ಪ್ರಬಂಧದಲ್ಲಿ ಪ್ರಸ್ತುತ ಪಡಿಸಲಾಗಿದೆ.

ನಿಪುಣರಾದ ಕೃಷಿಯ ಅಧಿಕಾರಿಗಳನ್ನು, ಶಾಸ್ತ್ರಪ್ರಾವಿಣ್ಯರನ್ನು ಅಲ್ಲದೇ ಪ್ರಾಚೀನ ಕೃಷಿ ಬಳಕೆಯ ಜ್ಞಾನವನ್ನು ಹೊಂದಿರುವರನ್ನು ಕೃಷಿ ವಿಶ್ವವಿದ್ಯಾಲಯಗಳಲ್ಲಿ ನೇಮಕ ಮಾಡಿಕೊಂಡು ಪ್ರಾಚೀನ

ಕೃಷಿಯ ಮಹತ್ವ ಮತ್ತು ಅದನ್ನು ಬಳಸಿಕೊಳ್ಳುವ ಸರಳ ವಿಧಾನಗಳನ್ನು ಪರಿಚಯ ಮಾಡಿಕೊಡುವ ಮಹತ್ವದ ಕೆಲಸ ಕಾರ್ಯ ನೆಡೆಯಬೇಕಾಗಿದೆ ಎಂಬ ಅಂಶವನ್ನು ಮನಗಾಣ ಬಹುದಾಗಿದೆ.

ನಂಬಿಕೆ–ಆಚರಣೆಗಳು ಮನುಷ್ಯನ ದಿನನಿತ್ಯದ ಬದುಕಿನ ಎರಡು ಮುಖಗಳು. ನಂಬಿಕೆ ಮಾತಿನ ಮೂಲಕ ವ್ಯಕ್ತಿಗೆ ಸ್ಫೂರ್ತಿ ನೀಡಿದರೆ, ಆಚರಣೆಗಳು ಕ್ರಿಯೆಯ ಮೂಲಕ ಆತನಿಂದ ವಿಶಿಷ್ಟ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಯಾವುದೇ ದೇಶದ ಜನಾಂಗ, ಸಂಸ್ಕೃತಿಯ ಪೋಷಣೆಗೆ, ನಾಗರೀಕತೆಯ ಬೆಳವಣಿಗೆಗೆ ಇವೆರಡೂ ಮುಖ್ಯ ಅಂಗಗಳಾಗಿವೆ. ಪ್ರಾಚೀನ ಕಾಲದಿಂದಲೂ ಬೆಳೆದುಕೊಂಡು ಬಂದು, ದೈವಿಕ ಸ್ವರೂಪದ ಬೆಳಕಿನಲ್ಲಿ ಸೃಷ್ಟಿಗೊಂಡವುಗಳಾಗಿವೆ. ಜನಪದ ಸಂಸ್ಕೃತಿಯ ಮೂಲ ಬೇರುಗಳಾದ ನಂಬಿಕೆ, ಆಚರಣೆಗಳು, ಪದ್ಧತಿಗಳು, ಸಂಪ್ರದಾಯಗಳು, ನಡಾವಳಿಕೆಗಳು ಹೀಗೆ ಅನೇಕ ಪ್ರಕಾರಗಳಾಗಿ ಬೆಳೆವಣಿಗೆಯಾಗಿವೆ. ಇವುಗಳ ಮೂಲ ಆಶಯ ಒಂದೇ ಆಗಿದ್ದರು ಇವು ಭಿನ್ನ ಭಿನ್ನ ಪ್ರದೇಶಗಳಲ್ಲಿ ಸ್ವತಂತ್ರವಾಗಿ ರೂಪಗೊಳ್ಳಲೂ ಅನೇಕ ಅವಕಾಶಗಳುಂಟಾಗಿವೆ. ಅತ್ಯಂತ ವಿಸ್ತಾರವಾದ ವಿಷಯದ ಅಗಾಧತೆಯನ್ನು ನಂಬಿಕೆ ಆಚರಣೆಗಳು ಹೊಂದಿವೆ. ಅಂತವುಗಳಲ್ಲಿ ಕೇವಲ ಉತ್ತುವುದು, ಬಿತ್ತುವುದು ಮತ್ತು ಒಕ್ಕುವುದರ ಕುರಿತಾದ ನಂಬಿಕೆ ಆಚರಣೆಗಳನ್ನು ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಭಾಗಗಳಲ್ಲಿ ಕಂಡು ಬರುವ ಅಂಶಗಳನ್ನು ಗಮನಿಸಿ, ಪ್ರಬಂಧದಲ್ಲಿ ಪ್ರಸ್ತಾಪಿಸಲಾಗಿದೆ. ಇಂತಹ ನಂಬಿಕೆ ಆಚರಣೆಗಳಲ್ಲಿ ವೈಚಾರಿಕತೆಯಿಂದ ಕೂಡಿದ, ಮೂಢನಂಬಿಕೆಗಳಿಂದ ಕೂಡಿದ ಆಚರಣೆಗಳು ಕಂಡುಬರುತ್ತವೆ. ಇವುಗಳಲ್ಲಿ ವೈಚಾರಿಕವಾದವುಗಳನ್ನು ಮುಂದುವರಿಸಿಕೊಂಡು ಹೋಗುವುದರಿಂದ ಅನೇಕ ರೀತಿಯಲ್ಲಿ ಸಮಾಜದ ಸಮತೋಲನ ಕಾಯ್ದುಕೊಳ್ಳಬಹುದು. ಹಬ್ಬ ಹರಿದಿನಗಳಲ್ಲಿ ಒಂದೆಡೆ ಸೇರುವ, ಸಹಕಾರದಿಂದ ಬಾಳುವ ಮತ್ತು ದ್ವೇಷ ಅಸೂಯೆ ಮರೆತು ನೆಮ್ಮದಿಯಿಂದ ಬದುಕಲು ನಮ್ಮ ಹಿರಿಯರು ಅನೇಕ ಬಗೆಯ ಆಚರಣೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಗ್ರಾಮದಹಬ್ಬ, ಕೃಷಿಯ ಆಚರಣೆಗಳಲ್ಲಿ ಸಮಸ್ತ ಜನರೂ ಜಾತಿ, ಕುಲ ಮರೆತು ಒಂದಾಗಿ ಆಚರಿಸುತ್ತಾರೆ. ಹೀಗೆ ಮಾಡುವುದರಿಂದ ಸಾಮೂಹಿಕ ಪ್ರಜ್ಞೆ ಸಾಂಸ್ಕೃತಿಕ ಬದುಕನ್ನು ಅರಿತುಕೊಳ್ಳಲು ಸಹಕಾರಿಯಾಗುತ್ತದೆ. ಮುಂದುವರಿದು ಹೊಲಗದ್ದೆಗಳಲ್ಲಿ ಒಟ್ಟಿಗೆ ದುಡಿಯುವುದು, ಸುಗ್ಗಿ ಕಣದಲ್ಲಿ ಸಾಮೂಹಿಕ ಒಕ್ಕಲುಮಾಡುವುದು, ಕೂಡುಬೇಸಾಯ ಮಾಡುವುದು, ಇವೆಲ್ಲವು ವ್ಯಕ್ತಿ ವ್ಯಕ್ತಿಗಳನ್ನು ಒಂದುಗೂಡಿಸುವ ಕೆಲಸಗಳಾಗಿವೆ. ಈ ಬಗೆಯ ಅನೇಕ ನಂಬಿಕೆ ಆಚರಣೆಗಳನ್ನು ನಮ್ಮ ಹಿರಿಯರು ಕಟ್ಟಿಕೊಟ್ಟಿರುವ ಅನೇಕ ವಿಷಯಗಳನ್ನು ಪ್ರಬಂಧದಲ್ಲಿ ಬಳಸಿ ವಿಶ್ಲೇಷಿಸಲಾಗಿದೆ.

ಕೃಷಿಶಾಸ್ತ್ರದ ಸಾಂಸ್ಕೃತಿಕ ಮಹತ್ವವನ್ನು ಕುರಿತು ಚರ್ಚಿಸಲಾಗಿದೆ. ಕೃಷಿ ಪಾರಿಭಾಷಿಕಗಳ ಸಾಂಸ್ಕೃತಿಕ ಅನನ್ಯತೆಯನ್ನು ತಿಳಿಯಲು ಕೃಷಿ ಉಪಕರಣಗಳು, ಬೆಳೆಗಳು, ಬೆಳೆಗೆ ಬರುವ ರೋಗಗಳು, ನಂಬಿಕೆ–ದೈವ–ಆಚರಣೆಗಳು, ಮಾರುಕಟ್ಟೆಯ ಕುರಿತಾದ ಅಂಶಗಳು ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿರುವುದನ್ನು ಕುರಿತು ಚರ್ಚಿಸಲಾಗಿದೆ. ಪ್ರಾದೇಶಿಕತೆಯಲ್ಲಿ ಉತ್ತರ ಕರ್ನಾಟಕ, ಮಲೆನಾಡು ಮತ್ತು ಬಯಲು ಸೀಮೆಗಳಲ್ಲಿ ಅನುಸರಿಸುವ ಕೆಲವು ಕೃಷಿ ಪದ್ಧತಿಗಳನ್ನು ಹಾಗೂ ಕರಾವಳಿ ಭಾಗಗಳಲ್ಲಿ ಕಾಣಸಿಗುವ ಕೃಷಿ ಕುರಿತಾದ ಭಿನ್ನತೆಯ ಅಂಶಗಳನ್ನು ಗುರುತಿಸಲಾಗಿದೆ. ಈ ಭಾಗದಲ್ಲಿ ಉಳುಮೆ ಪದ್ಧತಿ, ಉಪಕರಣಗಳು, ಬೆಳೆಗಳು, ಸುಗ್ಗಿ ವಿಧಾನಗಳಲ್ಲಿ ಯಾವ ಯಾವ ರೀತಿಯ ಭಿನ್ನತೆಗಳು ಕಾಣಸಿಗುತ್ತವೆ ಎಂಬುದನ್ನು ಗುರುತಿಸುವ ಉದ್ದೇಶವನ್ನು ಪ್ರಬಂಧದಲ್ಲಿ ನೇರವೇರಿಸಲಾಗಿದೆ.

ಭಾವನೆಗಳ ವಿನಿಮಯಕ್ಕಾಗಿ ಒಪ್ಪಿತ ಧ್ವನಿವ್ಯವಸ್ಥೆಯೇ ಭಾಷೆಯಾಗಿದೆ. ಅದು ಕೇವಲ ಪ್ರಯೋಜನಾತ್ಮಕವಾಗಿ ಬಳಸದೆ ಭಾವನಾತ್ಮಕ ಸಂಬಂಧವನ್ನು ಮೀರಿ ನಿಲ್ಲುತ್ತದೆ. ಭಾಷೆ ಬಳಸುವಾಗ ಒಂದು ವ್ಯವಸ್ಥೆಗೂ ಮತ್ತೊಂದು ವ್ಯವಸ್ಥೆಗೂ ವ್ಯತ್ಯಾಸಗಳು ಕಂಡುಬರುವುದು ಸಹಜವಾಗಿದೆ. ಭಾಷೆಯಲ್ಲಿ ಪ್ರಾದೇಶಿಕ ಭಿನ್ನತೆಯ ಅಂಶಗಳು ಎದ್ದುಕಾಣುತ್ತವೆ. ಆಯಾ ಪ್ರದೇಶದ ವೈಶಿಷ್ಟ್ಯತೆ ಜನಾಂಗದ ಭೌತಿಕ ಮತ್ತು ಸಾಂಸ್ಕೃತಿಕ ಬದುಕನ್ನು ಪ್ರತಿನಿಧಿಸುವ, ಭಾಷೆಯ ಸಂಪರ್ಕದ ಪದಸಂಪತ್ತು ಮತ್ತು ಸಾಂಸ್ಕೃತಿಕ ಪದಸಂಪತ್ತು ಪ್ರದೇಶಿಕ ಭಿನ್ನತೆಗೆ ಕಾರಣವಾಗಿದೆ. ಈ ಕಾರಣದಿಂದ ಭಾಷೆಯಲ್ಲಿ ಅನೇಕ ವೈಶಿಷ್ಟ್ಯತೆಗಳು ಕಂಡು ಬರುತ್ತವೆ. ಇಂತಹ ವಿಶೇಷತೆಗಳನ್ನು ಗುರುತಿಸಲು ಕೃಷಿ ಸಂಬಂಧಿ ಗಾದೆಗಳು, ಒಗಟುಗಳು ಮತ್ತು ನುಡಿಗಟ್ಟುಗಳನ್ನು ಬಳಸಿಕೊಂಡು ವಿಶ್ಲೇಷಿಸಲಾಗಿದೆ. ಜನಪದರಲ್ಲಿ ಹುಟ್ಟಿಕೊಂಡಿರುವ ಸಾವಿರಾರು ಗಾದೆ, ಒಗಟು ಮತ್ತು ನುಡಿಗಟ್ಟುಗಳಲ್ಲಿ ಸಮಾಜದ ಬದುಕಿನ ಅನುಭವದ ಸಾರ ಅಡಗಿದೆ. ಇವುಗಳು ಹುಟ್ಟಲು ಇರುವ ಕಾರಣಗಳು, ಅನುಭವದ ತೀವ್ರತೆ, ಕಟ್ಟಿಕೊಟ್ಟಿರುವ ಮನಸ್ಸುಗಳು ಹಾಗೂ ಅವುಗಳ ಹಿಂದೆ ಅಡಗಿರುವ ಅರ್ಥ ಪೂರ್ಣತೆ ಮತ್ತು ಅನ್ವಯತೆ ಕಾಲ ಕಾಲಕ್ಕೂ ಎಲ್ಲರೂ ಮೆಚ್ಚುವಂತಹ ಜ್ಞಾನವಾಗಿದೆ. ಇಂದಿನ ದಿನಗಳಲ್ಲಿಯೂ ಇವುಗಳು ತಮ್ಮ ಮಹತ್ವವನ್ನು ಉಳಿಸಿಕೊಂಡಿವೆ. ಆ ಕಾರಣದಿಂದ ಗಾದೆ, ಒಗಟು ಮತ್ತು ನುಡಿಗಟ್ಟುಗಳನ್ನು ವಿಸ್ತರಿಸಿ ವಿಶ್ಲೇಷಣೆ ಮಾಡಲಾಗಿದೆ.

ಒಟ್ಟಾರೆಯಾಗಿ ಕೃಷಿಶಾಸ್ತ್ರದ ಅರ್ಥ, ಸ್ವರೂಪ ಮತ್ತು ಅದರ ಮಹತ್ವ ತಿಳಿಸಲಾಗಿದೆ. ಅಲ್ಲದೇ ಶಾಸ್ತ್ರ ಕೃತಿಗಳಾದ ಕೃಷಿಜ್ಞಾನ ಪ್ರದೀಪಿಕೆ, ರಟ್ಟಮತ, ಲೋಕೋಪಕಾರ ಮತ್ತು ಶಿವತತ್ತ್ವರತ್ನಾಕರ ಗ್ರಂಥಗಳಲ್ಲಿ ಅಡಗಿರುವ ಮಳೆ-ಬೆಳೆ, ನೀರಿನ ಶೋಧನೆ, ಅದರ ಹಲವಾರು ಲಕ್ಷಣಗಳು, ಮಣ್ಣಿನ ಗುಣಲಕ್ಷಣಗಳು ಮತ್ತು ಹದವರಿತು ಉತ್ತುವ-ಬಿತ್ತುವ, ಬೀಜಗಳ ಆಯ್ಕೆಮಾಡಿಕೊಳ್ಳುವ ಹವಮಾನ ತಿಳಿಯುವ, ನಕ್ಷತ್ರಾದಿಗಳನ್ನು ಗಮನಿಸಿ ಬಿತ್ತುವ ಒಕ್ಕಲುಮಾಡುವ ಹಾಗೂ ಕೃಷಿ ಸಂಬಂಧಿ ಕೆಲಸ ಕಾರ್ಯ ನೆರವೇರಿಸಿಕೊಳ್ಳುವ ವಿಷಯಗಳ ಜೊತೆಗೆ ಕೃಷಿಕನ ಸಂಗಾತಿಗಳಾದ ಎತ್ತು, ಪ್ರಾಣಿಗಳು, ಪಕ್ಷಿಗಳು, ಕ್ರಿಮಿ-ಕೀಟಗಳು, ಸಸ್ತನಿಗಳು ಮುಂತಾದವುಗಳ ಕುರಿತಾದ ಆರೈಕೆ-ಸಂರಕ್ಷಣೆ ಕುರಿತು ಹೇಳಿರುವ ಅಂಶಗಳನ್ನು ಶಾಸ್ತ್ರೋಕ್ತವಾಗಿ ಪರಿಚಯ ಮಾಡಿ ಕೊಡಲಾಗಿದೆ. ಅಲ್ಲದೆ ಕನ್ನಡ ಕಾವ್ಯ ಕೃತಿಗಳು ಮತ್ತು ದಾಖಲು ಸಾಹಿತ್ಯಗಳಲ್ಲಿ ಉಲ್ಲೇಖಿತವಾಗಿರುವ ಕೃಷಿ ಉಪಕರಣಗಳು, ಕೃಷಿ ಹುಟ್ಟುವಳಿಗಳು, ಉತ್ತುವುದು,ಬಿತ್ತುವುದು ಹಾಗೂ ಸುಗ್ಗಿಯ ವೈಧಾನಿಕ ವಿಧಾನಗಳು, ಕಳೆ, ಕ್ರಿಮಿ-ಕೀಟ, ಮಳೆ-ಬೆಳೆಗಳು ಮತ್ತು ಕೃಷಿ ಕುರಿತಾದ ನಂಬಿಕೆ ಆಚರಣೆಗಳು, ಹಂತಿಯ ಹಾಡು, ಸುಗ್ಗಿಯ ಹಾಡು, ಗಾದೆ, ಒಗಟು, ನುಡಿಗಟ್ಟುಗಳು ಮತ್ತು ಕೃಷಿ ಶಾಸ್ತ್ರದ ಉಪ ಉತ್ಪಾದನೆಗಳ ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ಭಾಷಿಕ ಅಧ್ಯಾಯನಗಳನ್ನು ಪೂರಕ ಮಾಹಿತಿಯನ್ನು ಸಂಗ್ರಹಿಸಿಕೊಂಡು ವಿಶ್ಲೇಷಿಸಲಾಗಿದೆ. ಕೃಷಿ ಮಾರುಕಟ್ಟೆ ವ್ಯವಸ್ಥೆ, ತೆರಿಗೆ ಪದ್ಧತಿ, ಸಾಗಣಿಕೆ, ತೂಕ ಮತ್ತು ಮಾಪನ ವ್ಯವಸ್ಥೆ, ಬೆಲೆ ನಿಗಧೀಕರಣ ಹಾಗೂ ಸಾಗಾಣಿಕೆಯ ಮಾರ್ಗಗಳು, ಸುಂಕದ ಠಾಣೆಗಳು ಮತ್ತು ಸಾಗಾಣಿಕೆಗೆ ಬಳಸುವ ಪ್ರಾಣಿಗಳನ್ನು ಕುರಿತಾದ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ.

ಸಂತೆ-ಪೇಟೆ, ಪಟ್ಟಣಗಳಲ್ಲಿ ವ್ಯಾಪಾರ-ವಹಿವಾಟು ಪ್ರಾಚೀನ ಕಾಲದಲ್ಲಿ ಹೇಗೆ ನಡೆಯುತ್ತಿತ್ತು ಮತ್ತು ಎಷ್ಟು ಮಹತ್ವ ಪೂರ್ಣವಾಗಿತ್ತು ಎಂಬುದನ್ನು ತಿಳಿಸುವುದರ ಮೂಲಕ ಇಂದಿನ ವ್ಯಾಪಾರದ ಸ್ಥಿತಿ ಗತಿಗಳನ್ನು ಸುಧಾರಿಸಿಕೊಳ್ಳಲು ಸಹಕಾರಿಯಾಗಬಹುದೆಂದು ತಿಳಿಯಲಾಗಿದೆ. ಅಲ್ಲದೇ ಕೃಷಿಯನ್ನು

ಕೇಂದ್ರವಾಗಿಟ್ಟುಕೊಂಡು ದುಡಿದ ಬಡಿಗ, ಕಮ್ಮಾರ, ಚಮ್ಮಾರ, ಕುಂಬಾರರು ಮುಂತಾದ ಸಮುದಾಯಗಳ ಜೊತೆಗಿನ ಸಂಬಂಧ ಕುರಿತು ಪೂರಕವಾಗಿ ತಿಳಿಸಲಾಗಿದೆ. ಅಸಿ, ಮಸಿ, ವಾಣಿಜ್ಯ, ಶಿಲ್ಪ ಮತ್ತು ಕೃಷಿ ಮುಂತಾದ ಪಂಚ ಆಚಾರಗಳಲ್ಲಿ ಕೃಷಿಯನ್ನು ಆಕ್ರಮಿಸಿದವರಲ್ಲಿ ವಾಣಿಜ್ಯ ಸಮುದಾಯಗಳು ಪ್ರಮುಖ ಪಾತ್ರವಹಿಸಿವೆ. ಅಂದರೆ ಕೃಷಿ ಮೂಲದ ಉತ್ಪನ್ನಗಳು, ದವಸ ಧಾನ್ಯಗಳನ್ನು ಕೊಳ್ಳುವ ಕೊಡುವ ಜನವರ್ಗಕ್ಕೆ ತಳಹದಿಯಾಗಿ ರೂಪಗೊಂಡು ಕೃಷಿ ವೃತ್ತಿ ಸಮಾಜಕ್ಕೆ ಅಪಾರ ಕೊಡುಗೆಯನ್ನು ನೀಡಿರುವರು. ಶಾಸನಗಳಲ್ಲಿ ಉಲ್ಲೇಖಿತ ಗೊಂಡಿರುವ ಅರುವತ್ತೊಕ್ಕಲು, ಗಳೆಯ ಮೂನ್ನೂರ್ವರು, ಮೇಳಿಸಾಸಿರ್ವರು ಮುಂತಾದ ಕೃಷಿ ಉತ್ಪಾದಕ ಸಂಘಗಳು ಪ್ರಾಚೀನ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಬಗ್ಗೆ ತಿಳಿದು ಬರುತ್ತದೆ.

ಕೃಷಿಯ ಭೌಗೋಳಿಕ ಭಿನ್ನತೆ ಆಯಾ ಪ್ರದೇಶದ ಮಳೆ ಹವಮಾನಗಳನ್ನು ಅನುಲಕ್ಷಿಸಿ ರೂಪಹೊಂದಿರುವ ಪ್ರಾಕೃತಿಕ ವೈಶಿಷ್ಟ್ಯಗಳು ಮತ್ತು ಕೃಷಿವಿಧಾನಗಳನ್ನು ಗಮನದಲ್ಲಿಟ್ಟುಕೊಂಡು ಈ ಪ್ರಬಂಧದಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಒಟ್ಟಿನಲ್ಲಿ ಆಧುನಿಕತೆಯ ಬಿರುಗಾಳಿಯಲ್ಲಿ ಅನೇಕ ಅನುಭವ, ಪರಂಪರೆಗಳು ಕೊಚ್ಚಿಹೊಗುತ್ತಿರುವುದು ಕಾಲದ ಅನಿವಾರ್ಯತೆಯೇನೂ ಎನಿಸುವಂತಾಗಿದೆ. ಉಳುವುದಕ್ಕಾಗಿ, ತೆನೆ ತುಳಿಸುವುದಕ್ಕಾಗಿ ಉಪಯೋಗಿಸುತ್ತಿದ್ದ ನೊಗಹೊತ್ತ ಎತ್ತುಗಳ ಜಾಗದಲ್ಲಿ ಇಂದು ಟ್ರ್ಯಾಕ್ಟರಗಳು ಬಂದಿವೆ. ಸುಂಕಬುತ್ತಿ , ರಾಶಿ ಮಾಡುವುದು ಕಣ್ಮರೆಯಾಗಿ ಹಂತಿ ಹಾಡುಗಳು, ರಾಶಿಪದಗಳು ಕಿವಿಗೆ ಬೀಳದೆ ಕೇವಲ ಕೆಲವೊಂದು ಹಳೆ ಪುಸ್ತಕಗಳಲ್ಲಿ ಅಡಗಿ ಕುಳಿತಿವೆ. ಜೋಳ, ಗೋಧಿ, ರಾಗಿ ಮುಂತಾದ ಧಾನ್ಯಗಳನ್ನು ಸಾರಿಸಿದ ಕಣದಲ್ಲಿ ಒಕ್ಕಲು ಮಾಡುವುದನ್ನು ಮರೆತ ರೈತ ಟಾರು ರಸ್ತೆಯ ಮೇಲೆ ಒಕ್ಕಲು ಮಾಡಲು ಮುಂದಾಗಿದ್ದಾನೆ. ಎತ್ತುಗಳ ಜೊತೆಗಿನ ಸಂಬಂಧ, ಜಾನಪದ ಹಾಡುಗಳು ಮತ್ತು ಸಹ ಭೋಜನದ ಸಂಸ್ಕೃತಿಯೊಂದು ಕಣ್ಮರೆಯಾಗುತ್ತಿರುವುದು ತೀರಾ ನೋವಿನ ಸಂಗತಿಯಾಗಿದೆ. ಈ ಎಲ್ಲಾ ಕಾರಣಗಳಿಂದ 'ಕನ್ನಡದಲ್ಲಿ ಕೃಷಿಶಾಸ್ತ್ರ ಸಾಹಿತ್ಯ' ಎಂಬ ಈ ಮಹಾಪ್ರಬಂಧ ಸಾಹಿತ್ಯ ದೃಷ್ಟಿಯಿಂದ ಶಾಸ್ತ್ರವನ್ನೂ, ಸಮಾಜದ ದೃಷ್ಟಿಯಿಂದ ಕೃಷಿ ಸಮುದಾಯವನ್ನು ಅಧ್ಯಯನ ಮಾಡಿ ಸಮಾಜೋಆರ್ಥಿಕ ಮತ್ತು ಸಮಾಜೋಸಾಂಸ್ಕೃತಿಕ ಅಧ್ಯಯನವನ್ನು ಕೈಗೊಂಡಂತಾಗಿದೆ. ಕೃಷಿಯನ್ನೇ ಮೂಲ ಕಸುಬಾಗಿ ಹೊಂದಿರುವ ಭಾರತಕ್ಕೆ ಅದರ ಒಂದು ಭಾಗವಾದ ಕರ್ನಾಟಕಕ್ಕೆ, ಕೃಷಿ ಸಮುದಾಯಕ್ಕೆ ಸಾರ್ವಕಾಲಿಕವಾಗಿ ಬೇಕಾಗಿರುವ ಮಾಹಿತಿಯನ್ನು ಒಳಗೊಂಡಿರುವ ಈ ಮಹಾಪ್ರಬಂಧಕ್ಕೆ ಸಮಕಾಲೀನ ಪ್ರಾಮುಖ್ಯತೆಯಿದೆ ಎಂದು ಭಾವಿಸಲಾಗಿದೆ.

ಕೃಷಿಶಾಸ್ತ್ರ ತನ್ನ ಶಾಸ್ತ್ರ ಗೌರವದಿಂದ ದೂರ ಉಳಿದು. ಆಧುನಿಕ ಕೃಷಿ ಪದ್ಧತಿಯ ಹೆಸರಿನಲ್ಲಿ ಇಂದು ಜನಪ್ರಿಯವಾಗಿರಬಹುದು. ಈ ಹೊತ್ತಿನ ರಾಷ್ಟ್ರದ ಆಹಾರ ಕೊರತೆಯನ್ನು ನಿಗೀಸಿ; ಮತ್ತು ಬಹು ಮೂಲದ ಆಹಾರ ಪ್ರಕಾರಗಳನ್ನು ಇಂದಿನ ಆಧುನಿಕ ಕೃಷಿ ಪದ್ಧತಿ ಅನುಷ್ಠಾನಗೊಳಿಸಿ "ಹಸಿರು ಕ್ರಾಂತಿ'ಯನ್ನು ಎಲ್ಲೆಡೆ ಸಾರಿರಬಹುದು. ಆದರೆ ಒಂದು ಶಾಸ್ತ್ರವೆಂದರೆ ಅದು ಬಹುಮುಖಿ ಸಮಾಜೋ-ಸಾಂಸ್ಕೃತಿಕ ಉಪ ಉತ್ಪಾದನೆಯನ್ನು ಸೃಷ್ಟಿಸುವಂತದ್ದು. ಈ ಹಿನ್ನಲೆಯಲ್ಲಿ ಅತೀ ದುಬಾರಿಯಲ್ಲದ ತಮ್ಮ ಸುತ್ತಲಿನ ಕಟ್ಟಿಗೆ, ಮಣ್ಣು, ಕಲ್ಲು ಬಳಸಿಕೊಂಡು, ಪ್ರಾಣಿಸಂತತಿಗಳಂಥ ಬಹುಉಪಯೋಗಿ ಜೀವಧಾತುಗಳನ್ನು ಜೊತೆಗಿಟ್ಟುಕೊಂಡು, ಸಮಾಜದ ಕುಲಕಸುಬುದಾರರಾದ ಬಡಿಗ, ಕಮ್ಮಾರ, ಕುಂಬಾರ, ಚಮ್ಮಾರ ಇತ್ಯಾದಿ ಜನಸಮುದಾಯದ ನೆರವಿನೊಂದಿಗೆ ಕೃಷಿಯನ್ನು

ಉಪಜೀವನದ ವೃತ್ತಿಯನ್ನಾಗಿ ಅವಲಂಬಿಸಿದ ಕೃಷಿಕ ಜನಾಂಗ, ಇದರೊಂದಿಗೆ ಜೀವನ ಪರವಾದ ಸಮುದಾಯ ಸಂಘಟನೆ, ಸಹಕಾರ ಮನೋಭಾವ, ವೃತ್ತಿ ಗೌರವ ಸ್ವಾವಲಂಬನೆಯ ಜೀವನ, ಇಂಥ ಸಮಾಜಕಾರ್ಯ ಸೇವಾಪ್ರವೃತ್ತಿಯ ಜೊತೆಗೆ ಆಯಾ ಸಂಗತಿಗಳಿಗೆ ಅನ್ವಯಿಸುವ ಸಾಹಿತ್ಯ ಸೃಷ್ಟಿಗೆ ಕಾರಣವಾಗಿರುವಂತಹ ಸಾಂಸ್ಕೃತಿಕ ಜೀವನ ಪದ್ಧತಿಗೆ ನಾಂದಿ ಹಾಡಿರುವುದನ್ನು ಅಲ್ಲಗಳೆಯುವಂತಿಲ್ಲ.

ಕನ್ನಡ ಸಾಹಿತ್ಯದಲ್ಲಿ ಧರ್ಮ ಪ್ರಸಾರಕ್ಕಾಗಿ ಹುಟ್ಟಿಕೊಂಡ ಮಠಗಳು–ಮಠಾಧಿಪತಿಗಳಲ್ಲಿ ಕೃಷಿಶಾಸ್ತ್ರ ಕುರಿತಾದ ಅಪರೂಪದ ಮತ್ತು ತುಂಬಾ ವೈಜ್ಞಾನಿಕವಾದ 'ಕೃಷಿಜ್ಞಾನ ಪ್ರದೀಪಿಕೆ'ಯಂಥ ರೈತಾಪಿ ವರ್ಗದ ಬದುಕಿನ ಅನನ್ಯತೆಯನ್ನು ಶಾಸ್ತ್ರೋಕ್ತವಾಗಿ ಬರೆದ ಸಂತೆಕೆಲ್ಲೂರಿನ ಶ್ರೀ ಘನಮಠ ಶಿವಯೋಗಿಗಳ ಕೊಡುಗೆ ರಾಷ್ಟ್ರದ "ಜೈಕಿಸಾನ್"ಘೋಷಣೆಯನ್ನು ಹದಿನೇಳನೆ ಶತಮಾನದಲ್ಲಿಯೇ ಘೋಷಿಸಿಕೊಂಡು ಬಂದ ಕೀರ್ತಿಗೆ ಪಾತ್ರವಾಗಿದೆ. ಇದಲ್ಲದೆ ಮಠಾಧಿಪತಿಯೊಬ್ಬರಿಂದ ಇಂತಹ ಪೂರ್ಣಪ್ರಮಾಣದ ಲೌಕಿಕಶಾಸ್ತ್ರ ಕೃತಿ ರಚನೆಯಾಗಿರುವುದು ಕನ್ನಡ ಶಾಸ್ತ್ರ ಸಾಹಿತ್ಯದಲ್ಲಿಯೇ ಮೊದಲನೆಯದು. ಅದೇನೇ ಇರಲಿ 'ಗ್ರಾಮ ಒಕ್ಕೂಟ' ಜೀವನಕ್ಕೆ ಕೃಷಿಶಾಸ್ತ್ರ ಮೀಮಾಂಸೆಯಾಗಿರುವುದು ವಿಶೇಷ. ಇಂಥ ಜೀವನ ಮೀಮಾಂಸೆಯನ್ನು ಪ್ರತಿಪಾದಿಸುವ ಕೃಷಿಶಾಸ್ತ್ರ ಕುರಿತಾದ ಈ ಮಹಾಪ್ರಬಂಧ 'ಕನ್ನಡ ಕೃಷಿಶಾಸ್ತ್ರ ಸಾಹಿತ್ಯದ' ಪ್ರಮಾಣ ಹಾಗೂ ಪರಿಣಾಮವನ್ನು ಅಧಿಕೃತವಾಗಿ ನಿರ್ವಚಿಸುವುದಾಗಿದೆ.


ಅಡಿಟಿಪ್ಪಣಿಗಳು


೧. ಮಲ್ಲುಕವಿ ಕಾವ್ಯಸಾರ, ೯–೪೮
೨. ಅದೇ–೯–೪೭
೩. ಸೂಕ್ತಿ ಸುಧಾರ್ಣವ, ೭೪–೫
೪. ಅಭಿನವ ವಾದಿವಿದ್ಯಾನಂದ ಕಾವ್ಯಸಾರ, ೨೪–೧೦೯
೫. ಅದೇ–೨೭–೧೨೪
೬. ಮಲ್ಲು ಕವಿ ಕಾವ್ಯಸಾರ, ೧೦೨–೪೨
೭ ಸೂಕ್ತಿಸುಧಾರ್ಣವ, ೭೭–೭೩
೮. ಅದೇ–೪–೭೨


ಅನುಬಂಧಗಳು


೧. ಕೃಷಿ ಸಂಬಂಧಿ ಚಿತ್ರಗಳು
೨. ಸಂಕ್ಷೇಪ ಸೂಚಿ
೩. ಪರಾಮರ್ಶನ ಗ್ರಂಥಗಳು

೧. ಕೃಷಿ ಸಂಬಂಧಿ ಚಿತ್ರಗಳು


ಡಂಬರಗಿ
ಕಳಗ
ತಿಗಡಿ
ಗಾಲಿ
ಅಚ್ಚು
ಉದ್ದಿ
ಎರ್ಗಲ್ಲು
ಬಂಡಿ


ಗಾಲಿಹಲ್ಲು
ಗಾಲಿ


ನೇಗಿಲಿನ ನೊಗ


ಈಚು
ಕುಡ




ರಂಟೆನೊಗ





ದಂಡನೊಗ





ತಲಾರಿನೊಗ



ಈಚು
ಮೇಣಿ
ಮಡಕುಂಟೆ
ತಾಳು


ಎಡೆಕುಂಟೆ



ಮೇಳಿ
ದಿಂಡು
ಈಚು
ತಾಳು
ಕುಡ



ಮೇಳಿ
ಈಚು
ತಾಳು
ದಿಂಡು
ಕುಡ





ಕೋಲು



ಗುದ್ದಲಿ



ಬಾಯಿಗುದ್ದಲಿ


ಪಿಕಾಸಿ



ಸಲಿಕೆ


ಬಾಚ ಕೊಡಲಿ
ಗಂಡಕೊಡಲಿ
ಬಾಯಿಕೊಡಲಿ



ಕಾವು
ಕೊರಡು
ಬಾರಕೋಲು




ಒಡ್ಡು ಹಾಕುವ ಪದ್ಧತಿ




ಬಾರಿ ಮತ್ತು ಕಾವಲಿ ಕಟ್ಟುವ ಪದ್ಧತಿ




ಸಾಚಿ ಇದ್ದ ಬಾವಿ




ಹೆಚ್ಚು ಬಾರಿಗಳಿದ್ದ ಬಾವಿ



ಸಾಚಿ




ತೊಟ್ಟಿಲ ಸಾಚಿ




ಸಿದ್ಧಮಾಡಿದ ಬಾರಿ ಮತ್ತು ಸಾಲೆ



ಹಳ್ಳಿಕಾರ್ ಜೋಡಿ ಎತ್ತುಗಳು



ಖಿಲಾರಿ ಹೋರಿ



ಕಂಗಾಯಮ್ ಎತ್ತು



ಕೃಷ್ಣಾ ತೀರ

೨. ಸಂಕ್ಷೇಪ ಸೂಚಿ

ಬೆಂ.ವಿ.ವಿ.	– ಬೆಂಗಳೂರು ವಿಶ್ವವಿದ್ಯಾಲಯ
ಕ.ವಿ.ವಿ.	– ಕನ್ನಡ ವಿಶ್ವವಿದ್ಯಾಲಯ
ಕ.ವಿ.ವಿ.	– ಕರ್ನಾಟಕ ವಿಶ್ವವಿದ್ಯಾಲಯ
ಗದ್ಯಾ	– ಗದ್ಯಾನುವಾದ
ಸಂ	– ಸಂಪಾದನೆ
ಸಂ	– ಸಂಪುಟ
ಸಂ.ವ.ಸಂ.	– ಸಂಕೀರ್ಣ ವಚನ ಸಂಪುಟ
ಅಲ್ಲ.ವ.ಸಂ	– ಅಲ್ಲಮ ಪ್ರಭುದೇವರ ವಚನ ಸಂಪುಟ
ಬಸವ. ವ.ಸಂ	– ಬಸವಣ್ಣನವರ ವಚನ ಸಂಪುಟ
ಚೆನ್ನ.ವ.ಸಂ	– ಚೆನ್ನಬಸವಣ್ಣನವರ ವಚನ ಸಂಪುಟ
ಶಿವ.ವ.ಸಂ.	– ಶಿವ ಶರಣೆಯರ ವಚನ ಸಂಪುಟ
ಸಿದ್ಧ.ವ.ಸಂ	– ಸಿದ್ಧರಾಮೇಶ್ವರ ವಚನ ಸಂಪುಟ
ಸಂ	– ಸಂಖ್ಯೆ
ಪು	– ಪುಟ
ಪ	– ಪದ್ಯ
ವ	– ವಚನ
ಶ್ರೀ.ಗಂ.ಧ.ಮಂಡಳಿ	– ಶ್ರೀಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ
ಅನು	– ಅನುವಾದ
ಲಿ	– ಲಿಖಿತ

೩. ಪರಾಮರ್ಶನ ಗ್ರಂಥಗಳು

೧. ಸಾಹಿತ್ಯ ಕೃತಿಗಳು

೧. ಅಲ್ಲಮನ ವಚನ ಚಂದ್ರಿಕೆ, (ಸಂ) ಎಲ್.ಬಸವರಾಜು, (ಪ್ರ) ಶ್ರೀ.ಗಂ.ಧ.ಮಂಡಳಿ, ಹುಬ್ಬಳ್ಳಿ, ೧೯೮೭

೨. ಅಲ್ಲಮಪ್ರಭುದೇವರ ವಚನ ಸಂಪುಟ-೨, (ಸಂ) ಬಿ.ವಿ.ಮಲ್ಲಾಪುರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೯೯೩

೩. ಆದಿಪುರಾಣ, (ಗದ್ಯಾ) ಕೆ.ಎಲ್.ನರಸಿಂಹ ಶಾಸ್ತ್ರಿ, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯

೪. ಕರ್ನಾಟಕದ ಕೈಫಿಯತ್ತುಗಳು, (ಸಂ) ಎಂ.ಎಂ.ಕಲಬುರ್ಗಿ, (ಪ್ರ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

೫. ಕರ್ಣಾಟಕ ಭಾರತ ಕಥಾಮಂಜರಿ, (ಸಂ)ಕುವೆಂಪು ಹಾಗೂ ಮಾಸ್ತಿ ವೆಂಕಟೇಶ ಅಯ್ಯಂಗಾರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೮

೬. ಕರ್ಣಾಟಕ ಕಾದಂಬರಿ, (ಗದ್ಯಾ) ಹ.ವೆ.ನಾರಾಯಣ ಶಾಸ್ತ್ರಿ, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯

೭. ಕರ್ಣಾಟಕ ಪಂಚತಂತ್ರ, (ಅನು) ಗುಂಡ್ಮಿ ಚಂದ್ರಶೇಖರ ಐತಾಳ, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩

೮. ಕಬ್ಬಿಗರ ಕಾವಂ, (ಗದ್ಯಾ) ಆರ್.ವಿ. ಕುಲಕರ್ಣಿ, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪

೯. ಕನ್ನಡ ಭಾರತ, (ಸಂ) ಎ.ವಿ.ಪ್ರಸನ್ನ (ಪ್ರ)ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಕನ್ನಡ ಹಸ್ತಪ್ರತಿ ರಚನೆ, (ಲೇ) ಎಸ್.ಎಸ್.ಅಂಗಡಿ (ಪ್ರ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ,

೧೧. ಕೃಷಿ ಉಪಕರಣಗಳು, (ಲೇ) ಎಂ.ಎಂ. ಹೊಸಮನಿ, ಎಸ್.ಸಿ.ಚಂದ್ರಯ್ಯ, (ಪ್ರ) ಕನ್ನಡ ಅಧ್ಯಯನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ೧೯೯೩

೧೨. ಕೃಷಿ ಗಾದೆಗಳು, (ಲೇ) ನಾರಾಯಣರೆಡ್ಡಿ, ನಾರಾಯಣಸ್ವಾಮಿ

೧೩. ಕೃಷಿಲೋಕ ಪ್ರವೇಶ, ಕೈಂತಜೆ ವಿಷ್ಣುಭಟ್ಟ, (ಪ್ರ) ಕನ್ನಡ ಪ್ರಪಂಚ ಪ್ರಕಾಶನ, ದರ್ಬೆ, ಪುತ್ತೂರು

೧೪. ಕೆಳದಿ ನೃಪವಿಜಯ, (ಗದ್ಯಾ) ಕೆಳದಿ ಗುಂಡಾ ಜೋಯಿಸ್, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯

೧೫. ಗಿರಿಜಾ ಕಲ್ಯಾಣ ಮಹಾಪ್ರಬಂಧಂ, (ಗದ್ಯಾ)ಎಂ.ಜಿ.ನಂಜುಂಡಾರಾಧ್ಯ (ಪ್ರ)ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯
೧೬. ಗ್ರಾಮೀಣ ಸಂಪದ, (ಲೇ) ಎಂ.ಎಸ್.ಸುಂಕಾಪುರ, (ಪ್ರ) ಮೂರುಸಾವಿರ ಮಠ ಹುಬ್ಬಳ್ಳಿ
೧೭. ಘನಶ್ರೀ, (ಸಂ) ಸಂಗಮೇಶ್ವರ ಸವದತ್ತಿ ಮಠ, (ಪ್ರ) ಶ್ರೀಘನಮಠೇಶ ಧರ್ಮಪ್ರಚಾರಕ ಮಂಡಳಿ, ವಿರಕ್ತಮಠ, ನರಗುಂದ
೧೮. ಚನ್ನಬಸವಣ್ಣನವರ ವಚನ ಸಂಪುಟ-೩, (ಸಂ) ಬಿ.ವ್ಹಿ.ಮಲ್ಲಾಪುರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೯೯೩
೧೯. ಜಗನ್ನಾಥ ವಿಜಯಂ, (ಗದ್ಯಾ) ಯು.ಆರ್.ವರದಾಚಾರ್ಯ, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯
೨೦. ಜೈಮಿನಿಭಾರತ, (ಸಂ) ಬಿ.ಎಸ್.ಸಣ್ಣಯ್ಯ, ರಾಮೇಗೌಡ, (ಪ್ರ) ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೩
೨೧. ಜಾನಪದ ಸಂಪದ, (ಸಂ) ಮಲ್ಲಿಕಾರ್ಜುನ ಶಿ,ಲಠ್ಠೆ, (ಪ್ರ) ಫ.ಶಿ,ಭಾಂಡಗೆ, ತ್ವರಿತ ಮುದ್ರಣ, ಗಂಗಾಪೂರಪೇಟೆ, ಗದಗ
೨೨. ಜಾನಪದ ಪರಿಶೋಧನೆ, (ಲೇ) ಅಂಬಳಿಕೆ ಹಿರಿಯಣ್ಣ, (ಪ್ರ) ಪ್ರಜ್ವಲ ಪ್ರಕಾಶನ, ಮೈಸೂರು, ೧೯೮೫
೨೩. ಜಾನಪದ ಸಾಹಿತ್ಯ ದರ್ಶನ-೭,(ಸಂ) ವೃಷಭೇಂದ್ರಸ್ವಾಮಿ, (ಪ್ರ) ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨೪. ಜಾನಪದ ವೈವಿಧ್ಯ, (ಲೇ) ಎಂ.ಬೈರೇಗೌಡ, (ಪ್ರ) ಶಕ್ತಿಮುದ್ರಣ ಮತ್ತು ಪ್ರಕಾಶನ, ಬೆಂಗಳೂರು
೨೫. ಜಾನಪದ ಜೀವಾಳ, (ಲೇ) ಮ.ಗು.ಬಿರಾದಾರ (ಪ್ರ) ಪುಸ್ತಕ ಅಕಾಡೆಮಿ, ಕಲಬುರ್ಗಿ
೨೬. ಜಾನಪದ, (ಸಂ) ರಂಗಾರೆಡ್ಡಿ ಕೋಡಿರಾಂಪುರ, (ಪ್ರ)ರಶ್ಮಿ ಮುದ್ರಣ, ಬೆಂಗಳೂರು,೧೯೯೩
೨೭. ಜಾನಪದ ಅನ್ವಯಿಕತೆ, (ಸಂ) ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, (ಪ್ರ) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೨೮. ಜಾನಪದ ಸುಧಾಸಂಚಯ, (ಲೇ) ಶಾಂತಿನಾಯಕ, (ಪ್ರ) ಜಾನಪದ ಪ್ರಕಾಶನ, ಹೊನ್ನಾವರ, (ಉ,ಕ)
೨೯. ಜಾನಪದ ಜೀವಾಳ, (ಲೇ) ಎಂ.ಎನ್.ವಾಲಿ, (ಪ್ರ) ಭುವನೇಶ್ವರ ಪ್ರಕಾಶನ, ವಿಜಾಪುರ, ೧೯೯೨
೩೦. ತುಮಕೂರು ಜಿಲ್ಲೆಯ ಜಾನಪದೀಯ ಅಧ್ಯಯನ, (ಸಂ) ಚಿಕ್ಕಣ್ಣ ಯಣ್ಣೆಕಟ್ಟೆ, (ಪ್ರ) ಗಡಿನಾಡ ಜಾನಪದ ಸಂಪರ್ಕ ಕೇಂದ್ರ, ಸಿರಾ, ೨೦೦೧
೩೧. ಧರ್ಮಾಮೃತ, (ಸಂ) ಬಿ.ಬಿ.ಮಹೀಶವಾಡಿ, ಎಸ್.ಪಿ.ಪಾಟೀಲ, (ಪ್ರ) ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೩೨. ದೇಶೀ, (ಲೇ) ವೀರಣ್ಣ ದಂಡೆ, (ಪ್ರ) ಭಾಗ್ಯಶ್ರೀ ಎಂಟರ್ ಪ್ರೈಸಸ್, ವಿಜಯನಗರ, ಬೆಂಗಳೂರು
೩೩. ದೇಶೀ ದೃಷ್ಟಿ, (ಲೇ) ವೀರಣ್ಣ ದಂಡೆ, (ಪ್ರ) ಕವಿಮಾರ್ಗ ಪ್ರಕಾಶನ, ತೇಜಸ್ವಿನಿ, ಕಲಬುರ್ಗಿ
೩೪. ದೇಶೀ ಕೃಷಿಜ್ಞಾನ ಸಂಪುಟ-೫, ಕೃಷಿಆಚರಣೆ, (ಲೇ) ಮಲ್ಲಿಕಾರ್ಜುನ ಹೊಸಪಾಳ್ಯ, (ಪ್ರ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮
೩೫. ದೇಶೀ ಕೃಷಿಜ್ಞಾನ ಸಂಪುಟ-೬, ಕೃಷಿಉಪಕರಣ, (ಲೇ) ಗಾಣದಾಳು ಶ್ರೀಕಂಠ, (ಪ್ರ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು,೨೦೦೮
೩೬. ದೇಶೀ ಕೃಷಿಜ್ಞಾನ ಸಂಪುಟ-೮, ಕೀಟ ರೋಗ, (ಲೇ) ವಿಜಯ ಅಂಗಡಿ, (ಪ್ರ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮

೩೭. ದೇಶೀ ಕೃಷಿಜ್ಞಾನ ಸಂಪುಟ–೯, ಜಾನುವಾರು, (ಲೇ) ಎಂ.ನಾರಾಯಣಸ್ವಾಮಿ, (ಪ್ರ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮

೩೮. ದ್ರಾವಿಡ ಸಂಸ್ಕೃತಿ, (ಸಂ) ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ, (ಪ್ರ) ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು–೨೦೦೪

೩೯. ನೇಮಿನಾಥ ಪುರಾಣಂ, (ಗದ್ಯಾ) ಆರ್.ವಿ.ಕುಲಕರ್ಣಿ, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೧

೪೦. ಪಂಪಭಾರತ, (ಸಂ) ಕೆ.ವಿ.ಪುಟ್ಟಪ್ಪ, (ಪ್ರ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೯೯೦

೪೧. ಪಂಪಭಾರತಂ, (ಗದ್ಯಾ) ಎನ್. ಅನಂತರಂಗಾಚಾರ್, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

೪೨. ಪಂಪ ರಾಮಾಯಣಂ, (ಲೇ) ನಾಗಚಂದ್ರ, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೬

೪೩. ಪ್ರಭುಲಿಂಗ ಲೀಲೆ, (ಸಂ) ಎಸ್.ವಿದ್ಯಾಶಂಕರ್, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪

೪೪. ಪ್ರಾಚೀನ ಶಾಸನಗಳ ಲೇಖನ ಸಂಗ್ರಹ, (ಶ್ರೀ ಮಜ್ಜಗದ್ಗುರು ಶ್ರೀಕೂಡ್ಲೀ–ಶೃಂಗೇರಿ ಸಂಸ್ಥಾನದ) ಭಾಗ–೧,ಮೈಸೂರು ಸರ್ಕಾರ

೪೫. ಬಸವ ಪುರಾಣ, (ಸಂ) ಆರ್.ಸಿ. ಹಿರೇಮಠ, (ಪ್ರ) ಲಿಂಗಾಯತ ವಿಧ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, ೧೯೫೮

೪೬. ಬಸವಣ್ಣನವರ ವಚನ ಸಂಪುಟ–೧,(ಸಂ) ಎಂ.ಎಂ.ಕಲಬುರ್ಗಿ,(ಪ್ರ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೯೯೩

೪೭. ಭರತೇಶ ವೈಭವ ಸಂಗ್ರಹ, (ಸಂ) ತ.ಸು.ಶಾಮರಾಯ, (ಪ್ರ) ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, ೧೯೮೬

೪೮. ಮಲೆನಾಡು ಜಾನಪದ, (ಸಂ) ಹೆಚ್.ತಿಪ್ಪೇರುದ್ರಸ್ವಾಮಿ, (ಪ್ರ) ಸ್ನಾತಕೋತ್ತರ ಕೇಂದ್ರ, ಬಿ.ಆರ್.ಪ್ರಾಜೆಕ್ಟ್, ಶಂಕರಘಟ್ಟ

೪೯. ಮಲ್ಲಿಕಾರ್ಜುನ ಕವಿಯ ಸೂಕ್ತಿ ಸುಧಾರ್ಣವ, (ಸಂ) ಎನ್.ಅನಂತ ರಂಗಾಚಾರ್ಯ

೫೦. ಯಶೋಧರ ಚರಿತೆ, (ಗದ್ಯಾ) ತೆಕ್ಕುಂಜ ಗೋಪಾಲಕೃಷ್ಣಭಟ್ಟ, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೧

೫೧. ರೈತಜಾನಪದ, (ಸಂ) ಮೃತ್ಯುಂಜಯ ಹೊರಕೇರಿ, (ಪ್ರ) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮

೫೨. ರಾಘವಾಂಕನ ಸಮಗ್ರ ಕೃತಿಗಳು, (ಸಂ) ಎಸ್.ವಿದ್ಯಾಶಂಕರ, (ಪ್ರ) ಪ್ರಿಯದರ್ಶಿನಿ ಪ್ರಕಾಶನ, ವಿಜಯನಗರ, ಬೆಂಗಳೂರು

೫೩. ರಾಜಶೇಖರ ವಿಳಾಸಂ,(ಸಂ) ಆರ್.ಸಿ.ಹಿರೇಮಠ, ಎಂ.ಎಸ್.ಸುಂಕಾಪುರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮

೫೪. ರಾಮಧಾನ್ಯ ಚರಿತ್ರೆ, (ಲೇ) ಕೆ.ಬಿ.ತಳಗೇರಿ, (ಪ್ರ) ವಿದ್ಯಾನಿಧಿ ಪ್ರಕಾಶನ, ಗದಗ, ೧೯೮೯

೫೫. ವಡ್ಡರಾಧನೆ,(ಗದ್ಯಾ) ಟಿ.ಕೇಶವಭಟ್ಟ, (ಪ್ರ)ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩

೫೬. ವಚನಸಾಹಿತ್ಯ ಭಾಷೆ,(ಲೇ) ಎಸ್.ಎಸ್.ಅಂಗಡಿ, (ಪ್ರ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೭. ವಿಶಿಷ್ಟ ಜಾನಪದ, (ಸಂ) ಹೆಚ್.ಜೆ.ಲಕ್ಕಪ್ಪಗೌಡ, (ಪ್ರ) ಸ್ನಾತಕೋತ್ತರ ಕೇಂದ್ರ, ಬಿ.ಆರ್.ಪ್ರಾಜೆಕ್ಟ್, ಶಂಕರಘಟ್ಟ

೫೮. ಶರಣ ಚರಿತಾಮೃತ, (ಲೇ) ಸಿದ್ದಯ್ಯಪುರಾಣಿಕ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು
೫೯. ಶಬರ ಶಂಕರ ವಿಳಾಸ, (ಗದ್ಯಾ) ದಿಬ್ಬೂರು ಶ್ರೀನಿವಾಸರಾವ್, (ಪ್ರ)ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,೧೯೭೯
೬೦. ಶಿವಶರಣೆಯರ ವಚನಸಂಪುಟ,(ಸಂ) ವೀರಣ್ಣ ರಾಜೂರ (ಪ್ರ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩
೬೧. ಸಮಯ ಪರೀಕ್ಷೆ,(ಸಂ) ಬಿ.ಎಸ್.ಕುಲಕರ್ಣಿ, (ಪ್ರ) ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ,೧೯೫೮
೬೨. ಸಂಕೀರ್ಣವಚನ ಸಂಪುಟ–೧, (ಸಂ) ಎಂ.ಎಂ.ಕಲಬುರ್ಗಿ, (ಪ್ರ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩
೬೩. ಸಂಕೀರ್ಣವಚನ ಸಂಪುಟ–೨, (ಸಂ) ಎಸ್.ವಿದ್ಯಾಶಂಕರ್, (ಪ್ರ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩
೬೪. ಸಂಕೀರ್ಣವಚನ ಸಂಪುಟ–೩, (ಸಂ) ಬಿ.ಆರ್.ಹಿರೇಮಠ, (ಪ್ರ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩
೬೫. ಸಂಕೀರ್ಣ ವಚನ ಸಂಪುಟ–೪,(ಸಂ) ಬಿ.ಆರ್.ಹಿರೇಮಠ, (ಪ್ರ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩
೬೬. ಸಂಕೀರ್ಣವಚನ ಸಂಪುಟ–೫,(ಸಂ) ವೀರಣ್ಣರಾಜೂರ, (ಪ್ರ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩
೬೭. ಸಂಕೀರ್ಣವಚನ ಸಂಪುಟ–೬, (ಸಂ) ಎಸ್.ಶಿವಣ್ಣ, (ಪ್ರ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩
೬೮. ಸಂಕೀರ್ಣ ವಚನ ಸಂಪುಟ–೭, (ಸಂ) ವೀರಣ್ಣರಾಜೂರ, (ಪ್ರ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩
೬೯. ಸಂಕೀರ್ಣವಚನ ಸಂಪುಟ–೮,(ಸಂ)ವೀರಣ್ಣ ರಾಜೂರ, (ಪ್ರ)ಕನ್ನಡಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು,೧೯೯೩
೭೦. ಸಂಕೀರ್ಣವಚನ ಸಂಪುಟ–೯, (ಸಂ)ವೀರಣ್ಣರಾಜೂರ, (ಪ್ರ)ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩
೭೧. ಸರ್ವಜ್ಞನ ವಚನಗಳು, (ಸಂ) ಚನ್ನಪ್ಪ ಉತ್ತಂಗಿ, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪
೭೨. ಸಾಹಸ ಭೀಮ ವಿಜಯಂ, (ಗದ್ಯಾ) ಆರ್.ವಿ.ಕುಲಕರ್ಣಿ (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪
೭೩. ಸಾಂಪ್ರಾದಾಯಿಕ ಒಕ್ಕಲುತನ, (ಲೇ) ಈರಯ್ಯ ಕಿಲ್ಲೇದಾರ, (ಪ್ರ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮
೭೪. ಸುವರ್ಣಜಾನಪದ, (ಸಂ) ಲಕ್ಕಪ್ಪಗೌಡ, (ಪ್ರ) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮
೭೫. ಸಿದ್ಧರಾಮ ಚರಿತ್ರೆ, (ಗದ್ಯಾ) ಆರ್.ಎಸ್.ರಾಮರಾವ್ (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪
೭೬. ಸಿದ್ಧರಾಮೇಶ್ವರ ವಚನ ಸಂಪುಟ, (ಸಂ) ಎಸ್.ವಿದ್ಯಾಶಂಕರ, (ಪ್ರ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩

೭೮. ಹೊಸತು ಹೊಸತು, (ಲೇ) ಎಂ.ಚಿದಾನಂದಮೂರ್ತಿ, (ಪ್ರ) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩
೭೯. ಹೈದರಾಬಾದ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು, (ಸಂ) ವಿ.ಶಿವಾನಂದ, (ಪ್ರ) ಕನ್ನಡಪೀಠ, ಬನಾರಸ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ

೨. ಶಾಸ್ತ್ರ ಕೃತಿಗಳು

೧. ಕುರುಬರ ರಟ್ಟಮತ ಶಾಸ್ತ್ರ, (ಸಂ) ಎಸ್.ಎಫ್.ಜಕಬಾಳ, (ಪ್ರ) ವಿದ್ಯಾನಿಧಿ ಪ್ರಕಾಶನ ಗದಗ, ೨೦೦೪
೨. ಕೃಷಿಜ್ಞಾನ ಪ್ರದೀಪಿಕೆ, (ಸಂ) ಶ್ರೀಘನಮಠದ ಶಿವಯೋಗಿಗಳು, (ಪ್ರ) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮
೩. ರಟ್ಟಮತ, (ಸಂ) ಎಚ್.ಶೇಷಅಯ್ಯಂಗಾರ್, ಗೌರ್ನಮೆಂಟ ಓರಿಯಂಟಲ್, ಹಸ್ತಪ್ರತಿ ಭಂಡಾರ, ಮದರಾಸು, ೧೯೫೦
೪. ರಟ್ಟಮತ ಶಾಸ್ತ್ರ, (ಲೇ) ಮೇ॥ ಬಸವಯ್ಯ ಶಾಸ್ತ್ರಿಗಳು, ಮೇ॥ ಪಿ.ಸಿ.ಶಾಬಾದಿಮಠ ಬುಕ್‌ಡಿಪೋ ಗದಗ,
೫. ಲೋಕೋಪಕಾರಂ, (ಸಂ) ಹೆಚ್.ಶೇಷಅಯ್ಯಂಗಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೫೦
೬. ಶಿವತತ್ತ್ವರತ್ನಾಕರ ಸಂಪುಟ-೧, (ಸಂ) ಮಲ್ಲೇಪುರಂ ಜಿ.ವೆಂಕಟೇಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೩. ಸಂಶೋಧನ ಕೃತಿಗಳು

೧. ಕನ್ನಡ ಜಾನಪದ ಗೀತೆಗಳು, ಬಿ.ಎಸ್.ಗದ್ದಗಿಮಠ, (ಪ್ರ) ಕರ್ನಾಟಕ ವಿಶ್ವವಿದ್ಯಾಲಯ, ದಾರವಾಡ, ೧೯೬೩
೨. ಕನ್ನಡ ದಾಖಲು ಸಾಹಿತ್ಯ, ಕೆ.ರವೀಂದ್ರನಾಥ, (ಪ್ರ) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦
೩. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಎಂ.ಚಿದಾನಂದ ಮೂರ್ತಿ, (ಪ್ರ) ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯
೪. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಹೆಚ್.ತಿಪ್ಪೇರುದ್ರಸ್ವಾಮಿ, (ಪ್ರ) ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ೧೯೬೮
೫. ಕಲಬುರ್ಗಿ ಜಿಲ್ಲೆಯ ಶಾಸನಗಳು, ಹನುಮಾಕ್ಷಿ ಗೋಗಿ, (ಪ್ರ) ಶಿವಚಂದ್ರ ಪ್ರಕಾಶನ, ಹುಬ್ಬಳ್ಳಿ, ೧೯೯೬
೬. ಕನ್ನಡದಲ್ಲಿ ಸೂಪಶಾಸ್ತ್ರ ಸಾಹಿತ್ಯ, ಬಿ.ಮಂಜುಳಾ, (ಪ್ರ) ಭರಣಿ ಪ್ರಕಾಶನ, ಹೊಸಪೇಟೆ, ೨೦೦೬
೭. ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಎಂ.ಜಿ. ಈಶ್ವರಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫
೮. ಜಾನಪದ ಭಿತ್ತಿ, ಡಾ.ವೈ.ಸಿ.ಭಾನುಮತಿ, ಸಂವಹನ ಈವಸಿಂಗ ಬಜಾರ್ ಹಿಂಬಾಗ ಶಿವರಾಂಪೇಟೆ, ಮೈಸೂರು, ೧೯೯೯
೯. ಮಲೆನಾಡು ಶೈವ ಒಕ್ಕಲಿಗರ ಜಾನಪದಿಯರ ಅಧ್ಯಯನ, ವೈ.ಸಿ.ಭಾನುಮತಿ (ಪ್ರ) ಕೇಶವ ಪ್ರಕಾಶನ, ಮೈಸೂರು, ೫೭೦೦೨೩

೧೦. ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಅಂಬಳಿಕೆ ಹಿರಿಯಣ್ಣ, (ಪ್ರ) ಕನ್ನಡ ಪುಸ್ತಕ ಪ್ರಾದಿಕಾರ, ಬೆಂಗಳೂರು, ೧೯೯೯
೧೧. ಮಾರ್ಗ ಸಂಪುಟ-೨, ಎಂ.ಎಂ.ಕಲಬುರ್ಗಿ, (ಪ್ರ) ನರೇಶ್.ಅಂಡ್ ಕಂಪನಿ, ಹನುಮಂತ ನಗರ, ಬೆಂಗಳೂರು, ೧೯೮೮
೧೨. ಮಾರ್ಗ ಸಂಪುಟ-೪, ಎಂ.ಎಂ.ಕಲಬುರ್ಗಿ, (ಪ್ರ) ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು, ೨೦೦೫
೧೩. ವಚನ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ, ಪಿ.ವಿ.ನಾರಾಯಣ, (ಪ್ರ) ವೀರಶೈವ ಅಧ್ಯಯನ ಸಂಸ್ಥೆ, ಶ್ರೀಜಗದ್ಗುರು ತೋಂಟದಾಯ ಸಂಸ್ಥಾನ ಮಠ, ಗದಗ, ೧೯೮೩
೧೪. ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಬಿ.ಆರ್.ಹಿರೇಮಠ,(ಪ್ರ) ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೬
೧೫. ಸರ್ವಜ್ಞನ ವಚನಗಳು ಒಂದು ಜಾನಪದೀಯ ಅಧ್ಯಯನ, ರಾಜಶೇಖರ ಜಮದಂಡಿ, (ಪ್ರ) ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ೨೦೦೪

೪. ಶಾಸನ ಸಂಪುಟಗಳು

೧. ಎಪಿಗ್ರಾಫಿಯ ಕರ್ನಾಟಕ ಸಂಪುಟಗಳು,(೧ರಿಂದ ೧೧ರ ವರೆಗೆ)ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ವಿಶ್ವವಿದ್ಯಾಲಯ, ಮೈಸೂರು
೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩ (ಹಂಪಿ ಶಾಸನಗಳು) (ಸಂ) ದೇವರಕೊಂಡಾರೆಡ್ಡಿ, (ಪ್ರ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦
೩. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೭ (ಬಳ್ಳಾರಿ ಜಿಲ್ಲೆ ಶಾಸನಗಳು)(ಸಂ) ದೇವರಕೊಂಡಾ ರೆಡ್ಡಿ, (ಪ್ರ) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮
೪. ಕೆಳದಿಅರಸರ ಶಾಸನ ಸಂಪುಟ, (ಸಂ) ಕೆಳದಿ ವೆಂಕಟ ಜೋಯಿಸ, ವೀರಶೈವ ಅಧ್ಯಯನ ಸಂಸ್ಥೆ, ಡಂಬಳ-ಗದಗ, ೧೯೯೧

೫. ಅರ್ಥಕೋಶ-ವಿಶ್ವಕೋಶಗಳು

೧. ಅರ್ಥಕೋಶ, (ಸಂ) ಶಿವರಾಮ ಕಾರಂತ, ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ೧೯೯೨
೨. ಅಚ್ಚಗನ್ನಡ ನುಡಿಕೋಶ, (ಲೇ) ವಿದ್ವಾನ್ ಕೊಳಂಬೆ ಪುಟ್ಟಣ್ಣ ಗೌಡರು
೩. ಕನ್ನಡ-ಕನ್ನಡ ನಿಘಂಟು, ಸಂಪುಟ-೧,೨(ಪ್ರ,ಸಂ)ಎನ್.ಬಸವರಾಧ್ಯ, (ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೪. ಸಂಕ್ಷಿಪ್ತ ಕನ್ನಡ ನಿಘಂಟು, (ಪ್ರ,ಸಂ) ಪ್ರೊ.ಜಿ.ವೆಂಕಟಸುಬ್ಬಯ್ಯ.(ಪ್ರ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೫
೫. ಕನ್ನಡ-ಕನ್ನಡ ಶಬ್ದಕೋಶ, (ಸಂ) ಗುರುನಾಥಜೋಶಿ.ಜಿ. ಅಶ್ವತ್ಥನಾರಾಯಣ, (ಪ್ರ) ಸಂಕೇಶ್ವರ ಪ್ರಿಂಟರ್ಸ್, ಪ್ರೈವೆಟ್ ಲಿಮಿಟೆಡ್, ಗದಗ
೬. ಕನ್ನಡ ವಿಷಯ ವಿಶ್ವಕೋಶ, ಸಂಪುಟ-೧.(ಪ್ರ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೨
೭. ಕನ್ನಡ ವಿಷಯ ವಿಶ್ವಕೋಶ, ಸಂಪುಟ-೫.(ಪ್ರ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೨

೮. ಕನ್ನಡ ವಿಷಯ ವಿಶ್ವಕೋಶ, ಜಾನಪದ,(ಪ್ರ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೨೦೦೬

೯. ಜನಪದ ನುಡಿಗಟ್ಟುಗಳ ಕೋಶ, (ಲೇ) ಪ್ರೊ.ಸುಧಾಖರ,(ಪ್ರ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೧೦. ಶ್ರೀವತ್ಸ ನಿಘಂಟು,(ಲೇ) ಟಿ.ವಿ.ವೆಂಕಟಾಚಲಶಾಸ್ತ್ರಿ, (ಪ್ರ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

೧೧. Dictionary,(A Kannad-Englisha)REV. F.kittel, Assian Educational Servies, Madras, 1990

12. Dictionary, Kannad-Englisha,By The REV,V,Reeve, Assian Educational Servies, Madras, 1990

೬. ಸಂಚಿಕೆಗಳು/ ಪತ್ರಿಕೆಗಳು

೧. ಕರ್ಮವೀರ, (ವಾರಪತ್ರಿಕೆ) 'ಒಕ್ಕಲುತನ ಮತ್ತು ಒಕ್ಕಲಲಿಗರು' (ಲೇ) ಸೂರ್ಯನಾಥ ಕಾಮತ್, ೨೦೦೫

೨. ಬಸವಪಥ, ಲೇ–ವಚನಸಾಹಿತ್ಯದಲ್ಲಿ ಒಕ್ಕಲುತನದ ಪರಿಭಾಷೆ, (ಲೇ) ಶ್ರೀ ಈರಯ್ಯ ಕಿಲ್ಲೇದಾರ, ಡಿಸೆಂಬರ್, ೨೦೦೫

೩. ಕನ್ನಡ ಭಾರತಿ, ಲೇ–ಜನಪದ ಸಾಹಿತ್ಯದಲ್ಲಿ ಎತ್ತಿನ ಚಿತ್ರಣ, (ಲೇ) ಬಿ.ಎಂ. ತೆಳಗಡಿ, ಕೆ.ಎಚ್.ಬಿಜಾಪುರ, ಸಂಕ್ರಮಣ ಸಂಚಿಕೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫

* * *